ಕರ್ನಾಟಕ ಸರ್ಕಾರ

ವಿಜಯನಗರ ಅಧ್ಯಯನ

ಸಂಪುಟ - ೧೩

ವಿಜಯನಗರ ವಿಚಾರ ಸಂಕಿರಣ ೨೦೦೭ರಲ್ಲಿ ಮಂಡಿಸಿದ ಪ್ರಬಂಧಗಳು



ಸಂಪಾದಕರು
ಡಾ. ಆರ್. ಗೋಪಾಲ್
ಬಿ.ಎಂ. ಚಿಕ್ಕಮಾರೇಗೌಡ
ಟಿ.ಎಸ್. ಗಂಗಾಧರ

ವಿಜಯನಗರ ಅಧ್ಯಯನ

ಸಂಪುಟ - ೧೩

ಹಂಪಿ ಉತ್ಸವ ೨೦೦೭ರಲ್ಲಿ ಮಂಡಿಸಿದ ಪ್ರಬಂಧಗಳು

ಸಂಪಾದಕರು

ಡಾ.ಆರ್. ಗೋಪಾಲ್

ಬಿ. ಎಂ. ಚಿಕ್ಕಮಾರೇಗೌಡ

ಟಿ. ಎಸ್. ಗಂಗಾಧರ

ಕರ್ನಾಟಕ ಸರ್ಕಾರ

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ

ಮೈಸೂರು

ವಿಜಯನಗರ ಅಧ್ಯಯನ
ಸಂಪುಟ - ೧೩

ಪ್ರಕಾಶಕರು
ನಿರ್ದೇಶಕರು
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ
ಮೈಸೂರು - ೫೭೦ ೦೦೧
ದೂರವಾಣಿ : ೦೮೨೧ - ೨೪೨೪೬೭೩ / ೪

ಮೊದಲ ಮುದ್ರಣ : ೨೦೦೮

ಪುಟಗಳು : ೫೪೦

ಬೆಲೆ : ರೂ. ೨೨೫-೦೦

ಅಕ್ಷರ ಜೋಡಣೆ ಮತ್ತು ಮುದ್ರಣ
ಶ್ರೀ ಸದ್ಗುರು ಪ್ರಿಂಟರ್ಸ್, ಮೈಸೂರು - ೫೭೦೦೦೪

VIJAYANAGARA ADHYAYANA
Vol - 13

Publisher
Director
Directorate of Archaeology and Museums
Mysore - 570 001
Ph: 0821 - 2424673 / 4

First Print : 2008

Pages : 540

Price: Rs.225-00

DTP & Printed at
Sri Sadguru Printers
Mysore-570 004

ಪ್ರಸ್ತಾವನೆ

ವಿಜಯನಗರ ಎನ್ನುವ ಹೆಸರನ್ನು ಕೇಳಿದ ಕೂಡಲೇ ಕನ್ನಡಿಗರಿಗೆ ರೋಮಾಂಚನ ವಾಗುತ್ತದೆ ; ಧನ್ಯತೆಯ ಭಾವ ಸುಳಿಯುತ್ತದೆ. ಇಡೀ ದಕ್ಷಿಣ ಭಾರತ ಒಂದುಗೂಡಿ ಭಾರತೀಯ ಸಂಸ್ಕೃತಿಯ ಔನ್ನತ್ಯವನ್ನು ಸಾಧಿಸಲು ಪಣತೊಟ್ಟು, ಅದನ್ನು ಸಾಕ್ಷಾತ್ಕರಿಸಿ ಕೊಂಡ ವಿಜಯನಗರ ಸಾಮ್ರಾಜ್ಯವನ್ನು ಕಣ್ಣಾರೆ ಕಂಡ ಅಬ್ದುಲ್ ರಜಾಕ್ "ಇಂಥ ನಗರ ಹೇಗಿದೆಯೆಂದರೆ ನನ್ನ ಕಣ್ಣು ಅಂಥ ಊರನ್ನು ಕಂಡಿಲ್ಲ; ಇಡೀ ಪ್ರಪಂಚದಲ್ಲಿ ಇದಕ್ಕೆ ಸರಿಸಮಾನವಾದುದು ಎಲ್ಲಿಯಾದರೂ ಇದ್ದುದನ್ನು ಕಿವಿ ಕೇಳರಿಯದು" ಎಂದು ಉದ್ಗಾರವೆತ್ತಿದ್ದು ಜನಜನಿತವಾಗಿದೆ. ಇಂತಹ ಶ್ರೇಷ್ಠ ಸಂಸ್ಕೃತಿಯನ್ನು ಕುರಿತು ಇಂದಿನ ಯುವಜನಗಳಿಗೆ ಮಾಹಿತಿ ನೀಡುವ ಸಲುವಾಗಿ ಕರ್ನಾಟಕ ಸರ್ಕಾರ ಹಂಪಿ ಉತ್ಸವವನ್ನು ಪ್ರತಿವರ್ಷ ನವೆಂಬರ್‌ನಲ್ಲಿ ನಡೆಸುತ್ತಿದೆ.

2007ರ ನವೆಂಬರ್ 4 ಮತ್ತು 5ರಂದು ಈ ಉತ್ಸವದ ಸಮಯದಲ್ಲಿ ನಮ್ಮ ನಿರ್ದೇಶನಾಲಯ ಎಂದಿನಂತೆ ಒಂದು ವಿಚಾರ ಸಂಕಿರಣವನ್ನು ಏರ್ಪಡಿಸಿದ್ದಿತು. ನಾಡಿನ ಶ್ರೇಷ್ಠ ವಿದ್ವಾಂಸರು ಇದರಲ್ಲಿ ಭಾಗವಹಿಸಿ ವಿಜಯನಗರದ ಬಗೆಗೆ ಹೊಸ ವಿಷಯ ಗಳನ್ನು ಬೆಳಕಿಗೆ ತಂದರು. ಈ ವಿಚಾರ ಸಂಕಿರಣವನ್ನು ಸನ್ಮಾನ್ಯ ಮಾಜಿ ಉಪ ಮುಖ್ಯಮಂತ್ರಿಗಳು ಹಾಗೂ ಶಾಸಕರಾದ ಶ್ರೀ ಎಂ. ಪಿ. ಪ್ರಕಾಶ್‌ರವರು ಉದ್ಘಾಟಿಸಿ ವಿಚಾರಪೂರಿತ ಭಾಷಣ ಮಾಡಿ ಎಲ್ಲರನ್ನೂ ಹುರಿದುಂಬಿಸಿದರು. ಡಾ. ಎಂ. ವಿ. ಶ್ರೀನಿವಾಸ್ ಅವರು ಸಮ್ಮೇಳನದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿಕೊಟ್ಟರು. ಈ ಎಲ್ಲರಿಗೂ ನಾನು ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಈ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಪ್ರಬಂಧಗಳೇ ಈ ಗ್ರಂಥದಲ್ಲಿ ಪ್ರಕಟಗೊಂಡಿವೆ. ಇದನ್ನು ಸಂಸ್ಕೃತಿ ಪ್ರಿಯರಾದ ಕನ್ನಡಿಗರಿಗೆ ಅರ್ಪಿಸಲು ನನಗೆ ಸಂತೋಷವಾಗುತ್ತಿದೆ.

ಈ ವಿಚಾರ ಸಂಕಿರಣದ ಯಶಸ್ಸಿಗೆ ಕಾರಣಕರ್ತರಾದವರು, ಕನ್ನಡ ಮತ್ತು ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸುಬೀರ್ ಹರಿಸಿಂಗ್, ಭಾ. ಆ.ಸೇ. ಮತ್ತು ಕಾರ್ಯದರ್ಶಿಗಳಾದ ಶ್ರೀ ಜಯರಾಮರಾಜೇ ಅರಸ್, ಭಾ.ಆ.ಸೇ. ಅವರು ನೀಡಿದ ಮಾರ್ಗದರ್ಶನಕ್ಕಾಗಿ ಅವರಿಗೆ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ನಮ್ಮ ಇಲಾಖೆಯ ಎಲ್ಲಾ ಸಹಪಾಟಿಗಳು ನನಗೆ ನೀಡಿದ ಸಹಕಾರಕ್ಕಾಗಿ ವಂದಿಸುತ್ತೇನೆ.

ಶ್ರೀ ಸದ್ಗುರು ಪ್ರಿಂಟರ್ಸ್ ಅವರಿಗೆ ಹಾಗೂ ಮುಖಪುಟ ವಿನ್ಯಾಸ ಮಾಡಿಕೊಟ್ಟ ಶ್ರೀ ಮುರಳೀಧರ್ ಅವರಿಗೂ ನನ್ನ ವಂದನೆಗಳು.

ಈ ಗ್ರಂಥವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾನು ಆಶಿಸುತ್ತೇನೆ.

ಮೈಸೂರು
25-10-2008

ಡಾ. ಆರ್. ಗೋಪಾಲ್
ನಿರ್ದೇಶಕರು

ಪರಿವಿಡಿ

೧. ಸಮ್ಮೇಳನ ಉದ್ಘಾಟನಾ ಭಾಷಣ

ಎಂ. ಪಿ. ಪ್ರಕಾಶ್

ಈ ಸಮಾರಂಭದ ಅಧ್ಯಕ್ಷರೂ, ಖ್ಯಾತ ಸಂಶೋಧಕರೂ ಆದ ಡಾ. ಎ. ಸುಂದರ ಅವರೇ, ಸಮ್ಮೇಳನದ ಸರ್ವಾಧ್ಯಕ್ಷರಾದ ಸನ್ಮಾನ್ಯ ಡಾ. ಎಂ. ವಿ. ಶ್ರೀನಿವಾಸ್ ಅವರೇ, ಇತ್ತೀಚೆಗೆ ನಿವೃತ್ತರಾದ ಹಿರಿಯ ಅಧಿಕಾರಿಗಳಾದ ಸನ್ಮಾನ್ಯ ಶರ್ಮಾರವರೆ, ಈ ನಿರ್ದೇಶನಾಲಯದ ಸನ್ಮಾನ್ಯ ಡಾ. ಗೋಪಾಲ್‌ರವರೆ, ಇಲ್ಲಿ ಸಮಾವೇಶಗೊಂಡಿರುವ ಎಲ್ಲ ಇತಿಹಾಸ ತಜ್ಞರೆ, ಆಸಕ್ತ ಬಂಧುಗಳೇ ಹಾಗೂ ಅದರ ಗಂಭೀರ ವಿದ್ಯಾರ್ಥಿಗಳೆ ಮತ್ತು ಗೆಳೆಯರೆ, ಮಾಧ್ಯಮದ ಮಿತ್ರರೆ ನಾನು ಇಂದು ಪುಸ್ತಕವನ್ನು ಬಿಡುಗಡೆ ಮಾಡಬೇಕೆಂದು ಭಾವಿಸಿದ್ದೆ. ಆದರೆ ಇಂದು ಅದರ ಜೊತೆಗೆ ಸಮ್ಮೇಳನದ ಉದ್ಘಾಟನೆಯ ಒಂದು ಗೌರವವನ್ನು ಕೊಟ್ಟಿದ್ದಕ್ಕಾಗಿ ನಾನು ಪುರಾತತ್ವ ಇಲಾಖೆಗೆ ಆಭಾರಿಯಾಗಿದ್ದೇನೆ. ಬೇರೆ ಬೇರೆ ಕಾರ್ಯಕ್ರಮಗಳಿರುವುದರಿಂದ, ಅನಿವಾರ್ಯವಾಗಿ ನಾನು ಸಮ್ಮೇಳನದ ಉದ್ಘಾಟನಾ ಭಾಷಣ ಮಾಡಿದ ನಂತರ ಅಧ್ಯಕ್ಷರ ಅಪ್ಪಣೆ ಪಡೆದು ತೆರಳುತ್ತಿದ್ದೇನೆ. ದಯವಿಟ್ಟು ನೀವೆಲ್ಲರೂ ಕ್ಷಮಿಸಬೇಕೆನ್ನುವುದರ ಜೊತೆಗೆ ಬಹಳ ದೊಡ್ಡ ನಷ್ಟ ನನಗಾಗಿದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಏಕೆಂದರೆ ನೀವೆಲ್ಲ ಹಿರಿಯರು ; ಯಾವಾಗಲೂ ನಾನಿಲ್ಲಿ ಕುಳಿತೇ ಇರುತ್ತಿದ್ದೆ. ಅನೇಕ ವಿಷಯಗಳ ಬಗ್ಗೆ ತಾವು ಬೆಳಕನ್ನು ಚೆಲ್ಲುತ್ತೀರಿ. ನಿಮ್ಮ ನಿರಂತರವಾದ ಶ್ರದ್ಧೆಯಿಂದ ಸಂಶೋಧನೆಯ ಪ್ರತಿಭೆ ಮತ್ತು ಹೊಸ ವಿಷಯಗಳ ಬಗ್ಗೆ ತಾವು ಮಂಡಿಸುತ್ತಿದ್ದಂತಹ ವಾದ, ವಿವಾದ ಇವುಗಳೆಲ್ಲವೂ ಕೂಡ ಒಂದು ರೋಚಕವಾದ ಕಥಾನಕವನ್ನು ಬಿಂಬಿಸುತ್ತದೆ ಮತ್ತು ತೆರೆದಿಡುತ್ತದೆ. ಇದನ್ನು ನಾವೆಲ್ಲರೂ ಕಲಿಯಬೇಕಾಗಿರತಕ್ಕಂಥ ಅಗತ್ಯತೆ ಇರುವ ಹಿನ್ನೆಲೆಯಲ್ಲಿ ನಾನು ನಿಜವಾಗಿಯೂ ಕೂಡ ಒಂದು ಉತ್ತಮವಾದ ಕಾರ್ಯಕ್ರಮವನ್ನು ಕಳೆದುಕೊಂಡಿದ್ದೇನೆ ಎಂದು ಭಾವಿಸುತ್ತಾ ಇಂದು ಆಮಂತ್ರಿಸಿದ್ದ ಬಹಳ ಜನ ಬರದೇ ಹೋಗಿರುವುದರಿಂದ ಅವೆಲ್ಲವೂ ನನ್ನ ಕೊರಳಿಗೇ ಬಿದ್ದಿದೆ. ಆದರೆ ನಾನು ಬೇರೆ ಬೇರೆ ಕಾರ್ಯಕ್ರಮಗಳ ಉದ್ಘಾಟನೆಗಾಗಿ ಹೋಗಬೇಕಾಗಿದೆ. ದಯವಿಟ್ಟು ತಾವು ಕ್ಷಮಿಸುತ್ತೀರಿ ಎಂದು ಭಾವಿಸುತ್ತೇನೆ.

ಇತಿಹಾಸವನ್ನು ಮತ್ತೆ ನಾವು ಸೃಷ್ಟಿಮಾಡುತ್ತೇವೆ ಎನ್ನುವುದು ಭ್ರಮೆ, ಇತಿಹಾಸವನ್ನು ಮತ್ತೆ ಸೃಷ್ಟಿ ಮಾಡಲು ಆಗುವುದಿಲ್ಲ ಎನ್ನುವುದಕ್ಕಿಂತ ಹೆಚ್ಚಾಗಿ ಹೊಸ ಇತಿಹಾಸವನ್ನು ನಾವು ಸೃಷ್ಟಿಸಬಹುದು. ಪ್ರಾಯಶಃ ಇವತ್ತಿನ ನಮ್ಮ ರಾಜಕೀಯ, ನಮ್ಮ ಬದುಕು,

ನಮ್ಮ ಜೀವನ ಶೈಲಿ, ನಮ್ಮ ದುಡಿಮೆ, ನಮ್ಮ ಎಲ್ಲಾ ವಿಕೃತಿಗಳು ಕೂಡ ಮುಂದಿನ ಕಾಲದ ತಲೆಮಾರಿಗೆ ಒಂದು ಇತಿಹಾಸವಾಗಿ ಉಳಿಯುತ್ತವೆ. ಆದರೆ ಇತಿಹಾಸ ದಿಂದ ನಾವು ಪಾಠವನ್ನು ಕಲಿಯಬಹುದು. ಪಾಠವನ್ನು ಇತಿಹಾಸದಿಂದ ಕಲಿಯದೇ ಇರತಕ್ಕಂತಹ ಜನಾಂಗ ಒಂದು ಅತ್ಯಂತ ಅವಕೃಪೆ ಅನ್ನೋದಕ್ಕಿಂತ ಹೆಚ್ಚಾಗಿ ಅವರು ಶಾಪಗ್ರಸ್ತರಾಗುತ್ತಾರೆ ಎಂದು ನಾನು ಭಾವಿಸುತ್ತೇನೆ. ಏಕೆಂದರೆ ಈ ನಮ್ಮ ಇಂದಿನ ತಲೆಮಾರಿಗೆ ಅನುಕೂಲವಾಗುವಂತಹ ರೀತಿಯಲ್ಲಿ ನಾವು ಅರ್ಥೈಸಿಕೊಳ್ಳದೇ ನಮ್ಮ ಪೂರ್ವಜರು ಬಿಟ್ಟು ಹೋದಂಥ ಇಂತಹ ಒಂದು ದೊಡ್ಡ ಮನುಕುಲದ ಸಾಧನೆಯನ್ನು, ಅವರ ನಡವಳಿಕೆಗಳನ್ನು, ಅವರು ಸಾಧಿಸಿ ಕ್ರಮಿಸಿದ ದಾರಿಯನ್ನು ನಾವು ಗುರುತಿಸಿ ಕೊಳ್ಳುವುದರ ಮೂಲಕವಾಗಿ ಮತ್ತೆ ಭವಿಷ್ಯವನ್ನು ಕಟ್ಟಲಿಕ್ಕೆ ನಾವೆಲ್ಲರೂ ಕೂಡ ನಿರ್ಧಾರವನ್ನು ತೆಗೆದುಕೊಳ್ಳಬೇಕಾದಂತಹ ಅಗತ್ಯ ಇದೆ. ಇದು ಇಡೀ ಜಗತ್ತು ನಮಗೆ ಕೊಟ್ಟಿರಂತಕ್ಕಂತಹ ಬಳುವಳಿ ಅಲ್ಲ. ಇದು ಮುಂದಿನ ತಲೆಮಾರಿಗೆ ನಾವು ಕೊಡಲೇ ಬೇಕಾಗಿರತಕ್ಕಂತಹ ನಮ್ಮ ಆದ್ಯ ಕರ್ತವ್ಯ. ಆದ್ದರಿಂದ ಇದನ್ನು ಕಲುಷಿತಗೊಳಿಸದೆ ಇಡೀ ಇತಿಹಾಸವನ್ನು ಮತ್ತೆ ನೈಜರೀತಿಯಲ್ಲಿ ಸಂಗ್ರಹಿಸಿಕೊಳ್ಳುವ ಸಂರಕ್ಷಿಸುವ, ಅದರಿಂದ ಸಂದೇಶವನ್ನು ಮುಂದಿನ ತಲೆಮಾರಿಗೆ ಮತ್ತು ಸಮಕಾಲೀನ ಪ್ರಪಂಚಕ್ಕೆ ಕೊಡುವಂತೆ ರಚಿಸಬೇಕಾಗಿದೆ. ಇಂದಿನ ರಾಜಕೀಯ ವಿದ್ಯಮಾನಗಳನ್ನು ನೋಡಿದಾಗ ಪ್ರಾಯಶಃ ಇತಿಹಾಸದ ಪ್ರತಿಪುಟಗಳಲ್ಲಿಯೂ ಕೂಡ ಅಧಿಕಾರದ ಗ್ರಹಣಕ್ಕೆ ನಡೆದಿರು ವಂತಹ ಅನೇಕ ಇಂತಹ ಅಸ್ಥಿರತೆ, ಕ್ರೌರ್ಯ ಮತ್ತು ಬೇರೆ ಬೇರೆ ರೀತಿಯ ನಡವಳಿಕೆ ಗಳನ್ನು ನಾವು ವಿಜಯನಗರದ ಅರಸರಲ್ಲಿ ಮತ್ತು ಮೊಘಲರಲ್ಲಿ ಕಾಣುತ್ತೇವೆ. ವಿದೇಶೀಯ ಸಾಮ್ರಾಜ್ಯಗಳಲ್ಲಿಯೂ ಕಾಣುತ್ತೇವೆ. ಯಾವುದಾದರೊಂದು ಸಾಮ್ರಾಜ್ಯ ಅಧಃಪತನಕ್ಕೆ ಹೋಗುತ್ತದೆ ಎಂದು ಹೇಳುವುದಾದರೆ ಅದರ ಸ್ಥೈರ್ಯಜೀವನದ ಜೊತೆಗೆ ಪ್ರಾಯಶಃ ಮಾತಿಗೆ ತಪ್ಪುವ ನಡವಳಿಕೆಗಳು, ನೈಜತೆ ಇಲ್ಲದ ಕೃತ್ರಿಮ ವ್ಯವಹಾರಗಳು ಮತ್ತು ಅಧಿಕಾರದ ಲಾಲಸೆಗಾಗಿ ಬಂಧು ಬಳಗಗಳ ವಿರುದ್ಧವಾಗಿಯೇ ಪಿತೂರಿಗಳನ್ನು ಮಾಡುವುದು-ಇವೆಲ್ಲವೂ ಕೂಡ ಅತ್ಯಂತ ಪ್ರಮುಖವಾಗಿ ಇತಿಹಾಸದಲ್ಲಿ ನಡೆದ ಸಂಗತಿಗಳೂ ಆಗಿರುತ್ತವೆ. ಆದರೆ ಈ ಸಂಗತಿಗಳಿಂದ ನಾವು ಪಾಠ ಕಲಿತಿದ್ದೇವೆಯೆ ? ಇಲ್ಲ. ಇವು ಪದೇ ಪದೇ ನಡೆಯುತ್ತಿವೆ. ಇದಕ್ಕೆ ನಮ್ಮ ಡಾ. ಸುಂದರ ಅಂತಹ ವಿದ್ವಾಂಸರು ಉತ್ತರ ಕೊಡಬೇಕು. ಪ್ರಾಯಶಃ ಇತಿಹಾಸದಲ್ಲಿ ಉತ್ತರ ಇರುತ್ತದೆ ಎಂದು ನಂಬುವುದಿಲ್ಲ; ಯಾಕೆಂದರೆ ಮನುಷ್ಯನ ಗುಣಧರ್ಮಗಳಲ್ಲಿ ಆ ಅಧಿಕಾರ, ಕೀರ್ತಿ ಮತ್ತು ಹಣ ಎಂತಹ ಲೋಭವನ್ನು ಒಡ್ಡುತ್ತದೆ ಎನ್ನುವುದನ್ನು ನಿಜವಾಗಿಯೂ ಮನಶ್ಶಾಸ್ತ್ರಜ್ಞರು ಹೇಳಬೇಕಾಗಿರುವ ವಿಷಯವೇ ಅಥವಾ ಇಡೀ ಸಮಾಜದ ಬದುಕಿನಲ್ಲಿ ಅಂತಹ ನೈತಿಕತೆಯ ವಾತಾವರಣ ತರಬೇಕಾದಂತಹ ಅಗತ್ಯ ಕೂಡ ಇದೆಯೇ ಎಂದು

ನಿರ್ಧರಿಸಬೇಕಾಗಿದೆ. ವಾಲ್ಮೀಕಿ ರಾಮಾಯಣದ ಮೂಲ ಪಾಠದಲ್ಲಿ ಪಿತೃವಾಕ್ಯ ಪರಿಪಾಲನೆಗಾಗಿ ಶ್ರೀರಾಮಚಂದ್ರ ಅರಣ್ಯಕ್ಕೆ ಹೋದನು ಎನ್ನುವುದನ್ನು ನಾವೆಲ್ಲ ತಿಳಿದಿರುವ ವಿಷಯ ಮತ್ತು ಆತ ಮರ್ಯಾದಾ ಪುರುಷೋತ್ತಮ ಎಂದು ಹೇಳಿ ಇವತ್ತಿಗೂ ನಾವು ಗೌರವಿಸುತ್ತೇವೆ. ಆದರೆ ಅಂತಹ ಒಬ್ಬ ಗೌರವಯುತ ವ್ಯಕ್ತಿಯೂ ಕೂಡ ಅಂತಹ ಸಂಕಷ್ಟಗಳು ಎದುರಾದಾಗ ಸಮಕಾಲೀನ ಬದುಕಿನಲ್ಲಿರುವ ಕೆಲವು ಮೌಲ್ಯಗಳು ಹೇಗೆ ಬೇರೆ ಮೌಲ್ಯಗಳಿಗಿಂತ ಹೆಚ್ಚು ಆಕರ್ಷಣೀಯ ಹಾಗೂ ವ್ಯಾಮೋಹ ವನ್ನು ತರುತ್ತವೆ ಎನ್ನುವುದರ ಬಗ್ಗೆ ಪ್ರಥಮ ರಾತ್ರಿ ಆತ ಅರಣ್ಯದಲ್ಲಿ ಕಳೆಯುವಾಗ ಲಕ್ಷ್ಮಣನಿಗೆ ಹೇಳುತ್ತಾನೆ "ಅರ್ಥ ಮತ್ತು ಕಾಮ ಇವೆರಡೂ ಬಹಳ ದೊಡ್ಡ ಪ್ರಲೋಭ ಗಳು; ಈಗ ನನಗೆ ಅರ್ಥವಾಗುತ್ತಿದೆ; ಕಾಮಾತುರನಾದ ನನ್ನ ತಂದೆ ನನ್ನನ್ನು ಅರಣ್ಯಕ್ಕೆ ಅಟ್ಟುವುದರ ಮೂಲಕ ಕಾಮ ಮತ್ತು ಅರ್ಥಗಳು ಬೇರೆ ಎಲ್ಲಾ ದಾರಿಗಳಿಗಿಂತ ಹೆಚ್ಚು ಪ್ರಭಾವಿತವಾದದ್ದು" ಎಂದು ಹೇಳಿ ಅವನು ಪರಿತಪಿಸಿದ್ದುದನ್ನು ನಾವು ಇಲ್ಲಿ ಗುರುತಿಸು ತ್ತೇವೆ. ನಾನು ಮೂಲ ರಾಮಾಯಣವನ್ನೇನೂ ಓದಿಲ್ಲ. ಆದರೆ ನಮ್ಮ ಮತ್ತೂರು ಕೃಷ್ಣಮೂರ್ತಿಗಳು ವಾಲ್ಮೀಕಿ ಮಹರ್ಷಿಗಳ ಒಂದು ಮೂಲಗ್ರಂಥದ ಎಲ್ಲಾ ಪಾಠವನ್ನು ಕೊಟ್ಟಿದ್ದಾರೆ. ಬರೀ ಅಲ್ಲಿಗೇ ಅವರು ನಿಲ್ಲಿಸೋದಿಲ್ಲ. ಇಂತಹ ಸುಭಿಕ್ಷೆಯ ನಾಡನ್ನು ಕಟ್ಟಿರತಕ್ಕಂತಹ, ಆತ ಮುಂದೆ ಅಳುವುದನ್ನು ನೋಡಿ ನಾವು ಸಂತೋಷಪಡ ಬೇಕಾ ದಂತಹ ಸಂಗತಿ ಇದೆ ಎನ್ನುವ ವ್ಯಂಗ್ಯದ ಮಾತು ಕೂಡ ಇರುತ್ತದೆ. ಅಂದರೆ ಮನುಷ್ಯ ಸ್ವಭಾವ ರಾಮಾಯಣದ ಕಾಲವೇ ಆಗರಲಿ, ಮಹಾಭಾರತ ಕಾಲವೇ ಆಗಿರಲಿ ನಾವು ನಮ್ಮ ಈ ಅರಿಷಡ್ವರ್ಗದ ಮೋಹಗಳನ್ನು ಬಿಡಲಾರದೆ ಇರುತ್ತೇವೆ ಎನ್ನುವುದನ್ನು ಕೂಡ ಇತಿಹಾಸದ ಪಾಠಗಳಲ್ಲಿ ನಾವು ಕಲಿಯುತ್ತೇವೆ.

ನಾಲ್ಕು ರಾಜವಂಶಸ್ಥರು ಇಲ್ಲಿ ಕಾಣಬರುತ್ತಾರೆ. ಎಲ್ಲರೂ ಸಮರ್ಥರಾಗಿರಬೇಕು ಎಂದೇನೂ ಇಲ್ಲ. ಆದರೆ ಸಮರ್ಥರು ಇಲ್ಲದೇ ಇರತಕ್ಕಂತಹ ಸಂದರ್ಭದಲ್ಲಿ ಮಹತ್ವಾ ಕಾಂಕ್ಷಿಗಳಾದಂತಹವರು ಇಡೀ ಅರಸೊತ್ತಿಗೆಗಳನ್ನು ಕಿತ್ತೊಗೆಯುವ ಸಂದರ್ಭದಲ್ಲಿ ಅವರು ತೋರಿಸಿದಂತಹ ಕ್ರೌರ್ಯ, ಮಾಡಿದಂತಹ ಪಿತೂರಿ ಹಾಗೂ ನಡೆದು ಕೊಂಡಂತಹ ರೀತಿನೀತಿಗಳು ಒಪ್ಪದೇ ಇರತಕ್ಕಂತಹವು. ಈ ಒಂದು ವಿಜಯನಗರದ ಅರಸರ ಪರಂಪರೆಯಲ್ಲಿ ಬಂದಂತಹ ವಿನಯ, ಭಕ್ತಿ ಮತ್ತು ಜನ ಹಿತಕಾರ್ಯಕ್ಕಾಗಿ ದುಡಿಯಬೇಕಾದಂತಹ ರಾಜಧರ್ಮ, ಇವುಗಳನ್ನು ಮೀರಿ ನಿಂತ ಅಳಿಯ ರಾಮರಾಯನ ಅಹಂಕಾರ ಯಾವ ರೀತಿ ಅಧಃಪತನಕ್ಕೆ ಹಾಗೂ ಬಹಮನಿ ಸುಲ್ತಾನರು ಒಂದಾಗಲಿಕ್ಕೆ ಕಾರಣವಾಯಿತು ಎಂಬುದನ್ನು ನಾವು ಕಲಿಯಬಹುದು. ಅದೇ ರೀತಿ ಔರಂಗಜೇಬನಂತಹವನು ಇಲ್ಲಿನ ದಕ್ಷಿಣದ ಎಲ್ಲಾ ಮುಸ್ಲಿಂ ಸಾಮ್ರಾಜ್ಯಗಳನ್ನು ನಾಶ ಮಾಡಿ ತನ್ನ ವಿಸ್ತರಣ ಮನೋಭಾವದ ಮೂಲಕವಾಗಿ ಇಲ್ಲಿ ಬದುಕುವ ಜನರ ವಿಚಾರಗಳ ಬಗ್ಗೆ, ಕಲ್ಯಾಣದ

ಬಗ್ಗೆ ಅಥವಾ ಒಂದು ರಾಷ್ಟ್ರದ ಪರಿಕಲ್ಪನೆ ಬಗ್ಗೆ ಹೆಚ್ಚು ಗಮನ ಕೊಡಲಿಲ್ಲ ಎನ್ನುವುದು ಗೊತ್ತಾಗುತ್ತದೆ. ನಮ್ಮ ಪುರಾತತ್ವ ಇಲಾಖೆಯ ಡಾ. ಗೋಪಾಲ್‌ರವರು, ಸಿದ್ದನ ಗೌಡರು ಮತ್ತು ಎಲ್ಲ ಹಿರಿಯ ಅಧಿಕಾರಿಗಳು ಬಹಳ ಉತ್ತಮವಾದ ಕಾರ್ಯಕ್ರಮ ಗಳನ್ನು ಮಾಡುತ್ತಾ ಇದ್ದಾರೆ. ಇದು ಒಂದು ಉತ್ಸವ ಆಗುವುದರ ಮೂಲಕ ಅದರ ಲ್ಲಿಯೂ ಜನೋತ್ಸವ ಆಗುವುದರ ಮೂಲಕ ಜನ ಸಾಮಾನ್ಯರಲ್ಲಿ ಕುತೂಹಲವನ್ನು ಕೆರಳಿಸಿ ಅದರಲ್ಲಿಯೂ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ, ಯುವಕರಿಗೆ ಎಂಥ ಒಂದು ದೊಡ್ಡ ಪರಂಪರೆಯ ಸ್ಥಾನದಲ್ಲಿ ನಾವು ಕುಳಿತಿದ್ದೇವೆ ಎಂಬುದನ್ನು ತೋರಿಸಿಕೊಡುತ್ತದೆ. ಅದರ ಮೂಲಕವಾಗಿ ಮತ್ತೆ ಸಮರ್ಪಣಾ ಭಾವದಿಂದ ನಾವು ನಾಡು ಕಟ್ಟಲು ಪ್ರಯತ್ನಿಸುತ್ತೇವೆ ಎನ್ನುವ ವಿಚಾರದ ಬಗ್ಗೆ ಬೇಕಾಗಿರುವಂಥ ಪೂರ್ವಸಿದ್ಧತೆಯನ್ನು ಒದಗಿಸುತ್ತದೆ.

ಇಲ್ಲಿ ನಾಡಿನ ಉದ್ದಗಲದಿಂದ ಅನೇಕ ವಿದ್ವಾಂಸರನ್ನು ನೀವು ಆಹ್ವಾನಿಸಿದ್ದೀರಿ. ಅವರು ಕೊಡುತ್ತಿರತಕ್ಕಂತಹ ಕೊಡುಗೆ ಅಪಾರ. ಅವರ ಮೂಲಕವಾಗಿ ನಾವು ಪ್ರೇರೇಪಿತರಾದಂತಹವರು ಯಾವುದೂ ಕೂಡ ಅರ್ಥವಾಗದೆ ಬರಿ ಕೇವಲ ಗುಡಿ ಗೋಪುರಗಳೇ ಈ ವಿಜಯನಗರ ಅಂತ ಭಾವಿಸಿಕೊಂಡಾಗ ಇದರಲ್ಲಿ ಯಾವ ಯಾವ ಮುಖಗಳ ಮೂಲಕವಾಗಿ ನಾವು ಇತಿಹಾಸವನ್ನು ಅರ್ಥೈಸಿಕೊಳ್ಳಬಹುದು ಎನ್ನುವುದಕ್ಕೆ ಕಳೆದ ಬಾರಿ ಡಾ. ಎ. ವಿ. ನರಸಿಂಹಮೂರ್ತಿಗಳು ಮಾಡಿದಂತಹ ಸಮ್ಮೇಳನದ ಅಧ್ಯಕ್ಷ ಭಾಷಣ, ನಾಣ್ಯದ ಮೂಲಕ ಇತಿಹಾಸವನ್ನು ಅರ್ಥಮಾಡಿಕೊಳ್ಳುವಂತಹ ಪ್ರಯತ್ನ. ಅದು ನಿಜವಾಗಿಯೂ ಒಂದು ಶಾಸ್ತ್ರ. ನಾಣ್ಯ ಶಾಸ್ತ್ರವನ್ನು ಬೇರೆ ಬೇರೆ ಕೋನಗಳಿಂದ ನೋಡಿದಾಗ ನಾಣ್ಯಗಳ, ಟಂಕಸಾಲೆಯ ಆ ವಿಭಾಗ ಅವುಗಳನ್ನು ಸೃಷ್ಟಿಸಿದಂತಹ ರಾಜನ ಹಿನ್ನೆಲೆ, ಅಂದಿನ ಘಟನೆಗಳು ಇವುಗಳ ಬಗ್ಗೆ ಇತಿಹಾಸವನ್ನು ಯಾವ ರೀತಿ ಮತ್ತೆ ಕಟ್ಟಬೇಕು ಎನ್ನುವುದಕ್ಕೆ ಮಾರ್ಗದರ್ಶನವಾದಂತಹ ಒಂದು ಉತ್ತಮ ಭಾಷಣವನ್ನು ಮಾನ್ಯ ನರಸಿಂಹಮೂರ್ತಿಗಳು ಮಾಡಿದರು.

ಅದೇ ರೀತಿ ನಮ್ಮ ಸಾಹಿತ್ಯದ ಮೂಲಕ, ವಿವಿಧ ಭಾಷೆಗಳಲ್ಲಿ ಬರೆದಿರುವಂತಹ ಅಂದಿನ ನಮ್ಮ ಕಾವ್ಯಗಳ ಮೂಲಕವಾಗಿ ಇಡೀ ವಿಜಯನಗರದ ಪಟ್ಟಣದ ಬಗ್ಗೆ, ಸಾಮ್ರಾಜ್ಯದ ಬಗ್ಗೆ ಅದರ ಇಡೀ ಸೀಮೆಯ ಬಗ್ಗೆ ನಾವು ಅರ್ಥಮಾಡಿಕೊಳ್ಳಲಿಕ್ಕೆ ಹಾಗೂ ಜನಜೀವನದ ಸೂಕ್ಷ್ಮತೆಯನ್ನು ತಿಳಿಯುವುದಕ್ಕೆ ಸಾಧ್ಯವಾಗುತ್ತದೆ. ಅದೇ ರೀತಿ ಕನ್ನಡ ವಿಶ್ವವಿದ್ಯಾನಿಲಯದವರಿಗೆ ಪ್ರತಿ ವರ್ಷವೂ ಕೂಡ ನೀವು ಈ ರೀತಿಯ ಒಂದು ಉದ್ಗ್ರಂಥವನ್ನು ಪ್ರಕಟಗೊಳಿಸಬೇಕು ಎಂದು ಹೇಳಿದಾಗ ಕಳೆದ ಬಾರಿ ಅವರು ಪ್ರಕಟಿಸಿದಂತಹ 'ವಿದೇಶಿಯರು ಕಂಡ ವಿಜಯನಗರ' ಎನ್ನುವ ಪುಸ್ತಕ ಪ್ರಮುಖವಾದ ಪುಸ್ತಕವಾಗಿ ಹೆಚ್ಚು ಮಾರಾಟವಾಗಿ ಜನಸಾಮಾನ್ಯರು ಅದರಿಂದ ಕುತೂಹಲಿಗಳಾಗಿದ್ದಾರೆ.

ಇದರಿಂದ ನಾವು ಕಲಿಯಬೇಕಾದ ಪಾಠವೆಂದರೆ ಭಾರತೀಯರಾದ ನಾವು ಇತಿಹಾಸದ ಬಗ್ಗೆ ಹೆಚ್ಚು ಅವಜ್ಞೆಯನ್ನು ಇಟ್ಟುಕೊಂಡಿದ್ದೇವೆ. ದಾಖಲೀಕರಣ ಮಾಡಲಿಕ್ಕೆ ಮಹಾ ಸೋಮಾರಿಗಳಾಗಿದ್ದೇವೆ. ಎಲ್ಲವನ್ನು ವೈಭವೀಕರಿಸುತ್ತೇವೆ. ಇಲ್ಲದೆ ಹೋದರೆ ಅದನ್ನು ಸಂಪೂರ್ಣವಾಗಿ ನಾವು ಕುರುಡು ಜಾಣತನದಿಂದ ಕೈಬಿಟ್ಟು ಬಿಡುತ್ತೇವೆ. ಈ ಕುರುಡು ಜಾಣತನದ ಮೂಲಕವಾಗಿ ಇತಿಹಾಸದಲ್ಲಿ ನಾವು ಅರ್ಧ ಸತ್ಯವನ್ನು ಹೇಳುವ ಅಥವಾ ಅದನ್ನು ಸಂಪೂರ್ಣ ಕೈ ಬಿಡುವುದರ ಮೂಲಕವಾಗಿ ದೊಡ್ಡ ಅಪಚಾರವನ್ನು ಇತಿಹಾಸಕ್ಕೆ ನಾವು ಮಾಡುತ್ತೇವೆ. ಆದರೆ ವಿದೇಶೀಯರು ಸ್ಥಳನಾಮಗಳ ಬಗ್ಗೆ ಅವರಿಗೆ ಇರುವ ಗೊಂದಲ, ಮತ್ತೆ ದೂರದ ಊರಿನಿಂದ ಬಂದ ನಂತರವೂ ಕೂಡ ಕಲಿಯ ಬೇಕೆನ್ನುವ ಆಸಕ್ತಿ, ಪ್ರತಿಯೊಂದು ಸಣ್ಣ ಘಟನೆಗಳ ಬಗ್ಗೆಯೂ ತೋರುತ್ತಿದ್ದ ಅವರ ಆ ಒಂದು ಕುತೂಹಲ ಮತ್ತು ಅವನ್ನೆಲ್ಲಾ ದಾಖಲಿಸಿ ರುವುದನ್ನು ನೋಡಿದಾಗ ಪ್ರಾಯಶಃ ನಮ್ಮ ಇತಿಹಾಸಜ್ಞರು ಇಂತಹ ಒಂದು ದೊಡ್ಡ ಪ್ರಯತ್ನ ಮಾಡಲೇ ಇಲ್ಲ ಎಂದು ನಾನು ಭಾವಿಸಿದ್ದೇನೆ. ಮೊಘಲರ ಕಾಲದಿಂದ ಇಂತಹ ಇತಿಹಾಸವನ್ನು ದಾಖಲೀಕರಿಸು ವಂತಹ ಕೆಲಸ ಪ್ರಾರಂಭವಾಗಿದೆ. ಅದಕ್ಕಿಂತ ಮುಂಚೆ ಇಂತಹ ಕಳಕಳಿ ಕಾಣಬರುವುದಿಲ್ಲ ಎಂದೆನಿಸುತ್ತದೆ.

ಇದೇ ರೀತಿಯಲ್ಲಿ ವಿಜಯನಗರ ಸಾಮ್ರಾಜ್ಯದ ಎಲ್ಲಾ ವಿಷಯಗಳ ಬಗ್ಗೆ ಇತಿಹಾಸಜ್ಞರು ಬೆಳಕನ್ನು ಚೆಲ್ಲುತ್ತಾ ಇದ್ದಾರೆ. ಕುತೂಹಲಿಗಳಾಗಿದ್ದಂತಹ ವಿದ್ಯಾರ್ಥಿ, ವಿದ್ಯಾರ್ಥಿನಿಯರೂ ಕೂಡ ಕೋಟೆ ಕೊತ್ತಲಗಳ ಬಗ್ಗೆ, ಬಜಾರ್‌ಗಳ ಬಗ್ಗೆ, ಸೂಳೆಯರ ಬಗ್ಗೆ, ಸೈನ್ಯದ ಬಗ್ಗೆ ಕ್ರೀಡೆಯ ಬಗ್ಗೆ ರಾಜ ಪಿತೂರಿಗಳ ಬಗ್ಗೆ ಈ ಎಲ್ಲಾ ವಿಚಾರಗಳ ಕುರಿತಾಗಿಯೂ ಪ್ರತ್ಯೇಕ ಪ್ರತ್ಯೇಕ ಪ್ರಬಂಧ ಹಾಗೂ ಗ್ರಂಥಗಳನ್ನು ರಚಿಸಿದ್ದಾರೆ. ಈ ಸಮಗ್ರ ಇತಿಹಾಸ ತೋಡಿದಷ್ಟು ಕೂಡ ಬರತಕ್ಕಂತಹ ಒಂದು ಅಕ್ಷಯ ಪಾತ್ರೆ ಎಂದು ತಿಳಿದಿದ್ದೇನೆ. ಎಷ್ಟು ಕೆಲಸ ಮಾಡಿದರೂ ಕೂಡ ಸಾಲದೇ ಇರತಕ್ಕಂತಹ ಸು. 23 ಚ. ಕೀ. ಮಿ. ವ್ಯಾಪ್ತಿವುಳ್ಳ ಈ ಒಂದು ನಗರ ಮತ್ತು ಇದರ ಸಾಮ್ರಾಜ್ಯದ ಎಲ್ಲೆಗಳು ಅಲ್ಲಿಯ ಒರಿಸ್ಸಾದ ಮಹಾನದಿಯಿಂದ ಹಿಡಿದು ದಕ್ಷಿಣದ ಶ್ರೀಲಂಕವನ್ನೂ ಕೂಡ ಆಕ್ರಮಿಸಿಕೊಂಡಿರತಕ್ಕಂತಹ ಒಂದು ದೊಡ್ಡ ಸಾಮ್ರಾಜ್ಯ ಎಂತಹ ಮಹತ್ವದ ಕೊಡುಗೆ ಯನ್ನು ಕೊಟ್ಟಿತು. ಆದರೆ ತುಂಗಭದ್ರ ನದಿ ಅಥವಾ ಕೃಷ್ಣಾನದಿಯನ್ನು ದಾಟಿ ಇದು ಹೋಗಲಿಕ್ಕೆ ಆಗಲೇ ಇಲ್ಲ. ಶ್ರೀಲಂಕದವರೆಗೂ ಬಂತು, ಹಾಗೇ ಒರಿಸ್ಸಾದವರೆಗೂ ಹೋಯ್ತು, ಗಜಪತಿ ರುದ್ರನನ್ನು ಸೋಲಿಸಿದ್ದೂ ಆಯ್ತು, ಜಗನ್ಮೋಹಿನಿಯನ್ನು ಮದುವೆ ಆಗಿದ್ದೂ ಆಯ್ತು. ಆದರೆ ನಾವು ಕೃಷ್ಣಾನದಿಯನ್ನು ದಾಟಿ ನಮ್ಮ ಕರ್ನಾಟಕದ ಆ ಒಂದು ಉತ್ತರದ ಭಾಗವನ್ನು ವಿಜಯನಗರದ ಅರಸರು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳಲಿಕ್ಕೆ ಸಾಧ್ಯ ಆಗದೇ ಇದ್ದುದ್ದಕ್ಕೆ ಕಾರಣ ಪ್ರಾಯಶಃ ಬಹಮನಿ ರಾಜರೋ

ಅಥವಾ ಇವರೂ ಉದಾಸೀನರಾಗಿ ಆಂಧ್ರ ಹಾಗೂ ಕರ್ನಾಟಕದ ಗಡಿಗಳ ಬಗ್ಗೆ ಹೆಚ್ಚು ಉತ್ಸುಕರಾಗಿದ್ದರೋ ಗೊತ್ತಿಲ್ಲ. ಆದರೆ ಇಂತಹ ಒಂದು ಸಾಮ್ರಾಜ್ಯವನ್ನು ಮೊದಲು ಇತಿಹಾಸಕಾರರು 'ವಿಜಯನಗರ ಸಾಮ್ರಾಜ್ಯ' ಅಂತ ಕರೆದಿದ್ದಾರೆ. ಆದರೆ ನಾನು ಹಿಂದೆ ಕೂಡ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ಇದನ್ನು 'ಕರ್ನಾಟಕ ರಾಜ್ಯ' ಎಂಬುದಾಗಿಯೇ ಎಲ್ಲರೂ ಕರೆಯಬೇಕು ಎಂದು ಹೇಳುತ್ತೇನೆ. ಆದ್ದರಿಂದ ವಿಜಯ ನಗರ ಸಾಮ್ರಾಜ್ಯ ಅಂತ ಹೇಳಿದ್ದು ತಪ್ಪು ಎನ್ನುವುದಕ್ಕಿಂತ ಹೆಚ್ಚಾಗಿ ಆಧುನಿಕ ಇತಿಹಾಸ ಕಾರರು ಈ ಒಂದು ಶಬ್ದವನ್ನು ಬಳಸುವುದರ ಮೂಲಕ ಹೆಚ್ಚು ಪ್ರಚಾರ ಮಾಡಿದ್ದಾರೆ. ಹಾಗೇ ಪ್ರೌಢದೇವರಾಯನ ಶಾಸನಗಳ ಬಗ್ಗೆ ನಿನ್ನೆ ಕಲ್ಬುರ್ಗಿಯವರು ಪುಸ್ತಕ ಬಿಡುಗಡೆ ಮಾಡಿದ ಸಂದರ್ಭದಲ್ಲಿಯೂ ಕೂಡ ಅದರ ಉದಾತ್ತತೆಯ ಬಗ್ಗೆ ಮಾತನಾಡುತ್ತಾ ಈ ಗಜವೇಂಟೆಕಾರ ತನ್ನ ನಾಣ್ಯವನ್ನು ಮುದ್ರಿಸಿದಂತಹ ಸಂದರ್ಭದಲ್ಲಿ ಆನೆಯ ಪ್ರತಿ ಮುದ್ರೆಯನ್ನು ಟಂಕಸಾಲೆಯಲ್ಲಿ ಮಾಡುತ್ತಿದ್ದುದು ಹಾಗೇ ಟಂಕಸಾಲೆಯಲ್ಲಿಯೇ ವಿದೇಶೀ ವಿನಿಮಯದ ಒಂದು ವ್ಯವಸ್ಥೆ ಇದ್ದುದ್ದು ಮತ್ತು ಅಂದಿನ ತ್ರಾಸನ್ನು ಇಟ್ಟು ಕೊಂಡಿರತಕ್ಕಂತಹ ಸಂದರ್ಭದಲ್ಲಿ ಕೂದಲೆಳೆಯ ತೂಕವನ್ನೂ ಅಳೆಯುವ ರೀತಿಯ ನಿಖರತೆಯನ್ನು ಪಡೆದುಕೊಂಡಿರತಕ್ಕಂತಹ ಯಂತ್ರೋಪಕರಣಗಳಿದ್ದುವು ಎನ್ನುವ ವಿಚಾರಗಳ ಬಗ್ಗೆ ಕೂಡ ತಿಳಿಸಿದ್ದಾರೆ. ಆ ಪುಸ್ತಕದಲ್ಲಿ ಎಲ್ಲಾ ಲೇಖನಗಳು ಕೂಡ ಇವೆ. ಇಂದು ಸುಂದರ್ ಅವರು ಇದರ ಅಧ್ಯಕ್ಷತೆ ವಹಿಸಿರುವಂತಹದ್ದು ನಮ್ಮೆಲ್ಲರಿಗೂ ಕೂಡ ಬಹಳ ಅಭಿಮಾನ ಮತ್ತು ಸಂತೋಷವನ್ನು ತಂದುಕೊಟ್ಟಿರುವ ವಿಚಾರ. ಮಾನ್ಯ ಸುಂದರ್ ಅವರಿಗೆ ಎಂದೋ ಸಲ್ಲಬೇಕಾಗಿದ್ದಂತಹ ಗೌರವ ಕನ್ನಡ ರಾಜ್ಯ ಪ್ರಶಸ್ತಿ ಈಗಲಾದರೂ ಬಂದಿದೆ ಎನ್ನುವುದು ಸಂತೋಷದ ವಿಷಯ.

ಇಂದು ಮಾನ್ಯ ಡಾ. ಗೋಪಾಲ್‌ರವರು ಇಂತಹ ಉತ್ತಮವಾದ ಕಾರ್ಯ ಕ್ರಮವನ್ನು ಇಲ್ಲಿ ಏರ್ಪಾಡುಮಾಡಿದ್ದಾರೆ. ಈ ಇತಿಹಾಸದ ಅನೇಕ ವಿಷಯಗಳ ಬಗ್ಗೆ ಚರ್ಚೆ ಮಾಡಲಿಕ್ಕೆ ಬೇಕಾದಷ್ಟು ಅವಕಾಶಗಳು ಇವೆ. ಯಾರು ಸಂಶಯದಿಂದ ಪ್ರಶ್ನೆ ಕೇಳೋದಕ್ಕೆ ಪ್ರಾರಂಭ ಮಾಡುತ್ತಾರೆ ಆಗ ಇತಿಹಾಸ ಬಾಯ್ದೆರೆದು ನಿಲ್ಲುತ್ತದೆ. ಮತ್ತೆ ಸಮಕಾಲೀನವಾದ ಬದುಕಿನ ದೃಷ್ಟಿಯಿಂದ ಅರ್ಥೈಸುವ ಕೆಲಸ ಮಾಡಬಾರದು. ಏಕೆಂದರೆ ಸಮಕಾಲೀನವಾಗಿರತಕ್ಕಂತಹ ಓದುಗರು ಅದನ್ನು ತಮ್ಮದೇ ಆದ ವೈಯಕ್ತಿಕ ದೃಷ್ಟಿ ಕೋನದ ಮೂಲಕ ಅಥವಾ ಸಾಪೇಕ್ಷ ದೃಷ್ಟಿಕೋನದ ಮೂಲಕ ನೋಡುವ ಪ್ರಯತ್ನ ವನ್ನು ಮಾಡುತ್ತಾರೆ. ಅದರ ಬದಲು ನಾವು ಯಾವುದನ್ನು Objective assessement ಎಂದು ಕರೆಯುತ್ತೇವೆಯೋ ಅದನ್ನು ಸಂಪೂರ್ಣವಾದಂತಹ ವಸ್ತು ನಿಷ್ಠತೆಯಿಂದ ಅದನ್ನು ಮಾಡಬೇಕು. ಇದರಲ್ಲಿ ಎರಡು ಮುಖ್ಯವಾದ ಕೆಲಸಗಳಾಗಬೇಕಾಗಿದೆ. ಮೊದಲನೆಯದು ಅದನ್ನು ವಸ್ತುನಿಷ್ಠವಾಗಿ ವಿವರಿಸುವುದು. ಅದಕ್ಕೆ ಬೇಕಾಗಿರತಕ್ಕಂತಹ

ಆಕರ ಗ್ರಂಥಗಳನ್ನು ಸೂಚಿಸುವುದು. ಅದಾದ ನಂತರ ಕುತೂಹಲಿಗಳಾಗಿ ಓದುವಂಥವರು, ವಿದ್ವಾಂಸರು, ಚರ್ಚೆಮಾಡಿ ವಿಶ್ಲೇಷಿಸಿ, ಅದರ ವಿವಿಧ ಮುಖದ ಆಯಾಮಗಳನ್ನು ತಂದು ಕೊಡತಕ್ಕಂಥದ್ದು. ಈ ರೀತಿ ಆಗುವುದೇ ವಿಚಾರ ಸಂಕಿರಣದ ಮುಖ್ಯ ಉದ್ದೇಶ ಎಂದು ನಾವು ಭಾವಿಸಿದ್ದೇವೆ. ನಿಮ್ಮ ಮುಂದೆ ಬೇಕಾದಷ್ಟು ಮಾಹಿತಿಗಳಿವೆ, ದಾಖಲೆಗಳಿವೆ. ಇವುಗಳ ಮೇಲೆ ಯಾವ ರೀತಿಯಾಗಿ ನೀವು ಇಂದು ಮತ್ತು ನಾಳೆ ನಡೆಯುವಂತಹ ಚರ್ಚೆಯಲ್ಲಿ ಹೊಸ ಬೆಳಕನ್ನು ಚೆಲ್ಲುತ್ತೀರಿ ಎಂಬುದು ಮುಖ್ಯ. ಅನೇಕರು ಹೊಸ ಹೊಸ ವಿಷಯಗಳನ್ನು ಶಾಸನಗಳ ಮೂಲಕ ಪ್ರಸ್ತಾಪ ಮಾಡಿದ್ದಾರೆ. ನಿನ್ನೆ ಕೂಡ ಈ ಬಗ್ಗೆ ಸುಮಾರು 20 ಲಕ್ಷರೂ.ಗಳ ಅಂದಾಜಿನ ಖರ್ಚಿನಲ್ಲಿ ಸಮಗ್ರ ಶಾಸನಗಳ ಬಗ್ಗೆ ಒಂದು ಪುಸ್ತಕವನ್ನು ಹೊರತರಬೇಕು ಎನ್ನುವಂತಹ ಸಲಹೆಯನ್ನು ಸನ್ಮಾನ್ಯ ವಿಶ್ರಾಂತ ಕಲುಪತಿ ಡಾ. ಕಲ್ಬುರ್ಗಿಯವರು ಕೊಟ್ಟರು. 20 ಲಕ್ಷ ರೂಗಳನ್ನು ನಾವೇ ಸಂಗ್ರಹಿಸಿ ಸಾರ್ವಜನಿಕರಿಗೆ ಕೊಡ್ತೇವೆ ಎಂದು ಹೇಳಿದೆವು. ಆದರೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶಿವನಂಜಯ್ಯ ನವರು ''ಇಲ್ಲ, ಇದನ್ನು ಈ ವರ್ಷದ ಆಯವ್ಯಯದಲ್ಲಿಯೇ ಅಳವಡಿಸಿಕೊಂಡು ಅದನ್ನು ನಾವು ಪ್ರಕಟಿಸುತ್ತೇವೆ'' ಎನ್ನುವ ಮಾತನ್ನು ಹೇಳಿದರು. ಪ್ರಾಯಶಃ ಡಾ. ಚಿದಾನಂದಮೂರ್ತಿಯವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'' ಒಂದು ಹೊಸ ದೃಷ್ಟಿಕೋನದಿಂದ ಬರೆ ದಂತಹ ಗ್ರಂಥ. ಅದೇ ರೀತಿಯಲ್ಲಿಯೇ ನೀವು ಸಂಶೋಧಿಸಿದರೆ ಮುಂದಿನ ತಲೆಮಾರಿ ನವರು ಮತ್ತೆ ಇತಿಹಾಸವನ್ನು ಕಟ್ಟಲಿಕ್ಕೆ ಅದನ್ನು ಅರ್ಥೈಸಿ ಕೊಳ್ಳಲಿಕ್ಕೆ ಸುಲಭ ಆಗುತ್ತದೆ. ಈ ದೃಷ್ಟಿಕೋನದಿಂದ ಇವತ್ತು ಏನು ಪ್ರಬಂಧವನ್ನು ತಾವು ಮಂಡಿಸುತ್ತೀರಿ ಅದು ಮುಂದಿನ ವರ್ಷದಲ್ಲಿ ಪ್ರಕಟಗೊಳ್ಳುತ್ತದೆ. ಇದು ನಿರಂತರವಾದ ಕೆಲಸ. ಇಲ್ಲಿಯವರೆಗೆ ಇತಿಹಾಸದ ಅವಜ್ಞೆಗೊಳಗಾಗಿರುವಂತಹ ಜನ ಸಮೂಹ ಇಂಥ ಗ್ರಂಥಗಳನ್ನು ಓದುವುದರ ಮೂಲಕವಾಗಿ ಅವರು ಹೆಚ್ಚು ಪ್ರೇರೇಪಿತರಾಗುತ್ತಾರೆ. ಅಭಿಮಾನಧನರಾಗುತ್ತಾರೆ. ಸಮೃದ್ಧಿಯ ಸ್ವಾಭಿಮಾನದ ನಾಡನ್ನು ಕಟ್ಟಲು ಅವರು ತಯಾರಾಗುತ್ತಾರೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಇಂದು ನಮ್ಮ ಕನ್ನಡ ನಾಡು ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆದಿದೆ. ಇದರಲ್ಲಿ ಗಣಿಗಾರಿಕೆ ಕೂಡ ಇದೆ. ಗಣಿಗಾರಿಕೆಯಲ್ಲಿ ಕಬ್ಬಿಣದ ವಿಚಾರವಾಗಿ ಸ್ವಲ್ಪವೇ ಮಾಹಿತಿಯನ್ನು ಕೊಟ್ಟಿದ್ದಾರೆ. ಆದರೆ ವಜ್ರ ಮತ್ತು ಚಿನ್ನದ ವಿಚಾರದಲ್ಲಿ ವಜ್ರ ಕರೂರಿನ ಬಗ್ಗೆ ಪ್ರಸ್ತಾಪವಿರತಕ್ಕಂತಹ ಲೇಖನವೂ ಅದರಲ್ಲಿದೆ. ಆದರೆ ಇವತ್ತಿನ ಗಣಿಗಾರಿಕೆ ನಡೆಯುತ್ತಿರುವುದು ಪ್ರಾಕೃತಿಕ ಸಂಪತ್ತು ಯಾವ ರೀತಿ ಸೂರೆ ಹೋಗುತ್ತಿದೆ ಎನ್ನುವಂತಹದ್ದು. ಅದರಿಂದ ಬರುವಂತಹ ದೊಡ್ಡ ಮೊತ್ತ ಯಾವ ರೀತಿಯಾದಂತಹ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಧಾರ್ಮಿಕ ವಿಚಾರಗಳ ಮೇಲೆ ಸಲ್ಲದ ಪ್ರಭಾವವನ್ನು ಬೀರುತ್ತದೆ. ಅದರಿಂದಾಗುವ ವಿಕೃತದ ಸ್ವರೂಪಗಳೇನು;

ಜನ ಜೀವನದ ಬದುಕಿಗೆ ಅದು ಎಂತಹ ದುಸ್ತರತೆಯನ್ನು ತರುತ್ತದೆ. ಒಂದು ದೃಷ್ಟಿಕೋನದ ಮೂಲಕ ಆರ್ಥಿಕ ಅಭಿವೃದ್ಧಿ ಸಾಧಿಸಿದ್ದೇವೆ. ಆದರೆ ಅದರಿಂದ ಬಂದಿರುವುದು ಕೋಟ್ಯಾಂತರ ರೂಪಾಯಿಗಳು. ಆದರೆ ಜನಜೀವನಕ್ಕೆ ಅದರ ಸ್ವಲ್ಪ ಪ್ರಮಾಣ ಕೂಡ ಮುಟ್ಟಿಲ್ಲ ಎನ್ನುವ ವಿಷಯವನ್ನು ನೀವು ರೈಲಿನಲ್ಲಿ ಬರುವಾಗೆಲ್ಲ ನೋಡಿರಬಹುದು. ಅನೇಕ ಮಕ್ಕಳ ಚರ್ಮ ಕಬ್ಬಿಣ ಚರ್ಮವೇ ಆದಂತಹ ರೀತಿಯಲ್ಲಿ ಕಾಣಬರುತ್ತದೆ. 6 ಗಂಟೆಗೆ ನೀವು ರೈಲಿನಲ್ಲಿ ಹೊಸಪೇಟೆ ಪ್ರವೇಶಿಸುವಾಗ ಅವರಾಗಲೇ ದುಡಿಮೆ ಮಾಡುತ್ತಿರುತ್ತಾರೆ. ಯಾರು ವಿದ್ಯಾಭ್ಯಾಸ ಮಾಡಬೇಕಾಗಿತ್ತೋ, ಚಿಣ್ಣರ ಮೇಳಗಳ ಮೂಲಕ ಶಾಲೆಯ ಅಂಗಳಕ್ಕೆ ಬಂದು ಸಾಕ್ಷರರಾಗಬೇಕಿತ್ತೋ ಅವರೆಲ್ಲ ಇವತ್ತು ಆ ಗಣಿಗಾರಿಕೆಯಲ್ಲಿ ದುಡಿಯುತ್ತಿದ್ದಾರೆ. ಮುಂದೊಂದು ದಿನದ ಚರ್ಮ ರೋಗದ ಕ್ಯಾನ್ಸರಿಗೆ ತುತ್ತಾಗುತ್ತಾರೆ. ಅವರು ಅನೇಕ ರೋಗ ರುಜಿನಗಳಿಗೆ ಒಳಗಾಗುತ್ತಾರೆ. ಅಂತಹ ಒಂದು ಬದುಕಿನ ಬಗ್ಗೆಯೂ ಕೂಡ ಇವತ್ತೇ ನೀವು ಅರ್ಥೈಸಿಕೊಂಡು ಕೆಲವು ವಿಷಯಗಳ ಬಗ್ಗೆ ಬೆಳಕನ್ನು ಚೆಲ್ಲಿದರೆ ಮುಂದಿನ ತಲೆಮಾರಿನವರಿಗೆ ಅದೊಂದು ಮಾರ್ಗದರ್ಶನ ಆಗುತ್ತದೆ ಎನ್ನುವಂತಹ ಮಾತನ್ನು ಹೇಳಿ ನನಗೆ ಇಲ್ಲಿ ಉದ್ಘಾಟನೆ ಮಾಡುವಂತಹ ಗೌರವ ಕಲ್ಪಿಸಿಕೊಟ್ಟಂತಹ ಇಲಾಖೆಯ ಮುಖ್ಯಸ್ಥರಿಗೆ ಹಾಗೂ ತಮಗೆಲ್ಲರಿಗೂ ಕೂಡ ನಮಸ್ಕರಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಜೈಹಿಂದ್

ಜೈ ಕರ್ನಾಟಕ ಮಾತೆ

೨. ಅಧ್ಯಕ್ಷ ಭಾಷಣ

ಪ್ರೊ. ಎಂ.ವಿ.ಶ್ರೀನಿವಾಸ್

ವಿಜಯನಗರ ಅಧ್ಯಯನ ವಿಚಾರ ಸಂಕಿರಣದ ಸಮ್ಮೇಳನಾಧ್ಯಕ್ಷನನ್ನಾಗಿ ನನ್ನನ್ನು ಆರಿಸಿದ್ದಕ್ಕಾಗಿ ನಿಮ್ಮೆಲ್ಲರನ್ನು ರಾಜ್ಯದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆಯ ನಿರ್ದೇಶಕರು ಹಾಗೂ ಸಿಬ್ಬಂದಿಯನ್ನು ವಂದಿಸುತ್ತ ಈ ಮಹಾನ್ ಸಾಮ್ರಾಜ್ಯದ ಬಗ್ಗೆ, ಅದರ ಇತಿಹಾಸ ಮತ್ತು ಸಂಸ್ಕೃತಿಗೆ ನನ್ನ ನಮನಗಳನ್ನು ಸಲ್ಲಿಸಲು ಇಚ್ಛಿಸುತ್ತೇನೆ. ಪ್ರತಿಯೊಬ್ಬ ಭಾರತೀಯನಂತೆ ಅದರ ಇತಿಹಾಸವನ್ನು ಆಸಕ್ತ ಮತ್ತು ಅಚ್ಚರಿಯಿಂದ ವೀಕ್ಷಿಸಿದ್ದೇನೆ. ಒಬ್ಬ ಕನ್ನಡಿಗನಾಗಿ ವಿಜಯನಗರದ ಬೆಳವಣಿಗೆಯ ಮಜಲುಗಳನ್ನು ಕುತೂಹಲದಿಂದ ಗಮನಿಸಿದ್ದೇನೆ. ಅದರ ಸಾಂಸ್ಕೃತಿಕ ಸೌರಭವನ್ನು ಅಭ್ಯಸಿಸಿದ್ದೇನೆ.

ಮೈಸೂರು ವಿಶ್ವವಿದ್ಯಾನಿಲಯದ ಎಂ.ಎ. ವಿದ್ಯಾರ್ಥಿಗಳಿಗೆವಿಜಯನಗರದ ವಿಷಯವನ್ನು ಬೋಧಿಸುವ ಸಂದರ್ಭದಲ್ಲಿ ಈ ವಿಷಯದ ಬಗ್ಗೆ ನಡೆದಿರುವ ಪ್ರಗತಿಯನ್ನು ಅವಲೋಕಿಸುವುದು ಅಗತ್ಯವಾಯಿತು. ಈ ಅಧ್ಯಯನದ ಭಾಗವಾಗಿ ನಾನು ಆಂಧ್ರದ ಪ್ರಾಧ್ಯಾಪಕರನ್ನು ಅವರ ಬರವಣಿಗೆ ಮತ್ತು ವಿಚಾರಧಾರೆಗಳನ್ನು ಗಮನಿಸಿದಾಗ ಈ ವಿದ್ವಾಂಸರ ವಿಶಿಷ್ಟ ಕೊಡುಗೆಯನ್ನು ಪ್ರಸ್ತಾಪಿಸುವುದು ಅಗತ್ಯ ವೆಂದೆನ್ನಿಸಿತು. ಏಕೆಂದರೆ ಅವರು ಈ ವಿಷಯದಲ್ಲಿ ಮಾಡಿದ ಕೆಲಸ ನಮ್ಮ ವಿದ್ವಾಂಸರಿಗೆ ಅನುಕೂಲವಾಗಿದೆ. ಆಂಧ್ರದ ಐತಿಹಾಸಿಕ ಪರಂಪರೆಯನ್ನು ನಾನು ಅರಿತಂತೆ ಇಲ್ಲಿ ವ್ಯಾಖ್ಯಾನಿ ಸಲು ಪ್ರಯತ್ನ ನಡೆಸಿದ್ದೇನೆ.

ವಿಜಯನಗರ ಭಾರತೀಯ ಇತಿಹಾಸದ ಒಂದು ಮಹತ್ವಪೂರ್ಣ ಅಧ್ಯಾಯವಾಗಿ ಎಂದೂ ಮರೆಯಲಾಗದ ಸಾಮ್ರಾಜ್ಯವೆಂಬ ಹೆಸರು ಪಡೆದ ಈ ರಾಜ್ಯದ ವಿಸ್ತಾರ ವೈಭವ ಸಂಪತ್ತು ಸಾಂಸ್ಕೃತಿಕ ಸಾಧನೆ ಸಾಹಿತ್ಯ ಸೌರಭ್ಯ ಇತಿಹಾಸದ ಪುಟಗಳಲ್ಲಿ ಕಂಗೊಳಿಸುತ್ತವೆ. ಭಾರತದ ಉಪಖಂಡದಲ್ಲಿ ಬ್ರಿಟಿಷರ ಆಗಮನಕ್ಕೆ ಮುಂಚೆ ಇದ್ದ ಕಟ್ಟಕಡೆಯ ಸಾಮ್ರಾಜ್ಯ ವ್ಯವಸ್ಥೆಯೆಂದು ಇತಿಹಾಸಕಾರರು ವಿಜಯನಗರಕ್ಕೆ ವಿಶೇಷ ಸ್ಥಾನವನ್ನು ನೀಡಿದ್ದಾರೆ. ಇಂದಿನ ಪೀಳಿಗೆಯ ವಿದ್ಯಾರ್ಥಿಗಳಿಗೆ ಅದರ ಸಾಂಸ್ಕೃತಿಕ ಇತಿಹಾಸದ ವಿಕಾಸವನ್ನು ವಿವರಿಸುವುದು ಹಿಂದಿನ ಪೀಳಿಗೆಯವರಿಗೆ ಹರಪ್ಪ

ಸಂಸ್ಕೃತಿಯನ್ನು ಪರಿಚಯಿಸಿದಷ್ಟು ಮುಖ್ಯವೆಂದು ಇತಿಹಾಸಕಾರರೊಬ್ಬರು ಅಭಿಪ್ರಾಯ ಪಟ್ಟಿದ್ದಾರೆ. ವಿಜಯನಗರದ ವಾರಸುದಾರರೆಂದು ಹಕ್ಕು ಮಂಡಿಸುವ ಕರ್ಣಾಟಕಕ್ಕೆ ಅದರ ಇತಿಹಾಸದ ಅಧ್ಯಯನ ಅತ್ಯಂತ ಮುಖ್ಯ ಸಂಗತಿಯಾಗಿರುವುದು ಸಹಜವೇ ಆಗಿದೆ.

ವಿಜಯನಗರ ಸಾಮ್ರಾಜ್ಯ ದಕ್ಷಿಣ ಭಾರತದ ಬಹು ಭಾಗಕ್ಕೆ ವ್ಯಾಪಿಸಿದ್ದು ಇಂದಿನ ಕರ್ಣಾಟಕ, ಆಂಧ್ರ ಮತ್ತು ತಮಿಳುನಾಡುಗಳನ್ನು ಒಳಗೊಂಡಿದ್ದಿತು. ಆದುದರಿಂದ ವಿಜಯನಗರಕ್ಕೆ ಸಂಬಂಧಿಸಿದ ಶಾಸನ ಗ್ರಂಥ ದಾಖಲೆಗಳು ಕನ್ನಡ, ತೆಲುಗು, ತಮಿಳು ಈ ಮೂರು ಭಾಷೆಗಳಲ್ಲಿ ಲಭ್ಯವಿರುವುದು ಸಹಜವಾದುದು. (ಪೋರ್ಚುಗೀಸ್ ಭಾಷೆಯಲ್ಲೂ ವಿಜಯನಗರಕ್ಕೆ ಸಂಬಂಧಿಸಿದ ಅಮೂಲ್ಯ ದಾಖಲೆಗಳಿವೆ) ಆಂಧ್ರದ ಬಹು ಭಾಗದಲ್ಲಿ ಈ ಸಾಮ್ರಾಜ್ಯ ವ್ಯಾಪಿಸಿದ್ದಿತು. ತೆಲುಗು ಸಾಹಿತ್ಯ ವಿಜಯನಗರದ ಅರಸರ ಆಶ್ರಯದಲ್ಲಿ ಹದವಾಗಿ ಬೆಳೆಯಿತು.

ತೆಲುಗು ಸಾಹಿತ್ಯ ಕೃತಿಗಳಲ್ಲಿ ಚಿತ್ರಿತವಾಗಿರುವ ಈ ಸಾಮ್ರಾಟರ ಇತಿಹಾಸವನ್ನು ನಿರೂಪಿಸಲು ಆಂಧ್ರ, ಕರ್ಣಾಟಕ ಮತ್ತಿತರ ಭಾಗಗಳ ಇತಿಹಾಸಕಾರರು ಪ್ರಯತ್ನಗಳನ್ನು ಕೈಗೊಂಡಿದ್ದಾರೆ.

ತೆಲುಗು ಭಾಷಿಗ, ವಿದ್ವಾಂಸರು ವಿಜಯನಗರದ ಇತಿಹಾಸಕ್ಕೆ ಗಮನಾರ್ಹವಾದ ಕೊಡುಗೆಯನ್ನು ನೀಡಿದ್ದಾರೆ. ತಮ್ಮ ಸುತ್ತಮುತ್ತ ನಡೆದ ಮುಖ್ಯ ಘಟನೆಗಳು, ಯುದ್ಧ, ದಾಳಿಗಳು, ರೋಚಕ ಘಟನೆಗಳು ಇವುಗಳನ್ನು ಸಮಕಾಲೀನ ಹಾಗೂ ಅನಂತರದ ಲೇಖಕರು ದಾಖಲಿಸಿದ್ದಾರೆ. ಕೆಲವು ಚಾರಿತ್ರಿಕ ಘಟನೆಗಳು ಕಾವ್ಯಾತ್ಮಕವಾಗಿ ಕೃತಿಗಳಲ್ಲಿ ರೂಪಾಂತರಗೊಂಡು ಸೇರಿ ಹೋಗಿರುವುದನ್ನು ತೆಲುಗು ವಿಮರ್ಶಕರು ಗುರುತಿಸಿ ಅದನ್ನು ದಾಖಲಿಸಿದ್ದಾರೆ.

ತಮ್ಮ ಸುತ್ತಮುತ್ತ ನಡೆದ ಪ್ರಕರಣಗಳನ್ನು ತಾವು ಆಪ್ತರಿಂದ ಸಂಬಂಧಿಕರಿಂದ ತಿಳಿದ ವಿಷಯಗಳನ್ನು ನೆನಪುಗಳನ್ನು ದಾಖಲಿಸಿರುವುದು ಸ್ವಾಭಾವಿಕವಾಗಿದೆ. ಹೀಗಾಗಿ ತೆಲುಗು ಭಾಷೆಯಲ್ಲಿ ವಿಜಯನಗರದ ಇತಿಹಾಸದ ಬಗ್ಗೆ ಹೊರಬಂದಿರುವ ಕೃತಿಗಳನ್ನೂ, ಅಥವಾ ಆಂಧ್ರದ, ಆಂಧ್ರ ಮೂಲದ ಇತಿಹಾಸಕಾರರ ಕೃತಿಗಳನ್ನು ಅಭ್ಯಾಸ ಮಾಡುವುದು ಬಹು ಅರ್ಥಪೂರ್ಣವೆಂದು ಭಾವಿಸುತ್ತೇನೆ.

ನಮ್ಮ ಇತಿಹಾಸದ ಬಹುಮುಖ್ಯ ಘಟ್ಟವಾದ ವಿಜಯನಗರವನ್ನು ಕುರಿತು, ಪಾಶ್ಚಿಮಾತ್ಯ ವಿದ್ವಾಂಸರೂ ತಮ್ಮದೇ ಆದ ವಿವರಣೆ ವ್ಯಾಖ್ಯಾನವನ್ನು ಬರೆದಿದ್ದಾರೆ. ಜಗತ್ತಿನ ನಾನಾ ದೇಶಗಳ ಪ್ರವಾಸಿಗರು ವಿಜಯನಗರವನ್ನು ಸಂದರ್ಶಿಸಿ ತಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ದಾಖಲಿಸಿದ್ದಾರೆ.

ಆಂಧ್ರ ಇತಿಹಾಸಕಾರರೂ ವಿಜಯನಗರ ಇತಿಹಾಸ ರಚನೆಗೆ ಮಹತ್ವದ ಕೊಡುಗೆ ನೀಡಿದ್ದಾರೆ. ಈ ಸಾಮ್ರಾಜ್ಯದ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸದ ಬೆಳವಣಿಗೆಗೆ ಅವರು ಕೊಡುಗೆ ನೀಡಿದ್ದಾರೆ. ವಿಜಯನಗರದ ಬಗ್ಗೆ ಆಂಧ್ರ ವಿದ್ವಾಂಸರ, ಲೇಖಕರ Perception ಏನಾಗಿದ್ದಿತು ? ಈ ಬಗ್ಗೆ ಅವರ ದೃಷ್ಟಿಕೋನ ದಲ್ಲಿ ನಮಗಿಂತ ಏನಾದರೂ ವ್ಯತ್ಯಾಸವಿದೆಯೇ? ಅವರ ಚಾರಿತ್ರಿಕ ಗ್ರಂಥಗಳು ನಮ ಗೆಷ್ಟು ಪ್ರಸ್ತುತ ಎಂಬುದನ್ನು ಅರಿಯಲು ಈ ಪ್ರಯತ್ನವನ್ನು ಕೈಗೊಂಡಿದ್ದೇನೆ.

ಕರ್ಣಾಟಕದಂತೆ ಆಂಧ್ರದಲ್ಲೂ ವಿಜಯನಗರದ ಇತಿಹಾಸ ಅವರ ಒಂದು ಅವಿಭಾಜ್ಯ ಭಾಗವಾಗಿದ್ದಿತು. ಕನ್ನಡಿಗರಷ್ಟೆ ವಿಜಯನಗರ ಸಾಮ್ರಾಜ್ಯವನ್ನು ಅವರು ತಮ್ಮ ಇತಿಹಾಸದ ಮಹತ್ವದ ಘಟ್ಟವೆಂದು ಭಾವಿಸುತ್ತಾರೆ. ಅದರ ಆಡಳಿತ ಪದ್ಧತಿ, ಸಾಮಾಜಿಕ ಜೀವನ ಸಾಂಸ್ಕೃತಿಕ ಕೊಡುಗೆ ಇವೆಲ್ಲ ಆಂಧ್ರಇತಿಹಾಸದಲ್ಲಿ ಹಾಸುಹೊಕ್ಕಾಗಿ ಸೇರಿ ಹೋಗಿವೆ.

ಈ ಕ್ಷೇತ್ರದಲ್ಲಿ ಆಂಧ್ರದಲ್ಲಿ, ಎಷ್ಟು ಕೆಲಸ ಆಗಿದೆ; ವಿಜಯನಗರವನ್ನು ಕುರಿತ ಅವರ ಅಧ್ಯಯನ ಯಾವ ದಿಕ್ಕಿನಲ್ಲಿ ಸಾಗಿದೆ; ಕರ್ಣಾಟಕದ ಇತಿಹಾಸ ರಚನೆಗಿಂತ ಅವರ ವಿಜಯನಗರ ಕುರಿತ ಇತಿಹಾಸಭಿನ್ನವೇ ಎಂಬುದನ್ನು ಕಂಡುಕೊಳ್ಳಲು ಇಲ್ಲಿ ಪ್ರಯತ್ನಿಸಿದ್ದೇನೆ.

ಕನ್ನಡದ ಕವಿ ಚರಿತ್ರಕಾರರಂತೆ ಆಂಧ್ರದ ಭಾಷಾ ವಿದ್ವಾಂಸರೂ ಸ್ಥಳೀಯ ಇತಿಹಾಸ ನಿರ್ಮಾಣಕ್ಕೂ ಅಡಿಪಾಯವನ್ನು ಹಾಕಿಸಿದ್ದರು. ಚಾಗಂಟಿಶೇಷಯ ವಿರಚಿತ ತೆಲುಗುಕವಿ ಜೀವಿತಮು ಗ್ರಂಥದಲ್ಲಿ ಅನೇಕ ಐತಿಹಾಸಿಕ ವ್ಯಕ್ತಿಗಳ ಚಿತ್ರವನ್ನು ನೀಡ ಲಾಗಿದ್ದಿತು. ಹಾಗೆಯೇ ಗುರುಜಾಡ ರಾಮಮೂರ್ತಿ ಬರೆದ ಆಂಧ್ರಕವಿ ತರಂಗಿಣಿ, ಇತಿಹಾಸದ ಅಧ್ಯಯನಕ್ಕೆ ಅತ್ಯುಪಯುಕ್ತವಾದ ಕೃತಿಯಾಗಿದ್ದಿತು. ಕಾವಲಿ ರಾಮಸ್ವಾಮಿ ಬರೆದಿರುವ ಕವಿಚರಿತಮುಲು ಇತಿಹಾಸದ ವಿದ್ಯಾರ್ಥಿ ಓದಲೇಬೇಕಾದ ಗ್ರಂಥವೆನಿಸಿ ಕೊಂಡಿದೆ.

ರಾಯವಾಚಕಮು, ವಿಜಯನಗರದ ರಾಜಕೀಯ, ಸಾಮಾಜಿಕ ಅಧ್ಯಯನಕ್ಕೆ ಅತ್ಯಾವಶ್ಯಕವಾದ ಕೃತಿ. ಅದರಂತೆ ಈ ಕೆಳಗಿನ ತೆಲುಗು ಸಾಹಿತಿ ವಿದ್ವಾಂಸರ ಕೃತಿಗಳು, ಸಾಹಿತ್ಯ ಹಾಗೂ ಇತಿಹಾಸವನ್ನು ಅರಿಯಲು ಉಪಯುಕ್ತ ಕೃತಿಗಳು. ವಿ. ಸೂರ್ಯ ನಾರಾಯಣರಾವ್ ಅವರ ಶ್ರೀ ಕೃಷ್ಣದೇವರಾಯಲು, ವೀರಭದ್ರರಾವ್ ಅವರ ಮಹಾ ಮಂತ್ರಿ ತಿಮ್ಮರಸು, ರಾಘವಾಚಾರ್ಯುಲು ಅವರ ಶ್ರೀ ಕೃಷ್ಣದೇವರಾಯಲು, ಪೆರಾಜ ಅವರ ವಿಜಯನಗರ ಚರಿತಮು, ಗುರುಬ್ರಹ್ಮಶರ್ಮ ಅವರ ಕೊಂಡವೀಟಿ ಸಾಮ್ರಾ ಜ್ಯಮು ನಂದಿತಿಮ್ಮನನ ಪಾರಿಜಾತಾಪಹರಣಮು, ರಾಮಭದ್ರ ಕವಿಯ ರಾಮಾ ಭ್ಯುದಯಮ್, ಪಿಂಗಳಿಸೂರನ್ನನ ರಾಘವಪಾಂಡವೀಯಂ, ರಾಮರಾಜ ಭೂಷಣನ ವಸುಚರಿತ, ಕೃಷ್ಣದೇವರಾಯ ವಿರಚಿತ, ಆಮುಕ್ತಮಾಲ್ಯದ, ಜಾಂಬವತಿ ಕಲ್ಯಾಣಮು

ಹಾಗೆಯೇ ಅವನ ಆಸ್ಥಾನದಲ್ಲಿದ್ದ ಅಷ್ಟ ದಿಗ್ಗಜರ ಕೃತಿಗಳೂ ಇತಿಹಾಸಕಾರನಿಗೆ ಅತ್ಯುಪಯುಕ್ತ ಕೃತಿಗಳೆಂಬುದನ್ನು ಒತ್ತಿ ಹೇಳಬೇಕಾಗಿಲ್ಲ. ಸಿ.ವಿ.ರಾಮಚಂದ್ರ ರಾವ್ ಸಂಪಾದಿಸಿ ಪ್ರಕಟಿಸಿರುವ ಮಾರೀಚಿ ಪರಿಣಯಮು ಒಂದು ಅಮೂಲ್ಯ ಐತಿಹಾಸಿಕ ದಾಖಲೆಯಾಗಿದೆ.

ಪ್ರಕಟಿತ ಸಾಹಿತ್ಯ ಕೃತಿಗಳಲ್ಲದೆ ಆಂಧ್ರದಲ್ಲಿ ದೊರಕುವ ಕೆಲವು ಅಮೂಲ್ಯ ಆಕರಗಳನ್ನು ಪ್ರಸ್ತಾಪಿಸುವುದು ಅಗತ್ಯ.

ಅವುಗಳಲ್ಲಿ ಕೊಯಿಲ್‌ವಿಳಗಂ ಎಂದು ಕರೆಯಲ್ಪಡುವ ದೇವಸ್ಥಾನದ ಪತ್ರಗಳು ವಿಜಯನಗರದ ಇತಿಹಾಸಕ್ಕೆ ಬಹು ಉಪಯುಕ್ತವಾದುದು. ಅದರಲ್ಲೂ ತಿರುಪತಿ ದೇವಾಲಯದ ದಾಖಲೆ ವಿಜಯನಗರದ ಮೇಲೆ ಹೆಚ್ಚಿನ ಬೆಳಕು ಚೆಲ್ಲುತ್ತದೆ. ಹಾಗೆಯೇ ಪುರಿ ದೇವಾಲಯದಲ್ಲಿ ಶ್ರೀರಂಗದಲ್ಲೂ ಬಹುಉಪಯುಕ್ತ ದಾಖಲೆಗಳು ಸಿಗುತ್ತವೆ.

ಮತ್ತೊಂದು ಮಹತ್ವ ಪೂರ್ಣ ದಾಖಲೆಯೆಂದರೆ ವೇಲುಕೋಟಿವಾರಿ ವಂಶಾವಳಿ, ಕಟಕ ರಾಜ ವಂಶಾವಳಿ ಮುಂತಾದುವು ಅನೇಕ ರಾಜವಂಶಗಳ ಇತಿಹಾಸ ರಚನೆಗೆ ಪೂರಕವಾಗಿವೆ. ಮೆಕೆಂಜಿ ಸಂಗ್ರಹದಲ್ಲಿನ ಅನೇಕ ಹಸ್ತಪ್ರತಿಗಳಲ್ಲಿ ವಿಜಯನಗರದ ಬಗ್ಗೆ ಬಹು ಕುತೂಹಲಕಾರಿ ಮಾಹಿತಿ ಲಭಿಸುತ್ತದೆ. ಇನ್ನು ದಕ್ಷಿಣ ಭಾರತದಲ್ಲಿ ಇತಿಹಾಸ ಆಸಕ್ತರಿಗೆ ಅವಶ್ಯವಾಗಿರುವ ಕೈಫಿಯತ್ತುಗಳು ವಿಜಯನಗರದ ವಿದ್ವಾಂಸರಿಗೆ ಉಪಯುಕ್ತ ಆಧಾರಗಳು. ಈ ಕೆಳ ಕಂಡವು, ಅತ್ಯಂತ ಗಮನಾರ್ಹವಾದ ಕೈಫಿಯತ್ತುಗಳು. ಅನಂತಪುರ ಕೈಫಿಯತ್ತು, ಶ್ರೀಶೈಲಂಕೈಫಿಯತ್ತು ನಾಡಿವಿ ದೊಡ್ಡಿಪಾಳೆಂ ಕೈಫಿಯತ್ತು, ಬುಕ್ಕಾ ಪಟ್ಟಣಂ ಕೈಫಿಯತ್ತು, ಕಂದನ ವೋಲ್ ಕೈಫಿಯತ್ತು, ಕೊಂಡವೀಡು ಕೈಫಿಯತ್ತು, ಪುಷ್ಪಗಿರಿ ಕೈಫಿಯುತ್ತು, ಹನುಮಂತ ಗುಡಿ ಕೈಫಿಯತ್ತು ಮತ್ತು ಜಗನ್ನಾಥ ಕೈಫಿಯತ್ತು.

ಎಲ್ಲ ಇತಿಹಾಸಕಾರರಿಗೂ ಬಹುಪ್ರಿಯನಾದ ದೊರೆ ಕೃಷ್ಣದೇವರಾಯ. ಆಂಧ್ರದಲ್ಲಿ, ಈತನನ್ನು ಕುರಿತು ಶಾಸನ, ಸಾಹಿತ್ಯ ವಿದೇಶಿ ಪ್ರವಾಸಿಗರ ಬರವಣಿಗೆ ಗಳಲ್ಲದೆ ಜನಪದ ಸಾಹಿತ್ಯವೂ ವಿಫುಲವಾಗಿದೆ. ಈತನ ವ್ಯಕ್ತಿತ್ವ, ಸಾಧನೆಗಳನ್ನು ಕುರಿತು ಅನೇಕ ವಿದ್ವಾಂಸರು ಕೃತಿಗಳನ್ನು ರಚಿಸಿದ್ದಾರೆ. ಪುಟ್ಟಪರ್ತಿ ಶ್ರೀನಿವಾಸಾಚಾರ್ಯರು 1929ರಲ್ಲಿ ಬರೆದ ಕೃಷ್ಣದೇವರಾಯ ಗಮನಸೆಳೆಯುವಂತಹದು. ಎರಡನೆಯ ಮುಖ್ಯ ಕೃತಿ ನೆಲ್ಲಟೂರಿ ವೆಂಕಟರಮಣಯ್ಯನವರದು.

ವಿಜಯನಗರದ ಇತಿಹಾಸ ಅಧ್ಯಯನಕ್ಕೆ ಭದ್ರವಾದ ಬುನಾದಿಯನ್ನು ಹಾಕಿದವರು ನೆಲ್ಲಟೂರಿನ ವೆಂಕಟರಮಣಯ್ಯನವರು. ಗಾತ್ರ ಮತ್ತು ಗುಣಮಟ್ಟದ ದೃಷ್ಟಿಯಿಂದ ಅವರ ಕೊಡುಗೆ ಮಹತ್ವಪೂರ್ಣವಾದುದು. ವಿಜಯನಗರದ ಮೂರು ರಾಜ ವಂಶಗಳ ಇತಿಹಾಸವನ್ನು ಅಧಿಕೃತವಾದ ರೀತಿಯಲ್ಲಿ ರಚಿಸಿದ ಕೀರ್ತಿ ಅವರದು. ಅವರು ಬರೆದ

Founders of Vijayanagar empire ಸುಸಂಗತವಾಗಿ ತರ್ಕಬದ್ಧವಾಗಿ ಬರೆದ ಗ್ರಂಥ. ನಂತರ ಕೃಷ್ಣದೇವರಾಯ ಎಂಬ ಮೇರು ಕೃತಿ ರಚಿಸಿದರು. ಸುಮಾರು 60 ವರ್ಷಗಳ ಹಿಂದೆ ಲಭ್ಯವಿದ್ದ ಎಲ್ಲ ಆಕರಗಳನ್ನೂ ಸಮರ್ಥವಾಗಿ ಬಳಸಿಕೊಂಡು ರಚಿಸಿದ ಶ್ರೇಷ್ಠ ಕೃತಿ. ಇವೆರಡು ಕೃತಿಗಳಲ್ಲೂ ಅವರು ಲಭ್ಯವಿರುವ ಆಧಾರಗಳನ್ನೆಲ್ಲ ಜಾಲಾಡಿ ಶಿಸ್ತುಬದ್ಧವಾಗಿ ಅಚ್ಚುಕಟ್ಟಾದ ಇತಿಹಾಸವನ್ನು ನಿರೂಪಿಸಿ ಇತರರಿಗೆ ಮಾದರಿಯಾಗಿ ನಿಂತಿದ್ದಾರೆ. ತೆಲುಗು ಮೂಲ ಮೊದಲಾದ ಪ್ರಮಾದಗಳನ್ನೆಸಗಿದ್ದರೂ ಅವರು ವಿಜಯ ನಗರವನ್ನುಕುರಿತು ಶಾಸ್ತ್ರೀಯವಾಗಿ ಅಧ್ಯಯನ ಮಾಡಿದವರಲ್ಲಿ ಮೊದಲಿಗರು ಎಂಬು ದನ್ನು ಮರೆಯಬಾರದು. ವೆಂಕಟರಮಣಯ್ಯನವರ Studies in Third Dynasty of Vijayanagar ಅಚ್ಯುತರಾಯನ ಕಾಲದ ನಂತರದ ಇತಿಹಾಸದ ಅತಿ ಸಮರ್ಥ ವಾದ ವಿಶ್ಲೇಷಣೆ. ವೆಂಕಟರಮಣಯ್ಯನವರು Kampli and Vijayanagar, Vijayanagar Origin of the city and the empire ಎಂಬ ವಿಜಯನಗರವನ್ನು ಕುರಿತು ಕೆಲವು ಸಂಶೋಧನ ಲೇಖನಗಳನ್ನು ಬರೆದಿದ್ದಾರೆ. ಒಟ್ಟಿನಲ್ಲಿ ತೆಲುಗು ಮೂಲಗಳನ್ನು ಪರಿಶೀಲಿಸಿ 85 ವರ್ಷಗಳ ಹಿಂದೆಯೇ ಒಂದು ಉತ್ಕೃಷ್ಟ ಕೃತಿಗಳನ್ನು ರಚಿಸಿದ್ದಾರೆ. ಈ ವಿದ್ವಾಂಸರು ಕೆಲವು ವಿದ್ವತ್‌ಗೋಷ್ಠಿಗಳಲ್ಲೂ ಭಾಗವಹಿಸಿ ತಮ್ಮ ವಾದವನ್ನೂ ಸಮರ್ಥಿಸಿಕೊಂಡಿದ್ದಾರೆ.

ಐತಿಹಾಸಿಕ ಆಧಾರಗಳ ಪಾವಿತ್ರ್ಯವನ್ನೂ ಇತಿಹಾಸಕಾರನ ಜವಾಬ್ದಾರಿಯನ್ನು ವೆಂಕಟಮಣಯ್ಯನವರು ಚೆನ್ನಾಗಿ ಅರಿತಿದ್ದರೆಂಬುದಕ್ಕೆ ಅವರ ಈ ಹೇಳಿಕೆ ಸಾಕ್ಷಿ ಯಾಗಿದೆ.

Epigraphical evidience must authenticate testimony of the literary sources. Statements of contemporary and near contemporary writers are normally reliable. Still they have to be critically examined before their acceptence particularly when such accounts are motivated and emanating in congenial atmosphere, their historicity and truthfullness have to be called into question.

ವೆಂಕಟರಮಣಯ್ಯನವರ ಕೃತಿಗಳು ಆಂಧ್ರದ ಅನೇಕ ವಿದ್ವಾಂಸರಿಗೆ ವಿಜಯನಗರ ವನ್ನು ಕುರಿತು ಕೃತಿಗಳನ್ನು ರಚಿಸಲು ಸ್ಫೂರ್ತಿ ನೀಡಿದವು. ಅವರಲ್ಲಿ ಅತ್ಯಂತ ಪ್ರಮುಖ ರಾದವರು ಓರಗಂಟಿ ರಾಮಚಂದ್ರಯ್ಯನವರು. ಈ ವೇಳೆಗೆ ಅನೇಕ ಹೊಸ ಆಧಾರಗಳೂ ಬೆಳಕಿಗೆ ಬಂದಿದ್ದವು. ಈ ವಿದ್ವಾಂಸರು ತಮ್ಮ ಡಾಕ್ಟರೇಟ್ ಪದವಿಗೆಂದು ಆರಿಸಿಕೊಂಡ ವಿಷಯ Studies on Krishnadevaraya of Vijayanagara. ರಾಮಚಂದ್ರಯ್ಯ ನವರು ವಿಶೇಷವಾಗಿ ಕೃಷ್ಣದೇವರಾಯನ ಯುದ್ಧಗಳ ಮತ್ತು ಪೋರ್ಚುಗೀಸ್ ಸಂಬಂಧಗಳ ಅತಿಗಹನವಾದ ವಿಶ್ಲೇಷಣೆಯನ್ನು ಮಾಡಿದ್ದಾರೆ. ಹಂಪಿಯಲ್ಲಿ ದೊರೆತ

ಕೆಲವು ಶಾಸನಗಳನ್ನು ಕುರಿತು ಅವರು ನೀಡಿರುವ ತಲಸ್ಪರ್ಶಿಯುತ ವ್ಯಾಖ್ಯಾನ ಮೆಚ್ಚುವಂತಹದು.

ವಿ.ರಂಗಾಚಾರಿಯವರ Inseriptions of Nellore District ಎಂಬ ಗ್ರಂಥ ವಿಜಯನಗರವನ್ನು ಕುರಿತಾದ ಕೃತಿಯಾಗದಿದ್ದರೂ, ಆ ಸಾಮ್ರಾಜ್ಯದ ಮೂಲ, ಸ್ಥಾಪನೆ, ಬೆಳವಣಿಗೆಯ ಬಗೆಗೆ ಸಾಕಷ್ಟು ಬೆಳಕನ್ನೂ ಚೆಲ್ಲುತ್ತದೆ. ರಂಗಾಚಾರಿ ಅವರು ಬಟರ್‌ವರ್ತ್ ಅವರೊಡಗೂಡಿ ಅಪಾರ ಶ್ರಮದಿಂದ ನೆಲ್ಲೂರು ಜಿಲ್ಲೆಯಲ್ಲಿ ಕ್ಷೇತ್ರ ಕಾರ್ಯ ಕೈಗೊಂಡು ಉಪಯುಕ್ತ ಮಾಹಿತಿಯನ್ನೊಳಗೊಂಡು ರಚಿಸಿದ ಮೂರು ಸಂಪುಟಗಳು ಶ್ರೇಷ್ಠ ಮಟ್ಟದ ಸಂಶೋಧನೆಗೆ ಉದಾಹರಣೆಯಾಗಿವೆ.

ಸಂಗಮ, ತುಳುವ, ಅರವೀಡು, ಸಂತತಿಯ ಅರಸರ ಇತಿಹಾಸವನ್ನು ಕುರಿತು ಸಾಕಷ್ಟು ಸಂಶೋಧನೆ ನಡೆದಿದ್ದರೆ ಸಾಳ್ವ ಸಂತತಿಯ ಬಗ್ಗೆ ಹೊಸ ಬೆಳಕು ಚೆಲ್ಲಲು ಮುಂದೆ ಬಂದವರು ಪಿ.ಶ್ರೀರಾಮಶರ್ಮ ಅವರು. ಉಸ್ಮಾನಿಯ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾಗಿದ್ದ ಶರ್ಮರು ಬರೆದ The History of Viajayanagar Empire ಒಂದು ಮೌಲಿಕ ಗ್ರಂಥ. ಇದಲ್ಲದೆ ಅವರು ಸಾಳ್ವ ಸಂತತಿಯ ಬಗ್ಗೆ ಸಂಶೋಧನೆ ಕೈಗೊಂಡು ಕೆಲವು ವಿದ್ವಾಂಸರಿಗೆ ಈ ಕ್ಷೇತ್ರದಲ್ಲಿ ಪಿಎಚ್.ಡಿ ಸಂಶೋಧನೆ ಮಾಡಲು ಮಾರ್ಗದರ್ಶನ ಮಾಡಿದ್ದಾರೆ. ಶ್ರೀ ರಾಮಶರ್ಮ ಮತ್ತು ಅವರ ಶಿಷ್ಯರ ಕೆಲವು ಸಂಪ್ರಬಂಧಗಳಲ್ಲಿ ತುಳುವ ಸಂತತಿಯ ಮೂಲದ ಬಗ್ಗೆ ಅಮೂಲ್ಯವಾದ ಸಂಗತಿಗಳು ಚರ್ಚಿಸಲ್ಪಟ್ಟಿವೆ. ಅದರಲ್ಲೂ, ನರಸನಾಯಕ ಮತ್ತು ವೀರನರಸಿಂಹನ ಬಗ್ಗೆ ಇವರು ನೀಡಿರುವ ಮಾಹಿತಿ ಬಹು ಉಪಯುಕ್ತವಾದುದು.

ಕೃಷ್ಣದೇವರಾಯನನ್ನು ಕುರಿತು ಸಂಶೋಧನೆ ಕೈಗೊಂಡು ಗ್ರಂಥ ರಚನೆ ಮಾಡಿದ ಮತ್ತೊಬ್ಬ ಪ್ರಮುಖ ವಿದ್ವಾಂಸರು ಕೆ.ಎಸ್.ಕೋದಂಡರಾಮಯ್ಯ. ಹೊಸೂರಿನಲ್ಲಿ ಶಿಕ್ಷಕರಾಗಿದ್ದ ಇವರು ಕೃಷ್ಣದೇವರಾಯನ ಬಗ್ಗೆ ವಿಶೇಷವಾದ ಆಸಕ್ತಿ ಹೊಂದಿದ್ದರು. ನಲವತ್ತು ವರ್ಷಗಳ ದೀರ್ಘವಾದ ಅಧ್ಯಯನ ನಡೆಸಿದ್ದು ಅನಂತರ ತಾವು ಸಂಗ್ರಹಿಸಿದ ಮಾಹಿತಿಯನ್ನು ಆಧರಿಸಿ, ಕೃಷ್ಣದೇವರಾಯನನ್ನು ಕುರಿತ ಆರು ಸಂಪುಟಗಳ ಬೃಹತ್ ಮಾಲೆಯನ್ನು ರಚಿಸಿದರು. ಈ ಆರು ಕೃತಿಗಳಲ್ಲಿ ಅವರು ಕೃಷ್ಣದೇವರಾಯನ ಜೀವನ ಸಾಧನೆಯ ಸಮಗ್ರ ಮಾಹಿತಿಯನ್ನು ಸಮರ್ಪಕವಾಗಿ ಸಂಗ್ರಹಿಸಿದ್ದಾರೆ.

ಈಗ ಪ್ರಕಟವಾಗಿರುವ ಮೊದಲ ಸಂಪುಟ ಕೃಷ್ಣದೇವರಾಯನ ಕುಟುಂಬ ಜೀವನಕ್ಕೆ ಸಂಬಂಧಿಸಿದುದಾಗಿದೆ. ನಾನೂರು ಪುಟಗಳ ಈ ಗ್ರಂಥದಲ್ಲಿ ಕೃಷ್ಣರಾಯನ ಬಾಲ್ಯ, ಪಟ್ಟಾಭಿಷೇಕ ಮತ್ತು ವೈವಾಹಿಕ ಜೀವನ ವಿವರಣೆಯಿದೆ. ಈ ದೊರೆಯ ರಾಣಿಯರ ಮತ್ತು ಮಕ್ಕಳ ಬಗ್ಗೆ ಖಚಿತವಾದ ಮಾಹಿತಿಯನ್ನು ನೀಡಲಾಗಿದೆ.

ಕೋದಂಡರಾಮಯ್ಯ ತಮ್ಮ ಗ್ರಂಥ ರಚನೆಗೆ ಸಹಾಯಕವಾದ ಕೆಲವು ಕೃತಿಗಳನ್ನು ಪ್ರಸ್ತಾಪಿಸುತ್ತಾರೆ. ಅವುಗಳಲ್ಲಿ ಸಿರಪಿ ಆಂಜನೇಯಲು ಬರೆದ ವಿದ್ಯಾನಗರ ಚರಿತ್ರಮು ಚಿಲಕೂರಿ ವೀರಭದ್ರರಾವ್ ಬರೆದ ಆಂಧ್ರುಲ ಚರಿತ್ರಮು, ಸ್ಫೂತಿತ ಲಪಾಟಿ ಪೇರರಾಜು ಅವರ ವಿಜಯನಗರ ಚರಿತ್ರಮು ಶ್ರೀನಿವಾಸ ಸೋದರ ಕವಿಯ ನಾಗಲಾದೇವಿ, ಪಿನಸೀತಾರಾಮಶಾಸ್ತ್ರಿಯ ವಸುಚರಿತ ವಿಮರ್ಶನ ಇವು ಮುಖ್ಯವಾದುವು.

ತೆಲುಗರು ಚಾರಿತ್ರಕ ವಿಷಯಗಳಿಗಿಂತ ಭಾಷಾ ಸಾಹಿತ್ಯ ಗ್ರಂಥದ ಮೂಲಕ ಕೃಷ್ಣದೇವರಾಯನನ್ನು ಪರಿಚಯ ಮಾಡಿಕೊಂಡಿರುವುದರಿಂದ ಅವನ ಜೀವನದ ಪೂರ್ಣ ಚಿತ್ರ ಮೂಡಿಬರುವುದಿಲ್ಲ. ಆತನ ಸರ್ವತೋಮುಖ ಪ್ರಜ್ಞಾ ವಿಶೇಷ ಆತ ಸಾಧಿಸಿದ ಮಹಾಕಾರ್ಯಗಳು, ಆತನ ಮೇರುತರ ವ್ಯಕ್ತಿತ್ವವನ್ನು ಅರ್ಥ ಮಾಡಿಕೊಳ್ಳಲು ಸಾಹಿತ್ಯಾಧಾರಗಳಲ್ಲದೆ ಶಾಸನಧಾರಗಳೂ ಅತಿಮುಖ್ಯವೆಂದು ಅವರು ಒತ್ತಿ ಹೇಳಿದ್ದಾರೆ.

ಈ ವೇಳೆಗೆ ಲಭ್ಯವಿದ್ದ ಎಪಿಗ್ರಾಫಿಯಾ ಕರ್ನಾಟಕದ ಪೂರ್ಣಪ್ರಯೋಜನವನ್ನು ವೆಂಕಟರಮಣಯ್ಯನವರು ಪಡೆದುಕೊಂಡರು. ಅಲ್ಲದೆ ಅಂದಿನವರೆಗೂ ಪ್ರಕಟವಾಗಿದ್ದ ಎಲ್ಲ ಕೃತಿಗಳನ್ನು ಪರಿಶೀಲಿಸಿದ್ದಾರೆ. ಕನ್ನಡದ ಆಧಾರಗಳನ್ನು ಗೆಜೆಟಿಯರ್ ಇತ್ಯಾದಿ ಗಳನ್ನು ಲೇಖಕರು ಗಮನಿಸಿದ್ದಾರೆ. ಆದರೆ ಅವರು ತಮ್ಮದೇ ಆದ ಸ್ವತಂತ್ರ ನಿರ್ಧಾರ ತೆಗೆದುಕೊಳ್ಳಲು ಹಿಂಜರಿಯುವುದಿಲ್ಲ. ಕರ್ಣಾಟಕದ ಶಾಸನ ಸಹಾಯದಿಂದ ಅವರು ರಚಿಸಿದ ಗ್ರಂಥ ವಿಜಯನಗರ ಇತಿಹಾಸಕ್ಕೆ ಒಂದು ಶ್ರೇಷ್ಠ ಕೊಡುಗೆಯೆನ್ನಬಹುದು.

ಕರ್ಣಾಟಕ ಮತ್ತು ಆಂಧ್ರದಲ್ಲಿ ವ್ಯಾಪಕವಾಗಿ ಕ್ಷೇತ್ರ ಕಾರ್ಯ ಮಾಡಿ ಶಾಸನ ಗ್ರಂಥಗಳಸ್ನು ಅಭ್ಯಾಸ ಮಾಡಿದರು. ಇದರಿಂದ ತಮ್ಮ ಆಸಕ್ತಿ ಇಮ್ಮಡಿಸಿತೆಂದೂ, ಸಾಹಿತ್ಯ ಮತ್ತು ಚರಿತ್ರೆಗಳ ನಡುವಿನ ಅವಿನಾಭಾವ ಸಂಬಂಧ ತಮಗೆ ಗೋಚರಿಸಿತೆಂದೂ ಅವರು ತಿಳಿಸುತ್ತಾರೆ.

ಕೃಷ್ಣದೇವರಾಯನನ್ನು ಕುರಿತು ಬರೆಯಲು ಕಳೆದ ನೂರು ವರ್ಷಗಳಲ್ಲಿ ಪ್ರಕಟ ವಾಗಿರುವ ಗ್ರಂಥಗಳನ್ನು ಹಾಗೂ ಪ್ರಕಟವಾಗಿರುವ ಗ್ರಂಥಗಳನ್ನು ನೋಡಬೇಕಾಯಿ ತೆಂದು ಲೇಖಕರು ತಿಳಿಸುತ್ತಾರೆ. ರಾಯರ ಯುಗದ ಸ್ವಲ್ಪ ಹಿಂದಿನ ಸಾಹಿತ್ಯ ಗ್ರಂಥಗಳು, ಕಡತಗಳು, ದಾಖಲೆಗಳು, ಸ್ಥಳ ಪುರಾಣಗಳು, ದೇವಾಲಯಗಳ ಇತಿಹಾಸಗಳು, ಮೌಖಿಕ ಇತಿಹಾಸ ಮೊದಲಾದ ಆಕರಗಳ ಸಹಾಯದಿಂದ ಮಾಹಿತಿಯನ್ನು ಸಂಗ್ರಹಿಸಿದುದಾಗಿ ಕೋದಂಡರಾಮಯ್ಯ ತಿಳಿಸುತ್ತಾರೆ. ಆಂಧ್ರ ಹಾಗೂ ಕರ್ಣಾಟಕದಲ್ಲಿನ ಚಾರಿತ್ರಿಕ ಸ್ಥಳಗಳಿಗೆ ಹೋಗಿ ಅಲ್ಲಿ ಕ್ಷೇತ್ರ ಕಾರ್ಯದ ಮೂಲಕ ವಿಷಯ ಸಂಗ್ರಹಿಸಿದಾಗ ಮಾತ್ರ ಕೃಷ್ಣದೇವರಾಯನನ್ನು ಕುರಿತು ಬರೆಯುವುದು ಸಾಧ್ಯವೆಂದು ಅವರು ಭಾವಿಸುತ್ತಾರೆ. ಕೋದಂಡರಾಮಯ್ಯನವರ ಕೃತಿ ಒಂದು ರೀತಿಯಲ್ಲಿ ಇತಿಹಾಸ ಲೇಖನ ಶಾಸ್ತ್ರದ ಒಂದು ಅಭ್ಯಾಸದಂತಿದೆ. ಅವರು ಹಿಂದಿನ ಇತಿಹಾಸಕಾರರು ಎಲ್ಲಿ ಹೇಗೆ ತಪ್ಪು ಮಾಡಿದ್ದಾರೆ

ಎಂಬುದನ್ನು ತೋರಿಸಿಕೊಡುತ್ತಾ ಹೋಗುತ್ತಾರೆ. ಹಿಂದಿನವರು ಬರೆದದ್ದೆಲ್ಲ ಸರಿ ಎಂದು ಅದನ್ನು ಪುನರುಚ್ಚರಿಸುವುದು ಸರಿಯಲ್ಲ. ಪ್ರತಿಯೊಂದು ಅಂಶವನ್ನೂ ಇತಿಹಾಸ ವಿಧಾನದ ಮೂಲಕ ಪರೀಕ್ಷೆಗೊಳಪಡಿಸಬೇಕೆಂದು ಹೇಳುತ್ತಾರೆ.

ಕೃಷ್ಣದೇವರಾಯನನ್ನು ಕುರಿತ ಈ ಪುಸ್ತಕದಲ್ಲಿ ಲೇಖಕರು ಭಾರತದ ಇತಿಹಾಸ ರಚನೆಯಲ್ಲಿ ನಡೆದಿರುವ ಬೆಳವಣಿಗೆಯನ್ನು ಗುರುತಿರುವುದು ಸ್ವಾರಸ್ಯಕರವಾಗಿದೆ. ಈ ಸಂದರ್ಭದಲ್ಲಿ ಅವರು ನಮ್ಮ ಶಾಸನಗಳು ಪ್ರಕಟವಾಗಿ ಅದನ್ನು ಎಲ್ಲರೂ ಓದಬೇಕು. ಶಾಸನಗಳಲ್ಲಿ ಅಡಗಿರುವ ಸಾಮಾಜಿಕ, ಸಾಂಸ್ಕೃತಿಕ ಅಂಶಗಳನ್ನು ವಿದ್ವಾಂಸರು ಗಮನಿಸಬೇಕು ಎಂದು ಒತ್ತಿ ಹೇಳುತ್ತಾರೆ.

ಕೋದಂಡರಾಮಯ್ಯನವರು ತಮ್ಮ ಮೊದಲ ಕೃತಿಯಲ್ಲಿ ಕೃಷ್ಣದೇವರಾಯನ ವೈಯಕ್ತಿಕ ಜೀವನವನ್ನು ವಿಶದವಾಗಿ ಚಿತ್ರಿಸುತ್ತಾರೆ. ಅವನ ವಂಶ, ಬಂಧುಬಾಂಧವರ ಕುಟುಂಬದವರ ಜೀವನವನ್ನೂ ಆಧಾರ ಸಹಿತವಾಗಿ ನಿರೂಪಿಸುತ್ತಾರೆ. ಇದುವರೆವಿಗೂ ತಿಳಿಯದಿರುವ ಕೆಲ ಅಂಶಗಳು, ಉದಾ. ಅಷ್ಟ ದಿಗ್ಗಜಗಳ ವಿಷಯ ಅವರು ತೋರಿಸಿ ಕೊಟ್ಟಿದ್ದಾರೆ. ಕೆಲವು ಪ್ರಮುಖ ಸಂಗತಿಗಳ ಬಗ್ಗೆ ಇತರ ಇತಿಹಾಸ ಅಭಿಪ್ರಾಯಗಳನ್ನು ಪ್ರಸ್ತಾಪಿಸಿ ಅದರ ಬಗ್ಗೆ ತಮ್ಮ ತೀರ್ಮಾನವನ್ನು ನೀಡುತ್ತಾರೆ.

ಇಂತಹ ಶ್ರೇಷ್ಠ ವಿದ್ವಾಂಸರು ರಚಿಸಿರುವ ಪೂರ್ಣಗ್ರಂಥಮಾಲೆ ಹೊರಬೀಳದಿರುವುದು ದುರದೃಷ್ಟಕರ. ಆರು ಸಂಪುಟಗಳಲ್ಲಿ ಒಂದು ಮಾತ್ರ ಪ್ರಕಟವಾಗಿ, ಕೃಷ್ಣದೇವರಾಯನ ಜೀವನ, ಆಳ್ವಿಕೆ, ಮತ್ತು ಸಾಧನೆಗಳನ್ನು ಕುರಿತು ಇನ್ನುಳಿದ ಐದು ಸಂಪುಟಗಳನ್ನು ತರುವುದು ಈ ಲೇಖಕರ ಅಭಿಪ್ರಾಯವಾಗಿದ್ದಿತು. ಆದರೆ ಉಳಿದ ಗ್ರಂಥ ಪ್ರಕಟಗೊಳ್ಳಲಿಲ್ಲ. ಲೇಖಕರು ವಿಧಿವಶರಾದರು. ಈ ಅಪ್ರಕಟಿತ ಗ್ರಂಥಗಳನ್ನು ಪ್ರಕಟಿಸಲು ಪ್ರಯತ್ನ ನಡೆಸುವುದು ಅಗತ್ಯವೆಂದು ಈ ಸಂದರ್ಭದಲ್ಲಿ ನಾನು ಭಾವಿಸುತ್ತೇನೆ.

ಆರ್.ಸುಬ್ರಹ್ಮಣ್ಯಂ ಅವರು ವಿಜಯನಗರ ಮತ್ತು ಒರಿಸ್ಸಾಗಳ ಸಂಬಂಧವನ್ನು ವಿಶೇಷ ಅಧ್ಯಯನ ಮಾಡಿ ಒರಿಸ್ಸಾದ ಇತಿಹಾಸವನ್ನು ಪುನರ್‌ರಚಿಸಲು ಪ್ರಯತ್ನ ಮಾಡಿದ್ದಾರೆ.

ಮೇಲೆ ಪ್ರಾತಿನಿಧಿಕವಾಗಿ ನಾಲ್ವರು ವಿದ್ವಾಂಸರು ಕೊಡುಗೆಗಳನ್ನು ಚರ್ಚಿಸಲಾಗಿದೆ. ಇವರ ಕೃತಿಗಳ ಪರಿಶೀಲನೆಯಿಂದ ಆಂಧ್ರದ ವಿದ್ವಾಂಸರಿಗೆ ಇತಿಹಾಸ ರಚನಾ ಕ್ರಮದಿಂದ ಆಂಧ್ರದ ವಿದ್ವಾಂಸರ ಇತಿಹಾಸ ರಚನಾ ಕ್ರಮ (Historiography) ದ ಸಮೀಕ್ಷೆಯಾಗುವುದೆಂದು ಭಾವಿಸಿದ್ದೇನೆ. ಈ ವಿದ್ವಾಂಸರ ವಿದ್ವತ್ತು ಕೃತಿ ರಚನಾ ಕೌಶಲ್ಯ ವ್ಯಾಸಂಗ ಕ್ರಮ ಯುವ ಸಂಶೋಧಕರಿಗೆ ಮಾರ್ಗದರ್ಶನವಾಗ ಬಲ್ಲುದೆಂದು ನಂಬಿದ್ದೇನೆ.

ವಿಜಯನಗರದ ಇತಿಹಾಸ ವಿದ್ವಾಂಸರಿಗೆ ಹಾಗೂ ಸಂಶೋಧಕರಿಗೆ ಚಿನ್ನದಗಣಿ. ಈ ಸಾಮ್ರಾಜ್ಯದ ಬಗ್ಗೆ ದೊರೆಯುವ ಅಪಾರ ಸಾಮಗ್ರಿ ಶೋಧಕರನ್ನು, ಲೇಖಕರನ್ನು ಆಕರ್ಷಿಸುತ್ತ ಬಂದಿದೆ. ಆಂಧ್ರ ಪ್ರದೇಶದ ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ಇತಿಹಾಸ ವಿಭಾಗಗಳಲ್ಲದೆ ತೆಲುಗು ವಿಭಾಗ ಸಂಸ್ಕೃತ ಅರ್ಥಶಾಸ್ತ್ರ ಮೊದಲಾದ ವಿಭಾಗಗಳಲ್ಲಿ ಸಾಕಷ್ಟು ಸಂಶೋಧನೆ ನಡೆದಿದೆ. ಆಂಧ್ರದ ವಿಶ್ವವಿದ್ಯಾನಿಲಯಗಳಲ್ಲಿ ಇತಿಹಾಸ ವಿಭಾಗಗಳಲ್ಲಿ ನಡೆದಿರುವ ಸಂಶೋಧನೆಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

Soma Reddy	-	Studies in Socio-Economic History of Medieval Andhra
Hemavathi & Aparna	-	Tuluvavira Narasimha
Veerabhadraiah	-	Social life as reflected in Telugu literature under VN
Jayashree - Agara	-	Agrarian contidions under Vijayanagar
Subramanyam	-	Surya Gajapati & Orissa
Anjali	-	Usurpation in Vijayanagar history
Shylaja	-	External Relations of VN
Jamuna	-	Tuluva Narasa Nayaka
Pushpalatha	-	Nayankara system under VN
Sudhir Reddy	-	Ministers and Generals under Sangama Dynasty
V. Prasad	-	Sri Vaishnavism under Aravidu rulers
Jayashri	-	Agrarian Conditions under V.Nagar
Nirmala kumari	-	Social life as reflected in sculptures in V.Nagar
Jhansi Laskhmi	-	Sangama Dynasty of V.Nagar
P. Srirama Sharma	-	Saluva Dynasty of Vijayanagar
T. Sudhakar Ananthapur	-	Socio-Economic conditions of Vijayanagar
Hemachandra	-	Irrigation in Rayalasima in VN period.
Balrangaiah	-	History and monuments of Penugonda

Ramarejain	-	Cultural History of Rayalasima the Rayas of V.Nagar (B36-1565)
K. Reddappa	-	Material conditions Depicted in Vijayanagara
Terala Satyanarayana		Vijayanagara charitramu
Dr. K.Vidyavati	-	Viajayanagara sasanalu
Mandapadi Venkateshwara	-	Rayulee yuga Prahandhan mula Upakyanamulu

ಆಂಧ್ರದಲ್ಲೂ ವಿಜಯನಗರದ ಇತಿಹಾಸ ಅನೇಕ ಮಜಲುಗಳನ್ನು ಹತ್ತಿ ಬೆಳೆದಿದೆ. ಅದು ಬಾಲ್ಯಾವಸ್ಥೆ ಯೌವನ ಪ್ರೌಢ ಹಂತಗಳನ್ನು ದಾಟಿ ಸಮೃದ್ಧಿಗೊಳ್ಳುತ್ತ ಮುಂದೆ ಸಾಗಿದೆ. ಮೊದಲನೆಯ ಹಂತವನ್ನು ಕವಿ ಚರಿತಕಾರರ ಕಥನಗಳನ್ನಾಧರಿಸಿ ರಚಿಸಿದ ಇತಿಹಾಸವಾದ ಆಮೇಲೆ ಎರಡನೆಯ ಘಟ್ಟದಲ್ಲಿ ಶಾಸನಗಳು ವಿದೇಶಿ ಪ್ರವಾಸಿಗರ ಕಥನಗಳನ್ನಾಧರಿಸಿದ ಬರವಣಿಗೆಗಳನ್ನು ಪರಿಗಣಿಸಬಹುದು. ಕಡೆಯ ಹಂತದಲ್ಲಿ ಪ್ರೌಢ ಮಟ್ಟದ ಸಂಶೋಧನೆ ನಡೆದು ವಿಜಯನಗರದ ಸಾಮಾಜಿಕ, ಧಾರ್ಮಿಕ, ಆರ್ಥಿಕ ಜೀವನದ ವಿಶ್ಲೇಷಣೆ ಹಾಗೂ ತುಲನಾತ್ಮಕ ಚಿಂತನೆ ನಡೆದಿರುವುದನ್ನು ಕಾಣಬಹುದಾಗಿದೆ. ಆಂಧ್ರದಲ್ಲಿ ವಿಜಯನಗರದ ಇತಿಹಾಸ ರಚನೆಗೆ ಒಂದು ಕಡೆ ವಿಪುಲ ಆಧಾರಗಳು ಮತ್ತೊಂದು ಕಡೆ ಸಿದ್ಧಾಂತ ಪೂರಕವಾಗಿದೆ. ಹೊಸ ಆವಿಷ್ಕಾರಗಳೂ ವಿನೂತನ ಸಿದ್ಧಾಂತ (Idelogy)ದ ಪ್ರಯೋಗಗಳಿಂದ ವಿಜಯನಗರದ ಇತಿಹಾಸ ಸದೃಢವಾಗಿ ಗಮನಿಸಬೇಕಾದ ವಿಷಯವೆಂದರೆ ವಿಜಯನಗರದ ಇತಿಹಾಸದ ಕೆಲವು ಘಟನೆಗಳು ಕಾವ್ಯಾತ್ಮಕವಾಗಿ ಪಠ್ಯದಲ್ಲಿ ರೂಪಾಂತರಗೊಂಡಿರುವುದನ್ನು ತೆಲುಗು ವಿದ್ವಾಂಸರು ಗುರುತಿಸಿ ಅದರ ಐತಿಹಾಸಿಕ ಮಹತ್ವವನ್ನು ಗುರುತಿಸಿದ್ದಾರೆ. ವಿಜಯ ನಗರವನ್ನು ತೆಲುಗು ಸಂಶೋಧಕರು ಬಹು ಸಮರ್ಥವಾಗಿ ಉಪಯೋಗಿಸಿಕೊಂಡಿ ದ್ದಾರೆ. ಉದಾಹರಣೆಗೆ ತಿರುಪತಿ ದೇವಾಲಯದ ಶಾಸನ ಮತ್ತು ದಾಖಲೆಗಳನ್ನು ವಿಶ್ವವಿದ್ಯಾನಿಲಯದ ಶೋಧಕರು ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಹೈದರಾಬಾದ್ ನಲ್ಲಿರುವ ರಾಜ್ಯಪತ್ರಾಗಾರವಲ್ಲದೆ ತೆಲುಗು ವಿಶ್ವವಿದ್ಯಾನಿಲಯವೂ ಸಂಶೋಧನೆಗೆ ಉಪಯುಕ್ತವಾದ ಕೇಂದ್ರಗಳಾಗಿವೆ. ಇದಲ್ಲದೆ ಹೈದರಾಬಾದಿನಲ್ಲಿರುವ ಶ್ರೀ ಕೃಷ್ಣದೇವರಾಯ ಗ್ರಂಥಾಲಯ, ಕಡಪದಲ್ಲಿರುವ ಜಾನ್ ಬ್ರೌನ್ ಗ್ರಂಥಾಲಯ ವಿದ್ವಾಂಸರಿಗೆ ಅತ್ಯಮೂಲ್ಯ ಆಸರೆಯ ತಾಣಗಳಾಗಿವೆ.

ಆಂಧ್ರದಲ್ಲಿ ವಿಜಯನಗರ ಇತಿಹಾಸವನ್ನು ಕುರಿತು ನಡೆದಿರುವ ಕೆಲಸದ ಬಗ್ಗೆ ಇದೊಂದು ಸ್ಥೂಲವಾದ ಅವಲೋಕನ ಮಾತ್ರ.ಇದು ಸಂಪೂರ್ಣವಾದುದೂ ಅಲ್ಲ ಸಮಗ್ರವೂ ಅಲ್ಲ. ಅಲ್ಲಿನ ವಿದ್ವಾಂಸರ ಸಾಧನೆಯ ಒಂದು ಕಿರುಪರಿಚಯ ಮಾತ್ರ.

ವಿದ್ವತ್ತಿಗೆ ಯಾವುದೆ ಭಾಷೆ ಅಥವಾ ಗಡಿಯ ಪ್ರತಿಬಂಧಕಗಳಿರುವುದಿಲ್ಲ. ದೇಶ ಭಾಷೆ, ಜಾತಿ, ಮತಗಳ ಸಂಕುಚಿತ ಭಾವನೆಗಳನ್ನು ಮೀರಿನಿಂತಾಗ ಇತಿಹಾಸದ ಸೊಗಸು ಸ್ವಾರಸ್ಯ ಅರಿವಾಗುತ್ತದೆ.

ಇದು ಯಾವುದಾದರೂ ಒಂದು ಪ್ರದೇಶದಲ್ಲಿ ನಡೆದ ಸಂಶೋಧನೆ ಅತ್ಯಲ್ಪಕಾಲ ದಲ್ಲಿ ಎಲ್ಲ ಕಡೆ ಲಭ್ಯವಾಗುತ್ತದೆ. ಪ್ರಪಂಚದ ಯಾವ ಭಾಗದಲ್ಲಿ ನಡೆಯುವ ಬೌದ್ಧಿಕ ಪ್ರಗತಿಯ ಪ್ರಯೋಜನ ಪಡೆಯಲು ಸಾಧ್ಯವಿರುವಾಗ, ನಮ್ಮ ನೆರೆಯ ರಾಜ್ಯದಲ್ಲಿ ನಡೆದಿರುವ ಕೆಲಸವನ್ನು ಆಸಕ್ತಿಯಿಂದ ಪರಿಶೀಲಿಸುವುದು ಅಗತ್ಯ ವೆಂದು ಹೇಳಬೇಕಾ ಗಿಲ್ಲ. ಆಂಧ್ರ, ಕರ್ನಾಟಕದ ವಿದ್ವಾಂಸರು ತಮ್ಮಲ್ಲಿ ನಡೆದಿರುವ ಸಂಶೋಧನೆ ಪ್ರಕಟಣೆ ಗಳ ವಿನಿಮಯ ಮಾಡಿಕೊಳ್ಳುವುದು ಇಬ್ಬರಿಗೂ ಲಾಭದಾಯಕ ವಾಗುವುದಲ್ಲದೆ, ಸಂಶೋಧನಾ ಕ್ಷೇತ್ರವೂ ಸಮೃದ್ಧಿಯಾಗುವುದರಲ್ಲಿ ಸಂಶಯ ವಿಲ್ಲ. ಆಂಧ್ರ ಮತ್ತು ಕರ್ನಾಟಕದ ಇತಿಹಾಸಕಾರರು ಒಂದೇ ವಿಷಯದ ಬಗ್ಗೆ ಸಂಶೋಧನೆಯನ್ನು ಇಮ್ಮಡಿಸು ವುದನ್ನು (Duplicate) ಸ್ವಲ್ಪ ಮಟ್ಟಿಗೆ ತಪ್ಪಿಸಿ, ತಮ್ಮಲ್ಲಿರುವ ಪ್ರಕಟಣೆ ಮತ್ತು ಸಂಶೋಧನಾ ಸಾಮಗ್ರಿಯನ್ನು ವಿನಿಮಯ ಮಾಡಿ ಕೊಳ್ಳುವುದು ಬಹುಜರೂರಾಗಿ ಆಗಬೇಕಾಗಿದೆ. ಇಂತಹ ಪ್ರಯತ್ನಗಳು, ಭಾಷೆ, ಸಾಹಿತ್ಯ, ಇತಿಹಾಸ ವಿಷಯಗಳ ಬೆಳವಣಿಗೆಗೆ ಮಾತ್ರವಲ್ಲದೆ ಆಂಧ್ರ ಮತ್ತು ಕರ್ನಾಟಕ ಗಳ ಸಾಂಸ್ಕೃತಿಕ ಮತ್ತು ರಾಜಕೀಯ ಬಾಂಧವ್ಯಕ್ಕೂ ಸಹಾಯಕವಾಗುವುದರಲ್ಲಿ ಸಂಶಯವಿಲ್ಲ.

೩. ದೇವಲಾಪುರದ ಅಪ್ರಕಟಿತ ನಾಲ್ಕು ತಾಮ್ರ ಪತ್ರಗಳು

ಡಾ. ಎಫ್.ಟಿ.ಹಳ್ಳಿಕೇರಿ, ಎಸ್.ಚಂದ್ರಪ್ಪ

ಕುರುಬರ ಗುರುಪರಂಪರೆಯಲ್ಲಿ ರೇವಣಸಿದ್ದೇಶ್ವರ, ಸಿದ್ಧರಾಮೇಶ್ವರ ಮತ್ತು ಅಮೋಘ ಸಿದ್ದೇಶ್ವರ ಎಂಬ ಮೂರೂ ಸಂಪ್ರದಾಯಗಳಿವೆ.[1] ಈ ಮೂರೂ ಸಂಪ್ರದಾಯದ ಗುರುಗಳನ್ನು ``ಒಡೆಯರು" ಎಂದು ಕರೆಯುತ್ತಾರೆ. ಅದರಲ್ಲಿಯೂ ರೇವಣ ಸಿದ್ದೇಶ್ವರನಿಗೆ ಕುರುಬರ ಗುರುಪರಂಪರೆಯಲ್ಲಿ ವಿಶಿಷ್ಟ ಸ್ಥಾನವಿದೆ. ಈ ರೇವಣ ಸಿದ್ದೇಶ್ವರ ಸಂಪ್ರದಾಯದ ಮುಂದುವರಿಕೆಯಾಗಿ ಶಾಂತಮುತ್ತಯ್ಯನು ಕುರುಬರಿಗೆ ಗುರುವಾದ ಬಗ್ಗೆ ಕಾವ್ಯಪುರಾಣಗಳು ತಿಳಿಸುತ್ತವೆ.[2] ಈ ಶಾಂತಮುತ್ತಯ್ಯ ಸಂಪ್ರದಾಯದ ಗುರುಗಳನ್ನು ಶಾಂತಮುತ್ತಯ್ಯೊಡೆಯರು, ಶಾಂತೊಡೆಯರು ಎಂದು ಕರೆಯಲಾಗುತ್ತದೆ. ಬಿಜಾಪುರ ಜಿಲ್ಲೆ ಮುದ್ದೇಬಿಹಾಳ ತಾಲೂಕಿನ ಸರೂರು ಗ್ರಾಮ ಶಾಂತಮುತ್ತಯ್ಯನ ಮೂಲ ನೆಲೆ. ಕುರುಬರ ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ಪುರೋಹಿತರಾಗಿ ಕಾರ್ಯ ನಿರ್ವಹಿಸುವ ಒಡೆಯರು ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ತಮಿಳುನಾಡಿನಾದ್ಯಂತ ನೆಲೆಸಿದ್ದಾರೆ. ಸಾಮಾನ್ಯವಾಗಿ ಕುರುಬರ ಮಠಗಳ ಆವರಣಕ್ಕೆ ಹೊಂದಿಕೊಂಡೆ ಇರುವ ಮನೆಯಲ್ಲಿ ಇವರ ವಾಸ. ಮಠವಿರದಿದ್ದರೆ ಅವರ ಮನೆಯಲ್ಲಿ ಚಿಕ್ಕದಾದ ಕೊಠಡಿಯಲ್ಲಿ ರೇವಣಸಿದ್ದೇಶ್ವರನ ಮೂರ್ತಿಯನ್ನು ಪ್ರತಿಷ್ಠಾಪಿಸಿ ದಿನಾಲು ಮೂರು ಹೊತ್ತು ಪೂಜೆ ಸಲ್ಲಿಸುವುದು ವಾಡಿಕೆ. ವಿಶೇಷವಾಗಿ ಕರ್ನಾಟಕದ ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ರೇವಣಸಿದ್ದ ಸಂಪ್ರದಾಯದ ಒಡೆಯರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಹಾಗೆಯೇ ರೇವಣಸಿದ್ದೇಶ್ವರ ಮಠಗಳ ಸಂಖ್ಯೆಯೂ ಇಲ್ಲಿ ಅಧಿಕ. ಒಡೆಯ ಒಡೆಯರಿಗೆ ಕನಿಷ್ಠ ಹತ್ತು, ಗರಿಷ್ಠ 33 ಹಳ್ಳಿಗಳ ವ್ಯಾಪ್ತಿ ಇರುತ್ತದೆ. ಇಲ್ಲಿರುವ ಕುರುಬರು ಪ್ರತಿವರ್ಷ ಅಥವಾ ವಿಶೇಷ ಸಂದರ್ಭದಲ್ಲಿ ಒಡೆಯರನ್ನು ತಮ್ಮೂರಿಗೆ ಬರಮಾಡಿಕೊಂಡು ಹಣ, ದವಸ ಧಾನ್ಯ ಮತ್ತು ಇತರೆ ರೂಪದಲ್ಲಿ ಗುರು ಕಾಣಿಕೆಯಲ್ಲಿ ಸಲ್ಲಿಸುತ್ತಾರೆ. ಇಂಥ ವಿಶಿಷ್ಟ ಗುರುಪರಂಪರೆಯನ್ನು ಹೊಂದಿದ ಈ ಒಡೆಯರ ಬಳಿ ತಾಮ್ರಪತ್ರಗಳು ಮತ್ತು ಗುರುತಿನ ತಾಮ್ರದ ಬಿಲ್ಲೆಗಳಿವೆ. ಕುರುಬರ ಗುರುಪರಂಪರೆ, ಒಡೆಯರು ಮತ್ತು ಕುರುಬರ ಮಧ್ಯೆ ನಡೆದ ವಾದವಿವಾದಗಳ ವಿವರ, ಒಡೆಯರಿಗೆ ದಾನ ನೀಡಿದ ಬಗ್ಗೆ, ಇಂತಿಷ್ಟು ಕಾಣಿಕೆಯನ್ನು ಸಲ್ಲಿಸಬೇಕೆಂಬ ಕರಾರುಗಳನ್ನು ಹಾಗೂ ಇನ್ನಿತರೆ ಅನೇಕ ವಿಷಯಗಳನ್ನು ಈ ತಾಮಪತ್ರಗಳಲ್ಲಿ ದಾಖಲಿಸಲಾಗಿದೆ.[3]

ಕಂಪ್ಲಿ ಬಳ್ಳಾರಿ ಮುಖ್ಯ ರಸ್ತೆಯಲ್ಲಿ ಕಂಪ್ಲಿಯಿಂದ ಹದಿನೈದು ಕಿಲೋಮೀಟರ್ ಅಂತರದಲ್ಲಿ ದೇವಲಾಪುರ ಗ್ರಾಮವಿದೆ. ನಾವು ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ಆ ಗ್ರಾಮದ ಶ್ರೀ ಸಿದ್ದಯ್ಯಸ್ವಾಮಿ ಒಡೆಯರ ಎಂಬುವವರ ಮನೆಯಲ್ಲಿ ನಾಲ್ಕು ತಾಮ್ರಪತ್ರಗಳು ಹಾಗೂ ಎರಡು ಗುರುತಿನ ತಾಮ್ರದ ಬಿಲ್ಲೆಗಳು ದೊರೆತವು. ಅವುಗಳ ವಿವರಗಳು ಹೀಗಿವೆ.

ತಾಮಪತ್ರ 1

24 ಸಾಲುಗಳನ್ನು ಒಳಗೊಂಡ ಈ ತಾಮಪತ್ರವು ಶಾ. ಶಕೆ 1794 ರಲ್ಲಿ ಅಂದರೆ 1862ರಲ್ಲಿ ರಚನೆಗೊಂಡಿದೆ. ಆರಂಭದಲ್ಲಿ 'ವಿದ್ಯಾನಗರ'ಎಂಬ ಉಲ್ಲೇಖವಿದೆ. ನಂತರ ರೇವಣಸಿದ್ದೇಶ್ವರನನ್ನು ತ್ರಿಭುವನ ರಕ್ಷಾಮಣಿ, ನಂದಿವಾಹನ, ಜಟಾಜೂಟ ಇತ್ಯಾದಿಯಾಗಿ ಸ್ತುತಿಸಲಾಗಿದೆ. ಅನಂತರದಲ್ಲಿ ಗಾದಿಗನೂರು ಮಠಕ್ಕೆ ಗುರುಗಳಾದ ಒಡೆಯರ ಸಣ್ಣಸಿದ್ಧಯ್ಯನವರಿಗೆ ಭಕ್ತರು ಮನವಿ ಮಾಡಿಕೊಂಡ ವಿವರಗಳಿವೆ. ಈ ಪತ್ರದಲ್ಲಿರುವ ವಿಷಯಗಳನ್ನು ಹೀಗೆ ಕ್ರೋಢೀಕರಿಸಬಹುದು. 1. 1862ರಲ್ಲಿ ಗಾದಿಗನೂರು ಶ್ರೀ ರೇವಣಸಿದ್ದೇಶ್ವರ ಮಠದ ಅಧಿಪತಿಗಳಾದವರು ದೇವಲಾಪುರದ ಸಣ್ಣಸಿದ್ಧಯ್ಯನವರು. 2. ಚಿತ್ರಕಲ್ಲು ದೊಡ್ಡಯ್ಯ, ಗುತ್ತಿ ತಿಮ್ಮಯ್ಯ, ಯೆರೂರು ಮಲ್ಲಯ್ಯ, ಗದ್ವಾಲಿ ರಾಮಯ್ಯ, ಹಿರೇಸಮುದ್ರದ ನೆಂಬೆಣ್ಣ, ಹೊಸಪೇಟೆ ಲಿಂಗಣ್ಣ, ಉರುಕುಂದಿ ಹೇಮಯ್ಯ, ರಾಯದುರ್ಗದ ಹುಚ್ಚಯ್ಯ ಹಾಗೂ ವಂದವಾಗಲ ಬೀರಯ್ಯ[4] ಮುಂತಾದ ಸಮಸ್ತ ದೇವಚಾರದವರು ವಡೇರ ಸಣ್ಣಸಿದ್ಧಯ್ಯನವರಿಗೆ ಕಾಣಿಕೆ ಕೊಡುವ ಕುರಿತು ವಿಜ್ಞಾಪನೆ ಮಾಡಿಕೊಂಡ ಮಾಹಿತಿಗಳಿವೆ. 3. ಹಾಲುಮತಸ್ಥ ಜನರ ಪೈಕಿ ಸಂಡೂರು ಕರಿಬಸಣ್ಣನು ಈ ಒಡೆಯರಿಗೆ ಪ್ರತಿ ವರ್ಷ ಒಣ ಮಗ್ಗ 1ಕ್ಕೆ 1, ಎಂಟು ಎತ್ತಿನ ಕಮತ(ಒಕ್ಕಲುತನ)ಕ್ಕೆ 14 ಗಿದ್ದನ ದವಸ, ಮೂರು ಕುಯ್ಯಲಿಗೆ ಒಂದು ಕುರಿ, ಒಂದು ಲಗ್ನಕ್ಕೆ 5 ಟೆಂಕೆ ರೊಕ್ಕವನ್ನು ಕೊಡಬೇಕು. 4. ಈ ವಿವಿಧ ಕಾಣಿಕೆಗಳನ್ನು ಒಡೆಯರು ಓಲೆ ಬರೆದ ಪ್ರಕಾರ ಮಾಘಮಾಸದಲ್ಲಿ ಸಮಸ್ತ ಹಾಲುಮತಸ್ಥ ಜನರು ಕೊಡಬೇಕು. 5. ಈ ಪ್ರಕಾರ ಸಮಸ್ತ ದೈವಾಚಾರದವರು ಪ್ರತಿವರ್ಷ ತಪ್ಪದೇ ನಡೆಸಿಕೊಡಬೇಕು. 6. ಈ ಪತ್ರವನ್ನು ಸ್ವಸ್ತಿಶ್ರೀ ವಿಜಯಾಭ್ಯುದಯ ಶ್ರೀಮನ್ಮಹಾ ಶಾಲಿವಾಹನ ಶಖವರುಷಂಗಳು 1794ರಲ್ಲಿ ಬರೆಸಿದೆ.

ತಾಮ್ರಪತ್ರ 2

20 ಸಾಲುಗಳನ್ನೊಳಗೊಂಡ ಈ ತಾಮಪತ್ರದ ಕಾಲ 29, ಜನವರಿ 1871. ಆರಂಭದಲ್ಲಿ ವಿದ್ಯಾನಗರ ಸರಕಾರ ಎಂದಿದೆ. ನಂತರ ಒಡೆಯರ ಬಸಪ್ಪನ ಮಕ್ಕಳು ತಿಮ್ಮಪ್ಪ, ಹಿರೇಸಿದ್ಧಪ್ಪ ಮತ್ತು ಸಣ್ಣಸಿದ್ಧಪ್ಪ. ಇವರಲ್ಲಿ ಸಣ್ಣಸಿದ್ಧಪ್ಪನು ಪ್ರಮೋದೂತ

ಸಂವತ್ಸರ (1792)ದ ಮಾಘ ಶುದ್ಧ 8ರಲ್ಲಿ ಸಂಸ್ಥಾನಕ್ಕೆ ಅರ್ಜಿ ಸಲ್ಲಿಸಿದ ಬಗ್ಗೆ ಮಾಹಿತಿಯಿದೆ. ಅರ್ಜಿಗೆ ಉತ್ತರವಾಗಿ ಸಣ್ಣಸಿದ್ಧಪ್ಪನಿಗೆ ತಾಕೀತು ಮಾಡಿದ ವಿವರಗಳಿವೆ. ಅವು ಹೀಗಿವೆ: 1. ಪೂರ್ವದ ಹಿರಿಯರಂತೆ ನಡೆದುಕೊಳ್ಳುತ್ತ ಬರಬೇಕೆಂದು ಸೂಚಿಸಲಾಗಿದೆ. 2. ಕುಲದವರಿಂದ ಕಾಣಿಕೆ ತೆಗೆದುಕೊಳ್ಳುತ್ತ ಕುಲ ಮತಾಚಾರ ಪದ್ಧತಿಗೆ ವಿರೋಧವಾಗದಂತೆ ನಡೆದುಕೊಳ್ಳಬೇಕು. 3. ಸ್ವಾಮಿರಾವು ಮುಜುಮದಾರ ಎಂಬುವವರ ಉಲ್ಲೇಖ ಇಲ್ಲಿದೆ. ಬಹುಶಃ ಈತ ಸ್ಥಳೀಯ ಅಧಿಕಾರಿಯಾಗಿರಬಹುದು. 4. ಆ ಕಾಲಕ್ಕೆ ನಂದ್ಯಾಲು ವೆಂಕಟರಾಮರಾಜ ಎಂಬುವವರು ಪ್ರಧಾನಿಗಳಾಗಿದ್ದರು. ಈ ತಾಮ್ರಪತ್ರದ ಯಥಾವತ್ತು ಮತ್ತೊಂದು ಪ್ರತಿಯಿದ್ದು, ಅದರ ಆರಂಭದ ಎಡಭಾಗದಲ್ಲಿ `ಅಸಲಿಗೆ ಸರಿಯಾದ ನಕಲು' ಎಂದಿದೆ.

ತಾಮ್ರಪತ್ರ 3

16 ಸಾಲುಗಳನ್ನು ಹೊಂದಿದ ಈ ತಾಮ್ರಪತ್ರವು ಸಹಿತ ಎರಡನೆಯ ತಾಮಪತ್ರದ ವಿಷಯವನ್ನು ಒಳಗೊಂಡಿದೆ. ಆದರೆ ಕಾಲದಲ್ಲಿ ಮಾತ್ರ ಸ್ವಲ್ಪ ವ್ಯತ್ಯಾಸವಿದೆ. ಸಣ್ಣಸಿ ದ್ಧಪ್ಪನು ಅರ್ಜಿ ಸಲ್ಲಿಸಿದ ಕಾಲ ಅಂಗೀರಸನಾಮ ಸಂವತ್ಸರ (1794)ದ ಅಶ್ವೀಜ ಶುದ್ಧ 1. ಕೊನೆಯಲ್ಲಿ ಕುಮಾರ ರಾಘವರಾಜದೇವನ ಉಲ್ಲೇಖವಿದೆ.

ಹೀಗೆ ಈ ಮೂರು ತಾಮ್ರಪತ್ರಗಳು ಗಾದಿಗನೂರು ಶ್ರೀ ರೇವಣಸಿದ್ದೇಶ್ವರ ಮಠದ ಗುರುಗಳಾದ ಒಡೆಯರ ಸಣ್ಣಸಿದ್ಧಪ್ಪನಿಗೆ ಸಂಬಂಧಿಸಿದ ವಿವರಗಳನ್ನು ನೀಡುತ್ತವೆ. ಈ ಗಾದಿಗನೂರು ಗ್ರಾಮವು ಹೊಸಪೇಟೆ ಬಳ್ಳಾರಿ ಮುಖ್ಯರಸ್ತೆಯಲ್ಲಿ ಹೊಸಪೇಟೆ ಯಿಂದ ಮೂವತ್ತು ಕಿ.ಮೀ. ಅಂತರದಲ್ಲಿದೆ. ಇಲ್ಲಿ ಸರೂರು ರೇವಣ ಸಿದ್ಧೇಶ್ವರ ಮಠದ ಶಾಖಾಮಠವಿದೆ. ಈ ಮಠಕ್ಕೆ 1862ರಲ್ಲಿ ಗುರುಗಳಾಗಿದ್ದವರು ಒಡೆಯರ ಸಣ್ಣಸಿದ್ಧಯ್ಯನವರು. ಇವರು ಮೂಲತಃ ದೇವಲಾಪುರದವರು. ಸಣ್ಣಸಿದ್ಧಯ್ಯನವರ ತಂದೆ ಬಸಪ್ಪ, ಆತನಿಗೆ ತಿಮ್ಮಪ್ಪ, ಹಿರೇಸಿದ್ಧಪ್ಪ ಮತ್ತು ಸಣ್ಮಸಿದ್ಧಪ್ಪ ಎಂಬ ಮೂವರು ಮಕ್ಕಳಿದ್ದ ಸಂಗತಿ ಈ ತಾಮ್ರಪತ್ರಗಳಿಂದ ಗೊತ್ತಾಗು ತ್ತದೆ. ಪರಂಪರಾನುಗುತವಾಗಿ ಈಗಲೂ ಈ ಮನೆತನದ ಒಡೆಯರೇ ಗಾದಿಗನೂರು ಮಠಕ್ಕೆ ಗುರುಗಳಾಗಿದ್ದಾರೆ. ಈಗ ಶ್ರೀ ಸಿದ್ಧಯ್ಯಸ್ವಾಮಿ ಒಡೆಯರ ಎಂಬುವವರು ಗುರುಗಳಾಗಿದ್ದಾರೆ. ಗಾದಿಗನೂರು ಸುತ್ತಮುತ್ತಲಿನ 33 ಹಳ್ಳಿಗಳಲ್ಲಿರುವ ಕುರುಬರ ಮನೆತನಗಳು ಈ ಮಠದ ವ್ಯಾಪ್ತಿಗೆ ಬರುತ್ತವೆ.

ಗಾದಿಗನೂರು, ದೇವಲಾಪುರಗಳು ವಿಜಯನಗರ ಪ್ರದೇಶದಲ್ಲಿರುವುದರಿಂದ ವಿದ್ಯಾನಗರ ಸಂಸ್ಥಾನ ಹಾಗೂ ವಿದ್ಯಾನಗರ ಸರಕಾರ ಎಂದು ಪ್ರಾರಂಭಗೊಳ್ಳುವುದು ಈ ತಾಮ್ರಪತ್ರಗಳ ವಿಶೇಷತೆಯೆಂದೇ ಹೇಳಬೇಕು. ಜೊತೆಗೆ ಇಲ್ಲಿ ಉಕ್ತಗೊಂಡ

ಸ್ವಾಮಿರಾವು ಮುಜುಮದಾರ, ನಂದ್ಯಾಲು ವೆಂಕ್ಕಟ ರಾಮರಾಜ ಪ್ರಧಾನಿ, ಕುಮಾರ ರಾಘುವರಾಜದೇವ ಹೆಸರುಗಳು ಸಹ ಕುತೂಹಲಕಾರಿಯಾಗಿವೆ. ಬಹುಶಃ ಇವರು ಸ್ಥಾನಿಕ ಅಧಿಕಾರಿ, ಪ್ರಧಾನಿಗಳು ದಳವಾಯಿಗಳಾಗಿರಬಹುದು. ವೆಂಕಟ ರಾಮರಾಜನು ಆನೆಗೊಂದಿ ಸಂಸ್ಥಾನದಲ್ಲಿ ಪ್ರಧಾನಿಯಾಗಿದ್ದನೆಂದು ಬನವಾಶಿ ಸ್ಥಳದ ಕೈಫಿಯತ್ತು ತಿಳಿಸುತ್ತದೆ.[5] ಈ ಕುರಿತು ಹೆಚ್ಚಿನ ಅಧ್ಯಯನ ನಡೆಯಬೇಕಾಗಿದೆ.

ತಾಮ್ರದ ಗುರುತಿನ ಬಿಲ್ಲೆಗಳು

ಒಡೆಯರು ಭಕ್ತರ ಮನೆಗೆ ಹೋಗುವಾಗ ಅಥವಾ ಸಾಮಾಜಿಕ ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸಬೇಕಾದರೆ ಇವುಗಳನ್ನು ಕಡ್ಡಾಯವಾಗಿ ಕೈಗೆ ಕಟ್ಟಿಕೊಂಡೇ ಹೋಗಬೇಕು. ಇವುಗಳಿಗೆ ಒಡೆಯರು ``ಜಮೆದಾರ ದವಾಲಿ" ಎಂದು ಕರೆಯುತ್ತಾರೆ. ಇವುಗಳಲ್ಲಿ ಒಡೆಯರ ಹೆಸರು ಮತ್ತು ಊರು, ಗುರುತನದ ಹಕ್ಕುದಾರಿಕೆಯನ್ನು ನೀಡಿದ ದಿನಾಂಕ ಇತ್ಯಾದಿ ವಿವರಗಳಿರುತ್ತವೆ. ಅಂಥ ಎರಡು ಬಿಲ್ಲೆಗಳು ದೇವಲಾಪುರದ ಸಿದ್ಧಯ್ಯನವರ ಮನೆಯಲ್ಲಿವೆ. ದೇವನಾಗರಿ ಲಿಪಿಯಲ್ಲಿರುವ ಆ ಬಿಲ್ಲೆಯ ವಿವರಗಳು ಓಗಿವೆ.

ಬಿಲ್ಲೆ 1

ಶ್ರೀ

ಶ್ರೀ ರೇವಣಸಿದ್ದೇಶ್ವರ

ಹಾಲುಮತಾಚಾರ

ಸರೂರುಮಠದ

ಬಸಯ್ಯನವರು

ನವೆಂಬರ್ 7, ಸನ್ 1864

ಸಾ. ದೇವಲಾಪುರ, ತಾಲ್ಲೂಕು ಹೊಸಪೇಟೆ, ಜಿಲ್ಲಾ ಬಳ್ಳಾರಿ.

ಈ ಬಿಲ್ಲೆಗಳ ನೆರವಿನಿಂದ ಮಠ, ಆ ಮಠದ ಗುರುವಿನ ಹೆಸರು, ಒಡೆತನ ದೊರಕಿದ ಕಾಲ ಇತ್ಯಾದಿ ವಿಷಯಗಳನ್ನು ತಿಳಿದುಕೊಳ್ಳಬಹುದು.[6] ವ್ಯಾಪಕ ಸರ್ವೇಕ್ಷಣೆ ನಡೆಸಿ ಇಂಥ ಅನೇಕ ತಾಮ್ರಪತ್ರಗಳು ಮತ್ತು ಬಿಲ್ಲೆಗಳನ್ನು ಶೋಧಿಸಿ ಸಂಗ್ರಹಿಸಿ ಅಧ್ಯಯನಕ್ಕೊಳಪಡಿಸಿದಾಗ ಕುರುಬರ ಗುರುಪರಂಪರೆ, ಚರಿತ್ರೆ ಹಾಗೂ ಸಂಸ್ಕೃತಿಯ ಬಗೆಗೆ ಹೊಸ ಸಂಗತಿಗಳು ತಿಳಿದುಬರುವ ಸಾಧ್ಯತೆಗಳಿವೆ. ಮೂರೂ ತಾಮ್ರಪತ್ರಗಳ ಪಠ್ಯಗಳನ್ನು ಹೆಚ್ಚಿನ ಓದಿಗಾಗಿ ಇಲ್ಲಿ ಕೊಡಲಾಗಿದೆ.

ತಾಮ್ರಪತ್ರ 1

ವಿದ್ಯಾನಗರಾ

1. ಶ್ರೀಮನ್ಮಹಾದೇವಾಧಿದೇವವೀವ ಶಿಖಾಮಣಿ ದೇವದೇ(ವ)ವಂದಿತ ತ್ರಿಭುವನ
2. ನ ರಕ್ಷಾಮಣಿ ಪರಮಾನಂದ ಪರಬ್ರಂಹ್ಮಾ ನಿಗಮಗೋಚರ ಜಟಾಜೂ
3. ಟ ನಾಗ ಚರ್ಮಾಂಬರ ನಂದಿವಾಹನ ನರನಾಗ ಮುನಿವಂದಿತ ರಜತ ಗಿ
4. ರಿ ನಿವಾಸ ರಾಜಶೇಖರ ಶಿವಲಿಂಗ ಕೊಲ್ಲಿಪಾಕಿ ಗೌರಿಸೋಮೇಶ್ವರ
5. ದೇವರವರು ಶ್ರೀರೇವಣಸಿದ್ದೇಶ್ವರ ಸಾಂಪ್ರದಾಯಕರಾದಂತ ಸ
6. ರೂರುಮಠ ಗಾದಿಗನೂರು ಮಠಕ್ಕೆ ಕಾರಣಕರ್ತರಾದಂತ ವಡೇರ ಸಣ್ಣ
7. ಸಿದ್ಧಯ್ಯನವರ ಪಾಧಪದ್ಮಂಗಳ ಸನ್ನಿಧಾನಕ್ಕೆ| ತಮ್ಮ ಕಾರುಣ್ಯ
8. ಭಕ್ತರಾದಂತಾ ಚಿತ್ರಕಲ್ಲು ದೊಡ್ಡಯ್ಯ ಗುತ್ತಿ ತಿಮ್ಮಯ್ಯಯೊರೂರು
9. ಮಲ್ಲಯ್ಯ ಗದ್ವಾಲಿ ರಾಮಯ್ಯ ಹರೇಸಮುದ್ರದ ನೆಂಬೆಣ್ಣ ಹೊಸಪ್ಯಾಟಿ ಲಿಂಗಣ್ಣ
10. ವುರುಕುಂದಿ ಹೇಮಯ್ಯ ರಾಯದುರ್ಗದ ಹುಚ್ಚಯ್ಯ ವಂದವಾಗಲ ಬೀರಯ್ಯ
11. ಯೀ ಸಮಸ್ತ ದೇವಚಾರದವರು ಬರಕೊಂಡ ವಿಜ್ಞಾಪನೆಯೆಂದರೆ| ನಮ್ಮ
12. ಹಾಲುಮತಸ್ತ ಜನರ ಪೈಕಿ ಸಂಡೂರು ಕರಿಬಸಣ್ಣನು ನಮ್ಮ ಗುರುವುಗ
13. ಳಾದ ವಡೇರ ಸಣ್ಣಸಿದ್ಧಯ್ಯನವರಿಗೆ ಪ್ರತಿ ವರುಷದಲ್ಲಿ ನಮ್ಮ ಕುಲಾಚಾರ
14. ದಲ್ಲಿ ಗುರುವುಗಳಿಗೆ ವಣ ಮಗ್ಗ 1ಕ್ಕೆ ರು 1 ಅಕ್ಷರದಲ್ಲು ಚಲಾವಣೆ ವಂದು ರೂ
15. ಪಾಯಿ ಯಿದರ ಶಿವಾಯ8 ಆ ಯತ್ತಿನ ಕಮತಕ್ಕೆ14 ಗಿದ್ದನ ದನಸ ಮೂರು
16. ಮೂರು ಕುಯ್ಯಲಿಗೆ ವಂದು ಕುರಿ ಆಂಗುವಂದು ಜಡೇಮರಿ ಲಗ್ನ 1ಕ್ಕೆ ಐದು
17. ಟೆಂಕೆ ರೊಕ್ಕ ಯಿ ಪ್ರಕಾರ ಪ್ರತಿ ವರುಷದಲ್ಲಿ ಸಮಸ್ತವಾದ ಹಾಲುಮತ
18. ಸ್ತ ಜನರು ನಮ್ಮ ಗುರುವುಗಳಿಗೆ ನಡೆಸಿಕೊಡಬೇಕು| ಪ್ರತಿ ವರುಷದಲ್ಲಿ ವೊ
19. ಲೆ ಬರದ ಪ್ರಕಾರಕ್ಕೆ ಮಾಘಮಾಸಕ್ಕೆ ಕೊಡೊ ಹಾಂಗೆ ವಡಂಬರಿಸಿ ಆಗ ಗುರುವುಗ
20. ಳು ನಮ್ಮ ದೈವಾಚಾರದವರನ್ನು ಕರಸಿ ಹೇಳಿದ್ದೇನೆಂದರೆ ಮುಂದೆದಾರವರು ಶಿ
21. ಷ್ಯರು ತಿರಿಗಿ ಬಿದ್ದರಾಯಿತೊ ಯಿದೇ ಪ್ರಕಾರ ನಡಸಿಕೊಡುತ್ತಯಿದ್ದೇವೆಂ
22. ದು ಬರಸಿಕುಂಟು ಯಿರೋದಲ್ಲದೇ ತ್ರಿಶಾಸನ ಪತ್ರ ಸಹಿ. ಸ್ವಸ್ತಿಶ್ರೀ ವಿಜಯಾಭ್ಯು
23. ದಯ ಶ್ರೀಮನ್ಮಹಾ ಶಾಲಿವಾಹನ ಶಖವರುಷಗಳು 1794ನೆಯ ಸಂ| ರದ ಚಂದ 3ನೇ ತೇ
24. ದಿ ತ್ರಿಶಾಸನ ಪತ್ರ ಸಹಿ||ವಿದ್ಯಾನಗರಾ||

ತಾಮ್ರಪತ್ರ 2
ವಿದ್ಯಾನಗರ ಸರಕಾರದಿಂದ

1. ಪ್ರಮೋದೂತ ಸಂ|ರದ ಮಾಘ ಶು| 8ಯಲ್ಲು ಕುರುಬರ ಗುರುವು ವ
2. ಡೇರ ಬಸಪ್ಪನ ಮಕ್ಕಾದ ತಿಮ್ಮಪ್ಪ ಹಿರೇಸಿದ್ಧಪ್ಪ ಸಂಣಸಿದ್ಧಪ್ಪಯಿ ಪೈ
3. ಕಿ ಸಂಣಸಿಸಿದ್ಧಪ್ಪ ಯೀ ಸಂಸ್ಥಾನದಲ್ಲಿ ಹಾಜರು ಆಗಿಯಿದ್ದು ಅರ್ಜಿ ಗು
4. ಜರಾಯಿಸಿದ ಕಾರಣ ಯೀ ಸಂಣಸಿದ್ಧಪ್ಪಗೆ ಬರ್ಸಿ ಕೊಟ್ಟ ತಾಕಿದು ಅ
5. ದಾಗಿ ನೀವು ಪೂರ್ವದ ಲಾಗಾಯ್ತು ಕುರುಬರ ಕುಲಕ್ಕೆ ನಿಂಮ್ಮ ಹಿರೇ
6. ರ ಲಾಗಾಯ್ತು ಗುರುತ್ವ ಅನುಭವಿಸುತ್ತಾಯಿದ್ದು ಯೀಗ ಕೆಲವು
7. ಕುರುಬ ಜನರು ಪೂರ್ವದ ಪ್ರಕಾರ ನಡಕೊಂಬುವುದಕ್ಕೆ ತಕರಾರು ಮಾಡು
8. ತ್ತಲಿ ಸಂಸ್ಥಾನದಿಂದ ತಾಕಿದು ದಯಪಾಲಿಸಬೇಕೆಂದು ಕೇಳಿಕೊಂಡ
9. ಕಾರಣ ಪೂರ್ವದಯಿಂದ ನಡಕೊಳ್ಳುತ್ತ ಬಂದ ಯಿರುವ ಪದ್ಧತಿ ಪ್ರಕಾ
10. ರ ಯಾವತ್ತು ವಿಚಾರಿಸಲಾಗಿ ನೀನು ಹಿರೇರ ಲಾಗಾಯ್ತು ಹಾಲುಮತ
11. ಕುಲಕ್ಕೆ ಗುರುವುಯಂಬುವಂತೆ ಸಾಬೀತು ಆಯ್ತು ಆದ ಕಾರ
12. ಣ ಹಾಲುಮತ ಕುಲ ಅನಲಾಗಿ ಕುರುಬರ ಕುಲದಲ್ಲಿ ಯಿಂನ್ನೂ ಯಿ
13. ಕುಲದ ಪೈಕಿ ಸೇರಿದ ಕುಲಗಳ ಜನರು ಯಾವತ್ತರಿಂದಲಿ ಗುರುತ್ವ
14. ಮರಿಯಾದಿಗಳು ಸಲ್ಲುವಂತ ಮಾಮೂಲು ಪದ್ಧತಿ ಪ್ರಕಾರ
15. ಆ ಯೀ ಜನರಿಂದ ಕಾಣಿಕೆ ತೆಗೆದುಕೊಳ್ಳುತ್ತಾ ನಿಂಮ್ಮ ಕುಲಾ ಮ
16. ತಾಚಾರ ಪದ್ಧತಿಗೆ ವಿರೋಧವಾಗದಂತೆ ನಡಕೊಂಡು ಯಿರತಕ್ಕದ್ದೆಂದು
17. ತಿಳಿಯೊದು||ದ|| ಸ್ವಾಮಿರಾವು ಮುಜಮದಾರು||
18. ತಾ|| 29ನೇ ಜನೆವರಿ ಸನ್ 1871 ಯಿಸ್ವಿ ಶಾಲಿವಾಹ
19. ನ ಶಖ 1792ನೇ ರುಜುವು ನಂದ್ಯಾಲು ವೆಂಕ್ಕಟ
20. ರಾಮರಾಜ ಪ್ರಧಾನಿ ಸಂವಸ್ಥಾನು ವಿದ್ಯಾನಗರಗಳವರು||

ತಾಮ್ರಪತ್ರ 3

ವಿದ್ಯಾನಗರ ಸಂಸ್ಥಾನದಿಂದಾ

1. ಅಂಗೀರಸನಾಮ ಸಂ|| ರದ ಅಶ್ವೀಜ ಶುದ್ಧ 1ಯಲ್ಲು ಕುರುಬರ ಗುರುವು ವಡೇರ ಬಸಪ್ಪನ ಮಗನಾದ ಸಂಣ
2. ಸಿದ್ಧಪ್ಪಯಂಬವನು ಯೀ ಸಂಸ್ಥಾನದಲ್ಲಿ ಹಾಜರು ಆಗಿ ಅರ್ಜಿ ಗುಜರಾಯಿಸಿದ ಕಾರಣ ಯೀ ಸಂಣಸಿದ್ದ
3. ಪ್ಪಗೆ ಬರಸಿ ಕೊಟ್ಟ ತಾಕಿದು ಆದಾಗಿ | ನೀನು ಪೂರ್ವದ ಲಾಗಾಯಿತು ಕುರುಬರ ಕಾಲಕ್ಕೆ ಗುರುತ್ವ ಅನುಭವಿಸು
4. ತ್ವಯಿದ್ದು ಯೀಗ ಕೆಲವು ಕುರುಬ ಜನರು ಪೂರ್ವದ ಪ್ರಕಾರ ನಡಕೊಂಬುವುದಕ್ಕೆ ತಕರಾರು ಮಾಡುತ್ತಾರೆ| ಸಂ
5. ಸಂಸ್ಥಾನದಿಂದ ತಾಕಿದು ದಯಪಾಲಿಸಬೇಕೆಂದು ಕೇಳಿಕೊಂಡ ಕಾರಣ| ಪೂರ್ವದಿಂ
6. ದ ನಡಕೋತ ಬಂದುಯಿರುವ ಪದ್ಧತಿ ಯಾವತ್ತು ವಿಚಾರಿಸಲಾಗಿ ನೀನು ನಿಂನ್ನ
7. ಹಿರೇರ ಲಾಗಾಯಿತು ಯೀ ಹಾಲುಮತ ಕುಲಾ ಅನಲಾಗಿ ಕುರುಬರ ಕುಲ
8. ಕ್ಕೆ ಗುರುವೆಂಬುವಂತೆ ಸಾಬೀತಾದ ಕಾರಣ ಯೀ ಕುರುಬರ ಕುಲವು ಯಿ
9. ನ್ನು ಯೀ ಕುಲದ ಪೈಕಿ ಸೇರಿದ ಕುಲಗಳ ಜನರ ಯಾವತ್ತರಿಂದಲೂ ಗುರು
10. ತ್ವ ಮರ್ಯ್ಯಾದಿಗೆ ಸಲವಂಥಾ ಮಾಮೂಲು ಪದ್ಧತಿ ಪ್ರಕಾರ ಆ
11. ಯಾ ಜನರಿಂದ ಕಾಣಿಕೆ ತೈಗೆದುಕೊಳ್ಳುತ್ತ ನಿಂಮ್ಮ ಕುಲಾಚಾರ ಮ
12. ತದ ಪೂರ್ವಪದ್ಧತಿಗೆ ವಿರೋಧವಾಗದಂತೆ ನಡಕೊಂಡು ಯಿರತಕ್ಕ
13. ದ್ದೆಂದು ತಿಳಿಯೋದು. ಸನ್ 1872ನೆ ಯಿಸಿವಿ ಮಾಹೆ ಆಗಟೂ
14. ಬರ ಪೂಚರಾಚು ಕುಮಾರ ರಾಘವರಾಜದೇವ
15. ಮಹರಾರು ಚಂದು 3 ತೇದಿ ಶಾಲಿವಾಹನ ಶಕ
16. ಬು ದಳವಾಯಿಗಳ ರುಜುವು 1794

ಟಿಪ್ಪಣಿಗಳು

1. ಈ ಮೂರು ಸಂಪ್ರದಾಯಗಳ ಕುರಿತು ನೋಡಿರಿ: ಅ. ರೇವಣಸಿದ್ಧ ಪರಂಪರೆಯ ಹಾಲುಮತ ಮಠಗಳು, ಇತಿಹಾಸ ದರ್ಶನ ಸಂಪುಟ ೨೦, ಪುಟ 305, ಆ. ಅಮೋಘ ಸಿದ್ಧ ಪರಂಪರೆಯ ಹಾಲುಮತ ಮಠಗಳು, ಇತಿಹಾಸ ದರ್ಶನ ಸಂಪುಟ 21, ಪುಟ 250, ಇ. ಸಿದ್ಧಮಂಕಚರಿತೆ, ಸಂ.ಎಂ.ಎಂ.ಕಲಬುರ್ಗಿ, ವೈ.ಸಿ.ಭಾನುಮತಿ, ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ, 2004, ಈ. ಕುರುಬರಗುರು ಒಡೆಯರು: ಸಾಂಸ್ಕೃತಿಕ ಅಧ್ಯಯನ, ಬಿ.ಜಿ.ಬಿರಾದಾರ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿವಿ ಹಂಪಿ

2. ಶಾಂತಮುತ್ತಯ್ಯನ ವಿವರಗಳಿಗಾಗಿ ನೋಡಿ: ತಗರ ಪವಾಡ, ಸಂ.ಎಂ.ಎಂ. ಕಲಬುರ್ಗಿ, ಸಿ.ಕೆ.ಪರಶುರಾಮಯ್ಯ, ಎಫ್.ಟಿ.ಹಳ್ಳಿಕೇರಿ, ವಿದ್ಯಾನಿಧಿ ಪ್ರಕಾಶನ, ಗದಗ, 2005

3. ಈಗಾಗಲೇ ನಾಲ್ಕು ತಾಮಪತ್ರಗಳನ್ನು ಶೋಧಿಸಿ ಪ್ರಕಟಿಸಲಾಗಿದೆ. 1. ತಗರ ಪವಾಡ ಕೃತಿಯ ಅನುಬಂಧ ಹಾಗೂ ವಿಜಯನಗರ ಅಧ್ಯಯನ ಸಂಪುಟ 12, ಪುಟ 76

4. ಇಲ್ಲಿ ಉಕ್ತವಾದ ಹೆಸರುಗಳು ಚಳ್ಳಕೆರೆಯಲ್ಲಿ ದೊರೆತ ತಾಮಪತ್ರದ ನಕಲು ಪ್ರತಿಯಲ್ಲಿಯೂ ಉಲ್ಲೇಖಗೊಂಡಿವೆ. ನೋಡಿ. ವಿಜಯನಗರ ಅಧ್ಯಯನ ಸಂಪುಟ 12., ಪುಟ 76

5. ಕರ್ನಾಟಕದ ಕೈಫಿಯತ್ತುಗಳು, ಸಂ.ಎಂ.ಎಂ.ಕಲಬುರ್ಗಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1994

6. ಹಾಸನ ಜಿಲ್ಲೆಯ ಅಣತಿಕೋಡಿಹಳ್ಳಿ ಮಠದ ಗುರುಗಳಾದ ಒಡೆಯರ ಸಿದ್ಧಲಿಂಗಯ್ಯನವರಲ್ಲಿಯೂ ಕನ್ನಡ ಲಿಪಿಯಲ್ಲಿರುವ ಒಂದು ಬಿಲ್ಲೆ ಇದೆ. ಶ್ರೀಮತ್ಕುರುಬ ಮತಸ್ಥಾಪಕ ಶ್ರೀ ರೇಣುಕಾಚಾರ್ಯ ವಂಶೀಯ ಶ್ರೀ ಸರವೂರ ಮಹಾಸಂಸ್ಥಾನ ಶಾಖಾ ಶ್ರೀ ಅಣತಿಮಠ ಸಿಂಹಾಸನ, ಮೈಸೂರು ದೇಶ, 109

೪. ನೆಲಮಂಗಲ ತಾಲ್ಲೂಕಿನಲ್ಲಿ ವಿಜಯನಗರ ಅರಸರ ಕಾಲದ ಶಾಸನಗಳು

ಡಾ. ಎಚ್.ಎಸ್.ಗೋಪಾಲರಾವ್

Harihara of Vijayanagara was preparing to occupy the Hoysala-nad. Possibly as early as 1340 he invaded the modern Nelamangala taluk of the Bangalore district, retiring perhaps soon afterwards, to return four years later.[1] ಈ ಮಾತುಗಳು ಈ ಅಧ್ಯಯನಕ್ಕೆ ಪ್ರೇರಣೆ.

The Kukkalanadu Mahaprabhus were a minor dynastry under Hoysalas. Their records are found in villages of Bangalore taluks bordering on Magdi and in parts of Nelamangala taluk such as Banasavadi and Manthalu. Their span of rule does not exceed one century. They are mentioned for the first time in 1330, and the first ruler mentioned in the Kittanahalli record (Bn 12) is Mayilaya Dandanayaka as administering Kukkalanadu.[2] ವಿಜಯನಗರ ಸಾಮ್ರಾಜ್ಯಕ್ಕೆ ಮೊದಲು ನೆಲಮಂಗಲ ತಾಲ್ಲೂಕಿನ ಕೆಲವು ಭಾಗಗಳು ಹೊಯ್ಸಳ ಸಾಮಂತ ಅಥವಾ ಅಧಿಕಾರಿಗಳ ಅಧೀನವಾಗಿದ್ದುದು ಮೇಲಿನ ಮಾತುಗಳು ಸ್ಪಷ್ಟವಾಗುತ್ತದೆ.

ಬೆಂಗಳೂರು ಜಿಲ್ಲೆಯ ಶಾಸನ ಸಂಪುಟ ಮೊದಲಿಗೆ ಪ್ರಕಟವಾದಾಗ ಇದ್ದ ತಾಲ್ಲೂಕುಗಳು ಮತ್ತು ಹೋಬಳಿಗಳು ಈಗ ಬದಲಾಗಿವೆ. ಆ ಕಾಲಕ್ಕೆ ಹೆಸರಘಟ್ಟ ನೆಲಮಂಗಲ ತಾಲ್ಲೂಕಿನ ಒಂದು ಹಳ್ಳಿಯಾಗಿತ್ತು. ಈಚೆಗೆ ದಾಸನಪುರ ಹೋಬಳಿ ನೆಲಮಂಗಲ ತಾಲ್ಲೂಕಿನಿಂದ ಬೆಂಗಳೂರು ಉತ್ತರ ತಾಲ್ಲೂಕಿಗೆ ವರ್ಗಾವಣೆಗೊಂಡಿದೆ. ಮೊದಲಿಗೆ ಇದ್ದ ನಿಜಗಲ್ಲು, ದೊಡ್ಡಬೆಲೆ, ಮೈಲನಹಳ್ಳಿ ಹೋಬಳಿಗಳು ಈಗ ಅಸ್ತಿತ್ವ ದಲ್ಲಿಲ್ಲ. ನಮ್ಮ ಈಗಿನ ಅಧ್ಯಯನಕ್ಕೆ ಪೂರಕವಾಗುವಂತೆ ಈಗಿನ ನೆಲಮಂಗಲ ತಾಲ್ಲೂಕಿನ ವ್ಯಾಪ್ತಿಯ ಬದಲಿಗೆ ಇಡಿಯಾಗಿ ಹಿಂದಿನ (ಸ್ವಾತಂತ್ರ್ಯಪೂರ್ವ) ನೆಲ ಮಂಗಲ ತಾಲ್ಲೂಕಿನ ವ್ಯಾಪ್ತಿಯನ್ನು ಪರಿಗಣಿಸಲಾಗಿದೆ.

ಕಾಲದಿಂದ ಕಾಲಕ್ಕೆ ಹಲವು ಆಡಳಿತಾತ್ಮಕ ಬದಲಾವಣೆಗಳನ್ನು ಕಂಡಿರುವ ನೆಲಮಂಗಲ ತಾಲ್ಲೂಕು ಹೊಯ್ಸಳ ಸಾಮ್ರಾಜ್ಯದ ಅಳಿವು ಮತ್ತು ವಿಜಯನಗರ ಸಾಮ್ರಾಜ್ಯದ ಆರಂಭಗಳಿಗೆ ಸಾಕ್ಷಿಯಾಗಿತ್ತು. ಈ ಭಾಗದ ಮಯಿಲೆಯ ನಾಯಕನ ಮನೆತನದವರು ಎರಡೂ ಸಂದರ್ಭಗಳಿಗೆ ಸಾಕ್ಷಿಗಳಾಗಿದ್ದರು. ಇವರ ಹಲವು

ಶಾಸನಗಳನ್ನು ಡಾ. ವಸುಂಧರಾ ಫಿಲಿಯೋಜಾ ಅವರು ತಮ್ಮ ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಎಂಬ ಕೃತಿಯಲ್ಲಿ ಆಕರಗಳಾಗಿ ಬಳಸಿಕೊಂಡಿದ್ದಾರೆ. ಈಗ ಬೆಂಗಳೂರು ಉತ್ತರ ತಾಲ್ಲೂಕಿಗೆ ಸೇರಿದ, ಹಿಂದೆ ನೆಲಮಂಗಲ ತಾಲ್ಲೂಕಿನ ಭಾಗವಾಗಿದ್ದ ದಾಸನಪುರ ಹೋಬಳಿಯ ಬೈಲಕೊನೇನಹಳ್ಳಿ ಶಾಸನದ ಕಾಲ ಕ್ರಿ.ಶ. 1329. ಈ ಶಾಸನವು ಹೊಯ್ಸಳ ಮೂರನೆಯ ವೀರಬಲ್ಲಾಳ ದೇವರಸನನ್ನು ಉಲ್ಲೇಖಿಸುತ್ತದೆ. ಆ ಹೊತ್ತಿಗೆ ಕುಕ್ಕಲನಾಡನ್ನು ಆಳುತ್ತಿದ್ದವನು ಉಪ್ಪೂರ ಬಂಮೆಯ ನಾಯಕು. ಕುಕ್ಕಲನಾಡ ಪ್ರಭು ಕಿತ್ತನೆಲೆಯ (ಈಗನ ಕಿತ್ತನಹಳ್ಳಿ) ದೊಡ್ಡನ ಗೌಡರ ಮಕ್ಕಳು ಕುಕ್ಕಲನಾಡೊಗಿನ ಮುದುಗುರೆಯನ್ನು ದಾನವಾಗಿ ಕೊಟ್ಟಿದ್ದಾರೆ. ಅದಕ್ಕೆ ಭಿನ್ನಮಂಗಲದ ಮುಕ್ತಿನಾಥ ದೇವರು ಸಾಕ್ಷಿಯಾಗಿದ್ದಾನೆ.[3] ದಾಸನಪುರ ಹೋಬಳಿ ಕಿತ್ತನಲ್ಲಿಯ ಕ್ರಿ.ಶ. 1330ರ ಶಾಸನ[4]ದ ಮುಖ್ಯ ಉದ್ದೇಶವು ಸಂತಾನರಹಿತ ಕುಟುಂಬಗಳ ಆಸ್ತಿ ಹಂಚಿಕೆಗೆ ಸಂಬಂಧಿಸಿ ದಂತೆ ಇದ್ದರೂ, ಶಾಸನದ ಆರಂಭದಲ್ಲಿ ಪ್ರಸ್ತಾಪಿತನಾಗಿರುವ ಪ್ರತಾಪ ಚಕ್ರವರ್ತಿ ಪೊಯಸಳನನ್ನು ಮೂರನೆಯ ಬಲ್ಲಾಳ ಎಂದು ಗುರುತಿಸಲಾಗಿದೆ. ಆ ಹೊತ್ತಿಗೆ ಅವನು ಅಧಿಕಾರದಲ್ಲಿದ್ದ. ಆಗ ಕುಕ್ಕಲನಾಡನ್ನು ಆಡಳುತ್ತಿದ್ದವನು ಕಂಚಿದೇವಂಣನ ಕುಟುಂಬ ದವನು ಎಂದು ಭಾವಿಸಲು ಅವಕಾಶಗಳಿವೆ. ಈ ಶಾಸನಕ್ಕೆ ಮೂರು ವರ್ಷ ನಂತರದ ಮಂಠಾಳು ಶಾಸನವು ಆ ಭಾಗದ ಆಳ್ವಿಕೆಯನ್ನು ಮಯಿಲೆಯ ನಾಯ್ಕ ಮತ್ತು ಜಂನಯ ನಾಯ್ಕರ ಹೆಸರಿನಲ್ಲಿ ಉಲ್ಲೇಖಿಸಿದೆ.[5] ಆಗ ಮೂರನೆಯ ಬಲ್ಲಾಳ ಆಳುತ್ತಿದ್ದುದು ಹೊಸಬೆಟ್ಟದಲ್ಲಿ. ಅವನ ಮಹಾಸಾಮಂತಾಧಿಪತಿಯಾಗಿ ಕುಕ್ಕಲನಾಡನ್ನು ಆಳುತ್ತಿದ್ದವನು ಮಯಿಲೆಯ ನಾಯಕ ಮತ್ತು ಅವನ ಸಹೋದರ ಜಂನಯ ನಾಯಕ. ಮಯಿಲೆಯ ನಾಯಕನಿಗೆ ನರಲೋಕ ಗಂಡ ಎನ್ನು ವಿಶಿಷ್ಟ ಬಿರುದಿತ್ತು. ಮೇಲೆ ಪ್ರಸ್ತಾಪಿಸಿದ ಎರಡು ಶಾಸನಗಳು ಹೊಯ್ಸಳ ಸಾಮ್ರಾಜ್ಯ ಮತ್ತು ಅಲ್ಲಿನ ಚಕ್ರವರ್ತಿ ಮೂರನೆಯ ಬಲ್ಲಾಳ ನನ್ನು ಉಲ್ಲೇಖಿಸಿರುವುದರಿಂದ ಆ ಸಂದರ್ಭದ ಎಲ್ಲ ರಾಜಕೀಯ ಚಟುವಟಿಕೆಗಳಿಗೆ ಕುಕ್ಕಲನಾಡು ಸಾಕ್ಷಿಯಾಗಿತ್ತು. ಕ್ರಿ.ಶ. 1334ನೆಯ ವರ್ಷದ ದೊಡ್ಡೇರಿಯ ಶಾಸನ[6]ವೂ ಹೊಯ್ಸಳ ವಂಶದ ವೀರಬಲ್ಲಾಳನನ್ನೇ ಉಲ್ಲೇಖಿಸುತ್ತದೆ. ಈ ಹೊತ್ತಿಗೆ ಕುಕ್ಕಲನಾಡಿನ ಅಧಿಕಾರವು ಮಯಿಲೆಯ ನಾಯಕನ ವಂಶಕ್ಕೆ ಹಸ್ತಾಂತರವಾಗಿದ್ದ ಸೂಚನೆಯನ್ನು ದೊಡ್ಡೇರಿಯ ಶಾಸನ ನೀಡಿದೆ. ಕ್ರಿ.ಶ. 1333ರಲ್ಲಿ ಮಹಾ ಸಾಮಂತಾಧಿಪತಿಯಾಗಿದ್ದ ಮಯಿಲೆಯ ನಾಯಕ ಕ್ರಿ.ಶ. 1342ರಲ್ಲೂ ಅದೇ ಹುದ್ದೆಯಲ್ಲಿ ಮುಂದುವರಿದಿದ್ದ. ಆದರೆ ಆಗ ಹೊಯ್ಸಳರ ಬದಲು ವಿಜಯನಗರ ಅರಸರಿದ್ದರು.

ಕ್ರಿ.ಶ. 1333ರಲ್ಲಿ ಹೊಯ್ಸಳ ದೊರೆಯಾಗಿದ್ದವನು ಹೊಯ್ಸಳ ವೀರಬಲ್ಲಾಳ. ಕ್ರಿ.ಶ. 1342ರ ವೇಳೆಗೆ ಹೊಯ್ಸಳರ ಅಧಿಕಾರ ಇರಲಿಲ್ಲ; ಬದಲಿಗೆ ಹರಿಯಪ್ಪ

ಒಡೆಯನ ಅಧಿಕಾರವಿತ್ತು. ಈ ಹರಿಯಪ್ಪನೇ ವಿಜಯನಗರ ಸಾಮ್ರಾಜ್ಯದ ಮೊದಲ ದೊರೆ ಹರಿಹರ. ಪೂರ್ವೋಕ್ತ ಶಾಸನದಲ್ಲಿ ಅವನಿಗೆ ಅರಿರಾಯ ವಿಭಾಡ, ಭಾಷೆಗೆ ತಪ್ಪುವ ರಾಯರ ಗಂಡ, ಚತುಸ್ಸಮುದ್ರಾಧಿಪತಿ ಎಂಬ ಬಿರುದುಗಳಿದ್ದರೂ, ಅವನು ಮಹಾಮಂಡಲೇಶ್ವರ ಎಂದೇ ಸಂಬೋಧಿತನಾಗಿದ್ದಾನೆ. ಇನ್ನೂ ಚಕ್ರವರ್ತಿ ಪದನಾಮದ ಬಳಕೆಯಾಗಿಲ್ಲ. ಆ ಕಾಲಕ್ಕೆ ಈ ಎಲ್ಲ ವಿಷಯಗಳಿಗೆ ಸಾಕ್ಷಿಯಾಗಿದ್ದವನು ಹೊಯ್ಸಳ ವೀರಬಲ್ಲಾಳನ ಮಹಾಸಾಮಂತನೂ ಆಗಿದ್ದ ಮಯಿಲೆಯ ನಾಯಕ. ಹರಿಯಪ್ಪನ ಕಾಲದಲ್ಲೂ ಅವನು ಮಹಾಸಾಮಂತನಾಗಿಯೇ ಕುಕ್ಕಲನಾಡನ್ನು ಆಳಿದ್ದಾನೆ. ಕ್ರಿ.ಶ. 1348ರ ವೇಳೆಗೆ ಬುಕ್ಕಣ್ಣ ಒಡೆಯ ಅಧಿಕಾರದಲ್ಲಿದ್ದುದನ್ನು ಬೊಮ್ಮನಹಳ್ಳಿಯ ಶಾಸನ ಉಲ್ಲೇಖಿಸಿದೆ.[7] ಕ್ರಿ.ಶ. 1356ರವರೆಗೆ ಹರಿಹರನ ಆಳ್ವಿಕೆ ಮುಂದುವರಿದಿತ್ತು ಎಂದು ಈಗಾಗಲೇ ತಿಳಿದಿರುವ ಹಿನ್ನೆಲೆಯಲ್ಲಿ ಹರಿಹರ ಮತ್ತು ಬುಕ್ಕ ಇಬ್ಬರೂ ಅಧಿಕಾರವನ್ನು ಹಂಚಿಕೊಂಡಿದ್ದರು ಎಂದು ಭಾವಿಸಲು ಅವಕಾಶಗಳಿವೆ. ಕ್ರಿ.ಶ. 1346ರ ಸಾದರ ಮಂಗಲದ ತಮಿಳು ಶಾಸನವು ಹರಿಯಪ್ಪ ಒಡೆಯ ಮತ್ತು ಬುಕ್ಕಣ್ಮ ಇಬ್ಬರೂ ಒಟ್ಟಿಗೇ ಆಳುತ್ತಿದ್ದ ವಿಷಯವನ್ನು ಪ್ರಸ್ತಾಪಿಸಿದೆ.[8]

ಮಹಾಸಾಮಂತಾಧಿಪತಿಯಾದ ಮಯಿಲೆಯ ನಾಯಕನ ಆಳ್ವಿಕೆ ಇದ್ದಾಗಲೇ, ಅದೇ ಪ್ರದೇಶಕ್ಕೆ ಸೇರಿದ ಭಟ್ಟರಹಳ್ಳಿ[9] ಮತ್ತು ಹುಲ್ಲೇಗೌಡನಹಳ್ಳಿ[10]ಯ ಶಾಸನಗಳು ವೀರಪ್ಪಣ್ಣ/ವಿರುಪಂಣನಾಯಕನ ಹೆಸರನ್ನು ಉಲ್ಲೇಖಿಸಿವೆ. ಇವನು ಮಹಾಮಂಡಲೇಶ್ವರ ಮಲ್ಲಪಂಣನ ಅಳಿಯ ಎಂದು ಭಟ್ಟರಹಳ್ಳಿ ಶಾಸನದಿಂದ ತಿಳಿಯುತ್ತದ್ದ. ಈ ಕಾಲಕ್ಕೆ ಮಯಿಲೆಯ ನಾಯ್ಕನ ಆಳ್ವಿಕೆ ಇರಲಿಲ್ಲವೆ ಅಥವಾ ಈ ಭಾಗಗಳು ಕುಕ್ಕಲ ನಾಡಿನ ವ್ಯಾಪ್ತಿಗೆ ಸೇರಿರಲಿಲ್ಲವೆ ಎಂಬ ಪ್ರಶ್ನೆಗಳು ಎದುರಾಗುತ್ತವೆ. ಈ ಪ್ರಶ್ನೆಗಳಲ್ಲಿ ಎರಡನೆಯ ಪ್ರಶ್ನೆ ತಾರ್ಕಿಕವಾಗಿ ಸರಿ ಎನಿಸುತ್ತದೆ. ಮಂಠಾಳು (ಈಗಿನ ಶಿವನಪುರ) ಅಥವಾ ಕೆಂಗನಹಳ್ಳಿ ಕುಕ್ಕಲನಾಡಿನ ಪಶ್ಚಿಮ ಗಡಿಯಾಗಿದ್ದ ಸಾಧ್ಯತೆಗಳಿವೆ. ಈಗಿನ ಭಟ್ಟರಹಳ್ಳಿಯ ಹಿಂದಿನ ಹೆಸರು ಭಟ್ಟಗ್ರಹಾರ.

ಕ್ರಿ.ಶ. 1359ರ ವೇಳೆಗೆ ವಿಜಯನಗರ ರಾಜ್ಯದ ಅಧಿಕಾರದಲ್ಲಿದ್ದವನು ವೀರ ಬುಕ್ಕಣ್ಣ. ಈ ಹೊತ್ತಿಗೆ ಇವರ ಹೆಸರಿನ ಜೊತೆಗೆ ಮಹಾಮಂಡಲೇಶ್ವರ ಎಂಬ ಪದನಾಮ ಸೇರಿಲ್ಲ.[11] ಹೊಯ್ಸಳ ವೀರಬಲ್ಲಾಳನಿಂದ ಹರಿಹರ ಮತ್ತು ಬುಕ್ಕನಿಗೆ ಅಧಿಕಾರ ಹಸ್ತಾಂತರವಾಗಿದೆ ಎಂದು ಊಹಿಸಲು ಅವಕಾಶಗಳಿವೆ. ಆ ಕಾಲಕ್ಕೂ ಮಯಿಲೆಯ ನಾಯಕ ಮತ್ತು ಅವನ ಸಹೋದರರು ಮಹಾಸಾಮಂತ ಪದವಿಯನ್ನು ಹೊಂದಿದ್ದರು. ನೆಲಮಂಗಲ ತಾಲ್ಲೂಕಿನ ಪೂರ್ವ ಭಾಗ ಮಾತ್ರ ಕುಕ್ಕಲನಾಡು ಎಂಬ ಭಾಗವಾಗಿತ್ತು.

ನೆಲಮಂಗಲ ತಾಲ್ಲೂಕಿನಲ್ಲಿದ್ದ ಇತರ ಆಡಳಿತ ಪ್ರದೇಶಗಳೆಂದರೆ, ಮರುಗಲು ನಾಡು, ಮಣ್ಣೆ ಮತ್ತು ಗಳೂರು ಸೀಮೆಗಳು. ಕ್ರಿ.ಶ. 1374ರ ಮುದ್ದಲಿಂಗನಹಳ್ಳಿಯ ಶಾಸನ12 ವು ಸಂಗಮೇಶ್ವರ ರಾಯರ ಕುಮಾರ ವೀರಬುಕ್ಕಣ್ಣ ಒಡೆಯನನ್ನು ಮಹಾಮಂಡಲೇಶ್ವರ ಎಂದೇ ಸಂಬೋಧಿಸಿದೆ. ಆದರೆ ಆ ಹೊತ್ತಿಗೆ ಪೂರ್ಣಾಧಿಕಾರ ವನ್ನು ವಹಿಸಿಕೊಂಡಿದ್ದ. ಮುದ್ದಲಿಂಗನಹಳ್ಳಿಗೆ ಸಮೀಪವೇ ಇರುವ ಸಿಡವಂದದ ಕ್ರಿ.ಶ. 1383ರ ಶಾಸನವು[13] ವೀರ ಬುಕ್ಕರಾಯನನ್ನು ವೀರ ಹರಿಹರರಾಯನ ಕುಮಾರ ಎಂದು ಸಂಬೋಧಿಸಿದೆ. ಕ್ರಿ.ಶ. 1383ರಲ್ಲಿ ಎರಡನೆಯ ಹರಿಹರ ಅಧಿಕಾರದಲ್ಲಿದ್ದ. ಒಂದನೆಯ ಬುಕ್ಕನ ಅಧಿಕಾರ ಕ್ರಿ.ಶ. 1377ಕ್ಕೇ ಮುಗಿದಿತ್ತು. ಎರಡನೆಯ ಬುಕ್ಕನ ಅಧಿಕಾರ ಆರಂಭ ಆದದ್ದು ಕ್ರಿ.ಶ. 1404ರಲ್ಲಿ. ಶಾಸನವು ವೀರಬುಕ್ಕರಾಯನ ಮನೆಯ ನಾಯಕನನ್ನು ಮಾತ್ರ ಪ್ರಸ್ತಾಪಿಸುತ್ತದೆ. ಆದ್ದರಿಂದ, ಆಗ ಬುಕ್ಕರಾಯ ಆಳುತ್ತಿದ್ದ ಎಂದೇನೂ ಭಾವಿಸಬೇಕಾಗಿಲ್ಲ. ಒಂದನೆಯ ಬುಕ್ಕನಿಗೆ ಪ್ರಿಯವಾಗಿದ್ದ ಗೋಪಯ ನಾಯಕ ಮತ್ತು ಇತರರ ಹೆಸರುಗಳು ಪ್ರಸ್ತಾಪವಾಗಿದೆ. ಪೂರ್ವೋಕ್ತ ನಿಡವಂದದ ಶಾಸನವು ಬುಕ್ಕರಾಯನಿಗಿಂತಲೂ ಹೆಚ್ಚಾಗಿ ಗೋಪಯನಾಯಕನನ್ನು ವರ್ಣಿಸಿದೆ. ಇವನು ಅಲ್ಲಪ್ಪನಾಯಕರ ಮಗ. ಗೋಪಾಯನಾಯಕ ಮತ್ತು ಅವನ ಸಹೋದರರು ಮಱುಗಲನಾಡ ಸ್ಥಲದ ನಿಡುವಂದನನ್ನು ಆಳುತ್ತಿದ್ದ. ಆಗ ಸಂಥೆಯನ್ನು ಕಟ್ಟಿಸಿದ ವಿಷಯವನ್ನು ಶಾಸನ ದಾಖಲಿಸಿದೆ. ನೆಲಮಂಗಲ ತಾಲ್ಲೂಕಿನ ಪಶ್ಚಿಮ ಭಾಗವು ಮಱುಗಲು ನಾಡು ಎಂಬ ಹೆಸರಿನಲ್ಲಿ ಪ್ರಸಿದ್ಧಿ ಪಡೆದಿತ್ತು.

ರಾಜಕೀಯವಾಗಿ ಕ್ರಿ.ಶ. 1489ರವರೆಗೆ ಹೆಚ್ಚಿನ ಮಾಹಿತಿ ನೀಡುವ ಯಾವುದೇ ಶಾಸನ ಈವರೆಗೆ ದೊರೆತಿಲ್ಲ. ಕ್ರಿ.ಶ. 1489ರಲ್ಲಿ ಸಾಳುವ ವಂಶದ ನರಸಿಂಗನಾಯಕನ ಉಲ್ಲೇಖವಿರುವ ತಾಳೇಕೆರೆ ಶಾಸನ ಕಂಬಾಳ ಸಿದ್ಧರೆ ಒಡೆಯರಿಗೆ ಕೊಟ್ಟ ದಾನವನ್ನು ದಾಖಲಿಸಿದೆ.[14]

ನಂತರದ ಸುಮಾರು 27 ವರ್ಷಗಳ ಅವಧಿಯಲ್ಲಿ ಅಂತಹ ಐತಿಹಾಸಿಕ ಮಹತ್ವದ ಯಾವುದೇ ಶಾಸನ ಲಭ್ಯವಿಲ್ಲ. ಕ್ರಿ.ಶ. 1516ರ ಒಂದು ತಾಮ್ರ ಶಾಸನವು 15 ಶ್ರೀ ಕೃಷ್ಣದೇವರಾಯನ ಆಳ್ವಿಕೆಯ ಕಾಲಕ್ಕೆ ಸೇರಿದ್ದು, ಆ ಕಾಲಕ್ಕೆ ಪ್ರಸಿದ್ಧವಾಗಿದ್ದ ಹಲವು ತೀರ್ಥಕ್ಷೇತ್ರಗಳ ವಿವರಣೆ ನೀಡುತ್ತಾ, ಅಲ್ಲಲ್ಲಿ ನೀಡಬಹುದಾದ ವಿಶೇಷ ದಾನಗಳನ್ನು ಪ್ರಸ್ತಾಪಿಸಿ, ವಿಶಿಷ್ಟ ಬಿರುದುಗಳ ಕೃಷ್ಣದೇವರಾಯನು 'ಶಾಲಿವಾಹನನಿರ್ಣಿತೇ ಶಕಾಬ್ದೇ ಸಚತುಶ್ಶತೈಃ। ಸಪ್ತತ್ರಿಂಶತ್ ಸಮಾಯುಕ್ತೈಃ ಸಂಖ್ಯಿತೇ ದಶಭಿಃಶತೈಃ। ಧಾತು ಸಂವಸತ್ಸರೇ ಮಾಘೇ ಶಿವರಾತ್ರೇ ದಿನೇಶುಭೇ। ತುಂಗಭದ್ರಾಪಗಾ ತೀರೇ ಶ್ರೀ ವಿರೂಪಾಕ್ಷ ಸಂನಿಧೌ। ಶಿವಗಂಗಾಭಿದಂ ದೇವಸ್ಥಾನಂ ತುಂಗಾಕಕುಗಿರಿಂ । ಸರಂಭೂಷಯೇ ತೇತಸ್ಮೈ ಶ್ರೀ ಗಂಗಾಧರ ಸಂಭವೇ। ದೇಶೇಮಹತಿ ವಿಖ್ಯಾತೇ ಹೊಯಿಸಣಾಖ್ಯ ಸಮನ್ವಿತೇ। ಎಂಬ

ಕಾಲ ಮತ್ತು ಸ್ಥಾನ ನಿರ್ದೇಶನದೊಂದಿಗೆ ಗಂಗಾಧರೇಶ್ವರನಿಗೆ ನೀಡಲಾದ ಗ್ರಾಮಗಳ ಹೆಸರುಗಳು ಸ್ಥಳ ನಾಮಗಳ ಅಧ್ಯಯನಕ್ಕೆ ಪ್ರೇರಣೆ ನೀಡುತ್ತದೆ. ಶಾಸನದಲ್ಲಿ ಉಕ್ತವಾಗಿರುವ ಗ್ರಾಮಗಳ ಹೆಸರುಗಳು ಈ ಕೆಳಕಂಡಂತಿವೆ ಮಸಕಲ್ಲು, ಕೊರಟೀಕರೆ, ತಮ್ಮಡಿಹಳ್ಳಿ, ಚೋಳಮಾದನಹಳ್ಳಿ, ಕಂಬಾಲು, ಹೊಸಹಳಿ, ಬೇಡರಹಳ್ಳಿ, ದೇವೇರ ಹಳ್ಳಿ, ವೀರಸಾಗರ, ಗುಟಗೇರೆ, ಬರಗೇಹಳಿ, ಗೊಳೂರು ಸ್ಥಳದ ಹೊಳಕಲ್ಲು, ಮಾಚನ ಹಳ, ಕೆಂಚನಹಳ್ಳಿ, ಎಲ್ಲವಂಗಳ, ಹುರಲಿಹಳಿ, ಬರದೀ, ತುಮಕೂರು ಸ್ಥಳ, ಕಬ್ಬುಗೆರೆ, ಗಂಗಾ ಸಮುದ್ರ, ಸಂಣೆಹಳಿ, ಹೆಬ್ಬೂರ ಸ್ಥಳ, ಹಣಬೆ ಸ್ಥಳ, ಕಂನಸವಾಡಿ ಇತ್ಯಾದಿ ಗ್ರಾಮಗಳನ್ನು ಕೌಂಡಿನ್ಯ ಗೋತ್ರದ ಮಾಯಣನ ವಂಶದ ಲಿಂಗರಸ ಎಂಬ ವಿಪ್ರನಿಗೆ ನೀಡಲಾದ ವಿವರಗಳಿವೆ. ಆಗ ಕುತಗಟ ಎಂಬ ಗ್ರಾಮವನ್ನು ಕಲ್ಪಿಸಲಾಯಿತೆಂಬ ಸೂಚನೆಯೂ ಇದೆ. ಶಾಸನೋಕ್ತ ಹೆಸರಿನ ಬಹುತೇಕ ಗ್ರಾಮಗಳು ಈಗಲೂ ಅದೇ ಹೆಸರಿನಿಂದ ಉಳಿದಿವೆ. ಕೆಲವು ಸ್ಥಳದ ಹೆಸರುಗಳು ಮಾತ್ರ ಭಾಷಿಕವಾಗಿ ಸಹಜವಾದ ಅಲ್ಪ ಬದಲಾವಣೆಗಳಿಗೆ ಒಳಗಾಗಿವೆ.

ಕ್ರಿ.ಶ. 1521ರ ವೇಳೆಗೆ ಕೆಂಬನಾಯಕನ ಎಂಬುವವನು ಕೆರೆಯನ್ನು ಕಟ್ಟಿಸಿ, ಒಳು ಹೊರವೆಂದು ಕಡಿಮಾ ವೊಡೆಯರಿಗೆ ಕೊಟ್ಟಪುರದ ಶಾಸನದ ಪ್ರಸ್ತಾಪವನ್ನು ಗುಡ್ಡದಹಳ್ಳಿ ಶಾಸನ ಮಾಡಿದೆ.[16] ಶ್ರೀಕೃಷ್ಣದೇವರಾಯನ ಆಳ್ವಿಕೆಯ ಮತ್ತೊಂದು ಶಾಸನ ದಾಸನಪುರದಲ್ಲಿದೆ.[17] ದಾಸನಪುರವೂ ಕುಕ್ಕಲನಾಡಿಗೇ ಸೇರಿತ್ತು. ಈ ಶಾಸನದ ಕಾಲಕ್ಕೆ ಆ ನಾಡನ್ನು ಆಳುತ್ತಿದ್ದವನು ಕೊಮನಾಯಕ. ಅಂದರೆ, ಆ ಮೊದಲು ಆ ಭಾಗದಲ್ಲಿ ಆಳಿ ಪ್ರಖ್ಯಾತರಾಗಿದ್ದ ಮಯಿಲೆಯ ನಾಯಕನ ವಂಶದವರು ಅಸ್ತಿತ್ವದಲ್ಲಿರ ಲಿಲ್ಲ. ಈ ಶಾಸನದಿಂದ ಆ ಕಾಲಕ್ಕೆ ದಾಸನಪುರದಲ್ಲಿ ಒಂದು ತಿರುವೆಂಕಟನಾಥನ ದೇವಾಲಯ ವಿದ್ದ ವಿಷಯ ತಿಳಿಯುತ್ತದೆ. ದಾಸನಪುರಕ್ಕೆ ಸಮೀಪದ ಗುಡ್ಡದಹಳ್ಳಿ ಪ್ರದೇಶವನ್ನು ಕಾಮಾಕ್ಷೀ ದೇವರಾಯನ ವಂಶಸ್ಥರು ಆಳುತ್ತಿದ್ದದನ್ನು ಒಂದು ಶಾಸನ ಉಲ್ಲೇಖಿಸಿದೆ.[18] ಈ ವಂಶದ ತಿಪ್ಪಣ್ಣನಾಯಕರ ಮಗ ಕೆಂಬನಾಯಕ. ಇದೇ ಕೆಂಬನಾಯಕ ಮೂರು ವರ್ಷಗಳ ಹಿಂದೆ ಪುರ ಧರ್ಮ ಶಾಸನ ನೀಡಿದ್ದ ಕಡಿಮಾ ವೊಡೆಯನಿಗೇ ಈ ದಾನವನ್ನೂ ನೀಡಿದ್ದಾನೆ. ಇದೂ ಸಹ ಒಂದು ಪುರಧರ್ಮ ಶಾಸನ. ಕೆಂಬನಾಯಕನ ಪುರಧರ್ಮ ಶಾಸನದ ಉಲ್ಲೇಖವಿರುವ ಎರಡೂ ಶಾಸನಗಳ ಶಾಪಾಶಯಗಳು ಸಾಂಪ್ರದಾಯಿಕ ವಾಗಿಲ್ಲ. ನೆಲಮಂಗಲ ಕಸಬಾ ಹೋಬಳಿಯ ಚಿಕ್ಕಮಾರನಹಳ್ಳಿಯ ಒಂದು ಶಾಸನ ಕೃಷ್ಣದೇವರಾಯನ ಆಳ್ವಿಕೆಯ ಕಾಲದ್ದೇ ಆಗಿದ್ದು, ಅದರಲ್ಲಿ ಆಂಣಾಜಿ ಅಯ್ಯ ಎಂಬ ವ್ಯಕ್ತಿಯ ಕಾರ್ಯಕ್ಕೆ ಕರ್ತರಾದ ಮಂಲರ ನಾಯಕ ಮತ್ತು ಸೋಲೂರು ದೇವರಸರ ಮಗ ಸೋಮೇದೇವರು ತಿರುಮಲ ದೇವರು ಮತ್ತು ವೀರಭದ್ರ ದೇವರುಗಳು ಅಂಗ ರಂಗಭೋಗಗಳಿಗೆ ನೀಡಿದ ಗ್ರಾಮದಾನವನ್ನು ದಾಖಲಿಸಿದೆ.[19] ನೆಲಮಂಗಲ ತಾಲ್ಲೂಕಿನ

ತ್ಯಾಮಗೊಂಡಲೂ ಸಹ ವಿಜಯನಗರ ಅರಸರ ಕಾಲದಲ್ಲಿ ಪ್ರಮುಖವಾಗಿದ್ದಂತೆ ತೋರುತ್ತದೆ. ಇಲ್ಲಿಯ ಒಂದು ತ್ರುಟಿತ ಶಾಸನದ ಕಾಲ ಕ್ರಿ.ಶ. 1526.[20] ಆ ವರ್ಷ ಬಾಣವಾಡಿಯ ಒಬ್ಬ ವ್ಯಕ್ತಿ ನೀಡಿದ ಯಾವುದೋ ದಾನವನ್ನು ಉಲ್ಲೇಖಿಸುವುದು ಶಾಸನದ ಉದ್ದೇಶ. ಕ್ರಿ.ಶ. 1527ರ ಶಕುನಿರಂಗನ ಗುಡ್ಡದ ಶಾಸನದಲ್ಲಿ ಆಳುವ ದೊರೆಯ ಉಲ್ಲೇಖ ಇಲ್ಲವಾದರೂ, ಚಂದ್ರಗ್ರಹಣದ ದಿನ ಚಿಕ್ಕದಾಸರಿಗೆ ತಿರುವೇಂಗಳ ನಾಥ ಪ್ರಸನ್ನನಾದ ಎಂದು ಪವಾಡದಂತಹ ವಿಷಯವೊಂದನ್ನು ದಾಖಲಿಸಿದೆ.[21]

ಶ್ರೀಕೃಷ್ಣದೇವರಾಯನ ನಂತರ ಅಧಿಕಾರಕ್ಕೆ ಬಂದ ಅಚ್ಯುತರಾಯನ ಕಾಲದ ಶಾಸನಗಳು ನೆಲಮಂಗಲ ತಾಲ್ಲೂಕಿನಲ್ಲಿವೆ. ಹಾರೋಕ್ಯಾತನಹಳ್ಳಿಯ ಕ್ರಿ.ಶ. 1523ರ ಒಂದು ಶಾಸನವು ಶಿವರಾತ್ರಿಯ ಪುಣ್ಯಕಾಲದಲ್ಲಿ ಅಚ್ಯುತರಾಯನ ಅಧಿಕಾರಿಗಳಲ್ಲಿ ಒಬ್ಬರಾದ ಮಲ್ಲಪ್ಪ ಅಂಣನವರು ಮಲ್ಲಿಕಾರ್ಜುನ ದೇವರಿಗೆ ಸೊಂಟೇಕೊಪ್ಪ ಸ್ಥಳದ ಹಾರೋಕೇತನಹಳ್ಳಿಯನ್ನು ಬರೆದುಕೊಟ್ಟಿದ್ದಾರೆ.[22]

ಅಚ್ಯುತರಾಯನ ಉಲ್ಲೇಖವಿರುವ ಹೆಸರಘಟ್ಟದ ಚಂದ್ರಮೌಳೇಶ್ವರ ದೇವಾಲಯದ ಶಾಸನದಲ್ಲಿ ಮೂರು ಕಾಲ ಘಟ್ಟದ ಶಾಸನಗಳಿವೆ. ಆದರೆ, ಎಲ್ಲ ಶಾಸನಗಳೂ ಒಟ್ಟಿಗೇ ಬರೆಯಲ್ಪಟ್ಟಿವೆ. ಶಾಸನದಲ್ಲಿ ಉಲ್ಲೇಖಗೊಂಡಿರುವ ಕಾಲ ಕ್ರಿ.ಶ. 1523, 1535 ಮತ್ತು 1536. ಈ ಶಾಸನದಲ್ಲಿ ಅಚ್ಯುತದೇವರಾಯನ ಉಲ್ಲೇಖದ ಜೊತೆಗೆ ಎಲಹಂಕ ನಾಡ ಪ್ರಭುಗಳ ಆಳ್ವಿಕೆಯ ಕಾಲವೂ ಆಗಿದೆ. ಎಲಹಂಕ ನಾಡಿನಲ್ಲಿ, ಶಿವನ ಸಮುದ್ರ ಸೀಮೆ ಇತ್ತು. ಇದು ಬೇಲೂರು ಚಾವಡಿಗೆ ಸೇರಿದ್ದ ಗ್ರಾಮ. ಈ ಸೀಮೆಯ ಕಾಕೋಳು ಸ್ಥಲದ ಹೆಸರುಘಟ್ಟ ಎಂಬ ಸರ್ವಮಾನ್ಯ ಅಗ್ರಹಾರ ದಲ್ಲಿ ಗುಡಿಯನ್ನು ಕಟ್ಟಿಸಿ, ಕಾಶೀಲಿಂಗವನ್ನು ತಂದು ಚಂದ್ರಮೌಳೇಶ್ವರ ದೇವರ ಜೊತೆಗೆ ವಿಘ್ನೇಶ್ವರ ಮತ್ತು ನಂದಿಕೇಶ್ವರ ದೇವರುಗಳನ್ನೂ ಪ್ರತಿಷ್ಠೆ ಮಾಡಿಸಿದ್ದಾನೆ. ಆ ಸಂದರ್ಭದಲ್ಲಿ ನಾನಾ ಗೋತ್ರದ, ನಾನಾ ಸೂತ್ರದ, ನಾನಾ ಶಾಖೆಯ, ನಾನಾ ನಾಮ ಧೇಯದ ಅನೇಕ ವಿದ್ವಾಂಸರಿಗೆ ಅರ್ಕಾವತಿ ನದಿಯ ದಂಡೆಯಲ್ಲಿ ದೇವರ ಸನ್ನಿಧಿಯಲ್ಲಿ ಹಲವು ದಾನಗಳನ್ನು ಕೊಟ್ಟಿದ್ದಾನೆ. ಎರಡನೆಯ ದಾನದ ಕಾಲ ಕ್ರಿ.ಶ. 1535. ಶಾಸನದ ಪ್ರಕಾರ ಸ್ಥಾನಿಕರ ಮನೆಗಳ ನಿವೇಶನವನ್ನು ದಾನ ಮಾಡಲಾಗಿದೆ. ಮೂರನೆಯ ದಾನ ಶಾಸನದ ಕಾಲ ಕ್ರಿ.ಶ. 1536. ಇಲ್ಲಿಯೂ ಮನೆಯ ನಿವೇಶನಗಳ ಪ್ರಸ್ತಾಪವೇ ಆಗಿದೆ. ಹೀಗೆ ಒಬ್ಬನೇ ರಾಜನು ಬೇರೆ ಬೇರೆ ದಿನಾಂಕಗಳಲ್ಲಿ ದಾನ ನೀಡಿದ ಅಪರೂಪವಲ್ಲ ವಾದರೂ, ವಿಜಯನಗರ ಕಾಲ ಮತ್ತು ನೆಲಮಂಗಲ ತಾಲ್ಲೂಕಿನ ಶಾಸನಗಳಲ್ಲಿ ಇಂತಹ ವಿಚಾರಗಳಿರುವುದು ಹೆಚ್ಚು ಗಮನಸೆಳೆಯುತ್ತದೆ. ನಮಗೆ ಈವರೆಗೆ ತಿಳಿದಿರುವಂತೆ ಕ್ರಿ.ಶ. 1535ರಲ್ಲಿ ಅಚ್ಯುತ ದೇವರಾಯನ ಆಳ್ವಿಕೆಯೇ ಮುಂದುವರಿದಿತ್ತು. ಆದರೆ, ನೆಲಮಂಗಲ ತಾಲ್ಲೂಕಿನ ಭಿನ್ನಮಂಗಲದ ಒಂದು ಶಾಸನವು ವಿಜಯನಗರ ಅರಸರಿಗಿದ್ದ

ಬಹುತೇಕ ಎಲ್ಲ ಬಿರುದುಗಳೊಂದಿಗೆ ಕ್ರಿ.ಶ. 1535ರಲ್ಲಿ ಶ್ರೀ ವೇಂಕಟಪತಿ ಮಹಾರಾಯರು ಆಳುತ್ತಿದ್ದ ವಿಷಯವನ್ನು ದಾಖಲಿಸಿದೆ.[23] ಶಾಸನದ ಉದ್ದೇಶವು ಶ್ರೀ ವೇಂಕಟಪತಿಯು ಶ್ರೀವಿರೂಪಾಕ್ಷ ಲಿಂಗನ ಸನ್ನಿಧಿಯಲ್ಲಿ ಕುಕ್ಕಲನಾಡ ಸೀಮೆಯ ಭಿನ್ನಮಂಗಲ ಗ್ರಾಮ ವನ್ನು ವಿಜಯನಗರದ ಮಧ್ಯೆ ಇರುವ ಮಲ್ಲಿಕಾರ್ಜುನ ದೇವರಿಗೆ ದಾನವಾಗಿ ನೀಡಿದ್ದನ್ನು ದಾಖಲಿಸುವುದೇ ಆಗಿದೆ. ಈ ಶಾಸನದಲ್ಲಿ ಉಕ್ತನಾಗಿರುವ ವೇಂಕಟಪತಿ ಯಾರು ಎಂಬ ಬಗ್ಗೆ ಸ್ಪಷ್ಟತೆಯ ಅವಶ್ಯಕತೆ ಇದೆ. ಅಚ್ಯುತರಾಯನಿಗೆ ವೆಂಕಟಾದ್ರಿ ಎಂಬ ಮಗನಿದ್ದ ನಾದರೂ, ಅವನಿಗೆ ಅಧಿಕಾರ ಹಸ್ತಾಂತರ ಮಾಡಿದ್ದಕ್ಕೆ ಸಾಕ್ಷಿಗಳಿಲ್ಲ. ಆದ್ದರಿಂದ ಈ ಶಾಸನದಲ್ಲಿನ ವೇಂಕಟಪತಿಯ ಬಗ್ಗೆ ಚರ್ಚಿಸಲು ಅವಕಾಶಗಳಿವೆ.

ಕ್ರಿ.ಶ. 1542ರ ವೇಳೆಗೆ ರಾಜ್ಯಾಧಿಕಾರವು ಅಚ್ಯುತದೇವರಾಯನಿಂದ ಸದಾಶಿವ ರಾಯನಿಗೆ ಹಸ್ತಾಂತರವಾಗಿತ್ತು. ಆದರೆ, ಆಗ ಸಾಮ್ರಾಜ್ಯದ ನಿರಂಕುಶಾಧಿಕಾರಿಯಾಗಿದ್ದವನು ಅಳಿಯ ರಾಮರಾಯ. ಸದಾಶಿವರಾಯನಿಗೆ ದಾನ ನೀಡುವ ಅಧಿಕಾರವಂತೂ ಇದ್ದುದನ್ನು ನೆಲಮಂಗಲ ತಾಲ್ಲೂಕಿನ ಬಿಲ್ಲನಕೋಟೆಯ ಶಾಸನ ಸ್ಪಷ್ಟಪಡಿಸುತ್ತದೆ. ಸದಾಶಿವರಾಯ ಆಳುತ್ತಿದ್ದಾಗ ವೇದಮಾರ್ಗ ಪ್ರತಿಷ್ಠಾಚಾರ್ಯರಾದ ಅಹೋಬಲದ ಆಚಾರ್ಯರಿಗೆ ನಾಯಕತನಕ್ಕೆ ಪರಿಪಾಲಿಸಿದ ಕೆಲವು ವಸ್ತುಗಳನ್ನು ಆ ಶಾಸನ ದಾಖಲಿಸಿದೆ.[24] ಈ ದಾನವನ್ನು ತಂದೆ ಸದಾಶಿವದೇವ ಮಹಾರಾಯ ಮತ್ತು ತಾಯಿಗೆ ಮಹಾಮಂಡಲೇಶ್ವರ ಅಉಭಳೇಶ್ವರ ದೇಟಿ ಮಹಾ ಅರಸು ನೀಡಿದ್ದಾಗಿ ಶಾಸನದಿಂದ ಸೂಚನೆ ದೊರೆಯುತ್ತದೆ. ಇದೂ ಸಹ ಕಾಲಕ್ಕೆ ರಾಜಕೀಯ ಗೊಂದಲವಿದ್ದ ಸೂಚನೆ ನೀಡುತ್ತದೆ. ಆ ಕಾಲಕ್ಕೆ ಬಿಲ್ಲನಕೋಟೆಯು ಗೊಳೂರ ಸೀಮೆಗೆ ಸೇರಿತ್ತು. ಕ್ರಿ.ಶ. 1551ರ ಬೂದಿಹಾಳಿನ ತಾಮ್ರಶಾಸನವು ತಿರುಮಲರಾಯನು ಪೆನುಗೊಂಡೆಯಿಂದ ಆಳುತ್ತಿದ್ದಾಗ ಹಲವು ಗ್ರಾಮಗಳನ್ನು ದಾನ ನೀಡಿದ್ದನ್ನು ದಾಖಲಿಸಿದೆ. [25] ಆದರೆ, ಆ ಹೊತ್ತಿಗೆ ಇನ್ನೂ ವಿಜಯನಗರ ಸಾಮ್ರಾಜ್ಯದ ಸಂಪೂರ್ಣ ಪತನ ಆಗಿರಲಿಲ್ಲ. ಆದ್ದರಿಂದ ತಿರುಮಲರಾಯ ಪೆನುಗೊಂಡೆಯಿಂದ ಆಳುತ್ತಿದ್ದ ಎಂಬ ವಿಷಯವನ್ನು ಅನುಮಾನಿಸಬೇಕಾಗುತ್ತದೆ. ಸಾಮ್ರಾಜ್ಯ ಅವನತಿಯ ದಿಕ್ಕಿನಲ್ಲಿ ಸಾಗಿದ್ದಾಗ, ಪೆನುಗೊಂಡೆಯನ್ನು ತಾತ್ಕಾಲಿಕ ರಾಜಧಾನಿಯಾಗಿ ಮಾಡಿಕೊಂಡಿರುವ ಸಾಧ್ಯತೆಗಳನ್ನೂ ಅಲ್ಲಗಳೆಯುವಂತಿಲ್ಲ. ಇಂತಹ ಅನುಮಾನಗಳನ್ನು ತಾಮ್ರಶಾಸನಗಳು ಹೆಚ್ಚಾಗಿ ಹುಟ್ಟು ಹಾಕುತ್ತವೆ. ಏಕೆಂದರೆ, ಕ್ರಿ.ಶ. 1560ರ ದೇವರಹೊಸಹಳ್ಳಿ ಶಾಸನವೂ ಸದಾಶಿವರಾಯನ ಆಳ್ವಿಕೆಯನ್ನೇ ಉಲ್ಲೇಖಿಸಿದೆ.[26] ಆಗ ಅವನ ಮಹಾಮಂಡಲೇಶ್ವರರಾಗಿದ್ದವರು ರಾಮರಾಜಯ್ಯ ಮತ್ತು ಶ್ರೀರಂಗರಾಜಯ್ಯ, ಶ್ರೀರಂಗರಾಜಯ್ಯನ ನಾಯಕತನಕ್ಕೆ ಗೊಳೂರು ಸೀಮೆಯ ಕೆಲವು ಸ್ಥಳಗಳು ದೊರೆತಿದ್ದವು.

ಕ್ರಿ.ಶ. 1578ರಲ್ಲೂ ಶ್ರೀರಂಗರಾಯ ಆಳುತ್ತಿದ್ದ ಸೂಚನೆಯನ್ನು ದೊಡ್ಡಬೆಲೆಯ ಶಾಸನ ನೀಡಿದೆ.[27] ಆ ಹೊತ್ತಿಗೆ ರಕ್ಕಸಗಿ-ತಂಗಡಗಿ ಯುದ್ಧ ನಡೆದು, ವಿಜಯನಗರ ಸಾಮ್ರಾಜ್ಯ ಅವನತಿ ಹೊಂದಿತ್ತಾದರೂ, ಪೆನುಗೊಂಡೆಯಿಂದ ಶ್ರೀರಂಗರಾಯ ಆಳುತ್ತಿದ್ದ ಮತ್ತು ರಾಜನ ಕೆಲವು ಅಧಿಕಾರಗಳು ಇನ್ನೂ ಅವನಿಗೆ ಉಳಿದಿದ್ದುದನ್ನು ಪ್ರಸ್ತುತ ಶಾಸನದಿಂದ ತಿಳಿಯಬಹುದು. ಕ್ರಿ.ಶ. 1566ರ ತ್ಯಾಮಗೊಂಡ್ಲು ಶಾಸನವು ಕಾಳಿನಾಯಕ ಎಂಬುವವನು ಕೆಂಪರಾಯನಿಗೆ ಧರ್ಮವಾಗಲಿ ಎಂದು ದಾನ ನೀಡಿದ ವಿಷಯವನ್ನು ಪ್ರಸ್ತಾಪಿಸಿದೆ. [28] ಇದರಿಂದ ಆ ಹೊತ್ತಿಗೆ ಯಲಹಂಕ ನಾಡಿನ ಕೆಂಪೇಗೌಡ ಪ್ರಬಲನಾಗಿದ್ದ ಸೂಚನೆ ದೊರೆಯುತ್ತದೆ.

ಹೊಯ್ಸಳರಿಂದ ವಿಜಯನಗರದ ಅರಸರಿಗೆ ಮತ್ತು ವಿಜಯನಗರದ ಅರಸರಿಂದ ಪಾಳೆಯಗಾರರಿಗೆ ರಾಜಕೀಯವಾಗಿ ಅಧಿಕಾರ ಹಸ್ತಾಂತರ ಆದದ್ದಕ್ಕೆ ನೆಲಮಂಗಲ ತಾಲ್ಲೂಕಿನ ಕೆಲವು ಶಾಸನಗಳು ಸಾಕ್ಷಿಯಾಗಿವೆ.

ನೆಲಮಂಗಲ ತಾಲ್ಲೂಕಿನ ಶಿವಗಂಗೆಯ ರಾಜಕೀಯವಾಗಿ ಎಂದೂ ಪ್ರಮುಖವಾಗಲಿಲ್ಲ. ತೀರ್ಥಕ್ಷೇತ್ರವಾಗಿಯೇ ಉಳಿದ ಶಿವಗಂಗೆಯಲ್ಲಿ ವಿಜಯನಗರದ ಅರಸರ ಕಾಲದ ಕೆಲವು ಶಾಸನಗಳಿವೆ. ಇವುಗಳಲ್ಲಿ ಎಲ್ಲ ಶಾಸನಗಳಲ್ಲೂ ಆಳುವ ರಾಜನ ಪ್ರಸ್ತಾಪವಿಲ್ಲ. ಕೃಷ್ಣದೇವರಾಯ, ಅಚ್ಯುತರಾಯ ಮತ್ತು ಸದಾಶಿವರಾಯರ ಉಲ್ಲೇಖ ಗಳು ಮಾತ್ರ ಒಂದೆರಡು ಶಾಸನಗಳಲ್ಲಿವೆ. ವಿಜಯನಗರದ ಅರಸರ ಕಾಲಕ್ಕೆ ಶಿವಗಂಗೆಗೆ ರಾಜರ ನೆರವು ಮತ್ತು ಭಕ್ತರ ಕೊಡುಗೆಗಳು ಯಥೇಚ್ಛವಾಗಿಯೇ ದೊರೆತಿದೆ. ಕ್ರಿ.ಶ. 1366ರಲ್ಲಿ ಹೆಗ್ಗುಂದದ ಬಿರದಾಸನ ಮಗ ಮಾರದಾಸ ಶಿವಗಂಗೆನಾಥ ದೇವರಿಗೆ ಮಾಚಸಾಲೆಯ ಮುಂದಣ ಅರೆಯ ಮೇಲೆ ದೀಪ ಮಾಲೆಯ ಕಂಬ ನಿಲ್ಲಿಸಿದ್ದನ್ನು ಒಂದು ಶಾಸನ ಉಲ್ಲೇಖಿಸಿದೆ.[29] ಆ ದೀಪಮಾಲೆಯ ಕಂಬ ಈಗಲೂ ಇದೆ. ಕ್ರಿ.ಶ. 1389ರಲ್ಲಿ ಶಿವಗಂಗಿನಾಥ ದೇವರ ಶಿವಗಂಗೆಯ ಗನಹರ ಬಯಿಚಂಣನವರ ಮಕ್ಕಳು ಶಿವಗಂಗಿನಾಥ ಗಿರಿಯ ಮೇಲೆ ಬಸವರಾಜ ದೇವರ ಮೂರ್ತಿಯನ್ನು ನೆಲೆಗೊಳಿಸಿದ್ದನ್ನು ತಿಳಿಸುತ್ತದೆ.[30] ಶಿವಗಂಗೆಯ ಈವರೆಗಿನ ಶಾಸನಗಳು ಶಿವಗಂಗೆನಾಥನ ಉಲ್ಲೇಖ ಮಾಡಿವೆ. ಇದರಿಂದ ಶಿವಗಂಗೆಯು ಕ್ರಿ.ಶ. 14ನೆಯ ಶತಮಾನದವರೆಗೂ ನಾಥಪಂಥದ ಒಂದು ನೆಲೆಯಾಗಿತ್ತು ಎಂದು ಭಾವಿಸಲು ಅವಕಾಶಗಳಿವೆ. ನಂತರದ ಶಾಸನಗಳಲ್ಲಿ ಗಂಗಾಧರೇಶ್ವರನ ಜೊತೆಗೆ ನಾಥ ಪದದ ಬಳಕೆಯಾಗದೆ, ದೇವರು ಎಂಬ ಪದದ ಬಳಕೆಯಾಗಿರುವುದು ಗಮನಾರ್ಹವಾಗಿದೆ.

ಕ್ರಿ.ಶ. 1528ರಲ್ಲಿ ಶ್ರೀಕೃಷ್ಣದೇವರಾಯನ ಆಳ್ವಿಕೆಯ ಕಾಲದಲ್ಲಿ ಚೆಂನಮಲಿ ಸೆಟಿಯರ ಮಕ್ಕಳು ಚಂನಣ ಸೆಟಿಯರು ವಿಜಯಾಪುರದ ರಾಮಚಂದ್ರ ಪಂಡಿತರ ಮಕ್ಕಳು ಚಂದರಸ ಪಂಡಿತರ ಪಾರುಪತ್ಯದಲ್ಲಿ ಪಲ್ಲಕ್ಕಿಯ ಪ್ರದಕ್ಷಿಣಾ ಪಥವನ್ನು ಮಾಡಿಸಿದ್ದಾರೆ.[31]

ಶಿವಗಂಗೆಯ ಗಂಗಾಧರೇಶ್ವರ ಮತ್ತು ಹೊನ್ನಾದೇವಿ ದೇವಾಲಯಗಳ ಸುತ್ತ ಪ್ರಾಕಾರದ ಗೋಡೆಯಂತೆ ಈಗಲೂ ಕಾಣುವ ವಾಸ್ತುವಿನ ನಿರ್ಮಾಣವೇ ಪಲ್ಲಕ್ಕಿಯ ಪ್ರದಕ್ಷಿಣಾ ಪಥ ಎಂದು ಭಾವಿಸಲು ಅವಕಾಶಗಳಿವೆ. ಇದೇ ವರ್ಷ ಕೃಷ್ಣರಾಯನ ಮನೆಯ ಕುದುರೆ ಚಾಕಲ ಬೋವ ಗಂಗಾಧರ ದೇವರಿಗೆ ಏನೋ ದಾನವನ್ನು ಬಿಟ್ಟ ಉಲ್ಲೇಖವೂ ಇದೆ.[32] ಕ್ರಿ.ಶ. 1532ರಲ್ಲಿ ಅಚ್ಯುತರಾಯ ಮಹಾ ರಾಯರಿಗೆ ಧರ್ಮ್ಮಭಾಗಬೇಕು ಎಂಬ ಉದ್ದೇಶದಿಂದ ಅವರ ಕಟ್ಟಿಗೆಯ ಕಾಮಣ್ಣ ನಾಯಕರು ಗಂಗಾಧರ ದೇವರ ಅಭಿಷೇಕ, ಪೂಜೆ, ನೈವೇದ್ಯ, ದೀಪಾರಾಧನೆ, ಅಮೃತಪಡಿಗೆ ಇತ್ಯಾದಿ ಸೇವೆಗಳು ಸರ್ವಕಾಲದಲ್ಲೂ ನಡೆಯಬೇಕೆಂಬ ಕಾರಣದಿಂದ ಶ್ರೀಪತಿಹಳ್ಳಿಯನ್ನು ಪುರವಾಗಿ ಕೊಟ್ಟಿರುವುದನ್ನು ಶಿವಗಂಗೆಯ ಒಂದು ಶಾಸನ ದಾಖಲಿಸಿದೆ.[33] ಈ ಶಾಸನವು ಅಚ್ಯುತರಾಯನ ಹೆಸರಿನ ಜೊತೆಗೆ ಕಠಾರಿ ಸಾಳ್ವ ಎಂದೂ, ಶಿವಗಂಗೆಯನ್ನು ದಕ್ಷಿಣ ಕಾಶಿ ಎಂದೂ ಕರೆದಿರುವುದು ವಿಶೇಷ. ಶಿವಗಂಗೆಯದೇ ಮತ್ತೊಂದು ಶಾಸನ ಸದಾಶಿವದೇವರಾಯನ ಆಳ್ವಿಕೆಗೆ ಸೇರಿದ್ದುದು, ಭಂಡಿಯ ಬಸವಣ್ಣ ನಾಯಕರು ಸದಾಶಿವದೇವರಾಯರಿಗೆ ಪುಣ್ಯವಾಗಬೇಕೆಂದು ಅಮರನಾಯಕತನಕೆ ಪಾಲಿಸಿದ ಮಲೆನಾಡ ಗಳೂರು ಮತ್ತು ಮಂಣೆಯ ಸೀಮೆಯಲ್ಲಿ ಶಿವಗಂಗೆಯ ಗಂಗಾಧರ ದೇವರಿಗೆ, ಹೊನ್ನಮ್ಮನ ಸಿಂಹಾಸನ ಮಹತ್ತಿಗೆ, ಮೇಲಣಗವಿಯ ಸಿಂಹಾಸನಕ್ಕೆ, ಚಿನ್ನದ ಕಂಥೆಯ ಮಠಕ್ಕೆ, ಧರ್ಮದ ಗವಿ, ಬಯಲಬಸವನ ಗವಿಯ ಮತ್ತು ಕಂಬಾಳ ಮರುಳ ಸಿದ್ಧಯ ದೇವರ ಮಠಗಳಿಗೆ ಸಲ್ಲುವ ಪುರಗಳನ್ನು ಗಂಗಾಧರ ದೇವರಿಗೆ ದಾನವಾಗಿ ನೀಡಿದ್ದಾನೆ. ಈ ಸಂದರ್ಭದಲ್ಲಿ ಅವರಿಗೆ ಗಂಗಾಧರನಾಥ ಎಂದು ಸಂಬೋಧಿತನಾಗಿದ್ದ ದೇವರು ಗಂಗಾಧರ ದೇವರು ಎಂದು ಸಂಬೋಧಿತನಾಗಿರುವುದು ಮತ್ತು ಶಿವಗಂಗೆಯ ದಕ್ಷಿಣ ಕಾಶಿಯ ಸ್ಥಾನ ದೊರೆತಿರುವುದು ಮತ್ತು ಈ ಹೊತ್ತಿಗೆ ಅಮರನಾಯಕ ಅಧಿಕಾರವೂ ಉಲ್ಲೇಖ ಗೊಂಡಿರುವುದು ವಿಶೇಷ ಎನಿಸುತ್ತದೆ. ಕ್ರಿ.ಶ. 14ನೆಯ ಶತಮಾನದ ಮೂರನೆಯ ದಶಕದಲ್ಲಿ ಹೊಯ್ಸಳ ಸಾಮ್ರಾಜ್ಯದ ಮಹಾ ಸಾಮಂತರಾಗಿ ನಾಡುಗಳ ಅಧಿಕಾರ ಪಡೆದಿದ್ದ ಕೆಲವು ನಾಯಕರು, ವಿಜಯನಗರದ ಕೊನೆಯ ಕಾಲಕ್ಕೆ ಅಮರನಾಯಕರಾಗಿ ಮುಂದುವರಿದಿರುವುದನ್ನು ಗಮನಿಸಿದಾಗ, ಕರ್ನಾಟಕದಲ್ಲಿ ಪ್ರಾದೇಶಿಕ ಆಡಳಿತಕ್ಕೆ ಅಂದಿನ ರಾಜರು ನೀಡಿದ್ದ ಪ್ರಾಶಸ್ತ್ಯ ಅರಿವಾಗುತ್ತದೆ.

ನೆಲಮಂಗಲ ತಾಲ್ಲೂಕಿನ ವಿಜಯನಗರದ ಕಾಲದ ಶಾಸನಗಳಲ್ಲಿ ಒಂದು ಶಾಸನವು ವಿಶೇಷ. ಉಲ್ಲೇಖಕ್ಕೆ ಅರ್ಹವಾಗಿದೆ. ಅದು ಕರ್ನಾಟಕದಲ್ಲಿ ಭೂಕಂಪದ ಉಲ್ಲೇಖ ವಿರುವ ಒಂದೇ ಒಂದು ಶಿಲಾಶಾಸನ. ನೆಲಮಂಗಲ ತಾಲ್ಲೂಕಿನ ಸೋಂಪುರ ಹೋಬಳಿಯ ಬಿಲ್ಲಿನಕೋಟೆ ಗ್ರಾಮಕ್ಕೆ ಹೊಂದಿಕೊಂಡ ಬಂಡೆಯ ಮೇಲೆ ಈ ಶಾಸನ ಇದೆ. ಇದು 'ಕಲಿವರುಷ 4608ನೆಯ ಪ್ರಭವ ಸಂವತ್ಸರದ ಶ್ರಾವಣ ಸುಧ 6 ಗು ಲು

ಭೂಮಿ ನಡುಗಿತು ವಾರ 4ಕ್ಕೂ ಬಿಲ್ಲಿನ ಕೊಡೆಯ ಖಬಿನಗೆಲಸಿ ವೀರೈಯನ ಮಗ ದೊಡ ವೀರೈಯ ಹೊಯಿದ ಸೇಸನ' ಎಂದು ದಾಖಲಿಸಿದೆ.[34] ಈ ದಿನಾಂಕವು 15-7-1507ಕ್ಕೆ ಸರಿಹೊಂದುತ್ತದೆ. ಅಂದು ಭೂಕಂಪನವಾಗಿದ್ದ ವಿಷಯವನ್ನು ಕಬ್ಬಿಣದ ಕೆಲಸದ ಅಂದರೆ ಕಮ್ಮಾರ ವೀರೈಯ ಹಾಕಿದ್ದಾನೆ.

ಆಕರಗಳು

1. J. Duncan M. Derett, The Hoysalas A Medieval Indian Royal Family, Madras, 1957, pp. 171
2. Suryanath U. Kamath, Ch. Editor, Karnataka State Gazetteer, Bangalore District, Bangalore, 1990, pp 55
3. ಇತಿಹಾಸ ದರ್ಶನ, ಸಂ. 2, ಬೆಂಗಳೂರು, 1987, ಎಚ್.ಎಸ್.ಗೋಪಾಲರಾಯ, ಪು. 58
4. ಅದೇ IX ನೆಲ 12, ಕ್ರಿ.ಶ. 1330
5. ಅದೇ IX ನೆಲ 9, ಕ್ರಿ.ಶ. 1333
6. ಇತಿಹಾಸ ದರ್ಶನ, ಸಂ. 16, 2001, ಡಾ. ಎಂ.ಜಿ.ಮಂಜುನಾಥ್, ಪು. 24
7. ಅದೇ IX (ಸಪ್ಲಿ) ನೆಲ 101, ಕ್ರಿ.ಶ. 1348
8. ಅದೇ IX ಬೆಂಗ 59, ಕ್ರಿ.ಶ. 1346
9. ಅದೇ IX ನೆಲ 15, ಕ್ರಿ.ಶ. 1351
10. ಅದೇ IX ನೆಲ 4, ಕ್ರಿ.ಶ. 1354
11. ಅದೇ IX ನೆಲ 23, ಕ್ರಿ.ಶ. 1359
12. ಅದೇ IX ನೆಲ 53, ಕ್ರಿ.ಶ. 1374
13. ಅದೇ IX (ಸಪ್ಲಿ) ನೆಲ 166, ಕ್ರಿ.ಶ. 1383
14. ಅದೇ IX ನೆಲ 47, ಕ್ರಿ.ಶ. 1489
15. ಅದೇ IX (ಸಪ್ಲಿ) ನೆಲ 90, ಕ್ರಿ.ಶ. 1516
16. ಅದೇ IX (ಸಪ್ಲಿ) ನೆಲ 28, ಕ್ರಿ.ಶ. 1521
17. ಅದೇ IX (ಸಪ್ಲಿ) ನೆಲ186, ಕ್ರಿ.ಶ. 1523
18. ಅದೇ IX ನೆಲ 26, ಕ್ರಿ.ಶ. 1521
19. ಅದೇ IX (ಸಪ್ಲಿ) ನೆಲ102, ಕ್ರಿ.ಶ. 1524
20. ಅದೇ IX (ಸಪ್ಲಿ) ನೆಲ172, ಕ್ರಿ.ಶ. 1526
21. ಅದೇ IX ನೆಲ 58, ಕ್ರಿ.ಶ. 1527
22. ಅದೇ IX ನೆಲ 31, ಕ್ರಿ.ಶ. 1533, 1535 ಮತ್ತು 1536
23. ಅದೇ IX ನೆಲ 2, ಕ್ರಿ.ಶ. 1535
24. ಅದೇ IX ನೆಲ 72, ಕ್ರಿ.ಶ. 1551
25. ಅದೇ IX ನೆಲ4 2, ಕ್ರಿ.ಶ. 1551

26. ಅದೇ IX ನೆಲ 73, ಕ್ರಿ.ಶ. 1560
27. ಅದೇ IX ನೆಲ 79, ಕ್ರಿ.ಶ. 1579
28. ಅದೇ IX ನೆಲ 52, ಕ್ರಿ.ಶ. 1566
29. ಅದೇ IX ನೆಲ 87, ಕ್ರಿ.ಶ. 1336
30. ಅದೇ IX (ಸಪ್ಲಿ) ನೆಲ132, ಕ್ರಿ.ಶ. 1389
31. ಅದೇ IX (ಸಪ್ಲಿ) ನೆಲ116, ಕ್ರಿ.ಶ. 1528
32. ಅದೇ IX ನೆಲ 74, ಕ್ರಿ.ಶ. 1528
33. ಅದೇ IX ನೆಲ 83, ಕ್ರಿ.ಶ. 1532
34. ಅದೇ IX ನೆಲ 71, ಕ್ರಿ.ಶ. 1507

೫. ಹೊನ್ನಾಳಿ ತಾಲೂಕಿನ ಶಿಲಾ ಶಾಸನಗಳಲ್ಲಿ ವಿಜಯನಗರ ಅರಸರು - ಒಂದು ಅಧ್ಯಯನ

ಜಯದೇವಪ್ಪ ಜೈನಕೇರಿ

ಕರ್ನಾಟಕದ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯದ ಕಾಲವನ್ನು ಸುವರ್ಣ ಕಾಲ ಎಂದು ಚರಿತ್ರಕಾರರು ದಾಖಲಿಸಿದ್ದಾರೆ. ಅನೇಕ ವಿದೇಶಿ ಪ್ರವಾಸಿಗರೂ ವಿಜಯನಗರ ವೈಭವವನ್ನು ತಮ್ಮ ಪ್ರವಾಸ ಕಥನಗಳಲ್ಲಿ ಉಲ್ಲೇಖಿಸಿದ್ದಾರೆ. ವಿಜಯನಗರ ಅರಸರು ವಿಶಾಲ ಸಾಮ್ರಾಜ್ಯದ ಚಕ್ರವರ್ತಿಗಳಾಗಿದ್ದರೂ, ಅನೇಕ ಪ್ರಾಂತೀಯ ಅರಸರುಗಳಿಗೆ, ಪಾಳೇಗಾರರಿಗೆ ಸ್ವತಂತ್ರವಾಗಿ ಆಳಲು ಅವಕಾಶ ನೀಡಿದ್ದರು. ಇಂತಹ ತುಂಡರಸರು, ಪ್ರಾಂತ್ಯಾಧಿಕಾರಿಗಳು ಚಕ್ರವರ್ತಿಗಳ ನಿಷ್ಠರಾಗಿದ್ದರು. ಸಾರ್ವಭೌಮ ತೀರ್ಮಾನ ಚಕ್ರವರ್ತಿಗಳದೇ ಆಗಿತ್ತು. ಇಂತಹ ಅರಸರು ನೀಡಿರುವ ದಾನದತ್ತಿಗಳನ್ನು ಶಾಸನಗಳಲ್ಲಿ ವಿಜಯನಗರ ಚಕ್ರವರ್ತಿಗಳ ಹೆಸರಿನಲ್ಲಿ ನೀಡಿರುವುದು ಕಂಡುಬರುತ್ತದೆ. ಪ್ರಾಂತೀಯ ರಾಜರು ಸಾಮ್ರಾಜ್ಯದ ಬೆನ್ನೆಲುಬಾಗಿನಿಂತು, ಅಪತ್ ಕಾಲದಲ್ಲಿ ಚಕ್ರವರ್ತಿಗಳ ಪರವಾಗಿ ಯುದ್ಧ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲ್ಲೂಕಿನ ವಿಜಯನಗರ ಅರಸರ ಶಾಸನಗಳ ವೈಶಿಷ್ಟ್ಯಗಳನ್ನು ಪರಿಶೀಲಿಸುವ ಪ್ರಯತ್ನ ಮಾಡಲಾಗಿದೆ.

ವಿಜಯನಗರ ಇತಿಹಾಸದಲ್ಲಿ ಕ್ರಿ.ಶ. (1336-1562) ಪ್ರಸಿದ್ಧವಾದ ಇಮ್ಮಡಿ ಹರಿಹರ (1377-1404)ನ ಸುಮಾರು ಏಳು ಶಾಸನಗಳಿವೆ. ಹೊನ್ನಾಳಿ ತಾಲ್ಲೂಕಿನ 1) ಈಸರಾಪುರ (1379) 2) ಕುರುವಗಡ್ಡೆ (1390) 3) ಸೌಳಂಗ (1392) 4) ಯರಗನಾಳು (1396) 5) ಸುರುಹೊನ್ನೆ (1397) 6) ಸಿಂಗಟಗೆರೆ (1401) 7) ಸೌಳಂಗ (1402) ದಾಖಲಾಗಿವೆ ಅಲ್ಲದೆ ಇತರ ಚಕ್ರವರ್ತಿಗಳ ಶಾಸನಗಳಿವೆ. ಚಿಕ್ಕಗೋಣಿಗೆರೆಯಲ್ಲಿ 1) ಶಾಸನ ಸಂಖ್ಯೆ (101) ಪ್ರಮಾದಿ ಸಂವತ್ಸರ ಮಾಘ ಶುದ್ಧ 11 ಸೋಮವಾರ ಕೃಷ್ಣರಾಯ ಮಹಾರಾಯರಿಂದ ಉಂಬಳಿ ಪಡೆದ ಚಿಕ್ಕಗೋಣಿಗೆರೆ ಗ್ರಾಮವನ್ನು ತನ್ನ ತಂದೆ ತಾಯಿಯರಿಗೆ ಶುಭವಾಗಲೆಂದು ಗಾಜನೂರಿನ ಶರಬರಿಗೌಡನು ಸುರಗಿ ಒಡೆಯರಿಗೆ ಬಿಟ್ಟುಕೊಟ್ಟು, ಉಲ್ಲೇಖಿವಿದೆ. 2) ಕುರುವಗಡ್ಡೆ (1590) ಸದಾಶಿವರಾಯನ ಕಾಲದ ಶಾಸನ. 3) ಸೌಳಂಗ (1561) ವೆಂಕಟಾದ್ರಿ ನಾಯಕರಿಗೆ ಶುಭವಾಗಲೆಂದು ನೀಡಿದ ದಾನ ಶಾಸನ, ಮತ್ತು 4) ಎರಡನೇ ಹರಿಹರನ ಎರಡನೆ ಪುತ್ರ ವೀರಪ್ರತಾಪನ (1403)

ಕಾಲದ ಒಂದು ಶಾಸನ - ಹೀಗೆ ವಿಜಯನಗರ ಕಾಲಕ್ಕೆ ಸೇರಿದ ಒಟ್ಟು 11 ಶಾಸನಗಳ ವೈಶಿಷ್ಟ್ಯವನ್ನು ಗಮನಿಸಬಹುದು.

ಹೊನ್ನಾಳಿ ತಾಲ್ಲೂಕನ್ನು ಬನವಾಸಿ ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ಪಾಂಡ್ಯರು, ಸಿಂಧರು (ಕ್ರಿ.ಶ. 900-1312) ವಿಜಯನಗರ ಅರಸರು (1361-1572) ಬೆಳಗುತ್ತಿ ಅರಸರು, ಕೆಳದಿ ಅರಸರು, ಮೈಸೂರು ಒಡೆಯರು ಕೆಲಕಾಲ ವಿಜಾಪುರ ಸುಲ್ತಾನರು, ಹೈದರ್, ಟಿಪ್ಪುಸುಲ್ತಾನರ ಕಾಲದಲ್ಲಿ ಹೊನ್ನಾಳಿ ನವಾಬರು ಆಳಿದ್ದಾರೆ. ನಂತರ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿತು. ಮಲೆನಾಡು ಮತ್ತು ಬಯಲು ಸೀಮೆಗಳೆರಡು ಇರುವ ಹೊನ್ನಾಳಿ ತಾಲ್ಲೂಕು ಅರೆಮಲೆನಾಡು ಎಂದೇ ಪ್ರಸಿದ್ಧವಾಗಿತ್ತು. ಕರ್ನಾಟಕದ ಜೀವನಾಡಿಯಾದ ತುಂಗಭದ್ರಾನದಿ ತಾಲ್ಲೂಕಿನ ಮಧ್ಯೆ ಹರಿದು ವಿಜಯನಗರದ ರಾಜಧಾನಿ ಮೂಲಕ ಹರಿಯುತ್ತಿದೆ. ಸ್ವಾತಂತ್ರ್ಯಾನಂತರ ತುಂಗಾ ಮತ್ತು ತುಂಗ ಭದ್ರಾ ನದಿಗಳಿಗೆ ನಿರ್ಮಿಸಿರುವ ಅಣೆಕಟ್ಟುಗಳಿಂದಾಗಿ ತಾಲ್ಲೂಕಿನ ಬಹುಭಾಗ ಬಯಲು ಪ್ರದೇಶ ನೀರಾವರಿಯಿಂದ ಸಮೃದ್ಧವಾಗಿದೆ. ಹೊನ್ನಾಳಿ ತಾಲ್ಲೂಕಿನಲ್ಲಿ ಇತಿಹಾಸದಲ್ಲಿದ್ದ 35 ಗ್ರಾಮಗಳು ಈಗ ವಸತಿಹೀನವಾಗಿವೆ. ಅನೇಕ ಗ್ರಾಮಗಳಲ್ಲಿ ಪ್ರಾಚೀನ ಪಳೆಯುಳಿಕೆಗಳು ಇಂದಿಗೂ ಕಂಡುಬರುತ್ತವೆ. ಸುಮಾರು 148 ಗ್ರಾಮಗಳು ವಸತಿಗ್ರಾಮಗಳಾಗಿವೆ. ಇವುಗಳಲ್ಲಿ ಸಹ ಅನೇಕ ಐತಿಹಾಸಿಕ ಕುರುಹುಗಳು, ದೇವಾಲಯಗಳು, ಹುಡೇವುಗಳು, ವೀರಗಲ್ಲು, ಶಾಸನಗಳು, ಮಹಾಸತಿಕಲ್ಲುಗಳು, ಗೋಸಾಸ ಶಿಲ್ಪಗಳು ಕಂಡುಬರುತ್ತವೆ. ಇವುಗಳಲ್ಲಿ ವಿಜಯನಗರ ಅರಸರ ಉಲ್ಲೇಖವಿರುವ ಹತ್ತು ಶಾಸನಗಳನ್ನು ಮಾತ್ರ ಈ ಅಧ್ಯಯನಕ್ಕೆ ತೆಗೆದುಕೊಳ್ಳಲಾಗಿದೆ.

1) ಈಸರಾಪುರ (ಇಸ್ಲಾಪುರ) ಶಾಸನ ಸಂಖ್ಯೆ ಹೊ. 84 ಇಮ್ಮಡಿ ಹರಿಹರ ಕ್ರಿ.ಶ. 1379 ಜನವಸತಿ ಇಲ್ಲದ ಬೇಚರಾಕು ಗ್ರಾಮದ ನೈರುತ್ಯ ದಿಕ್ಕಿನಲ್ಲಿರುವ ಹುಣಸೇಹಾಳ ಹರುವಿನ ಹೊಲದಲ್ಲಿರುವ ಈ ಶಾಸನದಲ್ಲಿ 44 ಸಾಲುಗಳವರೆಗೆ ಶಾಸನವಿದೆ. ಇದು ಒಂದು ಅಪೂರ್ಣ ಶಾಸನ. ಸುಮಾರು 30 ಸಾಲುಗಳವರೆಗೆ ವಿಜಯ ನಗರ ಅರಸು ಹರಿಹರರಾಯರ ವಂಶಾವಳಿ ಮತ್ತು ಬಿರುದುಗಳನ್ನೊಳಗೊಂಡಿರುವುದು ಈ ಶಾಸನದ ವೈಶಿಷ್ಟ್ಯವಾಗಿದೆ. 31,32ನೇ ಸಾಲುಗಳಲ್ಲಿ ಶಾಸನದ ಕಾಲಮಾನದ ಉಲ್ಲೇಖವಿದೆ. ಹರಿಹರ ರಾಯರ ಮಗನಾದ ಮಹಾಮಂಡಳೇಶ್ವರ ಚಿಕ್ಕರಾಯ ವಡೆಯರು ಆರಗದ 36 ಕಂಪಣವನ್ನು ಆಳುತ್ತಿದ್ದ ಕಾಲದಲ್ಲಿ ಮಹಾಪ್ರಧಾನ ವೀರ ವಸಂತ ಮಾಧವರಾಯನು ಈ ಭಾಗದ ಆಡಳಿತಾಧಿಕಾರಿಯಾಗಿದ್ದ ಸಮಯದಲ್ಲಿ, ದೇವ ಬ್ರಾಹ್ಮಣ ವಿರೋಧಿ ದೂಷಕನ ಶಿರಶ್ಛೇದ ಮಾಡಿದ ಸಂಗತಿ ಉಲ್ಲೇಖವಾಗಿದೆ. ಮುಂದೆ ಬರವಣಿಗೆ ಇಲ್ಲದೆ ಶಾಸನ ಅಪೂರ್ಣವಾಗಿದ್ದು, ಬಹುಶಃ ಮತ್ತೊಂದು ಶಿಲೆಯಲ್ಲಿ ಮುಂದುವರಿದಿರಬಹುದು. ಇದೊಂದು ಮರಣ ದಂಡನೆ ಶಾಸನವಾಗಿರುವುದು ವಿಶಿಷ್ಟವಾಗಿದೆ.

2) ಕುರುವದಗಡ್ಡೆ ಶಾಸನ ಸಂಖ್ಯೆ ಹೊ. 6 ಹರಿಹರ -2 ಕಾಲ ಕ್ರಿ.ಶ. 1390 ಹೊನ್ನಾಳಿಯಿಂದ ದಕ್ಷಿಣ ದಿಕ್ಕಿನಲ್ಲಿ ಗೋವಿನ ಕೋವಿಗ್ರಾಮದ ಪೂರ್ವಕ್ಕೆ ಹರಿಯುತ್ತಿರುವ ತುಂಗ ಭದ್ರಾನದಿ ಮಧ್ಯೆ ಇರುವ ದ್ವೀಪವನ್ನು ಕುರುವದಗಡ್ಡೆ ಅಥವಾ ಗೆಡ್ಡೆ ರಾಮೇಶ್ವರವೆಂದು ಕರೆಯುತ್ತಾರೆ. ಕುರುವಗಡ್ಡೆಯಲ್ಲಿರುವ ಕ್ರಿ.ಶ. 1228ರ ಶಾಸನ ಸಂಖ್ಯೆ 38 ರಲ್ಲಿ ಬಳ್ಳಿಯ ಕುರುವ, ಮೊರ ಗುರುವ ಎಂಬ ಉಲ್ಲೇಖಗಳಿವೆ. ಕ್ರಿ.ಶ. 1290ರ ಶಾಸನ ಸಂಖ್ಯೆ 11 ರಲ್ಲಿ ಮೊರಗುರುವ, ಬೆಳೆದ ಕುರುವ ಎಂದಿದೆ. ಕ್ರಿ.ಶ. 1390ರ ಶಾಸನ ಸಂಖ್ಯೆ 6 ರಲ್ಲಿ ಕುರುವ ಎಂದೂ ಕ್ರಿ.ಶ. 1557 ರ ಶಾಸನ ಸಂಖ್ಯೆ 9ರಲ್ಲಿ ಕುರುವ ಎಂಬ ಉಲ್ಲೇಖಗಳಿರುವುದು ಕಾಲ ಕಾಲಕ್ಕೆ ಇದ್ದ ಸ್ಥಳನಾಮಗಳ ರೂಪಾಂತರವನ್ನು ತಿಳಿಸುತ್ತವೆ.

ಕುರುವ ಗಡ್ಡೆ ದ್ವೀಪ, ತುಂಗಭದ್ರಾನದಿ ಮಧ್ಯೆ ರಾಮೇಶ್ವರ ಸುಮಾರು 16 ಎಕರೆ ವಿಸ್ತಾರವಾಗಿದೆ. ಬಿದಿರು, ಕರುಚಲು ಗಿಡಗಳು ನೆಡು ತೋಪಿನಿಂದ ಕೂಡಿದೆ. ಇಲ್ಲಿದ್ದ ಐತಿಹಾಸಿಕ ರಾಮೇಶ್ವರ ದೇವಾಲಯವನ್ನು ಇತ್ತೀಚೆಗೆ ಸಿಮೆಂಟ್ ಗಾರೆ ಇಟ್ಟಿಗೆಯಿಂದ ನವೀಕರಿಸಿದ್ದಾರೆ. ಅನೇಕ ಪ್ರಾಚೀನ ವಿಗ್ರಹಗಳು ಪ್ರಾಚೀನ ದೇವಾಲಯದ ಪಳೆಯುಳಿಕೆಗಳು ಶಾಸನಗಳು ಅಲ್ಲಲ್ಲಿ ಅನಾಥವಾಗಿ ಬಿದ್ದಿವೆ. ಕೆಲವು ನಾಶವಾಗಿದೆ. ದೇವಾಲಯದ ದಕ್ಷಿಣ ದ್ವಾರದ ಎದುರು ಕರಿಕಲ್ಲಿನ ಪ್ರಾಚೀನವಾದ ದೀಪಸ್ಥಂಭ ಸುಮಾರು 10 ಮೀ. ಎತ್ತರವಿದ್ದು ಸದೃಢವಾಗಿದೆ. ವಿಜಯನಗರ ಅರಸರ ಕಾಲದ ಎರಡು ಶಾಸನಗಳು, ನೋಡುವವರಿಲ್ಲದೆ ನಾಶದ ಹಾದಿಯಲ್ಲಿದೆ. ರಾಮೇಶ್ವರ ದೇವಾಲಯದ ದಕ್ಷಿಣ ದಿಕ್ಕಿನಲ್ಲಿರುವ ಶಾಸನ ಸಂಖ್ಯೊ ಹೊ 6 ವಿಜಯನಗರ ಅರಸು ಹರಿಹರ- 2 ಆಳ್ವಿಕೆ ಕಾಲಕ್ಕೆ ಸೇರಿದ್ದು ಕ್ರಿ.ಶ. 1390ರ ದಾನ ಶಾಸನವಾಗಿದೆ. 34 ಸಾಲುಗಳಿರುವ ಶಾಸನದಲ್ಲಿ ಎರಡು ಸಾಲುಗಳಲ್ಲಿ ಶ್ಲೋಕವೂ, ನಂತರದ 12 ಸಾಲುಗಳಲ್ಲಿ ಕುರುವದ ಸುತ್ತಲ ಗ್ರಾಮದ ಗೌಡರುಗಳ ಹೆಸರುಗಳ ಉಲ್ಲೇಖವಿದೆ. ಆನವೇರಿ ನಾಡಿನೊಳಗಣ ಕುರುವದ ರಾಮೇಶ್ವರ ದೇವರ ನಂದಾದೀವಿಗೆ ನೈವೇದ್ಯಕ್ಕೆಂದು, ಆಲೂರು ಚತುಸೀಮೆಯೊಳಗಣ ರಾಮೇಶ್ವರ ದೇವರ ಪೂರ್ವಕ್ಕೆ ತುಂಗಭದ್ರೆಯ ಸಮೀಪ ರಾಮಪುರವೆಂಬ ಗ್ರಾಮದ ಸುಂಕ ವಸೂಲಿ ಮಾಡಬಾರದೆಂದು ನೀಡಿದ ದಾನದ ವಿವರವಿದೆ. ಕೊನೆಯ 9 ಸಾಲುಗಳಲ್ಲಿ ಶಾಸನಕ್ಕೆ ತಪ್ಪಿದವರಿಗೆ ಶಾಪಾಶಯ ಉಲ್ಲೇಖವಿದೆ. ಕೊನೆಯಲ್ಲಿ ಶ್ರೀ ಎಂದು ಐದು ಬಾರಿ ಕೆತ್ತಿರುವುದು ಈ ಶಾಸನದ ವೈಶಿಷ್ಟ್ಯ ಎನ್ನಬಹುದು.

3) ಸೌಳಂಗ ಶಾಸನ ಎಂ.ಎ.ಆರ್. 1942/72 ಇಮ್ಮಡಿ ಹರಿಹರ ಕಾಲ (ಕ್ರಿ.ಶ. 1392) ಸೌಳಂಗ ಪೊಲೀಸು ಠಾಣೆ ಎದುರಿಗಿರುವ ವೀರಗಲ್ಲು ಶಾಸನ. ವಿಜಯನಗರ ದೊರೆ ಇಮ್ಮಡಿ ಹರಿಹರ- 2 ಆಳ್ವಿಕೆ ಕಾಲಕ್ಕೆ ಸೇರಿದ್ದು ಅರಗದ ಜನ್ನರಸ ಒಡೆಯರು

ನಾಡಿನ ಸಮಳಂಗದ (ಸವಳಂಗ) ಕರಿಯ ಗೌಡನ ದಣಾಯಕ ತುರುಬಗೌಡನು ಮಲ್ಲಪ್ಪ ವಿರುದ್ಧ ಕಾಳಗದಲ್ಲಿ ಮಡಿದನೆಂದೂ ಆತನ ತಂದೆ ಹಾಡಿಯ ಹರಿಗೆ ನಾಯಕ ವೀರಗಲ್ಲು ಸ್ಥಾಪಿಸಿದನೆಂದೂ, ವೀರಗಲ್ಲು ಮಾಡಿಸಿದವನು ಮುದ್ದೋಜನ ಮಗ ದೇವೋಜನೆಂದು ಉಲ್ಲೇಖವಾಗಿದೆ. ಕೊನೆಯಲ್ಲಿ ಮಂಗಳ ಮಹಾ ಎಂದಿದೆ. ಈ ಶಾಸನದಲ್ಲಿ ಹರಿಹರ ನೇರ ಸಂಬಂಧವಿಲ್ಲದಿದ್ದರೂ ವಿಜಯನಗರ ಉಪ ರಾಜಧಾನಿಯಾಗಿದ್ದ ಆರಗದ ಜನ್ನರಸನು ತನ್ನ ಚಕ್ರವರ್ತಿಯರ ಹೆಸರನ್ನು ಕೆತ್ತಿಸಿರುವುದು ಈ ಶಾಸನದ ವೈಶಿಷ್ಟ್ಯವಾಗಿದೆ.

4) ಯರಗನಹಾಳು : ಯರಗನಹಾಳು ವೀರಭದ್ರ ದೇವಾಲಯ ಹತ್ತಿರವಿರುವ ವೀರಗಲ್ಲು ಶಾಸನ ಸಂಖ್ಯೆ ಎಂ.ಎ.ಆರ್. 1942/69 ಕ್ರಿ.ಶ. 1397 ಕ್ಕೆ ಸೇರಿದ್ದು ಈ ಶಾಸನದಲ್ಲಿ ವಿಜಯನಗರ ಅರಸರ ಉಲ್ಲೇಖ ಇರುವುದಿಲ್ಲ. ಸಂಗೆಯ ನಾಯಕನು ಹೋರಾಟದಲ್ಲಿ ಮಡಿದ ಸಂಗತಿ ಉಲ್ಲೇಖವಾಗಿದೆ. ಶಾಸನ ಅಪೂರ್ಣವಾಗಿದೆ. ಈ ಶಾಸನ ವಿಜಯನಗರ ಅರಸು ಇಮ್ಮಡಿ ಹರಿಹರನ ಕಾಲಕ್ಕೆ ಸಂಬಂಧಿಸಿದೆ.

5) ಸುರಹೊನ್ನೆ ಶಾಸನ ಸಂಖ್ಯೆ 71 ಇಮ್ಮಡಿ ಹರಿಹರ (ಕ್ರಿ.ಶ. 1397) ಧರ್ಮ ಶಾಸನ ಸುರಹೊನ್ನೆ ಗ್ರಾಮದ ಶಿವಲಿಂಗಪ್ಪ ಹಿತ್ತಲಲ್ಲಿರುವ ಶಾಸನವು ಇಮ್ಮಡಿ ಹರಿಹರ ಕಾಲಕ್ಕೆ ಸೇರಿದ ಅಪರೂಪದ ಧರ್ಮ ಶಾಸನವಾಗಿದೆ. 39 ಸಾಲುಗಳಿರುವ ಈ ಶಾಸನದ ಆರಂಭದ 13 ಸಾಲುಗಳು ಶ್ಲೋಕವಿದೆ. ಇಮ್ಮಡಿ ಹರಿಹರ ಹಸ್ತಿನಾವತಿ ಕೋಟೆ ಆಳುತ್ತಿದ್ದ ಉಲ್ಲೇಖವಿದೆ. ಮತ್ತು ಆ ಸಮಯದಲ್ಲಿದ್ದ ಮಹಾಪ್ರಧಾನ ತುರಕದಳ ವಿಭಾಡ ಸಪ್ತಕೊಂಕಣ ಧೂಳೀಪಟ, ಕದಂಬ ಸೂರೈಕಾರ ಕದಂಬ ಪುರಜನ ಪ್ರತಿಪಾಲನ, ಗೋವಾಪುರ ವರಾಧೀಶ್ವರ ಶ್ರೀ ವೀರವಸಂತಮಾಧವರಾಯರ ಕುಮಾರ ಬಚಣ್ಣ ರಾಯನು ಆಳುತ್ತಿದ್ದನೆಂದೂ, ಬೊಲ್ಲರಸನ ಮಗ ಅನಂತಪ್ಪ ನಂದಾಪುರದಲ್ಲಿ ಸುಂಕದ ಅಧಿಕಾರಿಯಾಗಿದ್ದನೆಂದೂ, ಪಾಂಡ್ಯನಾದ ಒಳಗಣ ಹೊಳಗುಂಡಿಯ ಪುರದ ಬಾಳಿನಾಥ ದೇವರ ಅಮೃತ ಪಡಿಗೆ, ರಾಯರಾಜಗುರು ಖಂಡೆರಾಯ ಖಳೇಶ್ವರದೇವ ಅಯ್ಯನವರಿಗೆ ಧಾರಾಪೂರ್ವಕವಾಗಿ ಕೊಟ್ಟ ಧರ್ಮಶಾಸನ, ಕ್ರಿ.ಶ. 1397ರ ಪುಣ್ಯಕಾಲದಲ್ಲಿ ಗುತ್ತಿವೇಂಠೆಯಕೆ ಸೇರಿದ ಬಳೆಯನಾಡಿನೊಳಗಿನ ನೇಮತ್ತಿಯ ಗ್ರಾಮದ ಕಾಲುವಳಿ ಸುರಹೊನ್ನೆಯ ಪುರದಲು ನಮ್ಮ ಸುಂಕಕೆರೆ ಸಲುವ ಗ್ರಾಮಗದ್ಯಾಣ ಪಂಚಗಾರುಕ ಮಗ್ಗದೆರೆ ಮುದ್ರೆ ಧನಮಾರು ಮದುವದೆರೆ, ಗಾಣದೆರೆ, ಹುಡಿಕೆದೆರೆ, ಕುಲುಮೆದೆರೆ, ಮುಂತಾದ ಸುಂಕಗಳನ್ನು ಬಾಳನಾಥ ದೇವರ ಅಮೃುತಪಡಿ ನಂದಾದೀವಿಗೆಗೆ ಧಾರಾಪೂರ್ವಜಕವಾಗಿ, ಕೊಟ್ಟ ಧರ್ಮಶಾಸನವಾಗಿದೆ. 25ನೇ ಸಾಲಿನಿಂದ 39 ಸಾಲಿನವರೆಗೆ ಶಾಪಾಶಯ ಮತ್ತು ಧರ್ಮ ರಕ್ಷಿಸಿದ ಪುಣ್ಯಾಶಯ ಶಾಸನವಿದೆ. ಕೊನೆಯಲ್ಲಿ ಶ್ರೀ ಎಂದು ಒಂದು ಸಾರಿ ಮಾತ್ರ ಉಲ್ಲೇಖವಿದೆ. ಏಳು ಶತಮಾನಗಳ

ಹಿಂದೆ ಇಂದಿನ ನ್ಯಾಮತಿಗೆ, ನೇಮತ್ತಿ ಎಂಬ ಹೆಸರಿತ್ತು ಮತ್ತು ಸುರಹೊನ್ನೆ ಗ್ರಾಮದ ಪ್ರಾಚೀನತೆಯ ಜೊತೆಗೆ ಅಂದು ಚಲಾವಣೆಯಿದ್ದ ಕೈಕಸುಬುಗಳ ಉಲ್ಲೇಖ ಮತ್ತು ಅವುಗಳ ಸುಂಕ ಪದ್ಧತಿ ಕುರಿತು ಬೆಳಕು ಚಲ್ಲುತ್ತದೆ. ಇಂದಿನಂತೆಯೆ ಕೈ ಮಗ್ಗಗಳು, ಗಾಣಗಳು ಮಾತ್ರವಲ್ಲದೆ ಮದುವೆ ಸುಂಕ, ಹುಡಿಕೆ ಸುಂಕ, ಕುಲುಮೆ ಸುಂಕಗಳೂ ಇದ್ದ ಸಂಗತಿಯನ್ನು ತಿಳಿಸುವ ಇದೊಂದು ವಿಶಿಷ್ಟ ಶಾಸನವಾಗಿದೆ.

6) ಸಿಂಗಟಗೆರೆ ಶಾಸನ ಸಂಖ್ಯೆ 7 ಹೊ. 96 ಇಮ್ಮಡಿ ಹರಿಹರ ಕ್ರಿ.ಶ. 1401: ಧಾತು ಸಂವಸತ್ಸರದ ಆಶ್ವೀಜ ಶುದ್ಧ-1 ಸಿಂಗಟಗೆರೆ ಗ್ರಾಮದ ಬಸವನಗುಡಿಯ ದಕ್ಷಿಣಕ್ಕಿರುವ ಹರಿಹರ 2 ಚಕ್ರವರ್ತಿಯ ಆಳ್ವಿಕೆಕಾಲದ ಈ ಶಾಸನ ಬಹಳವಾಗಿ ಸವೆದು ಹೋಗಿದೆ. ಮೊದಲ 3 ಸಾಲುಗಳು ಮತ್ತು 10ನೇ ಸಾಲಿನ ನಂತರದ ಶಾಸನ ಓದಲಾಗುವಂತಿಲ್ಲ. ಶಾ.ಶ. 1323ರ ಉಲ್ಲೇಖವಿರುವ ಶಾಸನದಲ್ಲಿ ಶ್ರೀ ವೀರಪ್ರತಾಪ ಶ್ರೀ ಹರಿಹರರಾಯ ಆಳುತ್ತಿರುವಾಗ ರಾಮನಕೆರೆ ಕಾಲುವೆ ಹಿಂದೂ, ಶ್ರೀಮಂನು, ಸೋವುನಾಯ್ಕ, ನಾಗೆಯಣ್ಣ, ನೈಕಂಣರಸರ ಕುಮಾರ ನಾಗಣಗಳೂ ಎಂಬ ಉಲ್ಲೇಖವಿದೆ. ಈ ಶಾಸನ ಉದ್ದೇಶ ತಿಳಿದುಬರುತ್ತಿಲ್ಲ. ಬಹುಶಃ ಕೆರೆ ನಿರ್ಮಾಣ ಶಾಸನವಿರಬಹುದು.

7) ಸೌಳಂಗ: ಶಾಸನ ಸಂಖ್ಯೆ ಎಂ.ಎ.ಆರ್. ರಿ. 1942/77 ಕ್ರಿ.ಶ. 1402, ಮಹಾಸತಿಕಲ್ಲು ಸೌಳಂಗ ಗ್ರಾಮದ ಮುಸಾಫಿರ ಖಾನ ಸಮೀಪದಲ್ಲಿರುವ ಮಹಾಸತಿ ಶಿಲ್ಪ. ಶಾಸನದ ಮೊದಲ ಪಟ್ಟಿಕೆಯಲ್ಲಿ 3 ಸಾಲುಗಳೂ ಎರಡನೆ ಪಟ್ಟಿಕೆಯಲ್ಲಿ 4 ಸಾಲುಗಳ ಶಾಸನವಿದೆ. ಶಾ. ಶಕವರುಷ 1324 (ಕ್ರಿ.ಶ. 1402) ಆರಂಭದಲ್ಲಿ ಶೈವ ಶ್ಲೋಕವಿದೆ. ಈ ಶಾಸನ ಹರಿಹರ 2 ಆಳ್ವಿಕೆ ಕಾಲಕ್ಕೆ ಸೇರಿದ್ದರೂ ಆತನ ಉಲ್ಲೇಖವಿರುವುದಿಲ್ಲ. ಅರಮನೆ ಗೊಂಡಿಯರ ಗಂಡ ಸ್ವಾಮಿಗೆ ದ್ರೋಹಿಗಳ ಗಂಡಸ್ವಾಮಿ... ಬಯಿರಗೌಡನ ಮಗ ಅರಿಯಪ, ಆತನ ಪತ್ನಿಯಾದ ದೇಮಲಯಿ ಮಲ್ಲಾಯಿಗಳು ಸತಿ ಹೋದ ನೆನಪಿಗೆ ಚೀಲಗೌಡನ ಶಾಸನಕ್ಕೆ ಮಂಗಳ ಮಹಾಶ್ರೀ ಶ್ರೀ ಶ್ರೀ ಹಡಪದ... ಎಂಬ ಉಲ್ಲೇಖವಿದೆ. ಈ ಶಾಸನದಲ್ಲಿ ಸೌಳಂಗ ಗ್ರಾಮದ ಉಲ್ಲೇಖವಿಲ್ಲದಿರುವುದು ಮತ್ತು ಶ್ರೀ ಎಂಬುದು ಮೂರು ಬಾರಿ ಉಲ್ಲೇಖವಾಗಿರುವುದು ನಂತರ ಹಡಪದ ಎಂದು ಇರುವುದು ವಿಶಿಷ್ಟವಾಗಿದೆ. ``ಹಡಪದ" ಎನ್ನುವುದು ಶಾಸನ ಕಟೆದ ಶಿಲ್ಪಿಯ ಹೆಸರು ಇರಬಹುದು.

8) ನ್ಯಾಮತಿ : ಶಾಸನ ಸಂಖ್ಯೆ 7 ಹೊ. 68 ಶಾ.ಶಕ 1325 ಕ್ರಿ.ಶ. 1403 ಶಾಸನ ನ್ಯಾಮತಿ ಗ್ರಾಮದ ಬೇಡರ ಕೇರಿಯಲ್ಲಿರುವ ವೀರಭದ್ರ ದೇವಸ್ಥಾನದ ಪಶ್ಚಿಮ ದಿಕ್ಕಿನಲ್ಲಿರುವ ಈ ಶಾಸನ ಸಹ ಅಲ್ಲಲ್ಲಿ ತ್ರುಟಿತವಾಗಿದ್ದು 10 ಸಾಲುಗಳಿವೆ. ವಿಜಯನಗರ ಚಕ್ರವರ್ತಿ ಹರಿಹರ 2 ಆಳ್ವಿಕೆ (1377-1401) ಅಂತಿಮ ಕಾಲದಲ್ಲಿ

ಆತನ ಮಗ ಶ್ರೀ ವೀರಪ್ರತಾಪ... ಪಯರಾಯ ಮಹಾರಾಜರು ವಿಜಯನಗರಿಯ ನೆಲವೀಡಿನಲು ಆಳುವಾಗ ನಿಲ್ಲಿಸಿದ ಶಾಸನವಾಗಿದೆ. ಶ್ರೀ ಹರಿಹರ 2 ನಂತರ ಆತನ ಹಿರಿಯ ಮಗ ಬುಕ್ಕರಾಯ ಮತ್ತು ವಿರೂಪಾಕ್ಷರಾಯರ ಮಧ್ಯೆ ಸ್ಪರ್ಧೆ ಇದ್ದು ಎರಡು ವರ್ಷ ಆಳಿದ್ದಾರೆ. (1404-06). ನಂತರ ದೇವರಾಯ (1406-22) ವರೆಗೆ ವಿಜಯನಗರ ಚಕ್ರವರ್ತಿಯಾಗಿ ಆಳಿದ್ದಾನೆ. ಕಾರಣ ಈ ಶಾಸನ ಕಾಲದಲ್ಲಿ ಬುಕ್ಕರಾಯ ಅಥವಾ ವಿರೂಪಾಕ್ಷರಾಯರ ಹೆಸರಿನಲ್ಲಿ ನಿಲ್ಲಿಸಿರಬಹುದೆಂದು ತೀರ್ಮಾನಿಸಬಹುದು. ಮಾರಪಯ, ರೊದ್ದದ ಗೋವ ನಿಗಳಂಕಮಲ್ಲ, ಶತಶಾಲುಕ್ಯ ಮಲ್ಲ, ಒಣನಳಿರಾಜಂ ಬಳ್ಳಿನಾಡ ನೆಲವತ್ತಿಯ.... ರುತ್ತ ಮಿರ್ದಲ್ಲಿ ಶಕವರುಷ 1325 ಎಂಬಲ್ಲಿಗೆ ಶಾಸನ ಸವೆದು ಹೋಗಿದೆ. ವಿಜಯನಗರ ಅರಸ ಇಮ್ಮಡಿ ಹರಿಹರ ನಿಧನವಾದ ನಂತರ ಅಥವಾ ಅಂತಿಮ ಕಾಲದ ಈ ಶಾಸನದಲ್ಲಿ ಆತನ ಮಗನ ಹೆಸರಿನಲ್ಲಿ ಸ್ಥಾಪಿತವಾದ ಶಾಸನವಾಗಿದೆ. ನ್ಯಾಮತಿಯ ಹೆಸರು 15ನೆಯ ಶತಮಾನದಲ್ಲಿಯೂ ನೆಲವತ್ತಿ ಎಂದಾಗಿತ್ತು ಎಂಬುದು ತಿಳಿದುಬರುತ್ತದೆ.

9) ಚಿಕ್ಕ ಗೋಣಿಗೆರೆ ಶಾಸನ ಸಂಖ್ಯೆ ೧೫೩೩ ಹೊ. 101 ದಾನಶಾಸನ

ಚಿಕ್ಕಗೋಣಿಗೆರೆ ಕಲ್ಲೇಶ್ವರ ದೇವಾಲಯದ ಪೂರ್ವಕ್ಕಿರವ ಶಾಸನ ಪ್ರಮಾದಿ ಸಂ. ಮಾಘ ಶು. 11 ಸೋಮವಾರ ಗಾಜನೂರು ಶರಕರಿಗೌಡ, ತಿರುಮಲೆ ಪಟ್ಟಣದಲ್ಲಿ ನಿವಾಸಿ ಮಠವ ಕಟ್ಟಿಕೊಂಡಿರುವ ಸುರಗಿ ಒಡೆಯರಿಗೆ ನಾವು ಕೊಟ್ಟ ವಿವರ ಶ್ರೀ ಕೃಷ್ಣರಾಯ ಮಹಾರಾಯರು ನಮಗೆ ಉಂಬಳಿಯಾಗಿ ಕೊಟ್ಟ ಚಿಕ್ಕಗೋಳಿಗೆರೆ ಗ್ರಾಮವನ್ನು ನಮ್ಮ ತಂದೆ-ತಾಯಿಗೆ ಪುಣ್ಯವಾಗಬೇಕೆಂದು ಶಿವಾರ್ಪಣ ಮಾಡಿದೆವು. ಇದರ ಬೇಡಿಕೆ, ಬಿರಾಡ ಕಾಣಿಕೆ ಸುಂಕ ತಳವಾರಿಕೆ ನೋಡಿಕೊಂಡು ಕಲಿ ಪರಿಯಂತ ಅನುಭವಿಸಬೇಕೆಂದು, ಇದಕ್ಕೆ ಅಡ್ಡಿಪಡಿಸಿದವರಿಗೆ ಶಾಪಾಶಯ 8 ಸಾಲು ಇದೆ. ಒಟ್ಟು 23 ಸಾಲುಗಳ ಶಾಸನದ 14 ಮತ್ತು 15ನೇ ಸಾಲುಗಳು ತ್ರುಟಿತವಾಗಿದೆ. ಇದೊಂದು ಪುನರ್‌ದಾನ ಶಾಸನ. ಇಡೀ ಗ್ರಾಮವನ್ನೇ ಮಠಕ್ಕೆ ಉಂಬಳಿಯಾಗಿ ಕೊಟ್ಟ ವಿವರಗಳಿವೆ. ಇದು ಕೃಷ್ಣದೇವರಾಯನ ಕಾಲಕ್ಕೆ ಸೇರಿದೆ. ತಿರುಮಲೆದೇವಿಯ ಪಟ್ಟಣ ಎಲ್ಲಿದೆ? ತೀರ್ಮಾನಿಸಬೇಕಾಗಿದೆ.

10) ಶಿವಮೊಗ್ಗ ಸಂಪುಟದ ಅನುಬಂಧ ಹೊ. 124- ಸೌಳಂಗ- ಶಿವಮೊಗ್ಗ ರಸ್ತೆ ಎಡಭಾಗದಲ್ಲಿ ನಿಲ್ಲಿಸಿದ 4 ಸಾಲಿನ ಶಾಸನ ಈಗ ಹೂತುಹೋಗಿದೆ. ``ಆನೆಗೊಂದಿಯ ಮಠದ ವಿಜೇಂದ್ರ ಒಡೆಯರ ಸಉಳಂಗದ ಗ್ರಾಮಕ್ಕೆ ಶುಭಮಸ್ತು ಎಂದಿದೆ. ಇದು 16ನೇ ಶತಮಾನದ ಲಿಪಿ ಹೊಂದಿದ್ದು, ಆನೆಗೊಂದಿ ಮಠದ ವಿಜೇಂದ್ರ ಒಡೆಯರು ಸವುಳಂಗ ಗ್ರಾಮಕ್ಕೆ ಭೇಟಿ ನೀಡಿ ಶುಭ ಹಾರೈಸಿದ ಶಾಸನವಾಗಿದೆ.

ಆಕರಗಳು

1)	ಗೋಪಾಲ ಬಾ.ರಾ.ಡಾ.	ಸಂ. ವಿಜಯನಗರ ಶಾಸನ ಅಧ್ಯಯನ ಪ್ರ. ರಾಜ್ಯಪುರಾತತ್ವ ಮತ್ತು ವಸ್ತು ಸಂಗ್ರಹಾಲಯ ಮೈಸೂರು
2)	ಕೊಟ್ರೇಶ್‌ನಾ ಉತ್ತಂಗಿ	ಡಾ. ಸಂ. ಹೊನ್ನೆಲೆಗಳು, ಪ್ರಹಸನಾದ್ರಿ ಪ್ರಕಾಶನ, ಹೊನ್ನಾಳಿ, ವರ್ಷ 2004
3)	ಜಯದೇವಪ್ಪ ಜೈನಕೇರಿ	ಲೇ. ವಿಜಯನಗರ ಅಧ್ಯಯಂ ಸಂಪುಟ 8 ಪ್ರ. ನಿರ್ದೇಶಕರು, ರಾಜ್ಯ ಪ್ರಾಚ್ಯವಸ್ತು ಮತ್ತು ವಸ್ತುಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ 2003

೬. ದೇವರಾಯನ ಹರಳುಕುಂಟೆಯ ಅಪ್ರಕಟಿತ ಶಾಸನ

ಡಾ. ಎಂ.ಜಿ.ಮಂಜುನಾಥ

ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲೂಕಿನ ಹರಳುಕುಂಟೆ ಗ್ರಾಮವು ಕೋಲಾರ ಜಿಲ್ಲೆಯ ಅತ್ಯಂತ ಪ್ರಾಚೀನ ಗ್ರಾಮಗಳಲ್ಲೊಂದು. ಈ ಗ್ರಾಮವು ಐತಿಹಾಸಿಕವಾಗಿ, ಧಾರ್ಮಿಕವಾಗಿ ಹಾಗೂ ಸಾಂಸ್ಕೃತಿಕವಾಗಿಯೂ ಪ್ರಾಮುಖ್ಯತೆ ಪಡೆದುಕೊಂಡಿದೆ. ಈ ಗ್ರಾಮದ ಹೊರವಲಯದಲ್ಲಿ ಕ್ರಿ.ಶ. ಸುಮಾರು 450 ರ ಕಾಲಘಟ್ಟದಲ್ಲಿ ಗಂಗದೊರೆ ಇಮ್ಮಡಿ ಮಾಧವನು ನಿರ್ಮಿಸಿದ್ದ ಬೌದ್ಧ ವಿಹಾರವೊಂದರ ಅವಶೇಷವನ್ನು ಪತ್ತೆಹಚ್ಚಿ ಆ ಬಗ್ಗೆ ಒಂದು ಸಂಶೋಧನಾ ಲೇಖನವನ್ನು ಪ್ರಕಟಿಸಿದೆ. ಆ ಸಂದರ್ಭದಲ್ಲಿ ಹರಳುಕುಂಟೆಯಲ್ಲಿ ಕ್ಷೇತ್ರ ಕಾರ್ಯ ಮಾಡುತ್ತಿದ್ದಾಗ ಆ ಊರಿನ ಆಂಜನೇಯ ದೇವಾಲಯದ ಹೊರ ಗೋಡೆಯ ಬಳಿ ಕಣಶಿಲೆಯ ಫಲಕವೊಂದರ ಮೇಲೆ ಬರೆಯಲಾಗಿದ್ದ ಶಿಲಾ ಶಾಸನ ವೊಂದು ದೊರೆಯಿತು. ಆ ಶಾಸನದ ಪಾಠ ಈ ಕೆಳಗಿನಂತಿದೆ :

1. ಸ್ವಸ್ತಿಶ್ರೀ * * * * ಸಂವತ್ಸರದ ಮಾಗ ಸುಂ೧ಅ
2. ಶ್ರೀಮನು ಮಹಾಮಂಡಳೇ ಸ್ವರ ರಾಜಾಧಿರಾ
3. ಜ ರಾಜಪರಮೇಸ್ವರ ಬಾಸೆಗೆ ತಪ್ಪುವ ರಾಯರಗಂ
4. ಡ ಶ್ರೀ ವೀರಹರಿಹರರಾಯರ ಕುಮಾರ ದೇವರಾ
5. ಯರು ಆಳುವ ಕಾಲದಲ್ಲಿ ಮುಳುವಾಯಿ
6. ರಾಜ್ಯದ ಹೊದೆನಾಡ ಹರಳುಕುಂಟೆ ಜೋತಿಯ
7. ನಾಯಕರ ಮಗ ಮದ್ದಿಯನಾಯಕರು ಮಾ
8. ಡಿದ ಪದಿಷ್ಟಿ ಹನುಮಂತದೇವರು ಹ
9. ನುಮಂತ ದೇವರ ಪೂಜಾರಿಗೆ ಕೊಟ್ಟ ಗದ್ದೆ ಅ೩
10. ಗೊಳಹೊಲ ಮೂಗೊಳ ॥ ಹನುಮಂತದೆವರಮಾ
11. ಡಿದ ಪಿತ್ತಾರಿಗೆ ಕೊಟ್ಟಗದ್ದೆ ಅ೩ಗೊಳಹೊಲಮೂ
12. ಗೊಳ ಸರ್ಬ್ಬಮಾನ್ಯ೩ಧರ್ಮ್ಮವನು ಆರೊಬ್ಬಅಳಿ
13. ದಡೆಗಂಗೆಯ ತಡಿಯಲಿ ಕವಿಲೆಯಕೊಂ
14. ದಪಾಪದಲಿ ಹೋವನೂ ॥

ವಿಜಯನಗರದ ಅರಸ ವೀರಹರಿಹರರಾಯನ ಮಗ ದೇವರಾಯನು ಆಳುತ್ತಿದ್ದ ಕಾಲದಲ್ಲಿ ಮುಳವಾಯಿ ರಾಜ್ಯದ ಹೊದೆನಾಡಿಗೆ ಸೇರಿದ ಹರಳುಕುಂಟೆಯ ಜ್ಯೋತಿಯ ನಾಯಕರ ಮಗ ಮದ್ದಿಯನಾಯಕರು ಹನುಮಂತದೇವರನ್ನು ಪ್ರತಿಷ್ಠೆ ಮಾಡಿಸಿ ಆ ದೇವರ ಪೂಜಾರಿಗೆ 5 ಕೊಳಗ ಗದ್ದೆ, 3 ಕೊಳಗ ಹೊಲವನ್ನು ಕೊಟ್ಟರು. ಹನುಮಂತ ದೇವರ ವಿಗ್ರಹವನ್ನು ಮಾಡಿದ ಶಿಲ್ಪಿಗೆ 5 ಕೊಳಗ ಗದ್ದೆ ಮೂರು ಕೊಳಗ ಹೊಲವನ್ನು ಯಾವ ತೆರಿಗೆಗಳೂ ಇಲ್ಲದಂತೆ ಸರ್ವಮಾನ್ಯವಾಗಿ ಕೊಟ್ಟರು ಎಂದು ಶಾಸನ ದಾಖಲಿಸಿದೆ.

ಪ್ರಸ್ತುತ ಶಾಸನೋಕ್ತ 1ನೇ ದೇವರಾಯನು ಕ್ರಿ.ಶ 1404 ರಿಂದ 1421 ರವರೆಗೆ ಅಧಿಕಾರದಲ್ಲಿದ್ದನು. ಆ ಕಾಲಘಟ್ಟದಲ್ಲಿ ವಿಜಯನಗರದ ಸಾಮ್ರಾಜ್ಯಕ್ಕೆ ಸೇರಿದ್ದ ಮುಳವಾಯಿ ರಾಜ್ಯವು ಒಂದು ಪ್ರಮುಖವಾದ ಆಡಳಿತ ಘಟಕವಾಗಿತ್ತು. ಮುಳವಾಯಿ ರಾಜ್ಯಕ್ಕೆ ಸೇರಿದ ಹೊದೆನಾಡು ಪ್ರಸ್ತುತ ಶ್ರೀನಿವಾಸಪುರ ತಾಲೂಕಿನ ಹೊದ್ಲಿ ಎಂದು ಗುರುತಿಸಬಹುದು. ಹರಳುಕುಂಟೆ ಗ್ರಾಮವು ಕ್ರಿ.ಶ. 4ನೆಯ ಶತಮಾನದಷ್ಟು ಪ್ರಾಚೀನವಾಗಿದ್ದು ಕ್ರಿ.ಶ. ಸು. 450ರ ಕಾಲದ ಗಂಗದೊರೆ ಇಮ್ಮಡಿ ಮಾಧವನ ಮೆಳೆ ಕೋಟೆ ತಾಮ್ರ ಶಾಸನದಲ್ಲಿಯೂ ದಾಖಲಾಗಿದೆ. ಹೊದೆನಾಡು ಪುದೋಲಿ, ಪುದಲ್ನಾಡು, ಹೊದಲವಾಡಿ, ಹೊದ್ಲಿ ಎಂದು ಶಾಸನಗಳಲ್ಲಿ ದಾಖಲಾಗಿರುವುದನ್ನು ಗುರ್ತಿಸಬಹುದು. ಜ್ಯೋತಿನಾಯಕನ ಮಗ ಮದ್ದೆಯ ನಾಯಕನು ಹರಳುಕುಂಟೆಯ ಸ್ಥಳೀಯ ಪಾಳೆಯ ಗಾರನಾಗಿ ಆಳ್ವಿಕೆ ಮಾಡುತ್ತಿದ್ದನು. ಹರಳುಕುಂಟೆ ಗ್ರಾಮದಲ್ಲಿ ವಿಜಯನಗರದ ಅರಸರ ಕಾಲದಲ್ಲಿ ನಿರ್ಮಿಸಿದ ಕೋಟೆಯ ಅವಶೇಷಗಳನ್ನು ಈಗಲೂ ಗಮನಿಸಬಹುದು.

೭. ವಳ್ಳೂರು ಮಹಾಲಿಂಗೇಶ್ವರ ದೇವಸ್ಥಾನದ ಇಮ್ಮಡಿ ದೇವರಾಯನ ಶಾಸನ - ಒಂದು ಅಧ್ಯಯನ

- ಡಾ. ಬಿ.ಜಗದೀಶ ಶೆಟ್ಟಿ

ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ತಾಲೂಕಿನ ವಳ್ಳೂರು ಇತಿಹಾಸ ಕಾಲದಲ್ಲಿ ವಿವಿಧ ಚಟುವಟಿಕೆಗಳ ಕೇಂದ್ರವಾಗಿತ್ತು. ವಿಜಯನಗರ ಆಡಳಿತ ಕಾಲದಲ್ಲಿ ಬಾರಕೂರು ರಾಜ್ಯದ ಭಾಗವಾಗಿತ್ತು. ಇಲ್ಲಿನ ಪ್ರಮುಖ ದೇವಾಲಯ ಮಹಾಲಿಂಗೇಶ್ವರ ದೇವಸ್ಥಾನ. ಈ ದೇವಸ್ಥಾನದಲ್ಲಿ ವಿಜಯನಗರ ಕಾಲದ ಮೂರು ಶಾಸನಗಳಿವೆ. ಒಂದರಲ್ಲಿ ಅಕ್ಷರಗಳು ಬಹಳಷ್ಟು ನಷ್ಟವಾಗಿದ್ದು, ಹೆಚ್ಚಿನ ವಿವರಗಳು ತಿಳಿದುಬರುವುದಿಲ್ಲ. ಇನ್ನೊಂದು ಶಾಸನ ವಿಜಯನಗರ ದೊರೆ ಇಮ್ಮಡಿ ದೇವರಾಯನ ಕಾಲದ್ದಾಗಿದೆ. ಈ ಶಾಸನ ಪ್ರಕಟವಾಗಿದ್ದರೂ ವಿವರವಾದ ಅಧ್ಯಯನ ಆಗಿಲ್ಲ. ಈ ಶಾಸನದ ವಿವರವಾದ ಅಧ್ಯಯನ ಈ ಪ್ರಬಂಧದ ಉದ್ದೇಶ.

ಇಲ್ಲಿ ಅಧ್ಯಯನಕ್ಕೆ ಆರಿಸಿಕೊಂಡಿರುವ ಶಾಸನ ವಿಜಯನಗರ ದೊರೆ ಇಮ್ಮಡಿ ದೇವರಾಯನದ್ದು. ಈ ಶಾಸನ 34 ಸಾಲುಗಳನ್ನು ಹೊಂದಿದ್ದು ಅದರ ತೇದಿ ಶಕ ವರ್ಷ 1360ನೇಯ ಪಿಂಗಳ ಸಂವಸ್ತರದ ಕಾರ್ತಿಕ ಶು 1ಲು ಅಂದರೆ ಕ್ರಿ.ಶ. 1438. ಇದು ಕನ್ನಡ ಭಾಷೆಯಲ್ಲಿದೆ. ರಾಜ ದೇವರಾಯನನ್ನು ಸಾಮಾನ್ಯ ಬಿರುದುಗಳಿಂದ ಅಂದರೆ ಶ್ರೀ ಮನ್ಮಹಾರಾಜಾಧಿರಾಜ ರಾಜ ಪರಮೇಶ್ವರ ಎಂದು ಉಲ್ಲೇಖಿಸಲಾಗಿದೆ. ಆಗ ಬಾರಕೂರು ರಾಜ್ಯವನ್ನು ಆಳುತ್ತಿದ್ದವನು ಅಣ್ಣಪ್ಪ ಒಡೆಯ. ಅವನು ನೀಡಿದ ದತ್ತಿಯನ್ನೂ ಶಾಸನ ತಿಳಿಸುತ್ತದೆ. ಚೆನ್ನಕೇಶವ ದೇವರಿಗೆ ನೈವೇದ್ಯ ಮತ್ತು ನಂದಾ ದೀಪದ ವೆಚ್ಚಕ್ಕಾಗಿ ಶಾಸನದಲ್ಲಿ ನಮೂದಿಸಲಾಗಿರುವ ಭೂಮಿಯ ಉತ್ಪನ್ನವನ್ನೂ ದಾನ ಮಾಡಿದ ವಿಷಯ ಶಾಸನದಲ್ಲಿದೆ. ಅದರೊಂದಿಗೆ ಮಹಾದೇವರ ರಕ್ಷಾ ಭೋಗ ಕ್ಷೀರ ಮತ್ತು ಎಣ್ಣೆಯ ಖರ್ಚಿಗಾಗಿ ನೀಡಿದ ದಾನವನ್ನೂ ಶಾಸನ ತಿಳಿಸುತ್ತದೆ.

ಇಲ್ಲಿನ ದಾನದ ವಿವರದೊಂದಿಗೆ ಇನ್ನೂ ಅನೇಕ ವಿಷಯಗಳನ್ನೂ ಈ ಶಾಸನದ ಸಹಾಯದಿಂದ ಅಧ್ಯಯನ ಮಾಡಬಹುದು. ಮೊದಲನೆಯದಾಗಿ ಊರಿನ ಹೆಸರಿನ ವ್ಯುತ್ಪತ್ತಿ. ವಿಜಯನಗರ ಕಾಲದಲ್ಲಿ ಈ ಊರು 'ವೊಳತೂರು' ಎಂಬುದಾಗಿ ಕರೆಯಲ್ಪಡುತ್ತಿತ್ತು. ಈಗ ಅದು ವಳ್ಳೂರು ಆಗಿದೆ. ಕರಾವಳಿಯಿಂದ ಒಳಗೆ ಇದ್ದುದ ರಿಂದ ಈ ಹೆಸರು ಬಂದಿರಬಹುದು. ಎಂಬ ಅಭಿಪ್ರಾಯವನ್ನು ಡಾ. ಬಿ.ವಸಂತ ಶೆಟ್ಟಿಯವರು

ವ್ಯಕ್ತಪಡಿಸುತ್ತಾರೆ. ಈ ಶಾಸನ ಆಗಿನ ಗ್ರಾಮಯಿದ್ದಿರಬಹುದಾದ ಊರು- 38 ನ್ನು ಹೆಸರಿಸುತ್ತದೆ. ಅಲ್ಲದೆ ಈ ಶಾಸನದ ಕೊನೆಯಲ್ಲಿ ಊರು ಮು(ವತ್ತ ಎಂಬ)ರ ಸುಹಸ್ತದ ವೊಪ್ಪ ಎಂದು ಹೇಳಿರುವುದು ಶಾಸನ ಸಮಯದಲ್ಲಿ ಅವರ ಒಪ್ಪಿಗೆ ಪಡೆಯುವ ಕ್ರಮವಿತ್ತೆನ್ನುವುದನ್ನು ದೃಢೀಕರಿಸುತ್ತದೆ.

ಈ ಶಾಸನದಲ್ಲಿ ದಾನ ನೀಡಿರುವ ಭೂಮಿಯ ಬಗ್ಗೆ ಹೇಳುವಾಗ ಗಡಿಯನ್ನು ಉಲ್ಲೇಖಿಸಿದ್ದು, ಬಯಲು ಮಕ್ಕಿ ಮುಂತಾದ ಭೂಮಿಯ ವಿಭಾಗಗಳು ಕಂಡುಬರುತ್ತವೆ. ಹೆಚ್ಚಿನ ನೀರಾವರಿ ವ್ಯವಸ್ಥೆ ಇರುವ ತಗ್ಗಾದ ಪ್ರದೇಶ ಬಯಲಾದರೆ, ಬಯಲು ಮತ್ತು ಬೆಟ್ಟದ ಮಧ್ಯೆ ಇರುವ ಭೂಮಿ ಮಕ್ಕಿ. ಫಲವತ್ತತೆಯಲ್ಲಿ ಇದು ಬಯಲಿಗಿಂತ ನಿಕೃಷ್ಟವಾಗಿದ್ದು ಮಳೆಯ ನೀರನ್ನು ಅವಲಂಭಿಸಿದ ಭೂಮಿ.[1]

ಈ ಶಾಸನ ಭೂಮಿಯ ಮಾಲಕ ಹೊಂದಿದ್ದ ಎಂಟು ಹಕ್ಕುಗಳ ಬಗ್ಗೆಯೂ ತಿಳಿಸುತ್ತದೆ. (ಅಷ್ಟ ಭೋಗ) ನಿಧಿ (ಸಂಪತ್ತು) ನಿಕ್ಷೇಪ (ಭೂಮಿಯಲ್ಲಿ ಹುದುಗಿರುವ ಆಸ್ತಿ) ಪಾಷಾಣ (ಕಲ್ಲುಗಳಿಂದ ಕೂಡಿದ ವ್ಯವಸಾಯ ಮಾಡದ ಭೂಮಿ) ಅಗಾಮಿ (ಮುಂದಿನ ಹಕ್ಕು ಮತ್ತು ಸೌಲಭ್ಯಗಳು) ಸಿದ್ಧ (ವ್ಯವಸಾಯ ಮಾಡಿದ ಭೂಮಿ) ಸಾಧ್ಯ (ಭೂಮಿ ಯಲ್ಲಿನ ಬೆಳೆ) ಅಲ್ಲದೆ ಅದರೊಂದಿಗೆ ಗೆಯುವ ಆಳುವ ಮತ್ತು ಮರ ಫಲಗಳ ಮೇಲಿನ ಹಕ್ಕನ್ನು ಉಲ್ಲೇಖಿಸುತ್ತದೆ.[2]

ವ್ಯವಸಾಯಕ್ಕೆ ಅಗತ್ಯವಾದ ನೀರಾವರಿ ಸೌಲಭ್ಯ ಯಾವ ರೀತಿಯಲ್ಲಿರುತ್ತದೆ ಎಂಬುದೂ ಈ ಶಾಸನದಿಂದ ತಿಳಿದುಬರುತ್ತದೆ. ಉದಾ: ನೀರು ಹರಿಯುವ ತೋಡು. ಭೂಮಿಯ ಮಾಲಕರ ಬಗ್ಗೆ ಹೇಳುವಾಗ ಅಳಿಯ ಮಾದಂಣ ಸೆಟ್ಟಿಯ ಗಡಿ ಎಂದು ಹೇಳಿರುವುದು ಆಗಿನ ಕಾಲದ ಸಮಾಜ ವ್ಯವಸ್ಥೆಯ ಬಗ್ಗೆ ಅಧ್ಯಯನ ಮಾಡುವುದಕ್ಕೆ ಉಪಯುಕ್ತವಾದ ಮಾಹಿತಿಯಾಗಿದೆ. ತುಳುನಾಡಿನಲ್ಲಿ ಪ್ರಚಲಿತವಿರುವ ಅಳಿಯ ಸಂತಾನ ಪದ್ಧತಿಯಂತೆ ನಾಡವ ಜಾತಿಯಲ್ಲಿ ಕುಟುಂಬದ ಹಕ್ಕು ನಿರ್ಧಾರವಾಗುವುದು ತಾಯಿಯ ಕಡೆಯಿಂದ.[3]

ಇಲ್ಲಿ ಅರಸನ ಕೆರೆಯ ಉಲ್ಲೇಖ ಬರುತ್ತದೆ. ಊರಿನ ಅಭಿವೃದ್ಧಿಯ ದೃಷ್ಟಿಯಿಂದ ಅರಸನಿಂದ ಈ ಕೆರೆ ನಿರ್ಮಾಣವಾಗಿರಬೇಕು. ಆದ್ದರಿಂದ ಅದು ಅರಸನ ಕೆರೆಯೆಂದು ಹೆಸರು ಪಡೆಯಿತು. ವೈಯಕ್ತಿಕ ಭೂ ಒಡೆತನದ ಉಲ್ಲೇಖ (ಅಳಿಯ ಮಾದಂಣ ಸೆಟ್ಟಿ, ಕುಂಜತರ ಇತ್ಯಾದಿ) ಬಿತ್ತುವ ಬೀಜದ ಆಧಾರದ ಮೇಲೆ ಭೂಮಿಯನ್ನು ಅಳೆಯುವ ವಿಧಾನದ ಬಗ್ಗೆ ಉಲ್ಲೇಖವಿದೆ. ಈ ಶಾಸನ ವಳ್ಳೂರಿನಲ್ಲಿ ಚೆನ್ನಕೇಶವ ದೇವಸ್ಥಾನ ಇದ್ದ ಬಗ್ಗೆ ತಿಳಿಸುತ್ತದೆ. ಮಹಾಲಿಂಗೇಶ್ವರ ದೇವಸ್ಥಾನ ಇರುವ ಜಾಗವನ್ನು ಈ ಶಾಸನ "ವೊಳತೂರು ಕೇರಿ" ಎಂದು ಉಲ್ಲೇಖಿಸುತ್ತದೆ. ಈ ಶಾಸನ ಮಹಾಲಿಂಗೇಶ್ವರ ದೇವರನ್ನು "ವೊಳತೂರು ಕೇರಿಯ ಮಹಾದೇವ" ಎಂದು ಕರೆದಿದೆ. ಈ ಶಾಸನ

ತುಳುನಾಡಿನ ದ್ರವರೂಪದ ವಸ್ತುಗಳ ಅಳತೆಯ ವಿಧಾನದ ಬಗ್ಗೆಯೂ ಬೆಳಕು ಚೆಲ್ಲುತ್ತದೆ. ಶಾಸನಗಳಲ್ಲಿ ಹಾಗೂ ಇತರ ಲಿಖಿತ ದಾಖಲೆಗಳಲ್ಲಿ ಈ ಬಗ್ಗೆ ಉಲ್ಲೇಖ ವಿದೆ. ಅದೇ ಹಾಡ ಚಂದ್ರಮಕವಿಯ ಗೊಮ್ಮಟೇಶ್ವರ ಚರಿತ್ರೆಯಲ್ಲಿ ಎಂಣೆಯ ಹಾಡ ಮತ್ತು ತುಪ್ಪದ ಹಾಡದ ಉಲ್ಲೇಖವಿದೆ.[4] ಶಾಸನವೂ ಇತರ ಶಾಸನಗಳಂತೆ ಹಾಡದ ಬಗ್ಗೆ ತಿಳಿಸುತ್ತದೆ.[5]

ಒಟ್ಟಿನಲ್ಲಿ ಈ ಶಾಸನ ಮಹಾಲಿಂಗೇಶ್ವರ ಮತ್ತು ಚೆನ್ನಕೇಶವ ದೇವಸ್ಥಾನಗಳ ಪ್ರಾಚೀನತೆ ಮತ್ತು ಮಹತ್ವವನ್ನು ತಿಳಿಯಲು ಸಾಮಾಜಿಕ ಮತ್ತು ಆರ್ಥಿಕ ಇತಿಹಾಸದ ಅಧ್ಯಯನಕ್ಕೆ ಒಂದು ಮುಖ್ಯ ಆಕರ.

ಟಿಪ್ಪಣಿಗಳು

1. ಬಿ.ಜಗದೀಶ್ ಶೆಟ್ಟಿ, 'ದಿ ಆಗ್ರೋ ಇಕಾನಮಿಕ್ ರಿಲೇಶನ್ಸ್ ಆಂಡ್ ಸೋಶಿಯಲ್ ಸ್ಟ್ರಕ್ಚರ್ ಇನ್ ದಕ್ಷಿಣ ಕನ್ನಡ ಕ್ರಿ.ಶ. 1000-1600,ಪುಟಗಳು 45-48
2. ಅದೇ. ಪು. 97
3. ಪಿ.ಗುರುರಾಜ ಭಟ್ 'ಸ್ಟಡೀಸ್ ಇನ್ ತುಳುವ ಹಿಸ್ಟರಿ ಎಂಡ್ ಕಲ್ಚರ್' (ಮಣಿಪಾಲ 1975) ಪುಟಗಳು 256-267
4. ಚಂದ್ರಮಕವಿ ಗೊಮ್ಮಟೇಶ್ವರ ಚರಿತ್ರೆ - (ಸಂ. ಟಿ.ಚಂದ್ರಶೇಖರ, ಪುಟ 128)
5. ಲಲಿತಾ ದೇವಿಯ ಮೂಡಬಿದರೆ ಶಾಸನ, ದಕ್ಷಿಣ ಭಾರತದ ಶಾಸನಗಳು, ಸಂಪುಟ 7. ಎನ್. ಸಂಖ್ಯೆ 229

ದೇವಸ್ಥಾನದ ಗರ್ಭಗೃಹದ ಎದುರು ಎಡಬದಿಗೆ
ವಳ್ಳೂರು ಮಹಾಲಿಂಗೇಶ್ವರ ದೇವಸ್ಥಾನದ ಶಾಸನ

1. ಶ್ರೀ ಗಣಾಧಿಪತಿಯೇ ನಮಃ ಶ್ರೀ ಸರಸ್ವತ್ಯೆ ನಮಃ ಶ್ರೀ ಗುರುಭ್ಯೋ
2. ನಮಃ ಶುಭಮಸ್ತು | ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರ
3. ವೆ ತ್ರಯಿಲೋಕ್ಯ ನಗರಾರಂಭ ಮೂಲ ಸ್ತಂಭಾಯ ಶಂಭವೆ ಸ್ವಸ್ತಿ
4. ಶ್ರೀ ಜಯಾಭ್ಯುದಯ ಶಕವರ್ಷ 1360 ನೇಯ ಪಿಂಗಳ ಸಂವತ್ಸರದಕಾ
5. ರ್ತ್ತಿಕ ಶು ೧ಲು ಶ್ರೀ ಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರ ಪ್ರತಾಪ
6. ಶ್ರೀ ದೇವರಾಯ ಮಹಾರಾಯರು ವಿಜೆಯನಗರಿಯ ಸಿಂಹಾಸನದಲ್ಲಿರ್ದು
7. .... ವರ್ನ್ನ ಧರ್ಮ್ಮಶ್ರಮಂಗಳನೂ ಪ್ರತಿಪಾಲಿಸುವ ಕಾಲದಲ್ಲೂ ಅಂ
8. ಣಪ್ಪ ವೊಡೆಯರು ಬಾರಕೂರು ರಾಜ್ಯವನ್ನಾಳುತ್ತಿದ್ದಲ್ಲಿ ಅಂಣಪ್ಪ ವೊಡೆಯ

9. ರು ಅರಸನ ಕೆ ಯ .... ಮಾಡಿದ ಧರ್ಮ ಶ್ರೀ ಶ್ರೇಯೆ - ನೈವೇದ್ಯಕೆ .... ಕ ಚುಹಾ 4

10. ಕಂ ಪ್ರತಿ ಗ 1 ಕಂ ಆ .... ಚಾರ .... ಕಾಗ 16 ನಂದಾ ದೀಪ್ತಿಗೆ

11. ಬಂವೊ.......................... ಕಂಕಾಗ 400............................ ಆಕುಳ ಯಿಪ್ಪತ್ತು

12. ಹೊಂನು ವರ್ಷಂಪ್ರತಿ ಆ ಚಂದ್ರಾರ್ಕ್ಕ ಸ್ಥಾಯಿಯಾಗಿ ....

13. .... ಧಾರೆಯನೆ ದು........................

14. (ಸೀಮೆಯ) ವಿವರ ವೊಳತೂರು ಬಡಗ ಬಯಲೊಳಗೆ ಮೂಡಲು ಬಾಳಿನ

15. ಮಕ್ಕಿಯಿಂದ ತಡುವಲು ತೆಂಕಲು ನೀರು ಹರಿವ ತೋಡಿದಂ ಬಡಗಲು

16. ಪಡುವಲು ಆ [ಅ]ಳಿಯ ಮಾದಂಣಸೆಟ್ಟಿಯ ಗಡಿ ಇಂದಂ ಮೂಡಲು ಬಡಗ

17. ಣ ಕುಂಜ ತರನ ಗಡಿಯಿಂದಂ ತೆಂಕಲು ಯಿಂತಿ ಚತುಸ್ಸೀಮೆಯ ವೊ

18. ಳ ಗುಳ್ಳ .... ಗದ್ದೆ ಮಕ್ಕಿ ಸಹ ಬೆದೆಗಣಗಿಲು ಸಾಗಂಡುಂಗದಲು

19. .... ಯು ಬಡಗಣ ಗದ್ದೆ 1

20. .... ಗದ್ದೆ 1 ತಾರಲಿ 1 ಸಹ ಬಿತ್ತು ಮು5

21. .... ಬಾಕು ವೊಜನ ಬಳಿ ಗದ್ದೆ 1 ಕಂ ಬಿತ್ತು ಮು 1'

22. .... ದೇವರಿಗೆ

23. ....ಗೆಯುವ ಆಳು ಮರ ಫಲ ನಿಧಿ ನಿಕ್ಷೇಪ

24. ಲ ಪಾಷಾಣಾ .... ಅಗಾಮಿ ಸಿದ್ಧ ಸಾಧ್ಯ, ಅಷ್ಟ ಭೋಗ ತೆಜ ಸ್ವಾಮ್ಯಸ

25. ಪಾ ಸಹಿತ .... ಚೆಂನ ಕೆ ಶವ ದೇವರಿಗೆ ಧಾರೆಯೆ ಅದು ಬರದಾ

26. .... ದ ಧರ್ಮ್ಮ (ಸದತ್ತಾಂ ಪರದತ್ತಾವಾಮೋಹ) ರೆತಿಂದಾರದತ್ರಯದಿಯತೆಷ

27. ಷ್ಟಿರ್ವರ್ಷ ಸಹಪ್ರಾಣಿ (ವಿಷ್ಟಾಯಂ) ಚಾಯತೆ ಕ್ರಿಮಿ : | ಯಿ ಧರ್ಮಕ್ಕೆ ಅರೊಬರು

28. ರು ತಪ್ಪಿದಂ

29. .... ವಾಪ್ನೋತಿ ಪಾಲನಾದ ಚುತಂ ಪ

30. ದಂ | ಯಿ ಧರ್ಮವನೂ ಪಾಲಿಸ ತಪ್ಪದು 0/1 ಗತಿಯನೆ ಯಿದುವರು || ಮಹಾ

31. ದೇವರಿಗೆ ರಕ್ಷಾ ಭೋಗ ವೊಳತೂರು ಕೆ (ರಿ) ಯ ಶ್ರೀ ಮಹಾದೇವರಿಗೆ ವರುಷಂಪ್ರ

32. ತಿ.ಕ್ಷೀ ರಾಬ್ಧಿ .... ಹಾಡದಲು ವೊಂದು ಹಾಡ

33. ಯೆಂಣೆಯನೂ ಕೊಟ್ಟು ಬಹುದು ಯಿಂತಪ್ಪುದಕೆ ವೊಳತೂರು ಊರು ಮು

34. [ವತ್ತ ಎಂಟ]ರ ಸುಹಸ್ತದ ವೊಪ್ಪ ಕೇರಿಯ ಶ್ರೀ ಮಹಾದೇವರು

ಶುಭಮಸ್ತು ಶ್ರೀ

೮. ಹಂಪಿ ಶಾಸನಗಳಲ್ಲಿ ದೇಶೀ ಪ್ರವಾಸಿಗರು

ಎನ್. ಎಸ್. ವೀರೇಶ ಉತ್ತಂಗಿ

'ಎಲ್ಲಾ ರಸ್ತೆಗಳು ಹಂಪಿಯ ಕಡೆಗೆ' ಎಂಬ ಮಾತನ್ನು ವಿಜಯನಗರ ಮತ್ತು ಅದರ ಪೂರ್ವದ ಸ್ಮಾರಕಗಳು, ಶಾಸನಗಳು ಸಾಕ್ಷೀಕರಿಸುತ್ತವೆ. ಗತಕಾಲದ ಚರಿತ್ರೆಯನ್ನು ತನ್ನೊಡಲಲ್ಲಿ ಗರ್ಭೀಕರಿಸಿಕೊಂಡು, ದೇಶಿ-ವಿದೇಶ ಪ್ರವಾಸಿಗರನ್ನು ಸುಮಾರು ೬೦೦ ವರ್ಷಗಳಿಂದಲೂ ಕೈಬೀಸಿ ಕರೆಯುತ್ತಿರುವುದು ಆ ಪ್ರವಾಸಿಗರಲ್ಲಿ ಪ್ರತಿ ಕ್ಷಣ ಕ್ಷಣಕ್ಕೂ ಕುತೂಹಲ ಕೆರಳಿಸಿ ರೋಮಾಂಚನ ಉಂಟು ಮಾಡುತ್ತಿರುವುದು ಎಲ್ಲರ ಕಣ್ಣುಗಳ ಮುಂದೆ ಇದೆ. ಹಂಪಿಯ ಸ್ಮಾರಕ ಮತ್ತು ಅಳಿದುಳಿದ ಅವಶೇಷ ಗಳನ್ನು ನೋಡಲು ಜಗತ್ತಿನ ನಾನಾ ಭಾಗಗಳಿಂದ ಪ್ರವಾಸಿಗರು ಬರುತ್ತಾರೆ. ಬಂದ ಪ್ರವಾಸಿಗರು ತಾವು ನೋಡಿದ ಹಂಪಿಯ ಪರಿಸರವನ್ನು ಮತ್ತು ಸ್ಮಾಕರಗಳನ್ನು ತಮ್ಮ ನೆಲೆಯಲ್ಲಿ ಅರ್ಥೈಸಿಕೊಂಡು ತಮ್ಮ ಪ್ರವಾಸ ಕಥನದಲ್ಲಿ ದಾಖಲಿಸಿರುವುದು ಇತಿಹಾಸ ಪುಟಗಳಿಂದ ತಿಳಿದು ಬರುತ್ತದೆ. ವಿಜಯನಗರದ ಸಾಮ್ರಾಟರ ಆಳ್ವಿಕೆಯ ಕಾಲದಲ್ಲಿ ಅನೇಕ ದೇಶಗಳಿಂದ ಪ್ರವಾಸಿಗರು ಹಂಪಿಗೆ ಬಂದು ಇಲ್ಲಿನ ಸ್ಮಾರಕಗಳ ಬಗ್ಗೆ ಸಾಮ್ರಾ ಟರ ಬಗ್ಗೆ, ಜನಸಾಮಾನ್ಯರ ಬಗ್ಗೆ-ಡೊಮಿಂಗೋ ಪೇಯಿಸ್, ಡುವರ್ಟೋ ಬರ್ಬೋಸ್, ಅಬ್ದುಲ್ ರಜಾಕ್, ನ್ಯೂವಿಜ್, ನಿಕೊಕಾಲೋ ಕೊಂಟೆ ಇನ್ನೂ ಮುಂತಾದ ಪ್ರವಾಸಿಗರು ತಮ್ಮ ಪ್ರವಾಸ ಕಥನದಲ್ಲಿ ದಾಖಲಿಸಿರುವುದು ಕಂಡುಬರುತ್ತದೆ.

ಹಂಪಿಗೆ ಬರೀ ವಿದೇಶ ಪ್ರವಾಸಿಗರು ಮಾತ್ರ ಬರಲಿಲ್ಲ. ದೇಶೀ ಪ್ರವಾಸಿಗರು (ದೇಶೀ ಎಂಬ ಪದವನ್ನು ಭಾರತೀಯರು ಎಂಬ ಅರ್ಥದಲ್ಲಿ ಬಳಸಲಾಗಿದೆ)ಹಂಪಿಗೆ ಬಂದು ವಿರೂಪಾಕ್ಷನ ದರ್ಶನ ಮಾಡಿದ್ದರ ಬಗ್ಗೆ, ವಿರೂಪಾಕ್ಷ ದೇವಾಲಯದ ಮುಖ್ಯ ಗೋಪುರ ಕಂಡು ಆನಂದಭರಿತರಾದ ಬಗ್ಗೆ, ಅಲ್ಲದೆ ಹಂಪಿಯ ನಾನಾ ಕಡೆಗೆ ತಿರುಗಾಡಿ ಹರ್ಷಗೊಂಡ ಬಗ್ಗೆ ಅನೇಕ ಶಾಸನಗಳು ದಾಖಲಿಸಿವೆ. ಪ್ರಸ್ತುತ ಲೇಖನದಲ್ಲಿ ನಾನು ಹಂಪಿ ಶಾಸನಗಳಲ್ಲಿ ಉಲ್ಲೇಖಿತವಾದ ದೇಶೀ ಪ್ರವಾಸಿಗರನ್ನು ಕುರಿತು ವಿಶ್ಲೇಷಿಸುವ ಪ್ರಯತ್ನ ಮಾಡಿದ್ದೇನೆ. ನನ್ನ ಈ ಅಧ್ಯಯನವನ್ನು ಈ ಕೆಳಕಂಡಂತೆ ವರ್ಗೀಕರಿಸಿಕೊಂಡಿದ್ದೇನೆ.

೧) ರಾಜಪರಿವಾರದ ಪ್ರವಾಸಿಗರು ೨) ಉತ್ತರ ಭಾರತದ ಪ್ರವಾಸಿಗರು ೩.) ದಕ್ಷಿಣ ಭಾರತದ ಪ್ರವಾಸಿಗರು ೪) ಇತರೆ ಪ್ರವಾಸಿಗರು

೧) ರಾಜಪರಿವಾರದ ಪ್ರವಾಸಿಗರು :- 'ಹಂಪಿ' ಶತ-ಶತಮಾನಗಳಿಂದಲೂ ಪ್ರವಾಸಿಗರನ್ನು ಕೈಬೀಸಿ ಕರೆಯುವ ಸುಕ್ಷೇತ್ರ. ಯಾವುದೇ ರಾಜನಿರಲಿ ಹಂಪಿಯ ಮೂಲಕ ಹಾದು ಹೋಗಬೇಕಾಗಿ ಬಂದಾಗ ಅಥವಾ ಯುದ್ಧದಲ್ಲಿ ಗೆದ್ದು ಬಂದಾಗ ವಿರೂಪಾಕ್ಷನ ದರ್ಶನ ಪಡೆದು ಕೃತಾರ್ಥರಾಗಲು ಹಂಪಿಗೆ ಒಂದೆರಡರು ದಿನಗಳ ಮಟ್ಟಿಗೆ ಬಂದು ಹೋಗುತ್ತಿದ್ದರು. ಈ ಕುರಿತು ಕೆಲವು ಶಾಸನಗಳು ದಾಖಲಿಸಿವೆ. 'ರಾಮ ರಾಜು ತಿರುಮಲರಾಯಲು'[1] ಎಂದು ಹಂಪಿಯ ಒಂದು ಶಾಸನ ಪೆನುಗೊಂಡೆಯ ತಿರುಮಲರಾಯ ಹಂಪಿಗೆ ಬಂದಿದ್ದನ್ನು ಉಲ್ಲೇಖಿಸುತ್ತದೆ. ಮತ್ತೊಂದು ಶಾಸನವು 'ಜಿನಭಂಡಾರಂ ದೇಮರಸು''ಎಂದಿದೆ.[2] ಟಿನಭಂಡಾರದ ದೇಮರಸನು ಬಹುಶಃ ರಾಜವಂಶಸ್ಥನಾಗಿರಬಹುದು.

ಕೋಟಿಲಿಂಗ ಸ್ಥಳದಲ್ಲಿಯ ದೇವಸ್ಥಾನದ ಒಳಗೆ ಉಬ್ಬು ಶಿಲ್ಪಗಳ ಕೆಳಭಾಗದಲ್ಲಿ ಇರುವ ಶಾಸನವು "೧) ರಾಯಸ್ತರಾಮ ೨) ಚಂದ್ರದೀಕ್ಷಿತರು ೩) ಸಿಂಗಮ ೪)ಸಂಗ್ಯರಮ ೫) ಮಂಗರಸರು ೬) ಹಿರಿನಾಗರಸರು ೭) ಟಿಕನಾಗರಸರು ೮) ಕಾಮರಸರು"[3] ಎಂದು ಶಾಸನದ ರಾಮಚಂದ್ರ ದೀಕ್ಷಿತ ಸಿಂಗಮ, ಸಂಗ್ಯರಮ, ಮಂಗರಸರು, ಹಿರಿಯನಾಗರಸ, ಚಿಕ್ಕನಾಗರಸ, ಕಾಮರಸ' ಮುಂತಾದವರ ಹೆಸರುಗಳ್ನು ದಾಖಲಿಸುತ್ತದೆ. ಈ ಶಾಸನದಲ್ಲಿ ಬಹುತೇಕ ಹೆಸರುಗಳ ಮುಂದೆ 'ಅರಸು' ಎಂಬ ಪದ ಬಂದಿರುವುದರಿಂದ ಇವರು ಯಾವುದೋ ಒಬ್ಬ ರಾಜನ ಮಕ್ಕಳೊ ಅಥವಾ ಸಂಬಂಧಿಕರೋ ಇರಬಹುದೆಂದು ಊಹಿಸಲು ಸಾಧ್ಯವಿದೆ.

ಕನಕಗಿರಿ ಗೋಪುರದ ಕಂಬವೊಂದರಲ್ಲಿ "ಶ್ರೀ ರಾಯಣರಾಜ"[4] ಎಂದು ಶಾಸನ ಉಲ್ಲೇಖಿಸುತ್ತದೆ. ಈ ರಾಯಣರಾಜನು ಯಾವುದೋ ಒಂದು ಪ್ರಾಂತ್ಯದ ಪ್ರಾಂತ್ಯಾಧಿಕಾರಿಯಾಗಿರಬಹುದೇ ? ಅಥವಾ ಒಂದು ಪಾಳೆಪಾಟ್ಟಿನ ಪಾಳೆಯಗಾರನಾಗಿರಬಹುದೇ? ಅಥವಾ ಸ್ವತಃ ರಾಜನೇ ಆಗಿರಬಹುದು. ಏಕೆಂದರೆ ಈತನ ಉಲ್ಲೇಖ ಬರುವುದು ಗೋಪುರದ ಕಂಬವೊಂದರಲ್ಲಿ. ಹಜಾರರಾಮಸ್ವಾಮಿ ದೇವಾಲಯದ ಗರ್ಭಗೃಹದ ಎಡಗೋಡೆಯ ಮೇಲೆ "ಹ.....ಮ... ವಾಯ ವೀರರಸಸನ ಮಗ ವೀರ.... ರಾಯ.... ಗವಿರಯ...[5] ಎಂದು ಶಾಸನ ದಾಖಲಿಸುತ್ತದೆ. ಇದರಲ್ಲಿ 'ವೀರರಸ' ಮತ್ತು 'ರಾಯ' ಎಂಬ ಪದಗಳನ್ನು ನೋಡಿದರೆ ಇವರೂ ಸಹ ಯಾವುದೋ ದೇಶದ ರಾಜರಾಗಿದ್ದು, ಹಜಾರರಾಮಸ್ವಾಮಿ ದೇವಸ್ಥಾನಕ್ಕೆ ಬಂದು ದೇವರದರ್ಶನ ಪಡೆದು ಏನೋ ದಾನ ನೀಡಿ ಹೋಗಿರುವಂತಿದೆ.

ಎಚ್.ಪಿ. ಸಿಯ ಚರ್ಚ್ ಎದುರು ಗುಂಡಿನ ಮೇಲಿನ ಕ್ರಿ. ಶ. ೧೫೫೧ ರ ಶಾಸನವು "ವಿರೋಧ ಕೃತು ಸಂವತ್ಸರದ

ಪ (ಪು)ಶ್ಯ ತು ೨ ಮಂಗಳವಾರದಲು ಶ್ರೀ

ಶ್ರೀ ಮನ(ನ್ಮ)ಹಾ ಮಂಡಲೇಶ್ವರ ಟಿಕತಿಂ

ಮ ರಾಜ ಕೊಂಡಯ್ಯದೇವ ಮಹಾ ಅರಸುಗ

ಳು ತಂಮ..... ಪುಂಣ್ಯ ಕಾಲದಲು"[6]

ಎಂದು ಒಂದು (ಅನ್ಯ)ಪ್ರಾಂತ್ಯದ (ಬಹುಶಃ ವಿಜಯನಗರ ಸಾಮ್ರಾಟರೇತರ ಸಾಮಂತನಾಗಿರಬಹುದು) ಮಹಾಮಂಡಳೇಶ್ವರನಾದ ಚಿಕ ತಿಮ್ಮರಾಜ ಕೊಂಡಯ್ಯ ದೇವನೆಂಬ ಮಹಾಅರಸು ವಿರೋಧ ಕೃತು ಸಂವತ್ಸರದ ಪುಶ್ಯ ಶುದ್ಧ ೨ ರ ಮಂಗಳವಾರ ದಂದು ಹಂಪಿಗೆ ಬಂದದ್ದನ್ನು ದಾಖಲಿಸುತ್ತದೆ.

ಕ್ರಿ. ಶ. ೨೭-೭-೧೫೪೪ ರ ತೆಲುಗು ಶಾಸನವು

"ಕಾಮುಂಗೋಲನಿ ಸೂರಪರಾಜು ಅನ್ನಯ್ಯಕೊಡಕು

ಅಂನಯ್ಯ (ನು) ಶ್ರೀ ತುಂಗಭದ್ರಾ ತೀರಂ ಭಾಷ್ಯರ ಕ್ಷೇತ್ರಮಂದಲ

ಶ್ರೀ ಪಂಪಾ ವಿರೂಪಾಕ್ಷ ದೇವಂಡು ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿ"[7]

ಎಂದು ಮುಂತಾಗಿ ಆಂಧ್ರದ ಕಾಮುಂಗೋಲ ಪ್ರದೇಶದ ರಾಜನಾದ ಸೂರಪರಾಜನು ಮಗನಾದ ಅನ್ನಯ್ಯ ತನ್ನ ಆಯುಷ್ಯ, ಆರೋಗ್ಯ ವೃದ್ಧಿಯಾಗಲೆಂದು ತುಂಗಭದ್ರಾ ತೀರದ ಭಾಷ್ಕರ ಕ್ಷೇತ್ರದ ಶ್ರೀ ಪಂಪಾ ವಿರೂಪಾಕ್ಷ ದೇವರಲ್ಲಿ ಬೇಡಿಕೊಂಡ ವಿವರವಿದೆ.

ಹಾಗೆಯೇ ಮತಂಗ ದೇವರ ಗುಹೆಯ ಹತ್ತಿರ ಇರುವ ಶಾಸನವು 'ರಾಟೆಯ ನಾಯ್ಕನು ನಾಗೆನಾಯ್ಕನು..... ಮತಂಗೇಶ್ವರ ದೇವರ ದರುಶನವಾಗಿ ಕೃತಾರ್ಥರಾದರು ಶ್ರೀರಾಮ"[8] ಎಂದು ರಾಟೆಯನಾಯ್ಕ, ನಾಗೆಯನಾಯ್ಕ ಮುಂತಾದವರು ಮತಂಗೇಶ್ವರ ದೇವರ ದರ್ಶನ ಪಡೆದು ಕೃತಾರ್ಥರಾದಂತೆ ತಿಳಿಸುತ್ತದೆ. ಈ ನಾಯಕರು ದೂರದ ಒಂದು ಪಾಳೆಪಟ್ಟಿನ ಅರಸರಾಗಿರಬಹುದು.

೨. ಉತ್ತರ ಭಾರತದ ಪ್ರವಾಸಿಗರು :- ದೇಶದ ಉತ್ತರ ಭಾಗದಿಂದ ಸಾವಿರಾರು ಮಂದಿ ಪ್ರವಾಸಿಗರು ಹಂಪಿಗೆ ಬಂದು ಹೋಗಿದ್ದರೂ ಆ ಕುರಿತು ಶಾಸನಗಳಲ್ಲಿ ಬಹಳಷ್ಟು ಉಲ್ಲೇಖವಾಗಿಲ್ಲ. ಹಂಪಿ ದಕ್ಷಿಣ ಭಾರತದ ಬಹುದೊಡ್ಡ ಯಾತ್ರಾಸ್ಥಳ ವಾದರೆ ಉತ್ತರ ಭಾರತದಲ್ಲಿ ಕಾಶಿ ಬಹುದೊಡ್ಡ ಯಾತ್ರಾಸ್ಥಳವಾಗಿದೆ. ದಕ್ಷಿಣದವರು ಉತ್ತರ ಭಾರತಕ್ಕೆ ಹೋದರೆ, ಉತ್ತರ ಭಾರತದವರು ದಕ್ಷಿಣ ಭಾರತಕ್ಕೆ ಪ್ರವಾಸ ಬರುವುದು ಬಹುಹಿಂದಿನಿಂದ ನಡೆದುಕೊಂಡು ಬಂದಿದೆ. ಹಂಪಿಯ ಕೆಲವು ಶಾಸನಗಳು ಮಾತ್ರ ಉತ್ತರ ಭಾರತದ ಕೆಲವು (ಒಂದೆರಡು) ಊರುಗಳ ನಿವಾಸಿಗಳು ಹಂಪಿಗೆ ಬಂದು ಹೋಗಿದ್ದರ ಬಗ್ಗೆ ದಾಖಲಿಸುತ್ತವೆ. ದೇವನಾಗರಿ ಲಿಪಿಯ ಕೆಲವು ಶಾಸನಗಳು ದಾಖಲಿಸಿರುವ ವ್ಯಕ್ತಿಗಳು ಉತ್ತರ ಭಾರತೀಯರಾಗಿರಬಹುದು.

ಕೋದಂಡರಾಮ ದೇವಸ್ಥಾನದ ಪಶ್ಚಿಮಕ್ಕೆ ನದಿಯಲ್ಲಿರುವ ಬಂಡೆಯ ಮೇಲಿನ ಕ್ರಿ. ಶ. ಸು. ೧೬ ನೇ ಶತಮಾನದ ಶಾಸನವು "ವಾರಣಾಸಿಯ ದೇವಂಗಣಗಳ ಮಗ

ವಾರಾಣಾಸಿಯ ಲಖಿಂಣ ಮಾಡಿದ ದೇಶ್ರೀ ಶ್ರೀ ಶ್ರೀ''[9] ಎಂದು ವಾರಾಣಾಸಿಯ ದೇವಣನ ಮಗ ಲಖಿಣ್ಣನು ಹಂಪಿಗೆ ಬಂದು ಹೋಗಿದ್ದನ್ನು ದಾಖಲಿಸುತ್ತದೆ. ಹಾಗೆಯೇ ಮತಂಗ ಪರ್ವತದ ದಕ್ಷಿಣಕ್ಕೆ ತುರ್ತುಕಾಲುವೆಯ ದಕ್ಷಿಣದ ಬಂಡೆಯ ಮೇಲಿರುವ ನಾಗರಲಿಪಿಯ ಶಾಸನವು''ಶ್ರೀ ವಾಸುದೇವ''[10] ಎಂದು ಉಲ್ಲೇಖಿಸುತ್ತದೆ. ಅಂದರೆ ಉತ್ತರ ಭಾರತದ ಸಂಸ್ಕೃತ ಜನ್ಯ ಭಾಷೆಗಳು ನಾಗರಿಲಿಪಿ ಬಳಸುವುದರಿಂದ ಈ ವ್ಯಕ್ತಿ ಉತ್ತರ ಭಾರತದ ವ್ಯಕ್ತಿಯಾಗಿರಬಹುದೆಂದು ಊಹಿಸಬಹುದಾಗಿದೆ.

ಮಾಲ್ಯವಂತ ಬೆಟ್ಟದ ಮೇಲೆ ರಘುನಾಥ ದೇವಾಲಯದ ಪಶ್ಚಿಮಕ್ಕೆ ಇರುವ ಗುಂಡಿನ ಮೇಲಿರುವ ಶಾಸನವು ''ಶ್ರೀ ಗಣೇಶ ಗೋವಿಂದೇವ, ತುತಾನ್ವಿಹೇ ಗರುಡೀ.... ಳ ಮಹಾಲಕ್ಷುಮಿ''[11] ಎಂಬ ದೇವನಾಗರಿಲಿಪಿಯ ಈ ಶಾಸನ ಗಣೇಶ, ಗೋವಿಂದ ಮತ್ತು ದೇವಿ ಮಹಾಲಕ್ಷ್ಮಿಯರನ್ನು ದಾಖಲಿಸುತ್ತದೆ. ಇದು ಸಹ ಉತ್ತರ ಭಾರತದವರ ಹೆಸರುಗಳನ್ನು ಹೇಳುತ್ತದೆ ಎಂದು ಖಚಿತವಾಗಿ ಹೇಳಲು ಬರುವುದಿಲ್ಲ. ದೇವನಾಗರಿಲಿಪಿ ಯಿಂದ ಈ ಶಾಸನ ಬರೆದಿರುವುದರಿಂದ ಇದರಲ್ಲಿ ಉಲ್ಲೇಖವಾಗಿರುವ ಹೆಸರುಗಳು ಉತ್ತರಭಾರತದ ಪ್ರವಾಸಿಗರ ಹೆಸರುಗಳಿರಬಹುದೆಂದು ಊಹಿಸಬಹುದಾ ಗಿದೆ.

ವಿರೂಪಾಕ್ಷ ದೇವಾಲಯದ ರಂಗಮಂಟಪದ ಉತ್ತರ ಪ್ರದೇಶದ ರಂಗಮಂಟಪ ದಲ್ಲಿ ಹಾಸಿರುವ ಕಲ್ಲಿನಲ್ಲಿರುವ ಶಾಸನವು ''ತಪತೀವಿಠಲ ಜೀಲಕಂಠವಿಠಲ''[12] ಎಂದು ದಾಖಲಿಸುತ್ತದೆ. ಇಲ್ಲಿರುವ ತಪತೀ ವಿಠಲ, ಜೀವಕಂಠವಿಠಲ ಎಂಬ ಹೆಸರುಗಳ ಪೂರ್ವದಲ್ಲಿ ಬರುವ 'ತಪತೀ'ಮತ್ತು 'ಜೀವಕಂಠ' ಎಂಬವವು ಪ್ರದೇಶವಾಟಿ ಅಥವಾ ಗ್ರಾಮ, ಪಟ್ಟಣಗಳ ಹೆಸರುಗಳಾಗಿರಬಹುದು. ಈ ಶಾಸನವೂ ಸಹ ದೇವನಾಗರಿ ಲಿಪಿಯಲ್ಲಿದೆ. ಇನ್ನು ಮುಂತಾದ ಶಾಸನಗಳು ಉತ್ತರಭಾರತದ ಪ್ರವಾಸಿಗರನ್ನು ಹೆಸರಿಸು ತ್ತದೆ. ಬಹುಶಃ ಸ್ಥಳೀಯರು ಅಥವಾ ದಕ್ಷಿಣ ಭಾರತದ ಪ್ರವಾಸಿಗರು ದೇವನಾಗರಿ ಲಿಪಿಯನ್ನು ಬಳಸುವುದಿಲ್ಲ. ದೇವನಾಗರಿಲಿಪಿಯನ್ನು ಬಳಸುವವರು ಬಹುತೇಕ ಉತ್ತರಭಾರತೀಯರಾಗಿದ್ದಾರೆ. ಉತ್ತರ ಭಾರತದಿಂದ ಹಂಪಿಗೆ ಪ್ರವಾಸ ಬಂದವರೇ ಇಲ್ಲಿನ ಕಲ್ಲು -ಬಂಡೆಗಳ ಮೇಲೆ ತಮ್ಮ ಹೆಸರುಗಳನ್ನು ದೇವನಾಗರಿಲಿಪಿ ಯಲ್ಲಿ ಬರೆದಿದ್ದಾರೆಂದು ಖಚಿತವಾಗಿ ಹೇಳಲು ಅವಕಾಶವಿದೆ. ಉತ್ತರ ಭಾರತದ ಬಹುತೇಕ ಎಲ್ಲಾ ಭಾರತೀಯ ತಮ್ಮ ಮಾತೃಭಾಷೆಗಳಿಗೆ ದೇವನಾಗರಿ ಲಿಪಿ ಬಳಸುತ್ತಿರು ವುದನ್ನು ಇಂದಿಗೂ ಕಾಣಬಹುದು.

ಒಂದರೆಡು ಶಾಸನಗಳು ಮಾತ್ರ ಉತ್ತರ ಭಾರತದ ಊರುಗಳನ್ನು ವ್ಯಕ್ತಿಗಳ ಜೊತೆ ಉಲ್ಲೇಖಿಸಿರುವುದನ್ನು ಬಿಟ್ಟರೆ ಉಳಿದ ಶಾಸನಗಳು ಕೇವಲ ವ್ಯಕ್ತಿಗಳ ಹೆಸರು ಗಳನ್ನು ಮಾತ್ರ ದೇವನಾಗರಿ ಲಿಪಿಯಲ್ಲಿ ದಾಖಲಿಸಿವೆ. ದೇವನಾಗರಿ ಲಿಪಿಯಿಂದ ಹೆಸರುಗಳನ್ನು ಬರೆದಿರುವುದರಿಂದ ಇವರು ಉತ್ತರ ಭಾರತದವರಾಗಿರಬಹುದೆಂದು ಅರ್ಥೈಸಬಹುದು.

೩. ದಕ್ಷಿಣ ಭಾರತದ ಪ್ರವಾಸಿಗರು :- ದಕ್ಷಿಣ ಭಾರತದ ಪ್ರವಾಸಿಗರು ತಮ್ಮ ಮಾತೃಭಾಷೆಯಲ್ಲಿ ಹಂಪಿಗೆ ಬಂದ ನೆನಪಿಗಾಗಿ ಶಾಸನ ಬರೆದಿದ್ದಾರೆ. ಇವರುಗಳನ್ನು ಮೂರು ರೀತಿಯಲ್ಲಿ ವರ್ಗೀಕರಿಸಿಕೊಂಡು ಅಧ್ಯಯನಕ್ಕೆ ಒಳಪಡಿಸಲಾಗಿದೆ. ೧) ಆಂಧ್ರ ಪ್ರದೇಶದ ಪ್ರವಾಸಿಗರು ೨) ಕರ್ನಾಟಕದ ಪ್ರವಾಸಿಗರು. ಮತ್ತು ೩) ತಮಿಳುನಾಡಿನ ಪ್ರವಾಸಿಗರು.

೧) ಆಂಧ್ರಪ್ರದೇಶದ ಪ್ರವಾಸಿಗರು :- ಆಂಧ್ರಪ್ರದೇಶದ ಪ್ರವಾಸಿಗರು ಹಂಪಿಗೆ ಬಂದು ಹಂಪಿಯ ನಾಲ್ಕಾರು ಕಡೆ ಸುತ್ತಾಡಿ ಹೋಗಿದ್ದರ ಬಗ್ಗೆ ತೆಲುಗಿನಲ್ಲಿಯೇ ಶಾಸನ ಬರೆದಿರುವುದನ್ನು ಕಾಣಬಹುದು. ಬರೀ ಗಂಡಸರಷ್ಟೇ ಅಲ್ಲದೆ ಹೆಂಗಸರೂ ಪ್ರವಾಸ ಬಂದುದರ ಬಗ್ಗೆ ಶಾಸನಗಳು ದಾಖಲಿಸುತ್ತವೆ.

ಕೃಷ್ಣಸ್ವಾಮಿ ದೇವಾಲಯದ ಈಶಾನ್ಯಕ್ಕೆ ವಿರೂಪಾಕ್ಷ ದೇವಾಲಯಕ್ಕೆ ಹೋಗುವ ಹಳೇ ರಸ್ತೆಯ ಪಶ್ಚಿಮಕ್ಕೆ ಇರುವ ಬಂಡೆಯ ಮೇಲಿರುವ ಕ್ರಿ. ಶ. ೧೬ ನೇ ಶತಮಾನದ ತೆಲುಗು ಶಾಸನವು "ತಿರುಪತಿ ಬೆಹರಿ ಗಂಧಂ ಬಸುವಯ್ಯ ತೇವಾ"[13] ಎಂದು 'ತಿರುಪತಿಯ ಬಸುವಯ್ಯ' ಎಂಬ ೭ ವ್ಯಕ್ತಿ ಹಂಪಿಗೆ ಬಂದ ಹೋಗಿದ್ದನ್ನು ದಾಖಲಿಸುತ್ತದೆ. ಹಜಾರರಾಮಸ್ವಾಮಿ ದೇವಾಲಯದ ಬಾಗಿಲ ಬಳಿ ನೆಲಕ್ಕೆ ಹಾಸಿರುವ ಕಲ್ಲಿನಲ್ಲಿರುವ ಶಾಸನವು ತಿಂಮಯ"[14] ಎಂದು ಉಲ್ಲೇಖಿಸುತ್ತದೆ. ಅಂದರೆ 'ತಿಮ್ಮಯ್ಯ' ಎಂಬ ವ್ಯಕ್ತಿಯ ಹೆಸರನ್ನು ದಾಖಳಿಸುತ್ತದೆ ಈ ತಿಮ್ಮಯ್ಯ ಆಂಧ್ರದವನಿರ ಬಹುದು. ಏಕೆಂದರೆ ಆಯಾ ಪ್ರದೇಶದ ಪ್ರಚಲಿತ ದೇವರುಗಳ ಹೆಸರುಗಳನ್ನು ತಮ್ಮ ಮಕ್ಕಳಿಗೆ ನಾಮಕರಣ ಮಾಡುವುದು ಎಲ್ಲರಿಗೂ ತಿಳಿದಿರುವ ವಿಷಯವಾಗಿದೆ. ಆದ್ದರಿಂದ ಈ ತಿಮ್ಮಯ್ಯ ತಿರುಪತಿ ಪ್ರದೇಶದವನಾಗಿರಬಹುದು. ಆನೆಶಾಲೆಯ ಹಿಂದಿರುವ ವೈಷ್ಣವ ದೇವಾಲಯದ ಮಾಳಿಗೆಯ ಒಳಮೈ ಮೇಲೆ ಇರುವ ತೆಲುಗು ಭಾಷೆಯ ಶಾಸನವು "ಜನಾರ್ದನುನಿ ಸೇವ ಪರುಡು ಬರುಲಿ ಕೊ (ಕೊಂ)ಡ್ಡಯ್ಯ"[15] ಎಂದು ಜನಾರ್ಧನ ದೇವರ ಸೇವಕ (ಭಕ್ತ) ಬರುಲಿ ಕೊಂಡಯ್ಯನನ್ನು ಹೆಸರಿಸುತ್ತದೆ. 'ಬರುಲಿ 'ಎಂಬುದು ಬಹುಶಃ ಆಂಧ್ರದ ಒಂದು ಊರಾಗಿರಬಹುದು. ಹಾಗೆಯೇ ರಾಣಿವಾಸದ ಉತ್ತರ ಗೋಪುರದ ಬಳೆಯ ಸಣ್ಣ ಬಾಗಿಲ ಹಿಂದಿನ ಬಂಡೆಯ ಮೇಲಿರುವ ತೆಲುಗು ಶಾಸನವು "ಒಬಳೇಶಡು"[16] ಎಂದು ಉಲ್ಲೇಖಿಸುತ್ತದೆ. ಅಂದರೆ 'ಒಬಳೇಶ್ವರ'ಎಂಬ ವ್ಯಕ್ತಿ ಹಂಪಿಗೆ ಬಂದಿದ್ದರ ಬಗ್ಗೆ ತಿಳಿಸುತ್ತದೆ. ಮಾಲ್ಯವಂತದಿಂದ ಮುಂದೆ ಇರುವ ಬಂಡೆಯ ಮೇಲಿರುವ ತೆಲುಗು ಶಾಸನವು "ಅಗರಾಮುಡ"[17] ಎಂದು 'ಅಗ ರಾಮಣ್ಣನನ್ನು' ದಾಖಲಿಸುತ್ತದೆ.

ಒಟ್ಟಾರೆಯಾಗಿ ಈ ಮೇಲಿನ ಶಾಸನಗಳು ತೆಲುಗು ಭಾಷೆ ಮತ್ತು ಲಿಪಿಯಿಂದ ರಚಿತವಾಗಿರುವುದರಿಂದ ಇಲ್ಲಿನ ವ್ಯಕ್ತಿಗಳು ಆಂಧ್ರದವರಾಗಿದ್ದು, ಹಂಪಿಗೆ ಪ್ರವಾಸ

ಬಂದ ಹೋಗಿರಬಹುದೆಂದು ಊಹಿಸಬಹುದು. ಬಹುಶಃ ಇವರ ಜೊತೆ ಸ್ತ್ರೀಯರೂ ಬಂದಿರುವ ಸಾಧ್ಯತೆ ಇದೆ ಈ ಕುರಿತು ಹೆಚ್ಚಿನ ಅಧ್ಯಯನದ ಅಗತ್ಯವಿದೆ.

೨. **ತಮಿಳು ನಾಡಿನ ಪ್ರವಾಸಿಗರು :-** ತಮಿಳುನಾಡಿನ ಪ್ರವಾಸಿಗರು ಹಂಪಿಗೆ ಬಂದು ಹೋಗಿದ್ದರ ಬಗ್ಗೆ ಒಂದೆರಡು ಶಾಸನಗಳು ದಾಖಲಿಸಿವೆ. ಈ ಶಾಸನಗಳು ತಮಿಳು ಭಾಷೆ ಮತ್ತು ಲಿಪಿಯಲ್ಲಿ ರಚಿತವಾಗಿವೆ. ಆದ್ದರಿಂದ ಈ ಶಾಸನಗಳಲ್ಲಿ ದಾಖಲಾದ ವ್ಯಕ್ತಿಗಳು ತಮಿಳುನಾಡಿನವರಾಗಿರಬಹುದೆಂದು ಭಾವಿಸಬಹುದಾಗಿದೆ.

ಹಜಾರರಾಮಸ್ವಾಮಿ ದೇವಾಲಯದ ಗೋಡೆಯ ಮೇಲಿರುವ ತಮಿಳು ಭಾಷೆಯ ಶಾಸನವು "ನಿಜತಿಮ(ರಾ)ಮಿಕೂನ್"[18] ಎಂದು 'ತಿಮ್ಮರಾಮಿಕೂನ'ನನ್ನು ಹೆಸರಿಸುತ್ತದೆ. ತಳವಾರ ಘಟ್ಟದ ಹತ್ತಿರ ಹಳೆರಸ್ತೆ -ಹೊಸರಸ್ತೆ ಕೂಡುವ ಸ್ಥಳದ ಹತ್ತಿರ ಬಂಡೆಯ ಮೇಲೆ ಇರುವ ಶಾಸನವು "ನಮ್ಮ ಅಳ್ವಾರುಲ"[19] ಎಂದು ಯಾವುದೋ ಒಬ್ಬ ವ್ಯಕ್ತಿಯ ಹೆಸರನ್ನು ದಾಖಲಿಸುತ್ತದೆ. 'ಅಳ್ವಾರುಲ'ಎಂಬ ಪದ ಬಳಸಿರುವುದರಿಂದ ಈ 'ಅಳ್ವಾರುಲ'ತಮಿಳುನಾಡಿನ ಪ್ರದೇಶದವನಾಗಿರಬಹುದೆಂದು ಭಾವಿಸಲಾಗಿದೆ.

ವಿರೂಪಾಕ್ಷ ದೇವಾಲಯದ ರಂಗಮಂಟಪದ ಮಧ್ಯೆ "ಕಳಹತ್ತಿ ಕ.... ಮ..ಕುಪನು"[20] ಎಂದು ಶಾಸನ ಕಾಳಹಸ್ತಿ ಕುಪನನ್ನು ಹೆಸರಿಸುತ್ತದೆ. ಅಲ್ಲದೆ ಇದೇ ದೇವಾಲಯದ ವಾಯುವ್ಯಕ್ಕೆ ವಿದ್ಯಾರಣ್ಯಮಂಟಪದ ಸ್ನಾನ ಘಟ್ಟದ ಬಳಿ ಇರುವ ಚಿಕ್ಕ ಗುಡಿಯ ಗೋಡೆಯ ಮೇಲೆ ಇರುವ ಕ್ರಿ. ಶ. ಸು. ೧೫-೧೬ ನೇ ಶತಮಾನದ ಶಾಸನವು "ರಾಮಾಭಟಯನ ಮಪ (ಗ) ಪ್ರಸಂನ ಕಾಳಹಸ್ತಿ ಈಶ್ವರು ತೀರ್ಥನು"[21]. ಎಂದು ಕಾಳಹಸ್ತಿಯ ರಾಮಭಟ್ಟರ ಮಗ ಈಶ್ವರ ತೀರ್ಥನು ಹಂಪಿಗೆ ಬಂದುದ್ದನ್ನು ದಾಖಲಿಸುತ್ತದೆ. ಇಲ್ಲಿಯ ಕಾಳಹಸ್ತಿ ತಮಿಳುನಾಡಿನದಾಗಿರಬಹುದು.

೩. **ಕನ್ನಡನಾಡಿನ ಪ್ರವಾಸಿಗರು :-** ಕರ್ನಾಟಕದ ವಿವಿಧ ಭಾಗಗಳಿಂದ, ಹತ್ತಾರು ಊರುಗಳಿಂದ ಪ್ರವಾಸಿಗರು ಹಂಪಿಗೆ ಬಂದು ವಿರೂಪಾಕ್ಷನ ದರ್ಶನ ಪಡೆದು ಕೃತಾರ್ಥರಾದ ಬಗ್ಗೆ ಶಾಸನಗಳು ದಾಖಲಿಸಿವೆ. ಅವರು ವಿವಿಧ ಕಾಲ ಘಟ್ಟಗಳಲ್ಲಿ ಹಂಪಿಗೆ ಬಂದಿರುವುದು ಶಾಸನಗಳಲ್ಲಿ ಕಂಡು ಬರುತ್ತದೆ. ಹಂಪಿಯ ಶ್ರೀ ವಿರೂಪಾಕ್ಷ ದೇವರು ಕನ್ನಡಿಗರ ಆರಾಧ್ಯದೈವಗಳಲ್ಲೊಂದೆಂಬುದು ಗಮನಾರ್ಹ ಅಂಶ.

ಮತಂಗ ದೇವರ ಗುಹೆಯ ಹತ್ತಿರದ ಕೊಳದ ಬಳಿಯ ಬಂಡೆಯ ಮೇಲಿರುವ ಶಾಸನವು "ಪರಾಭವ ಸಂವತ್ಸರದ ಆಶ್ವಿಜ ಬ೯ ಆದಿವಾರದಲು ಭಾರಧ್ವಾಜ ಗೋತ್ರದ ಗೊಬುರ ಎ.... ದೇವಂಣಗಳ ಮಕ್ಕಳು ವಿಸಂಣಗಳು"[22] ಎಂದು ಗೊಬ್ಬೂರ ದೇವಣ್ಣನ ಮಗ ವಿಸಣ್ಣ (ಭಾರದ್ವಾಜ ಗೋತ್ರ)ನು ಪರಾಭವ ಸಂವತ್ಸರದ ಆಶ್ವೀಜ ಬಹುಳ೯ ರ ಆದಿತ್ಯವಾರದಂದು ಹಂಪಿಗೆ ಬಂದಿರುವುದನ್ನು ತಿಳಿಸುತ್ತದೆ. ಮತಂಗ ಪರ್ವತದ ವೀರಭದ್ರ ದೇವಾಲಯದ ಬಳಿಯಿರುವ ಬಂಡೆಯ ಶಾಸನವು "ಪಿಂಗಳ ಸಂವತ್ಸರದ

ಏಕಾದೆಸೆ ಭಾನುವಾರದಲು ಮಟ್ಟರಸರ ಮಂಗಾಯ ಮಂಗಳು ರಾಮಾಯಿ ವಿರು (ಪ್ರಾಕ್ಷ ದೇವರು ಕಳಸವನು ಕಂಡು ನಮಸ್ಕಾರವನು ಮಾಡಿ ಕೃತಾರ್ಥ ಆವಳು.... ಪೂವಾಯಿ ಕಲ್ನಾಯಿ ನಿಟ್ಟೂರ ದೇವಂಣ"[23] ಎಂದು ನಿಟ್ಟೂರಿನ ನಾನಾ ವ್ಯಕ್ತಿಗಳು ಅಂದರೆ ರಾಯಣ್ಣ. ಧೂಭಪ್ಪನ ಮಗಮಯನಪ್ಪ ಮಯಿಲಪ್ಪನ ತಾಯಿ ಸತಾಯಿ, ಮಲ್ಲಪ್ಪ, ಮಾಯಕ ಈಕೆಯ ಮಕ್ಕಳಾದ ಪೂವಾಯಿ ಕಲ್ನಾಯಿ ನಿಟ್ಟೂರ ದೇವಣ್ಣ. ಅಲ್ಲದೆ ಮಟ್ಟರಸ ಮತ್ತು ಮಂಗಾಯರ ಮಗಳಾದ ರಾಮಾಯಿಯು ಹಂಪಿಗೆ ಬಂದು ಮತಂಗ ಪರ್ವತವನ್ನೇರಿ ವಿರೂಪಾಕ್ಷ ದೇವರ ಕಳಸವನ್ನು ಕಂಡು ಕೃತಾರ್ಥರಾದರೆಂದು ಶಾಸನ ದಾಖಲಿಸುತ್ತದೆ. ಬಹುಶಃ ಈ ಪ್ರವಾಸಿ ತಂಡ ಮೈಸೂರು ಪ್ರಾಂತದ್ದಿರಬಹುದು. ಇವರು ಪಿಂಗಳ ಸಂವತ್ಸರದ ಏಕಾದಶಿ ಭಾನುವಾರದಂದು ಹಂಪಿಗೆ ಬಂದಿರುವರು.

ಇದೇ ದೇವಾಲಯದ ಬಳಿಯ ಇನ್ನೊಂದು ಶಾಸನವು "ಶ್ರೀ ಪ್ಲವಂಗ ಸಂ ಭಾದ್ರಪದ ಬ೧ಗ ಬಾಗಿಯ ಹಳಿಯ ಹರಿಯಪನ ಮಗ ನಾಗಪ ಬಂದನು"[24] ಎಂದು ಬಾಗಿಯ ಹಳ್ಳಿಯ ಹರಿಯಪ್ಪನ ಮಗ ನಾಗಪ್ಪ ಶ್ರೀ ಪ್ಲವಂಗ ಸಂವತ್ಸರದ ಭಾದ್ರಪದ ಬಹುಳ ೧ ರಂದು ಹಂಪಿಗೆ ಬಂದ್ದನ್ನು ದಾಖಲಿಸುತ್ತದೆ. ವೈಷ್ಣವ ದೇವಾಲಯದ ಪೂರ್ವಗೋಡೆಯ ಮೇಲಿರುವ ಶಾಸನವು "ಬಂಕಾಪುರದ ಶಂಕರನಾರಾಯಣ"[25] ಎಂದು ಬಂಕಾಪುರ ಗ್ರಾಮದ ಶಂಕರನಾರಾಯಣ ಎಂಬ ವ್ಯಕ್ತಿಯನ್ನು ದಾಖಲಿಸುತ್ತದೆ. ಹಾಗೆಯೇ ವಿಠಲ ದೇವಾಲಯದ ಸಭಾ ಮಂಟಪದ ಮೆಟ್ಟಿಲ ಮೇಲಿರುವ ಶಾಸನವು "ವಿಲುಕೋಟಿಯ ಮಲಯ' ಮತ್ತು 'ತೊಂಟೆ ತಿಂಮಯ'[26] ಎಂಗು ವಿಲುಕೋತಿ ಗ್ರಾಮದ ಮಲ್ಲಯ್ಯ ಮತ್ತು ತೊರೆ ಗ್ರಾಮದ ತಿಮ್ಮಯ್ಯ ಎಂಬ ವ್ಯಕ್ತಿಗಳನ್ನು ದಾಖಲಿಸುತ್ತದೆ. ಇವರು ಬಹುಶಃ ಬಂಧುಗಳಿರಬಹುದು.

ಮತಂಗ ಪರ್ವತದ ಪೂರ್ವಕ್ಕೆ ತುರ್ತಾ ಕಾಲುವೆ ಮೇಲಿರು ಗುಂಡಿನ ಮೇಲೆ ಇರುವ ಶಾಸನವು "ಕಟ್ಟೆ ನಾಗಯನ ಮಂಮಗನೂ ಮಲ್ಲಯನು"[27] ಎಂದು ಉಲ್ಲೇಖಿಸುತ್ತದೆ. ನಾಗಯನ ಮೊಮ್ಮಗ ಮಲ್ಲಯ್ಯನು 'ಕಟ್ಟೆ' ಗ್ರಾಮದವನಾಗಿರ ಬಹುದು. ಮೌಲ್ಯವಂತದಿಂದ ಮುಂದೆ ಇರುವ ಬಂಡೆಯ ಮೇಲೆ ಇರುವ ಶಾಸನವು "ದಂಮುರ ಘನಪ್ಪ"[28] ಎಂದು ದಮ್ಮುಂದ ಗ್ರಾಮದ ಘನಪ್ಪನನ್ನು ಉಲ್ಲೇಖಿಸು ತ್ತದೆ. ಅಲ್ಲದೆ ಮತಂಗ ದೇವರ ಗುಹೆಯ ಮೇಲಿನ ಬಂಡೆಯಲ್ಲಿನ ಶಾಸನವು "ಪರಿಧಾಮ ಸಂವತ್ಸರದ ಪಾಲ್ಗುಣ ಪಾಡಿವ .... ದಲು.... ಬಂಮಿಸೆಟ್ಟಿ ಬರಮಸೆಟ್ಟಿ"[29] ಎಂದು ಬಮ್ಮಿ ಶೆಟ್ಟಿ ಮತ್ತು ಭರ್ಮಶೆಟ್ಟಿ ಮತ್ತು ರಾಮಶೆಟ್ಟಿಯರನ್ನು ಉಲ್ಲೇಖಿಸು ತ್ತದೆ. ಇವರು ಬಹುಶಃ ಸಹೋದರರು ಅಥವಾ ಸೋದರ ಸಂಬಂಧಿ ಗಳಾಗಿರಬಹುದು. ಇವರುಗಳು ಪರಿಧಾವಿ ಸಂವತ್ಸರದ ಪಾಲ್ಗುಣ ಮಾಸದಲ್ಲಿ ಹಂಪಿಗೆ ಬಂದಿರುವುದನ್ನು ಶಾಸನ ದಾಖಲಿಸುತ್ತದೆ.

ಮತಂಗ ಪರ್ವತದ ಶಾಸನವು "ಸಾಳವಾಹನ ಶಕದ ರಉದ್ರಿ ಸಂವತ್ಸರದ ಅಶ್ವೀಜ ಸುಧ" ಸೋಮವಾರದಲು ಕ ಉಸಿಕ ವಿಸ್ವಾಮಿತ್ರ ಗೋತ್ರದ ತೊಂಬೆರಾಜನ ಮಲಪನ ಮಗ ಅನತಪನು ಮತಂಗ ದೇವರ ದರುಶನವಾದನು"[30] ಎಂದ ರೌದ್ರಿ ಸಂವತ್ಸರದ ಆಶ್ವೀಜ ಶುದ್ಧ ೧ ರ ಸೋಮವಾರದಂದು ಮಲಪನ ಮಗ ಅನಂತಪನು ಮತಂಗ ದೇವರ ದರ್ಶನವನ್ನು ಮಾಡಿದ್ದರ ಬಗ್ಗೆ ವಿವರಿಸುತ್ತದೆ. ಈ ಶಾಸನದಲ್ಲಿ ಉಲ್ಲೇಖಿತವಾದ 'ಲೊಂಬೆರಾಜ' ಬಹುಶಃ ಒಂದು ಪ್ರದೇಶದ ಹೆಸರು ಅಥವಾ ಊರಿನ ಹೆಸರಾಗಿರಬಹುದೆಂದು ಊಹಿಸಬಹುದು.

ಇದೇ ಶಾಸನದ ಹತ್ತಿರ ಇನ್ನೊಂದು ಬಂಡೆಯ ಮೇಲಿರುವ ಶಾಸನವು "ಆಂಗಿರಸ ಸಂವತ್ಸರದ ಪುಷ್ಯ ತು. ೬ ಸೋಮಸಂಗಮ ಕೆತಪ್ಪನ ಮಗ ಮೊದಂಣನು ಮತಂಗ ಪರ್ವತಕ್ಕೆ ಬಂದು ವಿರೂಪಾಕ್ಷ ದೇವರ ಕಂಡು ಕೃತಾರ್ಥನಾದನು"[31] ಎಂದು ಉಲ್ಲೇಖಿಸುತ್ತದೆ. 'ಸೋಮಸಂಗನ'ದ ಕೆತಪ್ಪನು ಮಗ ಮಾದಣ್ಣ ಎಂಬುವನು ಆಂಗೀರಸ ಸಂವತ್ಸರದ ಪುಷ್ಯ ಶುದ್ಧ ೬ ರಂದು ಮತಂಗ ಪರ್ವತಕ್ಕೆ ಬಂದು ವಿರೂಪಾಕ್ಷ ದೇವರ ಮಹಾದ್ವಾರ ಕಂಡು ಕೃತಾರ್ಥರಾದ ಬಗ್ಗೆ ದಾಖಲಿಸುತ್ತದೆ. 'ಸೋಮಸಂಗ' ಎಂಬುದು ಒಂದು ಊರಿನ ಹೆಸರಾಗಿರಬಹುದು.

ಮತಂಗ ದೇವರ ಗುಹೆಯ ಎದುರು ಬಂಡೆಯಲ್ಲಿನ ಶಾಸನವು "ಪೊಗಳಪ..... ನ ಮಗ ರಂಗಪನು ತಾಯಿ ಬನದಮನು..... ಮದೇವಿಯ ಮಗ ಬೋಗಣನ ಮಗ ಗೋಪಣನ ತಾಯಿ ಮಾದಮ"[32] ಎಂದು ಪೊಗಳಪ, ರಂಗಪ ಅವನ ತಾಯಿ ಬನದಮ್ಮ, ಬೋಗಣ್ಣ ಮತ್ತು ಮಾದಮ್ಮನ ಮಗ ಗೋಪಣರು ಹಂಪಿಗೆ ಬಂದಿರುವು ದನ್ನು ಸೂಚಿಸುವಂತೆ ದಾಖಲಿಸಿದೆ. ಅಲ್ಲದೆ ಇದೇ ಸ್ಥಳದ ಕೊಳದ ಬಳಿಯ ಬಂಡೆ ಯಲ್ಲಿನ ಶಾಸನವು "ಪರಾಭವ ಸಂವತ್ಸರದ.. ಕಾಶ್ಯಪ ಗೋತ್ರದ ನರಸಿಂಹ ದೇವಗಳ ಮಗ ತು.... ಗೋಪಯ ಲಖಂಣಂಗಳ"[33] ಎಂದು ಪರಾಭವ ಸಂವತ್ಸರದಲ್ಲಿ ಕಾಶ್ಯಪ ಗೋತ್ರದ ನರಸಿಂಹ ದೇವನ ಮಕ್ಕಳಾದ ಗೋಪಯ ಮತ್ತು ಲಖಂಣ್ಣರು ಹಂಪಿಗೆ ಬಂದಿರುವ ಸಾಧ್ಯತೆಯನ್ನು ದಾಖಲಿಸಿದೆ.

ಕನ್ನಡ ನಾಡಿನ ಪ್ರವಾಸಿಗರು ವಿವಿಧ ಊರುಗಳಿಂದ ಬಂದುದ್ದರ ಬಗ್ಗೆ ವಿರೂಪಾಕ್ಷ, ಮತಂಗೇಶ್ವರ ದರ್ಶ ಪಡೆದುದರ ಬಗ್ಗೆ ಕನ್ನಡ ಭಾಷೆಯಲ್ಲಿ ಮತ್ತು ಅದೇ ಲಿಪಿ ಯಲ್ಲಿಯೇ ಶಾಸನ ಬರೆದಿದ್ದಾರೆ. ಇವರನ್ನು ಈ ಕಾರಣದಿಂದ ಕನ್ನಡ ನಾಡಿನ ಪ್ರವಾಸಿಗ ರೆಂದು ಕರೆದಿದ್ದೇನೆ.

೪) **ಇತರೆ ಪ್ರವಾಸಿಗರು :-** ಈ ಪ್ರವಾಸಿಗರನ್ನು ಕುರಿತು ಶಾಸನಗಳಲ್ಲಿ ಅಲ್ಲಲ್ಲಿ ಉಲ್ಲೇಖ ಕಂಡು ಬರುತ್ತದೆ. ಇವರು ಸ್ಥಳೀಯರೇ ಆಗಿರಬಹುದು ಇಲ್ಲವೆ ಬೇರೆ ಬೇರೆ ಪ್ರದೇಶಕ್ಕೆ. ಬೇರೆ ಬೇರೆ ರಾಜ್ಯಕ್ಕೆ, ಭಾಷೆಗಳಿಗೆ ಸಂಬಂಧಿಸಿದವರಾಗಿರಬಹುದು.

ಈ ಕುರಿತು ಶಾಸನಗಳು ಯಾವುದೇ ಮಾಹಿತಿ ನೀಡುವುದಿಲ್ಲ. ಇವರುಗಳ ಹೆಸರುಗಳನ್ನು ಮಾತ್ರ ಶಾಸನಗಳು ದಾಖಲಿಸುತ್ತವೆ.

ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೩ ರ ಹಂಪಿ ಶಾಸನಗಳಲ್ಲಿ ಕ್ರಮವಾಗಿ ೧೯, ೩೨, ೩೮, ೪೧, ೪೩, ೪೬, ೧೯೦, ೧೭೧, ೨೧೭, ೨೨೨, ೨೫೫, ಇನ್ನು ಮುಂತಾದ ಸಂಖ್ಯೆಯ ಶಾಸನಗಳು ಕೇವಲ ವ್ಯಕ್ತಿಯ ಹೆಸರುಗಳನ್ನು ಮಾತ್ರ ದಾಖಲಿಸುತ್ತವೆ. ''ವಿರೂಪಾಕ್ಷ ದೇವಾಲಯದ ವಿದ್ಯಾರಣ್ಯಮಂಟಪದ ಸ್ನಾನಘಟ್ಟದ ಬಳಿ ಇರುವ ಶಾಸನ ''(ಶ್ರೀ) ಪತಿಕ ವೀರಭದ್ರ''[34] ಎಂದೂ, ಅದೇ ದೇವಾಲಯದ ರಂಗಮಂಟಪದ ಪೂರ್ವಬಾಗಿಲ ಬಳಿಯ ಶಾಸನ ''ಮಾದಯ''[35] ಎಂದೂ, ಇದೇ ಶಾಸನದ ಕೆಳಗೆ ''ದೇವರಸಯ್ಯ ವೀರ....''[36], ಅದೇ ಸ್ಥಳದ ಇನ್ನೊಂದು ಶಾಸನ ಶಾಸನ ''ಬಸಪನಾ...''[37] ಅಲಿಲೇ ಇರುವ ಮತ್ತೊಂದು ಸಾಸನ ''ಬಸವಪ.... ಹಳಿ ತಿರುಪಯ್ಯ ಬೋದಕ ಮಾದಯ್ಯ''[38] ''ಅಲ್ಲೇ ಮೆಟ್ಟಿಲುಗಳ ಮೇಲೆ ನಾಗನಪನ ಬಿಂನಹ.... ಲಿಂಗಪನ ಬಿಂನಹ''[39] ಅದೇ ಜಾಗದಲ್ಲಿ ಅದೇ ಜಾಗದಲ್ಲಿ ''ಗೋಪಯ ಚಿತಾಪಣ್ಣ''[40] ಕೋಟಿ ಲಿಂಗದ ಹತ್ತಿರದ ಬಂಡೆಯ ಮೇಲೆ ''ವೀರಯ''[41] ''ತಿರುಮಪ'' ಅದೇ ಸ್ಥಳದ ಲಿಂಗದಗಳ ಸಮೂಹ ಹೊಂದಿರು ಮತ್ತೊಂದು ಬಂಡೆಯ ಮೆಲೆ ''ತಿಂಮಪ''[43] ಅದೇ ದೇವಾಲಯಡ ಉತ್ತರ ಗೋಪುರ ದ್ವಾರದ ನೆಲದ ಮೇಲಿನ ಶಾಸನವು ''ಬಲಪ್ರದಾಸ''[44]ಅದೇ ದೇವಾಲಯದ ಪ್ರಾಕಾರದ ಹೊರಗೆ ಪೂರ್ವ ಬಾಗಿಲ ಬಳಿ ನೆಲಕ್ಕೆ ಹಾಸಿರುವ ಕಲ್ಲಿನಲ್ಲಿರುವ ಸಾಸನವು ''ತಿಂಮಯ''[45] ಎಂದು ದಾಖಲಿಸಿದೆ.

ಈ ಮೇಲಿನ ಎಲ್ಲಾ ಶಾಸನಗಳು ಕೇವಲ ಒಂದೆರಡು ಪದಗಳ ಶಾಸನಗಳಾಗಿವೆ. ಇವುಗಳು ಕೇವಲ ವ್ಯಕ್ತಿಗಳ ಹೆಸರುಗಳನ್ನು ಮಾತ್ರ ದಾಖಲಿಸಿವೆ. ಈ ಶಾಸನಗಳಲ್ಲಿ ವೀರಭದ್ರ, ಮಾದಯ್ಯ, ದೇಮರಸಯ್ಯ, ಬಸವ, ತಿರುಪಯ್ಯ, ನಾಗಪ, ಲಿಂಗಪ, ಗೋಪಯ, ಚಿತಾಪಣ್ಣ, ವೀರಯ್ಯ, ತಿಮ್ಮಪ್ಪ, ತಿಮ್ಮಯ್ಯ, ಲಕ್ರೆ,ಬಲದ್ರದಾಸ ಇನ್ನು ಮುಂತಾದ ಹೆಸರುಗಳನ್ನು ನೋಡಿದರೆ ಇವರು ಸ್ಥಳೀಯರೇ ಆಗಿರುವ ಸಾಧ್ಯತೆಇದೆ. ಅಥವಾ ಹಂಪಿಗೆ ಹತ್ತಿರದ ಪ್ರದೇಶದರಿರಬಹುದು. ಇವರುಗಳು ತಮ್ಮ ಬಿಡುವಿನ ವೇಳೆ ಹಂಪಿಸುತ್ತಾಡಲು ಬಂದು ಈ ರೀತಿಯ ಹೆಸರುಗಳನ್ನು ಬರೆದು ಹೋಗಿರಬಹು ದೆಂದು ಊಹಿಸಲು ಸಾಧ್ಯವಿದೆ.

ಒಟ್ಟಾರೆಯಾಗಿ ಹೇಳುವುದಾದರೆ ವಿದೇಶಿ ಪ್ರವಾಸಿಗರಂತೆ ಅವರಿಗಿಂತಲೂ ಹತ್ತಾರುಪಟ್ಟು, ಹೆಚ್ಚು ದೇಶೀ ಪ್ರವಾಸಿಗರು ಹಂಪಿಗೆ ಬಂದು ಅದರ ವಿವಿಧ ಕಡೆ ಸುತ್ತಾಡಿ ಸಂದರ್ಶಿಸಿ, ಆನಂದಪಟ್ಟು ಕೃತಾರ್ಥರಾಗಿರುವುದು ವಾಸ್ತವಿಕ ಸತ್ಯ. ಈ ಕುರಿತು ಹಂಪಿಯ ಹತ್ತಾರು ಉಲ್ಲೇಖಿಸಿರುವುದು ಗಮನಾರ್ಹ ಅಂಶವಾಗಿದೆ. ಆಯಾ ಪ್ರದೇಶದ ಪ್ರವಾಸಿಗರು ತಮ್ಮ ಮಾತೃಭಾಷೆಯಲ್ಲಿಯೇ ತಮ್ಮ ಹೆಸರುಗಳನ್ನು ಬರೆದಿರುವುದು

ಈ ಅಧ್ಯಯನಕ್ಕೆ ತುಂಬಾ ಅನುಕೂಲವಾಗಿದೆ. ಎಲ್ಲ ವ್ಯಕ್ತಿಗಳೂ ತಮ್ಮ ಊರುಗಳ ಹೆಸರುಗಳನ್ನು ಉಲ್ಲೇಖಿಸದೆ ಬರಿ ತಮ್ಮ ಹೆಸರನ್ನಷ್ಟೇ ಉಲ್ಲೇಖಿಸಿ ದ್ದರಿಂದ ಅವರುಗಳ ನೆಲೆ ಕಂಡುಹಿಡಿಯುವುದು ಒಂದು ಶ್ರಮದಾಯಕ ಕೆಲಸವಾಗಿದೆ. ಈ ದೇಶೀ ಪ್ರವಾಸಿಗ ರನ್ನು ಕುರಿತು ಇನ್ನೂ ಹೆಚ್ಚಿನ ಸಂಶೋಧನೆ ಆಗಬೇಕಾಗಿದೆ.

ಅಡಿ ಟಿಪ್ಪಣಿಗಳು

1) ಕನ್ನಡ ವಿಶ್ವವಿದ್ಯಾಲಯಶಾಸನ ಸಂಪುಟು - ೩-ಹಂಪಿ ಶಾಸನಗಳು -ಸಂಖ್ಯೆ ೧೫೨, ಪುಟ - ೧೨೦
2) ಅದೇ ಶಾಸನ ಸಂಖ್ಯೆ - ೧೬೯ - ಪುಟ ೧೨೬
3) ಅದೇ ಶಾಸನ ಸಂಖ್ಯೆ - ೧೭೩ - ಪುಟ ೧೨೯
4) ಅದೇ ಶಾಸನ ಸಂಖ್ಯೆ - ೫೨ - ಪುಟ ೩೧
5) ಅದೇ ಶಾಸನ ಸಂಖ್ಯೆ - ೨೬೯ - ಪುಟ ೨೦೧
6) ಅದೇ ಶಾಸನ ಸಂಖ್ಯೆ - ೨೪೬ - ಪುಟ ೨೫೧
7) ಅದೇ ಶಾಸನ ಸಂಖ್ಯೆ - ೬೦ - ಪುಟ ೫೧
8) ಅದೇ ಶಾಸನ ಸಂಖ್ಯೆ - ೧೨೯ - ಪುಟ ೧೦೪
9) ಅದೇ ಶಾಸನ ಸಂಖ್ಯೆ - ೧೪೦ - ಪುಟ ೧೧೪
10) ಅದೇ ಶಾಸನ ಸಂಖ್ಯೆ - ೩೦೧ - ಪುಟ ೨೧೯
11) ಅದೇ ಶಾಸನ ಸಂಖ್ಯೆ - ೩೭೭ - ಪುಟ ೨೬೩
12) ಅದೇ ಶಾಸನ ಸಂಖ್ಯೆ - ೩೬ - ಪುಟ ೨೩
13) ಅದೇ ಶಾಸನ ಸಂಖ್ಯೆ - ೭೦ - ಪುಟ ೬೪
14) ಅದೇ ಶಾಸನ ಸಂಖ್ಯೆ - ೨೫೯ - ಪುಟ ೨೦೦
15) ಅದೇ ಶಾಸನ ಸಂಖ್ಯೆ - ೩೩೧ - ಪುಟ ೨೪೪
16) ಅದೇ ಶಾಸನ ಸಂಖ್ಯೆ - ೩೩೪ - ಪುಟ ೨೪೫
17) ಅದೇ ಶಾಸನ ಸಂಖ್ಯೆ - ೩೮೧ - ಪುಟ ೨೬೮
18) ಅದೇ ಶಾಸನ ಸಂಖ್ಯೆ - ೨೬೮ - ಪುಟ ೨೦೪
19) ಅದೇ ಶಾಸನ ಸಂಖ್ಯೆ - ೨೨೬ - ಪುಟ ೧೭೭
20) ಅದೇ ಶಾಸನ ಸಂಖ್ಯೆ - ೪೦ - ಪುಟ ೨೪
21) ಅದೇ ಶಾಸನ ಸಂಖ್ಯೆ - ೧೦ - ಪುಟ ೬
22) ಅದೇ ಶಾಸನ ಸಂಖ್ಯೆ - ೧೨೭ - ಪುಟ ೧೦೩
23) ಅದೇ ಶಾಸನ ಸಂಖ್ಯೆ - ೧೧೬ - ಪುಟ ೯೮

24) ಅದೇ ಶಾಸನ ಸಂಖ್ಯೆ - ೧೧೦ - ಪುಟ ೯೫
25) ಅದೇ ಶಾಸನ ಸಂಖ್ಯೆ - ೨೧೨ - ಪುಟ ೧೭೦
26) ಅದೇ ಶಾಸನ ಸಂಖ್ಯೆ - ೨೧೯, ೨೨೦ - ಪುಟ ೧೭೪
27) ಅದೇ ಶಾಸನ ಸಂಖ್ಯೆ - ೩೦೬ - ಪುಟ ೨೨೨
28) ಅದೇ ಶಾಸನ ಸಂಖ್ಯೆ - ೩೮೦ - ಪುಟ ೨೬೪
29) ಅದೇ ಶಾಸನ ಸಂಖ್ಯೆ - ೧೨೦ - ಪುಟ ೧೦೦
30) ಅದೇ ಶಾಸನ ಸಂಖ್ಯೆ - ೧೦೮ - ಪುಟ ೯೪
31) ಅದೇ ಶಾಸನ ಸಂಖ್ಯೆ - ೧೦೯ - ಪುಟ ೯೪
32) ಅದೇ ಶಾಸನ ಸಂಖ್ಯೆ - ೧೨೩ - ಪುಟ ೧೦೧
33) ಅದೇ ಶಾಸನ ಸಂಖ್ಯೆ - ೧೨೮ - ಪುಟ ೧೦೩
34) ಅದೇ ಶಾಸನ ಸಂಖ್ಯೆ - ೧೯ - ಪುಟ ೯
35) ಅದೇ ಶಾಸನ ಸಂಖ್ಯೆ - ೩೭ - ಪುಟ ೨೩
36) ಅದೇ ಶಾಸನ ಸಂಖ್ಯೆ - ೩೮ - ಪುಟ ೨೩
37) ಅದೇ ಶಾಸನ ಸಂಖ್ಯೆ - ೪೧ - ಪುಟ ೨೪
38) ಅದೇ ಶಾಸನ ಸಂಖ್ಯೆ - ೪೩ - ಪುಟ ೨೫
39) ಅದೇ ಶಾಸನ ಸಂಖ್ಯೆ - ೪೪ - ಪುಟ ೨೫
40) ಅದೇ ಶಾಸನ ಸಂಖ್ಯೆ - ೪೬ - ಪುಟ ೨೬
41) ಅದೇ ಶಾಸನ ಸಂಖ್ಯೆ - ೧೬೦ - ಪುಟ ೧೨೪
42) ಅದೇ ಶಾಸನ ಸಂಖ್ಯೆ - ೧೭೧ - ಪುಟ ೧೭೩
43) ಅದೇ ಶಾಸನ ಸಂಖ್ಯೆ - ೨೧೨ - ಪುಟ ೧೭೩
44) ಅದೇ ಶಾಸನ ಸಂಖ್ಯೆ - ೨೨೨ - ಪುಟ ೧೭೫
45) ಅದೇ ಶಾಸನ ಸಂಖ್ಯೆ - ೨೫೯ - ಪುಟ ೨೦೦

ಆಕರ ಗ್ರಂಥ

೧) ಡಾ. ದೇವರ ಕೊಡಾರೆಡ್ಡಿ ಮತ್ತು ಇತರರು (ಸಂ) ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - ೩ ಹಂಪಿ ಶಾಸನಗಳು - ಪ್ರಸಾರಾಂಗ ಕನ್ನಡ ವಿ. ವಿ. ಹಂಪಿ, ೨೦೦೦

೯. ವಿಜಯನಗರದ ಕಾಲದ ಒಂದು ಅಪೂರ್ವ ಶಾಸನ ಬ್ರಹ್ಮದೇಯವನ್ನು ವಾಪಸ್ಸು ಪಡೆದಿರುವ ವಿಶೇಷ ಪ್ರಸಂಗ

ಡಾ. ಎನ್.ನಂದೀಶ್ವರ

ಭಾರತೀಯ ಪರಂಪರೆಯಲ್ಲಿ ದಾನವನ್ನು ಕುರಿತು ಬೇರೆ ಬೇರೆ ರೀತಿಯಾಗಿ ವ್ಯಾಖ್ಯಾನಿಸಿದ್ದಾರೆ. ಸಂಪ್ರದಾಯಶೀಲ ಹಿಂದೂಗಳ ಜೀವನದಲ್ಲಿ ಸಾಧಿಸಬಯಸುವ ಧ್ಯೇಯಗಳ ಸಾಧನೆಗೆ ದಾನದ ಪರಿಕಲ್ಪನೆಯನ್ನು ಒಂದು ಸಾಧನವಾಗಿ ಬಳಸಲಾಗಿದೆ. ಹಿಂದೂ ಧರ್ಮಗ್ರಂಥಗಳಲ್ಲಿ ಹೇಳುವಂತೆ ದಾನ ಎಂದರೆ ಅಕ್ಷರಶಃ ಒಂದು ವಸ್ತುವಿನ ಉಡುಗೊರೆ. ಆದರೆ ಪ್ರಾಚೀನ ಭಾರತದ ಆಧ್ಯಾತ್ಮಿಕ ಜೀವನದಲ್ಲಿ ಅದಕ್ಕೆ ವಿಶೇಷವಾದ ಮಹತ್ವವಿದೆ.

ವಾರಿಯ ಸ್ತೃಸ್ತಿಮಾಪ್ನೋತಿ । ಸುಖಮಕ್ಷಯ್ಯಮನ್ನದ:
ತಿಲಪ್ರದ: ಪ್ರಜಾಮಿಷ್ಟಾಂ । ದೀಪದಶ್ಚಕ್ಷುರುತ್ತಮಂ ।
ಭೂಮಿದೋ ಭೂಮಿಮಾಪ್ನೋತಿ । ದೀರ್ಘಮಾಯುರ್ಹಿರಣ್ಯದ:
ಗೃಹದೋಗ್ರ್ಯಾಣಿ ವೇಶ್ಮಾನಿ । ರೂಪ್ಯದೋ ರೂಪಮುತ್ತಮಂ ।
ವಾಸೋದಶ್ಚಂದ್ರ ಸಾಲೋಕ್ಯ । ಮಶ್ವಿನಾಲೋಕ್ಯಮಶ್ವದ:
ಅನಡುದ್ಧ: ಶ್ರೀಯಂ ಮಷ್ಯಂ । ಗೋದೋ ಬ್ರಧ್ನಪ್ಯ ವಿಷ್ಟಪಂ ।

ಇದನ್ನು ಹೀಗೆ ತಿಳಿಯಬಹುದಾಗಿದೆ. ನೀರನ್ನು ಕೊಟ್ಟವನಿಗೆ ತೃಪ್ತಿ ದೊರಕುತ್ತದೆ. ಆಹಾರ ನೀಡಿದವನಿಗೆ ಅನಂತ ಸುಖ: ಭೂಮಿಯನ್ನು ನೀಡಿದವನಿಗೆ ದೇಶದ ಆಡಳಿತವೂ; ಸುವರ್ಣದಾನ ಮಾಡಿದವನಿಗೆ ದೀರ್ಘಾಯುಷ್ಯವೂ ದೊರಕುತ್ತದೆ. ಬೆಳ್ಳಿಯನ್ನು ದಾನ ಮಾಡಿದವನು ದೇಹಸೌಂದರ್ಯವನ್ನು ಪಡೆಯುತ್ತಾನೆ; ವಸ್ತ್ರದಾನ ಮಾಡಿದವನು ಚಂದ್ರಲೋಕವನ್ನು ಪಡೆಯುತ್ತಾನೆ; ಅಶ್ವದಾನ ಮಾಡಿದವನಿಗೆ ಅಶ್ವಿನೀ ದೇವತೆಗಳ ಲೋಕವು ದೊರಕುತ್ತದೆ; ಎತ್ತುಗಳನ್ನು ನೀಡಿದವನು ಐಶ್ವರ್ಯವನ್ನೂ; ಗೋವುಗಳನ್ನು ದಾನ ಮಾಡಿದವನು ಸೂರ್ಯಲೋಕವನ್ನು ಪಡೆಯುತ್ತಾನೆ.

ದಾನದ ಮಹತ್ವವನ್ನು ವರ್ಣಿಸುತ್ತಾ ಪಿ.ವಿ.ಕಾಣೆಯವರು ಹೀಗೆ ಹೇಳುತ್ತಾರೆ: ಕೃತಾ, ತ್ರೇತಾ, ದ್ವಾಪರ ಮತ್ತು ಕಲಿ ಈ ನಾಲ್ಕು ಯುಗಗಳ ಅತ್ಯಂತ ಮುಖ್ಯ ಸಾಧನ ವಿಧಾನಗಳು ಕ್ರಮವಾಗಿ ತಪಸ್ಸು, ಜ್ಞಾನ, ಯುಜ್ಞ ಮತ್ತು ದಾನ. ಗೃಹಸ್ಥಾಶ್ರಮವು

ಅತ್ಯಂತ ಮುಖ್ಯವಾದದ್ದು. ಏಕೆಂದರೆ ಗೃಹಸ್ಥರು ಇತರ ಎಲ್ಲಾ ಆಶ್ರಮಗಳಲ್ಲಿರುವವರಿಗೂ ಆಹಾರವನ್ನು ನೀಡುತ್ತಾನೆ ಎಂಬುದಾಗಿ ಮನುವು ಹೇಳುತ್ತಾನೆ. ಋಗ್ವೇದವೂ ದಾನವನ್ನು ಪ್ರಶಂಸಿಸುತ್ತದೆ.

ಭಾರತದಲ್ಲಿ ಗುಪ್ತರ ಕಾಲದಿಂದಲೂ ದಾನಗಳನ್ನು ದಾಖಲಿಸುವಾಗ ಶಾಸನಗಳು ಸಾಮಾನ್ಯವಾಗಿ ದಾನಿಯ ವಂಶಾವಳಿಯನ್ನು ನಿರೂಪಿಸುತ್ತವೆ. ಇದಕ್ಕೆ ಧಾರ್ಮಿಕವಾದ ಒಂದು ಕಾರಣವೂ ಇದೆ. ಅಶ್ವಲಾಯನ ಶ್ರೌತ ಸೂತ್ರದ ೯ನೆಯ ಅಧ್ಯಾಯದ ಮೂರನೆಯ ಸೂತ್ರವೂ ಕುಲಮಗ್ರೇ ಪರಿಕ್ಷೇತ ಯೇ ಮಾತೃತ: ಪಿತೃತಶ್ಚೇತಿ ಯಥೋಕ್ತ ಪುರನಸ್ತಾತ್' ಎಂದು ಹೇಳುತ್ತದೆ. ಕುಲ ಅಂದರೆ ಹುಟ್ಟು ಅಥವಾ ವಂಶವನ್ನು ತಂದೆ ಮತ್ತು ತಾಯಿ ಎರಡೂ ಕಡೆಗಳಿಂದ ಪರಿಶುದ್ಧಿಗಾಗಿ ಪರೀಕ್ಷಿಸಬೇಕು. ಮಾತೃತಃ ಪಿತೃತಶ್ಚ ವಿದ್ಯಾದಿಭಿಃ ದಶ ಪುರುಪ ಶುದ್ಧಿಃ ಕುಲಮ್ ಎಂಬುದಾಗಿ ಅಶ್ವಲಾಯನ ಗೃಹ್ಯಸೂತ್ರವು ಹೇಳುತ್ತದೆ. ತಾಯಿಯ ಕಡೆ ಮತ್ತು ತಂದೆಯ ಕಡೆ ಹತ್ತು ತಲೆಮಾರಿನವರೆಗೆ ವಿದ್ಯೆ ಮೊದ ಲಾದವುಗಳಲ್ಲಿ ಶುದ್ಧವಾಗಿದೆಯೆ ಎಂದು ಪರಿಶೀಲಿಸಬೇಕು. ಅಂತಹ ಪರಿಶುದ್ಧ ಕುಲದ ಒಬ್ಬ ವ್ಯಕ್ತಿ ಮಾತ್ರವೇ ದಾನ ನೀಡಲು ಮತ್ತು ಪರಿಗ್ರಹಿಸಲು ಅರ್ಹನು. ಶಾಸನಗಳಲ್ಲಿ ಬರುವ ವಂಶಾವಳಿಯ ವರ್ಣನೆಯು ದಾನ ಕೊಡಲು ದಾನಿಗಿರುವ ಅರ್ಹತೆಯನ್ನು ಸ್ಥಾಪಿಸಲು ಪ್ರಯತ್ನಿಸುತ್ತದೆ. ದೇವಲನ ಪ್ರಕಾರ ಒಂದು ದಾನಕ್ಕೆ ಆರು ಅಂಗಗಳು ಅಥವಾ ಭಾಗಗಳು ಇರುತ್ತವೆ. ಅವು: 1) ದಾನಿ, 2) ಪ್ರತಿಗ್ರಹಿ, 3) ಶ್ರದ್ಧೆ ಅಥವಾ ದಾನ ಪ್ರವೃತ್ತಿ, 4) ದಾನದ ವಸ್ತು. ಅದನ್ನು ದಾನಿಯು ವಿಹಿತವಾದ ರೀತಿಯಲ್ಲಿ ಸಂಪಾದಿಸಿರಬೇಕು. 5) ಸೂಕ್ತ ಕಾಲ ಮತ್ತು 6) ಸೂಕ್ತ ಸ್ಥಳ: ದಾನ ಶಾಸನಗಳು ಸಾಮಾನ್ಯವಾಗಿ ಈ ಆರು ಅಂಗಗಳನ್ನು ಒಳಗೊಂಡಿರುತ್ತವೆ.

ಹಿಂದೂ ಧರ್ಮದಲ್ಲಿ ದಾನಕ್ಕಿರುವ ಒಂದು ವಿಶೇಷ ಲಕ್ಷಣವೆಂದರೆ, ದಾನವನ್ನು ಕೊಡುವವನ ಮನಸ್ಸಿನಲ್ಲಿ ಉಪಕಾರ ಅಥವಾ ಸಹಾಯ ಮಾಡುತ್ತಿರುವ ಭಾವನೆಯಾಗಲಿ, ಪಡೆಯುವವನ ಮನಸ್ಸಿನಲ್ಲಿ ದಾಕ್ಷಿಣ್ಯದ ಭಾವನೆಯಾಗಲಿ, ಹಲ್ಲು ಕಿರಿಯುವ ಭಾವನೆಯಾಗಲಿ ಇಲ್ಲದಂತೆ ನೋಡಿಕೊಳ್ಳುವುದು. ಇದಕ್ಕೆ ಕಾರಣ ಇಲ್ಲಿರುವ ಭಾವನೆ ಪ್ರತಿಗ್ರಹಿಯು ದಾನವನ್ನು ಸ್ವೀಕರಿಸುವುದರ ಮೂಲಕ ದಾನಿಯು ಪುಣ್ಯವನ್ನು ಸಂಪಾದಿಸಲು ಸಹಾಯ ಮಾಡುತ್ತಾನೆ ಎಂಬುದು: ದಾನ ಮಾಡುವುದು ಒಂದು ಧಾರ್ಮಿಕವಾದ ಕರ್ತವ್ಯ ಎಂಬ ವಿಚಾರ ದಾನಿಯ ಮನಸ್ಸಿಗೆ ಬರುವುದು.

ಬಲಗೈ ಕೊಟ್ಟಿದ್ದು ಎಡಗೈಗೆ ತಿಳಿಯದ ಹಾಗಿರಬೇಕು ಎಂಬಂತೆ ದಾನವನ್ನು ರಹಸ್ಯವಾಗಿ ಕೊಡಬೇಕು ಎನ್ನುವುದು ಸ್ವಾರಸ್ಯಕರವಾದ ಸಂಗತಿಯಾದರೂ ದಾನ ಶಾಸನಗಳು ರಾಜರು, ಅಧಿಕಾರಿಗಳು ಮತ್ತಿತರರು ನೀಡಿದ ದಾನಗಳನ್ನು ಜೋರಾಗಿ ಘೋಷಿಸುತ್ತವೆ. ಇದಕ್ಕೆ ಕೊಡುವ ಕಾರಣ ಪ್ರತಿಗ್ರಹಿಯು ಬಳಿ ಆ ವಸ್ತುವಿನ ಒಡೆತನಕ್ಕೆ

ಸಂಬಂಧಿಸಿದ ಅಧಿಕೃತ ದಾಖಲೆ ಇರಬೇಕು ಎನ್ನುವುದು. ಆದರೆ ಇದು ದಾನಿಯಾದ ರಾಜನು ದಾನವನ್ನು ರಾಜನೀತಿಯ ಉಪಕಣವಾಗಿ ಉಪಯೋಗಿಸುವ ಉದ್ದೇಶವನ್ನು ನೆರವೇರಿಸುತ್ತದೆ.

ಬಳ್ಳಾರಿ ಜಿಲ್ಲೆ ಸಿರುಗುಪ್ಪ ತಾಲ್ಲೂಕಿನ ಗುಂಡಿಗನೂರಿನ ಕಟ್ಟೆ ಬಸವಣ್ಣನ ಗುಡಿಯ ಮುಂದೆ ನಿಲ್ಲಿಸಿದ ವಿಶ್ವವಿದ್ಯಾಲಯ ಶಾಸನ ಸಂಪುಟ 1, ಬಳ್ಳಾರಿ ಜಿಲ್ಲೆ ಶಾಸನಗಳು ಇದರಲ್ಲಿ, ಸಿರುಗುಪ್ಪ 43ರಲ್ಲಿ ಪ್ರಕಟವಾಗಿರುವ ಶಾಸನವು ಸಂಸ್ಕೃತ ಹಾಗೂ ಕನ್ನಡ ಮಿಶ್ರಿತ ಭಾಷೆಯಲ್ಲಿರುತ್ತದೆ. ಪೂರ್ವಾರ್ಧದಲ್ಲಿ ಸಂಸ್ಕೃತ ಭಾಷೆಯ ಪ್ರಾರ್ಥನಾ ಶ್ಲೋಕ ಅನಂತರ ಕನ್ನಡ ಭಾಷೆಯಲ್ಲಿ ಶಾಸನ ಬರೆಯಲಾಗಿದೆ. ಶಾಸನದ ಪಾಠ ಈ ರೀತಿ ಇದೆ.

1 ಶುಭಮಸ್ತು ನಮಸ್ತುಂಗ । ಶಿರಚುಂಬಿ । ಚಂದ್ರ ಚಾ
2 ಮರಚಾರವೇ । ತ್ರಯಿಲೋಕ್ತ ನಗರಾರಂಭ ಮೂಲಸ್ತಂಭಾಯ ಶಂ
3 ಭವೇ ಸ್ವಸ್ತಿಶ್ರೀ ಜಯಭ್ಯುದಯ ಶಾಲಿವಾಹನ ಶಕವರುಷಂಗಳು
4 ೧೪೬೫ನೆಯ ಶೋಭಕೃತು ಸಂವಛರಾ ಭದ್ರಪದ ಶುಧ ೬ ಲು
5 ಶ್ರೀಮಂನ್ ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀವೀರಪ್ರತಾ
6 ಪ ಶ್ರೀವೀರಸದಾಶಿವರಾಯ ಮಹಾರಾಜರು ಪೃಥ್ವೀರಾಜ್ಯಂಗೈಯ್ಯು
7 ತ್ತಿರಲು ಹಂಪೆಯ ಶ್ರೀವಿರುಪಾಕ್ಷದೇವರ ಅಮ್ರುತಪಡಿಗೆ ಸಲುವ
8 ಕುಯಿಗೋಡ ಸೀಮೆಯೊಳಗಣ ಗುಂಡನೆನುರ ಗ್ರಾಮವನು ಪ್ರತಾ
9 ಪದೇವರಾಯ ಮಹಾರಾಯರು ಲಕ್ಷುಮೀಕಾಂತ ದೀಕ್ಷಿತರಿಗೆ
10 ಏಕಭೋಗವಾಗಿ ಧಾರೆಯನೆಜೆದು ಕೊಟ್ಟ ಶಾಪನಸ್ತವಾಗಿ ಕೂಟ ಅ
11 ಗ್ರಹಾರದಲು ದಕ್ಷಿಣ ಸಮುದ್ರಾದಿಪತಿ ಲಖಣದಣಾಯಕರಿಂದ ಮು
12 ಮುಟುಗೋಳಿನಲು ಅರಮನೆಗೆ ಅಗ್ನಕ್ಷಯದಾನದತ್ತಿಗಳ ಕ್ರಯಪತ್ರಗಳು
13 ಅರಮನೆಗೆ ಭಿಠಸಂಬಂಧ ಆ ದಾನಪತ್ರ ಕ್ರಯಪತ್ರ ತಾಂಬ್ರ ಶಾಸನ
14 ಆದ ಗ್ರಾಮಯಿಷ್ಟನು ಪ್ರಹುಡದೇವನ ಮಹಾರಾಜರು ಶ್ರೀವಿ
15 ವಿರೂಪಾಕ್ಷದೇವರ...
16 ದ ನೈವೇದ್ಯಕೆ ಸಮರ್ಪಿಸಿ ಕೊಟ್ಟ....... ಸ್ತಾನಿಕ ಲಕ್ಷು
17 ಮಿನಾಥ ದೀಕ್ಷಿತರ ವಂಶನಷ್ಟವಾಗಿ ಹೋಹೊಗಿರಲಾಗಿಕಲ ಅವ...
18 ಕೊಲ ಭಂಡಾರವಾದಂತಾ... ಗಿ ಯಿದಸಂಮಂಧ ಆ ಗ್ರಾಮದ ಶಾಷನ
19 ಉ । ಶ್ರೀವಿರೂಪಾಕ್ಷದೇವರ ಭಂಡಾರದಲಿ ಯಿಧ ಶಾಷನವನು

20 ಸ್ಥಾನಿಕರು ಯಿಸ್ತಾನದವರಿಗೆ ರಾಮರಾಜ ಅಯನವರು I ಸದಾಶಿವದೇವ
21 ಮಹಾರಾಯರಿಗೆ ಬಂಣ.... ಮಾಡಿಸಿದೇವೆ ಆದೆ ಗ್ರಾ

(ಮುಂದೆ ನೆಲದಲಿ ಸೇರಿದೆ)

ಈ ಶಾಸನವು ವಿಜಯನಗರದ ಸಾಮ್ರಾಜ್ಯದ ತುಳುವ ವಂಶದ ವೀರ ಸದಾಶಿವ ದೇವ ಮಹಾರಾಯನ (1543-1570) ಕಾಲದ್ದಾಗಿದೆ. ಇದನ್ನು ಶಕವರುಷ 1445 ನೇ ಶೋಭಕೃಥುನಾಮ ಸಂವತ್ಸರದ ಭಾದ್ರಪದ ಶುಕ್ಲಪಕ್ಷದ ಷಷ್ಠಿ ತಿಥಿ ಸೋಮವಾರ ದಂದು ಬರೆದುದಾಗಿದೆ. 1543 ಸೆಪ್ಟೆಂಬರ್ 4, ಮಂಗಳವಾರ) ವಿಜಯನಗರ ಪ್ರತಾಪದೇವಮಹಾರಾಯರ ಆಳ್ವಿಕೆಗೂ ಹಿಂದೆ ಕುರುಗೋಡು ಸೀಮೆಯೊಳಗಣ ಗುಂಡಿಗನೂರು ಗ್ರಾಮವು ಹಂಪೆಯ ಶ್ರೀ ವಿರೂಪಾಕ್ಷ ದೇವರ ಅಮೃತಪಡಿಗೆ ಸಲ್ಲುವಂತಹದ್ದಾಗಿದ್ದು ಶಾಸನದಿಂದ ತಿಳಿಯುತ್ತದೆ. ಅಂದರೆ ದೇವಾದಾಯವಾಗಿ ನೀಡಲ್ಪಟ್ಟಿದ್ದ ಗ್ರಾಮವನ್ನು ಅನಂತರದಲ್ಲಿ ರಾಜ್ಯಾಧಿಕಾರವನ್ನು ಪಡೆದಿದ್ದ ಪ್ರೌಢದೇವ ರಾಯನು ಲಕ್ಷ್ಮಿಕಾಂತ ದೀಕ್ಷಿತ ಎಂಬುವ ಪ್ರಾಯಶಃ ವಿರೂಪಾಕ್ಷ ದೇವಾಲಯದ ಸ್ಥಾನಿಕನಾಗಿದ್ದ ಬ್ರಾಹ್ಮಣರಿಗೆ ಏಕಭೋಗವಾಗಿ ದಾರೆಯೆರೆದುಕೊಟ್ಟ ವಿಷಯವನ್ನು ಈ ಶಾಸನದಲ್ಲಿ ತಿಳಿಸುತ್ತದೆ. ಏಕಭೋಗವಾಗಿ ಕೊಟ್ಟಿದ್ದಂತಹ ಈ ದಾನವು ಲಕ್ಷೀಕಾಂತ ದೀಕ್ಷಿತನ ಸಂತತಿಯವರು ಬದುಕಿರುವವರೆಗೆ ಮಾತ್ರ ಸಲ್ಲುವಂತಹದ್ದಾಗಿರುತ್ತದೆ. ಆದರೆ ಇದೇ ಶಾಸನದಲ್ಲಿ ಲಕ್ಷ್ಮೀಕಾಂತ ದೀಕ್ಷಿತನ ವಂಶನಷ್ಟವಾಗಿ ಹೋಗಿರುವ ಕಾರಣ ಮುಂದೆ ಈ ಏಕಭಾಗ ಬ್ರಹ್ಮದೇಯಕ್ಕೆ ಬೆಲೆ ಇಲ್ಲದೆ ಹೋಗುವುದರಿಂದ ಅನಂತರ ಅಧಿಕಾರಕ್ಕೆ ಬಂದ ವಿಜಯನಗರದ ಸದಾಶಿವ ದೇವ ಮಹಾರಾಜ ಮತ್ತು ರಾಮರಾಜಯ್ಯನವರು ಈ ದಾನವನ್ನು ಮುಟ್ಟುಗೋಲು ಹಾಕಿಕೊಳ್ಳಲಾಯಿತು. ಮುಂದೆ ಆ ದೇವಾಲಯದ ಸ್ಥಾನಿಕರು (ಬ್ರಾಹ್ಮಣರು) ಅಳಿಯ ರಾಮರಾಜಯ್ಯನನ್ನು ಕೇಳಿ ಕೊಳ್ಳಲು ನಂತರ ರಾಮರಾಜಯ್ಯನು ಗುಂಡಿಗನೂರು ಅಗ್ರಹಾರದ ಅರ್ಧಭಾಗವನ್ನು ವಿರೂಪಾಕ್ಷ ದೇವರಿಗೆ ಧಾರೆಯೆರೆದು ಕೊಟ್ಟನು. ಉಳಿದ ಅರ್ಧಭಾಗವನ್ನು ದೇವಾ ಲಯದ ಸ್ಥಾನಿಕರಾದ ಬ್ರಾಹ್ಮಣರಿಗೆ ಮತ್ತೆ ದತ್ತಿ ನೀಡಿರುವುದು ಕಂಡುಬರುತ್ತದೆ. ವಿರೂಪಾಕ್ಷ ದೇವಾಲಯದ ಭಂಡಾರಕ್ಕೆ ವಾಪಸ್ಸು ಮಾಡಿರುವ ಸಂಗತಿಯನ್ನು ಈ ಶಾಸನ ಉಲ್ಲೇಖಿಸುತ್ತದೆ. ಇದು ಒಂದು ವಿಶಿಷ್ಟ ಸಂಗತಿ. ಏಕಭೋಗ ಎಂಬುದಕ್ಕೆ ಒಂದು ಖಚಿತವಾದ ಆಧಾರವನ್ನು ಈ ಶಾಸನವು ನೀಡುತ್ತದೆ. ಅಲ್ಲದೆ ಮೂಲತಃ ದೇವಾದಾಯವಾಗಿದ್ದಂತಹ ದಾನವನ್ನು ರಾಜ ತನಗೆ ಬೇಕಾದವರಿಗೆ ಬ್ರಹ್ಮದೇಯವಾಗಿ ನೀಡುವಂತಹ ಸಂದರ್ಭಗಳು ಇದ್ದವು ಎಂಬುದಕ್ಕೆ ಈ ಶಾಸನ ಒಂದು ಒಳ್ಳೆಯ ಉದಾಹರಣೆಯಾಗಿದೆ.

ಈ ಶಾಸನವು ಮೂಲತಃ ದೇವಾದಾಯವಾಗಿದ್ದು ಅದನ್ನು ಅನಂತರದಲ್ಲಿ, ಬ್ರಹ್ಮದೇಯವಾಗಿ ಅಂದರೆ ಬ್ರಾಹ್ಮಣರಿಗೆ ಕೊಟ್ಟ ಶಾಸನವಾಗಿದೆ. ಸಾಮಾನ್ಯವಾಗಿ ಬ್ರಹ್ಮದೇಯವನ್ನಾಗಲೀ ದೇವದಾಯಗಳಾಗಲೀ ವಾಪಸ್ಸು ಪಡೆಯುವುದು ಧರ್ಮ ಶಾಸ್ತ್ರದ ವಿರುದ್ಧವಾಗಿರುತ್ತದೆ. ಆದರೂ ಪ್ರಕೃತ ಶಾಸನವು ಬ್ರಹ್ಮದೇಯವನ್ನು ಕೊಟ್ಟ ಉದ್ದೇಶಗಳಿಗೆ ಬಳಸದೆ, ಕಾಲಾಂತರದಲ್ಲಿ ದುರ್ವಿನಿಯೋಗವಾಗುತ್ತಿರುವುದನ್ನು ರಾಜಸ್ವ ಪರಿಗಣಿಸಿ ಕೇವಲ ಏಕಭೋಗವಾಗಿ ಕೊಟ್ಟ ಬ್ರಹ್ಮದೇಯವನ್ನು ವಾಪಸ್ಸು ಪಡೆದಿರು ವುದು ಮನನೀಯವಾದ ಅಂಶವಾಗಿದೆ. ಅಂದರೆ ರಾಜ್ಯಾಂಗವು ದಾನ ಪಡೆ ದವರು ಪಡೆದ ದಾನ ಸದ್‌ವಿನಿಯೋಗ ಮಾಡಿಕೊಳ್ಳದೆ ಅದರ ದುರ್ಬಳಕೆ ಆಗುತ್ತಿದ್ದರೆ, ಅದನ್ನು ವಾಪಸ್ಸು ಪಡೆಯಬಹುದಾಗಿತ್ತು ಎಂಬ ಅಂಶ ವಿಜಯನಗರ ಕಾಲದ ಶಾಸನಗಳಲ್ಲಿ ತಿಳಿದುಬರುತ್ತದೆ.

ಮೂಲತಃ ಹಂಪಿಯ ವಿರೂಪಾಕ್ಷ ದೇವರ ಅಮೃತಪಡಿಗೆಂದು ನೀಡಿದ್ದ ಕುರುಗೋಡು ಪ್ರಾಂತ್ಯದಲ್ಲಿದ್ದ ಗುಂಡಿಗನೂರು ಎಂಬ ಗ್ರಾಮವನ್ನು ಪ್ರೌಢಪ್ರತಾಪದೇವ ರಾಯನು ಲಕ್ಷ್ಮೀನಾರಾಯಣ ದೀಕ್ಷಿತ ಎಂಬ ಬ್ರಾಹ್ಮಣನಿಗೆ ಏಕಭೋಗ ಅಗ್ರಹಾರ ವನ್ನಾಗಿ ದಾನವಾಗಿ ಕೊಟ್ಟನು. ಆದರೆ ಆ ಲಕ್ಷ್ಮೀನಾರಾಯಣ ದೀಕ್ಷಿತ ಸಂತತಿಯು ಕ್ಷೀಣವಾಗಲು ಅದನ್ನು ರಾಜಸ್ವವು ತನ್ನ ವಶಕ್ಕೆ ಮತ್ತೆ ತೆಗೆದುಕೊಂಡಿತು. (ವಿಜಯನಗರ ಸರ್ಕಾರ). ನಂತರ ದೇವಾಲಯದ ಸ್ಥಾನಿಕರು (ಬ್ರಾಹ್ಮಣರು) ಅಳಿಯ ರಾಮರಾಜಯ್ಯ ನನ್ನು ಪುನಃ ತಮಗೆ (ಸ್ಥಾನಿಕರಿಗೆ) ಕೊಡಬೇಕೆಂದು ಮನವಿ ಮಾಡಲು ರಾಜನು ಮತ್ತೆ ಆ ಗುಂಡಿಗನೂರಿನ ಅಗ್ರಹಾರದ ಅರ್ಧಭಾಗವನ್ನು ಅದೇ ವಿರೂಪಾಕ್ಷದೇವರ ಅಮೃತ ಪಡಿಗೆಂದು ಮರುದಾನವನ್ನು ಕಪಿಲಷಷ್ಠಿಯ ಪುಣ್ಯದಿನದಂದು ತಮ್ಮ ತಂದೆ ಅಚ್ಯುತರಾಯನಿಗೆ ಅಖಂಡ ಪುಣ್ಯವಾಗಲೆಂದು ಧಾರೆ ಎರೆದು ಅದರ ಚತುಸ್ಸೀಮೆ ಯನ್ನು ನಿರ್ದೇಶಿಸಿ ಕೊಟ್ಟರು. ಅವುಗಳ ಜೊತೆಗೆ ಕೆಲವು ಗದ್ದೆಗಳನ್ನು ಹಾಗೂ ಒಂದು ತೋಟವನ್ನು ದಾನವಾಗಿ ಕೊಟ್ಟ ವಿಷಯ ಪ್ರಮುಖವಾಗಿದೆ.

ಇಲ್ಲಿ ಹಂಪಿಯ ವಿರೂಪಾಕ್ಷದೇವರ ಅಮೃತಪಡಿಗೆಂದು ನಿಗದಿಪಡಿಸಿದ್ದ ಭೂಮಿಯನ್ನು ರಾಜ ಲಕ್ಷ್ಮೀನಾರಾಯಣ ದೀಕ್ಷಿತ ಎಂಬ ಬ್ರಾಹ್ಮಣನಿಗೆ ಕೊಟ್ಟ ದಾನವು ಅನಂತರದಲ್ಲಿ ಇತರರಿಂದ ದುರ್ಬಳಕೆಯಾಗುತ್ತಿರುವುದನ್ನು ಕಂಡು ರಾಜನು ದಾನವನ್ನು ವಾಪಸ್ಸು ಪಡೆದದ್ದೇ ಪ್ರಧಾನ ವಿಷಯವಾಗಿದೆ.

ಆಧಾರ ಸೂಚಿ

1. ಡಾ. ಎಂ.ಪ್ರಸನ್ನಕುಮಾರ್ (ಅನುವಾದ ಆರ್.ಎಲ್.ಅನಂತರಾಮಯ್ಯ), 'ಮೈಸೂರಿನ ಇತಿಹಾಸದಲ್ಲಿ ದಾನ' ಮಂಗಳೂರು. 2001
2. ಡಾ. ದೇವರಕೊಂಡಾರೆಡ್ಡಿ ಮತ್ತು ಇತರರು, (ಸಂ). ಕನ್ನಡ ವಿಶ್ವವಿದ್ಯಾನಿಲಯ ಶಾಸನ ಸಂಪುಟ 1, ಬಳ್ಳಾರಿ ಜಿಲ್ಲೆ ಶಾಸನಗಳು, ಹಂಪಿ.

೧೦. ಸಂಡೂರು ಪರಿಸರದಲ್ಲಿ ವಿಜಯನಗರ ಕಾಲದ ಶಾಸನಗಳ ಪ್ರಸರಣ ಮತ್ತು ಕಾರಣ

ಡಾ. ಗಿರಿಜಾ

ಸಂಡೂರು ತಾಲೂಕು ಭೌಗೋಳಿಕವಾಗಿ ಮತ್ತು ನೈಸರ್ಗಿಕವಾಗಿ ಅನೇಕ ಸಂಪತ್ತನ್ನು ತನ್ನ ಗರ್ಭದಲ್ಲಿ ಅಡಗಿಸಿಕೊಂಡಿರುವ ಪ್ರದೇಶವಾಗಿದೆ. ಸುತ್ತಲೂ ದೊಡ್ಡ ದೊಡ್ಡ ಗುಡ್ಡಗಳು ಸಣ್ಣ ಸಣ್ಣ ಝರಿ, ಹಳ್ಳಗಳಿಂದ ಕೂಡಿದ ನೀರಿನ ಸೆಲೆಗಳು, ಅದಿರಿನ ನಿಕ್ಷೇಪಗಳು, ಫಸಲು ಕೊಡುವ ಭೂಭಾಗಗಳಿಂದ ಕೂಡಿದೆ. ಅಂದರೆ ನೈಸರ್ಗಿಕ ಸಂಪನ್ಮೂಲಗಳು ಎಲ್ಲಾ ಕಡೆಗೂ ಸಮನಾಗಿ ಹಂಚಿಕೆಯಾಗಿಲ್ಲ. ಎಲ್ಲ ಕಡೆಗೂ ಒಂದೇ ರೀತಿಯ ಭೂಭಾಗ ಕಾಣಸಿಗುವುದಿಲ್ಲ. ಕೆಲವು ಭಾಗ ಉತ್ತಿಬಿತ್ತಿ ಬೆಳೆಯಲು ಯೋಗ್ಯವಾದ ಭೂಭಾಗವನ್ನು ಹೊಂದಿದ್ದು, ಮತ್ತೆ ಕೆಲವು ಭೂಪ್ರದೇಶವು ಅದಿರಿನ ನಿಕ್ಷೇಪಗಳಿಂದ ಕೂಡಿರುವುದು. ಆದ್ದರಿಂದ ಈ ತಾಲೂಕಿನಲ್ಲಿ ಕಂಡುಬರುವ ಶಾಸನಗಳನ್ನು ನಾವು ಒಂದೆ ಸಮನಾಗಿ ಒಂದೇ ಭಾಗದಲ್ಲಿ ಪ್ರಸರಣವಾಗಿರುವುದನ್ನು ಕಾಣಲು ಸಾಧ್ಯವಾಗುವುದಿಲ್ಲ. ಏಕೆಂದರೆ ಎಲ್ಲಿ ಭೂಭಾಗವು ಉತ್ತಿ ಬಿತ್ತಿ ಬೆಳೆಯಲು ಯೋಗ್ಯವಾಗಿದೆಯೋ ಹಾಗೂ ಎಲ್ಲಿ ಜಲಸಂಗ್ರಹಣೆಗೆ ಯೋಗ್ಯವಾಗಿದೆಯೋ ಅಂತಹ ಪ್ರದೇಶದಲ್ಲಿ ಮಾತ್ರ ಶಾಸನಗಳನ್ನು ಕಾಣುತ್ತೇವೆ. ಅವುಗಳಲ್ಲಿ ಈ ತಾಲೂಕಿನಲ್ಲಿ ಮುಖ್ಯವಾಗಿ ವಿಜಯನಗರ ಅರಸರಿಂದ ನೆಡಿಸಲ್ಪಟ್ಟ ಶಾಸನಗಳ ಮತ್ತು ಅವರಿಂದ ಈ ಶಾಸನಗಳನ್ನು ನೆಡಿಸಲ್ಪಡಲು ಕಾರಣವೇನೆಂಬ ಕೆಲವು ಅಂಶಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಸಂಡೂರು ತಾಲೂಕು ಸುಮಾರು 85 ಹಳ್ಳಿಗಳನ್ನು ಹೊಂದಿದ್ದು, ಮೂರು ಹೋಬಳಿಗಳನ್ನೊಂದಿದೆ.. ಅವುಗಳೆಂದರೆ ತೋರಣಗಲ್ಲು, ಸಂಡೂರು, ಚೋರುನೂರು ಹೋಬಳಿಗಳಾಗಿವೆ. ಈ ಮೂರು ಹೋಬಳಿಗಳಲ್ಲಿ ವಿಜಯನಗರದ ಅರಸರಿಂದ ನೆಡಿಸಲ್ಪಟ್ಟ ಶಾಸನಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುವುದು. ತೋರಣಗಲ್ಲು ಮತ್ತು ಚೋರುನೂರು ಹೋಬಳಿಗೆ ಸೇರಿದ ಕೆಲವು ಹಳ್ಳಿಗಳಲ್ಲಿ. ಇದಕ್ಕೆ ಕಾರಣ ಈ ಎರಡು ಹೋಬಳಿ ಪ್ರದೇಶಗಳು ಬಯಲು ಪ್ರದೇಶಗಳಾದ್ದರಿಂದ ಇಲ್ಲಿ ಹೆಚ್ಚಿನ ಶಾಸನಗಳ ಪ್ರಸರಣವನ್ನು ಕಾಣಲು ಸಾಧ್ಯ. ಆದರೆ ಸಂಡೂರು ಹೋಬಳಿಯಲ್ಲಿ ಮಾತ್ರ ಕೆಲವೇ ಕೆಲವು ಹಳ್ಳಿಗಳಲ್ಲಿ ಈ ಅವಧಿಯ ಶಾಸನಗಳು ಕಂಡುಬಂದರು ವಿರಳವೆಂದೇ ಹೇಳಬೇಕು. ಏಕೆಂದರೆ ಈ ಪ್ರದೇಶ ಕಬ್ಬಿಣದ ಅದಿರಿನ ನಿಕ್ಷೇಪಗಳಿಂದ ಕೂಡಿದ

ಪ್ರದೇಶವಾಗಿದ್ದರಿಂದ ಇಲ್ಲಿ ಕಬ್ಬಿಣದ ಅದಿರಿನ ಶಿಲೆಗಳೇ ಹೆಚ್ಚಾಗಿ ದೊರೆಯುತ್ತವೆಯೇ ಹೊರತು ಶಾಸನವನ್ನು ಬರೆಯಲು ಬಳಸಲ್ಪಡುವ ಬೆಣಚು ಶಿಲೆಗಳು ಈ ಭಾಗದಲ್ಲಿ ಕಡಿಮೆ ದೊರೆಯುತ್ತವೆ. ಆದ್ದರಿಂದ ಈ ಅವಧಿಯ ಶಾಸಗಳು ಸಂಡೂರು ಹೋಬಳಿಯ ಭಾಗದಲ್ಲಿ ಕಂಡುಬರುವುದು ವಿರಳ.

ಇನ್ನು ಸಂಡೂರು ತಾಲ್ಲೂಕಿನ ಸುತ್ತಮುತ್ತಲಿನ ತಾಲ್ಲೂಕನ್ನು ಹೊರತುಪಡಿಸಿದರೆ ಬಳ್ಳಾರಿ ತಾಲೂಕು ಮತ್ತು ಕೂಡ್ಲಿಗಿ ತಾಲೂಕಿನಲ್ಲಿಯೂ ಈ ಅವಧಿಯ ಶಾಸನಗಳು ಕಡಿಮೆಯಾಗಿಯೇ ಕಂಡುಬರುವುವು. ಆದರೆ ಹೊಸಪೇಟೆ ತಾಲೂಕಿನಲ್ಲಿ ಮಾತ್ರ ಹೆಚ್ಚಿನ ಸಂಖ್ಯೆಯಲ್ಲಿ ಈ ಅವಧಿಯ ಶಾಸನಗಳು ಕಂಡುಬರುತ್ತವೆ.

ಒಟ್ಟಿನಲ್ಲಿ ಬೇರೆ ಪ್ರದೇಶಗಳಿಗೆ ಹೋಲಿಸಿದರೆ ಸಂಡೂರು ತಾಲೂಕಿನಲ್ಲಿ ಈ ಅವಧಿಯ ಶಾಸನಗಳು ಕಂಡುಬರುವುದು ವಿರಳವೆಂದೇ ಹೇಳಬಹುದು. ಇದಕ್ಕೆ ಮುಖ್ಯವಾದ ಕಾರಣವೆಂದರೆ ಈ ಪ್ರದೇಶವು ಪ್ರಾಚೀನ ಕಾಲದಿಂದಲೂ ಲೋಹ ತಯಾರಿಕಾ ಕೇಂದ್ರವಾಗಿತ್ತು ಎಂಬುದಕ್ಕೆ ಈ ತಾಲೂಕಿನಲ್ಲಿ ಕಂಡುಬರುವ ಬೃಹತ್ ಪ್ರಮಾಣದ ಅದಿರಿನ ನಿಕ್ಷೇಪ ಇಂದಿಗೂ ಉಳಿದು ಬಂದಿರುವುದಲ್ಲದೆ, ಇದಕ್ಕೆ ಪೂರಕ ವಾದ ಮಾಹಿತಿಯನ್ನು ನೀಡುವ ಶಾಸನಗಳು ಕುಡಿತಿನಿ ಗ್ರಾಮದಲ್ಲಿ ಕಾಣುತ್ತೇವೆ. ಅದರಂತೆ ಶ್ರೀಮದ್ ರಾಮಾಯಣದ ಕಿಷ್ಕಿಂಧಾ ಕಾಂಡದಲ್ಲಿ ಕಾರ್ತಿಕೇಯ ತಪೋ ವನವೆಂದು, ಸ್ಕಂದ ಪುರಾಣದ ಉಲ್ಲೇಖದಂತೆ ಲೋಹಾಚಲವೆಂದು ಈ ವಿಷಯದ ಬಗ್ಗೆ ವಿವರವಾದ ಮಾಹಿತಿ ಇರುವುದನ್ನು ಕಾಣುತ್ತೇವೆ. ಆದರೆ ಸಂಡೂರಿನ ಸ್ಥಳೀಯ ವಾಗಿ ಗಣಿಗಾರಿಕೆಯ ಕುರಿತಾದ ಪ್ರತ್ಯೇಕವಾದ ಮಾಹಿತಿಯನ್ನು ನೀಡುವ ಶಾಸನಗಳು ಮಾತ್ರ ಈ ಪ್ರದೇಶದಲ್ಲಿ ಕಾಣದಿರುವುದು ಆಶ್ಚರ್ಯದ ಸಂಗತಿಯೇ ಸರಿ. ಮುಖ್ಯವಾಗಿ ಈ ಪ್ರದೇಶವು ಯುದ್ಧಕ್ಕೆ ಬೇಕಾದಂತಹ ಆಯುಧಗಳು ಅಂದರೆ ಶಸ್ತ್ರಾಸ್ತ್ರಗಳನ್ನು ನಿರ್ಮಿಸುವ ಸ್ಥಳಗಳಾಗಿದ್ದಂತೆ ತಿಳಿದು ಬರುವುದು. ಮತ್ತು ಅದಕ್ಕೆ ಸಾಕ್ಷಿ ಎಂಬಂತೆ ಇಂದಿಗೂ ಈ ಪ್ರದೇಶದಲ್ಲಿ ಕಂಡುಬರುವ ಅನೇಕ ಕೋಟೆಗಳು, ಅದರಲ್ಲಿ ಕಂಡುಬರುವ ಶಸ್ತ್ರಾಸ್ತ್ರಗಳನ್ನು ನಿರ್ಮಿಸುವ ಗೃಹಗಳು ಅಂದರೆ ಅನೇಕ ಕಟ್ಟಡಗಳ ಅವಶೇಷಗಳನ್ನು ಈ ತಾಲೂಕಿನ ಕೆಲವು ಭಾಗದ ಬೆಟ್ಟಗಳ ಸಾಲಿನಲ್ಲಿ ಕಂಡುಬರುವುವು. ಈ ಆಧಾರದಿಂದ ಈ ಪ್ರದೇಶವು ವಿಜಯನಗರ ರಾಜಧಾನಿಗೆ ಒಂದು ಶಿಕ್ಷಣ ಸ್ಥಳವಾಗಿ, ಆಯುಧಗಳನ್ನು ನಿರ್ಮಿಸುವ ಸ್ಥಳವಾಗಿತ್ತು ಎಂದು ತಿಳಿದುಬರುವುದು. ಒಟ್ಟಿನಲ್ಲಿ ಈ ಭಾಗದ ಶಾಸನ ಪ್ರಸರಣದ ಅಂಶಗಳು ಹೀಗಿವೆ.

ದಾನ ಶಾಸನಗಳು ಹೆಚ್ಚು

ಸಂಡೂರು ಪರಿಸರದಲ್ಲಿ ಹೆಚ್ಚಾಗಿ ದೇವಾಲಯಧ ನಿತ್ಯದ ಸೇವೆಗಾಗಿ ತೋಟದಾನ, ಭೂಮಿದಾನ, ಗ್ರಾಮದಾನ ಕೆಲವು ತೆರಿಗೆ ದಾನ ಇತ್ಯಾದಿಗಳನ್ನು ದಾನ ನೀಡಿದ ಸಂದರ್ಭದಲ್ಲಿ ನೆಡಿಸಲ್ಪಟ್ಟ ದಾನ ಶಾಸನಗಳೇ ಅಧಿಕವಾಗಿ ಈ ಭಾಗದಲ್ಲಿ ಕಾಣಸಿಗುವವು.

ಕೆರೆ ನಿರ್ಮಾಣ ಶಾಸನಗಳು ಅಧಿಕ

ಕೆರೆಗಳು ಜನಜಾನುವಾರುಗಳಿಗೆ, ವ್ಯವಸಾಯಕ್ಕೆ ನಿತ್ಯದ ಹಲವಾರು ಚಟುವಟಿಕೆಗಳಿಗೆ ತುಂಬಾ ಉಪಯುಕ್ತವಾಗಿದ್ದು, ಈ ರೀತಿಯ ಕೆರೆಗಳನ್ನು ನಿರ್ಮಿಸುವುದರಿಂದ ಅಂತರ್ ಜಲ ಹೆಚ್ಚುವುದು ಎಂಬ ಕಾರಣದಿಂದಲೂ ಪ್ರತಿ ಗ್ರಾಮದಲ್ಲಿ ಕೆರೆಯನ್ನು ಸಾಮಾನ್ಯವಾಗಿ ನಿರ್ಮಿಸಿದ್ದನ್ನು ಕಾಣುತ್ತೇವೆ. ಅಂತಹವುಗಳಲ್ಲಿ ವಿಜಯನಗರದ ಅವಧಿಯಲ್ಲಿಯ ಒಬ್ಬ ಅಧಿಕಾರಿಯಿಂದ ನಿರ್ಮಿಸಲ್ಪಟ್ಟ ಕೆರೆಗಳನ್ನೇ ಈ ಭಾಗದಲ್ಲಿ ಹೆಚ್ಚಾಗಿ ಕಾಣುತ್ತೇವೆ. ಇದಕ್ಕೆ ಕಾರಣ ಈ ಪ್ರದೇಶವು ಅತಿ ಹೆಚ್ಚು ಮಳೆ ಬೀಳುವ ಪ್ರದೇಶವಾದ್ದರಿಂದ ಈ ರೀತಿಯ ಕೆರೆಗಳು ಈ ಪರಿಸರದಲ್ಲಿ ನಿರ್ಮಾಣಗೊಂಡಿರಬೇಕು.

ಬಂಡೆಗಲ್ಲು ಶಾಸನಗಳೇ ಅಧಿಕ

ಈ ಪ್ರದೇಶವು ಹೆಚ್ಚಾಗಿ ಬೆಟ್ಟಗಳನ್ನೊಂದಿದ ಪ್ರದೇಶವಾಗಿದ್ದು, ಕೆಲವು ಭಾಗ ಕಬ್ಬಿಣದ ಅದಿರಿನ ಶಿಲೆಗಳಿಂದ ಕೂಡಿದ್ದರೆ ಮತ್ತೆ ಕೆಲವು ಕಡೆಗಳಲ್ಲಿ ಹೆಚ್ಚಾಗಿ ಗ್ರಾನೈಟ್ ಶಿಲೆಗಳೇ ಬಹಳಷ್ಟು ಕಾಣಸಿಗುವವು. ವಿಜಯನಗರದ ಅವಧಿಯ ಹೆಚ್ಚಿನ ಶಾಸನಗಳು ಗ್ರಾನೈಟ್ ಶಿಲೆಗಳಲ್ಲಿ ಕಂಡರಿಸಿದವುಗಳಾಗಿವೆ. ಅದರಂತೆಯೇ ಸಂಡೂರು ಪರಿಸರದಲ್ಲಿ ಕಂಡುಬರುವ ಈ ಅವಧಿಯ ಬಹುಸಂಖ್ಯೆಯ ಶಾಸನಗಳು ಗ್ರಾನೈಟ್ ಶಿಲೆಗಳಲ್ಲಿ ಕಂಡರಿಸಿದ ಶಾಸನಗಳೇ ಆಗಿವೆ. ಕಾರಣ ತೋರಣಗಲ್ಲು ಮತ್ತು ಚೋರುನೂರು ಭಾಗಗಳು ಸಾಮಾನ್ಯವಾಗಿ ಬಯಲು ಸೀಮಾ ಪ್ರದೇಶವಾದ್ದರಿಂದ ಆ ಪ್ರದೇಶಗಳಲ್ಲಿ ಹೆಚ್ಚಾಗಿ ಗ್ರಾನೈಟ್ ಶಿಲೆಗಳು ಹರಡಿಕೊಂಡಿದ್ದು, ಸ್ಥಳೀಯವಾಗಿ ದೊರಕುವ ಬಂಡೆಗಲ್ಲುಗಳಲ್ಲಿಯೆ ಅಧಿಕವಾಗಿ ಶಾಸನಗಳನ್ನು ಕೆತ್ತಿರುವುದನ್ನು ಕಾಣುತ್ತೇವೆ.

ಶಿವ ದೇವಾಲಯಕ್ಕೆ ಹೆಚ್ಚಿನ ಶಾಸನಗಳನ್ನು ಹಾಕಿಸಿದ್ದನ್ನು ಕಾಣುತ್ತೇವೆ

ಸಂಡೂರು ಪರಿಸರವು ಪ್ರಾಚೀನ ಕಾಲದಿಂದಲೂ ಪ್ರಮುಖವಾದ ಶೈವಕ್ಷೇತ್ರವಾಗಿತ್ತು ಎಂಬುದಕ್ಕೆ ಈ ಪ್ರದೇಶದಲ್ಲಿ ಕಂಡುಬರುವ ಹೆಚ್ಚಿನ ಶೈವ ದೇವಾಲಯಗಳು. ಮತ್ತು ಈ ಪ್ರದೇಶವು ಹಿಂದಿನಿಂದಲೂ ಶೈವಕ್ಷೇತ್ರವಾಗಿತ್ತು ಎಂಬುದಕ್ಕೆ ಇಲ್ಲಿನ ಕುಮಾರಸ್ವಾಮಿ ಬೆಟ್ಟದ ಕುಮಾರಸ್ವಾಮಿ ದೇವಾಲಯ, ಪಾರ್ವತಿ ಮತ್ತು ಈಶ್ವರಲಿಂಗ ದೇವಾಲಯ ಹಾಗೂ ಅಲ್ಲಿನ ಶಾಸನಗಳು ಪ್ರಮುಖ ಆಧಾರಗಳಾಗಿವೆ. ಅದರಂತೆಯೇ ವಿಜಯನಗರ ಅವಧಿಯಲ್ಲಿಯೂ ಕೂಡ ಈ ಕ್ಷೇತ್ರವು ಶೈವ ದೇವತೆಯ ಆರಾಧನ

ಸ್ಥಳವಾಗಿತ್ತು ಎಂಬುದಕ್ಕೆ ಈ ಪ್ರದೇಶಗಲ್ಲಿ ಕಾಣಸಿಗುವ ಅನೇಕ ಶಾಸನಗಳೇ ಮುಖ್ಯ ಆಕರಗಳಾಗಿವೆ. ಅವುಗಳೆಂದರೆ-

ಕುರೆಕುಪ್ಪೆ ಗ್ರಾಮದ ಕ್ರಿ.ಶ. 1523 ರ ಶಾಸನದ ಉಲ್ಲೇಖದಂತೆ ಈ ಗ್ರಾಮದ ಈಶ್ವರ ದೇವಾಲಯವು ವಿಜಯನಗರದ ಅರಸ ಕೃಷ್ಣದೇವರಾಯನ ಆಳ್ವಿಕೆಯ ಅವಧಿಯಲ್ಲಿ ನಿರ್ಮಿಸಲ್ಪಟ್ಟಿದ್ದೆಂದು ತಿಳಿದುಬರುವುದು. ಅಂದು ಈ ಗ್ರಾಮವು ಸರ್ವ ರಿಂದ ಮಾನ್ಯವಾದ ಸರ್ವಮಾನ್ಯ ಅಗ್ರಹಾರವಾಗಿತ್ತೆಂದು ಹಾಗೂ ಹಸ್ತಿನಾವತಿಯ ವಳಿತಕ್ಕೆ ಸೇರಿದ ಆರು ಬಾಡಗಳ (ಹಳ್ಳಿಗಳ) ದೊರವದಿ (ದರೋಜಿ) ಯ ವೆಂಠೇಯಕ್ಕೆ (ಆಡಳಿತ ವಿಭಾಗಕ್ಕೆ) ಸೇರಿದ ಈ ಕುರೆಕುಪ್ಪೆ ಗ್ರಾಮಕ್ಕೆ ಪ್ರತಿನಾಮವಾಗಿ ಇನ್ನೊಂದು ಹೆಸರು 'ಅನಂತಸೇತು' ಎಂದು ಕರೆಯುತ್ತಿದ್ದರೆಂದು ತಿಳಿದುಬರುವುದು. ಅಂದು ಈ ದೇವಾಲಯಕ್ಕೆ ವಿರೂಪಾಕ್ಷ ದೇವಾಲಯವೆಂದು ಹೆಸರಿದ್ದು, ಇಂದು ಪಂಪಾಪತಿ ದೇವಾಲಯವೆಂದು ಕರೆಯಲ್ಪಡುತ್ತಿರುವುದು.

ಅಂತಾಪುರ ಗ್ರಾಮದ ಕ್ರಿ.ಶ. ಶಾಸನವು 1547 ರ ಶಾಸನವು ಹರಪಣ್ಣನು ಗೌಡ ಮತ್ತು ಸೇನಬೋವ ಹಾಗೂ ಗ್ರಾಮದ ಜನರ ಒಪ್ಪಿಗೆ ಪಡೆದು ಆವಿನಮಡುವಿನ ಸೀಮೆಯಲ್ಲಿರುವ ಅಂತಾಪುರದ ಶಿಥಿಲವಾಗಿದ್ದ ಮಲ್ಲಿಕಾರ್ಜುನ ದೇವಸ್ಥಾನವನ್ನು ಜೀರ್ಣೋದ್ಧಾರಗೊಳಿಸಿದ್ದ ಸಂದರ್ಭದಲ್ಲಿ ಶಾಸನ ಹಾಕಿಸಿದ್ದನ್ನು ಕಾಣುತ್ತೇವೆ. ಇದೇ ಗ್ರಾಮದ ಕ್ರಿ.ಶ. 1553ರ ಶಾಸನವು ಉಟಗಲ ತಿಮ್ಮರಸನು ಸದಾಶಿವರಾಯ, ರಾಮರಾಜ ಮತ್ತು ತಿರುಮಲ ರಾಜರಿಗೆ ಪುಣ್ಯವಾಗಲೆಂದು ಅಂತಾಪುರದ ಮಲ್ಲಿಕಾರ್ಜುನ ದೇವರಿಗೆ ನಿರಂತರ ದೀಪ ಉರಿಸಲು ಕೆಲವು ತೆರಿಗೆಗಳನ್ನು ದಾನ ನೀಡಿದ್ದನ್ನು ದಾಖಲಿಸುತ್ತದೆ. ಇದೇ ಗ್ರಾಮದ ಕ್ರಿ.ಶ. 16ನೇ ಶತಮಾನದ ಶಾಸನವು ತಿಮ್ಮರಸಯ್ಯ ಎಂಬ ವ್ಯಕ್ತಿ ಈ ಗ್ರಾಮದ ಮಲ್ಲಿಕಾರ್ಜುನ ದೇವಾಲಯದ ನಂದಾ ದೀಪಕ್ಕೆ ಎರಡು ಹಣವನ್ನು ನೀಡಿದ ಸಂದರ್ಭದಲ್ಲಿ ಶಾಸನ ಹಾಕಿಸಿದಂತೆ ತಿಳಿಸುವುದು. ಸಂಡೂರಿನ ಕ್ರಿ.ಶ. 1544ರ ಶಾಸನವು ಸದಾಶಿವ ದೇವರಾಯನ ಆಳ್ವಿಕೆಯ ಸಂದರ್ಭ ದಲ್ಲಿ ಸೊಂಡೂರು ಸೀಮೆಗೆ ಸಲ್ಲುವ ನಾಯಿಂದರಿಗೆ ಕೆಲವು ತೆರಿಗೆಗಳನ್ನು ಬಿಟ್ಟಂತೆ ತಿಳಿಸುವುದು. ಆವಿನಮಡುವಿನ ಕ್ರಿ.ಶ. 1551ರ ಶಾಸನವು ಹಿರಿ ಅನಂತಾಪುರದ ಮಲ್ಲಿಕಾರ್ಜುನ ದೇವರಿಗೆ ಆವಿನಮಡುವಿನ ಕೆರೆಯ ಕೆಳಗಿನ 13 ಮತ್ತರು ಹೊಲವನ್ನು ಮತ್ತು 3 ಮತ್ತರು ತೋಟ ದಾನ ನೀಡಿದ್ದನ್ನು ತಿಳಿಸುವುದು.

ಒಟ್ಟಿನಲ್ಲಿ ಈ ಅವಧಿಯಲ್ಲಿ ವೈಷ್ಣವ ದೇವಾಲಯಕ್ಕಿಂತಲೂ ಹೆಚ್ಚಿನ ಸಂಖ್ಯೆ ಯಲ್ಲಿ ಈ ಭಾಗದ ಶೈವ ದೇವಾಲಯದ ನಿರ್ಮಾಣ, ಜೀರ್ಣೋದ್ಧಾರ ಪೂಜೆ ಪುನಸ್ಕಾರಗಳಿಗೆ ತೆರಿಗೆ, ಹಣ, ಗ್ರಾಮ, ಅಗ್ರಹಾರ, ತೋಟ, ಹೊಲ ಹಾಗೂ ನಿತ್ಯದ ನೈವೇದ್ಯಕ್ಕಾಗಿ ಮತ್ತು ನಂದಾದೀಪ ಉರಿಸುವ ಸಲುವಾಗಿ ಎಣ್ಣೆ ಹೀಗೆ ದಾನ ನೀಡಿದ ಸಂದರ್ಭದಲ್ಲಿ ಶಾಸನಗಳನ್ನು ಹಾಕಿಸಿರುವುದನ್ನು ಕಾಣುತ್ತೇವೆ.

ಈ ಅವಧಿಯ ವೀರಗಲ್ಲು ಮತ್ತು ಮಾಸ್ತಿಕಲ್ಲುಗಳ ಸಂಖ್ಯೆ ಕಡಿಮೆ

ಸಂಡೂರು ಪ್ರದೇಶವು ಪೂರ್ವ ಕಾಲದಿಂದಲೂ ಲೋಹ ತಯಾರಿಕಾ ಕೇಂದ್ರವಾಗಿದ್ದ ರಿಂದ ಇಲ್ಲಿ ಕಮ್ಮಾರಿಕೆಯ ಕೆಲಸವೇ ಹೆಚ್ಚಾಗಿ ನಡೆಯುತ್ತಿತ್ತು ಎಂದು ತಿಳಿದು ಬರುವುದು. ಇದು ಹೆಚ್ಚು ಅರಣ್ಯವನ್ನು ಹೊಂದಿದ ಪ್ರದೇಶವೂ ಆಗಿರುವುದರಿಂದ ಇಲ್ಲಿ ಜನವಸತಿ ಕಡಿಮೆ ಇತ್ತು. ಆದ್ದರಿಂದ ಇಲ್ಲಿಯ ಉತ್ಪತ್ತಿಯೂ ಕಡಿಮೆಯಾಗಿರುತ್ತಿತ್ತು. ಅದರಂತೆ ಎಲ್ಲಿ ಜನ ವಸತಿ ಕಡಿಮೆ ಇರುತ್ತದೆಯೋ ಅಂತಹ ಪ್ರದೇಶದಲ್ಲಿ ಕಲಹಗಳು ಸಂಭವಿಸುವ ಸಂದರ್ಭಗಳು ಕಡಿಮೆಯಾಗಿರುತ್ತಿತ್ತು. ಈ ಒಂದು ಹಿನ್ನೆಲೆಯಿಂದ ಈ ಪ್ರದೇಶದಲ್ಲಿ ವಿಜಯನಗರ ಅವಧಿಯಲ್ಲಿ ನೆಡಿಸಲ್ಪಟ್ಟ ವೀರಗಲ್ಲುಗಳ ಸಂಖ್ಯೆಯ ಪ್ರಮಾಣ ಕಡಿಮೆಯೆಂದೇ ಹೇಳಬೇಕು. ಹೀಗಾಗಿ ಸತಿಕಲ್ಲುಗಳೂ ಸಹ ವಿರಳವಾಗಿಯೇ ಕಂಡುಬರುತ್ತವೆ. ಆದರೆ ಇದೇ ಮುಂದುವರಿದ ಶೈಲಿಯನ್ನೊಳಗೊಂಡ ಪಾಳೆಗಾರ ಅವಧಿಯ ಸ್ಮಾರಕಗಳನ್ನು ಹೆಚ್ಚಾಗಿ ಕಾಣುತ್ತೇವೆ.

ಅಧಿಕಾರಿಗಳಿಂದ, ಸಾಮಂತ ಅರಸರಿಂದ ಹಾಕಿಸಿದ ಶಾಸನಗಳೇ ಹೆಚ್ಚು

ಈ ತಾಲೂಕಿನಲ್ಲಿ ಕಂಡುಬರುವ ಶಾಸನಗಳು ನೇರವಾಗಿ ಅರಸರಿಂದ ಹಾಕಿಸಲ್ಪಟ್ಟಿರುವುದು ತುಂಬಾ ವಿರಳ. ಆದರೆ ಮಹಾಮಂಡಳೇಶ್ವರರು, ಸೇನಾಧಿಪತಿಗಳು, ಸೇನಭೋವ, ಗೌಡ ಹೀಗೆ ಸ್ಥಳೀಯ ಅಧಿಕಾರಿಗಳಿಂದ ದೇವಾಲಯದ ನಿರ್ಮಾಣ, ಜೀರ್ಣೋದ್ಧಾರ, ಭೂದಾನ, ತೋಟದಾನ, ಕೆರೆ ನಿರ್ಮಾಣ, ಗ್ರಾಮದಾನ ನೀಡಿದ ವಿಷಯವನ್ನು ತಿಳಿಸುವ ಶಾಸನಗಳೇ ಅಧಿಕಾರವಾಗಿ ಕಂಡು ಬರುವವು. ಅವುಗಳಂದರೆ

ಕ್ರಿ. ಶ. 1539 ಚಿಕ್ಕಕೆರೆ ಯಾಕಿನ ಹಳ್ಳಿಯ ಶಾಸನವು ಅಚ್ಯುತರಾಯನ ಆಳ್ವಿಕೆಯಲ್ಲಿ ಅವನ ಕೈಕೆಳಗೆ ಅಧಿಕಾರಿಯಾಗಿದ್ದ ಬಯಕಾರ ರಾಮಪ್ಪಯ್ಯನು ಈ ಗ್ರಾಮದಲ್ಲಿ ಒಂದು ಕೆರೆಯಲ್ಲಿ ನಿರ್ಮಿಸಿದ ಸಂದರ್ಭದಲ್ಲಿ ಶಾಸನ ಹಾಕಿಸಿದ್ದನ್ನು ಕಾಣಬಹುದು. ಇದೇ ಅಧಿಕಾರಿಂದ ಈ ತಾಲೂಕಿನ ಹುಲಿಕುಂಟಾ ಗ್ರಾಮದಲ್ಲಿ ಕ್ರಿ. ಶ. 1556ರ ವೇಳೆಗೆ ಮತ್ತೊಂದು ಕೆರೆ ನಿರ್ಮಿಸಿದ ಸಂದರ್ಭದಲ್ಲಿ ಈ ಶಾಸನ ನೆಡಿಸಿದ್ದನ್ನು ಕಾಣುತ್ತೇವೆ. ಮತ್ತು ಕುರೆಕುಪ್ಪ ಗ್ರಾಮದಲ್ಲಿ ಕ್ರಿ. ಶ. 1523 ರ ಕೃಷ್ಣದೇವರಾಯನ ಅವಧಿಯಲ್ಲಿ ವಿರೂಪಾಕ್ಷ ದೇವಾಲಯ ನಿರ್ಮಿಸಿ, ಅದರ ನಿರ್ವಹಣೆಗಾಗಿ ಕೆಲವು ದಾನ ನೀಡಿದ್ದನ್ನು ನೋಡುತ್ತೇವೆ. ಆವಿನ ಮಡುವಿನ ಕ್ರಿ. ಶ. 1551 ರ ಶಾಸನವು ಸದಾಶಿವ ದೇವರಾಯನ ಕೈಕೆಳಗೆ ಮಹಾಮಂಡಳೇಶ್ವರನಾಗಿದ್ದ ರಾಮರಾಜ ತಿಮ್ಮರಾಜನ ಪುತ್ರ ವಿಠಲರಾಜ ಮಹಾದೇವ ಅರಸನು ಆವಿನಮಡುವಿನ ಕೆರೆ ಕೆಳಗಿನ ಹೊಲ ಮತ್ತು ಹರಣಪ್ಪ ಎಂಬ ವ್ಯಕ್ತಿ ಗೌಡ ಮತ್ತು ಸೇನಬೋವ ಹಾಗೂ ಗ್ರಾಮದ ಜನರ ಒಪ್ಪಿಗೆ ಪಡೆದು ಆವಿನಮಡುವಿನ ಸೀಮೆಯಲ್ಲಿರುವ ಅಂತಾಪುರದ ಶಿಥಿಲವಾಗಿದ್ದ ಮಲ್ಲಿಕಾರ್ಜುನ ದೇವಸ್ಥಾನವನ್ನು ಜೀರ್ಣೋದ್ಧಾರಗೊಳಿಸಿದ್ದನ್ನು ತಿಳಿಸುತ್ತದೆ. ಇದೇ

ಗ್ರಾಮದ ಕ್ರಿ. ಶ. 1551 ರ ಶಾಸನವು ಮಹಾಮಂಡಲೇಶ್ವರ ರಾಮರಾಜ ತಿರುಮಲ ರಾಜನ ಮಗ ತಿಮ್ಮ ರಾಜನು ಕಿರಿಯ ಅಂತಾಪುರದಲ್ಲಿ ಮಲ್ಲಿಕಾರ್ಜುನ ದೇವರಿಗೆ ಆವಿನ ಮಡವು ಕೆರೆಯ ಕೆಳಗೆ ತೋಟದಾನ ನೀಡಿದ್ದನ್ನು ತಿಳಿಸುವುದು. ಇದೇ ಗ್ರಾಮದ ಕ್ರಿ. ಶ. 1553 ರ ಶಾಸನವು ಉಟಗಲ ತಿಮ್ಮರಸನು ಸದಾಶಿವರಾಯ ರಾಮರಾಜ ಮತ್ತು ತಿರುಮಲರಾಜನರಿಗೆ ಪುಣ್ಯವಾಗಲೆಂದು ಅಂತಾಪುರದ ಮಲ್ಲಿಕಾರ್ಜುನ ದೇವರಿಗೆ ನಿರಂತರ ದೀಪ ಉರಿಸಲು ಕೆಲವು ತೆರಿಗೆಗಳನ್ನು ದಾನ ನೀಡಿದ್ದನ್ನು ದಾಖಲಿಸುವುದು.

ಒಟ್ಟಾರೆಯಾಗಿ ಸಂಡೂರು ಪ್ರದೇಶವು ಹೆಚ್ಚು ಅರಣ್ಯವನ್ನು ಮತ್ತು ಕಬ್ಬಿಣದ ಅದಿರಿನ ನಿಕ್ಷೇಪವನ್ನು ಹೊಂದಿದ ಪ್ರದೇಶವಾಗಿರುವುದರಿಂದ ಇಲ್ಲಿ ಕಬ್ಬಿಣ ತಯಾರಿಕೆಯ ಚಟುವಟಿಕೆಗಳೇ ಹೆಚ್ಚಾಗಿ ನಡೆಯುತ್ತಿದ್ದಂತೆ ತಿಳಿದುಬರುವುದು. ಇಂತಹ ಕಬ್ಬಿಣ ತಯಾರಿಕೆಯ ಪ್ರದೇಶದಲ್ಲಿ ಕಮ್ಮಾರಿಕೆಯ ವೃತ್ತಿಯನ್ನು ಬಲ್ಲಂತ ಜನರು ಹೆಚ್ಚಾಗಿ ವಾಸಿಸುತ್ತಿದ್ದಂತೆ ತೋರುವುದು, ಅವರನ್ನು ಹೊರತುಪಡಿಸಿದರೆ ಸಾಮಾನ್ಯವಾಗಿ ಜನವಸತಿ ಈ ಪ್ರದೇಶದಲ್ಲಿ ಕಡಿಮೆ ಎಂದೇ ಹೇಳಬೇಕು. ಎಲ್ಲಾ ಜನವಸತಿ ಕಡಿಮೆಯಾಗಿರುತ್ತದೆಯೋ ಅಂತಹ ಪರಿಸರದಲ್ಲಿ ಶಾಸನಗಳ ಪ್ರಸರಣವು ಕಡಿಮೆಯಾಗಿಯೇ ಇರುತ್ತದೆ ಎಂಬುದು ಒಂದು ಕಾರಣವಾಗಿದ್ದರೆ, ಈ ತಾಲೂಕಿನಲ್ಲಿ ಶಾಸನಗಳನ್ನು ಹಾಕಿಸಲು ಬಳಸುವ ಶಿಲೆಗಳಾದ ಬೆಣಚು ಶಿಲೆಗಳ ಕೊರತೆ ಇರುವುದು ಮತ್ತೊಂದು ಗಮನಾರ್ಹವಾದ ಕಾರಣವಾಗಿದೆ. ಹಾಗೂ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಈ ಶಿಲೆಗಳನ್ನು ಹೊತ್ತು ತರುವುದು ಕಷ್ಟದ ಕೆಲಸವಾದ್ದರಿಂದ ಈ ಭಾಗದಲ್ಲಿ ಶಾಸನಗಳ ಪ್ರಸರಣ ವಿರಳವಾಗಿರಬೇಕು ಎಂದು ತಿಳಿದುಬರುವುದು.

ಪರಾಮರ್ಶನ ಗ್ರಂಥಗಳು

1. ಕನ್ನಡ ವಿಶ್ವವಿದ್ಯಾಲಯ ಹಂಪಿ ಶಾಸನ ಸಂಪುಟ -1, ಸಂ : ಡಾ. ದೇವರಕೊಂಡ ರೆಡ್ಡಿ
2. ಕರ್ನಾಟಕ ಶಾಸನಗಳು ಭಾಗ -II,C. S. Patil.
3. ಕರ್ನಾಟಕ ಖನಿಜ ಸಂಪತ್ತು, ಬಿ. ಪಿ. ರಾಧಾಕೃಷ್ಣ
4. ಲೋಹಾದ್ರಿಯ ಮಡಿಲು, ಸ್ಮರಣ ಸಂಚಿಕೆ, ಸಂ : ವೃಷಬೇಂದ್ರಾಚಾರ್ಯ.

೧೧. ಒಂದನೇ ಬುಕ್ಕರಾಯನ ಧಾರ್ಮಿಕ ಶಾಸನಗಳು

ಡಿ.ಎಂ.ನಾಗರಾಜು

ಸಂಗಮ ವಂಶದ ಹರಿಹರ ಮತ್ತು ಬುಕ್ಕ, ಕಂಪಣ, ಮಾರಪ್ಪ ಮತ್ತು ಮುದ್ದಪ್ಪ ಈ ಐವರು ಸಹೋದರರು ಸಂಗಮನ ಮಕ್ಕಳು. ಈ ಸಹೋದರರೇ ವಿಜಯನಗರದ ಮಹಾರಾಜ್ಯ ಸ್ಥಾಪನೆಗೆ ತಳಹದಿ ಹಾಕಿದರು. ತನ್ನ ಸಹೋದರರ ಸಹಕಾರದಿಂದ ಹೊಸ ರಾಜ್ಯವನ್ನು ಸ್ಥಾಪಿಸಿದ ಒಂದನೆಯ ಹರಿಹರನು 1336ರಿಂದ 1355 ರವರೆಗೆ ರಾಜ್ಯಭಾರ ಮಾಡಿದನು. ಒಂದನೇ ಬುಕ್ಕರಾಯನು ಹರಿಹರನ ಉತ್ತರಾಧಿಕಾರಿಯಾಗಿ ಸುಮಾರು ಇಪ್ಪತ್ತರೆಡು ವರ್ಷಗಳ ಕಾಲ 1356-1377ರವರೆಗೆ ರಾಜ್ಯಭಾರ ಮಾಡಿದನು. ಸಂಗಮ ವಶಂದ ಅರಸರಲ್ಲಿ ಬುಕ್ಕರಾಯನಷ್ಟು ಪ್ರಖ್ಯಾತಿಗೆ ಬಂದವರು ಬೇರಾರೂ ಇಲ್ಲ. ಅವನು ತನ್ನ ಸಹೋದರನಿಗೆ ಬಲಭುಜದಂತಿದ್ದುಕೊಂಡು ವಿಜಯನಗರ ಸ್ಥಾಪನಾ ಕಾರ್ಯದಲ್ಲಿ ಹೆಚ್ಚಿನ ಸೇವೆಯನ್ನು ಸಲ್ಲಿಸಿದನು. ಯುವರಾಜನಾಗಿದ್ದುಕೊಂಡು ಅವನು ತನ್ನ ಸಹೋದರನಿಗೆ ನೆರವಿತ್ತು ಸ್ವಲ್ಪ ಕಾಲ ತನ್ನ ಹೆಸರಿನಲ್ಲಿಯೇ ಶಾಸನಗಳನ್ನು ಹೊರಡಿಸಿದನು.

ಬುಕ್ಕರಾಯನು ದಕ್ಷ ಆಡಳಿತಗಾರನಾಗಿದ್ದನು. ಜೈನರಲ್ಲೂ ಮತ್ತು ವೈಷ್ಣವರಲ್ಲೂ ಉದ್ಭವಿಸಿದ ಮತೀಯ ವೈಷಮ್ಯವನ್ನು ಅಳಿಸಿ ಹಾಕಿ ಎರಡು ಕೋಮಿನವರು ಸ್ನೇಹ ಸೌಹಾರ್ದತೆಯಿಂದ ಬಾಳಲು ಅವಕಾಶ ಮಾಡಿಕೊಟ್ಟನು. ಅವನ ಕಾಲದಲ್ಲಿ ಎಲ್ಲ ವರ್ಗದ ಜನರು ಸುಖಸಂತೋಷದಿಂದ ಬಾಳ್ವೆ ನಡೆಸುತ್ತಿದ್ದರು. ವೀರನಾಗಿ ರಾಜ್ಯಭಾರ ಮಾಡಿದ ಬುಕ್ಕನು ಸಂಗಮ ವಂಶದ ಅರಸರಲ್ಲಿ ಅತಿ ಶ್ರೇಷ್ಠನೆನಿಸಿದ್ದಾನೆ.

ಒಂದನೇ ಬುಕ್ಕ ವಿಜಯನಗರದ ನಿಜವಾದ ಶಿಲ್ಪಿ. ಒಂದನೇ ಬುಕ್ಕ ತನ್ನ ಅಣ್ಣ ಹರಿಹರನ ರಾಜ್ಯದ ಕಾಲಕ್ಕೆ ಅವನ ಬಲಗೈಯಂತೆ ನಿಂತಿದ್ದು, ರಾಜ್ಯಭಾರದಲ್ಲಿ ಸಹಾಯ ಮಾಡಿದ ಇವನ ಬಗೆಗೆ ಶಿಲಾಶಾಸನಗಳು 1333 ರಿಂದ 1377ರವರೆಗೂ ಸಿಗುತ್ತದೆ. 1355ರಿಂದ ಇವನೇ ರಾಜನಾಗತೊಡಗಿದ. ಬುಕ್ಕನ ಮಗ ಕುಮಾರ ಕಂಪಣ, ಯದುಗಿ ನಿರೂಪಂಗೊಡೆಯ, ಬುಕ್ಕನ ಪಟ್ಟದ ರಾಣಿ ಪದುಮಲದೇವಿ.

ಕ್ರಿ.ಶ. 1357ರ ಕೋಟೇಶ್ವರ ಶಾಸನದಲ್ಲಿ ಮಾದಜಿಸಯನ ಮೊಮ್ಮಗ ಸಬುಸುತಿಯ ನಾಯಕನ ಮಗ ರವಾಳದೇವನು ಒಂದು ಭೂಮಿಯನ್ನು ವಿಷ್ಣು ತಿರುಳ ನಿಂದ ಕೊಂಡು ಕೋಟೇಶ್ವರ ದೇವರ ಸೇವೆಗೋಸ್ಕರ ದಾನ ನೀಡಿದ ದಾಖಲೆಯಿದೆ.

ಇದೇ ವರ್ಷದ ಕುಂದಾಪುರ ಶಾಸನದಲ್ಲಿ ರಾಜನ ಆದೇಶದ ಮೇರೆಗೆ ಮಹಾಪ್ರಧಾನ ಮಾಲೆದಂಣಾಯಕ ಒಂದು ಹೊಸ ಭೂಮಿ ಮತ್ತು ಹಳೆ ಭೂಮಿ ಕಳೆದುಹೋದುದಕ್ಕೆ ಒಂದು ಹೊಸ ಭೂಮಿಯನ್ನು ಶಂಕರನಾರಾಯಣ ದೇವರ ಸೇವೆಗೋಸ್ಕರ ದಾನ ನೀಡಿದ್ದನ್ನು ತಿಳಿಸುತ್ತದೆ. ಕ್ರಿ.ಶ. 1358ರ ಕಣ್ಣಗಾಲ ಶಾಸನದಲ್ಲಿ ಕಣ್ಣಗಾಲ ಪ್ರಭು ದೇವರಿಗೆ ಶಾಶ್ವತವಾಗಿ ಅಮೃತಪಡಿಗೋಸ್ಕರ ಮಾದೆಯ ನಾಯಕನ ಮಗ ಹರುಪೆಯ ನಾಯಕನು ಭೂಮಿ ದಾನ ನೀಡಿದ ವಿವರವಿದೆ. ಕ್ರಿ.ಶ. 1359ರ ಮಾಂಬಳ್ಳಿ ಶಾಸನದಲ್ಲಿ ಶ್ರೀ ವೈದ್ಯನಾಥ ದೇವರ ಸೇವೆಗೋಸ್ಕರ ತೆಂಗಿನ ತೋಟ ಮತ್ತು ಹದಿನೈದು ಮನೆಗಳನ್ನು ಅಪ್ಪಯನಾಯಕನು ದಾನವಾಗಿ ಕೊಟ್ಟಿದ್ದಾನೆ. ತೀವಗಣ ಇನಾರಿದೇವರ ಅಮೃತಪಡಿಯ ಪೂಜೆಗೋಸ್ಕರ ಮಾರಿಸೆಟ್ಟಿ ಮಗ ದೇವಣಸೆಟ್ಟಿ ಅಂದಾರಸೆಟ್ಟಿಯ ಮಗ ಕಾಳಿಸೆಟ್ಟಿಯಿಂದ ಕೊಂಡು ದಾನ ನೀಡಿದ್ದನ್ನು ತಿಳಿಸುತ್ತದೆ. ವೈಜನಾಥದೇವರಿಗೆ ತೆಂಗಿನತೋಟ, ಹಲಸಿನ ತೋಟವನ್ನು ಸೆಟ್ಟಿಮಣನು ದಾನ ನೀಡಿದ ದಾಖಲೆಯಿದೆ. ಕ್ರಿ.ಶ. 1360ರ ಪಾಳ್ಯ ಶಾಸನದಲ್ಲಿ ಸೆಟ್ಟಿಗನ ಪಾಳಯ ಜನಾರ್ಧನ ದೇವರ ಸೇವೆಗೋಸ್ಕರ ಮಣಿಲನಾಡೊಳಗಣ ಚೆಂಡನಹಳ್ಳಿ ಮೊಗನಾಡೊಳಗಣ ಹರದನೊರಪುರ ಎರಡು ಗ್ರಾಮಗಳನ್ನು ಈಶ್ವರ ದೇವನ ಒಡೆಯನ ಸುಪುತ್ರ ತಿಪ್ಪಣ್ಣವೊಡೆಯನು ದಾನ ನೀಡಿದ ವಿವರವಿದೆ. ಕ್ರಿ.ಶ. 1362ರ ಕವಲೇದುರ್ಗದ ಶಾಸನದಲ್ಲಿ ಬುಕ್ಕಣವೊಡೆಯರ ಕುಮಾರ ವಿರುಪಣವೊಡೆಯರು ಅರಗದ ರಾಜ್ಯವಾಳುತ್ತಿದ್ದಾಗ ವಂದಗಿರಿನಗರಿಯ ಕೋಟೆಯ ಮಯಿಲಾರ ದೇವರಿಗೆ ಅಮೃತಪಡಿಗೋಸ್ಕರ ಮೂರು ಖಂಡುಗ ಭೂಮಿಯನ್ನು ದಾನ ನೀಡಿದ ಉಲ್ಲೇಖವಿದೆ. ಕ್ರಿ.ಶ. 1363ರ ಕಣವೆ ಶಾಸನದಲ್ಲಿ ತಡತಾಳ ಪಾರ್ಶ್ವ ದೇವರ ದೇವಸ್ಥಾನದ ಆಚಾರಿಯರು ಸೂರಿಗಳ ಕೊಡೆ ಸಂವಾಜನ ಮಾಡಿದ ಬಗ್ಗೆ ಉಲ್ಲೇಖಿಸುತ್ತದೆ. ಕ್ರಿ.ಶ. 1364ರ ಕೋಟೇಶ್ವರ ಶಾಸನದಲ್ಲಿ ಮಲ್ಲಯ ದಂಣಾಯಕ ಬಾರಕೂರು ರಾಜ್ಯ ಆಳುತ್ತಿರುವಾಗ ಕೋಟೇಶ್ವರ ದೇವರ ಸೇವೆಗೋಸ್ಕರ ಚಕ್ಕರೆಯ ಊರಿನ 30 ಕುಟುಂಬಗಳು ಮತ್ತು ಬೇರೆಯವರು 12 ಹೊನ್ನು ನಿವೇಶನಗಳು, ಖುಷ್ಕಿ ಮತ್ತು ಗದ್ದೆ ಭೂಮಿಗಳನ್ನು ದೇವರಿಗೆ ದಾನ ನೀಡಿದ ದಾಖಲೆಯಿದೆ. ಇದೇ ವರ್ಷದ ಬುಂಟವಾಲಮೂಡ ಶಾಸನದಲ್ಲಿ ರಾಜನ ಆದೇಶದ ಮೇರೆಗೆ ಮಂಗಳೂರಿನ ಮಾದರಸನು ಪುದು ಗ್ರಾಮವನ್ನು ಕೆಲವು ಬ್ರಾಹ್ಮಣರಿಗೆ ತೆರಿಗೆ ರಹಿತವಾಗಿ ನೀಡಿ 12 ಮೂಟೆ ಅಕ್ಕಿಯನ್ನು ಮಂಜುನಾಥ ದೇವರ ಸೇವೆಗೋಸ್ಕರ ದಾನ ನೀಡಿದ್ದನ್ನು ತಿಳಿಸುತ್ತದೆ. ಕ್ರಿ.ಶ. 1365ರಲ್ಲಿ ಕೋಟೇಶ್ವರ ಶಾಸನದಲ್ಲಿ ರಾಜನ ಆದೇಶದ ಮೇರೆಗೆ ಮಡೆಯನಾಗಪ್ಪನ ಮಗನಾದ ಧರಣಿದೇವನು ಕೋಟೇಶ್ವರದಲ್ಲಿ 4 ಭೂಮಿಗಳನ್ನು ಖರೀದಿಸಿ, 124 ಮೂಟೆ ಬತ್ತ ಮತ್ತು 18 ಹೊನ್ನುಗಳನ್ನು ಕೋಟೇಶ್ವರ ದೇವಾಲಯದ ಅಡಿಗೆಯವನಿಗೆ ಮತ್ತು 6 ಜನ ಬ್ರಾಹ್ಮಣರಿಗೆ ನಿತ್ಯ ಆಹಾರಕ್ಕೋಸ್ಕರ ದಾನ ನೀಡಿದ್ದನ್ನು

ತಿಳಿಸುತ್ತದೆ. ಇನ್ನೊಂದು ಶಾಸನದಲ್ಲಿ ಹೊಸ ಪಟ್ಟಣದಲ್ಲಿ ಬೆನಕೆಯ ನಾಯಕನ ಮಗ ಭುಚೇಯನಾಯಕ ಶಿವರದಲ್ಲಿ ಆಳುತ್ತಿರುವಾಗ ನಿಡುಗಲ್ಲು ರಾಜ್ಯ ಮುಖ್ಯ ಪಟ್ಟಣದಲ್ಲಿ ಗೋಪಿನಾಥದೇವರ ಸೇವೆಗೋಸ್ಕರ ಗೋಪ ಸಮುದ್ರ ಗ್ರಾಮವನ್ನು ದಾನವಾಗಿ ನೀಡಿದ್ದನ್ನು ತಿಳಿಸುತ್ತದೆ. ಕ್ರಿ.ಶ. 1365ರ ಮಾಡಲ್ಲಿ ಶಾಸನದಲ್ಲಿ ಮಾಡೆಹಳ್ಳಿ ಮಲ್ಲಿನಾಥ ದೇವರ ಸೇವೆಗೋಸ್ಕರ, ಬಂಡೆಹಳ್ಳಿ ಮತ್ತು ಮಾಡೆಹಳ್ಳಿಯ ಕಂದಾಯ ಗ್ರಾಮಗಳ ತೆರಿಗೆ ಕಂದಾಯ ಒಂದು ಭಾಗವನ್ನು ನಾಡು, ನಗರ ಮತ್ತು ನಾನಾ ದೇಶಿಗಳ ಅಪ್ಪಣೆ ಪಡೆದು ನಾಯಕನು ಭೂಮಿ ದಾನ ನೀಡಿದ ದಾಖಲೆಯಿದೆ.

ಆಂಧ್ರಪ್ರದೇಶದ, ಅನಂತಪುರ ಜಿಲ್ಲೆ ಹಿಂದೂಪುರ ತಾಲೂಕಿನ ಕೊತ್ತಸಿವರಂ ಗ್ರಾಮದ ಕ್ರಿ.ಶ. 1365ರ ಶಾಸನದಲ್ಲಿ ಬೆನಕೆಯ ನಾಯಕರ ಕುಮಾರ ಬೂಚಿಯ ನಾಯಕರು ನಿಡುಗಲ್ಲಿನ ರಾಜ್ಯಕ್ಕೆ ಮುಖ್ಯವಾದ ಸಿವರದ ಪಟ್ಟಣದಲ್ಲಿ ಆಳುತ್ತಿದ್ದಾಗ ಗೋಪಿನಾಥ ದೇವರ ಸೇವೆಗೆ ಸಿವರದ ಬಡಗಣ ಗೋಪಸಮುದ್ರವನ್ನು ದತ್ತಿಯಾಗಿ ಸಿವರದ ಸಿವದಾಸಿಗಳ ಮಕ್ಕಳು ರಾಮಕೃಷ್ಣದಾಸ ಮತ್ತು ಕೇಶವದಾಸಿಗೆ ನೀಡುತ್ತಾರೆ ಎಂದು ದಾಖಲಿಸಿದೆ. ಕ್ರಿ.ಶ. 1366ರ ಹಂಪಿ ಶಾಸನದಲ್ಲಿ ಒಂದನೇ ಬುಕ್ಕಣ ಒಡೆಯನ ಮಹಾಪ್ರಧಾನನಾದ ಬಸವದಣ್ಣಾಯಕನು ವಿರೂಪಾಕ್ಷ ದೇವರ ಸೇವೆಗಾಗಿ ರಾಮಪುರದ ಕೆರೆಯ ಕೆಳಗೆ ಭೂದಾನ ಮಾಡಿದ್ದನ್ನು ತಿಳಿಸುತ್ತದೆ. ಇದೇ ವರ್ಷದ ಕಾಮಗೆರೆ ಶಾಸನದಲ್ಲಿ ಬಂಡೆಹಳ್ಳಿ ಸ್ಥಾನದ ಮೊಡೆಹಳ್ಳಿಯ ಶ್ರೀ ಮಲ್ಲನಾಥದೇವರಿಗೋಸ್ಕರ ಕೆಲವು ನಿಗದಿಪಡಿಸಿದ ತೆರಿಗೆಗಳನ್ನು ಸೋವಣ ಕೇತೆಯನಾಯಕನು ದಾನ ನೀಡಿದ್ದಾನೆ. ಕ್ರಿ.ಶ. 1368ರ ತಗಡೂರು ಶಾಸನದಲ್ಲಿ ಮೂಲ ಸ್ಥಾನದೇವರ ದೀಪಾಲಂಕಾರಕ್ಕೆ ಮತ್ತು ನಿರ್ವಹಣೆಗೋಸ್ಕರ ಸೇವಕರು, ಒಬ್ಬ ಹೂವಿನ ತೋಟಗಾರನಿಗೆ ಮತ್ತು ತಮ್ಮಡಿಗಳಿಗೆ 20 ಗದ್ಯಾಣಗಳನ್ನು ಒಪ್ಪಿಸಿದ ವಿಷಯವನ್ನು ತಿಳಿಸುತ್ತದೆ. ಇದೇ ಕಾಲದ ಹರದನಹಳ್ಳಿ ಶಾಸನದಲ್ಲಿ ಅಣಲೇಶ್ವರ ದೇವರ ಪೂಜೆ ನೈವೇದ್ಯಗೋಸ್ಕರ ಉಯ್ಯಮಪಳ್ಳಿಯ ಗೌಡುಗಳು ಕೇಶವಪುರದ ಮಹಾಜನರು ಭೂಮಿ ದಾನ ನೀಡಿದ ದಾಖಲೆಯಿದೆ. ಮತ್ತೊಂದು ಇದೇ ತೇದಿಯ ಅರಸೀಕೆರೆಯ ಶಾಸನ ಮಲ್ಲಿಕಾರ್ಜುನ ದೇವರ ಸೇವೆಗೆ ನೈವೇದ್ಯ ಪೂಜೆಗೋಸ್ಕರ ಅಗುಳಿಯ ಭೂಮಿಗಳನ್ನು ಸರ್ವಮಾನ್ಯವಾಗಿ ಅರಸೀಕೆರೆಯ ಮಹಾ ಜನರು ದಾನ ನೀಡಿದ ದಾಖಲೆಯಿದೆ. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಕಬ್ಬಗಲ್ಲು ಶಾಸನದಲ್ಲಿ ವಿನಾಯಕದೇವರ ನಿತ್ಯ ಪೂಜೆಗೆ ಭೂಮಿ ದಾನ ನೀಡಿದ ವಿಷಯವಿದೆ. ಕ್ರಿ.ಶ. 1369ರ ಬನವಾಸಿ ಶಾಸನದಲ್ಲಿ ಮಹಾಪ್ರಧಾನ ಮಾಧವಾಂಕ ಬನವಾಸಿ 12000 ಪ್ರಾಂತ್ಯ ಆಳುತ್ತಿರುವಾಗ ರಟ್ಟಕುಲದ ಶಿವದೇವ ಪ್ರಭುವಿನ ಮಗ ನಾಗಪ್ಪನು ಬನವಾಸಿ ಮಧುಕಾಂತ ಸಾನಿಧ್ಯದಲ್ಲಿ ವೀರೇಶ್ವರ ದೇವರ ಒಂದು ವಿಗ್ರಹ ಪ್ರತಿಷ್ಠಾಪಿಸಿ ಒಂದು ಗ್ರಾಮ ಮತ್ತು ಹಣ ದೇವರಿಗೆ ದಾನ ನೀಡಿ ಲಾಕುಳೇಶ್ವರ ದೇವರ ಒಡೆಯರ ಕುಮಾರ ಚಿಕ್ಕದೇವರ ಒಡೆಯರ ಕಯ್ಯಲು ಒಪ್ಪಿಸಿದ ದಾಖಲೆಯಿದೆ.

ಕ್ರಿ.ಶ. 1369ರ ಮೇಲುಕೋಟೆ ಶಾಸನದಲ್ಲಿ ನಾರಾಯಣ ದೇವರಿಗೆ ಮಾಯಿಲನ ಹಳ್ಳಿಯ ಕೆರೆಯ ಕೆಳಗೆ ಇರುವ ಕುಂಬಾರಕಟ್ಟೆಯ ಭೂಮಿಯನ್ನು ತಿರುನಾರಾಯಣಪುರ ವೈಷ್ಣವರು ನಾಮಳವರ್ ದೇವರ ಪೂಜೆಗೋಸ್ಕರ ಒಂದು ಗ್ರಾಮವನ್ನು ದಾನ ನೀಡಿದ್ದನ್ನು ತಿಳಿಸುತ್ತದೆ. ಇದೇ ವರ್ಷದ ಬಾಳೆಹಳ್ಳಿ ಶಾಸನದಲ್ಲಿ ಮಹಾಪ್ರಧಾನಿ ವೀರುಪಣ್ಣೊಡೆಯ ಅರಗದ ರಾಜ್ಯವಾಳುತ್ತಿದ್ದಾಗ, ಶಾಂತಳಿಗೆ ನಾಡಿನ ಬಾಳೇಹಳ್ಳಿ ವೀರೇಶ್ವರ ದೇವಾಲಯದ ಸೇವೆಗೆ ನೈವೇದ್ಯ ಪೂಜೆಗೋಸ್ಕರ ಮಾದರಸ ಒಡೆಯ ಬಾಳೆಹಳ್ಳಿ ಗ್ರಾಮದಲ್ಲಿ ಭೂಮಿಯನ್ನು ದಾನ ನೀಡಿದ ದಾಖಲೆಯಿದೆ. ಕ್ರಿ.ಶ. 1370ರ ತಿರುವಾಡಿ ಶಾಸನದಲ್ಲಿ ತಿರುವಡಿಯ ಮಾದಲಿಶ್ವರ ಮಾಡೆಯ ನಾಯನಾರ್ ದೇವರ ಸೇವೆಗೋಸ್ಕರ ಬುಕ್ಕಣವೊಡೆಯನು ಕೀಳ್ಳ ಅಣಿಮಜೆಗಾಡಿ ಪಟ್ಟುನಲ್ಲಿಯ ಸಾಟಿಪಟು ಗ್ರಾಮವನ್ನು ದಾನ ನೀಡಿದ ವಿವರವಿದೆ.

ಇದೇ ಕಾಲದ ಕಳಸ ಶಾಸನದಲ್ಲಿ ಕಳಸನಾಥ ದೇವರಿಗೆ ವಿರುಪಂಣವೊಡೆಯನು ದಾನ ನೀಡಿದ್ದನ್ನು ತಿಳಿಸುತ್ತದೆ. ಕ್ರಿ.ಶ. 1371ರ ದೇವವೃಂದ ಶಾಸನದಲ್ಲಿ ರಾಮನಾಥ ದೇವರಿಗೆ ಮತ್ತು ನೃತ್ಯಗಾತಿಯರಿಗೋಸ್ಕರ ಕೆಲವು ನಿಗದಿಪಡಿಸಿದ ಭೂಮಿಗಳನ್ನು ದಾನ ನೀಡಿದ್ದನು ಎಂದುತಿಳಿಸುತ್ತದೆ. ಕ್ರಿ.ಶ. 1372ರ ಗುಂಡ್ಲುಪೇಟೆ ಶಾಸನದಲ್ಲಿ ರಾಮನಾಥ ದೇವರ ಪಾತ್ರಭೋಗ ಸೇವೆಗೆ ನೃತ್ಯಗಾರ್ತಿಯರ ನಿರ್ವಹಣೆಗೋಸ್ಕರ 30 ಗದ್ಯಾಣವನ್ನು ವಿಜಯಪ್ರಸನ್ನ ಅಗ್ರಹಾರದ ಮಹಾಜನರು ದಾನವಾಗಿ ನೀಡಿದ ಉಲ್ಲೇಖವಿದೆ. ಕ್ರಿ.ಶ. 1373ರ ಕೋಟೇಶ್ವರ ಶಾಸನದಲ್ಲಿ ಮಹಾಪ್ರಧಾನ ಗೋಪರಸವೊಡೆಯ ಬಾರುಕೂರ ರಾಜ್ಯ ಆಳುತ್ತಿರುವಾಗ ನಂದಿನಾಥ, ಭೃಂಗಿನಾಥ, ವೀರಭದ್ರದೇವ ಮತ್ತು ಗಣಕುಮಾರ ಹೆಗ್ಗಡೆ ಕೋಟೇಶ್ವರದಲ್ಲಿ ನಿಗದಿಪಡಿಸಿದ ಸರಹದ್ದಿನ ಕೆಲವು ನಿವೇಶನ ಮತ್ತು ಭೂಮಿಯನ್ನು ಕೊಂಡು ಕೋಟೇಶ್ವರ ದೇವರ ಕಟಿಯಹಬ್ಬಗಳಲ್ಲಿ ಉಭಯ ಜಂಗಮರುಗಳ ಆಹಾರದಾನಕ್ಕೋಸ್ಕರ 12 ಮೂಟೆಗಳ ಅಕ್ಕಿ ಮತ್ತು 40 ಹೊನ್ನುಗಳನ್ನು ದಾನ ನೀಡಿದ ವಿವರವಿದೆ. ಕ್ರಿ.ಶ. 1376ರ ಶೃಂಗೇರಿಯ ಸುಪ್ರಸಿದ್ಧ ವಿದ್ಯಾಶಂಕರ ದೇವಾಲಯ ನಿರ್ಮಿಸಿ ದೇವರ ಪೂಜೆ ನೈವೇದ್ಯಕ್ಕೆ ದಾನ ಬಿಟ್ಟಿದ್ದಾನೆ. ಕ್ರಿ.ಶ. 1276ರ ಕೋಲಾರ ಶಾಸನದಲ್ಲಿ ಸಿಪತಿ ದೇವಾಲಯ ದೀಪ ಸ್ತಂಭಕ್ಕೋಸ್ಕರ ಆಳಗಿಯ ವರದಾರ್‌ನ ಮಗ ವೆಂಗಾಡ್ವರ್ ನಂದಗುಳಿನಾಡಿನಲ್ಲಿ 400 ಕೂಳಿ ಭೂಮಿಯನ್ನು ದಾನ ನೀಡಿದ ದಾಖಲೆಯಿದೆ. ಇದೇ ವರ್ಷದಲ್ಲಿ ಮದ್ದೂರು ಶಾಸನದಲ್ಲಿ ಮಂತ್ರಿ ನಾಗರಸನ ಆಜ್ಞೆಯ ಮೇರೆಗೆ ಚಂದರಸನು ನೀಲಮಾಣಿಕ್ಯ ಮಂದಿರವನ್ನು ಜೀರ್ಣೋದ್ಧಾರ ಮಾಡಿಸುವುದಕ್ಕೋಸ್ಕರ ಭೂಮಿ ಬಿಟ್ಟ ವಿಷಯವಿದೆ. ಕ್ರಿ.ಶ. 1377ರ ಕೋಟೇಶ್ವರ ಶಾಸನದಲ್ಲಿ ಬೊಮ್ಮರಸನು ಬಾರಕೂರು ರಾಜ್ಯವಾಳುತ್ತಿರುವಾಗ ಮಹಾ ಪ್ರಧಾನ ಮದ್ದೆದಂಣಾಯಕ 3 ನಿವೇಶನ ಭೂಮಿ ಖರೀದಿಸಿ ಕೋಟೇಶ್ವರ ದೇವರ

ಸೇವೆ, ನೈವೇದ್ಯ ಪ್ರತಿದಿನ 13 ಬ್ರಾಹ್ಮಣರ ಆಹಾರದಾನ ಕ್ಕೋಸ್ಕರ ಇಬ್ಬರ ಸ್ತ್ರೀಯರ ಸಂಬಳಕ್ಕೋಸ್ಕರ ಕೆಲವು ಚಿನ್ನವನ್ನು ದಾನ ನೀಡಿದ ವಿವರವಿದೆ. ಹಾಗೂ ಕೂಡ ಮುದ್ದಯದಂಣಾಯಕ ಚಿನ್ನದ ಕೋಲನ್ನು ದೇವಸ್ಥಾನಕ್ಕೆ ಅರ್ಪಿಸಿದ್ದನ್ನು ತಿಳಿಸುತ್ತದೆ. ಇದೇ ಕಾಲದ ಬಂಟ್ವಾಳ ಮೂಡ ಶಾಸನದಲ್ಲಿ ಪಂಡರಿದೇವ ಮಂಗಳೂರು ರಾಜ್ಯವಾಳುತ್ತಿರುವಾಗ ತಿಮಿರೇಶ್ವರ ದೇವರ ಸೇವೆಗೋಸ್ಕರ ಕೆಲವು ನಿವೇಶನ, ಭೂಮಿಯನ್ನು ಕೆಲವು ಸೆಟ್ಟಿಗಳು ದಾನ ನೀಡಿದ ದಾಖಲೆಯಿದೆ.

ಕಡೂರು ತಾಲ್ಲೂಕಿನ ಕಬ್ಬಳ ಶಾಸನ ಸವೆದಿದೆ. ಸೋಮೇಶ್ವರ ದೇವರ ದೀಪಾಲಂಕಾರಕ್ಕೆ ಮತ್ತು ಪೂಜೆಗೋಸ್ಕರ ಮಹಾಪ್ರಭು ಹೆಸರಿನಲ್ಲಿ ಕೆಲವು ದಾನ ನೀಡಿದ ವಿವರವಿದೆ. ಹಂಪಿಯ ಶಾಸನದಲ್ಲಿ ವಿಜಯನಗರದ ಪಟ್ಟಣದ ಪೂರ್ವಕ್ಕಿರುವ ಸೋಮವಾರದ ಬಾಗಿಲಿನ ಉತ್ತರಕ್ಕಿರುವ ಸೋಮದೇವರ ಕೊತ್ತಳವನ್ನು ಉಲ್ಲೇಖಿಸುತ್ತದೆ.

ವಿಜಯನಗರದ ಅರಸರು ಹಿಂದೂ ಧರ್ಮದ ಲಕ್ಷಣವಾದ ಪರಮತಸಹಿಷ್ಣುತೆಯನ್ನು ಮೈಗೂಡಿಸಿಕೊಂಡು ಅನ್ಯ ಮತೀಯರಾದ ಕ್ರೈಸ್ತ, ಇಸ್ಲಾಂ ಧರ್ಮೀಯರಿಗೆ ತಮ್ಮ ಸಾಮ್ರಾಜ್ಯದಲ್ಲಿ ಆಶ್ರಯ ಕೊಟ್ಟು ಸಲುಹಿದರು. ಸೇನೆಯಲ್ಲಿ ಮುಸಲ್ಮಾನರನ್ನು ಸೇರಿಸಿಕೊಂಡಿದ್ದನು. ಸಾಮ್ರಾಜ್ಯದ ವಿವಿಧೆಡೆಗಳಲ್ಲೂ ದೇವಸ್ಥಾನಗಳಲ್ಲದೆ ಮಸೀದಿಗಳೂ ಇಗರ್ಜಿಗಳು ಇದ್ದವು. ಎಲ್ಲಾ ಧರ್ಮಗಳಿಗೂ ಸಮಾನ ಅವಕಾಶವಿದ್ದ ವಿಜಯನಗರದಲ್ಲಿ ಅರಸರು ಹಿಂದೂ ಸಾಧುಸಂತರನ್ನು ಕ್ರೈಸ್ತ ಪಾದ್ರಿಗಳನ್ನು ಇಸ್ಲಾಂ ಪೀರ್‌ಗಳನ್ನು ಸಮಾನ ಗೌರವಗಳಿಂದ ಕಾಣುತ್ತಿದ್ದರು. ಹಂಪೆಯಲ್ಲಿ ಹಿಂದೂ ದೇವಾಲಯವಲ್ಲದೆ, ಜೈನ ಬಸದಿಗಳನ್ನು ಕಾಣಬಹುದು. ಕಾರ್ಕಳ ಮತ್ತು ವೇಣೂರಿನ ಬಾಹುಬಲಿ ವಿಗ್ರಹಗಳು ಈ ಕಾಲದ ರಚನೆ. ಬೇರೆ ಬೇರೆ ಸಂಪ್ರದಾಯದ ವಿದ್ವಾಂಸರು, ಸಾಧುಸಂತರು, ಕವಿಗಳು ವಿಜಯನಗರದಲ್ಲಿದ್ದರು. ವಿಜಯನಗರದ ಅರಸರು ಶೈವ ಇಲ್ಲವೆ ವೈಷ್ಣವ ಪಂಥಕ್ಕೆ ಸೇರಿದವರಾಗಿದ್ದು ಪಂಥ ಭೇದಕ್ಕೆ ಅವಕಾಶವಿರಲಿಲ್ಲ. ಹಲವಾರು ಶಿವ ಮತ್ತು ವೈಷ್ಣವ ದೇವಾಲಯಗಳು ಕಟ್ಟಲ್ಪಟ್ಟವು. ವಿಜಯನಗರವು ಸರ್ವಧರ್ಮ ಸಮನ್ವಯವನ್ನು ಸಾಧಿಸಿತು. ವಿಜಯನಗರದಲ್ಲಿ ಮತೀಯ ಸ್ವಾತಂತ್ರ್ಯ ವಿದ್ದು, ಇದೊಂದು ಜಾತ್ಯತೀತ ರಾಜ್ಯ ಎನಿಸಿತ್ತು. ಶೃಂಗೇರಿಯ ಅದ್ವೈತ ಮಠಕ್ಕೆ ಹೆಚ್ಚಿನ ದತ್ತಿಗಳನ್ನು ಕೊಡುತ್ತಿದ್ದರು. ವಿಜಯನಗರದ ಅರಸರು ಶೈವರಾಗಿದ್ದರೂ ವರಾಹವು ಅವರ ರಾಜ್ಯ ಚಿಹ್ನೆಯಾಗಿತ್ತು. ಹಂಪೆಯಲ್ಲಿ ಶಿವ ಮತ್ತು ವಿಷ್ಣುವಿನ ದೇವಾಲಯಗಳನ್ನು ಕಟ್ಟಲಾಯಿತು.

ಆಧಾರ ಗ್ರಂಥಗಳು

1. *ಎಸ್.ಐ.ಐ. ಸಂ.* IX ಭಾಗ III

2. *ಎ.ಕ.ಸಂ.* 3, 4, 8, 10, 13

3. *ಕ.ವಿ.ಶಾ. ಸಂ.* 3, ಹಂಪಿ ಶಾಸನಗಳು

4. *ಕ.ವಿ.ಶಾ.ಸಂ.* 4, (ತಮಿಳುನಾಡಿನ ಕನ್ನಡ ಶಾಸನಗಳು)

5. *ಕ.ವಿ.ಶಾ.ಸಂ.* 5, (ಆಂಧ್ರಪ್ರದೇಶದ ಕನ್ನಡ ಶಾಸನಗಳು)

6. *ಎ.ಆರ್.ಐ.ಇ.* 1934-35 ನಂ. ಬಿ. 356.

೧೨. ವಿಷ್ಣು ಗಯಾದಲ್ಲಿರುವ ವಿಜಯನಗರದ ಕೃಷ್ಣದೇವರಾಯನ ವಿಜಯ ಶಾಸನ

ಡಾ. ಕೆಳದಿ ವೆಂಕಟೇಶ್ ಜೋಯಿಸ್

ವಿಜಯನಗರದ ಕೃಷ್ಣದೇವರಾಯನ ಕೀರ್ತಿಯು (ಕ್ರಿ.ಶ. 1509-1529) ಭಾರತದ ಉದ್ದಗಲಕ್ಕೂ ಹರಡಿತ್ತು. ಗಂಗೆಯ ತಟೆಯಿಂದ ಲಂಕೆಯವರೆಗೆ ಅವನ ಹೆಸರು ಪಸರಿಸಿದ್ದನ್ನು ಉದಯಾಂಬರಂನಲ್ಲಿರುವ ಶಾಸನ ತಿಳಿಸುತ್ತದೆ. ಈ ಗಂಗಾ ನದಿಯ ತಟದಲ್ಲಿರುವ ಗಯಾದಲ್ಲಿ ಕೃಷ್ಣದೇವರಾಯನು ಹಾಕಿಸಿದನೆಂದು ಹೇಳುವ ಶಾಸನ ವೊಂದಿದೆ. ಈ ಶಾಸನದ ಬಗ್ಗೆ ಭಿನ್ನಾಭಿಪ್ರಾಯವಿದೆ. ಕೆಲವರು ಕೃಷ್ಣದೇವರಾಯನು ಈ ಪ್ರದೇಶವನ್ನು ಗೆದ್ದುದರ ಸಲುವಾಗಿ ಹಾಕಿಸಿದ ವಿಜಯ ಶಾಸನವೆಂದೂ ಇನ್ನು ಕೆಲವು ಇದು ಧರ್ಮ ಶಾಸನ ಎಂದೂ ಅಭಿಪ್ರಾಯಿಸುತ್ತಾರೆ. ವಿಜಯನಗರ ಸಂಪುಟ ದಲ್ಲಿಈ ಶಾಸನ ಸೇರಿರುವುದಿಲ್ಲವಾದ್ದರಿಂದ ಇದನ್ನು ಇಲ್ಲಿ ಪರಿಚಯಿಸಲು ಪ್ರಯತ್ನಿಸ ಲಾಗಿದೆ.[1]

ಗಯಾದ ದೇವಾಲಯದ ಮುಖ ತೋರಣದಲ್ಲಿ ಈ ಶಿಲಾಶಾಸನವಿದೆ. ಇದರ ಲಿಪಿ ಕನ್ನಡ. ಭಾಷೆ ತೆಲುಗು. ಇದರ ಕಾಲ ಆಷಾಢ ತಿಂಗಳ 13ರಂದು ವೃಷಾ (ವಿಷು) ಸಂವತ್ಸರದ ಶಾ.ಶ. 1444 ಅಂದರೆ ಕ್ರಿ.ಶ. 1522. ಈ ವೇಳೆಯಲ್ಲಿ ಈ ಪ್ರದೇಶವು ಮೊಗಲ್ ಬಾಬರನ ಆಡಳಿತಕ್ಕೆ (1526) ಒಳಪಟ್ಟಿತ್ತು. ಬುಕಾನನನು ತನ್ನ ಪಾಟ್ನಾ ಗಯಾ 1811ರ ವರದಿಯಲ್ಲಿ ಗಯೆಯ ವಿಷ್ಣುಪಾದ ದೇವಾಲಯದ ಪಕ್ಕದಲ್ಲಿ ಕ್ರಿ.ಶ. 1522ರಲ್ಲಿ ಕೃಷ್ಣದೇವರಾಯ ಮತ್ತು ಅವನ ಪಟ್ಟಮಹಿಷಿ ತಿರುಮಲ ದೇವಿಯ ಹೆಸರಲ್ಲಿ ಒಂದು ಕಲ್ಲಿನ ತೋರಣ ಕಟ್ಟಿಸಿರುವ ಕುರಿತು ಬರೆಯುತ್ತಾನೆ. ಇದು ಕೃಷ್ಣ ದೇವರಾಯನ ಕೀರ್ತಿಯು ಗಂಗಾನದಿಯ ಉತ್ತರಕ್ಕೂ ಹಬ್ಬಿತ್ತೆನ್ನಲು ಅವಕಾಶ ಕಲ್ಪಿಸುತ್ತದೆ. ಅಂತೆಯೇ 1526ರಲ್ಲಿನ ಬಾಬರನ ಆತ್ಮಚರಿತ್ರೆಯಲ್ಲಿ ಭಾರತದ ವಿವಿಧ ಪ್ರದೇಶಗಳ ರಾಜರು ಅಂದು ಯಾರು ಯಾರಿದ್ದರು ಎಂದು ಹೇಳುತ್ತ ಕೃಷ್ಣದೇವರಾಯನ ಹೆಸರನ್ನು ಉಲ್ಲೇಖಿಸದೇ ವಿಜಯನಗರದ ಅರಸನು ತನ್ನ ಕಾಲದಲ್ಲಿ ಬಲಾಢ್ಯವಾಗಿದ್ದ ನೆಂದು ಬರೆಯುತ್ತಾನೆ.

ಅಂದು ಕೆಲವು ಸಣ್ಣಪುಟ್ಟ ರಾಜರುಗಳ ಆಡಳಿತ ಈ ಪ್ರದೇಶದಲ್ಲಿತ್ತು. ಈ ಅವಧಿಯಲ್ಲಿ ಗಯಾ ಪ್ರದೇಶದ ಸಂಪರ್ಕ ವಿಜಯನಗರದ ಅರಸರಿಗೆ ಹೆಚ್ಚಿದ್ದಂತೆ ಕಂಡುಬರುವುದಿಲ್ಲ. ವಿಜಯನಗರಕ್ಕೆ ಬಿಹಾರದ ದಕ್ಷಿಣ ಭಾಗದ ಸಂಪರ್ಕವಿದ್ದ ಕುರಿತು

ಮಾಹಿತಿ ದೊರೆಯುತ್ತದೆ. ಆಸ್ಥಾನ ಕವಿ ನಂದಿ ತಿಮ್ಮನ ಅಥವಾ ಮುಕ್ಕು ತಿಮ್ಮಯ್ಯನು (ಮುಕ್ಕು ಎನ್ನುವುದು ತಿಮ್ಮನ ಅಡ್ಡ ಹೆಸರಲ್ಲ, ಅದು ಅವನ ಅರಮನೆಯಲ್ಲಿಯೇ ಆನೆಯ ಹೆಸರು. ಹಿಂದಿನಿಂದ ಬಂದ) ರೂಢಿಯಂತೆ ಹೆಣ್ಣು ಮಗಳ ಮೂಗನ್ನು ವರ್ಣಿಸಿದಾಗ ದೊರೆತ ಗೌರವವೆಂದು ತಿಳಿದುಬರುತ್ತದೆ.[2]) ತನ್ನ ದೊರೆಯ ಪ್ರತಿನಿಧಿಯಾಗಿ ಈ ಪ್ರದೇಶಕ್ಕೆ ಭೇಟಿ ಇಡುತ್ತಿದ್ದನೆಂದು ತಿಳಿದುಬರುತ್ತದೆ. ಈ ಶಾಸನವನ್ನು ಇವನೇ ಕೃಷ್ಣ ದೇವರಾಯನ ಪಿತೃಗಳಿಗೆ ತರ್ಪಣವನ್ನು ಬಿಟ್ಟು ಈ ಶಾಸನವನ್ನು ಬರೆಸಿರಬೇಕೆಂಬುದೂ ಇತಿಹಾಸಕಾರರ ಅಭಿಪ್ರಾಯವಾಗಿದೆ.

ಸಾಮಾನ್ಯವಾಗಿ ಅರಸರು ತಮ್ಮ ಪರವಾಗಿ ಪುಣ್ಯ ಕ್ಷೇತ್ರಗಳಲ್ಲಿ ಕಾರ್ಯಕ್ರಮ ಮಾಡಲು ಬೇರೆಯವರನ್ನು ಕಳಿಸುವುದಿತ್ತು. ಅಂತಹ ಎರಡು ಶಾಸನಗಳು ತೆರೆಂಗಾಣದಲ್ಲಿದೆ. ಅದರಲ್ಲಿ ಒಂದರಲ್ಲಿ ಇಬ್ಬರನ್ನು ರಾಜರು ವಾರಣಾಸಿಗೆ ಅಜ್ಜಿಯ ಹೆಸರಲ್ಲಿ ಧರ್ಮಕಾರ್ಯಕ್ಕಾಗಿ ಕಳುಹಿಸಿದ ವಿವರವಿದೆ. ಇನ್ನೊಂದು ಶಾಸನ ಕ್ರಿ.ಶ. 1272ರದ್ದಾರಿದ್ದು ಅದು ಹೆಚ್ಚು ಜನ ಯಾತ್ರೆ ಕೈಗೊಳ್ಳುವ ಮಲಯಾ ಗುಂಡ ಎಂಬಲ್ಲಿದೆ. ಅದರಂತೆ ಈ ಶಾಸನ ಹಾಕಿಸಿರಬಹುದೆಂದಿದೆ. ವಿಜಯದ ದ್ಯೋತಕವಾಗಿ ಈ ಶಾಸನ ಹಾಕಿಸರಬೇಕೆಂಬ ಮಾತೂ ಇದೆ. ಶಾಸನವನ್ನು ಗಮನಿಸಿದಾಗ ಇದರಲ್ಲಿ ಬರುವ ಹೇಳಿಕೆಗಳು ವಿಜಯ ಕುರಿತ ಮೂಲ ವಿಷಯಕ್ಕೆ ಸಂಬಂಧ ಕಂಡುಬರುವುದಕ್ಕಿಂತ ಧರ್ಮ ವಿಷಯಕ್ಕೇ ಹೆಚ್ಚು ಹತ್ತಿರವಾಗುತ್ತದೆ. ಈ ಹಿನ್ನೆಲೆಯಲ್ಲಿ ಈ ಶಾಸನ ಒಮ್ಮೊಮ್ಮೆ ಧರ್ಮ ಶಾಸನದಂತೆಯೂ ಕಂಡುಬರುತ್ತದೆ. ಅರಸನಿಗೆ ಈ ಪ್ರದೇಶಕ್ಕೆ ಯಾತ್ರಾರ್ತಿವಾಗಿ ಹೋಗುವ ಮನಸ್ಸು ಬಂದಿದ್ದು ಹಾಗೆ ಹೋದಾಗ ಹಾಕಿಸಿರುವ ಶಾಸನ ಇದಾಗಿರಬಹುದಾದ್ದರಿಂದ ಇದನ್ನು ಧರ್ಮ ವಿಜಯ ಶಾಸನ ಎಂದೂ ಹೇಳಬಹುದೆಂದು ಹೇಳುವವರಿದ್ದಾರೆ. ಆದರೆ ವಿಜಯ ಶಾಸನ ಎಲ್ಲಿ ದೊರೆತಿದೆಯೋ ಆ ಪ್ರದೇಶ ಅರಸರ ಆಳ್ವಿಕೆಗೆ ಒಳಪಡಬೇಕು ಅಥವಾ ಅರಸರ ಪ್ರಭಾವಕ್ಕೆ ಒಳಪಟ್ಟ ಪ್ರದೇಶವಾಗಿರಬೇಕು ಅಥವಾ ಆ ಪ್ರದೇಶದ ಮೇಲೆ ಅರಸರು ದಾಳಿ ಮಾಡಿರಬೇಕು. ಅಂತಹ ಕಡೆಗಳಲ್ಲಿ ವಿಜಯ ಶಾಸನ ಹಾಕಿಸುವುದು ರೂಢಿ. ಇದಕ್ಕೆ ಉದಾಹರಣೆಯಾಗಿ ಸಮುದ್ರಗುಪ್ತ ತನ್ನ ವಿಜಯ ಶಾಸನವನ್ನು ಕಂಚಿಯಲ್ಲಿ ಹಾಕಿಸಿರುವುದನ್ನು, ರಾಜೇಂದ್ರ ಚೋಳನು ಉತ್ತರ ಭಾರತಕ್ಕೆ ದಾಳಿ ಮಾಡಿದಾಗ ತನ್ನ ವಿಜಯ ಸ್ತಂಭವನ್ನು ಗಂಗೆಯ ತಟದಲ್ಲಿ ಹಾಕಿಸಿರುವುದನ್ನು ಉಲ್ಲೇಖಿಸಬಹುದು. ಕರ್ನೂಲು ಜಿಲ್ಲೆಯ ತ್ರಿಪುರಾಂತಕಂ ನಲ್ಲಿರುವ ಕೊಪ್ಪರಂಜಂಗಾ ಶಾಸನ ಮತ್ತು ಪೂರ್ವ ಗೋದಾವರಿ ಜಿಲ್ಲೆಯ ದಕ್ಷರಾಮಂ ಶಾಸನಗಳನ್ನು ಇಲ್ಲಿ ಉದಾಹರಿಸಬಹುದು. ಅದು ಕೊಪರಂಜಂಗನ ರಾಜ್ಯ ತ್ರಿಪುರಾಂತಕ ದವರೆಗೆ ವಿಸ್ತರಿಸಿತ್ತೆಂದಲ್ಲ. ಅವನು ದಾಳಿಯ ಕಾಲಕ್ಕೆ ಅಲ್ಲಿಗೆ ಬಂದಿದ್ದು ತನ್ನ ವಿಜಯದ ಸಂಕೇತವಾಗಿ ಶಾಸನ ಹಾಕಿಸಿರಬಹುದು. ಅದರಂತೆ ಕೃಷ್ಣದೇವರಾಯನ ಶಾಸನ ಸಹ ಅವನು ಗಂಗಾ

ನದಿಯ ದಂಡೆಯುವರೆಗೆ ದಾಳಿ ಮಾಡಿರಬೇಕೆನ್ನುವ ಸೂಚನೆಯನ್ನು ಈ ಶಾಸನ ಕೊಡುತ್ತದೆ. ಅವರಿಂದ ತೆರಿಗೆ ಸಂಗ್ರಹಿಸಿರಬೇಕು. ಅಲ್ಲಸಾನಿ ಪೆದ್ದನನ ಮನುಚರಿತ ಕಾವ್ಯದಲ್ಲಿ ಅವನೇ ಹೇಳುವ ಪ್ರಕಾರ ಉದಯಾಚಲನು ಯುದ್ಧಗಳನ್ನು ಆಟಗಳಂತೆ ಎಣಿಸಿದನಂತೆ. ಐದು ರಾಜ್ಯಗಳು ಅವನ ಯುದ್ಧದ ಆಟಕ್ಕೆ ತಲೆಬಾಗಿದ ವಂತೆ. ಅವದ, ಸಿಕಂದರ, ಸಿಂಧೂರ ಅಧ್ಯಕ್ಷ ಮುಂತಾದವರು ಅವನು ಖಡ್ಗಕ್ಕೆ ಬಲಿಯಾದರೆಂದು ತಿಳಿಸುತ್ತಾನೆ. ಈ ಹಿನ್ನೆಲೆಯಲ್ಲಿ ಇದನ್ನು ಧರ್ಮ ವಿಜಯ ಶಾಸನ ಎಂದು ಕರೆಯ ಬಹುದಾಗಿದೆ.[3]

ಕವಿ ಪೆದ್ದನನ ಮನುಚರಿತ ಕಾವ್ಯದಲ್ಲಿ ಉದಯಾಚಲ ಮತ್ತು ಸಿಂಧೂರ ಅಧಕ್ಷರನ್ನು ನಲ್ಲೂರ ಜಿಲ್ಲೆಯ ಉದಯಗಿರಿಯವರೆಂದು ಗುರುತಿಸಲಾಗಿದೆ. ಅವರ ಜೊತೆ ಗಜಪಾತಿಯೂ ಸೇರಿದ್ದನು. ಸಿಕಂದರ್ ಅನ್ನುವ ಹೆಸರು ಮೊಗಲ ಸಿಕಂದರನಿಂದ ಬಂದಿದೆ. ಅವರು ಅಪಂಚ ಗೌಡ, ಧಾತ್ರಿಯ, ಸಾರಸ್ವತರು, ಕನ್ಯಾಕುಬ್ಜದವರು, ಮೈಥಿಲಿ ಯವರು, ಗೌಡರು, ಉತ್ಕಲದವರನ್ನು ಸೂಚಿಸುತ್ತದೆ. ಅದು ಗುಜರಾತಿನವರೆಗೆ ವಿಸ್ತರಿಸಿತ್ತು.

ಪೆದ್ದನನು ಹೇಳುವ ಈ ಸಿಕಂದರನು ಡೆಲ್ಲಿಯಲ್ಲಿ 1488 ರಿಂದ 1516 ರವರೆಗೆ ಆಳಿದನೆಂದು ತಿಳಿದುಬರುತ್ತದೆ. ಇದು ಸಂಶಯಕ್ಕೆ ಕಾರಣವಾಗುತ್ತದೆ. ಈ ಹೆಸರು ಡೆಲ್ಲಿಯಲ್ಲಿ ಆಳಿದ ಸಿಕಂದರ ಲೋದಿಗೆ ಹೊಂದಾಣಿಕೆಯಾಗುತ್ತದೆ. ಕೃಷ್ಣದೇವರಾಯನು ಕಟಕದ ಮೇಲೆ ದಾಳಿ ಮಾಡಿ 1516ಕ್ಕೆ ಗಂಗಾನದಿಯ ವಿಭಾಗಕ್ಕೆ ಹೋದುದು ಗೊತ್ತಾಗುತ್ತದೆ. ಮತ್ತು ದಿಲ್ಲಿಯ ಸೈನ್ಯವನ್ನು ಸೋಲಿಸಿದ್ದೂ ತಿಳಿದುಬರುತ್ತದೆ. ಕೃಷ್ಣದೇವರಾಯನು ಸಿಕಂದರನನ್ನು ಸೋಲಿಸಿದನೆಂಬುದೂ ಸಂಶಯಕ್ಕೆ ಕಾರಣವಾಗಿದೆ. ಐದು ಗೌಡ ರಾಜರು ಈ ಪ್ರದೇಶವನ್ನು ಆಳಿದುದನ್ನು ನಂಬುವುದು ಕಷ್ಟವಾಗುತ್ತದೆ. ಕೃಷ್ಣದೇವರಾಯನು ಅವದನನ್ನು ಗೆದ್ದನೆಂದು ಹೇಳಲಾಗುತ್ತದೆ. ಈ ಪ್ರದೇಶದಲ್ಲಿ ಅವದನನ ಆಳ್ವಿಕೆ ಕುರಿತು ಸರಿಯಾದ ವಿವರ ಸಿಗುವುದಿಲ್ಲ. ಗಯಾ ಕೃಷ್ಣದೇವರಾಯನ ದಾಳಿ ಮಾಡಿದ ಎನ್ನುವ ಕಾಲಕ್ಕೆ ಸಣ್ಣ ರಾಜಧಾನಿಯಾಗಿದ್ದಿರಬೇಕು. ಅದಾದ ಮೇಲೆ ವಿಜಯ ಪಡೆದುದಕ್ಕೆ ಕೃಷ್ಣದೇವರಾಯನು ಗಯಾದಲ್ಲಿ ನಂದಿ ತಿಮ್ಮನ ಈ ಶಾಸನ ಹಾಕಿಸಿರಬೇಕು. ಅಷ್ಟದಿಗ್ಗಜ ಕವಿಯ ಹಾಗೆ ಈತ ಗಂಗಾ ತೀರಕ್ಕೆ ಅರಸರ ಜೊತೆ ಹೋಗಿದ್ದು ಅರಸನ ವಿಜಯ ಸಾಧನೆಯನ್ನು ದಾಖಲಿಸಲು ಪ್ರಯತ್ನಿಸಿರಬಹುದು. ಆದ್ದರಿಂದ ಇದನ್ನು ಕೃಷ್ಣದೇವರಾಯನ ವಿಜಯವನ್ನು ಸೂಚಿಸಿದ ಧರ್ಮಶಾಸನ ಎಂದು ಹೇಳಬಹುದೇನೋ. ಆದರೆ ಶಾಸನ ಪಾಠ ಮಾತ್ರ ಇದು ಕೃಷ್ಣದೇವರಾಯನು ತನ್ನ ತಂದೆಯುವರ ಕರ್ಮಾದಿಗಳನ್ನು ನಡೆಸಿದ ಕುರಿತು ತಿಳಿಸುತ್ತದೆ.

ಶಾಸನ ಪಾಠ

1. ಸ್ವಸ್ತಿ ಶ್ರೀ ಜಯಾಭ್ಯುದಯ ಶಾ
2. ಲಿವಾಹನ ಶಕ ವರುಷಂಬುಲು
3. 1444 ಆಗು ನೆಂತಿ ವೃಷ ಸಂ
4. ವತ್ಸರ ಆಷಾಢ (ಧ) ಬಹುಲ 13 ಮಾ
5. ಶ್ರೀಮನ್ ಮಹಾರಾಜ ಆಧಿರಾಜ ರಾಜ
6. ಪರಮೇಶ್ವರ ವೀರ ಪ್ರತಪ ವೀರ
7. ಕ್ರಿಷ್ಣದೇವ ಮಹಾರಾಯಲು
8. ವೆಂಚಿನ ವಿಜಯ ಶಾಸನ
9. ಮು ತಿರುಮಲದೆವಿ ವಲ್ಲಭಕ ಕ
10. ರುನಾಮಯ ಹೃದಯ ರಜ ಕಂ
11. ಟೀರವ ಈಶ್ವರ ನರಸ ಭೂಪುರಂದಾರ
12. ವರ ನಂದನ
13. ಬಾಸದ
14. ಪ್ರುವರ
15. ಗಂಡಂ
16. ಕ್ಕ
17. ಯಿ (ಇ) ಸಾ
18. ಸನಮು
19. ಮುಕ್ಕು
20. ತಿಮ್ಮ್ಮಯ
21. ಪ್ರಸೆನು (II)

ಟಿಪ್ಪಣಿಗಳು

1. ಡಾ. ದಿನೇಶ ಚಂದ್ರಶೇಖರ ಮತ್ತು ಶ್ರೀ ಎಚ್.ಕೆ.ಶರ್ಮರವರು ಗಯಾದ ಶಾಸನಗಳು.
2. ವೀರ ಸಲಿಂಗಂ ಆಂದ್ರಕಾವುಲ ಚರಿತಾ ಪಾಟ 2 ಪುಟ 199 ವಿವರವಿದೆ.
3. ಅರ್ಧ ಶತಮಾನದ ಹಿಂದೆ ಸ್ವರ್ಗಸ್ಥ ಶ್ರೀ ಕೆ.ವಿ.ಲಕ್ಷ್ಮಣರಾಯರು ಪೆದ್ದನನ ಕಾವ್ಯದ ಬಗ್ಗೆ ಜನರ ಗಮನಸೆಳೆದರು. ಆಂಧ್ರಸಾಹಿತ್ಯ ಪತ್ರಿಕೆಯಾದ ಕೊಕನಾಡಿಗೆ ಕೊಟ್ಟ ವಿಜಯಗಳ ವಿವರ ಇಲ್ಲಿದೆ.

ಆಧಾರಗಳು

1. ಆಗಸ್ಟ್, ಅಕ್ಟೋಬರ್ ಮತ್ತು ಡಿಸೆಂಬರ್ 1959ರಲ್ಲಿ ತೆಲುಗು ಭಾರತೀ ಪತ್ರಿಕೆಯಲ್ಲಿ ಕೃಷ್ಣದೇವರಾಯನ ಗಯಾ ಶಾಸನದ ಬಗ್ಗೆ ಎನ್.ವೆಂಕಟರಮಣಯ್ಯ ಮತ್ತು ಕೆ.ಎಚ್.ಶರ್ಮ ಇವರುಗಳು ಚರ್ಚಿಸಿದ್ದಾರೆ.
2. ಬುಕ್ಕಾನನ ವರದಿಯನ್ನು ಎಲ್.ಪಿ. ವಿದ್ಯಾರ್ಥಿಯ The Sacred Complex in Hindu Gaya ನೋಡಿ.
3. The Cultural Heritage of India-Ramakrishna Mission Publication Vol. III p.34.
4. ಕೃಷ್ಣಸ್ವಾಮಿ ಅಯ್ಯಂಗಾರ್ (ಸಂ) The Sources of Vijayanagar History.
5. ವರಪ್ರಸಾದ ಶಾಸ್ತ್ರಿ: Dakhini Pandits in Banaras in *Indian Anitiquary* Vol. 41, pp. 7-13.
6. ಪ್ರಧಾನ ಸಂಪಾದಕ: ಎಂ.ವಿ.ಸೀತಾರಾಮಯ್ಯ, ಶ್ರೀ ಕೃಷ್ಣದೇವರಾಯನ ದಿನಚರಿ.
7. ತಿಮ್ಮಣ್ಣ ಕವೀಂದ್ರ ವಿರಚಿತ ಕರ್ಣಾಟ ಕೃಷ್ಣರಾಯ ಭಾರತ ಕ.ಸಾ.ಪ. 1979 ಪೀಠಿಕೆ
8. ಕೃಷ್ಣದೇವರಾಯ ಮತ್ತು ಕನ್ನಡ, ದತ್ತಿ ಉಪನ್ಯಾಸಗಳನ್ನು 1986 ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಬೆಂ. ಡಾ: ಜಿ.ಎಸ್.ದೀಕ್ಷಿತ್‌ರವರ ಕೃಷ್ಣದೇವರಾಯ ಮತ್ತು ಕನ್ನಡ ಸಂಸ್ಕೃತಿ ಲೇಖನ.
9. A note on the Gaya inscription of Krishnadevaraya, N. Venkatamanayya, Andra.
10. *Ep. Ind.* XXXIII, No. 20-3, p. 111.

೧೩. ಅರಳಗೋಡಿನ ವೀರಗಲ್ಲು ಶಾಸನ-ಕರಾವಳಿಯಲ್ಲಿ ಸೂಕ್ಷ್ಮತೆ ಪಡೆದ ವಿಜಯನಗರದ ಆಡಳಿತ

ಡಾ. ಪಿ.ಎನ್.ನರಸಿಂಹಮೂರ್ತಿ

ವಿಜಯನಗರದ ಹುಟ್ಟು ದಕ್ಷಿಣಭಾರತದಲ್ಲಿ ಒಂದು ವಿದ್ಯುತ್ ಸಂಚಾರವನ್ನೇ ಸೃಷ್ಟಿಸಿತು. ಅನಿಶ್ಚತೆಯ ಆಗರವಾಗಿದ್ದ ಅಂದಿನ ಪರಿಸ್ಥಿತಿಗೆ ಒಂದು ನಿಖರತೆಯ ದಿಕ್ಕು ದೊರೆತಂತಾಯಿತು. ಧರ್ಮ ಮತ್ತು ಸಂಸ್ಕೃತಿಯ ರಕ್ಷಣೆ ಮತ್ತು ಆಚರಣೆಗೆ ಸೂಕ್ತವಾದ ರಾಜಕೀಯ ಪ್ರೇರಣಶಕ್ತಿ ದೊರೆಯಿತು. ಈ ವಿಷಯವನ್ನು ಇಡೀ ದೇಶಕ್ಕೆ ಮಾದರಿಯಾಗಬಲ್ಲ ನ್ಯಾಯ, ನೀತಿ, ಧರ್ಮಸಮನ್ವಯತೆ ಇತ್ಯಾದಿಗಳ ಪರಿಪಾಲನೆಗೆ ರಾಜಕೀಯ ವಾತಾವರಣ ಸೃಷ್ಟಿಯಾಯಿತು.

ಸಾಗರೋತ್ತರ ವ್ಯಾಪಾರ, ವಹಿವಾಟುಗಳ ಪ್ರಮುಖ ತಾಣವಾಗಿದ್ದ ಕರಾವಳಿ ಭಾಗವು ವಿಜಯನಗರದ ಆಗುಹೋಗುಗಳಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಹಾಗಾಗಿ ಸಾಮ್ರಾಟರ ಗಮನವು ಈ ಭಾಗದ ಮೇಲೆ ವಿಶೇಷವಾಗಿತ್ತು. ಸಂಗಮವಂಶದ ಆಳ್ವಿಕೆ ಕಾಲದಲ್ಲಿ ಇದನ್ನು ನಿಚ್ಚಳವಾಗಿ ಬಿಂಬಿಸುವ ಆಧಾರಗಳು ವಿಪುಲವಾಗಿ ದೊರೆಯುತ್ತವೆ. ಆದರೆ 15ನೆಯ ಶತಕದ ಮಧ್ಯಭಾಗದಿಂದ ಪರಿಸ್ಥಿತಿ ಸಮತೋಲನ ಕಳೆದುಕೊಳ್ಳತೊಡಗಿ ಕೊನೆಗೆ ಅದು ಕೇವಲ ನಾಮಮಾತ್ರ ಉಳಿಯುವಂತಾದುದು ದುರದೃಷ್ಟಕರ ಸಂಗತಿ. ಸ್ಥಿರತೆಯ ಚೌಕಟ್ಟಿನೊಳಗೂ ನಾಜೂಕಿನ ಅಸ್ಥಿರತೆಯ ವಲಯವೊಂದು ಇದ್ದುದು, ಹಾಗೂ ಅದು ಸಾಮ್ರಾಜ್ಯದ ಪ್ರಮುಖ ವಲಯವೂ ಆಗಿದ್ದುದು ಒಂದು ವಿಪರ್ಯಾಸ.

ಇಮ್ಮಡಿ ದೇವರಾಯನನಂತರ ಬಂದ ಮಲ್ಲಿಕಾರ್ಜುನ ರಾಯನ ಕಾಲದಲ್ಲಿ ಆಡಳಿತದ ಶಕ್ತಿ ಕಳೆಗುಂದತೊಡಗಿತು. ಇದು ವಿರೂಪಾಕ್ಷನ ಕಾಲದಲ್ಲಿ ಮೇರೆ ಮೀರಿತು. ಸಮಯ ಸಾಧಿಸಿದ ಬಹಮನಿ ಸುಲ್ತಾನರು ಗೋವಾವನ್ನು ಆಕ್ರಮಿಸಿಕೊಂಡರು. ತನ್ನ ಅಸಹಾಯಕತೆಯನ್ನು ಅರಿತ ಕೇಂದ್ರಾಡಳಿತ ಕರಾವಳಿ ಅರಸನ್ನು ಅವರಷ್ಟಕ್ಕೆ ಬಿಟ್ಟು ಕಳೆದುಹೋದ ಗೋವಾ ಭಾಗವನ್ನು ಪುನರ್‌ವಶಮಾಡಿಕೊಳ್ಳುವ ಪ್ರಯತ್ನ ಮಾಡಲಿಲ್ಲ. ಮುಂದೆ ಪೋರ್ಚುಗೀಸರ ಆಗಮನ ಅಷ್ಟೇ ಆತಂಕಕಾರಿಯಾಗಿ ಪರಿಣಿಸಿತು. ಗೋವ ಅವರ ವಶವಾದಾಗ ಬಲಿಷ್ಠ ಚಕ್ರವರ್ತಿ ಎನಿಸಿಕೊಂಡಿದ್ದ ಕೃಷ್ಣರಾಯ ಮಹಾ ರಾಯನೂ ಏನೂ ಮಾಡದೆ ಸುಮ್ಮನಿದ್ದ. ಇದು ಕರಾವಳಿಯಲ್ಲಿ ಅನಿಶ್ಚಿತತೆ ಮತ್ತು ಆತಂಕದ ಅಸಹಾಯಕ ವಾತಾವರಣವನ್ನು ಸೃಷ್ಟಿಸಿತು.

ಹಿಂದೆ ಇಲ್ಲಿನ ಪರಸ್ಪರ ಕಾದಾಡುತ್ತಿದ್ದ ಅರಸುಮನೆತನಗಳನ್ನು ನಿಯಂತ್ರಿಸಲು ಕೇಂದ್ರವೇ ಸೈನ್ಯ ಕಳುಹಿಸಿ ಕಾರ್ಯನಿರ್ವಹಿಸಿದ ಉದಾಹರಣೆಗಳಿವೆ. ಆ ಸಂದರ್ಭಗಳಲ್ಲಿ ಕೆಲ ಸ್ಥಳೀಯ ಅರಸರ ಸಹಕಾರ ಪಡೆದಿರುವುದೂ ಶಾಸನಗಳಲ್ಲಿ ಪ್ರಕಟಗೊಂಡಿದೆ. ಆದರೆ ಈಗ ಬದಲಾದ ಪರಿಸ್ಥಿತಿಯನ್ನು ಸ್ಥಳೀಯ ಅರಸರ ಸಹಾಯಕ್ಕೆ ಕೇಂದ್ರ ಕೈಚಾಚುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಇದನ್ನು ಪುಷ್ಟೀಕರಿಸಲು ಎರಡು ಸೂಕ್ತ ಉದಾಹರಣೆಗಳನ್ನು ಇಲ್ಲಿ ವಿವೇಚಿಸಲಾಗಿದೆ. ಎರಡೂ ಉದಾಹರಣೆಗಳ ಚಕ್ರವರ್ತಿ ಸದಾಶಿವರಾಯನ ಕಾಲಕ್ಕೆ ಸೇರಿದವು. ಕಾಲದಿಂದ ಕಾಲಕ್ಕೆ ತಾನೇ ಮಾಡಿದ ತಪ್ಪುಗಳಿಂದಾಗಿ ತುಳುವದ ಅರಸರುಗಳ ಮೇಲಿನ ತನ್ನ ಹತೋಟಿಯನ್ನು ವಿಜಯನಗರದ ಕೇಂದ್ರ ಸರಕಾರ ಸಂಪೂರ್ಣವಾಗಿ ಕಳೆದುಕೊಂಡಿತ್ತು ಎಂಬುದನ್ನು ಈ ಉದಾಹರಣೆಗಳ ಸ್ಪಷ್ಟೀಕರಿಸುತ್ತೇವೆ.

ತುಳುವವನ್ನು ಹತೋಟಿಗೆ ತರಲು ಮಾಡಿದ ಪರ್ಯಾಯ ಕ್ರಮಗಳಲ್ಲಿ ಮೊದಲನೆಯದು ಹಾಡುವಳ್ಳಿಯ ರಾಣಿ ಚೆನ್ನಭೈರಾದೇವಿಯ ಸಹಾಯ ಯಾಚಿಸಿದುದು, ಎರಡನೆಯದು ಕೆಳದಿ ಸದಾಶಿವನಾಯಕನಿಗೆ ಇಡಿಯ ತುಳುವ ರಾಜ್ಯವನ್ನು 'ಅಮರ ಮಾಗಣಿ'ಯಾಗಿ ಕೊಟ್ಟುದು. ಈ ವಿಷಯಗಳಿಗೆ ಸಂಬಂಧಿಸಿದಂತೆ ದೊರೆತಿರುವ ಒಂದು ಹೊಸ ಶಾಸನವನ್ನು ಇಲ್ಲಿ ವಿಮರ್ಶಿಸಲಾಗಿದೆ.

ಇದೊಂದು ವೀರಗಲ್ಲು ಶಾಸನ. ಸಾಗರ ತಾಲೂಕಿನ ಶರಾವತಿ ಮುಳುಗಡೆ ಪ್ರದೇಶದ ಭಾರಂಗಿ ಹೋಬಳಿಯ ತುಮ್ರಿ ಬಳಿ ಇರುವ ಅರಳಗೋಡಿನಲ್ಲಿ ಇದು ದೊರೆತಿದೆ. ಇದನ್ನು ಪತ್ತೆ ಮಾಡಿರುವ ಎಚ್.ಜಿ.ಶ್ರೀಧರ ಅವರು ಈ ಬಗ್ಗೆ 14-11-1987ರ ಉದಯವಾಣಿ ಪತ್ರಿಕೆಯಲ್ಲಿ ಸಂಕ್ಷಿಪ್ತ ವರದಿ ಪ್ರಕಟಿಸಿದ್ದಾರೆ. ಅಲ್ಲಿ ಅವರು ಕೊಟ್ಟ ಶಾಸನ ಪಾಠ ಪ್ರಸಕ್ತ ನನ್ನ ಅವಲೋಕನಕ್ಕೆ ಸಹಕಾರಿಯಾಗಿದೆ.

ಎರಡು ಪಟ್ಟಿಗಳಲ್ಲಿ ಒಟ್ಟು ಹತ್ತು ಸಾಲುಗಳ ಬರಹ ಇರುವ ಈ ವೀರಗಲ್ಲು ಒಂದು ಪ್ರಮುಖ ದಾಖಲೆ. ಶಾಸನದ ಮುಖ್ಯ ವಿಷಯ ಹೀಗಿದೆ:

> ವಿಜಯನಗರ ಚಕ್ರವರ್ತಿ ಸದಾಶಿವರಾಯ ಮಹಾರಾಯನ ಕಾಲದಲ್ಲಿ ಆತನ ವಿರೂಪದಿಂದ ಮಹಾಮಂಡಲೇಶ್ವರ ಚೆನ್ನಭೈರಾದೇವಿ ಅಮ್ಮನವರು ಹಾಡುವಳಿ, ಬಟಕಳ ಮುಂತಾದ ಸಮಸ್ತ ರಾಜ್ಯಪಾಲಿಸುತ್ತಿದ್ದಾಗ ಅವರ ಆಜ್ಞಾವರ್ತಿಯಾದ ಹಯಿವನಾಯಕರ ತಿರುಮನಾಯಕನು ರಾಯರ ವಿರೂಪ ಹಿಡಿದು ರಾಯಲೆಮುಸಲಿಯರ ಸಹವಾಗಿ ತುಳುರಾಜ್ಯದ ಮೇಲೆ ದಂಡೆತ್ತಿ ಹೋಗಿ ರಾಜಕಾರ್ಯ ಮಾಡಿದ್ದಾಗ ಯುದ್ಧದಲ್ಲಿ ವೀರಾವೇಶದಿಂದ ಹೋರಾಡಿ ವೀರ ಸ್ವರ್ಗ ಪಡೆದ.

ಈ ಶಾಸನದಲ್ಲಿ ಹಲವು ಮುಖ್ಯ ಅಂಶಗಳಿವೆ. ಇದರ ಕಾಲ ಶಕ 1477 ಆನಂದಸಂವತ್ಸರ. ವಯಿಶಾಖ ಬ.ಸು. ಮಂಗಳವಾರ. ಇಲ್ಲಿ ಸ್ವಲ್ಪ ತಪ್ಪಾಗಿದೆ. ಅದು ವಯಿಶಾಖ ಬಹುಳ ಶುದ್ಧ 13 ಎಂದಿರುವುದು. ಇದು ಬಹುಳವೋ ಅಥವಾ ಶುದ್ಧವೋ-ಸರಿಯಾಗಿ ಅರ್ಥೈಸಲಾಗುವುದಿಲ್ಲ.

1. ಬಹುಳ 13 ಆದರೆ ಅದು ಕ್ರಿ.ಶ. 1554 ಏಪ್ರಿಲ್ 29 ಭಾನುವಾರಕ್ಕೆ ಸರಿ ಹೊಂದುತ್ತದೆ.

2. ಶುದ್ಧ 13 ಆದರೆ ಅದು ಕ್ರಿ.ಶ. 1554 ಏಪ್ರಿಲ್ 15 ಭಾನುವಾರವಾಗುತ್ತದೆ.

ಎರಡೂ ಸಂದರ್ಭಗಳಲ್ಲಿ ವಾರ ಭಾನುವಾರ, ಮಂಗಳವಾರವಲ್ಲ. ಶಾಸನ ಪಾಠ ಸಿದ್ಧಪಡಿಸುವಲ್ಲಿ ತಪ್ಪಾಗಿರಬಹುದೆಂದು ಭಾವಿಸಿ ಸ್ವಲ್ಪ ತಿದ್ದುಪಡಿ ಮಾಡಿಕೊಂಡು ಬ.ಸು. ೧೫ ಎಂದು ಯೋಚಿಸಿದರೆ ಆಗ ಎರಡೂ ಸಂದರ್ಭಗಳಲ್ಲಿ ಶಾಸನದ ವಾರ ಮಂಗಳವಾರವೇ ಬರುತ್ತದೆ. ಅದು ಹೀಗಿದೆ-

1. ಬ. 15- ಕ್ರಿ.ಶ. 1554 ಮೇ 1 ಮಂಗಳವಾರ

2. ಶು. 15 ಕ್ರಿ. ಶ. 1554 ಏಪ್ರಿಲ್ 17 - ಮಂಗಳವಾರ

ಪ್ರಾಯಶಃ ಶಾಸನದ ನಿಜವಾದ ದಿನಾಂಕ ಶು. 15- ಕ್ರಿ.ಶ. 1554 ಏಪ್ರಿಲ್ 17 ಇರಬೇಕು.

ಕರ್ನಾಟಕದ ಕರಾವಳಿಯಲ್ಲಿ ವಿಜಯನಗರ ಕಾಲದಲ್ಲಿ ಅರಸು ಮನೆತನಗಳೆಲ್ಲವೂ ಜೈನ ಅರಸು ಮನೆತನಗಳು. ಇದರಲ್ಲಿ ಹಾಡುವಳ್ಳಿಯ 'ಸಾಳುವ' ಮನೆತನವೂ ಒಂದು. ಇವೆಲ್ಲಾ ವಿಜಯನಗರಾಧೀನವಾಗಿದ್ದರೂ ಅಪರೂಪಕ್ಕೆ ಇವರ ಶಾಸನಗಳಲ್ಲಿ ಸಾಮ್ರಾಟರ ಉಲ್ಲೇಖ ಇರುವುದನ್ನು ಕಾಣಬಹುದು. ಇವರು ಹಾಕಿಸಿರುವ ಹೆಚ್ಚಿನ ಶಾಸನಗಳು ಸ್ವತಂತ್ರ ನೆಲೆಯಲ್ಲೇ ಇವೆ. ಇದು ಅಂದಿನ ಪರಿಸ್ಥಿತಿಗೆ ಅನುಗುಣವಾಗಿ ಹುಟ್ಟಿಕೊಂಡ ಅನುಸರಣೆ. ಆದರೆ ಇವರೇನೂ ಸಾಮ್ರಾಜ್ಯದಿಂದ ಹೊರತಾಗಿ ಇರಲಿಲ್ಲ. 'ತಮಗೆ ಲಾಭವಾಗಬಹುದಾದ ಸಂದರ್ಭಗಳಲ್ಲಿ ಮಾತ್ರ ಅವರು ತಮ್ಮನ್ನು ವಿಜಯ ನಗರ ಸಾಮ್ರಾಟರ ಸಾಮಂತರೆಂದು ಕರೆದುಕೊಳ್ಳುತ್ತಿದ್ದರೆಂಬುದು ಆ ಕಾಲದ ತುಳು ನಾಡಿನ ಶಾಸನಗಳಿಂದ ವಿಶದವಾಗುತ್ತದೆ' ಎಂದು ಡಾ. ಕೆ.ವಿ.ರಮೇಶ ಅಭಿಪ್ರಾಯ ಪಟ್ಟಿದ್ದಾರೆ. [*ತುಳುನಾಡಿನ ಇತಿಹಾಸ*, ಪು. 114 (1960)].

ಆದರೆ ಪ್ರಸ್ತುತ ಶಾಸನದಲ್ಲಿನ ಉಲ್ಲೇಖ ಅಷ್ಟು ಲಘುವಾಗಿದ್ದಂತೆ ಕಾಣುವುದಿಲ್ಲ. ಹಾಡುವಳ್ಳಿಯ ರಾಣಿ ಮಹಾಮಂಡಲೇಶ್ವರ ಚೆನ್ನಭೈರಾದೇವಿಯ ಚಕ್ರವರ್ತಿಯ ನಿರೂಪದಿಂದ ಆಳುತ್ತಿದ್ದಂತೆಯೂ, ಈಕೆಯ ಆಜ್ಞಾವರ್ತಿಯಾದ ತಿರುಮನಾಯಕನು 'ರಾಯರ' ಅಂದರೆ ಚಕ್ರವರ್ತಿಯ ನಿರೂಪ ಹೊತ್ತು ಆ ರಾಯನ ಸೈನ್ಯ ಸಮೇತ ತುಳು ರಾಜ್ಯದ ಮೇಲೆ ದಂಡೆತ್ತಿ ಹೋದ. ತುಳು ರಾಜ್ಯವನ್ನು ತನ್ನ ವಶದಲ್ಲಿರಿಸಿಕೊಳ್ಳುವ ಸಲುವಾಗಿ ಅಥವಾ ಅಲ್ಲಿನ ಪರಿಸ್ಥಿತಿಯನ್ನು ಹತೋಟಿಗೆ ತರುವ ಸಲುವಾಗಿ ಕರಾವಳಿ ರಾಜಮನೆತನದ ಸಹಾಯವನ್ನೇ ಚಕ್ರವರ್ತಿ ಬಯಸಿದಂತೆ ಇಲ್ಲಿ ಕಾಣುತ್ತದೆ.

ಇದೇ ಸಮಯದಲ್ಲಿ ಕೆಳದಿ ಬಸವರಾಜನ - 'ಶಿವತತ್ವ ರತ್ನಾಕರ' ದತ್ತ ದೃಷ್ಟಿ ಹಾಯಿಸಿದರೆ- ಅಲ್ಲಿ ಚಕ್ರವರ್ತಿ ಸದಾಶಿವರಾಯನು ಕೆಳದಿಯ ಸದಾಶಿವನಾಯಕನಿಗೆ ಇಡಿಯ ತುಳು ರಾಜ್ಯವನ್ನು 'ಅಮರ ಮಾಗಣೆ'ಯಾಗಿಕೊಟ್ಟ (ಕಲ್ಲೋಲ 5, ಪದ್ಯ 20: *ತುಳುನಾಡಿನ ಇತಿಹಾಸ*, ಪು. 114). ಇದು ಪ್ರಾಯಶಃ ಕ್ರಿ.ಶ. 1550 ರ ವೇಳೆಗೆ ಆಗಿರಬಹುದು ಎಂದು ಕೆ.ವಿ. ರಮೇಶ ಅಭಿಪ್ರಾಯಪಟ್ಟಿದ್ದಾರೆ. (ಅದೆ. ಪು. 114) 'ತುಳುವವನ್ನು ಗೆದ್ದು ಬರುವಂತೆ ಸದಾಶಿವನಾಯಕನಿಗೆ ಸಾಮ್ರಾಟನೇ ಆಜ್ಞೆ ಮಾಡಿದ' ಎಂದು ಕೆಳದಿ ಬಸವರಾಜ ತಿಳಿಸುತ್ತಾನೆ. (ಕಲ್ಲೋಲ 5, ಪದ್ಯ 30-31).

ಅಂದರೆ ಆ ವೇಳೆಗೆ ತುಳುವದ ಪರಿಸ್ಥಿತಿ ಸರಿ ಇರಲಿಲ್ಲವೆಂದಾಯ್ತು. ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ಕೇಂದ್ರ ಅಸಹಾಯಕವಾಗಿದ್ದರೂ ಚತುರತೆಯಿಂದ ಪರ್ಯಾಯ ವ್ಯವಸ್ಥೆ ಮಾಡಿರುವುದು ಇಲ್ಲಿ ಸ್ಪಷ್ಟವಾಗಿದೆ. ಹಾಡುವಳ್ಳಿ ಕರಾವಳಿಯ ರಾಜ್ಯವೇ ಆಗಿದ್ದರೆ ಕೆಳದಿ ಕರಾವಳಿಗೆ ಹೊಂದಿಕೊಂಡಂತಿದ್ದ ಮಲೆನಾಡಿನ ರಾಜ್ಯ. ಎರಡರ ಸಹಕಾರವನ್ನು ಚಕ್ರವರ್ತಿಯಾಚಿಸಿದ.

ಪ್ರಸ್ತುತ ಶಾಸನ ಕ್ರಿ.ಶ. 1554 ಏಪ್ರಿಲ್ 17ಕ್ಕೆ ಸೇರಿದ್ದು ಅದರಲ್ಲಿ ಹಾಡುವಳ್ಳಿ ರಾಣಿಯ ಸಹಾಯವನ್ನು ಚಕ್ರವರ್ತಿ ಯಾಚಿಸಿರುವುದನ್ನು ಕಂಡರೆ ಕೆಳದಿಯ ಸದಾಶಿವ ನಾಯಕನಿಗೆ ಇಡೀ ತುಳು ರಾಜ್ಯವನ್ನೇ 'ಅಮರಮಾಗಣೆ'ಯಾಗಿ ಯಾವಾಗ ಕೊಡಲಾಯಿತು ಎಂಬ ಪ್ರಶ್ನೆ ಏಳುತ್ತದೆ. ಕ್ರಿ.ಶ. 1550ರ ವೇಳೆಗೆ ಈ ಕಾರ್ಯ ನಡೆದಿದ್ದರೆ ಕ್ರಿ.ಶ. 1554ರಲ್ಲಿ ಹಾಡುವಳಿ ರಾಣಿಯ ಪ್ರವೇಶಕ್ಕೆ ಆಸ್ಪದ ಇರುತ್ತಿರಲಿಲ್ಲ. ಹಾಗೊಮ್ಮೆ ಈಕೆ ಕೆಳದಿ ಪರವಾಗಿಯೂ ಕಾರ್ಯ ನಿರ್ವಹಿಸಿದ್ದರೆ ಅದು ಶಾಸನದಲ್ಲಿ ದಾಖಲಾಗುತ್ತಿತ್ತು. ಆದರೆ ಹಾಗಾಗಿಲ್ಲ. ಪ್ರಾಯಶಃ ಕೆಳದಿ ಸದಾಶಿವ ನಾಯಕನಿಗೆ ತುಳು ರಾಜ್ಯ 'ಅಮರಮಾಗಣೆ' ಯಾಗಿ ದೊರೆತದ್ದು ಈ ಶಾಸನದ ಕಾಲಾನಂತರ.

ಈ ಮಾತನ್ನು ಪುಷ್ಟೀಕರಿಸುವಂತಿದೆ. ಬಸರೂರಿನ ಒಂದು ಶಾಸನ. (*S.I.I.* Vol. IX-II, NO. 655) ಇದರ ಶಕ 1476 ಆನಂದ ಸಂವತ್ಸರ, ಕಾರ್ತಿಕ, ಶು. 1. ಇದು ಕ್ರಿ.ಶ. 1554 ಅಕ್ಟೋಬರ್ 27 (ಶನಿವಾರ)ಕ್ಕೆ ಸರಿ ಹೊಂದುತ್ತದೆ. ಪ್ರಸ್ತುತ ಶಾಸನದ ಕಾಲದ ಆರು ತಿಂಗಳುಗಳ ನಂತರ ಹುಟ್ಟಿದ್ದು ಬಸರೂರಿನ ಈ ಶಾಸನ. ಇದರಲ್ಲಿ *ಸದಾಶಿವ ಮಹಾರಾಯರ ನಿರೂಪದಿಂದ ಸದಾಶಿವನಾಯರೂ ತುಳುರಾಜ್ಯ ಮಾಡಿಕೊಂಡು* ಎಂದಿದೆ. (ಶಾಸನ ಪಾಠ ಸಾಲು 3-6). ಇದರ ಆಧಾರದಲ್ಲಿ ಹೇಳಬಹುದಾದರೆ - ಕೆಳದಿ ಸದಾಶಿವನಾಯುಕನಿಗೆ ತುಳು ರಾಜ್ಯ ಅಮರಮಾಗಣೆಯಾಗಿ ದೊರೆತದ್ದು ಪ್ರಾಯಶಃ ಕ್ರಿ.ಶ. 1554ರ ಆಗಸ್ಟ್-ಸೆಪ್ಟೆಂಬರ್ ವೇಳೆಗೆ, ಈ ನಿಟ್ಟಿನಲ್ಲಿ ಅರಳಗೋಡಿನ ಶಾಸನ ಒಂದು ಪ್ರಮುಖ ದಾಖಲೆ.

ವಿಜಯನಗರ ಸಾಮ್ರಾಜ್ಯದ ಪ್ರಾರಂಭದಿಂದಲೇ ಅದರ ಆಳ್ವಿಕೆಗೆ ಒಳಪಟ್ಟು ಮಂಗಳೂರು ಮತ್ತು ಬಾರಕೂರು ರಾಜ್ಯಗಳಾಗಿ ವಿಂಗಡಣೆ ಹೊಂದಿದ ತುಳುನಾಡು ಸಾಮ್ರಾಟರ ಪೂರ್ಣ ಅಧಿಕಾರಕ್ಕೆ ಒಳಗಾಗಿರಲಿಲ್ಲ ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಇಲ್ಲಿಯ ಶಾಸನಗಳು ಇದಕ್ಕೆ ಮತ್ತೂ ಪುಷ್ಟಿ ನೀಡುತ್ತವೆ. ಅದು ಕೃಷ್ಣರಾಯ ಮಹಾರಾಯನ ಕಾಲಾನಂತರವಂತೂ ಮತ್ತಷ್ಟು ಬಿಗಾಡಿಯಿಸಿತು ಎಂದು ಕೆ.ವಿ.ರಮೇಶ ಅಭಿಪ್ರಾಯಪಟ್ಟಿದ್ದಾರೆ. (*ತುಳುನಾಡು* ಪು. 114)

ಚೆನ್ನಭೈರಾದೇವಿಅಮ್ಮನ ಸೇನಾನಿ ತಿರುಮನಾಯಕನು ಚಕ್ರವರ್ತಿ ಸೈನ್ಯವನ್ನು ನಡೆಸಿ ತುಳುವದ ಯಾವ ಭಾಗದ ಮೇಲೆ ಧಾಳಿ ಮಾಡಿದ ಎಂಬುದು ತಿಳಿಯುವುದಿಲ್ಲ. ಅಲ್ಲದೆ ಅದಕ್ಕೆ ಕಾರಣ ಮತ್ತು ಅದರ ಉದ್ದೇಶ ಈಡೇರಿತೇ ಎಂಬುದೂ ತಿಳಿಯುವುದಿಲ್ಲ. ಯುದ್ಧದಲ್ಲಿ ವೀರಾವೇಶದಿಂದ ಹೋರಾಡಿದ ತಿರುಮನಾಯಕ ಮಡಿದು ವೀರಸ್ವರ್ಗ ಪಡೆದ.

ಈತನಿಗೆ ಸ್ಮಾರಕ ನಿಲ್ಲಿಸಿರುವುದು ಅರಳಗೋಡಿನಲ್ಲಿ. ಇದು ಇವನ ಸ್ವಗ್ರಾಮವೇ ಅಥವಾ ಮಡಿದ ಸ್ಥಳವೇ ಎಂಬುದು ಪ್ರಶ್ನೆಯಾಗೇ ಉಳಿದಿವೆ. ಅಲ್ಲದೆ ಈ ಸ್ಮಾರಕವನ್ನು ಇರಿಸಿದವರಾರು - ರಾಣಿಯೋ ಅಥವಾ ಸಂಬಂಧಿಗಳೋ ಇವಕ್ಕೂ ಉತ್ತರವಿಲ್ಲ.

ಒಟ್ಟಿನಲ್ಲಿ ಕೆಳದಿ ಅರಸರ ಹಿಡಿತಕ್ಕೆ ಸಿಕ್ಕಿ ನಲುಗುವ ಮೊದಲು ಹಾಡುವಳ್ಳಿ ರಾಜ್ಯವು ರಾಜಕೀಯವಾಗಿ ಹಲವು ರೀತಿಯ ಪ್ರಮುಖ ಪಾತ್ರಗಳನ್ನು ವಹಿಸಿತ್ತು ಎಂಬುದು ಅರಳಗೋಡಿನ ಶಾಸನವೂ ಸೇರಿದಂತೆ ಹಲವು ಶಾಸನಗಳಿಂದ ವ್ಯಕ್ತವಾಗುತ್ತದೆ. ಇದರೊಂದಿಗೆ ವಿಜಯನಗರದ ಆಡಳಿತದಲ್ಲಿದ್ದ ಅಸಹಾಯಕತೆಯೂ ಪ್ರಕಟವಾಗಿದೆ.

ಅರಳಗೋಡಿನ ವೀರಗಲ್ಲು ಶಾಸನ

ಶಾಸನ ಪಾಠ

ಒಂದನೆಯ ಪಟ್ಟಿ

1. ಸ್ವಸ್ತಿ ಶ್ರೀ (1*) ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ ತ್ರೈಲೋಕ್ಯ ನಗರಾಂಭ ಮೂಲಸ್ತಂ.
2. ಭಾಯಶಂಭವೇ || ಸ್ವಸ್ತಿಶ್ರೀ ಈ ಜಯಾಭ್ಯುದಯ ಸಾಲಿವಾಹನ ಶಕವರುಶ ೧೪೭೭ನೆಯ ವರಸಗೆ ಸಲು
3. ವ ಆನಂದ ಸಂವತ್ಸರದ ವಯಿಶಾಖ ಬ ಸು ೧೩ ಮಂಗಳವಾರ ದಲಿ ಶ್ರೀ ಮದ್ರಾಜಾಧಿರಾಜ ರಾಜ

ಎರಡನೆಯ ಪಟ್ಟಿ

4. ಪರಮೇಶ್ವರರಾದ ಸದಾಶಿವರಾಯ ಮಹಾರಾಯರು ವಿದ್ಯಾನಗರಿ ಮುಂತಾದ ಸಮ
5. ಸ್ತ ರಾಜ್ಯಂಗಳನು ಪ್ರತಿಪಾಲಿಸಿಕೊಂಡು ಯಿಹ ಕಾಲದಲು ಅವರ ನಿರುಪ ದಿಂದ ಶ್ರೀ ಮನ್ಮಹಾ
6. ಮಂಡಲೇಶ್ವರ ಚೆಂನಬಯಿರಾದೇವಿ ಅಂಮನವರು ಹಾಡವಳಿ ಬಟಕಳ ಮುಂತ್ತಾದ ಸಮಸ್ತ ರಾಜ್ಯಮ
7. ನು ಪ್ರತಿಪಾಲಿಸವಂದಿದಲಿ ಅವರ ಮುದ್ರಹಸ್ತದ ಹಯಿವ ನಾಯಕರ ತಿರುಮನಾಯಕರು ರಾಯರ ನಿ
8. ರೂಪ ವಿಡಿದು ರಾಯ ಮಸಳಿಯರ ಸಹವಾಗಿ ತುಳು ರಾಜ್ಯದ ಮೇಲೆ ದಂಡೆ ಹೋಗಿ ರಾಜಕರ್ಮವನು ಮಡಿ
9. ಯಾ ಮಹಾರಾಜ ಕಾರ್ಯದೆಯಿಗೆ ಸ್ವಾಮಿಕಾರ್ಯಕ್ಕಾಗಿ ಮಹಾವೀರತ್ವ ವನುಮಾಡಿ ವೀಶಸ್ವರ್ಗವನು ಪ
10. ಡದರು (11*)ಶ್ರೀ ಶ್ರೀ ಶ್ರೀ (11*)

೧೪. ಡಾ. ಹೆರಾಸ್ ಕಂಡಂತೆ ವಿಜಯನಗರ ನಿರೂಪವನ್ನೊಳಗೊಂಡ ಚಿನ್ನದ ಓಲೆ ಪತ್ರ

ಕೆಳದಿ ಗುಂಡಾ ಜೋಯಿಸ್

ರಾಬರ್ಟ್ ಸೀವೆಲ್‌ರವರ *A Forgotten Empire* ಕೃತಿಯ ಪುಟ 233-234 ರಲ್ಲಿ

"Senhor Lopes tells me that he has found in the National Archives in the Torre do Tombo, amongst the 'Livros das Moncoes', a number of papers bearing on this suject. The most interesting are those contained in Volume XXXIV (FOL 91-99). These were written by the Captain-General of Meliapor (St. Thome) by Padre Pero Mexia of the Company of Jesus, and by the Bishop; and amongst the other documents are to be seen translations of *two palm leaf letters* written by the King of Vijayanagar, then at Vellore.

We know that 1639, the King of Vijayanagara was named Ranga or Sri Ranga, and that he was at that time residing at Chandragiri; because in that year Mr. Day the head of the English trading station at Madras, obtained from the king a grant of land at that palce, one mile broad by five miles long on which Fort St. George was afterwards constructed"

ಹೀಗೆ ಕಂಡುಬರುವಂತೆ ಮದರಾಸಿಗೆ "ಶ್ರೀರಂಗರಾಯಲಪಟ್ಣಂ" ಎಂಬುದನ್ನು ಪ್ರಾಂತೀಯ ನಾಯಕನ ತಂದೆಯ ನಾಮಾಂಕಿತದಲ್ಲಿ "ಚೆನ್ನಪಟ್ಣಮ್" ಎಂಬುದಾಗಿ ಬದಲಾಯಿಸಿದ್ದುದು ಈಗ "ಚೆನ್ನೈ" ಎಂದಾಗಿರಬಹುದೇ? [1]

ಕುತೂಹಲಾಸಕ್ತಿಗಳಿಂದ ಕೂಡಿದ ಚಾರಿತ್ರಿಕ ದಾಖಲೆಯ ಈ ಓಲೆಪತ್ರಗಳನ್ನು ಶೋಧಿಸಲು ಹೆರಾಸ್‌ರವರು ಲಿಸ್ಬನ್‌ನಲ್ಲಿರುವ Torre do Tombo ರಾಷ್ಟ್ರೀಯ ಪತ್ರಾಗಾರದಲ್ಲಿ ಪ್ರಯತ್ನಿಸಿ ವಿಫಲರಾದರು. ಇದೇ ಚಿಂತೆಯಲ್ಲಿ ಮಗ್ನರಾಗಿದ್ದ ಹೆರಾಸ್‌ರವರಿಗೆ ಪ್ರಸಂಗವಶಾತ್ ಗೋವಾ ಪಂಜೀ ಪತ್ರಾಗಾರ (Archivo da Secretaria Geral do Governo) ದಲ್ಲಿ ಸೇಂಟ್ ಥೋಮ್ ಆಫ್ ಫಾದರ್ Pero Mexia ಮತ್ತು ಬಿಷಪ್ ಕೇಂದ್ರದಲ್ಲಿರುವ ಬೃಹತ್ ದಫ್ತರಖಾನೆಯಲ್ಲಿ ಈ ಕುರಿತ ಮಾಹಿತಿಗಳು ಆಶ್ಚರ್ಯದೊಂದಿಗೆ ಅವರಿಗೆ ಗೋಚರಿಸಿತು. ವಿಜಯನಗರ ಇಮ್ಮಡಿ ವೆಂಕಟರಾಯನ ಆಸ್ಥಾನಕ್ಕೆ ಭೇಟಿ ನೀಡಿದ ವೈಸ್‌ರಾಯಿ ಡೊಂ ಮಿಗಲ್ ಡಿ. ನರೋನ್ಹಾ, ಕೊಂಡೆ ಡಿ ಲಿನ್ಹಾರೆಸ್ (Dom Mignel de Noronha, Conde de Linhares) ಇತಿಹಾಸದೊಂದಿಗೆ ವಿಜಯನಗರ ಚಕ್ರವರ್ತಿ ವೆಂಕಟನು ವೆಲ್ಲೋರಿನ ಆಸ್ಥಾನದಿಂದಲೇ ಬೆಳಕು ಕಂಡ ಈ ಓಲೆಗಳ

ಸ್ವಹಸ್ತಾಕ್ಷರ ಮಾಹಿತಿಗಳನ್ನು ಪೋರ್ಚುಗೀಸ್ ಭಾಷೆಗೆ ತರ್ಜುಮೆಯಾಗಿದ್ದು, ಹೆರಾಸ್ ರವರು ಇಂಗ್ಲೀಷ್ ಭಾಷಾಂತರಗಳೊಂದಿಗೆ ನೀಡಿರುವು ದನ್ನು ಅವರ ಮಾತಿನಲ್ಲಿಯೇ ಸಂಶೋಧಕರ ಗಮನಕ್ಕೆ ನಿರೂಪಿಸಲಾಗಿದೆ.[2]

Seldom did I return home as happy and satisfied during my stay at Panjim as that evening. The letters I had been hoping for vainly for several months, were carefully copied and filed in my collection of documents.

How can we explain the existence of these duplicates in the Archives at Panjim? For these Panjim letters, are only copies of the originals, as I had supposed the Lisbon Manuscripts to be. Since the possession of the fort of Pulicat was always considered of great importance by the Protuguese, the Viceroy of Goa thought it advisable to send the letters recieved on these transactions to the King of Portugal himself, but not before being copied in Goa in order to be also kept in his own Archives. Such are the copies I found almost three centuries after, that they are simply copies is evident after a careful examiniation. Nowhere is this affirmed, indeed, as in other documents, for instance a letter of Philips III of Spain and Portugal to Venkata I as published in the QJMS entiltled ``Copia da Carta que va nestas Vilas Para el Rey de Bisnagar.[3] But the size of the paper is not different from the rest of the volume and the *very hand writing* quite known to me as the one of a copyist of the government offices, give no ground for reasonable doubt.

ಇಂತಹ ಪತ್ರಗಳಲ್ಲಿ ಫಾದರ್ ಪೀರೋ ಮೆಕ್ಸಿಯೋ ಅವರ ಸಂಗ್ರಹಗಳು ಪ್ರಾಮುಖ್ಯವಾಗಿದ್ದು ಈ ಕೆಳಗಿನ ಸಂಗತಿಗಳನ್ನು ಒಳಗೊಂಡಿದ್ದು ಕುತೂಹಲ ಹುಟ್ಟಿಸುತ್ತವೆ:

1. ಸೇಂಟ್ ಥೋಂ (St. Thome)ನ ಬಿಷಪ್ ಹಾಗೂ ಕ್ಯಾಪ್ಟನ್ ಜನರಲ್ ಪತ್ರಗಳಲ್ಲಿ ಸಂಚಾರೀ ವಿವರಣೆಗಳು.

2. ಮಾಂಕೋಸ್ ಡು ರೀನೋ (Monocoes do Reino) ನಂ. 19 ಅನೋ ಡಿ (Ano de) 1633. fol 1154-1158 ಕಾಗದದಲ್ಲಿರುವ ವಿವರಗಳು-ಪತ್ರ ಪ್ರಮಾಣ 10'x7½'

3. ಮಂತ್ರಿ ಸೆಂಟ್ ಥೋಮಿನ (St. Thome) 1604, 1610, 1611 ರ ಮಾನ ಪಾಡ್ (Manapad) ಸಂಗ್ರಹಗಳು.

4. ಗಿಂಜಿ (ಜಿಂಜಿ) ಕೃಷ್ಣಪ್ಪನಾಯಕ, ಹಿರಿಯ ವೆಂಕಟರಾಯರ 1619-1620 ಹಾಗೂ (ಮಣಿ ಕಾವೇರಿ?) Manicavariಯ 1628 ರಿಂದ 1634 ರರೆಗಿನ ಪತ್ರಗಳು.

5. ಇಮ್ಮಡಿ ವೆಂಕಟರಾಯನಲ್ಲಿಗೆ ರಾಯಭಾರಿಗಳಾಗಿದ್ದು ವೈಸ್‌ರಾಯ್ ಡೋಂ ಮಿಗಲ್ ಡಿ ನರೋನ್ಹಾ (Viceray Dom Miguel de Noronha) ಮತ್ತು ಕೊಂಡೆ ಡಿ ಲಿನ್ಹಾರೆಸ್ (Conde de LInhares) ಹಾಗೂ ಲಿನ್ಹಾರೆಸ್‌ನು ತನ್ನ 70ನೇ ವಯಸ್ಸಿನಲ್ಲಿ 1639 ರಲ್ಲಿ ತಿರುವಾಂಕೂರಿನ ಕುಲಂನಲ್ಲಿ ನಿಧನ ಪಾದ ಸಂಗತಿಯೂ ರೋಚಕತೆಯುಂಟಾಗುತ್ತದೆ.
6. ಬರ್ರಾಡಾಸ್‌ನ ವಿವರಣೆಯಲ್ಲಿ (ಹಿರಿಯ) ವೆಂಕಟರಾಯನ ನಿಧನದ ಸಂಗತಿ, ಇಮ್ಮಡಿ ವೆಂಕಟರಾಯನಲ್ಲಿಗೆ ದೂತನಾಗಿ ಆಗಮಿಸಿದ ಪೀರೋ ಮೆಕ್ಸಿಯಾ ವಿವರಗಳಿವೆ.

ಲೇಖನ ವಿಸ್ತಾರ ಭಯದಿಂದ ಪ್ರಕೃತ ವೆಲ್ಲೋರಿನ ಆಸ್ಥಾನದಿಂದಲೇ ಬರೆದ ಓಲೆಪ್ರತಿಯ ಪೋರ್ಚುಗೀಸ್ ಭಾಷೆಯಿಂದ ಹೆರಾಸ್‌ರವರು ಇಂಗ್ಲೀಷ್ ಭಾಷೆಗೆ ಭಾಷಾಂತರಿಸಿದ ಹಲವಾರು ಸಂಗತಿಗಳು ಗಮನಾರ್ಹವಾಗಿದೆ. ಐತಿಹಾಸಿಕ ಮಹತ್ವ ಗಳಿಂದ ಕೂಡಿದ ಹಾಗೂ 1565ರ ತಾಳೀಕೋಟೆ ಯುದ್ಧಾನಂತರದ ಈ ಮಾಹಿತಿಗಳು ವಿಜಯನಗರ ಚರಿತ್ರೆಯಲ್ಲಿ ಶಾಸನ ಸಂಪುಟಗಳಿಗೆ ಸೇರಲು ಆಕರಗಳನ್ನು ದೊರಕಿಸಿ ಕೊಡುತ್ತವೆ. ವಿದ್ವಾಂಸರ ಅವಲೋಕನೆಗಾಗಿ ಹೆರಾಸ್‌ರವರ ಭಾಷಾಂತರವನ್ನೇ ನೀಡಲಾಗಿದೆ.

As regards the delivery of horses, elephants and money over to me in Jafanapatam it is not just; neither do I as for them before the delivery of Paleacate, nor have I ships nor means to get them here; it will be necessary that the same fleet which will take them there, would bring them to the fortress of St. Thome. And he repeated this several times, and that was reasonable that your Excellency would do so, etc., The third point that he touched on is that the money promised to Thima Raya and Rangapa Raya should not be given to them if they were to conitnue in the rebellions state in which they were, because they were in possession of a great part of the kingdom; but in spite of their being destroyed by him and that they were no longer in the bonds of friendship with him (the king) nor were going to enter this league, he the king does not wish for the money at all, but since I have tod him much of your Excellency's generosity he leaves it entirely to your discretion hoping that your Excellency will think proper to add some more horses, elephants, etc., according to your Excellency's liberatiites and grandeur. As regards the tribute and pension of the fortress says the king that the fortress shall continue to enjoy the same privileges of liberlities and pension, which are aslo prevalent at St. Thome. The king had always at Paleacate and St. Thome his adigars (governors) and he has them still there and receives from these lands the income of 8 thousand *patacoes (Brazilian coin)* which is expected to the increased at present; hence the fortress will

remain as it was when taken, with the same privileges, lands and pensions and if the Portuguese like to have it upon these conditions, says the king, he has no objections at all, but if they are unwilling to have them on these terms he, will conitnue to appoint his *adigars* as he has done till now.

In reference to the hostages, the king asked me to tell your Excellency to recommend this to the Captian-General and the inhabitants of St. Thome and everything will carefully be done; because the king says that to avoid bribing the captains and other such treachery, he will witness, personally everything. He added besides: I am taking this trouble on your behalf, Father, because you are my friend. In return I offered myself to be next to him on the occasion, for which he thanked me very much. The king to my mind does not make any unreasonable request: anyhow your Excellency may act according to your views.

The king handed over to me an olla (letter) for your Excellency written on a *golden plate* where he in brief refers to the afore said things. Consequently I see no need to send an extract of the letter written in Portuguese, where the same things are said, but in detail and more diffusely, the bearr takes the *``Golden Letter''* laid in a *Silver cover*. This is what I did as regards the essentials of our business. Now I shall narate somethings observed by me here, but before this let me tell you that this business was carried on in the most complete secrecy: myself, my Cariacapule, the King and one of his servants alone being present. The day I reached the Royal Camp, one Dutchman and an ambassador from the *King of Siam* were just rearing the place after offering the king two elephants, one gloden casket full of musk seeds in the name of the king of Siam, and in name of the Dutch they offered one bag full of grain, one full of corn and another full of nutmeg; one cask of ordinary small size full of camphor, all presents being valued at four thousand Xerafins (old coin);[3] each bag contained 1 quintal (100 lbs). In spite of all these rich presents the King gave them only 100 pagodas (Gold coin in India) for their expenses; sending a message through *the ambassador of Siam* that he would not have another interview with them. The ambassador came to complain to me that though I have taken no presents to the King as he did the King gave me more respect, than to him and granted me a village. I told him that the King knew me many years ago and was familar to me.

ಫಾದರ್ ಪೀರೆ ಮೆಕ್ಸಿಯಾನು ದಿ. 13-7-1634 ರಲ್ಲಿ ವೆಲ್ಲೋರಿನಿಂದ ಬರೆದ ಈ ಪತ್ರದ ನಿರೂಪವಾಗಿದೆ.

II Third letter (an extact)

The King of Bisnaga[4] after recovering from the sickness, became wiser he did not go personally to Perconde (Penukonda) but sent the prince, his nephew and heir apparent to the throne and with him Timma Raya whose

two wives are retained as hostages in the fortress of Vellur in order to keep him faithful to his duty. some other Captains of great fame go along with the Prince. The King has already returned to Vellur where I shall go to visit him and at the same time to congratulate him on his recovery. It is a general talk that he wishes to make his sons Naique of Tanjaur and Negapatam which is very likely because the King has kept under his protection some captains, enemies of the Naique of Tanjaur and in close relations with that of Ginjya (Gingi)...

Today 23 September, 1634, Fr. Pero Mexia.

ಉಪಸಂಹಾರ

ಹೆರಾಸ್‌ರವರ ಶೋಧನೆಯಲ್ಲಿ ಕಂಡುಬಂದ ಇಂತಹ ಅಮೂಲ್ಯ ಮಾಹಿತಿಗಳನ್ನೊಳಗೊಂಡ ಮೂಲ ಸಾಮಗ್ರಿಗಳು ವಿಜಯನಗರ ಮಹಾಯುದ್ಧ 1565ರ ನಂತರದ ವಿಜಯನಗರೋತ್ತರ ಇತಿಹಾಸವನ್ನು ಪುನರ್ರಚಿಸುವಲ್ಲಿ ಸಹಕಾರ ನೀಡುತ್ತವೆ. ಮೂರನೆಯ ರಂಗರಾಯ, ವೆಂಕಟ, ಮಧುರೆಯ ತಿರುಮಲನಾಯಕ ಮುಂತಾದವರ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಚರಿತ್ರೆಯನ್ನು ಕುರಿತಂತೆ ಹೆರಾಸ್‌ರವರ ಸ್ವಂತ ಸಂಗ್ರಹದಲ್ಲಿದ್ದ ಈ ಮಾಹಿತಿಗಳು ವಿನೂತನ ಬೆಳಕನ್ನು ಚೆಲ್ಲುತ್ತವೆ. ಇದರಲ್ಲಿ ಕಂಡುಬರುವಂತೆ ಈವರೆಗೂ ಯಾರ ಗಮನಕ್ಕೂ ಬಾರದಿರುವ ಚಿನ್ನ ಬೆಳ್ಳಿ ಪತ್ರದ ಶಾಸನಗಳು ಅಪೂರ್ವವಾಗಿದ್ದು ಕುತೂಹಲಾಸಕ್ತಿಯುಂಟು ಮಾಡುತ್ತವೆ. ನನಗೆ ತಿಳಿದ ಮಟ್ಟಿಗೆ ಡಾ. ಬಾ.ರಾ.ಗೋಪಾಲ್‌ರವರ ಹಾಗೂ ಮದರಾಸಿನ ಶಾಸನ ಸಂಪುಟಗಳಲ್ಲಾಗಲೀ ಶ್ರೀ ರಾಮಶರ್ಮರವರ ಕೃತಿಯ ಆಕರಗಳಲ್ಲಾಗಲೀ ಇದು ಸೇರಿದಂತೆ ಕಂಡುಬರುವುದಿಲ್ಲ. ಕೆಳದಿ ಹಾಗೂ ವಿಜಯನಗರ ಇತಿಹಾಸದಲ್ಲಿ ಹಲವಾರು ಘನೀಕೃತ ಸಂಶೋಧನಾ ಪ್ರಕಟಣೆಗಳು ಹೆರಾಸ್‌ರವರಿಂದ ಹೊರಬಂದಿವೆ. ಇವುಗಳ ಸಂಪುಟವನ್ನು ಹೊರತರುವುದು ಅತ್ಯಗತ್ಯ. ಹೆರಾಸ್‌ರವರ ಗ್ರಂಥಭಂಡಾರವೂ ಅಮೂಲ್ಯವಾಗಿದ್ದು, ಇದನ್ನು ಮಸ್ತಗಂಡ ಮುಂಬೈ ಸರಕಾರವು ಇದನ್ನು ಕೊಳ್ಳಲು ಯೋಜಿಸಿತ್ತೆಂದು ಕೇಳಿದ್ದೇನೆ. ವಿಜಯನಗರ ಅಂತ್ಯಕಾಲದ ಪೆನುಗೊಂಡೆ, ವೆಲ್ಲೂರು, ತಂಜಾವೂರಿನ ಇತಿಹಾಸವನ್ನೊಳಗೊಂಡ ಆಕರಗಳ ಕ್ಯಾಟಲಾಗ್, ಪೋರ್ಚುಗೀಸರ ಅಸೆಂಟೋ, ಡಚ್‌ರ ಬಟಾವಿಯಾ ಡಾಗ್ ರಿಜಿಷ್ಟರುಗಳು, ಸಯಾಂ, ಸಿಲೋನ್‌ಗಳ ವಾಣಿಜ್ಯೋದ್ದಿಮೆ ಹಾಗೂ ಪಳೆಯುಳಿಕೆಗಳ ಕ್ಯಾಟಲಾಗ್‌ಗಳು ವಿಜಯನಗರ ಚರಿತ್ರೆಗೆ ವಿಪುಲ ಸಂಪುಟಗಳನ್ನು ನೀಡಬಲ್ಲುವು. ಈ ದಿಸೆಯಲ್ಲಿ ಅಪ್ರಕಟಿತ ತಂಜಾವೂರಿನ ಗೋವಿಂದ ದೀಕ್ಷಿತನ ಚರಿತ್ರೆಯನ್ನು ತಿರುಪತಿಯ ಆರ್ಥಿಕ ಸಹಾಯದಿಂದ ಪ್ರಕಟಿಸಿರುವೆನು.

ಸ್ಥೂಲವಾಗಿ ಹಲವಾರು ಅಪ್ರಕಟಿತ ಆಕರಗಳನ್ನು ವಿದ್ವಾಂಸರ ಗಮನಕ್ಕಾಗಿ ಇಲ್ಲಿ ನೀಡಲಾಗಿದೆ.

I Chronica dos Reis de Bisnaga (The Chronicle of the kings of Vijayanagara) Ed by David Lopes, Society of Geography of Lisbon 1897.

II QJMS. Vol XIV (ಹಲವಾರು ಆಕರಗಳು)

III Venkata I addressed to Philp III of Spain. Archives of Panjim-(Archivo da Secretaria Geral do Governo) ಇವುಗಳಲ್ಲಿ Very nble King of Bisnaga ಎಂಬುದಾಗಿ ಉಲ್ಲೇಖಿಸಿದೆ.

IV The King of the Viceroy Dated-

Lisbone D 20-2-1614

Panjim Archives - ?-?-1613

Moncoes do Reino N12 Ano de 1614 fol 26

Wrote to Fr. J. Alwares at Rome ದಿ 1-11-1606

V Written in Madrid D 27-1-1607

ಇದರಲ್ಲಿ "Seated on the Jewelled throne" ಎಂದಿದೆ. ಇದು ಈಗಿನ ಮೈಸೂರು ರತ್ನಸಿಂಹಾಸನವೇ?

VI Fr. N. Pinenta D 21-12-1602

Fr. Coutinhos Letters dated-Vellore D 11-10-1608

VII The Jesuit influence in the Court of Vijayanagar- by Rev H. Heras, S.J.A.M. QJMS, vol XIV

VIII Goethals Indian Library, St Xaviers College, Calcutta- Vol I.

ಒಟ್ಟಿನಲ್ಲಿ ಖ್ಯಾತ ಇತಿಹಾಸ ತಜ್ಞ ಹೆರಾಸ್‌ರವರೇ ನುಡಿದಂತೆ-

These extracts outline the history of the relations of the Great Aravidu Emperor with the old allies of the Vijayanagar Empire. I hope they will be read with interest by the admirers of that wonderful Hindu Empire, pending publication of my work on its foruth dynasty.[5]

ವಿಜಯನಗರೋತ್ತರ ನೂತನ ಇತಿಹಾಸದಲ್ಲಿ ಹೆಚ್ಚಿನ ಸಂಶೋಧನೆ ಕೈಗೊಳ್ಳಲು ಮದರಾಸಿನಲ್ಲಿ IIIನೇ ಓರಿಯಂಟಲ್ ಸಮ್ಮೇಳನದಲ್ಲಿ (III Oriental Conference) 22-24 December 1924 ರಂದು ಹೆರಾಸ್‌ರವರು ಸಾದರಪಡಿಸಿದ ಪ್ರಬಂಧ ಹಾಗೂ ತುಲನಾತ್ಮಕ ಮಾಹಿತಿಗಳನ್ನು ನನ್ನ ಪ್ರಬಂಧದ ಮೂಲಕ ತಮ್ಮ ಅವಗಾಹನೆಗೆ ತಂದಿರುವೆನು.[6]

ಅಡಿ ಟಿಪ್ಪಣಿ

1. A Forgotten Empire- Sewel, Pp. 233-234 ನೋಡಿರಿ.
2. ಪೋರ್ಚುಗೀಸರ ಅಸೆಂಟೋ ಸಂಪುಟಗಳಲ್ಲಿ ಇವುಗಳನ್ನು ಗುರುತಿಸಬಹುದು. (Assentos do Conselho do Estado: PP. 503, 512, 513, 524, 534) ದಿ. 8-9-2007 ರಂದು ಹಗರಿ ಬೊಮ್ಮನಹಳ್ಳಿಯಲ್ಲಿ ಜರುಗಿದ ಕರ್ನಾಟಕ ಇತಿಹಾಸ ಅಕಾದೆಮಿ ಸಭೆಯಲ್ಲಿ ಸಾದರಪಡಿಸಿದ ನನ್ನ ಪ್ರಬಂಧದಲ್ಲಿ ಇದೇ ಮಾದರಿಯ ಚಾರಿತ್ರಿಕ ಕೆಳದಿ ದಾಖಲೆಗಳೂ ಉಪಲಬ್ಧವಿವೆ.
3. ಅದೇ ಕರ್ನಾಟಕ ಇತಿಹಾಸ ಅಕಾಡೆಮಿ ವಿದ್ವತ್ ಸಭೆಯಲ್ಲಿ ಸಾದರಪಡಿಸಿದ ಕೆಳದಿ-ಪೋರ್ಚುಗೀಸ್ ಕುರಿತ ನನ್ನ ಪ್ರಬಂಧದಲ್ಲಿ ಛಾಯಾಚಿತ್ರದೊಂದಿಗೆ ಕ್ಸೆರಾಫಿನ್ (Xerafin) ನಾಣ್ಯದ ವಿವರ ನೀಡಿರುವೆನು. ಉಲ್ಲೇಖನಗೊಂಡಿರುವ Patacoes (Brazilian coin) ನಾಣ್ಯದ ವಿವರ ನಾಣ್ಯಶಾಸ್ತ್ರದಲ್ಲಿ ಉಪಲಬ್ಧ ಕಂಡುಬರುವುದಿಲ್ಲ.
4. Bisnaga > ವಿಜಯನಗರ
5. QJMS. Vol. XIV, p. 317
6. Proceedings and Transactions of the Third Oriental Conference, Madras Dec. 22nd to 24th 1924, Printed at the Law printing House, Mount Road, 1925.

೧೫. ಹಂಪಿಯ ಅಚ್ಯುತದೇವರಾಯನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ

ಕೆ.ಶೇಖರಾಚಾರಿ

ಶಾಸನಗಳ ಭಾಷೆ ಕುರಿತು ಈಗಾಗಲೇ ಅಧ್ಯಯನಗಳು ನಡೆದಿವೆ ಮತ್ತು ನಡೆಯುತ್ತಲೂ ಇವೆ. ಕನ್ನಡ ಭಾಷೆಯ ಲಿಖಿತತೇ ದೊರೆಯುವುದು ಶಾಸನದಲ್ಲಿ. ಶಾಸನಗಳು ಕನ್ನಡ ಭಾಷಾರಚನೆಗೆ ಅತ್ಯಮೂಲ್ಯವಾಗಿರುವಂತಹ ದಾಖಲೆಗಳಾಗಿವೆ. ಒಂದು ಭಾಷೆಯ ರಚನೆ, ಧ್ವನಿವ್ಯತ್ಯಾಸ ಅರ್ಥವ್ಯತ್ಯಾಸ ಇವುಗಳೆಲ್ಲವನ್ನು ಮೊದಲು ಗುರುತಿಸುವುದು ಶಾಸನಗಳಲ್ಲಿ. ಈ ಕುರಿತು ವ್ಯಾಪಕವಾದಂತಹ ಅಧ್ಯಯನಗಳು ನಡೆದಿಲ್ಲ, ನಡೆದಿದ್ದರೂ ಕೇವಲ ಬೆರಳೆಣಿಕೆಯಷ್ಟೇ ಎಂದು ಹೇಳಬಹುದು. ಈ ಹಿನ್ನೆಲೆಯಲ್ಲಿ ಹಂಪಿಯಲ್ಲಿ ದೊರೆತ ಅಚ್ಯುತದೇವರಾಯನ ಶಾಸನಗಳನ್ನು ಭಾಷಿಕ ನೆಲೆಯ ಅಧ್ಯಯನಕ್ಕೆ ಒಳಪಡಿಸಿದ್ದೇನೆ.

ಶಾಸನಗಳ ಭಾಷೆಯನ್ನು ಕುರಿತು ಡಾ. ಎ.ಎನ್.ನರಸಿಂಹಯ್ಯನವರು A Grammer of the oldest Kanareese inscriptions (1941) ಎಂಬ ಕೃತಿಯಲ್ಲಿ ಕ್ರಿ.ಶ. 8ನೇ ಶತಮಾನದವರೆಗಿನ ಕನ್ನಡ ಶಾಸನಗಳ ಬಗ್ಗೆ ಅಧ್ಯಯನ ಮಾಡಿದ್ದಾರೆ. ಡಾ. ಜಿ.ಎಸ್.ಗಾಯಿಯವರು Historical Grammer of Kannada (1946) ಎಂಬ ಕೃತಿಯಲ್ಲಿ ಕ್ರಿ.ಶ. 8ನೇ ಶತಮಾನದ ಆರಂಭದಿಂದ 10ನೇ ಶತಮಾನದ ಕೊನೆಯವರೆಗಿನ ಕನ್ನಡ ಶಾಸನಗಳ ಅಧ್ಯಯನವನ್ನು, ಡಾ. ಕೆ.ಕುಶಾಲಪ್ಪನವರು A Grammer of Kannada (1972) ಎಂಬ ಕೃತಿಯಲ್ಲಿ ಕ್ರಿ.ಶ. 1000 ರಿಂದ 1400 ವರೆಗಿನ ನಾಲ್ಕು ಶತಮಾನಗಳ ಕನ್ನಡ ಶಾಸನಗಳ ಅಧ್ಯಯನವನ್ನು, ಡಾ. ಎಂ.ಬಿ.ನೇಗಿನಹಾಳ ಅವರು ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ (1982) ಎಂಬ ಕೃತಿಯಲ್ಲಿ ಕ್ರಿ.ಶ. 450 ರಿಂದ 850 ರವರೆಗಿನ ಕನ್ನಡ ಶಾಸನಗಳನ್ನು ಅಧ್ಯಯನ ಮಾಡಿದ್ದಾರೆ. ಕೆಲವು ಲೇಖನಗಳು ಕೂಡ ಶಾಸನಗಳ ಭಾಷಿಕ ಅಧ್ಯಯನ ಲೇಖನ ರೂಪದಲ್ಲಿವೆ. ಮತ್ತು ಕೃಷ್ಣದೇವರಾಯನ ಕನ್ನಡ ಶಾಸನಗಳ ಭಾಷೆ ಕುರಿತು ಎಸ್.ಎಸ್.ಭಗವತಿ ಮತ್ತು ಎಚ್.ಎಸ್.ಮೇಲಿನಮನಿಯವರು ಲೇಖನವನ್ನು ಬರೆದಿದ್ದಾರೆ. ಈ ದೃಷ್ಟಿಯನ್ನಿಟ್ಟುಕೊಂಡು ಅಚ್ಯುತದೇವರಾಯನ ಕಾಲದ ಕನ್ನಡ ಶಾಸನಗಳ ಭಾಷೆಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಹಂಪಿಯಲ್ಲಿ ದೊರೆತ ಅಚ್ಯುತದೇವರಾಯನ 14 ಶಾಸನಗಳನ್ನು ಅಧ್ಯಯನಕ್ಕೆ ಒಳಪಡಿಸಬಹುದು. ಈತನ ಶಾಸನಗಳಲ್ಲಿಯ ಭಾಷೆಯನ್ನು ಈ ಕೆಳಗಿನಂತೆ ಗುರುತಿಸಬಹುದು.

ಧ್ವನಿಮಾ ವ್ಯತ್ಯಾಸಗಳು :

1) ವ್ಯಂಜನಕ್ಕೆ ಬದಲಾಗಿ ಸ್ವರವನ್ನು ಬಳಸಿರುವುದಕ್ಕೆ ಉದಾಹರಣೆ :

ಕೊಟೆಉ	-	ಕೊಟ್ಟೆವು
ನಾಉಗಳು	-	ನಾವುಗಳು
ಗೈಉತ್ತ್ಂಇರಲು	-	ಗೈಯ್ಯುತ್ತಿರಲು
ಗೇಇಉತ್ತ್ಂ	-	ಗೈಯ್ಯುತ್ತಿರಲು
ಗ್ಯೈಇಉತ್ತ್ಂ	-	ಗೈಯುತ್ತಿರಲು
ಗೈಯಿಉತಂಯಿರಲಾಗಿ	-	ಗೈಯ್ಯುತ್ತಿರಲಾಗಿ
ಗೈಉತ್ತ್ಂಯಿರಲು	-	ಗೈಯ್ಯುತ್ತಿರಲು
ಗೇಇಉತಂ	-	ಗೈಯ್ಯುತ್ತಿರಲು
ಧರ್ಮಊವಾ	-	ಧರ್ಮವು
ತಾಇ	-	ತಾಯಿ
ನಿತ್ಯಉ	-	ನಿತ್ಯವು
ಕೆಲಸಉ	-	ಕೆಲಸವು
ಆರೊಬರು	-	ಯಾರೊಬ್ಬರು
ಪಉಳಿ	-	ಪಾಳಿ
ನೀಉ	-	ನೀವು
ಜಉಗಿನ ಗದ್ದೆ	-	ಜವುಗಿನಗಡ್ಡೆ
ಗಉಡನ	-	ಗೌಡನ

2) ಸ್ವರಕ್ಕೆ ಬದಲಾಗಿ ವ್ಯಂಜನ ಬಳಸಿರುವುದು

ಯಿರಲಾಗಿ	-	ಇರಲಾಗಿ
ಯೆಲೆಯ	-	ಎಲೆಯ
ವೊಳಗಾದ	-	ಒಳಗಾದ

ಯಿತಿಹಾಸ	-	ಇತಿಹಾಸ
ವೋದುವ	-	ಒದುವ
ವೊಳಗೆ	-	ಒಳಗೆ
ವೊಡೆಯ	-	ಒಡೆಯ
ಯಿನ್ನೂರು	-	ಇನ್ನೂರು
ಯಿಂನೂಱು	-	ಇನ್ನೂರು
ಯೀ	-	ಈ

3) ಅಲ್ಪಪ್ರಾಣ ಮಹಾಪ್ರಾಣವಾಗಿರುವುದು

ಸಖರೆ	-	ಸಕ್ಕರೆ

4) ಮಹಾಪ್ರಾಣ ಅಲ್ಪಪ್ರಾಣವಾಗಿರುವುದು

ಸ್ತಳದ	-	ಸ್ಥಳದ
ಸಂನಿಧಾನ	-	ಸನ್ನಿಧಾನ

5) ತಾಲವ್ಯಗಳು ಮೂರ್ಧನ್ಯಗಳಾಗಿ ಮೂರ್ಧನ್ಯಗಳು ತಾಲವ್ಯಗಳಾಗಿರುವುದು

ಪುಶ್ಯ	-	ಪುಷ್ಯ
ಷಕವರುಶ	-	ಶಕವರುಷ

6) ತಾಲವ್ಯ ವರ್ತ್ಸ್ಯವಾಗಿರುವುದು

ವೀರೇಸ್ವರ	-	ವೀರೇಶ್ವರ

7) ಐ | ಔ | ತ ಸಂಯುಕ್ತಾಕ್ಷರಗಳನ್ನು ಸ್ವರಸಹಾಯದಿಂದ ಉಪಯೋಗಿಸಿರುವುದು

ಅಯಿವತ್ತು	-	ಐವತ್ತು
ಪಾತ್ರವಯಿಭೋಗವ	-	ಪಾತ್ರ ವೈಭೋಗವ
ನಯಿೀವೇದ್ಯ	-	ನೈವೇದ್ಯ
ಚಯಿತ್ರ	-	ಚೈತ್ರ
ಗಉತಮಗೋತ್ರ	-	ಗೌತಮಗೋತ್ರ
ಕಉಂಡಲಯ್ಯಗೋತ್ರ	-	ಕೌಂಡಲ್ಯಗೋತ್ರ
ಗಉಡನ	-	ಗೌಡನ
ಅಉಭಳದೇವರ	-	ಔಭಳದೇವರ

೮) ಅನುಸ್ವರದಿಂದ ಕೂಡಿದ ಶಬ್ದಗಳು

ತಂಮ	-	ತಮ್ಮ
ಆಭರಣಂಗಳನೂ	-	ಆಭರಣಗಳನ್ನು
ಪುಂಣ್ಯ	-	ಪುಣ್ಯ
ವರದವಂಣಗಳ	-	ವರದಪಣಗಳ

9) ವಿಭಕ್ತಿ ರೂಪಗಳು

ಸಂನಿಧಿಯಲಿ	-	ಸಪ್ತಮಿ ವಿಭಕ್ತಿ
ಬರಸಿದ	-	ಷಷ್ಠಿ ವಿಭಕ್ತಿ
ಸಂನಿಧಾನ	-	ಷಷ್ಠಿ ವಿಭಕ್ತಿ
ಪಪಕೆ	-	ಚತುರ್ಥಿ ವಿಭಕ್ತಿ
ನಡೆವುದಕ್ಕೆ	-	ಚತುರ್ಥಿ ವಿಭಕ್ತಿ

ಇದರಲ್ಲಿ ಧ್ವನಿಯ ವ್ಯತ್ಯಾಯ 'ಉ' ಕಾರ ವಕಾರವಾಗಿ, 'ಯ' ಕಾರ 'ಅ' ಕಾರವಾಗಿ, 'ಯ' ಕಾರ 'ಇ' ಕಾರವಾಗಿ ಬಳಕೆಯಾಗಿವೆ. ಐ, ಔ, ಸಂಯುಕ್ತಾಕ್ಷರಗಳು ಸ್ವರಸಹಾಯದಿಂದ ಉಪಯೋಗವಾಗಿರುವುವು. ಅಲ್ಪಪ್ರಾಣ ಮಹಾಪ್ರಾಣಗಳಾಗಿ ಮಹಾಪ್ರಾಣಗಳು ಅಲ್ಪಪ್ರಾಣಗಳಾಗಿ ಉಪಯೋಗವಾಗಿವೆ. ವಿಭಕ್ತಿ ರೂಪಗಳು ಅನುಸ್ವಾರದಿಂದ ಕೂಡಿದ ಶಬ್ದಗಳು ದ್ವಿತ್ವಗಳ ಪದಗಳನ್ನು ಕಾಣಬಹುದು. ಮಾತಿಗೆ ಹೆಚ್ಚು ಹತ್ತಿರವಾಗಿದ್ದು ಗದ್ಯದಲ್ಲಿ ರಚನೆಗೊಂಡಿವೆ.

ಆಕರ ಗ್ರಂಥ

1. ಡಾ. ದೇವರಕೊಂಡ ರೆಡ್ಡಿಯವರು ಸಂಪಾದಿಸಿದ ಹಂಪಿ ಶಾಸನ ಸಂಪುಟವನ್ನು ಈ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

೧೬. ಲಕ್ಕಣ್ಣ ದಂಡನಾಯಕನ ನಾಣ್ಯಗಳು

ಡಾ. ಎಂ. ಗಿರಿಜಾಪತಿ

ಲಕ್ಕಣ್ಣ ದಂಡನಾಯಕನು ವಿಜಯನಗರ ಸಾಮ್ರಾಜ್ಯದ ದೊರೆ ಇಮ್ಮಡಿ ದೇವರಾಯನ ಆಳ್ವಿಕೆಯ ಕಾಲದಲ್ಲಿ (ಕ್ರಿ.ಶ. 1423-1446) ತನ್ನ ಸಹೋದರ ಮಾದಣ್ಣನ ಜೊತೆಯಲ್ಲಿ ಮುಳಬಾಗಿಲು ಪ್ರಾಂತ್ಯದ ಆಡಳಿತಾಧಿಕಾರಿಯಾಗಿದ್ದನು. ಜೊತೆಗೆ ತಮಿಳುನಾಡಿನ ಮಧುರೆ ಪ್ರಾಂತ್ಯದ ದಂಡನಾಯಕನಾಗಿಯೂ ಕಾರ್ಯ ನಿರ್ವಹಿಸಿದನು. ನಂತರದ ದಿನಗಳಲ್ಲಿ ಆತನನ್ನು ದೇವರಾಯ ಮಹಾರಾಜರು ವಿಜಯನಗರದ ಸಾಮ್ರಾಜ್ಯಕ್ಕೆ ಮಹಾದಂಡನಾಯಕನಾಗಿ ಮತ್ತು ಕಾರ್ಯಪಾಲನನ್ನಾಗಿ ನೇಮಿಸಿದ್ದರು.

ಲಕ್ಕಣ್ಣ ದಂಡನಾಯಕನು ಕೋಲಾರ ಪ್ರಾಂತದಲ್ಲಿ ಜನಿಸಿದನು. ಆತನ ತಾಯಿ ಹೆಸರು ಓಮಾಯಮ್ಮ ಮತ್ತು ತಂದೆಯ ಹೆಸರು ಹೆಗ್ಗಡದೇವ. ಲಕ್ಕಣ್ಣ ದಂಡನಾಯಕ ನನ್ನು ಲಕ್ಕಣ್ಣ ದಂಡೇಶ, ಲಕ್ಕಣ್ಣ ಒಡೆಯ, ಲಕ್ಕಣ್ಣ ಅಮಾತ್ಯ ಹಾಗೂ ಲಕ್ಕಣ್ಣ ನಾಯಕ ನೆಂದೂ ಕರೆಯಲಾಗುತ್ತಿತ್ತು.

ಯುದ್ಧದಲ್ಲಿ ಮಹಾವೀರನಿದ್ದ ಲಕ್ಕಣ್ಣ ದಂಡನಾಯಕನು ಕೇರಳ, ಶ್ರೀಲಂಕ ಹಾಗೂ ಪುಲಿಕೋಟೆಗಳನ್ನು ವಶಪಡಿಸಿಕೊಂಡು, ವಿಜಯನಗರದ ಸಾಮ್ರಾಜ್ಯಕ್ಕೆ ಕಪ್ಪ ಕಾಣಿಕೆಗಳು ಬರುವಂತೆ ಮಾಡಿದನು ಹಾಗೂ ಕಡಲ ಯುದ್ಧಗಳಲ್ಲಿ ಅತ್ಯಂತ ಪರಿಣತ ನಾಗಿದ್ದು ಆತ `ದಕ್ಷಿಣ ಸಮುದ್ರಾಧಿಪತಿ' ಎಂದು ಬಿರುದಾಂಕಿತನಾಗಿದ್ದನೆಂದು ತಮಿಳುನಾಡಿನ ಅನೇಕ ಶಿಲಾಶಾಸನಗಳಲ್ಲಿ ಉಲ್ಲೇಖವಾಗಿದೆ.

ಲಕ್ಕಣ್ಣ ದಂಡನಾಯಕನು ಯುದ್ಧಗಳಲ್ಲಿ ಎಷ್ಟು ಶೂರನೋ ಅಷ್ಟೇ ಪ್ರತಿಭೆಯನ್ನು ವಾಸ್ತುಶಿಲ್ಪ ಹಾಗೂ ಸಾಹಿತ್ಯದಲ್ಲೂ ಪಡೆದಿದ್ದನು. ಕೋಲಾರ ಜಿಲ್ಲೆಯಲ್ಲಿರುವ ವಿರೂಪಾಕ್ಷಪುರದ ವಿರೂಪಾಕ್ಷ ದೇವಾಲಯದ ಗೋಪುರವನ್ನು ಹಾಗೂ ದೇವಸ್ಥಾನದ ಪಕ್ಕದಲ್ಲಿರುವ ಮನ್ಮಥ ಪುಷ್ಕರಣಿಯನ್ನು ಹಂಪಿಯ ದೇವಾಲಯದ ಮಾದರಿಯಲ್ಲಿ ಆತ ಕಟ್ಟಿಸಿರುವುದು ಇನ್ನೂ ಜೀವಂತ ಸಾಕ್ಷಿಗಳಾಗಿವೆ.

ಈತ ವೀರಶೈವ ಧರ್ಮದ ಕಟ್ಟಾ ಅನುಯಾಯಿಯಾಗಿದ್ದು ಉತ್ತಮ ಕವಿಯೂ ಸಹ ಆಗಿದ್ದನು. ಕವಿಯಾಗಿ ಈತ ಕನ್ನಡ ಸಾಹಿತ್ಯದಲ್ಲೇ ಶ್ರೇಷ್ಠವಾದ 54 ಅಧ್ಯಾಯಗಳು ಮತ್ತು 2121 ಸಾಲುಗಳುಳ್ಳ 'ಶಿವ ತತ್ವ ಚಿಂತಾಮಣಿ' ಎಂಬ ಗ್ರಂಥವನ್ನು ಸಪ್ತಪಧಿ ಯಲ್ಲಿ ರಚಿಸಿದ್ದಾನೆ. ಈ ಗ್ರಂಥದಲ್ಲಿ ಶಿವನ ಲೀಲೆಗಳನ್ನು ಕುರಿತು 24 ಅಧ್ಯಾಯಗಳು

ಹಾಗೂ ಪ್ರಮಥ ಗಣಗಳ ಕುರಿತು ಕಥೆಗಳೂ ಇವೆ. ಈ ಗ್ರಂಥ ವೀರಶೈವ ಧರ್ಮದ ಕೈಪಿಡಿಯಂತಿದ್ದು ವೀರಶೈವ ಮತ ಸಂಸ್ಥಾಪಕ ಬಿಜ್ಜಳದ ಬಸವಣ್ಣನವರ ಬಗ್ಗೆ ಅಧ್ಯಯನವೂ ಸೇರಿದೆ.

ಲಕ್ಕಣ್ಣ ದಂಡನಾಯಕನು ಮಧುರೆ ಪ್ರಾಂತದ ದಂಡನಾಯಕನಾಗಿದ್ದಾಗ ಇಮ್ಮಡಿ ದೇವರಾಯನು ಆತನಿಗೆ ಮಧುರೆ ಪ್ರಾಂತದಲ್ಲಿ ಚಲಾವಣೆಗೆಂದು ನಾಣ್ಯಗಳನ್ನು ಟಂಕಿಸಲು, ವಿಶೇಷವಾದಂತಹ ಅನುಮತಿಯನ್ನು ಕೊಟ್ಟಿದ್ದಾಗಿ ಡಾ. ಎ.ವಿ.ನರಸಿಂಹ ಮೂರ್ತಿಯವರು ತಿಳಿಸಿರುವುದು ಸಹಜವಾಗಿಯೇ ಇದೆ. ವಿಜಯನಗರ ಇತಿಹಾಸದಲ್ಲಿ ದಂಡನಾಯಕರಿಗೆ ಈ ಮಾದರಿಯ ನಾಣ್ಯಗಳನ್ನು ಟಂಕಿಸಲು ಅನುಮತಿ ಕೊಟ್ಟಿರುವುದೂ ಅಪರೂಪದ ವಿಷಯವಾಗಿದೆ. ಇಮ್ಮಡಿ ದೇವರಾಯನು ಲಕ್ಕಣ್ಣ ದಂಡನಾಯಕನ ಬಗ್ಗೆ ವಿಶೇಷವಾದ ಕಾಳಜಿ ಇಟ್ಟಿದ್ದನೆಂದು ತಿಳಿದುಬರುತ್ತದೆ.

ನಾಣ್ಯಗಳ ಬಗ್ಗೆ ಮಾಹಿತಿ

1. ಒಂದನೆಯ ನಾಣ್ಯ:

ಲೋಹ: ಬೆಳ್ಳಿಯಿಂದ ದಪ್ಪವಾದ ಲೇಪಿತವಿರುವ ತಾಮ್ರದ ನಾಣ್ಯ.

ತೂಕ: 3.8 ಗ್ರಾಂ.ಗಳು

ವ್ಯಾಸ: 19 ಮಿ.ಮೀ.

ನಾಣ್ಯದ ಮುಮ್ಮುಖ

ಬಲಕ್ಕೆ ಮುಖ ಮಾಡಿ ನಿಂತಿರುವ ಸಿಂಗಾರ ಮಾಡಿದಂತಹ ಆನೆ ಬಾಲವನ್ನು ಎತ್ತಿ ಹಿಡಿದಿದೆ. 14ನೆಯ ಶತಮಾನದ ಕನ್ನಡ ಅಕ್ಷರ `ಲ' ಆನೆಯ ತಲೆಯ ಮೇಲಿನಲ್ಲಿರುವ ಜಾಗದಲ್ಲಿ ಕಾಣುತ್ತದೆ. ಆನೆಯು ಬಹಳ ಅಂದವಾಗಿ ಚಿತ್ರಿತವಾಗಿದೆ ಹಾಗೂ ಇದೇ ರೀತಿ ಬೇರೆಯ ತಾಮ್ರದ ನಾಣ್ಯಗಳಲ್ಲಿ ಕಂಡುಬರುವ ಆನೆಗಿಂತಲೂ ಗಾತ್ರದಲ್ಲಿ ದೊಡ್ಡದಾಗಿದೆ.

ನಾಣ್ಯದ ಹಿಮ್ಮುಖ

14ನೆಯ ಶತಮಾನದ ಕನ್ನಡದ ಬರವಣಿಗೆ ಮೂರು ಸಾಲುಗಳಲ್ಲಿದ್ದು ಪ್ರತಿ ಸಾಲು ಮಧ್ಯದಲ್ಲಿ ಗೆರೆಗಳಿಂದ ಬೇರ್ಪಟ್ಟಿದೆ. ನಾಣ್ಯದ ಅಂಚಿನಲ್ಲಿ ಬರವಣಿಗೆ ಚುಕ್ಕೆಗಳಿಂದ ಮಾಡಲ್ಪಟ್ಟಿರುವ ಸುತ್ತಿನಲ್ಲಿ ಇದೆ.

ಕನ್ನಡ ಬರವಣಿಗೆ

ಮೊದಲ ಸಾಲಿನಲ್ಲಿ 'ಖಣ'

ಎರಡನೆಯ ಸಾಲಿನಲ್ಲಿ 'ದಣ್ಣಾಯ'

ಮೂರನೆಯ ಸಾಲಿನಲ್ಲಿ 'ಕರು'

ಕೂಡಿಸಿದಾಗ ಖಣ/ದಣ್ಣಾಯ/ಕರು ಎಂದು ಓದಬಹುದಾಗಿದೆ. ಈ ಬರವಣಿಗೆಗೆ ನಾಣ್ಯದ ಮುಂಭಾಗದಲ್ಲಿ ಆನೆಯ ತಲೆಯ ಮೇಲಿರುವ 'ಲ' ಅಕ್ಷರ ಸೇರಿಸಿದಾಗ ಲಕ್ಕಣ /ದಂಡಾಯ/ ಕರು ಎಂದು ಓದಬಹುದಾಗಿದೆ.

2. ಎರಡನೆಯ ನಾಣ್ಯ.

ಲೋಹ: ತಾಮ್ರ

ತೂಕ : 3. 6ಗ್ರಾಂಗಳು

ವ್ಯಾಸ: 16 ಮಿ.ಮೀ.

ನಾಣ್ಯದ ಮುಮ್ಮುಖ

ಬಾಲ ಎತ್ತಿಕೊಂಡು ಬಲಕ್ಕೆ ಮುಖಮಾಡಿ ಸಾಧಾರಣವಾಗಿ ಸಿಂಗರಿಸಿರುವ ಆನೆ. 14ನೆಯ ಶತಮಾನದ ಕನ್ನಡ ಅಕ್ಷರ `ಲ' ಆನೆಯ ತಲೆಯ ಮೇಲಿರುವ ಪ್ರದೇಶದಲ್ಲಿ ಮೂಡಿಸಲಾಗಿದೆ.

ನಾಣ್ಯದ ಹಿಮ್ಮುಖ

14ನೆಯ ಶತಮಾನದ ಮೂರು ಸಾಲುಗಳನ್ನು ಕನ್ನಡದ ಬರವಣಿಗೆ ಖಣ/ದಣ್ಣಾಯ/ಕರು ನಾಣ್ಯದ ಮುಮ್ಮುಖದಲ್ಲಿರುವ 'ಲ' ಅಕ್ಷರವನ್ನು ಸೇರಿಸಿದಾಗ ಬರವಣಿಗೆಯನ್ನು ಲಖಣ/ದಣಾಯ/ಕರು ಎಂದು ಓದಬಹುದಾಗಿದೆ.

3. ಮೂರನೆಯ ನಾಣ್ಯ: ಎರಡನೆಯ ನಾಣ್ಯದ ಮಾದರಿಯಲ್ಲಿ ಇದೆ.

4. ನಾಲ್ಕನೆಯ ನಾಣ್ಯ: ಎರಡು ಮತ್ತು ಮೂರನೆಯ ನಾಣ್ಯದ ಮಾದರಿಯಲ್ಲಿ ಇದೆ. ಆದರೆ ತೂಕ : 3.4 ಗ್ರಾಂಗಳಿದ್ದು, ಕಡಿಮೆ ಇದೆ.

5. ಐದನೆಯ ನಾಣ್ಯ: ಎರಡು, ಮೂರು ಮತ್ತು ನಾಲ್ಕನೆಯ ನಾಣ್ಯದ ಮಾದರಿಯಲ್ಲಿ ಇದೆ. ಆದರೆ ಕನ್ನಡದ ಅಕ್ಷರಗಳು ಗಾತ್ರದಲ್ಲಿ ದೊಡ್ಡದಾಗಿವೆ.

(ಪರಿಶೀಲನೆ)

ಈ ಹಿಂದೆ ಹಲ್ಟ್‌ಜ್ಸ್ ಮತ್ತು ಈಲಿಯಟ್‌ರವರು ಈ ನಾಣ್ಯಗಳ ಬಗ್ಗೆ ಪ್ರಸ್ತಾಪಿಸಿ ನಾಣ್ಯಗಳ ಮೇಲಿದ್ದ ಬರವಣಿಗೆಯನ್ನು ಮಣ/ದಣಾಯ/ಕರು ಎಂದು ಓದಿ ಅವುಗಳನ್ನು ಹೊಯ್ಸಳರು ಹೊಯ್ಸಳರು ಟಂಕಿಸಿರುವುದಾಗಿ ತಿಳಿಸಿದ್ದಾರೆ.

ರಾವ್ ಬಹದ್ದೂರು ವೆಂಕಯ್ಯನವರು ಬರವಣಿಗೆಯನ್ನು ಮಣನಾಯಕ ಎಂದು ಓದಿ ಲಕ್ಷ್ಮಣನಾಯಕನದೆಂದು ಅಭಿಪ್ರಾಯಪಟ್ಟಿದ್ದಾರೆ.

ಕೃಷ್ಣಶಾಸ್ತ್ರಿಯವರು ಸಹ ಮೇಲಿನ ಅಭಿಪ್ರಾಯವನ್ನೇ ಅನುಮೋದಿಸಿದ್ದಾರೆ.

ಜಾಕ್‌ಸನ್‌ರವರು ನಾಣ್ಯದ ಮುಂಬದಿಯಲ್ಲಿ ಆನೆಯ ತಲೆಯ ಮೇಲಿರುವ ಅಕ್ಷರವನ್ನು `ನ' ಎಂದು ಹಿಮ್ಮುಖದಲ್ಲಿರುವ ಬರವಣಿಗೆಯನ್ನು ಮಣ/ದಣ್ಣಾಯ/ಕರು ಎಂದು ತಿಳಿಸಿದ್ದಾರೆ.

ಡಾ. ಗಿರಿಜಾಪತಿ ಹಾಗೂ ಗಣೇಶರವರು ಸಹ ಇದೇ ರೀತಿಯ ಅಭಿಪ್ರಾಯದಿಂದ ನಾಣ್ಯದ ಹಿಂಬದಿಯಲ್ಲಿನ ಬರವಣಿಗೆಯನ್ನು ಮಣ/ದಣ್ಣಾಯ/ಕರು ಎಂದು ತಿಳಿಸಿರುತ್ತಾರೆ.

ಮೈಕೇಲ್ ಮಿಷಿನರ್‌ರವರು ನಾಣ್ಯದ ಮುಂಭಾಗದಲ್ಲಿರುವ ಅಕ್ಷರವನ್ನು `ನಾ' ಎಂದು ಓದಿ, ಹಿಂಭಾಗದ ಅಕ್ಷರಗಳನ್ನು ಗಣ/ದಣ್ಣಾಯ/ಕರು ಎಂದು ಪರಿಗಣಿಸಿ ನಾಣ್ಯಗಳು ನಾಗಣ್ಣ ದಂಡನಾಯಕನು ಟಂಕಿಸಿದ್ದಾಗಿ ಅಭಿಪ್ರಾಯಪಟ್ಟಿರುತ್ತಾರೆ.

ವಿಜಯನಗರದ ಅರಸರು ತಮಿಳುನಾಡಿನ ಪ್ರಾಂತ್ಯಗಳಲ್ಲಿ ಚಲಾವಣೆಗೆಂದು ಹೊರಡಿಸಿದ ತಾಮ್ರದ ನಾಣ್ಯಗಳು ಸರಳವಾದಂತಹ ತೂಕವಿದ್ದು, ಅವು ಅಂದಾಜು 3.5 ಗ್ರಾಂಗಳು ತೂಕವಿರುತ್ತಿದ್ದವು ಮತ್ತು ಅವುಗಳನ್ನು ಜಿಟ್ಟಲ್ ಎಂದು ಕರೆಯುತ್ತಿದ್ದರು. ಈಗಾಗಲೇ ವಿವರವಾಗಿ ಮೇಲೆ ತಿಳಿಸಿರುವಂಥ ನಾಣ್ಯಗಳು 15ನೆಯ ಶತಮಾನದ ಕನ್ನಡದ ಬರವಣಿಗೆಯನ್ನು ಹೊಂದಿದ್ದು ತೂಕ ಸಹ ತುಸ ಹೆಚ್ಚು ಕಡಿಮೆ 3.5 ಗ್ರಾಂಗಳಿದ್ದು, ಮುಂಭಾಗದಲ್ಲಿ ಆನೆಯ ಗುರುತು, ಆನೆಯ ತಲೆಯ ಮೇಲೆ 'ಲ' ಅಕ್ಷರ, ಹಿಮ್ಮುಖದಲ್ಲಿ ಕನ್ನಡ ಲಿಪಿ ಖಣ/ದಣ್ಣಾಯ/ಕರು ಇವೆ. ಈ ಹಿಂದೆ ಅನೇ ನಾಣ್ಯಗಳನ್ನು ತಜ್ಞರು ಈ ನಾಣ್ಯಗಳನ್ನು ಪರಿಶೀಲಿಸಿದ್ದು ಅವರು ಮುಮ್ಮುಖದಲ್ಲಿ ಆನೆಯ ತಲೆಯ ಮೇಲಿರುವ 'ಲ' ಅಕ್ಷರವನ್ನು ಪರಿಗಣನೆಗೆ ತೆಗೆದುಕೊಳ್ಳದೆ ಹಾಗೂ ಹಿಮ್ಮುಖದಲ್ಲಿ ಮೊದಲಿನ ಸಾಲಿನಲ್ಲಿ ಮೊದಲ ಅಕ್ಷರವನ್ನು 'ಖ' ಎಂದು ಪರಿಗಣಿಸದೆ 'ಮ' ಎಂದು ಪರಿಗಣಿಸಿರುವುದರಿಂದ ಅವರೆಲ್ಲರೂ ಲಿಪಿಯನ್ನು ಮಣದಣ್ಣಾಯಕರು ನಾಗಣ್ಣದಣ್ಣಾಯಕರು ಮತ್ತು ಲಕ್ಮ್ಸಣದಣ್ಣಾಯಕರು ಎಂದು ತಪ್ಪಾಗಿ ಓದಿರುವುದು ಕಂಡುಬರುತ್ತದೆ.

ಈಗ ಪ್ರಥಮವಾಗಿ ನಾಣ್ಯದ ಮೇಲಿರುವ ಲಿಪಿಯನ್ನು ಸರಿಯಾಗಿ ಅರ್ಥೈಸಿ ಮುಮ್ಮುಖದಲ್ಲಿ ಆನೆಯ ತಲೆಯ ಮೇಲಿರುವ ಅಕ್ಷರವನ್ನು 'ಲ' ಎಂದು ಪರಿಗಣಿಸಿ, ಹಿಮ್ಮುಖದಲ್ಲಿರುವ ಲಿಪಿಯ ಮೊದಲನೆಯ ಅಕ್ಷರವನ್ನು 'ಖ' ಎಂದು ಗುರುತಿಸಿ, ಮುಂಭಾಗದ ಲಿಪಿ ಹಾಗೂ ಹಿಂಭಾಗದ ಲಿಪಿಯನ್ನು ಕೂಡಿಸಿದಾಗ 'ಲಖಣ್ಣ/ದಣ್ಣಾಯ/ಕರು, ಎಂದು ಎಂದು ಓದಲಾಗಿದೆ ಹಾಗೂ ಈ ರೀತಿಯ ನಾಣ್ಯಗಳು ಹೆಚ್ಚಾಗಿ ತಮಿಳು ನಾಡಿನ ಮಧುರೆ ನಗರ ಮತ್ತು ಆ ನಗರದ ಸುತ್ತಮುತ್ತಲಿನ ಪ್ರಾಂತ್ಯಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಿಕ್ಕಿದ್ದು ನಾಣ್ಯಗಳ ಮೇಲಿನ ಕನ್ನಡ ಲಿಪಿಯೂ 15ನೆಯ ಶತಮಾನ ದ್ದೆಂದೂ ನಿರ್ಣಯವಾಗಿದೆ. ಲಕ್ಕಣ್ಣ ದಂಡನಾಯಕನು ಮಧುರೆ ಪ್ರಾಂತ್ಯದ

ದಂಡನಾಯಕನಾಗಿ ಕಾರ್ಯನಿರ್ವಹಿಸಿರುವ ಹಾಗೂ ವಿಜಯನಗರದ ಅರಸ ಇಮ್ಮಡಿ ದೇವರಾಯರು ಲಕ್ಕಣ್ಣ ದಂಡನಾಯಕನಿಗೆ ನಾಣ್ಯಗಳನ್ನು ಟಂಕಿಸಲು ವಿಶೇಷವಾದಂತಹ ಅನುಮತಿಯನ್ನು ಕೊಟ್ಟಿದ್ದ ಮಾಹಿತಿಗೆ ಅನುಗುಣವಾಗಿ ಲಕ್ಕಣ್ಣ ದಂಡನಾಯಕನು ಮಧುರೆಯ ಪ್ರಾಂತ್ಯದ ದಂಡಾಧಿಕಾರಿಯಾಗಿದ್ದಾಗ ಈ ನಾಣ್ಯಗಳನ್ನು ಟಂಕಿಸಿದನು ಎಂದು ಖಚಿತವಾದ ಅಭಿಪ್ರಾಯಕ್ಕೆ ಬರಲಾಗಿದೆ.

ಇದೇ ಮಾದರಿಯ ಬೆಳ್ಳಿಯ ಲೇಪಿತ ನಾಣ್ಯ (ನಾಣ್ಯ ಸಂಖ್ಯೆ ಒಂದು) ಪ್ರಥಮವಾಗಿ ಬೆಳಕಿಗೆ ಬಂದಿದ್ದು, ಈ ನಾಣ್ಯವು ಬಹುಶಃ ಇಮ್ಮಡಿ ದೇವರಾಯರವರ ಆಳ್ವಿಕೆಗೆ ಮುನ್ನ ಮಧುರೆ ಪ್ರಾಂತವನ್ನಾಳುತ್ತಿದ್ದ ಮಧುರೆ ಸುಲ್ತಾನರು ಬೆಳ್ಳಿಯ ನಾಣ್ಯಗಳನ್ನು ಟಂಕಿಸುತ್ತಿದ್ದರಿಂದ ಅವರ ನಾಣ್ಯಗಳಿಗೆ ಪೈಪೋಟಿ ನೀಡಲು ಲಕ್ಕಣ್ಣ ದಂಡನಾಯಕರು ಈ ಬೆಳ್ಳಿಯ ನಾಣ್ಯಗಳನ್ನು ಟಂಕಿಸಿರಬಹುದೆಂದು ಅಭಿಪ್ರಾಯಕ್ಕೆ ಬರಲಾಗಿದೆ.

ಗ್ರಂಥ ಋಣ

1. *ಮೈಸೂರು ಗೆಜೆಟಿಯರ್ ವಾಲ್ಯೂಮ್ II* ಸಿ. ಹಯವದನರಾವ್
2. *ಇ.ಸಿ. X* ಬಿ ಪುಟ. 72
3. *ಇ.ಸಿ. X* ಕೆ.ಎಲ್. ಪುಟ.104
4. *ಸಂಗಮರು ಮತ್ತು ವೀರಶೈವ ಧರ್ಮ ಸಂಪಾದಕರು* ಎ.ಎಸ್.ದೀಕ್ಷಿತ್
5. *ಶಿವತತ್ವ ಚಿಂತಾಮಣಿ*, ಬಸಪ್ಪ, ಮೈಸೂರು, 1960
6. ತಿರುಚಿನಾಪಲ್ಲಿಯ ಶಿಲಾಶಾಸನಗಳು ಎಂ.ಇ.ಆರ್. 1913 ನಂ. 230
7. ಕಾಯಿನ್ಸ್ ಅಂಡ್ ಕರೆನ್ಸೀ ಸಿಸ್ಟಮ್ ಇನ್ ಕರ್ನಾಟಕ ಡಾ. ಎ.ವಿ.ನರಸಿಂಹಮೂರ್ತಿ
8. ಎ ಫರ್‌ಗಾಟನ್ ಎಂಪೈರ್ ಸಿವೆಲ್ 1900
9. ಇ.ಸಿ.ಎಸ್.ಐ.ಪಿ.ಜಿ. ಇಂಡಿಯನ್ ಈಲಿಯಟ್
10. ಆನ್ಯುಯಲ್ ರಿಪೋರ್ಟ್ಸ್ ಆನ್ ಎಪಿಗ್ರಾಫಿ 1904 ರಿಂದ 1905- ರಾವ್ ಬಹದ್ದೂರ್ ವೆಂಕಯ್ಯ
11. ಎ.ಎಸ್.1907 ಮತ್ತು 1908 ಕೃಷ್ಣಶಾಸ್ತ್ರಿ
12. ಜಾರ್ಕ್‌ಸನ್ 1912 ಪುಟ ನಂ. 40
13. ಕರ್ನಾಟಕ ನ್ಯೂಮಿಸ್‌ಮ್ಯಾಟಿಕ್ ಸ್ಟಡೀಸ್, ಡಾ. ಗಿರಿಜಾಪತಿ ಮತ್ತು ಕೆ.ಗಣೇಶ್
14. ಹಿಸ್ಟರೀ ಅಂಡ್ ಕಾಯನೇಜ್ ಆಫ್ ಸೌತ್ ಇಂಡಿಯಾ - ಮೈಕೇಲ್ ಮಿಷಿಯನಿಯರ್



ಒಂದನೆಯ ನಾಣ್ಯ



ಎರಡನೆಯ ನಾಣ್ಯ



ಮೂರನೆಯ ನಾಣ್ಯ



ನಾಲ್ಕನೆಯ ನಾಣ್ಯ



ಐದನೆಯ ನಾಣ್ಯ

೧೭. ತುಮಕೂರು ಪ್ರದೇಶದ ವಿಜಯನಗರ ಕಾಲದ ಆಡಳಿತ ವಿಭಾಗಗಳು

ಡಾ. ಡಿ.ಎನ್.ಯೋಗೀಶ್ವರಪ್ಪ

ದಕ್ಷಿಣಭಾರತದ ಚರಿತ್ರೆಯಲ್ಲಿ ವಿಜಯನಗರದ ದೊರೆಗಳ ಆಳ್ವಿಕೆ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಇಡೀ ದಕ್ಷಿಣ ಭಾರತವನ್ನೇ ವ್ಯಾಪಿಸಿದ್ದ, ಅವರ ರಾಜ್ಯದಲ್ಲಿ ಆಡಳಿತವನ್ನು ಸುಲಭಗೊಳಿಸುವ ದೃಷ್ಟಿಯಿಂದ ತಮ್ಮ ಅನುಕೂಲಕ್ಕಾಗಿ ಅನೇಕ ಹಂತಗಳ ಆಡಳಿತ ವಿಭಾಗಗಳನ್ನು ರೂಪಿಸಿಕೊಂಡಿದ್ದರು. ವಿಜಯನಗರದ ಆಳ್ವಿಕೆಯ ಪೂರ್ವ ಕಾಲದ ರಾಜಮನೆತನಗಳ ಬಹಳಷ್ಟು ಆಡಳಿತ ವಿಭಾಗಗಳು ಸಂಖ್ಯೆಗಳಿಂದ ಕೂಡಿದ್ದು, ಅದು ಆ ಕಾಲದ ವಿಶೇಷತೆಯೂ ಆಗಿತ್ತು. ವಿಜಯನಗರದ ಕಾಲದಲ್ಲಿ ಆಯಾ ಪ್ರದೇಶಗಳಲ್ಲಿ ಪ್ರಚಲಿತವಿದ್ದ ಬೇರೆ ತೆರನಾದ ಆಡಳಿತ ವಿಭಾಗ ಕ್ರಮಗಳನ್ನು ಕ್ರೋಡೀಕರಿಸಿ, ಒಂದು ಸಾಮಾನ್ಯೀಕರಣಗೊಂಡ ಇಡೀ ಸಾಮ್ರಾಜ್ಯಕ್ಕೆ ಸೂಕ್ತವೆನಿಸಬಹುದಾದ ಪದ್ಧತಿಯೊಂದನ್ನು ಜಾರಿಗೆ ತರಲಾಯಿತು. ಅದರ ಫಲವಾಗಿ ರಾಜ್ಯ, ದೇಶ, ವೇಂಠೆ, ವಳಿತ, ಚಾವಡಿ, ನಾಡು, ಸೀಮೆ, ಸ್ಥಳ, ಗ್ರಾಮ ಎಂಬ ವಿಭಾಗಗಳು ಮೂಡಿಬಂದವು.

ವಿಜಯನಗರ ಕಾಲದ ಆಡಳಿತ ವಿಭಾಗಗಳ ಅನುಶ್ರೇಣಿಯನ್ನು ಗುರ್ತಿಸುವಾಗ ಅನೇಕ ಸಮಸ್ಯೆಗಳು ಎದುರಾಗುತ್ತವೆ. ಅನೇಕ ಶಾಸನಗಳಲ್ಲಿ ರಾಜ್ಯದ ಬದಲು ಸೀಮೆ, ಸ್ಥಳ, ವಳಿತ, ವೇಂಠೆ ಎಂಬ ಪದಗಳನ್ನು ಉಪಯೋಗಿಸಲಾಗಿದೆ. ಹಲವು ಸ್ಥಳಗಳಲ್ಲಿ ಅವುಗಳನ್ನು ರಾಜ್ಯದೊಳಗಿನ ಸಣ್ಣ ವಿಭಾಗಗಳನ್ನು ಸೂಚಿಸಲು ಉಪಯೋಗಿಸಲಾಗಿದೆ. ಆದರೆ ಅದು ಮೈಸೂರು ರಾಜ್ಯದ, ಮೈಸೂರು ಜಿಲ್ಲೆಯ ಮೈಸೂರು ತಾಲ್ಲೂಕಿನ ಮೈಸೂರು ಸ್ಥಳದ ಎಂಬ ರೀತಿಯಲ್ಲಿ ಉಕ್ತವಾಗಿದ್ದಿರಬೇಕೆಂದು ತೋರುತ್ತದೆ.[1] ಆದರೂ ಈ ದಿಸೆಯಲ್ಲಿ ಕೆಲಮಟ್ಟಿನ ಗೊಂದಲವಿರುವುದು ನಿಜ. ಇಂತಹ ಗೊಂದಲ ಕೆಲವ ವಿಜಯನಗರ ಆಳ್ವಿಕೆಗೆ ಮಾತ್ರ ಅನ್ವಯವಾಗುವುದಿಲ್ಲ. ಭಾರತದ ಇತರ ಪ್ರದೇಶಗಳ, ರಾಜವಂಶಗಳ, ಬೇರೆ ಬೇರೆ ಕಾಲಗಳು ಈ ಆಡಳಿತ ವಿಭಾಗಗಳ ಅನುಶ್ರೇಣಿಯ ಕ್ರಮವು ಇಂತಹ ಗೊಂದಲಗಳಿಂದ ಕೂಡಿರುವುದನ್ನು ಡಾ. ಡಿ.ಸಿ.ಸರಕಾರ್‌ರವರು ಸಾಧಾರವಾಗಿ ಗುರ್ತಿಸುತ್ತಾರೆ. ಆದಾಗ್ಯೂ ವಿಜಯನಗರ ಕಾಲದ ಆಡಳಿತ ವಿಭಾಗಗಳ ಹಂತಗಳನ್ನು ಸ್ಥೂಲವಾಗಿ

1) ದೇಶ/ರಾಜ್ಯ

2) ಚಾವಡಿ/ಮಾಗಣಿ/ವಳಿತ/ವೇಂಠೆ

3) ನಾಡು/ಸೀಮೆ

4) ಸ್ಥಲ

5) ಗ್ರಾಮ

ಎಂದು ಗುರ್ತಿಸಬಹುದು.

ಪ್ರಾಚೀನ ಕಾಲ ಕಳೆದು ಮಧ್ಯಯುಗ ಆರಂಭವಾದನಂತರ ಕರ್ನಾಟಕದ ರಾಜಕೀಯ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳುಂಟಾಗಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಯಿತು. ಇದರ ಪರಿಣಾಮವಾಗಿ ಪ್ರಸ್ತುತ ತುಮಕೂರು ಪ್ರದೇಶದಲ್ಲಿಯೂ ಅನೇಕ ಸಣ್ಣ ಸಣ್ಣ ರಾಜಮನೆತನಗಳು ವಿಜಯನಗರ ಕಾಲದದರಸರ ಅಪ್ಪಣೆ ಪಡೆದು ಕೊಂಡು ಸ್ಥಾಪನೆಯಾದವು. ಇಂತಹ ವ್ಯವಸ್ಥೆ ಮೈಸೂರಿನಲ್ಲಿ ಸರ್ವಾಧಿಕಾರಿಯಾಗಿ ಆಡಳಿತ ನಿರ್ವಹಿಸಿದ ಹೈದರಾಲಿ ಟಿಪ್ಪೂ ಸುಲ್ತಾನರವರೆಗೂ ಮುಂದುವರಿಯಿತು. ಅವರು ಸಣ್ಣಪುಟ್ಟ ರಾಜ್ಯಗಳನ್ನೆಲ್ಲಾ ಗೆದ್ದು ಅವುಗಳನ್ನು ತಮ್ಮ ರಾಜ್ಯದಲ್ಲಿ ವಿಲೀನ ಗೊಳಿಸಿಕೊಂಡರು. ಇಂತಹ ವೈಶಿಷ್ಟ್ಯಪೂರ್ಣ ಚಾರಿತ್ರಿಕ ಹಿನ್ನೆಲೆಯನ್ನು ಹೊಂದಿರುವ ತುಮಕೂರು ಪ್ರದೇಶವು ಅಂದು ಅನೇಕ ಆಡಳಿತ ವಿಭಾಗಗಳಾಗಿ ಒಡೆದುಹೋಗಿತ್ತು. ಈಗಿನ ರಾಜ್ಯ, ಜಿಲ್ಲೆ, ತಾಲೂಕು, ಹೋಬಳಿಗಳಂತೆ ಪ್ರಾಚೀನ ಕಾಲದಲ್ಲಿಯೂ ರಾಜರು ಗಳು ತಮ್ಮ ಸಾಮ್ರಾಜ್ಯವನ್ನು ಆಡಳಿತದ ಅನುಕೂಲಕ್ಕಾಗಿ ವಿಭಾಗಿಸಿರುವುದು ಕಂಡು ಬರುತ್ತದೆ. ಈ ಕಲ್ಪನೆ ಮನುವಿನಷ್ಟೇ ಹಳೆಯದು.[2] ಕರ್ನಾಟಕದ ಇತಿಹಾಸದಲ್ಲಿ ಆಡಳಿತ ವ್ಯವಸ್ಥೆ ಎಷ್ಟು ಸುವ್ಯವಸ್ಥಿತವಾಗಿ ನಡೆಯುತ್ತಿತ್ತೆಂಬುದಕ್ಕೆ ತುಮಕೂರು ಪ್ರದೇಶಗಳಲ್ಲಿ ಮಾಡಲಾಗಿರುವ ಆಡಳಿತ ವಿಭಾಗಗಳಲ್ಲಿ ಪುನಃ ಉಪವಿಭಾಗಗಳನ್ನು ಮಾಡುವ ಈ ಪದ್ಧತಿ ಕರ್ನಾಟಕದಲ್ಲಿ ಸಮರ್ಥವಾಗಿ ಬೆಳೆದು ಬಂದಿದೆ. ಈ ಪ್ರದೇಶದ ಶಾಸನಗಳು ಪೂರೈಸುವ ಭೌಗೋಳಿಕ ಮಾಹಿತಿಯನ್ನು ಅತ್ಯಂತ ಎಚ್ಚರಿಕೆಯಿಂದ ಅಧ್ಯಯನ ಮಾಡಿ ದರೆ ನಾವು ಅದರಲ್ಲಿ ಸೂಕ್ಷ್ಮಸ್ತರದ ಪ್ರಾಂತೀಯ ಭಾಗಗಳು ಬಹಳ ವರ್ಷಗಳ ಕಾಲ ಹಾಗೆಯೇ ತಮ್ಮ ಅಸ್ತಿತ್ವವನ್ನುಳಿಸಿಕೊಂಡಿರುವುದು ಕಂಡುಬರುತ್ತದೆ. ಸೂಕ್ಷ್ಮಸ್ತರದ ವಿಭಾಗಗಳು ಪ್ರಾಥಮಿಕವಾಗಿ ಸಾಮಾಜಿಕ ಪ್ರದೇಶಗಳಾಗಿದ್ದು ನಂತರ ಅವು ಆಡಳಿತ ಪ್ರದೇಶಗಳಾಗಿವೆ (ವಿಭಾಗ). ಆದರೆ ಸ್ಥೂಲಸ್ತರದ ವಿಭಾಗಗಳು ಪ್ರಾಥಮಿಕವಾಗಿ ಆಡಳಿತ ವಿಭಾಗಗಳು, ನಂತರ ಅವು ಸಾಮಾಜಿಕ ಪ್ರದೇಶಗಳಾಗಿರುತ್ತದೆ. ಆದ್ದರಿಂದ ಈ ಪ್ರಬಂಧದಲ್ಲಿ ತುಮಕೂರು ಪ್ರದೇಶದ ಸೂಕ್ಷ್ಮ ಸ್ತರದ ಆಡಳಿತ ವಿಭಾಗಗಳಾದ ನಾಡು/ ಸೀಮೆ/ಸ್ಥಳಗಳ ಅಧ್ಯಯನದ ಪ್ರಯತ್ನವನ್ನು ಮಾಡಲಾಗಿದೆ. ಈ ಪ್ರದೇಶದ ಶಾಸನಗಳನ್ನು ಪರಿಶೀಲಿಸಿದರೆ, ದೇಶ, ರಾಜ್ಯ, ನಾಡು, ಸೀಮೆ, ಸ್ಥಳ, ಮಾಗಣಿ, ವೇಂಠೆ,

ಹೋಬಳಿ, ಗ್ರಾಮ ಎಂಬ ಪದ ಪ್ರಯೋಗವಾಗಿರುವ ಆಡಳಿತ ಉಪವಿಭಾಗಗಳನ್ನು ಕಾಣುತ್ತೇವೆ. ಅವುಗಳನ್ನು ಈಗ ಒಂದೊಂದಾಗಿ ಪರಿಶೀಲಿಸೋಣ.

ದೇಶ

ಈ ಪ್ರದೇಶದಲ್ಲಿ ದೊರೆತಿರುವ ವಿಜಯನಗರ ಕಾಲದ ಶಾಸನವನ್ನು ಪರಿಶೀಲಿಸಿದಾಗ 'ಹೊಯ್ಸಳ ದೇಶ' ಎಂಬ ಉಲ್ಲೇಖವನ್ನು ಕಾಣುತ್ತೇವೆ.

ಉದಾ: ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರುಷಂಗಳು 1559ನೇ ವರ್ತಮಾನವಾದ ಪ್ರಮಾಧಿನಾಮ ಸಂವತ್ಸರದ ಕಾರ್ತೀಕ ಬ30ಲೂ 1 ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರ ಪ್ರತಾಪ ಶ್ರೀ ವೆಂಕಟಪತಿ ದೇವಮಹಾರಾಯರವರು ಪಿನಗೊಂಡೆಯಲ್ಲೂ ರತ್ನ ಸಿಂಹಾಸನಾರೂಢರಾಗಿ ಪೃಥ್ವೀ ಸಾಮ್ರಾಜ್ಯಂಗೈಯ್ಯುತ್ತಿರಲು ಅಮರನಾಯಕತನಕ್ಕೆಪ್ರತಿಪಾಲಿಶಿಕೂಟ ಹ್ಯೊಸಳದೇಶದ....[3]

ವಿಜಯನಗರ ಸಾಮ್ರಾಜ್ಯ ಅಸ್ತಿತ್ವಕ್ಕೆ ಬರುವ ಮುನ್ನ ದಕ್ಷಿಣಭಾರತದ ಬಹುಭಾಗವನ್ನು ತಮ್ಮ ಅಧೀನದಲ್ಲಿಟ್ಟುಕೊಳ್ಳಲು ಪ್ರಯತ್ನಿಸಿದವರೆಂದರೆ, ಹೊಯ್ಸಳರು. ಅವರ ನಂತರ ಈ ಪ್ರದೇಶ ವಿಜಯನಗರ ಸಾಮ್ರಾಜ್ಯದ ಅಧೀನಕ್ಕೊಳಪಟ್ಟಿತು. ಈ ರೀತಿ ಒಳಪಟ್ಟ ಪ್ರದೇಶವನ್ನು ವಿಜಯನಗರ ಕಾಲದ ಶಾಸನಗಳು ಹೊಯ್ಸಳ ದೇಶ ಎಂದು ಕರೆದಿದೆ. ವಾಸ್ತವಾಗಿ ದೇಶವೆಂಬ ಪ್ರಾದೇಶಿಕ ವಿಭಾಗವು ವಿಸ್ತಾರವಾದ ಪ್ರಾದೇಶಿಕ ವಿಭಾಗವನ್ನೊಳಗೊಂಡಿರುತ್ತದೆ. ಅದರಲ್ಲಿ ಅನೇಕ ರಾಜ್ಯಗಳು ಮತ್ತು ಮಂಡಲಗಳು ಸಮಾವೇಶಗೊಂಡಿರುತ್ತದೆ. ಪ್ರಸ್ತುತ ಪ್ರದೇಶದ ಚಿಕ್ಕನಾಯಕನಹಳ್ಳಿ, ತಿಪಟೂರು, ಗುಬ್ಬಿ, ತುರುವೆಕೆರೆ ತಾಲೂಕಿನ ಅನೇಕ ಭಾಗಗಳು ಇದರಲ್ಲಿ ಸಂಮಿಳಿತವಾಗಿದ್ದವು ಎನ್ನಬಹುದು.

ವೇಂಠೆ

ಇದು ವಿಜಯನಗರ ಕಾಲದ ಪ್ರಾದೇಶಿಕ ವಿಭಾಗದ ಹೆಸರಾಗಿದ್ದು, ಅವರ ಶಾಸನಗಳಲ್ಲಿ ಗೋಚರಿಸುತ್ತದೆ. ಉದಾ: ಈ ಪ್ರದೇಶದ ಶಾಸನಗಳಲ್ಲಿ ಮೊದಲ ಬಾರಿಗೆ ಕ್ರಿ.ಶ. 1426 ರಲ್ಲಿ ಈ ಪ್ರಾದೇಶಿಕ ವಿಭಾಗದ ಹೆಸರು ಉಲ್ಲೇಖವಾಗಿದೆ. ನಂತರ ಮತ್ತೆ ಮೂರು ಶಾಸನಗಳು ಇದನ್ನು ಉಲ್ಲೇಖಿಸಿವೆ :

1) ಘನ ಪೂರ್ವಾದ್ರೇರ್ಮರುಗಲ್ಲಾಖ್ಯ ನಾಡುಕೇ ಆನೆಪೀ ಅರ್ಪಿದುರ್ಗಸ್ಯ ವೆಂಠೆಗೇ ಸ್ಥಳವಾಸೀನೇ | ಗೂಳೂರಸ್ಯಸೀಮ್ನೋಂತ[4] (ಕ್ರಿ.ಶ. 1426ರಲ್ಲಿ)
2) ಮಗರನಾಡವೇಂಠೆಯ ಬೂದಿಹಾಳ ಸೀಮೆಯ.....[5] (ಕ್ರಿ.ಶ. 1556ರಲ್ಲಿ)
3) ಹೊಯಿಸಣ ರಾಜ್ಯೇ ಮಗರನಾಡ್ವೇಂಠೆ 1 ಹುಳೇರು ಸೀಮ್ನೆ ಶ್ರವಣಗೆರೆ....[6] (ಕ್ರಿ.ಶ.1559 ರಲ್ಲಿ)

4) ರಾಯದುರ್ಗದ ವೇಂಠೆಯಕೆ ಸಲುವ ದೇವನ ಸಿರಿಹದ ಸೀಮೆ....[7] (ಕ್ರಿ.ಶ. 1626ರಲ್ಲಿ)

5) ಮಗರನಾಡ ವೇಂಠೆಯಕೆ ಸಲುವ... ಭೂತಿಪುರದ ಸೀಮೆಯೊಳಗಣ...[8] (ಕ್ರಿ.ಶ.1636 ರಲ್ಲಿ)

ಮೇಲಿನ ಶಾಸನೋಕ್ತ ದಾಖಲೆಗಳನ್ನು ಪರಿಶೀಲಿಸಿದಾಗ ತುಮಕೂರು ಪ್ರದೇಶದಲ್ಲಿ ಪ್ರಮುಖವಾಗಿ ಎರಡು ವೇಂಠೆಗಳು ಉಲ್ಲೇಖವಾಗಿದ್ದು, ಇನ್ನೊಂದು ಪ್ರದೇಶ ರಾಯದುರ್ಗದ ವೇಂಠೆಗೆ ಸೇರಿತ್ತು. ಅಂದರೆ ಈ ತುಮಕೂರು ಪ್ರದೇಶದಲ್ಲಿ ಒಟ್ಟಾರೆ ಮಗರೆನಾಡ ವೇಂಠೆ ಮತ್ತು ಮರುಗಲೆನಾಡವೇಂಠೆ ಎಂಬುದು ವಿಜಯನಗರ ಕಾಲದ ಎರಡು ಮೇಲ್‌ಸ್ತರದ ಆಡಳಿತ ವಿಭಾಗಗಳಾಗಿದ್ದವು. ಈ ಎರಡೂ ಹೊಯ್ಸಳರ ಕಾಲದಲ್ಲಿ ನಾಡುಗಳಾಗಿದ್ದವು. ಅವುಗಳೇ ವಿಜಯನಗರ ಕಾಲದಲ್ಲಿ ವೇಂಠೆ ಎಂಬ ಹೊಸ ನಾಮಕರಣವನ್ನು ಪಡೆದು ಮುಂದುವರಿದುದು ವಿಶಿಷ್ಟವಾಗಿದೆ. ಮಗರೆ ನಾಡನ್ನು ಕ್ರಿ.ಶ. 1149 ಕ್ಕಿಂತ ಮೊದಲು ಮಗರೆ 300 ಎಂದೂ, 1226 ರಲ್ಲಿ ಇದನ್ನು ಮಗರೆ ರಾಜ್ಯವೆಂತಲೂ, ಹೊಯ್ಸಳರ ಮಗರ ರಾಜ್ಯ ನಿರ್ಮೂಲನ ಎಂಬ ಎರಡನೇ ನರಸಿಂಹನ ಬಿರುದು ಇದನ್ನು ಸಮರ್ಥಿಸುತ್ತದೆ. ಇದರ ರಾಜಧಾನಿ ಹುಳಿಯಾರು. ದೊರಕಿರುವ ಶಾಸನಗಳನ್ನು ಅವಲೋಕಿಸಿದಾಗ ಇದರ ವ್ಯಾಪ್ತಿಯು ಇಂದಿನ ಅರಸೀಕೆರೆ ತಾಲೂಕಿನ ಪೂರ್ವಭಾಗ, ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಿಪಟೂರು ತಾಲ್ಲೂಕುಗಳ ಪಶ್ಚಿಮಭಾಗ, ಚಿಕ್ಕ ಮಗಳೂರು ಜಿಲ್ಲೆಯ ಕಡೂರು ತಾಲೂಕಿನ ಪೂರ್ವಭಾಗಗಳನ್ನೊಳಗೊಂಡಿತ್ತು. ಹೆಚ್ಚು ಕಡಿಮೆ ಇಷ್ಟೇ ಪ್ರದೇಶಗಳು ಮಗರನಾಡವೇಂಠೆಗೆ ವಿಜಯನಗರ ಕಾಲದಲ್ಲೂ ಮುಂದು ವರೆದಿದ್ದವೆಂದು ಹೇಳಬಹುದು.

ಹೊಯ್ಸಳರ ಕಾಲದಲ್ಲಿ ಇಂದಿನ ಕುಣಿಗಲ್ ತಾಲ್ಲೂಕಿನ ದಕ್ಷಿಣ, ತುಮಕೂರು ತಾಲ್ಲೂಕು ಮತ್ತು ಗುಬ್ಬಿ ತಾಲ್ಲೂಕಿನ ಪಶ್ಚಿಮ ಭಾಗವನ್ನು ಮರುಗಲೆ ನಾಡು[9] ಎಂದು ಕರೆಯಲಾಗುತ್ತಿತ್ತು. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಈ ಮರುಗಲೆನಾಡನ್ನು ವೇಂಠೆಯಾಗಿ ಮಾಡಲಾಯಿತು. ಇದಕ್ಕೆ ಅನೆಬಿದ್ದಜರಿದುರ್ಗ ಕೇಂದ್ರವಾಯಿತು. ಒಟ್ಟಿನಲ್ಲಿ ವಿಜಯನಗರಪೂರ್ವ ಕಾಲದಲ್ಲಿ ಪ್ರಸಿದ್ಧಿಯಾಗಿದ್ದ ಈ ನಾಡುಗಳನ್ನೇ ಬದಲಾವಣೆ ಮಾಡದೆ ಆ ನಾಡುಗಳ ಹೆಸರಿನಲ್ಲೇ ಅವುಗಳನ್ನು ತಮ್ಮ ಆಡಳಿತ ವಿಭಾಗದ ವೇಂಠೆಯನ್ನಾಗಿ ಕರೆಯುತ್ತಿದ್ದುದು ವೈಶಿಷ್ಟ್ಯವಾಗಿದೆ.

ತುಮಕೂರು ಪ್ರದೇಶದ ಉತ್ತರ ಭಾಗಗಳು ಸಿರಾದ ಸೀಮೆಗೆ ವಿಜಯನಗರ ಕಾಲದಲ್ಲಿ ಸೇರಿದ್ದವು. ಇದು ಹೊಯ್ಸಳರ ಕಾಲದಲ್ಲಿ ನಾಡಿನ ಸ್ಥಾನಮಾನವನ್ನು ಪಡೆದುಕೊಂಡಿದ್ದರೂ ಅದನ್ನು ವಿಜಯನಗರ ಕಾಲದಲ್ಲಿ ವೇಂಠೆಯ ಸ್ಥಾನಮಾನಕ್ಕೆ ಹೆಚ್ಚಿಸದೆ ಅದನ್ನು ರಾಯದುರ್ಗದ ವೇಂಠೆಗೆ ಸೇರಿಸಲಾಯಿತು. ಒಟ್ಟಾರೆ ಹೇಳುವುದಾದರೆ

ತುಮಕೂರು ಪ್ರದೇಶವನ್ನು ವಿಜಯನಗರದ ಅರಸರು ಎರಡು ವೇಂಠೆಗಳನ್ನಾಗಿ ಮಾಡಿದ್ದರು. ಅದರ ಕೇಂದ್ರಗಳು ಈ ಪ್ರದೇಶದಲ್ಲಿ ಇದ್ದವು. ಉಳಿದ ಕೆಲ ಭಾಗಗಳು ಈ ಪ್ರದೇಶದ ವ್ಯಾಪ್ತಿಯಿಂದ ಹೊರಭಾಗಕ್ಕಿದ್ದ ವೇಂಠೆಗೆ ಸೇರಿದ್ದವೆಂದು ಹೇಳಬಹುದು.

ನಾಡು

ನಾಡು ಎಂದರೆ ದೊಡ್ಡ ವಿಭಾಗ, ಕಂಪಣವೆಂದರೆ ಸಣ್ಣ ವಿಭಾಗ ಎಂದು ವಿದ್ವಾಂಸರು ಈವರೆಗೆ ಅರ್ಥೈಸಿದ್ದಾರೆ. ಆದರೆ ಶಾಸನಗಳಲ್ಲಿ ನಾಡು ಎಂಬ ಪದವನ್ನು ದೊಡ್ಡ ಹಾಗೂ ಸಣ್ಣ ವಿಭಾಗಗಳಿಗೂ ಬಳಸಲಾಗಿದೆ.

ಉದಾಹರಣೆಗೆ.

1. ಶ್ರೀಮನ್ ಮಹಾಸಾಮಂತ ಗೋವಿದೇವ ಮಗರೆನಾಡು 300 ಮ
   ದುಷ್ಟನಿಗ್ರಹ ಶಿಷ್ಯ ಪ್ರತಿಪಾಳದಿಂ
   ಸುಖಸಂಕಥಾ ವಿನೋದದಿಂ ರಾಜ್ಯಂಗೆಯುತ್ತಿರೆ[10]
2. ಸಾಮಂತಗೋವಿದೇವ ಮಗರೆ 300 ದುಷ್ಟನಿಗ್ರಹ
   ಶಿಷ್ಟಪ್ರತಿಪಾಲನುಗ್ಯೆಯುತ್ತ ಹುಳಿಯರ್ ನೆಲೆವೀಡೆ
   ನೊಳು ಸುಖ ಸುಂಕಥಾ ವಿನೋದದಿಂದ ರಾಜ್ಯಂಗೆಯುತ್ತಿರೆ[11]

ಇಲ್ಲಿ ಮಗರೆ 300 ನ್ನು ನಾಡು ಎಂದು ಕರೆಯಲಾಗಿದೆ. ಹೀಗೆ ನಾಡು ಎಂಬ ಪದ ದೊಡ್ಡ ಮತ್ತು ಚಿಕ್ಕ ವಿಭಾಗಗಳಿಗೆ ಬಳಸಿರುವುದರಿಂದ ಅದು ಸ್ಥೂಲವಾಗಿ ಪ್ರದೇಶ ಎಂಬ ಅರ್ಥವನ್ನು ನಿರ್ದೇಶಿಸಲು ಬಳಸಿರಬಹುದು ಎಂದು ಹೇಳಬಹುದು. ಈ ಪದವನ್ನು ಹೊಯ್ಸಳರ ಕಾಲದಲ್ಲಿ ಹೇರಳವಾಗಿ ಬಳಸಲಾಗಿದೆ. ಆದರೂ ಈ ಪದವನ್ನು ಹೊಯ್ಸಳರ ನಂತರ ಬಂದ ವಿಜಯನಗರದ ಚಕ್ರವರ್ತಿಗಳು ಮುಂದುವರಿಸಿದರೂ ಅದನ್ನು ಕಡಿಮೆ ಪ್ರಮಾಣದಲ್ಲಿ ಬಳಸಿರುವುದನ್ನು ಕಾಣುತ್ತೇವೆ. ಇಂತಹ ವಿಜಯನಗರ ಕಾಲದ ತುಮಕೂರು ಪ್ರದೇಶದ ನಾಡುಗಳನ್ನು ಕೆಳಗಿನ ಪಟ್ಟಿಯಿಂದ ಈ ರೀತಿ ಸಂಗ್ರಹಿಸಬಹುದು.

ಕ್ರ.ಸಂ.	ನಾಡಿನ ಹೆಸರು	ಕಾಲ	ಉಲ್ಲೇಖ
1.	ಚೀಳೂರು ನಾಡು	ಕ್ರಿ.ಶ. 1403	ಎಕ 12 ಶಿರಾ 95
2.	ಕೊರದನಾಡು (ಕೋರಾ)	ಕ್ರಿ.ಶ. 1496	ಎಕ 12 ಮಧುಗಿರಿ 33
3.	ಚೆಲೆಮಾಲುಕಿನಾಡು	ಕ್ರಿ.ಶ. 1554	ಎಕ 12 ಮಧುಗಿರಿ 78
4.	ಹೊಯ್ಸಳನಾಡು	ಕ್ರಿ.ಶ. 1662	ಎಕ 12 ಕುಣಿಗಲ್ 37
		ಕ್ರಿ.ಶ. 1663	ಎಕ 12 ಕುಣಿಗಲ್ 33
5.	ಸೀರೇನಾಡು	ಕ್ರಿ.ಶ. 1773	ಎಕ 12 ಶಿರಾ 62

ಮೇಲ್ಕಾಣಿಸಿದ ಪಟ್ಟಿಯಲ್ಲಿನ ಸಿರಾ ನಾಡು ಮತ್ತು ಕೊರಾ ನಾಡುಗಳು ಹೊಯ್ಸಳರ ಕಾಲದಲ್ಲೂ ಕಾಣಿಸಿಕೊಂಡಿವೆ. ಸಿರಾ ನಾಡುವಿನ ಮೊದಲ ಉಲ್ಲೇಖ ಕ್ರಿ.ಶ. 1040ರಲ್ಲಿ ದಾಖಲಾಗಿದ್ದು, ಅದು 1773ರವರೆಗೂ ಮುಂದುವರಿದಿದೆ. ಆದುದರಿಂದ ವಿಜಯನಗರ ಕಾಲದಲ್ಲಿಯೂ ಕೂಡಾ ರಾಜಕೀಯವಾಗಿ ಪ್ರಮುಖ ಕೇಂದ್ರವಾಗಿದ್ದ ಇದನ್ನು ಹಾಗೆಯೇ ಮುಂದುವರಿಸಲಾಯಿತು. ಅದೇ ರೀತಿ ಕೋರಾವೂ ಕೂಡ ಹೊಯ್ಸಳರ ಕಾಲದಲ್ಲಿ ನಾಡುವಿನ ಸ್ಥಾನಮಾನವನ್ನು ಗಳಿಸಿದ್ದು ವಿಜಯನಗರ ಕಾಲದಲ್ಲಿ ಕೂಡ ಅದು ಮುಂದುವರಿದು ರಾಜಕೀಯವಾಗಿ ಪ್ರಮುಖ ಪಾತ್ರ ವಹಿಸಿ ಒಂದು ಪಾಳೆಯಪಟ್ಟಿನ ಕೇಂದ್ರವಾಯಿತು.

ಸೀಮೆ

ವಿಜಯನಗರ ಸಾಮ್ರಾಜ್ಯದ ಆಡಳಿತದ ಮತ್ತೊಂದು ಭಾಗವೆಂದರೆ ಸೀಮೆ. ಹಲವಾರು ಸ್ಥಳಗಳನ್ನು ಒಟ್ಟುಗೂಡಿಸಿ ಸೀಮೆ ಎಂದು ಕರೆಯಲಾಗುತ್ತಿತ್ತು. ಇದು ನಾಡು ಎಂಬ ಪದಕ್ಕೆ ಪರ್ಯಾಯಪದ ಎಂತಲೂ, ನಾಡು ಎಂಬುದು ಕರ್ನಾಟಕದ ಪ್ರದೇಶಗಳಲ್ಲಿ ಹೆಚ್ಚು ಬಳಕೆಯಲ್ಲಿದ್ದ ಪದವೆಂತಲೂ, ಸೀಮೆ ಎಂಬುದು ತೆಲುಗು ಪ್ರದೇಶದಲ್ಲಿ ಹೆಚ್ಚು ಪ್ರಚಲಿತವಿದ್ದ ಸಮಾನಸ್ತರದ ಪ್ರಾದೇಶಿಕ ವಿಭಾಗವೆಂತಲೂ ಎ.ವಿ.ವೆಂಕಟರತ್ನಂರವರು ಅಭಿಪ್ರಾಯಪಡುತ್ತಾರೆ[12]. ಆದರೂ ಕೆಲವು ಕಡೆ ಸೀಮೆ ಎಂಬುದು ನಾಡಿನ ಒಂದು ಉಪವಿಭಾಗವಾಗಿ ಕ್ವಚಿತ್ತಾಗಿ ಪ್ರಯೋಗಗೊಂಡಿದೆ. ಈ ಪ್ರದೇಶದ ಶಾಸನಗಳನ್ನು ಅಧ್ಯಯನ ಮಾಡಿದಾಗ ವಿಜಯನಗರ ಕಾಲಾವಧಿಯಲ್ಲಿ ಒಟ್ಟು 17 ಸೀಮೆಗಳು ಉಲ್ಲೇಖಗೊಂಡಿವೆ. ಅವುಗಳನ್ನು ಈ ರೀತಿ ಸಂಗ್ರಹಿಸಬಹುದು.

ಕ್ರ.ಸಂ.	ನಾಡಿನ ಹೆಸರು	ಕಾಲ	ಉಲ್ಲೇಖ
1.	ತುಮಕೂರು ಸೀಮೆ	1404	ಎಕ 12 ಗುಬ್ಬಿ 46
	ತುಮಕೂರು ಸೀಮೆ	1554	ಹೊಸ ಶಾಸನ ಅರಕೆರೆ ಬಳಿ ಸಿಕ್ಕಿದೆ
2.	ಗೂಳೂರ ಸೀಮೆ	1426	ಎಕ 12 ತುಮಕೂರು 11
3.	ಮಿಡಿಗೇಶಿ ಸೀಮೆ	1500	ಎಕ 12 ತುಮಕೂರು 106
4.	ಸಿಡಗಲ್ ಸೀಮೆ	1515	ಎಕ 12, ಪಾವಗಡ 62
		1557	ಎಕ 12, ಶಿರಾ 31
		1671	ಪಾವಗಡ 46
5.	ರಾಮನಾಯ್ಕನಹಳ್ಳಿ ಸೀಮೆ	1516	ಎಕ 12 ಮಧುಗಿರಿ 58

6.	ಬಿದುರೆಯ ಸೀಮೆ	1523	ಎಕ 12 ಗುಬ್ಬಿ 51
		1572	ಎಕ 12 ಗುಬ್ಬಿ 17
		1682	ಎಕ 12 ಗುಬ್ಬಿ 52
7.	ನೊಣಬನಕೆರೆ ಸೀಮೆ	1523	ಎಕ 12 ತಿಪಟೂರು 50
8.	ಯಲೆಯೂರ ಸೀಮೆ	1525	ಎಕ 12 ಕುಣಿಗಲ್ 23
9.	ಶೆಟ್ಟಿಕೆರೆ ಸೀಮೆ	1529	ಎಕ 16 ಚಿಕ್ಕನಾಯಕನಹಳ್ಳಿ 83
10.	ಕಂದಿಕೆರೆ ಸೀಮೆ	1534	ಎಕ 12 ಚಿ.ನಾ.ಹಳ್ಳಿ 44
11.	ಕೋಳಾಲ ಸೀಮೆ	1539	ಎಕ 12 ತುಮಕೂರು 50
		1543	ಎಕ 12 ತುಮಕೂರು 50
12.	ಹೊಂನವಳಿ ಸೀಮೆ (ಹೊನ್ನವಳ್ಳಿ)	1548	ಎಕ 12 ತಿಪಟೂರು 129
13.	ಸಂಪಗೆಯ ಸೀಮೆ (ಸಂಪಿಗೆ)	1550	ಎಕ 12 ತಿಪಟೂರು 6
14.	ಹುಳೇರು ಸೀಮೆ (ಹುಳಿಯಾರು)	1622	ಎಕ 12 ಚಿ.ನಾ.ಹಳ್ಳಿ 39
15.	ದೇವಣಶೀರ‍್ಯದ ಸೀಮೆ (ಸಿರಾ)	1622	ಎಕ 12 ಶಿರಾ 48
16.	ಬರಗೂರು ಸೀಮೆ	1660	ಎಕ 12 ಶಿರಾ 48
17.	ಕೊರಟಗೆರೆ ಸೀಮೆ	1681	ಎಕ 12 ಮದ್ದಗಿರಿ 45
18.	ಶೂರಗಿರಿ ಸೀಮೆ (ದೇವರಾಯನದುರ್ಗ)	1720	ಎಕ 12 ತುಮಕೂರು 47
19.	ಬೂದಿಹಾಳು ಸೀಮೆ	1525	ಎಕ 12 ಚಿ.ನಾ.ಹಳ್ಳಿ 10
		1555	ಎಕ 12 ಚಿ.ನಾ.ಹಳ್ಳಿ 6
		1573	ಎಕ 12 ಚಿ.ನಾ.ಹಳ್ಳಿ 8

ಈ ಸೀಮೆಗಳಲ್ಲಿ ಬೂದಿಹಾಳು ಸೀಮೆ ವಿಶಾಲವಾಗಿತ್ತು. ಇದು ಮೊದಲು ತುಮಕೂರು ಜಿಲ್ಲೆಗೆ ಸೇರಿದ್ದು, ಇಂದು ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿಗೆ ಸೇರಿದೆ. ಈ ಬೂದಿಹಾಳನ್ನು ವಿಜಯನಗರ ಕಾಲದಲ್ಲಿ ಸೀಮೆಯನ್ನಾಗಿ ಮಾಡಿ ಅದನ್ನು ಸದಾಶಿವರಾಯನು ಕ್ರಿ.ಶ. 1556 ಶಾಸನದ ಉಲ್ಲೇಖದಂತೆ ಶ್ರೀ ಮನ್ಮಹಾಮಂಡಲೇಶ್ವರ ಶ್ರೀ ಪತಿರಾಜ ರಂಗಯ್ಯ ದೇವ ಮಹಾ ಅರಸರಿಗೆ ಅಮರ ನಾಯಕತನಕ್ಕೆ ನೀಡಿದ್ದನು. ಅವನ ನಂತರ ಇದನ್ನು ಅವನ ಮಗನಾದ ಶ್ರೀಪತಿರಾಜ ವಲ್ಲಭರಾಜಯ್ಯ

ದೇವ ಮಹಾ ಅರಸರಿಗೆ 1574 ರಲ್ಲಿ ನೀಡಲಾಯಿತು. ಈ ಸೀಮೆಯು ಬಹಳ ವಿಸ್ತಾರವಾಗಿದ್ದು, ಅದಕ್ಕೆ ಇಂದಿನ ಬೂದಿಹಾಳು, ತೇಖಲವಟ್ಟಿ, ನೇರಳಕೆರೆ, ಹೆಗ್ಗೆರೆ, ಹೆಂಣವೆಗೆರೆ, ಹೊಸಹಳ್ಳಿ, ತಂಡಗ, ಮಾಳವನಹಳ್ಳಿ, ಬೆಲಗೂರು, ಸಿಂಗಟಿಗೆರೆ, ಕಂಚಿಗಲ್ ಗ್ರಾಮಗಳು ಸಮಾವೇಶಗೊಂಡಿದ್ದವೆಂದು ಶಾಸನಗಳು ಉಲ್ಲೇಖಿಸಿವೆ[13]. ಅಲ್ಲದೆ ಇದು ಕ್ರಿ.ಶ. 1535 ರ ಶಾಸನದಂತೆ ಬಯಕಾರ ರಾಮಪ್ಪನ ಅಮರ ಮಾಗಣೆಗೆ ಸೇರಿದ ಗ್ರಾಮವಾಗಿತ್ತೆಂದೂ ಕಲ್ಲಕರೆ, ಹಿರಿಯೂರು ಗ್ರಾಮಗಳು ಈ ಸೀಮೆಯ ಊರುಗಳಾಗಿದ್ದವೆಂದು ಹೊಳಲ್ಕೆರೆ ತಾಲ್ಲೂಕಿನ ಶಾಸನವು ತಿಳಿಸುತ್ತದೆ[14]. ಹಾಗೆಯೇ ಬೂದಿಹಾಳಿನಲ್ಲಿ ದೊರೆತಿರುವ ಕ್ರಿ.ಶ. 1535ರ ಶಾಸನವೂ ಕೂಡ ಬಯಕಾರ ರಾಮಪ್ಪ ನವರು ತಮ್ಮ ಬೂದಿಹಾಳು ಸೀಮೆಯ ಮದುವೆಯ ಸುಂಕವನ್ನು ಅಚ್ಯುತದೇವ ಮಹಾ ರಾಯರಿಗೆ ದಾನ ನೀಡಿದ ವಿಷಯ ಪ್ರಸ್ತಾಪಗೊಂಡಿದೆ.[15] ಇವುಗಳನ್ನೆಲ್ಲಾ ಪರಿಶೀಲಿಸಿ ದಾಗ ಬೂದಿಹಾಳು ಸೀಮೆಯನ್ನು ಮೊದಲು ಬಯಕಾರ ರಾಮಪ್ಪನಿಗೆ ಅಮರ ಮಾಗಣಿ ಯಾಗಿ ನೀಡಿದ್ದು ನಂತರ ಮಹಾಮಂಡಲೇಶ್ವರರಿಗೆ ನೀಡಿದ್ದು, ಗೊತ್ತಾಗುತ್ತದೆ. ಇದು ಇಂದಿನ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕೆಲಭಾಗಗಳು ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನ ಪೂರ್ವಭಾಗ, ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕು ಹಿರಿಯೂರು ತಾಲ್ಲೂಕಿನ ಕೆಲಭಾಗದವರೆಗೂ ವ್ಯಾಪಿಸಿತ್ತು. ಇಂತಹ ದೊಡ್ಡ ಸೀಮೆಗೆ ರಾಜಮನೆತನದವರನ್ನೇ ಅಮರ ನಾಯಕರನ್ನಾಗಿ ಮಾಡಿದ್ದು ಗೊತ್ತಾಗುತ್ತದೆ. ಅಲ್ಲದೆ ಬೂದಿಹಾಳು ಹಿಂದೆ ಸಿರುಮನಾಯಕನ ಅಧೀನದಲ್ಲಿದ್ದು ಬಲಿಷ್ಠವಾದ ರಾಜ್ಯವಾಗಿತ್ತು. ಅವನು ಸಾಳುವ ನರಸಿಂಹನ ವಿರುದ್ಧವೇ ಹೋರಾಡಿದ್ದನು. ಅವರ ಕಾಲದಲ್ಲಿಯೂ ಕೂಡ ಬೂದಿಹಾಳು ಇಷ್ಟೊಂದು ವ್ಯಾಪಿಸಿತ್ತು. ಅದನ್ನು ಬದಲಾವಣೆ ಇಲ್ಲದೆ ಮುಂದುವರಿಸಲಾಗಿದೆ. ಅಲ್ಲದೆ ಇದು ಮಗರನಾಡ ವೇಂಠೆಗೆ ಸೇರಿದ್ದ ಸೀಮೆಯಾಗಿತ್ತು.

ಮೇಲ್ಕಾಣಿಸಿದ ಪಟ್ಟಿಯಲ್ಲಿ ಹೆಸರಿಸಲಾದ ಸೀಮೆಗಳಲ್ಲಿ ಶೂರಗಿರಿ, ಬಿದುರೆ, ರಾಮನಾಯ್ಕನಹಳ್ಳಿ, ಯಲೆಯೂರು, ಸಂಪಿಗೆ ಮತ್ತು ಬರಗೂರು ಇಂದು ಗ್ರಾಮದ ಸ್ಥಾನಮಾನವನ್ನು ಪಡೆದುಕೊಂಡಿವೆ. ತುಮಕೂರು ಜಿಲ್ಲಾ ಕೇಂದ್ರವಾಗಿದ್ದು ಕೊರಟಗೆರೆ, ಸಿರಾ ತಾಲ್ಲೂಕು ಕೇಂದ್ರಗಳಾಗಿವೆ. ಉಳಿದವು ಹೋಬಳಿಗಳಾಗಿರುವುದು ಗಮನಾರ್ಹ ವಾಗಿದೆ. ಆದುದರಿಂದ ತುಮಕೂರು ಪ್ರದೇಶದಲ್ಲಿ ಶಾಸನಗಳಲ್ಲಿ ಉಲ್ಲೇಖವಾಗಿರುವ ಸೀಮೆಗಳು ಇಂದು ಎಷ್ಟು ಪ್ರದೇಶ ವ್ಯಾಪ್ತಿಯನ್ನು ಪಡೆದಿವೆಯೋ ಹೆಚ್ಚು ಕಡಿಮೆ ಅಂದೂ ಅಷ್ಟೇ ವ್ಯಾಪ್ತಿಯನ್ನು ಹೊಂದಿರಬಹುದೆಂದು ಹೇಳಬಹುದು. ಏಕೆಂದರೆ ತುಮಕೂರು ಜಿಲ್ಲೆಯಲ್ಲಿ ಇಂದು ಹತ್ತು ತಾಲ್ಲೂಕುಗಳಿರುವುದು ಇದಕ್ಕೆ ಪೂರಕ ಸಮರ್ಥನೆಯನ್ನು ನೀಡುತ್ತದೆ. ಆದ್ದರಿಂದ ಸೀಮೆಯು ಪ್ರಾಯಶಃ ಹೆಚ್ಚು ಕಡಿಮೆ ಇಂದಿನ ತಾಲ್ಲೂಕಿನಷ್ಟೆ ವಿಸ್ತಾರವಾಗಿದ್ದಿರಬಹುದು. ಅದನ್ನು ಹೀಗೆ ಈ ಕೋಷ್ಟಕದ ಮೂಲಕ ತೋರಿಸಬಹುದು.

ಸೀಮೆಗಳ ಇಂದಿನ ಸ್ಥಾನಮಾನ

ತುಮಕೂರು ತಾಲ್ಲೂಕು	ಮಧುಗಿರಿ ತಾಲ್ಲೂಕು	ಪಾವಗಡ ತಾಲ್ಲೂಕು
1) ತುಮಕೂರು (ಇಂದು ಜಿಲ್ಲಾ ಕೇಂದ್ರ) 2) ಗೂಳೂರು (ಹೋಬಳಿಯಾಗಿದೆ) 3) ಶೂರಗಿರಿ (ಗ್ರಾಮ)	2) ಮಿಡಗೇಶಿ (ಹೋಬಳಿಯಾಗಿದೆ)	ನಿಡುಗಲ್ (ಹೋಬಳಿಯಾಗಿದೆ)

ಕೊರಟಗೆರೆ ತಾಲ್ಲೂಕು	ಗುಬ್ಬಿ ತಾಲ್ಲೂಕು	ತಿಪಟೂರು ತಾಲ್ಲೂಕು	ಕುಣಿಗಲ್ ತಾಲ್ಲೂಕು
1) ಕೊರಟಗೆರೆ (ತಾಲ್ಲೂಕು ಕೇಂದ್ರ) 2) ಕೋಳಾಲ (ಹೋಬಳಿಯಾಗಿದೆ) 3) ರಾಮನಾಯ್ಕನಹಳ್ಳಿ (ಗ್ರಾಮ)	1) ಬಿದುರೆ (ಗ್ರಾಮ)	1) ನೊಣವಿನಕೆರೆ 2) ಹೊಂನವಳ್ಳಿ (ಹೋಬಳಿ)	1) ಯಲಿಯೂರು (ಗ್ರಾಮವಾಗಿದೆ)

ಚಿ.ನಾ.ಹಳ್ಳಿ ತಾಲ್ಲೂಕು	ತುರುವೇಕೆರೆ ತಾ.	ಸಿರಾ ತಾಲ್ಲೂಕು	ಹೊಸದುರ್ಗ ತಾ.
1) ಕಂದಿಕೆರೆ (ಹೋಬಳಿಯಾಗಿದೆ) 2) ಹುಳಿಯಾರು (ಹೋಬಳಿಯಾಗಿದೆ) 3) ಶೆಟ್ಟಿಕೆರೆ (ಹೋಬಳಿ)	1) ಸಂಪಿಗೆ (ಗ್ರಾಮ)	1) ಸಿರಾ (ತಾಲ್ಲೂಕು ಕೇಂದ್ರ) 2) ಬರಗೂರು (ಗ್ರಾಮ)	1) ಬೂದಿಹಾಳು (ಹೋಬಳಿ)

ಈ ವಿಜಯನಗರ ಕಾಲದ ಸೀಮೆಗಳ ವ್ಯಾಪ್ತಿಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಅವುಗಳನ್ನು ಈ ಪ್ರದೇಶದಲ್ಲಿ ಉಲ್ಲೇಖವಾಗಿರುವ ಎರಡೂ ವೇಂಠೆಗಳಿಗೂ, ಅದರ ವ್ಯಾಪ್ತಿಯನ್ನು ವಿದ್ವಾಂಸರು ಗುರ್ತಿಸಿರುವ ಪ್ರಕಾರ ಹಂಚಬಹುದಾಗಿದೆ. ಉದಾಹರಣೆಗೆ **ಮಗರನಾಡು ವೇಂಠೆಗೆ** ಹೊಂನವಳ್ಳಿ, ನೊಣವಿನಕೆರೆ, ಕಂದಿಕೆರೆ, ಹುಳಿಯಾರು ಸಂಪಿಗೆ, ಬೂದಿಹಾಳು ಸೀಮೆಗಳೂ **ಮರುಗಲೆನಾಡು ವೇಂಠೆಗೆ**, ತುಮಕೂರು, ಗೂಳೂರು ಶೂರಗಿರಿ, ಮಿಡಿಗೇಶಿ, ಬಿದುರೆ, ಕೊರಟಗೆರೆ, ಕೋಳಾಲ, ಯಲಿಯೂರು ಸೀಮೆಗಳು ಅಂತರ್ಗತವಾಗಿರಬಹುದು. ಸಿರಾ, ಬರಗೂರು ನಿಡುಗಲ್ ಸೀಮೆಗಳು ರಾಯದುರ್ಗ ವೇಂಠೆಗೂ ಸೇರಿರಬಹುದು ಎನ್ನಬಹುದು. ಮಗರನಾಡು ವೇಂಠೆಯ ವ್ಯಾಪ್ತಿ ಹೆಚ್ಚಿರುವುದರಿಂದ ಅದಕ್ಕೆ ಇನ್ನೂ ಹೆಚ್ಚು ಬೇರೆ ಪ್ರದೇಶದ ಸೀಮೆಗಳು ಸೇರಿವೆ.

ಒಟ್ಟಿನಲ್ಲಿ ಹೇಳುವುದಾದರೆ ತುಮಕೂರು ಪ್ರದೇಶದಲ್ಲಿ ವಿಜಯನಗರ ಕಾಲಾವಧಿಯಲ್ಲಿ ಉಲ್ಲೇಖಗೊಂಡಿರುವ ಸೀಮೆ ಎಂಬ ಪದವು ಅವರ ಆಡಳಿತ

ವಿಭಾಗಕ್ಕೆ ಪ್ರಯೋಗವಾದ ಪದವಾಗಿದ್ದು ಅದು ಈ ಪ್ರದೇಶದ ಶಾಸನಗಳಲ್ಲಿ 1400ರ ನಂತರ ಕಾಣಿಸಿಕೊಂಡಿದೆ. ಈ ಪ್ರದೇಶದ 1400ರ ಹಿಂದಿನ ಕೇವಲ ಎರಡು ಶಾಸನಗಳಲ್ಲಿ ಉಲ್ಲೇಖವಾದ ಈ ಪದವನ್ನು ಎಲ್ಲೆ ಎಂಬ ಅರ್ಥದಲ್ಲಿ ಪ್ರಯೋಗಿಸಲಾಗಿದೆ.

ಸ್ಥಳ

ವೇಂಠೆ ಮತ್ತು ಸೀಮೆನಾಡು ಅಲ್ಲದೆ ಈ ಪ್ರದೇಶದ ಶಾಸನಗಳು ಇನ್ನೊಂದು ಆಡಳಿತ ವಿಭಾಗವಾದ ಸ್ಥಳವನ್ನು ಕೂಡ ಉಲ್ಲೇಖಿಸಿವೆ. ಸ್ಥಳವೆಂದರೆ ಅನೇಕ ಗ್ರಾಮಗಳ ಸಮೂಹ. ಒಂದು ಸ್ಥಳದಲ್ಲಿ ಏಳರಿಂದ ಐವತ್ತೇಳು ಗ್ರಾಮಗಳು ಇರುವವು ಎಂದು ಹೇಳಲಾಗಿದೆ. ಆದರೆ ಸಾಮಾನ್ಯವಾಗಿ ಏಳರಿಂದ ಎಂಟು ಗ್ರಾಮಗಳನ್ನು ಒಳಗೊಂಡಿರುವ ಆಡಳಿತ ವಿಭಾಗವನ್ನು ಸ್ಥಳವೆನ್ನಬಹುದು.[16] ಇದೊಂದು ಪ್ರದೇಶವಾಚಕ ಪದವಾಗಿದ್ದು, ತಮಿಳುನಾಡಿನಲ್ಲಿ ಪೆರ್ರು ಎಂದರೆ ಕನ್ನಡದಲ್ಲಿ ಸ್ಥಳ ಎನ್ನಲಾಗಿದೆ. ಈ ಪ್ರದೇಶದ ಶಾಸನಗಳನ್ನು ಪರಿಶೀಲಿಸಿದರೆ ಅನೇಕ ಸ್ಥಳಗಳನ್ನು ಗುರ್ತಿಸಬಹುದು. ಅವುಗಳನ್ನು ಪಟ್ಟಿಯಲ್ಲಿ ಹೀಗೆ ಸಂಗ್ರಹಿಸಬಹುದು.

ಕ್ರ.ಸಂ.	ಸ್ಥಳದ ಹೆಸರು	ಕಾಲ	ಶಾಸನ ಸಂಖ್ಯೆ
1.	ಹೆರೂರು ಸ್ಥಳ	ಕ್ರಿ.ಶ. 1381	ಎಕ 12 ಕುಣಿಗಲ್ 43
2.	ತುರುವೇಕೆರೆ ಸ್ಥಳ	ಕ್ರಿ.ಶ. 1388	ಎಕ 12 ತಿಪಟೂರು 9
3.	ಬಿಜಾವರದ ಸ್ಥಳ	ಕ್ರಿ.ಶ. 1418	ಎಕ 12 ಮಧುಗಿರಿ 20
4.	ಹೊಂನವಳಿಯ ಸ್ಥಳ	ಕ್ರಿ.ಶ. 1437	ಎಕ 12 ತಿಪಟೂರು 137
5.	ಕಂದಿಕೆರೆ ಸ್ಥಳ	ಕ್ರಿ.ಶ. 1590	ಎಕ 12 ಚಿ.ನಾ.ಹಳ್ಳಿ 103
		ಕ್ರಿ.ಶ. 1763	ಎಕ 12 ಚಿ.ನಾ.ಹಳ್ಳಿ 45
6.	ಯೆಲೆಯೂರ ಸ್ಥಳ	ಕ್ರಿ.ಶ. 15	ಎಕ 12 ಕುಣಿಗಲ್ 25
7.	ನಾಡರಕಟ (ನಾಗರಘಟ್ಟ) ಸ್ಥಳ	ಕ್ರಿ.ಶ. 1515	ಎಕ 12 ತಿಪಟೂರು 50
8.	ತಯಿಲಗೆರೆಯ ಸ್ಥಳ	ಕ್ರಿ.ಶ. 1554	ಎಕ 12 ಪಾವಗಡ 39
9.	ಬಜಗೂರ ಸ್ಥಳ	ಕ್ರಿ.ಶ. 1561	ಎಕ 12 ತಿಪಟೂರು 53
10.	ತುಮಕೂರು ಸ್ಥಳ	ಕ್ರಿ.ಶ. 1563	ಎಕ 12 ತುಮಕೂರು 44
11.	ಆನೆಬಿದ್ದಜರಿ ಸ್ಥಳ	ಕ್ರಿ.ಶ. 1571	ಎಕ 12 ತುಮಕೂರು 1

		ಕ್ರಿ.ಶ. 1699	ಎಕ 12 ತುಮಕೂರು 45
12.	ಸೀರ್‍ಯದ ಸ್ಥಳ	ಕ್ರಿ.ಶ. 1591	ಎಕ 12 ಶಿರಾ 92
13.	ಯಲೆಯೂರು ಸ್ಥಳ	ಕ್ರಿ.ಶ. 1591	ಎಕ 12 ಶಿರಾ 92
14.	ಬುಕ್ಕಪಟ್ಣದ ಸ್ಥಳ	ಕ್ರಿ.ಶ. 1591	ಎಕ 12 ಶಿರಾ 1
15.	ಕೊರಟಗೆರೆ ಸ್ಥಳ	ಕ್ರಿ.ಶ. 1656	ಎಕ 12 ಮಧುಗಿರಿ 31
16.	ಅಮೃಂತೂರ ಸ್ಥಳ	ಕ್ರಿ.ಶ. 1663	ಎಕ 12 ಕುಣಿಗಲ್ 33
17.	ಕುಣಿಗಲ್ ಸ್ಥಳ	ಕ್ರಿ.ಶ. 1665	ಎಕ 12 ಕುಣಿಗಲ್ 46
18.	ಕೊತ್ತಂಗೆರೆ ಸ್ಥಳ	ಕ್ರಿ.ಶ. 1671	ಎಕ 12 ಕುಣಿಗಲ್ 4
19.	ಹುಲಿಯೂರು ದುರ್ಗ ಸ್ಥಳ	ಕ್ರಿ.ಶ. 1765	ಎಕ 12 ಕುಣಿಗಲ್ 36
20.	ಹೊಸೂರು ಸ್ಥಳ	ಕ್ರಿ.ಶ. 1773	ಎಕ 12 ಶಿರಾ 62
21.	ಬೂದಿಹಾಳು	ಕ್ರಿ.ಶ. 1747	ಎಕ 16 ಚಿ.ನಾ.ಹಳ್ಳಿ 94

ಹೀಗೆ ಈ ಪ್ರದೇಶದಲ್ಲಿ ಒಟ್ಟು 20 ಸ್ಥಳಗಳನ್ನು ಶಾಸನಗಳ ಸಹಾಯದಿಂದ ಗುರ್ತಿಸಬಹುದು. ಆದರೆ ಈ ಆಡಳಿತ ಘಟಕಗಳ ಸ್ಥಾನಮಾನ ಮತ್ತು ವ್ಯಾಪ್ತಿಯಲ್ಲಿ ಬದಲಾವಣೆಯಾಗಿರುವುದು ಸೀಮೆಯ ಪಟ್ಟಿಯನ್ನು ಸ್ಥಳದ ಪಟ್ಟಿಯ ಜೊತೆ ಹೋಲಿಸಿ ನೋಡಿದರೆ ಗೊತ್ತಾಗುತ್ತದೆ. ಉದಾಹರಣೆಗೆ ಬದಲಾವಣೆಗೊಂಡ ಆಡಳಿತ ಘಟಕಗಳು ಹೀಗಿವೆ: **ತುಮಕೂರು** ಕ್ರಿ.ಶ. 1554 ರಲ್ಲಿ ಸೀಮೆಯಾಗಿದ್ದರೆ ಅದು 1563 ರಲ್ಲಿ ಸ್ಥಳವಾಯಿತು. ಅದೇ ರೀತಿ **ಕಂದಿಕೆರೆ** 1534ರಲ್ಲಿ ಸೀಮೆಯಾಗಿದ್ದುದು 1590 ರಲ್ಲಿ **ಸ್ಥಳವಾಗಿಯೂ**, ಬೂದಿಹಾಳು ಕ್ರಿ.ಶ. 1525ರಲ್ಲಿ ಸೀಮೆಯಾಗಿದ್ದುದು ಕ್ರಿ.ಶ.1747 ರಲ್ಲಿ ಸ್ಥಳವಾಗಿ ಬದಲಾದುದು ಶಾಸನಗಳಿಂದ ತಿಳಿಯುತ್ತದೆ. ಆದುದರಿಂದ ಮೊದಲು ಸೀಮೆಯಾದ ಕೇಂದ್ರಗಳು ಕೆಲ ಕಾಲಾ ನಂತರ ತಮ್ಮ ಪ್ರಾಮುಖ್ಯತೆಯನ್ನು ಕಳೆದುಕೊಂಡ ಮೇಲೆ ವಿಜಯನಗರದವರು ಅವುಗಳನ್ನು ಸ್ಥಳದ ಸ್ಥಾನಮಾನಕ್ಕೆ ಇಳಿಸಿದರೆನ್ನಬಹುದು. ಹಾಗೆಯೇ ಕೆಲವು ಸ್ಥಳಗಳು ತಮ್ಮ ಪ್ರಾಮುಖ್ಯತೆಯನ್ನು ಹೆಚ್ಚಿಸಿಕೊಂಡಾಗ ಅವು ಸೀಮೆಯ ಸ್ಥಾನಮಾನವನ್ನು ಪಡೆದುಕೊಂಡಿವೆ.

ಉದಾಹರಣೆಗೆ

1) ಯಲೆಯೂರು ಕ್ರಿ.ಶ. 1515ರಲ್ಲಿ ಸ್ಥಳವಾಗಿದ್ದುದು ಕ್ರಿ.ಶ. 1525 ರಲ್ಲಿ ಸೀಮೆಯಾಗಿಯೂ

2) ಹೊಂನವಳ್ಳಿಯು ಕ್ರಿ.ಶ. 1437ರಲ್ಲಿ ಸ್ಥಳವಾಗಿದುದ್ದು 1548 ರಲ್ಲಿ ಸೀಮೆಯಾಗಿಯೂ,

3) ಸಂಪಿಗೆಯು ಕ್ರಿ.ಶ. 1336ರಲ್ಲಿ ಸ್ಥಳವಾಗಿದ್ದು, ಕ್ರಿ.ಶ. 1550 ರಲ್ಲಿ ಸೀಮೆಯಾಗಿಯೂ

4) ಸಿರಾವು 1591ರಲ್ಲಿ ಸ್ಥಳವಾಗಿದ್ದರೆ 1622 ರಲ್ಲಿ ಸೀಮೆಯಾಗಿಯೂ

5) 1656ರಲ್ಲಿ ಸ್ಥಳವಾಗಿದ್ದ ಕೊರಟಗೆರೆ 1681ರಲ್ಲಿ ಸೀಮೆಯಾಗಿಯೂ ಬದಲಾದವು.

ಒಟ್ಟಾರೆ ಹೇಳುವುದಾದರೆ ವಿಜಯನಗರದ ಚಕ್ರವರ್ತಿಗಳು ಕೆಳಸ್ತರಗಳಲ್ಲಿಯೂ ಆಡಳಿತದ ವಿಭಾಗಗಳನ್ನು ಅನುಕೂಲಕ್ಕೆ ತಕ್ಕಂತೆ ಪುನರ್ ವಿಂಗಡಣೆ ಮಾಡುತ್ತಿದ್ದರೆಂದು ಹೇಳಬಹುದು. ಗ್ರಾಮವೇ ಆಡಳಿತ ವಿಭಾಗದ ಕೊನೆಯ ಹಂತವಾಗಿತ್ತು.

ಒಟ್ಟಿನಲ್ಲಿ ತುಮಕೂರು ಪ್ರದೇಶದ ವಿಜಯನಗರ ಕಾಲದ ಆಡಳಿತ ವಿಭಾಗಗಳಿಂದ ಹೊರಹೊಮ್ಮುವ ಅಂಶಗಳು ಹೀಗಿವೆ:

1) ವಿಜಯನಗರಪೂರ್ವಕಾಲದ ಪ್ರಾಂತೀಯ ವ್ಯವಸ್ಥೆಯಾದ ನಾಡು, ಸೀಮೆ ಎಂಬುದು ವಿಜಯನಗರದ ಸರ್ಕಾರದಲ್ಲೂ ಮುಂದುವರಿದಿರುವುದು ಕಂಡುಬರುತ್ತದೆ.

2) ಈ ಪ್ರದೇಶದಲ್ಲಿ ದೇಶ, ವೇಂಠೆ, ನಾಡು, ಸೀಮೆ, ಸ್ಥಳ ಮತ್ತು ಗ್ರಾಮ ಎಂಬ ಆಡಳಿತ ವಿಭಾಗಗಳು ಕಂಡುಬಂದಿವೆ.

3) ದೇಶ, ವೇಂಠೆ, ರಾಜ್ಯ ಮೇಲ್‌ಸ್ತರದ ಆಡಳಿತ ವಿಭಾಗಗಳಾದರೆ ನಾಡು/ಸೀಮೆ, ಸ್ಥಳ, ಗ್ರಾಮ ಕೆಳಸ್ತರದ ಆಡಳಿತ ವಿಭಾಗಗಳಾಗಿವೆ.

4) ವಿಜಯನಗರದರಸರು ಆಡಳಿತದ ಅನುಕೂಲಕ್ಕೆ ತಕ್ಕಂತೆ ವಿಭಾಗಗಳನ್ನು ಪುನರ್ ರಚಿಸುತ್ತಿದ್ದಾರೆಂದು ಈ ಪ್ರದೇಶಗಳಲ್ಲಿನ ಶಾಸನಗಳಿಂದ ಹೇಳಬಹುದು.

5) ಹಳೆಯ ಆಡಳಿತ ವಿಭಾಗದ ನಾಡು ಎಂಬ ಹೆಸರು ಹೊಸ ವಿಭಾಗದ ಜೊತೆ ಸೇರಿಕೊಂಡು ಅದೂ ಕೂಡ ಆ ಕಾಲದ ಆಡಳಿತ ವಿಭಾಗದ ಹೆಸರೆಂಬ ಭಾವನೆಯನ್ನು ಮೂಡಿಸುತ್ತದೆ. ಆದರೆ ಹಳೆಯ ಪ್ರಾಂತೀಯ ಹೆಸರುಗಳು ಕೇವಲ ಅಂದಿನ ಸಾಮಾಜಿಕ ಸನ್ನಿವೇಶದಲ್ಲಿ ಭೌಗೋಳಿಕವಾಗಿ ಉಳಿದಿರುವಂತಹವುಗಳೇ ಹೊರತು ಅವು ವಿಜಯನಗರ ಆಡಳಿತಕ್ಕೆ ಮುಖ್ಯವಾದವುಗಳಾಗಿರಲಿಲ್ಲ ಎನ್ನಬಹುದು.

ಅಡಿ ಟಿಪ್ಪಣಿಗಳು

1) ಕಲಬುರ್ಗಿ ಎಂ.ಎಂ. (ಸಂ) - *ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು,* ಪು. 203 ಪ್ರಸಾರಾಂಗ, ಕನ್ನಡ ವಿ.ವಿ., ಹಂಪೆ, 1999.
2) George Buhler (Tr.)- The Laws of Manu- Sacred book of the Eart 25, 7-5, 115 p. 234.
3) ಎ.ಕ. 16 ಚಿಕ್ಕನಾಯಕನಹಳ್ಳಿ 53 ಎಂ.ಎ.ಆರ್. 1918 ಪು. 54
4) ಎ.ಕ. 12 ತುಮಕೂರು 11 ಕ್ರಿ.ಶ. 1426
5) ಎ.ಕ. 12 ಚಿಕ್ಕನಾಯಕನಹಳ್ಳಿ 6 ಕ್ರಿ.ಶ. 1556
6) ಎ.ಕ. 12 ಚಿಕ್ಕನಾಯಕನಹಳ್ಳಿ 39 ಕ್ರಿ.ಶ. 1559
7) ಎ.ಕ. 12 ಶಿರಾ 54 ಕ್ರಿ.ಶ. 1626
8) ಎ.ಕ. 12 ಚಿಕ್ಕನಾಯಕನಹಳ್ಳಿ ಕ್ರಿ.ಶ. 1636
9) ಎ.ಕ. 12 ತುಮಕೂರು 1, 9, 28
10) ಎ.ಕ. 12 ಚಿಕ್ಕನಾಯಕನಹಳ್ಳಿ 18
11) ಅದೇ 30
12) ವೆಂಕಟರತ್ನಂ ಎ.ವಿ. - ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ, ಪು. 22
13) ಎ.ಕ. 12 ಚಿಕ್ಕನಾಯಕನಹಳ್ಳಿ 6 ಕ್ರಿ.ಶ. 1556
14) ಎ.ಕ. 11 ಹೊಳಲ್ಕೆರೆ 125, ಕಲ್ಲಕೆರೆ 1535
15) ಎ.ಕ. 12 ಚಿಕ್ಕನಾಯಕನಹಳ್ಳಿ 5. ಕ್ರಿ.ಶ. 1535
16) ಡಾ. ಡಿ.ಎನ್.ಯೋಗೀಶ್ವರಪ್ಪ - ಹಾಗಲವಾಡಿ ನಾಯಕರು - ಪು. 67, ಪ್ರಸಾರಾಂಗ ಕನ್ನಡ ವಿ.ವಿ., ಹಂಪೆ, 1999.

ವಿಜಯನಗರ ಕಾಲದ ತುಮಕೂರು ಪ್ರದೇಶದ ಸೀಮೆಗಳು

1. ತುಮಕೂರು ಸೀಮೆ
2. ಗೂಳೂರ ಸೀಮೆ
3. ಮಿಡಿಗೇಶಿ ಸೀಮೆ
4. ನಿಡಗಲ್ ಸೀಮೆ
5. ರಾಮನಾಯ್ಕನಹಳ್ಳಿ ಸೀಮೆ
6. ಬಿದುರೆಯ ಸೀಮೆ
7. ನೊಣಬನಕೆರೆ ಸೀಮೆ
8. ಯಲೆಯೂರ ಸೀಮೆ
9. ಶೆಟ್ಟಿಕೆರೆ ಸೀಮೆ
10. ಕಂದಿಕೆರೆ ಸೀಮೆ
11. ಕೋಳಾಲ ಸೀಮೆ
12. ಹೊಂನವಳಿ ಸೀಮೆ (ಹೊನ್ನವಳ್ಳಿ)
13. ಸಂಪಗೆಯ ಸೀಮೆ (ಸಂಪಿಗೆ)
14. ಹುಳೇರು ಸೀಮೆ (ಹುಳಿಯಾರು)
15. ದೇವಣಶೀರ್‍ಯದ ಸೀಮೆ (ಸಿರಾ)
16. ಬರಗೂರು ಸೀಮೆ
17. ಕೊರಟಗೆರೆ ಸೀಮೆ
18. ಶೂರಗಿರಿ ಸೀಮೆ (ದೇವರಾಯನದುರ್ಗ)
19. ಬೂದಿಹಾಳು ಸೀಮೆ



ವಿಜಯನಗರ ಕಾಲದ ತುಮಕೂರು ಪ್ರದೇಶದ ಸೀಮೇಗಳು

1. ಹೆರೂರು ಸ್ಥಳ
2. ತುರುವೇಕೆರೆ ಸ್ಥಳ
3. ಬಿಜಾವರದ ಸ್ಥಳ
4. ಹೊಂನವಳಿಯ ಸ್ಥಳ
5. ಕಂದಿಕೆರೆ ಸ್ಥಳ
6. ಯೆಲೆಯೂರ ಸ್ಥಳ
7. ನಾಡರಕಟ (ನಾಗರಘಟ್ಟ)
8. ತಯಿಲಗೆರೆಯ ಸ್ಥಳ
9. ಬಜಗೂರ ಸ್ಥಳ
10. ತುಮಕೂರು ಸ್ಥಳ
11. ಆನೆಬಿದ್ದಜರಿ ಸ್ಥಳ
12. ಸೀರ್ಯದ ಸ್ಥಳ
13. ಯೆಲೆಯೂರ ಸ್ಥಳ
14. ಬುಕ್ಕಪಟ್ಣದ ಸ್ಥಳ
15. ಕೊರಟಗೆರೆ ಸ್ಥಳ
16. ಅಮೃಂತೂರ ಸ್ಥಳ
17. ಕುಣಿಗಲ್ ಸ್ಥಳ
18. ಕೊತ್ತಂಗೆರೆ ಸ್ಥಳ
19. ಹುಲಿಯೂರು ದುರ್ಗ ಸ್ಥಳ
20. ಹೊಸೂರು ಸ್ಥಳ
21. ಬೂದಿಹಾಳು ಸ್ಥಳ



೧೮. ವಿಜಯನಗರ ಸಾಮ್ರಾಜ್ಯದ ಆಡಳಿತ ಘಟಕಗಳಲ್ಲಿ 'ವಳಿತ'ದ ಸ್ಥಾನ - ಒಂದು ಪರಿಶೀಲನೆ

ಡಾ. ಕೃಷ್ಣಮೂರ್ತಿ

ದಕ್ಷಿಣ ಭಾರತದ ಬಹುಭಾಗವನ್ನು ಒಳಗೊಂಡಿದ್ದ ವಿಜಯನಗರ ಸಾಮ್ರಾಜ್ಯವು ಅನೇಕ ರಾಜ್ಯ, ಮಹಾರಾಜ್ಯಗಳಿಂದ ಕೂಡಿದ್ದಿತು. ಅಂತಹ ರಾಜ್ಯಗಳನ್ನು ಆಡಳಿತಾತ್ಮಕವಾಗಿ ಅನೇಕ ಉಪ ವಿಭಾಗಗಳಾಗಿ ಅವರು ವಿಂಗಡಿಸಿದ್ದರು. ಅಂತಹ ಉಪ ವಿಭಾಗ ಗಳಲ್ಲಿ ನಾಡು, ಸ್ಥಳ ಮತ್ತು ಗ್ರಾಮ ಎಂಬುವು ನಿರ್ವಿವಾದವಾಗಿ ನಿರ್ದಿಷ್ಟ ಆಡಳಿತ ಘಟಕಗಳಾಗಿದ್ದವು. ಇವುಗಳಲ್ಲಿ 'ನಾಡು', ಎಂಬುದಕ್ಕೆ ಪರ್ಯಾಯವಾಗಿ ಹಾಗೂ ಜೊತೆ ಜೊತೆಯಲ್ಲೇ 'ಸೀಮೆ' ಎಂಬುದು ಅನಂತರದ ಕಾಲದಲ್ಲಿ ಬಳಕೆಯಾಗಿರುವುದು ಕಂಡುಬರುತ್ತದೆ. ಈ ನಿರ್ದಿಷ್ಟ ಘಟಕಗಳ ಜೊತೆ ಜೊತೆಗೇ ವೇಂಠೆ, ಮಾಗಣಿ, ಪಟ್ಟಡಿ, ಚಾವಡಿ, ಹೋಬಳಿ ಎಂಬುವ ವಿಭಿನ್ನ ಆಡಳಿತ ಘಟಕ ಸೂಚಕಗಳೊಂದಿಗೆ 'ವಳಿತ' ಎಂಬುದೂ ಬಳಕೆಯಾಗಿದ್ದು, ವಿಶಿಷ್ಟವಾದುದಾಗಿದೆ. ಪ್ರಸ್ತುತ ವಿಜಯನಗರ ಸಾಮ್ರಾಜ್ಯದ ಆಡಳಿತ ಘಟಕಗಳಲ್ಲಿ ಈ 'ವಳಿತ' ಎಂಬುದರ ಸ್ಥಾನ-ಮಾನ ಏನು ? ಎಂಬುದನ್ನು ಪರಿಶೀಲಿಸು ವುದು ಈ ಸಂಪ್ರಬಂಧದ ಆಶಯ.

ವಿಜಯನಗರ ಅರಸರ ಶಾಸನಗಳಲ್ಲಿ 'ವಳಿತ'ದ ಪ್ರಸ್ತಾಪವಿರುವ ಪ್ರಾಚೀನತಮ ಉಲ್ಲೇಖ ಹಾಸನ ಜಿಲ್ಲೆ ಬೇಲೂರು ತಾಲೂಕಿನ ಚಂದಾಪುರದ ಕ್ರಿ.ಶ. 1359ರ ಶಾಸನ ಗಳಲ್ಲಿ ಕಂಡುಬರುತ್ತದೆ. ಅದರ ಪ್ರಕಾರ ಚೇರಮಾನಹಳ್ಳಿ-ಚಂದ್ರಾಪುರ-ಚಂದಾ ಪುರ ಗ್ರಾಮವು ಹೊಯ್ಸಣನಾಡ ವಳಿತಕ್ಕೆ ಸೇರಿದ ತಗರೆನಾಡಿನ ಸ್ಥಳವಾಗಿದ್ದಿತು. ಅರ್ವಾಚೀನ ಉಲ್ಲೇಖ; ಕ್ರಿ.ಶ. 1780 ರದ್ದಾಗಿದ್ದು, ಹಸ್ತಿನಾವತಿ ವಳಿತದ ಪಾಂಡ್ಯ ನಾಡಿನ ಕೋಗಳಿವೇಂಡೆಯ ಕೊಟ್ಟೂರು ಸೀಮೆ ಎಂಬುದಾಗಿದೆ. ಹಾಗಾಗಿ ವಿಜಯನಗರ ಸಾಮ್ರಾಜ್ಯದ ಆರಂಭ ಕಾಲದಿಂದ ಅವರ ವಂಶೀಯರ ಅಂತಿಮ ಆಳ್ವಿಕೆಯವರೆಗೂ 'ವಳಿತ'ಗಳನ್ನು ಒಳಗೊಂಡ ಆಡಳಿತಾತ್ಮಕ ವಿಭಾಗಗಳು ಪ್ರಚಲಿತವಿದ್ದವು ಎಂಬುದು ಖಚಿತವಾಗುತ್ತದೆ.

ನಿಘಂಟುಗಳಲ್ಲಿ 'ವಳಿತ' ಎಂಬುದಕ್ಕೆ ಸುತ್ತುವರಿಯಲ್ಪಟ್ಟ, ಸುತ್ತುಗಟ್ಟಲ್ಪಟ್ಟ, ಹೊರಳಿದ, ತಿರುಗಿದ, ಕೊಂಕಿದ ಎಂಬುದ ಅರ್ಥಗಳೊಂದಿಗೆ ಅಧೀನ, ಅಂಕೆ, ವಶ, ಅಧಿಕಾರ, ಆಳ್ವಿಕೆ, ಭೂಮಿ, ರಾಜ್ಯ ಎಂಬರ್ಥಗಳೂ, ಹಾಗೇ ಸಂಸ್ಥಾನದ ಪೂರ್ಣ ಹಕ್ಕನ್ನು

ಪಡೆಯದಿದ್ದರೂ ವ್ಯವಸ್ಥಿತವಾಗಿರುವ ದೇಶ ವಿಭಾಗ; ಅಧೀನ ಪ್ರಾಂತ ಎಂಬರ್ಥಗಳನ್ನು ನೀಡಲಾಗಿದೆ. ಆದರೆ ವಿಜಯನಗರದ ಅರಸರ ಶಾಸನಗಳಲ್ಲಿ ಈ 'ವಳಿತ' ಎಂಬುದು ಕಾಲಾನುಕ್ರಮದಲ್ಲಿ ಹೇಗೆ ಉಕ್ತವಾಗಿದೆ ಎಂಬುದನ್ನು ಗಮನಿಸಬೇಕಾದ ಅಗತ್ಯವಿದೆ:

ಶಾಸನದ ಕಾಲ	ಶಾಸನ ದೊರೆತ ಸ್ಥಳ	ತಾಲೂಕು	ಜಿಲ್ಲೆ	ವಿವರ ಮತ್ತು ಆಕರ
1. 1359	ಚಂದಾಪುರ	ಬೇಲೂರು	ಹಾಸನ	ಹೊಯ್ಸಣನಾಡ ವಳಿತಕ್ಕೆ ಸಲುವ ತಗರೆನಾಡಿನ ಚೇರಮಾನಹಳ್ಳಿ-ಚಂದ್ರಾಪುರ- MAR 1936, No. 24
2. 1385	ಬನ್ನೇರುಘಟ್ಟ	ಆನೇಕಲ್	ಬೆಂಗಳೂರು	ಕಾಮನೂರು ವಳಿತದ ರಾಮರಹಳ್ಳಿ ಸ್ಥಳದ ಬನಮಂಗಲ ಗ್ರಾಮ - ಇಸಿ IX , AN 81
3. ೧೩೯೭	ಕೊಣಗಲಪುರ	ಚಾಮರಾಜ ನಗರ	ಚಾಮರಾಜ ನಗರ	ವುಮಂತ್ತೂರ ವಳಿತವಾದ ಕೊಣಗಾಲಪುರ ನಾರಾಯಣಪುರವೆಂಬ ಅಗ್ರಹಾರ- EC. XIV, C4 268
4. 1402	ಗೌರಿ	ಕಾದಲವೇಣಿ ಬಿದನೂರು	ಗೌರಿ	ಚಿಕ್ಕಬಳ್ಳಾಪುರ ಬಿದನೂರು ಘನಗಿರಿ ದೇಶ ಬಿದಲೂರು ವಳಿತ ಪಿನಾಕಿನಿ ದಂಡೆಯ ಮೇಲಿನ ಕಾದಲವೇಣಿ ಗ್ರಾಮ - EC X, Gd 2 & Gd 56
5. 1419	ರಾಜಬವನಹಳ್ಳಿ	ಹರಪನಹಳ್ಳಿ	ದಾವಣಗೆರೆ	ಪಾಂಡ್ಯನಾಡಿನ ನೊಣಬನ ಅರಸೀಕೆರೆ, ವಳಿತ

6. 1450	ನಿಂಬಾಪುರ	ಹೊಸಪೇಟೆ	ಬಳ್ಳಾರಿ	ಹಸ್ತಿನಾವತಿ ವಳಿತದಲ್ಲಿನ ಕಾರಿಯಹಳ್ಳಿ - SII IX, pt ii, No. 453
7. 1498	ರುದ್ರಪಾದ	ಮೂಡಗೆರೆ	ಚಿಕ್ಕಮಗಳೂರು	ಆರಗದ ವಳಿತದ ಕಳಸ ಗ್ರಾಮ - EC VI, Mg 86
8. 1505	ಕದಿರಾಂಪುರ	ಹೊಸಪೇಟೆ	ಬಳ್ಳಾರಿ	ಹಸ್ತಿನಾವತಿಯ ವಳಿತದ ಸ್ವಾಮ್ಯ ರುಂಭಾ ವೇಂಡೆಯರ ಕದಿರಾಂಬುರ -VPR 1984-87, Nx. 149.
9. 1506	ದೊಡ್ಡೇರಿ	ಮಧುಗಿರಿ	ತುಮಕೂರು	ಘನಶೈಲಪುರಿ ರಾಜ್ಯ ಹರತಿಪುರ.... ಭಸ್ಮಾಂಗೀ ಶೈಲ ವಳಿತದ ಶಿವನಗಿರಿ ಗ್ರಾಮ -EC, XVI, Mi 131
10. 1523	ಕುರಿಕುಪ್ಪೆ	ಹೊಸಪೇಟೆ	ಬಳ್ಳಾರಿ	ಹಸ್ತಾನವತಿಯ ವಳಿತದ ಸ್ವಾಮಿ ಆಯಿಂಬಾಡವಾದ ಹೊರನದಿಯ ವೇಂಠೆಯಕ್ಕೆ ಸಲುವ ಆನಂತಸೇತು-ಕುರಿಯಕುಪ್ಪೆ ಅಗ್ರಹಾರ -SII, IX pt, ii, No. 514
11. 1524	ಕಡಿರಾಂಪುರ	ಹೊಸಪೇಟೆ	ಬಳ್ಳಾರಿ	ಹಸ್ತಿನಾವತಿ ವಳಿತ ಅರಕೆರೆವೇಂಟೆದ ಪ್ರತಾಪದೇವರಾಯ ಪುರ ಯರಗ್ಗುಡಿ -

				ಕವಿಶಾಸಂ. III, ಹಂಪಿ 523
12. 1527	ಗುಡಿಹಳ್ಳಿ	ಹರಪನಹಳ್ಳಿ	ದಾವಣಗೆರೆ	ಕೋಟೂರು ಸೀಮೆಯ ವೊಳಿತಕೆ ಸಲುವ ನೋಣಬವರಸಿ ಕೆರೆ. - SII, IX, pt. ii, No. 522
13. 1528	ಮೊರಬ	ಕೂಡಲಿಗಿ	ಬಳ್ಳಾರಿ	ಪಾಂಡ್ಯನಾಡವಳಿತಕೆ ಸಲುವ ಮೊರಬ - SII, IX pt ii, No. 523
14. 1533	ಪೆದ್ದತುಮಕೆಪಲ್ಲಿ	ಬಾಗೇಪಲ್ಲಿ	ಚಿಕ್ಕಬಳ್ಳಾಪುರ	ಬೇಲೂರ ಚಾವಡಿಯ ಬುರಡಕುಂಟಿ ಸೀಮೆ, ಕೊಯಿಕುರುಕಿ ಸ್ಥಳಕ್ಕೆ ಸಲುವ ಗಡಿದ ಸ್ಥಳವಳಿತದ ಸುನಿಕಿಪಲ್ಲಿ ಗ್ರಾಮ - EC. X, Bg
15. 1533	ಮಳಲಿ	ಹೊಸದುರ್ಗ	ಚಿತ್ರದುರ್ಗ	ಹೊಯ್ಸಣ ರಾಜ್ಯ ಯಕ್ಕಟಿಯವಳಿತದ ನಿರುಗುಂದ ಸೀಮೆಯ ಇಮಾಂಬಿಕ ಸಮುದ್ರ - ಕೇದಗ್ಗೆರೆ - EC. XI, Hk 132
16. 1540	ಬಾಗೂರು	ಹೊಸದುರ್ಗ	ಚಿತ್ರದುರ್ಗ	ಬಾಗೂರು ಸೀಮೆವಳಿತದ ಮದುವೆಯ ಸುಂಕ - EC. XI, Hk 111
17. 1542	ಕೋಟಕಲ್ಲು	ಆದೋನಿ	ಕರ್ನೂಲ್	ಮೂಡನಾಡ ಹಸ್ತಿನಾವತಿಗೆ ಸಲುವ ಆದವಾನಿ ವಳಿತ

18. ೧೫೪೭	ಪುರ	ಕುಷ್ಟಗಿ	ಕೊಪ್ಪಳ	ಹಸ್ತಾನಾವತಿ ವಳತಿಕೆ ಸಲುವ ಕೆಳವಡಿ ನಾಡೊಳಗಣ ತಾವರೆಗೆರೆಗೆ ಸಲುವ ಪುರವೇಂಬ ಗ್ರಾಮ - ಕವಿಶಾಸಂ II, ಕುಷ್ಟಗಿ 17
19. 1548	ನಕ್ಕರಹಾಳು	ಹಡಗಲಿ	ಬಳ್ಳಾರಿ	ಕೋಗಳೆನಳಿಥದ ಕುಂಟೆನೂರ ಸೀಮೆ ವಳಗನ ನಗರೆಹಳ್ಳಿಗೆ-ನಗರೂರು-ಕವಿಶಾಸಂ I, ಹಡಗಲಿ 112
20. 1550	ಬಾಗಳಿ	ಹರಪನಹಳ್ಳಿ	ದಾವಣಗೆರೆ	ಕೊಟ್ಟೂರು ವಳಿತದ ಬಾಗಳಿ ಸೀಮೆ - SII, IX, pt, ii, No. 640
21.1551	ಬಾಗಳಿ	ಹರಪನಹಳ್ಳಿ	ದಾವಣಗೆರೆ	ಹಸ್ತಾನವತಿಯ ವಳಿತದ ಪಾಂಡ್ಯದನಾಡವಳ ಗಣ ಕೋಗಳಿಯ ವೇಂಡೆಯಕೆ ಸಲುವ ಕೊಟ್ಟೂರು ಸೀಮೆಯವೊಳಗಣ ಬಾಗುಳಿಯ ಗ್ರಾಮ - SII, IX pt, ii, No. 641
22. 1551	ಕೃಷ್ಣಾಪುರ	ಜಗಳೂರು		ದಾವಣಗೆರೆ ಹಸ್ತಿನಾವತಿ ವಳಿತದ ಪಾಂಡ್ಯನಾಡ ಉಚ್ಚಾಗಿ ವೇಂಡೆಯಕೆ ಸಲುವ ಬಿಳಿಚೇಡು ಸೀಮೆ ವೊಳಗಣ ಹೊಸಕೆರೆ -

				ಕೃಷ್ಣಸಮುದ್ರ- EC. XI, J624
24. 1556	ಸೋಮಸಮುದ್ರ	ಬಳ್ಳಾರಿ	ಬಳ್ಳಾರಿ	ಹಸ್ತಿನಾವತಿ ವಳಿತದ ಮೂಗನಾಡ ವೇಂಡೆಯಕೆ ಸಲುವ ಕುಱುಗೋಡ ಸೀಮೆ ವಳಗಣ ಸೋಮಸಮುದ್ರ - ಕವಿಶಾಸಂ- I, ಬಳ್ಳಾರಿ 56
25. 1564	ಹಂಪಿ	ಹೊಸಪೇಟೆ	ಬಳ್ಳಾರಿ	ಆದವಾನಿಯ ವಳಿತಕೆ ಸಲುವ ಕವಿತಾಳದ ಸೀಮೆಯ ವಳಗಣ ಯೀಚಲಹಾಳ ಗ್ರಾಮ - ಕವಿಶಾಸಂ- III, ಜ್‌ಫಿ 204.
26. 1571	ಬನವಾಸಿ	ಸಿರಸಿ	ಉ.ಕನ್ನಡ	ಹಸ್ತಿನಾವತಿಯ ವಳಿತಕೆ ಸಲುವ ಪಡುನಾಡ ಬನವಸೆಯ ಪಂನಿಚಾಸಿರದ ಚಂದ್ರಗುತ್ತಿಯ ವೇಂಟೆಯಕೆ ಸಲುವ ಜಡಿಯದ ಸೀಮೆಯೊಳಗಣ ವಂದಾನದಿ ತೀರ್ಥದ ವರದೀಕೊಪ - SII, XX, No. 241.
27. 1580	ಕೊಟ್ಟೂರು	ಕೊಡ್ಲಗಿ	ಬಳ್ಳಾರಿ	ಹಸ್ತಿನಾವತಿ ವಳಿತದ ಪಾಂಡ್ಯಗೌಡ ಕೊಗಳಿಯ ವೇಂಠೆಯಾಕೆ ಸಲುವ

				ಕೂಟೂರು ಸೀಮೆಯೊಳಗಣ.... - ಕವಿಶಾಸಂ- I, ಕೂಡಲಗಿ 10.
28. 1614	ಆನೇಕಲ್ (ತಾಮ್ರ ಶಾಸನ)	ಆನೆಕಲ್	ಬೆಂಗಳೂರು	ಹೊಸಕೋಟೆ ಸೀಮೆಯ ಸಮೇತನಹಳ್ಳಿ ವಳಿತದ ಹಲಸಿಹಳ್ಳಿ...
29. 1644	ಮೈಸೂರು	ಹರಪನಹಳ್ಳಿ	ದಾವಣಗೆರೆ	
30. 1656	ಕೊರಟಗೆರೆ	ಕೊರಟಗೆರೆ	ತುಮಕೂರು	ಕೊರಟಗೆರೆವಳಿತ - EC. XII
31. 1659	ಬಸವನಹಳ್ಳಿ	ಅರಕಲಗೂಡ	ಹಾಸನ	ಬೇಲೂರು ಸೀಮೆಗೆ ಸೇರಿದ ಬಿಳುಹನಾಡವಳಿತ, ಅರಕಲಗೂಡು ಹೋಬಳಿಯ ಬಸವನಹಳ್ಳಿ, ಅಗ್ರಹಾರ - EC. V. AG 9.
32. 1675	ಬೇಲೂರು	ಬೇಲೂರು	ಹಾಸನ	ಬೇಲೂರು ಸೀಮೆಯ ಲಕ್ಕುಂದನಾಡ ವಳಿತದ ಗುಮ್ಮನಹಳ್ಳಿ
33. 1699	ಶೀಬೀ	ಅಗ್ರಹಾರ (ತಾಮ್ರ ಶಾಸನ)		ಸಿರಾ ತುಮಕೂರು ಶೀರ್‍ಯದ ಶೀಮವಳಿತ್ತವಾದ ಹುಂಜನಾಳ ಸಮ್ಮತಿಗೆ ಕೂಡಿದ ಶೀಬೀ ಗ್ರಾಮಕ್ಕೆ ಸೇರಿದ ಚಿಕ್ಕಶೀಬಿ ಎಂಬ ಗ್ರಾಮ. -EC. XII, Si 96

34. 1758	ಬ್ರಾಹ್ಮಣಪುರ	ಚನ್ನಪಟ್ಟಣ	ರಾಮನಗರ	ಹಸ್ತಿನಾಪುರಿ ದುರ್ಗದ ತಲಿಕೂಟೆ ಹೋಬಳಿ ವಳಿತದ ಬೂದಿನೆತ್ತ ಗ್ರಾಮ - MAR 1925, No. 7.
35. 1780	ಕೊಟ್ಟೂರು	ಕೂಡಲಿಗಿ	ಬಳ್ಳಾರಿ	ಕೊಟ್ಟೂರು ಸೀಮೆಯ ಹಸ್ತಿನಾವತಿ ವಳಿತದ ಪಾಂಡ್ಯ ನಾಡಿನ ಕೋಗಳಿವೇಂಠೆ -SII, IX, pt ii, No. 685

ಈ ಮೇಲಿನ ಉಲ್ಲೇಖಗಳನ್ನು ಪರಿಶೀಲಿಸಿದರೆ ಪ್ರಧಾನವಾಗಿ ವಿಜಯನಗರ ಅರಸರ ಆಡಳಿತ ಕ್ರಮದಲ್ಲಿ 'ವಳಿತ' ವಿಭಿನ್ನ ಸ್ತರಗಳಲ್ಲಿ ಪ್ರಯೋಗಗೊಂಡಿರುವುದನ್ನು ಗುರುತಿಸಬಹುದಾಗಿದೆ. ಮೇಲ್‌ಸ್ತರದಲ್ಲಿ ಕಂಡುಬರುವ ಘಟಕಗಳೆಂದರೆ. ಹೊಯ್ಸಣ ನಾಡ ವಳಿತ, ಹಸ್ತಿನಾವತಿ ವಳಿತ, ಆರಗ ವಳಿತ, ಪಾಂಡ್ಯನಾಡು ವಳಿತ, ಕೋಗಳಿವಳಿತ ಎಂಬುವು ಎದ್ದು ಕಾಣುತ್ತವೆ. ಇವುಗಳಲ್ಲಿ ಹೊಯ್ಸಣ ಮತ್ತು ಪಾಂಡ್ಯನಾಡುಗಳೆಂಬುವು ವಿಜಯನಗರಕ್ಕೆ ಪೂರ್ವದಲ್ಲಿ ಆಯಾ ರಾಜವಂಶೀಯರು ಆಳ್ವಿಕೆ ನಡೆಸುತ್ತಿದ್ದ ವಿಶಾಲ ಪ್ರದೇಶವನ್ನು ಸೂಚಿಸುವಂತಹವು ಆಗಿರುವುದು ಗಮನಾರ್ಹ ಅಂಶವಾಗಿದೆ.

ವಿಜಯನಗರ ಸಾಮ್ರಾಜ್ಯದ ಬಹುಮುಖ್ಯ ಆಡಳಿತ ಘಟಕ ಹಸ್ತಿನಾವತಿ ವಳಿತ ಎಂಬುದು ಸರ್ವವೇದ್ಯವಾದ ಸಂಗತಿಯೆ. ಹೆಚ್ಚಿನ ಮಟ್ಟಿಗೆ ವಿಜಯನಗರ ಆರಂಭ ಕಾಲದ ವಿಶಾಲ ಪ್ರದೇಶವನ್ನು ನಿರ್ದೇಶಿಸುತ್ತಿದ್ದ ಈ ಘಟಕ ಕಾಲಾಂತರದಲ್ಲಿ ಹಂಪಿಯ ಸುತ್ತಮುತ್ತ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿದ್ದಿತೆಂದು ಹೇಳಬಹುದಾಗಿದೆ. ಹಸ್ತಿನಾವತಿ ವಳಿತದಲ್ಲಿ ಉಚ್ಚಂಗಿ ವೇಂಠೆ, ದೊರವಡಿ ವೇಂಠೆ, ರಾಯದುರ್ಗ ವೇಂಠೆ, ಕೋಗಳೀ ವೇಂಠೆಗಳೂ; ಮುರುಗಲನಾಡು, ಪಾಂಡ್ಯನಾಡು, ಚಂದ್ರಮಂಡಲನಾಡು, ಮೂಡನಾಡುಗಳು; ಕಂಪಿಲಿ ಮತ್ತು ಆನೆಗೊಂದಿ ಮಾಗಾಣೆಗಳು ಅಂತರ್ಗತವಾಗಿದ್ದ ಸಂಗತಿ ಶಾಸನಗಳಿಂದ ತಿಳಿದುಬರುತ್ತದೆ. ಅಂದರೆ; ತುಮಕೂರು, ಅನಂತರಪುರ, ಚಿತ್ರದುರ್ಗ, ಬಳ್ಳಾರಿ ಹಾಗೂ ರಾಯಚೂರು ಜಿಲ್ಲೆಯ ಬಹುಭಾಗಗಳನ್ನು ಒಳಗೊಂಡಂತೆ ಅದು ರೂಪುಗೊಂಡಿದ್ದುದನ್ನು ಮನಗಾಣಬಹುದಾಗಿದೆ.

ಹರಪನಹಳ್ಳಿ ಪ್ರದೇಶದ ಕೋಗುಳಿನಾಡು ಕೂಡ ಒಂದು ಪ್ರಾಚೀನ ಪ್ರಸಿದ್ಧ ಆಡಳಿತ ಘಟಕವಾಗಿದ್ದಿತು. ಈ ವಿಶಾಲನಾಡುಗಳ ವ್ಯಾಪ್ತಿಗೆ ಒಳಪಟ್ಟ ಪ್ರದೇಶಗಳನ್ನು 'ವಳಿತ' ಎಂಬುದರ ಮೂಲಕ ನಿರ್ದೇಶಿಸುತ್ತಿದ್ದುದು ಖಚಿತವಾಗುತ್ತದೆ. ಆದರೆ ಈ ವಿಸ್ತಾರವಾದ ಪ್ರದೇಶಗಳಿಗೆ ಒಳಪಟ್ಟ ಮಧ್ಯ ಮತ್ತು ಕೆಳಸ್ತರದ; ಕೊನೆಗೆ ಗ್ರಾಮದ

ಹಂತದಲ್ಲೂ ಈ 'ವಳಿತ'ದ ಪ್ರಯೋಗವಾಗಿರುವುದು ವಿಚಾರ ಯೋಗ್ಯವಾದ ಸಂಗತಿಯಾಗಿದೆ.

ಪಾಂಡ್ಯನಾಡಿನ ನೊಣಬನ ಅರಸೀಕೆರೆ ವಳಿತ, ಹೊಯ್ಸಣ ರಾಜ್ಯದ ಯಕ್ಕಟಿಯ ವಳಿತ, ಮೋಡನಾಡ ಹಸ್ತಿನಾವತಿಗೆ ಸಲುವ ಆದವಾನಿವಳಿತ, ಬಿಳುಹವಾಡ ವಳಿತ, ಘನಗಿರಿ ದೇಶ ಬಿದಲೂರು ವಳಿತವೇ ಮುಂತಾದವು ಮಧ್ಯಸ್ತರದ ಆಡಳಿತಕ್ಕೆ ಸಂಬಂಧಿಸಿದ ವಳಿತಗಳಾಗಿವೆ. ಇವು ನಾಡಿಗೆ ಸಮಾನಾಂತರದ ವಳಿತಗಳಾಗಿವೆ. ಅಂದರೆ ಸ್ಥಳಕ್ಕಿಂತ ಮೇಲಿನ ಹಂತಕ್ಕೆ ಸೇರಿದ್ದವು.

ಈ ಗುಂಪಿಗೆ ಅಂದರೆ ನಾಡು ಅಥವಾ ಸೀಮೆಹಂತಕ್ಕೆ ಸೇರಿದ ಇತರ ವಳಿತಗಳಲ್ಲಿ ಕೋಟೂರು ಸೀಮೆವಳಿತ, ಬಾಗೂರು ಸೀಮೆ ವಳಿತ, ಶೀರ್ಯದ ಶೀಮೆವಳಿತ ಎಂಬುವುಗಳನ್ನು ಸೇರಿಸಬಹುದು. ಕೆಲವು ಸಂದರ್ಭಗಳಲ್ಲಿ ಸೀಮೆಯ ಉಪ ವಿಭಾಗವಾಗಿ ನಾಡನ್ನೂ ಹಾಗೆ ನಾಡಿನ ಉಪ ವಿಭಾಗವಾಗಿ ಸೀಮೆಯನ್ನು ಉಲ್ಲೇಖಿಸಿರುವುದುಂಟು. ಹೆಚ್ಚಿನ ಮಟ್ಟಿಗೆ ಸೀಮೆಗಳ ಪ್ರಯೋಗಗಳು ಕ್ರಿ.ಶ. 15ನೇ ಶತಮಾನದ ಅವಧಿಯಲ್ಲಿ ವಿರಳವಾಗಿ ಆರಂಭವಾಗಿ ಕೃಷ್ಣದೇವರಾಯನ ಆಳ್ವಿಕೆಯ ಕಾಲದಲ್ಲಿ ಮತ್ತು ಅನಂತರದಲ್ಲಿ ಹೆಚ್ಚಾಗುತ್ತಾ ಹೋಗಿರುವುದನ್ನು ಗಮನಿಸಬಹುದಾಗಿದೆ. ಅಲ್ಲದೆ ವಿಜಯನಗರ ಅರಸರ ಕಾಲದ ಶಾಸನಗಳಲ್ಲೇ ಹೆಚ್ಚಾಗಿ ಕಂಡುಬರುವುದರಿಂದ ಅದು ವಿಜಯನಗರ ಅರಸರ ಕೊಡುಗೇ ಎಂದೇ ಹೇಳಬಹುದಾಗಿದೆ.

ಇನ್ನು 'ವಳಿತ'ದ ಪ್ರಯೋಗ ಕೆಳಸ್ತರದಲ್ಲೂ ಉಕ್ತವಾಗಿರುವುದನ್ನು ಕಾಣಬಹುದಾಗಿದೆ.

ಸ್ಥಳದ ಸ್ತರದಲ್ಲಿ; ಭಸ್ಮಾಂಗಿ ಶೈಲವಳಿತದ ಶಿವನಗಿರಿ ಗ್ರಾಮ, ಗಡಿದ ಸ್ಥಳ ವಳಿತದ ಸುನಿಕಪಲ್ಲಿ ಗ್ರಾಮ, ಸಮೇತನಹಳ್ಳಿ ವಳಿತದ ಹಲಸಿಹಳ್ಳಿ, ತಲಿಕುಂಟೆ ಹೋಬಳಿ ವಳಿತದ ಬೂದಿಸೆತ್ತ ಗ್ರಾಮ. ಇಲ್ಲಿ ಹೋಬಳಿ, ಸ್ಥಳಕ್ಕೆ ಪರ್ಯಾಯವಾಗಿ ಪ್ರಯೋಗವಾಗಿರುವುದನ್ನು ಗಮನಿಸಬಹುದಾಗಿದೆ.

ಗ್ರಾಮದ, ಸ್ತರದ ವಳಿತಗಳಲ್ಲಿ; ಅರಸೀಕೆರೆ ವಳಿತ, ಎಂಬುದನ್ನು ಉಲ್ಲೇಖಿಸಬಹುದಾಗಿದೆ.

ಒಟ್ಟಾರೆ 'ವಳಿತ' ಎನ್ನುವ ಸೀಮಾ ವಿಭಾಗವು ಮಂಡಲ, ರಾಜ್ಯಭಾಗ, ಸಾಮಂತ ಮಂಡಲ ಎಂಬ ಅರ್ಥಗಳೊಂದಿಗೆ ನಾಡು ಅಥವಾ ಸೀಮೆ ಮತ್ತು ರಾಜ್ಯದ ನಡುವೆ ವಳಿತವೆಂಬ ವಿಭಾಗವಿರುತ್ತದೆ. ಈ ಪದಕ್ಕೆ 'ವೇಂಠೆಯ' ಅಥವಾ 'ವೇಂಠೆ' ಎಂಬ ಪರ್ಯಾಯ ಪದಗಳನ್ನು ಬಳಸಿದ್ದಾರೆಂದೂ ಅದು 'ಸ್ಥಳ'ಕ್ಕಿಂತ ದೊಡ್ಡದು ಮತ್ತು 'ರಾಜ್ಯ'ಕ್ಕಿಂತ ಚಿಕ್ಕದೆಂದು ವಿದ್ವಾಂಸರ ಅಭಿಪ್ರಾಯಪಟ್ಟಿರುವುದು ಸಮಂಜಸವಲ್ಲವೆಂಬುದು ಮೇಲೆ ಉದಾಹೃತವಾಗಿರುವ ಶಾಸನೋಕ್ತ ವಿವರಗಳಿಂದ ಮನಗಾಣಬಹುದಾಗಿದೆ.

ಹಾಗಾದರೆ ಆಡಳಿತದ ಬೇರೆ ಬೇರೆ ಸ್ತರಗಳಲ್ಲಿ ಪ್ರಯೋಗ ವಾಗಿರುವ 'ವಳಿತ' ಏನನ್ನು ಸೂಚಿಸುತ್ತದೆ ಎಂಬುದನ್ನು ಪರ್ಯಾಯೋಚಿಸಿದರೆ; ಅದು ಪ್ರಾಯಃ ನ್ಯಾಯಾಡಳಿತ ಘಟಕ ಸೂಚಕದ ವಿಶಿಷ್ಟ ವರ್ತುಲದ ಸಂಕೇತ ವಾಗಿಬೇಕೆಂದು ತೋರುತ್ತದೆ. ಅದು ಗ್ರಾಮ ಮಟ್ಟದ ನ್ಯಾಯಾಡಳಿತದಿಂದ ಸಾಮ್ರಾಜ್ಯ ಮಟ್ಟದ ನ್ಯಾಯಾಡಳಿತದವರೆಗಿನ ಸೂಚಕವಾಗಿ ಆಡಳಿತಾತ್ಮಕ ಘಟಕಗಳೊಂದಿಗೆ ಸಮ್ಮಿಲನಗೊಂಡಿದ್ದಿತೆಂದು ತೋರುತ್ತದೆ.

ಆಧಾರ ಸೂಚಿ

ಎಪಿಗ್ರಾಫಿಯ ಕರ್ನಾಟಿಕ ಸಂಪುಟಗಳು

ಸೌತ್ ಇಂಡಿಯನ್ ಇನ್‌ಸ್ಕ್ರಿಪ್‌ಷನ್ಸ್ ಸಂಪುಟಗಳು

ಡಾ. ಎ.ವಿ.ವೆಂಕಟರತ್ನ; ವಿಜಯನಗರ, ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ, ಮೈಸೂರು, 1974

ಕುಂದೂರಿ ಈಶ್ವರದತ್ತ; ಪ್ರಾಚೀನಾಂಧ್ರ ಚಾರಿತ್ರಕ ಭೂಗೋಳಮು, ಹೈದ್ರಾಬಾದ್, 1979.

ಮೈಸೂರು ಆರ್ಕಿಯಾಲಜಿಕಲ್ ರಿಪೋರ್ಟ್, 1925, 1936

ವಿಜಯನಗರ ಪ್ರೋಗ್ರೆಸ್ ರಿಪೋರ್ಟ್ 1984-87, ಮೈಸೂರು.

೧೯. ಹಂಪಿಯ ಕಮಲ ಮಹಲ್: ಕೆಲ ಹೊಸ ಶೋಧನೆಗಳು

ಡಾ. ಎಸ್.ಎನ್.ಶಿವರುದ್ರಸ್ವಾಮಿ

ಹಂಪಿಯ ವಿರೂಪಾಕ್ಷ ದೇವಾಲಯದ ಸಪೂರವಾದ ಗೋಪುರ, ವಿಟ್ಠಲ ದೇಗುಲದ ಕಲ್ಲಿನ ರಥ ಮತ್ತು ಕಮಲ ಮಹಲ್ ಅತ್ಯಂತ ಜನಪ್ರಿಯ ಕಟ್ಟಡಗಳು. ಯಾವುದೇ ಗ್ರಂಥ - ಅದು ಸಂಶೋಧನಾ ಅಥವಾ ಪಠ್ಯಗ್ರಂಥವಾಗಿರಲಿ - ಹಂಪಿಯ ಬಗ್ಗೆ ಪ್ರಕಟವಾದರೆ, ಈ ಕಟ್ಟಡಗಳ ಯಾವುದಾದರೊಂದು ಚಿತ್ರವಿರುವುದು ಸಾಮಾನ್ಯ ಸಂಗತಿ. ಇವುಗಳಲೆಲ್ಲ ಕಮಲಮಹಲ್ ಸುಂದರವಾದ ರಚನೆ. ಜನಾನ ಆವರಣದ ಮಧ್ಯ ಭಾಗದಲ್ಲಿದೆ. ಕಮಲಮಹಲ್ ಮೂಲ ಹೆಸರೆ? ಅದಲ್ಲದಿದ್ದರೆ, ಅದರ ಮೂಲ ಹೆಸರು ಯಾವುದು ? ಅದನ್ನು ನಿರ್ಮಿಸಿದವರು ಯಾರು? ಕಮಲ್ ಮಹಲ್ ಸೇರಿದಂತೆ, ಹಂಪಿ ಅರಮನೆಗಳ ಆವರಣದ ಬಗ್ಗೆ ಗುಡ್ಡೆಗಟ್ಟಲೆ ಸಾಹಿತ್ಯ ಪ್ರಕಟವಾಗಿದೆ. ಆದರೂ ಮೇಲಿನ ಪ್ರಶ್ನೆಗಳಿಗೆ ಉತ್ತರ ದೊರೆತಿಲ್ಲ. ಈ ಪ್ರಶ್ನೆಗಳಿಗೆ ಉತ್ತರ ನೀಡುವ ಪ್ರಯತ್ನ ಇಲ್ಲಿದೆ.

I

ಜನಾನ ಆವರಣ ಸ್ಥೂಲವಾಗಿ ಆಯತಾಕಾರದ ಎತ್ತರದ ಪ್ರಾಕಾರದ ಸಂಕೀರ್ಣ. ಅದರಲ್ಲಿ. 1) ಮುಖ್ಯ ಅರಮನೆಯ ಎತ್ತರದ ಅಧಿಷ್ಠಾನ, 2) ಸುಭದ್ರ ಕೋಣೆ (Strong Room), 3) ಜಲಭವನದ ಅಧಿಷ್ಠಾನ, 4) ಕಮಲ ಮಹಲ್, 5) ಕಾವಲು ಗೋಪುರಗಳು ಇವೆ. ಇದರೊಳಗೆ ಬಂಡೆಯ ಮೇಲೆ ನಿರ್ಮಿಸಿದ ಅರಮನೆಯ ಅವಶೇಷಗಳು ಉಳಿದಿವೆ. ಕಮಲ ಮಹಲ್‌ನ ಉತ್ತರಕ್ಕೆ ಆಯತಾಕಾರದ ಕೊಳವಿದ್ದು, ಅದರ ಪಶ್ಚಿಮದಲ್ಲಿ ಇಳಿಯಲು ಸೋಪಾನಗಳಿವೆ.

ಅರಮನೆ (1) ದೊಡ್ಡದಾದ ಹಾಗೂ ವಿಸ್ತೃತವಾದ ರಚನೆ. ಇದು ಒಂದರ ಮೇಲೆ ಮತ್ತೊಂದರಂತೆ ಮೂರು ಅಡಿಪಾಯ ಅಥವಾ ಅಧಿಷ್ಠಾನಗಳನ್ನು ಹೊಂದಿದೆ. ಮೇಲಿನ ಪ್ರತಿ ಅಡಿಪಾಯವು ಕೆಳಗಿನದಕ್ಕಿಂತ ಕಿರಿದಾಗಿದೆ. ಇದರ ಪೂರ್ವ ಮತ್ತು ಪಶ್ಚಿಮ ಪಾರ್ಶ್ವಗಳಲ್ಲಿ ಎರಡೆರಡು ಮುಂಚಾಚು ಮತ್ತು ಹಿಂಚಾಚುಗಳಿವೆ. ಈ ಅರಮನೆ ಹಿಂಭಾಗದಲ್ಲಿ (ದಕ್ಷಿಣ ಪಾರ್ಶ್ವದಲ್ಲಿ) ಮುಂಚಾಚುಗಳಿವೆ. ಮುಂಭಾಗದಲ್ಲಿ (ಉತ್ತರ ದಲ್ಲಿ) ಸೋಪಾನಗಳಿದ್ದು, ಎರಡನೇ ಅಧಿಷ್ಠಾನಕ್ಕೆ ಪ್ರವೇಶವನ್ನು ಕಲ್ಪಿಸುತ್ತದೆ. ಎರಡನೇ

ಅಧಿಷ್ಠಾನದಿಂದ ಮೂರನೇ ಅಧಿಷ್ಠಾನಕ್ಕೆ ಹೋಗಲು ಎರಡು ಕಡೆಗಳಲ್ಲಿ ಸೋಪಾನಗಳಿವೆ. ಮೊದಲನೇ ಅಧಿಷ್ಠಾನದ ಸುತ್ತಲೂ ಹೊರ ಅಂಚಿನಲ್ಲಿ ಸ್ತಂಭಗಳಿರುವುದಕ್ಕೆ ಅವಕಾಶವನ್ನು ಕಲ್ಪಿಸಲಾಗಿತ್ತು. ಮೂರನೇ ಅಧಿಷ್ಠಾನದಲ್ಲಿ ಮಧ್ಯಮ ಗಾತ್ರದ ನಾಕು ಕೊಠಡಿಗಳಿದ್ದವು. ಅಧಿಷ್ಠಾನದ ಪಟ್ಟಿಕೆಗಳು ಸುಂದರವಾದ ಕೆತ್ತನೆಗಳಿಂದ ಕೂಡಿವೆ. ಇವುಗಳ ಮೇಲೆ ಕಮಲದಳ, ಸುರುಳಿಯಲಂಕಾರ, ಹಂಸ ಮತ್ತು ಗಜಗಳ ಕೆತ್ತನೆಗಳಿವೆ.

ಕಟ್ಟಡ (2): ಜನಾನ ಸಂಕೀರ್ಣದ ವಾಯವ್ಯದಲ್ಲಿ ಉತ್ತಮ ಸ್ಥಿತಿಯಲ್ಲಿರುವ ಆಯತಾಕಾರದ ಕಟ್ಟಡವಿದೆ. ಇದರ ಹೊರ ಗೋಡೆಗಳು ಸರಳವಾಗಿದೆ. ಪೂರ್ವಾಭಿಮುಖವಾಗಿ ಇರುವ ಇದರ ಪೂರ್ವದ ಗೋಡೆಯ ಮಧ್ಯದಲ್ಲಿ ಕಮಾನಿನಿಂದ ಕೂಡಿರುವ ಬಾಗಿಲಿದೆ. ಗೋಡೆಗಳ ಮೇಲ್ಭಾಗದಲ್ಲಿ ಚೌಕಾಕಾರದ ಕಿಂಡಿಗಳನ್ನು ನಿಯಮಿತ ದೂರದಲ್ಲಿ ನಿರ್ಮಿಸಲಾಗಿದೆ. ಗೋಡೆಗಳ ತುದಿಯಲ್ಲಿ ಎರಡು ಭಾಗುಳ್ಳ ಚಜ್ಜವಿದೆ. ಚಜ್ಜದ ಒಳಭಾಗದಲ್ಲಿ ಕಲ್ಲಿನ ಜಂತಿಗಳಿವೆ. ಈ ಜಂತಿಗಳ ಬಾಹ್ಯ ತುದಿಯಲ್ಲಿ ಸರ್ಪ ಮುದ್ರೆಯ ಚಿತ್ರಣವಿದೆ. ಈ ಕಟ್ಟಡವು ಬಾಗಿರುವ ಅಥವಾ ಕಮಾನಿನಂತಿರುವ ಭಾವಣೆಯನ್ನು ಹೊಂದಿದೆ. ಇದರ ಮೇಲೆ ಜಾಲಂದ್ರದಂತೆ ಕಾಣುವ ಸುಂದರವಾದ ಕೈಪಿಡಿ ಇದೆ. ಕಟ್ಟಡದ ಒಳಭಾಗದಲ್ಲಿ ಗೋಡೆಗಳಿಗೆ ತಾಕಿದಂತೆ ಜಗತಿ ಇದೆ. ಮಧ್ಯದಲ್ಲಿ ಆಯತಾಕಾರದ ಪ್ರದೇಶ ರೂಪುಗೊಂಡಿದೆ.

ಜಲಭವನ(3): ಇದು ಈ ಸಂಕೀರ್ಣದ ಆಗ್ನೇಯದಲ್ಲಿ ಆಯತಾಕಾರದ ಕೃತಕ ಕೊಳದ ನಡುವೆ ಪೂರ್ವಾಭಿಮುಖವಾಗಿದೆ. ಇದಕ್ಕೆ ಹೋಗಲು ದಕ್ಷಿಣದಲ್ಲಿ ಸೇತುವೆ ಇದೆ. ಈ ಸೇತುವೆಯ ಚಿಕ್ಕಚಿಕ್ಕ ಸ್ತಂಭಗಳಷ್ಟೇ ಉಳಿದಿದೆ. ಕೊಳಕ್ಕೆ ಇಳಿಯಲು ಪೂರ್ವದಲ್ಲಿ ಸೋಪಾನಗಳಿವೆ. ಕೊಳದ ನೀರನ್ನು ಹಿಡಿದಿಡಲು, ಭವನದ ಅಧಿಷ್ಠಾನ ಮತ್ತು ಕೊಳದ ನೆಲ ಅದರ ಪಾರ್ಶ್ವಗಳನ್ನು ಗಾರೆಯಿಂದ ಮುಚ್ಚಲಾಗಿದೆ. ಅಧಿಷ್ಠಾನದ ಪಟ್ಟಿಕೆಗಳನ್ನು ಮೀನು, ಮೊಸಳೆ ಮತ್ತು ದೋಣಿಗಳಿಂದ ಅಲ್ಲಲ್ಲಿ ಚಿತ್ರಿಸಲಾಗಿದೆ. ಈ ಕೊಳದ ನಾಲ್ಕು ಮೂಲೆಗಳಲ್ಲಿ ನಾಲ್ಕು ತೆರೆದ ನಾಲ್ಕು ಕಂಬಗಳಿಂದ ಕೂಡಿದ ಮಂಟಪಗಳಿದ್ದವು. ಈ ಮಂಟಪಗಳ ಅಡಿಪಾಯವು ವಾಯವ್ಯ ಮತ್ತು ಈಶಾನ್ಯ ದಿಕ್ಕುಗಳಲ್ಲಿ ಉಳಿದುಕೊಂಡಿವೆ. ಜಲಭವನದ ನಾಲ್ಕು ಪಾರ್ಶ್ವಗಳಲ್ಲಿ ಮುಂಚಾಚುಗಳಿವೆ. ಇದು ಒಂದರ ಮೇಲೆ ಮತ್ತೊಂದರಂತೆ ಎರಡು ಅಡಿಪಾಯಗಳನ್ನು ಹೊಂದಿದೆ; ಮೇಲಿನದು ಕೆಳಗಿನದಕ್ಕಿಂತ ಕಿರಿದಾಗಿದೆ.

ಕಮಲ ಮಹಲ್(4): ಜಲಭವನದ ಪೂರ್ವಕ್ಕೆ ಎರಡು ಅಂತಸ್ತಿನ, ಇಸ್ಲಾಮಿಕ್ ಶೈಲಿಯಲ್ಲಿ ನಿರ್ಮಿಸಿದ ಕಟ್ಟಡವಿದೆ. ಇದು ಕಮಲಮಹಲ್ ಎಂದು ಜನಪ್ರಿಯವಾಗಿದೆ. ಇದು ಪ್ರತಿ ಪಾರ್ಶ್ವದಲ್ಲಿ ಎರಡೆರಡು ಮುಂಚಾಚುಗಳ ವಿನ್ಯಾಸ ಅಥವಾ ಸರ್ವತೋಭದ್ರ ಅಧಿಷ್ಠಾನದ ಮೇಲೆ ನಿರ್ಮಾಣವಾಗಿದೆ. ಇದರ ಹಿಂಚಾಚು ಮತ್ತು ಮುಂಚಾಚುಗಳು

ಅಷ್ಟದಳಗಳ ಪದ್ಮದಂತೆ ಕಾಣುತ್ತದೆ.[1] ಇದರ ಅಧಿಷ್ಠಾನವು ಉಪಾನ, ಕಂಠ, ಕುಮುದ, ಕಂಠ ಮತ್ತು ಕಪೋತಗಳಿಂದ ಅಲಂಕೃತವಾಗಿದೆ. ಅಧಿಷ್ಠಾನದ ಮೇಲೆ ಅತಿದಪ್ಪನಾದ ಕಂಬಗಳಿವೆ. ಈ ಕಂಬಗಳು ತಳದಲ್ಲಿ ಚೌಕಾಕಾರವಾಗಿದ್ದು, ಮೇಲೆ ಚೂಪಾದ ಕಮಾನುಗಳಾಗಿವೆ. ಕಮಾನುಗಳು ಕೀರ್ತಿಮುಖಗಳಲ್ಲಿ ಸಂಗಮಿಸುತ್ತವೆ. ಈ ಕಮಾನುಗಳು ಕಮಲದಳ, ಸುರುಳಿಯಲಂಕಾರ, ಹಂಸಪಟ್ಟಿಕೆಗಳಿಂದ ಅಲಂಕೃತವಾಗಿದೆ. ಕಮಾನುಗಳ ನಡುವೆ ವೃತ್ತಾಕಾರದ ಜ್ಯಾಮಿತಿ ವಿನ್ಯಾಸಗಳಿವೆ. ಕಮಲಮಹಲ್‌ನ ಕಂಬಗಳು ಎರಡು ಮುಂಚಾಚುಗಳನ್ನು ಹೊಂದಿದೆ; ಅವುಗಳಿಂದ ಉಂಟಾದ ಕೋನಗಳಲ್ಲಿ ತಾಮ್ರದ ಕೊಳವೆಗಳು ಕಟ್ಟಡದ ಮೇಲ್ತುದಿಯಿಂದ ಕೆಳ ಅಂತಸ್ತಿನವರೆಗೂ ಹಾಯ್ದು ಬಂದಿವೆ. ಇವುಗಳಲ್ಲಿ ನೀರನ್ನು ತುಂಬಿ, ಕಟ್ಟಡವನ್ನು ತಂಪಾಗಿಡಲಾಗುತ್ತಿತ್ತು.

ಈ ಕಟ್ಟಡದ ಈ ಕಾವ್ಯ ಮೂಲೆಯಲ್ಲಿ ಮೇಲಿನ ಅಂತಸ್ತಿಗೆ ಹೋಗಲು ಸೋಪಾನಗಳಿವೆ. ಈ ಸೋಪಾನಗಳ ಕೊಠಡಿಯು ಒರಟಾಗಿದ್ದು, ಅನಂತರದ ಕಾಲದಲ್ಲಿ ಪುನರ್ನಿರ್ಮಾಣವಾಗಿರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಎರಡು ಭಾಗುಳ್ಳ ಚೆಜ್ಜ ಕಟ್ಟಡದ ಸುತ್ತಲೂ ರಚನೆಯಾಗಿದೆ. ಮಹಲ್‌ನ ಮುಖ್ಯ ನಾಲ್ಕು ಮುಂಚಾಚುಗಳಲ್ಲಿ ನಾಲ್ಕು ಗೋಪುರ ಅಥವಾ ಶಿಖರಗಳಿವೆ. ಇವು ಪಿರಮಿಡ್ ಆಕಾರದಲ್ಲಿದ್ದು, ಅವುಗಳ ಕುಡಿಗಳಲ್ಲಿ ಅಷ್ಟಮುಖ ಗುಮ್ಮಟ (dome)ಗಳಿವೆ. ಮಧ್ಯದಲ್ಲಿ ಇವುಗಳಿಗಿಂತ ದೊಡ್ಡದಾದ ಶಿಖರವಿದೆ. ಇದರ ತುದಿಯಲ್ಲಿ ಅಷ್ಟಮುಖ ಗುಮ್ಮಟವಿದೆ.

ಕಾವಲು ಗೋಪುರಗಳು (5)

ಮೂರು ಕಾವಲು ಗೋಪುರಗಳನ್ನು ಜನಾನ ಸಂಕೀರ್ಣದ ಪ್ರಾಕಾರದ ಗೋಡೆಗಳಿಗೆ ತಾಗಿದಂತೆ ನಿರ್ಮಿಸಲಾಗಿದೆ. ಇವುಗಳನ್ನು ಈ ಕಟ್ಟಡಗಳ ಪಹರೆ ಮತ್ತು ಕಾವಲಿಗಾಗಿ ಮೀಸಲಿಡಲಾಗಿದೆ. ಇವುಗಳಲ್ಲಿ ಎರಡು ಉತ್ತರದಲ್ಲಿ ಮತ್ತೊಂದು ಆಗ್ನೇಯ ದಿಕ್ಕಿನಲ್ಲಿದೆ. ಮುಖ್ಯ ಅರಮನೆಯ ಅಧಿಷ್ಠಾನದಲ್ಲಿ ಎದುರಿಗಿರುವ ಗೋಪುರದ ಚೌಕಾಕಾರದ ವಿನ್ಯಾಸದಲ್ಲಿದ್ದು ಉತ್ತಮ ಸ್ಥಿತಿಯಲ್ಲಿದೆ. ಅದರ ಒಳಗೆ ಏರು ಮೆಟ್ಟಿಲುಗಳಿದ್ದು, ತುದಿಯಲ್ಲಿರುವ ಮಂಟಪ ಅಥವಾ ಮಳಿಗೆ ಅವಕಾಶನ್ನು ಕಲ್ಪಿಸುತ್ತದೆ. ಈ ಮಳಿಗಯು ಮುಂಚಾಚಿದ ಮೊಗಸಾಲೆಯನ್ನು ಹೊಂದಿದೆ. ಇದು ವಿಸ್ತೃತವಾಗಿ ಅಲಂಕಾರವಾಗಿದೆ.

ಇತರ ಕಟ್ಟಡಗಳು

ಜನಾನ ಆವರಣದ ಮಧ್ಯದಲ್ಲಿ ಮತ್ತು ಮುಖ್ಯ ಅರಮನೆಯ ಪೂರ್ವಕ್ಕೆ ದೊಡ್ಡದಾದ ಆಯತಾಕಾರದ ಕೊಳವಿದೆ. ಅದರ ಪಶ್ಚಿಮದಲ್ಲಿ ಸೋಪಾನಗಳಿವೆ. ಈ ಕೊಲದ ಈಶಾನ್ಯಕ್ಕೆ ಉದ್ದದ ಅರೆಯ ಮೇಲೆ ಮತ್ತೊಂದು ಅರಮನೆಯ ಅವಶೇಷಗಳು ಅತ್ಯಲ್ಪ ಪ್ರಮಾಣದಲ್ಲಿ ಉಳಿದುಕೊಂಡಿದೆ. ಇದು ಉದ್ದವಾದ ಕಟ್ಟಡ ಮತ್ತು ಇದರ

ದಕ್ಷಿಣದ ತುದಿಯಲ್ಲಿ ಆಯತಾಕಾರದ ಕೊಠಡಿ ಇದೆ. ಇದರ ಅಡಿಪಾಯದ ಪಟ್ಟಿಕೆಗಳು ಕೆತ್ತನೆಯಿಂದ ಕೂಡಿದೆ.

II

ಮೇಲಿನ ಎಲ್ಲ ಕಟ್ಟಡಗಳನ್ನು ಒಳಗೊಂಡ ಉತ್ತರದ ಪ್ರಾಕಾರದ ಸಂಕೀರ್ಣವನ್ನು ಜನಾನ ಆವರಣ[2] ಎಂದು ಕರೆಯಲಾಗಿದೆ. ಈ ಹೇಳಿಕೆಗೆ ಯಾವುದೇ ಇತಿಹಾಸ ಮತ್ತು ಪುರಾತತ್ವ ಆಧಾರಗಳಿಲ್ಲ. ಇದನ್ನು ಸ್ತ್ರೀಯರ ಆವರಣ ಎಂದು ಭಾವಿಸಲು ಯಾವುದೇ ಇತಿಹಾಸ ಸಾಕ್ಷ್ಯಗಳು ದೊರೆಯುವುದಿಲ್ಲವೆಂದು ಜಾರ್ಜ್ ಮಿಷಲ್ ಮತ್ತು ಅವರ ಸಂಗಡಿಗರು ಅಭಿಪ್ರಾಯಪಡುತ್ತಾರೆ.[3] ಜನಾನ ಆವರಣ, ಕಮಲ ಮಹಲ್ ಮುಂತಾದ ವೈನೋದಿಕ ಹೆಸರುಗಳನ್ನು ಪುರಾತತ್ವ ಇಲಾಖೆಯ ಸಂಶೋಧಕ ಅಧಿಕಾರಿಗಳು ನೀಡಿದರು. ಅಲೆಕ್ಸಾಂಡರ್ ರೀ 1880 ರ ದಶಕದಿಂದ 1913 ರವರೆಗೆ ಪುರಾತತ್ವ ಇಲಾಖೆಯ ಸದರ್ನ್ ಸರ್ಕಲ್ ಮದ್ರಾಸ್‌ನ ಪುರಾತತ್ವ ಅಧೀಕ್ಷಕ ಅಧಿಕಾರಿ (Superintending Archeologist) ಆಗಿದ್ದನು. ಇವನು ಹಂಪಿಯ ಅರಮನೆ ಪ್ರದೇಶದಲ್ಲಿ ಉತ್ಖನನವನ್ನು ನಡೆಸಿ, ಕೆಲ ಅರಮನೆಗಳ ಅವಶೇಷಗಳನ್ನು ಬೆಳಕಿಗೆ ತಂದನು. ಇವನು ಈಗಿನ ಕಮಲಮಹಲನ್ನು **ಸಮಾಲೋಚನಾ ಕೊಠಡಿ** ಅಥವಾ Council Room ಎಂದು ಕರೆದು[4] ಇದರ ಸುತ್ತ ಉತ್ಖನನವನ್ನು ನಡೆಸಿ, ಜಲಭವನ ವನ್ನು 1909-1910ರಲ್ಲಿ ಪತ್ತೆಹಚ್ಚಿದನು.[5] ಆರ್ಕಿಯೊಲಾಜಿಕಲ್ ಸರ್ವೆಯ ಪಶ್ಚಿಮ ಸರ್ಕಲ್‌ನಲ್ಲಿದ್ದ ಎ.ಎಚ್.ಲಾಂಗ್‌ಹರ್ಸ್ಟ್‌ನು 1911ರ ಸೆಪ್ಟಂಬರ್ ತಿಂಗಳಲ್ಲಿ ಸದರ್ನ್ ಸರ್ಕಲ್‌ಗೆ ವರ್ಗಾವಣೆ ಆಗಿಬಂದನು. ಇವನನ್ನು ರೀ ಬಳ್ಳಾರಿ ಮತ್ತು ಅದರ ನೆರೆಯ ಜಿಲ್ಲೆಗಳಿಗೆ ಸಂರಕ್ಷಣಾ ಪ್ರವಾಸವನ್ನು ಕೈಗೊಳ್ಳಲು ಕಳುಹಿಸಿದ.[6] ಅನಂತರ ಲಾಂಗ್ ಹರ್ಸ್ಟ್‌ನು ಹಂಪಿ ಕಟ್ಟಡಗಳ ಅಧ್ಯಯನವನ್ನು ಆರಂಭಿಸಿದ. ಅಲೆಕ್ಸಾಂಡರ್ ರೀ ದಕ್ಷಿಣ ಸರ್ಕಲ್‌ನ ಅಧೀಕ್ಷಕನಾಗಿ 1913ರ ಅಕ್ಟೋಬರ್ 16 ರಂದು ನಿವೃತ್ತನಾಗಿ ಲಾಂಗ್ ಹರ್ಸ್ಟ್‌ನಿಗೆ ಅಂದೇ ಕಾರ್ಯಭಾರವನ್ನು ನಡೆಸಿಕೊಟ್ಟ. ಅನಂತರ ಲಾಂಗ್ ಹರ್ಸ್ಟ್‌ನು ಪ್ರತಿವರ್ಷವೂ ಹಂಪಿಯನ್ನು ಸಂದರ್ಶಿಸಿ, ಹಂಪಿಯ ಕಟ್ಟಡಗಳ ವಿಸ್ತೃತ ಅಧ್ಯಯನವನ್ನು ಕೈಗೊಂಡ. ಅವನೇ ಹಂಪಿಯ ಕಟ್ಟಡಗಳಿಗೆ ಬಹುತೇಕ ಕಲ್ಪನೆಯ ಮೇಲೆ ಹೆಸರುಗಳನ್ನು ಇಟ್ಟ. ಅವನು Council Hallನ್ನು Lotus Mahal ಎಂದೂ, ಅದರ ಸಂಕೀರ್ಣವನ್ನು Zenana Enclosure ಎಂದು ಕರೆದ.[7] ಹಂಪಿಯಲ್ಲಿ ಅವನು ನಡೆಸಿದ ಅಧ್ಯಯನವನ್ನು Hampi itali Ruins ಎಂಬ ಕಿರುಗಾತ್ರದ ಗ್ರಂಥದಲ್ಲಿ 1917ರಲ್ಲಿ ಪ್ರಕಟಿಸಿದ. ಈ ಗ್ರಂಥ ಮುಂದೆ ಹಂಪಿಯ ಮೇಲೆ ನಡೆದ ಅಧ್ಯಯನ ಗಳಿಗೆಲ್ಲ ಅಡಿಪಾಯವಾಯಿತು.

III

ಮೇಲಿನ ಅವಲೋಕನದಿಂದ ಹಂಪಿಯ ಕಟ್ಟಡಗಳಿಗೆ ಕೊಟ್ಟ ಹೆಸರುಗಳು ಮೂಲ ಹಾಗೂ ಸಮರ್ಪಕ ನಾಮಧೇಯಗಳಿಲ್ಲ ಎಂಬುದು ಖಚಿತವಾಗುತ್ತದೆ. ಊಹೆಯಿಂದ

ಮಾಡಿದ ತೀರ್ಮಾನಗಳು ಸರಿಯಾಗಿರುವ ಸಾಧ್ಯತೆ ಇಲ್ಲ. ಅವುಗಳ ನಾಮಧೇಯಗಳನ್ನು ವಿಶ್ಲೇಷಿಸುವ ಮೊದಲು, ಅವುಗಳಿಗೆ ಸಂಬಂಧಿಸಿದಂತೆ ವಿಜಯನಗರ ಸಾಮ್ರಾಜ್ಯದ ಇತಿಹಾಸದ ಹಿನ್ನೆಲೆಯನ್ನು ಅರಿಯುವುದು ಅಗತ್ಯ.

ಹದಿನಾರನೇ ಶತಮಾನದಲ್ಲಿ ವಿಜನಯಗರ ಸಾಮ್ರಾಜ್ಯದ ಮಹತ್ವದ ಅರಸ ಕೃಷ್ಣದೇವರಾಯ. ಅವನು ಸೂಕ್ತ ಉತ್ತರಾಧಿಕಾರಿ ಇಲ್ಲದೆ 1529ರಲ್ಲಿ ಗತಿಸಿದ. ಅರವೀಡು ವಂಶದ ರಾಮರಾಯ ಅವನ ಅಳಿಯ. ಅವನು ಅಳಿಯ ರಾಮರಾಯನೆಂದೇ ಖ್ಯಾತನಾಗಿದ್ದಾನೆ. ಅವನು ವಿಜನಯಗರ ಸಾಮ್ರಾಜ್ಯದ ಕೊನೆಯ ದಶಕಗಳಲ್ಲಿ ಮತ್ತು ಸಾಮ್ರಾಜ್ಯದ ವಿನಾಶದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದನು. ಕೃಷ್ಣದೇವರಾಯನ ನಂತರ ಅವನ ಮಲಸಹೋದರ ಅಚ್ಯುತರಾಯ ಅರಸನಾಗಿ 1542ರವರೆಗೆ ಆಳಿದ. ಅವನ ಸಾವಿನ ನಂತರ ಅವನ ಕಿರಿಯ ವಯಸ್ಸಿನ ಮಗ ವೆಂಕಟಾದ್ರಿ, ಸೋದರಮಾವ ಸಲಕ ಚಿನ್ನ ತಿರುಮಲನ ಬೆಂಬಲದಿಂದ ಅಧಿಕಾರಕ್ಕೆ ಬಂದ. ಈ ಸಮಯದಲ್ಲೇ ರಾಜಕೀಯ ಅಸ್ಥಿರತೆ ಉಂಟಾಯಿತು. ದುರಾಸೆಯವನು ಮತ್ತು ಉನ್ನತ್ತ ಪ್ರವೃತ್ತಿಯವನು ಆದ ಸಲಕ ಚಿನ್ನ ತಿರುಮಲ ರಾಜಕುಮಾರ ವೆಂಕಟಾದ್ರಿಯನ್ನು ಕೊಂದು, ಸಾಮ್ರಾಜ್ಯವನ್ನು ಆಳತೊಡಗಿದ. ಸಾಮ್ರಾಜ್ಯದ ಮತ್ತೊಬ್ಬ ಉತ್ತರಾಧಿಕಾರಿಯಾದ ಸದಾಶಿವ ರಾಯನ ಪರವಾಗಿ ಅಳಿಯ ರಾಮರಾಯ ಸಲಕ ಚಿನ್ನ ತಿರುಮಲವನ್ನು ವಿರೋಧಿಸಿದ. ರಾಮರಾಯ ತಿರುಮಲವನ್ನು ಅನೇಕ ಯುದ್ಧಗಳಲ್ಲಿ ಸೋಲಿಸಿದ. ಅವರಿಬ್ಬರ ನಡುವೆ ತುಂಗಭದ್ರಾ ನದಿಯ ದಂಡೆಯ ಮೇಲೆ ನಡೆದ ಕದನದಲ್ಲಿ ತಿರುಮಲ ಹತನಾದ.

ಸದಾಶಿವರಾಯ 1542ರಲ್ಲಿ ವಿಜಯನಗರ ಸಾಮ್ರಾಜ್ಯದ ಚಕ್ರವರ್ತಿ ಆದ. ಅರಸ ಕಿರಿಯವನಾದ್ದರಿಂದ, ಅವನ ರಕ್ಷಕನಾದ ಅಳಿಯ ರಾಮರಾಯ ಅವನ ಪ್ರತಿನಿಧಿಯಾಗಿ ಆಳ್ವಿಕೆ ನಡೆಸತೊಡಗಿದ. ಅರಸ 1550 ರಲ್ಲಿ ಪ್ರಾಪ್ತ ವಯಸ್ಕನಾಗಿ, ಸ್ವತಂತ್ರನಾಗಿ ಆಳಲು ಆರಂಭಿಸಿದಾಗ, ಅಳಿಯ ರಾಮರಾಯ ಇದಕ್ಕೆ ಅವಕಾಶವನ್ನು ಕೊಡಲಿಲ್ಲ. ಅವನೇ ಸರ್ವಾಧಿಕಾರಿಯಾದ. ಸದಾಶಿವರಾಯ ತನ್ನ ಪ್ರತಿನಿಧಿಯಿಂದಲೇ ಬಂಧನಕ್ಕೆ ಗುರಿಯಾದ. ಅನಂತರ ಸಾಮ್ರಾಜ್ಯದ ಇತಿಹಾಸದಲ್ಲಿ ಅವನು ಸರ್ವಶಕ್ತ ವ್ಯಕ್ತಿ ಆದ. ಸಾಮ್ರಾಜ್ಯವನ್ನು ನಾಶ ಮಾಡಿದ ರಕ್ಕಸ-ತಂಡಗಿ ಯುದ್ಧಕ್ಕೆ (1556) ಕಾರಣನಾದ. ಆ ಯುದ್ಧದಲ್ಲಿ ಅವನೂ ಹತ್ಯೆ ಆದ.

ಕಿರಿಯ ಬ್ರಾಹ್ಮಣ ಅಧಿಕಾರಿ ಆಗಿದ್ದ ರಾಮಾಮಾತ್ಯ ಅಥವಾ ಬಯಕಾರ ರಾಮಪ್ಪನನ್ನು[8] ಅಚ್ಯುತರಾಯನ ಕಾಲದಲ್ಲೇ ಕೊಂಡುವೀಡು ದುರ್ಗದ ಅಧಿಪತಿಯಾಗಿ ನೇಮಕ ಮಾಡಲಾಗಿತ್ತು. ಅಳಿಯ ರಾಮರಾಯ ಸಾಮ್ರಾಜ್ಯದ ಸರ್ವಾಧಿಕಾರಿಯಾದಾಗ, ಅವನ ತಮ್ಮ ವೆಂಕಟನಿಂದ ರಾಮಾಮಾತ್ಯ ರಾಮರಾಯನ ವಿಶ್ವಾಸವನ್ನು ಗಳಿಸಿದ. ರಾಮಾಮಾತ್ಯ ದೊಡ್ಡ ಸಂಸ್ಕೃತ ವಿದ್ವಾಂಸ. ವಾಸ್ತುಕಾರ ಮತ್ತು ವಾಗ್ಗೇಯಕಾರನಾಗಿದ್ದ.

ಇವನು ಅನೇಕ ಅಗ್ರಹಾರಗಳನ್ನು ಕಟ್ಟಿಸಿದ್ದಾನೆ. ಇವನು ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೋಕಿನ ತಿಮ್ಮಲಾಪುರದಲ್ಲಿ ಅನೇಕ ಸುಂದರವಾದ ದೇವಾಲಯಗಳನ್ನು ನಿರ್ಮಿಸಿದ್ದಾನೆ. ಈ ದೇವಾಲಯಗಳು ಹಂಪಿಯಲ್ಲಿ ಅರಸರು ಕಟ್ಟಿಸಿದ ದೇವಾಲಯಗಳಿಗಿಂತಲೂ ಸುಂದರವಾಗಿವೆ. ಇವುಗಳಲ್ಲಿ ಅಪರೂಪದ ಶಿಲ್ಪಗಳಿವೆ. ಹಂಪಿಯ ದೇವಾಲಯಗಳಲ್ಲೂ ಕಾಣದಿರುವ ಶಿಲ್ಪಗಳು ತಿಮ್ಮಲಾಪುರದ ದೇಗುಲಗಳಲ್ಲಿ ಕಾಣಬಹುದು.[9] ರಾಮಾಮಾತ್ಯನು ಸಂಸ್ಕೃತದಲ್ಲಿ 'ಸ್ವರಮೇಲಕಲಾನಿಧಿ' ಎಂಬ ಸಂಗೀತ ಗ್ರಂಥವನ್ನು ರಚಿಸಿದ್ದಾನೆ. ಇದು ಕರ್ನಾಟಕ ಸಂಗೀತಕ್ಕೆ ವಿಶಿಷ್ಟ ಕೊಡುಗೆ ಆಗಿದೆ. ಈ ಗ್ರಂಥ ರಾಜಕೀಯವಾಗಿಯೂ ವಿಶಿಷ್ಟ ವಿಷಯವನ್ನು ಒಳಗೊಂಡಿದೆ. ಅವನು ತನ್ನ ಒಡೆಯ ಅಳಿಯ ರಾಮರಾಯನಿಗಾಗಿ, ಅವನ ಆದೇಶದಂತೆ ರತ್ನಕೂಟ ಎಂಬ ಭವ್ಯವಾದ ಅರಮನೆಗಳ ಸಂಕೀರ್ಣವನ್ನು ಕಟ್ಟಿಸಿದನೆಂದು ತನ್ನ ಗ್ರಂಥದಲ್ಲಿ ತಿಳಿಸುತ್ತಾನೆ.[10] ''ರತ್ನಕೂಟ ಎಣೆಯಿಲ್ಲದ ಚಲುವಿನಿಂದ ಕೂಡಿತ್ತು, ಹಾಗೂ ಇಂದ್ರನ ಅರಮನೆಯನ್ನು ಮೀರಿಸುವಂತಿತ್ತು. ರಾಮರಾಯ ಇವನ್ನು ನೋಡಿ, ಆನಂದದಲ್ಲಿ ತನ್ನನ್ನು ತಾನೇ ಮರೆತ'' ಎಂದು ಬಯಕಾರ ರಾಮಪ್ಪ ವರ್ಣಿಸುತ್ತಾನೆ. ''ಈ ಅರಮನೆ ಸಂಕೀರ್ಣ ಇಂದ್ರಸಭಾ, ಕ್ರೀಡಾಭವನ, ಹಂಸಗಳಿಂದ ಸುತ್ತುವರೆದ ಜಲಭವನ ಮುಂತಾದ ಅರಮನೆಗಳಿಂದ ಕೂಡಿತ್ತು. ರತ್ನಕೂಟ ಎಂದರೆ ಎಂದರೆ ರತ್ನಗಳ ಸಮೂಹ ಎಂದರ್ಥ. ಈ ಸಂಕೀರ್ಣವೂ ಸಹ ರತ್ನದಂತಹ ಕಟ್ಟಡಗಳಿಂದ ಕೂಡಿತ್ತು ಎನ್ನುವುದು ಅತಿಶಯೋಕ್ತಿಯಲ್ಲದ ಹೇಳಿಕೆ. ಈ ವಿವರಣೆಯು ಹಂಪಿ ಅಥವಾ ವಿಜಯನಗರದ ಅರಮನೆಯ ಪ್ರದೇಶದ ಜನಾನ ಆವರಣಕ್ಕೆ ಸ್ಪಷ್ಟವಾಗಿ ಅನ್ವಯ ಆಗುತ್ತದೆ. ವಿದ್ವಾಂಸರೊಬ್ಬರು ಕಮಲಮಹಲ್‌ನ್ನೇ ರತ್ನಕೂಟವೆಂದು ಗುರುತಿಸಿದ್ದಾರೆ.[11] ರತ್ನಕೂಟ ಕೇವಲ ಕಮಲಮಹಲ್ ಆಗಿರದೆ, ಜನಾನ ಆವರಣದ ಎಲ್ಲ ಕಟ್ಟಡಗಳನ್ನು ಒಳಗೊಂಡಿತ್ತು.

'ಸ್ವರಮೇಲಕಲಾನಿಧಿ' ಸಂಗೀತ ಕಾವ್ಯದ ಸಮಾಪ್ತಿ ಪದ್ಯದಲ್ಲಿ ರಾಮಾಮಾತ್ಯನು ತನ್ನ ಗ್ರಂಥವನ್ನು 1550ರ ಆಗಸ್ಟ್ 21 ರಂದು ಪೂರ್ಣಗೊಳಿಸಿದನೆಂದು ತಿಳಿಸುತ್ತಾನೆ. ರಾಮಚಂದ್ರ (ಹಜಾರರಾಮ) ದೇಗುಲದಿಂದ ಶೃಂಗಾರದ ಹೆಬ್ಬಾಗಿಲವರೆಗೆ ಸಿಗುವ ಶಾಸನಗಳು ವಿವಿಧ ಕಟ್ಟಡಗಳ ನಿರ್ಮಾಣದ ಬಗ್ಗೆ ಮತ್ತು ಅಲ್ಲಿರುವ ಅರಮನೆಗಳ ಬಗ್ಗೆ ಸ್ಥೂಲವಾಗಿ ತಿಳಿಸುತ್ತದೆ. ಇದರಿಂದ ಜನಾನ ಆವರಣ 1542ರ ಪೂರ್ವದಲ್ಲಿ ನಿರ್ಮಾಣವಾಗಿಲ್ಲದಿರುವುದು ತಿಳಿಯುತ್ತದೆ.[13] ಇದು ಗಮನಿಸಬೇಕಾದ ಪ್ರಮುಖ ಸಂಗತಿ.

ರಾಮರಾಯ ರತ್ನಕೂಟ ಅರಮನೆ ಸಂಕೀರ್ಣವನ್ನು ತನಗಾಗಿ ರಾಮಾಮಾತ್ಯನ ನಿರ್ದೇಶನ ಮತ್ತು ಪರಿವೀಕ್ಷಣೆಯಲ್ಲಿ ನಿರ್ಮಿಸಿದ. ಮೂರು ಅಡಿಪಾಯ ಅಥವಾ

ಅಧಿಷ್ಠಾನವನ್ನು ಹೊಂದಿರುವ ಅರಮನೆ ಜನಾನ ಆವರಣದಲ್ಲಿರುವುದನ್ನು ಗಮನಿಸಿದ್ದೇವೆ. ಇದು ಹಂಪಿಯಲ್ಲಿ ದೊರೆತಿರುವ ಎಲ್ಲ ಅರಮನೆಗಳಿಗಿಂತ ಎತ್ತರವಾದದ್ದು ಮತ್ತು ದೊಡ್ಡದಾದದ್ದು. ಇಂತಹ ವೈಭವಯುಕ್ತ ಹಾಗೂ ಭವ್ಯ ಅರಮನೆ ರಾಜನಿಗೆ ಅಥವಾ ರಾಮರಾಯನಂತಹ ಸರ್ವಾಧಿಕಾರಿಗೆ ಅನುಪಮವಾದ ಮತ್ತು ಅವಶ್ಯವಾದ ಕಟ್ಟಡ. ಇಂತಹ ಅಂಶವನ್ನು ನಿರ್ಲಕ್ಷಿಸಿ, ಅಲೆಕ್ಸಾಂಡರ್ ರೀ ಮತ್ತು ಲಾಂಗ್‌ಹರ್ಸ್ಟ್‌ರು ರಾಣಿಯ ಅರಮನೆ ಎಂದು ಕರೆದಿದ್ದಾನೆ. ಅವರು ಖಚಿತವಾಗಿ ಗುರುತಿಸಿಲ್ಲ. ಇದು ವಿಜಯನಗರದ ರಾಣಿಯರಿಗೆ ಸಂಬಂಧಿಸಿದ ಕಟ್ಟಡ ಎಂದು ಪರಿಗಣಿಸಲು ಯಾವುದೇ ಆಧಾರಗಳು ದೊರೆಯುವುದಿಲ್ಲ. ಈ ಭವ್ಯ ಅರಮನೆ ವಾಸ್ತವವಾಗಿ ರಾಮರಾಯನದು. ಉತ್ತರಭಾರತದ (ಮಧ್ಯಕಾಲೀನ) ಮುಸ್ಲಿಂ ಅರಸರು ತಾವು ಅಧಿಕಾರ ಸ್ವೀಕರಿಸಿದ ನಂತರ ಹಿಂದಿನ ಅರಸರ ಅರಮನೆಗಳನ್ನು ಕೆಡವಿ, ಅವುಗಳ ಸ್ಥಾನದಲ್ಲಿ ತಮಗೆ ಬೇಕಾದಂತೆ ಅರಮನೆಗಳನ್ನು ನಿರ್ಮಿಸುವುದು ಸಾಮಾನ್ಯ ಸಂಗತಿ ಆಗಿತ್ತು. ಆದ್ದರಿಂದ ಅರಮನೆಗಳ ಅವಶೇಷಗಳು ಅಧಿಕ ಪ್ರಮಾಣಲ್ಲಿ ದೊರೆಯುವು ದಿಲ್ಲ. ಇವುಗಳ ಬದಲು ಮಸೀದಿಗಳು. ಗೋರಿಗಳು, ರೌಜಗಳು ಮುಂತಾದ ಧಾರ್ಮಿಕ ಕಟ್ಟಡಗಳ ಅವಶೇಷಗಳು ಹೆಚ್ಚಿನ ಪ್ರಮಾಣದಲ್ಲಿ ದೊರೆಯುತ್ತವೆ. ಈ ವ್ಯವಸ್ಥೆ ದಕ್ಷಿಣ ಭಾರತದಲ್ಲೂ ಜಾರಿಯಲ್ಲಿ ಇಲ್ಲದೇ ಇರಲಿಲ್ಲ. ಈಗ ಹಂಪಿಯಲ್ಲಿ ಉಳಿದಿರುವ ಎಲ್ಲ ಕಟ್ಟಡಗಳು ವಿಜಯನಗರ ಸಾಮ್ರಾಜ್ಯದ ನಾಶದ ತುಸು ಪೂರ್ವದಲ್ಲಿ ಜೀವಂತ ವಾಗಿದ್ದವು ಎಂಬುದು ಗಮನಿಸಬೇಕಾದ ಸಂಗತಿ. ಅಳಿಯ ರಾಮರಾಯನ ರತ್ನಕೂಟ ಅರಮನೆಯು ವಿಜಯನಗರ ಸಾಮ್ರಾಜ್ಯದ ಅಂತಿಮ ಹಂತದಲ್ಲಿ ನಿರ್ಮಾಣವಾದ್ದರಿಂದ, ಹಂಪಿಯ ಅವಶೇಷಗಳಲ್ಲಿ ಉಳಿದುಬಂದಿದೆ.

ಕಮಲ್‌ಮಹಲ್ ಎಂದು ಕರೆಯುವ ಕಟ್ಟಡವು ಅತಿ ಚಲುವಿನ ಭವ್ಯವಾದ ರಚನೆ. ಇದು ಸುತ್ತಲೂ ತೆರೆದ ಸಭಾಂಗಣ. ರಾಮಾಮಾತ್ಯನು ರತ್ನಕೂಟದಲ್ಲಿ ಭವ್ಯವಾದ ಇಂದ್ರಸಭಾಂಗಣದಲ್ಲಿ ನಿರ್ಮಿಸಿದನೆಂದು, ತನ್ನ ಗ್ರಂಥದಲ್ಲಿ ತಿಳಿಸುತ್ತಾನೆ.[14] ಇಂದಿನ ಕಮಲ ಮಹಲ್ ಅಂದು ಇಂದ್ರಸಭಾಂಗಣವಾಗಿತ್ತು. ರಾಮರಾಯನು ಇದರಲ್ಲಿ ತನ್ನ ಸಹೋದರರು, ಗಣ್ಯರು ಮತ್ತು ರಾಮಾಮಾತ್ಯನು ಸೇರಿದಂತೆ ಎಲ್ಲರೊಂದಿಗೆ ಸಂಗೀತ ಸುಧೆಯನ್ನು ಆಸ್ವಾದಿಸುತ್ತಿದ್ದ ಎಂದು ಬಯಕಾರ ರಾಮಾಮಾತ್ಯನೇ ತಿಳಿಸಿದ್ದಾನೆ. ಇದು ತೆರೆದ ಸಭಾಂಗಣವಾದ್ದರಿಂದ ಸಂಗೀತದ ಆಸ್ವಾದನೆಗೆ ಅನುಕೂಲಕರವಾದ ಕಟ್ಟಡವಾಗಿದೆ. ಇಂದ್ರ ಸಭಾಂಗಣ ಅಥವಾ ಕಮಲಮಹಲ್‌ನ ಒಂಬತ್ತು ಅಂಕಣದ ಮೇಲೆ ಒಂಬತ್ತು ಶಿಖರಗಳಿವೆ. ಇದರ ದೊಡ್ಡ ಮತ್ತು ಸಣ್ಣ ಶಿಖರಗಳನ್ನು ಒಂದಾದ ನಂತರ ಮತ್ತೊಂದರಂತೆ ಮುಖ್ಯ ಮತ್ತು ಎರಡನೆಯ ಮುಂಚಾಚುವಿನ ಅಂಕಣದ ಮೇಲೆ ಇಡಲಾಗಿದೆ. ಮಧ್ಯದ ಶಿಖರವು ಉಳಿದಿಲ್ಲ. ಶಿಖರಗಳಿಗಂತ ದೊಡ್ಡದಾಗಿದ್ದು

ಮೂರು ಅಂತಸ್ತು ಅಥವಾ ತಲಗಳನ್ನು ಹೊಂದಿದೆ. ಈ ಶಿಖರಗಳನ್ನು ಕಳಿಂಗ ಅಥವಾ ಘಮ್ಸಾನ ಮಾದರಿಯಲ್ಲಿ ರಚಿಸಲಾಗಿದೆ.

ಬಯಕಾರ ರಾಮಪ್ಪನು ಹಂಸಗಳಿಂದ ಸುತ್ತುವರೆದ ಭವನವನ್ನು ರತ್ನಕೂಟದಲ್ಲಿ ರಚಿಸಿದನೆಂದು ತಿಳಿಸುತ್ತಾನೆ. ಇದು ಸೊಬಗಿನ ಜಲಾವೃತ ಅರಮನೆ. ಇಂದ್ರ ಸಭಾಂಗಣ ಅಥವಾ ಕಮಲ ಮಹಲ್‌ನ ಪಶ್ಚಿಮಕ್ಕೆ ಇರುವ ಜಲಭವನವನ್ನೇ ಬಯಕಾರ ರಾಮಪ್ಪ ನಿರ್ದೇಶಿಸುತ್ತಿರುವುದು. ಮುಖ್ಯ ಅರಮನೆಯ ಪಶ್ಚಿಮಕ್ಕೆ ಉನ್ನತ ಪ್ರಾಕಾರಕ್ಕೆ ಸನಿಹದಲ್ಲಿರುವ ಕಟ್ಟಡವನ್ನು ಸ್ತ್ರೀ ಕಾವಲುಗಾರರ ಕೊಠಡಿ ಎಂದು ಲಾಂಗ್‌ಹರ್ಸ್ಟ್ ತಿಳಿಸುತ್ತಾನೆ.[15] ಇದಕ್ಕೆ ಒಂದೇ ಬಾಗಿಲಿರುವುದು, ಗೋಡೆಗಳ ಎತ್ತರದ ಭಾಗದಲ್ಲಿ ವಾತಾಯನ ಕಿಂಡಿಗಳಿರುವುದು, ಜಂತಿಗಳಲ್ಲಿ ನಾಗರಹೆಡೆಗಳ ಅಲಂಕರಣೆ ಇರುವುದು - ಈ ಅಂಶಗಳೆಲ್ಲ ಈ ಕಟ್ಟಡ ರಾಜರ ಖಜಾನೆ ಆಗಿತ್ತು ಎಂಬುದನ್ನು ಸೂಚಿಸುತ್ತದೆ. ರಕ್ಷಿತ ಸಂಪತ್ತನ್ನು ಸರ್ಪಗಳನು ರಕ್ಷಣೆ ಮಾಡುತ್ತವೆ ಎಂಬ ಪರಿಕಲ್ಪನೆ ಕನ್ನಡನಾಡಿನಲ್ಲಿದೆ. ಇದು 'ಸರ್ಪಗಳು' ಎಂದೇ ಹೆಸರಾಗಿದೆ. ವಿದೇಶಿ ಪ್ರವಾಸಿಗರು ವಿಜಯಗರದ ಅರಸರು ಖಜಾನೆಯನ್ನು ತಮ್ಮ ಅರಮನೆಯಲ್ಲೇ ನಿರ್ಮಿಸಿಕೊಂಡಿದ್ದ ರೆಂದು ತಿಳಿಸುತ್ತಾರೆ.[16] ಆದ್ದರಿಂದ ಈ ಕಟ್ಟಡವು ಮಹಿಳಾ ಕಾವಲುಗಾರರ ಕೊಠಡಿ ಆಗಿರದೆ, ಖಜಾನೆಯ ಮನೆಯಾಗಿತ್ತು ಎಂಬುದು ಖಚಿತವಾಗುತ್ತದೆ.

IV

ಜನಾನ ಆವರಣ, ಕಮಲ ಮಹಲ್ - ಈ ಹೆಸರುಗಳು ಅಪಪ್ರಯೋಗ ಮತ್ತು ವೈನೋದಿಕ ನಾಮಾಂಕಿತಗಳು. ಆರಂಭಿಕ ಪುರಾತತ್ವ ವಿದ್ವಾಂಸರು ತಮ್ಮ ಅಧಿಕೃತ ಪ್ರವಾಸದ ಮೇಲೆ ಹಂಪಿಗೆ ಭೇಟಿ ನೀಡಿದಾಗ, ಅಲ್ಲಿನ ಕಟ್ಟಡಗಳು ಅಥವಾ ಅವಶೇಷ ಗಳನ್ನು ಪರಿಶೀಲಿಸಿ, ತಮ್ಮದೇ ಆದ ಕಲ್ಪನೆಯನ್ನು ರೂಪಿಸಿಕೊಂಡರು. ಇವುಗಳ ನಿರ್ಮಾಣಕಾರ್ಯದಲ್ಲಿ ಮಹತ್ವದ ಪಾತ್ರವಹಿಸಿದ ರಾಮಾಮಾತ್ಯನು ಜನಾನ ಆವರಣದ ಬಗ್ಗೆ ವಿಸ್ತೃತವಾದ ವಿವರಣೆಯನ್ನು ನೀಡಿದ್ದಾನೆ. ಜನಾನ ಆವರಣ ವಾಸ್ತವಾಗಿ ರತ್ನಕೂಟವೇ ಆಗಿದೆ. ಮತ್ತು ಕಮಲಮಹಲ್ ಇಂದ್ರಸಭಾಂಗಣವಾಗಿದೆ. ಮುಖ್ಯ ಅರಮನೆ ಎಂದಿಗೂ ರಾಣಿಯರ ಭವನವಾಗಿರಲು ಸಾಧ್ಯವಿಲ್ಲ. ಅದು ವಿಜಯನಗರ ಸಾಮ್ರಾಜ್ಯದ ಅಂತಿಮ ದಶಕಗಳಲ್ಲಿ, ಅದರ ವ್ಯವಹಾರದಲ್ಲಿ ಪ್ರಮುಖ ಹಾಗೂ ಸರ್ವೋಚ್ಚ ಪಾತ್ರವನ್ನು ನಿರ್ವಹಿಸಿದ ಅಳಿಯ ರಾಮರಾಯನ ಅರಮನೆ ಆಗಿದೆ.

ಟಿಪ್ಪಣಿಗಳು

1. Sherwani, H.K., & Joshi, P., *History of Medieval Deccan*, p.327
2. Longhurst, A.H., *Hampi Ruins*, 1917, pp 78-84
3. Fritz, Michel, Nagaraj Rao, The Royal Centre at Vijayanagar, Preliminary Report, 1984, Melbourne, pp. 33
4. Rea, A., Annual Progress Report 1907-1908; Archaeological Survey Dept. Southern Circle. p. 12
5. Rea., A., Ibid, 1909-10, p.4
6. Rea., A., Ibid, 1911-12
7. Longhurst, A.H., Ibid, p.84
8. Shivarudraswamy, S.N., *Timmapura-Agrahara*, 2005, Mysore, pp, 6-17
9. Shivarudraswamy, S.N., *Ibid*, pp. 33-40, 67-100
10. Aiyyar, Ramaswamy, M.S., (Ed), *Svaramelakanidhi*, 1932, Annamalai, p.43
11. Narasimhaiah, B., *Metropolis Vijayanagara*, 1992, Delhi, p.31, 38
12. Aiyyar, Ramaswamy, M.S., *Ibid*, p. XV
13. Narasimhaiah, B., *Ibid*, pp. 31-32
14. Aiyyar, Ramaswamy, M.S., *Ibid*. p-43
15. Longhurst, A.H., *Ibid*, p. 84

    Devakunjari, *Hampi*, p. 24
16. Sewell, Robert, *The Forgotten Empire*, London, 1900. p. 282

೨೦. ಮಹಾನವಮಿ ವೀಕ್ಷಣ ವೇದಿಕೆ ಮತ್ತು ಪಥಸಂಚಲನೆಯ ಉಬ್ಬುಶಿಲ್ಪಗಳು-ಹೊಸ ಆಕರ

ಡಾ. ಜಗದೀಶ

ವಿಜಯನಗರದ ಪ್ರಮುಖ ಕೇಂದ್ರಬಿಂದು ಹಜಾರ ರಾಮದೇವಾಲಯ. ಇದು ನಾಲ್ಕು ಪ್ರಮುಖ ರಸ್ತೆಗಳು ಕೂಡುವ ಜಾಗ. ಜಾರ್ಜ್ ಮೆಷೆಲ್ ಇದನ್ನು ದೇವರು ಮತ್ತು ರಾಜರು ಭೇಟಿಯಾಗುವ ಸ್ಥಳ (Where the kings and God meet) ಎಂದು ಉಲ್ಲೇಖಿಸಿದ್ದಾರೆ. ಈ ದೇವಾಲಯದ ವಾಯವ್ಯ ಭಾಗದಲ್ಲಿ ವೀರ ಹರಿಹರ ರಾಯನ ಅರಮನೆ ಇತ್ತೆಂದು ಶಾಸನಗಳಿಂದ ದೃಢಪಟ್ಟಿದೆ.

ಹಜಾರರಾಮ ದೇವಾಲಯ ಆವರಣ ಗೋಡೆಯಿಂದ ಸುತ್ತುವರಿಯಲ್ಪಟ್ಟಿದೆ. ಇದರ ಪೂರ್ವ ಮತ್ತು ಉತ್ತರ ಭಾಗದಲ್ಲಿ ಪ್ರವೇಶದ್ವಾರಗಳಿವೆ. ದಕ್ಷಿಣ ಗೋಡೆಯಲ್ಲಿ ಮತ್ತೊಂದು ದ್ವಾರವಿದೆ. ಈ ಆವರಣ ಗೋಡೆಯ ಈಶಾನ್ಯ ಒಳ ಭಾಗದಲ್ಲಿ ರಾಮಾಯಣ ಕಥಾನಕ ಶಿಲ್ಪಪಟ್ಟಿಗಳಿವೆ. ಆವರಣ ಗೋಡೆಯ ಹೊರಭಾಗದಲ್ಲಿ ದಕ್ಷಿಣ, ಉತ್ತರ ಮತ್ತು ಈಶಾನ್ಯ ಬಾಗದಲ್ಲಿ ಐದು ಪಟ್ಟಿಕೆಗಳಲ್ಲಿ ಉಬ್ಬುಶಿಲ್ಪಗಳಿವೆ. ಗೋಡೆಯ ಮೇಲ್ಗಡೆ ಕೋಟೆಗಳಲ್ಲಿದ್ದಂತೆ ತೆನೆಯ ಅಲಂಕರಣವಿದೆ. ಸಾಲುಪಟ್ಟಿಕೆಗಳಲ್ಲಿನ ಚಿತ್ರಣವು ಎಲ್ಲಾ ದಿಕ್ಕುಗಳಲ್ಲಿ ಎಂದೇ ಮಾದರಿಯಲ್ಲಿವೆ. ಮೊದಲ ತಳಪಟ್ಟಿಕೆಯಲ್ಲಿ ಆನೆಗಳ ಶಿಲ್ಪ, ಎರಡನೆಯ ಪಟ್ಟಿಕೆಯಲ್ಲಿ ಅಶ್ವ, ಮೂರನೆಯ ಪಟ್ಟಿಕೆಯಲ್ಲಿ ಕಾಲಾಳುಗಳು ನಾಲ್ಕನೆಯ ಮತ್ತು ಐದನೆಯ ಪಟ್ಟಿಕೆಯಲ್ಲಿ ಸಾಂಸ್ಕೃತಿಕ ಮೆರವಣಿಗೆಯ ದೃಶ್ಯಗಳಿವೆ.

ಎಲ್ಲಾ ಪಟ್ಟಿಕೆಗಳಲ್ಲಿನ ಶಿಲ್ಪಗಳು ಒಂದೇ ದಿಕ್ಕಿಗೆ ಮುಖ ಮಾಡಿದ್ದು, ಆವರಣ ಗೋಡೆಯ ದಕ್ಷಿಣ ಭಾಗದ ಶಿಲ್ಪಗಳು ಉತ್ತರಕ್ಕೆ ಮುಖ ಮಾಡಿರುವಂತೆ, ಉತ್ತರ ಭಾಗದ ಶಿಲ್ಪಗಳು ಪೂರ್ವಕ್ಕೆ ಮುಖ ಮಾಡಿರುವಂತೆ ಮತ್ತು ಈಶಾನ್ಯ ಭಾಗದ ಶಿಲ್ಪಗಳು ದಕ್ಷಿಣಕ್ಕೆ ಮುಖ ಮಾಡಿರುತ್ತವೆ. ಈ ಶಿಲ್ಪಗಳನ್ನು ಕ್ರಮವಾಗಿ ಗಮನಿಸಿದರೆ ಅವು ಚಲನೆಯನ್ನು ರೂಪಿಸಿದಂತೆ ತೋರುತ್ತದೆ. ಇದು ಮಹಾನವಮಿ ಆಚರಣೆಯ ಕೊನೆಯ ದಿನ ಆಯೋಜಿಸಲಾಗುತ್ತಿದ್ದ ಪಥಸಂಚಲನೆಯ ಚಿತ್ರಮದಂತೆ ತೋರುತ್ತದೆ. ಶಿಲ್ಪವು ಕ್ರಮಾನುಕ್ರಮಣಿಕೆಯಲ್ಲಿ ಗಜ, ಅಶ್ವ, ಪದಾತಿಗಳು ಮತ್ತು ಸಾಂಸ್ಕೃತಿಕ ತಂಡಗಳ ಸಾಲುಗಳಿವೆ. ಆವರಣ ಗೋಡೆಯ ದಕ್ಷಿಣ, ಉತ್ತರ ದಿಕ್ಕಿನ ಚಿತ್ರಣಗಳಲ್ಲಿ ಮಧ್ಯದ

ಸಾಲಿನ ಕೊನೆಯ ಭಾಗದಲ್ಲಿ ಮಂಟಪದಲ್ಲಿ ಕುಳಿತ ರಾಜದಂಪತಿಗಳ ಶಿಲ್ಪವಿದೆ. ಈ ಶಿಲ್ಪವನ್ನು ಎಲ್ಲಾ ಸಾಲುಗಳ ಎದುರಾಗಿ ಮಂಟಪವನ್ನು ಚಿತ್ರಿಸಲಾಗಿದೆ. ಸ್ಪಷ್ಟವಾಗಿ ರಾಜ ದಂಪತಿಗಳು ಗಮನಾರ್ಹ ಶಿಲ್ಪವೊಂದರಲ್ಲಿ ವೀಕ್ಷಿಸುವ ಶಿಲ್ಪವಾಗಿದೆ.

ಮಹಾನವಮಿ ದಿಬ್ಬದಲ್ಲೂ ಅನೇಕ ಶಿಲ್ಪಗಳಿವೆ. ಗಮನಾರ್ಹ ಶಿಲ್ಪವೊಂದರಲ್ಲಿ ರಾಜನಿಗೆ ನಮಸ್ಕರಿಸುತ್ತಿರುವ ದಂಡನಾಯಕರ/ ಪಾಳೇಗಾರ/ ಅಮರ ನಾಯಕತ್ವ ಪಡೆದ ಪ್ರತಿನಿಧಿಗಳ ಚಿತ್ರಣವಿದೆ. ಇನ್ನೊಂದು ಶಿಲ್ಪದಲ್ಲಿ ರಾಜನು ಉಡುಗೊರೆಯಾಗಿ ಮುತ್ತಿನ ಸರ ನೀಡುತ್ತಿರುವ ಚಿತ್ರಣವಿದೆ.

ಪ್ರವಾಸಿಗ ಡೊಮಿಂಗೋ ಪ್ಯಾಸ್ ದಿನಚರಿಯಲ್ಲಿ ಮಹಾನವಮಿ ಆಚರಣೆಯ ವರ್ಣನೆ

ಡೊಮಿಂಗೋ ಪ್ಯಾಸ್ ವಿಜಯನಗರಕ್ಕೆ ಕ್ರಿ.ಶ. 1536-37ರಲ್ಲಿ ಭೇಟಿ ನೀಡಿದ. ಅವನು ಕಂಡು ಮಹಾನವಮಿ ಆಚರಣೆಯನ್ನು ವರ್ಣಿಸಿದ್ದಾನೆ. ಹನ್ನೆರಡನೆಯ ಸೆಪ್ಟಂಬರ್‌ದಂದು ಪ್ರಾರಂಭವಾಗಿ ಒಂಬತ್ತು ದಿನಗಳು ನಡೆಯುವ ಈ ಉತ್ಸವಗಳು ರಾಜನ ಅರಮನೆಯಲ್ಲಿ ನಡೆಯುತ್ತವೆ. ಅರಮನೆಯ ಮುಂಭಾಗಕ್ಕೆ ಬಯಲು ಸ್ಥಳಕ್ಕೆ ಹೋಗುವ ದ್ವಾರವಿದೆ. ಈ ದ್ವಾರದ ಮೇಲೆ ಸ್ವಲ್ಪ ಎತ್ತರದ ಗೋಪುರವಿದೆ. ಈ ಗೋಪುರದಲ್ಲಿ ಮೊಗಸಾಲೆಗಳಿವೆ. ಈ ದ್ವಾರದ ಹೊರಗೆ ಅರಮನೆಯನ್ನು ಸುತ್ತುವ ಗೋಡೆಯಿದೆ. ಈ ದ್ವಾರ ದಾಟಿದರೆ ಒಂದು ಬಯಲು ಸ್ಥಳವಿದೆ ಮತ್ತು ಅದರನಂತರ ಇನ್ನೊಂದು ದ್ವಾರವುಂಟು. ವಿಶಾಲ ಬಯಲು ಸ್ಥಳದ ಒಂದು ಬದಿಗೆ ಮತ್ತು ಇನ್ನೊಂದು ಬದಿಗೆ ಎತ್ತರವಲ್ಲದ ಮೊಗಸಾಲೆಗಳಿವೆ. ಇಲ್ಲಿ ದಳವಾಯಿಗಳು ಮತ್ತು ಪ್ರಮುಖರು ಉತ್ಸವ ನೋಡಲೋಸುಗ ಕುಳಿತುಕೊಳ್ಳುತ್ತಾರೆ.

ರಾಜನಿಗೆ ಎಲ್ಲ ದಳವಾಯಿಗಳು ಮತ್ತು ಪ್ರಮುಖರು ಬಂದು ಅವನಿಗೆ ಸಲಾಮು ಮಾಡುತ್ತಾರೆ ಮತ್ತು ಕೆಲವರು ತಾವು ಇಚ್ಛೆಪಟ್ಟರೆ ಅವನಿಗೆ ಕಾಣಿಕೆಗಳನ್ನು ಅರ್ಪಿಸುತ್ತಾರೆ ಮತ್ತು ಬಂದಂತೆಯೇ ಹಿಂದೆ ಸರಿಯುತ್ತಾರೆ. ಪ್ರತಿಯೊಬ್ಬನು ತನ್ನ ಬಿಡದಿಗೆ ಹೋಗುತ್ತಾನೆ. ರಾಜನು ಬಯಲು ತಾಣದಲ್ಲಿರುವ ಎರಡು ಕಟ್ಟಡಗಳ ಮಧ್ಯೆ ಇರುವ ದ್ವಾರದ ಮೂಲಕ ಅರಮನೆ ಒಳಕ್ಕೆ ಹೋಗುತ್ತಾನೆ. ವಾರಾಂಗನೆಯರು ಮತ್ತು ದೇವಾಲಯ ಹಾಗೂ ಅರಮನೆಯ ನರ್ತಕಿಯರು ಬಹಳ ಹೊತ್ತಿನವರೆಗೆ ದೇವಾಲಯ ಹಾಗೂ ವಿಗ್ರಹದ ಮುಂದೆ ನರ್ತನಗೈಯುತ್ತ ಉಳಿಯುತ್ತಾರೆ.

ಸೂರ್ಯ ಕೆಳಗಿಳಿದ ನಂತರ ಪಂಜುಗಳನ್ನು ಹೊತ್ತಿಸಲಾಗುತ್ತದೆ. ಅನೇಕ ಚಿತ್ತಾಕರ್ಷಕ ಆಟಗಳನ್ನು ಮತ್ತು ಯುಕ್ತಿಗಳನ್ನು ಆರಂಭಿಸಲಾಗುತ್ತದೆ. ಇವು ಬಹಳ ಹೊತ್ತು ನಿಲ್ಲುವುದಿಲ್ಲ. ಅವು ರಾಜಸಿದ್ದಲ್ಲಿಗೆ ಬಂದು ಹೋಗಿಬಿಡುತ್ತವೆ. ನಂತರ ಸ್ತ್ರೀಯರು

ಹಿಂತಿರುಗಿ ಹೋಗುತ್ತಾರೆ. ಆಮೇಲೆ ಕುದುರೆಗಳು ಹೋಗುತ್ತವೆ, ಆಮೇಲೆ ಆನೆಗಳು ಬಂದು ಸಲಾಮು ಮಾಡಿ ಹಿಂತಿರುಗುತ್ತವೆ.

• ಈ ವಿವರಣೆಗಳನ್ನು ಗಮನಿಸಿ ಇಲ್ಲಿನ ಕಟ್ಟಡದ ಅವಶೇಷಗಳನ್ನು ಪರಿಶೀಲಿಸಲಾಗಿ ಹಜಾರರಾಮ ದೇವಾಲಯದ ಉತ್ತರ ಭಾಗಕ್ಕೆ ಇರುವ ಅಂಗಳವು ಪೂರ್ವ-ಪಶ್ಚಿಮವಾಗಿ 200 ಮೀ. ಮತ್ತು ಉತ್ತರ-ದಕ್ಷಿಣವಾಗಿ 100 ಮೀ. ಇದ್ದು, ಪ್ರಮುಖ ನಾಲ್ಕು ರಸ್ತೆಗಳು ಕೂಡುವ ಕೇಂದ್ರವಾಗಿದೆ. ಪೂರ್ವ ಮತ್ತು ಪಶ್ಚಿಮ ಭಾಗದಲ್ಲಿ ಪ್ರೇಕ್ಷಕರ ವೀಕ್ಷಣೆಗೆ ಅನುಕೂಲವಾಗುವಂತೆ ಕುಳಿತುಕೊಳ್ಳುವ ಮೆಟ್ಟಿಲುಗಳ ಆಸನವಿದೆ. ಪ್ರಾಯಶಃ ಪ್ರಮುಖ ಮೆರವಣಿಗೆ ಹಾಯ್ದು ಹೋಗುತ್ತಿದ್ದ ಸ್ಥಳವಾಗಿರಬೇಕು. ಹಿರಿಯ ಅರಮನೆ (ಹರಿಹರರಾಯನ ಅರಮನೆ) ದ್ವಾರದ ಹತ್ತಿರ ಸಜ್ಜುಗೊಂಡ ಮೆರವಣಿಗೆಯು ಪೂಜೆಯ ನಂತರ ಉತ್ತರಕ್ಕೆ ಚಲಿಸಿ ದಳವಾಯಿಗಳು ಮತ್ತು ಪ್ರಮುಖರು ಉತ್ಸವ ನೋಡಲೋಸುಗ ಕುಳಿತುಕೊಂಡ ಅಂಗಳಕ್ಕೆ ಬಂದು ಪ್ರದರ್ಶನ ನೀಡಿ ನಂತರ ದಕ್ಷಿಣಕ್ಕೆ ಚಲಿಸಿ ಮಹಾನವಮಿ ದಿಬ್ಬದ ಪ್ರದಕ್ಷಿಣೆಯನ್ನು ಪೂರ್ವಭಾಗದಿಂದ ಆರಂಭಿಸಿ ಪಶ್ಚಿಮಕ್ಕೆ, ನಂತರ ಉತ್ತರಕ್ಕೆ ಚಲಿಸುತ್ತಿದ್ದರೆಂದು ತೋರುತ್ತದೆ.

ರಾಜ್ಯೋತ್ಸವ ದಿನದಂದು ದೆಹಲಿಯಲ್ಲಿ ಪ್ರಮುಖ ಆಚರಣೆ ಧ್ವಜಾರೋಹಣೆ ಮತ್ತು ಪಥಸಂಚಲನೆ, ಸೇನೆಯ ಮೂರು ಅಂಗಗಳಾದ ನೆಲ, ಜಲ ಮತ್ತು ವಾಯು ಸೇನೆಯ ಆಯ್ದ ತುಕಡಿಗಳು ಮತ್ತು ಅವು ಹೊಸದಾಗಿ ಸೇರ್ಪಡೆ ಮಾಡಿಕೊಂಡ ಶಸ್ತ್ರಾಸ್ತ್ರಗಳು, ಅರೆ ಸೇನಾಪಡೆಯ ತುಕಡಿಗಳು, ಶಾಲಾ ಬಾಲಕ ಬಾಲಕಿಯರ ಮತ್ತು ಸಾಂಸ್ಕೃತಿಕ ಪರಂಪರೆಯ ಪ್ರದರ್ಶನ ಹಾಗೂ ಸ್ತಬ್ಧ ಚಿತ್ರಗಳ ಮೆರವಣಿಗೆ ಇರುತ್ತದೆ. ವಿಜಯನಗರ ಮಹಾನವಮಿ ಆಚರಣೆಯ ಸಂದರ್ಭದಲ್ಲಿ ಇದೇ ರೀತಿಯ ಆಚರಣೆಗಳಿದ್ದ ಕುರುಹಾಗಿ ಹಜಾರರಾಮ ದೇವಾಲಯ ಆವರಣದ ಹೊರಗೋಡೆಯಲ್ಲಿ ಮತ್ತು ಮಹಾನವಮಿ ದಿಬ್ಬದ ಸುತ್ತಲೂ ಇರುವ ಉಬ್ಬು ಶಿಲ್ಪಗಳಲ್ಲಿ ಆಚರಣೆಯ ಅಂಶಗಳು ಕಂಡುಬರುತ್ತವೆ. ಪ್ರಾಯಶಃ ಈ ಶಿಲ್ಪಗಳು ಆಚರಣೆಯನ್ನು ನೆನಪಿಸುವ ಸ್ತಬ್ಧಚಿತ್ರಗಳಾಗಿರಬೇಕು.

೨೧. ಮಧ್ಯಯುಗೀನ ಕಾಲದ ಜನವಸತಿ ನೆಲೆ - ಕಡೇಬಾಗಿಲು

ಡಾ. ಸಿ. ಎಸ್. ವಾಸುದೇವನ್

ಮಧ್ಯಕಾಲೀನ ಯುಗದ ಪ್ರಮುಖ ನೆಲೆಯಾಗಿದ್ದ ಹಂಪಿಯು ವಿಜಯನಗರ ಸಾಮ್ರಾಜ್ಯವನ್ನು ಪೋಷಿಸಿತು. ಈ ಸಾಮ್ರಾಜ್ಯದ ಪ್ರಥಮ ರಾಜಧಾನಿಯು ತುಂಗಭದ್ರಾ ನದಿಯ ಎಡದಂಡೆಯಲ್ಲಿರುವ ಆನೆಗೊಂದಿಯಲ್ಲಿ ಪ್ರಾರಂಭವಾಯಿತು. ಕಾಲಕ್ರಮೇಣ ಅಲ್ಲಿಂದ ವಿಜಯನಗರಪಟ್ಟಣ, ವಿದ್ಯಾನಗರ, ಪಂಪಾಕ್ಷೇತ್ರ ಮುಂತಾದ ಹೆಸರುಗಳಿಂದ ಕರೆಯಲಾಗುವ ಇಂದಿನ ಹಂಪೆಗೆ ಸ್ಥಳಾಂತರಿಸಲಾಯಿತು. ಆನೆಗೊಂದಿಯು ಪ್ರಥಮ ರಾಜಧಾನಿಯಾಗಿ ಬಹುವೈಭವದಿಂದ ಅಲ್ಲದಿದ್ದರೂ ಸಾಕಷ್ಟು ಪ್ರಸಿದ್ಧಿಯನ್ನು ಪಡೆದಿತ್ತು. ಆನೆಗೊಂದಿಗೆ ವಿಜಯನಗರ ಕಾಲದಲ್ಲಿ 'ಹಸ್ತಿನಾವತಿ' ಎಂಬ ಹೆಸರು ಸಹ ಇದ್ದಿತು.[1] ವಿಜಯನಗರ ಸಾಮ್ರಾಜ್ಯವು ಸ್ಥಾಪನೆಯಾದ ಇವೆರಡೂ ಸ್ಥಳಗಳೂ ಪ್ರಾಗಿತಿಹಾಸ ಕಾಲದ ಅನೇಕ ಅವಶೇಷಗಳನ್ನು ತನ್ನಲ್ಲಿ ಹುದುಗಿಸಿಕೊಂಡಿವೆ. ಈ ಪರಿಸರದಲ್ಲಿ ಇಲ್ಲಿಯವರೆಗೆ ನಡೆದ ಸಂಶೋಧನೆಯ ಫಲಿತವಾಗಿ ಪ್ರಾಗಿತಿಹಾಸ ಮತ್ತು ಆದಿ ಇತಿಹಾಸ ಕಾಲಘಟ್ಟಗಳ ಅವಶೇಷಗಳು ದೊರಕಿವೆ. ಮುಖ್ಯವಾಗಿ ನವಶಿಲಾಯುಗ ಕಾಲಘಟ್ಟದ ಸಾಂಸ್ಕೃತಿಕ ಅವಶೇಷಗಳು ತುಂಗಭದ್ರಾ ನದಿಯ ಎರಡೂ ದಡಗಳಲ್ಲಿ ವ್ಯಾಪಿಸಿವೆ. ಕಬ್ಬಿಣಯುಗಕ್ಕೆ ಸೇರಿದ ಕುರುಹುಗಳು ದೊರಕಿದ್ದು, ಇವುಗಳೊಂದಿಗೆ ಈ ಪರಿಸರದ ಕಣಶಿಲೆಯ ಗುಡ್ಡಗಳಲ್ಲಿನ ಗುಹಾಸರೆ ಮತ್ತು ಕಲ್ಲಾಸರೆಗಳಲ್ಲಿ ಪ್ರಾಗಿತಿಹಾಸ ಕಾಲದ ವರ್ಣಚಿತ್ರಗಳು ಹೇರಳವಾಗಿ ದೊರಕಿವೆ. ಅವುಗಳಲ್ಲಿ ತುಂಗಭದ್ರಾ ನದಿಯ ಎಡದಂಡೆಯಲ್ಲಿರುವ ಮುಸಳಯ್ಯನ ಗುಡ್ಡ ಮತ್ತು ವೆಂಕಟಾಪುರ ಹಾಗು ಬಲದಂಡೆಯ ಹಿರೇಬೆಣಕಲ್ಲು, ಚಿಕ್ಕಬೆಣಕಲ್ಲು ಮತ್ತು ಜಂತಗಲ್ಲು ಪ್ರಮುಖವಾದವು ಗಳಾಗಿವೆ.[2]

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನಲ್ಲಿರುವ ಆನೆಗೊಂದಿಯ ಉತ್ತರಕ್ಕೆ ಸುಮಾರು ಎರಡು ಕಿ. ಮೀ. ದೂರದಲ್ಲಿ ಗಂಗಾವತಿಗೆ ತೆರಳುವ ಮುಖ್ಯ ರಸ್ತೆಯಲ್ಲಿ ಕಡೇಬಾಗಿಲು ಗ್ರಾಮವಿದೆ. ಇಲ್ಲಿಯ ಪರಿಸರದಲ್ಲಿ ಪ್ರಾಗಿತಿಹಾಸ ಕಾಲದ ಅನೇಕ ಅವಶೇಷಗಳು ದೊರಕಿವೆ. ವಿಜಯನಗರ ಕಾಲದಲ್ಲಿ ನಿರ್ಮಿಸಲಾದ ಕೋಟೆಯ ಕೊನೆಯ ಸುತ್ತು ಈ ಗ್ರಾಮದಲ್ಲಿ ಹಾಯ್ದು ಹೋಗುತ್ತದೆ ಹಾಗು ಅಲ್ಲಿರುವ ಕೋಟೆಯ ಪ್ರವೇಶ ದ್ವಾರದಿಂದ ಈ ಗ್ರಾಮಕ್ಕೆ ಕಡೇಬಾಗಿಲು ಎಂಬ ಹೆಸರು ಬಂದಿದೆ ಎಂದು ಊಹಿಸಬಹುದು. ಕನ್ನಡದಲ್ಲಿ 'ಕಡೆ' ಎಂದರೆ 'ಕೊನೆ', 'ಅಂತಿಮ' ಎಂಬರ್ಥವಿದೆ. ಆನೆಗೊಂದಿ

ಊರಿನಿಂದ ಬಂದರೆ ಇದು ಕೊನೆಯ ಅಥವಾ ಕಡೆಯ ಭಾಗವಾಗುತ್ತದೆ. ಇಂದಿಗೂ ಈ ಭಾಗದಲ್ಲಿ ಕೋಟೆ ಗೋಡೆಯು ಹಾಯ್ದುಹೋಗಿರುವುದನ್ನು ಗಮನಿಸ ಬಹುದು. ವಿಜಯನಗರ ಕಾಲದಲ್ಲಿ ವಿಜಯನಗರಪಟ್ಟಣ ಆನೆಗೊಂದಿಯಿಂದ ಉತ್ತರಕ್ಕೆ ಪಯಣಿಸಿದರೆ ಇದು ಕೊನೆಯದಾಗಿರುವ ಕೋಟೆ ಬಾಗಿಲಾಗಿರುವುದರಿಂದ ಇದಕ್ಕೆ ಅನ್ವರ್ಥವಾಗಿ ಹೆಸರಿಸಲಾಗಿದೆ. ಪ್ರಾಯಶಃ ಅಂದಿನ ಕಾಲದಲ್ಲಿಯೂ ಈ ಬಾಗಿಲಿಗೆ ಸದರಿ ಹೆಸರು ಜನರೂಢಿಯಲ್ಲಿ ಬಳಕೆಯಾಗಿ ಉಳಿದುಬಂದಿರುವ ಸಾಧ್ಯತೆ ಗಳಿವೆ.

ಕಡೇಬಾಗಿಲು ಗ್ರಾಮವು ಕಣಶಿಲೆಯ ಬೆಟ್ಟದ ಸಾಲಿನಲ್ಲಿದ್ದು, ತುಂಗಭದ್ರಾ ನದಿಯು ಅದರ ಸಮೀಪದಲ್ಲಿ ವಾಯುವ್ಯದಿಂದ ಆಗ್ನೇಯ ದಿಕ್ಕಿಗೆ ಹರಿಯುತ್ತದೆ. ದಖ್ಖನ್ ಪ್ರಸ್ಥಭೂಮಿ, ಧಾರ್‌ವಾರ್ ಕ್ರೇಟನ್ ಮತ್ತು ಪಶ್ಚಿಮ ಧಾರ್‌ವಾರ್ ಕ್ರೇಟನ್ ಶಿಲಾಸಮೂಹವನ್ನು ಬೇರ್ಪಡಿಸುವ ಸ್ಥಳದಲ್ಲಿದೆ. ಪಶ್ಚಿಮ ಘಟ್ಟದ ಮಳೆಯಾಶ್ರಯದ ಹೊರವಲಯದಲ್ಲಿದ್ದು ವಾರ್ಷಿಕವಾಗಿ ಸರಾಸರಿ 500ಮಿ. ಮೀ ಮಳೆಯನ್ನು ಪಡೆಯುತ್ತದೆ. ಮಳೆಯ ಪ್ರಮಾಣವು ಮುಂಗಾರಿನ ಮೇಲೆ ಆಧರಿಸಿದ್ದು, ಅದು ಏಕರೂಪತೆಯನ್ನು ಪಡೆದಿಲ್ಲ.ಈ ಪ್ರದೇಶದಲ್ಲಿ ವರ್ಷದ ಜೂನ್‌ನಿಂದ ಅಕ್ಟೋಬರ್‌ವರೆಗೆ ಮಳೆಗಾಲವಿರುತ್ತದೆ. ಸಾಮಾನ್ಯವಾಗಿ ಕುರುಚುಲು ಗಿಡಗಂಟಿಗಳು, ಮುಳ್ಳಿನ ಮರಗಳು ಮತ್ತು ಕಿರು ಎಲೆಯ ಸಸ್ಯವರ್ಗವನ್ನು ಈ ಪರಿಸರವು ಪೋಷಿಸುತ್ತದೆ. ಆದರೆ ಇತ್ತೀಚಿನ ಆಧುನಿಕ ಚಟುವಟಿಕೆಗಳು ಇಲ್ಲಿಯ ಸ್ವಾಭಾವಿಕ ಪರಿಸರವನ್ನು ಸಾಕಷ್ಟು ಬದಲಿಸಿವೆ. ಈ ಗ್ರಾಮದ ಪರಿಸರವು ಕಬ್ಬಿಣಯುಗದ ದೊಡ್ಡ ವಾಸ್ತವ್ಯ ನೆಲೆಯಾಗಿದೆ. ಕಡೇಬಾಗಿಲು ಗ್ರಾಮದ ಪೂರ್ವಕ್ಕಿರುವ ಗುಡ್ಡದ ಮೇಲೆ ವ್ಯಾಪಕ ಕ್ಷೇತ್ರಕಾರ್ಯ ಮತ್ತು ಉತ್ಖನನವನ್ನು ಅಮೆರಿಕದ ಶಿಕಾಗೋ ವಿಶ್ವವಿದ್ಯಾಲಯ, ಮಿಚಿಗನ್ ವಿಶ್ವವಿದ್ಯಾಲಯ ಮತ್ತು ಕರ್ನಾಟಕ ರಾಜ್ಯ ಸರ್ಕಾರದ ಪ್ರಾಚ್ಯವಸ್ತು ಮತ್ತುಸಂಗ್ರಹಾಲಯ ನಿರ್ದೇಶನಾಲಯವು 2004-05 ನೇ ಸಾಲಿನಿಂದ ಕೈಗೊಂಡಿತು. ಇದರ ಫಲವಾಗಿ ಅನೇಕ ಹೊಸ ವಿಷಯಗಳು ಬೆಳಕಿಗೆ ಬಂದಿವೆ.[3] ನೆಲೆಯ ಆಸುಪಾಸಿನಲ್ಲಿ ನವಶಿಲಾಯುಗ ಕಾಲದ (ಕ್ರಿ. ಪೂ. 3000-1200) ಕೃಷಿ -ಪಶುಸಂಗೋಪನೆ ಹಾಗು ಅದಕ್ಕೆ ಸಂಬಂಧಿಸಿದ ದನಗಾಹಿ ಆರ್ಥಿಕ ವ್ಯವಸ್ಥೆಯು ಇದ್ದಿತು. ಇದಕ್ಕೆ ಪೂರಕವಾಗಿ ದನಗಳ ಮೂಳೆಗಳು ದೊರಕಿದ್ದು, ಅವುಗಳ ವಿಶ್ಲೇಷಣೆಯು ಅನೇಕ ಹೊಸ ಸಂಗತಿಗಳನ್ನು ಹೊರಹಾಕಿವೆ. ಅವುಗಳಲ್ಲಿ ಪ್ರಮುಖವಾಗಿ ಎತ್ತುಗಳನ್ನು ಉಳುಮೆ ಹಾಗು ಹಸುಗಳನ್ನು ಹಾಲಿಗಾಗಿ ಬಳಸಿಕೊಂಡಿರು ವುದು ಗಮನಾರ್ಹ. ಕುರಿ, ಮೇಕೆ, ನಾಯಿ, ನೀರೆಮ್ಮೆ ಮುಂತಾದ ಪ್ರಾಣಿಗಳನ್ನು ಪಳಗಿಸಿ ಸಾಕು ಪ್ರಾಣಿಗಳನ್ನಾಗಿಸಿಕೊಂಡಿರುವುದು ಸಹ ತಿಳಿದುಬಂದಿದೆ. ಸಸ್ತನಿ ವನ್ಯ ಮೃಗಗಳಿಂತ ಉಳಿದ ಪ್ರಾಣಿವರ್ಗಗಳಿಗೆ ಸೇರಿದ ಪ್ರಾಣಿಗಳೇ ಅಧಿಕವಾಗಿ ವಾಸವಾಗಿದ್ದವು. ಸಸ್ತನಿ ಸಾಕು ಪ್ರಾಣಿಗಳು ಸಹ ಗಣನೀಯವಾಗಿ ದೊರಕಿವೆ. ಸಾಕು ಪ್ರಾಣಿಗಳನ್ನು ಶವಕುಣಿಗಳಲ್ಲಿ

ಹೂತಿರುವುದು ಕಂಡುಬಂದಿದೆ. ಇದರಿಂದ ಈ ಪ್ರಾಣಿಗಳ ಕುರಿತು ಅಂದಿನ ಜನರಿಗಿದ್ದ ಮನೋಭಾವನೆಯನ್ನು ಅರಿಯಲು ಸಾಧ್ಯವಾಗುತ್ತದೆ. [4]

ಕಡೇಬಾಗಿಲು ಗ್ರಾಮದ ಪರಿಸರದಲ್ಲಿ ಕಬ್ಬಿಣಯುಗ ಮತ್ತು ನವಶಿಲಾಯುಗ ಕಾಲಕ್ಕೆ ಸಂಬಂಧಿಸಿದ ಕುರುಹುಗಳು ದೊರಕಿದ್ದರೂ, ಆದಿ ಇತಿಹಾಸ ಮತ್ತು ಅದರ ತರುವಾಯ ಕಾಲಘಟ್ಟಗಳ ಅವಶೇಷಗಳು ದೊರಕಿರಲಿಲ್ಲ. ಆಗಸ್ಟ್ -2007 ರಲ್ಲಿ ಗ್ರಾಮದ ಪೂರ್ವಕ್ಕೆ ಇರುವ ಬೆಟ್ಟದ ಕೆಳ ಭಾಗದಲ್ಲಿ, ನದಿ ದಂಡೆಯಲ್ಲಿ ಕೈಗೊಂಡ ಕ್ಷೇತ್ರಕಾರ್ಯದಲ್ಲಿ ಆದಿಇತಿಹಾಸ ಮತ್ತು ಮಧ್ಯಯುಗೀನ ಕಾಲದ ಅವಶೇಷಗಳು ಹೇರಳವಾಗಿ ದೊರೆತವು. ಆದಿಇತಿಹಾಸ ಕಾಲಕ್ಕೆ ಸೇರಿದ ರಸೆಟ್ ಲೇಪಿತ ಮೃತ್ಪಾತ್ರೆಗಳು, ಕಪ್ಪು-ಕೆಂಪು ದ್ವಿವರ್ಣದ ಮೃತ್ಪಾತ್ರೆಗಳು ದೊರಕಿವೆ. ಇವುಗಳೊಂದಿಗೆ ವಿಜಯನಗರ ಕಾಲದಲ್ಲಿ ನಿರ್ಮಿಸಲಾದ ಕೋಟೆಗೋಡೆ, ದ್ವಾರದ (ಬಾಗಿಲು) ಬಳಿ ಆಂಜನೇಯನ ದೇವಾಲಯಗಳು ಪತ್ತೆಯಾದವು.

ಕೋಟೆ ಪ್ರದೇಶದ ಒಳಭಾಗದಲ್ಲಿ ಸುಮಾರು 200ಮೀಟರ್ ದೂರದಲ್ಲಿ, ನದಿಯ ಎಡದಂಡೆಯ ಸಮತಟ್ಟಾದ ವಿಶಾಲ ಪ್ರದೇಶದಲ್ಲಿ ಮಧ್ಯಯುಗೀನ ಕಾಲಕ್ಕೆ ಸೇರಿದ ವಾಸ್ತವ್ಯ ನೆಲೆ ಹಾಗು ಅದರಲ್ಲಿ ವಸತಿ ನೆಲಗಟ್ಟುಗಳು ಮತ್ತು ಕಟ್ಟಡಗಳ ಅವಶೇಷಗಳು ಪತ್ತೆಯಾದವು. ಇದರ ಸಮೀಪವೇ ಪೂರ್ವಾಭಿಮುಖವಾಗಿರುವ ಶೈವ ದೇವಾಲಯವು ಸಹ ದೊರಕಿದೆ. ಈ ದೇವಾಲಯವು ಶಿಥಿಲಾವಸ್ಥೆಯಲ್ಲಿದೆ. ದೇವಾಲಯದ ಮುಂಭಾಗದ ಮುಖಮಂಟಪದಲ್ಲಿ ಗಿಡ ಗಂಟಿಗಳು ಬೆಳೆದಿದ್ದು, ಪ್ರವೇಶ ದ್ವಾರವು ಸಂಪೂರ್ಣವಾಗಿ ಮುಚ್ಚಿಹೋಗಿದೆ. ಮುಖಮಂಟಪದ ಮೇಲಿನ ಛಾವಣಿ ಭಾಗವು ಬಿದ್ದಿದ್ದು, ಪ್ರಸ್ತುತ ಕಂಬಗಳು ಮಾತ್ರ ಉಳಿದಿವೆ. ಇದರಿಂದಾಗಿ ತೆರೆದ ಈ ಭಾಗವು ಪ್ರವೇಶ ಮಂಟಪದಂತೆ ಕಂಡುಬರುತ್ತದೆ. ಮುಖಮಂಟಪಕ್ಕೆ ಅಲಂಕೃತ ಉಬ್ಬುಶಿಲ್ಪವಿರುವ ಕೈಪಿಡಿ ಮೆಟ್ಟಿಲುಗಳು ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿವೆ. ಮುಖಮಂಟಪದಿಂದ ಅಂತರಾಳ ಅಥವಾ ಅರ್ಧಮಂಟಪ ಭಾಗವನ್ನು ಪ್ರವೇಶಿಸ ಬಹುದು. ಮುಖಮಂಟಪದ ಪಶ್ಚಿಮ ಗೋಡೆಯಲ್ಲಿ, ಅಂದರೆ ಅಂತರಾಳದ ಹೊರಭಿತ್ತಿಯಲ್ಲಿ ಪ್ರವೇಶದ್ವಾರದ ಇಕ್ಕೆಲಗಳಲ್ಲಿ ದೇವಕೋಷ್ಠಗಳಿವೆ. ಅವುಗಳಲ್ಲಿ ಯಾವುದೇ ಮೂರ್ತಿಶಿಲ್ಪಗಳಿಲ್ಲ. ಅಂತರಾಳವು ಗರ್ಭಗೃಹಕ್ಕೆ ದಾರಿ ಮಾಡಿಕೊಡುತ್ತದೆ. ಗರ್ಭಗೃಹ ದ್ವಾರದ ಇಕ್ಕೆಲಗಳಲ್ಲಿನ ದ್ವಾರ ಬಂಧದ ಕೆಳಭಾಗದಲ್ಲಿ ದ್ವಾರಪಾಲಕರ ಉಬ್ಬುಶಿಲ್ಪಗಳಿವೆ. ಅಂತರಾಳದ ದ್ವಾರದ ಎರಡೂ ಬದಿಗಳಲ್ಲಿ ಸರಳ ಜಾಲಂಧ್ರಗಳಿವೆ. ದೇವಾಲಯದ ಹೊರಭಿತ್ತಿಗೆ ಉದ್ದದ ಕಲ್ಲುಗಳಿಂದ ಹೊದಿಸಲಾಗಿದ್ದು, ಅಧಿಷ್ಠಾನ, ಹೊರಮೈ ಅಲಂಕರಣಗಳು, ಕಂಬ ಮತ್ತು ರಚನಾ ಶೈಲಿಯ ಆಧಾರಗಳಿಂದ ಪ್ರಸ್ತುತ ದೇವಾಲಯವು ವಿಜಯನಗರ ಅರಸರ ಪ್ರಾರಂಭಿಕ ಕಾಲಘಟ್ಟಕ್ಕೆ ಸೇರಿದ ರಚನೆಯೆಂದು ಗಣಿಸಬಹುದು. ದೇವಾಲಯದಲ್ಲಿ ಮೂರ್ತಿಶಿಲ್ಪಗಳು ಹಾಗೂ ಮುಖ್ಯ ದೇವರ ಶಿಲ್ಪಗಳು ದೊರಕಿಲ್ಲವಾದರೂ, ದ್ವಾರಪಾಲಕರ ಉಬ್ಬುಶಿಲ್ಪಗಳ

ಆಧಾರದಿಂದ ಇದು ಶೈವ ಪಂಥಕ್ಕೆ ಸೇರಿಸಬಹುದೆಂದು ಊಹಿಸಬಹುದು. ಪ್ರಸ್ತುತ ದೇವಾಲಯದ ರಚನಾ ಶೈಲಿಯು ಕುರುಗೋಡಿನಲ್ಲಿರುವ ದೇವಾಲಯಗಳನ್ನು ಹೋಲುತ್ತವೆ ಹಾಗೂ ಈ ಶೈಲಿಯ ದೇವಾಲಯವು ಹಂಪಿಯಲ್ಲಿ ದೊರಕದಿರುವುದು ಗಮನಾರ್ಹ. [5] ಇದರ ಕಾಲಮಾನವನ್ನು ಕ್ರಿ. ಶ. ಸುಮಾರು 12-13 ನೇ ಶತಮಾನವೆಂದು ಪರಿಗಣಿಸಬಹುದು.

ಮೇಲೆ ವಿವರಿಸಿದ ದೇವಾಲಯದ ಸಮೀಪವೇ ಒಂದು ಚಿಕ್ಕ ಕೆರೆಯ ಪತ್ತೆ ಆಗಿದೆ. ಪ್ರಸ್ತುತ ಕೆರೆಯ ಏರಿಗೆ ಉರಟು ಕಲ್ಲಿನ ಕಟ್ಟುವಾಡವಿದೆ. ಈ ಪ್ರದೇಶದ ಉತ್ತರ ಮತ್ತು ಪಶ್ಚಿಮ ಭಾಗಗಳಲ್ಲಿ ಬೀಳುವ ಮಳೆಯ ನೀರು ಹರಿದು ಬಂದು ಸ್ವಾಭಾವಿಕವಾಗಿ ಸಂಗ್ರಹಗೊಳ್ಳುವ ಸ್ಥಳದಲ್ಲಿ ಕಲ್ಲಿನ ಏರಿಯನ್ನು ನಿರ್ಮಿಸಲಾಗಿದೆ. ಇಂದು ಈ ಕೆರೆಯ ಏರಿಯು ನೆಲಮಟ್ಟದಲ್ಲಿ ಕಂಡುಬರುತ್ತದೆ. ಕೆರೆಯ ಭಾಗವಾದ ತೂಬು ಅದರ ಸಮೀಪವೇ ಇದ್ದು, ಅದು ಇಂದು ಶಿಥಿಲಾವಸ್ಥೆಯಲ್ಲಿದೆ. ಕೆರೆಯ ಸಮೀಪವೇ ಮೆಟ್ಟಲುಗಳಿರುವ ಚೌಕಾಕಾರದ ಬಾವಿಯಿದೆ. ಇದಕ್ಕೆ ಸಹ ಮಳೆಯ ನೀರು ತುಂಬುತ್ತದೆ. ಈ ಬಾವಿಯ ಸಮೀಪವೇ ಆದಿ ಇತಿಹಾಸ ಕಾಲದ ಮೃತ್ಪಾತ್ರೆಗಳ ಚೂರುಗಳು ಕಂಡು ಬರುತ್ತವೆ. ಸುಮಾರು ನೂರು ಮೀಟರ್ ದೂರದಲ್ಲಿ ತುಂಗಭದ್ರಾ ನದಿಯು ಹರಿಯುತ್ತಿದ್ದರೂ, ಅಂದಿನ ಜನರು ಮಳೆಯ ನೀರನ್ನು ಕೆರೆಯಲ್ಲಿ ಹಾಗು ಬಾವಿಯಲ್ಲಿ ಸಂಗ್ರಹಿಸಿಕೊಳ್ಳಲು ಅನುಕೂಲತೆಗಳನ್ನು ಮಾಡಿಕೊಂಡಿರುವುದು ಗಮನಾರ್ಹ.[6]

ದೇವಾಲಯಕ್ಕೆ ತೆರಳುವ ಮಾರ್ಗ ಮಧ್ಯದಲ್ಲಿ ಸುಮಾರು ನಾಲ್ಕು ಅಡಿ ಎತ್ತರದ ಶಾಸನವಿರುವ ವೀರಗಲ್ಲು ನೆಲದಲ್ಲಿ ಬಿದ್ದಿದೆ. ಪ್ರಸ್ತುತ ವೀರಗಲ್ಲಿನ ಮೂರು ಹಂತಗಳಿದ್ದು, ಕೆಳಭಾಗದ ಮೊದಲ ಹಂತವು ದೊಡ್ಡದಾಗಿದ್ದು ಮೇಲೆ ಹೋದಂತೆ ಕಿರಿದಾಗುತ್ತಾ ಸಾಗುತ್ತದೆ. ಮಧ್ಯದ ಹಂತವು ಮೊದಲನೆಯದಕ್ಕಿಂತ ಕಿರಿದಾಗಿದೆ. ಮೂರು ಹಂತಗಳಲ್ಲಿ ನಿರೂಪಣಾತ್ಮಕ ಉಬ್ಬುಶಿಲೆಗಳಿದ್ದು, ಹಂತಗಳನ್ನು ಬೇರ್ಪಡಿಸುವ ನಡುಪಟ್ಟಿಯಲ್ಲಿ ಒಂದು ಸಾಲಿನ ಶಾಸನವಿದೆ. ಮೊದಲಿಗೆ ನೆಲದಲ್ಲಿ ಹುದುಗಿಸಿದ್ದ ಕಣಶಿಲೆಯ ವೀರಗಲ್ಲು ಈಗ ನೆಲದಲ್ಲಿ ಹಾಸಿದಂತೆ ಬಿದ್ದಿದೆ. ವೀರಗಲ್ಲಿನ ಕೆಳಹಂತದಲ್ಲಿ ಇಬ್ಬರು ವೀರರು ಆಯುಧಪಾಣಿಗಳಾಗಿ ಹೋರಾಡುತ್ತಿರುವಂತೆ ಮತ್ತು ಇನ್ನೊರ್ವನು ಕೆಳಗೆ ಬಿದ್ದಿರುವಂತೆ ತೋರಲಾಗದೆ. ಓರ್ವ ವೀರನ ಪಕ್ಕದಲ್ಲಿ ಸ್ತ್ರೀಯ ಶಿಲ್ಪವನ್ನು ತೋರಲಾಗಿದೆ. ಹೋರಾಡುತ್ತಿರುವ ವ್ಯಕ್ತಿಗಳಿಬ್ಬರಲ್ಲಿ ಎಡಬದಿಯಲ್ಲಿ ತೋರಲಾಗಿರುವ ವ್ಯಕ್ತಿಯು ಬಿಲ್ಲನ್ನು ಎಡಗೈಯಲ್ಲಿ ಹಿಡಿದುಕೊಂಡಿದ್ದಾನೆ. ಬಲಗೈಯಲ್ಲಿ ಬಾಣವನ್ನು ಹೂಡಲು ಎತ್ತಿರುವಂತೆ ತೋರಲಾಗಿದೆ. ಆ ವ್ಯಕ್ತಿಯು ಮಂಡಿಯವರೆಗೆ ಧೋತ್ರವನ್ನು ಧರಿಸಿದ್ದಾನೆ. ಮುಂಭಾಗದಲ್ಲಿ ಧೋತ್ರದ ನೆರಿಗೆಗಳು ಇಳಿಬಿದ್ದಿರುವಂತೆ ಕಲಾತ್ಮಕವಾಗಿ ಹಾಗೂ ಸ್ಪಷ್ಟವಾಗಿ ತೋರಲಾಗಿದೆ. ಎಡಗೈಯಲ್ಲಿರುವ

ಬಿಲ್ಲಿನಲ್ಲಿ ಬಾಣವನ್ನು ಹೂಡಿರುವಂತೆ ನಿರೂಪಿಸಲಾಗಿದೆ. ಬಿಲ್ಲು ಮತ್ತು ಅದರ ದಾರವು ಸ್ಪಷ್ಟವಾಗಿ ಕಾಣುವಂತೆ ಕೆತ್ತಲಾಗಿದೆ. ಆ ವ್ಯಕ್ತಿಯು ತುರುಬನ್ನು ಕಟ್ಟಿಕೊಂಡಿದ್ದು, ಕಿವಿಯ ಬಳಿ ಅಲಂಕರಣೆಯಿದೆ. ಎಡಗಾಲನ್ನು ಮುಂದಿಟ್ಟು, ಬಲಗಾಲನ್ನು ಹಿಂದಿಟ್ಟಿರು ವಂತೆ ತೋರಲಾಗಿದೆ. ಕಾಲಿಗೆ ಕಡಗವನ್ನು ಧರಿಸಿದ್ದಾನೆ. ಈ ವೀರನ ವೇಷಭೂಷಣ, ಆಭರಣ ಮತ್ತು ಅವನು ಹಿಡಿದಿರುವ ಆಯುಧಗಳಿಂದ ಆ ವ್ಯಕ್ತಿಯು ರಕ್ಷಣಾ ವ್ಯವಸ್ಥೆಗೆ ಸಂಬಂಧಿಸಿದ ವ್ಯಕ್ತಿಯಂತೆ ಕಂಡುಬರುತ್ತಾನೆ. ಅವನ ಮೈಮಾಟವು ಸುಂದರವಾಗಿದೆ.

ಇನ್ನೋರ್ವ ವ್ಯಕ್ತಿಯನ್ನು, ಬಲಬದಿಗೆ, ಮೇಲೆ ವಿವರಿಸಿದ ವೀರನ ಎದುರಿಗಿದ್ದು ಅವನು ಆಯುಧಧಾರಿಯಾಗಿ ಆಕ್ರಮಣ ಮಾಡುತ್ತಿರುವಂತೆ ನಿರೂಪಿಸಲಾಗಿದೆ. ಬಲಬದಿಯ ವ್ಯಕ್ತಿಯ ಕೈಯಲ್ಲಿ ಭರ್ಜಿ/ಈಟಿಯನ್ನು ಎಡಗೈಯಲ್ಲಿ ಹಿಡಿದಿದ್ದು, ಬಲಗೈ ಯಲ್ಲಿ ಕುಡುಗೋಲನ್ನು ಪ್ರಯೋಗಿಸುವಂತೆ ಹಿಡಿದಿದ್ದಾನೆ. ಇವನು ಸಹ ತುರುಬನ್ನು ಕಟ್ಟಿಕೊಂಡಿದ್ದಾನೆ. ಸೊಂಟದಲ್ಲಿ ತುಂಡು ಬಟ್ಟೆಯನ್ನು ಕಟ್ಟಿಕೊಂಡಿದ್ದು ಮಲ್ಲರು ಧರಿಸುವ ವಸ್ತ್ರದಂತೆ ಕಾಣುತ್ತದೆ. ಸೊಂಟದಲ್ಲಿ ಕತ್ತಿಯಂತಹ ಆಯುಧವು ಕಂಡು ಬರುತ್ತದೆ. ಇವರಿಬ್ಬರೂ ಎದುರು-ಬದರು ನಿಂತು ಆಯುಧಗಳನ್ನು ಪ್ರಯೋಗಿಸಿ ಹೋರಾಡುವಂತೆ ನಿರೂಪಿಸಲಾಗಿದೆ. ಇವನ ವೇಷ-ಭೂಷಣ, ಆಭರಣ ಮತ್ತು ಆಯುಧ ಗಳಿಂದ ಇವನು ಆಕ್ರಮಣಕಾರ ವ್ಯಕ್ತಿಯೆಂದು ಊಹಿಸಬಹುದು. ಇವನ ಬಲಬದಿಯ ಕೆಳಗೆ ಇನ್ನೋರ್ವ ವ್ಯಕ್ತಿಯ ಉಬ್ಬುಶಿಲ್ಪವಿದ್ದು, ಅದು ಈ ವೀರನ ಸಹಾಯಕನಂತೆ ಕಂಡುಬರುತ್ತಾನೆ. ಅವನು ಬಿಲ್ಲನ್ನು ಎಡಗೈಯಲ್ಲಿ ಹಿಡಿದು ಬಲಗಾಲನ್ನು ಮುಂದಿಟ್ಟಿ ದ್ದಾನೆ. ಇವರಿಬ್ಬರೂ ಒಂದೇ ಗುಂಪಿಗೆ ಸೇರಿದವರೆಂದು ಭಾಸವಾಗುತ್ತದೆ.

ವೀರರ ನಡುವೆ ಕೆಳಭಾಗದಲ್ಲಿ ಬಿಲ್ಲನ್ನು ಹಿಡಿದ ವ್ಯಕ್ತಿಯೊಬ್ಬನ ಹೊಟ್ಟೆಗೆ ಬಾಣ ಚುಚ್ಚಿ ಮಡಿದು ಬಿದ್ದಿರುವಂತೆ ತೋರಲಾಗಿದೆ. ವ್ಯಕ್ತಿಯು ಎಡಗೈಯಲ್ಲಿ ಬಿಲ್ಲು ಹಿಡಿದಿ ದ್ದಾನೆ. ಅವನು ಸೊಂಟದಲ್ಲಿ ಧೋತ್ರವನ್ನು ಮಂಡಿಯವರೆಗೆ ಧರಿಸಿದ್ದಾನೆ. ಅವನು ಸಹ ತುರುಬನ್ನು ಹೊಂದಿದ್ದಾನೆ. ಅವನ ಬಲಗೈ ಮೇಲಕ್ಕೆತ್ತಿರುವಂತೆ ನಿರೂಪಿಸಲಾಗಿದೆ. ಕೆಳಹಂತದ ಭಾಗದಲ್ಲಿ ನಿರೂಪಿತವಾಗಿರುವ ಈ ನಾಲ್ವರು ವೀರರ ಉಬ್ಬುಶಿಲ್ಪಗಳಲ್ಲಿ ಜೀವಂತಿಕೆಯಿದ್ದು ಹೋರಾಟದ ದೃಶ್ಯಾವಳಿಯನ್ನು ಮನಮುಟ್ಟುವಂತೆ ಶಿಲ್ಪಿಯು ಮೂಡಿಸಿದ್ದಾನೆ. ಈಹಂತದ ಮೇಲೆ ನಡುಪಟ್ಟಿಯಿದ್ದು 'ಅರವಯ ಮಡಿದ'ಎಂಬ ಶಾಸನವಿದೆ. ಇದರ ಮೇಲೆ ಎರಡನೆಯ ಹಂತವು ಪ್ರಾರಂಭಗೊಳ್ಳುತ್ತದೆ. ಇದರಲ್ಲಿ ಮಡಿದ ವ್ಯಕ್ತಿಯನ್ನು ದೇವಲೋಕದ ಸುಂದರಿಯರು ಸ್ವರ್ಗಕ್ಕೆ ಕರೆದುಕೊಂಡು ಹೋಗು ತ್ತಿರುವುದನ್ನುತೋರಿಸಲಾಗಿದೆ. ಮಡಿದ ವ್ಯಕ್ತಿಯು ಬಲಗಾಲು ಮಂಡಿಯೂರಿ ಕುಳಿತಂತೆ ತೋರಲಾಗಿದೆ. ಎಡಭಾಗದ ಸ್ತ್ರೀ ದೇವತೆಯು ಸಹ ಬಲಗಾಲನ್ನು ಮಂಡಿಯೂರಿದ್ದರೆ, ಬಲಭಾಗದ ಇನ್ನೊಂದು ದೇವತೆಯು ಬಲಗಾಲನ್ನು ಊರಿದ್ದಾಳೆ. ಇವರಿಬ್ಬರೂ ಕ್ರಮ

ವಾಗಿ ತಮ್ಮ ಎಡ ಬಲಗೈಗಳಿಂದ ವ್ಯಕ್ತಿಯನ್ನು ಹಿಡಿದು ಎತ್ತಿಕೊಂಡು ಸ್ವರ್ಗಾರೋಹಣ ಮಾಡುತ್ತಿರುವಂತೆ ಕೆತ್ತಲಾಗಿದೆ. ದೇವತಾ ಸ್ತ್ರೀಯರು ಕಿರೀಟವನ್ನು ಧರಿಸಿದ್ದಾರೆ ಹಾಗೂ ಮಡಿದ ವ್ಯಕ್ತಿಯು ತುರಬು ಮತ್ತು ಧೋತ್ರವನ್ನು ಸುಂದರವಾಗಿ ಧರಿಸಿದವನಾಗಿದ್ದಾನೆ. ಈ ಹಂತದ ಮೇಲ್ಭಾಗದ ನಡುಪಟ್ಟಿಯಲ್ಲಿ 'ಶ್ರೀ ಬಲರಾಚಪ ಯಿ (ದೊ) ರಿದು' ಎಂಬ ಶಾಸನವಿದೆ. ಇದರ ಮೇಲೆ ಮೂರನೆಯ ಹಂತವಿದ್ದು, ವ್ಯಕ್ತಿಯು ಶಿವಲೋಕ ವನ್ನು ತಲುಪಿ ಅಲ್ಲಿನ ಶಿವಸ್ವರೂಪಿ ಲಿಂಗವನ್ನು ಪೂಜಿಸುತ್ತಾ ಕುಳಿತಿದ್ದಾನೆ. ಅವನ ಎಡಭಾಗದಲ್ಲಿ ಸ್ತ್ರೀದೇವತೆಯ ಶಿಲ್ಪ ಸ್ಪಷ್ಟವಾಗಿದ್ದು ಎಡಭಾಗದ ಶಿಲ್ಪ ಅಸ್ಪಷ್ಟವಾಗಿದೆ. ಶಿವಲಿಂಗವು ಸ್ಪಷ್ಟವಾಗಿಲ್ಲ. ವೀರಗಲ್ಲಿನ ಮೇಲಿನ ಭಾಗವನ್ನು ಅರ್ಧಚಂದ್ರಾಕೃತಿಯಂತೆ ಕೆತ್ತಲಾಗಿದೆ. ವೀರಗಲ್ಲು ನೆಡಲು ಅನುಕೂಲವಾಗುವಂತೆ ಕಲ್ಲಿನ ಕೆಳಭಾಗವನ್ನು ಕೆತ್ತಿಲ್ಲ.[7]

ವೀರಗಲ್ಲಿನಲ್ಲಿರುವ ಶಾಸನವು ಮಡಿದ ವ್ಯಕ್ತಿಯ ಹೆಸರು (ಅರವಯ)ಮತ್ತು (ಇರಿದು) ಕೊಂದ ವ್ಯಕ್ತಿಯ ಹೆಸರು ಶ್ರೀ ಬಲರಾಚಪ ಎಂದು ಉಲ್ಲೇಖಿಸಿದೆ. ವೀರಗಲ್ಲಿನ ಕೆಳ ಹಂತದಲ್ಲಿ ಮಡಿದಿರುವಂತೆ ತೋರಲಾದ ವ್ಯಕ್ತಿಯು ಅರವಯ ಎಂದು ಗುರುತಿಸಬಹುದು. ಬಾಣ ಹೂಡುತ್ತಿರುವ ಎಡಬದಿಯ ವ್ಯಕ್ತಿಯು ಶ್ರೀ ಬಲರಾಚಪ ಎಂದು ಊಹಿಸಬಹುದು. ಶಾಸನದ ಲಿಪಿಯ ಶೈಲಿ ಮತ್ತುಅದರ ಪಾಠದ ನೇರ ನಿರೂಪಣೆ ಯಿಂದ, ಶಾಸನವನ್ನು ಕ್ರಿ. ಶ. 12-13 ಶತಮಾನಕ್ಕೆ ಸೇರಿರಬಹುದೆಂದು ಸಧ್ಯಕ್ಕೆ ತೀರ್ಮಾನಿಸಬಹುದು.[8] ಮತ್ತು ಈ ವೀರಗಲ್ಲನ್ನು ಅದೇ ಕಾಲಮಾನಕ್ಕೆ ಸೇರಿಸ ಬಹುದಾಗಿದೆ.[9] ಶಾಸನದಲ್ಲಿ ಅಥವಾ ಬೇರೆ ಮೂಲಗಳಿಂದ ತೇದಿಯ ವಿವರಗಳು ದೊರಕಿಲ್ಲವಾದ್ದರಿಂದ, ಶಾಸನದ ಲಿಪಿ, ಮತ್ತು ಉಬ್ಬುಶಿಲ್ಪಗಳ ನಿರೂಪಣಾ ಶೈಲಿ ಯಿಂದ[10] ಪ್ರಸ್ತುತ ವೀರಗಲ್ಲನ್ನು ಕ್ರಿ. ಶ. 12-13 ನೇ ಶತಮಾನಕ್ಕೆ ಅಂದರೆ ವಿಜಯ ನಗರ ಸಾಮ್ರಾಜ್ಯದ ಪ್ರಾರಂಭಿಕ ಕಾಲ ಅಥವಾ ಅದರ ನಿಕಟಪೂರ್ವಕ್ಕೆ ಒಯ್ಯ ಬಹುದಾಗಿದೆ.

ಶಾಸನ ಪಾಠ ಇಂತಿದೆ

ಶ್ರೀ ಬಲರಾಚಪ ಯಿ (ದೊ)ರಿದು
ಅರವಯ ಮಡಿದ

ವಿಜಯನಗರ ಕಾಲಕ್ಕೆ ಸೇರಿದ ಕೋಟೆ ಗೋಡೆಯ ಅವಶೇಷಗಳನ್ನು ಈ ದೇವಾ ಲಯದ ಪೂರ್ವಕ್ಕೆ ಕಾಣಬಹುದಾಗಿದೆ. ಆ ಭಾಗದಲ್ಲಿ ಕೋಟೆಗೆ ಪ್ರವೇಶ ದ್ವಾರವಿದ್ದು ಅದರ ಬಲಬದಿಗೆ ಆಂಜನೇಯನ ದೇವಾಲಯವಿದ್ದ ಕುರುಹುಗಳಿವೆ. ಅದು ಸಂಪೂರ್ಣ ಹಾಳಾಗಿದ್ದು ಕಲ್ಲುಗಳು ಚದುರಿಬಿದ್ದಿದೆ. ಆಂಜನೇಯನ ಉಬ್ಬುಶಿಲ್ಪವು ಕೆಳಗೆ ಮಣ್ಣಲ್ಲಿ ಹೂತಿದೆ. ಇದರ ಉತ್ತರಕ್ಕೆ ಗುಡ್ಡದ ಸಾಲಿದ್ದು ಅಲ್ಲಿನ ನೈಸರ್ಗಿಕ ಕಣಶಿಲೆಗಳ ಬಂಡೆಗಲ್ಲಿನಲ್ಲಿ ಆಟವಾಡಲು ಬಳಸುತ್ತಿದ್ದ ರೇಖಾಚಿತ್ರವಿದೆ. ಅರ್ಧಚಂದ್ರಾಕೃತಿಯಲ್ಲಿ

ಹಾಯ್ದು ಬರುವ ಗುಡ್ಡದ ಕೆಳಭಾಗದಲ್ಲಿ ಸುಮಾರು 10 ಎಕರೆ ಪ್ರದೇಶವು ಸಮತಟ್ಟಾಗಿದೆ ಹಾಗು ತುಂಗಭದ್ರಾ ನದಿಯು ಒಂದು ಬದಿಗೆ ಹರಿಯುತ್ತದೆ. ಸಮತಟ್ಟಾದ ಪ್ರದೇಶದಲ್ಲಿ ಅಲ್ಲಿಲ್ಲಿ ಜನವಸತಿಯಿದ್ದ ಕುರುಹಾಗಿ ಮನೆಯ ಕಲ್ಲಿನ ಅಡಿಪಾಯಗಳು ಕಂಡುಬರುತ್ತದೆ. ಬಸವ ಶಿಲ್ಪವಿರುವ ಲಿಂಗಮುದ್ರೆ ಕಲ್ಲು ಮತ್ತು ಮಧ್ಯಯುಗೀನ ಕಾಲದ ಮೃತ್ಪಾತ್ರೆಗಳು ಮತ್ತು ಅರೆಯುವ ಕಲ್ಲುಗಳು ದೊರಕಿವೆ. ಆದಿ ಇತಿಹಾಸ ಕಾಲಕ್ಕೆ ಸೇರಿದ ಮೃತ್ಪಾತ್ರೆಗಳು ಸಹ ಹೇರಳವಾಗಿ ಕಂಡುಬಂದಿವೆ. ಇಲ್ಲಿ ವಿಸ್ತೃತವಾಗಿ ಉತ್ಖನನ ಕೈಗೊಂಡರೆ ಆದಿ ಇತಿಹಾಸ ಕಾಲದ ಅವಶೇಷಗಳು ಇನ್ನೂ ಅಧಿಕ ಸಂಖ್ಯೆಯಲ್ಲಿ ದೊರಕುವ ಸಾಧ್ಯತೆಗಳಿವೆ.

ಪ್ರಾಗಿತಿಹಾಸದ ಕಾಲಘಟ್ಟದ ನವಶಿಲಾಯುಗ ಮತ್ತು ಕಬ್ಬಿಣಯುಗಗಳಲ್ಲಿ ಜನವಸತಿಯು ಗುಡ್ಡದ ಮೇಲಿದ್ದು, ಪ್ರಥಮ ನಗರೀಕರಣದ ಕುರುಹುಗಳಾಗಿವೆ. ದ್ವಿತೀಯ ಹಂತದ ನಗರೀಕರಣ ಪ್ರಕ್ರಿಯೆಯು ಗುಡ್ಡದ ಕೆಳಭಾಗಕ್ಕೆ ಸ್ಥಳಾಂತರಗೊಂಡಿದ್ದು, ಆದಿ ಇತಿಹಾಸ ಕಾಲದಿಂದ ಪ್ರಾರಂಭಿಸಿ ಮಧ್ಯಯುಗೀನ ಕಾಲ, ಅಂದರೆ ವಿಜಯನಗರ ಸಾಮ್ರಾಜ್ಯದ ಅಂತ್ಯದವರೆಗೆ ಸತತವಾಗಿ ಜನವಸತಿಯ ನೆಲೆಯಾಗಿ ಇದ್ದುದ್ದು ಇಲ್ಲಿನ ಅವಶೇಷಗಳಿಂದ ತಿಳಿಯಬಹುದಾಗಿದೆ. ಪ್ರಾಗಿತಿಹಾಸ ಕಡೇಬಾಗಿಲು ಮಧ್ಯಯುಗೀನ ಕಾಲಘಟ್ಟದವರೆಗೆ ಜನವಾಸ್ತವ್ಯ ದೊರಕಿರುವ ಅಪರೂಪದ ಮತ್ತು ವಿಶಿಷ್ಟ ನೆಲೆ ಕಡೇಬಾಗಿಲು ಎಂದರೆ ಅತಿಶಯೋಕ್ತಿಯಾಗಲಾರದು. ಈ ನೆಲೆಯನ್ನು ವ್ಯಾಪಕ ಭೂಶೋಧನೆ ಮತ್ತು ಉತ್ಖನನಕ್ಕೆ ಒಳಪಡಿಸಿದರೆ ಇನ್ನೂ ಅಧಿಕ ಮಾಹಿತಿಯು ನಮಗೆ ದೊರಕುವುದಲ್ಲಿ ಯಾವ ಸಂಶಯವೂ ಇಲ್ಲ.

ಅಡಿಟಿಪ್ಪಣಿಗಳು

1. ಕೃಷ್ಣಮೂರ್ತಿ, ಪಿ. ವಿ. ''ಹಸ್ತಿನಾವತಿ ವಳಿತ'' ವಿಜಯನಗರ ಸಾಮ್ರಾಜ್ಯದ ಒಂದು ವಿಶಿಷ್ಟ ಪ್ರಾದೇಶಿಕ ವಿಭಾಗ.''ವಿಜಯನಗರ ಅಧ್ಯಯನ, ಸಂ. 11,ಪು. 332-338 ; ಭಟ್‌ಸೂರಿ, ಕೆ. ಜಿ. 'ಹಂಪಿಯ ಶಾಸನಗಳಲ್ಲಿ ವಿಜಯನಗರ ಕಾಲದ ಆಡಳಿತ ವಿಭಾಗಗಳು', ವಿಜಯನಗರ ಅಧ್ಯಯನ, ಸಂ. 9. ಪು. 314-318.
2. ಶರಣಬಸಪ್ಪ ಕೋಲ್ಕಾರ್, 'ಹಂಪಿ ಪ್ರದೇಶದ ಪ್ರಾಗಿತಿಹಾಸ ಕಾಲದ ಕಲೆ', ಹಂಪಿ ಸಂಪುಟ, ಪು. 3-54 ; 'ಕೊಪ್ಪಳ -ಹಂಪಿ ಪ್ರದೇಶದ ಪ್ರಾಗಿತಿಹಾಸ ಕಾಲದ ಕಲೆ', ಅಪ್ರಕಟಿತ ಪಿಎಚ್‌ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2002.

3. ಆಂಡ್ರೂವ್ ಎಂ. ಬಾವರ್, ಪೀಟರ್ ಜಿ. ಜೊಹಾನ್ಸೆನ್ ಮತ್ತು ರಾಧಿಕ ಎಲ್. ಬಾವರ್, ''ಟುವರ್ಡ್ಸ್ ಎ ಪೊಲಿಟಿಕಲ್ ಇಕಾಲಜಿ ಇನ್ ಎರ್ಲಿ ಸೌಥ್ ಇಂಡಿಯಾ: ಪ್ರಿಲಿಮಿನರಿ ಕನ್ಸಿಡರೇಷನ್ಸ್ ಆಫ್ ದಿ ಸೋಶಿಯೊ ಪಾಲಿಟಿಕ್ಸ್ ಆಫ್ ಲ್ಯಾಂಡ್ ಅಂಡ್ ಅನಿಮಲ್ ಯೂಸ್ ಇನ್ ದಿ ಸದರನ್ ಡೆಕ್ಕನ್ ನಿಯೋಲಿಥಿಕ್ ಥ್ರೂ ಎರ್ಲಿ ಹಿಸ್ಟಾರಿಕ್ ಪಿರಿಯಡ್ಸ್'', 'ಏಷಿಯನ್ ಪರ್ಸಪೆಕ್ಟೀವ್ಸ್', ಸಂ. 46 (1) , ಸ್ಪ್ರಿಂಗ್, 2007 , ಪು. 3-35.
4. ಅದೇ. ಈ ಲೇಖನದಲ್ಲಿ ಲೇಖಕರು ಇಲ್ಲಿಯ ನೆಲೆಯಲ್ಲಿ ದೊರಕಿರುವ ಪ್ರಾಣಿಗಳ ಮೂಳೆಗಳ ಅವಶೇಷಗಳನ್ನು ಅಧ್ಯಯನ ನಡೆಸಿ ವಿಶ್ಲೇಷಿಸಿದ್ದಾರೆ. ಅವುಗಳನ್ನು ತಮ್ಮ ಲೇಖನದಲ್ಲಿ ಅಂಕಿ-ಅಂಶಗಳ ಮೂಲಕ ದಾಖಲಿಸಿದ್ದಾರೆ; ನೋಡಿ ಪು. 16-18.
5. ಸುರೇಶ್, ಕೆ. ಎಂ. ಮತ್ತು ಇತರರು, 'ಕರ್ನಾಟಕ ದೇವಾಲಯ ಕೋಶ : ಕೊಪ್ಪಳ ಜಿಲ್ಲೆ; ಕೋಶದಲ್ಲಿ ಈ ದೇವಾಲಯವನ್ನು ಕುರಿತು ಉಲ್ಲೇಖಿಸಿಲ್ಲ.
6. ವಾಸುದೇವನ್, ಸಿ. ಎಸ್. 'ಹಂಪಿ ಪರಿಸರದ ಕೆರೆಗಳು,' ಪು. 20-28.
7. ಹನುಮಂತ ರೆಡ್ಡಿ ವೈ, 'ವಿಜಯನಗರ ಸಾಮ್ರಾಜ್ಯ ಮತ್ತು ಕುರುಗೋಡುವಿನ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಸಂಬಂಧ', ವಿಜಯನಗರ ಅಧ್ಯಯನ, ಸಂ. 10, ಪು. 225-228, 'ವಿಜಯನಗರ ಮತ್ತು ಕುರುಗೋಡಿನ ವಾಸ್ತು ಶಿಲ್ಪದ ತೌಲನಿಖ ವಿಶ್ಲೇಷಣೆ', ಸಂ. 11, ಪು. 242-248, 'ಕುರುಗೋಡು ಪರಿಸರದ ವಿಜಯನಗರ ಕಾಲದ ಮೂರ್ತಿಶಿಲ್ಪ', ಸಂ. 12, ಪು. 255-259.
8. 'ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-2 ; ಕೊಪ್ಪಳ ಜಿಲ್ಲೆ'ಸಂಪುಟದಲ್ಲಿ ಈ ಶಾಸನ ಪ್ರಕಟವಾಗಿಲ್ಲವಾಗಿಲ್ಲ. ಇದು ಅಪ್ರಕಟಿತ ಶಾಸನ.
9. ವಿವಿಧ ಶೈಲಿಗಳ ವೀರಗಲ್ಲುಗಳು ಮತ್ತು ಅದಕ್ಕೆ ಸಂಬಂಧಿಸಿದ ವಿಷಯ ಗಳನ್ನು ಡಿ. ವಿ. ಪರಮಶಿವಮೂರ್ತಿಯವರು ತಮ್ಮ 'ಶಾಸನಶಿಲ್ಪ' ಪುಸ್ತಕ ದಲ್ಲಿ ಚರ್ಚಿಸಿದ್ದಾರೆ.
10. ಷಡಕ್ಷರಯ್ಯ ರು. ಮ. 'ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ಕಮಲಾಪುರ ವಸ್ತು ಸಂಗ್ರಾಹಾಲಯದ ವೀರ ಮತ್ತು ಮಹಾಸತಿಯಾದ ಶಿಲ್ಪಕಲೆ', ವಿಜಯನಗರ ಅಧ್ಯಯನ, ಸಂ. 9. ಪು. 319-330.

ಈ ಲೇಖನವನ್ನು ಸಿದ್ಧಪಡಿಸುವಾಗ ಶಾಸನವನ್ನು ಓದಲು ಮತ್ತು ಶಾಸನದ ತೇದಿಯನ್ನು ನಿರ್ಧರಿಸಲು ನೆರವಾದ ಡಾ. ಕೆ. ಜಿ. ಭಟ್‌ಸೂರಿ ಮತ್ತು ಡಾ. ಡಿ. ವಿ. ಪರಮಶಿವಮೂರ್ತಿ ಅವರುಗಳಿಗೆ ಕೃತಜ್ಞನಾಗಿದ್ದೇನೆ.

೨೨. ಬಳ್ಳಾರಿ ಹಂಡೆ ಪಾಳೆಯಗಾರರ ವಾಸ್ತು ಕಲೆ

ಡಾ. ಎಸ್.ಟಿ.ಬಿರಾದಾರ

ಕನ್ನಡ ನಾಡಿನ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸ ಅಧ್ಯಯನ ಸಂದರ್ಭದಲ್ಲಿ ಸ್ಥಳೀಯ ಅರಸರ ಪಾಳೆಗಾರರ ಪಾತ್ರವನ್ನು ಕಡೆಗಣಿಸುವಂತಿಲ್ಲ. ಇತ್ತೀಚಿನ ಸಂಶೋಧನೆ ಯಿಂದ ಬೆಳಕು ಕಾಣದೆ ಉಳಿದಿದ್ದ ಹಲವಾರು ಸ್ಥಳೀಯ ಅರಸರ ವೈಶಿಷ್ಟ್ಯಪೂರ್ಣ ಇತಿಹಾಸ ಇದೀಗ ಬೆಳಕಿಗೆ ಬರುತ್ತಿವೆ. ಕರ್ನಾಟಕ ಇತಿಹಾಸವನ್ನು ಅಧ್ಯಯನ ಮಾಡಿ ರುವ ವಿದ್ವಾಸಂರ ಒಟ್ಟು ಪ್ರಯತ್ನವನ್ನು ಗಮನಿಸಿದರೆ ಪ್ರಮುಖವಾಗಿ ಮೂರು ವಿಧಗಳು ಕಂಡುಬರುತ್ತಿವೆ.

ವಿಜಯನಗರ ಅರಸರ ಆಜ್ಞೆಯ ಮೇರೆಗೆ ಬಿಜಾಪೂರ ಬಾದಶಹನನ್ನು ಸೋಲಿಸಿ ವಿಜಯನಗರಕ್ಕೆ ತನ್ನ ನಿಷ್ಠೆಯನ್ನು ಪ್ರದರ್ಶಿಸಿದವನು ಹನುಮಪ್ಪನಾಯಕ. ಹೀಗೆ ಅಪ್ರತಿಮ ಶೌರ್ಯಮಯ, ಸಾಹಸ, ತ್ಯಾಗ, ಸ್ವಾಮಿನಿಷ್ಠೆಗಳಿಗೆ ಪ್ರಸಿದ್ಧರಾಗಿದ್ದರು ಈ ಹಂಡೆ ಪಾಳೆಯಗಾರರು. ಕರ್ನಾಟಕ ಇತಿಹಾಸದ ಸಂದಿಗ್ಧ ಸಮಯದಲ್ಲಿ ತಮ್ಮ ಸಾಹಸವನ್ನು ಸ್ವಾಮಿನಿಷ್ಠೆಯನ್ನು ಪ್ರದರ್ಶಿಸಿ ಮಹತ್ವದ ಸೇವೆಯನ್ನು ಸಲ್ಲಿಸಿ ಕರ್ನಾಟಕ ಇತಿಹಾಸದಲ್ಲಿ ಮಹತ್ವದ ಸ್ಥಾನ ಇವರು ಪಡೆದುಕೊಂಡಿದ್ದಾರೆ.

ಹಂಡೆ ಪಾಳೆಯಗಾರರ ಚರಿತ್ರೆ

ವಿಜಯನಗರ ಪಾಳೆಗಾರರಲ್ಲಿ ಹಂಡೆ ಪಾಳೆಯಗಾರರು ಪ್ರಮುಖರಾದವರು. ಇವರು ವಿಜಯನಗರ ಕಾಲದಲ್ಲಿ ಸಾಮಂತರಾಗಿದ್ದು, ಕೃಷ್ಣದೇವರಾಯ, ಅಚ್ಯುತದೇವ ರಾಯನ ಕಾಲದಿಂದ ಪ್ರಾರಂಭವಾಗಿ ಆದಿಲ್‌ಶಾಹಿ, ಟಿಪ್ಪುಸುಲ್ತಾನ, ಕೊನೆಗೆ ಕರ್ನಲ್ ಮನ್ರೋ ಮುಂತಾದ ಆಂಗ್ಲ ಅಧಿಕಾರಿಗಳವರೆಗೆ ಅಧಿಕಾರ ಮುಂದುವರಿಸಿಕೊಂಡು ಹೋದ ಮನೆತನವಿದು.

ಹಂಡೆ ಪಾಳೆಯಗಾರರ ಬಳ್ಳಾರಿ ಕೈಫಿಯಿತ್ತು ತಿಳಿಸುವಂತೆ ಈ ಪಾಳೆಯಗಾರರು ಮೂಲತಃ ಬಿಜಾಪೂರ ಜಿಲ್ಲೆಯಲ್ಲಿರುವ ಬಸವನ ಬಾಗೇವಾಡಿ ಪ್ರಾಂತದ ಮುತ್ತಗಿ ಮತ್ತು ವಡವಡಗಿ ಗ್ರಾಮಗಳಲ್ಲಿ ಇದ್ದರೆಂದು ಈ ಮನೆತನದ ಮೂಲಪುರುಷ ಲಕ್ಕಿ ನಾಯಕ. ಇವನಿಗೆ ಬಾಲದ ಹನುಮಪ್ಪನಾಯಕ ಹಾಗೂ ಬಳಗನಾಯಕ ಇಬ್ಬರು ಮಕ್ಕಳಿ ದ್ದರು, ಈ ಬಾಲದ ಹನುಮಪ್ಪನಾಯಕ ನಿಜಾಮ ಬಾದಶಹನನ್ನು ಸೆರೆಹಿಡಿದು ರಾಮರಾಯನಿಗೆ ಒಪ್ಪಿಸಿ ರಾಮರಾಯನ ಕೃಪೆಯಿಂದ ಮಾಂಡಳಿಕನಾದನು. ಈ ಬಾಲದ

ಹನುಮಪ್ಪ ನಾಯಕನ ಪರಾಕ್ರಮ ಮೆಚ್ಚಿ ರಾಮರಾಯನು ಹನುಮಪ್ಪನಿಗೆ ಕುರುಗೋಡು, ಬಳ್ಳಾರಿ, ಬಕ್ಕರಾಯ ಸಮುದ್ರ, ನಂದ್ಯಾಲ, ಧರ್ಮಾವರಂ, ಕಣೆಕಲ್ಲು ಗ್ರಾಮಗಳನ್ನು ಉಂಬಳಿಯಾಗಿ ಕೊಟ್ಟನು. ನಂತರ ಹನುಮಪ್ಪನಾಯಕನು ಕಾಲಾಂತರದಲ್ಲಿ ನೆರೆ ಆಂಧ್ರ ಪ್ರದೇಶದ ಅನಂತಪುರದವರೆಗೂ ಮುಂದುವರೆಯಿತು.

ಹಂಡೆ ಪಾಳೆಯಗಾರರ ಬಗ್ಗೆ ಲೇಖನ ಬರೆದ ಶಂಭುಲಿಂಗಪ್ಪನವರು, ಹೊಯ್ಸಳರ ಕಾಲದಲ್ಲಿಯೂ ಈ ಮನೆತನ ಅಸ್ತಿತ್ವದಲ್ಲಿತ್ತು ಎಂದು ಅವರು ಹೊಯ್ಸಳರ ಅರಸರ ನಿಷ್ಠಾವಂತ ಸೇವಕರಾಗಿದ್ದರು, ಹೊಯ್ಸಳರ ಪರವಾಗಿ ಅನೇಕ ಯುದ್ಧಗಳಲ್ಲಿ ಪಾಲ್ಗೊಂಡು ಗೆದ್ದು ಬಿರುದು ಬಾವಲಿಗಳನ್ನು ಸಹ ಪಡೆಯುತ್ತಿದ್ದರು ಎಂದು ಉಲ್ಲೇಖಿಸಿದ್ದಾರೆ. ಇದಕ್ಕೆ ನಿರ್ದೇಶನವಾಗಿ ತಾಮ್ರ ಶಾಸನದಲ್ಲಿ ಹೊಯ್ಸಳರ ಜೊತೆಗೆ ಯುದ್ಧದಲ್ಲಿ ಸಾಮಂತ ಅರಸರಾದ ಹಂಡೆಪಾಳೆಯಗಾರರು ಯುದ್ಧದಲ್ಲಿ ಪಾಲ್ಗೊಂಡ ಬಗ್ಗೆ ಉಲ್ಲೇಖಿಸಲಾಗಿದೆ.

ಹಂಡೆ ಅರಸರ ಮೂಲಪುರುಷ

ಹಂಡೆ ಅರಸರ ಮೂಲಪುರುಷ. ಹನುಮಪ್ಪನಾಯಕ. ಈತ ಮೊದಲಿಗೆ ಬಿಜಾಪೂರ ಜಿಲ್ಲೆಯ ಬಾಗೇವಾಡಿ ತಾಲೂಕಿನ ಮುತ್ತಗಿ ಗ್ರಾಮದಲ್ಲಿ ಗೌಡನಾಗಿದ್ದನು, ನಂತರದಲ್ಲಿ ಬಿಜಾಪೂರ ಆದಿಲ್‌ಶಾಹಿ ಕೈಕೆಳಗೆ ಸರನಾಡಗೌಡನಾಗಿದ್ದನು. ಅವನ ಮೆಚ್ಚುಗೆಗೆ ಪಾತ್ರನಾಗಿ ದೊರೆಯ ಪ್ರಶಂಸೆಯ ಮೇರೆಗೆ ಶಾಲಿವಾನ ಶಕೆ 1489ನೇ ಪ್ರಭಾವ ಸಂವಸ್ತರದಲ್ಲಿ ಬಳ್ಳಾರಿ, ಕುರುಗೋಡು, ತೆಕ್ಕಲುಕೋಟೆ ಈ ಮೂರು ಪರಗಣೆ ಗಳ ಸನ್ನದು ಬರೆಸಿಕೊಂಡು ಬಂಕಾಪೂರಕ್ಕೆ ಬಂದನು. ಈ ಸೀಮೆಯಲ್ಲಿ ಅರಾಜಕತೆ ಯನ್ನು ಹೋಗಲಾಡಿಸಿ, ತದನಂತರ ಬಳ್ಳಾರಿಗೆ ತನ್ನ ಠಾಣವನ್ನು ಬದಲಾಯಿಸಿ ಕೊಂಡನು. ಹನುಮಪ್ಪನಾಯಕನಿಗೆ ಶಾಸನದಲ್ಲಿ ಹನುಮಿನಾಯಕ ಹನುಮಪ್ಪನಾಯಕ ಎಂದು ಉಲ್ಲೇಖಿಸಲಾಗಿದೆ.

ಧಾರ್ಮಿಕ ವಾಸ್ತು ಸ್ಮಾರಕಗಳು

ಯಾವುದೇ ಒಂದು ರಾಜವಂಶ ಹೊಸದಾಗಿ ರಾಜ್ಯ ಸ್ಥಾಪನೆ ಮಾಡಿದಾಗ ಮೊಟ್ಟ ಮೊದಲ ಬಾರಿಗೆ ಅವರು ಕೈಗೊಳ್ಳುವ ಮೊದಲ ಕೆಲಸ ದೇವಾಲಯ ನಿರ್ಮಾಣ, ಇಲ್ಲವೆ, ಈಗಾಗಲೆ ಅಸ್ತಿತ್ವದಲ್ಲಿದ್ದ ದೇವಾಲಯದ ಮಠಮಾನ್ಯಗಳಿಗೆ ದಾನದತ್ತಿಗಳನ್ನು ಕೊಡುವುದು. ಅದು ಅವರ ಆದ್ಯ ಕರ್ತವ್ಯವೆಂದು ತಿಳಿದುಕೊಂಡಿದ್ದರು. ಏಕೆಂದರೆ ಸಾಮಾನ್ಯ ಜನರಲ್ಲಿ ತಾವು ಧರ್ಮಾವಲಂಬಿಗಳೆಂಬ ಭಾವನೆ ಮೂಡಿಸಿ ತಮ್ಮ ರಾಜಕೀಯ ಚಟುವಟಿಕೆಗಳಿಗೆ ಜನಸಾಮಾನ್ಯರ ಬೆಂಬಲ ಪಡೆಯಲು ಮಾಡಿದ ಪ್ರಯತ್ನದ ಫಲಗಳೇ ದೇವಾಲಯ.

ಕೋಟೆ ವಾಸ್ತುಶಿಲ್ಪ

ಸ್ವರಕ್ಷಣೆಯ ದೃಷ್ಟಿಯಿಂದ ಯುದ್ಧ ತಂತ್ರಗಳಲ್ಲಿ ಒಂದಾಗಿ ಬೆಳೆದುಬಂದ ಕೋಟೆ ಅಥವಾ ದುರ್ಗ ಆಕ್ರಮಣಕಾರರಿಗೆ ಆಕ್ರಮಣ ವಿಧಾನವನ್ನು ಹೇಳಿಕೊಟ್ಟಿತ್ತು. ಅದಕ್ಕಾಗಿಯೇ ಕಾಮಂದಕನು ಶುಕ್ರ ನೀತಿಸಾರದಲ್ಲಿ "ಭದ್ರವಾದ ಕೋಟೆಯಲ್ಲಿದ್ದ ರಾಜನು ಬಿರುಗಾಳಿಯ ಮುಂದಿನ ಮೋಡದ ತುಂಡಗಳಿಗೆ ಸಮಾನನೆಂದು" ಹೇಳುತ್ತಾನೆ. ದುರ್ಗವು ರಾಜ್ಯದ ಸಪ್ತಾಂಗಗಳಲ್ಲಿ ಒಂದು ಒಂದು ತಿಳಿಯಲಾಗಿತ್ತು. ರಕ್ಷಣಾ ದೃಷ್ಟಿಯಿಂದ ಇಷ್ಟೊಂದು ಮಹತ್ವ ಪಡೆದ ಕೋಟೆಯನ್ನು ಕಟ್ಟಲು ಆಯ್ಕೆ ಮಾಡಿಕೊಂಡ ಸ್ಥಳಕ್ಕೆ ಹೆಚ್ಚಿನ ಮಹತ್ವ ನೀಡಲಾಗುತ್ತಿತ್ತು. ಶತ್ರುಪಡೆ ಸಂಪೂರ್ಣವಾಗಿ ಹತ್ತಿರ ಬರದಂತೆ ಕೋಟೆಗಳನ್ನು ಕಡಿದಾದ ಬೆಟ್ಟದ ಮೇಲೆ, ಕಾಡಿನ ಮಧ್ಯದಲ್ಲಿ ಮತ್ತು ನದಿಯ ದಂಡೆಯ ಮೇಲೆ ಕಟ್ಟಲಾಗುತ್ತಿತ್ತು. ಕೌಟಿಲ್ಯ ನಾಲ್ಕು ರೀತಿಯ ಕೋಟೆ ಗಳನ್ನು ನಿರ್ಮಿಸಬೇಕೆಂದು ಹೇಳಿದ. ಮನುಸ್ಮೃತಿಯು ಆರು ವಿವಿಧ ಕೋಟೆಗಳನ್ನು ಕಟ್ಟಲು ನಿರ್ದೇಶಿಸುತ್ತಾನೆ. ಶುಕ್ರ ನೀತಿಸಾರವು ಮುಂದುವರೆದು ಒಂಬತ್ತು ಬಗೆಯ ಕೋಟೆಯ ಕುರಿತು ಹೇಳುತ್ತವೆ.

ಮಾನಸಾರವು ಎಂಟು ಬಗೆಯ ಕೋಟೆಗಳ ಕುರಿತು ಹೇಳಿದರೆ, ಪಂಚತಂತ್ರದ ದುರ್ಗ ಸಿಂಹನು ನಾಲ್ಕು ರೀತಿಯ ದುರ್ಗಗಳನ್ನು ಹೆಸರಿಸಿರುವನು. ಕಲ್ಯಾಣ ಚಾಲುಕ್ಯ ದೊರೆ ಎರಡನೇ ಸೋಮೇಶ್ವರನು ಒಂಬತ್ತು ರೀತಿಯ ದುರ್ಗಗಳನ್ನು ಕುರಿತು ಉಲ್ಲೇಖಿಸಿದ್ದಾನೆ. ಆದರೆ ನಮ್ಮ ಆಳ ಅರಸರು ನಾಲ್ಕು ರೀತಿಯ ದುರ್ಗ ಕಟ್ಟಿಸಿದ ಕುರಿತು ತಿಳಿದುಬರುತ್ತಿದೆ. 1) ಜಲದುರ್ಗ 2) ಗಿರಿದುರ್ಗ 3) ಸ್ಥಲ ದುರ್ಗ 4) ವನದುರ್ಗಗಳು ಪ್ರಮುಖವಾಗಿವೆ. ಆದರೆ ಕರ್ನಾಟಕದಲ್ಲಿ ಸದ್ಯ ಉಳಿದುಕೊಂಡು ಬಂದಿರುವ ಕೋಟೆಗಳನ್ನು ಗಮನಿಸಿದರೆ, ಗಿರಿದುರ್ಗಗಳೇ ಪ್ರಮುಖ ಸ್ಥಾನ ಪಡೆದು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಿವೆ. ಇವುಗಳಲ್ಲಿ ಬಳ್ಳಾರಿ ಗುಡ್ಡದ ಮೇಲೆ ಹಂಡೆ ಪಾಳೆಯಗಾರರು ಕಟ್ಟಿಸಿದ ಗಿರಿದುರ್ಗವು ಒಂದಾಗಿದೆ.

ಬಳ್ಳಾರಿ ಕೋಟೆ

ಕಲ್ಯಾಣ ಚಾಲುಕ್ಯ ಆರನೇ ವಿಕ್ರಮಾದಿತ್ಯನ ನಂತರ ಸ್ವತಂತ್ರಗೊಂಡ ಹೊಯ್ಸಳ ದೊರೆ ವಿಷ್ಣುವರ್ಧನ ಉತ್ತರದಂಡೆಯಾತ್ರೆ ಕೈಕೊಂಡು ಗೆದ್ದುಕೊಂಡ ಉತ್ತರ ಕರ್ನಾಟಕ ಪ್ರದೇಶಗಳಿಗೆ ಬಳ್ಳಾರಿಯು ಸೇರುತ್ತದೆ. ಆದ್ದರಿಂದ ಬಳ್ಳಾರಿ ಕೋಟೆ 12ನೇ ಶತಮಾನದ ಹೊತ್ತಿಗೆ ಅಸ್ತಿತ್ವದಲ್ಲಿ ಇದ್ದ ಸೂಚನೆ ದೊರೆಯುತ್ತಿದೆ. ಕುರುಗೋಡು ಸಿಂದರು ಸಹ ಇದರ ಮೇಲೆ ಅಧಿಕಾರ ಹೊಂದಿದ್ದರು. ಅದರೆ ಮುಂದೆ ವಿಜಯನಗರ ಪಾಳೆಗಾರರಲ್ಲಿ ಹಂಡೆ ಅರಸ ಹನುಮಪ್ಪನಾಯಕಬಳ್ಳಾರಿ ಪಾಳೆಯಗಾರನಾಗಿ ಆಳುತ್ತಿದ್ದ, ಈ ಪಾಳೆಗಾರರಲ್ಲಿ ಬಳ್ಳಾರಿ ಕೋಟೆಯನ್ನು ವ್ಯವಸ್ಥಿತವಾಗಿ ಕಟ್ಟಲಾಯಿತು. ನಂತರದಲ್ಲಿ

ಕೋಟೆಯು ಮುಸ್ಲಿಮರ ಕೈವಶವಾಯಿತು. ಶಿವಾಜಿ ಮತ್ತು ಔರಂಗಜೇಬರು ಬಳ್ಳಾರಿ ಕೋಟೆಯ ಮೇಲೆ ಅಧಿಕಾರ ಸ್ಥಾಪಿಸಿದರು. ಕ್ರಿ.ಶ. 1692 ರಲ್ಲಿ ಪುನಃ ಹಂಡೆ ಪಾಳೆಗಾರರ ವಶವಾಯಿತು.

ಕೋಟೆಯ ವಾಸ್ತುರಚನೆ

ಇದು ಬಳ್ಳಾರಿಯ ಮಧ್ಯಭಾಗವೆಂಬಂತೆ ಕಂಡುಬರುವ ಬಳ್ಳಾರಿಯ ಬೆಣಚು ಕಲ್ಲಿನ ಬಂಡೆಯುಳ್ಳ ದೊಡ್ಡ ಬೆಟ್ಟವನ್ನು ಸುತ್ತುವರೆದುಕೊಂಡು ಕಟ್ಟಲ್ಪಟ್ಟ ಕೋಟೆ, ನಾಲ್ಕು ಸುತ್ತಿನ ಗೋಡೆಯುಳ್ಳ ಕೋಟೆಯಾಗಿದೆ ಹೊರಕೋಟೆ ಅಥವಾ ಮೊದಲನೆ ಕೋಟೆ ಬೆಟ್ಟದ ಪೂರ್ವಕ್ಕಿರುವ ಸಮತಟ್ಟಾದ ಪ್ರದೇಶವನ್ನು ಸುತ್ತುವರೆದಂತೆ ಬೆಟ್ಟವನ್ನು ಇನ್ನುಳಿದ ಮೂರು ಸುತ್ತುಗಳು ಬೆಟ್ಟದ ಮೇಲೆ ಬರುತ್ತಿದೆ.

ಹೊರ ಕೋಟೆಯಲ್ಲಿ ಚೌಕಾಕಾರ ಮತ್ತು ವರ್ತುಲಾಕಾರದ ಕೊತ್ತಳಿಗಳಿವೆ. ಗೋಡೆಯಲ್ಲಿ ಬಂದೂಕಿನ ಕಿಂಡಿಗಳಿವೆ. ಕೊತ್ತಲಗಳ ಮೇಲಿನ ಇಟ್ಟಿಗೆ ಮತ್ತು ಗಾರೆಯ ದಪ್ಪವಾದ ಕೈಪಿಡಿ ಗೋಡೆಯಲ್ಲಿ ತೋಪುಗಳಿಗಾಗಿ ಬಿಟ್ಟಿರುವ ಸಂದುಗಳಿವೆ. ಚೌಕಾ ಕಾರದ ಕೊತ್ತಳದ ಕಲ್ಲಿನ ಮೇಲೆ ಸರ್ಪದ ಬಾಲ ಹಿಡಿದಂತೆ ಕೆತ್ತಲ್ಪಟ್ಟ ಮಂಗನ ಶಿಲ್ಪ ವಿರುವುದು. ಇದೇ ಕೊತ್ತಳದ ಹತ್ತಿರದ ಕೋಟೆ ಗೋಡೆಯ ಮೇಲೆ ಕಾಳಿಂಗ ಮರ್ದನ ಕೃಷ್ಣ ಮತ್ತು ಎರಡು ಹುಲಿಗಳ ಶಿಲ್ಪ ಕೆತ್ತಲ್ಪಟ್ಟಿವೆ. ಪೂರ್ವಕ್ಕಿರುವ ಕಂಬದ್ವಾರ ವನ್ನು ಕಂಬುಭಾವಣೆಗಳಿಂದ ಕಟ್ಟಲಾಗಿದೆ. ಈ ದ್ವಾರದ ಕದಗಳು ಮರದಿಂದ ಮಾಡಲ್ಪಟ್ಟಿದ್ದು ಇಂದಿಗೂ ಸುಸ್ಥಿತಿಯಲ್ಲಿವೆ.

ಅರಮನೆ ವಾಸ್ತುಕಲೆ

ಹಂಡೆ ಪಾಳೆಯಗಾರರ ಕಾಲದ ಅರಮನೆಗಳು ಮತ್ತು ಜನರ ವಾಸಕ್ಕಾಗಿ ಕಟ್ಟಿದ ಸ್ಮಾರಕಗಳು ಯಾವುವು ಇಂದು ಉಳಿದುಬಂದಿಲ್ಲ. ಕಾರಣ ಬೇರೆ -ಬೇರೆ ಕಾಲದಲ್ಲಿ ಬೇರೆಯವರ ಅಧೀನಕ್ಕೆ ಒಳಪಟ್ಟ ಕೋಟೆಯಲ್ಲಿ ವಾಸದ ಮನೆಗಳು ಸಹ ಬದಲಾಗುತ್ತಾ ಬಂದಿವೆ. ಆದರೆ ಅನಂತರಪುರ ನಿಡುಮಾಡಿ (ಸಮಾದಿ ಪಕ್ಕದಲ್ಲಿದೆ.) ಪ್ರದೇಶದಲ್ಲಿ ಕಂಡುಬರುತ್ತಿದೆ.

ದೇವಾಲಯಗಳು

ಹಂಡೆ ಪಾಳೆಯಗಾರರ ದೇವಾಲಯಗಳು ಒಡ್ಡುದರೋಜಿ, ಸಿರುಕುಪ್ಪ, ರೂಪನಗುಡಿ, ಕಣೆಕಲ್ಲು ಮತ್ತು ವುಳೆನೂರ, ತೋಲಮಾಮಿಡಿ, ಭಾಗನೂರ, ಸಂಗನಕಲ್ಲು, ಪ್ರಧಾನವಾಗಿ ಬಳ್ಳಾರಿ ಸಿಂಧನೂರು, ರಾರಾವಿ, ಸಿಡಗಿನ ಮೇಳ, ಕುಡಿತಿನ, ಮಣೂರು, ಕೊಟ್ಟುರು, ಕಾರೆಕಲ್ಲು, ಕುರುಗೋಡು, ನಿಡುಮಾಮಿಡಿ ಇನ್ನೂ ಹಲವಾರು

ಪ್ರದೇಶಗಳಲ್ಲಿ ಕಂಡುಬರುತ್ತಿದೆ. ಹಂಡೆ ಅರಸರು ನಿರ್ಮಿಸಿದ ಮತ್ತು ಅವರ ಅವಧಿಯಲ್ಲಿ ನಿರ್ಮಿತಗೊಂಡ ದೇವಾಲಯಗಳು ಕಲಾತ್ಮಕ ದೃಷ್ಟಿಯಿಂದ ಅವರ ಚಕ್ರವರ್ತಿಗಳಾದ, ವಿಜಯನಗರದ ಅರಸರ ನಿರ್ಮಿತಿ ಮಟ್ಟವನ್ನು ತಲುಪದಿದ್ದರೂ ಅವುಗಳಿಗೆ ಐತಿಹಾಸಿಕ ಮಹತ್ವ ಉಂಟು. ಇವರ ಕಾಲದ ದೇವಾಲಯಗಳೆಂದರೆ ಬಸವೇಶ್ವರ, ಈಶ್ವರ, ಆಂಜನೇಯ, ವೀರಭದ್ರ, ಮಲ್ಲೇಶ್ವರ ಹೆಸರಿನ ದೇವಾಲಯ ಕಂಡುಬರುತ್ತವೆ.

ಹಂಡೆ ಪಾಳೆಯಗಾರರ ವಾಸ್ತುಶಿಲ್ಪ

ಹಂಡೆ ಪಾಳೆಯಗಾರರ ವಾಸ್ತು ದೇವಾಲಯಗಳ ಶೈಲಿಯ ಮೇಲೆ ವಿಜಯನಗರದ ವಾಸ್ತುಶೈಲಿಯ ಹಾಸು ಹೊಕ್ಕಾಗಿದ್ದು, ಅದನ್ನು ಹೆಚ್ಚಾಗಿ ಬೆಳೆಸಿರುವರು. ಹೀಗಾಗಿ ಇವರ ದೇವಾಲಯಗಳು ವಿಜಯನಗರ ರಾಜವಂಶದ ದೇವಾಲಯಗಳ ಲಕ್ಷಣಗಳನ್ನೇ ಹೆಚ್ಚಾಗಿ ಹೋಲಿಸುತ್ತಿದೆ.

ಅವುಗಳಲ್ಲಿ ಜಾನಪದೀಯ ಮತ್ತು ಸ್ಥಳೀಯ ಅಂಶಗಳು ಸೇರಿಕೊಂಡಿವೆ. ಇವುಗಳಲ್ಲಿ ಮೂರು ಘಟ್ಟಗಳಿವೆ. ಮೊದಲನೆಯದು ಕ್ರಿ.ಶ. 1336 ರಿಂದ 1500 ರವರೆಗೆ, ಎರಡನೆಯದು ಕ್ರಿ.ಶ. 1565ರ ನಂತರ ಕಾಲದಲ್ಲಿ ಹಂಡೆ ಪಾಳೆಯಗಾರರು ತಮ್ಮ ಪ್ರದೇಶದ ದೇವಾಲಯಗಳನ್ನು ನಿರ್ಮಿಸಲು ಈ ಮೂರು ರೀತಿಯ ಕಾಲಘಟ್ಟದ ದೇವಾಲಯಗಳ ಕೆಲವು ಲಕ್ಷಣಗಳನ್ನು ಆಯ್ಕೆ ಮಾಡಿಕೊಂಡಿದ್ದು ಇವನ್ನು ಅಧಿಷ್ಠಾನ, ಗೋಡೆ, ಕಂಭ, ದೀಪಸ್ತಂಭ ಶಿಖರದಲ್ಲಿ ಸೂಕ್ತ ರೀತಿಯಲ್ಲಿ ಬಳಕೆ ಮಾಡಿಕೊಂಡಿರುವುದನ್ನು ಕಾಣಬಹುದಾಗಿದೆ.

ಬಳಸಿದ ಮಾಧ್ಯಮ

ಹಂಡೆ ಪಾಳೆಯಗಾರರು ತಮ್ಮ ಅರಸರಾದ ವಿಜಯನಗರದವರು ದೇವಾಲಯ ನಿರ್ಮಾಣಕ್ಕೆ ಬೆಳಸಿದ ಮಾಧ್ಯಮ ಬೃಹದಾಕಾರದ ಕಣಶಿಲೆ ಹಾಗೂ ಬೆಣಚುಕಲ್ಲನ್ನೇ ಬಳಸಿರುವರು. ಏಕೆಂದರೆ ಬಳ್ಳಾರಿ ಜಿಲ್ಲೆಯಲ್ಲಿ ಬೆಣಚು ಗುಡ್ಡಗಳನ್ನು ಬಿಟ್ಟರೆ ಬೇರೆ ಯಾವುದೇ ಕಲ್ಲು ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಸಿಗುವುದಿಲ್ಲ. ಅದಕ್ಕಾಗಿ ವಿಜಯನಗರದ ಅರಸರು ಬಳಸಿದ ಮಾಧ್ಯಮವನ್ನೇ ಹಂಡೆ ಅರಸರು ಸಹ ತಮ್ಮ ದೇವಾಲಯಗಳ ಕಂಬ ಗೋಡೆ, ದೀಪಸ್ತಂಭ, ಗರುಡಗಂಬ ಇತ್ಯಾದಿ ಭಾಗಗಳಿಗೆ ಬಳಕೆ ಮಾಡಿಕೊಂಡಿರುವರು.

ತಲವಿನ್ಯಾಸ

ಹಂಡೆ ಪಾಳೆಯಗಾರರು ದೇವಾಲಯಗಳ ವಿಶಿಷ್ಟ ಲಕ್ಷಣಗಳಲ್ಲಿ ದೇಗುಲದ ತಲ ವಿನ್ಯಾಸವು ಒಂದಾಗಿದ್ದು, ಈ ದೇವಾಲಯಗಳನ್ನು ಸಾಂಧಾರ ಮತ್ತು ನಿರಂಧಾರ ಪ್ರಕಾರದಲ್ಲಿ ಏಕಕೂಟ, ದ್ವಿಕೂಟ, ತ್ರಿಕೂಟ ತಲವಿನ್ಯಾಸ ಮಾದರಿಯಲ್ಲಿ ಕಟ್ಟಲ್ಪಟ್ಟಿವೆ.

ಸಾಂಧಾರ

ಸಾಂಧಾರ ತಲವಿನ್ಯಾಸ ದೇವಾಲಯವೆಂದರೆ ಗರ್ಭಗೃಹದ ಸುತ್ತು ಒಳಪ್ರದಕ್ಷಿಣ ಪಥವನ್ನೊಳಗೊಂಡಿರುವುದು. ಅಂತರಾಳ ಅಥವಾ ಅರ್ಧ ಮಂಟಪ, ನವರಂಗ ಅಥವಾ ಸಭಾ ಮಂಟಪಗಳಿಂದ ಕೂಡಿದ ದೇವಾಲಯಗಳು ಮುದ್ದಾಪೂರದ ಈಶ್ವರ ದೇವಾಲಯ, ರಾರಾವಿಯ ಆಂಜನೇಯ ದೇವಾಲಯಗಳಾಗಿವೆ.

ನಿರಂಧಾರ

ನಿರಂಧಾರ ಪ್ರಕಾರದ ದೇವಾಲಯಗಳು ಒಳಪ್ರದಕ್ಷಿಣಾ ರಹಿತವಾಗಿ ಹೆಚ್ಚಾಗಿ ನಿರ್ಮಿಸಲ್ಪಟ್ಟಿದ್ದು. ಗರ್ಭಗೃಹ, ಅರ್ಧಮಂಟಪ, ನವರಂಗ ಅಥವಾ ಸಭಾ ಮಂಟಪಗಳಿದ್ದು, ಪ್ರದಕ್ಷಣಾ ಪಥ ಮಾತ್ರ ವಿರುವುದನ್ನು ಪ್ರದಕ್ಷಣಾ ಪಥವಿರುವ ದೇವಾಲಯವನ್ನು ನಿರಂಧಾರ ದೇವಾಲಯವೆಂದು ಕರೆಯುವರು.

ದ್ವಾರಬಂಧ ಅಲಂಕರಣೆ

ದೇವಾಲಯದ ವಿವಿಧ ಲಕ್ಷಣಗಳಲ್ಲಿ ಗರ್ಭಗೃಹದ ದ್ವಾರವು ಒಂದಾಗಿದ್ದು, ಹಂಡೆ ಪಾಳೆಯಗಾರರು ದೇವಾಲಯ ಸಾದಾ ಕೆತ್ತನೆಹೊಂದಿವೆ. ಕೆಲವು ಮಾತ್ರ ಶೈವ ದ್ವಾರ ಪಾಲಕರು ಜೊತೆಯಲ್ಲಿ ಲಲಾಟದ ಇಲ್ಲವೆ ಮಂಗಫಲಕಗಳಲ್ಲಿ ಗಜಲಕ್ಷ್ಮೀ, ಗಣೇಶ ಮತ್ತು ಲಿಂಗ ಉಬ್ಬುಶಿಲ್ಪಗಳಿವೆ. ಇಂತಹವುಗಳಲ್ಲಿ ಕೊರ್ಲಗುಂದಿಯ ವೀರಭದ್ರ ದೇವಾಲಯಗಳು ಮೇಲಿನ ದ್ವಾರಗಳನ್ನು ಹೊಂದಿವೆ.

ಕಂಬಗಳು

ಈ ಕಾಲದ ದೇವಾಲಯಗಳ ಲಕ್ಷಣಗಳಲ್ಲಿ ಕಂಬಗಳು ಸಹ ಪ್ರಮುಖ ಲಕ್ಷಣಗಳಾಗಿದ್ದು ಇವು ಮೂರು ಪ್ರಕಾರಗಳಲ್ಲಿ ಕಂಡುಬರುತ್ತವೆ. ಮೊದಲ ಪ್ರಕಾರದಲ್ಲಿ ಪ್ರಮುಖ ಮಂಟಪಗಳ ಕಂಬಗಳು ಏಕಕಲ್ಲಿನಲ್ಲಿ ರಚಿತವಾಗಿದ್ದು, ಮೇಲೆ ಮೂರು ಪಟ್ಟಿಕೆಗಳಿದ್ದು ಕೆಳಗೆ ಪೀಠದ ಮೇಲೆ ಸಾದಾ ಕಾಂಡ ಇದೆ. ನಾಗ ತರಂಗ ಬೋದಿಗೆ ಇಲ್ಲಿದೆ. ಕೆಲವು ಪುಷ್ಪ ಬೋದುಗೆಗಳ ಭಾಗಗಳನ್ನು ಹೊಂದಿದೆ. ಇಂತಹ ಕಂಬಗಳು ಹೆಚ್ಚಾಗಿ ದೇವಾಲಯಗಳ ಸಭಾ ಮಂಟಪ ಹಾಗೂ ಅದರ ಮುಂದುಗಡೆಯ ಮಂಟಪದಲ್ಲಿ ಕಂಡುಬರುತ್ತದೆ.

ಎರಡನೇ ಪ್ರಕಾರದ ಕಂಬಗಳು ಸಭಾ ಮಂಟಪದಲ್ಲಿ ಕಂಡುಬರುತ್ತಿದ್ದು, ಮೋಕಾ ಗ್ರಾಮದ ಮಲ್ಲೇಶ್ವರ ದೇವಾಲಯದ ಕಂಬಗಳ ಪಟ್ಟಿಕೆಗಳು ಉಬ್ಬುಶಿಲ್ಪ ಹೊಂದಿದಂತೆ ಮೇಲೆ ಪುಷ್ಪಬೋಧಿಗೆಗಳನ್ನು ಹೊಂದಿವೆ. ಸಿಡಗಿನಮೇಳ ಮಲ್ಲೇಶ್ವರ ದೇವಾಲಯದ ಸಭಾಮಂಟಪದ ಕಂಬಗಳ ಮೇಲೆ ಸಹ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ದೇವಾಲಯದ

ಕಂಬಗಳ ಮೇಲಿನ ಶಿಲ್ಪಗಳಲ್ಲಿ ಆನೆ, ನಂದಿ, ಲಿಂಗ, ಹಂಸ, ವಿಷ್ಣು, ಶಿವ, ಅಷ್ಟ ದಿಕ್ಪಾಲಕರು, ಕೈಮುಗಿದು ನಿಂತ ಹಾಗೂ ಹೂ ಬಳ್ಳಿ ಇತರ ಶಿಲ್ಪಗಳು ಕಂಡುಬರುತ್ತವೆ.

ಹೊರಗೋಡೆ

ಹಂಡೆ ಪಾಳೆಯಗಾರ ದೇವಾಲಯಗಳ ಪ್ರಮುಖ ಲಕ್ಷಣ ದೇವಾಲಯದ ಹೊರಗೋಡೆ ಯಲ್ಲಿ ಕಂಡುಬರುತ್ತಿದ್ದರೂ ವಸ್ತು ಕಲಾ ದೃಷ್ಟಿಯಿಂದ ಇನ್ನೂ ಕೆಲವು ಪ್ರಮುಖ ಲಕ್ಷಣ ಒಳಭಾಗದಲ್ಲಿ ಕಂಡುಬರುತ್ತವೆಂದು ಹೇಳಬೇಕಾಗುತ್ತದೆ. ನಮಗೆ ಕಂಡುಬಂದ ದೇವಾಲಯದ ಹೊರಗೋಡೆಗಳು ಭಿತ್ತಿ ಅಲಂಕಾರ ಹೊಂದಿಲ್ಲ. ಆದರೆ ಕೆಲವು ದೇವಾಲಯಗಳು ಉಬ್ಬುಶಿಲ್ಪಗಳನ್ನು ಹೊಂದಿದ್ದು ಕಂಡುಬರುತ್ತಿವೆ. ಅವು ಯಾವ ದೇವಾಲಯಗಳೆಂದರೆ ಕೊಲರ್ಲಗುಂದಿಯ ವೀರಭದ್ರ ದೇವಾಲಯ, ಮಲ್ಲೇಶ್ವರ ದೇವಾಲಯ, ಸಿಡಗಿನ ಮೇಳದ ಈಶ್ವರ ದೇವಾಲಯ, ಯಮ್ಮಿಗನೂರಿನ ಮಲ್ಲಿಕಾರ್ಜುನ ಹಾಗೂ ಬಳ್ಳಾರಿ ಮಲ್ಲೇಶ್ವರ ದೇವಾಲಯಗಳಲ್ಲಿ ಕಂಡುಬರುತ್ತಿವೆ.

ಶಿಲ್ಪಗಳು

ಮೀನು, ಸರ್ಪ, ಲಿಂಗಕ್ಕೆ ಹಾಲು ಎರೆಯುವ ಗೋವು, ದಿಕ್ಪಾಲಕರು, ಲಿಂಗ, ಶಿವ, ಅಂಜಲಿಮುದ್ರೆ ಪುರುಷರು, ಮಿಥುನ ಶಿಲ್ಪಗಳು ಹಾಗೂ ಆನೆಶಿಲ್ಪಗಳು ಕಂಡು ಬರುತ್ತವೆ.

ಶಿಖರ

ಹಂಡೆ ಪಾಳೆಯಗಾರರು ತಮ್ಮ ದೇವಾಲಯಗಳ ಮೇಲೆ ವಿಜಯನಗರ ಮಾದರಿಯ ಶಿಖರಗಳನ್ನೇ ಅಳವಡಿಸಿರುವರು. ಇದರಲ್ಲಿ ಎರಡು ಪ್ರಕಾರ ಶಿಖರಗಳಿವೆ. ಕೋರ್ಲ ಗ್ರಾಮದ ವೀರಭದ್ರ ದೇವಾಲಯದ ಎರಡು ಗರ್ಭಗೃಹ ಮೇಲೆ ಇರುವ ಶಿಖರಗಳು ಮೆಟ್ಟಿಲು ರೂಪದಲ್ಲಿ ಕಲ್ಲಿನಲ್ಲಿ ಕಟ್ಟಿದ ಶಿಖರಗಳಾಗಿವೆ. ಎರಡನೇ ಪ್ರಕಾರ ಶಿಖರಗಳು ಇಟ್ಟಿಗೆ, ಗಾರೆಗಳನ್ನು ಬಳಸಿ ದ್ರಾವಿಡ ಶೈಲಿಯನ್ನು ಅಳವಡಿಸಿ ಕಟ್ಟಲಾಗಿದೆ. ಇಂತಹ ಒಂದು ದೇವಾಲಯವನ್ನು ವಡ್ಡುದರೋಜಿಯಲ್ಲಿ ನಿರ್ಮಿಸಲಾಗಿದೆ.

ನಂದಿ ಮಂಟಪ

ಹಂಡೆ ಪಾಳೆಯಗಾರರ ದೇವಾಲಯಗಳ ಮತ್ತೊಂದು ಪ್ರಮುಖ ಲಕ್ಷಣವೆಂದರೆ ದೇವಾಲಯದ ಮುಂದೆ ಕಟ್ಟೆಯ ಮೇಲೆ ನಾಲ್ಕು ಕಂಬ ಹಾಗೂ ಅವುಗಳ ಮೇಲೆ ದ್ರಾವಿಡ ಶೈಲಿಯ ಇಟ್ಟಿಗೆ, ಗಾರೆಯನ್ನು ಬಳಸಿ ಕಟ್ಟಿಸಿದ ಶಿಖರ. ಇಂತಹ ಪ್ರತ್ಯೇಕ ಮಂಟಪಗಳು ಮಣೂರು, ಆಂಜನೇಯ ದೇವಾಲಯದ ಮುಂದುಗಡೆ ಕೊಟ್ಟೂರಿನ ಮಲ್ಲೇಶ, ದೇವಾಲಯಗಳ ಮುಂದೆ ಕಂಡುಬರುತ್ತದೆ. ಈ ಮಂಟಪಗಳ ಕಂಬಗಳ

ಪಟ್ಟಿಕೆಯಲ್ಲಿ ಆನೆ, ನಂದಿ, ಮಂಗ, ಮಿಥುನ ಶಿಲ್ಪ, ಪ್ರಾಣಿ, ದೇವರುಗಳ ಉಬ್ಬುಶಿಲ್ಪ ಗಳನ್ನು ಕೆತ್ತಲಾಗಿದೆ.

ಕೆರೆಕಟ್ಟೆಗಳು

ಹಂಡೆ ಪಾಳೆಯಗಾರರು ತಮ್ಮ ಕಾಲಾವಧಿಯಲ್ಲಿ ಅನೇಕ ಕಡೆ ನೀರಿನ ಸಲುವಾಗಿ ಕೆರೆ ಕಟ್ಟೆಗಳನ್ನು ಕಟ್ಟಿದ್ದು ಕಂಡುಬರುತ್ತದೆ. ವಡ್ಡೊದರೂಜಿ ಕರುಗೋಡು ನಿಟ್ಟೂರು, ಕುಡುತಿನಿ, ಈ ಊರಗಳಲ್ಲಿ ಇನ್ನೂ ಹಲವಾರು ಕಡೆ ಇವರ ಪ್ರದೇಶಗಳಲ್ಲಿ ಕ್ಷೇತ್ರ ಕಾರ್ಯ ಕೈಗೊಂಡರೆ ಇನ್ನೂ ಬೆಳಕಿಗೆ ಬರುತ್ತವೆ.

ಬಾವಿಗಳು

ಜೀವನದ ಮೂಲ ಅಗತ್ಯಗಳಲ್ಲಿ ಜಲ ಒಂದು ಪ್ರಮುಖ ವಸ್ತು. ಆ ಅಗತ್ಯವನ್ನು ಪೂರೈಸಲು ಬಾವಿಗಳನ್ನು ತೋಡಿಸುತ್ತಿದ್ದರು. ಅವುಗಳ ರಕ್ಷಣೆಗಾಗಿ ದತ್ತಿ, ದಾನ ನೀಡಿರುವುದು ಕಂಡುಬರುತ್ತದೆ. ಇದಕ್ಕೆ ಹಂಡೆ ಪಾಳೆಯಗಾರರು ಹೊರತಾಗಿರದೆ ಅವರು ಸಹ ಅನೇಕ ಬಾವಿಗಳನ್ನು ಕಟ್ಟಿಸಿರುವರು. ಅಂತಹವುಗಳಲ್ಲಿ ಕೆಲವು ಕಂಡುಬರುತ್ತವೆ. ಬಳ್ಳಾರಿ, ಬಂಕಾಪೂರ, ಕುರುಗೋಡು, ಅಂದ್ರಾಳು, ಬೈಲೂರು ಕೊರ್ಲಗುಂದಗಳಲ್ಲಿ ಒಟ್ಟು ಹತ್ತು ಬಾವಿಗಳು ಕಂಡುಬರುತ್ತಿದ್ದು, ವ್ಯಾಪಕ ಕ್ಷೇತ್ರ ಕಾರ್ಯ ಕೈಗೊಂಡರೆ ಇನ್ನೂ ಹಲವಾರು ಅಳಿದುಳಿದ ಬಾವಿಗಳ ಅವಶೇಷಗಳು ದೊರಕುತ್ತವೆ. ವಾಸ್ತು ಕಲಾ ಮತ್ತು ರಚನೆ ದೃಷ್ಟಿಯಿಂದ ಬಂಕಾಪೂರ ಬಳ್ಳಾರಿ, ಅಂದ್ರಾಳು ಬಾವಿಗಳು ಪ್ರಮುಖ ವಾಗಿವೆ. ಇವುಗಳನ್ನು ಕಟ್ಟಲು ಸ್ಥಳೀಯವಾಗಿ ದೊರೆಯುವ ಕಲ್ಲುಗಳನ್ನು ಬಳಸಲಾಗಿದೆ. ಬಾವಿ ಗಳನ್ನು ಚೌಕಾಗಿ ಕಟ್ಟಿದ್ದು, ನಾಲ್ಕು ಕಡೆ ಗೋಡೆಗಳಿದ್ದು, ಒಂದು ಬದಿಯಿಂದ ಬಾವಿಗೆ ಇಳಿಯಲು ಪಾವಟಿಗಳನ್ನು ಚೌಕಾಗಿ ಕಟ್ಟಿದ್ದು, ಅವುಗಳ ಮಗ್ಗಲಿಗೆ ಕಮಾನು ಕೋಣೆ ಗಳನ್ನು ಸಹ ಮಾಡಲಾಗಿದೆ ಹಾಗೂ ಬಾವಿಗಳ ಗೋಡೆಗಳ ಮೇಲೆ ಮೀನು, ಆಮೆ, ಹಾವು, ಆನೆ, ಸಿಂಹ, ಸ್ತ್ರೀ, ಪುರುಷ ಮಿಥುನ ಶಿಲ್ಪಗಳು ಹಾಗೂ ಉಬ್ಬು ಶಿಲ್ಪ ಗಳನ್ನು ಕೆತ್ತಲಾಗಿದೆ. ಬಾವಿಯ ಸುತ್ತಲೂ ಮೇಲೆ ಕುಳಿತುಕೊಳ್ಳಲು ಕಟ್ಟೆಯನ್ನು ಮಾಡಲಾಗಿದೆ.

ಮಠಗಳು

ಹಂಡೆ ಪಾಳೆಯಗಾರರು ಹಲವಾರು ಮಠಗಳನ್ನು ಕಟ್ಟಿಸಿದ್ದಾರೆ. ಸಾಕಷ್ಟು ಪ್ರಮಾಣದಲ್ಲಿ ದಾನ, ದತ್ತಿಗಳನ್ನು ನೀಡಿದ್ದಾರೆ. ಕುರುಗೊಡು, ಕುಡುತಿನಿ, ನಿಡುಮಾ ಮಿಡಿ, ಕೊಟ್ಟೂರು, ಹೊಸಪೇಟೆ, ಬಳ್ಳಾರಿ, ಶೃಂಗೇರಿ ಮಠ ಮತ್ತು ಸಂಗನಕಲ್ಲು ಮಠಗಳಿಗೆ ತೆಕ್ಕಲುಕೋಟೆ ಗ್ರಾಮಗಳನ್ನು ದಾನ ಬಿಟ್ಟಿದ್ದಾರೆ. ಅಷ್ಟಲ್ಲದೆ ಅಂದ್ರಹಾಳು,

ಗೋನಾಳು, ಮುಂಡರಗಿ, ಮಿಂಚೇರಿ, ಬೆಳಗಲ್ಲು, ಬೊಬ್ಬುಕುಂಟೆ, ಇಮ್ರಾಪುರ, ಕಪ್ಪುಗಲ್ಲು ಅದರಂತೆ ಕ್ರಿ.ಶ. 1726ರ ಶಾಸನವು ಹಂಡೆ ಹಿರೇರಾಮಪ್ಪನಾಯಕನು ಕೊಟ್ಟೂರು ಸ್ವಾಮಿಗೆ ಭೂ ದಾನ ನೀಡಿ ಬಳ್ಳಾರಿಯ ಅಮ್ಮನ ಮಠದಲ್ಲಿ ದಾಸೋಹ ನಡೆಸಲು ಅನುಮತಿ ನೀಡುತ್ತಾನೆ ಎಂದು ಶಾಸನ ಹಾಗೂ ಕೈಫಿಯತ್ತುಗಳಿಂದ ತಿಳಿದುಬರುತ್ತದೆ.

೨೩. ಅಂಜನಾದ್ರಿ

ಡಾ. ಆರ್. ಗೋಪಾಲ್


ಹಂಪಿಯ ಪ್ರದೇಶ ಮತ್ತು ಪರಿಸರ ಪುರಾಣಪ್ರಸಿದ್ಧವಾದ ಸ್ಥಳ. ರಾಮಾಯಣದ ಕಾಲದಷ್ಟು ಪ್ರಾಚೀನವಾದ ವಸತಿಪ್ರದೇಶ. ಚಿತ್ರವಿಚಿತ್ರ ಆಕಾರದ ಬಂಡೆಗಲ್ಲುಗಳಿಂದ ಕೂಡಿದ ಇಲ್ಲಿಯ ಬೆಟ್ಟಗುಡ್ಡಗಳು, ನಡುವಣ ಕಣಿವೆ ಪ್ರದೇಶಗಳೂ, ಅಲ್ಲಿ ಹರಿಯುವ ನದಿ-ಉಪನದಿಗಳು ಇಡೀ ಪ್ರದೇಶ ರುದ್ರರಮಣೀಯವಾಗಿ ಕಾಣುವಂತೆ ಮಾಡಿವೆ. ಡೆಕ್ಕನ್ ಪ್ರಸ್ಥಭೂಮಿಯ ಒಂದು ಸಣ್ಣ ಭಾಗವಾದ ಈ ಪ್ರದೇಶ ಇಡೀ ಭೂಭಾಗದ ಇತರ ಪ್ರದೇಶಗಳಿಗಿಂತ ಮೇಲ್ಮೈಲಕ್ಷಣದಲ್ಲಿ ವಿಭಿನ್ನವಾಗಿದೆ. ಇಲ್ಲಿಯ ಬೆಟ್ಟಗುಡ್ಡಗಳು ಇತರ ಕಡೆಗಳಂತೆ ಮಣ್ಣು, ಕಲ್ಲುಗಳಿಂದ, ಕಾಡು-ಮೇಡುಗಳಿಂದ, ಗಿರಿ- ಶೃಂಗಗಳಿಂದ ಕೋಡುಗಲ್ಲುಗಳಿಂದ ರಚನೆಯಾಗಿರದೇ ವಿವಿಧ ಗಾತ್ರದ, ವಿವಿಧಾಕಾರದ ಬಂಡೆಗಲ್ಲುಗಳ ರಾಶಿಯಂತೆ ಇವುಗಳ ರಚನೆಯಿದೆ. ಈ ಬೆಟ್ಟಗಳಲ್ಲಿ ಮಣ್ಣಿನ ಅಭಾವವಿರುವುದರಿಂದ, ಇಲ್ಲಿ ಕಾಡುಗಳಿಲ್ಲ. ಬದಲಾಗಿ ಬೆಟ್ಟದ ಪಾದಗಳಲ್ಲಿ ಕುರುಚಲು ಕಾಡುಗಳು, ಮೇಲ್ಭಾಗದಲ್ಲಿ ಕೋಡು ಬಂಡೆಗಳು, ಗುಹೆಗಳು, ಕಲ್ಲಾಸರೆಗಳು, ಪೊಟರೆಗಳು, ಸಂದುಗಳು, ಮುಂತಾದ ವಿವಿಧ, ವಿಚಿತ್ರ ಆಕಾರಗಳಲ್ಲಿ ಊಹಾತೀತವಾಗಿ ರೂಪುಗೊಂಡ, ರಚಿತಗೊಂಡ ಬಂಡೆಗಳ ಸಮೂಹಗಳು ಪ್ರಧಾನವಾಗಿ ಕಾಣಬರುತ್ತವೆ. ಚಿತ್ರವಿಚಿತ್ರವಾಗಿ ನೋಡುಗರ ನೋಟಕ್ಕೆ, ಕಲ್ಪನೆಗೆ ಉತ್ತಮ ವಸ್ತುಗಳಾಗಿರುವ ಈ ಶಿಲಾರಾಶಿಗಳು ಪ್ರಾಚೀನ ಕಾಲದ, ತಿಳುವಳಿಕೆ ಕಡಿಮೆಯಿದ್ದ, ಮುಗ್ಧ ಜನರ ಮನಸ್ಸಿನಲ್ಲಿ ಆಶ್ಚರ್ಯ, ಕೌತುಕ, ವಿಸ್ಮಯ ಭಯ, ಭಾವನೆಗಳನ್ನು ಹುಟ್ಟಿಸಿರುವುದರಲ್ಲಿ ಅತಿಶಯೋಕ್ತಿಯೇನಿಲ್ಲ.

ವಿರಳವಾದ ಕಾಡು, ಹೇರಳವಾದ ಕಲ್ಲಾಸರೆಗಳನ್ನು ಹೊಂದಿರುವಂತಹ ಈ ಗಿರಿ-ಗುಡ್ಡಗಳು, ಕಾಡಿನ ಭಯಂಕರ, ಕ್ರೂರ ಮೃಗಗಳಿಗೆ ಅನುಕೂಲ ವಸತಿ ಪ್ರದೇಶವಾಗಿರದೇ ಕರಡಿ, ಚಿರತೆ, ಕೋತಿ, ಸರೀಸೃಪ ಮುಂತಾದ ಪ್ರಾಣಿವರ್ಗಗಳಿಗೆ ಅತಿ ಸೂಕ್ತವಾದ ವಾಸಸ್ಥಾನವಾಗಿದೆ. ಇದರಿಂದಾಗಿ ಈ ಬೆಟ್ಟಗುಡ್ಡಗಳಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ವಿವಿಧ ಜಾತಿಗಳಿಗೆ ಸೇರಿದ ವಾನರ ಸಂಕುಲವಿದೆ. ಕೋತಿಗಳಿಗೆ ಅತ್ಯಂತ ಅವಶ್ಯಕವಾಗಿ ಬೇಕಾದ ರಕ್ಷಣೆ, ಆಸರೆ ಇಲ್ಲಿಯ ಬಂಡೆಗಳ ಸಂದು-ಗೊಂದುಗಳಲ್ಲಿ, ಕಲ್ಲಾಸರೆಗಳಲ್ಲಿ, ಗುಹಾಸರೆಗಳಲ್ಲಿ ದೊರೆಯುತ್ತದೆ. ಇದರಿಂದಾಗಿ ಈ ಪ್ರದೇಶದಲ್ಲಿ ವಿವಿಧ ಜಾತಿಯ, ವರ್ಗಗಳ ವಾನರ ಸಂಕುಲ ಅನಿರ್ಬಾಧಿತವಾಗಿ ಬೆಳೆದಿದೆ.


ಮಾನವ ಸೃಷ್ಟಿಯಾದ ಎಲ್ಲಾ ಪುರಾಣಗಳಿಗೂ, ಇತಿಹಾಸಗಳಿಗೂ, ದಂತಕಥೆಗಳಿಗೂ ಆ ಘಟನೆಗಳಿಗೆ ಸಂಬಂಧಿಸಿದ ಸ್ಥಳಗಳ ಭೂಲಕ್ಷಣಗಳು, ಅಲ್ಲಿಯ ಪ್ರಾಣಿವರ್ಗ, ಸಸ್ಯವರ್ಗ, ಜಲಸಂಪನ್ಮೂಲ ಮುಂತಾದವು ಹಾಗೂ ಇತರ ನೈಸರ್ಗಿಕ ಸನ್ನಿವೇಶಗಳು ಆಧಾರವಾಗಿರುತ್ತವೆ ಅಥವಾ ಪೂರಕವಾಗಿರುತ್ತವೆ. ಇದು ಸತ್ಯ. ಇದರಂತೆ ರಾಮಾಯಣದಲ್ಲಿ ಉಕ್ತವಾದ ಕಿಷ್ಕಿಂಧೆ ವಾನರ ಬೀಡು. ಅಸಂಖ್ಯಾತವಾದ ವಾನರ ಸಮೂಹ ಇಲ್ಲಿತ್ತು. ಹೀಗಾಗಿ ಇದು ವಾನರ ರಾಜ್ಯವೂ ಆಗಿತ್ತು. ಉತ್ತರದಿಂದ ದಕ್ಷಿಣಕ್ಕೆ ಲಂಕೆಯ ಹಾದಿಯಲ್ಲಿ ಚಲಿಸಿದ ಶ್ರೀರಾಮಚಂದ್ರನ ಮಾರ್ಗ ಮಧ್ಯದಲ್ಲಿತ್ತು. ಹೀಗಾಗಿ ರಾಮಾಯಣದ ಕಿಷ್ಕಿಂಧೆ, ಹಂಪಿ ಪ್ರದೇಶವೆಂದು ಗುರುತಿಸಲ್ಪಟ್ಟಿದೆ. ಇಲ್ಲಿ ಕಪಿ ಸಮೂಹದ ನಾಯಕರು ಹುಟ್ಟಿಕೊಂಡರು. ವಾಲಿ, ಸುಗ್ರೀವ, ಆಂಜನೇಯ, ಜಾಂಬವಂತ, ಇತ್ಯಾದಿ, ಕಪಿನಾಯಕರು ಪಾತ್ರಧಾರಿಗಳಾಗಿ ಮೆರೆದರು. ಈ ಎಲ್ಲಾ ಕಪಿನಾಯಕರುಗಳಲ್ಲಿ ಅತ್ಯಂತ ಶ್ರೇಷ್ಠನಾದವನು, ಮಾನವ ಮನೋಧರ್ಮಗಳಿಗೆ ಅತಿ ಸಮೀಪವಾಗಿದ್ದವನೆಂದರೆ ಆಂಜನೇಯ.

ಪೌರಾಣಿಕವಾಗಿ ಆಂಜನೇಯ ವಾಯುಪುತ್ರ, ಈತನ ತಾಯಿ ಅಂಜನೆ. ಹೀಗಾಗಿ ಅಂಜನೆಯೂ ಸಹ ಪೌರಾಣಿಕವಾಗಿ ಹಿರಿಯ ವ್ಯಕ್ತಿಯೆನಿಸಿದಳು. ಅವಳ ಹುಟ್ಟು, ಜೀವನ, ವ್ಯಕ್ತಿತ್ವದ ಬಗ್ಗೆ ಕಥೆಗಳು ಹುಟ್ಟಿದವು. (ನೋಡಿ: ಪುರಾಣನಾಮಚೂಡಾಮಣಿ, ಪುಟ.8) ಕಿಷ್ಕಂಧೆ ಈಕೆಯ ನೆಲೆ. ಇದರ ದ್ಯೋತಕವಾಗಿ ಹಂಪಿಯ ಪರಿಸರದ ಬೆಟ್ಟ ಸಮೂಹ ವೊಂದರಲ್ಲಿ ಒಂದಕ್ಕೆ ಈಕೆಯ ಹೆಸರನ್ನೂ ಇಡಲಾಗಿದೆ. ಕಾರಣ ಈ ಬೆಟ್ಟದ ಒಂದು ತುದಿಯ ಬಂಡೆಯ ಆಕೃತಿ. ಇದೇ ಆಂಜನಾದ್ರಿ. ಶ್ರೀ ಚಂದ್ರಮೌಳೇಶ್ವರ ದೇವಾಲಯದ ಪ್ರದೇಶದಿಂದ ನಿಂತು ಅಂಜನಾದ್ರಿ ಬೆಟ್ಟವನ್ನು ವೀಕ್ಷಿಸಿದಾಗ ವಾನರ ಮುಖದ ಛಾಪು ಮೂಡುತ್ತದೆ. ಹಲವಾರು ಬೃಹತ್ ಹಾಗೂ ಸಣ್ಣ ಗಾತ್ರದ ಬಂಡೆಗಳು ಕೂಡಿ ರಚಿತವಾದ ಈ ನೈಸರ್ಗಿಕ ವಾನರ ಮುಖದ ಶಿಲಾರೂಪ ಯಾರಿಗಾದರೂ ಆಶ್ಚರ್ಯ, ವಿಸ್ಮಯ ತರಿಸುತ್ತದೆ. ಇದೇ ಆಕೃತಿಗೆ ಸಮೀಪವಾದ ಇನ್ನೊಂದು ಬಂಡೆಗಳ ಸಮೂಹ, ಈ ವಾನರ ಮುಖಾಕೃತಿಗೆ ಮುಂಭಾಗದಲ್ಲಿ ಸ್ವಲ್ಪ ಕೆಳಗೆ, ಅದೇ ರೀತಿಯ ಮತ್ತೊಂದು ಕಪಿಮುಖದಂತೆ ಭಾಸವಾಗುತ್ತದೆ. ಈ ರೀತಿಯ ಜೋಡಿ ಕಪಿಮುಖಾಕೃತಿಯ ಬಂಡೆಗಳನ್ನು ತಾಯಿ ಮಗನೊಂದಿಗೆ ಸಮೀಕರಿಸಿ ಅದಕ್ಕೆ ಸೂಕ್ತವಾದ ಹೆಸರನ್ನು ಸಹ ನೀಡಿದ್ದಾರೆ. ಪೌರಾಣಿಕವಾಗಿ ಪ್ರಸಿದ್ಧವಾದ ವಾನರ ಜಾತಿಯ ತಾಯಿ-ಮಗನೆಂದರೆ ಅಂಜನೆ ಮತ್ತು ಆಕೆಯ ಮಗ ಆಂಜನೇಯ ಮಾತ್ರ. ಹೀಗಾಗಿ ಈ ವಾನರ ಮುಖದ ಶಿಲಾಮುಖಕ್ಕೆ ಅಂಜನೇಯನ ಹೆಸರಿಟ್ಟು, ಈ ಇಡೀ ಬೆಟ್ಟವನ್ನು ಅಂಜನಾದ್ರಿ ಎಂದು ಕರೆದಿರುವುದು ಆ ಕಾಲದ ಸ್ಥಳೀಯ ಮುಗ್ಧ ಜನರ ಕಲ್ಪನೆಯ ದ್ಯೋತಕವೇ ಸರಿ.


ಸ್ಥಳ ನಾಮಗಳನ್ನು ರೂಪಿಸುವಾಗ ಸಾಮಾನ್ಯವಾಗಿ ಸ್ಥಳೀಯವಾದ ನೈಸರ್ಗಿಕ, ಲಕ್ಷಣ, ಸನ್ನಿವೇಶಗಳ ಸಾರ ಪ್ರತಿಫಲನಗೊಂಡಿರುತ್ತದೆ ಎಂಬುದು ಸರ್ವವಿದಿತವಾದ ವಿಷಯ. ಈಗಾಗಲೇ ಮೈಸೂರು ಎಂಬ ಸ್ಥಳನಾಮದ ವ್ಯುತ್ಪತ್ತಿಯಲ್ಲಿ (Etymology) ಸಮೀಪದಲ್ಲೇ ಇರುವ ಚಾಮುಂಡಿ ಬೆಟ್ಟದ ಆಕೃತಿಯೇ ಆಧಾರವಾಗಿದೆ ಎಂಬ ವಿಚಾರ, ವಾತಾಪಿ ಎಂಬ ಸ್ಥಳನಾಮದ ಹಿಂದೆ ಅಲ್ಲೇ ಇರುವ ರಾಕ್ಷಸ ಮುಖದ ಬೃಹತ್ ಶಿಲಾ ರೂಪ ಕಾರಣ ಎಂಬ ನಂಬಿಕೆಗಳನ್ನು ಉದಾಹರಿಸಲಾಗಿದೆ. ಇದೇ ನಿಟ್ಟಿನಲ್ಲಿ ಸ್ಥಳ ನಾಮದ ವಿಶ್ಲೇಷಣೆಯನ್ನು ಮುಂದುವರಿಸಿದಾಗ ಈ ಸರಣಿಗೆ ಅಂಜನಾದ್ರಿ ಬೆಟ್ಟವು ಮತ್ತು ಅಲ್ಲಿಯ ವಾನರ ಮುಖದ ಶಿಲಾರೂಪವು ಈ ಸ್ಥಳನಾಮದ ವ್ಯುತ್ಪತ್ತಿಗೆ ಬಹು ಮಟ್ಟಿಗೆ ಕಾರಣವಾಗಿದೆ ಎಂಬ ವಿಚಾರ ಸ್ಪಷ್ಟವಾಗುತ್ತದೆ.




ಅಂಜನಾದ್ರಿ ಬೆಟ್ಟ,
ಹನುಮನಹಳ್ಳಿ, ಕೊಪ್ಪಳ ಜಿಲ್ಲೆ.




ಕಲಾವಿದನ ಸ್ಪರ್ಶದಲ್ಲಿ
ಅಂಜನಾದ್ರಿ ಬೆಟ್ಟ




ಮಲಗಿರುವ ಮಹಿಷಾಸುರನಂತೆ ಕಾಣುವ ಚಾಮುಂಡಿ ಬೆಟ್ಟ



ಕಲಾವಿದನ ಸ್ಪರ್ಶದಲ್ಲಿ ಮಲಗಿರುವ ಮಹಿಷಾಸುರ



ವಾತಾಪಿ ರಾಕ್ಷಸಾಕೃತಿಯ ಬೆಟ್ಟ, ಬಾದಾಮಿ



ಕಲಾವಿದನ ಸ್ಪರ್ಶದಲ್ಲಿ ವಾತಾಪಿ

೨೪. ಋಶ್ಯಶೃಂಗಮುನಿ ಶಿಲ್ಪ

ಡಾ. ವಾಸುದೇವ ಬಡಿಗೇರ

ಕರ್ನಾಟಕ ಚರಿತ್ರೆಯಲ್ಲಿ ಹಂಪಿಗೆ ಬಹುಮುಖ್ಯವಾದ ಸ್ಥಾನವಿದೆ. ವಿಜಯನಗರ ಸ್ಥಾಪನೆಯ ಪೂರ್ವದಿಂದಲೂ ಪ್ರಮುಖ ಧಾರ್ಮಿಕ ಕೇಂದ್ರವೆಂದೇ ಪ್ರಸಿದ್ಧವಾಗಿತ್ತು. ಪ್ರಾಗಿತಿಹಾಸ ಕಾಲದಿಂದ ಮಾನವನ ವಾಸಸ್ಥಾನವಾಗಿರುವ ಹಂಪಿಗೆ ವಿರೂಪಾಕ್ಷನೇ ಒಡೆಯ. ಅವನ ಒಡೆತನದಲ್ಲಿರುವ ಹಂಪಿಯನ್ನು ಪಂಪಾತೀರ್ಥ, ಹಂಪಾತೀರ್ಥ, ವಿರೂಪಾಕ್ಷ ತೀರ್ಥ, ಮಾನಸ ಸರೋವರ, ಭಾಸ್ಕರತೀರ್ಥ, ಪಂಪಾಪುರ ಮತ್ತು ವಿರೂಪಾಕ್ಷ ಪಟ್ಟಣವೆಂದು ಮೊದಲಾಗಿ ಕರೆಯಲಾಗಿದೆ.

ಇನ್ನೊಂದು ಭಾಗವಾಗಿ ಹಂಪಿ ರಾಮಾಯಣದ ಕಿಷ್ಕಿಂಧವೆಂದು ಜನಮನದಲ್ಲಿ ಆಳವಾಗಿ ಬೇರೂರಿದೆ. ಇದು ಅನೇಕ ಕಥೆಪುರಾಣಗಳ ಹುಟ್ಟಿಗೂ ಕಾರಣವಾಯಿತು. ಅಲ್ಲದೆ ಆದಿಮಾನವನು ಬಿಟ್ಟು ಹೋದ ಅವಶೇಷಗಳನ್ನು ರಾಮಾಯಣದಲ್ಲಿ ಬರುವ ಕಥೆ, ಸನ್ನಿವೇಶಗಳಿಗೆ ಹೋಲಿಕೆ ಕೊಟ್ಟು ಜನಮನದಿಂದ ದೂರವಾಗದಂಥ ಪ್ರಚಾರ ಪಡೆಯಿತು.

ಪಂಪಾ ಮಹಾತ್ಮೆಯಲ್ಲಿ ಬರುವ ಮಾಲ್ಯವಂತಗಿರಿ, ಋಷ್ಯಮೂಕ ಪರ್ವತ, ಕಿಷ್ಕಿಂಧಾದ್ರಿ, ಹೇಮಕೂಟ, ವಿಪ್ರಕೂಟ, ಗಂಧರ್ವಗಿರಿ, ಜಂಬೂನಾಥಗಿರಿ, ಸೋಮ ಪರ್ವತ, ಮಣಿಭದ್ರೇಶ್ವರ ಪರ್ವತ ಮುಂತಾದವು ವಾಲ್ಮೀಕಿ ರಾಮಾಯಣದಲ್ಲಿ ಬರುವ ಹೆಸರುಗಳಿಗೆ ಪೂರಕವಾಗಿವೆ. ರಾಮಾಯಣದ ಕಿಷ್ಕಿಂಧಕಾಂಡದಲ್ಲಿ ಉಲ್ಲೇಖವಾದ ಕಾರ್ತಿಕೇಯ ತಪೋವನ ಕುಡತಿನಿಯಲ್ಲಿತ್ತು. ರಾಷ್ಟ್ರಕೂಟರಿಂದ ಹೊಯ್ಸಳರ ಕಾಲಾವಧಿ ಯವರೆಗೆ ಇದು ಕಬ್ಬಿಣ ಉಪಕರಣಗಳನ್ನು ತಯಾರಿಸುವ ಕಾರ್ಯಾಗಾರ ವಾಗಿತ್ತು. ಅದರ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದ ಅಧಿಪತಿಗಳನ್ನು ಲೋಹಾಸನಿ, ದಂಡಾಸನಿ ಎಂದು ಶಾಸನಗಳು ಉಲ್ಲೇಖಿಸುತ್ತವೆ.

ಒಟ್ಟು ಹಂಪಿ ಪರಿಸರವನ್ನು ಅವಲೋಕಿಸಿದರೆ, ತುಂಗಭದ್ರಾ ನದಿ ದಂಡೆಯ ಮೇಲೆ ಪಂಪಾವನ, ಮಾನಸಸರೋವರ ಹತ್ತಿರದ ಬೆಟ್ಟದಲ್ಲಿ ಶಬರಿಗುಹೆ, ಆಂಜನಾದ್ರಿ, ಆನೆಗುಂದಿ ಹತ್ತಿರ ಬಲಮುರಿಸಾಲಿನ ಒಂದು ಭಾಗ ವಾಲಿಭಂಡಾರ ಹಾಗೂ ಈ ನದಿಯ ಇನ್ನೊಂದು ಭಾಗದಲ್ಲಿ ಸುಗ್ರೀವಗುಹೆ, ಸೀತೆಸೆರಗು, ಮತಂಗಪರ್ವತ, ಹೇಮಕೂಟ, ರತ್ನಕೂಟ ಮೊದಲಾದವುಗಳಿವೆ.

ಈ ಭೌಗೋಳಿಕ ಸನ್ನಿವೇಶ ಮತ್ತುಅವುಗಳ ಹೆಸರಿಗೆ ಪೂರಕವೆಂಬಂತೆ ಬೆಳಗಾವಿ ಜಿಲ್ಲೆಯ ಸೌಂದತ್ತಿ ತಾಲೂಕಿನ ಶಿರಸಿಂಗಿ ಕಾಳಮ್ಮನ ಗುಡಿಯಲ್ಲಿರುವ ಕ್ರಿ. ಶ. ೧೧೮೬ರ ಶಾಸನದಲ್ಲಿ ಹಿಮವತ್ಪರ್ಬ್ಬತ ವಿಂಧ್ಯಶೈಳಪತಿ ಕಿಷ್ಕಿಂಧಾದ್ರಿ ಯಿಮೂಱು ಭೂದ್ರಮೆ ಪೂರ್ವ್ವಾಪರ ವಾರ್ದ್ಧಿಯಾಂಕೆ ನಿಜವಿಸ್ತಾರಕ್ಕೆನಲು ನೀಳ್ದವಾಹಿಮದ್ವಿಂಧ್ಯಧರಾಧರಂಗಳೆ ರಡಕ್ಕಂ ತಾನೆ ಮೇಲಾದೆ (ದುದು)ತ್ತಮ ಕಿಷ್ಕಿಂಧಗಿರೀಂಧ್ರವೆ (ವು) ತ್ತಮ ಜನೌಘಂ ತನೊಲೊಪ್ಪುತ್ತಿರಲು ಅವರಾರನೆ ತರದಿಂ ಬಾಲಿ ಮರುತ್ಸುತಾಂಗದದಿನೇಶಾಪತ್ಯತಾರಾ ಮನೋಹರಿ ವಿಪ್ರರ್ಷಿ ಮತಂಗಹಂಸ ಕಪಿಲ ಶ್ರೀ ಶೌನಕಾಗಸ್ತ್ಯ ಸಚ್ಚರಿತೋದ್ಭಾಸಿ ವಿಭಾಂಡಕ ಪ್ರಿಯಸುತ ಶ್ರೀ ರಿಶ್ಯಶೃಂಗ ಬ್ರತೀಶ್ವರರ್ಗ್ಗಾಯಿತಾಶ್ರಯವಂತದೆಂಬೆನಱಿ ಯೆಂ ಕಿಷ್ಕಿಂಧಮಂ ಬಣ್ಣಿಸಲು ಎಂದಿದೆ.

ಪೂರ್ವ ಪಶ್ಚಿಮ ಹಾಗೂ ಸಮುದ್ರಪರ್ಯಂತ ವಿಸ್ತಾರವಾದ ಭೂಮಿಗೆ ಹಿಮವ ತ್ಪರ್ವತ, ವಿಂಧ್ಯ, ಕಿಷ್ಕಿಂಧ ಈ ಮೂರು ಪರ್ವತಗಳು ಉನ್ನತವಾದವು. ಇವುಗಳಲ್ಲಿ ಅತ್ಯಂತ ಶ್ರೇಷ್ಠವಾದುದು, ಉತ್ತಮವಾದುದು ಎಂದರೆ ಕಿಷ್ಕಿಂಧಗಿರಿ. ಇದು ಜನನಿಬಿಡ ವಾದ ನಗರವಾಗಿತ್ತು. ಅದರಲ್ಲಿ ವಾಲಿ, ಮರುತ್ಸ, ಅಂಗದ, ದಿನೇಶ, ಮತಂಗ, ಹಂಸ, ಕಪಿಲ, ಶೌನಕ, ಅಗಸ್ತ್ಯ, ವಿಭಾಂಡಕ ಪುತ್ರ ಋಶ್ಯಶೃಂಗ ಮೊದಲಾದ ಋಷಿಗಳಿಗೆ ಆಶ್ರಯಸ್ಥಾನವಾಗಿತ್ತೆಂದು ವರ್ಣಿಸಿದೆ.

ಹಂಪಿಯಿಂದ ೧೦ ಕಿ. ಮೀ. ದೂರದಲ್ಲಿರುವ ದೇವಿಘಾಟ್ ಎಂಬಲ್ಲಿಯ ಕ್ರಿ.ಶ. ೧೦೭೯ ರ ಶಾಸನದಲ್ಲಿ ತುಂಗಭದ್ರಾ ತಟದ ಬಡಗ ಕಿಷ್ಕಿಂಧಾಮಿ ಪರ್ವತವಂ ಎಂಬ ಉಲ್ಲೇಖವಿದೆ. ವಿಜಯನಗರ ಕಾಲಾವಧಿಯಲ್ಲಿ ಸಮೃದ್ಧಿಯಾಗಿ ನಿರ್ಮಾಣ ವಾದ ವಾಸ್ತುಶಿಲ್ಪಕಲೆಯಲ್ಲಿ ರಾಮಾಯಣದ ಅನೇಕ-ಸನ್ನಿವೇಶಗಳನ್ನು ಅಳವಡಿಸ ಲಾಗಿದೆ. ಅಲ್ಲದೆ ಹಂಪಿ ಪರಿಸರದಲ್ಲಿ ನಿರ್ಮಾಣವಾಗಿರುವ ಬಹುಸಂಖ್ಯೆಯ ಆಂಜನೆಯ ದೇವಾಲಯಗಳು ನಿರ್ಮಾಣವಾಗಿದೆ. ಇವೆಲ್ಲ ಅಂಶಗಳಿಂದ ಇದು ರಾಮಾಯಣದ ಕಿಷ್ಕಿಂಧವಾಗಿತ್ತೆಂಬ ಹಿನ್ನೆಲೆಯನ್ನು ಸೂಚಿಸುತ್ತದೆ.

ಋಶ್ಯಶೃಂಗನ ಶಿಲ್ಪ

ವಿಜಯನಗರ ಕಾಲದಲ್ಲಿ ನಿರ್ಮಾಣವಾದ ವಾಸ್ತುಶಿಲ್ಪಗಳಲ್ಲಿ ಹಜಾರರಾಮ ಸ್ವಾಮಿ ದೇವಾಲಯವೂ ಪ್ರಮುಖವಾದುದು. ಈ ದೇವಾಲಯದಲ್ಲಿ ಸಾವಿರ ರಾಮನ ಶಿಲ್ಪಗಳಿರುವುದರಿಂದ ಇಲ್ಲವೆ ಅರಮನೆಯ ಹಜಾರಕ್ಕೆ ಹೊಂದಿಕೊಂಡಂತೆ ನಿರ್ಮಾಣ ವಾಗಿದ್ದರಿಂದ ಹಜಾರರಾಮ ದೇವಾಲಯವೆಂದು ಕರೆಯಲಾಯಿತೆಂಬ ಹೇಳಿಕೆಗಳಿವೆ. ಪ್ರಸ್ತುತ ದೇವಾಲಯದ ಕಂಬ, ಗೋಡೆ, ಮಂಟಪ, ಆವರಣಗೋಡೆಗಳ ಮೇಲೆ ರಾಮಾಯಣದ ಕಥಾಸಕ ಭಾಗಗಳನ್ನು ಶಿಲ್ಪಿ ಸೂಕ್ಷ್ಮತೆತ್ತನೆಯಲ್ಲಿ ಬಿಡಿಸಿದ್ದಾನೆ. ಈ

ದೇವಾಲಯದ ಉತ್ತರ ಗೋಡೆಯಲ್ಲಿ ಋಶ್ಯಶೃಂಗಮುನಿಯ ಪೌರೋಹಿತ್ಯದಲ್ಲಿ ನಡೆದ ಪುತ್ರಕಾಮೇಷ್ಠಿಯಾಗದ ಶಿಲ್ಪವಿದೆ. ರಾಮ, ಲಕ್ಷ್ಮಣ, ಭರತ ಮತ್ತು ಶತ್ರುಘ್ನರ ಜನನಕ್ಕೆ ಸಂಬಂಧಿಸಿದ ಕಥಾನಕ ಭಾಗ ಇದರಲ್ಲಿದೆ. ಯಜ್ಞಕುಂಡದ ಮುಂದೆ ಹವಿಸ್ಸನ್ನು ಹಾಕುತ್ತ ಋಶ್ಯಶೃಂಗಮುನಿ ಕುಳಿತುಕೊಂಡಿದ್ದಾನೆ. ಚಿತ್ರ[1] ಎದುರಿಗೆ ನಿಂತಿರುವ ದಶರಥ ರಾಜನಿಗೆ ಉರಿಯುತ್ತಿರುವ ಜ್ವಾಲೆಯಿಂದ ಯಜ್ಞದೇವತೆ ಹೊರಬಂದು ಅಮೃತದ ಕಳಸವನ್ನು ಕೊಡುತ್ತಿರುವ ಸನ್ನಿವೇಶವಿದೆ. ಪಕ್ಕದಲ್ಲಿರುವ ಇನ್ನೊಂದು ಫಲಕದಲ್ಲಿ ದಶರಥರಾಜ ಅಗ್ನಿದೇವತೆಯಿಂದ ಪಡೆದ ಅಮೃತವನ್ನು ಸಾಲಾಗಿ ನಿಂತಿರುವ ಮೂವರೂ ಪತ್ನಿಯರಿಗೆ ಕೊಡುತ್ತಿರುವ ಚಿತ್ರಣವಿದೆ. ಚಿತ್ರ[2].

ಈ ಕಥಾನಕ ಭಾಗದ ಹಿನ್ನೆಲೆಯನ್ನು ಶಿರಸಂಗಿ ಶಾಸನ ರೂಜಾಪೀಡೆಗಳು ಜನಮ ನೊಂದದುಮಂ ಕೇಳುತ್ತುಂ ಸೂರ್ಯ್ಯವಂಶದ ಕ್ಷತ್ರಿಯ ದಿಳೀಪನಾತನ ಮಗಂ ರಘುವಾರನ ಮಗನಜನಾತನ ಮಗಂ ದಶರಥ ಚಕ್ರವರ್ತ್ತಿ ತಾನಪುತ್ರಕನಪ್ಪುದಱು ನಿಜವಂಶಾಚಾರ್ಯ್ಯರಪ್ಪ ವಶಿಷ್ಠೋಪದೇಶದಿನಾ ರಿಶ್ಯಶ್ರಿಂಗಮಹಾರಿಶಿಯಂ ತಂನಲ್ಲಿಗೆ ಬರಸಿ ಪುತ್ರಕಾಮೇಷ್ಠಿಯಂ ಮಾಡ್ಸಿ ರಾಮಲಕ್ಷ್ಮಣ ಭರತಶತ್ರೆ (ತು) ಘ್ನರಂತು ನಾಲುವರು ಪುತ್ರರಂಪಡೆದನಲ್ಲಿ ಎಂಬ ಹೇಳಿಕೆಯು ಈ ಮುನಿಯ ಮಹಿಮೆಯನ್ನು ಕೇಳಿದ ದಶರಥ ರಾಜ ವಶಿಷ್ಠ ರಾಜನ ಉಪದೇಶದಂತೆ ಋಶ್ಯಶೃಂಗನನ್ನು ತನ್ನಲ್ಲಿಗೆ ಬರಮಾಡಿಕೊಂಡು ಪುತ್ರಕಾಮೇಷ್ಠಿಯೆಂಬ ಯಜ್ಞವನ್ನು ಅವನ ಪೌರೋಹಿತ್ಯದಲ್ಲಿ ಮಾಡಿಸಿ, ರಾಮ, ಲಕ್ಷ್ಮಣ, ಭರತ ಮತ್ತು ಶತ್ರುಘ್ನರೆಂಬ ನಾಲ್ವರು ಪುತ್ರರನ್ನು ಪಡೆಯುತ್ತಾನೆ.

ಮುನಿಯ ಪೌರೋಹಿತ್ಯದಲ್ಲಿ ನಡೆದ ಪುತ್ರಕಾಮೇಷ್ಠಿಯಾಗದಿಂದ ಜನಿಸಿದ ರಾಮ, ಲಕ್ಷ್ಮಣರು, ಹನುಮಂತ ಸಹಿತವಾಗಿ ಮುಂದೆ ರಾಮಲಕ್ಷ್ಮಣರು ರಾವಣಂ ಮೊದಲಾಗಿ ಸಮಸ್ತ ದಾನವರಂ ಸಂಹರಿಸಿ ಮುಗಳ್ದಯೋಧ್ಯಗೆ ಬರುತಂ ಕಿಷ್ಕಿಂಧ ಪರ್ವತೋಪಕಂಣ್ಯದ ತನ್ಮನಿಂದ್ರಾಶ್ರಮಕ್ಕೆ ಬಂದಲ್ಲಿ ನಿಜನಾಮಾಂಕಿತ ರಾಮೇಶ್ವರ ಲಕ್ಷ್ಮಣೇಶ್ವರ ಹನ್ಮಂತೇಶ್ವರಂಗಳಂ ಪ್ರತಿಷ್ಠಿಸಿದರಿಂತ ಎನ್ನುವುದು ರಾಮ ಲಕ್ಷ್ಮಣರು ಲಂಕೆಯ ಸಮಸ್ತ ದಾನವರನ್ನು ಸಂಹರಿಸಿ ಕಿಷ್ಕಿಂಧೆಗೆ, ಇಲ್ಲಿಂದ ಅಯೋಧ್ಯೆಗೆ ಹೊರಡುವಾಗ, ಶಿರಸಂಗಿಯಲ್ಲಿದ್ದ ಋಶ್ಯಶೃಂಗಮುನಿಯ ಆಶ್ರಮಕ್ಕೆ ಬಂದು ತಮ್ಮ ಹೆಸರಿನಲ್ಲಿ ಶಿವಲಿಂಗಗಳನ್ನು ಪ್ರತಿಷ್ಠಾನೆ ಮಾಡಿರುವುದು ತಿಳಿಯುತ್ತದೆ. ಶಿರಸಂಗಿಯ ಕಾಳಿಕಾ ದೇವಾಲಯದ ಉತ್ತರ ಭಾಗದಲ್ಲಿ ಅಂದರೆ ಖಡ್ಗತೀರ್ಥದ ಹತ್ತಿರ ಇಂದಿಗೂ ರಾಮ-ಲಕ್ಷ್ಮಣರ ಹೆಸರಿನ ಶಿವಲಿಂಗಗಳನ್ನು ಕಾಣಬಹುದು. ಈ ದೇವಾಲಯದ ದಕ್ಷಿಣ ಭಾಗದಲ್ಲಿ ನವಶಿಲಾ, ಶಿಲಾತಾಮ್ರಯುಗದ ನೆಲೆಗೆ ಹೊಂದಿಕೊಂಡಂತೆ ಹನುಮಂತನ ದೇವಾಲಯವಿದೆ. ಈ ಕಲ್ಪನೆಯಿಂದಲೇ ೧೫ ನೇ ಶತಮಾನದಲ್ಲಿ ಆಂಜನೇಯನ ವಿಗ್ರಹವನ್ನು ಪ್ರತಿಷ್ಠಾಪಿಸಿದಂತಿದೆ.

ಋಶ್ಯಶೃಂಗಮುನಿಯ ಹಿನ್ನೆಲೆ : ಈ ಮುನಿಯ ಜನನಕ್ಕೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಶೃಂಗೇರಿ ಮತ್ತು ಶಿರಸಂಗಿಗಳಲ್ಲಿ ಮಾಹಿತಿ ಲಭ್ಯವಾಗುತ್ತದೆ. ಶಿರಸಂಗಿಯಲ್ಲಿ ಈ ಮುನಿಯ ಹೆಸರಿನ ಗವಿ ಮತ್ತು ಶೃಂಗೇರಿಯ ಹತ್ತಿರ ಕಿಗ್ಗ ಗ್ರಾಮದಲ್ಲಿ ಶೃಂಗೇಶ್ವರ ದೇವಾಲಯವಿದೆ. ಶಿರಸಂಗಿ ಶಾಸನ ಈ ಮುನಿಯ ಮಾಹಿತಿಯನ್ನು ಸವಿಸ್ತಾರವಾಗಿ ನೀಡುತ್ತದೆ.

ಹಿಂದೆ ಈ ಬೆಟ್ಟಪ್ರದೇಶದಲ್ಲಿ ಶುಂಗಬ್ರಹ್ಮನೆಂಬ ಒಬ್ಬ ಋಷಿ ತಪಸ್ಸು ಮಾಡಿಕೊಂಡಿದ್ದ. ಮಂಜುಗೋಷೆ ಎಂಬ ದೇವಕನ್ಯೆ ತನ್ನ ಸಖಿಯೊಡಗೂಡಿ ವನವಿಹಾರಕ್ಕಾಗಿ ಭೂಲೋಕಕ್ಕೆ ಬರುತ್ತಾಳೆ. ಮೈಮರೆತು ವನವಿಹಾರವನ್ನು ಮಾಡುವ ಸಂದರ್ಭದಲ್ಲಿ ತನ್ನ ಕಾಲುಗಳನ್ನು ತಪಸ್ಸಿನಲ್ಲಿ ಮಗ್ನನಾಗಿದ್ದ ಮುನಿಗೆ ತಾಗಿಸುತ್ತಾಳೆ. ಇದರಿಂದ ಎಚ್ಚರಗೊಂಡ ಶುಂಗಬ್ರಹ್ಮ ಕೋಪೋದ್ರಿಕ್ತನಾಗಿ ಮತ್ತೆ ನೀನು ದೇವಲೋಕಕ್ಕೆ ಹೋಗದೆ ಮೊದಲಿನ ಅವಸ್ಥೆಯನ್ನು ಮರೆತು ಮಾನವಳಾಗಿ ಭೂಲೋಕದಲ್ಲಿ ತಿರುಗೆಂದು ಶಾಪ ಕೊಡುತ್ತಾರೆ. ಮುನಿಗಳ ಶಾಪಕ್ಕಂಜಿದ ಅವಳು ಮರಳಿಬಂದು ತನಗರಿವಿಲ್ಲದಂತೆ ಅಜ್ಞಾನದಿಂದ ಈ ಘಟನೆ ನಡೆಯಿತು. ತಮ್ಮ ಶಾಪದಿಂದ ನನ್ನನ್ನು ಮುಕ್ತಳನ್ನಾಗಿ ಮಾಡಬೇಕೆಂದು ಪರಿಪರಿಯಾಗಿ ಕೇಳಿಕೊಳ್ಳುತ್ತಾಳೆ. ಕೋಪಕರಗಿದ ಶುಂಗಬ್ರಹ್ಮ ಕೊಟ್ಟ ಶಾಪವನ್ನು ಮರಳಿ ಪಡೆಯುವಂತಿಲ್ಲ. ಅದಕ್ಕೆ ಪರಿಹಾರವನ್ನು ಸೂಚಿಸುತ್ತೇನೆಂದು, ಈ ಪ್ರದೇಶದಲ್ಲಿರುವ ವಿಭಾಂಡಕನೆಂಬ ಮುನಿಯಿಂದ ನಿನಗೆ ಮಗು ಜನಿಸುತ್ತದೆ. ಈ ಪುತ್ರನ ಜನನದಿಂದ ಶಾಪವಿಮುಕ್ತಳಾಗಿ ಮೊದಲಿನ ರೂಪ ಪಡೆಯುತ್ತಿ ಎಂದು ಹೇಳುತ್ತಾನೆ. ಅವಳು ವಿಭಾಂಡಕ ಮುನಿಯ ದರ್ಶನಕ್ಕಾಗಿ ಪರಿತಪಿಸುತ್ತ ಕಾಲ ಕಳೆಯುತ್ತಿರುತ್ತಾಳೆ. ಕೊನಗೆ ತೀರ್ಥಸ್ನಾನಕ್ಕೆ ಬಂದ ವಿಭಾಂಡಕಮುನಿ ಅಪ್ಸರ ಕನ್ನೆಯನ್ನು ನೋಡಿ ಅವಳಲ್ಲಿ ಪರವಶನಾದಂತಾಗಿ ಮನಸ್ಸು ಚಂಚಲವಾಗುತ್ತದೆ. ತನಗರಿವಿಲ್ಲದಂತೆ ರೇತಸ್ಸು ಹೊರಹೊಮ್ಮುತ್ತದೆ. ಇದರಿಂದ ನಾಚಿಕೆ ಮತ್ತು ದುಃಖಪಟ್ಟ ಮುನಿ ಅದನ್ನು ಕಮಲದ ಎಲೆಯಲ್ಲಿ ಬಚ್ಚಿಡುತ್ತಾನೆ. ಈ ಅವಕಾಶಕ್ಕಾಗಿ ಕಾಯುತ್ತಿದ್ದ ಅವಳು ಮುನಿಯ ವೀರ್ಯವನ್ನು ಸೇವಿಸುತ್ತಾಳೆ. ಮುಂದೆ ಕೋಡುಳ್ಳ ಕುಮಾರನಿಗೆ ಜನ್ಮ ವೀಯುತ್ತಾಳೆ. ಜನಿಸಿದ ಮಗುವನ್ನು ಅಲ್ಲಿಯೇ ಬಿಟ್ಟು ಮಾನುಷಾಕಾರದಿಂದ ಅಪ್ಸರೆಯ ರೂಪ ತಳೆದು ಆಕಾಶಕ್ಕೆ ಹಾರಿ ತನ್ನ ನಿಜವಾದ ಮನೆಯನ್ನು ಸೇರುತ್ತಾಳೆ.

ಶೃಂಗಬ್ರಹ್ಮನ ಬಯಕೆಯಂತೆ ಜನನ ಹೊಂದಿದ ಈ ಮಗುವಿಗೆ ವಿಭಾಂಡ ಮುನಿಯ ಜಾತಕರ್ಮಗಳನ್ನು ನೆರವೇರಿಸಿ ಹುಟ್ಟುವಾಗಲೇ ಶಿರದಲ್ಲಿ ಕೋಡುಗಳಿದ್ದುದರಿಂದ ಋಶ್ಯಶೃಂಗ ಎಂದು ನಾಮಕರಣ ಮಾಡುತ್ತಾನೆ. ಋಶ್ಯಶೃಂಗ ಜನನದಿಂದಾಗಿ ಶಿರಶೃಂಗಿ ಗ್ರಾಮನಾಮವಾಗಿ ಮುಂದೆ ಶಿರಸಂಗಿ ಎಂದಾಯಿತು.

ಋಶ್ಯಶೃಂಗನ ಜನನ ಕುರಿತು ಶಿರಸಂಗಿ ಶಾಸನದಲ್ಲಿರುವಂತೆ, ಶೃಂಗೇರಿಯ ಕೈಫಿಯತ್ತಿಯಲ್ಲಿಯೂ ವಿವರವಿದೆ. ವಿಭಾಂಡಮುನಿ ತುಂಗಾನದಿಯಲ್ಲಿ ತ್ರಿಕಾಲ ಸ್ನಾನ

ಮಾಡುತ್ತ ಸಮೀಪದಲ್ಲಿರುವ ಶ್ರೀ ಮಲ್ಲಿಕಾರ್ಜುನಸ್ವಾಮಿಯನ್ನು ಪೂಜಿಸುತ್ತಿದ್ದ. ಒಂದು ದಿನ ಸ್ನಾನ ಮಾಡುವಾಗ ಊರ್ವಶಿ ಎಂಬ ಅಪ್ಸರ ಸ್ತ್ರೀ ಸಂಚರಿಸಿದುದರಿಂದ ವಿಭಾಂಡಕಮುನಿಯ ಮನಸ್ಸು ಚಂಚಲವಾಗಿ ನೀರಿನಲ್ಲಿ ರೇತಸ್ಸು ಸ್ಖಲನವಾಯಿತು.

ಕೃಷ್ಣಮೃಗವು ತೃಷೆಯಿಂದ ತುಂಗಾನದಿಗೆ ಬಂದು ನೀರು ಕುಡಿದಾಗ ನೀರಿನೊಂದಿಗೆ ಋಷಿಯ ವೀರ್ಯವನ್ನು ಪಾನ ಮಾಡಿತು. ಮುಂದೆ ಅದರ ಗರ್ಭದಲ್ಲಿ ಶಿರಸ್ಸಿನಲ್ಲಿ ಶೃಂಗಸಹಿತ ಮಗು ಜನಿಸಿತು. ಇದು ವಿಭಾಂಡಕಮುನಿಗೆ ತಿಳಿದು ಮಗವನ್ನು ತನ್ನ ಆಶ್ರಮಕ್ಕೆ ತಂದು ಋಶ್ಯಶೃಂಗ ಎಂದು ನಾಮಕರಣ ಮಾಡಿದನು. ಋಶ್ಯಶೃಂಗ ಆಶ್ರಮ ಮಾಡಿಕೊಂಡಿದ್ದ ಈ ಸ್ಥಳಕ್ಕೆ ಋಶ್ಯಶೃಂಗಪುರವೆಂದು ಗ್ರಾಮನಾಮವಾಗಿ ಕ್ರಮೇಣ ಶೃಂಗಪುರ, ಶೃಂಗೇರಿ ಎಂಬ ರೂಪಾಂತರ ಪಡೆಯಿತು. ಈ ರೀತಿಯಾಗಿ ಋಶ್ಯಶೃಂಗನ ಜನನ ಕುರಿತಂತೆ ಶಿರಸಂಗಿ ಮತ್ತು ಶೃಂಗೇರಿಯ ದಾಖಲೆಗಳ ತಿರುಳು ಒಂದೆಯಾಗಿದೆ.

ಶೃಂಗೇರಿ ಹತ್ತಿರ ಕಿಗ್ಗ ಗ್ರಾಮದಲ್ಲಿ ಶೃಂಗೇಶ್ವರ ದೇವಾಲಯವಿದೆ. ಋಶ್ಯಶೃಂಗ ಮುನಿ ಸಾಯುಜ್ಯ ಮೋಕ್ಷ ಪಡೆದ ಈ ದೇವಾಲಯವನ್ನು ಶಾಸನಗಳು ಕಿಳ್ಗಾನೇಶ್ವರ ನೆಂದು ಕರೆದಿವೆ. ಸುತ್ತಲೂ ಬೆಟ್ಟದಿಂದಾವರಿಸಿದ ತಗ್ಗಿನಲ್ಲಿರುವುದರಿಂದ ಈ ಹೆಸರು ಪ್ರಾಪ್ತವಾಗಿರಬೇಕು. ಮುಂದೆ ಇದೇ ಕಿಗ್ಗವೆಂಬ ಗ್ರಾಮನಾಮವಾಯಿತು. ಮುನಿಯ ಐಕ್ಯತೆಯಿಂದ ಅದನ್ನು ಶೃಂಗೇಶ್ವರ ದೇವಾಲಯವೆಂದು ಕರೆಯಲಾಗಿದೆ.

ಈ ದೇವಾಲಯದ ಮೂರ್ತಿಶಿಲ್ಪ ಲಕ್ಷಣಗಳನ್ನು ಗಮನಿಸಿದರೆ, ನಾಲ್ಕನೆಯ ಶತಮಾನದ ಪೂರ್ವದಲ್ಲಿಯೇ ನಿರ್ಮಾಣವಾಗಿದೆ. ಹದಿನಾರನೆಯ ಶತಮಾನದ ವೇಳೆಗೆ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿ ಸಭಾಮಂಟಪದ ಕಂಬಗಳ ಮೇಲೆ ಋಶ್ಯಶೃಂಗಮುನಿಗೆ ಸಂಬಂಧಿಸಿದ ಕಥಾನಕ ಭಾಗಗಳನ್ನು ಅಳವಡಿಸಲಾಯಿತು. ಒಂದು ಕಂಬದ ಮೇಲೆ ಋಶ್ಯಶೃಂಗನನ್ನು ರೋಮಪಾದ ರಾಜನ ಪಟ್ಟಣಕ್ಕೆ ಕರೆದೊಯ್ಯುತ್ತಿರುವಂತೆ ತೋರಿಸಲ್ಪಟ್ಟಿದೆ. ಸ್ತ್ರೀಯರು ಎತ್ತಿ ಹಿಡಿದಿರುವ ಪಲ್ಲಕ್ಕಿಯನ್ನು ಎರಡು ಹರಿಣಗಳು ಹೊತ್ತುಕೊಂಡಿವೆ. ಇನ್ನೊಂದು ಕಂಬದ ಮೇಲೆ ರಾಮ, ಲಕ್ಷ್ಮಣ, ಸೀತೆಯರು ನಿಂತುಕೊಂಡಿರುವ ಚಿತ್ರಣವಿದೆ. ಗರ್ಭಗೃಹದ ಶಿವಲಿಂಗದ ಮೇಲಿರುವ ಉಬ್ಬುತಗ್ಗುಗಳಲ್ಲಿ ಋಶ್ಯಶೃಂಗಮುನಿ ಒಡಮೂಡಿದ್ದಾನೆಂಬ ನಂಬಿಕೆಯಿದೆ. ಸಭಾಮಂಟಪದ ಪಕ್ಕದ ಚಿಕ್ಕ ಗುಡಿಯಲ್ಲಿ ಅವನ ಪತ್ನಿ ಶಾಂತಾದೇವಿಯ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಉತ್ಸವ ಮೂರ್ತಿಯ ಪೀಠದಲ್ಲಿ ಕ್ರಿ. ಶ. ೧೬೭೮ ರ ಶಾಸನವಿದೆ. ಅದರಲ್ಲಿ ಕೆಳದಿ ಚೆನ್ನಮ್ಮಾಜಿ ಆಳ್ವಿಕೆ ಮಾಡುತ್ತಿರುವಾಗ, ಪ್ರಧಾನಿ ಗುರುಬಸಪ್ಪದೇವರು ಮಾಡಿಸಿ ಕಿಗ್ಗದ ಶೃಂಗೇಶ್ವರ ಸ್ವಾಮಿಗೆ ಸಮರ್ಪಿಸಿದ ಸೇವೆ ಎಂದಿದೆ.

ಈ ದೇವಾಲಯದ ಆವರಣದಲ್ಲಿ ಪ್ರಾಚೀನ ಕಾಲದ ಶಿಲ್ಪಾವಶೇಷ ಮತ್ತು ಶಾಸನಗಳಿವೆ. ಕಪ್ಪು ಶಿಲೆಯ ನಾಲ್ಕೂ ಮಗ್ಗಲು ಮತ್ತು ಮೇಲ್ಭಾಗ ಬರೆಯಲ್ಪಟ್ಟ

ಕ್ರಿ. ಶ. ೬-೭ನೆಯ ಶತಮಾನದ ಶಾಸನದಲ್ಲಿ ಕಿಳ್ಗಾನೇಶ್ವರ ದೇವರು ಹಾಗೂ ಬೆಳ್ಳಿಕಮ್ಮರೆನನಗೊಟ್ಟುಕೊಂಡಾರ್ ಎಂಬ ಉಲ್ಲೇಖವಿದೆ. ಅದೇ ಶಿಲೆಯ ಇನ್ನೊಂದು ಭಾಗದಲ್ಲಿ xxಕ್ಕಲುಂ ಇಳ್ದ ಕಾಂಬ ಕಮ್ಮರರಾಳುವ ಬ xx ಸರ್ವಪರಿಹಾರ ಕೊಟ್ಟಾರ್ ಎಂದು ಬರೆದಿರುವ ಇದರಲ್ಲಿ ಅಕ್ಷರಗಳು ಅಲ್ಲಲ್ಲಿ ಹಾಳಾಗಿರುವುದರಿಂದ ಕಮ್ಮಾರ ರಾಳುವ ಎಂಬ ಅಂಶಮಾತ್ರ ಸ್ಪಷ್ಟವಾಗುತ್ತದೆ. ಅಲ್ಲದೆ ಇನ್ನೊಂದು ಮಗ್ಗುಲಲ್ಲಿ ಈ ಕಮ್ಮಾರನ ಪೂರ್ವಮರಿಯಾದೆಯನ್ನು ಹಾಳುಮಾಡಿದರೆ, ಅಪಹರಿಸಿದರೆ ಮಹಾಪಾಪಕ್ಕೆ ಗುರಿಯಾಗುವರೆಂಬ ಹೇಳಿಕೆಯೂ ಕೂಡಾ ಇದೆ. ಸುಮಾರು ೭ನೆಯ ಶತಮಾನದ ಶಾಂತರಸರ ಆಳ್ವಿಕೆಯಲ್ಲಿ ಬರೆಯಿಸಿದ ಇದರಲ್ಲಿ ಸ್ವಸ್ತಿ xxಪೂರ್ವಮರಿಯಾದದೆಯಾ ಕಮ್ಮರರ ಪಾಶುಪತ ಮರಿಯಾದೆಯಾ ಉಳ್ಳದಲ್ಲ ಎತ್ತಿಕೊಳ್ವೋನ ಇ ಮಹಾ ಪಾತನಕ್ಕುಂ ಎಂದಿದೆ.

ಈ ರೀತಿಯಾಗಿ ಹಂಪಿಯ ಹಜಾರರಾಮಸ್ವಾಮಿ ದೇವಾಲಯದ ಗೋಡೆಯಲ್ಲಿರುವ ಋಶ್ಯ ಶೃಂಗ ಮುನಿಯ ಶಿಲ್ಪವನ್ನು ಹಿನ್ನೆಲೆಯಾಗಿಟ್ಟುಕೊಂಡು ಬೇರೆ ಬೇರೆ ಪರಿಸರದ ಮಾಹಿತಿಗಳನ್ನು ಕಲೆಹಾಕಿದಾಗ ಅನೇಕ ಅಂಶಗಳು ಬೆಳಕಿಗೆ ಬರುತ್ತವೆ. ಶೃಂಗೇರಿ, ಶಿರಸಂಗಿ ಮತ್ತು ಕಿಷ್ಕಿಂಧೆಯೊಂದಿಗೆ ಸಂಬಂಧವನ್ನಿಟ್ಟುಕೊಂಡಿದ್ದ ಋಶ್ಯಶೃಂಗ ಮುನಿಯ ಮಹತ್ವವನ್ನು ಸ್ಥಳಪುರಾಣ ಮತ್ತು ಶಾಸನಗಳಲ್ಲಿ ಉಲ್ಲೇಖಗೊಂಡಿರುವುದರಿಂದ ಈ ಮೂರು ಸ್ಥಳಗಳ ಅವಿನಾಭಾವಿ ಸಂಬಂಧಗಳನ್ನು ಗುರುತಿಸಬಹುದು.

ಗ್ರಂಥ ಋಣ


೧. ಎ. ಕ. ಸಂ. ೧೧

೨. ಕ. ಇ. ಸಂ. ೧

೩. ಕಲುಬುರ್ಗಿ ಎಂ. ಎಂ. ೧೯೯೪, ಕರ್ನಾಟಕದ ಕೈಫಿಯತ್ತುಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಸುಂದರ ಅ. ೧೯೯೭ , ಕಿಷ್ಕಿಂಧೆ : ಹನುಮಂತನ ತವರು, ಹೊಸಪೇಟೆ

೫. ಸುಂದರ ಅ. ೧೯೮೮, ನ್ಯೂಲೈಟ್ ಟ್ರೆಂಡ್ಸ್ ಇನ್ ಆನೆಗುಂದಿ ರಿಜಿಯನ್ ಡುರಿಂಗ್ ವಿಜಯನಗರ ಪಿರೀಡ್, ಆರ್ಲಿ ವಿಜಯನಗರ, ಬೆಂಗಳೂರು.



ಋಶ್ಯ ಶೃಂಗ ಮುನಿಯ ಪೌರೋಹಿತ್ಯದಲ್ಲಿ ನಡೆಯುತ್ತಿರುವ ಪುತ್ರಕಾಮೇಷ್ಟಿಯಾಗ



ದಶರಥ ರಾಜ ಯಜ್ಞದೇವತೆಯಿಂದ ಪಡೆದ ಅಮೃತವನ್ನು ಮೂವರು ಪತ್ನಿಯರಿಗೆ ಕೊಡುತ್ತಿರುವ ಚಿತ್ರಣ.

೨೫. ವಿಜಯನಗರ ಕಾಲದ ತುಮಕೂರಿನ ಕೋಡಿ ಬಸವೇಶ್ವರ ದೇವಾಲಯ

ಡಾ. ಬಿ.ನಂಜುಂಡಸ್ವಾಮಿ

ತುಮಕೂರು ನಗರದ ದೇವಾಲಯ, ಮಠಗಳನ್ನು ಕೋಟೆ ಮತ್ತು ಪೇಟೆ ಎಂದು ವಿಂಗಡಿಸ ಲಾಗುತ್ತದೆ. 1900ಕ್ಕಿಂತ ಮುಂಚೆ ಈ ಎರಡು ಪ್ರದೇಶದವರು ಅನೇಕ ವಿಷಯಗಳಲ್ಲಿ ಒಬ್ಬೊಬ್ಬರಿಗೂ ಪೈಪೋಟಿ ನಡೆಯುತ್ತಾ ಇತ್ತಂತೆ.

ಹದಿನೆಂಟು ಕೋಮಿನ ಮುಖಂಡರಾದ ವೀರಶೈವ 'ಯಜಮಾನರು' ಮತ್ತು 'ಶೆಟ್ಟರು' ಕೋಟೆಗೆ ಬೇರೆ, ಪೇಟೆಗೆ ಬೇರೆ ಇದ್ದರು. ಎರಡು ಕಡೆ ಬೇರೆ ಬೇರೆ ನಂದಿ ಧ್ವಜ ಇತ್ತು. ಕೋಟೆಯ ವೀರಭದ್ರಸ್ವಾಮಿ ದೇವಸ್ಥಾನದಲ್ಲಿ ಈ ನಂದಿ ಧ್ವಜ ಇರುತ್ತಾ ಇತ್ತು. ಕೋಟೆಯ 'ದೇಶದಗೌರಿ' ಸ್ಥಾಪನೆಯಾಗುತ್ತಾ ಇದ್ದದ್ದು ಈ ವೀರಭದ್ರಸ್ವಾಮಿ ದೇವಸ್ಥಾನದಲ್ಲೇ. ಪೇಟೆಯ ನಂದಿಧ್ವಜ ಮತ್ತು 'ದೇಶದಗೌರಿ' ಸ್ಥಾಪನೆ ಮಾಡುತ್ತಾ ಇದ್ದದ್ದು, ಅರಳೇಪೇಟೆ ಬಸವೇಶ್ವರ ದೇವಸ್ಥಾನದಲ್ಲಿ. ತುಮಕೂರು ನಗರದಲ್ಲಿ ನೆಲೆಸಿರುವ ಅಗ್ನಿವಂಶ ಕ್ಷತ್ರಿಯರು ಅರ್ಥಾತ್ ತಿಗಳ ಜನಾಂಗದವರು ಈಗಲೂ ವಿಶೇಷ ವಾಗಿ ಮಾಡುವ ಕೊಲ್ಲಾಪುರದದಮ್ಮ ಜಾತ್ರೆಯನ್ನು 'ಕೋಟೆ ಕೊಲ್ಲಾ ಪುರದಮ್ಮ ಜಾತ್ರೆ' ಮತ್ತು 'ಪೇಟೆ ಕೊಲ್ಲಾಪುರದಮ್ಮ ಜಾತ್ರೆ' ಎಂದು ಬೇರೆ ಬೇರೆಯಾಗಿ ಆಚರಿಸುತ್ತಾರೆ.

ಕೋಟೆ ಪ್ರದೇಶದಲ್ಲಿ ವಿಜಯನಗರ ಕಾಲದ ವಾಸ್ತುವಿಶೇಷ ಹೊಂದಿರುವ ಸಂಗಮೇಶ್ವರ ದೇವಾಲಯ, ಕೋಟೆ ಬಾಗಿಲು ಆಂಜನೇಯ, ವೀರಭದ್ರಸ್ವಾಮಿ ದೇವಾ ಲಯ, ಹಿರೇಮಠ, ದಿವಾನರ ಬೀದಿಯಲ್ಲಿ ಇರುವ ಸಿದ್ಧಲಿಂಗೇಶ್ವರ ದೇವಾಲಯ, ಮುದ್ದು ಬಸವೇಶ್ವರ ದೇವಾಲಯ, ಚಿಕ್ಕಪೇಟೆ ಸರ್ಕಲ್‌ನಲ್ಲಿ ಇರುವ ದೊಡ್ಡ ಬಸವೇಶ್ವರ ದೇವಾಲಯ, ಗಂಗಾಧರೇಶ್ವರ ದೇವಾಲಯ, ಶಾಸನೋಕ್ತ ಲಕ್ಷ್ಮೀಕಾಂತ ಸ್ವಾಮಿ ದೇವಾಲಯ, ಕೋಡಿ ಬಸವೇಶ್ವರ ಸ್ವಾಮಿ ದೇವಸ್ಥಾನ ಬಹಳ ಮುಖ್ಯವಾದದ್ದು.

ಪೇಟೆ ಪ್ರದೇಶದಲ್ಲಿ ವಿಜಯನಗರ ಕಾಲದ ವಾಸ್ತುವಿಶೇಷ ಹೊಂದಿರುವ ಅರಳೇ ಪೇಟೆ ಬಸವೇಶ್ವರ ದೇವಾಲಯ, ಸುಂಕದ ಕಟ್ಟೆ ಬಸವೇಶ್ವರ ದೇವಾಲಯ, ಚಿನಿವಾರಕಟ್ಟೆ ಬಸವೇಶ್ವರ ದೇವಾಲಯ, ಬೆಣ್ಣೆ ಬಸವೇಶ್ವರಸ್ವಾಮಿ ದೇವಾಲಯದ ಕರಿಬಸವಸ್ವಾಮಿ ಗಳ ಮಠಕ್ಕೆ ಹೊಂದಿಕೊಂಡಿರುವ ಕಾಶಿವಿಶ್ವನಾಥ ದೇವಸ್ಥಾನ (ಗರ್ಭಗೃಹದಲ್ಲಿ ಗುರುಗದ್ದುಗೆ ಇದ್ದು ಹೋದ ಶತಮಾನದಲ್ಲಿ ಶಿವಲಿಂಗುಸ್ಥಾಪನೆ ಮಾಡಲಾಯಿತು.),

ನೀಲಕಂಠೇಶ್ವರ ದೇವಸ್ಥಾನ, ಸೋಮೇಶ್ವರ ದೇವಸ್ಥಾನ, ಸೋಮೇ ಕಟ್ಟೆ ಮಠ ಮುಖ್ಯವಾದದ್ದು.

ಕೋಡಿ ಬಸವೇಶ್ವರ ದೇವಾಲಯ

ತುಮಕೂರು ನಗರದ ಪೂನಾ-ಬೆಂಗಳೂರು ರಸ್ತೆಯಲ್ಲಿರುವ ಬೃಹತ್ ಅಮಾನಿಕೆರೆಯ ಏರಿಯ ಅಂಚಿಗೆ ಈ ದೇವಾಲಯವಿದೆ. ಹಿಂದೆ ಗರ್ಭಗುಡಿಯ 'ವೃಷಭ ಮೂರ್ತಿ' ಭೂಮಟ್ಟಕ್ಕೆ ಇತ್ತು. ತುಮಕೂರು ಕೆರೆ ಕೋಡಿ ಬಿದ್ದಾಗ ಕೆರೆಯ ನೀರು ವೃಷಭನ ಸುತ್ತಾ ಆವರಿಸುತ್ತಿತ್ತು. ಈ ದೇವಸ್ಥಾನ ೧೯೩೦ರಲ್ಲಿ ದಾನಿರುದ್ರಪ್ಪನವರು ಜೀರ್ಣೋದ್ಧಾರ ಮಾಡಿದರು. ಕರಿಮಣ್ಣಿ ಸಿದ್ಧಲಿಂಗಪ್ಪನವರು ಗೋಪುರ ಕಟ್ಟಿಸಿದರು. ೧೯೭೨ರಲ್ಲಿ ಶ್ರೀ ಎನ್.ಆರ್.ಜಗದೀಶಾರಾಧ್ಯರು ದೇವಸ್ಥಾನವನ್ನು ಸಂಪೂರ್ಣವಾಗಿ ನವೀಕರಣಗೊಳಿಸಿದರು. ಆಗ ಗೊತ್ತಾದ್ದು ಗರ್ಭಗೃಹದಲ್ಲಿ ಸ್ಥಾಪನೆ ಮಾಡಿರುವುದು ಎಂದು. ಕೆರೆ ಕಟ್ಟಿದಾಗ ಸ್ಥಾಪನೆ ಮಾಡಲಾಗಿತ್ತು ಎಂದು ತೋರುತ್ತದೆ. ಆನಂತರ ಅದಕ್ಕೆ ಗರ್ಭಗೃಹ ನಿರ್ಮಾಣ ಮಾಡಿರಬೇಕು. ವೃಷಭ ವಿಗ್ರಹದ ಮುಂದೆ ಒಂದು ಅಡಿ ಉದ್ದ ಒಂದೂವರೆ ಅಡಿ ಅಗಲ ಕಲ್ಲಿನ ಮೇಲೆ ಒಂದು ಜೊತೆ ಪಾದ ಮತ್ತು ದೀರ್ಘದಂಡ ನಮಸ್ಕಾರ ಮಾಡುತ್ತಾ ಇರುವ ಭಕ್ತರ ರೇಖಾಚಿತ್ರಗಳು ಇವೆ.

ದಕ್ಷಿಣಾಭಿಮುಖವಾಗಿ ಇರುವ ವೃಷಭಮೂರ್ತಿ ಇರುವ ಗರ್ಭಗೃಹ, ಅರ್ಧ ಮಂಟಪ, ನವರಂಗ, ಪ್ರದಕ್ಷಿಣಾಪಥ, ಮಹಾದ್ವಾರದಿಂದ ಕೂಡಿತ್ತು. ದೇವಸ್ಥಾನದ ಗರ್ಭಗುಡಿಯ ಅಭಿಮುಖವಾಗಿ ಧ್ವಜಸ್ತಂಭ ಇತ್ತು. ಆ ಧ್ವಜಸ್ತಂಭದಲ್ಲಿ ಹದಿನಾಲ್ಕು ಸಾಲಿನ ಶಾಸನ ಇದ್ದು ದೇವಸ್ಥಾನದ ಬಗ್ಗೆ ಸಾಕಷ್ಟು ಮಾಹಿತಿಗಳನ್ನು ನೀಡುತ್ತದೆ. ಪೂನಾ-ಬೆಂಗಳೂರು ರಸ್ತೆ ನಿರ್ಮಾಣ ಸಂದರ್ಭದಲ್ಲಿ ಅಥವಾ ಬೇರೆ ಕಾಮಗಾರಿಯ ಸಂದರ್ಭದಲ್ಲಿ ರಸ್ತೆಗೆ ಈ ಬೃಹತ್ ಕಂಬ ಅಡ್ಡಬರುತ್ತಾ ಇದ್ದುದರಿಂದ ಅದನ್ನು ಪಕ್ಕಕ್ಕೆ ಸ್ಥಳಾಂತರಿಸಲಾಯಿತು. MAR 1918 ರಲ್ಲಿ 'THE PILLAR BEARING THE INSCRIPTION TUMKUR 3 WHICH WAS AT THE BASAVA TEMPLE HAS BEEN REMOVED AND SET UP OPPOSITE THE VEGETABLE MARKET.' ಹನ್ನೆರಡು ಅಡಿಯ ದೀಪಸ್ತಂಭದ ಮೇಲಕ್ಕೆ ದೀಪ ಹಚ್ಚಿ ಇಡಲು ಹೋಗಲು ಪಾವಟಿಗೆಗಳು ಇವೆ. ಶಾಸನ ಧ್ವಜಸ್ಥಂಭದ ಉತ್ತರಾಭಿಮುಖವಾಗಿ ಇದೆ. ದಕ್ಷಿಣಾಭಿಮುಖವಾಗಿ ವೃಷಭ ಪೂರ್ವಪಶ್ಚಿಮದಲ್ಲಿ ಪದ್ಮಗಳ ಕೆತ್ತನೆ ಇದೆ. ಈಗ ಯುವ ವಿದ್ವಾಂಸರು ಈ ಶಾಸನವನ್ನು ನೋಡಬೇಕೆಂದರೆ ಸಾಧ್ಯವಿಲ್ಲ. ಕೋಟೆ ಆಂಜನೇಯ ದೇವಸ್ಥಾನದವರು ಕಟ್ಟಿಸಿರುವ ಬೃಹತ್ ಆಂಜನೇಯನ ಪಾದದಲ್ಲಿ ಭದ್ರವಾದ ರಕ್ಷಣಾ ಕೋಟೆ ಕಟ್ಟಿ ಮೂರು ಅಡಿ ಎತ್ತರಿಸಿರುವುದರಿಂದ ಧ್ವಜಸ್ತಂಭದ ಮೂರು ಅಡಿ ಭೂಸ್ಥಾಪನೆಯಾಗಿ ಹೋಗಿದೆ. ಈಗ ಶಾಸನ ಪಾಠ, ವೃಷಭ ಮತ್ತು ಪದ್ಮಗಳ ಉಬ್ಬುಶಿಲ್ಪಗಳ

ಭೂಸ್ಥಾಪನೆಯಾಗಿ ಹೋಗಿದೆ. ಶಾಸನವನ್ನು E.C XIIನಲ್ಲಿ 'ತುಮಕೂರಿನ ಕೋಡೀ ಬಸವನಗುಡಿಯ ಗರುಡಕಂಭದಲ್ಲಿ' ಎಂದಿದ್ದಾರೆ. ಇಲ್ಲಿ ಒಂದು ವಿಷಯ ಸ್ಪಷ್ಟ ಮಾಡಬೇಕು. ಶಿವ ದೇವಾಲಯಗಳಲ್ಲಿ ಗರ್ಭ ಗುಡಿಯ ಅಭಿಮುಖವಾಗಿರುವ ಸ್ತಂಭಕ್ಕೆ ಧ್ವಜಸ್ತಂಭ ಎಂದು ಕರೆಯುತ್ತಾರೆ. ಯಾಕೆಂದರೆ ದೇವಾಲಯದಲ್ಲಿ ನಡೆಯುವ ಪೂಜಾ ಸಂದರ್ಭದಲ್ಲಿ ಲಿಂಗಮುದ್ರೆಯ ಧ್ವಜಪಟವನ್ನು ಇದಕ್ಕೆ ಕಟ್ಟಲಾಗುತ್ತದೆ. ಕೆಲವು ಕಡೆ ಸ್ತಂಭಾಗ್ರದಲ್ಲಿ ವೃಷಭ ವಿಗ್ರಹವನ್ನು ಸ್ಥಾಪನೆ ಮಾಡಲಾಗುತ್ತದೆ.

ತುಮಕೂರಿನ ಕೋಡೀ ಬಸವನಗುಡಿಯ ಧ್ವಜಸ್ತಂಭದ ಶಾಸನ

1. ಸ್ವಸ್ತಿಶ್ರೀಜಯಾಭ್ಯುದಯ
2. ಶಾಲಿವಾಹನಶಕವರುಷ೧
3. ೪೩೮ ನೆಯ ಯಿೊವ ಸಂವತ್ಸರ
4. ದಚಯಿತ್ರ ಶು ೭ ಸೋಮವಾರದ
5. ಲುಶ್ರೀಮುನ್ಮಹಾರಾಜಾಧಿ
6. ರಾಜರಾಜಪರಮೇಶ್ವರ ವೀ
7. ರಪ್ರತಾಪ ಕೃಷ್ಣರಾಯಮಹಾ
8. ರಾಯರಾಜ್ಯಂವಾಳುತ್ತಿರಲು
9. ಮಲ್ಲಿಶಟ್ಟಿಯರಮಕ್ಕಳುಪಋ
10. ವತನಾಯಕರು ತಮ ತಂದೆ
11. ತಾಯಿಗೆ ಧಂರ್ಮ್ಮವಾಗಬೇಕೆಂದು
12. ಅತೆವರದ ಶಿಲೆಯ... ಕಂಬ
13. .... ಮುಂದಣ....
14. ....

ಕೋಡಿ ಬಸವೇಶ್ವರ ದೇವಾಲಯದ ಮುಂದೆ ಧ್ವಜಸ್ತಂಭ ಸ್ಥಾಪನೆಯಾದ ಕಾಲವನ್ನು ಸ್ಪಷ್ಟವಾಗಿ ಈ ಶಾಸನ ತಿಳಿಸುತ್ತದೆ. 'ಶಾಲಿವಾಹನ ಶಕವರುಷ ೧೪೩೮ನೆಯ ಯೀವ ಸಂವತ್ಸರದ ಚಯಿತ್ರ ಶು ೭ ಸೋಮವಾರ' ಈ ಕಾಲ ಇಂಗ್ಲೀಷ್ ತೇದಿ ಕ್ರಿ.ಶ. ೧೫೧೬ಕ್ಕೆ ಹೊಂದುತ್ತದೆ. ಆ ಸಂದರ್ಭದಲ್ಲಿ ಶ್ರೀಮನ್ ಮಹಾರಾಜಾಧಿರಾಜ ಪರಮೇಶ್ವರ ವೀರಪ್ರತಾಪ ಕೃಷ್ಣರಾಯರು ರಾಜ್ಯವಾಳುತ್ತಾ ಇರುವಾಗ ಮಲ್ಲಿಶಟ್ಟಿ ಯವರ ಮಕ್ಕಳು ಪರುವತನಾಯಕರು ತಮ್ಮ ತಂದೆ ತಾಯಿಗಳಿಗೆ ಧರ್ಮವಾಗಬೇಕೆಂದು ಅತೆವರದ ಶಿಲೆಯ ಕಂಬವನ್ನು ಸ್ಥಾಪನೆ ಮಾಡಿದರು ಎಂದಿದೆ.

ದೇವಸ್ಥಾನ ನಿರ್ಮಾಣ ಮಾಡಿದಕ್ಕೆ ನಮಗೆ ಬೇರೆ ಇನ್ನೂ ಯಾವ ಶಾಸನವು ಲಭ್ಯವಾಗಿಲ್ಲ. ದೇವಸ್ಥಾನ ನಿರ್ಮಾಣವಾದ ಸ್ವಲ್ಪ ಸಮಯದಲ್ಲೇ ಈ ಸ್ತಂಭ ಸ್ಥಾಪನೆಯಾಗಿರಬಹುದು. ಮಲ್ಲಿಶೆಟ್ಟಿಯ ಮಕ್ಕಳು ಪರುವತನಾಯಕರು ಈ ಪ್ರದೇಶದ ಆಡಳಿತಾಧಿಕಾರಿಯಾಗಿದ್ದರೆ ? ಈ ಪ್ರಶ್ನೆ ಏಕೆ ಬರುತ್ತದೆ ಎಂದರೆ ಈ ಮೊದಲು ದೇವಾಲಯದ ಮಹಾದ್ವಾರದಲ್ಲಿ ಬೃಹತ್ ಕಲ್ಲಿನ ಬಾಗಿಲುವಾಡವಿದ್ದು, ಅದನ್ನು ಬಹಳ ಸುಂದರವಾಗಿ ಬಳ್ಳಿಗಳಿಂದ ಅಲಂಕರಿಸಲಾಗಿತ್ತು. 1992ರಲ್ಲಿ ದೇವ ಸ್ಥಾನ ಜೀರ್ಣೋದ್ಧಾರ ಸಂದರ್ಭದಲ್ಲಿ ಕಲ್ಲಿನ ಬೃಹತ್ ದ್ವಾರವನ್ನು ಬಳಸದೆ ಹೊರಗೆ ಬಿಡಲಾಯಿತು. ಅಡ್ಡತೊಲೆ ಒಂದು ಭಾಗ ಬಿಚ್ಚುವಾಗ ನಷ್ಟವಾಯಿತು ಎಂದು ತೋರುತ್ತದೆ. ಅದರಲ್ಲಿ ಬಹಳ ಸುಂದರವಾದ ಲಿಂಗಮುದ್ರೆಯ ಕೆತ್ತನೆ ಇತ್ತು. ಅಂದು ಬಾಗಿಲು ವಾಡದ ಮೇಲುಭಾಗ, ಬಾಗಿಲುವಾಡ ಕೆಳಭಾಗ ಅರ್ಥಾತ್ ನಾವು ಹೊಸಲು ಎಂದು ಕರೆಯುವ ಭಾಗ ದೇವಾಲಯದಿಂದ ಸ್ವಲ್ಪ ದೂರಕ್ಕೆ ಸ್ಥಳಾಂತರಿಸಲಾಗಿತ್ತು. ಅನಾಥವಾಗಿ ಬಿದ್ದಿದ್ದ ಆ ಭಾಗವನ್ನು ಬೇರೆ ದೇವಾಲಯ ಕಟ್ಟುವವರು ತೆಗೆದುಕೊಂಡು ಹೋದರಂತೆ. ಬಾಗಿಲು ಭಾಗದ ಬೃಹತ್ ಕಂಭಗಳು ದೇವಾಲಯದ ಹತ್ತಿರವೇ ಇತ್ತು. ಅದನ್ನು ರಕ್ಷಣಾರ್ಥವಾಗಿ ತುಮಕೂರು ನಗರ ವೀರಶೈವ ಸಮಾಜ ದವರು ರೇಣುಕ ವಿದ್ಯಾಪೀಠದಲ್ಲಿ ರಕ್ಷಿಸಿದ್ದಾರೆ.

ಈ ದ್ವಾರಸ್ತಂಭದ ವಿಶೇಷ ಏನೆಂದರೆ ಇಕ್ಕೆಡೆ ಇಬ್ಬರು ರಾಜ ಪೋಷಾಕು ಧರಿಸಿರುವ ಧರ್ಮದಂಡವನ್ನು ಹಿಡಿದಿರುವ ತುರುಬನ್ನು ಮಾಟವಾಗಿ ಕಟ್ಟಿರುವವರ ಉಬ್ಬು ಶಿಲ್ಪಗಳಿವೆ. ಈ ಇಬ್ಬರು ಶಾಸನದಲ್ಲಿ ಉಲ್ಲೇಖಗೊಂಡಿರುವ ಮಲ್ಲಿಶೆಟ್ಟಿ ಮತ್ತು ಪರ್ವತನಾಯಕರು ಆಗಿರಬಹುದೆ ? ಈಗ ಈ ವಿಷಯ ಸ್ಪಷ್ಟನೆ ಮಾಡುವಂತಹ ಆಕರಗಳು ಈಗ ನಮ್ಮಲ್ಲಿ ಇಲ್ಲ.

ವೃಷಭೇಶ್ವರ ಉತ್ಸವ ಮೂರ್ತಿ

ಈ ದೇವಾಲಯದಲ್ಲಿ ಅಂದಿನ ದಿನದಲ್ಲೇ ಭವ್ಯವಾದ ಆಗಮೋಕ್ತ ವೃಷಭೇಶ್ವರ ಉತ್ಸವಮೂರ್ತಿಯನ್ನು ಮಾಡಿಸಲಾಗಿದೆ. ಚೌಕಾಕಾರದ ಪದ್ಮಪೀಠದ ಮೇಲೆ ೧೫ ಸುತ್ತು ಒಂದರ ನಂತರ ಒಂದು ಮಾಟವಾಗಿ ಜೋಡಿಸಿರುವ ಪದ್ಮದಳಗಳ ಮೇಲೆ ನಮಃಶಿವಾಯ ಎಂಬ ಬೀಜಾಕ್ಷರಗಳನ್ನು ಬರೆಯಲಾಗಿದೆ. ಇದು ಈ ಹಿಂದೆ ಪ್ರಚಲಿತ ವಿದ್ದ ಉದ್ಧರಣೆ ಇರಬೇಕು. ಈಗ ನಮಗೆ ಅದರ ವಿವರ ತಿಳಿಯದೆ ಹೋಗಿದೆ. ಆನಂತರ ಸುಂದರವಾದ ಪದ್ಮದ ಮೇಲೆ ಖಡ್ಗಾಸನದಲ್ಲಿ ನಿಂತಿರುವ ವೃಷಭಮೂರ್ತಿ, ನೀಳವಾದ ಪಾದ ಸುಂದರವಾಗಿ ಉಗುರನ್ನು ಸಹ ಶಿಲ್ಪಿ ಬಿಡಿಸಿದ್ದಾನೆ. ಕಾಲಿಗೆ ಧರಿಸಿರುವ ಸುಂದರ ವಾದ ಕಾಲಂದಿಗೆ ಮೊಣಕಾಲು ಹತ್ತಿರ ಧರಿಸಿರುವ ಆಭರಣಗಳು ನೀಳವಾದ ಪಂಚೆಯನ್ನು ಸಹ ಶಿಲ್ಪಿ ಬಿಡಿಸಿದ್ದಾನೆ. ಕಟಿ ಸೂತ್ರ, ಒಡ್ಯಾಣದ ಆಭರಣಗಳ ಕುಸುರಿ ಕೆಲಸ ಬಹಳ ಮಾಡಲಾಗಿದೆ.

ಕಂಠದಲ್ಲಿ ರುದ್ರಾಕ್ಷಿಸರ, ಉರಹಾರ, ರುದ್ರಾಕ್ಷಿಮಾಲೆ ಪದಕಯುಕ್ತವಾದದ್ದು, ಯಜ್ಞೋಪವಿತವನ್ನು ಮಾಟವಾಗಿ ಕೆತ್ತಲಾಗಿದೆ. ಚತುರ್ಭುಜದಲ್ಲಿ ಕ್ರಮವಾಗಿ ಬಲಗೈಯಲ್ಲಿ ನಾಗಾಭರಣಯುಕ್ತ ಢಮರುಗ, ಎಡಕೈಯಲ್ಲಿ ತ್ರಿಶೂಲ, ಬಲಗೈಯಲ್ಲಿ ಜಪಮಾಲೆ, ಎಡಕೈಯಲ್ಲಿ ಪೀಠಸ್ಥಲಿಂಗುವನ್ನು ಇಟ್ಟುಕೊಂಡಿರುವಂತಹದು. ತೋಳಬಂದಿ, ಭುಜಕೀರ್ತಿಗಳಿಂದ ಅಲಂಕರಿಸಲ್ಪಟ್ಟಿದೆ. ಮಾಟವಾದ ಕಿರೀಟ, ಕಿರೀಟಕ್ಕೆ ಹೊಂದಿಕೊಂಡಂತಹ ಅಲಂಕಾರಗಳು, ವಿಗ್ರಹಕ್ಕೆ ತಕ್ಕಂತೆ ಕಿವಿಯನ್ನು ಶಿಲ್ಪಿ ಬಿಡಿಸಿದ್ದಾನೆ. ನಂದಿಮುಖದಲ್ಲಿ ಶಿವಭಕ್ತಿಯಿಂದ ಕೂಡಿದೆ. ಕೈಬೆರಳುಗಳಿಗೆ ಉಂಗುರಗಳಿಂದ ಅಲಂಕರಿಸಲ್ಪಟ್ಟಿದೆ. ಶಿರಭಾಗದಲ್ಲಿ ಹಿಂಭಾಗ ಶಿಖಾಚಕ್ರವಿದೆ. ಸುಮಾರು ಮೂರು ಅಡಿ ಎತ್ತರ ಇರುವ ಈ ಶಿಲ್ಪದಲ್ಲಿ ಶಿಲ್ಪನಿರ್ಮಾಣವಾದ ಬಗ್ಗೆ ಯಾವ ವಿಧವಾದ ಶಾಸನವೂ ಇಲ್ಲ. ಚತುರ್ಭುಜದ, ಶಿವಪೂಜಾಭಂಗಿಯ ಅಪರೂಪದ ವೃಷಭೇಶ್ವರನ ಮೂರ್ತಿ ತರಹದ್ದೆ ಇನ್ನೊಂದು ಬೆಣ್ಣೆ ಬಸವೇಶ್ವರ ದೇವಾಲಯದಲ್ಲಿ ಇದೆ.

ನೂರೈವತ್ತು ವರ್ಷಗಳ ಮುಂಚೆ ಈ ಉತ್ಸವಮೂರ್ತಿಗೆ ಹಿತ್ತಾಳೆಯ ಸುಂದರವಾದ ಪ್ರಭಾವಳಿಯನ್ನು ಮಾಡಿಸಲಾಗಿದೆ. ಪ್ರಭಾವಳಿಯಲ್ಲಿ ಕೆಳಗಿನಿಂದ ಕ್ರಮವಾಗಿ ಪದ್ಮ, ಆನೆ, ಶಿವಲಿಂಗು, ಯೋಗದಂತ (ರೇಖಾಚಿತ್ರ), ಸುಖಾಸೀನ ಯೋಗಿ, ಕಳಸದ ಉಬ್ಬು ಶಿಲ್ಪವಿದೆ. ಅದರ ಮೇಲೆ ಲಿಂಗು-ಬಸವ ಅರ್ಥಾತ್ ಲಿಂಗಮುದ್ರೆಯ ಉಬ್ಬು ಶಿಲ್ಪ, ಅದರ ಮೇಲೆ ಶರಭನನ್ನು ಬಿಡಿಸಲಾಗಿದೆ. ರಾಜಪೋಷಾಕು ಧರಿಸಿರುವ ಎದೆಯ ಮೇಲೆ ಕರಡಿಗೆ ಇರುವ, ತಲೆಗೆ ರುಮಾಲು ಸುತ್ತಿ ಮೀಸೆ ಬಿಟ್ಟಿರುವ ಧರ್ಮದಂತಹ ತರಹ ಮುಂಭಾಗ ಚಾಮರದಂತೆ ದಪ್ಪನಾಗಿರುವ ದಂಡವನ್ನು ಹಿಡಿದಿರುವ ಎಡಗಡೆ ಇರುವ ವ್ಯಕ್ತಿಯ ಬಲಗೈಯಲ್ಲಿ ಲೇಖಣಿ ತರಹ ವಸ್ತುವಿದೆ. ಬಲಗಡೆ ಇರುವ ವ್ಯಕ್ತಿಯ ಕೈಯಲ್ಲಿ ಗದೆಯನ್ನು ಊರಿ ನಿಂತಿದ್ದಾನೆ.


ಮೇಲಿನ ವಿವರವುಳ್ಳ ಪ್ರಭಾವಳಿ ಬಗ್ಗೆ ಈಗ ನಮಗೆ ಹೆಚ್ಚಿನ ಮಾಹಿತಿ ಇಲ್ಲ. ಇದನ್ನು ಮಾಡಿಸಿ ಕೊಟ್ಟವರ ಬಗ್ಗೆಯೂ ತಿಳಿದಿಲ್ಲ. ಶಾಸನದಲ್ಲಿ ಉಕ್ತರಾದ ಮಲ್ಲಿಶೆಟ್ಟಿ ಪರುವತನಾಯಕರ ವಂಶಸ್ಥರು ಈ ಪ್ರಭಾವಳಿಯನ್ನು ಮಾಡಿಸಿರಬೇಕು. ಆ ವಂಶಸ್ಥರಿಗೆ ದೇವಾಲಯದ ಸ್ಥಾಪನೆ, ಮತ್ತು ಮನೆತನದವರು ಸಲ್ಲಿಸಿದ ಸೇವೆ ಬಗ್ಗೆ ಅರಿವು ಇದ್ದಿರಬೇಕು. ಐದು ಆರು ಸಂತತಿಯ ನಂತರವು ವಿವರ ತಿಳಿದಿದ್ದರಿಂದ ತಮ್ಮ ಪೂರ್ವಜರ ಸಂಸ್ಮರಣೆಗಾಗಿ ಈ ರೀತಿಯ ಪ್ರಭಾವಳಿಯನ್ನು ಮಾಡಿಸಿರಬೇಕು.

ಕಳಸದ ಚಂಬು, ಯೋಗದಂಡದ ರೇಖಾಚಿತ್ರ, ಸುಖಾಸೀನ ಶಿವಯೋಗಿ ಮಾಟವಾದ ಜಟೆಯನ್ನು ಕಟ್ಟಿದ್ದಾನೆ. ಉದ್ದನೆಯ ಗಡ್ಡವನ್ನು ಬಿಡಲಾಗಿದೆ. ಪಕ್ಕದಲ್ಲಿ ಹೂವಿನ ರೇಖಾಚಿತ್ರವಿದೆ. ಪೀಠಸ್ಥ ಶಿವಲಿಂಗುವಿನ ಉಬ್ಬು ಶಿಲ್ಪವಿದೆ. ಈ ಫಲಕ ಒಂದು ಸುಳುಹು ನೀಡುತ್ತದೆ. ಮಲ್ಲಿಶೆಟ್ಟಿ, ಮತ್ತು ಪರುವತನಾಯಕರ ಮನೆತನಕ್ಕೆ, ಶಿವಯೋಗಿಯ

ಅಥವಾ ವೀರಶೈವ ಸ್ವಾಮಿಯ ಮಾರ್ಗದರ್ಶನ ಸಿಕ್ಕಿರಬೇಕು. ಅವರನ್ನು ಕುಲಗುರುವೆಂದು ಸ್ವೀಕರಿಸಿರಬೇಕು. ಅವರ ಸ್ಮರಣಾರ್ಥ ಪ್ರಭಾವಳಿಯಲ್ಲಿ ಉಬ್ಬುಶಿಲ್ಪ ನಿರ್ಮಾಣ ಮಾಡಿರಬೇಕು. ಈ ಪ್ರಭಾವಳಿಯ ನಿರ್ಮಾಣದ ಸಮಯದಲ್ಲೇ ಬಹಳ ಸುಂದರವಾದ ಹಿತ್ತಾಳೆ ಕುದುರೆವಾಹನ ನಿರ್ಮಾಣವಾಗಿದೆ.

ಈ ದೇವಾಲಯದ ಅಭಿಮುಖವಾಗಿ ಇರುವ ರಸ್ತೆಬದಿಯ ಅಶ್ವತ್ಥ ವೃಕ್ಷದ ಬದಿಯಲ್ಲಿ ಈ ದೇವಾಲಯಕ್ಕೆ ಸೇರಿದ ಲಿಂಗಮುದ್ರೆ ಕಲ್ಲು ಮತ್ತು ಗಣಪತಿ ವಿಗ್ರಹ ಇದೆ. ಬಹಳ ಹಿಂದಿನ ಒಂದು ಗಟ್ಟಿಯಾದ ಆಚರಣೆ ಉಳಿದುಕೊಂಡು ಬಂದಿದೆ. ತುಮಕೂರು ಕೆರೆ ಕೋಡಿ ಬಿದ್ದಾಗಲೆಲ್ಲಾ ಕೋಡಿ ಬಸವೇಶ್ವರನಿಗೆ ತೆಪ್ಪೋತ್ಸವ ಮಾಡಿಸಲಾಗುತ್ತದೆ. ಈ ದೇವಾಲಯದಲ್ಲಿ ತುಮಕೂರಿನ ಎಲ್ಲಾ ಕೋಮಿನ ಭಕ್ತಾದಿಗಳು ಕೆರೆ ಕೋಡಿಯಾದಾಗ ಪೂಜೆ ಸಲ್ಲಿಸುವುದು ಸಂಪ್ರದಾಯ. ತುಮಕೂರು ನಗರದಲ್ಲಿ ಪ್ರಾಚೀನ ನಾಗರಕಲ್ಲು ಇರುವುದೇ ಕೋಡಿ ಬಸವೇಶ್ವರ ದೇವಾಲಯ ಪಕ್ಕ ಇರುವ ಕೆರೆಯ ಏರಿಯ ಮೇಲೆ. ಈಗಲೂ ಭಾದ್ರಪದ ಮಾಸದ ತೃತೀಯ, ಚತುರ್ಥಿ, ಪಂಚಮಿ ಮತ್ತು ಶ್ರಾವಣ ಮಾಸದ ಪಂಚಮಿ ನಾಗರು ಮಾಡಲು ಬರುವ ಭಕ್ತಾದಿಗಳು ಕೋಡಿ ಬಸವೇಶ್ವರನಿಗೆ ಪೂಜೆ ಮಾಡಿಸುವುದು ಸಂಪ್ರದಾಯ.

ವಿಜಯನಗರ ಕಾಲದ ಈ ದೇವಾಲಯದಲ್ಲಿ ದ್ವಿಕಾಲ ಪೂಜಾದಿಗಳು ನಡೆಯುತ್ತವೆ. ಶ್ರಾವಣಮಾಸ, ಭಾದ್ರಪದ ಮಾಸ, ಕಾರ್ತಿಕ ಮಾಸ, ಧನುರ್‌ಮಾಸದಲ್ಲಿ ವಿಶೇಷವಾದ ಪೂಜಾದಿಗಳನ್ನು ಮಾಡಲಾಗುತ್ತದೆ. ವೃಷಭೇಶ್ವರನ ಮುಂದೆ ಪಾದದ ಹತ್ತಿರ ದೀರ್ಘದಂಡ ನಮಸ್ಕಾರ ಮಾಡುತ್ತಾ ಇರುವ ಭಕ್ತರ ರೇಖಾಚಿತ್ರವಿದ್ದು ಆ ರೇಖಾ ಚಿತ್ರಗಳು ಮಲ್ಲಿಶೆಟ್ಟಿ ಮತ್ತು ಪರುವತನಾಯಕನದೆ. ಈ ಎಲ್ಲಾ ಊಹೆಗೂ ಒಂದು ಲಿಖಿತ ದಾಖಲೆ ದೊರೆತರೆ ಸ್ಪಷ್ಟವಾಗುತ್ತದೆ. ಈಗ ಈ ದೇವಸ್ಥಾನದ ಜವಾಬ್ದಾರಿ ಹೊತ್ತಿರುವ ತುಮಕೂರು ನಗರ ವೀರಶೈವ ಸಮಾಜ ಸೇವಾ ಸಮಿತಿಯ ಅಧ್ಯಕ್ಷರಾದ ಶ್ರೀ ಜಿ.ಆರ್.ಶಿವಕುಮಾರ್‌ರವರಿಗೆ ಮತ್ತು ಪದಾಧಿಕಾರಿಗಳಿಗೆ ಲೇಖಕರ ಕೃತಜ್ಞಾಪೂರ್ವಕ ಧನ್ಯವಾದಗಳು.



ತುಮಕೂರು
ಕೋಡಿ ಬಸವೇಶ್ವರ
ಸ್ವಾಮಿಯ
ಉತ್ಸವಮೂರ್ತಿ
ಪ್ರಭಾವಳಿ ಸಹಿತ



ತುಮಕೂರು ಕೋಡಿ ಬಸವೇಶ್ವರ ಸ್ವಾಮಿಯ ಉತ್ಸವಮೂರ್ತಿ ಪ್ರಭಾವಳಿ



ತುಮಕೂರು ಕೋಡಿ ಬಸವೇಶ್ವರ ಸ್ವಾಮಿಯ ಉತ್ಸವಮೂರ್ತಿ ಪ್ರಭಾವಳಿಯ ಇನ್ನೊಂದು ಭಾಗ

೨೬. ಹಂಪಿ ವಿರೂಪಾಕ್ಷನಿಗೆ ಎದುರು ಬಸವಣ್ಣಗಳು

ವೈ. ಹನುಮಂತರೆಡ್ಡಿ

ಸಾಮಾನ್ಯವಾಗಿ ಶೈವ ದೇವಾಲಯಗಳಲ್ಲಿ, ಶಿವನಮೂರ್ತಿ ಅಥವಾ ಆತನ ಪ್ರಾತಿನಿಧಿಕವಾಗಿರುವ 'ಶಿವಲಿಂಗ'ದ ಎದುರು ಬಸವನ ಮೂರ್ತಿಯನ್ನು ಸ್ಥಾಪಿಸಿರುವುದು ಕಂಡುಬರುತ್ತದೆ. ಶಿವನ ವಾಹನ 'ನಂದಿ' ಅಥವಾ 'ಬಸವ' ಆಗಿರುವುದೇ ಇದಕ್ಕೆ ಕಾರಣ. ಒಳಗಡೆ ಅಂತರಾಳ, ಅಥವಾ ಸಭಾಮಂಟಪದಲ್ಲಿ, ಬಸವನ ಮೂರ್ತಿಯನ್ನು ಲಿಂಗಕ್ಕೆ ಅಭಿಮುಖವಾಗಿ (ಎದುರಾಗಿ) ಸ್ಥಾಪಿಸಲಾಗಿರುತ್ತದೆ. ಹಂಪೆ ವಿರೂಪಾಕ್ಷ ದೇವಾಲಯದಲ್ಲಿ ಸಭಾಮಂಟಪದ ಮಧ್ಯದ ವೇದಿಕೆಯ ಮೇಲೆ, ವಿರೂಪಾಕ್ಷ ಲಿಂಗಕ್ಕೆ ಅಭಿಮುಖವಾಗಿ ಸುಮಾರು 3' ಎತ್ತರದ ಬಸವಣ್ಣನ ಮೂರ್ತಿಯನ್ನು ಸ್ಥಾಪಿಸಲಾಗಿದೆ. ಇದೇ ದೇವಸ್ಥಾನದ ಪ್ರಾಕಾರದಲ್ಲಿರುವ ಚಿಕ್ಕ ಕಾಲುವೆಯ ಮೇಲೆ ಜೋಡಿ ಬಸವನ ಮೂರ್ತಿಯನ್ನು ಸ್ಥಾಪಿಸಿದ್ದಾರೆ. ಪೂರ್ವ ದಿಕ್ಕಿನ ಮಹಾದ್ವಾರದ ಒಳಭಾಗದಲ್ಲಿ 3 ತಲೆಗಳು, ಒಂದು ದೇಹದ ಸುಮಾರು 1' ಎತ್ತರದ ವಿಶಿಷ್ಟವಾದ ಮತ್ತು ಅಪರೂಪ 'ಬಸವನ ಮೂರ್ತಿ' ಇದೆ. ಇದರ ೩ ಮುಖಗಳು 'ಬ' 'ಸ' 'ವ' ಎಂಬ ಮೂರು ಅಕ್ಷರಗಳನ್ನು ಅರುಹುವಹವಂತೆ ಭಾಸವಾಗುತ್ತದೆ. ಇವೆಲ್ಲಾ ದೇವಾಲಯದ ಒಳಭಾಗದಲ್ಲಿರುವ ಮೂರ್ತಿಗಳು.

ಎದುರು ಬಸವಣ್ಣ

ಶ್ರೀ ವಿರೂಪಾಕ್ಷ ದೇವಾಲಯದ ಮಹಾದ್ವಾರದಿಂದ ಪೂರ್ವ ದಿಕ್ಕಿಗೆ ಸುಮಾರು 3/4 ಕಿ.ಮೀ. ಉದ್ದದ ರಾಜಬೀದಿ ಇದೆ. ಹಿಂದೆ ಇದನ್ನೇ ವಿರೂಪಾಕ್ಷ ಬಜಾರ್ ಎಂದು ಕರೆಯಲಾಗುತ್ತಿತ್ತು. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಈ ಬಜಾರದಲ್ಲಿ ಮುತ್ತು ರತ್ನಗಳ ವ್ಯಾಪಾರ ಜರುಗುತ್ತಿತ್ತು. ಈ ಬೀದಿಯ ಕೊನೆಗೆ ಗುಡ್ಡದ ಅಂಚಿನಲ್ಲಿರುವ ಮಂಟಪದಲ್ಲಿ ಪಶ್ಚಿಮಾಭಿಮುಖವಾಗಿ, ಅಂದರೆ ವಿರೂಪಾಕ್ಷ ಲಿಂಗಕ್ಕೆ ಅಭಿಮುಖವಾಗಿ, ದೊಡ್ಡದಾದ ಬಸವಣ್ಣನ ಮೂರ್ತಿಯನ್ನು ಅಲ್ಲೇ ಇರುವ ಶಿಲೆಯಲ್ಲಿ ಖಂಡರಿಸಿ ನಿರ್ಮಿಸಲಾಗಿದೆ. ಕುಳಿತ ಭಂಗಿಯಲ್ಲಿರುವ ಈ ಮೂರ್ತಿಯ ಎತ್ತರ ಸುಮಾರು 12' ಇದ್ದು, ಎತ್ತರಕ್ಕೆ ತಕ್ಕಂತೆ ಪ್ರಮಾಣಬದ್ಧವಾದ ಅವಯವಗಳನ್ನು ನಿರ್ಮಿಸಲಾಗಿದೆ. ಪ್ರತೀ ವರ್ಷ ಚೈತ್ರ ಶುದ್ಧ ಪೂರ್ಣಿಮೆ ದಿನ ಜರುಗುವ ಶ್ರೀ ವಿರೂಪಾಕ್ಷ ದೇವರ ರಥ ದೇವಸ್ಥಾನದಿಂದ ಇಲ್ಲಿಗೆ ಬಂದು, ಈ ಬಸವಣ್ಣನ ಮೂರ್ತಿಗೆ ಪೂಜೆ ಸಲ್ಲಿಸಿ ಪುನಃ

ಮೂಲಸ್ಥಳಕ್ಕೆ ವಾಪಸು ಹೋಗುತ್ತದೆ. ಈ ಪ್ರಕಾರ ದೇವರ ರಥವನ್ನು ದೇವಾಲಯದಿಂದ ನಿರ್ದಿಷ್ಟವಾದ ದೂರದವರೆಗೆ ಎಳೆದು ತರುವ, ನಿಗದಿತ ಸ್ಥಳದಲ್ಲಿ 'ಬಸವಣ್ಣ'ನ ಶಿಲಾಮೂರ್ತಿಯನ್ನು ಸ್ಥಾಪಿಸಿರುವುದು ಕಂಡುಬರುತ್ತದೆ. ದೇವಾಲಯಗಳ, ಮಠ ಮಾನ್ಯಗಳ ಭೂಮಿಯ ಮೇರೆಯಲ್ಲಿ 'ಲಿಂಗ ಮುದ್ರೆ' ಇರುವ ಕಲ್ಲುಗಳನ್ನು (ಲಿಂಗ ಮುದ್ರೆ ಕಲ್ಲು) ಸ್ಥಾಪಿಸಿರುವಂತೆ, ರಥದ ಪ್ರಯಾಣದ ಧೂರದ ಮೇರೆಯನ್ನು ನಿಗದಿ ಪಡಿಸಿ ಸ್ಥಾಪಿಸಿರುವ 'ಬಸವಣ್ಣನ ಮೂರ್ತಿ'ಗೆ 'ಎದುರು ಬಸವಣ್ಣ'ನೆಂದು ವಾಡಿಕೆಯಲ್ಲಿ ಕರೆಯುತ್ತಾರೆ. ಹಂಪಿಯಲ್ಲಿ ಶ್ರೀ ವಿರೂಪಾಕ್ಷ ದೇವರಿಗೆ ಮೇಲೆ ಬೀಳಿಸಿದಂತೆ 'ಎದುರು ಬಸವಣ್ಣ' ಮೂರ್ತಿಯನ್ನು ಸ್ಥಾಪಿಸಿರುವುದು ಸರಿಯಷ್ಟೆ. ಇಲ್ಲಿರುವ 'ಎದುರು ಬಸವಣ್ಣ'ನಲ್ಲದೆ, ಇದೇ ದೇವರಿಗೆ ಬೇರೆ ವಾರುಗಳಲ್ಲಿಯೂ 'ಎದುರು ಬಸವಣ್ಣ'ನ ಮೂರ್ತಿಗಳಿರುವ ಬಗ್ಗೆ ಶೋಧನೆ ಮಾಡಿರುವುದನ್ನೇ ತಿಳಿಸುವುದು ಈ ಲೇಖನದ ಉದ್ದೇಶ

ಕುರುಗೋಡು

ಕುರುಗೋಡು ಐತಿಹಾಸಿಕ ಹಾಗೂ ಧಾರ್ಮಿಕ ಮಹತ್ವದ ಕ್ಷೇತ್ರ. ಹಂಪೆಯಿಂದ ಕುರುಗೋಡು ಪಟ್ಟಣ ಸುಮಾರು 50 ಕಿ.ಮೀ. ದೂರದಲ್ಲಿ ಪೂರ್ವದಿಕ್ಕಿನಲ್ಲಿದೆ. ಇವೆರಡೂ ಐತಿಹಾಸಿಕ ಮತ್ತು ಸಾಂಸ್ಕೃತಿಕವಾಗಿ ಪರಸ್ಪರ ಸಂಬಂಧ ಹೊಂದಿವೆ. ಕುರುಗೋಡು ಕ್ರಿ.ಶ. 950 ರಿಂದ 1200 ರವರೆಗೆ 'ಬಲ್ಲಕುಂದೆ ಮುನ್ನೂರು ನಾಡಿನ' ರಾಜಧಾನಿಯಾಗಿತ್ತು. ಆ ಕಾಲದಲ್ಲಿ 'ಹಂಪೆ' ಕುರುಗೋಡು ನಾಡಿಗೆ ಒಳಪಟ್ಟಿತ್ತು. ಕ್ರಿ.ಶ. 1336ರಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ನಂತರ ಕುರುಗೋಡು ಪ್ರದೇಶ ಆ ಸಾಮ್ರಾಜ್ಯದಲ್ಲಿ ವಿಲೀನಗೊಂಡಿತ್ತು. ಈ ಸಾಮ್ರಾಜ್ಯದ ಕಾಲದಲ್ಲಿ ಕುರುಗೋಡಿನಲ್ಲಿ ವಿಜಯನಗರ ಶೈಲಿಯ ಕೆಲವು ದೇವಾಲಯಗಳು ಮತ್ತು ಮೂರ್ತಿಶಿಲ್ಪಗಳು ನಿರ್ಮಾಣಗೊಂಡಿವೆ. ಅವುಗಳಲ್ಲಿ ಕುರುಗೋಡಿನ ದೊಡ್ಡ ಬಸವೇಶ್ವರ ದೇವಾಲಯ ವೈಶಿಷ್ಟ್ಯಉಳ್ಳದ್ದು. ಇದು ಹಂಪಿ ವಿರೂಪಾಕ್ಷನಿಗೆ 'ಎದುರು ಬಸವಣ್ಣ' ಎಂಬ ಐತಿಹ್ಯವಿದೆ.

I ಶ್ರೀ ದೊಡ್ಡ ಬಸವೇಶ್ವರ 'ನಂದಿ' ವಿಗ್ರಹ : ವಿರೂಪಾಕ್ಷನಿಗೆ ಎದುರು ಬಸವಣ್ಣ

ಕುರುಗೋಡಿನ ಮುಂಭಾಗದಲ್ಲಿ ಭವ್ಯವೂ, ವಿಶಾಲವೂ ಮತ್ತು ಪಶ್ಚಿಮಾಭಿ ಮುಖವಾಗಿ ಮಹಾದ್ವಾರವುಳ್ಳ ಎತ್ತರದ ಜಗಲಿಯ ಮೇಲೆ ನಿರ್ಮಾಣವಾಗಿರುವ ದೇವಾಲಯವಿದೆ. ಇದು 12 ಸ್ತಂಭಗಳಿಂದ ಕೂಡಿದ ಸಭಾಮಂಟಪ, ಅಂತರಾಳ ಮತ್ತು 25x20 ಅಡಿಗಳ ವಿಸ್ತೀರ್ಣವಾದ ಗರ್ಭಗೃಹವನ್ನೊಳಗೊಂಡಿದೆ. ಗರ್ಭಗೃಹದಲ್ಲಿ

ಪ್ರಾಕೃತವಾಗಿ ಇರುವ ಶಿಲೆಯಲ್ಲಿ 14' ಎತ್ತರದ ಕುಳಿತ ಭಂಗಿಯ ಬೃಹದಾಕಾರದ 'ದೊಡ್ಡ ಬಸವಣ್ಣ'ನ ಮೂರ್ತಿಯನ್ನು ನಿರ್ಮಿಸಲಾಗಿದೆ. ಈ ಮೂರ್ತಿಯ ಸುತ್ತಳತೆ 42', ಭುಜದಿಂದ ಬಾಲದವರೆಗೆ ಇರುವ ಮೈಯ ಉದ್ದ 18', ದಪ್ಪ ಒಂದು ಬದಿಯಿಂದ ಇನ್ನೊಂದು ಬದಿಗೆ 21' ಅಡಿ. ಇಂಥಾ ದೊಡ್ಡ ಗಾತ್ರವನ್ನು ಹೊಂದಿರುವ ಈ ಬಸವಣ್ಣನ ಮೂರ್ತಿಯನ್ನು ಔಚಿತ್ಯಪೂರ್ಣವಾಗಿ `ದೊಡ್ಡ ಬಸವೇಶ್ವರ' ಎಂದು ಕರೆಯುತ್ತಿದ್ದಾರೆ. ಈ ದೊಡ್ಡ ಬಸವಣ್ಣ (ನಂದಿ ಮೂರ್ತಿ' ಹಂಪೆ ವಿರೂಪಾಕ್ಷನಿಗೆ 'ಎದುರು ಬಸವಣ್ಣ' ನೆಂಬ ಪ್ರತೀತಿ ಇದ್ದು, ಪರಿಶೀಲನೆ ಮಾಡಲಾಗಿ, ಈ ಕೆಳಗಿನ ಅಂಶಗಳು ಇದನ್ನು ಪುಷ್ಟೀಕರಿಸುತ್ತವೆ.

1. ಹಂಪೆ ವಿರೂಪಾಕ್ಷ ದೇವಾಲಯ ಮತ್ತು ದೇವರು (ಲಿಂಗ) ಪೂರ್ವಾಭಿಮುಖ ವಾಗಿದ್ದು, ಕುರುಗೋಡಿನ `ದೊಡ್ಡ ಬಸವೇಶ್ವರ' ದೇವಾಲಯ ಮತ್ತು ಮೂರ್ತಿಯು (ನಂದಿ) ಪಶ್ಚಿಮಾಭಿಮುಖವಾಗಿ, ಅಂದರೆ ವಿರೂಪಾಕ್ಷನಿಗೆ ಸರಿಯಾಗಿ ಎದುರು ಮುಖವಾಗಿದೆ. ಈ ಎರಡೂ ದೇವಾಲಯಗಳು 150^{0}-201^{0} ಒಂದೇ ಅಕ್ಷಾಂಶದಲ್ಲಿವೆ.

2. ಹಂಪೆಯಲ್ಲಿ ವಿರೂಪಾಕ್ಷನಿಗೆ ಇರುವ 'ಎದುರು ಬಸವಣ್ಣ'ನ ಮೂರ್ತಿಗೂ ಕುರುಗೋಡಿನಲ್ಲಿರುವ 'ದೊಡ್ಡ ಬಸವಣ್ಣ' ಮೂರ್ತಿಗೂ ಆಕಾರ, ಗಾತ್ರ, ಶೈಲಿ ನಿರ್ಮಾಣ ಮತ್ತು ಕಾಲ ಮೊದಲಾದವುಗಳಲ್ಲಿ ತುಂಬಾ ಹೋಲಿಕೆ ಇದೆ.

3. ದೊಡ್ಡ ಬಸವೇಶ್ವರ ದೇವಸ್ಥಾನದಲ್ಲಿ ಮೂರ್ತಿಯ ಎದುರಿನಲ್ಲಿ ಪ್ರಾಕಾರದ ಒಳಗಡೆ ಒಂದು ಮತ್ತು ಹೊರಗಡೆ ಒಂದು ದೀಪಸ್ತಂಭಗಳಿದ್ದು, ಈ ಗುಡಿಯ ಹಿಂಭಾಗದಲ್ಲಿರುವ ಸಾಲು ಮಂಟಪದಲ್ಲಿ ಮತ್ತೊಂದು 'ದೀಪಸ್ತಂಭ'ವಿದೆ. ಮೂರ್ತಿಯ ಮುಂದುಗಡೆ ದೀಪಸ್ತಂಭ ಇರುವುದು ಸಾಮಾನ್ಯ. ಆದರೆ ಗರ್ಭಗುಡಿಯ ಹಿಂದುಗಡೆ ಇರುವುದು ತೀರಾ ಅಪೂರಾಪ. ಇದು ದೊಡ್ಡ ಬಸವೇಶ್ವರ ಮೂರ್ತಿಗಾಗಿ ಮಾಡಿದಲ್ಲಿ, ಅಂದರೆ ಹಂಪೆ ವಿರೂಪಾಕ್ಷ ದೇವರಿಗೆ, ಎದುರುಗಡೆ ದಿಕ್ಕಿಗೆ (ಪೂರ್ವಕ್ಕೆ)ಆ ಅದೇವರಿಗಾಗಿ ಸಾಂಕೇತಿಕವಾಗಿ ನಿರ್ಮಿಸಿದ್ದಾಗಿರಬೇಕು. ಸಾಮಾನ್ಯವಾಗಿ ಎಲ್ಲಾ ದೇವಾಲಯಗಳಲ್ಲಿ ಈಶ್ವರ ಲಿಂಗಕ್ಕೆ ಅಭಿಮುಖವಾಗಿ ಬಸವನ ವಿಗ್ರಹವಿದ್ದು, ಅದೇ ದಿಕ್ಕಿನಲ್ಲಿ ಅನತಿ ದೂರದಲ್ಲಿ ದೀಪ ಸ್ತಂಭವಿರುವುದು ಸಂಪ್ರದಾಯ. ಅದೇ ರೀತಿ ವಿರೂಪಾಕ್ಷನಿಗೆ ಅಭಿಮುಖವಾಗಿ ಈ ದೊಡ್ಡ ಬಸವಣ್ಣನ ವಿಗ್ರಹ ನಿರ್ಮಿಸಿದ್ದು, ಇದರ ಭಾಗದಲ್ಲಿ ಅಂದರೆ ಲಿಂಗಕ್ಕೆ ಎದುರುಗಡೆಯಲ್ಲಿ ಈ ದೀಪಸ್ತಂಭವನ್ನು ಸಾಂಕೇತಿಕವಾಗಿ ನಿರ್ಮಿಸಲಾಗಿದೆ.

4. ದೊಡ್ಡ ಬಸವೇಶ್ವರ ಸ್ವಾಮಿಯ ರಥೋತ್ಸವ ಕುರುಗೋಡಿನಲ್ಲಿ ಪ್ರತೀ ವರ್ಷ ಫಾಲ್ಗುಣ ಶುದ್ಧ ಪೌರ್ಣಮಿ ದಿನ ಜರುಗುತ್ತದೆ. ಈ ರಥವು ಈ ದೇವಸ್ಥಾನದಿಂದ ಪೂರ್ವದಿಕ್ಕಿಗೆ $^{3}/_{4}$ ಕಿ.ಮೀ. ದೂರದಲ್ಲಿರುವ ಎದುರು ಬಸವಣ್ಣನವರೆಗೆ ಹೋಗಿ

ವಾಪಸ್ಸು ಬರುತ್ತದೆ. ಈ ಎದುರು ಬಸವಣ್ಣ ದೊಡ್ಡ ಬಸವೇಶ್ವರನಿಗೆ ಎದುರುಗಡೆ ದಿಕ್ಕಿಗೆ ಇರದೆ, ಹಿಂದುಗಡೆ ಪೂರ್ವದಿಕ್ಕಿನಲ್ಲಿದೆ. ಆದ್ದರಿಂದ ಇದು ಕೂಡ ವಿರೂಪಾಕ್ಷನಿಗೆ ಅಭಿಮುಖವಾಗಿದೆ. ಈ ರಥದಲ್ಲಿ ಬಸವಣ್ಣನ ಒಂದು ಬೆಳ್ಳಿ ವಿಗ್ರಹದ ಜೊತೊಗೆ ಉಮಾಮಹೇಶ್ವರ ಉತ್ಸವಮೂರ್ತಿಗಳನ್ನು ರಥದಲ್ಲಿ ಇಟ್ಟು ಎಳೆಯಲಾಗುತ್ತದೆ. ಆದ್ದರಿಂದ ಈ ಉಮಾ ಮಹೇಶ್ವರ ಮೂರ್ತಿಗಳು, ಹಂಪೆಯ ವಿರೂಪಾಕ್ಷ ಮತ್ತು ಹಂಪಮ್ಮ ದೇವತೆಗಳ ಪ್ರತೀಕವಾಗಿವೆ.

5. ವಿಜಯನಗರ ಸಾಮ್ರಾಟ ಕೃಷ್ಣದೇವರಾಯನು ವಿರೂಪಾಕ್ಷ ದೇವಾಲಯದ ವಿಸ್ತೃತಗೊಂಡ ಮಹಾಮಂಟಪವನ್ನು ಕ್ರಿ.ಶ. 1510 ರಲ್ಲಿ ನಿರ್ಮಿಸಿದನು. ಕೃಷ್ಣದೇವರಾಯನ ಅಧಿಕಾರಿ ಕೃಷ್ಣಪ್ಪನಾಯಕನು, ತನ್ನ ದೊರೆಗೆ ಪುಣ್ಯವಾಗಲೆಂದು ಕುರುಗೋಡಿನ ದೊಡ್ಡ ಬಸವೇಶ್ವರ ದೇವರ ಅಮೃತಪಡಿಗೆ ಹೂದೋಟ, ಗದ್ದೆಗಳನ್ನು ದಾನವಾಗಿ ನೀಡಿದ ಬಗ್ಗೆ ಈ ದೇವಸ್ಥಾನದ ಬಂಡೆಯ ಮೇಲಿರುವ ಕ್ರಿ.ಶ. 1528ರ ಶಾಸನದಲ್ಲಿ ತಿಳಿಸಲಾಗಿದೆ.

6. ಕುರುಗೋಡಿನ ದೊಡ್ಡ ಬಸವೇಶ್ವರ ದೇವಾಲಯ ಮತ್ತು ಅದರ ಪ್ರಾಕಾರ ಮಹಾದ್ವಾರಗಳ ಮೇಲೆ ನಿರ್ಮಿಸಿರುವ ಗೋಪುರಗಳು ವಿಜಯನಗರದ ವಾಸ್ತು ಶೈಲಿಯಲ್ಲಿವೆ. ಅದೇ ರೀತಿ ಹಂಪೆಯಲ್ಲಿ ನಿರ್ಮಿಸಿರುವಂತೆ, ಕುರುಗೋಡು ದೊಡ್ಡ ಬಸವೇಶ್ವರ ಮೂರ್ತಿಯೂ ಬೃಹದಾಕಾರದಲ್ಲಿ ವಿಜಯನಗರ ಶೈಲಿಯಲ್ಲಿ ಅದೇ ಕಾಲದಲ್ಲಿ ನಿರ್ಮಾಣವಾಗಿದೆ.

7. ಈ ದೇವಾಲಯ ಪ್ರತ್ಯೇಕವಾಗಿ ಬಸವಣ್ಣನ ಮೂರ್ತಿಗಾಗಿ ನಿರ್ಮಿಸಿದ್ದು, ಶಿವಲಿಂಗದ ಎದುರಿಗೆ ಇರುವ ಮೂರ್ತಿಯಂತೆ ನಿರ್ಮಿಸಿಲ್ಲ.

ಮೇಲೆ ತಿಳಿಸಿರುವ ಎಲ್ಲಾ ವಿಷಯಗಳ ಬಗ್ಗೆ ಪರಿಶೀಲನೆ ಮಾಡಿ ನೋಡಲಾಗಿ, ಹಂಪೆ ವಿರೂಪಾಕ್ಷ ಲಿಂಗಕ್ಕೆ, ಕುರುಗೋಡು ದೊಡ್ಡ ಬಸವಣ್ಣನ ವಿಗ್ರಹ, 'ಎದರು ಬಸವಣ್ಣ'ನ ಪ್ರತೀಕವಾಗಿದೆ.

II ಕುರುಗೋಡಿನ ವಜ್ರಬಂಡಿ ಬಸವಣ್ಣ

ಕುರುಗೋಡಿನಿಂದ ಪಶ್ಚಿಮಕ್ಕೆ 4 ಕಿ.ಮೀ. ದೂರದಲ್ಲಿ ಕುರುಗೋಡು- ಮುಸ್ಟಗಟ್ಟೆ ರಸ್ತೆಯ ಎಡಗಡೆಯ ಬೆಟ್ಟದ ಅಂಚಿನಲ್ಲಿ `ವಜ್ರಬಂಡೆಬಸಪ್ಪ'ನ ದೇವಾಲಯವಿದೆ. ಇದು 10'x8' ವಿಸ್ತೀರ್ಣದ ಗರ್ಭಗೃಹ ಮತ್ತು ತೆರೆದ ಸಭಾ ಮಂಟಪವನ್ನು ಹೊಂದಿದೆ. ಈ ದೇವಾಲಯದ ಅದಿಷ್ಠಾನ ಭಾಗ ಮಣ್ಣಿನಲ್ಲಿ ಹೂತಿದ್ದು, ತ್ರಿಪಟ್ಟ, ಕುಮುದ, ಪದ್ಮಭಾಗ ಮಾತ್ರ ಕಾಣಿಸುತ್ತಿದೆ. ಇದು ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ನಿರ್ಮಾಣಗೊಂಡಿದ್ದು, ತದನಂತರದಲ್ಲಿ ಜೀರ್ಣೋದ್ಧಾರಗೊಳಿಸಲಾಗಿದೆ. ಈ

ದೇವಾಲಯದಲ್ಲಿ ಪ್ರಾಕೃತಿಕವಾಗಿದ್ದ ದೊಡ್ಡ ಗುಂಡಿನಲ್ಲಿ 5' ಎತ್ತರ, 6' ಉದ್ದ ಮತ್ತು ಸುಮಾರು 8 ಅಡಿ ಮೈಯ ಅಳತೆಯ ದೊಡ್ಡ ಬಸವಣ್ಣನ ಮೂರ್ತಿಯನ್ನು ನಿರ್ಮಿಸಲಾಗಿದೆ. ಈ ದೇವಾಲಯವೂ ಪ್ರತ್ಯೇಕವಾಗಿ ಬಸವಣ್ಣನ ಮೂರ್ತಿಗಾಗಿ ನಿರ್ಮಿಸಿದ್ದಾಗಿದೆ. ಈ ಮೂರ್ತಿಯೂ ಪಶ್ಚಿಮ ದಿಕ್ಕಿಗೆ, ಹಂಪೆಯ ವಿರೂಪಾಕ್ಷನಿಗೆ ಅಭಿಮುಖವಾಗಿದೆ. ಈ ಮೂರ್ತಿಯನ್ನು ಇಲ್ಲಿಯ ಜನರು 'ದೊಡ್ಡ ಬಸವಣ್ಣ'ನ ತಮ್ಮನೆಂದು ವಾಡಿಕೆಯಲ್ಲಿ ಕರೆಯುತ್ತಿದ್ದಾರೆ. ಈ ಮೂರ್ತಿ ಕೂಡ ದೊಡ್ಡ ಬಸವೇಶ್ವರ ಮೂರ್ತಿಯಂತೆ ಪಂಪಾಕ್ಷೇತ್ರವು ಅಧಿದೇವತೆ ವಿರೂಪಾಕ್ಷನಿಗೆ 'ಎದುರು ಬಸವಣ್ಣ'ನೆಂಬುದಾಗಿ ಗುರುತಿಸಲಾಗಿದೆ. ಶ್ರಾವಣ 3ನೇ ಸೋಮವಾರ ಇಲ್ಲಿ ವಿಶೇಷ ಉತ್ಸವ ಜರುಗುತ್ತದೆ.

III ಕೊಂಡದ ಬಸವಣ್ಣ

ಕುರುಗೋಡಿನಿಂದ ಪಶ್ಚಿಮಕ್ಕೆ 8 ಕಿ.ಮೀ. ದೂರದಲ್ಲಿ ರಾಮನ (ಕುಮಾರರಾಮ) ಗುಡ್ಡದ ಹಿಂಭಾಗದಲ್ಲಿ 'ಹಾಳು ಭಟ್ಟರ ಹಳ್ಳಿ'ಯ ಪಕ್ಕದಲ್ಲಿ 'ಕೊಂಡದ ಬಸವಣ್ಣ' ಗುಡಿ ಇದೆ. ಇದೂ ಮೂಲತಃ ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ನಿರ್ಮಾಣವಾಗಿದ್ದು, ನಂತರದಲ್ಲಿ ಜೀರ್ಣೋದ್ಧಾರಗೊಂಡಿದೆ. 9'x8' ಅಳತೆ ಗರ್ಭಗೃಹ ಮಾತ್ರ ಇರುವ ಗುಡಿಯಲ್ಲಿ ಪ್ರಾಕೃತಿಕವಾಗಿದ್ದ ಗುಂಡಿನಲ್ಲಿ 4' ಎತ್ತರ, 6' ಉದ್ದ ಮತ್ತು 8' ದಪ್ಪದ ಮೈಯ ಅಳತೆಯ ಬಸವಣ್ಣನನ್ನು ನಿರ್ಮಿಸಲಾಗಿದೆ. ಈ ಮೂರ್ತಿಯ ಮೈ, ಮುಖ ಮತ್ತು ಕತ್ತು ಅಗತ್ಯಕ್ಕಿಂತ ದಪ್ಪವಾಗಿದ್ದು ಕೋಡುಗಳು ಮೊಂಡಾಗಿವೆ. ಈ ಮೂರ್ತಿಯೂ ಹಂಪೆಯ ವಿರೂಪಾಕ್ಷನಿಗೆ ಅಭಿಮುಖವಾಗಿದೆ. ಅಲ್ಲದೆ ಗುಡಿಯೂ ಪ್ರತ್ಯೇಕವಾಗಿ 'ಬಸವಣ್ಣ' ನಿಗಾಗಿ ನಿರ್ಮಿಸಿದ್ದು, ಇದನ್ನು 'ಕೊಂಡದ ಬಸವಣ್ಣ'ನೆಂದು ಕರೆಯುತ್ತಾರೆ ಇದು ಹಾಳು ಊರಿನಲ್ಲಿದ್ದು ಪೂಜೆ, ಪುನಸ್ಕಾರಗಳು ಯಾವಾಗಲೂ ನಡೆಯುವುದಿಲ್ಲ. ಆದರೆ ಪ್ರತಿ ವರ್ಷ 'ಚೈತ್ರ ಶುದ್ಧ ಹುಣ್ಣಿಮೆ' ಅಂದರೆ ಹಂಪೆ ಹುಣ್ಣಿಮೆ ದಿನ ಮಾತ್ರ ವಿಶೇಷ ಪೂಜೆ ಅರ್ಚನೆಗಳು ಜರುಗುತ್ತವೆ. ಆ ದಿನ ಸೂರ್ಯಾಸ್ತವಾದ ಕೂಡಲೇ ಈ ಗುಡಿಯ ಮೇಲೆ ಹಂಪೆ ವಿರೂಪಾಕ್ಷನ ಕಡೆಗೆ ಮುಖ ಮಾಡಿ 'ದೊಡ್ಡದಾದ ಮಣ್ಣಿನ ಹರಿವಾಣದಲ್ಲಿ ಎಣ್ಣೆ ತುಂಬಿಸಿ ದೀಪ ಬೆಳಗಿಸುವ' ಪದ್ಧತಿ ಇಂದಿಗೂ ಇದೆ. ಈ ಎಲ್ಲಾ ಕಾರಣಗಳಿಂದ ಈ ಮೂರ್ತಿಯೂ ಹಂಪೆ ವಿರೂಪಾಕ್ಷನಿಗೆ 'ಎದುರು ಬಸವಣ್ಣ' ನೆಂದು ಪರಿಗಣಿಸ ಲಾಗಿದೆ.

ಸಮಾರೋಪ

ವಿಜಯನಗರ ಸಾಮ್ರಾಟರು, ಆ ಸಾಮ್ರಾಜ್ಯದ ವಿಸ್ತಾರ, ಘನತೆ, ಗೌರವ ಮತ್ತು ಪ್ರತಿಷ್ಠೆಯನ್ನು ಹೆಚ್ಚಿಸಿ, ಬೆಳೆಸುವ ದೃಷ್ಟಿಯಿಂದ ಈ ತರದ ನಿರ್ಮಾಣಗಳನ್ನು ರಾಜಧಾನಿಯ ಹೊರ ಪ್ರದೇಶದಲ್ಲಿ ಮಾಡಿರಬೇಕು. ಹಂಪಿ ಕ್ಷೇತ್ರವು, ವಿಜಯನಗರ

ಸಾಮ್ರಾಜ್ಯ ಸ್ಥಾಪನೆಗಿಂತ ಪೂರ್ವದಲ್ಲಿ, ಕುರುಗೋಡು ರಾಜಧಾನಿಯಾಗಿದ್ದ 'ಬಲ್ಲಕುಂದೆ 300 ನಾಡಿನ' ಆಡಳಿತಕ್ಕೊಳಪಟ್ಟಿದ್ದು, ಈ ಎರಡೂ ಸ್ಥಳಗಳು ಪರಸ್ಪರ ಐತಿಹಾಸಿಕ, ಸಾಂಸ್ಕೃತಿಕ ಸಂಬಂಧಗಳನ್ನು ಹೊಂದಿವೆ. ಕ್ರಿ.ಶ. 1199ರ ಹಂಪಿಯ ಶಾಸನದ ಪ್ರಕಾರ, ಕುರುಗೋಡಿನ ಕೊನೆಯ ದೊರೆ 'ವೀರಕಲಿದೇವರನು' ಹಂಪಿಯ ಮತಂಗ ಪರ್ವತದ ಮೇಲೆ ಸೈನ್ಯವನ್ನಿಟ್ಟು ತನ್ನ ಸಾಮಂತ ಮಾದಯ ನಾಯಕನನ್ನು, ಆ ಕ್ಷೇತ್ರದ ರಕ್ಷಣಾ ಕಾರ್ಯಕ್ಕಾಗಿ ನೇಮಿಸಿದ್ದ. ಶಾಸನ, ಕುರುಗೋಡಿನ ಮಹಾಜನರು ವಿರೂಪಾಕ್ಷ ಮತ್ತು ಹಂಪಮ್ಮ ದೇವರಿಗೆ ದಾನದತ್ತಿ ನೀಡಿದ ಬಗ್ಗೆ ಶ್ರುತಪಡಿಸುತ್ತದೆ. ಈ ಎಲ್ಲಾ ಸ್ಥಾಪನೆಗಳು 'ಹಂಪೆ'ಯೊಡನೆ ಕುರುಗೋಡಿನ ಸಾಂಸ್ಕೃತಿಕ ಸಂಬಂಧವನ್ನು ಸ್ಥಿರಸ್ಥಾಯಿಯಾಗಿ ಬೆಸೆಯುವ ಘನ ಉದ್ದೇಶದಿಂದ ಕೈಗೊಂಡಿರಬೇಕೆಂದು ತೋರುತ್ತದೆ.

೨೭. ಚಿತ್ರದುರ್ಗದ ಕೋಟೆಯ ಒಳಗಿನ ವಿಜಯನಗರದ ಕಲೆ ಮತ್ತು ವಾಸ್ತುಶಿಲ್ಪ ಶೈಲಿಯ ಕೆಲವು ದೇವಾಲಯಗಳು - ಒಂದು ಅಧ್ಯಯನ

ಎನ್.ಎಸ್. ಮಹಂತೇಶ

ಇತಿಹಾಸದ ಹಲವು ಅಂಶಗಳನ್ನು ತನ್ನ ಗರ್ಭದಲ್ಲಿ ಅಡಗಿಸಿಕೊಂಡಿರುವ ಚಿತ್ರದುರ್ಗವು ಪ್ರಾಚೀನ ಕಾಲದಿಂದಲೂ ಅತ್ಯಂತ ಮಹತ್ವ ಪಡೆದ ಸ್ಥಳವೆಂದರೆ ತಪ್ಪಾಗಲಾರದು. ಇತಿಹಾಸವನ್ನು ರಚಿಸುವ ಆಕರಗಳಲ್ಲಿ ದೇವಾಲಯಗಳ ಕಲೆ ಮತ್ತು ವಾಸ್ತುಶಿಲ್ಪ ಅಂಶವು ಬಹಳ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಈ ದೃಷ್ಟಿಯಿಂದ ಚಿತ್ರದುರ್ಗದ ಕೋಟೆಯ ಒಳಗಿನ ದೇವಾಲಯಗಳ ಬಗ್ಗೆ ಗಮನಿಸಿದಾಗ ಇಲ್ಲಿ ಸಾಕಷ್ಟು ದೇವಾಲಯ ಗಳು ಪ್ರಾಚೀನ ಕಾಲದಿಂದ ಚಿತ್ರದುರ್ಗ ಪಾಳೆಯಗಾರರ ಕಾಲದವರೆಗೂ ಬೆಳೆದು ಬಂದಿದೆ. ಈ ದೇವಾಲಯಗಳ ಕಲೆ ಮತ್ತು ವಾಸ್ತುಶಿಲ್ಪ ಶೈಲಿಯಲ್ಲಿ ಕಲ್ಯಾಣ ಚಾಲುಕ್ಯ, ಹೊಯ್ಸಳ, ವಿಜಯನಗರ, ನಂತರ ವಿಜಯನಗರ ಕಾಲದ ಅಥವಾ ಪಾಳೆಯಗಾರರ ಕಾಲದ ಕಲೆ ಮತ್ತು ವಾಸ್ತುಶಿಲ್ಪದ ಅಂಶಗಳು ಹಂತ ಹಂತವಾಗಿ ಬೆಳೆದು ಬಂದಿವೆ. ಹಾಗಾಗಿ ಪ್ರಸ್ತುತ ಲೇಖನದ ಶೀರ್ಷಿಕೆ. "ಚಿತ್ರದುರ್ಗದ ಕೋಟೆಯ ಒಳಗಿನ ವಿಜಯನಗರದ ಕಲೆ ಮತ್ತು ವಾಸ್ತುಶಿಲ್ಪ ಶೈಲಿಯ ಕೆಲವು ದೇವಾಲಯಗಳು ಒಂದು ಅಧ್ಯಯನ" ಎಂಬುದಾಗಿದ್ದು ವಿಜಯನಗರ ಕಲೆ ಮತ್ತು ವಾಸ್ತುಶಿಲ್ಪ ಶೈಲಿಯ ಕೆಲವು ದೇವಾಲಯಗಳ ಬಗ್ಗೆ ಅಧ್ಯಯನ ಮಾಡಲಾಗಿದೆ.

ಪ್ರಸ್ತುತ ಅಧ್ಯಯನಕ್ಕೆ ಕೆಲವು ಶಾಸನಗಳನ್ನು, ಕ್ಷೇತ್ರಕಾರ್ಯದ ಹಲವು ಅಂಶಗಳನ್ನು ಹಾಗೂ ಇತರೇ ಸಾಹಿತ್ಯಿಕ ಆಕರಗಳನ್ನು ಬಳಸಿಕೊಳ್ಳಲಾಗಿದೆ.

ಚಿತ್ರದುರ್ಗದ ಕೋಟೆಯಲ್ಲಿನ ಕೆಲವು ದೇವಾಲಯಗಳು ಪ್ರಾರಂಭದಲ್ಲಿ ಕಲ್ಯಾಣ ಚಾಲುಕ್ಯ ವಾಸ್ತುಶಿಲ್ಪ ಶೈಲಿಯಲ್ಲಿ ಪ್ರಾರಂಭಗೊಂಡು ನಂತರ ಅವು ವಿಜಯನಗರ ಕಾಲದ ಕಲೆ ಮತ್ತು ವಾಸ್ತುಶಿಲ್ಪ ಶೈಲಿಯಲ್ಲೂ ವಿಸ್ತಾರಗೊಂಡಿವೆ. ಅವುಗಳಲ್ಲಿ ಕೋಟೆ ಯಲ್ಲಿನ 'ಶ್ರೀ ಗೋಪಾಲಕೃಷ್ಣ ದೇವಾಲಯ'ದ ಕಲೆ ಮತ್ತು ವಾಸ್ತುಶಿಲ್ಪ ಶೈಲಿಯನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದಾಗ ಇದರ ಗರ್ಭಗುಡಿ, ಅಂತರಾಳ, ಪ್ರದಕ್ಷಿಣಾ ಪಥಗಳು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಾಣಗೊಂಡಿದ್ದು ಉಳಿದಂತೆ ರಂಗಮಂಟಪ ಹಾಗೂ ಮುಖಮಂಟಪ ವಿಜಯನಗರ ಕಾಲದ ಕಲೆ ಮತ್ತು ವಾಸ್ತುಶಿಲ್ಪ ಶೈಲಿಯಲ್ಲಿ ರಚನೆಗೊಂಡಿವೆ. ವಿಜಯನಗರ ಕಾಲದ ಕೆಲವು ದೇವಾಲಯಗಳಲ್ಲಿ

ಕಾಣಬರುವ ಒಂದು ವಿಶೇಷ ರೀತಿಯ ಸ್ತಂಭವೆಂದರೆ 'ಸಂಯೋಗ ಸ್ತಂಭ.' ಈ ಪ್ರಕಾರದಲ್ಲಿ ಒಂದೇ ಪೀಠದ ಮೇಲೆ ಒಂದು ಪ್ರಧಾನವಾದ ಸ್ತಂಭವನ್ನು ಅದರೊಂದಿಗೆ ಸಣ್ಣ ಸಣ್ಣ ಸ್ತಂಭಗಳನ್ನು ರಚಿಸಿರುತ್ತಾರೆ. ಒಟ್ಟಾರೆ ನೋಡಿದಾಗ ಅದು ಒಂದು ಸ್ತಂಭ ಸಮೂಹದಂತೆ ತೋರುತ್ತದೆ. ಈ ರೀತಿಯಾಗಿ ರಚಿಸುವ ಕಂಬವನ್ನು 'ಮಾನಸಾರ'ವು ಸಂಯೋಗ ಸ್ತಂಭ' ಎಂದು ಕರೆದಿದೆ.[1]

ಗೋಪಾಲಕೃಷ್ಣ ದೇವಾಲಯದಲ್ಲಿ ಎರಡು ವಿಧವಾದ ಶೈಲಿಯ ಸ್ತಂಭಗಳು ಕಂಡುಬರುತ್ತವೆ. ಮೊದಲನೆ ಶೈಲಿಯ ಸ್ತಂಭಗಳು ಮೇಲೆ ಹೇಳಿದಂತೆ ಸಂಯೋಗ ಸ್ತಂಭದ ವಿಭಿನ್ನ ಶೈಲಿಯನ್ನು ಹೊಂದಿವೆ. ರಂಗಮಂಟಪದಲ್ಲಿಯ ನಾಲ್ಕು ಸ್ತಂಭಗಳು ಸಂಯೋಗ ಸ್ತಂಭದವುಗಳಾಗಿದ್ದು, ಒಂದು ಪೀಠದ ಸುತ್ತ ನಾಲ್ಕು ಸಣ್ಣ ಕಂಬಗಳಿವೆ. ಈ ಕಂಬಗಳೆಲ್ಲವನ್ನು ಸೇರಿಸುವಂತೆ ಮೇಲೆ ಮುಚ್ಚುಗಯೂ ಇವೆ. ಇದರ ಮೇಲೆ ಎತ್ತರವಿಲ್ಲದ ಎಂಟು ಸ್ತಂಭಗಳು ಎರಡು ಹಂತಗಳಿದ್ದು, ಎರಡೂ ಹಂತಗಳ ಮೇಲೆ ಈ ಕಂಬಗಳನ್ನು ಸೇರಿಸುವಂತೆ ಮುಚ್ಚಿಗೆಯ, ಮುಚ್ಚಿಗೆಯ ಮೇಲೆ ಶಿಲ್ಪಗಳ ಅಲಂಕಾರವೂ ಇದೆ. ಈ ಒಂದೊಂದೂ ಹಂತವೂ ಮೇಲ್ಮಟ್ಟದಲ್ಲಿರುವ ಚೌಕಾಕಾರದ ಕೂಟಗಳನ್ನು ಒಂದರ ಮೇಲೊಂದು ಜೋಡಿಸಿದಂತಿದೆ. ಇದರ ಅಂತ್ಯದಲ್ಲಿ ಪುಷ್ಪ ಬೋದಿಗೆ ಇದೆ. ಈ ಕಂಬಗಳ ಮೇಲೆ ವಿವಿಧ ಮಾದರಿಯ ಉಬ್ಬುಶಿಲ್ಪಗಳನ್ನು ಕೆತ್ತಿರುವುದು ಒಂದು ವಿಶೇಷ ಶೈಲಿಯಾಗಿ ವಿಜಯನಗರ ಕಾಲದಲ್ಲಿ ಕಾಣಬಹುದು. ಈ ಕಂಬಗಳ ಮೇಲೆ ರಾಮ, ರಾವಣರ ನಡುವಿನ ಯುದ್ಧದ ಪ್ರಸಂಗ ವಿಷ್ಣುವಿನ, ಕಾಳಿಂಗ ಮರ್ದನ, ಆಂಜನೇಯ ಶಿಲ್ಪ, ನೃತ್ಯಗಾರ್ತಿ, ಶ್ರೀ ಕೃಷ್ಣನನ್ನು ಭಜಿಸುತ್ತಿರುವ ದಾಸರ ಶಿಲ್ಪ, ಬಾಲಕೃಷ್ಣ ಹಾಗೂ ಇತರೆ ಪ್ರಾಣಿ ಪಕ್ಷಿಗಳ ಉಬ್ಬು ಶಿಲ್ಪಗಳು ನಿಜಕ್ಕೂ ಸಂಯೋಗಸ್ತಂಭದಲ್ಲಿ ವಿಶಿಷ್ಟವಾಗಿ ಕಾಣಬಹುದು. ಈ ದೇವಾಲಯದ ವಿಜಯನಗರ ವಾಸ್ತುಶೈಲಿಯ ಎರಡನೇ ವಿಧದ ಸ್ತಂಭಗಳು ಮುಖಮಂಟಪದಲ್ಲಿ ಕಾಣಬಹುದು. ಈ ಸ್ತಂಭದ ಪ್ರಕಾರದಲ್ಲಿ ಪೀಠ, ಕಾಂಡ ಭಾಗದಲ್ಲಿ ಚಚ್ಚೌಕ ಭಾಗಗಳು, ಅವುಗಳ ಮಧ್ಯೆ ಅಷಂಪೈಲಂ ಹಾಗೂ ಹದಿನಾರು ಮುಖದ ಭಾಗಗಳಿವೆ. ಕೆಳಗಿನ ಚಚ್ಚೌಕದ ಮೇಲುಭಾಗದಲ್ಲಿ ನಾಗಬಂಧಗಳಿವೆ. ಚಚ್ಚೌಕದ ಭಾಗದಲ್ಲಿ ಪೂರ್ಣಕುಂಭ, ಸಿಂಹ, ವ್ಯಾಳ, ವಾದ್ಯಗಾರ ಹೀಗೆ ವಿವಿಧ ಉಬ್ಬು ಶಿಲ್ಪಗಳಿವೆ. ಅಲ್ಲದೆ ರಂಗಮಂಟಪದಲ್ಲಿ ವಿಜಯನಗರ ಕಾಲದ ಕಮಲದ ವಿಧಾನವೂ ವಿಶಿಷ್ಟವಾಗಿದೆ. ಈ ರೀತಿಯಾಗಿ ಗೋಪಾಲ ಕೃಷ್ಣ ದೇವಾಲಯದಲ್ಲಿ ವಿಶೇಷವಾದ ಸ್ತಂಭಗಳ ರಚನೆ, ಚೌಕಾಕಾರದ ಮಂಟಪಗಳು ಮುಂತಾದ ಕಲೆ ಮತ್ತು ವಾಸ್ತುಶಿಲ್ಪ ಶೈಲಿಯ ಲಕ್ಷಣಗಳು ವಿಜಯನಗರ ಕಲೆ ಮತ್ತು ವಾಸ್ತುಶೈಲಿಯನ್ನು ಕುರಿತು ಹೇಳುತ್ತವೆ.

ಅದೇ ರೀತಿ ಸಂಪಿಗೆ ಸಿದ್ಧೇಶ್ವರ ದೇವಾಲಯವನ್ನು ಅಧ್ಯಯನ ಮಾಡಿದಾಗ ಇದರ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ರಂಗಮಂಟಪಗಳು ಬೃಹದಾಕಾರದ ಹುಟ್ಟು ಬಂಡೆಯ ಒಳಗಡೆ ರಚನೆಗೊಂಡಿದ್ದು ಇವು ವಿಜಯನಗರಪೂರ್ವ ಕಾಲದ ರಚನೆಗಳಾಗಿವೆ. ನಂತರದ ರಚನೆಗಳು ವಿಜಯನಗರದ ಕಾಲದ ಕಲೆ ಮತ್ತು ವಾಸ್ತುಶಿಲ್ಪ ಶೈಲಿಯಲ್ಲಿ ರಚನೆಗೊಂಡಿವೆ. ಈ ದೇವಾಲಯದ ಮುಖಮಂಟಪದಲ್ಲಿರುವ ಕ್ರಿ.ಶ. 1355 ಮತ್ತು 1356 ರ ಎರಡು ಶಿಲಾಶಾಸನಗಳು ಬೆಮ್ಮತ್ತನ ಕಲ್ಲುನಾಡಿನಲ್ಲಿ (ಚಿತ್ರದುರ್ಗ) ವಿಜಯ ನಗರದ ಅರಸರ ಆಳ್ವಿಕೆಯನ್ನು ಸ್ಪಷ್ಟಪಡಿಸುತ್ತವೆ. ವಿಜಯ ನಗರದ ಒಂದನೇ ಬುಕ್ಕನ ಮಂಡಲೇಶ್ವರನಾಗಿ ಚಿತ್ರದುರ್ಗದಲ್ಲಿ ಆಳುತ್ತಿದ್ದ ಮಲ್ಲಿನಾಥ ಒಡೆಯನು ಬುಕ್ಕನ ಪರವಾಗಿ ಅವುಗಳನ್ನು ಹಾಕಿಸಿದನು. ಇವುಗಳ ಶಾಸನೋಕ್ತ ವಿಚಾರ ದಂತೆ 'ಮಲ್ಲಿನಾಥ ಒಡೆಯನು ಸಿದ್ಧನಾದ ದೇವರಿಗೆ ಈ ದೇವಾಲಯದ ಮುಂದೆ ಕಲ್ಲು ಉಪ್ಪರಿಗೆಯನ್ನು ಎತ್ತಿಸಿ, ಕಲ್ಲು ಉಯ್ಯಾಲೆ, ಶಿಖರ ಪ್ರತಿಷ್ಠೆ ಇತ್ಯಾದಿ ಕಾಮಗಾರಿ ಗಳನ್ನು ಮಾಡಿಸಿ ಚಿಕ್ಕಪುರ ಮತ್ತು ಮುಸುವಡಿಯ ಪುರಗಳನ್ನು ದತ್ತಿ ಬಿಡಲಾದ ವಿಷಯವನ್ನು ತಿಳಿಸುತ್ತವೆ.' [2]

ಮಲ್ಲಿನಾಥ ಒಡೆಯನು ನಿರ್ಮಿಸಿದ ಮೂರು ಅಂತಸ್ತಿನ ಕಲ್ಲುಉಪ್ಪರಿಗೆಗೆ ಹೊಂದಿಕೊಂಡಂತೆ ಒಂದು ವಿಶಾಲವಾದ ಪ್ರಾಕಾರ ಮಂಟಪ ಕಂಡುಬರುತ್ತದೆ. ದೇವಾಲಯಕ್ಕೆ ಹೊಂದಿಕೊಂಡಂತೆ ಪ್ರಾಕಾರ ಮಂಟಪಗಳ ನಿರ್ಮಾಣ ಕ್ರಿಯೆಯು ವಿಜಯ ನಗರ ದೇವಾಲಯ ವಾಸ್ತುಶೈಲಿಯ ಒಂದು ಪ್ರಮುಖ ಲಕ್ಷಣವೆಂದು ಹೇಳಬಹುದು. ಈ ಕಲ್ಲು ಉಪ್ಪರಿಗೆಯನ್ನು ನೋಡಿದಾಗ ಇದಕ್ಕೆ ಒಳಹೋಗಲು ಮೆಟ್ಟಿಲುಗಳಿದ್ದು, ಮಂಚಬಂಧ, ಅಧಿಷ್ಠಾನ, ರುದ್ರಕಾಂತ ಸ್ತಂಭ ಮತ್ತು ಸೀಳು ಬೋದಿಗೆಗಳಿಂದ ಕೂಡಿದೆ. ವಿಜಯನಗರ ಕಾಲದ ಕಲೆಯ ಮತ್ತೊಂದು ಪ್ರಮುಖ ಲಕ್ಷಣವಾಗಿ ಗಾರೆ ಶಿಲ್ಪ ನಿರ್ಮಾಣವು ಈ ದೇವಾಲಯದಲ್ಲಿ ಕಾಣಬಹುದು. ಪ್ರಾಕಾರದ ಸುತ್ತಲೂ ಗಚ್ಚು, ಗಾರೆಯಿಂದ ನಿರ್ಮಿಸಿದ ಆನರ್ವತ ಹಾರಗಳಿದ್ದು ಪ್ರಸ್ತುತ ಅವುಗಳಲ್ಲಿ ಶಿಲ್ಪಗಳಿಲ್ಲ. ಗಾರೆ ಶಿಲ್ಪಗಳ ರಚನೆಗಳನ್ನು ಹಿಡಂಬೇಶ್ವರ ಮತ್ತು ಏಕನಾಥೇಶ್ವರಿ ದೇವಾಲಯಗಳ ಮೇಲೂ ಕಾಣಬಹುದು.

ವಿಜಯನಗರದ ಕಲೆ ಮತ್ತು ವಾಸ್ತುಶಿಲ್ಪ ಶೈಲಿಯ ಲಕ್ಷಣಗಳನ್ನು ಗುರುತಿಸಬಹುದಾದ ಕೋಟೆಯಲ್ಲಿನ ಮತ್ತೊಂದು ಪ್ರಮುಖ ದೇವಾಲಯವೆಂದರೆ ಶ್ರೀ ರಾಜ ಉತ್ಸವಾಂಬ ಎಚ್ಚೆಂಗಿ ಎಲ್ಲಮ್ಮ ದೇವಾಲಯ, ಗರ್ಭಗೃಹ, ಅಂತರಾಳ ಹಾಗೂ ರಂಗಮಂಟಪ ಇವುಗಳು ಪ್ರಾಚೀನ ಕಾಲದ ರಚನೆಗಳು. ನಂತರದ ಮುಖಮಂಟಪ ಹಾಗೂ ಸುತ್ತಲಿನ ಪ್ರಾಕಾರದ ಮಂಟಪ ಇವು ವಿಜಯನಗರದ ಕಾಲದ ಕಲೆ ಮತ್ತು ವಾಸ್ತುಶಿಲ್ಪ ಶೈಲಿಯಲ್ಲಿ ಆಚನೆಗೊಂಡಿವೆ. ವಿಜಯನಗರ ಕಾಲದಲ್ಲಿ ಕಾಣುವ

ಗರ್ಭಗೃಹದ ನೆಲೆಗಟ್ಟುಗಿಂತ ಪ್ರದಕ್ಷಿಣಾ ಪಥದ ನೆಲಗಟ್ಟು ತುಂಬಾ ಕೆಳಗೆ ಇದ್ದು ಅದಕ್ಕೆ ಸೋಪಾನವೊಂದರ ಮೂಲಕ ಕೆಳಗಿಳಿದು ಹೋಗಬೇಕು.[3] ಅಂತಹ ಲಕ್ಷಣವನ್ನು ಈ ದೇವಾಲಯದಲ್ಲಿ ಕಾಣಬಹುದು. ಈ ದೇವಾಲಯವು ಅತ್ಯಂತ ಎತ್ತರವಾದ ಅಧಿಷ್ಠಾನದ ಮೇಲೆ ನಿರ್ಮಾಣಗೊಂಡಿದೆ. ಇದರ ಅಧಿಷ್ಠಾನದಲ್ಲಿ ಉಪಪೀಠ, ಉಪಾನ, ಪಟ್ಟಿಕೆ, ಪದ್ಮ, ತ್ರಿಪಟ್ಟಿ ಕುಮುದ, ವೇದಿಕೆ, ಶಾಲಗಳು ಕಂಡುಬರುತ್ತವೆ. ಇದು ವಿಜಯನಗರ ಕಾಲದ ಅಧಿಷ್ಠಾನದ ಪ್ರಮುಖ ಲಕ್ಷಣವೆಂದು ಹೇಳಬಹುದು.[4] ವಿಜಯನಗರ ಕಾಲದ ಎರಡು ವಿಶಿಷ್ಟ ಶೈಲಿಯ ಕಂಬಗಳ ಪ್ರಕಾರಗಳು ಈ ದೇವಾಲಯದಲ್ಲಿ ಕಂಡುಬರುತ್ತವೆ. ಮೊದಲನೇ ಪ್ರಕಾರದ ಕಂಬಗಳು ಕೆಳಗೆ ಪೀಠ, ಕಾಂಡ ಭಾಗದಲ್ಲಿ ಮೂರು ಚಚ್ಚೌಕದ ಭಾಗಗಳಿದ್ದು ಪ್ರತಿಯೊಂದರ ಮಧ್ಯೆ ಎಂಟು ಮುಖದ ಭಾಗಗಳಿವೆ. ಕೆಳಗಿನ ಭಾಗದ ಚಚ್ಚೌಕದ ಮೇಲೆ ನಾಗಬಂಧವಿರುತ್ತದೆ. ನಂತರ ಮೇಲೆ ವಿಶಿಷ್ಟವಾದ ವಿಜಯನಗರ ಕಾಲದ ಹೆಚ್ಚು ಬಾಗಿದ ಪುಷ್ಪಭೋದಿಗೆ ಅಥವಾ ಪದ್ಮಭೋದಿಗೆ ಕಂಡುಬರುತ್ತದೆ. ಈ ಪ್ರಕಾರದ ಸ್ತಂಭಗಳು ಮುಖಮಂಟಪ ಹಾಗೂ ಪ್ರಾಕಾರ ಮಂಟಪದ ಕೆಲವು ಕಡೆ ಕಂಡುಬರುತ್ತವೆ. ಈ ಕಂಬಗಳ ಚಚ್ಚೌಕದ ಭಾಗದ ಮೇಲೆ ಗಂಡಬೇರುಂಡ, ಯೋಧ, ನೃತ್ಯಗಾರ್ತಿ, ನಾಟ್ಯಗಣಪತಿ, ವಾದ್ಯಗಾರ, ಸರ್ಪ, ಬೇಡರ ಕಣ್ಣಪ್ಪ, ಅಷ್ಟದಳ ಪದ್ಮ ಪುಷ್ಪ ಮುಂತಾದ ಉಬ್ಬುಶಿಲ್ಪಗಳನ್ನು ಕಾಣಬಹುದು. ಎರಡನೇ ಪ್ರಕಾರದ ಕಂಬಗಳೆಂದರೆ ಕಂಬವನ್ನು ನೇರವಾಗಿ ಎರಡು ಭಾಗಗಳಾಗಿ ವಿಂಗಡಿಸಿ, ಮೊದಲನೆಯ ಭಾಗದಲ್ಲಿ ಚಚ್ಚೌಕ ಪ್ರಧಾನವಾಗಿ, ಇನ್ನೊಂದು ಭಾಗದಲ್ಲಿ ಹಿಂದಿನ ಎರಡು ಕಾಲುಗಳನ್ನು ಊರಿ ಮುಂದಿನ ಎರಡು ಕಾಲುಗಳನ್ನು ಮೇಲೆಕ್ಕೆತ್ತಿ ನಿಂತಿರುವ ವ್ಯಾಳಿಯಾಕಾರದ ವಿನ್ಯಾಸ ಹೊಂದಿದೆ. ಇಂತಹ ಕಂಬಗಳು ಈ ದೇವಾಲಯದ ದ್ವಾರಮಂಟಪದ ಕೆಳ ಅಂತಸ್ತಿನ ಆಸುಪಾಸುಗಳಲ್ಲಿ ಒಟ್ಟು ಹತ್ತು ಕಂಬಗಳಿವೆ.[5] ವಿಶಾಲವಾದ ಪ್ರಾಕಾರ ಮಂಟಪವನ್ನು ಹೊಂದಿರುವ ಈ ದೇವಾಲಯವು ಹಂಪಿಯ ದೇವಾಲಯಗಳ ಮಾದರಿಯಲ್ಲಿ ದ್ವಾರಮಂಟಪವನ್ನು ಹೊಂದಿದ್ದು ಮಂಟಪದ ಮೇಲಿನ ಕೆಲವು ಅವಶೇಷಗಳನ್ನು ಗಮನಿಸಿದರೆ ಮೊದಲು ಒಂದು ದೊಡ್ಡ ಗೋಪುರವನ್ನು ಹೊಂದಿತ್ತೆಂದು ಹೇಳಬಹುದು.

ಈ ರೀತಿಯಾಗಿ ವಿಜಯನಗರ ಕಾಲದ ಕಲೆ ಮತ್ತು ವಾಸ್ತುಶಿಲ್ಪ ಶೈಲಿಯ ವಿಶಿಷ್ಟ ಲಕ್ಷಣಗಳಿಂದ ಕೂಡಿರುವ ಚಿತ್ರದುರ್ಗದ ಕೋಟೆಯ ಒಳಗಿರುವ ಗೋಪಾಲಕೃಷ್ಣ, ಸಂಪಿಗೆ ಸಿದ್ದೇಶ್ವರ ಹಾಗೂ ರಾಜಾ ಉತ್ಸವಾಂಬ ಎಚ್ಚೆಂಗಿ ಎಲ್ಲಮ್ಮ ದೇವಾಲಯಗಳನ್ನು ಅಧ್ಯಯನ ಮಾಡುವುದರ ಮೂಲಕ ವಿಜಯನಗರ ಕಾಲದ ಕಲೆ ಮತ್ತು ವಾಸ್ತುಶಿಲ್ಪ ಶೈಲಿಯ ಸಂಯೋಗ ಸ್ತಂಭ', ವ್ಯಾಳಿಯಾಕಾರದ ಸ್ತಂಭ ಶೈಲಿ - ಪದ್ಮ ಪುಷ್ಪಬೋದಿಗೆ ಕಮಲವಿತಾನ, ಎತ್ತರವಾದ ಅಧಿಷ್ಠಾನದ ರಚನೆ, ವಿಶಾಲ ಹಾಗೂ

ಚೌಕಾಕಾರದ ಮುಖ ಮಂಟಪಗಳು, ವಿಶಾಲವಾದ ಪ್ರಾಕಾರ ಮಂಟಪಗಳು, ದ್ವಾರ ಮಂಟಪ, ಕಂಬಗಳ ಮೇಲಿನ ಅಲಂಕೃತ ಉಬ್ಬುಶಿಲ್ಪಗಳು, ಗಾರೆಶಿಲ್ಪ ಇದರೊಂದಿಗೆ ಈ ಎಲ್ಲಾ ದೇವಾಲಯಗಳು ಬಹುತೇಕವಾಗಿ ಸ್ಥಳೀಯವಾಗಿ ದೊರೆತಿದ್ದ ಗ್ರಾನೈಟ್ ಕಲ್ಲಿನಲ್ಲೇ ರಚನೆಗೊಂಡಿರುವಂತಹದು ಮುಂತಾದ ವಿಶಿಷ್ಟ ಅಂಶಗಳನ್ನು ತಿಳಿಯಲು ಸಹಾಯಕಾರಿಯಾಗಿವೆ.

ಅಡಿ ಟಿಪ್ಪಣಿಗಳು

1. ಅರ್ಪರ್ಣ, ಕಲಾಸ್, 1990, ದೇವಾಲಯದ ಕಂಬಗಳು: ಒಂದು ಅಧ್ಯಯನ, ಇತಿಹಾಸ ದರ್ಶನ, ಸಂಪುಟ 4 ಸೂರ್ಯನಾಥ್ ಯು.ಕಾಮತ್, ಲಕ್ಷ್ಮಣ್ ತೆಲಗಾವಿ (ಸಂ), ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು .
೨. ಎಕ (ಹಳೆಯ) ಸಂ. 11., ಚಿತ್ರದುರ್ಗ 2, 3.
3. ಸಿಂದಗಿ ರಾಜಶೇಖರ್., ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ, 1988, ಪುಟ 175
4. ಮಹಂತೇಶ್ ಎನ್.ಎಸ್. *ಚಿತ್ರದುರ್ಗದ ಕೋಟೆಯ ಒಳಗಿನ ಪ್ರಮುಖ ದೇವಾಲಯಗಳು*: ಒಂದು ಸಾಂಸ್ಕೃತಿಕ ಅಧ್ಯಯನ (ಸಂಶೋಧನಾ ಕಿರುಪ್ರಬಂಧ)., ಕುವೆಂಪು ವಿಶ್ವವಿದ್ಯಾನಿಲಯ, 2007, ಪುಟ 55 (ಅಪ್ರಕಟಿತ)
5. ಅದೇ, ಪುಟ 58, 59.

ಗ್ರಂಥ ಋಣ

1. ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ - ಸಿಂದಗಿ ರಾಜಶೇಖರ್
2. ಶಿಲ್ಪಾದರ್ಶ - ಸಂ. 7 - ಡಾ. ಜಿ. ಜ್ಞಾನನಂದ.
3. ಇತಿಹಾಸದರ್ಶನ ಸಂ. (4) - ಸಂ: ಸೂರ್ಯನಾಥ್ ಯು.ಕಾಮಥ್, ಪ್ರೊ. ಲಕ್ಷಣ್ ತೆಲಗಾವಿ.
4. ಎಪಿಗ್ರಾಫಿಯಾ ಕರ್ನಾಟಕಾ ಸಂ. (೧೧). ಚಿತ್ರದುರ್ಗ (ಜಿಲ್ಲೆ) - ಬಿ.ಎಲ್.ರೈಸ್
5. ಚಿತ್ರದುರ್ಗದ ಕೋಟೆಯ ಒಳಗಿನ ಪ್ರಮುಖ ದೇವಾಲಯಗಳು : ಒಂದು ಸಾಂಸ್ಕೃತಿಕ ಅಧ್ಯಯನ (ಸಂಶೋಧನಾ ಕಿರುಪ್ರಬಂಧ) - ಮಹಂತೇಶ ಎನ್.ಎಸ್.

೨೮. ಹಂಪಿಯ ಶಿಲ್ಪಗಳಲ್ಲಿ ಒಂದು ಜನಪದ ವಾದ್ಯ

ಡಾ. ಬಸವರಾಜ ಮಲಶೆಟ್ಟಿ

ಸಂಗೀತ ವಾದ್ಯಗಳು ಜನಸಮುದಾಯಗಳ ಸಂಸ್ಕೃತಿಯ ಅವಿಭಾಜ್ಯ ಅಂಗಗಳಾಗಿವೆ. ವ್ಯಾಪಾರ, ರಾಜಕೀಯ, ಧಾರ್ಮಿಕ ಮುಂತಾದ ಕಾರಣಗಳಿಂದಾಗಿ ಒಂದು ಜನ ಸಮುದಾಯ ತನ್ನ ಮೂಲ ಸ್ಥಳದಿಂದ ಬೇರೆಡೆಗೆ ಚಲಿಸಿದಾಗ ಅದು ತನ್ನೊಂದಿಗೆ ತನ್ನ ಸಂಸ್ಕೃತಿಯನ್ನು ಕೊಂಡೊಯ್ದು ತಾನು ನೆಲೆಯೂರುವಲ್ಲಿ ಪಸರಿಸುತ್ತದೆ. ಅಲ್ಲಿಯ ದನ್ನು ತಾನು ಸ್ವೀಕರಿಸುತ್ತದೆ. ಈ ಕೊಡು-ಕೊಳಿಕೆಯ ಪರಿಣಾಮದಿಂದಾಗಿ ಸಂಕರ ಸಂಸ್ಕೃತಿಯೊಂದು ತಲೆಯೆತ್ತುತ್ತದೆ. ಈ ಮಾತು ಸಂಗೀತ ವಾದ್ಯಗಳಿಗೂ ಸಂಪೂರ್ಣ ವಾಗಿ ಅನ್ವಯಿಸುತ್ತದೆ.

ಭಾರತ-ಅರಬಸ್ತಾನಗಳ ಸಂಬಂಧ ತುಂಬಾ ಹಳೆಯಾದುದು. ಮುಖ್ಯವಾಗಿ ಇದು ವ್ಯಾಪಾರೀಸಂಬಂಧ. ನಂತರ ರಾಜಕೀಯ ಸ್ವರೂಪ ಪಡೆದುಕೊಂಡಿತು. ವಿಜಯನಗರದ ಕಾಲಕ್ಕೆ ಈ ಸಂಬಂಧ ಗಾಢವಾಗಿತ್ತು. ವ್ಯಾಪಾರಿಗಳು, ಪ್ರವಾಸಿಗರು ಇಲ್ಲಿಗೆ ನಿರಂತರ ವಾಗಿ ಬರುತ್ತಿದ್ದರು. ಅವರೊಂದಿಗೆ ಬಂದು ಡಫ್ ಎಂಬ ಚರ್ಮವಾದ್ಯ ಸ್ಥಳೀಕರಣ ಗೊಂಡು ಡಪ್ಪು ಆಯಿತು. ಡಪ್ಪಿನ ರಚನಾಕ್ರಮ ಇಲ್ಲಿಯವರಿಗೆ ಹೊಸದೇನೂ ಅಲ್ಲ. ತಮ್ಮಟೆ (ಹರೆ, ಹಲಗೆ, ತಪ್ಪಡಿ, ಸಂಪ್ರದಾನಿ) ಕರ್ನಾಟಕದ ಬಹುಮುಖ್ಯ ಜನಪದ ವಾದ್ಯ. ಡಪ್ಪು ತಮ್ಮಟೆಯನ್ನು ಹೋಲುತ್ತದೆ. ಆಕಾರದಲ್ಲಿ ತಮ್ಮಟೆಗಿಂತ ಚಿಕ್ಕದು. ತಮ್ಮಟೆಯ ವ್ಯಾಸ ಸುಮಾರು ಎರಡು ಅಡಿ, ಡಪ್ಪಿನ ವ್ಯಾಸ ಸುಮಾರು ಒಂದೂ ಕಾಲು ಅಡಿ. ತಮ್ಮಟೆಯನ್ನು ಕಟ್ಟಿಗೆಯ, ಬೆತ್ತದ ಎರಡು ಗುಣಿಕೆಗಳಿಂದ (ಕಡ್ಡಿಗಳು, ವಾದನದಂಡಗಳು) ಬಾರಿಸಿದರೆ ಡಪ್ಪನ್ನು ಕೇವಲ ಕೈಯಿಂದ ಬಾರಿಸುತ್ತಾರೆ. ತಮ್ಮಟೆ ಸ್ವತಂತ್ರವಾದ್ಯವೂ ಕುಣಿತಗಳಿಗೆ ಜೊತೆವಾದ್ಯವೂ ಆಗಿದೆ. ಡಪ್ಪು ಹಾಡುಗಳಿಗೆ ಜೊತೆ ವಾದ್ಯವಾಗಿ ಮಾತ್ರ ಬಳಸಲ್ಪಡುತ್ತದೆ. ತಮ್ಮಟೆಗೆ ಧ್ವನಿ ರಭಸ ಹೆಚ್ಚು. ಡಪ್ಪಿನ ವಾದನ ಬೆರಳುಗಳಿಂದ ಹುಟ್ಟಿಸುವ ಮೃದು ಮತ್ತು ಸೂಕ್ಷ್ಮನಾದಾಕ್ಷರಗಳನ್ನು ಹೊಂದಿರುತ್ತದೆ. ತಮ್ಮಟೆಯ ಜಾತಿಗೆ ಸೇರಿದ ಇನ್ನೊಂದು ಚರ್ಮವಾದ್ಯವಿದೆ. ಅದರ ಹೆಸರು ಕಣಿ. ಇದು ಡಪ್ಪಿನಕ್ಕಿಂತ ಸಣ್ಣದಿರುತ್ತದೆ. ಇದನ್ನು ಎಡ ಅಂಗೈಯಲ್ಲಿ ಎತ್ತಿ ಹಿಡಿದು ಬಲಗೈ ಯಲ್ಲಿರುವ ಗುಣಿಕೆಯಿಂದ ಬಾರಿಸುತ್ತಾರೆ. ಕಣ್‌ಕಣ್‌ಕಣ್ ಎಂದು ನಾದ ಹೊರಡಿಸು ವುದರಿಂದಾಗಿ ದಕ್ಕೆ ಕಣಿ ಎಂದು ಹೆಸರು ಬಂದಿದೆ. ವಾದನ ಶೈಲಿ ಮತ್ತು ವಾದನ

ಸಂದರ್ಭಗಳ ಹಿನ್ನೆಲೆಯನ್ನು ಪರಿಗಣಿಸಿ ಹೇಳುವುದಾದರೆ ತಮ್ಮಟೆ ಮತ್ತು ಕಣಿಗಳಿಂದ ಡಪ್ಪು ತೀರಾ ಭಿನ್ನವಾದ ಒಂದು ಸ್ವತಂತ್ರವಾದ್ಯವಾಗಿದೆ. ಇಂದು ಕರ್ನಾಟಕ ದಲ್ಲಿ ಡಪ್ಪನ್ನು ಗೀತಪ್ರಕಾರಗಳಿಗೆ ಜೊತೆವಾದ್ಯವಾಗಿ ನುಡಿಸಲಾಗುತ್ತಿದೆ. ಸಣ್ಣಾಟವೆಂದು ಕರೆಯುವ ಜನಪದ ನಾಟಕದ ಮೂಲ ಹೆಸರು ಡಪ್ಪಿನಾಟ. ಸಂಗ್ಯಾಬಾಳ್ಯಾ, ರಾಧಾನಾಟ ಮುಂತಾದವು ಡಪ್ಪಿನಾಟಗಳು. ಈ ಆಟಗಳ ಹಾಡುಗಾರಿಕೆಗೆ ಡಪ್ಪನ್ನು ಜೊತೆವಾದ್ಯವಾಗಿ (ಇತರ ಆಟಗಳಿಗೆ ತಬಲಾ ಮದ್ದಳೆ ಉಪಯೋಗಿಸುವಂತೆ) ಬಳಸುತ್ತಾರೆ. ಹಾಗೂ ಡಪ್ಪನ್ನು ಮಾತ್ರ ಬಳಸಲೇಬೇಕಾಗುತ್ತದೆ. ಈ ಹಾಡುಗಳ ಚಲನೆ ಗತಿ ಗತ್ತುಗಳಿಗೆ ಡಪ್ಪು ಮಾತ್ರ ಸರಿಯಾದ ಜೊತೆವಾದ್ಯವಾಗಿರಲು ಸಾಧ್ಯ. ಪ್ರದರ್ಶನದ ಉದ್ದಕ್ಕೂ ನೂರಾರು ಹಾಡುಗಳಿಗೆ ಜೊತೆವಾದ್ಯವಾಗಿ ಅನುರಣನಗೊಳ್ಳುವ ಡಪ್ಪು ತನ್ನ ಪ್ರಾಧಾನ್ಯತೆ ಯನ್ನು ಸ್ಥಾಪಿಸಿಕೊಂಡಿರುತ್ತದೆ. ಹೀಗಾಗಿ ಈ ಆಟಕ್ಕೆ ಡಪ್ಪಿನಾಟ ಎಂಬುದು ಸೂಕ್ತವಾದ ಮತ್ತು ಅರ್ಥಪೂರ್ಣವಾದ ಹೆಸರು ಬಂದಿದೆ.

ಗೀಗೀ ಪದಕ್ಕೆ ಡಪ್ಪು ಅನಿವಾರ್ಯವಾದ ಜೊತೆ ವಾದ್ಯವಾಗಿದೆ. ಹಾಡಿನ ಆರಂಭಕ್ಕೆ, ಮಧ್ಯದಲ್ಲಿ ಮತ್ತು ಕೊನೆಯಲ್ಲಿ ಡಪ್ಪನ್ನು ಚಮತ್ಕಾರದಿಂದ ಬಾರಿಸುತ್ತ ಗೀಗೀ ಹಾಡುಗಾರಿಕೆಗೆ ಲವಲವಿಕೆ ತರಲಾಗುತ್ತದೆ. ಮುಖ್ಯ ಗಾಯಕನು ಡಪ್ಪು ಬಾರಿಸುವನು. ತಾನು ಹಾಡುವಾಗ ಚಿಟಿಕೆ ಮಾತ್ರದಿಂದ ಲಯನಿರ್ದೇಶನ ಮಾಡುವ ಮುಖ್ಯ ಗಾಯಕನು ಹಿಮ್ಮೇಳದವರು ಹಾಡುವಾಗ ಗತ್ತಿನ ಒಡಲಲ್ಲಿ ವಿವಿಧ ನಾದಾಕ್ಷರಗಳನ್ನು ಸೃಷ್ಟಿಸಿ ರಂಜಕತೆಯನ್ನುಂಟು ಮಾಡುವನು. ಇತ್ತೀಚೆಗೆ ಹೋರಾಟದ ಹಾಡುಗಳಿಗೆ, ಪ್ರಚಾರದ ಜನಪದ ಹಾಡುಗಳಿಗೆ, ಬೀದಿನಾಟಕದ ಹಾಡುಗಳಿಗೆ ಡಪ್ಪನ್ನು ವಿಪುಲವಾಗಿ ಬಳಸಲಾಗು ತ್ತಿದೆ.

ವಿಜಯನಗರದ ಕಾಲಕ್ಕೆ ಅರಬರೊಂದಿಗೆ ನಿಕಟ ಸಂಪರ್ಕ ಬೆಳೆದಿತ್ತು. ಅವರ ಸಾಂಸ್ಕೃತಿಕ ಅಂಶಗಳು ಇಲ್ಲಿಯ ಜನಜೀವನದಲ್ಲಿ ಬೆರೆತುಕೊಂಡಿದ್ದವು. ಇದಕ್ಕೆ ಒಂದು ಸ್ಪಷ್ಟ ಉದಾಹರಣೆಯೆಂದರೆ ಡಪ್ಪು. ಈ ಹೊಸವಾದ್ಯವು ಇಲ್ಲಿಯ ತಮ್ಮಟೆ ಮತ್ತು ಕಣಿಗಳನ್ನು ಹಿಂದೆ ಸರಿಸಲಿಲ್ಲ. ಅವುಗಳ ಬಳಗಕ್ಕೆ ಸೇರಿಕೊಂಡಿತು. ತಮ್ಮಟೆ ಕಣಿಗಳು ಕೂಡ ಶಿಲ್ಪಗಳಲ್ಲಿ ಒಡಮೂಡಿವೆ. ಡಪ್ಪು ತನ್ನ ವಿಶಿಷ್ಟ ವಾದನ ಶೈಲಿಯಿಂದ ಸ್ಥಳೀಯರ ಮನಸ್ಸನ್ನು ಆಕರ್ಷಿಸಿತು.

ಡಪ್ಪಿನ ವಾದನ ಕ್ರಮವನ್ನು ತಾವೂ ರೂಢಿಸಿಕೊಂಡರು. ಇವರೊಂದಿಗೆ ಅರಬರೂ ಅದನ್ನು ಬಾರಿಸುತ್ತಿದ್ದರು.

ಪಟ್ಟಾಭಿರಾಮ ದೇವಾಲಯ, ಮಹಾನವಮಿ ದಿಬ್ಬ, ಹಜಾರರಾಮ ದೇವಾಲಯ, ಕೃಷ್ಣದೇವಾಲಯ, ಕಡಲೆಕಾಳು ಗಣಪತಿ ದೇವಾಲಯ, ಅಚ್ಯುತ ದೇವಾಲಯ, ವಿಜಯ ವಿಠ್ಠಲ ದೇವಾಲಯ ಮತ್ತು ವಿರೂಪಾಕ್ಷ ದೇವಾಲಯ- ಇವುಗಳನ್ನು ಸಮೀಕ್ಷೆ

ಮಾಡಿದಾಗ 33 ಡಪ್ಪಿನ ವಾದನ ಶಿಲ್ಪಗಳು ಕಂಡುಬಂದಿವೆ. ಈ ವಿಪುಲತೆ ಡಪ್ಪಿನ ಜನಪ್ರಿಯತೆಯನ್ನು ತಿಳಿಸುತ್ತದೆ. ವಾದಕರಲ್ಲಿ ಅರಬರು ಮತ್ತು ಸ್ಥಳೀಯರನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಅರಬ ವಾದಕರು ಗಡ್ಡಧಾರಿಗಳು ಮತ್ತು ಚಪ್ಪಟೆಯಾದ ಮುಸ್ಲಿಂ ಟೊಪ್ಪಿಗೆಧಾರಿಗಳು. ಸ್ಥಳೀಯರು ವಾದಕರ ರುಮಾಲು ಕಿರೀಟಾಕಾರದ ಟೊಪ್ಪಿಗೆ ಧರಿಸಿ ಸೆಲ್ಲೆ ಹಾಕಿಕೊಂಡಿರುತ್ತಾರೆ. ಕೆಲವರ ಕೇಶವಿನ್ಯಾಸ ಆಕರ್ಷಕವಾಗಿದೆ. ಹಿಂದೆ ಬಾಚಿದ ದಟ್ಟಕೂದಲು ತಲೆಯ ಮೇಲೆ ಉಂಟು.

ಕಂಬಗಳ ಮೇಲೆ ಬಿಡಿಬಿಡಿಯಾಗಿ ಡಪ್ಪಿನ ವಾದಕರ ಶಿಲ್ಪಗಳಿರುವುದೇ ಹೆಚ್ಚು. ಒಂದೆರಡು ಕಡೆ ಶಿಲ್ಪಪಟ್ಟಿಕೆಗಳಲ್ಲಿ ಉತ್ಸವದಲ್ಲಿ ಇತರ ವಾದ್ಯಗಾರರೊಂದಿಗಿರುವ ಡಪ್ಪು ವಾದಕರೂ ಇದ್ದಾರೆ. ಡಪ್ಪು ಬಾರಿಸುವ ವಿವಿಧ ಭಂಗಿಗಳು ಆಕರ್ಷಕವಾಗಿದೆ. ಹೆಚ್ಚಿನ ಶಿಲ್ಪಗಳಲ್ಲಿ ವಾದಕರು ನೃತ್ಯಭಂಗಿಯಲ್ಲಿದ್ದಾರೆ. ಅವರು ಎಡಕ್ಕೆ ಅಥವಾ ಬಲಕ್ಕೆ ಭುಜದ ಸಮಕ್ಕೆ ಡಪ್ಪು ಎತ್ತಿ ಹಿಡಿದು ಬಾರಿಸುವ ಕ್ರಮ ಇಂದಿನ ಡಪ್ಪು ವಾದನ ಕ್ರಮದಂತೆಯೇ ಇದೆ. ಡಪ್ಪನ್ನು ಕೊರಳಿಗೆ ನೇತು ಹಾಕಿಕೊಂಡು ಹೊಟ್ಟೆಯ ಮೇಲೆ ಬಂದ ಡಪ್ಪನ್ನು ಎರಡೂ ಕೈಗಳಿಂದ ಬಾರಿಸುವ ವಾದಕರಿದ್ದಾರೆ. ಕಾಲು ಮಡಚಿ (ಹಿಮ್ಮಡಿಗಳು ಪುಷ್ಠಕ್ಕ ತಾಗುವಂತೆ) ಕುಳಿತು ಬಾರಿಸುವ ವಾದಕರ ಕೆಲವು ಶಿಲ್ಪಗಳಿವೆ. ವಾದಕರ ಉತ್ಸಾಹ ರಭಸಗಳು ಸ್ಪಷ್ಟವಾಗಿ ಕಂಡುಬರುತ್ತವೆ. ಒಬ್ಬ ಡಪ್ಪುವಾದಕನು ಕೊರಳ ಮೇಲೆ ಇಳಿ ಬಿಟ್ಟಿರುವ ಸೆಲ್ಲೆ ಅತ್ತಿತ್ತ ಹಾರಾಡುತ್ತಿದೆ.

ನಮ್ಮಲ್ಲಿ ರೂಢಿಯಲ್ಲಿರುವ ಇಂದಿನ ಡಪ್ಪುವಾದನ ಶೈಲಿ ಪಕ್ಕದ ಮಹಾರಾಷ್ಟ್ರದಿಂದ ಬಂದುದಾಗಿದೆ. ಆದರೆ ಐದು ಶತಮಾನಗಳ ಹಿಂದೆಯೇ ಡಪ್ಪು ಕನ್ನಡಿಗರಿಗೆ ಪರಿಚಯವಾಗಿ ಅವರ ಸಾಂಸ್ಕೃತಿಕ ಬದುಕಿನಲ್ಲಿ ಬೆರೆತುಕೊಂಡಿತ್ತೆಂಬುದನ್ನು ಹಂಪಿಯ ಶಿಲ್ಪಗಳು ದಾಖಲಿಸುತ್ತವೆ.



ಹಂಪಿಯ ಶಿಲ್ಪಗಳಲ್ಲಿ ಒಂದು ಜನಪದ ವಾದ್ಯ (ಮಹಾನವಮಿ ದಿಬ್ಬ)



ಹಂಪಿಯ ಶಿಲ್ಪಗಳಲ್ಲಿ ಒಂದು ಜನಪದ ವಾದ್ಯ (ಪಟ್ಟಾಭಿರಾಮ ದೇವಾಲಯ)

೨೯. ಕಂಪ್ಲಿಯಲ್ಲಿ ದೊರೆತ ವಿಜಯನಗರ ಕಾಲದ ಪ್ರಾಚ್ಯ ಅವಶೇಷಗಳು

ಎನ್. ಎಸ್. ಜೈರಾಭಿ

ಪಂಪಿ ಆನೆಗೊಂದಿಗಳನ್ನೊಳಗೊಂಡ ಈ ಕಂಪ್ಲಿ ಪ್ರದೇಶವು ಮಹಾಕಾವ್ಯಗಳ ಕಾಲ ದಿಂದಲೂ ಪ್ರಸಿದ್ಧವಾದ ಪ್ರದೇಶವಾಗಿದೆ. ರಾಮಾಯಣದ ವಾನರರ ಕಿಷ್ಕಿಂದ ರಾಜ್ಯವು ಪ್ರದೇಶದಲ್ಲಿತ್ತೆಂಬ ಉಲ್ಲೇಖಗಳಿವೆ. ಈ ಕಂಪ್ಲಿ ಪ್ರದೇಶವು ನೊಳಂಬವಾಡಿ ಪ್ರಾಂತ್ಯದ ಆಡಳಿತಕ್ಕೆ ಒಳಪಟ್ಟ ಹಾಗೂ ನೊಳಂಬರ ಅಂತ್ಯ ಕಾಲದ ರಾಜಧಾನಿಗಳಲ್ಲಿ ಕಂಪಲಿಯೂ ಒಂದು. ನೊಳಂಬರ ಉದಯಾದಿತ್ಯ ಇಲ್ಲಿದ್ದಂತೆ ಬಾಗಳಿ ಶಾಸನ ತಿಳಿಸು ತ್ತದೆ. ಕಂಪಿಲೆಯು ಇದಕ್ಕಿಂತ ಮೊದಲು ಗಂಗರಾಜ ಶ್ರೀಪುರುಷನ ಮಗ ದುಗ್ಗಮಾರನು ಈ ಪ್ರದೇಶದಲ್ಲಿ ರಾಷ್ಟ್ರಕೂಟರೊಂದಿಗೆ ಯುದ್ಧ ಮಾಡಿದಂತೆ ಗಂಗರ ಶಾಸನಗಳು ಉಲ್ಲೇಖಿಸುತ್ತವೆ.

ಕಂಪಿಲೆಯು ಮುಂದೆ ಹೊಸಮಲೆ ದುರ್ಗದ ಅರಸರ ಕಾಲದಲ್ಲಿ ಪ್ರಮುಖ ಸ್ಥಳವಾಗಿತ್ತು. ಇಲ್ಲಿನ ಸೋಮೇಶ್ವರ ದೇವರ ಹೆಸರನ್ನು ಸಂಗಮ ಅರಸ ತನ್ನ ಮಗನಾದ ಕಂಪಿಲರಾಯನಿಗೆ ಇಟ್ಟಿದ್ದ. ಹೀಗಾಗಿ ಧಾರ್ಮಿಕವಾಗಿ, ಐತಿಹಾಸಿಕವಾಗಿ ಈ ಸ್ಥಳವು ಈ ಕಾಲಕ್ಕೆ ಮಹತ್ವದ್ದಾಗಿತ್ತು. ಪ್ರಾದೇಶಿಕವಾಗಿ ಈ ಸ್ಥಳವು ಬಲ್ಲಕುಂದೆ 300ರ ಪ್ರದೇಶಕ್ಕೆ ಸೇರಿತ್ತು.

ಕಂಪಿಲಿಯಲ್ಲಿ ಮೇಲೆ ಹೇಳಿದ ಎಲ್ಲಾ ಕಾಲದ ಪ್ರಾಚ್ಯ ಅವಶೇಷಗಳು ದೊರೆಯುತ್ತವಾದರೂ ಯಾವುದೂ ಪೂರ್ಣ ಸ್ಥಿತಿಯಲ್ಲಿ ದೊರೆತಿಲ್ಲ. ದೊರೆತರೂ ಈ ಸ್ಥಳವು ನದಿಯ ದಂಡೆಯಲ್ಲಿರುವ ಕಾರಣಕ್ಕಾಗಿಯೇ ಪದೇ ಪದೇ ಜೀರ್ಣೋದ್ಧಾರ ಗೊಂಡ ಅವಶೇಷಗಳೂ ಹೆಚ್ಚಾಗಿ ದೊರೆತಿವೆ. ಎಂಟನೆಯ ಶತಮಾನ ದಿಂದಲೇ ಬೇರೆ ಬೇರೆ ರಾಜರು ರಾಜ್ಯವಾಳಿದ ಅವಶೇಷಗಳು ಹಾಗೂ ಕುರುಹುಗಳು ಕಂಡುಬಂದರೂ ಇದಕ್ಕೆ ಪೂರಕವಾಗಿ ಪ್ರಾಚೀನ ಶಾಸನಗಳು ದೊರೆತಿಲ್ಲ. ಇದುವರೆಗೂ ದೊರೆತಿರುವ ಶಾಸನಗಳು ವಿಜಯನಗರ ಕಾಲ ಮತ್ತು ಅದರಿಂದೀಚಿನವು. ವಿಜಯನಗರದ ಅರಸ ಅಚ್ಯುತ ದೇವರಾಯನ ಕ್ರಿ.ಶ. ೧೫೩೯ರ ಶಾಸನವೇ ಈ ಗ್ರಾಮದ ಉಪಲಬ್ಧ ಪ್ರಾಚೀನ ಶಾಸನ.

ಕಂಪ್ಲಿ ಕೈಫಿಯತ್ತಿನಲ್ಲಿ ಉಲ್ಲೇಖಿಸಿರುವ ಕಲ್ಯಾಣಿ ಚಾಲುಕ್ಯರ ಕಾಲದವಾಗಿದ್ದು ಅದರ ಕಾಲದ ಬಗ್ಗೆ ತೀರ್ಮಾನಿಸಲು ಕಷ್ಟವಾಗಿದೆ. ಕ್ರಿ.ಶ. 1552ರ ಶಾಸನವು ಪಂಪಾಪತಿ ದೇವಾಲಯದ ಬಳಿ ದೊರೆತಿದೆ. ಇವಲ್ಲದೆ ಪೇಟೆ ಬದಿಯಲ್ಲಿಯೂ ಒಂದು ತ್ರುಟಿತ ಶಾಸನ ದೊರೆತಿದ್ದು, ಇದು ವಿಜಯನಗರೋತ್ತರ ಕಾಲದ ಶಾಸನವಾಗಿದೆ. ಇದರಲ್ಲಿ ಕಂಪ್ಲಿ ಪೇಟೆಯನ್ನು ಕಟ್ಟಿಸಿದ ಬಗ್ಗೆ ಉಲ್ಲೇಖವಿದೆ. ಕೈಫಿಯತ್ತಿನಲ್ಲಿಯೂ ವಿಜಯ ನಗರೋತ್ತರ ಕಾಲದಲ್ಲಿ ಪೇಟೆಯನ್ನು ನಿರ್ಮಿಸಿದ ಬಗ್ಗೆ ಉಲ್ಲೇಖವಿದೆ. ಹೀಗಾಗಿ ಪಟ್ಟಣದ ನಿರ್ಮಾಣವೂ ಕಾಲದಿಂದ ಕಾಲಕ್ಕೆ ಬದಲಾವಣೆಯಾಗಿರುವುದನ್ನು ತಿಳಿಯ ಬಹುದಾಗಿದೆ.

ಕಂಪಿಲೆಯು ವಿಜಯನಗರ ರಾಜ್ಯದ ಆಯಕಟ್ಟಿನ ಸ್ಥಳದಲ್ಲಿದ್ದರೂ ವಿಜಯನಗರ ಕಾಲದ ಪೂರ್ಣ ಲಕ್ಷಣಗಳನ್ನುಳ್ಳ ದೇವಾಲಯವಾಗಲಿ ದೇವಾಲಯದ ಅವಶೇಷ ಗಳಾಗಲಿ ಇಲ್ಲಿ ಕಂಡು ಬಂದಿಲ್ಲವೆಂಬುದನ್ನು ಹಿಂದೆಯೇ ಹೇಳಲಾಗಿದೆ.

ವಿಜಯನಗರದ ಅರಸ ಅಚ್ಯುತರಾಯನ ಕಾಲದ ಶಾಸನವನ್ನು ಒಳಗೊಂಡಿರುವ ಪಂಪಾಪತಿ ದೇವಾಲಯವನ್ನು ವಿಜಯನಗರ ಕಾಲಕ್ಕೆ ಸೇರಿಸಬಹುದಾದರೂ ದೇವಾಲಯವನ್ನು ಅವಲೋಕಿಸಿದರೆ ದೇವಾಲಯವು ವಿಜಯನಗರಪೂರ್ವದ್ದೆಂಬ ಶಂಕೆ ಮೂಡುತ್ತದೆ.

ಶಾಸನದ ಪ್ರಕಾರ ಈ ದೇವಾಲಯದ ಪಕ್ಕದ ದೇವಿಯ ಮಂಟಪವನ್ನು ಕಟ್ಟಿಸಿದ ಉಲ್ಲೇಖಿಸಿದೆ. ಹೀಗಾಗಿ ಈ ಮಂಟಪವನ್ನು ಕ್ರಿ.ಶ. 1530 ಕಾಲಕ್ಕೆ ಹಾಕಬಹುದಾಗಿದೆ.

ಹಂಪಿಯ ವಿರೂಪಾಕ್ಷ ದೇವರ ಹೆಸರಿನಲ್ಲಿ ದೇವಾಲಯವನ್ನು ಹಾಗೂ ಪಂಪಾ ದೇವಿಯ ಹೆಸರಿನಲ್ಲಿ ಮಂಟಪವನ್ನು ರಚಿಸಲಾಗಿದೆ. ಪಂಪಾಪತಿ ದೇವಾಲಯದಲ್ಲಿ ಗರ್ಭಗೃಹ ನವರಂಗವೆಂದೂ ಕರೆಯಬಹುದಾದ ಭಾಗ ಅದಕ್ಕೆ ಹೊಂದಿಕೊಂಡಂತೆ ಹಂಪಾದೇವಿಯ ಗರ್ಭಗೃಹವಿದೆ. ದೇವಾಲಯದ ಪ್ರದೇಶದಲ್ಲಿ ಮುಖಮಂಟಪವಿದ್ದು ಅದರ ಪ್ರದೇಶದ ಎರಡೂ ಕಡೆಗೂ ಜಗಲಿಗಳಿದ್ದೂ ಜಗಲಿಗಳಲ್ಲಿ ಚಾಪ, ಅಷ್ಟಿ ಮೂರ್ತಿಗಳ ಕಂಬಗಳಿವೆ. ಮೇಲೆ ಸೀಳು ಬೋದಿಗೆಯನ್ನು ಬಳಸಲಾಗಿದೆ. ಒಂದು ಸ್ತಂಭದಲ್ಲಿ ಗಣಪತಿ ಶಿಲ್ಪ ಇನ್ನೊಂದರಲ್ಲಿ ವಿಜಯನಗರ ಕಾಲದ ದೇವಾಲಯಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಮುಂಗೈಗಳನ್ನು ಊರಿರುವ ಕುಳಿತಿರುವ ವ್ಯಾಳಿ ಶಿಲ್ಪ ಗಳಿವೆ. ದೇವಾಲಯದಲ್ಲಿ ಒಳಭಾಗದಲ್ಲಿಯೂ ಇಂತಹದೇ ಕಂಬಗಳಿದ್ದು ನಿರ್ದಿಷ್ಟ ಆಕಾರವಿಲ್ಲದ ಬೋದಿಗೆಗಳನ್ನು ಬಳಸಲಾಗಿದೆ. ಈ ಕಂಬಗಳಲ್ಲಿ ಶಂಖವನ್ನು ಊದು ತ್ತಿರುವ ಶಿವಗುಣ ಹಾಗೂ ಕೈಯೂರಿ ಕುಳಿತಿರುವ ಸಿಂಹದ ಉಬ್ಬು ಶಿಲ್ಪ ವಿದೆ. ಗರ್ಭಗೃಹದ ಎರಡು ಕೈಗಳಲ್ಲಿ ಶೈವ ಚಿಹ್ನೆ ಸೂಚಕ ದ್ವಾರಪಾಲಕರಿದ್ದು ನಾಲ್ಕು

ಕೈಗಳನ್ನು ಹೊಂದಿರುವ ಶಿಲ್ಪಗಳಿವೆ. ಅವುಗಳ ತಲೆಯ ಮೇಲಿನ ಕಿರೀಟ, ವಿಗ್ರಹದ ಮುಖಲಕ್ಷಣವನ್ನು ಅನುಸರಿಸಿ ಇವನ್ನು ವಿಜಯನಗರ ಕಾಲದ ಶಿಲ್ಪಗಳಿಗೆ ಹೋಲಿಸಬಹುದಾಗಿದೆ. ಗರ್ಭಗೃಹದ ಲಾಟಬಿಂಬದಲ್ಲಿ ಒರಟು ಕೆತ್ತನೆಯುಳ್ಳ ಗಜಲಕ್ಷ್ಮಿ ಶಿಲ್ಪವಿದೆ.

ಪಂಪಾಪತಿ ದೇವಾಲಯದ ಗರ್ಭಗೃಹದೊಳಗಿನ ಶಿವಲಿಂಗವು ವೃತ್ತಾಕಾರದ ಪಾಣಿಪಟ್ಟವನ್ನು ಹೊಂದಿದ್ದು ಭೂಮಟ್ಟಕ್ಕೆ ಅದನ್ನು ಹಾಕಲಾಗಿದೆ. ಹೀಗಾಗಿ ಉದ್ಭವ ಲಿಂಗದಂತೆ ಇದು ಭಾಸವಾಗುತ್ತದೆ. 1530ರಲ್ಲಿ ಪ್ರತಿಷ್ಠಾಪಿಸಲಾಗಿರುವ ಪಂಪಾದೇವಿ ವಿಗ್ರಹವು ಶಿವ ದೇವಾಲಯದ ಎಡಭಾಗದ ಮಂಟಪಗಳಿದ್ದು ಮೂರ್ತಿ ಲಕ್ಷಣಗಳಿಂದ ವಿಜಯನಗರದ ಇತರ ಶಿಲ್ಪಗಳಿಗಿಂತ ಭಿನ್ನವೆಂಬಂತೆ ಕಾಣುತ್ತದೆ. ಇದಕ್ಕೆ ಕಾರಣ ವಿಗ್ರಹದ ವಸ್ತ್ರಾಲಂಕಾರವು ಹಿಂದೆ ಈ ಪ್ರದೇಶದಲ್ಲಿದ್ದಿರಬಹುದಾದ 10ನೆಯ ಶತಮಾನದ ವಿಗ್ರಹದ ಅಲಂಕಾರವನ್ನು ಅನುಸರಿಸಿ ಮೂಡಿದಂತಿದೆ. ಕೇವಲ ಮುಖ ಲಕ್ಷಣ, ಕರಂಡ ಮುಕಟ ಮುಂತಾದವುಗಳ ಆಧಾರದಿಂದ ಈ ವಿಗ್ರಹವನ್ನು ವಿಜಯನಗರ ಕಾಲಕ್ಕೆ ಸೇರಿಸಬಹುದಾಗಿದೆ. ದೇವಾಲಯದ ಮೇಲಿನ ಶಿಖರವು ಜೀರ್ಣೋದ್ಧಾರವಾಗಿದ್ದರೂ ತನ್ನ ಮೂಲ ಸ್ವರೂಪವನ್ನು ಸ್ವಲ್ಪ ಮುಟ್ಟಿಗೆ ಹಾಗೆಯೇ ಉಳಿಸಿಕೊಂಡಿದೆ. ಶಿಖರದ ಮುಂಭಾಗದಲ್ಲಿ ಉಮಾಮಹೇಶ್ವರನ ಗಾರೆಯ ಶಿಲ್ಪವನ್ನು ಬಿಡಿಸಲಾಗಿದೆ. ಇನ್ನೊಂದೆಡೆ ಮೂರು ಕಾಲು ಹೊಂದಿರುವ ಭೃಂಗಿ ಶಿಲ್ಪ ಮತ್ತು ಕಾಳಿಂಗ ಮರ್ದನ ಕೃಷ್ಣನ ಗಾರೆಯ ಶಿಲ್ಪವನ್ನು ಬಿಡಿಸಲಾಗಿದೆ. ಇನ್ನೊಂದೆಡೆ ತಂಬೂರಿ ಹಿಡಿದಿರುವ ವ್ಯಕ್ತಿಯ ಗಾರೆಶಿಲ್ಪವಿದೆ. ಹೀಗೆ ಪೂರ್ಣವಾಗಿ ವಿಜಯನಗರ ರೀತಿಯ ದೇವಾಲಯದ ರೀತಿ ಅಲ್ಲದಿದ್ದರೂ ಸ್ಥಳೀಯ ಮಾದರಿಯನ್ನನುಸರಿಸಿ ರಚಿಸಿದ ಅಥವಾ ಕಟ್ಟಿದ ದೇವಾಲಯ ಇದಾಗಿದೆ.

ಸೋಮೇಶ್ವರ ದೇವಾಲಯ

ಸೋಮೇಶ್ವರ ದೇವಾಲಯ ಊರ ಹೊರಗೆ ಕೆರೆಯ ಕೆಳಗೆ ಇದ್ದು ಒಂದು ಪ್ರವೇಶ ಮಂಟಪವನ್ನು ಹೊಂದಿದೆ. ಈ ಮಂಟಪದ ಒಳ ಮತ್ತು ಹೊರ ಮುಖಗಳಲ್ಲಿನ ಕಂಬಗಳು ಪಂಪಾಪತಿ ದೇವಾಲಯದ ಕಂಬಗಳಂತೆ ಇವೆ. ಕಂಬಗಳ ಮೇಲೆ ಸೀಳು ಬೋದಿಗೆಯನ್ನು ಹೊಂದಿದೆ. ಕಂಬಗಳ ಬುಡದಲ್ಲಿ ಕೈ ಊರಿ ಕುಳಿತ ಸಿಂಹಗಳ ಶಿಲ್ಪ ಗಳಿವೆ. ಈ ದೇವಾಲಯದ ಮಂಟಪದ ಭಾಗಗಳು ಸಂಪೂರ್ಣವಾಗಿ ಜೀರ್ಣೋದ್ಧಾರ ಗೊಂಡಿದೆ. ಹೀಗಾಗಿ ಮುಖಮಂಟಪ ಮತ್ತು ಮಂಟಪಗಳನ್ನು ಬಿಟ್ಟರೆ ವಿಜಯನಗರಕ್ಕೆ ಸೇರಬಹುದಾದ ಯಾವುದೇ ಅವಶೇಷಗಳೂ ತಿಳಿದುಬಂದಿಲ್ಲ.

ಸೋಮೇಶ್ವರ ದೇವಾಲಯದ ಗರ್ಭಗೃಹದ ಮೇಲಿರುವ ಶಿಖರವು ವಿಜಯನ
ಕಾಲದ್ದಾವರೂ ಬಹಳಷ್ಟು ಜೀರ್ಣಗೊಂಡಿದ್ದು, ಅದರಲ್ಲಿನ ಗಾರೆಶಿಲ್ಪಗಳೂ ತವ
ಆಕಾರವನ್ನು ಕಳೆದುಕೊಂಡಿದೆ.


ಹೀಗಾಗಿ ಕಂಪಿಲಿಯ ಆಯಕಟ್ಟಿನ ಸ್ಥಳದಲ್ಲಿದ್ದರೂ ವಿಜಯನಗರ ಕಾಲ
ಅರಸರಾಗಲಿ, ಮಾಂಡಲಿಕರಾಗಲಿ, ಇಲ್ಲಿ ಯಾವುದೇ ಪ್ರಮುಖ ವಾಸ್ತುರಚನೆಗಳನ
ಮಾಡಿಲ್ಲವೆಂದೂ ಹೇಳಬಹುದಾಗಿದೆ.



ಪಂಪಾಪತಿ ದೇವಾಲಯ
ಕಂಪ್ಲಿ



ನಂದಿ ಮಂಟಪ



ಪಂಪಾಪತಿ ದೇವಾಲಯದಲ್ಲಿರುವ
ಶಾಸನ

೩೦. ಹರಪನಹಳ್ಳಿ ಪಾಳೆಯಗಾರರು

ಕುಂ. ಬಾ. ಸದಾಶಿವಪ್ಪ

ಕೃಷ್ಣದೇವರಾಯನ ನಂತರದ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯ ಅವನತಿಯ ಹಾದಿಯಲ್ಲಿ ಸಾಗಿದ್ದಿತು. ವಿಜಯನಗರಕ್ಕೆ ನೆರವಾಗಿದ್ದ ಚಿಕ್ಕ ಚಿಕ್ಕ ಸೇನಾ ನಾಯಕರು ಸ್ವತಂತ್ರ ಪಾಳೆಯಗಾರರಾಗಿ ದಕ್ಷಿಣ ಭಾರತದಲ್ಲಿ ಗುರುತಿಸಿಕೊಂಡರು. ಅವೇ ಕೆಳದಿ, ನಾಯಕನಹಟ್ಟಿ, ಮತ್ತೋಡು, ಚಿತ್ರದುರ್ಗ, ಹಾಗಲವಾಡಿ, ಹರಪನಹಳ್ಳಿ, ಗುಡೇಕೋಟೆ, ಜರ್ಮಲಿ, ಸುರಪುರ, ಬಳ್ಳಾರಿ, ಸವಣೂರು ಕನಕಗಿರಿ, ರಾಯದುರ್ಗ ಮೊದಲಾದವು.

ಹರಪನಹಳ್ಳಿ ಹೆಸರಿಗೆ ಕಾರಣಗಳು

ಹರಪನಹಳ್ಳಿ ಪೂರ್ವದಲ್ಲಿ ಕೋಗಳಿ ಐನೂರಕ್ಕೆ ಸೇರಿದ ಪ್ರದೇಶ. ಮೂವತ್ತರ ಮುತ್ತಿಗೆ, ಕೋಗಳಿ ನಾಡಿನ 30ರ ಉಪ ವಿಭಾಗ. ಇದಕ್ಕೆ ಬ್ರಾಹ್ಮಣ ವಿಷ್ಣುನಾಯಕನ ಪುತ್ರ ಹರಿಯಣ್ಣ ಹೆಗ್ಗಡೆತನ ಮಾಡುತ್ತಿದ್ದ. ಅವನಿಗೆ ಹರಿಯಣ್ಣಹರಿಹರ, ಹರಿಯಪ್ಪ ಎಂದು ಕರೆಯುತ್ತಿದ್ದರು. ಹರಿಯಪ್ಪನ ಹೆಸರಿನಲ್ಲಿ ಸ್ಥಾಪನೆಯಾದ ಒಂದು ಬ್ರಾಹ್ಮಣರ ಅಗ್ರಹಾರವೇ ಹರಪನಹಳ್ಳಿ. ಇದಕ್ಕೆ ಬ್ರಹ್ಮಪುರಿ ಎಂದೂ ಕರೆಯಲಾಗಿದೆ. ಹರಪನಹಳ್ಳಿ ಸುತ್ತಹಳ್ಳಿಗಳ ಶಾಸನಗಳಲ್ಲಿ ಹರಿಯಣ್ಣನ ವಿಚಾರ ಪ್ರಸ್ತಾಪಿಸಲಾಗಿದೆ. ಹದಿಮೂರನೇ ಶತಮಾನದಲ್ಲಿ ಬಾಗಳಿಗೂ ಸೇರಿದೆ. ಬಾಗಳಿ ಕಂಚಿನ ಪತ್ರದಿಂದ ಇದು ಗೊತ್ತಾಗುವುದು. ಲಿಂಗಣ್ಣಕವಿ ವಿರಚಿತ ಕೆಳದಿ ನೃಪ ವಿಜಯದಲ್ಲಿ ಮೊದಲ ಸೋಮಶೇಖರ ನಾಯಕನಿಗೆ 'ಹರಪುರಾಧೀಶ್ವರ' ಎಂದು ಸಂಬೋಧಿಸಿದೆ. ೧೯೪೭ರ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಹರಪನಹಳ್ಳಿಯಲ್ಲಿ ಶ್ರೀ ವೈ.ನಾಗೇಶ ಶಾಸ್ತ್ರಿಗಳು 'ಹರಿಪುರ' ಎಂದು ಕರೆದಿರುವರು. ಡಾ. ಎಂ.ಎಂ.ಕಲಬುರ್ಗಿಯವರು ಸಂಪಾದಿಸಿದ ಬಳ್ಳಾರಿ ಜಿಲ್ಲಾ ಕೈಫಿಯತ್ತಿನಲ್ಲಿ ಹಾರಪ್ನಹಳ್ಳಿ, ಹರಪ್ನಹಳ್ಳಿ, ಹರುಪನಹಳ್ಳಿ ಸೀಮೆ ಎಂದು ಕರೆಯಲ್ಪಟ್ಟಿದೆ. ಈ ಪಟ್ಟಣದ ಪೂರ್ವ ದಿಕ್ಕಿ ಹೊಂಬಳಗಟ್ಟಿ - ನಿಚ್ಚಾಪುರ, ಪಶ್ಚಿಮ ದಿಕ್ಕಿಗೆ ಹಾರಕನಾಳು, ಹೂಲಿಟ್ಟಿ, ಉತ್ತರ ದಿಕ್ಕಿಗೆ ಶೃಂಗಾರತೋಟ- ಬಾಗಳಿ, ದಕ್ಷಿಣ ದಿಕ್ಕಿಗೆ ಜಿಟ್ಟನಕಟ್ಟಿ- ತಲವಾಗಲು ಗ್ರಾಮಗಳು ಕಂಡುಬರುತ್ತವೆ. ಸುತ್ತಲೂ ಪರ್ವತ ಪ್ರದೇಶವಿದ್ದು ಮಧ್ಯವಿರುವ ಈ ಪಟ್ಟಣ, ಮೂಲದಲ್ಲಿ ಹನ್ನೆರಡು ಜನ ಬ್ರಾಹ್ಮಣರು ಮೂವತ್ತರ ಮುತ್ತಿಗೆಗೆ ತೆರಳಿ ಈಗ ಮುತ್ತಿಗೆಯ ಪೆರ್ಗಡೆಯಾಗಿದ್ದ ವಿಷ್ಣುಕುಮಾರನ

ಮಗ ಹರಿಕುಮಾರ ಅಥವಾ ಹರಿಯಪ್ಪ ಪೆರ್ಗಡೆಯಿಂದ ಹಿರಪುರ ಅಗ್ರಹಾರ ಪಡೆದರು. ಕೇವಲ ಹನ್ನೆರಡು ಮನೆಗಳ ಒಂದು ಚಿಕ್ಕ ಗ್ರಾಮವಾಗಿ ಸ್ಥಾಪಿಸಿದ್ದು ಅದರ ಸಂಕೇತವೋ ಎಂಬಂತೆ ಹರಪನಹಳ್ಳಿ ಪಟ್ಟಣಕ್ಕೆ ಈಗಲೂ ಹನ್ನೆರಡು ಅಗಸಿಗಳು, ಹನ್ನೆರಡು ಹೊರಕೈ ಹನುಮಂತ ದೇವರುಗಳು, ಹನ್ನೆರಡು ಗರಡಿ ಮನೆಗಳು, ಹನ್ನೆರಡು ಓಣಿಗಳು ಕಂಡು ಬರುತ್ತವೆ.

ವಿಜಯನಗರ ಸೇನೆಯಲ್ಲಿ ಕೆಲಸ ಮಾಡುತ್ತಿದ್ದ ಮಾಚೀ ನಾಯಕ. ಮಗ ದಾದೇ ನಾಯಕ ಕೆಲ ಜನ ಬೇಡರನ್ನು ಒಂದುಗೂಡಿಸಿ, ಕಾನಳ್ಳಿ-ಬಾಗಳಿ ಪ್ರದೇಶದಲ್ಲಿನ ಹಲವು ಹಳ್ಳಿಗಳ ಗೌಡರನ್ನು ಹೆದರಿಸಿ ಮೊದಲು ಮೂವತ್ತು ಮೂರು ಹಳ್ಳಿಗಳನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡನು.

ಈ ಹಿಂದೆ ವಿಜಯನಗರದ ಅರಸರಲ್ಲಿ ಏನೋ ತಪ್ಪು ಎಸಗಿ, ಚಿತ್ರದುರ್ಗದ ಮತ್ತಿತಿಮ್ಮಣ್ಣನಾಯಕ ಮತ್ತು ದಾದಾನಾಯಕ ಇಬ್ಬರೂ ಸೆರೆಮನೆ ಸೇರಿದ್ದರು. ಆಗ ಮತ್ತಿತಿಮ್ಮಣ್ಣನಿಗೆ ದಾದಾನಾಯಕ ಸೆರೆಮನೆಯಲ್ಲಿ ನೆರವಾಗಿದ್ದನೆಂಬುದು ಪ್ರತೀತಿ. ಒಂದು ಬಾರಿ ಬಸವಾ ಪಟ್ಟಣದ ಕೆಂಗಣ್ಣ ನಾಯಕನು ಚಿತ್ರದುರ್ಗದ ಮೇಲೆ ಯುದ್ಧ ಸಾರಿದ್ದನು. ಆಗ ಬಾಗಳಿಯ ದಾದಾನಾಯಕ ತನ್ನ ಚಿಕ್ಕ ಸೇನೆಯೊಡಗೂಡಿ ಚಿತ್ರದುರ್ಗ ವನ್ನು ತಲುಪಿ, ಕೆಂಗಣ್ಣನನ್ನು ಎದುರಿಸಿ ಮತ್ತಿತಿಮ್ಮಣ್ಣನಿಗೆ ವಿಜಯ ತಂದುಕೊಟ್ಟನು. ಈ ಎರಡೂ ಕಾರಣಗಳಿಂದ ಮತ್ತಿತಿಮ್ಮಣ್ಣನಾಯಕ ತನ್ನ ಮಗಳು ಹೊನ್ನಾನಾಗತಿಯನ್ನು ದಾದೇ ನಾಯಕರಿಗೆ ಕೊಟ್ಟು, ವಿವಾಹವನ್ನು ಜರುಗಿಸಿದನು. ವರದಕ್ಷಿಣೆಯೆಂದು ಉಚ್ಚಂಗಿದುರ್ಗ ಕೋಟೆಯನ್ನು ಕೊಟ್ಟನು. ಹೀಗೆ ಸ್ಥಾಪಿಸಿದ ರಾಜ್ಯ ವಿಸ್ತರಿಸುತ್ತ ೪೬೦ ಕಂದಾಯ ಹಳ್ಳಿಗಳಾದವು. ಅದಕೊಬ್ಬ ಗೌಡರು ಕಾಣಿಸಿದರು. ವಲ್ಲಭಾಪುರಕ್ಕೆ ಶ್ರೀ ಎಂ.ಪಿ. ಪ್ರಕಾಶರ ಪೂರ್ವಜರು ಗೌಡರಾಗಿದ್ದರು. ಹರಪನಹಳ್ಳಿ ಸೀಮೆಯಾಗಿ ಪೂರ್ವ ದಿಕ್ಕಿಗೆ ಹುಲಿಗಿ-ಹೊಸೂರು-ಬಸಾಪುರ, ಪಶ್ಚಿಮಕ್ಕೆ ಮೈಲಾರ, ಹಿರೇಕುರುವತ್ತಿ, ಉತ್ತರ ದಿಕ್ಕಿಗೆ ಮೊದಲಗಟ್ಟ, ದಕ್ಷಿಣ ದಿಕ್ಕಿಗೆ ದಾವಣಗೆರೆ ಹತ್ತಿರದ ಮಾಗಾನಹಳ್ಳಿ ಗ್ರಾಮ ಮೇರೆಗಳಾಗಿ ೩೬೪೦ ಚದುರ ಮೈಲುಗಳ ವಿಸ್ತೀರ್ಣವಾಗಿ ಬೆಳೆಯಿತು. ಹದಿನೈದು ಪುರುಷರು ಒಬ್ಬ ಸ್ತ್ರೀ ಒಟ್ಟಿಗೆ ಹದಿನಾರು ಜನರು ಕ್ರಿ.ಶ. ೧೫೬೩ ರಿಂದ ೧೮೦೦ ರವರೆಗೆ ರಾಜ್ಯವಾಳಿದರು. ಮಧ್ಯ ಮಧ್ಯ ರಾಜ್ಯ ಅಸ್ಥಿರವೂ ಹೊಂದಿದ್ದಿತು. ಕಾರಣ ಕೊನೆ ಅರಸ ಪೂನಾ ಮತ್ತು ಶ್ರೀರಂಗಪಟ್ಟಣದಲ್ಲಿದ್ದನು. ಕೊಪ್ಪಳ ಮತ್ತು ಲಕ್ಷ್ಮೇಶ್ವರಗಳನ್ನು ಈ ಅರಸರು ಗೆದ್ದರು. ಅವರಿಂದ ಪ್ರತಿ ವರ್ಷ ಕಪ್ಪ ಪಡೆದರು. ಆದರೆ ಅಲ್ಲಿಯೆ ಆಳ್ವಿಕೆಯನ್ನು ಮುಂದುವರಿಸಲಿಲ್ಲ. ಹರಪನಹಳ್ಳಿ ಪಾಳೆಯಗಾರರ ರಾಜ್ಯಕ್ಕೆ ನಾಲ್ಕು ಮುಖ್ಯ ಪಟ್ಟಣಗಳು: ೧) ಬಾಗಳಿ ೨) ಹರಪನಹಳ್ಳಿ ೩) ಉಚ್ಚಂಗಿ ದುರ್ಗ ೪) ನಾರಾಯಣದೇವರ ಕೆರೆ.

ಹರಪನಹಳ್ಳಿ ಪಾಳೆಯಗಾರರ ವಂಶಾವಳಿ

ದಾದಾಯ್ಯನಾಯಕ (ದಾದೇನಾಯಕ)
೧೪೮೮-೧೫೧೪ ಶಾ.ಶ.

೧) ಹೊನ್ನಾನಾಗತಿ ೨) ಜಂಪಾನಾಗತಿ ೩) ಭರ್ಮಾನಾಗತಿ ೪) ಹನುಮನಾಗತಿ

ಧರ್ಮನಾಗತಿ

ರಂಗಣ್ಣನಾಯಕ (ರಂಗನಾಯಕ) ಜಂಪಾನಾಗತಿ
೧೫೧೪-೧೫೩೮ (ಪಟ್ಟಣದ ರಾಣಿ) (ಧರ್ಮಪತ್ನಿ)

ಬಾಗಳಿ ಮೊದಲ ಬಸಪ್ಪನಾಯಕ ಅಥವಾ ಭರ್ಮಣ್ಣನಾಯಕ
೧೫೩೮-೧೫೭೦ ಶಾ.ಶ.

ಹೊಂಬಣ್ಣ ನಾಯಕ (ಓಬಣ್ಣ ನಾಯಕ)
೧೫೭೨-೧೫೭೭ ಶಾ.ಶ.

ವೀರಮುಮ್ಮಡಿನಾಯಕ
೧೫೭೭-೧೫೮೯

ಮುಮ್ಮಡಿನಾಯಕ
೧೫೮೬-೧೬೦೯ ಶಾ.ಶ.

ಬಸವಂತನಾಯಕ (ಕೊಟ್ರಪ್ಪನಾಯಕ)
೧೬೦೯-೧೬೨೭ ಶಾ.ಶ.

ಮರಿಕೊಟ್ರಪ್ಪನಾಯಕ
೧೬೨೭-೧೬೩೭ ಶಾ.ಶ.

ಎರಡನೇ ಬಸವಂತನಾಯಕ
೧೬೩೭-೧೬೩೮ ಶಾ.ಶ.

ಮಡದಿ ಹರಿಯಮ್ಮಾಜಿ ನಾಗತಿ
೧೬೩೮-೧೬೪೩ ಶಾ.ಶ.

(ದತ್ತುಪುತ್ರ) ಮುದಿಬಸಪ್ಪನಾಯಕ
(ಗೋಣೆಪ್ಪನಾಯಕ)
೧೬೪೩-೧೬೬೩ ಶಾ.ಶ.

ಮೊದಲ ವೀರಬಸಪ್ಪನಾಯಕ
೧೬೬೩-೧೬೬೪ ಶಾ.ಶ.

ಪುತ್ರ ಹೆಸರು-ಜಂಬಣ್ಣ ೧ನೇ ಸೋಮಶೇಖರನಾಯಕ ಪತ್ನಿ ಸೋಮಮ್ಮಾಜಿ
ಪ್ರೀತಿ ಹೆಸರು-ಪುಟ್ಟರಸ ೧೬೬೪-೧೬೮೮ ಶಾ.ಶ. (ಪಟ್ಟದ ರಾಣಿ)
ಹೆಂಡತಿ ಹೆಸರು-ರೇವಕ್ಕ
ಪ್ರಾಯ ೧೮ ರಲ್ಲಿ ಮೈಲಿಬೇನೆಯಿಂದ
ಮೃತನಾದನು

೨ನೇ ವೀರಬಸಪ್ಪನಾಯಕ (ಅಡಿವಿಬೊಮ್ಮಣ್ಣ ನಾಯಕ

೧೬೮೮-೧೬೯೦ ಶಾ.ಶ.

೨ನೇ (ದತ್ತುಪುತ್ರ) ಬಾಗುಳಿ ಬಸಪ್ಪನಾಯಕ

೧೬೯೦-೧೭೦೯ ಶಾ.ಶ.

ಅಯ್ಯಪ್ಪನಾಯಕ

೧೭೦೯-೧೭೧೨ ಶಾ.ಶ.

ಎರಡನೇ ಸೋಮಶೇಖರನಾಯಕ

೧೭೦೯-೧೭೨೧ ಶಾ.ಶ.

೧) ಪತ್ನಿ ಬಸಮ್ಮಾಜಿ ೨) ನೀಲಮ್ಮಾಜಿ ೩) ಹಿರೆಬಸಮ್ಮಾಜಿ ೪) ಸೋಮಮ್ಮಾಜಿ

ಈ ನಾಯಕರಲ್ಲಿ ಬಾಗಳಿ ಬಸಪ್ಪನಾಯಕ, ಶ್ರೀಕರ ಬಸಪ್ಪನಾಯಕ ಮುಮ್ಮಡಿ ಬಸಪ್ಪನಾಯಕ, ಕೊಟ್ರಬಸಪ್ಪನಾಯಕ, ಮರಿಕೊಟ್ರಪ್ಪನಾಯಕ, ವೀರಬಸಪ್ಪನಾಯಕ, ಮೊದಲ ಬಸವಂತನಾಯಕ, ಅಥವಾ ಬಾಗಳಿ ಬಸಪ್ಪನಾಯಕ, ಎರಡನೇ ಬಸವಂತ ನಾಯಕ. ಹೀಗೆ ಬಹುಜನ ಬಸವಪ್ಪ ನಾಯಕರು ಕಂಡು ಬರುವರು. ಇವರೆಲ್ಲ ಬಾಗಳಿ ಯಿಂದ ಬಂದ ನಾಯಕರಾಗಿರುವರು.

ಈ ನಾಯಕರು ಮೊದ ಮೊದಲು ಸ್ವತಂತ್ರ ಅರಸರಾಗಿದ್ದು, ಬರುಬರುತ್ತ ದೊಡ್ಡ ಅರಸರ ಅಧೀನ ಅರಸರಾಗಿದ್ದರು. ಆಯಾ ಅರಸರಿಗೆ ಪ್ರತಿವರ್ಷ ಕೆಳಗಿನಂತೆ (ಕಪ್ಪವನ್ನು) ಹಣವನ್ನು ಅರ್ಪಿಸುತ್ತಿದ್ದರು.

೧) ಪೇಶ್ವೆಗಳಿಗೆ	=	೨೦೦೦೦೦ ಪಗೋಡಗಳು
೨) ಹೈದರಾಬಾದ್ ನವಾಬರಿಗೆ	=	೧೨೦೦೦ ಪಗೋಡಗಳು
೩) ಹೂಟಿ ಮುರಾರಿರಾವ್‌ಗೆ	=	೬೦೦೦ ಪಗೋಡಗಳು
೪) ಸೈನ್ಯದ ಖರ್ಚು ವರ್ಷಕ್ಕೆ	=	೮೦೦೦ ಪಗೋಡಗಳು
೫) ಅರಮನೆ ಖರ್ಚು ವರ್ಷಕ್ಕೆ	=	೧೦೦೦ ಪಗೋಡಗಳು
೬) ರಾಜ್ಯದ ಪ್ರಮುಖ ದೇವಾಲಯಗಳ ದುರಸ್ತಿಗೆ	=	೮೦ ಪಗೋಡಗಳು
೭) ಕೆರೆಕಾಲುವೆಗಳ ದುರಸ್ತಿಗೆ	=	೨೫೦ ಪಗೋಡಗಳು
೮) ರಾಜ್ಯದ ಒಟ್ಟು ವಾರ್ಷಿಕ ಆದಾಯ	=	೮೦೦೦೦೦ ಪಗೋಡಗಳು

(ಪಗೋಡ-ಚಿನ್ನದ ನಾಣ್ಯ)

(ಈ ನಾಯಕರಿಗೆ ಬಾಗಳಿ ಭೂಪರೆಂದು ಕೊಟ್ಟೂರೇಶ್ವರ ಪುರಾಣದಲ್ಲಿ ತಿಳಿಸಿದೆ).

ಹರಪನಹಳ್ಳಿಯ ಪಾಳೆಗಾರರು

ಆಕರಗಳು :ಶಾಸನಗಳು

೧) ದಾದಾಯ್ಯನಿಗೆ ಸಂಬಂಧಿಸಿದ ಹದಿನಾರನೆಯ ಶತಮಾನದ ಮುಚ್ಚನೂರಿನ ಶಾಸನ, ಜಗಲೂರು.

೨) ೧೫೮೦ ರ ದಾದಯ್ಯ ನಾಯಕನ ಶಾಸನ ಕೊಟ್ಟೂರು ಕರಣಿಕರ ಮನೆ ಮುಂದಿನ ಶಾಸನ.

೩) ೧೭೧೦ ರ ಹಡಗಲಿ ತಾಲೂಕು ಹೊಲದ ಬಾಗಳಿ ತಿಂಮಂಮ್ಮಾಜಿ ಭೂದಾನ ಶಾಸನ.

೪) ಹೆರಡದ ಶಾಸನ, ಕಾಲವಿಲ್ಲಬಾಗಳಿ ಬಸಪ್ಪ ನಾಯಕನ ಆದೇಶದ ಶಾಸನ.

೫) ಅದೇ ಗ್ರಾಮದ ಎರಡನೇಯ ಶಾಸನ ಬಾಗಳಿ ಬಸಪ್ಪನಾಯಕನಿಗೆ ಸೇರಿದ್ದು ಕ್ರಿ. ಶ. ೧೮೫೦.

೬) ಅದೇ ಗ್ರಾಮದ ಮೂರನೇ ಶಾಸನ ಶೋಭಕೃತು ಜೇಷ್ಠ ಬರಲು ಬಾಗಳಿ ಬಸಪ್ಪ ಗುರುಪಾದಕ್ಕೆ ಅರ್ಪಿಸಿದೆ ಭಕ್ತಿ.

೭) ಅಲ್ಲಿಯೇ ನಾಲ್ಕನೆಯ ಶಾಸನ ಚೈತ್ರ ಸು. ೧೩ ರಲ್ಲಿ ಮುದಿ ಬಸವಪನಾಯಕ ಭೂದಾನ ನೀಡಿದ ಶಾಸನ.

೮) ದೊಡ್ಡ ಗೋವಿಂದನಹಳ್ಳಿ ಈಶ್ವರ ಗುಡಿ ಕಂಬದಲ್ಲಿ ಕಾಲ ಕ್ರಿ. ಶ. ೧೭೫೬ ಮುಮ್ಮಡಿ ಬಸವಪ್ಪ ನಾಯಕನ ಶಾಸನ.

೯) ಉಚ್ಚಂಗೆಮ್ಮನ ಗುಡಿಯ ಗಂಟೆಯ ಶಾಸನ ಕ್ರಿ. ಶ. ೧೭೦೯.

೧೦) ಬಲ ಭಾಗದ ದೊಡ್ಡ ಗಂಟೆಯ ಶಾಸನ ೧೬೫೨.

೧೧) ಮೈದೂರು ಹೊಲದ ಶಾಸನ ಬಸವೈಯನಾಯಕ ೧೬೪೪ (ಮುದಿಬಸಪ್ಪ ನಾಯಕನ ಶಾಸನ).

೧೨) ಕಸವನಹಳ್ಳಿ ಶಾಸನ ಬಾಗಳಿ ಬಸಪ್ಪನಾಯಕ ೧೬೬೦ ಶಾಸನ.

೧೩) ನಿಚ್ಚವ್ವನಹಳ್ಳಿ ಆಂಜನೇಯ ಗುಡಿ ಶಾಸನ ಕ್ರಿ. ಶ. ೧೭೨೬ ಬಾಗಳಿ ಬಸಪ್ಪ ನಾಯಕನು ಗ್ರಾಮ ದಾನ ಮಾಡಿರುವನು.

೧೪) ಕೂಡ್ಲಿಗಿ ತಾಲೂಕು ಚಿಕ್ಕೆರೆಯಾಗಿನ ಶಾಸನ ೧೬೧೨ ಸಂಸ್ಥಾನದ ಉಳಿವಿಗೆ ಮಾಡಿದ ಶಾಸನ ಕಲ್ಲು ಒಡೆದಿದೆ.

೧೫) ಅರಸಿಕೆರೆ ಕಟ್ಟೆಯ ಬಳಿ ಹೊಲದ ಶಾಸನ ಬಾಗಳಿ ಬಸಪ್ಪ ನಾಯಕ ಅಯ್ಯನವರು ಭೂದಾನ ಶಾಸನ ಕ್ರಿ. ಶ. ೧೬೬೧, ಕ್ರಿ. ಶ. ೧೬೯೦.

೧೬) ಮುತ್ತಿಗಿ ಕ್ರಿ. ಶ. ೧೬೯೦ ಸೋಮಶೇಖರ ನಾಯಕನ ವಿಚಾರವಿದೆ. ನಿಲುವಂಜಿ ಗ್ರಾಮ ದತ್ತಿಕೊಟ್ಟಿದ್ದು.

೧೭) ವೊಡ್ಡಿನ ಹಳ್ಳಿ ಪ್ರಭುದೇವರ ಮಠದ ಶಾಸನ ಕ್ರಿ. ಶ. ೧೬೯೦ ಮುದಿ ಬಸಪ್ಪ ನಾಯಕನದು.

೧೮) ಕನ್ನಾಯಕನಕಟ್ಟೆ ಬಸವೇಶ್ವರ ದೇವಾಲಯದ ಕಂಬದ ಶಾಸನ ೧೬೩೪ ಮುದಿ ಬಸಪ್ಪನ ವಿಚಾರ.

೧೯) ಹಿರೇಮ್ಯಾಗಳಗೇರಿ ಕಲ್ಲೇಶ್ವರ ಗುಡಿ ಶಾಸನ ಕ್ರಿ. ಶ. ೧೭೧೫ ಎರನಡೇ ಬಸವಂತನಾಯಕನ ವಿಚಾರವಿದೆ.

೨೦) ಕನ್ನಾಯಕನಕಟ್ಟೆ ಹೊಲದ ಬಂಡೆಗಲ್ಲಿನಲ್ಲಿ ಒಂದು ಸಾಲ ಶಾಸನ ಕಾಲವಿಲ್ಲ. ಮುದಿ ಬಸಪ್ಪನ ಶಾಸನವಿರಬೇಕು. ಅದರಲ್ಲಿ ``ಇದು ಕೊಟ್ಟೂರು ಬಸವೇಶ್ವರನಹಳ್ಳಿ"ಎಂದಿದೆ.

೨೧) ಹಗರಿಗಜಾಪುರ ಗ್ರಾಮದ ಶಾಸನ ಇದರಲ್ಲಿ ಕಾಲವಿಲ್ಲ ಬಾಗಳಿ ಬಸಪ್ಪನಾಯಕ ಕಲಿಯುಗದ ಭೋಜ ಎಂದು ಉಲ್ಲೇಖವಿದೆ.

೨೨) ಕೂಡ್ಲಿಗಿ ತಾಲೂಕು ಉಜ್ಜನಿ ಶ್ರೀ ಮರುಳಸಿದ್ಧೇಶ್ವರ ಸ್ವಾಮಿ ಮಠದಲ್ಲಿ ಹರಪನಹಳ್ಳಿ ನಾಯಕರ ಧರ್ಮ ಶಾಸನ.

೨೩) ರಾಣೇಬೆನ್ನೂರು ತಾಲೂಕಿಗೆ ಸೇರಿದ ಉದ್ಗಟ್ಟಿ ಗ್ರಾಮದ ಶಂಕರಾಚಾರ್ಯರ ಮಠದ ಒಳಭಾಗದ ಕಲ್ಲಿನ ಕಟ್ಟಡವನ್ನು ಹರಪನಹಳ್ಳಿ ರಾಣಿ ಕಟ್ಟಿಸಿದ್ದು ಹರಿಯಮ್ಮಾಜಿ ಕಂಬದಲ್ಲಿ ಶಾಸನವಿದೆ.

೨೪) ಪ್ರಸನ್ನ ವೆಂಕಟರಮಣ ಸ್ವಾಮಿ ಗುಡಿ ಶಾಸನ ೧೬ ನೋ ಶತಮಾನದ ಬಾಗಳಿ ಬಸಪ್ಪ ನಾಯಕರದು.

೨೫) ೧೮ ನಿರೂಪಗಳು

೨೬) ಹಾವನೂರು ದ್ಯಾಮವ್ವನ ಮಹಿಮೆ-ಲಾವಣಿ.

೨೭) ಕೋಲಿನ ಪದ

೨೮) ಜಂಬಣ್ಣನ ಬಗ್ಗೆ ಹೊಲದಲ್ಲಿ ಕೂಲಿಯವರು ಹಾಡಿದ್ದು (ಹರಪನಹಳ್ಳಿ)

೨೯) ಪುಟ್ಟರಸ (ಜಂಬಣ್ಣ) ಮಡಿದಾಗ, ಹರಪನಹಳ್ಳಿ ಹೊಲದ ಕೆಲಸದ ಮಹಿಳೆಯರು ಹಾಡಿದ್ದು.

೩೦) ದಾದೇನಾಯಕರ ಶಿಲ್ಪಗಳು :

ಅ) ಒಂದು ತಿಮಲಾಪುರದ ಶ್ರೀ ವೆಂಕಟೇಶ ಗುಡಿಯಲ್ಲಿ

ಆ) ಮೊದಲ ಗಟ್ಟಿ ಹನುಮಂತ ದೇವರ ಗುಡಿ ಬಳಿ.

೩೧) ಬಿಜಾಪುರ ಅರಸರಿಗೆ ಬರೆದ ಎರಡು ಪತ್ರಗಳು.

೩೨) ಪಾಳೆಗಾರರ ಅಧೀನ ಅರಸ ಭರಮನಗೌಡನ ಎರಡು ಪತ್ರಗಳು.

೩೩) ಹರಪನಹಳ್ಳಿಯಲ್ಲಿ ಪಾಳೆಯಗಾರರರು ಸ್ಥಾಪಿಸಿದ ಅರಸು ಮಠಗಳು.

೩೪) ಕುಂಚೂರಲ್ಲಿ ಸ್ಥಾಪಿಸಿದ ಮಠ ಮತ್ತು ಹೊಲ ಸ. ನಂ.

೩೫) ಹರಪನಹಳ್ಳಿಯ ಮೈಲಾರ ದೇವರ ಗುಡಿ ಅದರ ಜಾತ್ರೆ ಆರಂಭ.

೩೬) ಉಚ್ಚಂಗೆಮ್ಮನ ಗುಡಿ ಗುಡ್ಡದ ಮೇಲೆ ಸ್ಥಾಪನೆ.

೩೭) ಚಿಗಟೇರಿ ಶಿವನಯ್ಯನು ಸ್ಥಾಪಿಸಿದ ಕೆರೆ ಬಾವಿಗಳು.

೩೮) ಹಂಪರಸಪ್ಪನ ಬಾವಿಗಳು -೪.

೩೯) ಬಾಗಳಿ, ಹರಪನಹಳ್ಳಿ ಉ. ದುರ್ಗ, ನಾರಾಯಣದೇವರ ಕೆರೆ, ನಾಲ್ಕು ಮುಖ್ಯ ಪಟ್ಟಣಗಳು.

೪೦) ಅವರ ನಿರೂಪಗಳಲ್ಲಿಯ `ಬಸವ'ಮುದ್ರಿಕೆ.

೪೧) ಪೂನಾಪೇಶ್ವೆ ಧಪ್ತರಿಯ ಕಡತ.

೪೨) In 1640 Maha Nayaka Charya Baguli. Basavppa Nayaka Areyya made grant of some villages including a number of perquisities to Laksmeswar Khanappa Ganda.

೪೩) Maha Nayaka Charya Baguli Basavappa Nayaka enjoyed the Mirasi of the Nadgandki in the sime of Yelburgi Mirasi. K. N. Chitnis, Prof. and Head History, University of Pune 5th Feb. 1989.

೪೪) ಕೂಡಲಿ ಶೃಂಗೇರಿ ಮಠದಲ್ಲಿ ದೊರೆತ ದಾನ ಪತ್ರಗಳು -9

೪೫) ಮಿರಾಕೊರನಹಳ್ಳಿ ಗೌಡರ ಮನೆಯ ದಾಖಲೆಗಳು.

೪೬) ಹರಪನಹಳ್ಳಿ ಬೆಟ್ಟನ ಗೌಡರ ಮನೆಯ ಒಂದು ದಾಖಳೆ.

೪೭) ಹರಪನಹಳ್ಳಿ ಬಾರಿಕರ ಕೆಂಚವ್ವನ ಮನೆಯಲ್ಲಿ ದೊರೆತ ಪ್ರಾಚೀನ ದಾಖಲೆ.

೪೮) ಬ್ರಿಟಿಷ್ ಗೆಸೆಟಿಯರ್ ೧೯೭೨.

೫೦) ಅರಸರ ಕಿರೀಟ ಮುಂಡರಿಗೆ ಬಳಿ ಗಟ್ಟಿ ರೆಡ್ಡಿ ಹಳ್ಳಿಯಲ್ಲಿದೆ.

೫೧) ಕೊಟ್ಟೂರೇಶ್ವರ ಪುರಾಣದ ಮುತ್ತಿಗಿ ಪದ.

೫೨) ಲಿಂಗಣ್ಣ ಕವಿಯ ಕೆಳದಿ ನೃಪ ವಿಜಯ.

೫೩) ಟಿ. ಬಿ. ಕೇಶವರಾಯರ ಹರಪನಹಳ್ಳಿ ಪಾಳೆಯಗಾರರು -ಚಿಕ್ಕ ಪುಸ್ತಕ.

೫೪) ಹಾ. ಮಾ. ನಾಯಕರ ಕರ್ನಾಟಕದ ಪಾಳೆಯಗಾರರು.

೫೫) ಬಳ್ಳಾರಿ ಜಿಲ್ಲಾಧಿಕಾರಿಗಳ ಕಛೇರಿಯ ಕಡತಗಳು.

೫೬) ಮೈಲಾರ ಬಸವಲಿಂಗ ಶರಣರ ಪದಗಳು.

೫೭) ಮರಿಯಮ್ಮನಹಳ್ಳಿ ಶೆಟ್ಟರ ರಾಮಮೂರ್ತಿ ಮನೆಯಲ್ಲಿ ದೊರೆತ ರಾಜ -ರಾಣಿಯರ ಭಾವಚಿತ್ರಗಳು.

೫೮) ಡಾ||ಎಫ್. ಟಿ. ಹಳ್ಳಿಕೇರಿ ವಿ. ವಿ. ಹಂಪಿಯವರು ಸಂಶೋಧಿಸಿದ ``ಹಯರತ್ನ ಶ್ರೇಣಿ"ಗ್ರಂಥದಲ್ಲಿ ಬಸವಯ್ಯ ಪಾಳೆಯಗಾರನ ವಿಚಾರವಿದೆ.

೩೧. ಜರಿಮಲೆ ಪಾಳೆಯಗಾರರು

ಪ್ರೊ.ಲಕ್ಷ್ಮಣ್ ತೆಲಗಾವಿ

ಬಳ್ಳಾರಿ ಜಿಲ್ಲೆ, ಕೂಡ್ಲಿಗಿ ತಾಲ್ಲೂಕು, ಗುಡೇಕೋಟೆ ಹೋಬಳಿಯಲ್ಲಿರುವ ಒಂದು ಸಾಮಾನ್ಯ ಹಳ್ಳಿ ಈ ಜರಿಮಲೆ. ಕೂಡ್ಲಿಗಿಯ ಆಗ್ನೇಯಕ್ಕೆ ೧೪ ಕಿ.ಮೀ. ದೂರದಲ್ಲಿದ್ದು, ಇಂದು ಕುಗ್ರಾಮವೆನಿಸುವ ಸ್ಥಿತಿ ತಲುಪಿದೆ. ನೈಸರ್ಗಿಕವಾಗಿ ಇದು ಗುಡ್ಡಗಳಿಂದ ಆವೃತವಾದ ಪ್ರದೇಶ. ಕೂಡ್ಲಿಗಿ ತಾಲ್ಲೂಕಿನಲ್ಲಿ ಕಂಡುಬರುವ ಎರಡು ಬೆಟ್ಟಸಾಲುಗಳಲ್ಲಿ ಒಂದನ್ನು ಕೂಡ್ಲಿಗಿ ಬೆಟ್ಟಸಾಲು ಎನ್ನಲಾಗುತ್ತದೆ. ಇದು ಆನೆಕಲ್ಲುಗುಡ್ಡಕ್ಕೆ ಉತ್ತರದಲ್ಲಿ ಸುಮಾರು ೮ ಕಿ.ಮೀ. ದೂರದಲ್ಲಿ ಆರಂಭಗೊಂಡು ಕೂಡ್ಲಿಗಿಯ ಉತ್ತರ ಮತ್ತು ಪೂರ್ವದ ಕಡೆಗೆ ಮುಂದುವರೆದು, ಮುಂದೆ ಆಗ್ನೇಯದಿಕ್ಕಿಗೆ ಹೊರಳಿ ಜರಿಮಲೆದುರ್ಗದತ್ತ ಸಾಗುತ್ತದೆ. ಸಮುದ್ರಮಟ್ಟದಿಂದ ಈ ದುರ್ಗದ ಶಿಖರದ ಎತ್ತರ ೨,೭೪೩ ಅಡಿ. ಜರಿಮಲೆ ಒಂದು ಕಾಲಕ್ಕೆ ಪಾಳೆಯಗಾರರ ನೆಲೆ. ಕರ್ನಾಟಕ ಚರಿತ್ರೆಯಲ್ಲಿ ಉಲ್ಲೇಖಗೊಂಡಿರುವ ಪಾಳೆಯ ಪಟ್ಟುಗಳ ಸಾಲಿನಲ್ಲಿ ಈ ಸಂಸ್ಥಾನವನ್ನೂ ಗುರುತಿಸಲಾಗಿದೆ.

ಶಾಸನ, ಕಾವ್ಯ, ದಾಖಲೆ ಇತ್ಯಾದಿಗಳಲ್ಲಿ 'ಜರಿಮಲೆ' ಎಂಬುದರ ವಿವಿಧ ರೂಪಗಳು ಕಂಡುಬರುತ್ತವೆ. ಉದಾಹರಣೆಗೆ, ಜದ್ದಿಮಲೆ, ಜರ್ದಿಮಲೆ, ಜಡಿ(ರಿ)ಮ್ಯಾಲೆ, ಜೆರೆಮಲೆ, ಜೆರಿಮಲೆ, ಜರಮಲಿ, ಜರಿಮಲ, ಜರಿಮಲಿ, ಜರ್ಮಾಲಿ, ಜರಿಮಾಲಿ ಇತ್ಯಾದಿ. ಜನಪದ ಸಾಹಿತ್ಯದಲ್ಲಿ ಜರುಮಾಲೆ, ಜರಮಾಲೆ ಎಂಬ ಪ್ರಯೋಗಗಳಿವೆ. ಜೆರೆಮಲೆ ಎಂಬುದಕ್ಕೆ ಸಂವಾದಿಯಾಗಿ ಜೆರಮಠ, ಜರಮಟೆಯೆಂತಲೂ ಸಂಬೋಧಿಸಲಾಗಿದೆ. ಜರಿಮಲೆ ಯೆಂಬುದು ನಿಸರ್ಗವಾಚಿಯಾಗಿ ಕಂಡುಬರುತ್ತದೆ. 'ಜರಿ' ಎಂಬುದು 'ಝರೀ' ಎಂಬ ಸಂಸ್ಕೃತ ಶಬ್ದದ ತದ್ಭವರೂಪ. ಇದಕ್ಕೆ ಕೊಟ್ಟಿರುವ ಅರ್ಥ ಬೆಟ್ಟದ ಕೊರಕಲಿನಲ್ಲಿ ಹರಿಯುವ ನದಿ, ಗಿರಿನದಿ, ಬೆಟ್ಟದಲ್ಲಿ ಹುಟ್ಟಿದ ಪ್ರವಾಹ ಇತ್ಯಾದಿ. 'ಮಲೆ' ಎಂಬುದಕ್ಕೆ ಬೆಟ್ಟ, ಪರ್ವತ ಎಂಬ ಅರ್ಥಗಳಿರುವುದರಿಂದ, ಜರಿಮಲೆಯೆಂಬುದು ಕೊರಕಲಿನಿಂದ, ಹಳ್ಳದಿಂದ ಕೂಡಿದ ಪ್ರದೇಶ ಎಂದಾಗಬಹುದು. ಜರಿಮಲೆಯ ಪ್ರಾಕೃತಿಕ ಪರಿಸರವೂ ಇದನ್ನು ಸಮರ್ಥಿಸುತ್ತದೆ.

ಆಕರ ಸಾಹಿತ್ಯ

ಜರಿಮಲೆ ಪಾಳೆಯಗಾರರ ವೃತ್ತಾಂತ ವಿವರವಾಗಿ ದೊರೆಯುವುದಿಲ್ಲ. ಆದರೆ ಈ ಪಾಳೆಯಗಾರರನ್ನು ಕುರಿತು ಅಧ್ಯಯನ ಕೈಗೊಳ್ಳುವಲ್ಲಿ ನೆರವಿಗೆ ಬರುವ ಮೂಲ ಹಾಗೂ ಮುಖ್ಯ ಆಕರಗಳನ್ನು ಇಲ್ಲಿ ಪ್ರಸ್ತಾಪಿಸಬಹುದು. ಕಲೆಕ್ಟರ್ ಥಾಮಸ್ ಮನ್ರೋ 'ಬೋರ್ಡ್ ಆಫ್ ರೆವಿನ್ಯೂ'ಗೆ ಬರೆದು ಒಪ್ಪಿಸಿದ ೧೮೦೨ ಮಾರ್ಚ್ ೨೦ರ ರಾಜಕೀಯ ವರದಿ;

೧೮೯೨ರಲ್ಲಿ ಬಳ್ಳಾರಿ ಕಲೆಕ್ಟರೇಟ್ ಪ್ರೆಸ್‌ನಲ್ಲಿ ಮುದ್ರಿತವಾದ ಪ್ರತಿ ಇದು. ಜರಿಮಲೆ ಪಾಳೆಯಗಾರರನ್ನು ಒಳಗೊಂಡಂತೆ ಕೆಲವು ಪಾಳೆಯಗಾರರ ಮನೆತನಗಳ ಪೂರ್ಣ ವಿವರಗಳನ್ನೊಳಗೊಂಡಿದೆ. ಇದರೊಡನೆ ಗಮನಿಸಬೇಕಾದ ಇತರ ದಾಖಲೆಗಳೆಂದರೆ, ಮನ್ರೋ ರವಾನಿಸಿದ ಆಡಳಿತಾತ್ಮಕ ಸುತ್ತೋಲೆಗಳು; ಆಯ್ದ ಆಡಳಿತಾತ್ಮಕ ಒಕ್ಕಣೆಗಳು; ಇತರ ಅಧಿಕೃತ ಟಿಪ್ಪಣಿಗಳು; ಹಾಗೂ ನಾಲ್ಕು ಸಂಪುಟ ಗಳಲ್ಲಿರುವ ಆಯ್ದ ಮನ್ರೋ ಬರವಣಿಗೆಗಳು ಇತ್ಯಾದಿ. ಇನ್ನೊಂದು ಅಧಿಕೃತ ದಾಖಲೆ ಯೆಂದರೆ, ಹಿಂದಿನ ಮದರಾಸು ರಾಜ್ಯದ ಜಿಲ್ಲಾ ಗೆಝೆಟಿಯರ್‌ಗಳ ಸರಣಿಯಲ್ಲಿ ೧೯೦೪ ರಲ್ಲಿ ಪ್ರಕಟವಾದ ಡಬ್ಲ್ಯೂ. ಫ್ರಾನ್ಸಿಸ್ ಸಿದ್ಧಪಡಿಸಿದ **ಬಳ್ಳಾರಿ ಜಿಲ್ಲಾ ಗೆಝೆಟಿಯರ್**. ಎಂ.ಎಂ.ಡಿ ಲಾ ಟೂರ್ (De La Tour) ಎಂಬವನು ರಚಿಸಿದ **'ದಿ ಹಿಸ್ಟರಿ ಆಫ್ ಹೈದರ್ ಷಾ'** ಕೃತಿ ಸಹಾ ಜರಿಮಲೆ ಪಾಳೆಯಗಾರರನ್ನು ಕುರಿತು ಪ್ರಸ್ತಾಪಿಸುತ್ತದೆ. ಲೇಖಕ ಡಿ ಲಾ ಟೂರ್ ಹೈದರ್‌ಅಲಿಯ ಸೇವೆಯಲ್ಲಿದ್ದ ಫ್ರೆಂಚ್ ದಳಪತಿಯೇ ಆಗಿರಬೇಕು. ಹೈದರ್‌ಅಲಿ ಕುರಿತು ಈತನ ಕೃತಿ ಪ್ರಕಟಗೊಂಡಿದ್ದು ೧೭೮೪ರಷ್ಟು ಹಿಂದೆಯೇ ಎಂಬುದು ವಿಶೇಷ. ಹೈದರ್‌ಅಲಿ ಮರಣಿಸಿದ ಎರಡು ವರುಷಗಳಲ್ಲೇ ಈ ಕೃತಿ ಬೆಳಕುಕಂಡಿದ್ದನ್ನು ಗಮನಿಸಿದರೆ, ಹೈದರ್ ಜೀವಂತ ನಾಗಿದ್ದಾಗಲೇ ಈತ ತನ್ನ ಕೃತಿಯನ್ನು ಬರೆದು ಪೂರೈಸಿದ್ದನೆಂಬುದು ಖಚಿತವಾಗುತ್ತದೆ. ಈ ದೃಷ್ಟಿಯಿಂದಲೂ ಜರಿಮಲೆ ಪಾಳೆಯಗಾರರ ಬಗೆಗೆ ಈ ಲೇಖಕ ತಾಜಾ ಮಾಹಿತಿ ಕೊಟ್ಟಿರುವ ಸಾಧ್ಯತೆಯುಂಟು.

ದೇಸೀ ಆಕರಗಳಲ್ಲಿ ಕೆಲವು ಸಮಕಾಲೀನ ಚಾರಿತ್ರಿಕ ದಾಖಲೆ ಮತ್ತು ಸಾಹಿತ್ಯಕೃತಿಗಳನ್ನು ಗುರುತಿಸಬಹುದು. ೧೮ನೇ ಶತಮಾನದ **ಕೆಳದಿನೃಪವಿಜಯಂ** (ಲಿಂಗಣ್ಣಕವಿ), **ಹೈದರ್‌ನಾಮಾ** (ನಲ್ಲಪ್ಪ), **ಚಿತ್ರದುರ್ಗದ ಬಖೈರು** (ಭೀಮೋಜಿಪಂತ್), **ನಾಯಕನಹಟ್ಟಿ ಬಖೈರು, ಜರಿಮಲೆ ಸಂಸ್ಥಾನದ ವಂಶಾವಳಿ** ಹಾಗೂ ೧೯ನೇ ಶತಮಾನದ **ಚಿನ್ಮೂಲಾದ್ರಿ ಗಿರಿದುರ್ಗದಲ್ಲಿ ಆಳಿದ ಅರಸರುಗಳ ವಂಶಾವಳಿ** (ಚಿನ್ನದಮನೆ ರಾಮಪ್ಪ)-ಇವು ಕೆಲವು ಉದಾಹರಣೆಗಳು. ಬೇರೆ ಬೇರೆ ಸಂಸ್ಥಾನಿಕರೊಡನೆ ಜರಿಮಲೆ ನಾಯಕರು ಹೊಂದಿದ್ದ ರಾಜಕೀಯ, ವೈವಾಹಿಕ ಇನ್ನಿತರ ಬಾಂಧವ್ಯಗಳ ವಿವರಗಳು ದೊರಕುತ್ತವೆ ಈ ದಾಖಲೆ ಗಳಲ್ಲಿ. ಹಾಗೆಯೇ, **ಸುರಪುರ ಸಂಸ್ಥಾನ ಇತಿಹಾಸ** (ಕಪಟರಾಳ ಕೃಷ್ಣರಾಯ), **ಕರ್ನಾಟಕದ ಕೈಫಿಯತ್ತುಗಳು** (ಸಂ: ಎಂ.ಎಂ.ಕಲಬುರ್ಗಿ) ಸಹಾ ಈ ನಿಟ್ಟಿನಲ್ಲಿ ಅವಶ್ಯ ಪರಾಮರ್ಶಿಸ ಬೇಕಾದ ಉಪಯುಕ್ತ ಆಕರಗಳು.

ಈ ಮೇಲಿನ ಆಕರಗಳನ್ನಾಧರಿಸಿ ಹಾಗೂ ತಮ್ಮದೇ ಕೆಲವು ಮಾಹಿತಿಮೂಲಗಳನ್ನು ಬಳಸಿಕೊಂಡು ರಚಿಸಲ್ಪಟ್ಟ ಆನುಷಂಗಿಕ ಕೃತಿಗಳೂ ಕೆಲವಾರಿವೆ. ಅವುಗಳಲ್ಲಿ ಪರಿಗಣಿಸ ಬಹುದಾದ ಕೃತಿಗಳ ಯಾದಿಯನ್ನು ಈ ಪ್ರಬಂಧದ ಕಡೆಯಲ್ಲಿ 'ಪರಾಮರ್ಶನ ಗ್ರಂಥಗಳು' ವಿಭಾಗದಲ್ಲಿ ಕೊಡಲಾಗಿದೆ. ಈ ಪಾಳೆಯಗಾರರನ್ನು ಕುರಿತ ಕಾವ್ಯಕೃತಿಗಳಾಗಲಿ, ಜನಪದ ಸಾಹಿತ್ಯವಾಗಲಿ ಲಭ್ಯವಿರುವಂತೆ ತೋರುವುದಿಲ್ಲ. ಪಾಳೆಯಗಾರರ ಜನಪದ ಕಥನಕಾವ್ಯ ಗಳಲ್ಲಿ ಪ್ರಾಸಂಗಿಕವಾಗಿ ಬರುವ ಪ್ರಸ್ತಾಪದ ವಿವರವಾದ ಮಾಹಿತಿಯೂ ದೊರೆಯುವುದಿಲ್ಲ.

ಮನೆತನದವರೊಂದಿಗೆ ಸಂದರ್ಶನ

ಸಾಂಪ್ರದಾಯಿಕವಾಗಿ, ವಾಲ್ಮೀಕರ ಏಳುಜನ ಅಜ್ಜ ಬ್ರಹ್ಮರ್ಷಿಗಳ ವಂಶಾವಳಿಗಳಲ್ಲಿ ಬ್ರಹ್ಮರ್ಷಿ ಸಾರಂಗಮುನಿಯ ಪಿಂಗಳರುಗಗೋತ್ರವು ಐದನೆಯದು. ಈ ಗೋತ್ರದಲ್ಲಿ ಔರಸ, ದೌಹಿತ್ರಿಗೋತ್ರಗಳು ಸಮ್ಮಿಶ್ರವಾಗಿದ್ದು, ಇದರಲ್ಲಿ ಮಳೆಯಗೋತ್ರವು ಪ್ರಸಿದ್ಧ ವಾದುದು. ಜರಿಮಲೆ ಮತ್ತು ಗುಡೇಕೋಟೆ ಪಾಳೆಯಗಾರರು ಈ ಮಳೆಯಗೋತ್ರದ ದೊರೆಗಳು. ಕೆಲವು ಕೈಫಿಯತ್ತುಗಳು ಸಹಾ ಸ್ಪಷ್ಟಪಡಿಸುವಂತೆ, ಜರಿಮಲೆ, ಗುಡೇಕೋಟೆ, ಬಾಣ್ರಾವಿ, ವಡ್ನು (ದರೋಜಿ) ಮುಂತಾದ ಬೇಡ ಪಾಳೆಯಗಾರರು ಮೊರಳಿನವರು (ಮರುಳಿನವರು ಅಥವಾ ಮರಳಿನವರು ಇತ್ಯಾದಿ) ಎಂದು ಕರೆಸಿಕೊಂಡಿದ್ದರು. ಮೊರಳೆ ಅಥವಾ ಮರುಳೆ ಎಂಬುದೇ ಮಳೆಲು ಎಂದಾಗಿರುವುದನ್ನು ಗಮನಿಸಬಹುದು.

ಜರಿಮಲೆ ನಾಯಕವಂಶದ ದಿವಂಗತ ರಾಜಾ ಇಮ್ಮಡಿ ಪಿ.ವೆಂಕಟಪ್ಪನಾಯಕರ ಧರ್ಮಪತ್ನಿಯವರಾಗಿದ್ದ ಶ್ರೀಮತಿ ಧರ್ಮಾವತಮ್ಮನವರು ಚಿತ್ರದುರ್ಗದ ಕರುವಿನ ಕಟ್ಟೆಯಲ್ಲಿ ವಾಸವಾಗಿದ್ದ ಹಾಗೂ ದೇವಪ್ಪನಾಯಕರ ಪುತ್ರರಾಗಿದ್ದ ವೀರಮದಕರಿನಾಯಕರ ಪುತ್ರಿ. ವೀರಮದಕರಿನಾಯಕರು ಚಿತ್ರದುರ್ಗದ ನಾಯಕವಂಶಕ್ಕೆ ಸೇರಿದವರೆಂದು ತಿಳಿಯುತ್ತದೆ. ಜರಿಮಲೆಯ ರಾಜಾ ಇಮ್ಮಡಿ ವೆಂಕಟಪ್ಪನಾಯಕರ ಈರ್ವರು ಪುತ್ರರೆಂದರೆ ಚಂದ್ರಶೇಖರ ರಾಜಪ್ಪನಾಯಕ (ಚಂದ್ರಶೇಖರರಾಜು) ಮತ್ತು ಪಿ.ಸಿದ್ದಪ್ಪನಾಯಕ. ದಿನಾಂಕ ೧೫.೫.೧೯೮೮ರಲ್ಲಿ ಇವರನ್ನು ಸಂದರ್ಶಿಸಿ ಪಡೆದುಕೊಂಡ ಮಾಹಿತಿ; ಹಾಗೂ ೧೮.೬.೨೦೦೬ ಮತ್ತು ೨.೭.೨೦೦೬ರಂದು ಈ ಮನೆತನದವರನ್ನು ಜರಿಮಲೆಯಲ್ಲಿ ಖುದ್ದಾಗಿ ಸಂದರ್ಶಿಸಿ ಸಂಗ್ರಹಿಸಲಾದ ಮಾಹಿತಿಯನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಹಾಲಿ ಚಿತ್ರದುರ್ಗದಲ್ಲಿ ವಾಸವಾಗಿರುವ ಇದೇ ವಂಶಕ್ಕೆ ಸೇರಿದ ಎಂ.ಎಸ್.ಸಿದ್ಧಲಿಂಗನಾಯಕರನ್ನೂ ಭೇಟಿಮಾಡಿ ಕೆಲವು ಸಂಗತಿಗಳನ್ನು ತಿಳಿದು ಕೊಳ್ಳಲಾಗಿದೆ. ಜರಿಮಲೆಯಲ್ಲಿ ಹಾಲಿ ಇರುವ ಈರ್ವರು ಸಹೋದರರಾದ ಚಂದ್ರಶೇಖರ ರಾಜು ಮತ್ತು ಪಿ.ಸಿದ್ದಪ್ಪನಾಯಕರು ದೊಡ್ಡದೊರೆಗಳಾಗಿದ್ದರೆ, ಸಹೋದರರಾದ ಪಂಪಾಪತಿ ರಾಜು ಮತ್ತು ಭೂಮರಾಜರು ಸಣ್ಣದೊರೆಗಳಾಗಿದ್ದಾರೆ.

ಪಾಳೆಯಗಾರರ ವೃತ್ತಾಂತ

ಮನ್ರೋ ಮತ್ತು ಫ್ರಾನ್ಸಿಸ್ ಅವರ ವರದಿಗಳು

ಮನ್ರೋ ಸಾಹೇಬನ ವರದಿ ಮತ್ತು ಡಬ್ಲ್ಯು. ಫ್ರಾನ್ಸಿಸ್ ನೀಡಿರುವ ಮಾಹಿತಿಯ ಪ್ರಕಾರ, ಪೆನ್ನಪ್ಪನಾಯಕನೆಂಬವನು ಜರಿಮಲೆ ನಾಯಕ ಮನೆತನದ ಮೂಲಪುರುಷ. ವಿಜಯನಗರದ ವಿರುದ್ಧ ದಂಗೆಯೆದ್ದ ಬಂಡುಕೋರ ನಾಯಕನೊಬ್ಬನನ್ನು ಹತ್ತಿಕ್ಕುವಲ್ಲಿ ಪೆನ್ನಪ್ಪನಾಯಕ ತನ್ನ ಸಾಹಸ ತೋರಿದ. ಇದರಿಂದ ಸಂಪ್ರೀತನಾದ ವಿಜಯನಗರದ ಅರಸ ಅಚ್ಯುತರಾಯ (ಕ್ರಿ.ಶ. ೧೫೩೦-೧೫೪೨) ಈ ಪೆನ್ನಪ್ಪನಾಯಕನಿಗೆ ಸ್ವಂತ ಉಪಯೋಗಕ್ಕೆ ೧೫, ೩೦೦ ಮಹಮ್ಮದ್‌ಶಾಹಿ ಪಗೋಡಗಳಷ್ಟು ಬೆಲೆಯುಳ್ಳ ಜಹಗೀರು ನೀಡಿದ. ಜತೆಗೆ,

ಅಗತ್ಯಬಿದ್ದಾಗ ೫೦೦ ಅಶ್ವ ಮತ್ತು ೩,೦೦೦ ಕಾಲಾಳು ಪಡೆಯನ್ನು ಒದಗಿಸಬೇಕೆನ್ನುವ ಕರಾರಿನೊಡನೆ ೩೫,೧೫೦ ಪಗೋಡಗಳ ಮೌಲ್ಯದ ಇನ್ನೊಂದು ಜಹಗೀರನ್ನೂ ವಹಿಸಿ ಕೊಟ್ಟ.

ವಿಜಯನಗರದ ಪತನಾನಂತರ ಜರಿಮಲೆ ಪ್ರಾಂತ ಬಿಜಾಪುರ ಸುಲ್ತಾನರ ಒಡೆತನಕ್ಕೆ ತನ್ನನ್ನು ಒಪ್ಪಿಸಿಕೊಂಡಿತು. ನಿಗದಿಯಾದ ಕಾಲಕ್ಕೆ ೨೦,೦೦೦ ಪೇಶ್‌ಕಶ್ (ಪೊಗದಿ) ಹಾಗೂ ಸಂದರ್ಭ ಒದಗಿದಾಗ ೩೦೦ ಅಶ್ವ ಮತ್ತು ೨,೦೦೦ ಕಾಲಾಳುಗಳ ಬಲವನ್ನು ಕಳುಹಿಸಿ ಕೊಡಬೇಕೆನ್ನುವ ಒಪ್ಪಂದದೊಡನೆ ಸುಲ್ತಾನರು ಜರಿಮಲೆಯನ್ನು ಪೆನ್ನಪ್ಪನಾಯಕನಿಗೇ ವಹಿಸಿಕೊಟ್ಟರು. ಮೊಗಲ್ ಚಕ್ರವರ್ತಿ ಔರಂಗಜೇಬ್ (ಕ್ರಿ.ಶ.೧೬೫೮-೧೭೦೭) ಬಿಜಾಪುರ ವನ್ನು ಕ್ರಿ.ಶ.೧೬೮೬ರಲ್ಲಿ ತನ್ನ ವಶಕ್ಕೆ ಪಡೆದಾಗ ಈ ಪ್ರಾಂತವೂ ಅವನಿಗೆ ಸೇರಿಹೋಯಿತು. ಈ ಚಕ್ರವರ್ತಿ ಜರಿಮಲೆ ಪಾಳೆಯಗಾರ ನೀಡುತ್ತಿದ್ದ ಪೇಶ್‌ಕಶ್‌ಅನ್ನು ೫೦,೦೦೦ ರೂಪಾಯಿಗಳಿಗೆ ಏರಿಸಿ ಆತನ ಅಧೀನದಲ್ಲಿದ್ದ ಕಾಲಾಳುಗಳ ಸಂಖ್ಯೆಯನ್ನು ೧೦೦೦ಕ್ಕೆ ಇಳಿಸಿದ.

ಆ ನಂತರ ಕ್ರಿ.ಶ. ೧೭೪೨ರಲ್ಲಿ ಚಿತ್ರದುರ್ಗ ಮತ್ತು ಹರಪನಹಳ್ಳಿ ನಾಯಕರು ಜರಿಮಲೆಯ ನಾಯಕನನ್ನು ಮನಸ್ವೀ ಸುಲಿದರು; ಜರಿಮಲೆ ಸುತ್ತಮುತ್ತಲಿನ ಕೆಲವು ಹಳ್ಳಿಗಳ ಒಡೆತನವನ್ನು ಮಾತ್ರ ಅವನಿಗೆ ಉಳಿಸಿಕೊಟ್ಟರು. ಇದಾದ ಹತ್ತು ವರುಷಗಳ ತರುವಾಯ (ಕ್ರಿ.ಶ. ಸು.೧೭೫೨) ಚಿತ್ರದುರ್ಗದ ರಾಜಾ ವೀರಮದಕರಿನಾಯಕನು ಜರಿಮಲೆ ನಾಯಕನನ್ನು ಪೂರ್ತ ತನ್ನ ಅಧೀನ ಪಡಿಸಿಕೊಂಡ; ತನಗೆ ಅಗತ್ಯಬಿದ್ದಾಗ ೫೦೦ ಕಾಲಾಳುಗಳ ದಂಡನ್ನು ಕಳುಹಿಸುವಂತೆ ನಿರ್ಬಂಧಿಸಿದ. ಕ್ರಿ.ಶ. ೧೭೫೨ರಲ್ಲಿ ಹೈದರ್‌ಅಲಿ ಚಿತ್ರದುರ್ಗದ ಮೇಲೆ ತನ್ನ ದಂಡನ್ನು ನಡೆಸಿದಾಗ ಜರಿಮಲೆ ಪಾಳೆಯಗಾರ ಚಿತ್ರದುರ್ಗ ಅರಸನಿಂದ ತನಗಾದ ತೊಂದರೆ ಬಗೆಗೆ ಅವನಲ್ಲಿ ದೂರಿಕೊಂಡ. ಇದು ಚಿತ್ರದುರ್ಗ ಅರಸನನ್ನು ರೇಗಿಸಿತು. ಹೈದರ್ ತನ್ನ ಮುತ್ತಿಗೆಯನ್ನು ಎಬ್ಬಿಸಿಕೊಂಡು ಹೋದನಂತರ ದುರ್ಗದ ಅರಸ ಜರಿಮಲೆನಾಯಕನನ್ನು ಮರಣದಂಡನೆಗೆ ಒಳಪಡಿಸಿ ತನ್ನ ಸೇಡನ್ನು ತೀರಿಸಿಕೊಂಡ. ಇದರಿಂದ ಹೆದರಿದ ಜರಿಮಲೆ ನಾಯಕನ ಮಗ ಸುರಪುರಕ್ಕೆ ಪಲಾಯನಗೈಯಬೇಕಾಯಿತು. ಆದರೆ ಕ್ರಿ.ಶ. ೧೭೬೭ರಲ್ಲಿ ಹೈದರ್ ಮತ್ತೊಮ್ಮೆ ಚಿತ್ರದುರ್ಗವನ್ನು ಮುತ್ತಿದಾಗ, ಈ ಜರಿಮಲೆ ನಾಯಕ ಚಿತ್ರದುರ್ಗದವರ ವಿರುದ್ಧ ಅವನಿಗೆ ಸಹಾಯಮಾಡಿದ. ಇದರ ಫಲವಾಗಿ ತನ್ನ ಪಾಳೆಯಪಟ್ಟನ್ನು ಪುನಃ ಸಂಪಾದಿಸಿಕೊಂಡನಲ್ಲದೆ, ೫೦೦ ಮದರಾಸಿ ಪಗೋಡಗಳನ್ನು ಪೇಶ್‌ಕಶ್ ಆಗಿ, ಮತ್ತೆ ೫೦೦ ಪಗೋಡಗಳನ್ನು ಕಾಣಿಕೆಯಾಗಿ ಹೈದರನಿಗೆ ಸಲ್ಲಿಸಲು ಸಮ್ಮತಿಸಿದ. ಕ್ರಿ.ಶ.೧೭೮೦ರಲ್ಲಿ ಹೈದರ್ ಕೈಗೊಂಡ ಕರ್ನಾಟಕ ಯುದ್ಧದಲ್ಲಿ ೧೦೦೦ ಕಾಲಾಳು ಮತ್ತು ೧೦೦ ಅಶ್ವದಳದೊಡನೆ ಈ ಜರಿಮಲೆನಾಯಕನೂ ಅವನೊಡನೆ ಭಾಗವಹಿಸಿದ.

ಹೈದರ್‌ಅಲಿಯ ನಂತರ ನವಾಬನೆನಿಸಿದ ಆತನ ಮಗ ಟಿಪ್ಪುಸುಲ್ತಾನ್, ಯಾವುದೋ ಕಾರಣಕ್ಕೆ ಕ್ರಿ.ಶ. ೧೭೮೭ರಲ್ಲಿ ಜರಿಮಲೆಯ ಜಹಗೀರನ್ನು ಈ ಪಾಳೆಯಗಾರನಿಂದ

ಕಿತ್ತುಕೊಂಡ. ಅಷ್ಟೇಅಲ್ಲ, ಅವನನ್ನು ಶ್ರೀರಂಗಪಟ್ಟಣಕ್ಕೂ ಕರೆದೊಯ್ದು ಅಲ್ಲಿ ಅವನಿಗೆ ಚಿಕ್ಕದೊಂದು ಉದ್ಯೋಗವನ್ನು ಕೊಟ್ಟು ತನ್ನ ಬಳಿ ಇರಿಸಿಕೊಂಡ. ಟಿಪ್ಪು ತನ್ನನ್ನು ಇಸ್ಲಾಂಧರ್ಮಕ್ಕೆ ಮತಾಂತರಿಸಲಿರುವನೆಂಬ ವದಂತಿ ಕೇಳಿ ಬೆದರಿದ ಜರಿಮಲೆ ನಾಯಕ ಇನ್ನೊಮ್ಮೆ ಸುರಪುರಕ್ಕೆ ಓಡಿಹೋಗಬೇಕಾಯಿತು. ಎರಡನೇ ಮೈಸೂರು ಯುದ್ಧದ ಅವಧಿಯಲ್ಲಿ ಜರಿಮಲೆಯನ್ನು ಮತ್ತೆ ತನ್ನ ವಶಕ್ಕೆ ಪಡೆಯಲು ಆ ನಾಯಕನಿಗೆ ಸಾಧ್ಯವಾಯಿತು; ಹಾಗೂ ಆಗ ಪ್ರಾಬಲ್ಯ ಹೊಂದಿದ ಮರಾಠರಿಗೆ ೨೦,೦೦೦ ರೂಪಾಯಿಗಳ ಪೇಶ್‌ಕಶ್ ಸಹ ನೀಡಬೇಕಾಯಿತು. ಆದರೆ ಕ್ರಿ.ಶ. ೧೭೯೨ರಲ್ಲಿ ಟಿಪ್ಪುಸುಲ್ತಾನ್ ಮತ್ತು ಮರಾಠರ ನಡುವೆ ಆದ ಶಾಂತಿ ಸಂಧಾನದ ತರುವಾಯ ಜರಿಮಲೆ ನಾಯಕ ಇನ್ನೊಮ್ಮೆ ಪದಚ್ಯುತನಾದ. ಕ್ರಿ.ಶ. ೧೭೯೯ರ ನಾಲ್ಕನೇ ಮೈಸೂರು ಯುದ್ಧದಲ್ಲಿ ಟಿಪ್ಪು ಮರಣಹೊಂದಲು, ಇಂಗ್ಲಿಷರು ಮತ್ತು ಹೈದರಾಬಾದ್ ನಿಜಾಮ-ಇವರ ನಡುವೆ ಆದ ಕಾರ್ಯವಿಂಗಡಣಾ ಒಪ್ಪಂದದಂತೆ, ಜರಿಮಲೆ ಪಾಳೆಯಗಾರ ತನ್ನ ಪಾಳೆಯಪಟ್ಟಿನ ಸುತ್ತಮುತ್ತಲ ಹಳ್ಳಿಗಳಿಗೆ ಅವುಗಳ ಮೌಲ್ಯದಷ್ಟು ರುಸುಮನ್ನು ಸಲ್ಲಿಸಲು ಸಮ್ಮತಿಸಬೇಕಾಯಿತು. ಆದರೆ ಈ ನಾಯಕ ನಿಯಮಿತವಾಗಿ ಹಣವನ್ನು ತೆರಲಾಗದ್ದರಿಂದ ಬಾಕಿದಾರನೆನಿಸಿದ. ಕ್ರಿ.ಶ. ೧೮೦೦ರಲ್ಲಿ ಬಳ್ಳಾರಿಯು ಕಂಪನಿಯ ಅಧೀನಕ್ಕೆ ಬಂದಾಗ ಹಣವನ್ನು ಬಲವಂತವಾಗಿ ವಸೂಲು ಮಾಡಲಾಗುವುದೆಂಬ ಹಾಗೂ ಬಂಧನಕ್ಕೊಳಗಾಗುವೆನೆಂಬ ಹೆದರಿಕೆಯಿಂದ ಈ ಪಾಳೆಯಗಾರ ಮೈಸೂರಿನಲ್ಲಿ ತಲೆಮರೆಸಿಕೊಂಡ. ಆ ನಂತರ ಇಂಗ್ಲಿಷ್ ಸರಕಾರ ಈ ಪಾಳೆಯಗಾರನ ಆಸ್ತಿಪಾಸ್ತಿಯನ್ನೆಲ್ಲಾ ತನ್ನ ವಶಕ್ಕೆ ಪಡೆದು, ರಾಜಕುಟುಂಬದ ಮೂರು ಜನರಿಗೆ ಅಲ್ಪಪ್ರಮಾಣದ ಸಹಾಯಧನವನ್ನು ಗೊತ್ತುಪಡಿಸಿತು.

ಜರಿಮಲೆ ಸಂಸ್ಥಾನದ ವಂಶಾವಳಿ

'ಜರಿಮಲೆ ಸಂಸ್ಥಾನದ ವಂಶಾವಳಿ' ಒದಗಿಸುವ ಮಾಹಿತಿಯೇ ಬೇರೆ ತೆರನಾದುದು. ಸಾಂಪ್ರದಾಯಿಕ ವೃತ್ತಾಂತವನ್ನು ಹೊಂದಿರುವ ಈ ದಾಖಲೆ, ಚರಿತ್ರಕಾರರು ಸಂಗ್ರಹಿಸಿರುವ ಹಾಗೂ ನಿರೂಪಿಸಿರುವ ಮಾಹಿತಿಗಿಂತ ಭಿನ್ನವಾದ ಸಂಗತಿಗಳನ್ನು ಪ್ರಸ್ತಾಪಿಸುತ್ತದೆ. ಆದರೆ ಇದರಲ್ಲಿಯ ಸಂಗತಿಗಳನ್ನು ಯಾರೂ ಬಳಸಿಕೊಂಡಿಲ್ಲವೆಂಬುದು ದಿಟ. ಕರ್ನಾಟಕದ ಇತರ ಪಾಳೆಯಪಟ್ಟುಗಳ ಸ್ಥಾಪನೆಯ ಮೂಲವನ್ನು ಕುರಿತು ಪ್ರಚಾರದಲ್ಲಿರುವ ಆಶಯರೂಪಿ ಕಥೆ-ಐತಿಹ್ಯಗಳಂತೆಯೇ, ಈ ಸಂಸ್ಥಾನದ ಹಿನ್ನೆಲೆಯಲ್ಲಿಯೂ ಇಂಥಾ ಕಥೆ ಅಡಕಗೊಂಡಿದೆ. ಜರಿಮಲೆ ಸಂಸ್ಥಾನದ ಒಟ್ಟು ಇತಿಹಾಸವನ್ನು ಸಂಕೀರ್ಣರೂಪದಲ್ಲಿ ತನ್ನಲ್ಲಿ ಅಡಗಿಸಿಕೊಂಡಿರುವ ಈ ವಂಶಾವಳಿಯನ್ನು ಚಾರಿತ್ರಿಕ ದೃಷ್ಟಿಯಿಂದ ವಿಮರ್ಶಿಸುವ ಹಾಗೂ ವಿಶದವಾಗಿ ಅಧ್ಯಯನಿಸುವ ಅಗತ್ಯವಿದೆ. ಇದು ಮೇಲ್ನೋಟಕ್ಕೆ ಒದಗಿಸುವಂಥಾ ಕೆಲವು ಚಾರಿತ್ರಿಕ ಅಂಶಗಳನ್ನು ಈ ಕೆಳಗಿನಂತೆ ಸಂಗ್ರಹಿಸಬಹುದು:

ಜರಿಮಲೆ ಸಂಸ್ಥಾನಿಕರ ಸಂತತಿಯವರು ಆರಂಭದಲ್ಲಿ ಹಟ್ಟಿಯನ್ನು ಹಾಕಿಕೊಂಡು ಜೀವನ ನಡೆಸುತ್ತಿದ್ದುದು ಕಂಚಿದೇಶದಲ್ಲಿ. ಆಗ ಆ ದೇಶವನ್ನು ಆಳುತ್ತಿದ್ದ ಬೂದಿ

ಸಿದ್ದರಾಜು ಎಂಬವನು ಈ ಸಂತತಿಯ ಮೂಲಪುರುಷ; ಶಿವಪೂಜಾಸಕ್ತ. ಆತನ ಭಕ್ತಿ - ಭಾವವನ್ನು ಕಂಡ ಮಳೆಬಗೆ ಚನ್ನಬಸವಸ್ವಾಮಿ ಎಂಬ ಮಾಯಾದಗುರುಗಳು (ಜಂಗಮರು) ಆತನಿಗೆ ತನ್ನ ಕಂಪಳ ಮತ್ತು ಸಂಸಾರ ಸಹಿತ ಅಲ್ಲಿಂದ ಹೊರಟು ಮಳೆಭೂಮಸಮುದ್ರದಲ್ಲಿ ನೆಲೆಸುವಂತೆ ಸೂಚಿಸಿದರು. ಅದರಂತೆಯೇ, ಬೂದಿಸಿದ್ದರಾಜನು ತನ್ನ ಮಡದಿ ಲಿಂಗಮ್ಮ ಹಾಗೂ ತನ್ನ ಏಳುಮಂದಿ ಮಕ್ಕಳಾದ ಬೊಮ್ಮಂತರಾಜು, ಇಮ್ಮಡಿರಾಜು, ಮುಮ್ಮಡಿ ರಾಜು, ಮಲ್ಲಿಕಾರ್ಜುನನಾಯಕ, ಲಿಂಗಳನಾಯಕ, ಕುಕ್ಕಲ ಪೆನ್ನಪ್ಪನಾಯಕ ಮತ್ತು ಕಲಿಪುರುಷ ಭೂಮರಾಜು ಇವರ ಸಹಿತ ತನ್ನ ಮನೆದೇವರುಗಳಾದ ಕಂಚಿಓಬಳದೇವರು, ಬೊಮ್ಮದೇವರು, ಗಾದ್ರಿಲಿಂಗ ಹಾಗೂ ಕಂಕಾಳೈಯ್ಯ ಇವುಗಳ ಪೆಟ್ಟಿಗೆಗಳನ್ನು ಪೂಜಾರಿ ಗಳಿಂದ ಹೊರಿಸಿಕೊಂಡು, ಎರಡು ದಿವಸಗಳ ಕಾಲ ಪ್ರಯಾಣಮಾಡಿ ಮಳೆಭೂಮ ಸಮುದ್ರಕ್ಕೆ ಬಂದು ಹಟ್ಟಿಯನ್ನು ಹಾಕಿಕೊಂಡು ವಾಸಿಸತೊಡಗಿದ.

ಒಮ್ಮೆ ಈತನ ಏಳು ಮಕ್ಕಳು ಕಾಲಕಳೆಯುವ ಉದ್ದೇಶದಿಂದ ಅರಣ್ಯದಲ್ಲಿ ಬೇಟೆ ಯಾಡಲು ಹೋದಾಗ, ಒಂದು ಕೊಳದ ಬಳಿಯಿರುವ ದೊಡ್ಡಗುಂಡಿನಿಂದ ಚಿರತೆ(?) ಯೊಂದು ಹೊರಬಿದ್ದು ಇವರನ್ನು ಭಯಂಕರವಾಗಿ ಎದುರಿಸಿ ಕಡೆಗೆ ತನ್ನ ಪ್ರಾಣಬಿಟ್ಟಿತು. ಅಲ್ಲಿಂದ ಮುಂದೆ ಸಾಗಿ ಎತ್ತರವಾದ ಗುಡ್ಡಪ್ರದೇಶವನ್ನು ಸಮೀಪಿಸಿದಾಗ ಅಲ್ಲಿ ಆ ಗುಡ್ಡದ ತುದಿಯಲ್ಲಿ ಮಲಗಿ ವಿಶ್ರಮಿಸಿಕೊಳ್ಳುತ್ತಿದ್ದ ಮೊಲವೊಂದು ಇವರನ್ನು ಕಂಡು ಎದ್ದುಬಂದು ಇವರ ಮೇಲೆ ಬಿದ್ದು ಜಗಳ ಮಾಡಿತು. ಏಳು ಜನರಲ್ಲಿ ಕಡೆಯವನಾದ ಕಲಿಪುರುಷ ಭೂಮರಾಜ ಅದನ್ನು ತನ್ನ ಬಿಲ್ಲಿನಿಂದ ಹೊಡೆದು ಹಾಕಿದ. ಈ ಘಟನೆಗಳಿಂದ ಅವರು ಗ್ರಹಿಸಿದ ಒಂದು ಸಂಗತಿಯೆಂದರೆ, ಈ ಪ್ರದೇಶ ಶೌರ್ಯವತ್ತಾದುದು ಎಂದು. ಇದನ್ನು ಮಳೆಬಗೆ ಚನ್ನಬಸಪ್ಪಸ್ವಾಮಿಯವರಲ್ಲಿ ಪ್ರಸ್ತಾಪಿಸಿ, ಆ ಸ್ಥಳವನ್ನು ತಮಗೆ ಸ್ಥಿರಪಡಿಸಿಕೊಡ ಬೇಕೆಂದು ಪ್ರಾರ್ಥಿಸಿಕೊಂಡರು. ಸ್ವಾಮಿಗಳು ಅದಕ್ಕೆ ಒಪ್ಪಿ, ಕೈಯಲ್ಲಿದ್ದ ಬೆತ್ತದಿಂದ ಸುತ್ತಲೂ ಮಂಡಲವನ್ನು ಬರೆದು ನಿರ್ಣಯವನ್ನು ಮಾಡಿಸಲು ಅಪ್ಪಣೆಯಿತ್ತರು.

ಇದಾದನಂತರ, ಅದೇ ಪ್ರಾಂತದ ಲೇಖಣಿಕೆರಿ ಎಂಬ ಗ್ರಾಮದ ಸರೋವರದ ಬಳಿ ಒಂದು ಕಾಡುಹಂದಿ ಸೇರಿದ್ದು, ಅಲ್ಲಿಯ ಜನರಿಗೆ ತೊಂದರೆ ಕೊಡುತ್ತಿದ್ದಿತು. ಅಲ್ಲಿಯ ಜನರ (ಬೇಟೆಗಾರ ಬೈಯ್ಯಪ್ಪನ) ಪ್ರಾರ್ಥನೆಯಂತೆ ಈ ಏಳು ಜನರೂ ಅಲ್ಲಿಗೆ ಹೋಗಿ ಆ ಊರಿಗೆ ಸಮೀಪದ ಕೋಣನದಿನ್ನೆಯ ಹಳ್ಳದ ಪೊದೆಗಳನ್ನು ಹುಡುಕಲು, ಅಲ್ಲಿ ಅಡಗಿದ್ದ ಆ ಹಂದಿ ಭಯಂಕರವಾಗಿ ಗರ್ಜಿಸಿ ಹೊರಬಿದ್ದು ಪಲಾಯನಮಾಡಿತು. ಇವರೂ ಅದರ ಬೆನ್ನುಹತ್ತಿದರು. ಎರಡು ದಿವಸಗಳ ಪರಿಯಂತ್ರ ಆ ಹಂದಿಯ ಬೆನ್ನುಹತ್ತಿ ಉಜ್ಜಯಿನಿ ಗ್ರಾಮಕ್ಕೆ ಬಂದರು. ಅಲ್ಲಿ ಅವರಿಗೆ ಮಹಾಪುರುಷನೋರ್ವನ (ಗುರುವಿನ) ದರ್ಶನ ವಾಯಿತು. ಆ ಏಳು ಮಂದಿಯಲ್ಲಿ ಕಡೆಯವನಾದ ಭೂಮರಾಜನನ್ನು ಕುರಿತು ಆ ಗುರು, "ನಿನಗೆ ರಾಜ್ಯಪಟ್ಟವಾಗಲಿ, ದೇಶ ಸಾಧನೆಯಾಗಲಿ" ಎಂದು ಹರಸಿ, "ಈ ಸ್ಥಳದಲ್ಲಿ ನನ್ನ ಮಠಮಹತ್ತು ಎನ್ನುವುದು ಭೂಗತವಾಗಿ ಇದೆ. ಇಲ್ಲಿ ಏಳುಕೊಪ್ಪರಿಗೆ ಹಣವಿದೆ. ಕಾಮಾಟಿಗರನ್ನು ಕರೆಯಿಸಿ ಈ ಮಠಮಹತ್ತನ್ನು ನಿರ್ಮಿಸು. ನಿನ್ನ ಸಂಗಡ ಬಂದಿರುವ

ಮಾಯಾದಸ್ವಾಮಿ ಮಳೆಬಗೆ ಚನ್ನಬಸಪ್ಪಸ್ವಾಮಿಗಳ ಮಂಟಪವನ್ನು ನಿರ್ಮಿಸು. ಈ ಲೋಕದಲ್ಲಿ ಏಕಚಕ್ರವರ್ತಿಯಾಗಿ ಸಾಧನೆಮಾಡಿ ಸಿಂಹಾಸನವನ್ನು ಸ್ಥಾಪಿಸು. ಪೇಟೆಸೆಟ್ಟಿ, ಪಟ್ಟಣಶೆಟ್ಟಿ, ದೊಡ್ಡ ದೊಡ್ಡ ಪೇಟೆಯವರನ್ನು ಕರೆಯಿಸು. ಜಗದ್ಗುರುವನ್ನು ನೇಮಿಸು. ಮೂರುದೇಶದ ಸಂಸ್ಥಾನಿಕರು ಮತ್ತು ಮೂವತ್ತುಸಾವಿರ ಪೇಟಸ್ತರು ಸೇರಿ (ಜಗದ್ಗುರುವಿನ) ಈ ಪೀಠ(ಸಿಂಹಾಸನ)ವನ್ನು ನಿರ್ಮಿಸಿ ಪಾದಕಾಣಿಕೆ ಸಲ್ಲಿಸಿ. ಈ ಮರುಳಾರ್ಯನ ಮರುಳಸಿದ್ಧೇಶ್ವರನ ದೇವಸ್ಥಾನದ ಭಾರ ನಿಮ್ಮೆಲ್ಲರದೇ ಆಗಿರುತ್ತದೆ'' ಎಂದು ಆದೇಶಿಸಿದರು. ಅದೇ ಪ್ರಕಾರವಾಗಿ ಭೂಮರಾಜ ದೇಶಸ್ಥಾಪನೆ ಮಾಡಿ ಬಂದ. ಆತನ ತಂದೆ ಬೂದಿಸಿದ್ದರಾಜು ಮತ್ತು ಇತರ ಆರುಜನ ಮಕ್ಕಳು ಭೂಮಸಮುದ್ರವನ್ನು ಬಿಟ್ಟುಬಂದರು.

ಮಾಯಾದಗುರುಗಳು ತಮ್ಮ ಬೆತ್ತದಿಂದ ಮಂಡಲವನ್ನು ಬರೆದು ಬುಡ್ಡೆಕಲ್ಲು ಸ್ಥಾಪಿಸಿದ ನಂತರ, 'ಚಿತ್ರಭಾನು ಸಂವತ್ಸರ ಕಾರ್ತಿಕ ಶುದ್ಧ ೯ ಬುಧವಾರ'ದಂದು ಆ ನೂತನ ಎಡೆಗೆ ಜರಿಮಲಿಯೆಂದು ಹೆಸರಿಟ್ಟು ಭಟ್ಟಂಗಿಯವನಿಂದ ಮೂರುಸಾರಿ ಕೂಗಿಸಿದರು. ಆ ನಂತರ ಕೋಟೆ-ಕೊತ್ತಲ, ಭಾವಿ, ಕೆರೆ, ಗ್ರಾಮ ಇತ್ಯಾದಿ ನಿರ್ಮಾಣಕ್ಕೆ ೪೮ ಲಕ್ಷ ವರಹಗಳನ್ನು ತರಿಸಿ ಪಟ್ಟಣವನ್ನು ಕಟ್ಟಿಸಿದರು. ಹತ್ತುವರುಷಗಳವರೆಗೆ ರೈತರಿಗೆ ಹುಲ್ಲನ್ನು ಕೊಡಿಸುವ ವ್ಯವಸ್ಥೆ ಮಾಡಿದರು. ಆ ನಂತರ ತಮ್ಮ ಪ್ರಾಬಲ್ಯವನ್ನು ಗುಡೇಕೋಟೆ, ಸೊಂಡೂರು, ವಡ್ಡು, ಧರೋಜಿ, ಬಾಂಡ್ರಾವಿ, ಕುಡುತಿನಿ, ಕೊಳಗಲ್ಲು, ಬಳ್ಳಾರಿಯವರೆಗೆ ವಿಸ್ತರಿಸಿ ರಾಜ್ಯಸಾಧನೆ ಮಾಡಿದರು. ನಾಲ್ಕನೆಯವನಾದ ಮಲ್ಲಿಕಾರ್ಜುನನಾಯಕ ೫೦೦ ಕಾಲುಬಲ, ೩೦೦ ಕುದುರೆ, ೫ ಆನೆ, ೯ ಒಂಟೆಗಳ ಪಡೆಯೊಡನೆ ಸುರಪುರದತ್ತ ಸಾಗಿ ಅಲ್ಲಿಯ ಹೆಂಣುಮಗಳ ತಲೆ ಕತ್ತರಿಸಿ ಆಕೆ ಸಂಪಾದಿಸಿದ ಸಂಪತ್ತನ್ನು ಜರಿಮಲಿಗೆ ಸಾಗಿಸಿದ. ಆ ಹೆಂಣುಮಗಳ ಇಚ್ಛೆಯಂತೆ ಆಕೆಯನ್ನು 'ದುರ್ಗದೇವತೆ'ಯಾಗಿ ಮಾಡಿ ಪೂಜಿಸಲಾರಂಭಿಸಿದರು.

'**ಜರಿಮಲೆ ಸಂಸ್ಥಾನದ ವಂಶಾವಳಿ**'ಯಲ್ಲಿ ಪ್ರಸ್ತಾಪಗೊಂಡಿರುವ ಸುರಪುರದ ಹೆಣ್ಣುಮಗಳನ್ನು ಹತ್ಯೆಮಾಡಿ ಐಶ್ವರ್ಯವನ್ನು ಸೂರೆಮಾಡಿದ ಘಟನೆಗೆ ಸಂಬಂಧಿಸಿದಂತೆ ಹಾಗೂ ಆಕೆಯನ್ನು ದುರ್ಗದೇವತೆಯೆಂದು ಪೂಜಿಸುವ ಸಂಗತಿಗೆ ಸಂಬಂಧಿಸಿದಂತೆ ಇಲ್ಲಿಯ ಸ್ಮಾರಕವೊಂದು ಸಾಕ್ಷಿ ನುಡಿಯುತ್ತದೆ. ಜರಿಮಲೆಗುಡ್ಡಕ್ಕೆ ಸುಮಾರು ೫ ಕಿ.ಮೀ. ದೂರದ ಬೆಟ್ಟದಲ್ಲಿ ಈ ದುರ್ಗದೇವತೆಗೆ ಗುಡಿಯನ್ನು ಕಟ್ಟಿಸಲಾಗಿದೆ. ಈ ಬೆಟ್ಟವನ್ನು ದುರ್ಗಮ್ಮನ ಬೆಟ್ಟವೆಂದು ಆಕೆಯ ಹೆಸರಿನಲ್ಲಿಯೇ ಕರೆಯಲಾಗುತ್ತದೆ.

ಜರಿಮಲೆ ಸ್ಥಾಪನೆಗೆ ಕಾರಣನಾದ ಭೂಮರಾಜ ತನ್ನ ಮನೆಗುರುವೆನಿಸಿದ ಮರುಳಸಿದ್ಧನ ಸೇವಾಮಂಟಪ, ದೇವಸ್ಥಾನ, ಬಾವಿ, ಬೀದಿ, ಬಜಾರುಗಳನ್ನು ಹಾಗೂ ಗುಡಿಯ ಸುತ್ತ ಆವರಣ, ಮಹಾದ್ವಾರ, ಗೋಪುರ ಮೊದಲಾದುವನ್ನು ಕಟ್ಟಿಸಿದ. ಮರುಳಸಿದ್ಧೇಶ್ವರನ ಪೂಜೆಯನ್ನು ಮಾಡಲು ಪಟ್ಟದ ಕಾಶಿಯ ಪೂಜಾರಿಯನ್ನು ನೇಮಿಸಿದ. ಉಗ್ರಾಣಕರನ್ನು ಹಾಗೂ ಗುಡಿಪಾರುಪತ್ಯಗಾರರನ್ನು ನೇಮಿಸಿ ಅವರಿಗೆ ಮಾನ್ಯವನ್ನೂ ಇನಾಮನ್ನೂ ಕೊಟ್ಟ. ಈ ಮೂರೂ ಜನರನ್ನು ಆ ದೇವಾಲಯದ (ಕಾರ್ಯ)ಕರ್ತರೆಂದು, ದೇವಸ್ಥಾನಕ್ಕೆ ಬರುವ

ಯಾವ ವರಮಾನವಾದರೂ ಅದು ಅವರಿಗೆ ಸಂಬಂಧಿಸಿದುದೆಂದು ಹಾಗೂ ಈ ಮರುಳ ಸಿದ್ಧೇಶ್ವರನ ಸೇವೆಗೆ, ರಥೋತ್ಸವಕ್ಕೆ ಪ್ರತಿವರುಷ ೫೦ ವರಹಗಳನ್ನು ಸಂಸ್ಥಾನದಿಂದ ಗುಡಿಗೆ ಒಪ್ಪಿಸಲಾಗುತ್ತದೆಂದು ನಿಷ್ಕರ್ಷೆಮಾಡಿದ.

ಈ 'ವಂಶಾವಳಿ'ಯೊಂದಿಗೆ ಸೇರಿರುವ ಇನ್ನೊಂದು ಸಂಗತಿ ಉಜ್ಜಯಿನಿ ಗ್ರಾಮ ನಿರ್ಮಾಣಕ್ಕೆ ಸಂಬಂಧಿಸಿದುದು. ಅದರ ಪ್ರಕಾರ, 'ವಿಕ್ರಮನಾಮ ಸಂವತ್ಸರ ಕಾರ್ತಿಕ ಶುದ್ಧ ೧೦ ಗುರುವಾರ'ದಂದು ಉಜ್ಜಯಿನೀ ಎಂದು ನಾಮಕರಣಮಾಡಿ ಹನ್ನೆರಡು ಮಂದಿ ಆಯಗಾರರನ್ನು ನಿರ್ಣಯಿಸಲಾಯಿತು. ಉತ್ತರದಿಕ್ಕಿನಲ್ಲಿ ಬುರುಜು ಕಟ್ಟಿಸಿ ಅದನ್ನು 'ಹುಗ್ಗಿಮನೆ'ಯೆಂದು ಕರೆದು ಹುಗ್ಗಿಶಾಸ್ತ್ರದೊಡನೆ ಜೋಯಿಸರಿಂದ ಬುಡ್ಡೆಕಲ್ಲನ್ನು ಸ್ಥಾಪಿಸಲಾಯಿತು. ಹರಪನಹಳ್ಳಿ, ಚಿತ್ರದುರ್ಗ ಮತ್ತು ಜರಿಮಲೆ ಸಂಸ್ಥಾನಗಳವರೂ ವರ್ತಕರು, ಸಾಹುಕಾರರು, ಪೇಟೆಸೆಟ್ಟಿ, ಪಟ್ಟಣಶೆಟ್ಟಿ ಮೊದಲಾದವರೂ ಸೇರಿ ಕಂಚಿ ದೇಶದಿಂದ ಬಂದ ಮಳೆಬಗೆ ಚನ್ನಬಸಪ್ಪಸ್ವಾಮಿಗಳಿಗೆ ಪಟ್ಟಾಭಿಷೇಕ ಮಾಡಿಸಿದರು; ಪಾದಕಾಣಿಕೆಯನ್ನಿಟ್ಟು ಈ ಧರ್ಮಸಿಂಹಾಸನದ ಅಧಿಪತಿಗಳಾಗಿ ಇರಬೇಕೆಂದು ಪ್ರಾರ್ಥಿಸಿದರು. ಭೂಸ್ಥಾಪನೆ ಆಗಿದ್ದ ಮರುಳಸಿದ್ಧೇಶ್ವರನ ಗುಡಿಯನ್ನು ಕಾಮಾಟಿಗರಿಂದ ತೆಗೆಯಿಸಲು, ಮರ್ಮದ್ವಾರ, ಆಳ್ವೇರಿ ಇತ್ಯಾದಿಗಳನ್ನು ಮಾಡಿಸಲು ಆದ ಒಟ್ಟು ವೆಚ್ಚ ಮೂರುಲಕ್ಷ ನಾಣ್ಯಗಳು.

'ಜರಿಮಲೆ ಸಂಸ್ಥಾನದ ವಂಶಾವಳಿ'ಯು ಹೇಳುವಂತೆ, ಈ ಪಾಳೆಯಗಾರರು ಸಾಧಿಸಿದ ಪ್ರದೇಶಗಳೆಂದರೆ ಗುಡೇಕೋಟೆ, ಸೊಂಡೂರು, ವಡ್ಡು, ಧರೋಜಿ, ಬಂಡ್ರಿ, ಕುಡುತಿನಿ, ಕೊಳಗಲ್ಲು ಇತ್ಯಾದಿ. ಇವೆಲ್ಲವೂ ಬಳ್ಳಾರಿ ಜಿಲ್ಲೆಯ ಈಗಿನ ಕೂಡ್ಲಿಗಿ, ಸೊಂಡೂರು ಹಾಗೂ ಬಳ್ಳಾರಿ ತಾಲ್ಲೂಕುಗಳಿಗೆ ಸೇರಿದುವು. ಕ್ರಿ.ಶ. ೧೭೦೦ರ ವೇಳೆಗೆ ಸೊಂಡೂರನ್ನು ಜರಿಮಲೆಯ ಪಾಳೆಯಗಾರನು ತನ್ನ ವಶಪಡಿಸಿಕೊಂಡನೆಂದು ಇತಿಹಾಸ ತಿಳಿಸುತ್ತದೆ. ಈಗಿನ ಸೊಂಡೂರು ರಾಜರ ಮನೆತನದ ಅಥವಾ ಘೋರ್ಪಡೆ ಸಂತತಿಯ ಸಿದ್ದೋಜಿರಾಯನು ಕ್ರಿ.ಶ. ೧೭೨೮ರ ವೇಳೆಗೆ (ಗ್ರಾಂಟ್‌ಡಫ್ ಪ್ರಕಾರ ಈ ತೇದಿ ಕ್ರಿ.ಶ. ೧೭೧೩) ಸೊಂಡೂರನ್ನು ಈ ಪಾಳೆಯಗಾರನಿಂದ ತನ್ನ ವಶಪಡಿಸಿಕೊಂಡ. ಇದು ಇಂದಿಗೂ ಘೋರ್ಪಡೆಯವರ ವಾಸದ ನೆಲೆಯಾಗಿಯೇ ಮುಂದುವರೆದಿದೆ.

ಸಮಕಾಲೀನ ಸಂಸ್ಥಾನಿಕರೊಡನೆ ಸಂಬಂಧ

ಜರಿಮಲೆ ಪಾಳೆಯಗಾರರು ತಮ್ಮ ಸಮಕಾಲೀನ ಇತರ ಸಂಸ್ಥಾನಿಕರೊಡನೆ ಬಾಂಧವ್ಯ ಇರಿಸಿಕೊಂಡಿದ್ದರು. ಸುರಪುರ ಮೊದಲಾದ ಕೆಲವು ಬೇಡ-ನಾಯಕ ಸಂಸ್ಥಾನಿಕರೊಡನೆಯೂ ಸಂಬಂಧವನ್ನು ಇರಿಸಿಕೊಂಡಿದ್ದರು. ಅದರಲ್ಲಿ ಮುಖ್ಯರಾದವರು ಚಿತ್ರದುರ್ಗ ಸಂಸ್ಥಾನಿಕರು. ಅಲ್ಲದೆ, ಆಂಧ್ರಪ್ರದೇಶದ ಪಾಳೆಯಗಾರರ ಪೈಕಿ ಸುಂಡಿ(ಪ್ರಕಾಶಂಜಿಲ್ಲೆ)ಯ ಪಾಳೆಯಗಾರರೊಂದಿಗೂ ಕೊಡೇಕಲ್ಲು, ವೈ.ಎನ್.ಹೊಸಕೋಟೆ, ಶಂಕರಗಲ್ಲು (ಮಡಕಶಿರಾ ತಾಲ್ಲೂಕು), ನಾಯಕನಹಟ್ಟಿ ಮೊದಲಾದ ಪಾಳೆಯಗಾರರ ಸಂತತಿಯವರೊಂದಿಗೂ ಇಂತಹ ಬಾಂಧವ್ಯ ವಿದ್ದಿತು. ಈಗಲೂ ಈ ಕೆಲವು ಮನೆತನಗಳೊಡನೆ ಇದು ಮುಂದುವರೆದಿದೆ.

ಈ ಚಿತ್ರದುರ್ಗ ಸಂಸ್ಥಾನದೊಡನೆ ಸ್ನೇಹವನ್ನೂ ವಿರೋಧವನ್ನೂ ಇಟ್ಟುಕೊಂಡಿದ್ದ ರೆನ್ನುವುದಕ್ಕೆ ಹಲವು ಉದಾಹರಣೆಗಳಿವೆ. ಜರಿಮಲೆ ನಾಯಕರು ಚಿತ್ರದುರ್ಗ ಅರಸನಿಗೆ ಸಿದ್ದಮ್ಮನಾಗತಿ ಎಂಬ ಕನ್ಯೆಯನ್ನು ಕೊಟ್ಟು ಮದುವೆಮಾಡಿದ್ದರು. ಆದರೆ ರಾಜಕೀಯವಾಗಿ ವಿರೋಧವೂ ಮುಂದುವರೆದಿದ್ದಿತು. ಕ್ರಿ.ಶ.೧೬೭೪ ರಿಂದ ೧೬೮೬ರ ವರೆಗೆ ಚಿತ್ರದುರ್ಗದ ಅರಸನಾಗಿದ್ದ ಚಿಕ್ಕಣ್ಣನಾಯಕನು ಕ್ರಿ.ಶ. ೧೬೮೪ರಲ್ಲಿ ಉಜ್ಜಯಿನಿಯನ್ನು ಮುತ್ತಿ ತೆಗೆದುಕೊಂಡ. ಇದಾದ ಎರಡು ತಿಂಗಳುಗಳ ನಂತರ ಹರಪನಹಳ್ಳಿಯವರು ಅದನ್ನು ವಶಪಡಿಸಿಕೊಂಡು ಅಲ್ಲಿಯ ಕೋಟೆಯಲ್ಲಿದ್ದ ಜರಿಮಲೆಯ ಬೊಮ್ಮಣ್ಣನನ್ನು ಕರೆದು ಕೊಂಡು ಹೋಗಿ ಬಿದನೂರಿನಲ್ಲಿಟ್ಟರೆಂದೂ ೩-೪ ತಿಂಗಳುಗಳ ನಂತರ ಈ ಕುಮಾರನನ್ನು ಬಿಟ್ಟು ಕಳುಹಿಸಿದರೆಂದೂ ಚಿತ್ರದುರ್ಗ ಅರಸರ ವಂಶಾವಳಿ ಹೇಳುತ್ತದೆ. ಲಿಂಗಣ್ಣಕವಿಯು ತನ್ನ 'ಕೆಳದಿನೃಪವಿಜಯಂ' ಕೃತಿಯಲ್ಲಿ ಪ್ರಸ್ತಾಪಿಸಿರುವ ಸಂಗತಿಯು ಇದಕ್ಕೆ ಹೊಂದುತ್ತದೆ. ಅವನು ಹೇಳುವಂತೆ, ಕೆಳದಿ ಸೋಮಶೇಖರನಾಯಕನ ಪತ್ನಿ (ವಿಧವೆ) ರಾಣಿ ಚೆನ್ನಮ್ಮಾಜಿಯು (ಕ್ರಿ.ಶ.೧೬೭೧-೧೬೯೭) ಜರಿಮಲೆ ರಾಜನ ಪರಾಕ್ರಮವನ್ನು ಕೇಳಿ ಸುಬ್ಬನೀಸ ಹಾಗೂ ಶರಜಾ ಶಂಕರನಾರಾಯಣಯ್ಯನನ್ನು ಕಳುಹಿಸಿ 'ಮೊಳಕಾಲ ಬಾಸಿಗ' ನೆಂಬ ಬಿರುದನ್ನು ಧರಿಸಿ ಪರಾಕ್ರಮದಿಂದ ಎದುರಾದ ಅವನನ್ನು (ಜರಿಮಲೆ ರಾಜನನ್ನು) ಯುದ್ಧದಲ್ಲಿ ಸೆರೆಹಿಡಿದು ತನ್ನ ಬಾಹುಬಲವನ್ನು ಮೆರೆದಳು. ಜರಿಮಲೆ ರಾಜನ 'ಮೊಳಕಾಲ ಬಾಸಿಗ' ಎಂಬ ಬಿರುದನ್ನು ತೆಗೆಸಿ, ಅವನನ್ನು ಉಳಿಸಿ ಕಳುಹಿಸಿದಳು. ಇದರಿಂದ ಉಜ್ಜಯಿನಿಯ ವಿರುದ್ಧ ಹರಪನಹಳ್ಳಿಯವರು ನಡೆಸಿದ ಯುದ್ಧದಲ್ಲಿ ಬಿದನೂರಿನವರ ಬೆಂಬಲವೂ ಇದ್ದಿತೆಂದು ತಿಳಿಯಬಹುದು. ಹಾಗೆಯೇ, ಆ ಅವಧಿಯಲ್ಲಿ ಇದ್ದ ಜರಿಮಲೆಯ ಪಾಳೆಯಗಾರನೆಂದರೆ ಬೊಮ್ಮಣ್ಣ.

ಕ್ರಿ.ಶ.೧೬೮೯ ರಿಂದ ೧೭೨೧ರ ವರೆಗೆ ದುರ್ಗವನ್ನು ಪಾಲಿಸಿದ ಪ್ರಸಿದ್ಧ ಅರಸ ಬಿಚ್ಚುಗತ್ತಿ ಭರಮಣ್ಣನಾಯಕನು ತಾನು ಪಟ್ಟಕ್ಕೆ ಬಂದ ವರುಷವೇ ಹರಪನಹಳ್ಳಿಯವರ ವಿರುದ್ಧ ಅಣಜಿ ಬಳಿ ನಡೆದ ಯುದ್ಧದಲ್ಲಿ ಜಯ ಸಂಪಾದಿಸಿದ. ಜರಿಮಲೆ ಪಾಳೆಯಗಾರನೂ ಈ ಯುದ್ಧದಲ್ಲಿ ನೆರವಾದ. ರಾಯದುರ್ಗದವರ ವಿರುದ್ಧ ಯುದ್ಧ ಹೂಡಿದಾಗಲೂ ಜರಿಮಲೆ ಪಾಳೆಯಗಾರನು ಸಹಾ ಅವನಿಗೆ ಸಹಾಯ ನೀಡಿದ. ಆದರೆ ಕ್ರಮೇಣ ಚಿತ್ರದುರ್ಗ ಮತ್ತು ಜರಿಮಲೆ ನಾಯಕರ ನಡುವೆ ವೈರ ಬಲಿತು, ಕ್ರಿ.ಶ.೧೭೪೨ರಲ್ಲಿ ದುರ್ಗದವರು ಜರಿಮಲೆ ನಾಯಕನಿಂದ ಸಾಕಷ್ಟು ಸುಲಿಗೆ ಮಾಡಿದರು. ಅದೇ ವರುಷ ಹರಪನಹಳ್ಳಿಯ ಸೋಮಶೇಖರರಾಯನು ಜರಿಮಲೆಯ ಸಂಸ್ಥಾನಕ್ಕೆ ಸೇರಿದ ಬಹುಮುಖ್ಯ ಪ್ರದೇಶವಾದ ಉಜ್ಜಯಿನಿಯನ್ನು ವಶಪಡಿಸಿಕೊಂಡ. ಇದರಿಂದ ಜರಿಮಲೆಯವರಿಗೆ ಆದ ನೋವು ಅವರ್ಣನೀಯ. ಈ ಸೋಲು ಅವರ ಧಾರ್ಮಿಕ ಆಚರಣೆಯ ಮೇಲೆ ಸಾಕಷ್ಟು ಪರಿಣಾಮ ಬೀರಿತು.

೧೭೪೨ರಲ್ಲಿ ಹರಪನಹಳ್ಳಿಯ ಸೋಮಶೇಖರನಾಯಕನು ಉಜ್ಜಯಿನಿಯನ್ನು ತನ್ನ ಅಧೀನಕ್ಕೆ ತೆಗೆದುಕೊಂಡಾಗ ಇದು ಜರಿಮಲೆ ಪಾಳೆಯಗಾರನ ಮೇಲೆ ತೀವ್ರ ಪರಿಣಾಮ ಬೀರಿತೆಂದು ಮೇಲೆಯೇ ಹೇಳಿದೆ. ಉಜ್ಜಯಿನಿಯನ್ನು ಪುನಃ ತನ್ನ ವಶಕ್ಕೆ ತೆಗೆದುಕೊಳ್ಳದೆ ಅಲ್ಲಿ ಕಾಲಿಡುವುದಿಲ್ಲವೆಂದೂ 'ಸೋತವನು ಹೆಂಗಸಿಗೆ ಸಮಾನನು; ಗೆಲ್ಲದೆ, ಗಂಡಸಿನ ಸಂಕೇತವಾದ ಉಡುದಾರವನ್ನು ಸೊಂಟಕ್ಕೆ ಕಟ್ಟುವುದಿಲ್ಲ'ವೆಂದೂ ಈ ಪಾಳೆಯಗಾರನು ಪ್ರತಿಜ್ಞೆ ಮಾಡಿದ. ಆದರೆ ಉಜ್ಜಯಿನಿಯು ಜರಿಮಲೆಯವರ ವಶಕ್ಕೆ ಮತ್ತೆ ಬರಲೇ ಇಲ್ಲ. ಇಂದಿಗೂ ಈ ಪಾಳೆಯಗಾರರ ಸಂತತಿಯವರು ತಮ್ಮ ಹಿಂದಿನ ಪ್ರತಿಜ್ಞೆಯಂತೆಯೇ ನಡೆದುಕೊಳ್ಳುತ್ತಿದ್ದಾರೆ-ಉಜ್ಜಯಿನಿಗೆ ಹೋಗುವುದಿಲ್ಲ, ಉಡುದಾರ ಕಟ್ಟುವುದಿಲ್ಲ; ಆದರೆ ಪ್ರತಿವರುಷವೂ ರಥೋತ್ಸವದ ನಂತರ ಶಿಖರಕ್ಕೆ ಮಾಡುವ ತೈಲಾಭಿಷೇಕವು ಇವರಿಂದಲೇ ಪ್ರಾರಂಭಗೊಳ್ಳುವ ಪದ್ಧತಿ ಇದೆ. ಈಗಲೂ ಈ ಪಾಳೆಯಗಾರರ ಸಂತತಿಯವರು ಉಜ್ಜಯಿನಿಗೆ ಸ್ವತಃ ಹೋಗದೆ ತಮ್ಮ ಪ್ರತಿನಿಧಿಯ ಮೂಲಕ ಎಣ್ಣೆಯನ್ನು ಕಳುಹಿಸುತ್ತಾರೆ. ಹಾಗೆಯೇ, ಈ ಮಠದ ಪಟ್ಟಾಧ್ಯಕ್ಷರಿಗೆ ಪಾದಕಾಣಿಕೆಯನ್ನು ಸಲ್ಲಿಸಲಾಗುತ್ತದೆ. ಇವರು ಕಳುಹಿಸಿದ ತೈಲಕುಂಭವು ಬರುವತನಕ ಬೇರೆಯವರ ಎಣ್ಣೆಯನ್ನು ಶಿಖರಕ್ಕೆ ಎರೆಯುವುದಿಲ್ಲ. ಇದು ಉಜ್ಜಯಿನಿ ಸಂಸ್ಥಾನ ಮತ್ತು ಜರಿಮಲೆ ಪಾಳೆಯಗಾರರ ನಡುವೆ ಇದ್ದ ಬಾಂಧವ್ಯಕ್ಕೆ ಪ್ರಬಲ ಸಾಕ್ಷಿ. (ಶ್ರೀ ಜಗದ್ಗುರು ಉಜ್ಜಯಿನಿ ಸದ್ಧರ್ಮ ಸಿಂಹಾಸನ ಮಹಾಸಂಸ್ಥಾನಮಠ, ಉಜ್ಜಯಿನಿ, ಪತ್ರದ ಕ್ರ.ಸಂ.೨೭೪, ದಿನಾಂಕ ೨೨-೪-೮೮). ಈ ಪಾಳೆಯಗಾರರಿಗೆ ಬೆಂಬಲವಾಗಿ ನಿಂತ ಮಳೆಬಗೆ ಚನ್ನಬಸಪ್ಪಸ್ವಾಮಿಗಳ ಗದ್ದಿಗೆಯು ಉಜ್ಜಯಿನಿಯ ದಕ್ಷಿಣದಿಕ್ಕಿನಲ್ಲಿದೆ. ಇದನ್ನು ಮಳೆಸ್ವಾಮಿಗಳ ಗದ್ದಿಗೆ ಎನ್ನುವರು.

ಕ್ರಿ.ಶ. ೧೭೫೪ ರಿಂದ ೧೭೭೯ರ ವರೆಗೆ ಆಳ್ವಿಕೆ ನಡೆಸಿದ ರಾಜಾ ವೀರಮದಕರಿನಾಯಕನು ಚಿತ್ರದುರ್ಗ ರಾಜ್ಯದ ಪ್ರಭಾವವನ್ನು ಹೆಚ್ಚಿಸಲು ಕಾರಣನಾದ. ಇವನ ಅವಧಿಯಲ್ಲಿ ರಾಜಕೀಯದಲ್ಲಿ ಜರಿಮಲೆಯವರು ನಿರ್ವಹಿಸಿದ ಪಾತ್ರ ಗಮನೀಯವಾದುದು. ಕ್ರಿ.ಶ. ೧೭೬೭ರಲ್ಲಿ ಹೈದರನು ಚಿತ್ರದುರ್ಗದ ಮೇಲೆ ದಾಳಿಯಿಕ್ಕಿದಾಗ ಅವನಿಗೆ ಸೈನಿಕ ಸಹಾಯ ನೀಡಿದವರಲ್ಲಿ ಜರಿಮಲೆಯ ಪಾಳೆಯಗಾರರ ಇಮ್ಮಡಿ ನಾಯಕನೂ ಇದ್ದ. ಈ ಕಾರಣಕ್ಕಾಗಿ ಆ ನಂತರ ರಾಜಾ ವೀರಮದಕರಿನಾಯಕನು ಈ ನಾಯಕನನ್ನು ಕೊಲ್ಲಿಸಿದ. ಇಮ್ಮಡಿ ನಾಯಕನ ಇಬ್ಬರು ಮಕ್ಕಳು ಹೈದರ್‌ನಲ್ಲಿ ಈ ಸಂಗತಿಯನ್ನು ಪ್ರಸ್ತಾಪಿಸಿದರು. ಈ ಕೆಲವು ಅಂಶಗಳು ನಲ್ಲಪ್ಪನ 'ಹೈದರ್‌ನಾಮಾ'ದಲ್ಲಿ ಉಲ್ಲೇಖಗೊಂಡಿವೆ. ಆದರೆ ಆ ನಂತರದಲ್ಲಿ ರಾಜಾ ಮದಕರಿಯ ಆಸ್ಥಾನದಲ್ಲಿ ಜರಿಮಲೆಯ ಪಾಳೆಯಗಾರ ಬೊಮ್ಮಣ್ಣನಾಯಕನು ಉನ್ನತ ಸ್ಥಾನ-ಮಾನಗಳನ್ನು ಪಡೆದ. ಈ ಬೊಮ್ಮಣ್ಣನನ್ನು **'ಚಿತ್ರದುರ್ಗದ ಬಖೈರ್'** ಕರ್ತೃ ಭೀಮೋಜಿಪಂತನು 'ರಾಜ' ಎಂದು ಗೌರವದಿಂದ ಸಂಬೋಧಿಸಿದ್ದಾನೆ. ಈ ರಾಜನು ತನ್ನ ಸೇನಾಪಡೆ ಸಹಿತ ಚಿತ್ರದುರ್ಗದ ಅರಸನಿಗೆ ಸಹಾಯ ಮಾಡಿದ. ಹೈದರ್‌ಅಲಿಯು ಚಿತ್ರದುರ್ಗದ ವಿರುದ್ಧ ಕ್ರಿ.ಶ.೧೭೭೯ರಲ್ಲಿ ಕೊನೆಯ ಯುದ್ಧ ಸನ್ನಾಹ ನಡೆಸಿದಾಗ, ಮದಕರಿಯು ಇತರೆ ಸಂಸ್ಥಾನಿಕರಿಗೆ ಸೇನಾನೆರವಿಗಾಗಿ ಹುಕುಂ ಮಾಡಿದಂತೆಯೇ ಜರಿಮಲೆಯ

ನಾಯಕನಿಗೂ ೩,೦೦೦ ಸೈನಿಕರನ್ನು ಕಳುಹಿಸುವಂತೆ ಆದೇಶಿಸಿದ್ದ. ದುರ್ಗದ ಖಾಸಾ ಫೌಜು ಹಾಗೂ ಜರಿಮಲೆಯ ಫೌಜು ಸೇರಿ ಒಟ್ಟು ಹತ್ತುಸಾವಿರವಿದ್ದಿತೆಂದು ದಾಖಲಾಗಿದೆ. ಚಿತ್ರದುರ್ಗ ಕೋಟೆಯ ಪೂರ್ವದಿಕ್ಕಿನ ಬುದ್ಧಿವಂತನಮರಡಿ ಬಳಿ ನಡೆದ ಭೀಕರ ಕದನದಲ್ಲಿ ಜರಿಮಲೆಯ ದಂಡು ಸಹಾ ಇದ್ದಿತು. ಈ ದಂಡು ಕೋಟೆಯ ಪ್ರಮುಖ ದ್ವಾರಗಳಲ್ಲೊಂದಾದ ಲಾಲದಕೋಟೆಬಾಗಿಲು ಬಳಿ ತನ್ನ ಹೋರಾಟ ಮುಂದುವರೆಸಿದ್ದಂತೆ ತೋರಿಬರುತ್ತದೆ.

ಬುದ್ಧಿವಂತನಮರಡಿ ಕಾಳಗ ಒಂದು ತಿಂಗಳ ಕಾಲ ನಡೆದುದು ಗಮನಾರ್ಹ. ಈ ಯುದ್ಧದ ಆರಂಭದಲ್ಲಿ ದುರ್ಗದವರಿಗೆ ಜಯ ದೊರೆತು ಮದಕರಿಯು ಅದನ್ನು ಸಂತೋಷದಿಂದ ಆಚರಿಸಲು ನಿರ್ಧರಿಸಿ, ತನಗೆ ಸಹಾಯ ನೀಡಿದ ಇತರ ಸಂಸ್ಥಾನಿಕರ ಸರದಾರರು, ಯೋಧರು ಮೊದಲಾದವರಿಗೆ ಇನಾಂ ನೀಡಿ ಅವರಿಗೆ ಸಂತೋಷಪಡಿಸಿದ. ಆ ಸಂದರ್ಭದಲ್ಲಿ ಜರಿಮಲೆಯವರು ತಮ್ಮ ಸ್ಥಳಕ್ಕೆ ಹೋಗಿ ಹಿಂದಿರುಗಿ ಬರಲು ಮದಕರಿಯ ಅಪ್ಪಣೆ ಕೇಳಿದಾಗ ಅವನು, "ದುರಾಲೋಚನೆ ಮಾಡಿದವರು ಮಾತ್ರ (ಕೋಟೆಯ) ಹೊರಗೆ ಹೋಗುವುದು. ನಿಮ್ಮ ದೊರೆಯನ್ನು ಅನಂತರ ಕಳುಹಿಸುತ್ತೇವೆ" ಎಂದ. ಇದರಿಂದ ಅಸಮಾಧಾನ ಹೊಂದಿದ ಜರಿಮಲೆಯವರು ಮದಕರಿಯಿಂದ ಇನಾಮನ್ನು ಪಡೆಯದೆ ತಮ್ಮ ಸ್ಥಳಕ್ಕೆ ಹಿಂದಿರುಗಿದರು. ಈ ಘಟನೆ ದುರ್ಗದವರ ಪಾಲಿಗೆ ಗಂಡಾಂತರ ಕಾರಿಯಾಯಿತೆನ್ನಬಹುದು. ಮದಕರಿಯ ಉದ್ಧಟವರ್ತನೆಯಿಂದ ಕೆರಳಿದ ಜರಿಮಲೆಯವರು ಹೈದರ್‌ಅಲಿಯೊಡನೆ ಸಹಕರಿಸಿ ದುರ್ಗದ ಮೇಲೆ ಎರಗಿದರು. ಚಿತ್ರದುರ್ಗ ಕೋಟೆಯ 'ಐಬು' ಜಾಗಗಳನ್ನು ಕಂಡಿದ್ದ ಅವರು, ಹೆಬ್ಬುಲಿಕಲ್ಲು ಕದನದಲ್ಲಿ ಹೈದರನ ಸೇನೆಯ ಮುಂಚೂಣಿಯಲ್ಲಿದ್ದು ಹೋರಾಡಿ, ಮದಕರಿಯನ್ನು ನಾಶಮಾಡುವ ತಮ್ಮ ಶಕ್ತಿ-ಯುಕ್ತಿಗಳನ್ನೂ ಪ್ರದರ್ಶಿಸಿದರು.

ತನ್ನ ಜಯಕ್ಕೆ ಕಾರಣರಾದ ಜರಿಮಲೆಯ ನಾಲ್ಕುಮಂದಿ ಭೂಪರಿಗೆ ಹೈದರ್‌ಅಲಿಯು ಮೈಸೂರು ಸಂಸ್ಥಾನಕ್ಕೆ ಸೇರಿದ್ದ ೧೩೩ ಹಳ್ಳಿಗಳನ್ನು ಜಹಗೀರಾಗಿ ಹಂಚಿದನಂತೆ. ಅವುಗಳಲ್ಲಿ ಸೇರಿದ್ದ ಮುಖ್ಯ ಪಾಳೆಯಪಟ್ಟುಗಳೆಂದರೆ ಸೊಂಡೂರು, ಗುಡೇಕೋಟೆ, ವೀರನದುರ್ಗ ಮತ್ತು ಭೈರಿದೇವರಗುಡ್ಡಗಳು (ಭೈರಿದೇವರಗುಡ್ಡ ಅಥವಾ ಬೀರಲಗುಡ್ಡ?). ಹೈದರ್‌ಅಲಿಯು ಕೈಗೊಂಡ ಸೈನಿಕ ಕಾರ್ಯಾಚರಣೆಯಲ್ಲಿ ಜರಿಮಲೆಯವರೂ ತಮ್ಮ ಪಾಲಿನ ನೆರವು ನೀಡಿರುವರು. ಕ್ರಿ.ಶ. ೧೭೮೦ರಲ್ಲಿ ಹೈದರನು ನಡೆಸಿದ ಕರ್ನಾಟಕ ಯುದ್ಧದಲ್ಲಿ ಆನೆಗೊಂದಿ, ಹರಪನಹಳ್ಳಿ ಮತ್ತು ಮಟ್ಲೆವಾರು-ಈ ಶಿಪಾಯಿ ಪಾಳೆಯಗಾರರೊಡನೆ ಜರಿಮಲೆಯವರೂ ಸೇರಿದ್ದರು. ಸುಮಾರು ೧,೫೦,೦೦೦ ಸೇನಾಬಲದಲ್ಲಿ ಜರಿಮಲೆಯ ಯೋಧರೂ ಸೇರಿದ್ದರು. ಹೈದರ್‌ಅಲಿಗೆ ಪಾಳೆಯಗಾರರಿಂದ ಸಂದಾಯವಾಗುತ್ತಿದ್ದ ಪೇಶ್‌ಕಶ್ ಮೊತ್ತ ಸುಮಾರು ೨೦ ಲಕ್ಷ ವರಹಗಳಷ್ಟಿತ್ತು. ಇದರಲ್ಲಿ ಜರಿಮಲೆಯ ಕಾಣಿಕೆಯೂ ಸೇರಿದ್ದಿತು.

ಹೈದರ್‌ಅಲಿಯ ಮರಣಾನಂತರ ಟಿಪ್ಪುಸುಲ್ತಾನನು ಪಾಳೆಯಗಾರರನ್ನು ಅಷ್ಟಾಗಿ ಗಮನಿಸಲಿಲ್ಲವೆಂಬುದು ಗಮನಾರ್ಹ. ಅವನ ಧೋರಣೆ ಹಾಗೂ ವರ್ತನೆಗಳಿಂದ

ದಿಕ್ಕುಗಾಣದ ಪಾಳೆಯಗಾರರ ಪೈಕಿ ಹೊಸಕೋಟೆ, ಹರಪನಹಳ್ಳಿ, ಗುಡಿಕೋಟೆ, ಪ್ಯಾಪಿಲಿ, ಚುಂಡೀ, ಕನಕಗಿರಿ, ಮದ್ದಿನಕರಿ, ಚೂನುಗುಂಡ, ಕಪಟ್ರಾಳು, ಪಾವುಗಡ, ರತ್ನಗಿರಿ, ಆನೆಗೊಂದಿಯವರು ಆಗ ಪ್ರಬಲನಾಗುಳಿದಿದ್ದ ಸುರಪುರದ ನಾಯಕ ಇಮ್ಮಡಿ ವೆಂಕಟಪ್ಪನಾಯಕನ (ಕ್ರಿ.ಶ.೧೭೭೩-೧೮೦೨) ಆಶ್ರಯ ಕೋರಿ ಸುರಪುರವನ್ನು ಸೇರಿ ಕೊಂಡಿದ್ದರು; ಇವರುಗಳ ಜತೆಯಲ್ಲಿ ಜರಿಮಲೆ ಪಾಳೆಯಗಾರನೂ ಇದ್ದನೆಂದೂ ವೆಂಕಟಪ್ಪನಾಯಕನು ಇವರೆಲ್ಲರನ್ನೂ ಆದರಿಸಿ ಸತ್ಕರಿಸಿದನೆಂದೂ ಕಪಟರಾಳ ಕೃಷ್ಣರಾಯರು ತಮ್ಮ 'ಸುರಪುರ ಸಂಸ್ಥಾನ ಇತಿಹಾಸ'ದಲ್ಲಿ ಉಲ್ಲೇಖಿಸಿದ್ದಾರೆ. ವೆಂಕಟಪ್ಪನಾಯಕನ ಹೆಂಡಂದಿರಲ್ಲಿ ಜರಿಮಲೆ ಲಕ್ಷ್ಮಮ್ಮಳೂ ಒಬ್ಬಳಾಗಿದ್ದಳು.

ಕ್ರಿ.ಶ.೧೭೯೯ರಲ್ಲಿ ಶ್ರೀರಂಗಪಟ್ಟಣವು ಇಂಗ್ಲಿಷರ ವಶವಾದಾಗ, ಈಸ್ಟ್ ಇಂಡಿಯಾ ಕಂಪನಿ ಮತ್ತು ಹೈದರಾಬಾದ್ ನಿಜಾಮರ ನಡುವೆ ಏರ್ಪಟ್ಟ ಪ್ರತ್ಯೇಕ ಒಪ್ಪಂದದ ಪ್ರಕಾರ, ನಿಜಾಮನಿಗೆ ಬಿಟ್ಟುಕೊಟ್ಟ ಪ್ರದೇಶಗಳಲ್ಲಿ ಆಗ ಚಿತ್ರದುರ್ಗ ಜಿಲ್ಲೆಗೆ ಸೇರಿದ ಜರಿಮಲೆ ತಾಲ್ಲೂಕು ಸಹಾ ಒಂದಾಗಿದ್ದಿತು. ಆಗಿನ ಅದರ ವಾರ್ಷಿಕ ಉತ್ಪನ್ನ ೭,೮೦೦ ಕಂಠೀರಾಯಿ ಪಗೋಡಗಳಷ್ಟಿದ್ದಿತು.

ಅಧ್ಯಯನದ ಕೆಲವು ತೊಡಕುಗಳು

ಜರಿಮಲೆ ಪಾಳೆಯಗಾರರ ಚರಿತ್ರೆಯ ರಚನೆಯಲ್ಲಿ ಕಂಡುಬರುವ ಮುಖ್ಯ ಕೊರತೆಗಳು ಎರಡು: ಒಂದು, ಈ ಸಂಸ್ಥಾನವನ್ನು ಪಾಲಿಸಿದವರ ಕ್ರಮವಾದ ವಂಶಾವಳಿ ಹಾಗೂ ನಿಶ್ಚಿತ ಕಾಲಮಾನ ದೊರೆಯದಿರುವುದು; ಎರಡು, ಆಳ್ವಿಕೆ ನಡೆಸಿದವರ ವೈಯಕ್ತಿಕ ಸಾಧನೆ ಮತ್ತಿತರ ವಿವರಗಳು ಲಭ್ಯವಿಲ್ಲದಿರುವುದು. ಆದರೂ ಈ ನಿಟ್ಟಿನಲ್ಲಿ ತಕ್ಕಮಟ್ಟಿಗೆ ಪ್ರಯತ್ನಿಸಲಾಗಿದೆ. ಮೊದಲಿಗೆ, ಈ ಪೀಳಿಗೆಯವರನ್ನು ಕುರಿತು ಗಮನಿಸುವುದಾದರೆ, ಬೂದಿಶಿದ್ದರಾಜುವಿನ ಕೊನೆಯ ಮಗ ಭೂಮರಾಜನೇ ಜರಿಮಲೆಯ ಮೊದಲ ಅಧಿಕೃತ ಪಾಳೆಯಗಾರ ಎನ್ನುತ್ತದೆ 'ಜರಿಮಲೆ ಸಂಸ್ಥಾನದ ವಂಶಾವಳಿ'.

ಆದರೆ 'ದರೋಜಿಗ್ರಾಮದ ಕೈಫಿಯತ್ತು' ನೀಡುವ ವಿವರಗಳ ಪ್ರಕಾರ, ಭೂಮರಾಜನು ಕಂಪಿಲರಾಯನ ಮಗನಾದ ಕುಮಾರರಾಮನ ವಂಶಸ್ಥ; ಮೂಲತಃ ತಳವಾರ. ಇವನ ವಂಶಸ್ಥರ ಮನೆದೇವರು ಕೂಡ ಜಟ್ಟಿಂಗರಾಮೇಶ್ವರ. ವಿಜಯನಗರದ ಕೃಷ್ಣದೇವರಾಯ ಕೈಗೊಂಡ ಪ್ರಾಗ್ದೇಶದ ದಂಡಯಾತ್ರೆಯ ಸಂದರ್ಭದಲಿ ಸಾಮ್ರಾಜ್ಯದ ವ್ಯಾಪ್ತಿಯಲ್ಲಿದ್ದ ಪಾಳೆಯಗಾರರೂ ತಮ್ಮ ತಮ್ಮ ದಂಡಿನೊಡನೆ ರಾಯನ ಸಂಗಡ ಹೋದರು. ಅವರಲ್ಲಿ ಭೂಮರಾಜನೂ ಇದ್ದ. ದಂಡಯಾತ್ರೆಯಲ್ಲಿ ವಿಜಯಿಯಾಗಿ ಹಿಂದಿರುಗಿದ ರಾಯ, ತನ್ನೊಡನೆ ಸಹಕರಿಸಿದ ಶೂರ ಪಾಳೆಯಗಾರರನ್ನೆಲ್ಲಾ ಸನ್ಮಾನಿಸಿ ಬೀಳ್ಕೊಡುವ ಸಂದರ್ಭದಲ್ಲಿ, ಸನ್ಮಾನಿತರಲ್ಲಿ ಒಬ್ಬನಾಗಿದ್ದ ಭೂಮರಾಜ ಪೂರ್ವದಲ್ಲಿ ತನ್ನ ವಂಶದವರು ನಾಡತಳವಾರಿಕೆಯನ್ನೂ ಜಹಗೀರನ್ನೂ ಹೊಂದಿದ್ದ ಕಾರಣ ಅದನ್ನು ಮತ್ತೆ ದಯಪಾಲಿಸಬೇಕೆಂದು ಅವನಲ್ಲಿ ಬೇಡಿಕೊಂಡ.

ಭೂಮರಾಜನ ಬೇಡಿಕೆಯನ್ನು ಸಂತೋಷದಿಂದ ಮನ್ನಿಸಿದ ಕೃಷ್ಣದೇವರಾಯ, ಅವನಿಗೆ ನಾಡತಳವಾರಿಕೆ ಸ್ವಾಸ್ತಿಯಾಗಿ ಒಪ್ಪಿಸಿದ ಏಳು ಜಹಗೀರು ತಾಲ್ಲೂಕು ಅಥವಾ ಸೀಮೆಗಳೆಂದರೆ, ಕುತ್ತಾನೆ (ಕುಡುತಿನಿ), ಸೊಂಡೂರು, ಬಾಣಾರಾವಿ, ಜರಿಮಲೆ, ಗುಡೇಕೋಟೆ, ಉಜ್ಜಿನಿ ಮತ್ತು ವಡ್ಡುದರೋಜಿ. ಆ ನಂತರ ಕಾಲಕ್ರಮದಲ್ಲಿ ಭೂಮರಾಜನು ಮನೆದೇವರು ಜಟ್ಟಿಂಗರಾಮನ ಅನುಗ್ರಹದಿಂದ ತನಗೆ ಜನಿಸಿದ ಏಳು ಗಂಡುಮಕ್ಕಳಾದ ಹಿರೇಬೊಮ್ಮಂತರಾಜ, ಬಿಸಾಳನಾಯಕ, ರಾಜಪ್ಪನಾಯಕ, ವೀರಪ್ಪನಾಯಕ, ಯಿಮ್ಮಡಿನಾಯಕ, ಮಲ್ಲಿಕಾರ್ಜುನನಾಯಕ ಮತ್ತು ಚಿನ್ನಯ್ಯರಾಜು ಅವರುಗಳಿಗೆ ಕ್ರಮವಾಗಿ ಕುಡುತಿನಿ, ಸೊಂಡೂರು, ಬಾಣಾರಾವಿ, ಉಜ್ಜಿನಿ, ಗುಡೇಕೋಟೆ, ಜರಿಮಲೆ ಮತ್ತು ವಡ್ಡುದರೋಜಿ ತಾಲ್ಲೂಕುಗಳಿಗೆ ನೇಮಕ ಮಾಡಿದ. ಇದರಂತೆ, ಆರನೇ ಮಗ ಮಲ್ಲಿಕಾರ್ಜುನನಾಯಕನ ಪಾಲಿಗೆ ಬಂದುದು ಜರಿಮಲೆ ತಾಲ್ಲೂಕು. ಭೂಮರಾಜ ಮಧ್ಯದ ಮಗನ ಬಳಿ ಅಂದರೆ ಪ್ರಾಯಶಃ ವೀರಪ್ಪನಾಯಕನೊಡನೆ ವಾಸಿಸತೊಡಗಿದ.

'ಅಂತಾಪುರದ ಕೈಫಿಯತ್ತು' ಮೇಲಿನ ಕೈಫಿಯತ್ತಿನಂತೆಯೇ ಬೊಮ್ಮಂತರಾಜುವಿನ ಪೂರ್ವೋತ್ತರವನ್ನು ಹಾಗೂ ಆತನ ಏಳುಮಕ್ಕಳ ಸಂಗತಿಯನ್ನೂ ಪ್ರಸ್ತಾಪಿಸುತ್ತದೆ. ಹಿರೇ ಬೊಮ್ಮಂತರಾಜು-ಬಿಸಳರಾಜು-ರಾಜಪ್ಪನಾಯಕ-ವೀರಪ್ಪನಾಯಕ-ಯಿಮ್ಮಡಿರಾಜು-ಮಲ್ಲಿಕಾರ್ಜುನನಾಯಕ-ಚಿನ್ನರಾಜು-ಹೀಗೆ ಕ್ರಮವಾಗಿ ಹಾಗೂ ಸ್ಪಷ್ಟವಾಗಿ ಬೊಮ್ಮಂತರಾಜುವಿನ ಏಳುಮಕ್ಕಳ ಹೆಸರುಗಳನ್ನು ಇದು ತಿಳಿಸುತ್ತದೆ. ಇಲ್ಲಿಯ ಬೊಮ್ಮಂತರಾಜನೇ ಇತರ ದಾಖಲೆಗಳಲ್ಲಿ ಪ್ರಸ್ತಾಪಗೊಂಡಿರುವ ಭೂಮರಾಜನೆನ್ನಲು ಅಡ್ಡಿಯಿಲ್ಲ.

'ಶ್ರೀಕೊಮಾರದೇವರಕ್ಷೇತ್ರದ ಕೈಫಿಯತ್ತು' ಸಹಾ ಮೇಲಿನ ಕೈಫಿಯತ್ತುಗಳ ಸಂಗತಿಯನ್ನೆ ಸಮರ್ಥಿಸಿದರೂ ಹಿರೇಬೊಮ್ಮಂತರಾಜನ ತರುವಾಯ ಕೃಷ್ಣದೇವರಾಯನು ದಯಪಾಲಿಸಿದ ಸೀಮೆಗಳನ್ನು ಅವನ ಮಗ ಚಿನ್ನಯ್ಯರಾಜ, ಆ ನಂತರ ಅವನ ಮಗ ಕೊಂಡಲರಾಜ ಆಳಿದರೆಂಬ ಬೇರೆ ಕಥೆಯೊಂದನ್ನು ಕಟ್ಟಿಕೊಡುತ್ತದೆ. ಇತರೆ ದಾಖಲೆಗಳಲ್ಲಿ ಹಿರೇಬೊಮ್ಮಂತರಾಜನ ಏಳುಮಕ್ಕಳೆಂದು ಗುರುತಿಸಲಾದ ಹಿರೇಬೊಮ್ಮಿನಾಯಕ, ಬಿಸಾಳನಾಯಕ, ರಾಜಪ್ಪನಾಯಕ, ಹಿರೇಮಲ್ಲಿಕಾರ್ಜುನನಾಯಕ, ಯೀರಪ್ಪನಾಯಕ, ಯಿಮ್ಮಡಿನಾಯಕ ಮತ್ತು ಚಿನ್ನಪ್ಪನಾಯಕರು ಈ ಕೈಫಿಯತ್ತಿನ ಪ್ರಕಾರ ಕೊಂಡಲರಾಜುವಿನ ಮಕ್ಕಳು. ಈ ಬಗೆಯ ಗೊಂದಲಗಳು ಏನೇ ಇದ್ದರೂ ವಿವರವಾದ ಪರಿಶೀಲನೆಯ ತರುವಾಯ ಈ ವಂಶದ ಮೂಲಪುರುಷರ ವೃತ್ತಾಂತವನ್ನು ಖಚಿತವಾಗಿ ನಿರೂಪಿಸಲು ಸಾಧ್ಯ.

ಈ ಸಂಸ್ಥಾನಿಕರ ವಂಶಾವಳಿಯಂತೆಯೇ ಇವರ ಚರಿತ್ರೆಯೂ ಅಸ್ಪಷ್ಟವಾದುದು. **'ಜರಿಮಲೆ ಸಂಸ್ಥಾನದ ವಂಶಾವಳಿ'**ಯಲ್ಲಿ ಜರಿಮಲೆಯ ಸಂಸ್ಥಾಪನೆಯ ತೇದಿಯನ್ನು 'ಚಿತ್ರಭಾನು ಸಂವತ್ಸರ ಕಾರ್ತಿಕ ಶುದ್ಧ ೯ ಬುಧವಾರ' ಎಂದಿದೆ. ಇದು ಬಹುಶಃ ಶಕ ೧೫೨೪ರ ಚಿತ್ರಭಾನು ಸಂವತ್ಸರ ಇರಬಹುದು. ವಿಜಯನಗರದ ಪತನದ ತರುವಾಯವೇ

ಈ ಸಂತತಿಯವರಿಗೆ ಸ್ವತಂತ್ರವಾಗಿ ಅಧಿಕಾರ ಸ್ಥಾಪಿಸಲು ಸಾಧ್ಯವಾಯಿತೆನ್ನುವುದಾದರೆ, ಇದು ಕ್ರಿ.ಶ.೧೬೩೩ರಲ್ಲಿ ಸಂಭವಿಸಿರಬೇಕು. ಆದರೆ ಇದು ನಿರ್ದಿಷ್ಟ ಕಾಲಮಾನವಲ್ಲ. ಹಾಗೆಯೇ, 'ವಿಕ್ರಮನಾಮ ಸಂವತ್ಸರ ಕಾರ್ತಿಕ ಶುದ್ಧ ೧೦ ಗುರುವಾರ' ಎಂಬುದು ಉಜ್ಜಯಿನಿ ಗ್ರಾಮ ನಿರ್ಮಾಣವಾದುದನ್ನು ಅಥವಾ ಅದರ ಪುನರುದ್ಧಾರಕಾರ್ಯವು ನಡೆಯಿತೆಂಬುದನ್ನು ಹೇಳುತ್ತದೆಂದು ತಿಳಿಯುವುದಾದರೆ, ಅದು ಶಕ ೧೬೧೨ರ ವಿಕ್ರಮ ಸಂವತ್ಸರವಿರಬಹುದು. ಇದು ಕ್ರಿ.ಶ.೧೭೯೧ಕ್ಕೆ ಸರಿಹೋಗುತ್ತಿದ್ದು, ಈ ಅವಧಿಯಲ್ಲಿ ಉಜ್ಜಯಿನಿಮಠ ಮತ್ತು ದೇವಾಲಯಗಳ ಪುನರುದ್ಧಾರಕಾರ್ಯವನ್ನು ಜರಿಮಲೆ ನಾಯಕರು ಕೈಗೊಂಡಿರಬಹುದು.

ಹನ್ನೆರಡನೆಯ ಶತಮಾನದ ಅಂತ್ಯದಲ್ಲಿ ಉಜ್ಜಯಿನಿಮಠದ ನಿರ್ಮಾಣಕಾರ್ಯ ನಡೆದು ಮಠದ ಸ್ಥಾಪನೆ ಆಗಿದ್ದಿತೆಂದೂ ಉತ್ತರಾಧಿಕಾರದ ನಿರ್ಧಾರವೂ ಆಗಿದ್ದಿತೆಂದೂ ತಿಳಿದು ಬರುತ್ತದೆ. ಇದಕ್ಕೆ ಕಾರಣವೇನೆಂದರೆ, ಜರಿಮಲೆ ನಾಯಕರು ಉಜ್ಜಯಿನಿ ಮರುಳಸಿದ್ಧೇಶ್ವರ ದೇವರ ನಿಷ್ಠಾವಂತ ಭಕ್ತರಾಗಿದ್ದರು. ಹಾಗೆಯೇ, ಅಲ್ಲಿಯ ಮಠದ ಪೋಷಕರೂ ಅಭಿಮಾನಿಗಳೂ ಆಗಿದ್ದರು. ಅಲ್ಲದೆ, ಕ್ರಿ.ಶ. ೧೬೬೧ ರಿಂದ ೧೭೦೫ರ ವರೆಗೆ ಹರಪನಹಳ್ಳಿ ಯನ್ನು ಪಾಲಿಸಿದ ಅಲ್ಲಿಯ ಪಾಳೆಯಗಾರ ಬಸವಂತನಾಯಕನು ತನ್ನ ಧಾರ್ಮಿಕ ಅನುಸರಣೆಯ ಸ್ವಂತ ಕಾರಣಗಳಿಗಾಗಿ ಈ ಉಜ್ಜಯಿನಿಯಲ್ಲಿ ತನ್ನ ಪ್ರಭಾವ ಬೀರಲು ಪ್ರಯತ್ನಿಸಿದನೆಂಬುದನ್ನೂ ಇಲ್ಲಿ ಪರಿಗಣಿಸಬಹುದು. ಈ ಅವಧಿಯಲ್ಲಿ ಉಜ್ಜಯಿನಿಯ ವೀರಶೈವಧರ್ಮೀಯ ಎರಡು ಮುಖ್ಯಪೀಠಗಳಾದ ಉಜ್ಜಯಿನಿ ಸದ್ಧರ್ಮಸಿಂಹಾಸನ ಮತ್ತು ಸಾರಂಗಮಠಗಳ ನಡುವೆ ಪೈಪೋಟಿಯಿದ್ದು, ಈ ಬಸವಂತನಾಯಕನು ಇದರಲ್ಲಿ ಪಾಲ್ಗೊಂಡಿದ್ದ. ಜರಿಮಲೆಯವರ ಅಧೀನದಲ್ಲಿದ್ದ ಈ ಉಜ್ಜಯಿನಿಯು ಆಗ ಪ್ರಮುಖ ಧಾರ್ಮಿಕ ನೆಲೆಯೆನಿಸಿ ಇತರರನ್ನೂ ಆಕರ್ಷಿಸುತ್ತಿದ್ದಿ ತೆನ್ನಬಹುದು. ಆದರೆ ಇದನ್ನು ಇನ್ನಷ್ಟು ಪರಿಶೀಲಿಸುವ ಅಗತ್ಯವಿದೆ. ಸಿದ್ಧೇಶ್ವರನ ಅಥವಾ ಮರುಳಸಿದ್ಧೇಶ್ವರನ ದೇವಾಲಯವು ಕಲ್ಯಾಣ ಚಾಲುಕ್ಯರ ಕಾಲದ ಕಟ್ಟಡವಾಗಿದ್ದು, ಅತ್ಯಂತ ಸುಂದರ ಶಿಲ್ಪಗಳಿಂದ ಕೂಡಿದೆ.

ಈಚಿನ ವಂಶೀಕರು

ಇಂಗ್ಲಿಷರು ಜರಿಮಲೆಯನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡು ಈ ಪಾಳೆಯಗಾರ ಮನೆತನದವರಿಗೆ ಸಹಾಯಧನವನ್ನು ಗೊತ್ತುಪಡಿಸಿದರು. ೧೮೭೬ ಜನವರಿಯಲ್ಲಿ ರಾಜಾ ಇಮ್ಮಡಿ ಲಕ್ಷ್ಮಪ್ಪನಾಯಕನು ರಾಣಿ ಸರಕಾರದವರಿಗೆ ಬರೆದುಕೊಂಡ ಮನವಿಪತ್ರದಲ್ಲಿ, ಸರಕಾರದವರು ೩ ರೂಪಾಯಿ ೩ ಆಣೆ ೯ ಕಾಸುಗಳನ್ನು ಪೆನ್‌ಷನ್ ಆಗಿ ನೀಡುತ್ತಿದ್ದರೆಂದೂ ಅದನ್ನು ಆ ಮನೆತನದ ಉಳಿದವರು ಇಷ್ಟಿಷ್ಟು ಹಂಚಿಕೊಳ್ಳುತ್ತಿದ್ದರೆಂದೂ ಇತರ ವಿವರ ಗಳೊಡನೆ ಪ್ರಸ್ತಾಪಿಸಿದ್ದಾನೆ. ಆದರೆ ಎಲ್ಲರ ಸಂಸಾರವೂ ಬೆಳೆದು ಪೆನ್‌ಷನ್ ಸಾಲುತ್ತಿಲ್ಲ ವಾದ್ದರಿಂದ ಅದನ್ನು ಹೆಚ್ಚಿಸಬೇಕೆಂದೂ ಇಲ್ಲವೆ ಜಹಗೀರನ್ನಾದರೂ ಹಾಕಿಕೊಡಬೇಕೆಂದೂ ಅದೂ ಇಲ್ಲವಾದರೆ ಸರಕಾರದಿಂದ ವಿಷವನ್ನಾದರೂ ಕಳುಹಿಸಿದಲ್ಲಿ ಅದನ್ನು ಸ್ವೀಕರಿಸ ಲಾಗುತ್ತದೆಂದೂ ಕಳಕಳಿಯಿಂದ ಬರೆದುಕೊಂಡಿದ್ದಾನೆ. ಇಮ್ಮಡಿ ಲಕ್ಷ್ಮಪ್ಪನಾಯಕನು ಇಂಗ್ಲಿಷ್ (ರಾಣಿ) ಸರಕಾರಕ್ಕೆ ತನ್ನ ಮತ್ತು ತನ್ನ ಅಣ್ಣ ರಾಮಪ್ಪನಾಯಕನಿಗೆ ದೊರಕುತ್ತಿದ್ದ

ರಾಜಧನವನ್ನು ಹೆಚ್ಚಿಸುವಂತೆ ಪ್ರಾರ್ಥಿಸಿ ತೆಲುಗು ಭಾಷೆಯಲ್ಲಿ ಬರೆದುಕೊಂಡಿರುವ ಪತ್ರ ಇದು. ತಮ್ಮ ಹಿಂದಿನ ಕೆಲವರ ಹೆಸರುಗಳನ್ನು ಪ್ರಸ್ತಾಪಿಸಿದ್ದಾನೆ. ತನ್ನ ದೊಡ್ಡತಾತ ಬೊಂಮನಾಯಕನೆಂದೂ ಎರಡನೆಯವನು ಇಮ್ಮಡಿನಾಯಕ ಹಾಗೂ ಮೂರನೆಯವನು ಮಲ್ಲಿಕಾರ್ಜುನನಾಯಕನೆಂದೂ ಹೆಸರಿಸಿದ್ದಾನೆ. ಆದರೆ ಇವರು ಇಂಗ್ಲಿಷರಿಂದ ಪೆನ್‌ಷನ್ ಪಡೆಯುತ್ತಿದ್ದರೆಂದು ಸೂಚಿಸಿರುವುದರಿಂದ, ಈ ಸಂತತಿಯ ಆರಂಭದ ವ್ಯಕ್ತಿಗಳು ಇವರಲ್ಲವೆನ್ನುವುದು ಸ್ಪಷ್ಟ.

ಈ ಇಮ್ಮಡಿ ರಾಜಾ ಲಕ್ಷ್ಮಪ್ಪನಾಯಕನು ತನ್ನ ಪತ್ರದಲ್ಲಿ ಬೊಂಮ್ಮ ಅಥವಾ ಬೊಮ್ಮಳನಾಯಕನ ಆಗಿಹೋದ ಆತನ ಮಕ್ಕಳಾದ ಪೆದ್ದ(ದೊಡ್ಡ)ಸಿದ್ದಪ್ಪನಾಯಕ, ಶಿದ್ದಲಿಂಗಪ್ಪ ಲಿಂಗನಾಯಕ ಮತ್ತು ಸಿದ್ದಪ್ಪನಾಯಕ ಅವರುಗಳನ್ನು ನಮೂದಿಸಿದ್ದಾನೆ. ತನ್ನ ಇನ್ನೊಬ್ಬ ತಾತ ಇಮ್ಮಡಿನಾಯಕ ಅಥವಾ ನಾಯಿಡುಗೆ ಚಿನ್ನ(ಚಿಕ್ಕ)ಸಿದ್ದಪ್ಪನಾಯಕನೇ ಈ ಮನವಿಪತ್ರವನ್ನು ಬರೆದ ಇಮ್ಮಡಿ ರಾಜಾ ಲಕ್ಷ್ಮಪ್ಪನಾಯಕನ ತಂದೆ. ತನ್ನ ತಂದೆಗೆ ಈರ್ವರು ಮಡದಿಯರು ಇದ್ದುದನ್ನೂ ಹಿರಿಯ ಮಡದಿಯ ಮಗನೇ ತನ್ನ ಅಣ್ಣ ರಾಮಪ್ಪ ನಾಯಕನೆಂದೂ ತಾನು ಎರಡನೆಯವನೆಂದೂ ತನ್ನ ತಂದೆಯ ಎರಡನೆಯ ಮಡದಿಯ ಮಗನೇ ಹನುಮಪ್ಪನಾಯಕನೆಂದೂ ಹೇಳಿದ್ದಾನೆ. ಈತನ ಅಣ್ಣ ರಾಮಪ್ಪನಾಯಕನಿಗೆ ಸಿದ್ದಪ್ಪನಾಯಕ, ಪೆನ್ನಪ್ಪನಾಯಕ ಮತ್ತು ಭೂಮರಾಜು ಎಂದು ಮೂರುಮಂದಿ ಮಕ್ಕಳಿದ್ದುದು; ಹಾಗೂ ಈ ರಾಜಾ ಲಕ್ಷ್ಮಪ್ಪನಾಯಕನಿಗೆ ನಿಂಗಣ್ಣನಾಯಕ, ಮಲ್ಲಿಕಾರ್ಜುನ ನಾಯಕ, ಸಿದ್ದಪ್ಪನಾಯಕ ಮತ್ತು ಓಬಳನಾಯಕ ಎಂದು ನಾಲ್ವರು ಮಕ್ಕಳಿದ್ದುದು ಈ ಪತ್ರದಿಂದ ವ್ಯಕ್ತಪಡುತ್ತದೆ. ಈ ರಾಜಾ ಲಕ್ಷ್ಮಪ್ಪನಾಯಕನು ತನ್ನ ಮನವಿಪತ್ರದ ಆರಂಭದಲ್ಲಿ ತನ್ನನ್ನು 'ಶ್ರೀಮಾನ್ ಮಹಾನಾಯಕಾಚಾರ್ಯ ನಾಯಕಶಿರೋಮಣಿ ಆಯಿನಾ ಯಿಮ್ಮಡಿ ರಾಜಾಲಕ್ಷ್ಮಪ್ಪನಾಯಿಣಿವಾರು' ಎಂತಲೂ 'ಜರಿಮಲಿ ಸಮುಸ್ಥಾನಮುಕುನುಂನ್ನಾ ಪಾಳೈಗಾರು ಚಿನ್ನಸಿದ್ದಪ್ಪನಾಯಿನಿ ಕೊಮಾರುಡೈನ ಲಕ್ಷ್ಮಪ್ಪನಾಯಿಣಿವಾರು' ಎಂತಲೂ ಕರೆದುಕೊಂಡಿದ್ದಾನೆ. ಏನೇ ಆದರೂ ಈಚಿನ ಕೆಲವು ವ್ಯಕ್ತಿಗಳ ವಿನಾ ಈ ವಂಶೀಕರ ಪೂರ್ತ ವಿವರಗಳು ತಿಳಿದುಬರುವುದಿಲ್ಲ.

ಕೋಟೆ-ದೇವಾಲಯ-ಸ್ಮಾರಕ ಶಿಲ್ಪ-ಇತ್ಯಾದಿ

ಜರಿಮಲೆಯ ಇಂದಿನ ಸ್ಥಿತಿ ತೃಪ್ತಿಕರವಾಗಿಲ್ಲ. ಇಲ್ಲಿಯ ಬೆಟ್ಟವನ್ನಾವರಿಸಿದ್ದ ಸುಮಾರು ೩ ಸುತ್ತಿನ ಕೋಟೆಯು ಇಂದು ಪೂರ್ತ ನಾಶವಾಗಿ ಹೋಗಿದೆ. ಕೋಟೆಯಲ್ಲಿ ಇನ್ನೂ ಕೆಲವು ಸ್ಮಾರಕಗಳು-ಕಲ್ಲುಕಟ್ಟಡಗಳು ಉಳಿದುಕೊಂಡು ಬಂದಿವೆ. ಮುಖ್ಯವಾಗಿ, ಈ ಕೋಟೆಯು ನಾಲ್ಕು ಮೂಲೆಯ (ನಾಲ್ಕುದಿಕ್ಕಿಗೂ ಇರುವ) ಗುಡ್ಡಗಳನ್ನು ಬಳಸಿಕೊಂಡು ನಿರ್ಮಾಣವಾದಂತಹದು. ಈ ಗುಡ್ಡಗಳಿಗೆ ಪಾರಿವಾಳಗುಂಡುಗಳು, ಸಿದ್ದಯ್ಯನಗುಡ್ಡ, ಉಪ್ಪರಿಗೆ (ಗುಡ್ಡಕ್ಕೇ ಈ ಹೆಸರು) ಮತ್ತು ದೋಣಿಸಂದು (ಗುಡ್ಡದ ಹೆಸರು) ಎಂದು ಹೆಸರು. ಈ ಕೋಟೆಯು ಮಠದ ಹತ್ತಿರದ ಮೊದಲನೆಯ ಬಾಗಿಲನ್ನು ಊರುಬಾಗಿಲೆನ್ನು ವರು. ಕೋತಿಗುಂಡಿನ ಹತ್ತಿರವಿರುವ ಬಾಗಿಲನ್ನೂ ಊರುಬಾಗಿಲೆನ್ನಲಾಗುತ್ತದೆ.

ದಿವಾನರ(ಅಥವಾ ರಾಜರ)ತೋಟದ ಹತ್ತಿರದ ಬಾಗಿಲನ್ನು ಹೆಬ್ಬಾಗಿಲು ಎಂದು ಕರೆಯಲಾಗುತ್ತದೆ. ಆನೆಹೊಂಡದ ಮೇಲ್ಭಾಗದಲ್ಲಿ ಸಿದ್ಧಯ್ಯನಗುಡ್ಡದ ಹತ್ತಿರದ ದಿಡ್ಡಿಬಾಗಿಲನ್ನು ಕಲ್ಲೂರುಬಾಗಿಲು ಎಂದು ಹೆಸರಿಸಿದೆ. ಇಲ್ಲಿಯ ಸ್ಮಾರಕಗಳಲ್ಲಿ ಮದ್ದು ಅರೆಯುವ ಗುಂಡುಗಳು ಹಾಗೂ ಗರಡಿಮನೆ ಮುಖ್ಯವಾದವು. ದೇವಾಲಯಗಳ ಪೈಕಿ ಬಾಗೀಶ್ವರ ಮತ್ತು ಬಸವಣ್ಣನಗುಡಿಗಳು ಪ್ರಧಾನವಾಗಿ ಕಂಡುಬರುತ್ತವೆ. ಇಲ್ಲಿ ಮರಳಸಿದ್ಧೇಶ್ವರಮಠವು ನೆಲೆಗೊಂಡಿದೆ. ಇದನ್ನು ಚಿತ್ರದುರ್ಗದ ಮುರಿಗಾಮಠ ಸಂಪ್ರದಾಯಕ್ಕೆ ಸೇರಿದ ಮಠವೆಂದು ತಪ್ಪಾಗಿ ಭಾವಿಸಲಾಗಿದೆ. ಆನೆಹೊಂಡದ ಹತ್ತಿರವಿರುವುದೇ ಸಿದ್ಧಲಿಂಗೇಶ್ವರನಮಠ. ಈ ಬೆಟ್ಟಪ್ರದೇಶದಲ್ಲಿ, ಮುಖ್ಯವಾಗಿ ಕೋಟೆಯ ಒಳಾವರಣದಲ್ಲಿ, ಸಾಧ್ಯವಾದಷ್ಟು ಮಟ್ಟಿಗೆ ಜಲಾಶಯಗಳನ್ನೂ ದೋಣಿಗಳನ್ನೂ ಬಾವಿಗಳನ್ನೂ ನಿರ್ಮಿಸಲಾಗಿದೆ. ಸಣ್ಣದೊರೆಬಾವಿ, ಉಪ್ಪುನೀರುಬಾವಿ, ಆನೆಹೊಂಡ, ಮೂಲೆಯಬಾವಿ, ಅಂತಪ್ಪನಬಾವಿ, ಹಾಲಬಾವಿ, ನಾಗಪ್ಪನಬಾವಿ, ಕಣಸದಬಾವಿ, ಚನ್ನಬಸಪ್ಪನಬಾವಿ, ಕೊಂತೆಮ್ಮನ ದೊಣೆ, ರಾಮೇಶ್ವರನ ದೊಣೆ, ದೊಣೆಸಂದು (ಹೊಂಡ) ಇತ್ಯಾದಿಗಳು ಇವುಗಳಲ್ಲಿ ಮುಖ್ಯವಾದವು.

ಈ ಪ್ರದೇಶದಲ್ಲಿ ಸುತ್ತಲೂ ಗುಡ್ಡಗಳು ಆವರಿಸಿದ್ದು, ಮಧ್ಯದಲ್ಲಿ ಹಳೆಯ ಜರಿಮಲೆಗ್ರಾಮವಿದ್ದಿತೆಂದು ಈಗಾಗಲೇ ತಿಳಿಯಲಾಗಿದೆ. ಸ್ಥಳಾಂತರಗೊಂಡ ಹಿನ್ನೆಲೆಯಲ್ಲಿ, ಈಗಿನ ಜರಿಮಲೆಗ್ರಾಮವು ಆರನೆಯದೆಂಬುದು ಗಮನಾರ್ಹ. ಇಲ್ಲಿಯ ಗ್ರಾಮದೇವತೆ ದೊಡ್ಡಮಾರಮ್ಮ. ಕೋಟೆಯಲ್ಲಿಯ ಊರುಬಾಗಿಲಿನ ಈಶಾನ್ಯಕ್ಕೆ ಸಿದ್ದಪ್ಪ(ಸಿದ್ದಯ್ಯ)ನ ಗುಡ್ಡವಿದ್ದರೆ, ಈ ಬಾಗಿಲಿನ ಪೂರ್ವಕ್ಕೆ ದುರ್ಗಮ್ಮನಗುಡ್ಡವಿದೆ. ದುರ್ಗಮ್ಮನಗುಡ್ಡದಲ್ಲಿರುವ ದುರ್ಗಮ್ಮನಗುಡಿಯ ಬಳಿ ಮೂಲ ಜರಿಮಲೆಗ್ರಾಮವಿದ್ದಿತೆನ್ನಲಾಗಿದೆ. ದುರ್ಗಮ್ಮನಗುಡಿ ಪಕ್ಕದಲ್ಲಿರುವ ಸಿದ್ದಪ್ಪನಗುಡ್ಡದಲ್ಲಿ ಎರಡನೇ ಊರಿದ್ದಿತು. ಇಲ್ಲಿ ಶಿಲಾಯುಗದ ಸಮಾಧಿಗಳು (ಮೋರೇರಮನೆಗಳು) ಕಂಡುಬರುತ್ತವೆ. ಹರವದಿ-ಗೆದ್ದಲಗಟ್ಟೆ-ಜರಿಮಲೆ-ಈ ಮೂರೂ ಗ್ರಾಮಗಳು ಈಗ ಗುಡ್ಡದ ಸುತ್ತಲಲ್ಲಿವೆ. ಮೊದಲಿಗೆ ಈ ಊರುಗಳ ಜನರು ಗುಡ್ಡದಲ್ಲಿ ನೆಲೆಸಿದ್ದರು. ಅದೇ ಹಳೆಯ ಊರು.

ದಕ್ಷಿಣದಲ್ಲಿರುವುದೇ ಕೋಟೆಕಲ್ಲು ಅಥವಾ ಕೋಟೆಸಾಲಿರುವಗುಡ್ಡ. ಕೋಟೆಯ ಪ್ರದೇಶದ ಆರಂಭದಲ್ಲಿಯೇ ಕಂಡುಬರುವ ಬಾಗೀಶ್ವರನಗುಡಿ ಎದುರಿಗೆ ಬಸವೇಶ್ವರನ ಗುಡಿಯಿದ್ದು, ಇದನ್ನು ಪೇಟೆಬಸವಣ್ಣನೆಂದೇ ಕರೆಯಲಾಗುತ್ತದೆ. ಹಿಂದೆ ಇಲ್ಲಿ ಸಂತೆ ಸೇರುತ್ತಿದ್ದಿತು. ಈ ಬಯಲುಪ್ರದೇಶವನ್ನು ಈಗಲೂ ಸಂತೆಕಣಿವೆಯೆಂದು ಗುರುತಿಸುವುದುಂಟು. ಇಲ್ಲಿಂದ ಬಾಗಿಲನ್ನು ದಾಟಿ ಒಳ ಪ್ರವೇಶಿಸಿದರೆ ಕಂಡುಬರುವುದು ಅರಮನೆ ಅಥವಾ ಚಾವಡಿ. ಈಗ ಇದು ಸಂಪೂರ್ಣ ಹಾಳುಬಿದ್ದಿದೆ. ಕೋತಿಗುಂಡು ಬಳಿಯ ಬಯಲನ್ನು ಅರಮನೆಬಯಲು ಅಥವಾ ಚಾವಡಿಬಯಲು ಎನ್ನಲಾಗುತ್ತದೆ. ಇಲ್ಲಿರುವ ತೋಟವನ್ನು (ಈಗಿಲ್ಲ) ಅರಮನೆತೋಟವೆಂದು ಕರೆಯುವಂತೆಯೇ ಜೀವನವನ ಅಥವಾ ಜೀವನತೋಟವೆಂತಲೂ ಕರೆಯುವುದುಂಟು.

ಊರುಬಾಗಿಲಿನ ಉತ್ತರಕ್ಕಿರುವ ಎತ್ತರದ ಪ್ರದೇಶಕ್ಕೆ ಅಥವಾ ಗುಡ್ಡಕ್ಕೆ ಇರುವ ಹೆಸರೆಂದರೆ ಉಪ್ಪರಿಗೆ ಅಥವಾ ಮೇಲುಉಪ್ಪರಿಗೆ. ಇದು ಕೋಟೆಯೊಳಗಿನ ಬಹುಮುಖ್ಯ ಎಡೆ. ಇಲ್ಲಿ ತಮ್ಮ ಪರಿವಾರದವರೊಡನೆ ನಾಯಕರು ವಾಸಿಸಿದ್ದ ನಿವಾಸಗಳ ಕುರುಹುಗಳು ಕಂಡುಬರುತ್ತವೆ. ಇವುಗಳ ಲಕ್ಷಣಗಳನ್ನು ಪರಿಶೀಲಿಸಿದರೆ, ಇಲ್ಲಿ ಸಾಕಷ್ಟು ವಿಶಾಲವಾಗಿದ್ದ ವ್ಯವಸ್ಥಿತ ಮಹಲುಗಳು ಇದ್ದಿರುವುದು ಸ್ಪಷ್ಟ. ಇಲ್ಲಿದ್ದ ಬಾಗಿಲನ್ನು ಕಂಚಿನಬಾಗಿಲು ಎನ್ನಲಾಗುತ್ತಿತ್ತು. ಇದನ್ನು ಹೆಬ್ಬಾಗಿಲೆಂದು ಕರೆದಿದ್ದು, ಇದನ್ನು ಚಿತ್ರದುರ್ಗದವರು ಒಯ್ದರೆಂದು ಪ್ರತೀತಿ. ಈ ಮೇಲುಪ್ಪರಿಗೆಯ ಎಡೆಯಲ್ಲಿರುವ ರಾಮೇಶ್ವರನದೋಣೆಯು ಹುಟ್ಟುಬಂಡೆಯಲ್ಲಿ ರೂಪುಗೊಂಡಿರುವ ನೈಸರ್ಗಿಕ ದೋಣೆ. ಇದು ಮೇಲುಪ್ಪರಿಗೆಯ ನಿವಾಸಿಗಳಿಗೆ ಎಲ್ಲ ಋತುಮಾನದಲ್ಲೂ ಶುದ್ಧಜಲವನ್ನು ಪೂರೈಸುತ್ತಿದ್ದಿತೆನ್ನುವುದರಲ್ಲಿ ಅನುಮಾನವಿಲ್ಲ. ಇಲ್ಲಿ ಕಣಜಗಳಿದ್ದ ಕುರುಹುಗಳನ್ನೂ ಗುರುತಿಸಬಹುದು.

ಮೇಲುಪ್ಪರಿಗೆ ಎಡೆಯಲ್ಲಿರುವ ಇತರ ಪ್ರಮುಖ ಕುರುಹುಗಳಲ್ಲಿ ಒನಕೆಕಿಂಡಿ ಮತ್ತು ಗರಡಿಮನೆಗಳು ಪರಿಗಣಿಸಲರ್ಹವಾದವು. ಒನಕೆಕಿಂಡಿಯೆಂಬುದು ಹಂಪಿ, ಚಿತ್ರದುರ್ಗಬೆಟ್ಟ ಮೊದಲಾದೆಡೆಗಳಲ್ಲಿರುವಂತೆ, ನೈಸರ್ಗಿಕ ಕಲ್ಲುಗುಂಡುಗಳ ಮೂಲಕ ಹಾದುಹೋಗಲು ಇರುವ ಮಾರ್ಗ. ಮೇಲುಪ್ಪರಿಗೆಯಲ್ಲಿರುವ ಒನಕೆಕಿಂಡಿಮಾರ್ಗದೆಡೆಯಲ್ಲಿ ಆವರಿಸಿಕೊಂಡಿರುವ ಬೃಹತ್‌ಬಂಡೆಯು ಸುಮಾರು ೫೦ ಜನರು ಸೇರಿ ಸಭೆ ನಡೆಸಬಹು ದಾದಷ್ಟು ವಿಶಾಲವಾದುದು. ಹಾಗೆಯೇ, ಮೂಲದಲ್ಲಿ ಪ್ರಾಚೀನ ಮಾನವನ ವಾಸದ ನೆಲೆಯಾಗಿದ್ದ ನೈಸರ್ಗಿಕ ಗುಹೆಯನ್ನು ಆ ನಂತರ ಗರಡಿಮನೆಯಾಗಿ ಪರಿವರ್ತಿಸಲಾಗಿದೆ. ಇಲ್ಲಿರುವ ಮದ್ದಿನಮನೆಯೂ ಇನ್ನೊಂದು ಗಮನಾರ್ಹ ಎಡೆ.

ಉಬ್ಬುಶಿಲ್ಪಗಳು ಹಾಗೂ ಇನ್ನಿತರ ಶಿಲ್ಪವಿನ್ಯಾಸಗಳ ಮಟ್ಟಿಗೆ, ಅರಮನೆ ಅಥವಾ ಚಾವಡಿಬಯಲಿಗೆ ಹೊಂದಿಕೊಂಡಂತೆ ದಿಬ್ಬದ ಮೇಲಿರುವ ಬಂಡೆಯ ಮೇಲೆ ಬಿಡಿಸಲಾಗಿರುವ ಆಂಜನೇಯನ ಉಬ್ಬುಶಿಲ್ಪ ಆಕರ್ಷಕವಾದುದು. ೮ ಅಡಿ ಎತ್ತರ, ೫.೬ ಅಡಿ ಅಗಲವಿರುವ ಉಬ್ಬುಶಿಲ್ಪವಿದು. ಮೇಲುಪ್ಪರಿಗೆ ಎಡೆಯಲ್ಲಿ ಹುಟ್ಟುಬಂಡೆಯ ಮೇಲೆ ಆಂಜನೇಯನ ಇನ್ನೊಂದು ಉಬ್ಬುಶಿಲ್ಪವಿದ್ದು, ಇದು ಅತ್ಯಂತ ಮನೋಹರವಾದುದು. ಮೂರ್ತಿಯ ಸುತ್ತಲೂ ಮಂಟಪದ ಆಕೃತಿಯನ್ನು ರಚಿಸಲಾಗಿದ್ದು, ಸೂಕ್ಷ್ಮ ಕೆತ್ತನೆಯ ಕಲಾವಂತಿಕೆಗೆ ಇದೊಂದು ಉತ್ತಮ ನಿದರ್ಶನ. ಇದರ ಎತ್ತರ ೪.೬ ಅಡಿ ಮತ್ತು ಅಗಲ ೩.೮ ಅಡಿ. ಇತರೆ ಉಬ್ಬುಶಿಲ್ಪಗಳಲ್ಲಿ ಬಂಡೆಯೊಂದರ ಮೇಲ್ಪಾರ್ಶ್ವದಲ್ಲಿ ಬಿಡಿಸಲಾಗಿರುವ ಮಂಡಲಾಕಾರದ ಪುಷ್ಪವಿನ್ಯಾಸ ಹಾಗೂ ಅದರ ಬುಡದಲ್ಲೆ ಬಿಡಿಸಲಾಗಿರುವ ಲಿಂಗಾಕೃತಿಗೆ ಪುಷ್ಪಾರ್ಚನೆಗೈಯುತ್ತಿರುವ ಜೋಡಿಗಜಗಳ ಉಬ್ಬುಶಿಲ್ಪಗಳು ಸುಂದರವಾಗಿವೆ. ಆದರೆ ಇವುಗಳ ಆಶಯವೇನೋ ತಿಳಿಯದು. ಇಲ್ಲಿಯೇ, ಹುಟ್ಟುಬಂಡೆಯೊಂದರ ಮೇಲೆ ೪.೮ ಅಡಿ ಎತ್ತರ ಮತ್ತು ೫ ಅಡಿ ಅಗಲದ ವ್ಯಾಘ್ರದ ರೇಖಾಕೃತಿ (Engraving); ಇತರೆ ಪ್ರತ್ಯೇಕ ಬಂಡೆಗಳ ಮೇಲಿರುವ ನವಿಲುಗಳ ಎರಡು ರೇಖಾಕೃತಿಗಳು ಹಾಗೂ ಇನ್ನಿತರ ಸೂಕ್ಷ್ಮ ರೇಖಾಕೃತಿಗಳು ಕಂಡುಬರುತ್ತವೆ.

ಇನ್ನು ಕೋಟೆಯ ಹೆಬ್ಬಾಗಿಲು, ಪ್ರಾಕಾರ, ದೇವಾಲಯಗಳ ಸ್ತಂಭ, ಭಿತ್ತಿ ಮೊದಲಾದೆಡೆಗಳಲ್ಲಿ ಹಲವಾರು ಉಬ್ಬುಶಿಲ್ಪಗಳನ್ನು ಬಿಡಿಸಲಾಗಿದ್ದು, ಇವು ಆಕರ್ಷಕವೂ ಅಧ್ಯಯನ ಯೋಗ್ಯವೂ ಆಗಿರುವಂಥವು. ಇಂಥವನ್ನು ಪ್ರತ್ಯೇಕವಾಗಿಯೇ ಗುರುತಿಸ ಬೇಕಾಗುತ್ತದೆ. ಅಲ್ಲದೆ, ಈ ಕೋಟೆ ಪ್ರದೇಶದಲ್ಲಿ ಹಲವಾರು ಸಮಾಧಿಗಳು, ಬಿಡಿಶಿಲ್ಪಗಳು, ಉಗ್ರಾಣ, ರಾಗಿಕಣಜ ಇನ್ನಿತರ ಸ್ಮಾರಕಗಳೂ ಅವಶೇಷಗಳೂ ಕಂಡುಬರುತ್ತವೆ. ಇಲ್ಲಿ ನೆಲೆಸಿದ್ದವರ ವಸತಿ ನಿವೇಶನಗಳ ಕುರುಹುಗಳು ಕೋಟೆ ಪ್ರದೇಶದಲ್ಲೆಲ್ಲಾ ಗೋಚರಿಸುತ್ತವೆ.

ಪರಾಮರ್ಶನ ಗ್ರಂಥಗಳು

೧. ದಾಖಲೆಗಳು

ಜರಿಮಲೆ ಸಂಸ್ಥಾನದ ವಂಶಾವಳಿ

ಬಣವಿಕಲ್ಲು ಸಿದ್ದಲಿಂಗಸ್ವಾಮಿಗಳು ಕೊಟ್ಟ ಜಯಪತ್ರ

ಮೂಲೇ ಮರಿದೇವರಮಠದ ಭೂದಾನ ಪಟ್ಟೆ (**'ಶ್ರೀ ಉಜ್ಜನಿ ಸಿದ್ದಪ್ಪರಿಂದ ಬಂದ ಕಾಗದ ಪತ್ರದ ಯಥಾವತ್ತು ನಕಲು ಅನುವಾದ'** ಎಂಬ ಶೀರ್ಷಿಕೆಯಲ್ಲಿರುವ ಇದರ ಇನ್ನೊಂದು ಪ್ರತಿಯನ್ನು ಡಾ.ಡಿ.ವಿ.ಪರಮಶಿವಮೂರ್ತಿಯವರು ನೀಡಿರುತ್ತಾರೆ)

ಇಮ್ಮಡಿ ರಾಜ ಲಕ್ಷ್ಮಪ್ಪನಾಯಕರು ರಾಣೀಸರ್ಕಾರಕ್ಕೆ ಬರೆದುಕೊಂಡ ಪತ್ರ (ತೆಲುಗು)

ಮಾಕನಡುಕು ಓಬಳದೇವರಗುಡಿಯ ಕಂಚು ಮತ್ತು ತಾಮ್ರಪತ್ರಗಳು

ಶಿದ್ದಹಳ್ಳಿಯಲ್ಲಿ ಬೊಂಮ್ಮದೇವರು ಹುಟ್ಟಿದ ದಸ್ತಾವೇಜು ಶಾಸನದ ರಿಕಾರ್ಟು ವಿವರಾ

ಅಚ್ಚುವಳ್ಳಿ ಮಾರೆಮ್ಮನ ದಸ್ತ(ಕತ್ತು)

ಜರಿಮಲೆ ಬಾಲಒಡೆಯರಮಠದ ವಂಶವೃಕ್ಷ (ಸೌಜನ್ಯ: ಡಾ.ಜೆ.ಎಂ.ನಾಗಯ್ಯ)

The Vamshavallee of the Jeremale Samstan Family (Translated from a Maratha Account Communicated by the Jeremale Poligar in January 1801) (ಸೌಜನ್ಯ: ಡಾ.ಡಿ.ಎನ್.ಯೋಗೀಶ್ವರಪ್ಪ)

೨. ಗ್ರಂಥಗಳು

ಆರ್.ಶಾಮಾಶಾಸ್ತ್ರಿ (ಸಂ.), ೧೯೨೧, **ಲಿಂಗಣ್ಣಕವಿ ವಿರಚಿತ ಕೆಳದಿನೃಪವಿಜಯಂ**, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಪಂಡಿತ ರೇವಣ್ಣಶಾಸ್ತ್ರಿ, ೧೯೫೫, **ವಾಲ್ಮೀಕರ ಪುರಾಣವು**, ಬ್ರಹ್ಮತೀರ್ಥಾಶ್ರಮ, ದ್ಯಾಮವ್ವನಹಳ್ಳಿ-ಹೆಮ್ಮನಬೇತೂರು, ದಾವಣಗೆರೆ ತಾಲ್ಲೂಕು

ತಿ.ತಾ.ಶರ್ಮ (ಸಂ.), ೧೯೭೧, **ಚಾರಿತ್ರಿಕ ದಾಖಲೆಗಳು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಹೆಚ್.ದೇವೀರಪ್ಪ, ಮಹದೇವ ಬಣಕಾರ (ಸಂ.), ೧೯೭೪, **ವಿಶ್ವಬಂಧು ಮರುಳಸಿದ್ಧ ಹಾಗೂ ಆತನ ಪರಂಪರೆ**, ತರಳಬಾಳು ಪ್ರಕಾಶನ, ಸಿರಿಗೆರೆ

ಎಂ.ವಿ. ಶ್ರೀನಿವಾಸ್, ಲಕ್ಷ್ಮಣ್ ತೆಲಗಾವಿ (ಸಂ.), ೧೯೭೬, ಚಂದ್ರವಳ್ಳಿ, ಜಿಲ್ಲಾ ಇತಿಹಾಸ ಸಂಶೋಧನ ಮಂಡಲಿ, ಚಿತ್ರದುರ್ಗ

ಕಪಟರಾಳ ಕೃಷ್ಣರಾವ್, ೧೯೭೭, ಸುರಪುರ ಸಂಸ್ಥಾನ ಇತಿಹಾಸ, ಮಂಜುನಾಥ ಪ್ರಕಾಶನ, ಬೆಂಗಳೂರು

ಎಂ.ಎಂ.ಕಲಬುರ್ಗಿ (ಸಂ.), ೧೯೯೪, **ಕರ್ನಾಟಕದ ಕೈಫಿಯತ್ತುಗಳು**, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಎಂ.ಕೊಟ್ರೇಶ್, ೨೦೦೨, **ಬಳ್ಳಾರಿಜಿಲ್ಲೆಯ ಕೋಟೆ-ಕೊತ್ತಲಗಳು** (ಪಿಎಚ್.ಡಿ. ಮಹಾಪ್ರಬಂಧ-ಅಪ್ರಕಟಿತ), ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕೆ.ರಮೇಶ್, ೨೦೦೨, ಉಜ್ಜಿನಿ ಗ್ರಾಮಾಧ್ಯಯನ (ಎಂ.ಫಿಲ್.ಸಂಪ್ರಬಂಧ-ಅಪ್ರಕಟಿತ), ಕನ್ನಡ ವಿಶ್ವವಿದ್ಯಾಲಯ, ಹಂಪಿ

ಡಿ.ಎನ್.ಯೋಗೀಶ್ವರಪ್ಪ, 'ಜರಿಮಲೆ ನಾಯಕರು (ಕ್ರಿ.ಶ. ೧೫೦೦-೧೮೦೦)', **ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ,** ೮೦-೨, ೨೦೦೨

John Kelsall, 1872, **Manual of the Bellary District,** Lawrence Asylum Press, Madras (Reprint 2004)

W.W. Hunter, 1886, **The Imperial Gazetteer of India,** Vol.XI, Trubner & Co., London

W.Francis, 1904, **Madras District Gazetteers-Bellary,** Government Press, Madras (Reprint 2004)

K.N.V.Sastri, 1939, **The Munro System of British Statesmanship in India,** Mysore

T.H.Beaglehole, 1966, **Thomas Munro and the Development of Administrative Policy in Madras, 1792-1818,** Cambridge University Press

K.Abhishankar (Ed.), 1972, **Mysore State Gazetteer-Bellary District,** Government of Mysore, Bangalore

C.D.Maclean (Ed.), 1990 (1893), **Manual of the Administration of the Madras Presidency,** Vol.3, Asian Educational Services, New Delhi

James Grant Duff, 1999, **A History of the Mahrathas,** Vol.1, Cosmo Publications, New Delhi.

ಪ್ರೊ.ಲಕ್ಷ್ಮಣ್ ತೆಲಗಾವಿ
ವಿಶ್ರಾಂತ ಪ್ರಾಧ್ಯಾಪಕರು
ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೨. ಬಳ್ಳಾರಿ ಪಾಳೆಗಾರರು

ಪಿ. ಯಶೋದಾ ರಾಜಶೇಖರಪ್ಪ

ಕರ್ನಾಟಕದಲ್ಲಿ ಆಗಿ ಹೋದ ಸ್ಥಳೀಯ ಪಾಳೆಯಪಟ್ಟುಗಳ ಪ್ರಭುಗಳಲ್ಲಿ 'ಬಳ್ಳಾರಿ ಪಾಳೆಯಗಾರೆಂದೂ' 'ಹಂಡೆ ಪಾಳೆಯಗಾರರೆಂದೂ'ಪ್ರಸಿದ್ಧವಾಗಿರುವ ಅರಸರೂ ಸಹ ಸೇರಿದ್ದಾರೆ. ವಿಜಯನಗರದ ಪತನಾನಂತರ ಅರಸು ಮನೆತನಗಳಲ್ಲಿ, ಸು. ಕ್ರಿ. ಶ. 1517ರಿಂದ 1860ರವರೆಗೆ 300ವರ್ಷಗಳಿಗೂ ಮೇಲ್ಪಟ್ಟು ದೀರ್ಘ ಅವಧಿಯವರೆಗೆ ರಾಜ್ಯಭಾರ ಮಾಡಿದವರು ಇವರು. ಅನಂತಪುರ, ನಂದ್ಯಾಲ, ಧರ್ಮಾವರ, ಬಳ್ಳಾರಿ, ಕುರುಗೋಡು, ತೆಕ್ಕಲಕೋಟೆ, ಬಂಕಾಪುರ ಮುಂತಾದ ಪ್ರದೇಶಗಳನ್ನು ಇವರು ಆಳಿದರು. ಕಾವ್ಯ, ಶಾಸನಗಳಲ್ಲಿ ಈ ಅರಸರು ಅತ್ಯಂತ ಧರ್ಮನಿಷ್ಠರೆಂದೂ, ಗುರುಹಿರಿಯರಲ್ಲಿ ಭಕ್ತಿ ತೋರುವವರೆಂದೂ ಉದಾರನೀತಿಯವರೆಂದೂ ದಾನ ದತ್ತಿ ನೀಡಿದ ದಾಸೋಹಪ್ರಿಯರೆಂದೂ ವರ್ಣಿತರಾಗಿದ್ದಾರೆ. ಈ ಲೇಖನದಲ್ಲಿ ಅವರ ಆಳ್ವಿಕೆಯ ರಾಜಕೀಯ ಚರಿತ್ರೆ ಕುರಿತು ಈಗಾಗಲೇ ಅವರ ಐತಿಹಾಸಿಕ ವಿವರಗಳಿಗೆ ಹೋಗದೆ ಕೇವಲ ಧಾರ್ಮಿಕ ಪರಂಪರೆಯ ಪರಿಶೀಲನೆಗೆ ಸೀಮಿತಗೊಳಿಸಿಕೊಳ್ಳಲಾಗಿದೆ. ಅವರು ವೀರಶೈವರಾಗಿದ್ದರೂ ಬೇರೆ ಬೇರೆ ಧರ್ಮೀಯರಿಗೆ ಮಠಗಳಿಗೂ ಧಾರ್ಮಿಕ ಸಂಸ್ಥೆಗಳಿಗೂ ಪ್ರೋತ್ಸಾಹ ನೀಡಿ, ದಾನದತ್ತಿಗಳನ್ನೂ ನೀಡಿ ಅನ್ಯ ಧರ್ಮ ಸಹಿಷ್ಣುತೆಯನ್ನು, ಗುರುವರ್ಗದಲ್ಲಿ ಭಿತ್ತಿ ಔದಾರ್ಯಗಳನ್ನೂ ತೋರಿಸಿದ್ದಾರೆ ಎಂಬುದು ಮಹತ್ವದ ವಿಷಯವಾಗಿದೆ.

ಬಳ್ಳಾರಿ ಪ್ರದೇಶವನ್ನು ಆಳಿದ ಈ ಹಂಡೆಯ ಪಾಳೆಯಗಾರರ ಮೂಲಪುರುಷರು ಮೂಲತಃ ವಿಜಾಪುರ ಜಿಲ್ಲೆಯ ಮುತ್ತಿಗೆ ಮತ್ತು ವಡವಡಗಿ ಗ್ರಾಮಗಳಲ್ಲಿ ಗೌಡಿಕೆ ಮಾಡಿಕೊಂಡಿದ್ದರು. ಇವರ ಬಗ್ಗೆ ಮಾಹಿತಿ ನೀಡುವ ಅನೇಕ ಆಕರಗಳಿವೆ. ಬಳ್ಳಾರಿ ಜಿಲ್ಲೆ ಮತ್ತು ಹಂಪಿಯ ಶಾಸನ ಸಂಪುಟಗಳು, ಹಂಡೆ -ಅನಂತಪುರ ಕೈಫಿಯಿತ್ತು, ಬಳ್ಳಾರಿಯ ಕುರುಗೋಡು ಕೈಫಿಯತ್ತು, ಜಗದ್ಗುರು ಕೊಟ್ಟೂರು ಸ್ವಾಮಿ ಗುರುಪರಂಪರೆ ಮತ್ತು ಮಠದ ದಾಖಲೆಗಳು, ಶ್ರೀ ಶೈಲ ನಿಡುಮಾಮಿಡಿ ಮಠದ ದಾಖಲೆಗಳು, ಪುಲ್ಲಕವಿ ಬರೆದ ಶ್ರೀ ಶೈಲ ಪಂಡಿತಾರಾಧ್ಯ ಚರಿತ್ರೆ, ತೆಲುಗು ಭಾಷೆಯ ಕೆಲವು ಕೃತಿಗಳು, ಶ್ರೀ ಶೈಲ ಪೀಠದರ್ಶನಂ, ಬುಕ್ಕರಾಯಚರಿತ್ರೆ, ಸಿ. ಪಿ. ಬ್ರೌನ್ ಬರೆದ ''ದಿ ವಾರ್ ಆಫ್ ದಿರಾಜಾಸ್'' ಹಂಡೆ ಅರಸರ ಆಸ್ಥಾನ ಕವಿ ಬರೆದ ''ರಸಿಕ ಮನೋರಂಜನ ವಿಲಾಸ'

ಅಹೋಬಲನ 'ವಿರೂಪಾಕ್ಷ' 'ವಸಂತೋತ್ಸವ ಚಂಪು' ಮೊದಲಾದ ಕೃತಿಗಳು ಈ ಮನೆತನದ ಅರಸರ ಆಳ್ವಿಕೆಯ ಧಾರ್ಮಿಕ ಪರಂಪರೆ, ಸಾಮಾಜಿಕ, ರಾಜಕೀಯ ಮತ್ತಿತರ ವಿವರಗಳನ್ನು ತಿಳಿಸುತ್ತವೆ.

ಬಳ್ಳಾರಿ ಕೈಫಿಯತ್ತಿನ ಪ್ರಕಾರ, ಈ ಹಂಡೆ ಪಾಳೆಗಾರರ ಮೂಲಪುರುಷ ಲಕ್ಕಿ ನಾಯಕ. ಅವನ ಮಕ್ಕಳು ಬಾಲದ ಹನುಮಪ್ಪ ನಾಯಕ ಹಾಗೂ ಬಳಗನಾಯಕ. ಬಾಲದ ಹನುಮಪ್ಪ ನಾಯಕನು 16 ನೇ ಶತಮಾನದ ಆರಂಭದ ಕಾಲಕ್ಕಾಗಲೇ ತನ್ನ ಸುತ್ತಮುತ್ತಲ ಪ್ರದೇಶದಲ್ಲಿ ಪರಾಕ್ರಮಿಯೆಂದು ಪ್ರಸಿದ್ಧನಾದವನು. ಹಂಡೆಕುರುಬರ ಮೂಲದಿಂದ ಬಂದ ಇವರು ಪಾಳೆಯಪಟ್ಟನ್ನು ಸ್ಥಾಪಿಸುವ ಮೊದಲೇ ವೀರಶೈವ ಧರ್ಮದ ಪ್ರಭಾವಕ್ಕೆ ಬಂದಿರಬೇಕು. ಸಾಮಾನ್ಯವಾಗಿ ಮಧ್ಯಕಾಲೀನ ಕೆಲವು ಪಾಳೆಯ ಗಾರರು ಪಾಳೆಯಪಟ್ಟನ್ನು ಸ್ಥಾಪಿಸಿದ ಮೇಲೆ ತಮ್ಮ ಜಾತಿಯನ್ನು "ಉದಾತ್ತೀ ಕರಿಸಿಕೊಳ್ಳಲು" ವೀರಶೈವ ಧರ್ಮ ಸೇರಿಕೊಂಡು ಕೊನೆಯವರೆಗೂ ಮುಂದುವರಿದು ಕೊಂಡು ಬಂದರು. ಕೆಲವರು ಮಧ್ಯದಲ್ಲಿಯೇ ಕೈಬಿಟ್ಟರು. ಆದರೆ ಈ ಅರಸರು ಪೂರ್ವಿಕರು ರಾಜರಾಗುವುದಕ್ಕೆ ಪೂರ್ವದಲ್ಲಿಯೇ ಶರಣರ ಪ್ರಭಾವದಿಂದ ವೀರಶೈವ ರಾಗಿರಬೇಕು. ಇವರು ಹಾಲುಮತದವರಾಗಿದ್ದು ಪ್ರಸಿದ್ಧಿ ವೀರಶೈವ ಗುರು ಶ್ರೀ ರೇವಣಸಿದ್ಧೇಶ್ವರರ ಒಕ್ಕಲಾಗಿರಬೇಕು. ಅಂತೆಯೇ ರೇವಣಸಿದ್ಧರ ವರದಿಂದ ಜನಿಸಿದ ಸೊನ್ನಲಾಪುರದ ಶ್ರೀ ಸಿದ್ಧರಾಮ ದೇವರಿಗೆ ತಮ್ಮ ಆರಾಧ್ಯ ದೇವತೆ, ಮನೆದೈವ ಎಂದು ಭಕ್ತಿ ತೋರಿಸಿದ್ದಾರೆ. ಅಂತೆಯೇ ಅವರ ಶಾಸನಗಳಲ್ಲಿ 'ಶ್ರೀ ಸಿದ್ಧರಾಮದೇವರ' ವರಪ್ರಸನ್ನರೆಂದು ಅಂಕಿತಗೊಂಡಿದ್ದಾರೆ. "ಶ್ರೀ ಮನ್ಮಹಾರಾಜಾಧಿರಾಜ ಬಂಡೆ (ಹಂಡೆ?)ಯಶವಂತ ಪರದಳ ವಿಭಾಡ.... ಶ್ರೀ ಸಿದ್ಧರಾಮೇಶ್ವರ ದೇವ ವರಪ್ರಸನ್ನರಾದ ರಾಜಶ್ರೀ ಹಂಡೆ ಹಿರೇರಾಮಪ್ಪ -ಹೀಗೆ ಶಾಸನಗಳನ್ನು ಹಾಕಿಸಿದ್ದಾರೆ.

ಹಂಡೆ ಪಾಳೆಯಗಾರರ ಪಾಳೆಯ ಪಟ್ಟನ್ನು ಸ್ಥಾಪಿಸಿದ ಬಾಲದ ಹನುಮಪ್ಪನಾಯಕ ಮತ್ತು ಅವನ ವಂಶಸ್ಥರನ್ನು ಕುರಿತಂತೆ ಅನಂತಪುರ ಕೈಫಿಯತ್ತಿನ ವಿವರಗಳು ಬಳ್ಳಾರಿ ಕುರುಗೋಡು ಕೈಫಿಯತ್ತಿನ ವಿವರಗಳಿಗಿಂತ ಸ್ವಲ್ಪ ಭಿನ್ನವಾಗಿ ಕಂಡುಬರುತ್ತವೆ. ಆ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆ ನಡೆಯಬೇಕಾಗಿದೆ. ಬಳ್ಳಾರಿ ಕುರುಗೋಡು ಕೈಫಿಯತ್ತಿನ ಪ್ರಕಾರ, ಬಿಜಾಪುರದ ಆದಿಲ್‌ಶಾನ ಕೈಕೆಳಗೆ ಗೌಡಿಕೆ ಮಾಡುತ್ತಿದ್ದನು. 15ನೇ ಶತಮಾನದ ಕೊನೆಯಹೊತ್ತಿಗೆ ರಾಜನು ಇವನ ಶೌರ್ಯಪರಾಕ್ರಮಗಳನ್ನು ಮೆಚ್ಚಿ ಕೊಂಡು. ತನ್ನ ಆಳ್ವಿಕೆಯ ದಕ್ಷಿಣದಲ್ಲಿದ್ದ (ಬಳ್ಳಾರಿ, ಕುರುಗೋಡು, ತೆಕ್ಕಲು ಕೋಟೆ ಮುಂತಾದ ಪ್ರದೇಶಗಳ ರಾಜಕೀಯ ಅರಾಜಕತೆಯನ್ನು ಹೋಗಲಾಡಿಸಲು ಅವನನ್ನು ಸೇನಾಧಿಪತಿಯನ್ನಾಗಿ ಮಾಡಿ, ಮೇಲೆ ಹೇಳಿದ ಪ್ರವೇಶಗಳ ಅಧಿಕಾರಕ್ಕೆ ಸನ್ನದು ಬರೆಯಿಸಿಕೊಟ್ಟು, ಕಳುಹಿಸಿದನು. ಹನುಮನಾಯಕ ಆ ಪ್ರದೇಶಧ ಅರಾಜಕತೆಯನ್ನು

ಹೋಗಲಾಡಿಸಿ ಬಳ್ಳಾರಿಗೆ ಬಂದು, ಬಂಕಾಪುರದಲ್ಲಿ ಒಂದು ಕೋಟೆ ಕಟ್ಟಿಸಿ, ಕುಂದುರ್ಪಿ, ಧರ್ಮಾವರ, ಅನಂತಪುರ ನಂದ್ಯಾಲ ಶಿರಗುಪ್ಪೆ, ಶಿನ್ನೂರು ಮುಂತಾದ ಪ್ರದೇಶಗಳನ್ನು ತನ್ನ ಆಡಳಿತಕ್ಕೆ ಒಳಪಡಿಸಿಕೊಂಡನು.

ಆರಂಭದಲ್ಲಿ ಮೂರು ಪರಗಣೆಗಳಿಗೆ, ಒಡೆಯನಾಗಿದ್ದ, ಬಾಲದ ಹನುಮ ನಾಯಕ, 'ವಜೀರ'ನೆಂಬ ಬಿರುದನ್ನು ಹೊಂದಿ, ಮುಂದೆ 11ಪರಗಣೆಗಳಿಗೆ ಒಡೆಯ ನಾದನು, ಇದೇ ಸಂದರ್ಭದಲ್ಲಿ ವಿಜಯನಗರದ ಅರಸನಾಗಿದ್ದ ಸದಾಶಿವರಾಯ, ಮತ್ತು ಅಳಿಯ ರಾಮರಾಯ ಇವರು ವಿಜಯನಗರ ಸಾಮ್ರಾಜ್ಯವನ್ನು ವಶಪಡಿಸಿ ಕೊಳ್ಳುವ ಸಂಚುಮಾಡಿದ್ದ ಮುಸಲ್ಮಾನ ನವಾಬರನ್ನು ಎದುರಿಸಲು ಶ್ರೀ ಶೈಲ ನಿಡುಮಾಮಿಡಿ ಸ್ವಾಮಿಗಳವರ ಸಲಹೆಯ ಮೇರೆಗೆ, ಬಾಲದ ಹನುಮನಾಯಕನ ಸಹಾಯ ಪಡೆದರು. ಬಾಲದ ಹನುಮನಾಯಕನು ಅತ್ಯಂತ ಧೀರೋದಾತ್ತನಾಗಿ ಹೋರಾಡಿ, ನವಾಬನನ್ನು ಸೋಲಿಸಿ ಕೈ ಸೆರೆ ಮೂಡಿ ತಂದು, ರಾಮರಾಯನಿಗೆ ಕಾಣಿಕೆ ಯಾಗಿ ಅರ್ಪಿಸಿದನು. ಸಂತೋಷಗೊಂಡ ವಿಜಯನಗರದ ಅರಸನು ಅವನಿಗೆ ಪೂರ್ವ ಭಾಗದಲ್ಲಿ ನಂದ್ಯಾಲ, ಬುಕ್ಕರಾಯ ಸಮುದ್ರ, ಧರ್ಮಾವರ ಮತ್ತು ಕಣೇಕಲ್ಲು ಗ್ರಾಮಿ ಗಳನ್ನೂ, ಪಶ್ಚಿಮ ಭಾಗದಲ್ಲಿ ಬಳ್ಳಾರಿ, ಕುರುಗೋಡು ಗ್ರಾಮಗಳನ್ನೂ ಉಂಬಳಿ ಹಾಕಿ ಕೊಟ್ಟನು.

ಹನುಮನಾಯಕನು ಬುಕ್ಕರಾಯ ಸಮುದ್ರದಲ್ಲಿ ಬಲವಾದ ಕೋಟೆಯನ್ನು ಕಟ್ಟಿಸಿ ಕೊಂಡು ಅದನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿದನು. ಕುರು ಗೋಡಿನ ಕೈಪಿಯತ್ತಿನ ಪ್ರಕಾರ ಮುಂದೆ ಬಾಲದ ಹನುಮನಾಯಕನ ಆಳ್ವಿಕೆಯ ಅನಂತರ, ಅವನ ಐದು ಜನ, ಮಕ್ಕಳು ರಾಜ್ಯವನ್ನು ಹಂಚಿಕೊಂಡು ಆಳ್ವಿಕೆ ತೊಡಗಿ ದರು. ಆದರೆ ಅನಂತಪುರದ ಕೈಫಿಯಿತ್ತು ಹನುಮಪ್ಪ ನಾಯಕನಿಗೆ ಇಮ್ಮಡಿ ಹಂಪರಾಯ ನೆಂಬ ಮಗನಿದ್ದುದಾಗಿಯೂ ಅವನ ಮಗ ಮಲಕಪ್ಪ ನಾಯಕನಿಗೆ ನಾಲ್ಕು ಜನ ಮಕ್ಕಳಿದ್ದರು ಎಂಬುದಾಗಿಯೂ ಭಿನ್ನ ವಿವರವನ್ನು ತಿಳಿಸುತ್ತದೆ. ಸಧ್ಯಕ್ಕೆ ಆ ವಿವರಗಳಿಗೆ ಹೋಗದೆ, ಈ ವಂಶದ ಅರಸರ ಧಾರ್ಮಿಕ ಪರಂಪರೆಯನ್ನು ಅವಲೋಕಿಸುವುದಾದರೆ ಅವರು ಆಗಿನ ಕಾಲದ ಪ್ರಸಿದ್ಧವಾದ ಮಠಗಳಿಗೆ ಯತಿಗಳಿಗೆ ಅತ್ಯಂತ ಭಿತ್ತಿ ಗೌರವ ಗಳನ್ನು ತೋರಿ ದಾನದತ್ತಿಗಳನ್ನು ನೀಡಿ ಶಾಸನ ಹಾಕಿಕೊಟ್ಟಿದ್ದಾರೆ.

ಅವರು ಆಳಿದ ಬಳ್ಳಾರಿಯ ಸುತ್ತಮುತ್ತಲ ಪ್ರದೇಶದ ಪ್ರಸಿದ್ಧವಾದ ಕೊಟ್ಟೂರು ಸಂಸ್ಥಾನಮಠಕ್ಕೆ, ಅನಂತಪುರದ ಸುತ್ತಮುತ್ತ ಪ್ರಸಿದ್ಧವಾದ ಶ್ರೀ ಶೈಲ ಜಗದ್ಗುರು ನಿಡುಮಾಮಿಡಿ ಮಠಕ್ಕೆ, ಹಾಗೆಯೇ ಕುರುಗೋಡು ಬಂಕಾಪುರದ ಹತ್ತಿರದ ಶ್ರೀ ತೋಂಟದ ಜಗದ್ಗುರು ಮಠಕ್ಕೆ, ಹಾಗೆಯೇ ಅನ್ಯಧರ್ಮಿಯರಾದ ಕೂಡ್ಲಿ ಶೃಂಗೇರಿಯ ಸಂಸ್ಥಾನಕ್ಕೆ ದಾನ ನೀಡಿರುವುದು ಬಹಳ ಮುಖ್ಯ ಅಂಶವಾಗಿದೆ. ಈ ವಂಶದ ಎಲ್ಲ

ಅರಸರು ಗುರು ಲಿಂಗ ಜಂಗಮ ಪ್ರೇಮಿಗಳಾಗಿದ್ದು, ಶಿವಭಕ್ತರಾಗಿದ್ದು, ತಮ್ಮ ತಮ್ಮ ಆಡಳಿತಾವಧಿಯಲ್ಲಿ ಗೌರವ ಭಕ್ತಿ ತೋರಿಸಿದ್ದಾರೆ. ಹಾಗೆಯೇ ಆಯಾ ಗುರುವರ್ಗದ ತಪಸ್ವಿಗಳು ಧಾರ್ಮಿಕ, ರಾಜಕೀಯ, ಸಾಮಾಜಿಕ ಚಟುವಟಿಕೆಗಳಲ್ಲಿ ಮಾರ್ಗದರ್ಶನ ನೀಡಿ ಭಕ್ತರಾಜರ ಸಂಕಷ್ಟಗಳಲ್ಲಿ ಸಹಾಯ ಮಾಡುತ್ತಾ ಬಂದಿರುವುದು ದಾಖಲೆಗಳಲ್ಲಿ ಕಂಡು ಬಂದಿದೆ.

ಮೊದಲು ಶ್ರೀ ಶೈಲ ಜಗದ್ಗುರು ನಿಡುಮಾಮಿಡಿಯ ಮಠದೊಂದಿಗೆ ಈ ರಾಜರಿಗಿದ್ದ ಧಾರ್ಮಿಕ ಸಂಬಂಧವನ್ನು ನೋಡುವುದಾದರೆ, ಈ ಮಠಕ್ಕೆ ಅತ್ಯಂತ ಪ್ರಾಚೀನ ಇತಿಹಾಸವಿದೆ. ಪುಲ್ಲಕವಿಯ ಪಂಡಿತಾರಾಧ್ಯ ಚರಿತ್ರೆಯ ಪ್ರಕಾರ, 11ನೇ ಶತಮಾನದಿಂದಲೂ ಪ್ರಸಿದ್ಧಿಯಲ್ಲಿದ್ದ ಈ ಗುರು ಪೀಠಕ್ಕೆ ಹಂಡೆಯ ಪಾಳೆಯಗಾರರ ಪೂರ್ವಿಕರು ಬಹು ಹಿಂದಿನಿಂದಲೇ ನಡೆದುಕೊಳ್ಳುತ್ತಿದ್ದರು. ಡಾ. ಟಿ. ಶಂಭುಲಿಂಗಪ್ಪ ನವರಿಗೆ ದೊರೆತ ತಾಮ್ರಶಾಸನವೊಂದರ ಪ್ರಕಾರ ಮುಮ್ಮಡಿ ದಳವಾಯಿ ರಂಗ ರಾವುತನೆಂಬುವವನು ಹಂಡೆ ಪಾಳೆಯಗಾರ ವಂಶದವನಾಗಿದ್ದು ಎರಡನೆ ಬಲ್ಲಾಳನಿಂದ ಬಿರುದುಬಾವಲಿ ಪಡೆದಿದ್ದ ಅವನ ವಂಶದವರೇ ಮುಂದೆ ಹಂಡೆ ಪಾಳೆಯಗಾರರಾದರು ಎಂದು ಅಭಿಪ್ರಾಯಪಡುತ್ತಾರೆ. ಆದರೆ ಇದಕ್ಕೆ ಅಂಥ ಸರಿಯಾದ ಆಧಾರಗಳಿಲ್ಲ.

ಹಂಡೆ ಪಾಳೆಯಗಾರರ ಮೂಲಪುರುಷ ಹನುಮನಾಯಕನು ಮಹಮ್ಮದ್ ಆದಿಲ್‌ಶಹಾನವಜೀರನಾಗಿದ್ದ ಹನುಮಂತ ಭೂಪಾಲನು ಕ್ರಿ. ಶ. 1680-90ರವರೆಗೆ ಪೀಠದಲ್ಲಿದ್ದ ಶ್ರೀಕರಿಬಸವದೇಶಿ ಕೇಂದ್ರರ ಶಿಷ್ಯ. ಆತನ ಪರಾಕ್ರಮ, ಧರ್ಮ ಪ್ರೇಮ ವನ್ನು ಅವರು ಮೆಚ್ಚಿಕೊಂಡಿದ್ದರು. ಒಮ್ಮೆ ಹನುಮ ಭೂಪಾಲನ ಮೂಲಕ ಶ್ರೀಯವರ ತಪಶ್ಶಕ್ತಿಯನ್ನು ಕೇಳಿ ಆದಿಲ್‌ಷಹನು ತನ್ನ ಆಸ್ಥಾನಕ್ಕೆ ಶ್ರೀಗಳನ್ನು ಕರೆಸಿಕೊಂಡನು. ರಾಜಸ್ಥಾನದಲ್ಲಿ ಇಸ್ಲಾಂ ಖಾಜಿಗಳು ಅನೇಕರು ಇದ್ದು, ಇಸ್ಲಾಂ ಧರ್ಮವೇ ಶ್ರೇಷ್ಠವೆಂದು ಪ್ರತಿಪಾದಿಸಿದಾಗ, ಇಸ್ಲಾಂಧರ್ಮ ಸೇರಲು ಒತ್ತಾಯಿಸಿದಾಗ, ಶ್ರೀಗಳು ಕುರಾನ್‌ನಿಂದಲೇ ಅನೇಕ ನಿದರ್ಶನಗಳನ್ನು ಕೊಟ್ಟು, ಹಿಂದೂಫಕೀರರಿಗೂ ಇರುವ ಸಾಮ್ಯ ವೈಷಮ್ಯಗಳನ್ನು ಪುಷ್ಟಪಡಿಸಿದರು. ಇವರ ವಾದ -ವಿವಾದವನ್ನು ಆಲಿಸಿದ ಬಾದಷಹನು ಅಗ್ನಿಕುಂಡ ಏರ್ಪಡಿಸಿ, ನಿಮ್ಮ ಎರಡೂ ಪಂಗಡಗಳಲ್ಲಿ ಕಾಯ್ದ ಕಬ್ಬಿಣದ ಸರಪಳಿಯನ್ನು ಅಗ್ನಿಕುಂಡ ದಿಂದ ಹೊರಕ್ಕೆ ತರುವರೋ ಅವರೇ. ಶ್ರೇಷ್ಠ ಎಂದು ಘೋಷಿಸಿದನಂತೆ. ಆಗ ಖಾಜಿಗಳು ಈ ಸಾಹಸ ಮಾಡಲು ಹಿಂಜರಿದರು. ಆಗ ನಿಡುಮಾಮಿಡಿ ಸ್ವಾಮಿಗಳು ತಮ್ಮ ಶಿಷ್ಯ ನೊಬ್ಬನಿಗೆ ಆದೇಶ ನೀಡಿ, ನೊಸಲಿಗೆ (ಹಣೆಗೆ) ವಿಭೂತಿ ಧಾರಣೆ ಮಾಡಿ, ಅಗ್ನಿಕುಂಡ ದಿಂದ ಸರಪಳಿ ತರಲು ಹೇಳಿದಾಗ ಆ ಶಿಷ್ಯಗುರುವಿಗೆ ನಮಸ್ಕರಿಸಿ, ಅಗ್ನಿಕುಂಡಕ್ಕೆ ಇಳಿದು ಸರಪಳಿಯನ್ನು ತಂದನು. ಈ ಅದ್ಭುತವನ್ನು ನೋಡಿದ ಬಾದಷಹನು ವಿಸ್ಮಿತ ನಾಗಿ ಶ್ರೀಯವರಿಗೆ ಶರಣಾಗಿ ಹಿಂದೂಫಕೀರ್ ಎಂಬ ಬಿರುದು ನೀಡಿ ....

ನೆರವೇರಿಸಿ, ಕಾಟಪವಡ ಮೊದಲಾದ ಬಿರುದುಗಳನ್ನು ಶ್ರೀಯವರಿಗೆ ಅರ್ಪಿಸಿದನು. ಅಂದಿನಿಂದ ಕಾಟಿ ಕರಿಖನವಧೇಶೀಕೇಂದ್ರ ಸ್ವಾಮಿಗಳು ಎಂಬ ಹೆಸರು ಬಂದಿತು ಎಂದು ಹೇಳಿಕೆ ಇದೆ.

ಹೀಗೆ ಹನುಮನಾಯಕನು ತನ್ನ ಗುರುಗಳನ್ನು ಕರೆಸಿಕೊಂಡು ಅಲ್ಲಿ ಭಕ್ತಿ, ಗೌರವಗಳನ್ನು ತೋರಿಸಿದ. ನಂತರ ವಿಜಯನಗರದ ಅರಸರ ಸಂಕಷ್ಟದ ಸಮಯದಲ್ಲಿ ಶ್ರೀಗಳವರು ಹನುಮನಾಯಕನನ್ನು ಕರೆಸಿಕೊಂಡು ವಿಜಯನಗರದ ಅರಸರ ಸಹಾಯಕ್ಕೆ ಹೋಗಲು ಆದೇಶಿಸಿದರು. ವಿಜಯನಗರದ ಕೋಶಾಧಿಕಾರಿ ಬೊಕ್ಕಸಂ ತಿಮ್ಮಯ್ಯ ಆಂಧ್ರದ ನವಾಬರ ಸಹಾಯದಿಂದ ಅಳಿಯರಾಮರಾಯನನ್ನು ಸೆರೆಗೆ ಹಾಕಿ, ರಾಜ್ಯ ವಶಪಡಿಸಿಕೊಳ್ಳಲು ಪ್ರಯತ್ನಿಸಿದನು. ಆಗ ಹನುಮನಾಯಕ ತನ್ನ ಪರಾಕ್ರಮ ತೋರಿಸಿ ತಿಮ್ಮಯ್ಯನ ಸಂಚನ್ನು ವಿಫುಲಗೊಳಿಸಿ ನವಾಬರ ಮೇಲೆ ದಾಳಿಮಾಡಿ, ವಿಜಯನಗರದ ಮೇಲೆ ನವಾಬನನ್ನು ಕೈಸೆರೆ ಮಾಡಿ, ರಾಮರಾಯನಿಗೆ ಒಪ್ಪಿಸಿದನು. ಹಿಂದೆಯೇ ಹೇಳಿದಂತೆ ಇವನ ಶೌರ್ಯ, ಸಾಹಸಗಳಿಗೆ, ಮೆಚ್ಚಿ ಬುಕ್ಕರಾಯ ಸಮುದ್ರ, ಬಳ್ಳಾರಿ, ಕುರುಗೋಡು, ಪ್ರದೇಶಗಳನ್ನು ನೀಡಿದನೆಂದು ದಾಖಲೆಗಳು ಹೇಳತ್ತವೆ. ಹೀಗೆ ಅವರು ಶ್ರೀ ಶೈಲ ನಿಡುಮಾಡಿಸಿ ಸ್ವಾಮಿಗಳಿಗೆ ಅಪಾರ ಭಕ್ತಿಯಿಂದ ನಡೆದುಕೊಂಡು ಅವರ ಆದೇಶಗಳನ್ನು ಪಾಲಿಸಿದನು.

ಮುಂದೆ ಹಂಡೆ ವಂಶದ ಪ್ರಸನ್ನಪ್ಪನಾಯಕನ ಸೋದರ ಇಮ್ಮಡಿ ಪವಾಡಪ್ಪ ನಾಯಕನು ಅನಂತಪುರದ ನವಾಬನಿಗೆ ಕಪ್ಪುಕೊಡುತ್ತಿದ್ದ ಯಾವುದೋ ಸಂದರ್ಭದಲ್ಲಿ ನಾಯಕನ ಬಂಧನವಾದಾಗ ಶ್ರೀ ಕರಿಬಸವರಾಜ ದೇಶೀಕೇಂದ್ರರು. (ಕ್ರಿ. ಶ. 1731-50) ಕೊತ್ತಚೆರುವು ಸ್ಥಳಧ ಶಾಖಾಮಠದಲ್ಲಿದ್ದು ಸುದ್ದಿ ತಿಳಿದು ಅನಂತಪುರಕ್ಕೆ ಬಂದು, ಅರಮನೆಯ ಪಕ್ಕದಲ್ಲಿದ್ದ ತಮ್ಮ ಶಾಖಾಮಠದ ಮೂಲಕ ನಾಯಕನ ಸಿಪಾಯಿಗಳಿಗೆ ಹಲ್ಲು ಹೊರೆಗಳಲ್ಲಿ ಕತ್ತಿಕರಾಠಿ ಅಗಡಿಸಿ ಕಳುಹಿಸಿ, ಬಂಧನದಿಂದ ಪಾರಾಗಲು ನೆರವಾದರು. ಇದರಿಂದ ಪವಾಡಪ್ಪ ನಾಯಕನು ಆ ಸ್ವಾಮಿಗಳನ್ನು ತನ್ನ ಜೀವನಪೂರ್ತಿ ಶ್ರದ್ಧೆಯಿಂದ ಆರಾಧಿಸಿದ ಅಷ್ಟೇ ಅಲ್ಲ ಲಿಂಗೈಕ್ಯನಾದ ಮೇಲೂ ತನ್ನ ಸಮಾಧಿಯನ್ನು ಕೊತ್ತ ಚೆರುವು ಮಠದಲ್ಲಿ ಮಾಡಬೇಕೆಂದು ಬಯಸಿದ. ಅವನ ಇಚ್ಛೆಯಂತೆ 1737ರಲ್ಲಿ ಅಲ್ಲಿಯೇ ಅವನ ಸಮಾಧಿಯನ್ನು ಮಾಡಲಾಯಿತು.

ಅಂಕುಸರಾಯಿ ಎಂಬ ಬಿರುದು ಹೊಂದಿದ ಹಂಡೆ ಹನುಮನಾಯಕನು ತನ್ನ ಮಗ ರಾಮಪ್ಪನಿಗೆ ಪುಣ್ಯವಾಗಲೆಂದು ಕರಿಯವೀರಣ್ಣೊಡೆಯನ ಶಿಷ್ಯನಾದ ಚೆನ್ನ ಮಲ್ಲಿಕಾರ್ಜುನ ದೇವನ ಶಿಷ್ಯನಾದ ಕೇದಾರ ದೇವನಿಗೆ ಮಣೂರು ಎಂಬ ಗ್ರಾಮವೊಂದನ್ನು ಕಾಣಿಕೆಯಾಗಿ ನೀಡಿದ್ದನೆಂದು ತಿಳಿಯುತ್ತದೆ.

ಕ್ರಿ. ಶ. 1690-1720 ರಲ್ಲಿ ಈ ವಂಶದ ಪ್ರಸನ್ನಪ್ಪ ನಾಯಕನಿಗೆ ಕುಷ್ಠರೋಗಿ ಬಂದಾಗ, ಈ ಪೀಠದ ಶ್ರೀಗಳು ಪ್ರತಿನಿತ್ಯ ಪಾಮೋದಕ, ಪ್ರಸಾದ ಭಸ್ಮ ನೀಡಿ ಅವನ ರೋಗವನ್ನು ಗುಣಪಡಿಸಿದರು. ಹೀಗಾಗಿ ಪ್ರಸನ್ನಪ್ಪನಾಯಕನ ತಮ್ಮ ಪವಾಡಪ್ಪನಾಯಕ 1771-50ರಲ್ಲಿ ಶ್ರೀ ಕರಿಬಸವಸ್ವಾಮಿಗಳಿಗೆ ದಾನದತ್ತಿಗಳನ್ನು ನೀಡಿ ಗೌರವಿಸಿದ್ದಾರೆ. ಹಾಗೆಯೇ ಪವಾಡಪ್ಪನಾಯಕನ ಮಗ ಸಿದ್ಧಪ್ಪನಾಯಕ ದಾರಿ ತಪ್ಪಿದಾಗ ಸ್ವಾಮಿಗಳು ತಿದ್ದಿ ಬುದ್ಧಿ ಹೇಳುವ ಕೆಲಸ ಮಾಡಿದರು. ಆದರೆ ಅವನು ಗುರುಗಳಿಗೆ ದುರ್ವತನೆ ತೋರಿದ್ದರಿಂದ ಅವನ ವಂಶಸ್ಥರಿಂದಲೇ ಹತ್ಯೆಯಾದನು. ಹೀಗೆ ಶ್ರೀ ಶೈಲ ನಿಡುಮಾಮಿಡಿಯ ಪೀಠಕ್ಕೂ ಈ ಅರಸರಿಗೂ ಗುರುಭಕ್ತ ಸಂಬಂಧವನ್ನು ಅವರ ವಂಶದ ಆಳ್ವಿಕೆಯ ಉದ್ದಕ್ಕೂ ನೋಡುತ್ತೇವೆ. ಈ ವಂಶಸ್ಥರು ಹಂಪೆಯ ಹೇಮಕೂಟ ಸಿಂಹಾಸನದ ಜಗದ್ಗುರು ಶ್ರೀ ಕೊಟ್ಟೂರು ಸ್ವಾಮಿಯ ಪೀಠಕ್ಕೂ ಭಕ್ತಿ ಗೌರವಗಳಿಂಗ ನಡೆದುಕೊಂಡಿದ್ದಾರೆ. ಹನುಮನಾಯಕ, ಅವನ ಮಕ್ಕಳು ದ್ಯಾವಪ್ಪನಾಯಕ್, ಹಿರಿಯ ರಾಮಪ್ಪನಾಯಕ ಮೊದಲಾದವರು ಶ್ರೀ ಕಪ್ಪಿನ ಚೆನ್ನಬಸವಸ್ವಾಮಿಗಳನ್ನು ರಾಜಗುರುಗಳನ್ನಾಗಿ ಮಾಡಿಕೊಂಡು ಬಳ್ಳಾರಿಯ ಮಠಕ್ಕೆ ಅನೇಕ ಬಾರಿ ಭೂದಾನಗಳನ್ನು ನೀಡಿದ್ದಾರೆ. ಕ್ರಿ. ಶ. 1726ರಲ್ಲಿ ಹಿರೇರಾಮಪ್ಪನಾಯಕನು ರಾಜಮಾನ್ಯ ಕೊಟ್ಟೂರು ಸ್ವಾಮಿಗಳಿಗೆ ಭೂದಾನ ನೀಡಿ ಬಳ್ಳಾರಿಯ ಅಮ್ಮವ್ವನ ಮಠದಲ್ಲಿ ದಾಸೋಹ ನಡೆಸಲು ಅನುಮತಿ ನೀಡಿದ ವಿಷಯ ಅಲ್ಲಿಯ ದಾಖಲೆಗಳಲ್ಲಿ ಇದೆ. 1647ರಲ್ಲಿ ಶ್ರೀ ಸಿದ್ಧೇಶ್ವರ ಸ್ವಾಮಿಗಳಿಗೆ ಭೂದಾನ, 1648ರಲ್ಲಿ ಹಂಡೆ ಹಿರೇರಾಮಪ್ಪನಾಯಕನು ಕೊಟ್ಟೂರು ಮಠದ ಸ್ವಾಮಿಗಳಿಗೆ ತೊಲಮಾಮಿಡಿ, ಸಂಗನಕಲ್ಲು, ಇವನ್ನು ನೀಡಿದ್ದಲ್ಲದೆ, 1655ರಲ್ಲಿ ವಳೇನೂರಮಠಕ್ಕೆ ದತ್ತಿ 1670ರಲ್ಲಿ ಹಿರೇಹಾಳುಮಠಕ್ಕೆ ದಾನ ನೀಡಿದ್ದರೆ 1733 ರಲ್ಲಿ ಹಂಡೆ ನೀಲಮ್ಮ ರಾಸಿ ವುಳೇ ನೂರುಗ್ರಾಮವನ್ನು ತನ್ನ ಹಿರಿಯರಿಗೆ ಸುಕೃತವಾಗಲೆಂದು, ಬಳ್ಳಾರಿಯ ಮಠದಲ್ಲಿ ನಿರಂತರವಾಗಿ ದಾಸೋಹ ನಡೆಸಲೆಂದು ದಾನಕೊಟ್ಟಿದ್ದಾಳೆ. ಹಾಗೆಯೇ ಅವಳು ಒಮ್ಮೆ ಜೀವನದಲ್ಲಿ ವಿರಕ್ತಿ ಮೂಡಿ 'ಐಕ್ಯ' ಪದವಿಗೆ ಅಪ್ಪಣೆ ಬೇಡಿ ಕಪ್ಪಿನ ಚೆನ್ನಬಸವ ಸ್ವಾಮಿಗಳವರೆಗೆ ಪತ್ರ ಬರೆಯುತ್ತಾಳೆ. ಆಗ ಅವರು ಧೈರ್ಯ ಹೇಳಿ ಅದನ್ನು ಕೈಬಿಡುವಂತೆ ಮಾಡತ್ತಾರೆ. ಹೀಗೆ ಈ ಗುರು ಪೀಠದವರು ಸಾಂತ್ವನ ಸಲಹೆಗಳ ಮೂಲಕ ಈ ವಂಶಸ್ಥರಿಗೆ ಮಾರ್ಗದರ್ಶನ ನೀಡಿದ್ದ ಸಂಗತಿ ವ್ಯಕ್ತವಾಗುತ್ತದೆ.

ಬಂಕಾಪುರ ಹಾಗೂ ಕುರುಗೋಡು ಪ್ರದೇಶಗಳ ಸುತ್ತಮುತ್ತ ಪ್ರಸಿದ್ಧವಾದ ಶ್ರೀ ಗುರು ತೋಂಟದ ಸಿದ್ಧಲಿಂಗೇಶ್ವರ ಸಂಪ್ರದಾಯದ ವಿರಕ್ತ ಮಠದ ನೀಲಕಂಠಸ್ವಾಮಿಗಳಿಗೂ ಕೂಡಾ ಇವರು ಭಕ್ತಿಯಿಂದ ನಡೆದುಕೊಂಡಿದ್ದಾರೆ. ಹಾಗೆಯೇ ಡಂಬಳದ ಸಂತೆಯ ಶ್ರೀ ತೋಂಟದಾರ್ಯರು ಈ ವಂಶದ ಅರಸರಿಗೆ ರಾಜಗುರುಗಳಾಗಿದ್ದರೆಂದು ದಾಖಲೆಯೆಂದು ಹೇಳುತ್ತದೆ.

ಇವರು ವೀರಶೈವ ಧರ್ಮೀಯರಾಗಿದ್ದರೂ ಪರಧರ್ಮ ಸಹಿಷ್ಣುಗಳೂ ಪ್ರೋತ್ಸಾಹಕರೂ ಆಗಿದ್ದರು. ಬ್ರಾಹ್ಮಣಮಠವಾದ ಕೂಡ್ಲಿ ಶೃಂಗೇರಿ ಸಂಸ್ಥಾನಕ್ಕೂ ಸಹ ಅವರು ಭಕ್ತಿ ಗೌರವಗಳನ್ನು ತೋರಿ ದಾನ ದತ್ತಿಗಳನ್ನು ನೀಡಿದ್ದನು. ಕೂಡ್ಲಿ ಶೃಂಗೇರಿ ಮಠದ ಶ್ರೀ ಮದ್ರಾಜಗುರು ಶೃಂಗೇರಿ ನರಸಿಂಹ ಭಾರತಿ ಸ್ವಾಮಿಗಳ ಕರಸಂಜಾತರಾದ ಶ್ರೀ ಶೃಂಗೇರಿ ಶಂಕರ ಭಾರತಿ ಸ್ವಾಮಿಗಳಿಗೆ ಹಂಡೆ ಪಾಳೆಯಗಾರ ರಾಮಪ್ಪ ನಾಯಕನು 1746ರಲ್ಲಿ ಶ್ರೀ ಮಠದ ದೀಪಾರಾಧನೆ, ನೈವೇದ್ಯ ನಡೆಸುವುದಕ್ಕೆ ಹೊಸಕೆರೆ ಸಮೀಪದ ಈಚರ್ಲಗ್ರಾಮಕ್ಕೆ ಪುತಿನಾಮ ದತ್ತಿಯಾಗಿ ಕೊಟ್ಟಿದ್ದನು.

ಇದಕ್ಕೆ ಮೊದಲೇ 1667ರಲ್ಲಿ ಪವಾಡಪ್ಪ ನಾಯಕನು ಶ್ರೀವಿದ್ಯಾಶಂಕರ ದೇವರ ದೀಪಾರಾಧನೆಗೆ ಅಲ್ಲಾಪುರವೆಂಬ ಗ್ರಾಮವನ್ನು ಸಕಲ ಸುವರ್ಣಾದಾಯ ಧಾರಾಪೂರ್ವಕ ಗ್ರಾಮಸ್ಥಳ ನಿರ್ದೇಶನ ಮಾಡಿ ದಾನ ಬಿಟ್ಟಿದ್ದನು. ಈ ಎಲ್ಲ ತಾಮ್ರಶಾಸನಗಳ ಮೇಲೆ 'ವಿದ್ಯಾಶಂಕರಭಾರತೀ' 'ಶ್ರೀ ಸಿದ್ಧರಾಮೇಶ್ವರ'ಎಂಬ ಬರಹ ಇದ್ದು ಬಳ್ಳಾರಿಯ ಪಾಳೆಯಗಾರರು ತಮ್ಮದಲ್ಲದ ಅನ್ಯಧರ್ಮೀಯರಿಗೂ ದಾನದತ್ತಿಗಳನ್ನು ನೀಡಿರುವುದು ಅವರ ಧರ್ಮಸಾಮರಸ್ಯಕ್ಕೆ ಸಾಕ್ಷಿಯಾಗಿದೆ.

ಈ ಅರಸರು ವಿಶೇಷವಾಗಿ ದಾಸೋಹ ಪ್ರೇಮಿಗಳಾಗಿದ್ದರು. ಕೊಟ್ಟೂರು ಮಠಕ್ಕೆ, ಅದರ ದಾಸೋಹ ಕಾರ್ಯ ಮೆಚ್ಚಿಕೊಂಡು, ಹಂಡೇ ಹಿರೇರಾಮಪ್ಪನಾಯಕನು ಹಿರಿಯರಿಗೆ ಸುಕೃತವಾಗಲೆಂದು 1648ರಲ್ಲಿ ಬಳ್ಳಾರಿಯ ವಿರತ್ತಮಠದಲ್ಲಿ ದಾಸೋಹ ಧರ್ಮನಡೆಸುವುದಕ್ಕೆ, ಶ್ರೀ ಶೈಲ ಪಾತಾಳಗಂಗೆಯಲ್ಲಿ ಸಂಕಲ್ಪ ಮಾಡಿ ಗ್ರಾಮ ಭೂಮಿಯನ್ನು ದಾನ ಕೊಡುತ್ತಾನೆ. ಸಾಮಾಜಿಕ ಸೇವೆಯನ್ನು ಮಾಡುತ್ತಿದ್ದ ಮಠಗಳಿಗೆ ಅವರು ಇನ್ನೂ ಹೆಚ್ಚಿನ ಪ್ರೋತ್ಸಾಹ ನೀಡಿದ್ದಕ್ಕೆ ಇದು ಉದಾಹರಣೆಯಾಗಿದೆ.

ಹಾಗೆಯೇ ಅವರಿಗೆ ಹಿರಿಯರ ಬಗ್ಗೆ ವಿಶೇಷವಾದ ಗೌರವ ಇತ್ತು. ಹಂಡೆ ನೀಲಮ್ಮ ರಾಮಪ್ಪನಾಯಕರು ವುಳೇನೂರು ವಿರಕ್ತಮಠಕ್ಕೆ ತಮ್ಮ ಹಿರಿಯರಿಗೆ ಸದ್ಗತಿ ಯಾಗಲೆಂದು ಭೂದಾನವನ್ನು ಶಿವಾರ್ಪಿತವಾಗಿ ಮಾಡಿರುತ್ತಾಳೆ. ಹಂಡೆ ರಾಮಪ್ಪನ ನಾಯಕರು 1670ರಲ್ಲಿ ತಮ್ಮ ಹಿರಿಯರಿಗೆ ಪುಣ್ಯವಾಗಲೆಂದು ಹಿರೇಹಾಳ ಚೆನ್ನವೀರನ ಪೇಟೆಯ ಒಳಗೆ ಇರುವ ವಿರಕ್ತಮಠಕ್ಕೆ ಅಲ್ಲಿಯ ಶ್ರೀಗಳಾದ ಚನ್ನಬಸಪ್ಪದೇವರಿಗೆ 'ಕುರುಗೋಡು ವಿಲಾಯತಿ ಮಾನ್ಯ ಉಮ್ಮಳಿ ಸೋಮ ಸಮುದ್ರದಲ್ಲಿ ರೇಗಡಿ 12 ವಕ್ಕಳದ ಹೊಲ ವನ್ನು ದಾನಕೊಟ್ಟಿರುತ್ತಾನೆ.

ಇಮ್ಮಡಿ ಕರಿಬಸವ ಗುರುವಿನ ಕೃಪೆಯಿಂದ ಕುಷ್ಠರೋಗ ವಾಸಿಯಾದಾಗ ಪ್ರಸನ್ನಪ್ಪನಾಯಕ ಅದಕ್ಕೆ ಪುತ್ರಿಯಾಗಿ ಅನೇಕದಾನ ದತ್ತಿಗಳನ್ನು ನೀಡಿ ಗೌರವಿಸುತ್ತಾನೆ. ತನ್ನನ್ನು ರಕ್ಷಿಸಿದ ಶ್ರೀ ಶೈಲಪೀಠದ ರಾಜಗುರು ಕರಿಬಸವದೇಶೀ ಕೇಂದ್ರ ಗುರುಗಳಿಗೆ ಪವಾಡಪ್ಪನಾಯಕನು ತನ್ನ ಜೀವನಾವಧಿ ಪೂರ್ತಿ ಸೇವೆ ಮಾಡಿದ ಹಾಗೆಯೇ ಕೊತ್ತ

ಚರುವಿನ ಶಾಖಾಮಠದಲ್ಲಿಯೇ ಸಮಾಧಿ ಹೊಂದಿದ. ಹೀಗೆ ಅವನು ಗುರುವಿನ ಬಗ್ಗೆ ಅಪಾರ ಭಕ್ತಿ ಅಭಿಮಾನಗಳನ್ನು ತೋರಿದನು.

ಇವರು ಕೊಟ್ಟದಾನ ಶಾಸನಗಳಲ್ಲಿ ಗುರಪೀಠಗಳ ಪರಂಪರೆಯ ವಿವರಗಳು ಸಾಕಷ್ಟು ದೊರೆಯುತ್ತವೆ.

ಮಹಿಳೆಯಾರೂ ಕೂಡಾ ಸಂಸ್ಥಾನವನ್ನು ಆಳಿರುವುದು, ಕಷ್ಟಸಂದರ್ಭದಲ್ಲಿ ಗುರುಗಳ ಮಾರ್ಗದರ್ಶನ ಪಡೆದಿರುವುದು, ಹೆಣ್ಣುಮಕ್ಕಳೂ ಕೂಡಾ ಸ್ವತಂತ್ರವಾಗಿ ದಾನ ದತ್ತಿಗಳನ್ನು ನೀಡಿರುವುದು, ಈ ವಂಶದವರ ಚರಿತ್ರೆಯಲ್ಲಿ ಕಾಣುವ ಎತ್ತಿ ಹೇಳಬಹುದಾದ ಒಂದು ಸಂಗತಿ.

ಚಿಕ್ಕನಾಯಕನ ಪುತ್ರಿ ಸಂಗನಾರಿಯು ಆನೆಗುಂದಿ ಅರಸರ ಸಹಾಯದಿಂದ ಬಳ್ಳಾರಿ ಯನ್ನು ವಶಪಡಿಸಿಕೊಂಡು ಮಗನಾದ ದ್ಯಾವಪ್ಪನಿಗೆ ನಾಯಕಪಟ್ಟ ಕಟ್ಟಿ ಆಳ್ವಿಕೆ ಮಾಡಿರುವುದನ್ನು ಸಹ ಇಲ್ಲಿ ನೆನೆಯಬಹುದು.

ವ್ಯವಸ್ಥಿತವಾಗಿ ಶಿಸ್ತುಬದ್ಧವಾಗಿ ದಾನದ ಉದ್ದೇಶಗಳನ್ನು ಹೇಳಿ, (ಆ ದಾನ ಕೊಡುತ್ತಿರುವುದು ಇದೇ ಕಾರಣಕ್ಕೆ ಎಂದು ಹೇಳಿ) ಶಾಸನ ಹಾಕಿಸಿದ್ದಾರೆ.

ಈ ನಾಯಕರ ಹೆಸರುಗಳು ಅತ್ಯಂತ ಕುತೂಹಲಕಾರಿಯಾಗಿವೆ. ಇವರು ಶಿವಾರಾಧಕರಾಗಿದ್ದರೂ ಹೆಸರುಗಳು ವೈಷ್ಣವ ಪರವಾಗಿವವು. ಕೆಲವು ಹೆಸರುಗಳಿವೆ. ಹನುಮನಾಯಕ, ರಾಮಿನಾಯಕ ಇಂಥ ಇವುಗಳ ಜೊತೆ ದೇವಪ್ಪನಾಯಕ, ಪ್ರಸನ್ನಪ್ಪನಾಯಕ, ಮಲುತಪ್ಪನಾಯ ಮುಂತಾದ ಹೆಸರುಗಳನ್ನೂ ಕಾಣಬಹುದು. ಕ್ರಿ.ಶ. 1517ರಿಂದ 1860ರವರೆಗೆ ಆಳಿ, ಧರ್ಮವನ್ನು ಅನುಸರಿಸುತ್ತಾ, ಗುರುಹಿರಿಯ ಸಂಸ್ಥಾನದ ಮಠಗಳಿಗೆ ಗೌರವತೋರಿ ದತ್ತಿ ದಾನಗಳನ್ನು ನೀಡಿ ಸ್ಥಳೀಯ ಪ್ರಭುಗಳ ಚರಿತ್ರೆಯಲ್ಲಿ ಗಣನೀಯರೆನಿಸಿದ್ದಾರೆ.

ಗ್ರಂಥ ಋಣ

1. ಕರ್ನಾಟಕದ ಕೈಫಿಯತ್ತುಗಳು - ಸಂ. ಡಾ. ಎಂ. ಎಂ. ಕಲಬುರ್ಗಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೪.
2. ಬಕ್ಕರಾಯ ಚರಿತ್ರೆ-ಸಂ. ಡಾ. ಎಸ್. ಸಿ. ಪಾಟೀಲ, ಸಿದ್ಧರಾಯಶ್ವರ ಪ್ರಕಾಶನ, ವಿಜಾಪುರ, ೨೦೦೨.
3. The ward of the Rajas (1853)- C. P. Brown, Assian Educational Services.

4. ಹಂಪೆ ಹೇಮಕೂಟದ ಶ್ರೀ ಜಗದ್ಗುರು ಕೊಟ್ಟೂರ ಸ್ವಾಮಿ ಗುರುಪರಂಪರೆ ಸಂ. ಗೌ. ಮ ಉಮಾಪತಿ ಶಾಸ್ತ್ರಿ . ಶ್ರೀ ಜಗದ್ಗುರು ಕೊಟ್ಟೂರ ಸ್ವಾಮಿಮಠ, ಹಂಪೆ - ಹೊಸಪೇಟೆ, ೧೯೮೩.
5. ಶ್ರೀ ನಿಡುಮಾಮಿಡಿ ಪೀಠಧ ಸಂಕ್ಷಿಪ್ತ ಚರಿತ್ರೆ -ಲೇ. ಡಾ. ಎಂ. ಜಿ. ನಾಗರಾಜ್.
6. ಬಂಕಾಪುರ ಶೋಧನ -ಡಾ. ಚೆನ್ನಕ್ಕ ಎಲಿಗಾರ, ಚನ್ನಗಂಗಾ ಪ್ರಕಾಶನ, ಧಾರವಾಡ, ೧೯೯೦
7. ವೀರಶೈವ ಹಂಡೆ ವಜೀರ ಜನಾಂಗದ ಪರಿಚಯ -ಲೇ. ಡಾ. ಎಸ್. ಪಾಟೀಲ
8. ಕನ್ನಡ ಸಾಹಿತ್ಯ ಸಂಸ್ಕೃತಿ ಶೋಧನೆ -ಲೇ. ಡಾ. ಸಿ. ನಾಗಭೂಷಣ
9. ಕನ್ನಡ ವಿ. ವಿ. ಶಾಸನ ಸಂಪುಟ ೧ : ಬಳ್ಳಾರಿಜಿಲ್ಲೆ ಕನ್ನಡ ವಿ. ವಿ. ಹಂಪಿ, ೧೯೯೮.
10. ಕನ್ನಡ ವಿ. ವಿ. ಶಾಸನ ಸಂಪುಟ ೩-ಹಂಪಿ, ೨೦೦೦.

೩೩. 'ಕೆಳದಿನೃಪವಿಜಯಂ' ಗ್ರಂಥದಲ್ಲಿ ಪ್ರಸ್ತಾಪಗೊಂಡಿರುವ ಬಳ್ಳಾರಿ ಜಿಲ್ಲೆಯ ಪಾಳೆಯಗಾರರು

ಡಾ. ಬೆಂ.ಶಾ.ಶ್ಯಾಮಲಾ ರತ್ನಕುಮಾರಿ

'ಮೂಲಾಧಾರಗಳಿಲ್ಲದೆ ಇತಿಹಾಸವಿಲ್ಲ' ಎಂಬ ಬ್ಯೂರಿಯವರ ಹೇಳಿಕೆ ಸತ್ಯವಾದುದು. ಪ್ರಾಚ್ಯಾಧಾರ ಮತ್ತು ಸಾಹಿತ್ಯಾಧಾರವೆಂಬ ಎರಡು ಪ್ರಮುಖ ಮೂಲಾಧಾರಗಳ ಪೈಕಿ ಪ್ರಾಚ್ಯಾಧಾರವನ್ನು ಬಳಿಸಿಕೊಂಡಷ್ಟು ಸಾಹಿತ್ಯಾಧಾರಗಳನ್ನು ಇತಿಹಾಸದ ಅಧ್ಯಯನ ದಲ್ಲಿ ಬಳಸಿಕೊಂಡಿಲ್ಲವೆಂದು ಹೇಳಬಹುದಾಗಿದೆ. ಸಮಕಾಲೀನ ಐತಿಹಾಸಿಕ ಸಾಹಿತ್ಯಕ ಕೃತಿಗಳು ಪ್ರಾಚ್ಯಾಧಾರಗಳಿಂದ ಶಾಸನ, ನಾಣ್ಯ, ಸ್ಮಾರಕಗಳಂತೆಯೇ ಅಧಿಕೃತ ನೈಜ ದಾಖಲೆಗಳೆಂದು ಪರಿಗಣಿಸಲು ಯೋಗ್ಯವಾಗಿದೆ. ಆದುದರಿಂದ ಅವುಗಳನ್ನು ಸಮರ್ಥ ವಾಗಿ ಬಳಸಿಕೊಳ್ಳಲು ಪ್ರಯತ್ನಿಸಲಾಗಿದೆ.

ದಕ್ಷಿಣಭಾರತದ ಹಿಂದೂ ಸಾಮ್ರಾಜ್ಯವೆನಿಸಿದ ವಿಜಯನಗರ ಸಾಮ್ರಾಜ್ಯ (ಕ್ರಿ.ಶ. 1336-1565) ವು 'ಅಮರನಾಯಕ ಪದ್ಧತಿ'ಯನ್ನು ಅನುಸರಿಸುವುದರದ ಮೂಲಕ ಕರ್ನಾಟಕದಲ್ಲಿ ನಾಯಕರ ರಾಜ್ಯಗಳಿಗೆ, ಪಾಳೆಯಗಾರರ ಪಾಳೆಯಪಟ್ಟಗಳಿಗೆ ಅಸ್ತಿತ್ವ ವನ್ನು ಒದಗಿಸಿತು. ಅಂತಹ ನಾಯಕ ರಾಜ್ಯಗಳಲ್ಲಿ ಪ್ರಮುಖವಾದುದು ಕೆಳದಿ ನಾಯಕರ ರಾಜ್ಯ. ಕೆಳದಿ ನಾಯಕರು ವಿಜಯನಗರದ ಪತನಾನಂತರ ಅಂದರೆ 1565ರಲ್ಲಿ ನಡೆದ ತಾಳಿಕೋಟೆ ಯುದ್ಧದಲ್ಲಿ ಷಾಹಿಸೇನೆಯಿಂದ ಸೋಲಿಸಲ್ಪಟ್ಟ ವಿಜಯನಗರದ ಅರಸೊತ್ತಿಗೆ ಪೆನುಗೊಂಡೆಗೆ ವರ್ಗಾಯಿಸಲ್ಪಟ್ಟ ಮೇಲೆ ಸ್ವತಂತ್ರವಾಗಿ ವಿಜಯನಗರ ಸಾಮ್ರಾಜ್ಯದ ರಾಜಕೀಯ ಮತ್ತು ಸಾಂಸ್ಕೃತಿಕ ಪರಂಪರೆಗೆ ವಾರಸುದಾರರಾದರು.

ಕೆಳದಿನಾಯಕರ ಇತಿಹಾಸವನ್ನು ಸಮಗ್ರವಾಗಿ ನಿರೂಪಿಸುವ ಕೃತಿ 'ಕೆಳದಿನೃಪ ವಿಜಯು.' ಈ ಕೃತಿಯ ಕರ್ತೃವಾದ ಲಿಂಗಣ್ಣಕವಿಯು ಕೆಳದಿಯ ದೊರೆ ಇಮ್ಮಡಿ ಬಸವಪ್ಪನಾಯಕನ (ಕ್ರಿ.ಶ. 1739-1754) ಆಸ್ಥಾನ ಕವಿಯಾಗಿದ್ದನು. ಚೌಡಪ್ಪ ನಾಯಕನು ಕೆಳದಿ ಸಂಸ್ಥಾನದಲ್ಲಿ ಆಳ್ವಿಕೆ ಪ್ರಾರಂಭಿಸಿದಂದಿನಿಂದ ಚನ್ನಬಸವನಾಯಕ ಮತ್ತು ಸೋಮಶೇಖರ IIIನ ಕಾಲದಲ್ಲಿ ಸಂಸ್ಥಾನದಲ್ಲಿ ಈ ನಾಯಕರ ಆಳ್ವಿಕೆ ಕೊನೆ ಗೊಳ್ಳುವವರೆಗೆ ಈ ರಾಜವಂಶದ ಸಂಪೂರ್ಣ ಚರಿತ್ರೆಯನ್ನು ಚಿತ್ರಿಸುವ ಸಮಯ ದಲ್ಲಿಯೇ ಪ್ರಾಸಂಗಿಕವಾಗಿ ಕೆಳದಿಯ ನಾಯಕರು ಬಳ್ಳಾರಿ ಜಿಲ್ಲೆಯ ಸಮಕಾಲೀನ ಹರಪನಹಳ್ಳಿ ಪಾಳೆಯಗಾರರು, ರಾಯದುರ್ಗದ ಪಾಳೆಯಗಾರರು, ಗುತ್ತಲ,

ಗುಡಿಕೋಟೆ, ಜರಿಮಲೆ ಪಾಳೆಯಗಾರರೊಡನೆ ಹೊಂದಿದ್ದ ಸಂಬಂಧದ ಬಗೆಗೆ ವಿವರಗಳನ್ನೂ ನೀಡುತ್ತದೆ 'ಕೆಳದಿನೃಪವಿಜಯ' ಕೃತಿ. ಹನ್ನೆರಡು ಆಶ್ವಾಸನಗಳನ್ನುಳ್ಳ ಈ ಕೃತಿಯ ಸಪ್ತಮಾಶ್ವಾಸ, ನವಮಾಶ್ವಾಸ, ದಶಮಾಶ್ವಾಸ ಮತ್ತು ಏಕಾದಶಾಶ್ವಾಸ ಗಳಲ್ಲಿ ಬಳ್ಳಾರಿ ಜಿಲ್ಲೆಯ ಪಾಳೆಯಗಾರರಿಗೆ ಸಂಬಂಧಿಸಿದ ಮಾಹಿತಿ ದೊರಕುತ್ತದೆ.

ಕೆಳದಿನೃಪವಿಜಯದ ಸಪ್ತಮಾಶ್ವಾಸದಲ್ಲಿ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ಪಾಳೆಯಗಾರರ ಬಗ್ಗೆ ಪ್ರಸ್ತಾಪವಿದೆ.

ಇಂತು ನೆಗಳ್ತೆವೆತ್ತ ಭುಜಬಲಪ್ರತಾಪಾತಿಶಯದಿಂ ಸದ್ಧರ್ಮದಿಂ ರಾಜ್ಯ ವನ್ನಾಳುತಿರ್ದಾ ॥ ಶಿವಪ್ಪನಾಯಕನು ವಿಕಾರಿಸಂವತ್ಸರದಲ್ಲಿ ರಾಯಸಂಸ್ಥಾನವನ್ನುದ್ಧರಿಸಲ್ವೇಳ್ಕೆಂದು ಮನದಂದು ಸೋದೆ ಬಿಳಿಗೆ ತರಿಕೆರೆ ಹರಪುರ (ಪ್ರತಿನಾಮ ಹರಪನಹಳ್ಳಿ) ಮುಂತಾದ ನಾಡ ದೊರೆಗಳ ಸೈನ್ಯ ಸ್ವಸೈನ್ಯಂವೆರಸು ತೆರಳ್ದು ಬೇಲೂರಂ ತೆಗೆದುಕೊಂಡು ಶ್ರೀರಂಗರಾಯರ್ಗಿತ್ತು ರಾಯಸಂಸ್ಥಾನಮಂ ನೆಲೆಗೊಳಿಸಿ ನಿಲಿಸಿ ತದ್ರಾಯರಿಂ ಶಂಖಚಕ್ರ ಸ್ಥೂಲನೀಲ ಪರಿಶೋಭಿತ ವಜ್ರಖಚಿತ ಕರ್ಣಾಭರಣಂ ಮುಂತಾದ ಬಿರುದುಗಳಂ ಪಡೆದು ರಾಮಬಾಣನೆಂಬಾನೆಯಂ ಕೊಡಲದಂ ಪರಿಗ್ರಹಿಸಿ ನಿಲಿಸಿ ಪಟ್ಟಣದ ಮುಖಕ್ಕೆ ದಂಡಂ ತೆರಳ್ವಿದಿ ಗ್ರಾಮದ ಸಮೀಪಮಂಸಾರ್ದು ಪಾಳಯವನಿಳಿದಿರಲೂ ಪ್ರಸ್ತಾವದೊಳ್

ಕೆಳದಿನಾಯಕರಲ್ಲಿ ಅತ್ಯಂತ ಪ್ರಸಿದ್ಧನಾದ ಬಿದನೂರು ಶಿವಪ್ಪನಾಯಕರು ಕ್ರಿ.ಶ. 1657ರ ವಿಕಾರಿಸಂವತ್ಸರದಲ್ಲಿ ವಿಜಯನಗರ ರಾಜ್ಯವನ್ನು ಉದ್ಧರಿಸಲು ತನ್ನ ಸೈನ್ಯದ ಜೊತೆಗೂ ತನಗೆ ಅಧೀನರಾಗಿದ್ದ ಸೋದೆ, ಬೀಳಗಿ, ತರೀಕೆರೆ ಮತ್ತು ಹರಪುರ- ಹರಪನಹಳ್ಳಿ ಪಾಳೆಯಗಾರರ ಸೈನ್ಯವನ್ನು ಸೇರಿಸಿಕೊಂಡು ಬೇಲೂರನ್ನು ಮುತ್ತಿ ಅಲ್ಲಿನ ದೊರೆ (ನರಸಿಂಹನಾಯಕ) ನಿಂದ ಬೇಲೂರನ್ನು ವಶಪಡಿಸಿಕೊಂಡು ಅದನು ವಿಜಯನಗರದರಸ ಶ್ರೀರಂಗರಾಯನಿಗೆ ಸಮರ್ಪಿಸಿ ದೇಶಭ್ರಷ್ಟನಾದ ಅವನನ್ನು ಬೇಲೂರು ಸಂಸ್ಥಾನದಲ್ಲಿ ನೆಲೆಗೊಳಿಸಿದ ಕಾರಣ ಶ್ರೀರಂಗರಾಯನಿಂದ ವಜ್ರಖಚಿತ ಕರ್ಣಾಭರಣ, ರಾಮಬಾಣ ಎಂಬ ಆನೆ, ಶಂಖ ಚಕ್ರ ಮುಂತಾದ ಪುರಸ್ಕಾರಗಳನ್ನು ಪಡೆದನು.

ಪುನಃ ದಶಮಾಶ್ವಾಸದಲ್ಲಿ ಹರಪನಹಳ್ಳಿ ಪಾಳೆಯಗಾರರ ಹೆಸರುಗಳು ಹಾಗೂ ಚಿತ್ರದುರ್ಗದ ನಾಯಕನು ಹರಪನಹಳ್ಳಿಯನ್ನು ಮುತ್ತಿದಾಗ ಕೆಳದಿಯ ಸೋಮಶೇಖರ ನಾಯಕ ಕೊಟ್ಟ ಸೈನ್ಯ ಸಹಾಯದ ವಿವರಗಳಿವೆ.

ಕಂ॥ ಧುರಧೀರಂ ಚಿಂತನಕ
ಲ್ಲೆರೆಯಂ ಬಿಳಿಚೋಡಿ ಬರಮನಾಯಕನೆಸೆವಾ
ಹರಪುರದರಸನ ಸುಪರಿ
ಸ್ತರಣಗಳಂ ಕೊಂಡು ಪಾಳಿಯಿಡಲತಿಚಲದಿಂ ॥ 24 ॥

ವII ಪಿಂತೆ ಕ್ರಮದಿಂ ಚಿಂತನಕಲ್ಲುದುರ್ಗದ ಸಂಸ್ಥಾನವಂ ಕಸ್ತೂರಿ ತಿಮ್ಮಪ್ಪ ನಾಯಕ ಸರ್ಜಪ್ಪನಾಯಕ ಹಿರಿಯ ಚಿಕ್ಕಣ್ಣನಾಯಕ ಹಿರಿಯ ಮೆದಕೆರೆನಾಯಕ ಮೆಕೆರೆ ನಾಯಕ ಚಿಕ್ಕಣ್ಣನಾಯಕ ಮೆದಕೆರೆ ರಂಗಪ್ಪನಾಯಕ ರಘುವಪ್ಪನಾಯಕ ರಂಗಪ್ಪ ನಾಯಕರೆಂಬವರಾಳ್ದರ್ ಆ ತರುವಾಯ ಮಾದುರ್ಗವನಾಳುತಿರ್ದ ಬಿಳಿಚೋಡಿ ಭರಮಪ್ಪ ನಾಯಕನತ್ಯಂತ ಗರ್ವೋದ್ರೇಕದಿನಾದಿಯೊಳುಚ್ಚಂಗಿಯೆಂಬ ಸ್ಥಳದೊಳಿರ್ದ ನಂತಹ ಹರಪುರ (ಪ್ರತಿನಾಮ ಹರಪನಹಳ್ಳಿ) ಯೆಂಬ ಕೋಂಟೆಯಂ ಬಲಿಸಿ ಆ ಕೋಂಟೆಯಳಿರ್ದು ರಾಜ್ಯಂಗೆಯ್ದು ದಾದೆಯನಾಯಕ ರಂಗರಾಜಯ್ಯ ಹಿರಿಯ ಬಸಂತ ರಾಯ ಇಮ್ಮಡಿ ಬಸವಪ್ಪನಾಯಕ ಕೊಟ್ಟೂರಪ್ಪನಾಯಕ ಹಿರಿಯ ಬಸವಪ್ಪನಾಯಕ ಕೊಟ್ಟೂರಪ್ಪ ನಾಯಕರೆಂಬಿವರಾಳ್ದನಂತರಂ ಬಸವಪ್ಪನಾಯಕನಾಳ್ದು ಬರುತ್ತಿರಲ್ (ಮುಂಪೇಳ್ದ ಚಿಂತನಕಲ್ಲು ಭರಮಣ್ಣನಾಯಕಂ) ಆ ಹರಪನಹಳ್ಳಿ ಬಸವಪ್ಪನಾಯಕನ ಪರಿಸ್ತರಣ ಗಳಂಕೊಂಡು ರಾಜ್ಯಾಂಗಳನಾಕ್ರಮಿಸುತ್ತುಂ ಮಿಕ್ಕು ಮೀರಿ ಕೈಗೆಯುತ್ತಂ ಬರಲಾ ಬರಮನಾಯಕನದಟನಾಂ ಪೊಡಶಕ್ಯಮಾಗಿ ಹರಪನಹಳ್ಳಿಯ ಬಾಗಳಿ ಬಸವಪ್ಪ ನಾಯಕಂ ದೈನೋಕ್ತಿಯಿಂ ರಾಯಸಮಂ ಬರೆದು ಕಳುಪಿ ತಮ್ಮ ಸಂಸ್ಥಾನ ಮನುದ್ಧರಿಸ ವೇಳ್ಕೆಂದು ಪೇಳಿಸಲಂತಾಗಲೆಂದು ಗುರುವಪ್ಪ ಮಂತ್ರಿಯೊಡಸಂಖ್ಯಾತ ಮಾದ ಸೈನ್ಯವಂ ತೆರಳ್ಚಿ ಕಳುಹಿ ಯುದ್ಧರಂಗದೊಳಾ ಬರಮನಾಯಕನ ಪರಾಕ್ರಮಾತಿ ಶಯಮಂ ಮುರಿದಾ ಪರಿಸ್ತರಣಗಳಂಕೊಂಡು ಬಸವಪ್ಪನಾಯಕಂಗಿತ್ತು ಪರಮ ಪ್ರಖ್ಯಾತಿಯಂ ಪಡೆದಂ ತಿರುತ್ತುಮಿರಲ್...

ಹರಪನಹಳ್ಳಿಯಲ್ಲಿ ಆಳಿದ ಪಾಳೆಯಗಾರರ ಹೆಸರುಗಳು ಈ ಮೇಲೆ ಹೇಳಿರುವ ಪ್ರಕಾರ ಇಂತಿವೆ:

ದಾದೆಯನಾಯಕ

ರಂಗರಾಜಯ್ಯ

ಹಿರಿಯ ಬಸಂತರಾಯ

ಇಮ್ಮಡಿ ಬಸವಪ್ಪನಾಯಕ

ಕೊಟ್ಟೂರಪ್ಪ ನಾಯಕ

ಬಸವಪ್ಪನಾಯಕ

ಕೊಟ್ಟೂರಪ್ಪನಾಯಕ

ಬಾಗಳಿ ಬಸವಪ್ಪನಾಯಕ

ಬಾಗಳಿ ಬಸವಪ್ಪನಾಯಕನು ಹರಪನಹಳ್ಳಿಯಲ್ಲಿ ಆಳ್ವಿಕೆ ನಡೆಸುತ್ತಿರಲು ಚಿತ್ರ ದುರ್ಗ ಬಿಳಿಚೋಡು ವಂಶದ ಬರಮಣ್ಣನಾಯಕನು ಹರಪನಹಳ್ಳಿಯ ಮೇಲೆ ಧಾಳಿ ನಡೆಸಿ ಪರಿಸ್ತರಣ ಕೋಟೆಯನ್ನು ವಶಪಡಿಸಿಕೊಂಡನು. ಆಗ ಬಾಗಳಿ ಬಸವಪ್ಪ ನಾಯಕನು

ಕೆಳದಿಯ ಇಮ್ಮಡಿ ಸೋಮಶೇಖರನಾಯಕನ ಸೈನ್ಯ ಸಹಾಯ ಕೇಳಿ ನಿರೂಪವನ್ನು ಕಳುಹಿಸಿಕೊಡಲು ಸೋಮಶೇಖರನಾಯಕನು ಕೂಡಲೇ ತನ್ನ ಮಂತ್ರಿ ಗುರುವಪ್ಪನ ನೇತೃತ್ವದಲ್ಲಿ ಸೇನೆಯನ್ನು ಕಳುಹಿಸಿಕೊಟ್ಟು ಭರಮನಾಯಕನನ್ನು ಯುದ್ಧದಲ್ಲಿ ಸೋಲಿಸಿ ಹರಪನಹಳ್ಳಿ ಕೋಟೆಯನ್ನು ವಶಪಡಿಸಿಕೊಂಡು ಬಾಗಳಿ ಬಸವಪ್ಪ ನಾಯಕನಿಗೆ ನೀಡಿದನು. ಹಾಗೂ ತಾನು ಕೀರ್ತಿಶಾಲಿಯಾದನು.

ಕಂ ॥ ಮಗಗಂ ಪೆಸರಿಟ್ಟುದೆ ಪದ
ಯುಗದರ್ಶನಗೈದ ಹರಪುರಾಧೀಶ್ವರಗಂ
ದಗಣಿತ ಪೊನ್ನುಡುಗೊರೆ ತೊಡ
ವುಗಳನವನಿತ್ತುಪೆರ್ಮೆಯಿಂ ಮನ್ನಿಸಿದಂ

ವ ॥ ಇಂತು ಮನ್ನಿಸಿದನಂತರಮಾ ಹರಪುರ ಸಂಸ್ಥಾನಕ್ಕೊದಗಿದ ಹೇರಳ ಋಣಭಾರಮಂ ತೀರ್ಚಿ ಕಳುಪಲ್....

ಹರಪನಹಳ್ಳಿಯ ಬಾಗಳಿ ಬಸವಪ್ಪನಾಯಕನು ಚಿತ್ರದುರ್ಗದ ಬರಮಣ್ಣನಾಯಕನಿಂದ ತನಗೆ ರಾಜ್ಯವನ್ನು ಕೊಡಿಸಿದಕ್ಕಾಗಿ ಕೃತಜ್ಞತೆಯ ದ್ಯೋತಕವಾಗಿ ತನ್ನ ಮಗನಿಗೆ ಸೋಮಶೇಖರನಾಯಕನೆಂದೇ ಹೆಸರನ್ನಿಟ್ಟು, ನಂತರ ಕೆಳದಿ ಸೋಮಶೇಖರನಾಯಕನ ದರ್ಶನ ಮಾಡಿ ಪಾದಕ್ಕೆರಗಲು ಅವನಿಗೆ ಸೋಮಶೇಖರನಾಯಕನು ಕನಕ, ಆಭರಣ ಮುಂತಾದ ಉಡುಗೊರೆಗಳಿಂದ ಸತ್ಕರಿಸಿದನಲ್ಲದೆ ಹರಪನಹಳ್ಳಿ ಸಂಸ್ಥಾನದ ಸಾಲವನ್ನು ತೀರಿಸಿದನು.

ಪುನಃ ಕೆಳದಿಯಲ್ಲಿ ಇಮ್ಮಡಿ ಬಸವಪ್ಪನಾಯಕನ ಆಳ್ವಿಕೆಯಲ್ಲಿ ಚಿತ್ರದುರ್ಗದ ಮೆದಕೆರೆನಾಯಕನು ಹರಪನಹಳ್ಳಿಯ ಮೇಲೆ ಯುದ್ಧ ನಡೆಸುತ್ತಾನೆ. ಆಗಲೂ ಕೆಳದಿ ನಾಯಕನು ಹರಪನಹಳ್ಳಿಯ ನಾಯಕನಿಗೆ ಸಹಾಯ ನೀಡಿ ರಾಜ್ಯವನ್ನು ಕೊಡಿಸುತ್ತಾನೆ.

ಮ॥ ಮದಮುಖದುಷ್ಕಿರಾತನಿಕರಾಧಿಪ ಚಿಂತನಕಲ್ಲಧೀಶನಾ
ಮೆದಕೆರೆನಾಯಕಂ ಹರಪುರಾಧಿಪನಂ ಮುರಿದೊತ್ತಿ ನಿಲ್ವೊಡಾ
ಸ್ಪದಗಳಾನೀಯದಂತವನ ರಾಜ್ಯವನಾಕ್ರಮಿಸುತ್ತುಮಾಜಿರಂ
ಗದೊಳದಿರಾಂತುಪದ್ರವಗಳಂ ರಚಿಸುತ್ತಿರೆ ಶೌರ್ಯದೇಳ್ಗೆಯಿಂ

ವ॥ ಇಂತು ಹರಪುರಾಧಿಪನೆನಿಪ ಬಸಂತರಾಯಂ ಮೆದಕೆರೆನಾಯಕನದ ಟನಾಂ ಪೊಡಶಕ್ಯಮಾಗಿ ನಿಮ್ಮ ಪುತ್ರವರ್ಗದ ಮನೆತನದವರೆನಿಸಿ ವರ್ತಿಸುತ್ತಿರ್ಪೆಮ್ಮ ಸಂಸ್ಥಾನಮನುದ್ಧರಿಸವೇಳ್ಕೆಂದು ಲಿಖಿತಮುಖದಿಂ ಭಿನ್ನವಿಸಿ ಕಳುಪಲ್ ಕೇಳ್ದು ಸಿದ್ದೋಜಿ ಯೊಡನನು ಸಂಧಾನಂ ರಚಿಸಿ ತತ್ಸೈನ್ಯಮಂ ಬರಿಸಿ ಸುಬೇದಾರ ಲಿಂಗಪ್ಪನೊಡನೆ ಅಸಂಖ್ಯಾತ ಸೇನಾ ಸಮೂಹಂ ತೆರಳ್ಚಿಸಿ ಕಳುಪಿ ತನ್ಮೆದಕೆರೆ ನಾಯಕನ

ರಾಜ್ಯಮಂ ನಿಪಾತ ನಂಗೆಯ್ಸಿದನಂತು. ಚಿತ್ರದುರ್ಗದ ಮದಕರಿನಾಯಕನ ಕಾಟವನ್ನು ತಾಳಲಾರದೆ ಹರಪನಹಳ್ಳಿಯ ಬಸಂತರಾಯನು ಕೆಳದಿಯ ಬಸವಪ್ಪನಾಯಕನಿಗೆ ಪ್ರಾರ್ಥನಾಪತ್ರ ವೊಂದನ್ನು ಕಳುಹಿಸಿ ನಿಮ್ಮ ಮಗನಂತಿರುವ ನಮ್ಮ ಮನೆತನದವರೆನಿಸಿ ನಮ್ಮ ಸಂಸ್ಥಾನ ವನ್ನು ರಕ್ಷಿಸಬೇಕೆಂದು ಕೇಳಿಕೊಂಡಾಗ ಸಿದ್ದೋಜಿಯೊಡನೆ ಸಮಾಲೋಚಿಸಿ ಸುಬೇದಾರ ಲಿಂಗಪ್ಪನೊಡನೆ ಸೇನೆಯನ್ನು ಮದಕರಿನಾಯಕನ ರಾಜ್ಯವನ್ನು ಧ್ವಂಸ ಗೈದನಲ್ಲದೆ ಸವಣೂರಿನ ನವಾಬನನ್ನು ಹರಪನಹಳ್ಳಿಯ ರಾಜನನ್ನು ಸೈನ್ಯದೊಂದಿಗೆ ಕರೆಸಿ ಸಬ್ಬುನೀಸಕೃಷ್ಣಪ್ಪನ ನೇತೃತ್ವದಲ್ಲಿ ಶಕ 1664-1688 ಅಥವಾ ಕ್ರಿ.ಶ. 1742-1766 ರಲ್ಲಿ ಮಾಯಕೊಂಡದಲ್ಲಿ ಮದಕರಿನಾಯಕನ ಮೇಲೆ ಯುದ್ಧ ನಡೆಸಿ ಬಸವಪ್ಪನಾಯಕನು ಮದಕರಿನಾಯಕನನ್ನು ಜಯಿಸಿದ್ದು ವಿಜಯೋತ್ಸವ ಸಂದರ್ಭದಲ್ಲಿ ಹರಪನಹಳ್ಳಿ ಪಾಳೆಯಗಾರನನ್ನು ಸನ್ಮಾನಿಸಿದನು.

ಹೀಗೆ ಕೆಳದಿಯನಾಯಕರು ಹರಪನಹಳ್ಳಿ ಪಾಳೆಯಗಾರರ ಮಿತ್ರರಾಗಿ ಸಹಾಯ ನೀಡಿ ಸಂರಕ್ಷಣೆಯನ್ನೊದಗಿಸುತ್ತಿದ್ದು ವಿಜಯನಗರದ 'ಶರಣಾಗತವಜ್ರಪಂಜರ' ನೀತಿಯನ್ನು ಅನುಸರಿಸಿದರೆಂದು ವಿದಿತವಾಗುತ್ತದೆ.

ಹರಪನಹಳ್ಳಿಯ ಪಾಳೆಯಗಾರರಿಗಷ್ಟೇ ಅಲ್ಲದೇ ರಾಯದುರ್ಗದ ಪಾಳೆಯಗಾರರಿಗೂ ಚಿತ್ರದುರ್ಗದ ನಾಯಕರ ವಿರುದ್ಧ ಕೆಳದಿಯನಾಯಕರು ತಮ್ಮ ಸ್ನೇಹಹಸ್ತ ಮತ್ತು ಸಕಾಲಿಕ ಸೈನ್ಯಸಹಾಯ ನೀಡಿ ರಕ್ಷಣೆಯನ್ನೊದಗಿಸಿದ್ದರು. ರಾಯದುರ್ಗ ಪ್ರಸ್ತುತ ಆಂಧ್ರಪ್ರದೇಶಕ್ಕೆ ಸೇರಿದ್ದರೂ 1956 ರಲ್ಲಿ ಭಾಷಾವಾರು ರಾಜ್ಯ ನಿರ್ಮಾಣಕ್ಕೆ ಮುಂಚೆ ಬಳ್ಳಾರಿ ಸಂಸ್ಥಾನಕ್ಕೆ ಸೇರಿದ್ದಿತು.

ಕೆಳದಿನೃಪವಿಜಯದ ದಶಮಾಶ್ವಾಸದಲ್ಲಿ ರಾಯದುರ್ಗದರಸರ ಪ್ರಸ್ತಾಪವಿದೆ.

ಕಂ|| ಮರಳ್ದಾ ಬರಮಣನಾಯಕ
ನುರುಚಿಗೆ ನಿತ್ತರಿಸಲಮ್ಮದಳವಳಿದುತರೀ
ಕೆರೆ ರಾಯದುರ್ಗದರಸರ್
ಮರೆವುಗೆ ಮನ್ನಿಸುತುಮಭಯಮಿತ್ತತಿ ದಯೆಯಿಂ || 26 ||

ವ|| ಇಂತಾಭಯಮಿತ್ತಪರಿಮಿತಸೇನಾಸಮೂಹಮಂ ತೆರಳ್ಚಿ ಕಳುಹಿ ಭರಮನಾಯಕರಿಗೆ ಸಹಾಯಮಾಗಿ ಬಂದ ದರದಾಖಿಲ್ಲಿಯಂ ಯುದ್ಧದೊಳ್ ಪಿಂದೆಣಿಸಿ ತರಿಕೆರೆಯ ಸಂಸ್ಥಾನಮಂ ಕ್ರಮದಿಂ ಮುನ್ನಾಳ್ದ ಕಾಪಿನಾಯಕ ಬುಳ್ಳನಾಯಕ ಕೆಂಗಾನಾಯಕರೆಡ್ಡಿ, ಹನುಮಪ್ಪನಾಯಕ, ಕುಂಟುಹನುಮಪ್ಪನಾಯಕ, ಇಮ್ಮಡಿ ಹನುಮಪ್ಪನಾಯಕನುಮಂ ರಾಯದುರ್ಗದ ಸಂಸ್ಥಾನಮಂ ಕ್ರಮದಿಂ ಮುನ್ನಳ್ದಾವರ ನಂತರಮಾ ಸಂಸ್ಥಾನಂ ವಿಸ್ಖಲಿತಮಾಗುತ್ತಿರಲ್ ಸಹಾಯುಮಾಡಿ ಬಂದದರರಸನುಮಂ ಇಂತುಭಯ

ಸಂಸ್ಥಾನಾಧಿಪತಿಗಳುಮಂ ಸ್ವಸ್ಥಾನಂಗಳೊಳ್ ನಿಲಿಸಿ ಪರಮಪ್ರಖ್ಯಾತಿಯಂ ಪಡೆದನಂ ಸೋಮಶೇಖರನಾಯಕಂ

ಕಂ॥ ಅರೆಯರ ಮೊಗಲರುಪಟಳ
ಕಾರದೆಯಳವಳಿದು ರಾಯದುರ್ಗದ ರಾಜಂ
ಹಾರಿ ಸಹಾಯದ ಸೈನ್ಯಂ
ದೋರಿಯೆ ಬಿನ್ನವಿಸಿ ಕಳುಹೆ ಕೇಳ್ದವನಾಗಳ್ ॥ 40 ॥

ಕಂ॥ ಹಾರೋವೇದಪನಂ ನ
ಲ್ಲೂರಾ ಲಕ್ಷ್ಮೀಪತಿ ಪ್ರಮುಖ ಸಚಿವರು ಮಂ
ಆರೈದವರಿರ್ವದೊಡನೆ
ವಾರಣತುರಗಾದಿ ಸೈನ್ಯಮಂ ತೆರಳಿಸುತುಂ ॥ 41 ॥

ಕಂ॥ ಸಮರ ಸಂಧಾನಮುಖದಿಂ
ದಮದರ್ಾರೆಯರಂ ತುರುಷ್ಕ ಸೈನ್ಯವ್ರಜಮಂ
ಕ್ರಮದೆ ಪಿಂದೆಗೆಸಿ ಧಾತ್ರೀ
ರಮಣರೊಳತ್ಯಂತ ಕೀರ್ತಿಯಂ ಮಿಗೆ ಪಡೆದಂ ॥ 42 ॥

ಚಿತ್ರದುರ್ಗದ ಭರಮಣ್ಣನಾಯಕನು ದರದಾಖಿಲ ಎಂಬ ಮುಸ್ಲಿಂ ನಾಯಕನ ಸೇನೆ ಹಾಗೂ ಮರಾಠಾ ಮತ್ತು ಮೊಂಗಲರ ಪಡೆಗಳನ್ನೂ ತನ್ನ ಮೂಲ ಸೇನಾಪಡೆಯೊಂದಿಗೆ ಸೇರಿಸಿಕೊಂಡು ರಾಯದುರ್ಗ ಮತ್ತು ತರೀಕೆರೆಯ ನಾಯಕರ ಮೇಲೆ ಯುದ್ಧ ಸಾರಿ ರಾಜ್ಯದ ಪ್ರದೇಶಗಳ ಮೇಲೆ ಆಕ್ರಮಣ ನಡೆಸಿದಾಗ ರಾಯದುರ್ಗದ ರಾಜನು ಸಹಾಯ ಕೇಳಿದಾಗ ಕೆಳದಿನಾಯಕನಾದ ಸೋಮಶೇಖರನಾಯಕನು ಹಾರೋವೇದಪ ಮತ್ತು ನಲ್ಲೂರಲಕ್ಷ್ಮೀಪತಿ ಮುಂತಾದ ಸಚಿವ ಪ್ರಮುಖರೊಡನೆ ಗಜ ಮತ್ತು ಅಶ್ವಸೇನೆಯನ್ನು ಕಳುಹಿಸಿ ಸಂಧಾನದಿಂದ ಮರಾಠಾ ಮತ್ತು ಮುಸ್ಲಿಂ ಸೇನೆಯನ್ನು ಹಿಂದಕ್ಕೆ ಕಳುಹಿಸಿ ತರೀಕೆರೆಯ ಮತ್ತು ರಾಯದುರ್ಗದ ಅರಸರ ರಾಜ್ಯಗಳನ್ನು ಅವರಿಗೇ ಉಳಿಸಿಕೊಟ್ಟು ಕೀರ್ತಿಭಾಜನನಾದನು.

ಇದೇ ರೀತಿ ಕೆಳದಿಯ ಸೋಮಶೇಖರನಾಯಕನು ಬೇಡ ಜನಾಂಗದವರ ಉಪಟಳದಿಂದ ಗುಡಿಕೋಟೆ ಪಾಳೆಯಗಾರನನ್ನು ಸೈನ್ಯ ಸಹಾಯ ನೀಡಿ ಕಾಪಾಡಿದುದನ್ನು ಕೆಳದಿ ನೃಪವಿಜಯದ ದಶಮಾಶ್ವಾಸದ ಈ ಕೆಳಗಿನ ಪದ್ಯದಿಂದ ತಿಳಿದುಬರುತ್ತದೆ :

ಕಂ॥ ಬಳಿಕ ಕಿರಾತಾದಿಗಳುಪ
ಟಳದಿಂದಳವಳಿದ ಗುಡಿಯ ಕೋಂಟೆಯಧೀಶಂ

ಗೊಲವಿಂ ಸಹಾಯಮಮಂ ರಚಿ
ಸಿ ಲಸದ್ವಿಖ್ಯಾತಿಯಾಂತನಾ ನೃಪವರ್ಯಂ ॥ 56 ॥

ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ, ರಾಯದುರ್ಗ ಮತ್ತು ಗುಡಿಕೋಟೆಯ ರಾಜರಿಗೆ ಆಪದ್ಬಾಂಧವ ಮಿತ್ರರೂ, ರಾಜ್ಯರಕ್ಷಕರೂ ಆಗಿದ್ದ ಕೆಳದಿಯ ನಾಯಕರು ಗುತ್ತಲ ಮತ್ತು ಜರಿಮಲೆ ನಾಯಕರ ಶತ್ರುಗಳಾಗಿದ್ದರು. ಅವರ ವಿರುದ್ಧ ಯುದ್ಧ ಹೂಡಿ ಅವರುಗಳ ಮದವನ್ನು ಅಡಗಿಸಿದರು.

ಕೆಳದಿ ನೃಪವಿಜಯದ ನವಮಾಶ್ವಾಸದಲ್ಲಿ
ಕಂ॥ ಮೆರೆವ ಮೊಳಕಾಲ ಬಾಸಿಗ
ದುರುಬಿರುದಂ ಧರಿಸಿ ಶೌರ್ಯದಿಂ ಮಾರ್ಮಲೆವಾ
ಜರಿಮಲೆಯರಸನುಮಂ ಸಂ
ಗರದೊಳ್ ಸೆರೆಪಿಡಿದು ಬಾಹುಬಲಮಂ ಮೆರೆದಳ್ ॥ 8 ॥

'ಮೊಳಕಾಲ ಬಾಸಿಗ' ಎಂಬ ಬಿರುದನ್ನು ಧರಿಸಿ ಶೌರ್ಯಾತಿಶಯದಹಂಕಾರದಿಂದ ಮೆರೆಯುತ್ತಿದ್ದ ಜರಿಮಲೆಯ ಅರಸನನ್ನು ಕೆಳದಿಯ ರಾಣಿ ಚೆನ್ನಮ್ಮಾಜಿ ಯುದ್ಧದಲ್ಲಿ ಸೆರೆಹಿಡಿದು ತನ್ನ ಬಾಹುಬಲವನ್ನು ತೋರಿದಳು ಎಂದು ಹೇಳಿದೆ.

ಕೆಳದಿನೃಪವಿಜಯದ ದಶಮಾಶ್ವಾಸ ಮತ್ತು ಏಕಾದಶಾಶ್ವಾಸಗಳಲ್ಲಿ ಉಲ್ಲೇಖ ಗೊಂಡ ಬಳ್ಳಾರಿ ಜಿಲ್ಲೆಯ ಇನ್ನೊಂದು ಪಾಳೆಯಗಾರ ವಂಶವೆಂದರೆ ಗುತ್ತಲದ ಪಾಳೆಯ ಗಾರರು.

ವ ॥ ..... ಬರಮನಾಯಕಂ ಗುತ್ತಳದ ಹನುಮಂತಗೌಡಂ ಹಿಂದೂರಾಯರ ವಂಶೋದ್ಭವನಾದ ಸಂಡೂರ ಘೋರ್ಪಡೆ ವಶಂದ ಸಿದ್ದೋಜಿ ಮುಂತಾದವರಂ ಸಹಾ ಯಕ್ಕೆ ಬರಿಸಿಕೊಂಡ್ಯೆದಿ ರಣರಂಗಕಿದಿರ್ಚಿ ನಿಲಲಾಹವದೊಳಾ ಹನುಮಂತ ಗೌಡನಂ ಮಸೆಗಾಣಿಸಿಯನಂತರಂ

ಕಂ ॥ ಅಳವಿಯೊಳಿದಿರ್ಚಿದರಿಗಳ
ತಲೆಗಳುಮಂ ಕೇಣಿಗೊಂಡು ರಾರಾಜಿಪ
ಗುತ್ತಳದಧಿನಾಥನ...
ಹೊಳೆಯ ಪರಿಸ್ತರಣಮಂ ಕರಂವಶಗೈದಂ

ಕೆಳದಿ ಬಸವಪ್ಪನಾಯಕನು ಗುತ್ತಳದ ಹನುಮಂತಗೌಡನು ಸಿದ್ದೋಜಿ ಮುಂತಾದವರೊಡಗೂಡಿ ದುರ್ಗದ ಬರಮನಾಯಕನ ನೇತೃತ್ವದಲ್ಲಿ ಯುದ್ಧ ನಡೆದಾಗ ರಣರಂಗದಲ್ಲಿ ಅವನನ್ನು ಸೋಲಿಸಿದನು. ಹಾಗೂ ಗುತ್ತಳದ ಪಾಳೆಯಗಾರನಿಂದ ಅವನ ಹೊಳೆಯ ಕೋಟೆಯನ್ನು ಕೈವಶಮಾಡಿಕೊಂಡನು.

ಈ ಪ್ರಕಾರವಾಗಿ ರಾಜಧರ್ಮದ ಶರಣಾಗತ ರಕ್ಷಣೆ ಮತ್ತು ದುಷ್ಟ ಶಿಕ್ಷಣೆ ಎಂಬ ಪರಂಪರೆಯನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದರು ಕೆಳದಿನಾಯಕರು ಎಂಬುದು ವಿದಿತನಾಗುತ್ತದೆ.

ಆಧಾರ ಗ್ರಂಥಗಳು

ಲಿಂಗಣ್ಣ ಕವಿಯ 'ಕೆಳದಿ ನೃಪವಿಜಯ' - ಅನುವಾದಕರು : ಕೆಳದಿ ಶ್ರೀ ಗುಂಡಾಜೋಯಿಸ್, ಕನ್ನಡ ಸಾಹಿತ್ಯ ಪರಿಷತ್ ಪ್ರಕಟಣೆ

ಆನುಷಂಗಿಕ ಗ್ರಂಥಗಳು

ಕನ್ನಡ ವಿಷಯ ವಿಶ್ವಕೋಶ,

ಬಳ್ಳಾರಿ ಜಿಲ್ಲಾ ಗೆಜೆಟಿಯರ್,

ಹರಪನಹಳ್ಳಿ ಪಾಳೆಯಗಾರರು- ಕುಂ.ಬಾ.ಸದಾಶಿವಪ್ಪ

ಕರ್ನಾಟಕದ ಕೈಫಿಯತ್ತುಗಳು

ಕೆಳದಿನೃಪವಿಜಯದಲ್ಲಿ ಹರಪನಹಳ್ಳಿ ಪಾಳೆಯಗಾರರು - ಲೇಖಕರು: ಡಾ. ವೆಂಕಟೇಶ್ ಜೋಯಿಸ್

ಗುಡಿಕೋಟೆ ಪಾಳೆಯಗಾರರು - ಲೇಖಕರು: ಡಾ. ಯೋಗೇಶ್ವರಪ್ಪ

ಇತಿಹಾಸ ದರ್ಶನ ಸಂ.15, ಸಂ.21

೩೪. ಗುಡೇಕೋಟೆ ಪಾಳೆಯಗಾರರು

ಡಾ. ವಿರೂಪಾಕ್ಷಿ ಪೂಜಾರಹಳ್ಳಿ

ವಿಜಯನಗರ ಸಾಮ್ರಾಜ್ಯದಲ್ಲಿ ಸಾಮಂತರಾಗಿದ್ದು, ಆನಂತರ ಏಳಿಗೆಯಾದ ಪಾಳೆಯಗಾರರ ಪಟ್ಟಿಯಲ್ಲಿ ಗುಡೇಕೋಟೆಯು ಒಂದು. ಇದು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಹೋಬಳಿ ಕೇಂದ್ರವಾಗಿದೆ. ಕೂಡ್ಲಿಗಿಯಿಂದ ಪೂರ್ವಕ್ಕೆ 28 ಕಿ.ಮೀ. ಬಳ್ಳಾರಿಯಿಂದ 45 ಕಿ.ಮೀ. ನೈಋತ್ಯಕ್ಕೆ ಗುಡೇಕೋಟೆ ಗ್ರಾಮವಿದೆ. ಈ ಪರಿಸರದಲ್ಲಿ ಆದಿಕಾಲದ ಮಾನವ ವಾಸಿಸಿದ ಕುರುಹುಗಳು, ಕಲ್ಲಾಸರೆ, ಬಯಲು ಬಂಡೆಯ ಮೇಲಿನ ರೇಖಾಚಿತ್ರ, ಮಾನವಾಕೃತಿ, ದೇವಾಲಯ, ವೀರಗಲ್ಲು, ಮಾಸ್ತಿಕಲ್ಲು, ಶಿಲ್ಪ, ಕೋಟೆ-ಕೊತ್ತಲು, ಕೆರೆ-ಕಟ್ಟೆ, ಬಾವಿ ಇತರ ಸ್ಮಾರಕಗಳು ಗುಡೇಕೋಟೆಯ ಚರಿತ್ರೆಗೆ ಸಾಕ್ಷಿಯಾಗಿ ನಿಂತಿವೆ. ರಾಶಿ ರಾಶಿ ಬೆಟ್ಟ-ಗುಡ್ಡಗಳ ತುದಿಯಲ್ಲಿ ಕೋಟೆಯನ್ನು ನಿರ್ಮಿಸಿದ ಕಾರಣ ಗುಡ್ಡದಕೋಟೆ>ಗುಡೇಕೋಟೆ (ಗುಡಿ+ಕೋಟೆ)ಯಾಗಿದೆ. ಈ ಬಗ್ಗೆ ಅನೇಕ ವಿದ್ವಾಂಸರು ವಿಧವಿಧವಾದ ಅಭಿಪ್ರಾಯಗಳನ್ನು ತಿಳಿಸಿರುತ್ತಾರೆ. ಪಾಳೆಯಗಾರರ ರಾಜಧಾನಿಯಾಗಿ ಗುಡೇಕೋಟೆ ಅನೇಕ ಐತಿಹಾಸಿಕ ತಿರುವುಗಳನ್ನು ಪಡೆದುಕೊಂಡಿದೆ. ಬಾಣಸುರ ಪಟ್ಟಣ, ಗಡಿಯಾಂಕ ಭೀಮನ ಪಟ್ಟಣಗಳೆಂದು ಪೌರಾಣಿಕವಾಗಿ ಕರೆಯಲಾಗಿದೆ. ರಾಜಕೀಯವಾಗಿ ಮೌರ್ಯರಿಂದ ಪಾಳೆಯಗಾರರು ಸೇರಿದಂತೆ ಬ್ರಿಟಿಷರ (ಮದ್ರಾಸ್ ಅಧಿಪತ್ಯ) ಆಳ್ವಿಕೆಯವರೆಗೆ ವೈವಿಧ್ಯಮಯವಾದ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ. ವಿಜಯನಗರ ಮತ್ತು ಪಾಳೆಯಗಾರರ ಆಳ್ವಿಕೆಯಲ್ಲಿ ಇಲ್ಲಿ ಸಾಕಷ್ಟು ಪರಿವರ್ತನೆ, ಪ್ರಗತಿಯಾದುದ್ದನ್ನು ಸ್ಮರಿಸಬಹುದು.

ನಾಡತಳವಾರರಾಗಿದ್ದ ಗುಡೇಕೋಟೆ ಪಾಳೆಯಗಾರರು ಬೇಡಬುಡಕಟ್ಟಿಗೆ ಸೇರಿದ್ದು, ಕನ್ನಡಿಗರಾಗಿದ್ದರು. ಮೂಲದಲ್ಲಿ ತೆಲುಗುನಾಡಿನಿಂದ ಬಂದರೂ ಆನಂತರ ಸ್ಥಳೀಯತೆಯನ್ನು ಮೆರೆದಿದ್ದರು. ಇವರು ಕುಮಾರರಾಮನ ವಂಶಸ್ಥರೆಂದು ಹೇಳಿಕೊಂಡ ಕಾರಣ ನೆರೆಯ ಆಂಧ್ರದಿಂದ ಬಂದವರೆಂಬ ವಾದವನ್ನು ತಳ್ಳಿ ಹಾಕಬಹುದು. ಕನ್ನಡನಾಡಿನಲ್ಲಿ ಪ್ರಾಚೀನಕಾಲದಿಂದಲೂ ನಾಡತಳವಾರರು ಇದ್ದರು. (ಶಾತವಾಹನ, ಕದಂಬ, ಗಂಗ, ರಾಷ್ಟ್ರಕೂಟ, ವಿಜಯನಗರ) ಮೂಲತಃ ತಳವಾರರಾಗಿದ್ದು ತಮ್ಮ ಅನುಪಮ ಸೇವೆಯಿಂದ ಪಾಳೆಯಗಾರರಾಗಿ ಏಳಿಗೆಯಾದರು. ಇವರ ಮೂಲಪುರುಷ ಗಡಿಯಾಂಕ ಭೀಮ, ಬೊಮ್ಮಂತರಾಜ ಮತ್ತು ಗಂಡಳನಾಯಕ ಎಂದು ತಿಳಿದುಬರುತ್ತದೆ.

ವಿಜಯನಗರದ ಖ್ಯಾತ ಅರಸ ಕೃಷ್ಣದೇವರಾಯನ ಪ್ರೋತ್ಸಾಹ ಮತ್ತು ಆಶೀರ್ವಾದದಿಂದ ಗುಡೇಕೋಟೆ ಪಾಳೆಯಪಟ್ಟಿನ ನಿರ್ಮಾಣಕ್ಕೆ ನಾಂದಿ ಹಾಕಲಾಯಿತು. ಈ ನಾಯಕ (ಮಳೆಲಾರು)ಚಿನ್ನತಿರುಮಲನು ಗುಡೇಕೋಟೆಗೆ ಬಂದಿದ್ದನು. ಅರಸರು ಆಳ್ವಿಕೆ ನಡೆಸಿದ ವಿವರಗಳು ಈ ಕೆಳಗಿನಂತೆ ತಿಳಿದುಬರುತ್ತವೆ. ದೊರೆತ ಕೆಲವೇ ದಾಖಲೆಗಳ ಆಧಾರದಂತೆ

ಗಂಡಳನಾಯಕ	1506-1521 (15)
ಪೆನ್ನನಾಯಕ	1521-1541 (32)
ಪಾಪಳನಾಯಕ	1541-1558(17)
ಕಮ್ಮಯ್ಯರಾಜ	1558-1602 (44)
ರಾಮಪ್ಪನಾಯಕ	1602-1637 (35)
ಹಿರೆಬೊಮ್ಮಂತರಾಜ	1637-1676 (39)
ಚಿನ್ನರಾಜ	12 ವರ್ಷ ಆಳಿದ
ಜಟಿಂಗರಾಜ	1681-1737 (46)
ರಾಮಪ್ಪನಾಯಕ	1737-1742 (5)
ಶಿವಪ್ಪರಾಜ	1742-1752
ಚಿನ್ನಯರಾಜ	1752 (12)
ಇಮ್ಮಡಿ ರಾಜಪ್ಪನಾಯಕ	1790
ಜಟಂಗಿರಾಜ	1859-60
ಬೊಮ್ಮಂತರಾಜ	1860
ಪಂಪಾಪತಿ ರಾಜು	1869
ವೆಂಕಮ್ಮನಾಗತಿ	1889-1890
ಕೇಶವಮ್ಮ ನಾಗತಿ	1929
ಶಿವಪ್ಪರಾಜ	1930 (ತಾತಯ್ಯರಾಜು)
ಜಟಿಂಗರಾಜ	1940
ಕೃಷ್ಣವರ್ಮರಾಜ	1940-2005

ಹೀಗೆ ಇನ್ನು ಮೊದಲಾದ ಅರಸರು ಆಳ್ವಿಕೆ ನಡೆಸಿದ್ದಾರೆ. ಆಕರಗಳ ಕೊರತೆಯಿಂದ ಇದರ ಚರಿತ್ರೆ ಮಸಕುಮಸಕಾಗಿದೆ.

ಗಂಡಳನಾಯಕ

ಪೌರಾಣಿಕವಾಗಿ ಆಳ್ವಿಕೆ ನಡೆಸಿದ ಗುಡೇಕೋಟೆಯ ಗಡಿಯಾಂಕಭೀಮನ ನಂತರ ಚಾರಿತ್ರಿಕವಾಗಿ ರಾಜ್ಯ ಸ್ಥಾಪನೆ ಮಾಡಿದ ಕೀರ್ತಿ ಗಂಡಳನಾಯಕನಿಗೆ ಸಲ್ಲುವುದು. ಇವನು ಕ್ರಿ.ಶ. 1506ನೇ ಪ್ರಭವನಾಯ ಸಂವತ್ಸರ ಕಾರ್ತಿಕ ಶುದ್ಧ ದ್ವಾದಶಿಯಂದು ರಾಜ್ಯ ಸ್ಥಾಪಿಸಿದನು. ಕೆಲವು ದಾಖಲೆಗಳಂತೆ ಇವನು 1506 ರಿಂದ 1521 ರವರೆಗೆ ಆಳ್ವಿಕೆ ನಡೆಸುತ್ತಾನೆ. ಗಂಡಳನಾಯಕನ ಕಾಲದಲ್ಲಿ ಲಿಂಗಮ್ಮನಹಳ್ಳಿ, ಜಾಜರಕಲ್ಲು, ಮಡೆನಹಳ್ಳಿ, ಲಕ್ಷ್ಮೀಪುರ, ಹಿರೇಹಾಳು ಮೊದಲಾದ ಗ್ರಾಮಗಳು ಗುಡೇಕೋಟೆ ಪಾಳೆಯ ಪಟ್ಟಿಗೆ ಸೇರಿದ್ದವು. ಇವನು ಕೃಷ್ಣದೇವರಾಯನ ಕಾಲದಲ್ಲಿ ಸೇನಾಧಿಕಾರಿ ಯಾಗಿದ್ದನಂತೆ. ಗುಡೇಕೋಟೆಯಲ್ಲಿ ಕೋಟೆ, ದೇವಾಲಯ ಇತರ ಸ್ಮಾರಕಗಳನ್ನು ಇವನು ನಿರ್ಮಿಸಿದ್ದು ಸಾಹಸವೇ ಸರಿ. ಗಂಡಳನಾಯಕನ ತರುವಾಯ ಪೆನ್ನಪ್ಪನಾಯಕ (1521-41), ಪಾಪಳನಾಯಕ (1541-58), ಕೆಮ್ಮಯ್ಯರಾಜ (1558-1602), ರಾಮಪ್ಪನಾಯಕ (1602-37) ಮತ್ತು ಇತರರು ಆಳ್ವಿಕೆ ನಡೆಸಿರುತ್ತಾರೆ. ತಿಪ್ಪನಾಯಕನ ಆಳ್ವಿಕೆಗಿಂತ ಮೊದಲು ಸುಮಾರು 93 ವರ್ಷಗಳ ಕಾಲ ಅನೇಕ ಅರಸರು ಆಳಿದ್ದಾರೆ. ತಿಮ್ಮಪ್ಪ ನಾಯಕ, ಗುಡೇಕೋಟೆ ಪಾಳೆಯಪಟ್ಟಿಗೆ ಭದ್ರ ಬುನಾದಿ ಹಾಕಿದ್ದು ಸ್ಪಷ್ಟ. ಇವನ ಮೇಲೆ ಆದಿಲ್‌ಷಾಹಿಯ ಸಿದ್ದಿ ಮಸೂದ್‌ಖಾನ್‌ನು ಗುಡೇಕೋಟೆಯ ಮೇಲೆ ಮುತ್ತಿಗೆ ಹಾಕಿ ಹಲವು ವರ್ಷಗಳ ಕಾಲ ಹೋರಾಡಿ ಕೊನೆಗೆ ಸಂಧಾನವಾಗಿ ತಿಮ್ಮಪ್ಪ ನಾಯಕನಿಗೆ 'ರಾಜ' ಎಂಬ ಬಿರುದು ನೀಡುತ್ತಾನೆ. ಅಂದಿನಿಂದ ಈ ದೊರೆಗಳು ರಾಜ ಎಂದು ಕರೆದುಕೊಂಡರು. ವಿಜಯನಗರದ ತರುವಾಯವು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಗುಡೇಕೋಟೆಯವರು ಬಿಜಾಪುರದ ಆದಿಲ್‌ಷಾಹಿಗಳಿಗೆ ಋಣಿಯಾಗಿದ್ದರು.

ಹಿರೇಬೊಮ್ಮಂತರಾಜ

ಮೂಲತಃ ಈತ ನಾಡತಳವಾರನಾಗಿದ್ದನು. ಇವನ ತಂದೆ ರಾಮಪ್ಪನಾಯಕ ಕ್ರಿ.ಶ. 1637-76 ರವರೆಗೆ ಆಳ್ವಿಕೆ ಮಾಡಿದ ಬೊಮ್ಮಂತರಾಜ ಗುಡೇಕೋಟೆಯ ಚರಿತ್ರೆಯಲ್ಲಿ ಮರೆಯಲಾಗದ ಅರಸ. ಜನಪ್ರಿಯ ಆಡಲಿತ ನಡೆಸಿದ ಇವನು ರಾಜ್ಯವನ್ನು ವಿಸ್ತರಿಸು ವಲ್ಲಿ ಶ್ರಮಿಸಿದನು. ಗುಡೇಕೋಟೆಯಲ್ಲಿ ಕೋಟೆ, ಕಣಜ, ಕೊತ್ತಲು, ದೇವಾಲಯ, ಕೆರೆ-ಕಟ್ಟೆ, ಬಾವಿಗಳನ್ನು ನಿರ್ಮಿಸಿದ ಕೀರ್ತಿ ಇವನಿಗೆ ಸಲ್ಲುವುದು. ಮೊಳಕಾಲ್ಮೂರು, ಚಳ್ಳಕೆರೆ, ಜಗಳೂರು, ಕೂಡ್ಲಿಗಿ, ಸಂಡೂರು ಇತರ ತಾಲೂಕುಗಳ ಕೆಲವು ಗ್ರಾಮಗಳು ಸೇರಿದ್ದವು. ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ರಾಯದುರ್ಗ ತಾಲೂಕಿನ ಕೆಲವು ಹಳ್ಳಿಗಳು, ಗೊಲ್ಲಹಳ್ಳಿ, ಗಲಗಲ್ಲು ಇವನ ರಾಜ್ಯಕ್ಕೆ ಸೇರಿದ್ದವು. ರಾಯದುರ್ಗದ ಪಾಳೆಯಗಾರಿಕೆಯನ್ನು ತನ್ನ ತಮ್ಮನಾದ ಯರಿಬೊಮ್ಮಳನಾಯಕನಿಗೆ ಕೊಟ್ಟಾಗ ಅಲ್ಲಿನ ಪರಿಸ್ಥಿತಿ ಬದಲಾಯಿತು.

ಕರ್ನಾಟಕದ ಕೈಫಿಯತ್ತುಗಳಲ್ಲಿ ಕ್ರಿ.ಶ. 1632 (1534) ನಂದನ ಸಂವತ್ಸರದಲ್ಲಿ, ಗುಡೇಕೋಟೆ, ಸೊಂಡೂರು, ಬಾಂಡ್ರಾಮಿ, ವಡ್ಡು, ದರೋಜಿ, ಉಜ್ಜೀನಿ, ಜರಿಯಲೆ, ಕುಡತಿನಿಗಳನ್ನು ಬೊಮ್ಮಂತ್ರಾಜ ಸ್ಥಾಪಿಸಿ ತನ್ನ ವಾರ್ಧಿಕ್ಯಪ್ರಾಪ್ತಿಯಾದಾಗ ತನ್ನ ಮಕ್ಕಳಿಗೆ ಬಿಟ್ಟುಕೊಟ್ಟಿದ್ದನು. ಹಿರೇಬೊಮ್ಮಂತರಾಜ ಮೇಲಿನ ಗ್ರಾಮಗಳ ಶಿಥಿಲವಾದ ಕೋಟೆ-ಕೊತ್ತಲುಗಳನ್ನು ಕಟ್ಟಿಸಿ ಜಹಗೀರು ಪಡೆದು ನಾಡತಳವಾರಿಕೆ, ಕಾವಲಿ ಮಾಡಿಕೊಂಡಿದ್ದನು. ಹಿರೇಬೊಮ್ಮಂತರಾಜ -ಕುಡತಿನಿ, ಬಿಸಾಳರಾಜ-ಸೊಂಡೂರು, ರಾಜಪ್ಪನಾಯಕ-ಗುಡೇಕೋಟೆ ಮತ್ತು ಚೆನ್ನರಾಜ ವಡ್ಡು-ದರೋಜಿಗಳನ್ನು ಆಳುತ್ತಿದ್ದರು. ಇವುಗಳ ಜೊತೆಗೆ ನಾಗಲಾಪುರ, ಬಸಾಪುರ ಮತ್ತು ಚೋರನೂರು ಪ್ರದೇಶಗಳು ಸೇರಿದ್ದವು.

ಗುಡೇಕೋಟೆಯಲ್ಲಿ ರಾಜಧಾನಿ ಮಾಡಿಕೊಂಡು ಇಲ್ಲಿನ ಸ್ಮಾರಕಗಳನ್ನು ನಿರ್ಮಿಸಿದ ಕೀರ್ತಿ ಬೊಮ್ಮಂತರಾಜನಿಗೆ ಸಲ್ಲುವುದು. ಬೊಮ್ಮಂತರಾಜ ಧಾರ್ಮಿಕ ಕ್ಷೇತ್ರಕ್ಕೆ ಉದಾರ ಪ್ರೋತ್ಸಾಹಕೊಟ್ಟ ಅರಸ. ಶ್ರೀ ಜಗದ್ಗುರು ಕೊಟ್ಟೂರಸ್ವಾಮಿ ಗುರು ಪರಂಪರೆ ಕೃತಿಯಲ್ಲಿ[1] ಗುಡೇಕೋಟೆಯಲ್ಲಿ ಶ್ರೀ ಕೊಟ್ಟೂರು ಸ್ವಾಮಿಗಳಿದ್ದ ಉಲ್ಲೇಖ ವಿದೆ. ಈ ಗುರುಪರಂಪರೆಗೆ ಸೇರಿದ ಗುಡೇಕೋಟೆ ಮಠದ ಕೊಟ್ಟೂರಯ್ಯನು ಇಲ್ಲಿದ್ದ. 'ಗುಡೇ ಕೋಟೆಯಲ್ಲಿರೋ ಬಳ್ಳಾರಿ ಚರದ ಮಠಕ್ಕೆ ಉಮ್ಮಳಿ (ಉಂಬಳಿ) ತುನಸಿ ಗೇರೆವೆಂಬೊ ಗ್ರಾಮ ಬೆರಿಮ್ಮಂತರಾಜ ಪಾರ್ವತ್ತೆದಾರ ವೇಣಿವೀರಪ್ಪನವರು ಕೊಟ್ಟದ್ದು ಯುದ್ಧಕ್ಕೆ ಅನುಭವಿಕರು ಚೆನ್ನಬಸವದೇವರು' ಎಂದು ತಿಳಿದು ಬರುವುದು (ಪುಟ 19). ಇದೇ ಕೃತಿಯಲ್ಲಿ ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರುಷಂಗಳು 647ನೆಯ ವಿಶ್ವಾವಸು ಸಂವತ್ಸರದ ಮಾಘ ಶು. 5 ಯಲ್ಲು ಶ್ರೀ ಮಹಾ ರಾಜಾಧಿರಾಜ ಗುಡೇಕೋಟೆ ಹಿರೇಬೊಮ್ಮತ್ತರಾಜರು ಕುಡುತಿನಿ ವಿರಕ್ತ ಮಠಕ್ಕೆ ಬರೆಸಿ ಕೊಟ್ಟ.... ಇತ್ಯಾದಿ ವಿವರಗಳಿವೆ.

ಈ ಮೇಲಿನ ಕೃತಿಯಲ್ಲಿ ಗುಡೇಕೋಟೆ ಪಾಳೆಯಗಾರರ ಬಗ್ಗೆ ಈ ರೀತಿ ಉಲ್ಲೇಖ ವಿದೆ: 'ಇವರು ಬಳ್ಳಾರಿ ಜಿಲ್ಲೆ, ಕೂಡ್ಲಿಗಿ ತಾಲೂಕಿನಿಂದ 28 ಕಿ.ಮೀ. ದೂರದಲ್ಲಿರುವ ಗುಡೇಕೋಟೆಯಲ್ಲಿ ವಿಜಯನಗರ ಅರಸರಿಂದ ಪಾಳೆಯಪಟ್ಟು ಪಡೆದು ಆಳುತ್ತಿದ್ದರು. ಇವರು ಬೇಡ ಜಾತಿಯವರು ಚಿತ್ರದುರ್ಗ ನಾಯಕರ ಬೀಗರು. ಇವರು ಒಂದು ಕಾಲದಲ್ಲಿ ವಿಜಯನಗರ ಸಾಮ್ರಾಟರಿಗೆ ಮಾಂಡಲಿಕರಾಗಿ ಶ್ರೀ ಮನ್ಮಹಾನಾಯಕಾಚಾರ್ಯ 'ಇಮ್ಮಡಿ ಗಡಿಯಾಂಕಭೀಮ' ಎಂಬ ಬಿರುದು ಪಡೆ ದಿದ್ದರು. (ಅವನು ಕ್ರಿ.ಶ. 1750 ರಲ್ಲಿ ಕೂಡ್ಲಿಯ ಶ್ರೀ ಶಂಕರಭಾರತಿಸ್ವಾಮಿಗಳವರಿಗೆ ತನ್ನ ಪಟ್ಟದ ಗ್ರಾಮದ ಹುರಳೇ ಹಾಳ ಕಸಬೆ ಒಳಗುಣ ಕೊಂಬೇಹಳ್ಳಿಯನ್ನು ದಾನ ಮಾಡಿದನು.) ಗುಡೇಕೋಟೆಯ ದುರ್ಗ ಅಜೇಯುವೆನಿಸಿತ್ತು. ಇವರ ವಂಶಜನಾದ ಇಮ್ಮಡಿನಾಯಕರ ಮೊಮ್ಮಗ ಇಮ್ಮಡಿ ಬೊಪ್ಪಣ್ಣನಾಯಕನ ಮಗ ಮುಮ್ಮಡಿ ಬೊಪ್ಪಣ್ಣ ನಾಯಕ ಬಹಳ

ಧರ್ಮಾತ್ಮನೆನಿಸಿದ್ದ. ಅವನನ್ನೇ ಹಿರೇಬೊಮ್ಮತ್ತ ರಾಜನೆಂದೂ ಕರೆಯುತ್ತಿದ್ದರು. ಅವನು ಕ್ರಿ.ಶ. 1755 ರಲ್ಲಿ ಶ್ರೀ ಮರಿಕೊಟ್ಟೂರು ಸ್ವಾಮಿಗಳವರಿಗೆ ಕುಡುತಿನಿ ಮಠದ ದಾಸೋಹಕ್ಕೆಂದು ದತ್ತಿಬಿಟ್ಟ ಉಲ್ಲೇಖವಿದೆ. (ಪು: x) ಗುಡೇಕೋಟೆಯ ರಾಜ ಹಿರೆಬೊಮ್ಮಂತರಾಜನು ಕುಡುತಿನಿಯ ವಿರಕ್ತ ಮಠಕ್ಕೆ ಶಿಷ್ಯನಾಗಿ ಅನೇಕ ದತ್ತಿ-ದಾನಗಳನ್ನು ಕೊಟ್ಟಿದ್ದ. ಅಲ್ಲಿನ ಶ್ರೀ ಮರಿತೋಂಟದ ಸ್ವಾಮಿ ಗಳವರಿಗೆ ಕ್ರಿ.ಶ. 1726ರಲ್ಲಿ ಮಹಾರಾಜನಾದ ಹಿರಬೊಮ್ಮಂತರಾಜನು 'ನಿಮ್ಮ ಶಿಷ್ಯ ಪ್ರಶಿಷ್ಯಪರ್ಯಾಯ ಅನುಭವಿಸಿಕೊಂಡು ಈ ಗ್ರಾಮದಲ್ಲಿಯ ಪಸಿಗಿ-ಪಳಗಿ, ಕೆರೆ-ನೆರೆ, ಪ್ರಸ್ತ-ಪ್ರಯೋಜನ ಬಗ್ಗೆ ವಿವರಗಳಿವೆ. ಹೀಗೆ ಬೊಮ್ಮಂತರಾಜನ ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಧಾರ್ಮಿಕ ಕ್ಷೇತ್ರಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟಿದ್ದನು. ಮೌಖಿಕ ಸಾಹಿತ್ಯದಲ್ಲಿ ಬೊಮ್ಮಂತರಾಜನ ಬಗೆಗೆ ಕಥನಗಳು ಪ್ರಚಲಿತ ದಲ್ಲಿವೆ.

ಬೊಮ್ಮಂತರಾಜನ ನಂತರ ಮಗ ಚಿನ್ನಯರಾಜ ಆಳ್ವಿಕೆ ನಡೆಸುತ್ತಾನೆ. ರಾಜ್ಯದ ಸ್ಥಿತಿ-ಗತಿ ಸುಧಾರಿಸಿರಲಿಲ್ಲ. ಜೊತೆಗೆ ನೆರೆಹೊರೆಯರ ಉಪಟಳವನ್ನು ಈತ ಹತ್ತಿಕ್ಕು ವಲ್ಲಿ ಶ್ರಮಿಸತೊಡಗಿದ. ಇವನು ಆದವಾನಿ ನವಾಬನಿಗೆ ಪೊಗದಿ ಕೊಡುವುದ ರೊಂದಿಗೆ 12 ವರ್ಷ ಆಳ್ವಿಕೆ ನಡೆಸಿದ.

ಜಟಿಂಗರಾಜ

ಗುಡೇಕೋಟೆ ಪಾಳೆಯಗಾರರಲ್ಲಿ ಪ್ರಖ್ಯಾತಿ ಪಡೆದವನು ಜಟಿಂಗರಾಜ. ಇವನ ತಂದೆ ಚಿನ್ನಯರಾಜ. ಕ್ರಿ.ಶ. 1687-1737 ರವರೆಗೆ ಇವನ ಆಳ್ವಿಕೆಯಿತ್ತು. ಗುಡೇಕೋಟೆ ಪರಿಸರದಲ್ಲಿ ಕೋಟೆ, ದೇವಾಲಯ ಕಟ್ಟಿಸಲು ಮುಂದಾಗುತ್ತಾನೆ. ಅಂದು ಸಂಡೂರು, ಗುಡೇಕೋಟೆ, ಬಾಂಡ್ರಾವಿ, ಹಿರೇಹಾಳು ಇತರ ಪ್ರಮುಖ ಪ್ರದೇಶಗಳು ಇವನಿಗೆ ಸೇರಿ ದ್ದವು. ಇವನು ಸಹ ಆದೋನಿ ನವಾಬರಿಗೆ ಪೊಗದಿಕೊಡುವುದನ್ನು ನಿಲ್ಲಿಸಿರಲಿಲ್ಲ. ಚಿತ್ರದುರ್ಗದ ಬಿಚ್ಚುಗತ್ತಿ ಭರಮಣ್ಣನಾಯಕನ ಸಹಾಯ ಪಡೆದು ಈತ ರಾಜ್ಯವನ್ನು ವಿಸ್ತರಿಸಿದ್ದನು. 1690ರಲ್ಲಿ ಚಿತ್ರದುರ್ಗ ಮತ್ತು ಹರಪನಹಳ್ಳಿ ಅರಸರಿಗೆ ಅಣಜಿಯಲ್ಲಿ ಯುದ್ಧ ನಡೆದಾಗ ಗುಡೇಕೋಟೆಯ ಜಟಿಂಗರಾಜ, ಅನಂತಪುರ ಇತರ ಸಂಸ್ಥಾನಿಕರು ಚಿತ್ರದುರ್ಗದವರ ಪರವಾಗಿದ್ದರು. (ಕ್ರಮೇಣ ಈ ಸಂಬಂಧ ಮುರಿದುಬಿತ್ತು). 1698 ರಲ್ಲಿ ಗುಡೇಕೋಟೆಗೆ ಸೇರಿದ ನಾಗಸಮುದ್ರವನ್ನು ಭರಮಣ್ಣನಾಯಕ ಮುತ್ತಿಗೆ ಹಾಕಿ ಪಡೆದುಕೊಂಡ. ಈ ಸ್ಮರಣೆಗಾಗಿ ಗುಡೇಕೋಟೆಯ ರಾಜಕುಮಾರಿ ಬಂಗಾರವ್ವ ನಾಗತಿ ಯನ್ನು ವಿವಾಹವಾದ. ರಾಯದುರ್ಗ, ನಾಯಕನಹಳ್ಳಿ, ಚಿತ್ರದುರ್ಗ ಮೊದಲಾದವರಿಗೆ ಬೆಂಬಲ ನೀಡಿದ್ದು ಇವರ ಉದಾರತೆಗೆ ಸಾಕ್ಷಿ. ಚಿತ್ರದುರ್ಗದ ಅರಸ ಹಿರೇಮದಕರಿ ನಾಯಕ ಗುಡೇಕೋಟೆ ಪಾಳೆಯಗಾರರ ಕೆಲವು ಗ್ರಾಮಗಳನ್ನು ಪಡೆದು ಪದ್ಮಮ್ಮ ನಾಗತಿಯನ್ನು ಮದುವೆಯಾದನು. (ಇವನ ಬಗ್ಗೆ ಕೋಲುಪದ ಪ್ರಚಲಿತವಿದೆ).

ಜಟಿಂಗರಾಜನ ಸಹೋದರಿ ಬೊಮ್ಮಕ್ಕಳನ್ನು ಹಿರೇಮದಕರಿನಾಯಕ, ಹಿರೇ ಮದಕರಿ ನಾಯಕನ ಸಹೋದರಿಯನ್ನು ಜಟಿಂಗರಾಜು ಪರಸ್ಪರ ಮದುವೆ ಆಗುತ್ತಾರೆ. ಜಟಿಂಗ ರಾಜನ ಕಾಲದಲ್ಲಿ ವೈವಾಹಿಕ ಸಂಬಂಧವು ಊರುನಾಯಕ-ಮ್ಯಾಸನಾಯಕ ಎಂಬ ಭೇದಕ್ಕೆ ಕಾರಣವಾಯಿತು. ಕ್ರಮೇಣ ಜಟಿಂಗರಾಜ ಇವರನ್ನು ಬಿಟ್ಟು ಕನಕಗಿರಿ ಸಂಸ್ಥಾನದ ನಾಲ್ಕು ಜನ ನಾಗತಿಯರನ್ನು ಮದುವೆಯಾದ. ಜಟಿಂಗರಾಜನ ಬರ್ಬರ ಹಾಗೂ ದುಷ್ಟ ಆಡಳಿತದಿಂದ ಕುಟುಂಬದಲ್ಲಿ ಅಂತಃಕಲಹ ನಡೆದು ದಿಕ್ಕುಪಾಲಾದ. ಚಿತ್ರದುರ್ಗದಲ್ಲಿ ಇಮ್ಮಡಿ ಕಸ್ತೂರಿರಂಗಪ್ಪನಾಯಕ ಅಧಿಕಾರಕ್ಕೆ ಬಂದ. ಆಗಲೂ ಗುಡೇಕೋಟೆಯವರು ನಿಷ್ಠೆ-ಪ್ರಾಮಾಣಿಕತೆ ತೋರಿಸಿದರು.

ಜಟಿಂಗರಾಜನ ತರುವಾಯ ರಾಮಪ್ಪನಾಯಕ (1737-42) ಆಳ್ವಿಕೆ ನಡೆಸುತ್ತಾನೆ. ತಕ್ಕಮಟ್ಟಿಗೆ ಗುಡೇಕೋಟೆಯಲ್ಲಿ ಕಂದಕ, ಕಣಜ, ದೇವಾಲಯ, ಕೋಟೆ ನಿರ್ಮಾಣಕ್ಕೆ ಈತನು ಪ್ರೋತ್ಸಾಹಿಸಿದ್ದನು. ಗುತ್ತಿಯ ಮುರಾರಿರಾಯ ಗುಡೇಕೋಟೆ ಮೇಲೆ ಮುತ್ತಿ ಆಕ್ರಮಣ ಮಾಡಿ ಅಲ್ಲಿದ್ದ ರಾಮಪ್ಪನಾಯಕ- ಆತನ ಕುಟುಂಬದಲ್ಲಿ ಹೊರ ಹಾಕಿದಾಗ ರಾಮಪ್ಪ ತಂದೆ ಜಟಿಂಗರಾಜನೊಂದಿಗೆ ಕನಕಗಿರಿಗೆ ಹೋಗಿ ನೆಲಸಿದ.

ಇಮ್ಮಡಿ ರಾಜಪ್ಪನಾಯಕ (1790) ಗುಡೇಕೋಟೆಯನ್ನಾಳುತ್ತಾನೆ. ಕೈಫಿಯತ್ತು ಗಳಲ್ಲಿ ಈ ಬಗ್ಗೆ ವಿಪುಲ ಉಲ್ಲೇಖಗಳಿವೆ. ಖ್ಯಾತ ಅರಸರಲ್ಲಿ ಒಬ್ಬನಾದ ರಾಜಪ್ಪ ನಾಯಕ ರಾಜ್ಯದ ಗಡಿಯನ್ನು ವಿಸ್ತರಿಸಿ, ಹೊರಗಿನ ಪ್ರಜೆಗಳನ್ನು ಆಹ್ವಾನಿಸಿ ಅವರ ಯೋಗಕ್ಷೇಮ ವಿಚಾರಿಸುತ್ತಾನೆ. ಗುಡೇಕೋಟೆ, ಸಂಡೂರು ಇತರ ಪ್ರದೇಶಗಳಲ್ಲಿ ಗಡಿ ವಿಸ್ತರಿಸಿ, ರಾಜ್ಯದ ಸಂಪತ್ತು, ಅಭಿವೃದ್ಧಿ ಹೆಚ್ಚಿಸಲು ಕಾರಣನಾದ. ಕ್ರಿ.ಶ. 1690ರ ಮಾರ್ಚ್ 31ರ ಚೋರನೂರ ಶಾಸನದಲ್ಲಿ (ಹನುಮಾನ ದೇವಸ್ಥಾನ) `ಗುಡೇಕೋಟೆ ಮತ್ತು ಸೊಂಡೂರಿನ ಇಮ್ಮಡಿ ರಾಜಪ್ಪನಾಯಕನು ಹೊರಮಲೆ ಸೀಮೆಯ ಜನರಿಗೆ ಒಂದು ಪ್ರಕಟಣೆಯನ್ನು ಹೊರಡಿಸಿ ಅದರ ಪ್ರಕಾರ ಗುಡೇಕೋಟೆಯ ಆಡಳಿತದ ಸಮಯದಲ್ಲಿದ್ದಂತೆ ನೋಡಿಕೊಳ್ಳುವುದಾಗಿ ಆಶ್ವಾಸನೆ ನೀಡಿದ್ದನ್ನು ತಿಳಿಸುತ್ತದೆ. ಇದೇ ಕಾಲಕ್ಕೆ ಸೇರಿದ ವಿರಕ್ತ ಮಠದ ಮೊಗಸಾಲೆಯಲ್ಲಿನ ಶಾಸನವು 'ಗುಡೇಕೋಟೆ ಮತ್ತು ಸೊಂಡೂರಿನ ರಾಜಶ್ರೀ ರಾಜಪ್ಪನಾಯಕನ (ಹೊರಮಲೆ ಸೀಮೆಯ ಜನರಿಗೆ ಒಂದು ಪ್ರಕಟಣೆಯನ್ನು ಹೊರಡಿಸಿ ಅದರ ಪ್ರಕಾರ ಗುಡೇಕೋಟೆಯ ಆಡಳಿತದ ಸಮಯ ದಲ್ಲಿದ್ದಂತೆ ನೋಡಿಕೊಳ್ಳುವುದಾಗಿ ಆಶ್ವಾಸನೆ ನೀಡಿದ್ದನ್ನು ತಿಳಿಸುತ್ತದೆ. ಮುಂದುವರೆದು ಆಜ್ಞೆಯ ಮೇರೆಗೆ ಬಮ್ಮಿನಾಯಕನು ಹೊರಮಲೆ-ಸೀಮೆಯ ಜನರಿಗೆ ಒಂದು ಕೌಲು ನೀಡಿ ದೇಶದ ಆ ಭಾಗದಲ್ಲಿ ಹೊಸದಾಗಿ ಹುಟ್ಟಿದ ಮಕ್ಕಳ (ಬಾಲತೆರಿಗೆ) ಮತ್ತು ಸತ್ತವರ ಮೇಲೆ ತೆರಿಗೆ (ಮೃತನ-ಗಾಣಿಕೆ) ವಿಧಿಸಬಾರದೆಂದು ತಿಳಿಸುತ್ತಾನೆ. ಇದೇ ಕಾಲಕ್ಕೆ ಸೇರಿದ ನಾರಾಯಣದೇವರ ಕೆರೆ ಶಾಸನ (252) ರಲ್ಲಿ' ಲಕ್ಷ್ಮೀನಾರಾಯಣ

ದೇವಸ್ಥಾನದ ಹನುಮಂತರಾಯನ ಗುಡಿ ಕ್ರಿ.ಶ. 1623 ಆಗಸ್ಟ್ 29 ಶುಕ್ರವಾರ ಗುಡಿಯ ಕೋಟೆ ಸ್ಥಳದ ಸೇನಬೋವ ತಿಮ್ಮರಸಯನ ಮಗ ನರಸಯ್ಯನು ದೀಪಸ್ತಂಭವನ್ನು ದಾನ ಮಾಡಿದ ವಿವರವಿದೆ. ಅಂದರೆ ಗುಡೇಕೋಟೆ ಪಾಳೆಯಗಾರರ ಆಳ್ವಿಕೆಯಲ್ಲಿ ಶಾನುಭೋಗರು ಇದ್ದರೆಂದು ತಿಳಿಯುವುದು [ಶಿವಪ್ಪರಾಜ (1342-52), ಚಿನ್ನರಾಯ (1752) ಆಳಿದ ಬಗ್ಗೆ ವಿವರಗಳಿವೆ].

ಹೈದರಾಲಿ-ಟಿಪ್ಪುಸುಲ್ತಾನ್

ಕರ್ನಾಟಕದ ಅನೇಕ ಪಾಳೆಯಗಾರರ ಮೇಲೆ ಹೈದರ್ ಮತ್ತು ಮಗ ದಾಳಿ ಮಾಡಿರುತ್ತಾರೆ. ಕೆಲವು ಪಾಳೆಯಗಾರರು ಶರಣಾಗಿದ್ದರು. ಗುಡೇಕೋಟೆಯ ರಾಮಪ್ಪ ನಾಯಕ ಹೈದರನೊಂದಿಗ ಕನಕಗಿರಿಯಲ್ಲಿ ಭಾಗವಹಿಸಿದಾಗ ಹೈದರ್ ಇವನನ್ನು ಗಮನಿಸುತ್ತಾನೆ. ಹಾಗಾಗಿ ಅವನು ರಾಮಪ್ಪನಾಯಕನನ್ನು ಚಿತ್ರದುರ್ಗದ ವಿರುದ್ಧ ನಡೆದ ಯುದ್ಧಕ್ಕೆ ನಿಯೋಜಿಸಿದನು. ಗುಡೇಕೋಟೆ ಆಗ ಹೈದರ್ ಟಿಪ್ಪುವಿನ ಕೈಯಲ್ಲಿತ್ತು. ಟಿಪ್ಪುವಿನ ಕಪಿಮುಷ್ಟಿಯಿಂದ ರಾಮಪ್ಪನಾಯಕನ ಮಕ್ಕಳಾದ ರಾಮಲಿಂಗರಾಜ ಮತ್ತು ಬೊಮ್ಮಂತರಾಜರು ಶ್ರೀರಂಗಪಟ್ಟಣದಿಂದ ತಪ್ಪಿಸಿಕೊಂಡು ಗುಡೇಕೋಟೆಗೆ ಬಂದರು. ಇವರು ಮರಾಠರೊಂದಿಗೆ ಸಂಧಾನ ಮಾಡಿಕೊಂಡು ವಾರ್ಷಿಕ ಕಾಣಿಕೆಯಾಗಿ ರೂ. 30,000 ನೀಡಲು ಸಹಿ ಹಾಕಿ ಗುಡೇಕೋಟೆಯನ್ನು ಪಡೆದು ಆಳಿದರು. ಹೀಗೆ ಇರುವಾಗ ಟಿಪ್ಪುವಿನ ಅಧಿಕಾರಿಗಳು ಅಕ್ರಮವಾಗಿ ಆಳುತ್ತಿದ್ದ ಗುಡೇಕೋಟೆ ನಾಯಕರನ್ನು ಸದೆಬಡಿಯಲು ಬಂದಾಗ ಗುಡೇಕೋಟೆಯವರು ಪಲಾಯನ ಮಾಡಿದರು. ಕ್ರಿ.ಶ. 1788 ರಲ್ಲಿ ಬೊಮ್ಮಂತರಾಜನು ಟಿಪ್ಪು ಸೈನ್ಯವನ್ನು ಹಿಂತೆಗೆದುಕೊಂಡಾಗ ಆಳ್ವಿಕೆ ನಡೆಸಿದ.

ಕ್ರಿ.ಶ. 1777ರಲ್ಲಿ ಗುಡೇಕೋಟೆಯವರು ಚಿತ್ರದುರ್ಗದವರಿಗೆ ಸಹಕಾರ ಮಾಡಿದ್ದರಿಂದ ಹೈದರಾಲಿ ಗುಡೇಕೋಟೆ ಮೇಲೆ ದಾಳಿ ಮಾಡುತ್ತಾನೆ. 1799ರಲ್ಲಿ ಟಿಪ್ಪು ಹತನಾದಾಗ ಗುಡೇಕೋಟೆ ಹೈದರಾಬಾದ್ ನಿಜಾಮನಿಗೆ ಸೇರುತ್ತದೆ. ಇವನು ಸಹಾಯಕ ಸೈನ್ಯ ಪದ್ಧತಿಗೆ ಸಹಿ ಮಾಡಿ ಬಳ್ಳಾರಿ ಜಿಲ್ಲೆಯನ್ನು ದತ್ತು ಮಂಡಲ (ceded district) ಎಂದು ಕರೆದುಕೊಟ್ಟನು. 1800 ರಿಂದ ಬ್ರಿಟಿಷರ ಅಂದರೆ ಕಲೆಕ್ಟರುಗಳ ಆಳ್ವಿಕೆ (ಮದ್ರಾಸ್ ಆಧಿಪತ್ಯ) ಆರಂಭವಾಗಿ 115 ಜನ (1947 ರವರೆಗೆ) ಆಡಳಿತ ನಡೆಸುತ್ತಾರೆ. ಕ್ರಿ.ಶ. 1803 ರಲ್ಲಿ ಸರ್. ಥಾಮಸ್ ಮನ್ರೋ (ಬಳ್ಳಾರಿಯ ಮೊದಲ ಕಲೆಕ್ಟರ್) ಗುಡೇಕೋಟೆಗೆ ಭೇಟಿ ನೀಡಿದ್ದನು. ಕ್ರಿ.ಶ. 1828ರಲ್ಲಿ ಕ್ಷಾಮ ಬಂದಾಗ ಬೊಮ್ಮಂತರಾಜ ತನ್ನ ತಮ್ಮ ಲಿಂಗಪ್ಪ-ರಾಮಪ್ಪಯ್ಯ ಇತರ ಬೇಡ ಬುಡಕಟ್ಟಿನವರು ಜನ ಯೋಧರು ಬ್ರಿಟಿಷರ ವಿರುದ್ಧ ಹೋರಾಡಿದರು. ಸ್ವಾತಂತ್ರ್ಯ ಹೋರಾಟ, ಏಕೀಕರಣ ಹೀಗೆ ಅನೇಕ ಘಟನೆಗಳಲ್ಲಿ ಇವರು ಪ್ರಮುಖ ಪಾತ್ರ ವಹಿಸಿದ್ದಾರೆ.

ಗುಡೇಕೋಟೆ ಪಾಳೆಯಗಾರರು ಆರಂಭದಲ್ಲಿ ವಿಜಯನಗರದವರ ಜತೆ ರಾಜಕೀಯ ಸಂಬಂಧಗಳನ್ನು ಹೊಂದಿದ್ದರು. ಆ ನಂತರ ಚಿತ್ರದುರ್ಗ, ಹರಪನಹಳ್ಳಿ, ಕನಕಗಿರಿ, ಕೋಸಗಿ, ರಾಯದುರ್ಗ, ವಡ್ಡು-ದರೋಜಿ, ಕುಡತಿನಿ, ಸೊಂಡೂರು, ಉಜ್ಜಿನಿ, ಬಾಣರಾವಿಗಳೊಂದಿಗೆ ಸಂಬಂಧ ಬೆಳೆಸಿದ್ದರು. ಹೈದರ್, ಟಿಪ್ಪುವನ್ನು ವಿರೋ ಧಿಸಿದರು. ಬ್ರಿಟಿಷರ ಆಳ್ವಿಕೆಯಲ್ಲಿ ಸಂಪೂರ್ಣ ತಮ್ಮ ಕೈತಪ್ಪಿತು. ಚಿತ್ರದುರ್ಗದಲ್ಲಿ ಹೋರಾಡಿದ ಮಹಿಳೆ ಒನಕೆ ಓಬವ್ವನ ತವರೂರು ಗುಡೇಕೋಟೆ. (ಛಲವಾದಿ ಚಿನ್ನಪ್ಪನ ಮಗಳು-ಮದಲೆ ಹನುಮಯ್ಯನ ಹೆಂಡತಿ). ಗುಡೇಕೋಟೆ ಪಾಳೆಯಗಾರರ ರಾಣಿಯವರು ಘೋಷಾ ಪದ್ಧತಿ ಅನುಸರಿಸುತ್ತಿದ್ದರು. ಜಟಿಂಗರಾಜ (1859-60), ಬೊಮ್ಮಂತರಾಜ (1860), ಪಂಪಾಪತಿರಾಜ (1869), ವೆಂಕಮ್ಮನಾಗತಿ ಮತ್ತು ಕೇಶವಮ್ಮ ನಾಗತಿಯವರಿಗೆ ಸರಕಾರ ವಿಶ್ರಾಂತಿ ವೇತನ ನೀಡಿತ್ತು. ಈ ಪಾಳೆಯಗಾರರು ಮೂರು ಶತಮಾನಗಳ ಕಾಲ ಸುಮಾರು 15ಕ್ಕೂ ಹೆಚ್ಚು ಜನ ಅರಸರು ಆಳ್ವಿಕೆ ನಡೆಸಿ ದ್ದಾರೆ.

ಇಂದು ಗುಡೇಕೋಟೆ ಗ್ರಾಮದಲ್ಲಿ ಭಗ್ನಾವಶೇಷಗಳು ಮಾತ್ರ ಗತಕಾಲದ ಚರಿತ್ರೆಯನ್ನು ಸ್ಮರಿಸುತ್ತವೆ. ಹಳೆಊರು, ಕೋಟೆ, ಕೊತ್ತಲು, ಅರಮನೆ, ಉಪ್ಪರಿಗೆ, ವೀರಗಲ್ಲುಗಳು, ಮಾಸ್ತಿಕಲ್ಲುಗಳು, ಕಣಜ, ನೆಲಮಾಳಿಗೆ, ಹೊಂಡ, ಬಾವಿ, ಕೆರೆ, ಶಿಲ್ಪಗಳಿವೆ. ಜೊತೆಗೆ ಆಂಜನೇಯ, ಚೌಡಮ್ಮ, ಮಲಿಯಮ್ಮ, ರಾಮಲಿಂಗೇಶ್ವರ, ಬಸವಣ್ಣ, ಕಾಳಮ್ಮ, ಈಶ್ವರ, ಲಕ್ಷ್ಮಿವೆಂಕಟೇಶ್ವರ, ಚೌಳೇಶ್ವರ, ಪಂಚಲಿಂಗೇಶ್ವರ (ಗುಹಾಲಯ), ಶಿವ-ಪಾರ್ವತಿ ದೇವಾಲಯಗಳು ಇಲ್ಲಿ ಕಲಾಸೌಂದರ್ಯ ಹಾಗೂ ಧಾರ್ಮಿಕ ಜೀವನಕ್ಕೆ ಸಾಕ್ಷಿಯಾಗಿದೆ. ಗುಡೇಕೋಟೆ ಸಣ್ಣ ಪಾಳೆಯವಾದರೂ ದೊಡ್ಡ ಸಾಧನೆ ಮಾಡಿದ್ದು ಸ್ಮರಣೀಯ.

ಗುಡೇಕೋಟೆ ಪಾಳೆಯಗಾರರ ವೈವಾಹಿಕ ಸಂಬಂಧಗಳು

ನೆಂಟರು

ಮಳೆಲೂರು-ಕಾಮಗೇತಿ

ಚಿತ್ರದುರ್ಗದ ಭರಮಣ್ಣನಾಯಕ - ಗುಡೇಕೋಟೆಯ ಬಂಗಾರವ್ವನಾಗತಿ

-"- ಹಿರೇಮುದ್ದಕರಿನಾಯಕ - ಪದ್ಮಮ್ಮನಾಗತಿ (ಪೆದ್ದಕ್ಕ)

-"- ಚಿಕ್ಕಹಿರೇಮದಕರಿನಾಯಕ - ಭೀಮವ್ವನಾಗತಿ

ಹರಪನಹಳ್ಳಿ ದಾದಯ್ಯನಾಯಕ - ಗುಡೇಕೋಟೆ ಭರ್ಮವ್ವನಾಗತಿ

ಹರಪನಹಳ್ಳಿ ಸೋಮಶೇಖರನಾಯಕ - ಬಸಮ್ಮ ಮತ್ತು ನೀಲಮ್ಮಾಜಿ

ಗುಡೇಕೋಟೆ ತಾತಯ್ಯರಾಜ - ಪ್ಯಾಸಲಿ ಸಂಸ್ಥಾನ ಸಿದ್ದಮ್ಮ

ವೆಂಕಟಗಿರಿರಾಜ - ಕನಕಗಿರಿ ಸಂಸ್ಥಾನ - ಕಾಟಮ್ಮ

ಚಿನ್ನೇರಾಜರು -ಹೊಸಕೋಟೆ ಸಂಸ್ಥಾನ ನೀಲಮ್ಮಾಜಿ

ಬೊಮ್ಮಂತರಾಜ - ಬಂಗಾರಮ್ಮ

ಜಟಿಂಗರಾಜ - ಹೊಸಕೋಟೆ ಸಂಸ್ಥಾನ ಬಂಗಾರಮ್ಮ

ರಾಜರಾಜ - ಲಕ್ಷ್ಮಮ್ಮನಾಗತಿ

ಗ್ರಂಥ ಋಣ

ಎಂ.ಎಸ್.ಪುಟ್ಟಣ್ಣ - *ಚಿತ್ರದುರ್ಗದ ಪಾಳಯಗಾರರು*

ವಿರೂಪಾಕ್ಷಿ ಪೂಜಾರಹಳ್ಳಿ - *ಬಳ್ಳಾರಿ ಜಿಲ್ಲೆಯ ಪಾಳೆಯಗಾರರು*

" " " - *ಕರ್ನಾಟಕದಲ್ಲಿ ತಳವಾರಿಕೆ*

" " " - *ಕಾಮಗೇತಿ ವಂಶಜರ ಚರಿತ್ರೆ*

" " " - *ಬೇಟೆ ಮತ್ತು ಬೇಡರು*

ಎನ್.ಎಂ.ರವಿಕುಮಾರ್ (ಸಂ): *ಮುನ್ನೆಡೆಯ ಕೂಡ್ಲಿಗಿ*

ವಿರೂಪಾಕ್ಷಿ ಪೂಜಾರಹಳ್ಳಿ (ಯೋಜನೆ): *ವಸಾಹತು ಕಾಲೀನ ಬಳ್ಳಾರಿ ಜಿಲ್ಲೆ*

ಕೆ.ವಿ.ನಂದ್ಯಪ್ಪ - *ಸಂಡೂರು ತಾಲೂಕು ದರ್ಶನ*

ಇತಿಹಾಸ ದರ್ಶನ ಸಂ. -21

ಜೆ.ಎಂ.ನಾಗಯ್ಯ - *ಬಳ್ಳಾರಿ ಜಿಲ್ಲೆಯ ಶಾಸನಗಳು*

ಗೌ.ಮ.ಉಮಪತಿಶಾಸ್ತ್ರಿ - *ಕೊಟ್ಟೂರುಸ್ವಾಮಿ ಗುರುಪರಂಪರೆ*

೩೫. ಬಳ್ಳಾರಿ ಜಿಲ್ಲೆಯ ಪಾಳೆಗಾರರ ಸಾಂಸ್ಕೃತಿಕಾಚರಣೆಗಳು

ಡಾ. ಅಮರೇಶ ಯತಗಲ್

ಬಳ್ಳಾರಿ ಜಿಲ್ಲೆಯು ಕರ್ನಾಟಕದ ಮಧ್ಯಭಾಗದಲ್ಲಿದ್ದು, ಬಳ್ಳಾರಿ, ಹೊಸಪೇಟೆ, ಸಿರುಗುಪ್ಪ, ಹೂವಿನಹಡಗಲಿ, ಕೂಡ್ಲಿಗಿ, ಸಂಡೂರು, ಹಗರಿಬೊಮ್ಮನಹಳ್ಳಿ ಎಂಬ ಏಳು ತಾಲೂಕುಗಳನ್ನೊಳಗೊಂಡಿದೆ. ಕ್ರಿ.ಪೂ. ೧೦೦೦ ಅವಧಿಯ ಹಳೆಯ ಶಿಲಾಯುಗದಿಂದ ಇಲ್ಲಿಯ ಇತಿಹಾಸವು ಪ್ರಾರಂಭವಾಗಿ, ಆ ನಂತರದಲ್ಲಿ ಅನೇಕ ಅರಸು ಮನೆತನಗಳು, ಸ್ಥಳೀಯ ಪ್ರಭುಗಳು ಈ ಜಿಲ್ಲೆಯನ್ನು ಆಳಿದ ಕುರುಹುಗಳು ಸಿಗುತ್ತವೆ. ಅನೇಕ ಸ್ಮಾರಕಗಳು ಸಾಕ್ಷಿಯಾಗಿ ನಿಂತಿವೆ. ಮಧ್ಯಕಾಲೀನ ಕರ್ನಾಟಕದ ಚರಿತ್ರೆಯಲ್ಲಿ ಬಳ್ಳಾರಿ ಜಿಲ್ಲೆಗೆ ಪ್ರಮುಖವಾದ ಸ್ಥಾನದಲ್ಲಿದೆ. ಅಲ್ಲದೇ ಈ ಜಿಲ್ಲೆಯ ಅನೇಕ ಪಾಳೆಯಗಾರರು ಸ್ಥಳೀಯ ಚರಿತ್ರೆಯಲ್ಲಿ ತಮ್ಮದೇ ಆದ ಅಸ್ತಿತ್ವವನ್ನು ಪಡೆಯುವುದರ ಜೊತೆಗೆ ಉತ್ತಮ ಆಡಳಿತ ನೀಡುವಲ್ಲಿ ಯಶಸ್ವಿಯಾಗಿದ್ದಾರೆ. ಹಾಗೂ ತಮ್ಮದೇ ಆದ ಸಾಂಸ್ಕೃತಿಕ ಕೊಡುಗೆಯನ್ನು ನೀಡಿದ್ದಾರೆ. ವಿಜಯನಗರದ ಕಾಲದ ಸಾಂಸ್ಕೃತಿಕ ಪರಂಪರೆಯನ್ನು ತಮಗೆ ನಿಲುಕಿದಷ್ಟು ಆಚರಿಸಲು ಪ್ರಯತ್ನಿಸಿದ್ದಾರೆ. ಅಂಥವರಲ್ಲಿ ಗುಡೇಕೋಟೆ, ಜರಿಮಲೆ, ಹಂಡೆ, ಉಜ್ಜನಿ, ವಡ್ಡು-ದರೋಜಿ, ಬಾಣರಾವಿ, ಕುಡತಿನಿ, ವೀರನದುರ್ಗ ಮುಂತಾದ ಪಾಳೆಯಗಾರರು ಪ್ರಮುಖ ರಾಗಿದ್ದಾರೆ. ೧೯೯೭ಲಕ್ಕಿಂತ ಮೊದಲು ಹರಪನಹಳ್ಳಿಯ ಪಾಳೆಯಗಾರರು ಇದೇ ಜಿಲ್ಲೆಯ ವ್ಯಾಪ್ತಿಯಲ್ಲಿದ್ದರು. ಆನಂತರ ಜಿಲ್ಲಾ ವಿಂಗಡಣೆಯಲ್ಲಿ ಈ ಜಿಲ್ಲೆಯು ದಾವಣಗೆರೆ ಜಿಲ್ಲೆಗೆ ಸೇರ್ಪಡೆಯಾದುದರಿಂದ ಈ ಪ್ರಬಂಧದಲ್ಲಿ ಹರಪನಹಳ್ಳಿ ಪಾಳೆಯಗಾರರನ್ನು ಕೈಬಿಡಲಾಗಿದೆ.

ಏಕತೆಯಲ್ಲಿ ವೈವಿಧ್ಯತೆಯನ್ನು ಪಾಲಿಸಿಕೊಂಡು ಬಂದಿರುವ ಬಳ್ಳಾರಿ ಜಿಲ್ಲೆಯ ಪಾಳೆಯಗಾರರು ಮಧ್ಯಕಾಲೀನ ಯುಗದಲ್ಲಿ ಧಾರ್ಮಿಕ ಹಾಗೂ ಮತೀಯ ಸಾಮರಸ್ಯವನ್ನು ಯಶಸ್ವಿಯಾಗಿ ಪಾಲಿಸಿಕೊಂಡು ಬಂದವರು. ಇವರು ವಿಭಿನ್ನ ಪಂಥವನ್ನನುಸರಿಸಿದರೂ, ಧಾರ್ಮಿಕ ಹಾಗೂ ಮತೀಯ ಗಲಭೆಗೆ ಪ್ರಚೋದನೆಯನ್ನುಂಟುಮಾಡದೇ ವಿಶಾಲ ತಳಹದಿಯ ಮೇಲೆ ಯಶಸ್ವಿಯಾಗಿ ಆಡಳಿತವನ್ನು ನಿರ್ವಹಿಸಿಕೊಂಡು ಬಂದಿರುವುದು ಹೆಗ್ಗಳಿಕೆಯೇ ಸರಿ. ತಮ್ಮ ಪ್ರಾದೇಶಿಕ ವ್ಯಾಪ್ತಿಯ ಜನತೆಯನ್ನು ನಿರ್ದಿಷ್ಟವಾಗಿ, ಮಾನಸಿಕವಾಗಿ, ಒಗ್ಗೂಡಿಸುವ ಸಾಂಸ್ಕೃತಿಕ ಶಕ್ತಿಗಳಾಗಿ ಧರ್ಮವನ್ನು ಬಳಸಿ ಕೊಂಡಿರುವುದನ್ನು ಕಾಣಬಹುದು. ಇವರ ವಿವಿಧ ಧಾರ್ಮಿಕ ಅಂಶಗಳು ಇಲ್ಲಿಯ ಜನಮನವನ್ನು

ಹೇಗೆ ಆಳಿದವು ಎಂಬುದನ್ನು ಸಮೀಕ್ಷಿಸಲು ಇವರ ಪಟ್ಟಾಭಿಷೇಕ, ಪಟ್ಟದರಸಿಯ ನೇಮಕ, ಹಬ್ಬ ಉತ್ಸವಗಳು, ಆರಾಧ್ಯದೇವರುಗಳ ಪೂಜಾ ವಿಧಾನಗಳು, ನಂಬಿಕೆ ಸಂಪ್ರದಾಯಗಳು ಮುಂತಾದವುಗಳು ಇವರ ಧಾರ್ಮಿಕ ಪುರೋಭಿವೃದ್ಧಿಗೆ, ಸರ್ವಧರ್ಮ ಸಮನ್ವಯತೆಗೆ, ಇವರ ರಾಜಕೀಯ ಬದುಕಿನೊಂದಿಗೆ ಸಾಂಸ್ಕೃತಿಕ ಬದುಕನ್ನು ಹೇಗೆ ನಿರೂಪಿಸಿದವು ಎಂಬುದನ್ನು ಅರಿಯಬಹುದಾಗಿದೆ.

ಈ ಪಾಳೆಯಗಾರರ ಆಂತರಿಕ ಸುಖ-ನೆಮ್ಮದಿಯು ಇವರ ಸಾಂಸ್ಕೃತಿಕ ಬದುಕಿನೊಂದಿಗೆ ಸಂಬಂಧವನ್ನು ಹೊಂದಿರುತ್ತದೆ. ಹೀಗಾಗಿ ಇವರ ಸಾಂಸ್ಕೃತಿಕ-ಸ್ವರೂಪವನ್ನು ಹಾಗೂ ವೈಶಿಷ್ಟ್ಯತೆಗಳನ್ನು ಅರಿಯಲು ಇವರು ಆಚರಿಸುತ್ತಿದ್ದ ಅನೇಕ ಸಾಂಸ್ಕೃತಿಕಾಚರಣೆಗಳನ್ನು ಗಮನಿಸಬೇಕಾಗುತ್ತದೆ. ಇವರ ಕುಟುಂಬ ವ್ಯವಸ್ಥೆ, ವಿವಾಹ ಪದ್ಧತಿ, ಉಡುಗೆ ತೊಡುಗೆ, ಆಹಾರ ಪದ್ದತಿ, ರಾಜವೈಭವ, ವಿಜಯೋತ್ಸವ, ಕಪ್ಪಕಾಣಿಕೆ ಪದ್ದತಿ, ಬೇಟೆಯ ಪದ್ಧತಿ, ಶವಸಂಸ್ಕಾರ ಇತ್ಯಾದಿ ಆಚರಣೆಗಳ ಮೂಲಕ ಇವರ ಸಾಂಸ್ಕೃತಿಕ ಮೌಲ್ಯಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಅಲ್ಲದೇ ಇವರ ಸಾಂಸ್ಕೃತಿಕ ಬದುಕು ಸಮಕಾಲೀನ ಐತಿಹಾಸಿಕ ಮತ್ತು ಆರ್ಥಿಕ ಇತ್ಯಾದಿ ಅಂಶಗಳ ದಾಖಲೀಕರಣಕ್ಕೆ ಸಹಾಯಕವಾಗುತ್ತದೆ.

ಪಟ್ಟಾಭಿಷೇಕವು ಇವರ ರಾಜ್ಯ ವ್ಯವಸ್ಥೆಯಲ್ಲಿ ಪ್ರಮುಖ ಸ್ಥಾನ ಪಡೆದಿತ್ತು. ಇದು ಕೇವಲ ಅರಸನಾದವನಿಗೆ ಮಾತ್ರ ಸಲ್ಲುತ್ತಿರಲಿಲ್ಲ. ಆತನ ಹಿರಿಯ ರಾಣಿ, ಸೇನಾಪತಿ, ಮಹಾದಂಡನಾಯಕ, ಯುವರಾಜ ಮುಂತಾದವರಿಗೆ ಅವರವರ ಯೋಗ್ಯತೆಗೆ ತಕ್ಕಂತೆ ಪಟ್ಟಾಭಿಷೇಕ ಸಮಾರಂಭ ನಡೆಯುತ್ತಿತ್ತು. ಸಾಮಾನ್ಯವಾಗಿ ಅರಸೊತ್ತಿಗೆ ಅನುವಂಶೀಯವಾಗಿತ್ತು. ಪಾಳೆಯಗಾರನ ಹಿರಿಯ ಮಗ ಆ ಪಾಳೆಯಪಟ್ಟಿನ ಉತ್ತರಾಧಿಕಾರಿಯಾಗುವುದು ಸರ್ವೆಸಾಮಾನ್ಯವಾಗಿತ್ತು. ಹೀಗಾಗಿ ತಂದೆಯ ನಂತರ ಮಗನಿಗೆ ಅಧಿಕಾರ ಪ್ರಾಪ್ತವಾಗುತ್ತಿತ್ತು. ಕೆಲವು ಸಲ ಅನುವಂಶೀಯತೆಯಲ್ಲಿಯೂ ಅರ್ಹತೆಗೆ ಪ್ರಾಮುಖ್ಯತೆ ಇತ್ತು. ಅಧಿಕಾರಕ್ಕೆ ಬರುವ ಸಂದರ್ಭದಲ್ಲಿ ಹೋರಾಟ, ಯುದ್ಧಗಳು, ಅಣ್ಣ ತಮ್ಮಂದಿರುಗಳಲ್ಲಿ ಸಾಮಾನ್ಯವಾಗಿರುತ್ತಿದ್ದವು. ಪಾಳೆಯಗಾರನಿಗೆ ಮಕ್ಕಳಿಲ್ಲದಿದ್ದರೆ, ಆತ ತನ್ನ ಸಂಬಂಧಿಗಳನ್ನು ಅಧಿಕಾರಕ್ಕೆ ತರಬಹುದಾಗಿತ್ತು. ಅವರನ್ನು ದತ್ತು ತೆಗೆದುಕೊಳ್ಳಬೇಕಾಗಿತ್ತು. ಗುಡೇಕೋಟೆ, ಜರಿಮಲೆ ಹಾಗೂ ಹಂಡೆ ಪಾಳೆಯಗಾರರಲ್ಲಿ ದತ್ತಕ್ಕೆ ತೆಗೆದುಕೊಂಡ ಅನೇಕ ಉದಾಹರಣೆಗಳಿವೆ. ದತ್ತು ತೆಗೆದುಕೊಳ್ಳುವ ಯುವರಾಜನಿಗೂ ಕೆಲವು ಅರ್ಹತೆಗಳಿರಬೇಕಾಗಿತ್ತು. ಪಟ್ಟಾಭಿಷೇಕದ ಸಂದರ್ಭದಲ್ಲಿ ಅನೇಕ ವಿಧಿ ವಿಧಾನಗಳನ್ನು ನಡೆಸಲಾಗುತ್ತಿತ್ತು. ದೇವಾಲಯಗಳಲ್ಲಿ ಉತ್ಸವ ಹಾಗೂ ವಿಶೇಷ ಪೂಜಾದಿ ಕಾರ್ಯ ಕ್ರಮಗಳೂ ನಡೆಯುತ್ತಿ ದ್ದವು. ಇದು ಉಪನಯನದ ಮಹೋತ್ಸವ, ವಿಧಿಪೂರ್ವಕ ವಿವಾಹ, ತುಲಾಭಾರ ಕಾರ್ಯಕ್ರಮ, ದಾನ-ಧರ್ಮ, ಪ್ರಾಯಶ್ಚಿತ್ತಾದಿ ಕಾರ್ಯಕ್ರಮ, ಐಂದ್ರಶಾಂತಿಯ ಕಾರ್ಯಕ್ರಮ, ಸಿಂಹಾಸನಾರೋಹಣ ಕಾರ್ಯಕ್ರಮ, ಕಾಣಿಕೆ-ಸಮರ್ಪಣೆ ಮುಂತಾದ ಹಂತಗಳ ಮೂಲಕ ಜರುಗುತ್ತಿತ್ತು.[1]

ಪಟ್ಟದರಸಿಯನ್ನು ನೇಮಿಸುವ ಸಂದರ್ಭದಲ್ಲಿಯೂ ಈ ಪಾಳೆಯಗಾರರು ಕಟ್ಟುನಿಟ್ಟಿನ ನಿಯಮಗಳನ್ನು ಪರಿಪಾಲಿಸುತ್ತಿದ್ದರು. ಪಟ್ಟದರಸಿಯು ಕೆಲವು ಅರ್ಹತೆಗಳನ್ನು ಹೊಂದಿರ ಬೇಕಾಗಿದ್ದಿತು. ಸ್ವಜಾತಿಯವಳು ಮತ್ತು ವಿಜಾತಿಯ ಬೆಡಗಿನವಳಾಗಿರಬೇಕು. ಅಂಗ ಊನತೆಯುಳ್ಳವಳಾಗಿರಬಾರದು. ಸುಲಕ್ಷಣವುಳ್ಳವಳು, ಆಚಾರ-ವಿಚಾರಗಳಲ್ಲಿ ಉತ್ತಮ ಸ್ಥಾನದಲ್ಲಿರಬೇಕಿತ್ತು. ಅರಸನಿಗೆ ಸಮಾನವಾದ ಅಂತಸ್ತಿನ ಇಲ್ಲವೆ ಗೌರವಯುತ ವಾದ ಮನೆತನದವಳಾಗಿರಬೇಕಿತ್ತು. ಇವರನ್ನು ನಾಗತಿಯರು, ರಾಣಿಯರು ಎಂದು ಕರೆಯು ತ್ತಿದ್ದರು. ಪಟ್ಟದರಸಿಯು ರಾಜ್ಯಕಾರ್ಯಗಳಲ್ಲಿ ಭಾಗವಹಿಸುವ ಗುಣವುಳ್ಳವಳಾಗಿರು ತ್ತಿದ್ದಳಲ್ಲದೆ, ರಾಜತಂತ್ರಗಳಿಗೆ ಸಂಬಂಧಿಸಿದ ವಿಷಯಗಳನ್ನು ಹಾಗೂ ಹಬ್ಬ, ಉತ್ಸವಗಳಿಗೆ ಸಂಬಂಧಿಸಿದ ವಿಷಯಗಳನ್ನು ಸ್ವತಃ ಪಾಳೆಯಗಾರ ತನ್ನ ರಾಣಿಯೊಂದಿಗೆ ಸಮಾ ಲೋಚಿಸುತ್ತಿದ್ದನು. ದತ್ತು ಸ್ವೀಕಾರದ ಸಂದರ್ಭದಲ್ಲಿ ಈಕೆಯ ಪಾತ್ರ ಪ್ರಮುಖವಾಗಿರುತ್ತಿತ್ತು. ಇವರು ಅನೇಕ ದೇವಾಲಯ, ಮಠ, ಮಂದಿರ, ಬಾವಿ-ಕೆರೆಗಳನ್ನು ನಿರ್ಮಿಸಿದ್ದಾರೆ. ದೇವಾಲಯಗಳಿಗೆ ಕಾಣಿಕೆಗಳನ್ನು ನೀಡಿದ್ದಾರೆ. ಹಂಡೆ ಪಾಳೆಯಗಾರ ದ್ಯಾವಪ್ಪನ ಚಿಕ್ಕ ಹೆಂಡತಿ ನೀಲಮ್ಮ (ಕ್ರಿ.ಶ. ೧೬೫೩-೧೬೫೬) ಬಳ್ಳಾರಿ, ಕುರುಗೋಡ, ತೆಕ್ಕಲಕೋಟೆ ಈ ಪ್ರದೇಶದಲ್ಲಿ ದೊರೆತನ ಮಾಡಿ, ತನ್ನ ಆಡಳಿತದ ಅವಧಿಯಲ್ಲಿ ಬಳ್ಳಾರಿಯ ಮಹಾಂತಸ್ವಾಮಿಗೆ ವುಳೇನೂರು ಗ್ರಾಮವನ್ನು ತನ್ನ ಹಿರಿಯರಿಗೆ ಸುಕೃತವಾಗಬೇಕೆಂದು ಆ ಮಠದಲ್ಲಿ ದಾಸೋಹ ನಡೆಸಲು ದಾನ ನೀಡಿದಳು.[2] ಇದರಿಂದ ಈಕೆ ಸಾಮಾಜಿಕ ವಾಗಿ, ಧಾರ್ಮಿಕವಾಗಿ ಶ್ರದ್ಧಾಪೂರ್ವಕವಾಗಿ ಅಪಾರ ಕೊಡುಗೆ ನೀಡಿದುದನ್ನು ಸ್ಮರಿಸ ಬಹುದು.

ಈ ಪಾಳೆಯಗಾರರು ತಮ್ಮ ರಾಣಿಯರ ಹೆಸರಿನಲ್ಲಿ ಅನೇಕ ಊರುಗಳನ್ನು, ಕೆರೆಗಳನ್ನು, ಬಾವಿಗಳನ್ನು, ಕೋಟೆ ಬಾಗಿಲುಗಳನ್ನು ನಿರ್ಮಿಸಿದ್ದಾರೆ. ಘೋಷಾ ಪದ್ಧತಿ ಜಾರಿಯಲ್ಲಿದ್ದು, ಮೇನಾ ಹಾಗೂ ಸವಾರಿ ಬಂಡಿಗಳಲ್ಲಿ ತೆರಳುತ್ತಿದ್ದರು. ಸಹಗಮನ ಪದ್ಧತಿಯ ಕುರಿತಾದ ಯಾವುದೇ ಮಾಹಿತಿಗಳು ಸಿಗಲಾರವು, ಆದರೆ ಚಿತ್ರದುರ್ಗ ಪಾಳೆಯಗಾರರಲ್ಲಿ ಸಹಗಮನ ಪದ್ಧತಿ ಇದ್ದ ಕುರಿತಾಗಿ ಅನೇಕ ಆಧಾರಗಳಿವೆ. ಮನಃ ಪೂರ್ವಕವಾಗಿ ಇದು ನಡೆಯುತ್ತಿತ್ತೇ ಹೊರತು, ಯಾವುದೇ ಒತ್ತಾಯವಿರಲಿಲ್ಲ. ವಿಧವೆ ಯಾದ ರಾಣಿಗೆ ಅನೇಕ ನಿರ್ಬಂಧಗಳಿದ್ದವು.

ಬಳ್ಳಾರಿ ಜಿಲ್ಲೆಯ ಪಾಳೆಯಗಾರರು ಹೆಚ್ಚಾಗಿ ಸ್ವತಂತ್ರವಾಗಿ ಯಾರ ಮೇಲೆಯೂ ದಂಡೆತ್ತಿ ಹೋದ ಉದಾಹರಣೆಗಳು ವಿರಳ. ಆದರೆ ಅನೇಕರು ಇವರ ಸಹಾಯವನ್ನು ಕೋರಿದಾಗ, ಅವರಿಗೆ ಯುದ್ಧದ ಸಹಾಯವನ್ನು ಮಾಡಿದ್ದಾರೆ. ಯುದ್ಧಕ್ಕೆ ತೆರಳುವ ಮುನ್ನ ಯುದ್ಧದ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದರು. ಅಲ್ಲದೇ ವಿವಿಧ ದೇವರುಗಳಿಗೆ ಪೂಜೆಸಲ್ಲಿಸುವುದು, ಬಲಿಕೊಡುವ ಕಾರ್ಯಕ್ರಮಗಳು ಜರುಗುತ್ತಿದ್ದವು. ಹಂಡೆ ಪಾಳೆಯಗಾರರ ಯುದ್ಧದ ಪೂರ್ವಸಿದ್ಧತೆಯ ಸನ್ನಿವೇಶವನ್ನು ಈ ರೀತಿ

ಗಮನಿಸಬಹುದು. ಕೆಲವರು ರೇಖಲೆ, ಬಜಾರಿ, ರಾಮಸಿಂಗಿ, ಮಕರಡಿಬ್ಬಿ ಮೊದಲಾದ ದ್ದನ್ನು ಬಿಟ್ಟು ಹೊರಗಿನವರ ಮತ್ತು ಅವರ ಗುಂಡಿನ ಅರ್ಭಟ, ತಮಟೆ, ಕೊಂಬು, ನಗಾರಿ ಅನೇಕ ನೌಬತ್ತು ವಾದ್ಯಗಳ ಬೊಬ್ಬೆ ಅರ್ಭಟವು ಏಕವಾದುದರಿಂದ ಕೆಲವು ಸ್ತ್ರಿಯರ ಗರ್ಭಪಾತವಾಗುವಂತಾಯಿತು. ಕಿಲ್ಲೆಯೊಳಗೆ ಇದ್ದ ನಾಯಕರಿಗೆ ಒಬ್ಬೊಬ್ಬರಿಗೂ ಸಾರಾವರಿ, ಜಳ್ಳಿ ಉಡಾಸ, ಪಾವುಡಾ, ಹೊಕ್ಕಳಗಂಟೆ, ಹುಲಿಚರ್ಮ, ಮುತ್ತಿನ ಹಾರ, ಕಡಗ ಕಾಲುಗುಗ್ಗರಿ ಇಂತಹ ಬಿರುದುಗಳನ್ನು ಇವರಿಗೆ ಒಂದೊಂದು ಸತ್ತಿಗೆಯ ಪ್ರಕಾರ ಹಾರ, ವೀರಾವಳಿಗಳನ್ನು ಎಲೆ, ಅಡಿಕೆ ಮುಂತಾದವನ್ನು ಹಿಡಿದು ಹಡಪದವನ್ನು ಕೊಟ್ಟು ಜಗಳಕ್ಕೆ ನೇರ ಕಂಪಣ ಕಟ್ಟಿಸಿದರು. ಹೂಡೆ ಹೊಡೆಯಕ್ಕ ಒಬ್ಬೊಬ್ಬ ನಾಯಕ ಅವನ ಸಂಗಡ ತಪ್ಪಡೆ, ಕೊಂಬನಿ, ಭಟಂಗಿ ಮಾಡುವ ಒಬ್ಬ ಭಟ್ಟ ಈ ಪ್ರಕಾರ ಕೆಳಗಿನ ಕಿಲ್ಲೆಯ ಹೂಡೆಯದಲ್ಲಿ ಇದ್ದ ನಾಯಕರು 35 ಮಂದಿ, ಮೇಲಿನ ಕಿಲ್ಲೆಯೊಳಗೆ ಇದ್ದ ನಾಯಕರು 75 ಮಂದಿ ಈ ಪ್ರಕಾರ ನಾಯಕರು ತಮ್ಮ ಬಿರುದುಗಳ ಸಂಗಡ ರಾತ್ರಿಯಲ್ಲಿ ಸಾಲು ಸಾಲು ಮಹತಾಪುಹಚ್ಚಿ ಬೆಳಗಾಗುವ ಪರಿಯಂತ ವಾದ್ಯವೈಭವದ ಸಂಗಡ ಇರುವ ಉಡಾಸಪಾವುಡಗಳು, ಛತ್ರಛಾಮರಗಳು ಸಂಗಡ ಪಹರೆ ತಿರುಗುವವರು, ನಿಸ್ಸಂಗರಾಗಿ ಗುಂಡುಗಳ ಹೊಡೆಯುವದನ್ನು ಕಂಡ ಹೈದರಾಲಿಯು[3] ಭವ್ಯವಾದ ಆನೆಯ ಅಂಬಾರಿಯ ಮೇಲೆ ಹತ್ತಿಕೊಂಡು, 50 ಸಾವಿರ ಸೈನಿಕರು, 50 ಅಂಬಾರಿ ಹಾಕಿದ ಆನೆ, 20,000 ಕುದುರೆ, ನಗಾರಿ ಧ್ವನಿಗಳೊಂದಿಗೆ ಶ್ರೀರಂಗಪಟ್ಟಣದಿಂದ ಬಳ್ಳಾರಿಗೆ ಬಂದು ತನ್ನ ಪರಿವಾರದೊಂದಿಗೆ ಗುಡ್ಡದ ಸುತ್ತಲೂ ತಿರುಗಿದನು.[4] "ಕಿಲ್ಲೆ ಬಹಳ ಬಲ ವಾಗಿ ಇರುವುದನ್ನು ಕಂಡು ನವಾಬಸಾಹೇಬರು ಮೂಗಿನ ಮೇಲೆ ಬೆರಳಿಟ್ಟು ಬೆರಳುಕಚ್ಚಿ ಮುತ್ತಿಗೆಗೆ ಮಂದಿ ಸಾಲದು ಎಂದು ಸೈನಿಕರಿಗೆ ಹೇಳಿದನು. ಇದು ಆಗಿನ ಯುದ್ಧದ ಸನ್ನಿವೇಶದ ವಿವರವನ್ನು ನೀಡುತ್ತದೆ. ಹಬ್ಬ ಉತ್ಸವದಲ್ಲಿ ಭಾಗವಹಿಸಿ, ಮನೆ ದೇವರಿಗೆ ವಿಶೇಷವಾದ ಪೂಜೆಯನ್ನು ಸಲ್ಲಿಸುತ್ತಿದ್ದರು. ಗುಡೇಕೋಟೆ ಪಾಳೆಯಗಾರರು ಜಟ್ಟಿಂಗ ರಾಮೇಶ್ವರನಿಗೆ, ಜರಿಮಲೆ ಪಾಳೆಯಗಾರರು ಕಂಚಿಯ ಓಬಳದೇವರಿಗೆ, ಹಂಡೆ ಪಾಳೆಯ ಗಾರರು ಜಟ್ಟಿಂಗರಾಮೇಶ್ವರ, ಸೊನ್ನಲಾಪುರದ ಸಿದ್ಧರಾಮನಿಗೆ ನಡೆದುಕೊಳ್ಳು ತ್ತಿದ್ದರು. ಹಬ್ಬ ಹರಿದಿನಗಳಲ್ಲಿ ಮಡಿವಂತಿಕೆಯಿಂದಿರುತ್ತಿದ್ದರು. ವಾರಗಟ್ಟಲೇ ಮಾಂಸಾಹಾರ ನಿಷೇಧವಾಗಿರುತ್ತಿತ್ತು. ಕಡ್ಡಾಯವಾಗಿ ಜಾತ್ರೆಗಳಲ್ಲಿ ಭಾಗವಹಿಸುತ್ತಿದ್ದರು. ಜರಿಮಲೆ ಪಾಳೆಯಗಾರರು ದಂಡಿನ ದುರಗಮ್ಮ ಜಾತ್ರೆಯಲ್ಲಿ ಭಾಗವಹಿಸಿ ಮೊದಲಕಾರ್ಯ ಮಾಡುತ್ತಿದ್ದರು. ಪ್ರತಿವರ್ಷ ವೈಶಾಖಶುದ್ಧ ಐದರಂದು ನಡೆಯುವ ಉಜ್ಜನಿಯ ಮರುಳು ಸಿದ್ಧೇಶ್ವರ ಜಾತ್ರೆಯ ಸಂದರ್ಭದಲ್ಲಿ ಶಿಖರಕ್ಕೆ ಎಣ್ಣೆ ಕಳುಹಿಸಿಕೊಡುವುದು ಇಂದಿಗೂ ಇದೆ. ಮನೆಯಲ್ಲಿ ಮರುಳುಸಿದ್ಧಸ್ವಾಮಿಯ ಮುಖವಾಡಕ್ಕೆ ಪೂಜೆಸಲ್ಲಿಸುತ್ತಾರೆ.

ಗುಡೇಕೋಟೆ ಪಾಳೆಯಗಾರರು ಶೈವ ಮತವನ್ನು ಅನುಸರಿಸುತ್ತಿದ್ದರು. ಮನೆದೇವರು ಜಟ್ಟಿಂಗರಾಮೇಶ್ವರನನ್ನು ಪೂಜಿಸುತ್ತಿದ್ದರಲ್ಲದೇ, ಕಂಚಿಯ ಜಗದ್ಗುರುಗಳನ್ನು ಗುರು

ಗಳೆಂದು ಭಾವಿಸಿ, ವರ್ಷಕ್ಕೊಮ್ಮೆ ಹೋಗಿ ಪೂಜೆ ಸಲ್ಲಿಸುವ ಸಂಪ್ರದಾಯ ಇಂದಿಗೂ ಇವರಲ್ಲಿದೆ.

ಕೊಟ್ಟೂರು ಸ್ವಾಮಿಮಠ ಮತ್ತು ಎಣ್ಣೆ ವೀರಪ್ಪ ಮಠದ ಭಕ್ತರಾಗಿರುವ ಇವರು ಅತ್ಯಂತ ಮಡಿವಂತಿಕೆಯಿಂದ ನಡೆದುಕೊಳ್ಳುತ್ತಾರೆ. ಚಿತ್ರದುರ್ಗದ ಬೃಹನ್ಮಠದೊಂದಿಗೂ ಉತ್ತಮ ಸಂಬಂಧವಿದೆ. ಪ್ರತಿನಿತ್ಯ ಇವರು ತಮ್ಮ ಮನೆಯಲ್ಲಿ ಶೈವ ಪದ್ಧತಿಗನುಸಾರವಾಗಿ ಪೂಜೆ–ಪುನಸ್ಕಾರಗಳನ್ನು ನೆರವೇರಿಸುವರು. ಅಲ್ಲದೇ ವೈಷ್ಣವ ಮತ್ತು ಶಾಕ್ತೇಯ ಪಂಥಗಳಿಗೂ ಆದ್ಯತೆ ನೀಡಿದ್ದರು. ಗುಡೇಕೋಟೆಯಲ್ಲಿ ವೆಂಕಟೇಶ್ವರ ದೇವಾಲಯವನ್ನು ನಿರ್ಮಿಸಿ ಅದರ ಪೂಜೆ–ಪುನಸ್ಕಾರವನ್ನು ಕೈಗೊಂಡರು.

ಅಲ್ಲದೇ ಗುಡೇಕೋಟೆ ಅರಸ ಇಮ್ಮಡಿ ಬೊಮ್ಮಣ್ಣನಾಯಕರ ಪುತ್ರ, ಮುಮ್ಮಡಿ ಬೊಮ್ಮಣ್ಣನಾಯಕನು ತನ್ನ ಪಟ್ಟದ ಗ್ರಾಮ ಹುರಳೇಹಾಳ ಕಸಬೆ ಒಳಗಣ ಕೊಂಟೇಹಳ್ಳಿ ಗ್ರಾಮವನ್ನು ಶ್ರೀಶಂಕರ ಭಾರತೀ ಸ್ವಾಮಿಗಳಿಗೆ ಕ್ರಿ.ಶ.1750ರಲ್ಲಿ ದಾನ ಮಾಡುತ್ತಾನೆ[5] ಚೆನ್ನರಾಜ ಕ್ರಿ.ಶ. 1752ರಲ್ಲಿ ದಾನ ನೀಡಿದ ವಿಷಯ ಕದಿರಡವು ಗ್ರಾಮದ ಶಾಸನದಲ್ಲಿದೆ.

ಜರಿಮಲೆ ಪಾಳೆಯಗಾರರೂ ಶೈವ ಮತ ಸ್ವೀಕರಿಸಿದ್ದರು. ಕೂಡ್ಲಗಿ ತಾಲೂಕಿನಲ್ಲಿರುವ ಉಜ್ಜಿನಿ ವೀರಶೈವಮಠದ ಸ್ವಾಮಿಗಳು ಇವರ ರಾಜಗುರುಗಳು ಶ್ರೀಶೈಲದ ಶ್ರೀಪರ್ವತ ಮಲ್ಲಿಕಾರ್ಜುನ ಸ್ವಾಮಿಗಳಿಂದ ವೀರಶೈವಧರ್ಮ ಸ್ವೀಕರಿಸಿದ ನಂತರ ಶ್ರೀಪರ್ವತ ಮಲ್ಲಿಕಾರ್ಜುನ ಸ್ವಾಮಿಗಳು ಇವರಿಗೆ ರಾಜಗುರುಗಳಾದರು. ಹಾಲಪ್ಪ ನಾಯಕ ತನ್ನ ಭಕ್ತಿಯ ದ್ಯೋತಕವಾಗಿ ಈ ರಾಜಗುರುಗಳಿಗೆ ಮಠವೊಂದನ್ನು ಕಟ್ಟಿಸಿಕೊಟ್ಟನು. ಅಲ್ಲದೇ ಜರಿಮಲೆಯಲ್ಲಿ ಮುರೀಘಾಮಠವನ್ನು ಕಟ್ಟಿಸಿದರು. ಶಾಕ್ತ ಆರಾಧಕರಾದ ಇವರು ಮಲಿಯಮ್ಮ, ಚೌಡಮ್ಮ, ಕರಿಯಮ್ಮ, ಕಾಳಿಕಾದೇವಿಯನ್ನು ಪೂಜಿಸುವರು.

ಹಂಡೆ ಪಾಳೆಯಗಾರರು ಮೂಲತಃ ಶೈವ ಶಾಖೆಗೆ ಸೇರಿದವರಾಗಿದ್ದು, ಎಲ್ಲ ಧರ್ಮಗಳನ್ನು ಸಮಾನವಾಗಿ ಕಂಡವರು. ರಾಜ್ಯಾಡಳಿತದ ಜೊತೆಗೆ ಧರ್ಮವನ್ನು ಬೆರೆಸಲಿಲ್ಲ. ಸೊಲ್ಲಾಪುರದ ಸಿದ್ದರಾಮೇಶ್ವರ ಈ ಮನೆತನದ ಕುಲದೇವರು[6]. ಅಲ್ಲದೇ ಮೈಲಾರಲಿಂಗ, ವೀರಭದ್ರ, ವಿರುಪಾಕ್ಷ, ಸಂಗಮನಾಥ, ರೇವಣಸಿದ್ದೇಶ್ವರ, ಬನಶಂಕರಿ ಮುಂತಾದ ದೇವರುಗಳನ್ನು ಪೂಜಿಸುತ್ತಿದ್ದರು. ಇವರು ಶೈವಧರ್ಮಕ್ಕೆ ನೀಡಿದ ದಾನದ ಕುರಿತಾಗಿ ಅನೇಕ ಶಾಸನಗಳು ವಿವರವನ್ನು ನೀಡುತ್ತವೆ.

ಕ್ರಿ.ಶ. ೧೫೪೩ರ ಶಾಸನವು ವೆಂಕಟಪತಿ ದೇವರಾಯನು ಪೆನುಗೊಂಡೆಯಿಂದ ಆಳುತ್ತಿದ್ದಾಗ, ಅವನ ಸಾಮಂತನಾದ ಹಂಡೆ ಹನುಮ ನಾಯಕ ಅಂಕುಶರಾಯನು ರಾಜನಿಂದ ಅಮರ ಮಾಗಣಿಯಾಗಿ ಪಡೆದಿದ್ದ. ಬಳ್ಳಾರಿ ಸೀಮೆಯ ಮಣ್ಣು ಊರನ್ನು ತನ್ನ ಮಗನಾದ ರಾಮಪ್ಪನಿಗೆ ಪುಣ್ಯವಾಗಬೇಕೆಂದು ಕರಿಯ ವೀರನೊಡೆಯನ ಶಿಷ್ಯನಾದ ಚೆನ್ನಮಲ್ಲಿಕಾರ್ಜುನದೇವನ ಶಿಷ್ಯನಾದ ಕೇದಾರದೇವನಿಗೆ ದಾನವಾಗಿ ನೀಡುತ್ತಾನೆ.[7]

ಪಂಚಪೀಠಗಳಲ್ಲಿ ಒಂದಾಗಿರುವ ಶ್ರೀಮತ್ ಉಜ್ಜಯನಿ ಪೀಠ ಮತ್ತು ಹಂಪೆಯ ಹೇಮಕೂಟ ಮಠಗಳು ಹಂಡೆ ಪಾಳೆಯಗಾರರ ಆಳ್ವಿಕೆಯಲ್ಲಿ ಪುಣ್ಯಕ್ಷೇತ್ರಗಳೆಂದೇ ಜನಪ್ರಿಯವಾಗಿವೆ.[8] ಹಂಡೆ ಬಾಲದ ಹನುಮಪ್ಪ ನಾಯಕನು ಜಗದ್ಗುರು ಹೇಮಕೂಟ ಸಿಂಹಾಸನ ಶ್ರೀಕೊಟ್ಟೂರುಸ್ವಾಮಿ ಮಠದ ಗುರುಗಳ ಪ್ರಭಾವವನ್ನು ಕಂಡು ಮಠದಲ್ಲಿ ಧಾರ್ಮಿಕ ಕಾರ್ಯಗಳನ್ನು ಕೈಗೊಳ್ಳಲು ಅಲಕುಂದೆ, ಅಂದ್ರಹಾಳು, ಗೋನಾಳು, ಮುಂಡರಗಿ, ಮಂಚೇರಿ, ಬೆಳಗಲ್ಲು, ಬೊಬ್ಬುಕುಂಟೆ ಇಮ್ರಾಪುರ, ಕಪ್ಪುಗಲ್ಲು ಮೊದಲಾದ ಗ್ರಾಮಗಳಲ್ಲಿಯ ಭೂಮಿಯನ್ನು ಉಂಬಳಿಯಾಗಿ ನೀಡಿ ದತ್ತಿ ಪತ್ರಗಳನ್ನು ಬರೆಯಿಸಿ ಕೊಡುತ್ತಾನೆ.[9] ಕ್ರಿ.ಶ.1726ರ ಶಾಸನದಲ್ಲಿ ಹಂಡೆ ವೀರರಾಮಪ್ಪ ನಾಯಕನು ಕೊಟ್ಟೂರು ಸ್ವಾಮಿಗೆ ಬಳ್ಳಾರಿ ಸೀಮೆಯ ಸಂಗನಕಲ್ಲು ಗ್ರಾಮವನ್ನು ಒಪ್ಪಿಸಿದನಲ್ಲದೆ, ವರ್ಷಕ್ಕೆ ಸಾವಿರ ವರಹವನ್ನು ನೀಡುವ ದಾನ ಶಾಸನವನ್ನು ಬರೆಸಿಕೊಟ್ಟಿದ್ದಾನೆ. ಬಳ್ಳಾರಿ, ಕುರು ಗೋಡು ಹಾಗೂ ತೆಕ್ಕಲಕೋಟೆ ಮಹಾಲುಗಳ ಜಕಾತಿಯಲ್ಲಿ ಪ್ರತಿ ಮಹಲಿಗೂ ವಸೂಲಾದ ಕಾಲುಭಾಗದ ಹಣವನ್ನು ಮಠಕ್ಕೆ ನೀಡಿದ್ದನ್ನು ತಿಳಿಸುತ್ತದೆ. ಅಲ್ಲದೇ ಬಳ್ಳಾರಿಯ ಅಮ್ಮವ್ವನ ಮಠದಲ್ಲಿ ದಾಸೋಹ ನಡೆಸಲು ಅನುಮತಿ ನೀಡುತ್ತಾನೆ.[10]

ಹಂಡೆ ಪಾಳೆಯಗಾರರು ವೀರಶೈವದ ಪ್ರಮುಖ ತತ್ವಗಳಾದ ದಾಸೋಹದ ಮೂಲಕ ಮಠದಲ್ಲಿ ಶೈಕ್ಷಣಿಕ ಅಭಿವೃದ್ಧಿಗೆ ದತ್ತಿ ದಾನನೀಡಿ ಧಾರ್ಮಿಕ ನಿಷ್ಠೆಯನ್ನು ಮೆರೆದರಲ್ಲದೆ, ಶಂಕರಾಚಾರ್ಯರ ಪರಂಪರೆಯ ಅದ್ವೈತವನ್ನು ಪೋಷಿಸಿದರು. ಈ ಗುರುಪೀಠಗಳಿಗೂ ದತ್ತಿದಾನಗಳನ್ನು ನೀಡುವುದರ ಮೂಲಕ ಅವುಗಳ ನಿರ್ವಹಣೆಯನ್ನು ಮಾಡಿದರು. ಕೂಡ್ಲಿಶೃಂಗೇರಿಮಠದ ಶ್ರೀಮದ್ ಜಗದ್ಗುರು ಶೃಂಗೇರಿ ಶ್ರೀನರಸಿಂಹ ಭಾರತಿ ಸ್ವಾಮಿಗಳವರ ಕರಕಮಲ ಸಂಜಾತರಾದ ಶೃಂಗೇರಿ ಶ್ರೀಶಂಕರ ಭಾರತೀಸ್ವಾಮಿಗಳಿಗೆ ರಾಮಪ್ಪ ನಾಯಕನ ಪುತ್ರ ಪವಾಡೆಪ್ಪನಾಯಕ ಭೂದಾನ ಮಾಡಿದ್ದಾನೆ.[11]

ವೈಷ್ಣವ ಧರ್ಮಕ್ಕೂ ಆದ್ಯತೆಯನ್ನು ನೀಡಿದ್ದರೆಂಬುದಕ್ಕೆ ಕ್ರಿ.ಶ.1590ರ ಹಂಡೆ ದೇವಪ್ಪ ನಾಯಕನ ಶಾಸನವು ಮಧುರಾಪುರದ ಚನ್ನಕೇಶವ ದೇವಾಲಯಕ್ಕೆ ಹಣವನ್ನು ದತ್ತಿ ಯಾಗಿನೀಡಿದ್ದಾನೆ.[12]

ಈ ಜಿಲ್ಲೆಯ ಪಾಳೆಯಗಾರರ ಕಾಲದಲ್ಲಿ ಅನೇಕ ದೇವಾಲಯಗಳು ನಿರ್ಮಾಣ ವಾದವು. ಗುಡೇಕೋಟೆ ಪಾಳೆಯಗಾರರ ಕಾಲದಲ್ಲಿ ಆಂಜನೇಯ ದೇವಾಲಯ, ಚೌಡಮ್ಮ ದೇವಾಲಯ, ಮರಿಯಮ್ಮ ದೇವಾಲಯ, ರಾಮಲಿಂಗೇಶ್ವರ ದೇವಾಲಯ, ಬಸವಣ್ಣ ದೇವಾಲಯ, ಕಾಳಮ್ಮ ದೇವಾಲಯ, ಈಶ್ವರ ದೇವಾಲಯ, ಲಕ್ಷ್ಮಿ ವೆಂಕಟೇಶ್ವರ ದೇವಾಲಯ, ಚೌಳೇಶ್ವರ ದೇವಾಲಯ, ಶಿವ-ಪಾರ್ವತಿಯರ ದೇವಾಲಯ, ಮುಂತಾದವು ಗಳನ್ನು ನಿರ್ಮಿಸಿದ್ದಾರೆ, ಅಲ್ಲದೇ ಕೆಲವು ಹಳೆಯ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿದ್ದಾರೆ.

ಹಂಡೆ ಪಾಳೆಯಗಾರರ ದೇವಾಲಯಗಳು ಪ್ರಮುಖವಾಗಿ ಹೊಸಪೇಟೆ, ಬಳ್ಳಾರಿ, ಶಿರಗುಪ್ಪ, ರಾಯಚೂರು, ಸಿಂಧನೂರು, ಬಂಕಾಪೂರ ಹಾಗೂ ಅನಂತಪುರಗಳಲ್ಲಿ ನಿರ್ಮಾಣವಾಗಿವೆ. ಬಸವೇಶ್ವರ, ಬಸವಣ್ಣ, ಈಶ್ವರ, ವೀರಭದ್ರ, ಬಳ್ಳಾರಿಯ ಕೋಟೆ ಮಲ್ಲೇಶ್ವರ, ಕುರುಗೋಡಿನ ದೊಡ್ಡಬಸಪ್ಪ, ಕೋಟೆ ಮೇಲಿನ ವೀರಭದ್ರ, ಕೆಂಚನಗುಡ್ಡದ ಗಂಗಾಧರೇಶ್ವರ, ಬಳ್ಳಾರಿಯ ಕೋಟೆ ಮಲ್ಲೇಶ್ವರ, ಕುಡತಿಯ ಪೇಟೆ ಬಸವೇಶ್ವರ, ನೀಲಮ್ಮನ ಮಠ, ರಾಯ ರಾಮಲಿಂಗೇಶ್ವರ, ಕೊರ್ಲಗುಂಡಿಯ ವೀರಭದ್ರ, ತೆಕ್ಕಲ ಕೋಟೆಯ ವೀರಭದ್ರ, ಸನ್ಯಾಸಿಮಠ, ಸಿಡಿಗಿನ ಮೇಳದ ವೀರಭದ್ರ, ಈಶ್ವರ, ಬಸವೇಶ್ವರ, ಗುತ್ತಿಗನೂರದ ಪೇಟೆ ಬಸವೇಶ್ವರ, ಕಾರೆಕಲ್ಲಿನ ವೀರಭದ್ರ ಇತ್ಯಾದಿ.

ಈ ಪಾಳೆಯಗಾರರು ತಮ್ಮದೇ ಆದ ನಂಬಿಕೆ-ಸಂಪ್ರದಾಯಗಳನ್ನು ಹೊಂದಿದ್ದಾರೆ. ಅವುಗಳನ್ನು ಇಂದಿಗೂ ಆ ಮನೆತನಗಳ ವಂಶಸ್ಥರು ಪರಿಪಾಲಿಸುತ್ತಿದ್ದಾರೆ. ಚಿತ್ರದುರ್ಗದ ಅರಸರನ್ನು ಸೋಲಿಸಲು ದಿವಾನ್ ಪೂರ್ಣಯ್ಯನವರ ಸಲಹೆಯಂತೆ ಹೈದರಾಲಿ ಮತ್ತು ಟಿಪ್ಪುಸುಲ್ತಾನ್ ಜರಿಮಲೆ ಪಾಳೆಯಗಾರರನ್ನು ಸಂಧಿಸಿ ಸಲಹೆ ಕೇಳುತ್ತಾನೆ. ಅವರ ಸಹಾಯವನ್ನು ಪಡೆಯುತ್ತಾರೆ. ಯುದ್ಧದಲ್ಲಿ ಹೈದರಾಲಿ ಗೆಲ್ಲುತ್ತಾನೆ ತನಗೆ ಸಹಾಯ ಮಾಡಿದ ಜರಿಮಲೆ ಪಾಳೆಯಗಾರರು ಮುಂದೊಂದು ದಿನ ತನ್ನ ವೈರಿಗಳಾಗಬಹುದೆಂದು ತಿಳಿದು ಅವರನ್ನು ಬಂಧಿಸಿ ಶ್ರೀರಂಗಪಟ್ಟಣದ ಸೆರೆಯಲ್ಲಿಡುತ್ತಾರೆ.

ಸೆರೆಮನೆಯ ಕಾವಲುಗಾರ ನಿದ್ರೆಯಲ್ಲಿದ್ದಾಗ, ಜರಿಮಲೆಯ ಪಾಳೆಯಗಾರ ಭೂಮರಾಜ ತಪ್ಪಿಸಿಕೊಂಡು, ಹೈದರಾಲಿಯ ಸಂಬಂಧಿ ಸುಂದರ ಸ್ತ್ರೀಯೋರ್ವಳನ್ನು ಅಪಹರಿಸಿಕೊಂಡು ಬರುತ್ತಾನೆ. ಅವಳನ್ನು ಉಜ್ಜನಿಯ ಶ್ರೀಮಠದ ಒಳಕೋಣೆಯಲ್ಲಿಡು ತ್ತಾನೆ. ಈ ವಿಷಯ ಮಠದ ಶ್ರೀಗಳಿಗೆ ಗೊತ್ತಾಗಿ ಅವರು ಶಾಪ ನೀಡುತ್ತಾರೆ. ಪಾಳೆಯಗಾರ ಭೂಮರಾಜನಿಗೆ ಕಣ್ಣು ಹೋಗುತ್ತವೆ. ಹೆಂಡತಿಗೆ ನಡೆದ ವಿಷಯ ತಿಳಿಸುತ್ತಾನೆ. ಈ ವಿಷಯವನ್ನು ಪೀಠದ ಶ್ರೀಗಳಲ್ಲಿ ಅರುಹಿದಾಗ ಅವರು ಶಾಪಪರಿಹಾರಕ್ಕಾಗಿ ಪ್ರತಿವರ್ಷ ಒಂದು ಕುಂಭ ಎಣ್ಣೆ ಮತ್ತು ೧೨ ಟಂಕ-ಹಣವನ್ನು ಮಠಕ್ಕೆ ನೀಡಲು ತಿಳಿಸಿದರು.

ಇದರಿಂದ ನಿರುತ್ಸಾಹಿಯಾದ ಭೂಮರಾಜ ತಾನು ಉಜ್ಜನಿಯಲ್ಲಿ ಇರುವುದು ಬೇಡ, ಅದನ್ನು ದಾಟುವುದು ಬೇಡ, ನಮ್ಮ ಉಡದಾರ ನಾವು ಕಟ್ಟುವುದು ಬೇಡ ಎಂದು ಜರಿಮಲೆಗೆ ಬರುತ್ತಾನೆ.

ನಂತರ ತಮ್ಮ ಮನೆಯಲ್ಲಿ ಶ್ರೀಮರುಳಸಿದ್ದಸ್ವಾಮಿಗಳ ಮೂರ್ತಿಯನ್ನು ಪ್ರತಿಷ್ಠಾಪಿಸಿ ಆರಾಧಿಸತೊಡಗಿದರು. ಪ್ರತಿವರ್ಷ ಸ್ವಾಮಿಗಳ ಹೇಳಿಕೆಯಂತೆ ಮರುಳಸಿದ್ದೇಶ್ವರನ ಶಿಖರಕ್ಕೆ ಒಂದು ಕೊಡ ಎಣ್ಣೆಯನ್ನು ಮತ್ತು ಕಾಣಿಕೆಯನ್ನು ಮಡಿಹುಡಿಯಿಂದ ಇಂದಿಗೂ ಕಳುಹಿಸಿಕೊಡುವ ಸಂಪ್ರದಾಯ ಇದೆ. ಆದರೆ ಇವರು ಉಡುದಾರ ಕಟ್ಟುವುದಿಲ್ಲ. ಉಜ್ಜನಿಗೂ ಹೋಗುವುದಿಲ್ಲ. ಹೋದರೆ ಕೇಡಾಗುವುದೆಂಬ ಭಾವನೆ ಇದೆ. ಮಾವಿನಗೊಟ್ಟ

ಪೂಜೆ ಮಾಡುತ್ತಾರೆ. ಸಂಪ್ರದಾಯ ಇವರಲ್ಲಿದೆ, ಇದಕ್ಕೆ ಜರಿಮಲೆ ಪಾಳೆಯಗಾರರು, ನೀಡುವ ಕಾರಣ ಹೀಗಿದೆ.

ಜರಿಮಲೆ ಪಾಳೆಯಗಾರರಾದ ಸಿದ್ದಪ್ಪ ನಾಯಕ, ಲಿಂಗಳ ನಾಯಕ, ಓಬಳನಾಯಕ, ಮಲ್ಲಿಕಾರ್ಜುನ ನಾಯಕ, ಭೂಮರಾಜು ನಾಯಕರುಗಳು ಭೂಪಸಮುದ್ರದಲ್ಲಿ ಬಿಳಿಹಂದಿ ಜನರಿಗೆ ಉಪದ್ರವ ಕೊಡುತ್ತಿದ್ದುದರಿಂದ, ಮರುಳಸಿದ್ದರ ಆಶೀರ್ವಾದ ಪಡೆದು ಬೇಟೆಗೆ ತೆರಳಿ ಬಿಳಿಹಂದಿ ಬೆನ್ನಟ್ಟುತ್ತಾರೆ.

ಹಂದಿ ದೂರ ಓಡಿ, ತಪ್ಪಿಸಿಕೊಂಡು ಹಳ್ಳದಲ್ಲಿ ಸ್ನಾನಮಾಡಿ ಗುಂಡಿನ ಪಕ್ಕ ಮಲಗಿತ್ತು. ಈ ನಾಯಕರು ತಿರುಗುತ್ತಾ ಹೋದಾಗ ಹಂದಿ ಕಂಡಿತು. ಭೂಮರಾಜು ಭರ್ಚಿ ಹಾಕಿದ, ಹಂದಿ ಸಿಂಹಗರ್ಜನೆ ಮಾಡುತ್ತಾ ಉಜ್ಜನಿ ಕಡೆಗೆ ಓಡಿತು. ಇವರು ಹಿಂಬಾಲಿಸಿದರೂ ಪೊದೆಯಲಿ ಹೊಕ್ಕು ಮಾಯವಾಯಿತು.

ನಾಯಕರಿಗೆ ನೀರಡಿಕೆಯಾಯಿತು. ಗಿಡದ ನೆರಳಿನಲ್ಲಿ ತಂಗಿದರು. ಇದ್ದಕ್ಕಿದ್ದಂತೆ ಪೊದೆಯಿಂದ ನಾಯಿಯೊಂದು ಮೈತುಂಬ ಕೆಸರು ಮಾಡಿಕೊಂಡು ಬಂದದ್ದನ್ನು ಭೂಮರಾಜ ನೋಡಿದ ಪೊದೆಯಲ್ಲಿ ನೀರಿರಬಹುದೆಂದು ಒಳಹೊಕ್ಕಾಗ ಅಲ್ಲಿ ನೀರು ಕಂಡಿತು.

ನೀರನ್ನು ಕುಡಿದು ತಲೆ ಎತ್ತಿ ಮೇಲಕ್ಕೆ ನೋಡಿದಾಗ ವೃಕ್ಷದ ಟೊಂಗೆಗೆ ತೊಟ್ಟಿಲೊಂದು ನೇತಾಡುತ್ತಿತ್ತು. ಆ ತೊಟ್ಟಿಲಲ್ಲಿ ಸ್ವಾಮಿಗಳೊಬ್ಬರು ಮಾವಿನ ಹಣ್ಣನ್ನು ತಿಂದು ಗೊಟ್ಟು ಮಾತ್ರ ಉಳಿಸಿದ್ದರು. ಭೂಮರಾಜು ನಾಯಕ ಸ್ವಾಮಿಗಳಿಗೆ ದೀರ್ಘದಂಡ ನಮಸ್ಕಾರ ಮಾಡಿದ, ಸ್ವಾಮಿಗಳು ತಮ್ಮ ಕೈಯ್ಯಲ್ಲಿದ್ದ ಗೊಟ್ಟವನ್ನು ನೀಡಿ ನೀನು ರಾಜನಾಗು ಎಂದು ಆಶೀರ್ವಾದ ಮಾಡಿದರು. ಅಂದು ಸ್ವಾಮಿಗಳು ನೀಡಿದ ಮಾವಿನ ಗೊಟ್ಟವನ್ನು ಜರಿಮಲೆ ಪಾಳೆಗಾರರು ತಮ್ಮ ಮನೆಯಲ್ಲಿಟ್ಟು ಪೂಜೆ ಮಾಡುವ ಸಂಪ್ರದಾಯವಿದೆ.

ಕನಸಿನ ಕುರಿತಾಗಿಯೂ ಇವರ ನಂಬಿಕೆ ಹೀಗಿದೆ.

ಜರಿಮಲೆ ಪಾಳೆಯಗಾರರು ಯುದ್ಧಕ್ಕೆ ಸಿದ್ಧರಾದಾಗ, ರಾತ್ರಿ ಪಾಳೆಯಗಾರನ ಕನಸಿನಲ್ಲಿ ದುರುಗಮ್ಮ ಕಾಣಿಸಿಕೊಂಡು ಯುದ್ಧಕ್ಕೆ ಹೋಗುವಾಗ ನನ್ನನ್ನು ಹಿಂದೆಯೇ ಕರೆದುಕೊಂಡು ಹೋಗಿರಿ ನಿಮಗೆ ಜಯವಾಗುವುದು ಖಂಡಿತ ಎಂದಳಂತೆ. ಆಗ ಮರುದಿನ ದುರುಗಮ್ಮನ ಶಿರಚ್ಛೇದನ ಮಾಡಿ ಶಿರವನ್ನು ಕಂಬಳಿಯಲ್ಲಿಟ್ಟುಕೊಂಡು ಹೋಗಿ ಯುದ್ಧ ಮಾಡಿ ಜಯಶೀಲರಾದರಂತೆ, ಪುನಃ ಜರಿಮಲೆಯಲ್ಲಿ ದುರುಗಮ್ಮನ ಶಿರವನ್ನು ಪ್ರತಿಷ್ಠಾಪಿಸಿದರು.

ಯುದ್ಧದಲ್ಲಿ ಕಾಪಾಡಿದ ದೇವತೆಯ ಜಾತ್ರೆಯನ್ನು ಪ್ರತಿ ವರ್ಷ ಆಚರಿಸಲು ಪ್ರಾರಂಭಿಸಿದರು, ಈ ಜಾತ್ರೆಯ ಮೊದಲ ಕಾರ್ಯ ಇವರಿಂದಲೇ ನಡೆಯುತ್ತದೆ.

ಗುಡೇಕೋಟೆ ಹಿರೇಬೊಮ್ಮಂತರಾಜನು– ಮಕ್ಕಳಿಲ್ಲದ ಕಾರಣ ಮನೆದೇವರಾದ ಜಟ್ಟಿಂಗರಾಯನ ಸೇವೆಯನ್ನು ಮಾಡಬೇಕೆಂದು ಬ್ರಾಹ್ಮಣರು ಹೇಳಿದರು. ಸ್ವಪ್ನದಲ್ಲಿ ದೇವರು ಬಂದು ನಿನಗೆ ೭ ಮಕ್ಕಳಾಗುತ್ತಾರೆಂದು ಹೇಳುತ್ತಾನೆ–೭ ಜನ ಜನಿಸಿದರು. ಅವರನ್ನೇ ೭ ಗ್ರಾಮಗಳಿಗೆ ನೇಮಕ ಮಾಡಲಾಯಿತು.

ಅವಿಭಕ್ತ ಕುಟುಂಬ ವ್ಯವಸ್ಥೆಯನ್ನು ಹೊಂದಿರುತ್ತಿದ್ದ ಈ ಪಾಳೆಯಗಾರರು, ಅನೇಕ ಪತ್ನಿಯರನ್ನು ಹೊಂದುವುದು, ಪೌರುಷದ ಸಂಕೇತವಾಗಿರುತ್ತಿತ್ತು. ಇವರುಗಳ ವಿವಾಹವು ಬಹಳ ವಿಶಿಷ್ಟ ರೀತಿಯಿಂದ ಜರುಗುತ್ತಿತ್ತು. ಸ್ವ–ಜಾತಿಯ ಮತ್ತು ವಿಭಿನ್ನ ಬೆಡಗು ಹೊಂದಿರುವುದರೊಂದಿಗೆ ಮಾತ್ರ ವಿವಾಹ ಜರುಗುತ್ತಿತ್ತು. ಗುಡೇಕೋಟೆ ಪಾಳೆಯಗಾರರು ಪ್ಯಾಪಲಿ, ಹೊಸಕೋಟೆ, ಕನಕಗಿರಿ, ಸುರಪುರ, ಕ್ಯಾದಿಗೇರಿ, ಜರಿಮಲೆ ಚಿತ್ರದುರ್ಗ, ನಾಯಕನ ಹಟ್ಟಿ ಪಾಳೆಯಗಾರರೊಂದಿಗೆ ವಿವಾಹ ಸಂಬಂಧಗಳನ್ನು ಏರ್ಪಡಿಸಿಕೊಂಡಿದ್ದಾರೆ. ಗುಡೇಕೋಟೆ ತಾತೇಯರಾಜನಿಗೆ ಪ್ಯಾಪಲಿ ಸಂಸ್ಥಾನದ ಸಿದ್ದಮ್ಮಳನ್ನು, ವೆಂಕಟಗಿರಿ ರಾಜನಿಗೆ ಕನಕಗಿರಿ ಸಂಸ್ಥಾನದ ತಾತ ಅವಳಪ್ಪನ ಮಗಳು ಕಾಟಮ್ಮಳನ್ನು, ಚಿನ್ನೇರಾಜರಿಗೆ ಹೊಸಕೋಟೆ ಸಂಸ್ಥಾನದ ನೀಲಮ್ಮಾಜಿಯನ್ನು, ಬೊಮ್ಮಂತರಾಜನಿಗೆ ಬಂಗಾರಮ್ಮಳನ್ನು ಜಟಂಗಿ ರಾಜನಿಗೆ ಹೊಸಕೋಟೆಯ ಬಂಗಾರಮ್ಮಳನ್ನು ರಾಜರಾಜನಿಗೆ ಮಲೇ ತಿಮ್ಮಣ್ಣ ನಾಯಕನ ಮಗಳು ಲಕ್ಷ್ಮಮ್ಮ ನಾಗತಿಯನ್ನು ಕೊಟ್ಟು ವಿವಾಹ ಮಾಡಲಾಗಿತ್ತು. ಅಲ್ಲದೇ ಜರಿಮಲೆ ಸಣ್ಣ ಸಿದ್ದಪ್ಪನಾಯಕನ ಪ್ಯಾಪಲಿ ಸಂಸ್ಥಾನದ ಸಿದ್ದಮ್ಮನನ್ನು ವಿವಾಹವಾಗಿದ್ದನು. ಇಮ್ಮಡಿ ನಾಯಕ ಹಟ್ಟಿ ಮಲ್ಲಪ್ಪ ನಾಯಕನ ಮಗಳನ್ನು ಮದುವೆಯಾಗಿ ವೈವಾಹಿಕ ಸಂಬಂಧದೊಂದಿಗೆ ರಾಜಕೀಯ ಸಂಬಂಧವನ್ನು ಬೆಳೆಸಿಕೊಂಡನು. ನಾಯಕನ ಹಟ್ಟಿಯವರು ಭರ್ಬಿ ಮನೆಗಳಲ್ಲಿ ಬಂಧುತ್ವ ಮಾಡಿರುತ್ತಾರೆಂದು ಸುದ್ದಿಕೇಳಿ, ಅವರನ್ನು ಗುಡೇಕೋಟೆ, ಜರಿಮಲೆ ಪಾಳೆಯಗಾರರು ವಿವಾಹಗಳನ್ನು ತಿರಸ್ಕರಿಸುತ್ತಾರೆ. ಇವರು ಮೊದಲಿನಿಂದಲೂ ತಮ್ಮ ಅಂತಸ್ತಿಗೆ ಸರಿಹೊಂದುವವರೊಂದಿಗೆ ವಿವಾಹ ಸಂಬಂಧಗಳನ್ನು ಏರ್ಪಡಿಸಿಕೊಂಡರೂ, ಇತ್ತೀಚಿಗೆ ಈ ವಿವಾಹದ ನಿರ್ಬಂಧಗಳು ಸಡಿಲಗೊಂಡಿವೆ. ಆರ್ಥಿಕ ಭದ್ರತೆ ಹಾಗೂ ಶ್ರೀಮಂತಿಕೆಗೆ ಜೋತು ಬಿದ್ದು ಸಾಮಾನ್ಯ ಬೇಡರೊಂದಿಗೆ ಇಲ್ಲವೇ ಅವರ ಅಧೀನದಲ್ಲಿದ್ದ ತಮ್ಮ ಜನಾಂಗದ ದಂಡನಾಯಕ, ಗುರಿಕಾರ ಹಾಗೂ ಕಟ್ಟೆಮನೆ ಮನೆತನಗಳೊಂದಿಗೆ ವಿವಾಹ ಸಂಬಂಧಗಳನ್ನು ಮಾಡಿಕೊಂಡಿದ್ದಾರೆ.

ಸಂದರ್ಭಕ್ಕೆ ತಕ್ಕಂತೆ ಉಡುಗೆ ತೊಡುಗೆಗಳನ್ನು ಧರಿಸುತ್ತಿದ್ದ ಇವರು, ಕರಿಬಣ್ಣದ ವಸ್ತ್ರವನ್ನು ಧರಿಸುತ್ತಿರಲಿಲ್ಲ. ಕರಿಬಣ್ಣ ಅಶುಭ ಸಂಕೇತವೆಂಬ ಭಾವನೆ ಇವರಲ್ಲಿತ್ತು. ಸಸ್ಯಾಹಾರಿ ಮತ್ತು ಮಾಂಸಾಹಾರಿಗಳಾದ ಇವರು ಕೆಲವು ಸಂದರ್ಭಗಳಲ್ಲಿ ಬಲಿಕೊಡುವ ಪದ್ಧತಿಯನ್ನು ಅನುಸರಿಸುತ್ತಿದ್ದರು. ಪಾಳೆಯಗಾರರು ಸಾಮಾನ್ಯ ಬೇಡರ ಸಹ ಪಂಕ್ತಿ–ಭೋಜನ ಮಾಡುತ್ತಿರಲಿಲ್ಲ, ಅವರ ಮನೆಯಲ್ಲಿ ಏನಾದರೂ ಹಬ್ಬ–ಹರಿದಿನಗಳಾದರೆ ಊಟಕ್ಕೆ ಕರೆಯದೆ ಬೇಳೆ, ಬೆಲ್ಲ, ಅಕ್ಕಿ, ಕೊಬ್ಬರಿ ಬಟ್ಟೆ–ಬರೆಗಳನ್ನು ದೊರೆಗಳಿಗೆ

ಕೊಡುವ ಪದ್ದತಿ ಇತ್ತು. ಇದನ್ನು ಅಕ್ಕಿಪಡಿಕೊಡುವ ಪದ್ಧತಿ ಎಂದು ಕರೆಯುತ್ತಾರೆ. ಕೆಲವು ಹಬ್ಬ-ಹರಿದಿನ, ಜಾತ್ರೆ ಇತ್ಯಾದಿ ದಿನಗಳಂದು ಮಾಂಸಾಹಾರವನ್ನು ಸಂಪೂರ್ಣವಾಗಿ ನಿಷೇಧಿಸುತ್ತಿದ್ದರು.

ಇವರುಗಳು ತಮ್ಮ ರಾಜಕೀಯ ಸ್ಥಾನಮಾನಗಳಿಗೆ ತಕ್ಕಂತೆ ಬಿರುದುಗಳನ್ನು ಹೊಂದಿದ್ದರು. ಗುಡೇಕೋಟೆ ಪಾಳೆಯಗಾರರಿಗೆ ಶ್ರೀಮನ್ಮಹಾನಾಯಕಾಚಾರ್ಯ, ಇಮ್ಮಡಿ ಗಡಿಯಂಕ ಭೀಮ, ಜರಿಮಲೆ ಪಾಳೆಯಗಾರರಾದ ಭೂಮಿರಾಜರಿಗೆ – ಜುಮ್ಮೇದಾರ್ ಗುಡ್ಡಯ್ಯ ಜರಿಮಲ್ಲ, ಬೊಮ್ಮಣ್ಣನಾಯಕನಿಗೆ ಮೊಳಕಾಲ ಬಾಸಿಂಗ, ಹಂಡೆ ಪಾಳೆಯಗಾರರಿಗೆ ಹಂಡೆವಜೀರಪ್ಪ, ಹಂಡೇರಾಯರು ಎಂಬ ಬಿರುದುಗಳಿದ್ದವು. ಇವು ಇವರುಗಳ ರಾಜವೈಭವದ ಪ್ರತೀಕವಾಗಿದ್ದವು.

ವಿವಿಧ ಸಂದರ್ಭಗಳಲ್ಲಿ ಬೇಟೆಯಾಡುತ್ತಿದ್ದರು. ಯುಗಾದಿ ಬೇಟೆ, ಅರಸರ ಬೇಟೆ, ದೈವದ ಬೇಟೆ, ಸಾರ್ವಜನಿಕ ಬೇಟೆ, ಸಾಮಾನ್ಯ ದಿನಗಳ ಬೇಟೆ ಎಂದು ಇವರ ಬೇಟೆಯ ರೀತಿಗಳನ್ನು ವಿಭಾಗಿಸಬಹುದಾಗಿದೆ. ಕೆಲವು ಪ್ರಾಣಿಗಳ ಬೇಟೆಯು ನಿಷೇಧಿಸಲ್ಪಟ್ಟಿತ್ತು. ಜರಿಮಲೆ ಪಾಳೆಯಗಾರರು ಹಂದಿ ಬೇಟೆಯನ್ನು ನಿಷೇಧಿಸಿದ್ದರು. ಕಾರಣ ಉಜ್ಜಯಿನಿಯ ಮರುಳಸಿದ್ದೇಶ್ವರ ಒಂದು ಸಲ ಹಂದಿಯಾಗಿ ಕಾಣಿಸಿಕೊಂಡಿದ್ದ ಎಂಬ ನಂಬಿಕೆ ಇದೆ.

ಈ ಪಾಳೆಯಗಾರರು ಅನೇಕ ಜನಹಿತ ಕಾರ್ಯಗಳನ್ನು ಮಾಡಿ ಇಂದಿಗೂ ಜನರ ಮನದಲ್ಲಿದ್ದಾರೆ. ಅನೇಕ ಕೆರೆ, ಬಾವಿಗಳನ್ನು ನಿರ್ಮಾಣ ಮಾಡುವುದರೊಂದಿಗೆ ರೈತರಿಗೆ ನೀರಾವರಿಗೆ ಆದ್ಯತೆಯನ್ನು ನೀಡಿದ್ದರು. ಗುಡೇಕೋಟೆಯ ಪಾಳೆಯಗಾರರು ಬೊಮ್ಮಲಿಂಗ ಕೆರೆ, ತೊಟ್ಟಿಲು ಬಾವಿ, ಏಣಿ ಈರಪ್ಪನ ಬಾವಿಯನ್ನು ನಿರ್ಮಿಸಿದ್ದಾರೆ.

ಹಂಡೆ ಪಾಳೆಯಗಾರರು ಕೋರ್ಲಗುಂದ ಗ್ರಾಮದಲ್ಲಿ ಹಾಲ ಬಸವೇಶ್ವರ ಬಾವಿ, ನೀಲಮ್ಮನ ಬಾವಿಗಳು ಅಂದ್ರಾಳು ಗ್ರಾಮದಲ್ಲಿ ೨ ಬಾವಿಗಳನ್ನು ಬೈಲೂರು ಗ್ರಾಮದಲ್ಲಿ ಒಂದು ಬಾವಿಯನ್ನು, ಬಳ್ಳಾರಿಯಲ್ಲಿ ೩ ಬಾವಿಗಳನ್ನು, ಬಂಕಾಪೂರದಲ್ಲಿ ಪಂಚಮಲಕಪ್ಪನ ಬಾವಿಯನ್ನು ಹೀಗೆ ಇವರು ನಿರ್ಮಿಸಿದ ಒಂಬತ್ತು ಬಾವಿಗಳು ಬಹಳ ವಿಶಿಷ್ಟವಾದವುಗಳಾಗಿವೆ.

ಈ ಪಾಳೆಯಗಾರರು ಧಾರ್ಮಿಕ ಸಹಿಷ್ಣುಗಳಾಗಿದ್ದರು. ಇವರ ಆಳ್ವಿಕೆಯಲ್ಲಿ ಯಾವುದೇ ಧಾರ್ಮಿಕ ಸಂಘರ್ಷ ನಡೆದುದಕ್ಕೆ ಆಧಾರಗಳಿಲ್ಲ. ಎಲ್ಲಾ ದೇವಾಲಯಗಳಿಗೆ ದಾನ-ದತ್ತಿಗಳನ್ನು ನೀಡಿದ್ದಾರೆ. ದಾನ-ಧರ್ಮಗಳಲ್ಲಿ ಬಹಳ ಉದಾರಿಗಳಾಗಿದ್ದ ಇವರು ಬೇಡಿದವರಿಗೆ, ಹಸಿದವರಿಗೆ ಎಂದೂ ಇಲ್ಲವೆನ್ನುತ್ತಿರಲಿಲ್ಲ. ಕೊಡುಗೈದಾನಿಗಳೆಂಬ ಕೀರ್ತಿಗೆ ಭಾಜನರಾಗಿದ್ದಾರೆ. ಆದರೆ ಕೊನೆಗಾಲದಲ್ಲಿ ಇವರ ಆರ್ಥಿಕ ಪರಿಸ್ಥಿತಿ ದುರ್ಬಲವಾಯಿತು. ಕಾರಣ ಇವರು ಯಾವುದೇ ಉದ್ಯೋಗದೆಡೆ ಗಮನ ಹರಿಸಲಿಲ್ಲ. ಹೊರಗಡೆ ಹೋಗಿ ಉದ್ಯೋಗ ಮಾಡುವುದು ತಮ್ಮ ವಂಶಕ್ಕೆ ಅವಮಾನವೆಂದು ತಿಳಿದರು. ಇವರ ವಂಶಸ್ಥರು

ಇಂದಿಗೂ ನೆಲೆಸಿದ್ದಾರೆ. ಗುಡೇಕೋಟೆಯ ಪಾಳೆಯಗಾರರ ವಂಶಸ್ಥರಾದ ರಾಜಾ ಜಟ್ಟಿಂಗರಾಜರು, ಜರಿಮಲೆ ಪಾಳೆಯಗಾರರ ವಂಶಸ್ಥರಾದ ರಾಜ ಪಂಪಾಪತಿನಾಯಕರು ತಮ್ಮ ಊರಿನಲ್ಲಿಯೇ ವಾಸವಾಗಿದ್ದಾರೆ. ಹಂಡೆ ಪಾಳೆಯಗಾರರ ವಂಶಸ್ಥರು ಇವರ ಮೂಲಸ್ಥಳವಾದ ಬಿಜಾಪೂರ ಜಿಲ್ಲೆಯ ಬಾಗೇವಾಡಿ ತಾಲೂಕಿನ ಮುತ್ತಗಿ ಮತ್ತು ವಡವಡಗಿ ಗ್ರಾಮಗಳಲ್ಲಿ ನೆಲೆಸಿದ್ದಾರೆ.

ಈ ಪಾಳೆಯಗಾರರು ಇಂದು ಆರ್ಥಿಕವಾಗಿ ಶೋಚನೀಯ ಸ್ಥಿತಿಯಲ್ಲಿರಬಹುದು. ಆದರೆ ಸಾಂಸ್ಕೃತಿಕವಾಗಿ ಅವರನ್ನು ಇಂದಿಗೂ ಗುರುತಿಸಲಾಗುತ್ತದೆ. ಇವರ ಮನೆ ದೇವರುಗಳ ಜಾತ್ರೆ ನಡೆಯುವ ಸಂದರ್ಭದಲ್ಲಿ ಇವರ ಮೊದಲ ಪೂಜೆಯಾದ ನಂತರವೇ ತೇರು ಎಳೆಯುತ್ತದೆ. ಹಬ್ಬ-ಹರಿದಿನಗಳಲ್ಲಿ ಇವರಿಗೆ ಪ್ರಮುಖವಾದ ಪಾತ್ರವಿದೆ. ಆದರೆ ಈ ಆಚರಣೆಗಳು ಮೊಟಕುಗೊಂಡಿವೆ. ಹಬ್ಬದ ಹಿಂದಿನ ದಿನದ ತಯ್ಯಾರಿ ಮತ್ತು ಉತ್ಸಾಹಗಳನ್ನು ಈಗ ಈ ಹಬ್ಬದ ದಿನವಷ್ಟೇ ನೋಡಬಹುದಾಗಿದೆ. ಹೀಗೆ ಬಳ್ಳಾರಿ ಜಿಲ್ಲೆಯ ಈ ಪಾಳೆಯಗಾರರು ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ತಮ್ಮ ಹೆಜ್ಜೆಗುರುತುಗಳನ್ನು ಮೂಡಿಸುತ್ತ, ಕರ್ನಾಟಕದ ಇತರ ಪಾಳೆಯಪಟ್ಟುಗಳ ಇತಿಹಾಸ ಪರಂಪರೆಯಲ್ಲಿ ತಮ್ಮ ಆಸ್ತಿತ್ವವನ್ನು ಚಿರಸ್ಥಾಯಿಗೊಳಿಸಿಕೊಂಡಿದ್ದಾರೆ.

ಅಡಿಟಿಪ್ಪಣಿಗಳು

೧. ಅಮರೇಶ ಯತಗಲ್, ಕರ್ನಾಟಕ ನಾಯಕ ಅರಸು ಮನೆತನಗಳ ವಿಶಿಷ್ಟ ಸಾಂಸ್ಕೃತಿಕಾಚರಣೆಗಳು: ಚಾರಿತ್ರಿಕ ಅಧ್ಯಯನ, ೨೦೦೫,

೨. ಕವಿವಿ ಶಾಸನ ಸೂಚಿ-ಸಂ-೧ ಪುಟ ೧೪೪ ಮತ್ತು ಗುಂಡಕರಜಗಿ. ವಾಯ್.ಕೆ., ಹಂಡೆ ಕುರುಬರು: ಒಂದು ಅಧ್ಯಯನ, ಎಂ.ಫಿಲ್. ಪ್ರಬಂಧ ೨೦೦೨ ಪುಟ-೨೦೧

೩. ಡಾ: ಎಂ.ಎಂ. ಕಲಬುರ್ಗಿ, ಕರ್ನಾಟಕದ ಕೈಫಿಯತ್ತುಗಳು, ಪುಟ - ೫೩೪

೪. ಅದೇ ಪುಟ - ೫೩೪

೫. ಶ್ರೀ ಮದ್‌ಜಗದ್ಗುರು ಶ್ರೀಕೂಡ್ಲಿ ಶೃಂಗೇರಿ ಸಂಸ್ಥಾನದ ಪ್ರಾಚೀನ ಶಾಸನ ಲೇಖನ ಸಂಗ್ರಹ ಭಾಗ-೧ ೧೯೬೫, ಪುಟ -೩೦

೬. ಟಿ.ಎಸ್. ವೆಂಕಟರಮಣಯ್ಯ, ಸಂ-೧ ರಾಘವಾಂಕ ಕವಿಯ ಸಿದ್ದರಾಮ ಚರಿತ್ರೆ, ಪ್ರೊ.ಡಿ.ಎಲ್. ನರಸಿಂಹಚಾರ್ಯ- ಪುಟ -೧೦೮

೭. ಕವಿವಿ ಶಾ. ಸಂಪುಟ-೯, ೧೯೯೮, ಪುಟ ೧೩೫

೮. ಚಂದ್ರಶೇಖರ ನಾರಾಯಣಪೂರ, ಕರ್ನಾಟಕದ ವೀರಶೈವಮಠಗಳು, ೨೦೦೨, ಪುಟ ೬೧೫

೯. ಅದೇ ಪುಟ -೬೨೦

೧೦. ಕವಿವಿ ಶಾ.ಸಂಪುಟ-೧, ಪುಟ ೧೪೨

೧೧. ಶ್ರೀ ಮದ್‌ಜಗದ್ಗುರು ಶ್ರೀಕೂಡ್ಲಿ ಶೃಂಗೇರಿ ಸಂಸ್ಥಾನದ ಪ್ರಾಚೀನ ಶಾಸನ ಲೇಖನ ಸಂಗ್ರಹ ಭಾಗ-೧ ೧೯೬೫, ಪುಟ -೧೩೨

೧೨. ಆ್ಯನುವಲ್ ರಿಪೋರ್ಟ್ ಆನ್ ಸೌತ್ ಇಂಡಿಯನ್ ಎಪಿಗ್ರಫಿ ೧೯೨೫, ಪುಟ-೬೨

೩೬. ವಿಜಯನಗರ ಸಾಮ್ರಾಜ್ಯ ಮತ್ತು ಅಹೋಬಲ

ಡಾ. ಎಂ.ಕುಮಾರಸ್ವಾಮಿ

ವಿಜಯನಗರ ಅರಸರು ಹಿಂದೂ ಧರ್ಮ ಪ್ರವರ್ತರಾಗಿದ್ದು, ತಮ್ಮ ಆಡಳಿತ ಕಾಲಾವಧಿಯಲ್ಲಿ ಧರ್ಮ, ಸಾಹಿತ್ಯ ಮತ್ತು ಕಲೆಗೆ ಪ್ರೋತ್ಸಾಹವನ್ನು ನೀಡಿದ್ದಾರೆ. ನರಸಿಂಹನ ಆರಾಧಕರಾಗಿದ್ದ ಇವರು ತಮ್ಮ ಸಾಮ್ರಾಜ್ಯದ ಆಡಳಿತದ ಕಾಲಾವಧಿಯಲ್ಲಿ ಅನೇಕ ನರಸಿಂಹ ದೇವಾಲಯಗಳಿಗೆ ಅದರಲ್ಲಿಯೂ ಪ್ರಮುಖವಾಗಿ ಅಹೋಬಲದ ನರಸಿಂಹ ದೇವಾಲಯಕ್ಕೆ ಅಪಾರವಾದ ಭಕ್ತಿಯನ್ನು ಹೊಂದಿದ್ದು, ಅದಕ್ಕೆ ರಾಜಾಶ್ರಯವನ್ನು ನೀಡುವುದರ ಮೂಲಕ ಅಪಾರವಾದ ದಾನದತ್ತಿಗಳನ್ನು ನೀಡಿದರು. ಆರಂಭದ ಅರಸರಿಂದ ಕೊನೆಯ ಅರಸರವರೆಗೆ ಈ ಭಕ್ತಿ ಮುಂದುವರೆಯಿತು. ಹರಿಹರ-ಬುಕ್ಕ (1344-1371) ರಿಂದ ಎರಡನೆಯ ವೆಂಕಟ (1586-1614) ವರೆಗಿನ ಎಲ್ಲಾ ಅರಸರುಗಳು ಅಹೋಬಲಕ್ಕೆ ತಮ್ಮ ದಾನದತ್ತಿಯ ಕೊಡುಗೆ ನೀಡಿ, ದೇವಾಲಯ ನಿರ್ಮಾಣಗಳಲ್ಲಿ ತೊಡಗಿದ್ದರು. ಇದರಲ್ಲಿ ಅವರ ರಾಣಿಯರು, ಮಕ್ಕಳು, ಸಂಬಂಧಿಕರು, ಮಂಡಲಿಕರು ಇದೇ ಕಾರ್ಯವನ್ನು ಮುಂದುವರೆಸಿದರು.

ಅಹೋಬಲ 108 ದಿವ್ಯ ದೇಶಗಳಲ್ಲಿ ಒಂದಾಗಿದ್ದು ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯಲ್ಲಿರುವ ಪ್ರಖ್ಯಾತ ನರಸಿಂಹ ಕ್ಷೇತ್ರವಾಗಿದ್ದು, ಇಲ್ಲಿ ನರಸಿಂಹನನ್ನು ಒಂಬತ್ತು ರೂಪಗಳಲ್ಲಿ ಆರಾಧಿಸಲಾಗುತ್ತದೆ. ಅನೇಕ ಸಾಹಿತ್ಯ ಮತ್ತು ಶಾಸನಗಳಲ್ಲಿ ಈ ಕ್ಷೇತ್ರವನ್ನು ಕುರಿತು ಉಲ್ಲೇಖಿಸಲಾಗಿದೆ. ತೆಲುಗಿನ ಎರಪ್ಪಗಡನ ನರಸಿಂಹಪುರಾಣ ಅಹೋಬಲ ನರಸಿಂಹನಿಗೆ ಸಮರ್ಪಿಸಲ್ಪಟ್ಟಿದೆ. ಸಾಲವ ನರಸಿಂಹನಿಂದ ರಚಿಸಲ್ಪಟ್ಟ ಸಂಸ್ಕೃತ ಕೃತಿಯಾದ ರಾಮಾಭ್ಯುದಯ ಕೃತಿಯಲ್ಲಿ ಅಹೋಬಲ ನಸಿಂಹನ ಕೃಪೆಯಿಂದ ತಾನು ಜನಿಸಿರುವುದಾಗಿ ಉಲ್ಲೇಖಿಸಿದ್ದಾನೆ. ತಲಪಾಕಂಸಂಕಿರ್ತನ ಕವಿಗಳಾದ ಅನ್ನಮಯ್ಯ (1408-1507) ಮತ್ತು ಪೆದ್ದತೀರುಮಲಚಾರ್ಯುಲು (1470-1547) ಅಹೋಬಲ ನರಸಿಂಹನನ್ನು ಕುರಿತು ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ. 15ನೇ ಶತಮಾನ ಅನಂತಾಮಾತ್ಯನು ಭೋಜ ರಾಜ್ಯಮು ಕೃತಿಯನ್ನು ಅಹೋಬಲ ನರಸಿಂಹನಿಗೆ ಸಮರ್ಪಿಸಿದ್ದಾನೆ. ಶ್ರೀ ಕೃಷ್ಣದೇವರಾಯನ ಅಮುಕ್ತ ಮಲ್ಯದಲ್ಲಿಯು ಅಹೋಬಲದ ಉಲ್ಲೇಖವಿದೆ. ಆಂಧ್ರಪ್ರದೇಶದ ರಾಜ್ಯ ಪತ್ರಾಗಾರದಲ್ಲಿರುವ ತೆಲಗು ಕೈಫಿತ್ ಯುಗಗಳಲ್ಲಿ ಅಹೋಬಲದ ಸ್ಪಷ್ಟ ಚಿತ್ರಣವನ್ನು ನೀಡಲಾಗಿದೆ.

ಇದನ್ನು ಅಹೋಬಲ ಕ್ಷೇತ್ರದಲ್ಲಿ ದೊರೆತಿರುವ 30 ಶಾಸನಗಳಲ್ಲಿ ಅಹೋಬಲದ ವಿವರಣೆಯನ್ನು ನೀಡಲಾಗಿದೆ. ಈ 30 ಶಾಸನಗಳಲ್ಲಿ, 11 ಶಾಸನಗಳಲ್ಲಿ ಅಹೋಬಲಕ್ಕೆ ವಿಜಯನಗರದ ಕೊಡುಗೆಯನ್ನು ವಿವರಿಸಲಾಗಿದೆ. ಈ ಮುಂಚಿನ ಶಾಸನವೊಂದರಲ್ಲಿ ಅಹೋಬಲಕ್ಕೆ ಅಪಾರವಾದ ನಂಬಿಕೆ ಇಟ್ಟಿದ್ದ ವರಂಗಲ್ಲಿನ ಕಾಕತೀಯ ದೊರೆ ಪ್ರತಾಪರುದ್ರನ ಉಲ್ಲೇಖವಿದೆ. ಅನಂತರದಲ್ಲಿ ಪಶ್ಚಿಮ ಚಾಲುಕ್ಯ ದೊರೆ ತ್ರಿಭುವನ ಮಲ್ಲದೇವನ ಮಂಡಲೇಶನು ಗ್ರಾಮವನ್ನು ಅಹೋಬಲಕ್ಕೆ ದಾನ ಕೊಟ್ಟಿದ್ದು ಹಾಗೂ ಕೊಂಡವೀಡಿನ ಶಾಸನದಲ್ಲಿಯು ಅಹೋಬಲಕ್ಕೆ ಕೊಡುಗೆಯ ಉಲ್ಲೇಖವಿದೆ. ಅನಂತರ ವಿಜಯನಗರದ ಅರಸರ ಆಳ್ವಿಕೆ ಆರಂಭಗೊಂಡು ರಾಜಾಶ್ರಯ ವಿಸ್ತರಿಸಲ್ಪಟ್ಟ ನಂತರ ಅನೇಕ ದಾನದತ್ತಿ ಕೊಡುಗೆಗಳು ಬಗ್ಗೆ ಉಲ್ಲೇಖವನ್ನು ಇಲ್ಲಿನ 11 ಶಾಸನಗಳಲ್ಲಿ ಕಾಣಬಹುದಾಗಿದೆ.

ವಿಜಯನಗರ ಮತ್ತು ಅಹೋಬಲದ ಸಂಬಂಧವನ್ನು ಸಾಮ್ರಾಜ್ಯದ ಸ್ಥಾಪನೆಯ ಕಾಲದ ಆರಂಭದ ಅರಸರ ಕಾಲದಿಂದಲೇ ಕಾಣಬಹುದಾಗಿದೆ. ಪತರ್‌ಪಲ್ಲಿ ಕೈಫಿಯತ್‌ನ ಮಾಹಿತಿಯ ಪ್ರಕಾರವಾಗಿ ಹರಿಹರನ ಪ್ರತಿನಿಧಿಯಾಗಿ ರಂಗನಾಯ್ಡು ಪತರ್‌ಪಲ್ಲಿಯಲ್ಲಿ ಒಂದು ದೇವಾಲಯವನ್ನು ನಿರ್ಮಿಸಿದನೆಂದು ಅನಂತರ ಕೈಫಿಯತ್‌ನಲ್ಲಿ ಉಲ್ಲೇಖಿಸಿರುವಂತೆ ಒಂದನೇ ಹರಿಹರ (1336-1357) ಅಥವಾ ಎರಡನೆಯ ಹರಿಹರ (1377-1404) ಇಬ್ಬರಲ್ಲಿ ಬಹುಶಃ ಎರಡನೆಯ ಹರಿಹರನು. ಲಕ್ಷ್ಮಿನರಸಿಂಹ ನಾಣ್ಯ ಗಳನ್ನು ಟಂಕಿಸಿದನೆಂದು ಮತ್ತು ಅಹೋಬಲ ನರಸಿಂಹ ದೇವಾಲಯಕ್ಕೆ ದಿವ್ಯಮಂಟಪ ಕಟ್ಟಿಸಿದ್ದಾನೆಂದು ಹೇಳಲಾಗಿದೆ. ಇದಾದ ನಂತರದ ವಿಜಯನಗರದ ಅರಸರು ಸೇರಿದಂತೆ ಅವರ ಮಂಡಲಿಕರು ರಾಣಿಯರು ತಮ್ಮ ಭಕ್ತಿ ಮತ್ತು ನಂಬಿಕೆಗಳನ್ನು ಮುಂದುವರೆಸಿ ದಾನದತ್ತಿಯ ಕೊಡುಗೆಗಳನ್ನು ನೀಡಿ ಅಹೋಬಲವನ್ನು ಅಭಿವೃದ್ಧಿಪಡಿಸಿದರು. ಒಂದನೇ ಬುಕ್ಕನ ಕಾಲಾವಧಿಯಲ್ಲಿ ಅಹೋಬಲಕ್ಕೆ ಎಂಟು ಬಾರಿ ದಾನದತ್ತಿಯ ಕೊಡುಗೆಯನ್ನು ನೀಡಿದನು. 1342 ರಲ್ಲಿ ಬುಕ್ಕನ ಮಾಂಡಲಿಕನಾದ ಮಹಾಮಂಡಲೇಶ್ವರನು ಮಧ್ಯಾಹ್ನನ ನೈವೇದ್ಯಕ್ಕಾಗಿ ಕೊಡುಗೆಯನ್ನು ಅಹೋಬಲಕ್ಕೆ ಸಮರ್ಪಿಸಿದನು. 1350 ರಲ್ಲಿ ಅವನ ಮಗನಾದ ಮಂಗಯ್ಯ ದೇವನು ಅಂಗ, ರಂಗ, ಭೋಗಕ್ಕಾಗಿ ಅಹೋಬಲಕ್ಕೆ ಒಂದು ಗ್ರಾಮವನ್ನು ಕೊಡುಗೆಯಾಗಿ ನೀಡಿದ್ದನು.

ಇಲ್ಲಿನ ಐದನೇ ಶಾಸನದಲ್ಲಿ ಮಹಾಮಂಡಲೇಶ್ವರ ಮಗನಾದ ಮಂಗಯ್ಯ ದೇವ 1369ರಲ್ಲಿ ಅಂಗ, ರಂಗ, ಭೋಗಕ್ಕಾಗಿ ಓಗನಂತುಲ ಗ್ರಾಮವನ್ನು ಬಿಟ್ಟುಕೊಟ್ಟನು. ಅದೇ ಗ್ರಾಮ ಮುಂದೆ 1370ರಲ್ಲಿ ಅಹೋಬಳೇಶ್ವರನಿಗೆ ಪೂಜೆ ಕೈಗೊಳ್ಳಲು ಅನುವು ಮಾಡಿಕೊಟ್ಟನೆಂದು ತಿಳಿಸುತ್ತದೆ. ಮಹಾಮಂಡಲೇಶ್ವರನ ಮಗನಾದ ಗೋಪಯ್ಯದೇವ ಮಹಾರಾಜನು ಜಿಲ್ಲೆ ಗ್ರಾಮವನ್ನು ಅಹೋಬಲದ ಅಹೋಬಳೇಶ್ವರನಿಗೆ ನೈವೇದ್ಯಕ್ಕೆ ಮುಡುಪಾಗಿಟ್ಟನು.

`ಸಾಳವನರಸಿಂಹನು ನರಸಿಂಹನ ಶ್ರೇಷ್ಠ ಆರಾಧಕನಾಗಿದ್ದ. ತನ್ನ ರಾಮಾಭ್ಯುದಯಂ ಗ್ರಂಥದಲ್ಲಿ ಹೇಳಿಕೊಂಡಿರುವಂತೆ ಅಹೋಬಳದ ನರಸಿಂಹನ ಆಶೀರ್ವಾದದಿಂದ ತಾನು ಜನಿಸಿರುವುದಾಗಿ ತನ್ನ ಭಕ್ತಿಯನ್ನು ತೋರಿಸುತ್ತ ಅಪಾರವಾದ ದಾನದತ್ತಿಗಳನ್ನು ನೀಡಿದ್ದಾನೆ. ಸಾಳವನರಸಿಂಹನ ನಂತರ ಅಧಿಕಾರಕ್ಕೆ ಬಂದ ಕೃಷ್ಣದೇವರಾಯನು ಸಾಹಿತ್ಯ ಕಲೆಗಳಿಗೆ ಪ್ರೋತ್ಸಾಹ ನೀಡುತ್ತ ನರಸಿಂಹನ ಶ್ರೇಷ್ಠ ಭಕ್ತ ಎನಿಸಿದನು. ಈತನ ಕಾಲಾವಧಿಯಲ್ಲಿ ಒಂಬತ್ತಕ್ಕೂ ಹೆಚ್ಚು ಕೊಡುಗೆಗಳು ನರಸಿಂಹಸ್ವಾಮಿಗೆ ಸಮರ್ಪಿಸಲ್ಪಟ್ಟಿತು. 1512 ಮೊಟ್ಟಮೊದಲ ಬಾರಿಗೆ ಉಪ್ಪುದೆಲ್ಲಿ ಗ್ರಾಮವನ್ನು ಕೃಷ್ಣದೇವರಾಯನ ಸೇವಕನು ಕೊಡುಗೆಯಾಗಿ ನೀಡಿದನು. ಲಕ್‌ನಾಯ್ಡು ಪೊಬ್ಬಲ್ಲಿ ಕಾರ್ಲ ಗ್ರಾಮವನ್ನು ನರಸಿಂಹ ದೇವಾಲಯಕ್ಕೆ ಆಹಾರ ಪೂರೈಸಲು ಬಳುವಳಿಯಾಗಿ ನೀಡಿದ. 1515ರಲ್ಲಿ ಕೃಷ್ಣ ದೇವರಾಯನು ಕಳಿಂಗದ ಹೋರಾಟಕ್ಕೆ ಹೋಗುವ ಮಾರ್ಗದಲ್ಲಿ ಅಹೋಬಳಕ್ಕೆ ಭೇಟಿ ನೀಡಿ 1000 ವರಹ, ಕಂಠಾಭರಣ, ಕೆಂಪು ಪದ್ಮರಾಗ, ಮಾಣಿಕ್ಯ ಮತ್ತು ವಜ್ರದ ಪದಕವನ್ನು ನರಸಿಂಹಸ್ವಾಮಿಗೆ ಚಿನ್ನದ ಹರಿವಾಣದಲ್ಲಿ ಸಮರ್ಪಿಸಿದನು. ಆತನ ಮಹಾರಾಣಿಯು ಕೂಡ ಪದಕವನ್ನು ಸಮರ್ಪಿಸಿದಳು. ಆನಂತರ ಮಾದೂರು ಗ್ರಾಮವನ್ನು ಪೂಜೆಯ ಕೊಡುಗೆಯಾಗಿ ನೀಡಲಾಯಿತು. ಅಹೋಬಳದಿಂದ ಕೃಷ್ಣ ದೇವರಾಯನು ತನ್ನ ದಿಗ್ವಿಜಯ ಯಾತ್ರೆಯನ್ನು ಆರಂಭಿಸಿ ಉದಯಗಿರಿ, ಕೊಂಡಬೀಡು, ಕೊಂಡಪಲ್ಲಿ, ರಾಜಮಹೇಂದ್ರಿ ಇತರ ಪ್ರದೇಶಗಳನ್ನು ಗೆದ್ದುಕೊಂಡನು. ಕೊನೆಯದಾಗಿ 1529ರಲ್ಲಿ ಅಂಗ,ರಂಗ, ಭೋಗಕ್ಕಾಗಿ ಬೇಡದೂರು ಗ್ರಾಮವನ್ನು ಬಳುವಳಿಯಾಗಿ ನೀಡಿದನು.

ಕೃಷ್ಣದೇವರಾಯನ ನಂತರ ಅಧಿಕಾರಕ್ಕೆ ಬಂದ ಅಚ್ಚುತರಾಯನು ಕೂಡ ನರಸಿಂಹನ ಭಕ್ತನಾಗಿದ್ದು, ನರಸಿಂಹನ ರೂಪವೆಂದೆ ಭಾವಿಸಲ್ಪಡುವ ಗಂಡಬೇರುಂಡವನ್ನು ತನ್ನ ನಾಣ್ಯದ ಮೇಲೆ ಅಚ್ಚು ಹಾಕಿಸಿದನು. ಮತ್ತು ತನ್ನ ಆಡಳಿತ ಕಾಲಾವಧಿಯಲ್ಲಿ ಅನೇಕ ನರಸಿಂಹ ದೇವಾಲಯಗಳಿಗೆ ಅನೇಕ ಕೊಡುಗೆಗಳನ್ನು ನೀಡಿದನು. 1532ರ ಶಾಸನವೊಂದರ ಪ್ರಕಾರ ಮಾಂಡಲಿಕನಾದ ಪೋರು ಮಾಮಿಲ್ಲ ಅಬ್ಬಿರಾಜು ಅಹೋಬಳದ ಅಹೋಬಳೇಶ್ವರನಿಗೆ ಭೂದಾನ ನೀಡಿದನು ಎಂದು ಹೇಳುತ್ತದೆ. ಅಚ್ಚುತರಾಯನ ನಂತರ ಅಧಿಕಾರಕ್ಕೆ ಬಂದ ಸದಾಶಿವರಾಯನ ಕಾಲಾವಧಿ ನರಸಿಂಹಪಂಥ ಇತಿಹಾಸದ ಶ್ರೇಷ್ಠ ಕಾಲವಾಗಿತ್ತು. ಕಾರಣ 50ಕ್ಕೂ ಹೆಚ್ಚು ಕೊಡುಗೆಗಳು ನರಸಿಂಹ ದೇವಾಲಯಗಳಿಗೆ ಸಮರ್ಪಿಸಲ್ಪಟ್ಟಿತ್ತು. ಸದಾಶಿವರಾಯನಂತೆ ಆತನ ಅಧಿಕಾರಿಗಳು ಕೂಡ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ಮಹಾರಾಜನ ಅಧಿಕಾರಿಯಾದ ಚಿನ್ನತಿಮ್ಮರಾಜ 1544ರಲ್ಲಿ ಅಹೋಬಳದ ದೇವಾಲಯದ ರಾಮಾ ನುಜ ಕೂಟಂ (ಸ್ವಾಮಿಯ ಅಡುಗೆ ಕೋಣೆ) ಗೆ ಗ್ರಾಮವೊಂದನ್ನು ಬಳುವಳಿಯಾಗಿ ನೀಡಿದನೆಂದು ಶಾಸನವು ತಿಳಿಸುತ್ತವೆ.

ಮಹಾಮಂಡಲೇಶ್ವರನ ಮಗ ಮತ್ತು ಮೊಮ್ಮಕ್ಕಳು ನರಸಿಂಹನ ಭಕ್ತರಾಗಿದ್ದು ದೇವಾಲಯಕ್ಕೆ ನೀಡುತ್ತಿದ್ದ ಕೊಡುಗೆಗಳನ್ನು ಮುಂದುವರೆಸಿದರು. ಮಹಾ ಮಂಡಲೇಶ್ವರನ ಮೊಮ್ಮಗನಾದ ಅಹೋಬಳಯ ದೇವ ಮಹಾರಾಜ 1545ರಲ್ಲಿ ದೇವಾಲಯಕ್ಕೆ ಭೂಮಿಯನ್ನು ಬಳುವಳಿಯಾಗಿ ನೀಡಿದನು. ಶಾಸನದಲ್ಲಿ ಉಲ್ಲೇಖಿತ ವಾಗಿರುಂತೆ ತಿಮ್ಮಯ್ಯ ದೇವ ಮಹಾರಾಜನು ತೊಂಡಾಲದಿಣ್ಣೆ ಗ್ರಾಮವನ್ನು ಶ್ರೀ ಅಹೋಬಳ ನರಸಿಂಹದೇವನಿಗೆ ಕಜ್ಜಾಯ ಸೇವೆಗೆಂದು ಕೊಡುಗೆಯ್ಯಾಗಿ ನೀಡಿದನು.

ನಂದಕಾಲದ ಅರಸರು ವಿಜಯನಗರದ ಸಾಮಂತರಾಗಿದ್ದ ನರಸಿಂಹನ ಶ್ರೇಷ್ಠ ಭಕ್ತರಾಗಿದ್ದು ಅಹೋಬಳ ಮಠದ ಐದನೇ ಗುರುಗಳಾದ ವೇದಾಂತ ಶತಕುಪ್ಪಜೀಯಾರ್ ರವರನ್ನು ತಮ್ಮ ಮನೆತನದ ರಾಜಗುರುಗಳಾಗಿ ಸ್ವೀಕರಿಸಿದ್ದು, ಇವರ ನೇತೃತ್ವದಲ್ಲಿ ಅಹೋಬಳ ಮತ್ತಷ್ಟು ಶ್ರೇಷ್ಠ ಹಂತವನ್ನು ತಲುಪಿತು. ದಾನದತ್ತಿ ಕೊಡುಗೆಗಳು ನಂದ್ಯಲ ಮನೆತನದಿಂದ ನರಸಿಂಹನಿಗೆ ಸಮರ್ಪಿಸಲ್ಪಟ್ಟವು. 1545ರಲ್ಲಿ ಸದಾಶಿವಯ ಅಧಿಕಾರಿ ಯಾದ ಚಿನ್ನತಿಮ್ಮರಾಜು ಅಹೋಬಳೇಶ್ವರನಿಗೆ ಗ್ರಾಮವನ್ನು ಕೊಡುಗೆಯಾಗಿ ನೀಡಿ ದನು. ಮತ್ತೊಬ್ಬ ಮಹಾಮಂಡಲೇಶ್ವರ ಶ್ರೀನಾಥರಾಮಯ್ಯದೇವ ಮಹಾರಾಜ ಲಕ್ಷ್ಮಿ ನರಸಿಂಹಸ್ವಾಮಿ ದೇವಾಲಯಕ್ಕೆ ಭೂಮಿಯನ್ನು ಕೊಡುಗೆಯಾಗಿ ನೀಡಿದನು. 1547ರಲ್ಲಿ ಮತ್ತೊಬ್ಬ ಮಹಾಮಂಡಲೇಶ್ವರ ನಂದ್ಯಾಲ ತಿಮ್ಮಯ್ಯದೇವಮಹಾರಾಜ ಅಹೋಬಳ ದೇವಾಲಯಕ್ಕೆ ಕೊಡುಗೆಗಳನ್ನು ನೀಡಿದನು. ದಾಖಲೆಗಳು ತಿಳಿಸುವಂತೆ ಅಹೋಬಳಕ್ಕೆ ಬರುವ ಅಕ್ಕಿ, ಉಪ್ಪು ಹೊತ್ತ ಎತ್ತಿನಗಾಡಿಗಳಿಗೆ ಮಾರ್ಗಸುಂಕ ತೆರಿಗೆಯಿಂದ ವಿನಾಯಿತಿ ಯನ್ನು ನೀಡುವುದರ ಮೂಲಕ ಸ್ವಾಮಿಯ ಸೇವೆ ನಿತ್ಯ ನಡೆಯುವ ವ್ಯವಸ್ಥೆ ಮಾಡಲಾ ಯಿತು.ದೇವ

1551ರ ಶಾಸನದ ಪ್ರಕಾರ ನಂದ್ಯಲ ತಿಮ್ಮರಾಜನು ಕೊಡುಗೆಯನ್ನು ನೀಡಿ 12 ಜನ ಶ್ರೀ ವೈಷ್ಣವರಿಗೆ ನರಸಿಂಹ ಆಳವರ್ ದೇವಾಲಯದಲ್ಲಿ ಪ್ರಸಾದವನ್ನು ಅಹೋ ಬಲೇಶ್ವರನಿಗೆ ನೀಡಿ, ನೈವೇದ್ಯ ನಂತರ ನೀಡಬೇಕೆಂದು ತಿಳಿಸಿದನು. 1553ರಲ್ಲಿ ಮಹಾಮಂಡಲೇಶ್ವರ ಅಪರತಿಕಮಲ ಕುರುಚೇಟಿ ವೆಂಕಟದ್ರಿ ದೇವ ಮಹಾರಾಜ ತಾನು ಕಟ್ಟಿಸಿದ ಆರು ಸ್ತಂಭಗಳ ಮಂಟಪದಲ್ಲಿ ಸ್ವಾಮಿಯನ್ನು ಕೂರಿಸಿ, ನೈವೇದ್ಯವನ್ನು ಅರ್ಪಿಸಲು ಧನ ಸಹಾಯವನ್ನು ಕೊಡುಗೆಯಾಗಿ ನೀಡಿದನು. 1558ರ ಶಾಸನದ ಪ್ರಕಾರ ಮಹಾಮಂಡಲೇಶ್ವರನ ಮಗನಾದ ಓಬಲರಾಜು ತಿರುಪತಿಯಲ್ಲಿ ನಮ್ಮಾಳ್ವರ್ ದೇವಾ ಲಯದಲ್ಲಿ ಪ್ರತಿದಿನ ನೈವೇದ್ಯ ವ್ಯವಸ್ಥೆ ಮಾಡಿದರು. 12 ಜನ ಶ್ರೀ ವೈಷ್ಣವರಿಗೆ ಹಂಚಿಕೆ ಯಾಗಬೇಕೆಂದು ತಿಳಿಸಿದರು. ಅದೇ ವರ್ಷ ಬೆಟ್ಟದ ಮೇಲೆ ಎಂಬುರಮ್ಮ ಜೀಯಮ ಗುರು, ಮುದ್ರಕರ್ತ ಶಟಗೋಪ ಜೀಯಮಗುರು ಮತ್ತು ಇತರರು 16 ಸ್ಥಂಭಗಳ ಮಂಟಪದಲ್ಲಿ ಉತ್ಸವವನ್ನು ನಡೆಸಲು ಭೂಮಿದಾನವನ್ನು ನೀಡಿದರು ಅಲ್ಲದೆ

ಸದಾಶಿವರಾಯನ ಕಾಲದಲ್ಲಿ ಅಹೋಬಳೇಶ್ವರರಿಗೆ ಖಾಸಗಿ ಕೊಡುಗೆಗಳು ಕೂಡ ನೀಡಲ್ಪಟ್ಟವು. 1561ರಲ್ಲಿ ಸದಾಶಿವರಾಯನ ಅಧಿಕಾರಿಯಾದ ತಿಮ್ಮರಾಜು ಅಹೋಬಲೇಶ್ವರ ಸೇವೆ ಮತ್ತು ಪೂಜೆಗಾಗಿ ಭೂದಾನವನ್ನು ನೀಡಿದನು.

1563ರಲ್ಲಿ ಸದಾಶಿವರಾಯನ ಕಾಲದಲ್ಲಿ ಅಹೋಬಲದ ಎರಡು ದೇವಾಲಯ ಗಳಿಗೆ ಎರಡು ಭೂ ದಾನಗಳು ನೀಡಲ್ಪಟ್ಟವು. ಮೊದಲನೆಯದಾಗಿ ನರಸಿಂಹ ಆಳ್ವಾರ್ ದೇವಾಲಯ ಸೇವೆಗಾಗಿ ಮಹಾಮಂಡಲೇಶ್ವರ ಓಬಳರಾಜು ಭೂಮಿಯನ್ನು ಕೊಡುಗೆ ಯಾಗಿ ನೀಡಿದನು. ಎರಡನೆಯದಾಗಿ ಮಹಾಮಂಡಲೇಶ್ವರ ಕೊಂತಿ ಓಬಳರಾಜಯ್ಯ ದೇವ ಮಹಾರಾಜನು ಅಹೋಬಲೇಶ್ವರನಿಗೆ ಕೊಡುಗೆಗಳನ್ನು ನೀಡಿದನು. ಮೂರನೆಯ ದಾಗಿ, ಅಹೋಬಲೇಶ್ವರನಿಗೆ ವೇದುದರಿ ಭಟ್ಟಲ್‌ರು ರಾಮರಾಜಯ್ಯ ಗುರು ದಾನವನ್ನು ನೀಡಿದನು. ನಾಲ್ಕನೆಯದಾಗಿ, ಮೇಲಿನ ಅಹೋಬಳ ದೇವಾಲಯದ ಸೇವೆಯ ವೆಚ್ಚ ವನ್ನು ಭರಿಸಲು ಮಹಾರಾಜನು ಗ್ರಾಮವೊಂದನ್ನು ಕೊಡುಗೆಯಾಗಿ ನೀಡಿದನು.

ಐದನೆಯದಾಗಿ, ಸತಗನಪಿ ಜಯಮ್ಮ ಗುರು ಅಹೋಬಲೇಶ್ವರನು ಮಂಟಪದಲ್ಲಿ ಕೂತಾಗ ಸೇವೆಗೆಂದು ಕೊಡುಗೆಯನ್ನು ನೀಡಿ, 1564ರಲ್ಲಿ ಚೈತ್ರ ಮಾಸದ ಹಬ್ಬದ ಸಂದರ್ಭದಲ್ಲಿ ಭಾರ್ಗವರು ಹೋಗುವ ಮಾರ್ಗದಲ್ಲಿ ಸ್ವಾಮಿಯನ್ನು ಕೆರೆಯ ಏರಿಯ ಮೇಲೆ ಕುಳ್ಳಿರಿಸಿದಾಗ ಸೇವೆಗೆಂದು ಗ್ರಾಮವನ್ನು ದಾನವಾಗಿ ನೀಡಿದರು.

ಇದೇ ಸಮಯಕ್ಕೆ ಮಹ್ಮಮ್ಮದಿಯರ ಕಿರುಕುಳಕ್ಕೆ ಅಹೋಬಲದ ಬ್ರಾಹ್ಮಣರು ಒಳಪಟ್ಟಾಗ 1550ರಲ್ಲಿ ಅಹೋಬಲದ ರಕ್ಷಣೆಗಾಗಿ ಸದಾಶಿವರಾಯನು ಸ್ಥಳೀಯ ಮಾಂಡಲಿಕನಿಗೆ ಕೆಲವು ಗ್ರಾಮಗಳನ್ನು ದತ್ತಿಯಾಗಿ ನೀಡಿದನು. ಸತ್ ಸಂಪ್ರದಾಯ ಮುಕ್ತಾವಳಿಯಲ್ಲಿ ಉಲ್ಲೇಖಿಸಿರುವಂತೆ ಸದಾಶಿವನ ಮಗಳು ಅಹೋಬಲ ದೇವಾ ಲಯದ ವ್ಯವಸ್ಥಾಪಕರಲ್ಲಿ ಒಬ್ಬಳಾಗಿ ಕಾರ್ಯ ನಿರ್ವಹಿಸಿದಳು ಎಂದು ಹೇಳಲಾಗುತ್ತದೆ. ಇದನ್ನು ಹೊರತುಪಡಿಸಿದರೆ ಸದಾಶಿವನ ಕಾಲಾವಧಿಯಲ್ಲಿ ರಾಮರಾಯನು ಕೂಡ ಅಹೋಬಲಕ್ಕೆ ಅಪಾರವಾದ ಗೌರವವನ್ನು ಹೊಂದಿದನು. ಅಹೋಬಲದ ಶಷ್ಠ ಪರಂಕುಳನು ರಾಮರಾಯನಿಂದ ಗೌರವಿಸಲ್ಪಟ್ಟಿದ್ದನು. ಇಲ್ಲಿಂದ ಮುಂದೆ ಅಹೋಬಲಕ್ಕೆ ಸದಾಶಿವರಾಯನ ಕೊಡುಗೆಗಳ ಉಲ್ಲೇಖ ಕಂಡುಬರುವುದಿಲ್ಲ. ಕಾರಣ ಆನಂತರ ನಡೆದ 1565ರ ತಾಳಿಕೋಟೆ ಯುದ್ಧದಲ್ಲಿ ವಿಜಯನಗರವು ಶಾಹಿಸುಲ್ತಾನ ರಿಂದ ಅನುಭವಿಸಿದ ಸೋಲು ಸ್ವಾಭಾವಿಕವಾಗಿ ಅಹೋಬಲದ ಪ್ರಗತಿಯ ಮೇಲೆ ಪರಿಣಾಮಗಳನ್ನು ಬೀರಿತು. ಈ ಯುದ್ಧದಲ್ಲಿ ಜಯ ಸಾಧಿಸಿದ ಮಹಮ್ಮದೀಯರು ತಮ್ಮ ಧಾಳಿಗಳನ್ನು ಎಲ್ಲಾ ಹಿಂದೂ ಧಾರ್ಮಿಕ ಸ್ಥಳಗಳ ಮೇಲೆ ಮುಂದುವರೆಸಿದರು. ಇದು ಸ್ವಾಭಾವಿಕವಾಗಿ ಅಹೋಬಲದ ಮೇಲೂ ದುಷ್ಪರಿಣಾಮವನ್ನು ಬೀರಿತು.

ತಾಳಿಕೋಟೆ ಯುದ್ಧದ ನಂತರ ಅಹೋಬಲವು ಬಹು ದೊಡ್ಡ ಸಂಕಟವನ್ನು ಎದುರಿಸಬೇಕಾಯಿತು. 1579ರಲ್ಲಿ ಗೋಲ್ಕಂಡದ ಸುಲ್ತಾನ ಇಬ್ರಾಹಿಂ ಕುತ್ತುಬ್‌ಶಾನು ವೈಷ್ಣವ ವಿರೋಧಿಗಳು ಮತ್ತು ಕಟ್ಟ ಶೈವ ಪಂತಿಯರಾಗಿದ್ದ ಅನಂತಪುರದ ಹಂಡೆ ಪಾಳೆಯಗಾರರೊಡನೆ ಪಿತೂರಿಯನ್ನು ನಡೆಸಿ ಅಹೋಬಲದ ಮೇಲೆ ಧಾಳಿ ಮಾಡಿ ವಶಪಡಿಸಿಕೊಂಡನು. ಸುಮಾರು ಆರು ವರ್ಷಗಳ ಕಾಲ ಈ ದುಸ್ಥಿತಿ ಮುಂದುವರೆಯಿತು. 1584ರ ಶಾಸನವೊಂದರ ಪ್ರಕಾರ ಸದಾಶಿವರಾಯನ ನಂತರ ಅಧಿಕಾರಕ್ಕೆ ಬಂದ ಒಂದನೇ ಶ್ರೀರಂಗರಾಯನು ಇದಕ್ಕೆ ಮುಕ್ತಿ ದೊರಕಿಸಿದನು. 1580ರಲ್ಲಿ ಇಬ್ರಾಹಿಂ ಮರಣದಿಂದ ಶತ್ರು ಪಡೆಯು ತಮ್ಮ ಬಲ ಸಾಮರ್ಥ್ಯವನ್ನು ಕಳೆದುಕೊಂಡಾಗ ಅಹೋಬಲ ಮಠದ ಏಳನೇ ಧಾರ್ಮಿಕ ಗುರುವಾದ ಶ್ರೀ ವಾನಸತಗೊಪ್ಪ ಸ್ವಾಮಿಯು ಶ್ರೀರಂಗನಲ್ಲಿಗೆ ಬಂದು ಅಹೋಬಲದ ದುಸ್ಥಿತಿಯನ್ನು ವಿವರಿಸಿ, ಅಹೋಬಲವನ್ನು ಮುಕ್ತಿಗೊಳಿಸಿ ಮಹ್ಮದಿಯರನ್ನು ಹೊರಗಟ್ಟುವಂತೆ ಕೇಳಿಕೊಂಡಾಗ ಕುಪಿತನಾದ ಶ್ರೀರಂಗರಾಯನು ಈ ಪರಿಸ್ಥಿತಿಯನ್ನು ನಿವಾರಿಸಲು ತಾನೆ ಸೇನೆಯ ಮುಂದಾಳತ್ವವನ್ನು ವಹಿಸಿ ಹೋರಾಡಲು ನಿರ್ಧರಿಸಿದಾಗ ಶ್ರೀಗಳು ಆತನನ್ನು ತಡೆದು ಸ್ವಪ್ನದಲ್ಲಿ ಅಹೋಬಲಸ್ವಾಮಿಯು ಆದೇಶಿಸಿರುವಂತೆ ಕೊಂಡರಾಜ ವೆಂಕಟರಾಜು ಮತ್ತು ಕೊಂಡರಾಜು ತಿಮ್ಮರಾಜುವನ್ನು ನಿಯುಕ್ತಿಗೊಳಿಸುವಂತೆ ತಿಳಿಸಿರುವುದಾಗಿ ಅರುಹಿದರು. ಅದರಂತೆ ಶ್ರೀರಂಗರಾಯರು ಇಬ್ಬರು ಸಹೋದರರಿಗೆ ನಾಯಕತ್ವನ್ನು ನೀಡಿ ಅಪಾರ ದ್ರವ್ಯದೊಡನೆ ಸೈನ್ಯಸಮೇತವಾಗಿ ಕಾರ್ಯಪ್ರವೃತ್ತವಾಗುವಂತೆ ಆದೇಶ ನೀಡಿದ. ತಕ್ಷಣ ಕಾರ್ಯಪ್ರವೃತ್ತರಾಗಿ ಹಂಡೆ ಮುಖ್ಯಸ್ಥರನ್ನು ಸೋಲಿಸಿ ಆನಂತರ ಇಬ್ರಾಹಿಂನ ಇತರೆ ಸಹಚರರನ್ನು ಹಿಮ್ಮೆಟ್ಟಿಸಿ ಅಹೋಬಲವನ್ನು ಶತ್ರುಗಳಿಂದ ಮುಕ್ತಿಗೊಳಿಸಿ ಅದರ ವೈಭವವನ್ನು ಪುನಃ ಸ್ಥಾಪಿಸಿ ವಿಜಯ ಸ್ಥಂಭವನ್ನು ಸ್ಥಾಪಿಸಲಾಯಿತು. ಈ ಮೇಲಿನ ವಿಷಯವನ್ನು ಲಕ್ಷ್ಮಿವಿಲಾಸಮು ಮತ್ತು ನರಪತಿ ವಿಜಯಮು ಗ್ರಂಥಗಳು ಪುಷ್ಟೀಕರಿಸುತ್ತವೆ. ಹೀಗೆ ಶ್ರೀರಂಗರಾಯನು ಅಹೋಬಲದ ಮೇಲೆ ಒದಗಿಬಂದಿದ್ದ ಗಂಡಾಂತರವನ್ನು ತೊಡೆದು ಹಾಕಿ ಪೂಜಾವಿಧಿಗಳು ಅಹೋಬಲದಲ್ಲಿ ಸುಗಮವಾಗಿ ನಡೆಯಲು ದಾನದತ್ತಿಗಳನ್ನು ಕೊಡುಗೆಯಾಗಿ ನೀಡಿ ಪ್ರೋತ್ಸಾಹಿಸಿದರು.

ಶ್ರೀರಂಗರಾಯನ ನಂತರ ಅಧಿಕಾರಕ್ಕೆ ಬಂದ ಎರಡನೇ ವೆಂಕಟರಾಯನು ಕೂಡ ವಿಜಯನಗರ ಸಾಮ್ರಾಜ್ಯ ಮತ್ತು ಅಹೋಬಲದ ಸಂಬಂಧವನ್ನು ಮುಂದುವರೆಸಿದನು. ಈತನ ಕಾಲಾವಧಿಯಲ್ಲಿ ಅಹೋಬಲವು ತಾನು ಕಳೆದುಕೊಂಡಿದ್ದ ವೈಭವವನ್ನು ಪುನಃ ಪಡೆಯಿತು. 1586ರ ಶಾಸನದ ಪ್ರಕಾರ ಮಹಾಮಂಡಲೇಶ್ವರ ವೆಂಕಟರಾಜು ದೇವ ಚೂಡಾ ಮಹಾರಾಜನು ಅಹೋಬಲದ ದೇವಾಲಯದ ಸೇವೆಗೆಂದು 80 ವರಹಗಳನ್ನು ನೀಡಿದನು. ಮತ್ತೊಂದು ಶಾಸನದ ಪ್ರಕಾರವಾಗಿ ವೆಂಕಟನ ಕಾಲದಲ್ಲಿ ಅಹೋಬಲದ ಖ್ಯಾತಿ ಮತ್ತೆ ಹೆಚ್ಚಿತು. 1680 ರಲ್ಲಿ ಎರಡನೇ ವೆಂಕಟಪತಿರಾಯದೇವನು

ಅಹೋಬಲದ ವೀರನರಸಿಂಹಸ್ವಾಮಿ ದೇವಾಲಯದ ಗೋಪುರಕ್ಕೆ ಏಳು ಸುವರ್ಣ ಕಲಶಗಳನ್ನು ನೀಡಿ ಪ್ರತಿಷ್ಠಾಪಿಸಿದನು ಮತ್ತು ಸ್ವಾಮಿಯ ಸೇವೆಗೆಂದು ಅಪಾರವಾದ ದ್ರವ್ಯವನ್ನು ದಾನವಾಗಿ ನೀಡಿದನು. ಅದೇ ವರ್ಷ ಎರಡು ಚಿನ್ನದ ಚಾಮರಗಳನ್ನು ಮತ್ತು ಕಲಶ ಹೊಂದಿರುವ ರೇಷ್ಮೆಯ ಶ್ವೇತಛತ್ರಿಯನ್ನು ದೇವಾಲಯಕ್ಕೆ ಕೆಲವು ಅರಿವಿಡು ವ್ಯಾಪಾರಿಗಳು ದಾನವಾಗಿ ನೀಡಿದರು. ಇದಲ್ಲದೆ ವೆಂಕಟರಾಯನು ಅಹೋಬಲದ ಪವಿತ್ರ ಕಲ್ಯಾಣಿ ನಿರ್ಮಾಣಕ್ಕೂ ಧನಸಹಾಯ ನೀಡಿದನು.

ಅಹೋಬಲದ ಈ ವೈಭವತೆ ಬಹಳ ಕಾಲದವರೆಗೆ ಮುಂದುವರೆಯಲಿಲ್ಲ. ವಿಜಯನಗರ ಸಾಮ್ರಾಜ್ಯ ಶಕ್ತಿ ಕುಂದಿದಂತೆ ಅಹೋಬಲಕ್ಕೆ ರಕ್ಷಣೆ ಇಲ್ಲದಂತಾಯಿತು. ಒಂದು ದಶಕದ ನಂತರ ರಾಮದೇವರಾಯನ ಕಾಲಾವಧಿಯಲ್ಲಿ ದುರ್ಘಟನೆ ನಡೆಯಿತು. 1619ರಲ್ಲಿ ಮುಸಲ್ಮಾನರು ಮತ್ತೆ ಅಹೋಬಲದ ಮೇಲೆ ಧಾಳಿ ಮಾಡಿ ದೇವಾಲಯದಲ್ಲಿದ್ದ ಚಿನ್ನದ ತಗಡಿನಿಂದ ಮಾಡಿದ್ದ ಸ್ವಾಮಿಯ ವಾಹನಗಳನ್ನು ಕೊಂಡೊಯ್ದರು.

ವಿಜಯನಗರದ ಅರಸರು ವಿಷ್ಣುವಿನ ಆರಾಧಕರಾಗಿದ್ದು ಇವರ ಕಾಲದಲ್ಲಿ ಸಾಮ್ರಾಜ್ಯದ ಅನೇಕ ನರಸಿಂಹ ದೇವಾಲಯಗಳು ಹೆಚ್ಚು ಪ್ರಾಮುಖ್ಯತೆಯನ್ನು ಪಡೆದು ಅದರಲ್ಲಿಯೂ ಬಹು ಮುಖ್ಯವಾಗಿ ವಿಜಯನಗರದ ಆರಂಭದಿಂದ ಅಂತ್ಯದವರೆಗಿನ ಎಲ್ಲಾ ಅರಸರು ಅಹೋಬಲದ ಬಗ್ಗೆ ಹೊಂದಿದ್ದ ಅಪಾರವಾದ ನಂಬಿಕೆ ಮತ್ತು ಪ್ರೋತ್ಸಾಹ ಅದು ಹೆಚ್ಚು ಪ್ರಗತಿ ಹೊಂದಲು ಕಾರಣವಾಯಿತು. ಅವರ ಕಾಲದಲ್ಲಿ ನೀಡಿದ ದಾನದತ್ತಿ ಕೊಡುಗೆಗಳು ಮತ್ತು ಅವರು ಒದಗಿಸಿದ ರಕ್ಷಣೆ ಅಹೋಬಲದ ಖ್ಯಾತಿಯನ್ನು ಉತ್ತುಂಗಕ್ಕೆ ಕೊಂಡೊಯ್ದುದು ಮಾತ್ರವಲ್ಲದೆ ಜನಸಾಮಾನ್ಯರನ್ನು ಅಹೋಬಲದ ಕಡೆಗೆ ಹರಿದುಬರುವಂತೆ ಮಾಡಿದ್ದು, ಮಾತ್ರವಲ್ಲದೆ ಅದು ಪ್ರಗತಿ ಹೊಂದುವಂತೆ ಮಾಡಿತು. ವಿಜಯನಗರದ ಅಂತ್ಯ ಈ ಪ್ರಗತಿಯನ್ನು ಕುಂದಿಸಿತು. ಅವರ ಕಾಲದಲ್ಲಿ ಗಳಿಸಿದ ಖ್ಯಾತಿ ಜನಸಾಮಾನ್ಯರನ್ನು ಇಂದಿಗೂ ಅಹೋಬಲದ ಕಡೆಗೆ ಸೆಳೆಯುವಂತೆ ಮಾಡಿದೆ.

ಆಧಾರ ಗ್ರಂಥಗಳು

1. Dr. Madabhusini Narasimhacharya - History of the Cult of Narasimha in Andhra Pradesh.
2. K.R. Narasimhan - ನರಸಿಂಹ ಪದ್ಯಾರ್ಥ್ಯ ೧ ಮತ್ತು ೨ ರೂಪ ವಿಶ್ಲೇಷಣೆ
3. Miss M.S. Ramesh, I.A.S. - 108 Vaishnavite Divya Desams. Volume Six
4. The Rev Henry Heras S.J.M.A. - The Aravidu Dynasty of Vijayanagara.

೩೭. ಕಮಲಾಪುರ ಕೈಫಿಯತ್ತು ಮತ್ತು ವಿದ್ಯಾರಣ್ಯರ ಪೂರ್ವಾಶ್ರಮ- ಒಂದು ಟಿಪ್ಪಣಿ

ಡಾ. ಬಿ.ಆರ್.ಭಾರತೀ

ಈವರೆಗೆ ತಿಳಿದಿರುವಂತೆ ವಿಜಯನಗರ ಹಂತ ಹಂತವಾಗಿ ಬೆಳೆದು ತನ್ನ ಉಚ್ಛ್ರಾಯ ಕಾಲದಲ್ಲಿ ಇಂದು ಕಾಣುವ ಸ್ಮಾರಕಗಳ ನೆಲೆಬೀಡಾಯಿತೆಂದು ತಿಳಿದುಬರುತ್ತದೆ. ಇತಿಹಾಸದ ಪುಟಗಳಲ್ಲಿ ವಿಜಯನಗರ ಸಾಮ್ರಾಜ್ಯದ ರಾಜಧಾನಿಯನ್ನು ವಿದ್ಯಾನಗರ, ಆನೆಗೊಂದಿ, ವಿರೂಪಾಕ್ಷ ಹೊಸಪಟ್ಟಣ, ಪಂಪಪುರ, ಹಂಪೆ ಎಂದೆಲ್ಲ ಗುರುತಿಸುವ ಪ್ರಯತ್ನಗಳು, ಜಿಜ್ಞಾಸೆಗಳು ವಿಜಯನಗರ ಇತಿಹಾಸದ ಅಧ್ಯಾಯಿಗಳಿಗೆ ಹೊಸತೇನಲ್ಲ. ಪ್ರಸ್ತುತ ಈ ಸಂಪ್ರಬಂಧವು ಕಮಲಾಪುರಕ್ಕೆ ಸಂಬಂಧಿಸಿದ್ದಾಗಿದ್ದು ಕೇವಲ ಕೈಫಿಯತ್ತನ್ನು ಮಾತ್ರ ಆಧರಿಸಿ ಇದನ್ನು ಸಿದ್ಧಗೊಳಿಸಲಾಗಿದೆ. ಈ ಕೈಫಿಯತ್ತನ್ನು ಬರೆದವನು ದೇಸಾಯಿ ಶೀನಪ್ಪ ಎಂಬಾತ.

ಕಮಲಾಪುರದ ಕೈಫಿಯತ್ತು ಕಮಲಾಪುರಕ್ಕೆ ಹೆಸರು ಬಂದದ್ದನ್ನು ಅತ್ಯಂತ ವಿಸ್ತಾರವಾಗಿ ವಿವರಿಸುತ್ತದೆ. ಆ ಹೆಸರನ್ನು ಈ ಗ್ರಾಮದ ಪಡೆದುದು ವಿದ್ಯಾರಣ್ಯ ರಿಂದಾಗಿಯೇ ಎಂದು ಹೇಳಿ ಅವರ ಮೂಲದ ಬಗೆಗೂ ಕೆಲವು ಉಲ್ಲೇಖಗಳು ಕಂಡು ಬರುತ್ತವೆ. "ಕಮಲಾಪುರವೆಂಬುವ ಹೆಸರು ಬಂದ ಕಾರಣವೇನೆಂದರೆ: ನೈರುತ್ಯ ದಿಕ್ಕಿನಲ್ಲಿ ಘಟ್ಟದ ಕೆಳಗೆ ಹೊನ್ನಾವರದಲ್ಲಿ ಯಿರುವ ಮಾಧವಭಟ್ಟರು ಯಂಬ ಬ್ರಾಹ್ಮಣನು ದಾರಿದ್ರ್ಯಪೀಡಿತದಿಂದಾ ಬಹಳ ಶ್ರಮಪಡುತ್ತ ಯಿರಲಾಗಿ, ಆತನ ಪತ್ನಿ 'ನೀವು ಸಕಲ ವಿದ್ಯಂಗಳ ಬಲ್ಲಿರಿ, ನಾವು ದಾರಿದ್ರ್ಯ ಅನುಭವಿಸುವದ್ಕಕೆ ಕಾರಣವೇನೆಂದು' ಕೇಳಲಾಗಿ, ಆಗ ಮಾಧವಭಟ್ಟರು 'ಯಿದಕ್ಕೆ ವೊಂದು ದೇವಿ ಕುರಿತು ಪ್ರಾರ್ಥನೆ ಮಾಡದ ಪರಿಯಂತ್ರ ನಮ್ಮ ದಾರಿದ್ರ್ಯ ವಿಚ್ಛಿನ್ನವಾಗೋದಿಲ್ಲ' ವೆಂದು ತಿಳಿದು ತನ್ನ ಪತ್ನಿ ಮುಂದೆ ಹೇಳಲಾಗಿ, ಆಕಿ 'ದಾವ ದೇವತಾ ಅದೋ ಆ ದೇವತೆಯನ್ನು ಕುರಿತು ಆ ಜಪವನ್ನು ಸಾಂಗಮಾಡಿ ದರಿದ್ರ್ಯ ವಿಚ್ಛಿನ್ನವಾಗುವಂತೆ ಮಾಡುವುದು"ಯೆಂದು ಹೇಳಲಾಗಿ, 'ನಾನು ಹೋದ ಬಳಿಕ ನೀನು ಹ್ಯಾಗೆ ಸಂವಸಾರ ತೀರಿಸಿಕೊಂಡು ಹೋದಿ" ಯೆಂದು ಹೇಳಲಾಗಿ, "ನೀವು ಯಿದ್ದು ಕಷ್ಟಪಡುವದಕ್ಕಿಂತ ಹೋದ ಮೇಲೆ ಕಷ್ಟಬಡುವುದು ಲೇಸು"ಯೆಂದು ಯನಲಾಗಿ, ಆ ಮಾತಿಗೆ ವಡಂಬಟ್ಟು ಶ್ರೀಶೈಲಕ್ಕೆ ಬಂದು, ಅಲ್ಲಿ ಅಭಿಮಾನದೇವತೆ ಭ್ರಮ ರಾಂಬಿಕೆಯೆಂಬೊ ಶಕ್ತಿಗುಡಿಯಲ್ಲಿ ವೊಂದು ಸಂ 1ರ ಅನುಷ್ಠಾನವನ್ನು ಮಾಡುತ್ತ

ಯಿರಲಾಗಿ, ಆ ದೇವತೆಯು ಪ್ರಸನ್ನವಾಗಿ ಹೇಳಿದ್ದು; ನಿನಗೆ ಈ ಜನ್ಮದಲ್ಲಿ ಧನ ಲಭ್ಯವಿಲ್ಲ"ಯೆಂದು ಹೇಳಲಾಗಿ, ನಾನು ಯಿಷ್ಟು ತಪಸ್ಸು ಮಾಡಿದ್ದು ವ್ಯರ್ಥವಾಯಿತು ಯೆಂದು, ಯೀ ಮಹಮಂತ್ರಿ [> ತ್ರ]ಗಳು ಅಬದ್ಧವೆಂದು ತಿಳಿದು 'ದೇವತ್ತಿ [>ತೆ] ಮ್ಯಾಲೆ ಕೋಪವನ್ನು ಮಾಡಿ ಬೆತ್ತಿ [>ತ್ತ]ವಟ್ಟಿ,[1] (1-1 ದೇವ ದೆಲಕೆ ವಶವನ್ನು ಮಾಡಿಕೊಂಡು ಆ ಶಿತಿವೂ ಅ(ಮೂ). ಮೇಲಿನ ಪಾಠ `ತಾಲುಕು ಕಂಪಲಿ ಕೈಫಿಯತ್ತು' ದಿಂದ ಸ್ವೀಕೃತ (ಸಂ) ಆ ಮಂತ್ರಗಳನ್ನು ದಹ್ಸಿಬಿಡಲಾಗಿ, ಆ ಮಂತ್ರ ಅಭಿಮಾನ ದೇವತಿ ಮರುರ್ಗಿ ಶೀರೆಯನ್ನು ಸ್ವಲ್ಪ ದಹಿಸಲಾಗಿ, ಆ ದುರ್ಗಿ ಬಂದು "ನೀನು ಯೇನು ಶ್ರಮ ಬಟ್ಟ ಕಾಲಕ್ಕೂ ಯೀ ಜಲ್ಮದಲ್ಲಿಯಿಲ್ಲ" ಯೆಂದು ಹೇಳಲಾಗಿ, ಅಲ್ಲಿಂದ ವಿ[>ಬಿ] ಜಯ ಮಾಡಿ ಪಂಪಾ ಸರೋವರಕ್ಕೆ ಬಂದು ಆ ಸರೋವರದ ಪಶ್ಚಿಮ ಭಾಗದಲ್ಲಿ ಇರುವ ಕಮಲಾದೇವಿಯಂಬುವ ದುರ್ಗಿ ದೇವಸ್ಥಾನ ಕಂಡು, ಯೀ ಸರೋವರವನ್ನು ನೋಡಿ, ನಮ್ಮ ತಪಶ್ಯಿಗೆ ಚನ್ನಾಗಿ ಯಿದೆಯೆಂದು ಆ ಕಮಲಾದೇವಿ ಗುಡಿಯಲ್ಲಿ ತಮ್ಮ ತಪಸ್ಸು ಮಾಡುತ್ತ ಇರಲಾಗಿ ಪೂರ್ವದ ಪ್ರಕಾರಕ್ಕೆ ಸ್ವಪ್ನವಂನ್ನು ಆಗಲಾಗಿ ಮನಶಿಗೆ ವ್ಯಾಕುಲದಿಂದಾ ಸನ್ನೇಶಿ ಆಶ್ರಮವನ್ನು ಧರಿಶಿಸಿದರು. ಶಕ 1188ನೆ ಪರಾಭವ ಸಂ1ದಲ್ಲಿ ದೇವಿಯು ಪ್ರತ್ಯಕ್ಷವಾಗಿ "ಯೇನು ಬೇಡುತ್ತ ಯಿದ್ದಿ ಬೇಡು?" ಯೆಂದು ಕೇಳಲಾಗಿ, "ನಾನು ಯೇನು ವಲ್ಲೆನು" ಯೆಂದು ಹೇಳಲಾಗಿ, ಹೇಳಿದ ಕಾಲಕ್ಕೆ.... ವೊ ಮಹತ್ವದ ಫಲ ತಪ್ಪದು" ಯೆಂದು ದ್ರವ್ಯಮೂಲಕದಿಂದ ದೇವಿಯು ಪ್ರಸನ್ನಳಾದಳು. ಆ ದ್ರವ್ಯವನ್ನು ಸಾಧಿಸಿಕೊಂಡು ಪಂಪಾಕ್ಷೇತ್ರಕ್ಕೆ ಬಂದು, ಹೇಮಕೂಟದ ಮೇಲೆ ಪ್ರಸನ್ನ ವಿರೂಪಾಕ್ಷ ದೇವರ ಗುಡಿಯಲ್ಲಿ ವಾಸ ಮಾಡಿ, ಅಲ್ಲಿ ಕೆಲವು ಕಾಲ ವಿದ್ಯಾರಣ್ಯ ಭಾಷ್ಯವನ್ನು ನಿರ್ಮಾಣ ಮಾಡಿ, ಅದು ಸುಬದ್ಧ ಇಬದ್ಧ ತಿಳಿಬೇಕುಯಂದು ಕಾಶಿ ಯಾತ್ರೆಗೆ ಹೋಗ ಬೇಕೆಂದು ಪ್ರಯಾಣ ಮಾಡಿದರು." (ಕಮಲಾಪುರದ ಕೈಫಿಯತ್ತು, *ಕರ್ನಾಟಕ ಕೈಫಿಯತ್ತುಗಳು*, ಸಂ. ಡಾ. ಎಂ.ಎಂ.ಕಲ್ಬುರ್ಗಿ, ಪು. (430-431).

ವಿದ್ಯಾರಣ್ಯರು ಹೊನ್ನಾವರದವರೆಂದು ಅವರ ಪೂರ್ವಾಶ್ರಮದ ಹೆಸರು ಮಾಧವ ಭಟ್ಟರೆಂದು, ಅವರು ವಿವಾಹವಾಗಿದ್ದರೆಂದೂ ಆ ನಂತರ ಸನ್ಯಾಸ ಸ್ವೀಕರಿಸಿದರೆಂದು ತಿಳಿಸುತ್ತದೆ. ವಿದ್ಯಾರಣ್ಯರು ಪ್ರಾರಂಭದಲ್ಲಿ ಶ್ರೀಶೈಲದಲ್ಲಿ ಕುಳಿತು ಭ್ರಮರಾಂಬಿಕೆ ಯನ್ನು ಕುರಿತು ತನ್ನ ದಾರಿದ್ರ್ಯವನ್ನು ಹೋಗಲಾಡಿಸಿಕೊಳ್ಳುಲೋಸುಗ ತಪಸ್ಸು ಮಾಡಿದರೆಂದೂ ಅವರ ತಪಸ್ಸಿಗೆ ಮೆಚ್ಚಿದ ಭ್ರಮರಾಂಬೆ ಅವರ ಭವಿಷ್ಯತ್ತನ್ನು ನುಡಿಯ ಲಾಗಿ ಆಕೆಯ ಮೇಲೆ ಕೋಪ ಮಾಡಿಕೊಂಡು ಮಂತ್ರಗಳನ್ನೆಲ್ಲ ದಹಿಸುವ ಸಂದರ್ಭದಲ್ಲಿ ಆ ಮಂತ್ರದ ಅಭಿಮಾನಿ ದೇವತೆಗಳೆಲ್ಲ ಇದೇ ಉತ್ತರವನ್ನು ಹೇಳಿದರು. ನಂತರ ಪಂಪಾಸರೋವರಕ್ಕೆ ಬಂದು ಅದರ ಪಶ್ಚಿಮ ಭಾಗದಲ್ಲಿರುವ ಕಮಲಾದೇವಿ ಎಂಬ ದುರ್ಗಿ ದೇವಸ್ಥಾನವನ್ನು ಕಂಡು ಮತ್ತೆ ಧನಾಕಾಂಕ್ಷಿಗಳಾಗಿ ತಪಸ್ಸಿಗೆ ಕುಳಿತರು. ಆಕೆಯಿಂದಲೂ ಭ್ರಮರಾಂಬಿಕೆಯು

ಉತ್ತರವನ್ನೇ ಪಡೆದು ಬೇಸತ್ತ ಮಾಧವಭಟ್ಟರು, ಸನ್ಯಾಸ ಸ್ವೀಕರಿಸಿದರು. ಆ ನಂತರ ಕೂಡ ತಪಸ್ಸನ್ನು ಮುಂದುವರಿಸಿದ ಇವರು ಶಕ 1188 (1266 ಕ್ರಿಶ ?)ನೆ ಪರಾಭವ ಸಂವತ್ಸರದಲ್ಲಿ ದೇವಿಯು ಪ್ರತ್ಯಕ್ಷವಾಗಿ ವರಬೇಡೆನ್ನಲು ಅವರು ಏನೂ ಬೇಡವೆಂದು ತಿಳಿಸಿದರು. ಆದರೂ ಅವರ ತಪಸ್ಸಿಗೆ ಮೆಚ್ಚಿದ ದೇವಿ ದ್ರವ್ಯರೂಪದಲ್ಲಿ ಪ್ರಸನ್ನಳಾದಳು. ಆನಂತರ ವಿದ್ಯಾರಣ್ಯರು ಪ್ರಸನ್ನ ವಿರೂಪಾಕ್ಷ ಗುಡಿಯಲ್ಲಿ ವಾಸ ಮಾಡಿ ವಿದ್ಯಾರಣ್ಯ ಭಾಷ್ಯವನ್ನು ಬರೆದರೆಂದು ತಿಳಿದುಬರುತ್ತದೆ. ಇಲ್ಲಿ ಬರುವ ಕಾಲದ ಹೊಂದಾಣಿಕೆ ಸರಿಯಾಗಿ ಆಗುವುದಿಲ್ಲ.

"ಕಾಶಿಗೆ ಹೋಗೋ ಮಾರ್ಗದಲ್ಲಿ "ವೇದವ್ಯಾಸರನ ಕಾಣುವುದು ಹೇಗೆ ಆದೀತೆಂ"ದು ಮನಸ್ಸಿನಲ್ಲಿ ಚಿಂತೆಮಾಡುತ್ತ ಗೋಂಡಾರಣ್ಯ ಮಾರ್ಗವನ್ನು ಕುರಿತು ಹೋಗುತ್ತ ಯಿರಲಾಗಿ, ವೊಬ್ಬ ಪುರುಷನು ವೊಬ್ಬರಿಗೂ ಕಾಣಿಸಿಕೊಳ್ಳದ ಹಾಗೆ ಆ ಮಾರ್ಗದಲ್ಲಿ ಬಂದವರಿಗಳಿಗೆಲ್ಲ 'ಆಕಾಮಾವೈಕೂ ನನ್ನತಾ'ಯೆಂದು ಪ್ರಶ್ನೆಯನ್ನು ಮಾಡುತ್ತ ಯಿರಲಾಗಿ, ದಾರೂ ಆ ಪ್ರಶ್ನೆಗೆ ಪ್ರತಿ ಉತ್ರ ಕೊಡದ ಯಿದ್ದ ಕಾರಣ, ಬಹು ಮಂದಿ ಆ ಶಬ್ಧವನ್ನು ಕೇಳಿ, 'ಯೀತನುಯಿಂದ [>ಯೀತನಿಂದ] ಲಯ ವಾಗುತ್ತಾ ಯಿದ್ದರು. "ಯೀ ಪ್ರಶ್ನೆಯನ್ನು ಯೆನು ಕಾರಣ ಕೇಳುತ್ತ ಯಿದ್ದಿ ?"ಯೆಂದರೆ ಪೂರ್ವದಲ್ಲಿ ತ್ರೇತಾಯುಗ ರಾಮಾವತಾರದಲ್ಲಿ ಕಾಳ (>ತುಳಾ) ಪುರುಷದಾನ ಹಿಡದ ಕಾರಣ ಯೀ ಶ್ರಿಂಗೇರಿಭಟ್ಟಗೆ ಪಿಶ್ಯಾಚಿ ಜಲ್ಮ ಪ್ರಾಪ್ತಿ ಆಗಲಾಗಿ, ಆ ಶೃಂಗೇರಿ ಭಟ್ಟನು "ನನಗೆ ಯೀ ದೋಷವನ್ನು ಯಿಂದಿಗೆ ನಿವೃರ್ತಿ ಆದೀತು ?" ಯೆಂದು ಶ್ರೀ ರಾಮರ ಕೇಳಲಾಗಿ ಆ ಶೃಂಗೇರಿಭಟ್ಟಗೆ "ಕಲಿಯುಗದಲ್ಲಿ ಕಾಶಿಗೆ ಹೋಗೊ ಮಾರ್ಗದಲ್ಲಿ ಸದರಿ ಅರಣ್ಯದಲ್ಲಿ ಈ ನಾಲ್ಕು ಅಕ್ಷರವನ್ನು ಕೇಳುತ್ತ ಯಿರು"ಯೆಂದು ಆಜ್ಞಾ ಕೊಡಲಾಗಿ, ಯಿದಕ್ಕೆ ದಾರ್ರು ನಿನಗೆ ಪ್ರತ್ಯುತ್ತರ ಕೊಡುತಾರೆ ಅವರಿಂದಲೇ ಯೀ ದೋಷ ನಿವೃತ್ತಿ ಯಾದೀತು" ಯೆಂದು ಹೇಳಲಾಗಿ ಅದೇ ಮರ್ಯಾದಿ ಯಿಂದಲೇ ಕೇಳುತಯಿದ್ದನು. ಮಾರ್ಗ ಹಿಡಿದು ವಿದ್ಯಾರಣ್ಯರು ಹೋಗುತ್ತ ಯಿರಲಾಗಿ ಯಥಾಪ್ರಕಾರಕೆ ಸದರೀ ನಾಲ್ಕು ಅಕ್ಷರವನ್ನು ವಿದ್ಯಾರಣ್ಯರು ಕೇಳಲಾಗಿ, "ತ್ವಂ ನ ಸ್ನಾತ"ಯೆಂದು ಅಡಲಾಗಿ, ಯಿವರಿಗೆ ನಿದರ್ಶನವಾಗಿ ಕಾಣಿಸಿಕೊಂಡು ಸಾಷ್ಟಾಂಗ ನಮಸ್ಕಾರವನ್ನು ಮಾಡಲಾಗಿ, "ನೀನು ದಾರ್ರು?" ಯೆಂದು ಅಡಲಾಗಿ ಪೂರ್ವದ ವೃತ್ತಾಂತವನ್ನು ಹೇಳಲಾಗ, "ನಾನು ವ್ಯಾಸರ ದರುಶನಾರ್ಥವಾಗಿ ವಾರಣಾಶಿಗೆ ಹೋಗುತ್ತಾ ಯಿದ್ದೇನೆ. ನನಗೆ ವ್ಯಾಸರ ದರುಶನ ಹೇಗೆ ಆದೀತು?"ಯೆಂದು ಕೇಳಲಾಗಿ, ಆ ಶೃಂಗೇರಿಭಟ್ಟನು ವ್ಯಾಸರು ಇರುವ ಮರ್ಯಾದಿಯನ್ನು ತಿಳಿಸಿಕೊಟ್ಟು, "ನನಗೆ ಯೇನು ಮಾರ್ಗ"ಯೆಂದು ಕೇಳಲಾಗಿ, "ನಾನು ವ್ಯಾಸರ ದರುಶನ ತೆಗೆದುಕೊಂಡು ಪುನಶ್ಚ ಬರುವಾಗ ನಿನ್ನ ತೆಗೆದುಕೊಂಡು ಹೋಗಿ ನಿನ್ನ ಮನೋಸಂಕಲ್ಪ ಮನೋಬಿಷ್ಟ ಆಗೋ ಆಹೆ ಮಾಡುವೆನು" ಯೆಂದು

ವಚನ ಕೊಟ್ಟು ವಾರಣಾಶಿಗೆ ಹೋಗಿ ವ್ಯಾಸರ ದರುಶನ ಪಡೆದುಕೊಂಡು, ತಾವು ಮಾಡಿದಂಥಾ ಗ್ರಂಥಗಳನ್ನು ಶ್ರುತಗೊಳಿಸಿ ಸುಬದ್ಧ ಮಾಡಿಕೊಂಡು, ಯಿದೇ ಮಾರ್ಗತ್ವೆನ ಬಾಹೊ ವ್ಯಾಳ್ಯೆದಲ್ಲಿ ಶ್ರೀಂಗೇರಿಭಟ್ಟನ್ನು ಕರೆದುಕೊಂಡು ಹೇಮಕೂಟಕ್ಕೆ ಬಂದು, ಹೇಮಕೂಟಕೆ ದಕ್ಷಿಣ ಭಾಗ ಸಾಮಿಪ್ಯದಲ್ಲಿ ಮಲ್ಲಿಕಾರ್ಜುನದೇವರ ದೇವರ ಗುಡಿ ಜೀರ್ಣೋದ್ಧಾರ ಮಾಡಿ, ಅದರ ಸಮೀಪದಲ್ಲಿ ಚವುಡೇಶ್ವರಿ ದೇವರ ಗುಡಿ ಜೀರ್ಣೋದ್ಧಾರ ಮಾಡಿ, ಮುದ್ದು ವೀರಭದ್ರದೇವರ ಪ್ರತಿಷ್ಟ ಮಾಡಿ, ಗುಡಿ ಕಟ್ಟಿಸಿ, ಆ ಗುಡಿ ವಳಗೆ ತ್ರಿಕೋಣ ಯಂತ್ರ ನಿರ್ಮಾಣ ಮಾಡಿ ಯಿದ್ದಾರೆ. ಅದೆ ಶಿಲೆಗೆ ಯೀಗ ಜನರು "ಮೂರ್ರು ಮೂಲ [>ಲಿ] ಕಲ್ಲು ಮೂವತ್ತಾರು ಲಿಂಗಾ"ಯೆಂದು... ಬಿದ್ದು ಜನರು ಅನ್ನುತ್ತಾರೆ. ಹಾಗೆ ಅಲ್ಲಿ ಸಹಸ್ರ ಕಲ್ಲು ಮಂಟಪ ಕಟ್ಟಿಶಿ ಯಿದ್ದಾರೆ. (ಪು. 431-432)

ವಿದ್ಯಾರಣ್ಯರು ಕಾಶಿಯಾತ್ರೆ ಮಾಡುವಾಗ ಶೃಂಗೇರಿಯ ಭಟ್ಟನೋರ್ವ ಪಿಶಾಚಿಯ ರೂಪದಲ್ಲಿದ್ದು ಅವರನ್ನು ಭೇಟಿಯಾದ ಪ್ರಸಂಗವನ್ನು ಉಲ್ಲೇಖಿಸುತ್ತದೆ. ಕಾಶಿಯ ಕಡೆ ಹೊರಟ ವಿದ್ಯಾರಣ್ಯರಿಗೆ ಕಾಣಿಸಿಕೊಂಡ ಪ್ರೇತ ಅವರಿಗೆ `ತ್ವಾನ ಸ್ನಾತ' ಎಂದು ಕೇಳಿ ನಮಸ್ಕಾರ ಮಾಡಿತು. ವಿದ್ಯಾರಣ್ಯರು ನೀನು ಯಾರು ಎಂದು ಪ್ರಶ್ನಿಸಿದರು. ಅದಕ್ಕೆ ಪಿಶಾಚಿ ತನ್ನ ಪೂರ್ವ ವೃತ್ತಾಂತವನ್ನು ಹೇಳಿದಾಗ ವಿದ್ಯಾರಣ್ಯರು ನೀನು ವ್ಯಾಸರ ದರ್ಶನಕ್ಕೆ ವಾರಣಾಸಿಗೆ ಹೋಗುತ್ತಿದ್ದೇನೆ. ನನಗೆ ಅವರ ದರ್ಶನ ಹೇಗೆ ಆದೀತು ಎಂದು ಕೇಳಿದರು. ಅದಕ್ಕೆ ಉತ್ತರಿಸಿದ ಪ್ರೇತ ತನ್ನ ಪ್ರೇತತ್ವ ನಿವೃತ್ತಿಯ ಬಗ್ಗೆ ಕೇಳಿತು. ಅದಕ್ಕವರು ವ್ಯಾಸರನ್ನು ಕಂಡುಬಂದು ಶೃಂಗೇರಿಭಟ್ಟನ ಪ್ರೇತತ್ವ ವಿಮೋಚನೆ ಮಾಡುವುದಾಗಿ ಒಪ್ಪಿಕೊಂಡರು.

'ಯೀ ಶೃಂಗೇರಿ ಭಟ್ಟನ್ನ'ಮುದ್ದುವೀರಭದ್ರದೇವರ ಗುಡಿ ಮುಂದೆ ಬಳೆಲಿ ಅಶ್ವಥ ವೃಕ್ಷದ ವಳಗೆ ವಾಸ ಮಾಡಿಕೊಂಡು ಯಿರು'ಯೆಂದು ಹೇಳಿ ಅನ್ನದಾನವ... ಲಕರಿಂದ ಆ ಬ್ರಹ್ಮರಾಕ್ಷಸ ಜಲ್ಮವು ನಿವೃತ್ತಿ ಮಾಡಿ ದೇವತ್ವವನ್ನು ಸ್ಥಾಪಿಶಿ ಯಿಟ್ಟರು. (ಪು. 432)

ವಾರಣಾಸಿಯಿಂದ ಹಿಂದಿರುಗುವ ಸಂದರ್ಭದಲ್ಲಿ ಈ ಕಾಶೀಭಟ್ಟನ ಪ್ರೇತಾತ್ಮವನ್ನು ಹಂಪೆಗೆ ಕರೆತಂದು ಪ್ರೇತತ್ವ ನಿವೃತ್ತಿ ಮಾಡಿ ಬ್ರಹ್ಮತ್ವವನ್ನು ಕೊಟ್ಟು ಮುದ್ದುವೀರಭದ್ರನ ಮುಂದಿನ ಅಶ್ವತ್ಥ ವೃಕ್ಷದಲ್ಲಿ ನೆಲೆ ನಿಲ್ಲಿಸಿ ಅದರಲ್ಲಿನ ಬ್ರಹ್ಮರಾಕ್ಷಸನನ್ನು ನಿವೃತ್ತಿ ಮಾಡಿ ಅಲ್ಲಿ ದೇವತ್ವವನ್ನು ಸ್ಥಾಪಿಸಿದರು. ಕಮಲಾಪುರ ನಿರ್ಮಾಣ ಮಾಡಿದ ಬಗ್ಗೆ ಮತ್ತು ಅದನ್ನು ರಾಜ್ಯಭಾರ ಮಾಡಿದ ಬಗೆಯನ್ನೂ ಕೈಫಿಯತ್ತು ವಿವರಿಸುತ್ತದೆ.

"ತದನಂತರ ಯೀ ದ್ರವ್ಯವನ್ನು ಸಾರ್ಥಕವಾಗೊ ವುಪದೇಶ್ಯ [>ಉದ್ದೇಶ]ದಿಂದಾವೊಂದು ಪಟ್ಟಣದ ನಿರ್ಮಾಣ ಮಾಡಬೇಕು ಯಂದು ಮನಸಾ ಯೋಚಿಸಿ ಯಿರುವಾಗ್ಯೆ

ಅಭಿಮಾನದೇವತೆಯ ಹೆಸರಲಿ ವಂದು ಗ್ರಾಮವನ್ನು ರಚಿಸಿ, ಅದಕೆ ಹೆಸರು ಕಮಲಾಪುರ ಯೆಂಬೋ ನಾಮವನ್ನು ಯಿಟ್ಟು, ತದನಂತರ ವಿದ್ಯಾರಣ್ಯನಗರಯೆಂದು ಪಟ್ಟಣ ನಿರ್ಮಾಣ ಮಾಡಿ, ಆ ಪಟ್ಟಣಕ್ಕೆ ಗ್ರಾಮ ಅಭಿಮಾನ ದೇವತೆ ಯಲ್ಲಮ್ಮ ಯಂಬೋ ದೇವತೆಯನ್ನು ಪ್ರತಿಷ್ಠೆ ಮಾಡಿ, ತಾವೇ ರಾಜಾಧಿಪತ್ಯವನ್ನು ಮಾಡತ್ತ ಯಿದ್ದರು. ಶಕ 1258ರಲ್ಲಿ ಧಾತು ಸಂ. |ದ ವೈಶಾಖ ಶು 7, ಆಶ್ಲೇಷಾ ನಕ್ಷತ್ರ, ತದನಂತರ ದಲ್ಲಿ ಯಿವರು ಪಟ್ಟಣವನ್ನು ನಿರ್ಮಾಣ ಮಾಡಿದ ಮೇಲೆ, ಯಿಪ್ಪತ್ತಾರು ವರುಷದ ಪರಿಯಂತವು ರಾಜ್ಯಭಾರ ಮಾಡಿದರು. ಯಿವರಿಗೆ ತತ್ಪೂರ್ವ ಜಂಬುಕೇಶ್ವರರಾಯನು ರಾಜ್ಯ ಮಾಡುತ್ತ ಯಿದ್ದನು. ನಮಗೆ ದೇಹ ಸ್ಥಿರವಲ್ಲಯೆಂದು ತಿಳಿದು ಪೂರ್ವದಲ್ಲಿ ದೇವಿಗುಡಿಯಲ್ಲಿ ತಪಸ್ಸು ಮಾಡುವ ಸಮಯದಲ್ಲಿ ವಬ್ಬ ಗೊಲ್ಲರ ಬುಕ್ಕರಾಯ ಯೆಂಬವನು ಯಿರಲಾಗಿ, ನಿತ್ಯವ್ರತದಲಿ ಹಾಲು ತಂದು ಕೊಟ್ಟು ಯಿವರಿಗೆ ಬಹಲ ಉಪಚಾರ ಮಾಡಿಕೊಂಡು ಯಿರಲಾಗಿ, ಯೀ ಬುಕ್ಕಗೆ ಪಟ್ಟಾಭಿಷೇಕ ಮಾಡಿ, ತಾವು ನಿರ್ಮಾಣ ಮಾಡಿದಂಥ ಪಟ್ಟಣಕ್ಕೆ ಅಧಿಪತಿ ಮಾಡಿ, ಬುಕ್ಕ ಮಹಾರಾಯಯೆಂಬ ಹೆಸರು ಕೊಟ್ಟು ತಾವು ಪರಂಧಾಮಯಾತ್ರೆ ಮಾಡಿದರು. ಶಕ." (ಪು. 432)

ವಿದ್ಯಾರಣ್ಯರು ಬುಕ್ಕರಾಯನಿಗೆ ಪಟ್ಟಾಭಿಷೇಕ ಮಾಡಿದ್ದನ್ನು ಕೈಫಿಯತ್ತು ತಿಳಿಸುತ್ತದೆ. ಆದರೆ ಅವರು ಶೃಂಗೇರಿಗೆ ಯತಿಗಳಾಗಿ ಹೋದ ವಿವರವನ್ನು ಕೊಡುವುದಿಲ್ಲ. ಮುಂದುವರಿದು ಪಟ್ಟಣದೆಲ್ಲಮ್ಮ, ಪಟ್ಟಣದ ಯಲ್ಲಮ್ಮ ಅಥವಾ ಪಟ್ಟಣದ ಅಮ್ಮನ ದೇವಾಲಯವನ್ನು ಇವರೇ ನಿರ್ಮಾಣ ಮಾಡಿದಂತೆ ತಿಳಿಸುತ್ತದೆ. ಪಟ್ಟಣದ ಯಲ್ಲಮ್ಮನ ದೇವಾಲಯದ ಬಗೆಗಿನ ಇತ್ತೀಚಿನ ಸಂಶೋಧನೆಗಳು ಆ ದೇವಾಲಯವು ಹದಿನಾಲ್ಕನೆಯ ಶತಮಾನದ ಪ್ರಾರಂಭದ ದಿನಗಳಲ್ಲಿ ನಿರ್ಮಾಣವಾಗಿರಬಹುದೆಂದು ಸೂಚಿಸುತ್ತದೆ.(ವಿಜಯನಗರ ಅಧ್ಯಯನ ಸಂ. 6, ಪು. 114-115, ಎಚ್.ಟಿ.ತಳವಾರ; ಸಂ. 9 ಪು. 274-280, ಡಾ. ಡಿ.ವಿ.ಪರಮಶಿವಮೂರ್ತಿ). ಕೈಫಿಯತ್ತಿನಲ್ಲಿ ಹೇಳಿರುವಂತೆ ಪಟ್ಟಣದ ಯಲ್ಲಮ್ಮನ ದೇವಾಲಯವನ್ನು ಹಜಾರ ರಾಮಸ್ವಾಮಿ ದೇವಾಲಯದ ಮುಂದಿನ ದೇವಾಲಯವೆಂದು ತಿಳಿಸುತ್ತದೆ. ಪ್ರೌಢದೇವರಾಯನ ಕಾಲದ ಶಾಸನವು ಸಹ ಇದೇ ದೇವಾಲಯವನ್ನು ಗುರುತಿಸುತ್ತದೆ. ಯಲ್ಲಮ್ಮನೆಂದು ಕರೆಸಿಕೊಳ್ಳುವ ಈ ದೇವತೆಯ ವಿಗ್ರಹ ಮಹಿಷಮರ್ದಿನಿ ದುರ್ಗೆಯದಾಗಿದೆ.

ಈ ವಿಚಾರಗಳ ನಂತರ ಕೈಫಿಯತ್ತು ಕಮಲಾಪುರದಲ್ಲಿ ಕಂಡುಬರುವ ಸ್ಮಾರಕಗಳ ಪಟ್ಟಿಯನ್ನು ಸಹ ನೀಡುತ್ತವೆ. ಇದನ್ನು ಆಳಿದ ರಾಜರುಗಳ ಹೆಸರುಗಳು ಶ್ರೀರಂಗ ರಾಯನ ಆಳ್ವಿಕೆ, ಪಾಳೆಯಗಾರರ ಆಳ್ವಿಕೆ, ಹೈದರ್ ಮತ್ತು ಟಿಪ್ಪುವಿನ ಆಳ್ವಿಕೆ ಮುಂತಾದ ವಿಚಾರಗಳನ್ನು ಉಲ್ಲೇಖಿಸುತ್ತದೆ. ಈ ಕೈಫಿಯತ್ತು ಹಲವು ಅಸಂಗತ ಗಳನ್ನು ಹೊಂದಿದ್ದರೂ ಕೆಲವು ವಿಷಯಗಳಲ್ಲಿ ಮುಂದಿನ ಸಂಶೋಧನೆಗೆ

ಮಾರ್ಗದರ್ಶಿಯಾಗುತ್ತದೆ. ಉದಾಹರಣೆಗೆ ವಿದ್ಯಾರಣ್ಯರ ಪೂರ್ವಾಶ್ರಮ, ಅವರ ಮೂಲ ಸ್ಥಳ, ಅವರ ಕಾಶೀ ಅಧ್ಯಯನದ ವಿಷಯಗಳು ಮುಂತಾದುವುಗಳನ್ನು ಹೇಳಬಹುದು. ಶೃಂಗೇರಿಯ ಶಾಸನವೊಂದರಲ್ಲಿ ವಿದ್ಯಾರಣ್ಯರು ಕಾಶಿಯಲ್ಲಿದ್ದುದನ್ನು ಉಲ್ಲೇಖಿಸುವ ಹಿನ್ನೆಲೆಯಲ್ಲಿ ಕೈಫಿಯತ್ತಿನಲ್ಲಿ ಬರುವ ವಿದ್ಯಾರಣ್ಯರ ಕಾಶೀಪ್ರಸಂಗವನ್ನು ಒಪ್ಪಿಕೊಳ್ಳಬಹುದು.

ವಿದ್ಯಾರಣ್ಯರು ಅಸಾಮಾನ್ಯ ವೈದಿಕ ಪಂಡಿತರಾಗಿದ್ದರೆಂಬುದನ್ನು ಸಾಧಕರಾಗಿದ್ದರೆಂಬುದನ್ನು ಕೈಫಿಯತ್ತು ಕಾಶೀ ಪಂಡಿತನ ಪ್ರೇತತ್ವ ನಿವಾರಣ, ಬ್ರಹ್ಮರಾಕ್ಷಸ ನಿವೃತ್ತಿಯ ಘಟನೆಗಳ ಮೂಲಕ ಸಾದರಪಡಿಸುತ್ತದೆ. ಹೀಗೆ ಕೈಫಿಯತ್ತುಗಳು ಜಾನಪದೀಯ ಅಧ್ಯಯನಕ್ಕೆ ಮತ್ತು ಇತಿಹಾಸದ ಅಧ್ಯಯನದ ಪೂರಕ ದಾಖಲೆಗಳಾಗುತ್ತ ವೆಂದು ಮತ್ತೊಮ್ಮೆ ಸಿದ್ಧಪಡಿಸುತ್ತದೆ. ಇದಲ್ಲದೆ ಈ ಕೈಫಿಯತ್ತಿನಲ್ಲಿ ಅನೇಕ ಸ್ಮಾರಕಗಳ ಪಟ್ಟಿ, ಪರಗಣೆಗಳನ್ನು ಹಂಚಿಕೊಟ್ಟಿದ್ದು, ವಿವಿಧ ಅರಸರು ಠಾಣ್ಯ ಅಮಲು ಕೊಟ್ಟಿರುವುದು, ವಿವಿಧ ಎಲ್ಲೆಗಳು, ಈ ಗ್ರಾಮದಲ್ಲಿ ಬೆಳೆಯುವ ಧವಸ ಧಾನ್ಯಗಳು, ಬೇರೆ ಕಡೆಯಿಂದ ಇಲ್ಲಿಗೆ ಬರುತ್ತಿದ್ದ ಜವಳಿ, ದಿನಸುಗಳ ಬಗ್ಗೆ ಇಲ್ಲಿ ವಿವರ ನೀಡಿದ್ದಾರೆ. ಈ ಗ್ರಾಮದಲ್ಲು ಕಬ್ಬಿಣ ಆಗುತ್ತ ಇದೆ, ಸೆಂಡೂರು ಬೆಟ್ಟದಿಂದ ಬಿಳೀಕಲ್ಲುಗಳು ತಂದು ಮಾಡುತ್ತಾರೆ ಎಂಬ ವಿವರವಿದೆ.

೩೮. ಕ್ರಿಯಾಶಕ್ತಿ ಗುರು

ಬಿ. ವ್ಹಿ. ಮಲ್ಲಾಪುರ

ಕ್ರಿಯಾಶಕ್ತಿ ಗುರುವಿನ ಉಲ್ಲೇಖ ಮತ್ತು ವರ್ಣನೆಗಳು, ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದ ಸಂಗಮ ವಂಶದ ದೊರೆಗಳ ಹಲವಾರು ಶಾಸನಗಳಲ್ಲಿ ಬರುತ್ತವೆ. ಅವುಗಳಲ್ಲಿ ಅವರನ್ನು 'ಕ್ರಿಯಾಶಕ್ತಿ ಪಂಡಿತ' 'ಕ್ರಿಯಾಶಕ್ತಿ ವಿದ್ಯಾರಣ್ಯ' 'ಕ್ರಿಯಾಶಕ್ತಿ ದೇಶಿಕ' 'ಕ್ರಿಯಾಶಕ್ತ್ಯಾಚಾರ್ಯ', 'ಕ್ರಿಯಾಶಕ್ತಿ ಗುರು' 'ಸಾಕ್ಷಾತ್ ಗಿರೀಶಾವತಾರ ವಪುಃ' 'ತಪೋ ರಾಜ್ಯಲಕ್ಷ್ಮೀನಿವಾಸ ಕಾಯ ಶ್ರೀ ಕ್ರಿಯಾಶಕ್ತಿಃ' - ಇತ್ಯಾದಿಯಾಗಿ ಹಲವಾರು ರೀತಿಯಲ್ಲಿ ಪ್ರಶಂಸಿಸಿರುವುದು ಕಂಡುಬರುತ್ತದೆ. ಈ ಬಗೆಯ ವರ್ಣನೆಗೆ ನಿಶ್ಚಯವಾಗಿ ಒಂದು ಕಾರಣವಿರಲೇಬೇಕೆನಿಸುತ್ತದೆ. ಅದನ್ನು ತಿಳಿಯಲು ಕ್ರಿ.ಶ. 1300 ರ ಹಿಂದು ಮುಂದಣ ಕಾಲದ ರಾಜಕೀಯ ಇತಿಹಾಸವನ್ನು ಸೂಕ್ಷ್ಮವಾಗಿ ಅವಲೋಕಿಸಬೇಕಾಗುತ್ತದೆ.

ಅಖಂಡ ಕರ್ನಾಟಕವನ್ನು ಏಕಛತ್ರಾಧಿಪತಿಗಳಾಗಿ ಆಳ್ವಿಕೆ ನಡೆಸಿದ ಕಲ್ಯಾಣ ಚಾಲುಕ್ಯರ ಪತನಾನಂತರ ಅವರ ವಿಶಾಲ ಸಾಮ್ರಾಜ್ಯ ದೇವಗಿರಿಯ ಯಾದವ, ಹೊಯ್ಸಳ ಮತ್ತು ಕಾಕತೀಯ- ಈ ಮೂರು ಅರಸು ಮನೆತನಗಳಲ್ಲಿ ಹರಿದು ಹಂಚಿಹೋಯಿತು. ಅಷ್ಟಕ್ಕೆ ಅವರು ತೃಪ್ತರಾಗದೆ ರಾಜ್ಯದಾಹದಿಂದ ಪರಸ್ಪರರಲ್ಲಿ ಕಾದಾಡುವುದನ್ನು ಮುಂದುವರಿಸಿದರು. ಇನ್ನೂ ಆಶ್ಚರ್ಯದ ಸಂಗತಿಯೆಂದರೆ ಅಲ್ಲಾವುದ್ದೀನ್ ಖಿಲ್ಜಿ ಕ್ರಿ.ಶ. 1295ರ ಆರಂಭದಲ್ಲಿ ಯಾದವರ ರಾಜಧಾನಿ ದೇವ ಗಿರಿಯ ಮೇಲೆ ಮಾಡಿದ ದಾಳಿಯಲ್ಲಿ ದೊರೆ ರಾಮಚಂದ್ರ ಸೋತು ಕಪ್ಪಕಾಣಿಕೆ ಕೊಟ್ಟ ಮೇಲೂ ಅದನ್ನು ಅವನು ಗಂಭೀರವಾಗಿ ಪರಿಗಣಿಸಲಿಲ್ಲ. ಉಳಿದ ಹೊಯ್ಸಳ ಮತ್ತು ಕಾಕತೀಯ ಅರಸರು ಕೂಡ ಮುಸ್ಲಿಮರ ದಾಳಿಯಿಂದ ಮುಂದೆ ಆಗಬಹುದಾದ ಭೀಕರ ಪರಿಣಾಮಗಳ ಬಗ್ಗೆ ಆಲೋಚನೆ ಮಾಡಲೇ ಇಲ್ಲ. ತದ್ವಿರುದ್ಧವಾಗಿ ಅವರು ತಮ್ಮ ತಮ್ಮಲ್ಲಿಯೇ ಕಚ್ಚಾಡತೊಡಗಿದ್ದ ಬಗ್ಗೆ ಆಧಾರಗಳಿವೆ.

ಯಾದವ ರಾಮಚಂದ್ರನ ದಂಡಾಧಿಪತಿ ಎಬರನಾಯಕ ಮತ್ತು ಹೊಯ್ಸಳ ಮೂರನೆಯ ಬಲ್ಲಾಳನ ಸಾಮಂತ ಸಾಂತರಅರಸರ ಮಧ್ಯೆ ಕ್ರಿ.ಶ. 1301ರಲ್ಲಿ, ಅದೇ ಎಬರನಾಯಕ ಮತ್ತು ಹೊಯ್ಸಳ ಬಲ್ಲಾಳನ ದಂಡಾಧೀಶ ಸೊಡ್ಡಲದೇವನ ಮಧ್ಯೆ ಕ್ರಿ.ಶ. 1302ರಲ್ಲಿ, ಹಾಗೆಯೇ ಹೊಯ್ಸಳ ಸೋಮೆಯದಂಡನಾಯಕ ಮತ್ತು ಕಂಪಿಲ ದೇವ (ಯಾದವರಾಮಚಂದ್ರನ ಪರವಾಗಿ) ಇವರ ಮಧ್ಯೆ ಹೊಳಲಕೆರೆಯಲ್ಲಿ ಕ್ರಿ.ಶ. 1303ರಲ್ಲಿ ಯುದ್ಧಗಳಾಗಿರುವುದನ್ನು ನೆನಪಿಸಿಕೊಳ್ಳಬೇಕು.

ಮುಂದೆ ಅಲ್ಲಾವುದ್ದೀನ ಖಿಲ್ಜಿಯ ಸೇನಾಪತಿ ಮಲಿಕ್‌ಕಾಫೂರ್ ಕ್ರಿ.ಶ. 1309ರಲ್ಲಿ ಔರಂಗಲ್ಲಿನ ಕಾಕತೀಯರ ಮೇಲೂ, ಕ್ರಿ.ಶ.1311 ರಲ್ಲಿ ಹೊಯ್ಸಳರ ಮೇಲೂ ದಂಡೆತ್ತಿ ಹೋದಾಗ, ಅವನಿಗೆ ಯಾದವರಾಮಚಂದ್ರ ಎಲ್ಲ ಬಗೆಯ ಸಹಾಯ ಒದಗಿಸಿದ. ಹಿಂದೂ ರಾಜರ ಈ ಬಗೆಯ ಪರಸ್ಪರ ತಿಕ್ಕಾಟ, ಕಾದಾಟಗಳ ಪ್ರಯೋಜನ ಪಡೆದು ಅಲ್ಲಾವುದ್ದೀನ್ ಖಿಲ್ಜಿ ಅಪಾರ ಸಂಪತ್ತನ್ನು ಲೂಟಿ ಮಾಡಿಕೊಂಡು ಹೋದರೆ ತದನಂತರ ದಿಲ್ಲಿಯ ದೊರೆಯಾದ ಮಹಮ್ಮದ್ ತುಘಲಕ್ ಕ್ರಿ.ಶ. 1323ರಲ್ಲಿ ಕಾಕತೀಯ ರಾಜ್ಯವನ್ನೂ ಕ್ರಿ.ಶ. 1330ರಲ್ಲಿ ಮಧುರೆಯ ಪಾಂಡ್ಯ ರಾಜ್ಯವನ್ನೂ ಕ್ರಿ.ಶ. 1327ರಲ್ಲಿ ಕಮ್ಮಟದುರ್ಗವನ್ನೂ ತನ್ನ ರಾಜ್ಯಕ್ಕೆ ಸೇರಿಸಿಕೊಂಡುಬಿಟ್ಟ. ಹೀಗೆ ಕ್ರಿ.ಶ. 1330ರ ಹೊತ್ತಿಗೆ ದಕ್ಷಿಣದ ಬಹುತೇಕ ಎಲ್ಲ ಹಿಂದೂ ರಾಜ್ಯಗಳು ದಿಲ್ಲಿಯ ಸುಲ್ತಾನರ ರಾಜ್ಯದಲ್ಲಿ ಸೇರಿಹೋದವು. ಹೊಯ್ಸಳ ರಾಜ್ಯ ಮಾತ್ರ ಕುಟು ಕುಟು ಜೀವ ಹಿಡಿದಿತ್ತು ಮತ್ತು ಮುಸ್ಲಿಮರ ದಾಳಿಯನ್ನು ಎದುರಿಸಲು ತೀರಾ ಅಸಮರ್ಥವಾಗಿತ್ತು.

ಹೀಗೆ ದಕ್ಷಿಣ ಭಾರತದಲ್ಲಿ ರಾಜಕೀಯವಾಗಿ ಎಲ್ಲವೂ ಶೂನ್ಯವಾಗಿ ಕತ್ತಲೆ ಆವರಿಸಿದಾಗ ಜನತೆಯ ಆಶಾಜ್ಯೋತಿಯಾಗಿ ಬಂದವರು ಅಂದಿನ ಧರ್ಮಗುರುಗಳು. ಜನಮನದಲ್ಲಿ ಧರ್ಮಜ್ಯೋತಿ ನಂಧದಂತೆ ಅದಕ್ಕಿಂತ ಮುಖ್ಯವಾಗಿ ಅವರಲ್ಲಿ ರಾಜ ಕೀಯ ಪ್ರಜ್ಞೆ ಒಡಮೂಡುವಂತೆ ಪ್ರಯತ್ನಿಸಿದವರು ಈ ಧರ್ಮಗುರುಗಳು ಮತ್ತು ತಪೋನಿಧಿಗಳು. ಆ ಕಾಲದ ಅಂತಹ ತಪೋನಿಧಿಗಳಲ್ಲಿ ಕ್ರಿಯಾಶಕ್ತಿ ಗುರುಗಳು ತುಂಬಾ ಪ್ರಭಾವಶಾಲಿಗಳಾಗಿದ್ದರು. ಮತ್ತೆ ಮತ್ತೆ ಸಂಭವಿಸುವ ಮುಸ್ಲಿಂ ದಾಳಿಗಳನ್ನು ಯಶಸ್ವಿ ರೀತಿಯಲ್ಲಿ ಎದುರಿಸಿ ತಮ್ಮ ಧರ್ಮ, ಸಾಹಿತ್ಯ, ಸಂಸ್ಕೃತಿಯನ್ನು ರಕ್ಷಿಸಬಲ್ಲ ಕ್ಷಮತೆ ಯನ್ನು ಅವರು ಸಂಗಮನ ಮಕ್ಕಳಲ್ಲಿ ಕಂಡುದು ನಿಜಕ್ಕೂ ಒಂದು ಶುಭಗಳಿಗೆ.

ಹೊಯ್ಸಳ ಬಲ್ಲಾಳ ತುಂಬಾ ವಯೋವೃದ್ಧನಾಗಿದ್ದ. ಸಂಗಮನ ಐದು ಜನ ಮಕ್ಕಳಾದ ಹರಿಹರ ಬುಕ್ಕ ಮೊದಲಾದವರು ದಿನದಿಂದ ದಿನಕ್ಕೆ ಆ ಭಾಗದಲ್ಲಿ ಪ್ರಬಲ ರಾಗುತ್ತ ನಡೆದಿದ್ದರು. ಅವರ ಆ ಪಾತ್ರಬಲಕ್ಕೆ ತಮ್ಮ ತಪೋಬಲದ ರಕ್ಷೆ ಒದಗಿಸಿದರೆ ಮುಸ್ಲಿಂ ದಾಳಿಗಳಿಂದ ಭಾರತೀಯರ ಧರ್ಮ ಹಾಗೂ ಸಂಸ್ಕೃತಿಗಳನ್ನು ಉಳಿಸುವ ಮತ್ತು ಬೆಳೆಸುವ ಪ್ರಬಲರಾಜ್ಯವೊಂದನ್ನು ಕಟ್ಟುವುದು ಸಾಧ್ಯವೆಂಬ ಗಟ್ಟಿ ನಂಬಿಕೆ ಅವರದಾಗಿತ್ತು. ಅದನ್ನು ಕಾರ್ಯರೂಪಕ್ಕೆ ತರಲು ಕ್ರಿಯಾಶಕ್ತಿಯತಿಗಳು ಕಂಕಣ ಬದ್ಧರಾದರು. ಧಾರ್ಮಿಕ ತತ್ತ್ವಗಳನ್ನು ಕುರಿತಂತೆ ತಮ್ಮಲ್ಲಿ ಇದ್ದಿರಬಹುದಾದ ಮತ ಭೇದಗಳನ್ನು ಬದಿಗಿಡಿಸಿ, ಕ್ರಿಯಾಶಕ್ತಿಯತಿಗಳಿಗೆ ಅವರ ಮಹಾಮಣಿಹಕ್ಕೆ ಬೆಂಬಲವಾಗಿ ನಿಂತು ತಮ್ಮೆಲ್ಲ ಶಕ್ತಿ-ಸಾಮರ್ಥ್ಯಗಳನ್ನು ಸಂಗಮನ ಮಕ್ಕಳಿಗೆ ನೀಡಲು ಉಳಿದ ಪೀಠಾಧಿಪತಿಗಳೂ ಮುಂದೆ ಬಂದಿದ್ದರೆ ಆಶ್ಚರ್ಯಪಡಬೇಕಿಲ್ಲ. ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹಾಗೆ ಮಾಡದೆ ಅವರಿಗೆ ಬೇರೆ ಮಾರ್ಗವೇ ಇರಲಿಲ್ಲ. ಹೀಗೆ

ಧರ್ಮಾಧಿಕಾರಿಗಳ ಸದಾಶಯ, ಸಂಗಮಪುತ್ರರ ಕೆಚ್ಚು ಮತ್ತು ಅಪಾರ ಜನಸ್ತೋಮದ ಹಾರೈಕೆ ಆ ಸಂದರ್ಭದಲ್ಲಿ ಮುಪ್ಪುರಿಗೊಂಡಿರುವುದನ್ನು ಸರಿಯಾಗಿಯೆ ಗ್ರಹಿಸಿದ ಕ್ರಿಯಾಶಕ್ತಿಯತಿಗಳು ಅದೆಲ್ಲವನ್ನು ಕ್ರೋಢೀಕರಿಸಿ ಅನನ್ಯ ಸಾಮ್ರಾಜ್ಯವೊಂದರ ಸ್ಥಾಪನೆಗೆ ಪ್ರೇರಕರಾಗಿ ನಿಂತರು, ಮತ್ತು ಅದನ್ನು ಸಾಧ್ಯ ಮಾಡಿ ತೋರಿಸಿದರು.

ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಶ್ರೀಕಾರ ಬಿದ್ದ ಕ್ರಿ.ಶ. 1336 ರ ಆ ಮಹಾ ಸಂದರ್ಭದಲ್ಲಿ ವಿದ್ಯಾರಣ್ಯರು ಕಾಶಿಯಲ್ಲಿದ್ದರೆಂದೂ ಸುಮಾರು ಇಪ್ಪತ್ತು ವರ್ಷಗಳ ಅನಂತರ ಬಂದಿರಬಹುದಾದ ಅವರು ಕೂಡ ತಮ್ಮ ವಿದ್ಯಾಬಲ, ಬುದ್ಧಿಬಲಗಳನ್ನು ಸ್ಥಾಪಿತ ಸಾಮ್ರಾಜ್ಯಕ್ಕೆ ಪೂರ್ಣಪ್ರಮಾಣದಲ್ಲಿ ಧಾರೆಯೆರೆದು ಅದು ಅತ್ಯಂತ ಪ್ರವರ್ಧಮಾನಸ್ಥಿತಿಗೆ ತಲುಪುವಂತೆ ಮಾಡಿದ ಫಲವಾಗಿ ಅವರೇ ಸಾಮ್ರಾಜ್ಯಸ್ಥಾಪನೆಗೆ ಪ್ರೇರಣೆ ನೀಡಿದವರೆಂಬ ನಂಬಿಕೆ ಜನರಲ್ಲಿ ಮೂಡಿರಬಹುದಾದ ಸಾಧ್ಯತೆಯಿದೆ. ಆದರೆ ಕ್ರಿಯಾಶಕ್ತಿಯತಿಗಳೇ ಸಂಗಮಪುತ್ರರಿಗೆ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಪ್ರೇರಣೆ ನೀಡಿದರೆಂದೂ ಕಾರಣರಾದರೆಂದೂ ಡಾ. ಪಿ.ಬಿ. ದೇಸಾಯಿ, ಡಾ. ಸಾಲೆತೊರೆಯವ ರಂತಹ ಇನ್ನೂ ಹಲವಾರು ಜನ ಇತಿಹಾಸ ತಜ್ಞರು ಒಪ್ಪಿಕೊಂಡಿದ್ದಾರೆ.

ನಭೂತೋ ನ ಭವಿಷ್ಯತಿ ಎಂಬಂತಹ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಕಾರಣರಾದ ಕ್ರಿಯಾಶಕ್ತಿಯತಿಗಳನ್ನು ಸಂಗಮ ವಂಶದ ಅರಸರು ತುಂಬಾ ಭಕ್ತಿ ಗೌರವಗಳಿಂದ ಕಂಡಿರುವ ಜೊತೆಗೆ ಕುಲಗುರುವೆಂದೂ ಸ್ವೀಕರಿಸಿದ್ದಾರೆ. ಅವರ ಕಾಲದ ಹಲವಾರು ಶಾಸನಗಳ ಅಧ್ಯಯನದಿಂದ ಇದು ಸ್ಪಷ್ಟವಾಗುತ್ತದೆ. ಅವುಗಳಲ್ಲಿ ಕೆಲವನ್ನು ಎತ್ತಿಕೊಂಡು ಕ್ರಿಯಾಶಕ್ತಿಗಳ ವಿಶಿಷ್ಟ ಮೂಲಸ್ವರೂಪವನ್ನು ಗುರುತಿಸಲು ಇಲ್ಲಿ ಪ್ರಯತ್ನಿಸಲಾಗಿದೆಮ.

ಎಪಿಗ್ರಾಫಿಯಾ ಇಂಡಿಕಾ (E.C.)ದ ಸಂಪುಟದ (ಹಳೆಯದು) ಸಂಚಿಕೆ ಎರಡರಲ್ಲಿ ಸಮಾವೇಶವಾಗಿರುವ ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ 375ನೆಯ ಸಂಖ್ಯೆಯ ಶಾತವಳ್ಳಿ ಗ್ರಾಮದ ತಾಮ್ರಶಾಸನದಲ್ಲಿ ಕ್ರಿಯಾಶಕ್ತಿಯ ಉಲ್ಲೇಖವಿದೆ. ಈ ಸಂಸ್ಕೃತ ಶಾಸನದ ಕಾಲ ಶಾಲಿವಾಹಾನಶಕ 1268 ವ್ಯಯನಾಮಸಂವತ್ಸರ ಮಾಘಮಾಸದ ದಶಮಿ ರವಿವಾರ (ಕ್ರಿ.ಶ. 1347 ಫೆಬ್ರುವರಿ 13).

ಆರಂಭದಲ್ಲಿ "ವಿರುಪಾಕ್ಷಾಯ ನಮಃ" ಎಂದಿದ್ದು ತದನಂತರ ಶಿವಸ್ತುತಿ ಬರುತ್ತದೆ. ಸಂಗಮ ಅವನ ಮಕ್ಕಳಾದ ಹರಿಹರ, ಬುಕ್ಕ ಅವರ ಶೌರ್ಯ ಪ್ರತಾಪಾದಿಗಳ ವರ್ಣನೆ-ಹರಿಹರನ ಇನ್ನೊಬ್ಬ ತಮ್ಮ ಮಾರಪ್ಪನು ಪಶ್ಚಿಮ ಸಮುದ್ರದಿಂದ ಗೋಮಾಂತ ಶೈಲದ ವರೆಗಿನ ಕೊಂಕಣವನ್ನೊಳಗೊಂಡ ಮಲಯ ರಾಜ್ಯವನ್ನು ಚಂದ್ರಗುತ್ತಿ ರಾಜಧಾನಿಯಿಂದ ಆಳುತ್ತಿದ್ದ ಬಗ್ಗೆ ಹೇಳಿ ಅವನ ಶೌರ್ಯ -ವೀರಗಳನ್ನು ತುಂಬಾ ವಿಸ್ತಾರವಾಗಿ ಬಣ್ಣಿಸಿ ಇಪ್ಪತ್ತೆಂಟು ವೃತ್ತಿಗಳನ್ನು ಅಲ್ಲಿಯ ಬ್ರಾಹ್ಮಣರಿಗೆ ಅವನು ಕೊಟ್ಟುದನ್ನು ಈ ಶಾಸನ

ತಿಳಿಸುತ್ತದೆ. ಮಾರಪ್ಪನ ಮಂತ್ರಿ ಮಾಧವ, ಅವನ ತನ್ನ ದೊರೆಯ ಅಧಿರಾಜ್ಯ ವೆಂಬ ಗಹನವಾದ ಸಮುದ್ರಕ್ಕೆ ಕರ್ಣಧಾರನಾಗಿದ್ದ. ಜೊತೆಗೆ ಬುದ್ಧಿಶಕ್ತಿಯಲ್ಲಿ ಬೃಹಸ್ಪತಿಯನ್ನು ಮೀರಿಸುವವನೂ ಆಗಿದ್ದ. ಅಂತಹ ಮಾಧವಮಂತ್ರಿಯ ಗುರುವೇ ಕ್ರಿಯಾಶಕ್ತಿ. ಅವನು "ತೇಜಸ್ಸಿನಲ್ಲಿ ಸಾಕ್ಷಾತ್ ತ್ರಿಯಂಬಕನು. ಭಾರ್ಗವನಿಗೆ ಶಂಕರನು ಗುರುವಾಗಿದ್ದಂತೆ ವೈರಿಗಳನ್ನು ಜಯಿಸುವ ಮಾಧವಮಂತ್ರಿಗೆ ಕ್ರಿಯಾಶಕ್ತಿಯು, ಗುರುವೂ, ಮಾರ್ಗದರ್ಶಕನೂ ಆಗಿದ್ದ. ಮೂರು ವೇದಗಳನ್ನೂ ಪುರಾಣ ಸಂಹಿತೆಗಳನ್ನು ಸಮಾಲೋಚಿಸಿ ಲೋಕದ ಹಿತಕ್ಕಾಗಿ ಮತ್ತು ಮಂತ್ರಿ ಮಾಧನನ ಪ್ರೀತಿಗಾಗಿ ತ್ರಯಂಬಕ ಶಾಸನೋಕ್ತ ಸಮಸ್ತ ಶೈವಾಗಮಸಾರವನ್ನು ರಚಿಸಿದನು" ಎಂದು ಅರ್ಥವತ್ತಾಗಿ ಆ ಶಾಸನ ಬಣ್ಣಿಸಿದೆ. (ವೀರಶೈವ ಪತ್ರಿಕೆ ಸಂಪುಟ 4, ಪುಟ 27, ಡಾ. ಎಸ್.ಸಿ.ನಂದೀಮಠ ಅವರ ಲೇಖನ).

ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲೂಕು ಹಾರೋಮುಚ್ಚಡಿ ಅಗ್ರಹಾರದ ಕಲ್ಲೇಶ್ವರ ದೇವಸ್ಥಾನದ ಮುಂದೆ ಒಂದು ಶಿಲಾಶಾಸನವಿದೆ. (ಎ.ಕ. ಸಂಪುಟ 7 (ಹಳೆ ಆವೃತ್ತಿ) ಶಿಕಾರಿಪುರ ತಾಲೂಕು ಶಾಸನ ಸಂಖ್ಯೆ 281). ಸಂಸ್ಕೃತ ಭಾಷೆಯಲ್ಲಿರುವ ಆ ಶಾಸನದ ಕಾಲ ಶಕವರ್ಷ 1291 ಕೀಲಕನಾಮ ಸಂವತ್ಸರ ಕಾರ್ತಿಕ ಬಹಳ ಅಷ್ಟಮಿ ಸೋಮವಾರ ಎಂದಿದ್ದು, ಅರ್ಥ ಕ್ರಿ.ಶ. 1368ರ ನವಂಬರ್ ನಾಲ್ಕಕ್ಕೆ ಸರಿ ಹೊಂದುತ್ತದೆ. ಆರಂಭದಲ್ಲಿ "ಸಮಸ್ತ ತತ್ವಾಧಾರಾಯ ಜ್ಯೋತಿಃ ಸ್ತಂಭಾಯ ಶಂಭವೇ" ಮುಂತಾಗಿ ಶಿವನನ್ನು ಸ್ತುತಿಸುವ ಶ್ಲೋಕಗಳಿದ್ದು, ತದನಂತರ ಬುಕ್ಕಭೂಪಾಲ ಮಾಧವಮಂತ್ರಿ ಮತ್ತು ಕ್ರಿಯಾಶಕ್ತಿಗಳ ವರ್ಣನೆ ಬರುತ್ತದೆ. ಅಲ್ಲಿ ಕ್ರಿಯಾಶಕ್ತಿಯನ್ನು "ಯಃ ಸಾಕ್ಷಾದ್ಗಿರಿಶಾವತಾರವಪುಷಃ ಕಾಶೀವಿಳಾಸೇಶಿತುಃ ಸೋದ್ಭಾಸಾದ್ಭುತಯಾ ಕಟಾಕ್ಷಕಳಯನೀತಃ ಪ್ರಥಾಂ ಶಾಂಭವೀಂ..... ಸ್ತೇನನುತೋ ಬುಧ್ಯೈರುಪನಿಷನ್ಮಾರ್ಗ ಪ್ರತಿಷ್ಠಾಗುರುಃ") ಮುಂತಾಗಿ ಬಣ್ಣಿಸಿರುವುದನ್ನು ಗಮನಿಸಬೇಕು.

ಮುಂದುವರಿದು ಈ ಶಾಸನ, ಬುಕ್ಕರಾಯನು ನೂತನ ವಿಜಯನಗರ ಸಿಂಹಾಸನವನ್ನೇರಿ ರಾಜ್ಯಭಾರ ಮಾಡುತ್ತಿದ್ದುದನ್ನು ತಿಳಿಸುತ್ತದೆ. ಇಲ್ಲಿ ಅವನ ವರ್ಣನೆ ತುಂಬಾ ಕಾವ್ಯಮಯವಾಗಿ ಬಂದಿದೆ. ಮಾಧವ ಮಂತ್ರಿಯ ವರ್ಣನೆ ಕೂಡ ಇಲ್ಲಿ ಬಹಳ ಅರ್ಥಪೂರ್ಣವಾಗಿ ಬಂದಿದೆ. ಬುಕ್ಕ ಭೂಪತಿಯ ಆಜ್ಞೆಯ ಮೇರೆಗೆ ಮಾಧವನು ಪಶ್ಚಿಮ ಸಮುದ್ರ ಪರ್ಯಂತ ರಾಜ್ಯವನ್ನು ವಿಸ್ತರಿಸಿ ಅದರ ಅಧಿಕಾರಿಯಾಗಿ ಆ ರಾಜ್ಯದ ಯೋಗ ಕ್ಷೇಮವನ್ನು ನೋಡಿಕೊಳ್ಳುತ್ತಿದ್ದನು. ಹಾಗೆಯೇ ಮಾಧವಮಂತ್ರಿಯನ್ನು "ಶ್ರೀಮತ್ ಕಾಶೀವಿಳಾಸ ಕ್ರಿಯಾಶಕ್ತಿ ಶಿವದೇಶಿಕಾದಿಷ್ಟೇನ, ಶುದ್ಧಶೈವಾಮ್ನಾಯ ವರ್ತನಾ ನಿಜೇಷ್ಟ, ಲಿಂಗಶ್ರುತಾಧಿಷ್ಠಾನಂ ದೇವದೇವಂ ಶ್ರೀ ಮತ್ರ್ಯಂಬಕನಾಥಂ ನಿತ್ಯನೈಮಿತ್ತಿಕಾತ್ಮಭಿಃ ಕ್ರಿಯಾನಿಯಮ ಕಲಾಪೈರ್ಯಥಾಕಾಲಂ ಯಜತ್" ಮುಂತಾಗಿ ಮಾಧವಮಂತ್ರಿಯನ್ನು ವರ್ಣಿಸುವ ಭಾಗ ಬಹಳ ಮಹತ್ವದ್ದು.

ಇಲ್ಲಿ ಕ್ರಿಯಾಶಕ್ತಿಯು ಮಾಧವಮಂತ್ರಿಯ ಗುರುವಾಗಿದ್ದುದು ಸ್ಪಷ್ಟವಾಗುತ್ತದೆ. ಕ್ರಿಯಾಶಕ್ತಿಯನ್ನು "ಸಾಕ್ಷಾತ್ ಗಿರಿಶಾವತಾರವಪುಷಃ" ಮತ್ತು "ಉಪನಿಷನ್ಮಾರ್ಗ ಪ್ರತಿಷ್ಠಾಗುರುಃ" ಎಂದು ಕರೆದಿರುವುದು ಅತ್ಯಂತ ಗಮನಾರ್ಹವಾಗಿದೆ. ಸ್ವತಃ ಮಾಧವ ಮಂತ್ರಿಯು ಆ ಕ್ರಿಯಾಶಕ್ತಿ ದೇಶಿಕನಿಂದ ಉಪದೇಶ ಪಡೆದು ಶುದ್ಧ ಶೈವಾಮ್ನಾಯದಲ್ಲಿ ವರ್ತಿಸುತ್ತ, ತನ್ನ ಇಷ್ಟಲಿಂಗದಲ್ಲಿ ಅಧಿಷ್ಠಿತನಾದ ತ್ರಿಯಂಬಕನನ್ನು ನಿತ್ಯನೈಮಿತ್ತಿಕ ಆತ್ಮಕ್ರಿಯಾನೇಮಗಳಿಂದ ಯಜಿಸುತ್ತಿದ್ದನು" ಎಂದು ಹೇಳಿರುವುದು ಇನ್ನೂ ಮಹತ್ವದ್ದು. ಶುದ್ಧ ಶೈವ ಮತ್ತು ಅದರ ಆಚಾರ್ಯರ ಬಗ್ಗೆ ತಿಳಿಯಲಿಚ್ಛಿಸುವರು ಈ ಶಾಸನವನ್ನು ಪಠಾಂಬರಿಸಬೇಕು. ಮಾಧವಾಮಾತ್ಯನಿಗೆ ಅವನದೇ ಆದ ಇಷ್ಟಲಿಂಗ ವಿದ್ದುದರ ಬಗ್ಗೆಯೂ ಇದು ತಿಳಿಸುತ್ತದೆ. ಅದು ಗುರುವಾದ ಕ್ರಿಯಾಶಕ್ತಿಯಿಂದ ದತ್ತ ವಾದುದಾಗಿರಬೇಕು.

ಇಲ್ಲಿ ಕ್ರಿಯಾಶಕ್ತಿಯನ್ನು "ಕಾಶೀವಿಲಾಸ ಕ್ರಿಯಾಶಕ್ತಿ" ಎಂದು ಕರೆದಿರುವುದನ್ನು ನೋಡಿದರೆ ಕಾಶೀಕ್ಷೇತ್ರಕ್ಕೂ ಕ್ರಿಯಾಶಕ್ತಿ ಗುರುವಿಗೂ ಏನಾದರೂ ಸಂಬಂಧವಿದ್ದಿತೆ? ಮಾಧವಮಂತ್ರಿ ಪೂಜಿಸುತ್ತಿದ್ದ ಇಷ್ಟಲಿಂಗವು ಇಂದಿನ ವೀರಶೈವ (ಲಿಂಗಾಯಿತ)ರು ಧರಿಸುವ ಇಷ್ಟಲಿಂಗ ಸ್ವರೂಪದ್ದಾಗಿತ್ತೆ? ಇವೆಲ್ಲ ಶೈವಧರ್ಮದ ಅಧ್ಯಯನದ ದೃಷ್ಟಿ ಯಿಂದ ಆಲೋಚನೀಯವಾಗಿವೆ.

ಹಾಸನ ಜಿಲ್ಲೆ ಚೆನ್ನರಾಯಪಟ್ಟಣ ತಾಲೂಕಿನ ಹುಲಿಕೆರೆ ಗ್ರಾಮದ ತಾಮ್ರ ಶಾಸನದಲ್ಲಿಯೂ (ಹಳೆಯ ಆವೃತ್ತಿ E.C. V ಶಾಸನ ಸಂಖ್ಯೆ 256, ಹೊಸ ಆವೃತ್ತಿ E.C. X ಶಾಸನ ಸಂಖ್ಯೆ 131) ಕ್ರಿಯಾಶಕ್ತಿ ಗುರುವಿನ ಬಗ್ಗೆ ಕೆಲವು ವಿಷಯಗಳು ಬರುತ್ತವೆ. ಈ ಶಾಸನ ಸಂಸ್ಕೃತ ಮತ್ತು ಕನ್ನಡ ಭಾಷೆಯಲ್ಲಿದ್ದು ಲಿಪಿ ನಾಗರಿಲಿಪಿ ಯಾಗಿದೆ. ಶಾಸನದ ಕಾಲ ಕ್ರಿ.ಶ. 1328.

ಆರಂಭದಲ್ಲಿ ಶಿವಗಣೇಶಾದಿ ದೇವತೆಗಳ ಸ್ತುತಿ ಬರುತ್ತಿದ್ದು ತದನಂತರ, ಸಂಗಮ ಅವನ ಹರಿಹರ, ಬುಕ್ಕ ಮೊದಲಾದ ಐದು ಜನ ಮಕ್ಕಳ ಹೆಸರನ್ನು ತಿಳಿಸಲಾಗಿದೆ. ಯುವ ರಾಜನಾಗಿದ್ದ ಬುಕ್ಕನ ಶೌರ್ಯ ಪ್ರತಾಪಾದಿಗಳ ವರ್ಣನೆ ತುಂಬಾ ದೀರ್ಘವೂ ಕಾವ್ಯಮಯವೂ ಆಗಿದೆ. ಅವನು ವಿಜಯನಗರ ಪಟ್ಟಣ ಕೋಟೆ - ಕೊತ್ತಲಗಳನ್ನು ಕಟ್ಟಿಸಿದುದರ ಉಲ್ಲೇಖವೂ ಇದೆ. ಮುದ್ದಪ್ಪನಿಗೆ ಬುಕ್ಕರಾಯ ಸಕಲ ರಾಜ್ಯಭಾರವನ್ನು ವಹಿಸಿ ತಾನು ಸುಖವಾಗಿದ್ದ. ಬುಕ್ಕನ ಮಗ ಹರಿಹರ II ಅವನು ತನ್ನ ತಂದೆಯಿಂದ ಮುದ್ದಪ್ಪ ದಂಡನಾಯಕನೊಡಗೂಡಿ ರಾಜ್ಯ ಸಂಪತ್ತನ್ನೂ ಪಡೆದಿದ್ದ. ಅವನ ಗುರು ಕ್ರಿಯಾಶಕ್ತಿ ಅವರ ಕುಲ ದೈವ ವಿರೂಪಾಕ್ಷ. ಕ್ರಿಯಾಶಕ್ತಿಯನ್ನು ಈ ಶಾಸನ "ವಿರೂಪಾಕ್ಷ ನಾಷಾತಂ ಕುಲಪರಮದೈವಂ ಕುಲಗುರುಃ ಕ್ರಿಯಾಶಕ್ತ್ಯಾಯಚಾರ್ಯ, ಕಲಿಕಲಭ ಕಂಠೀರವಯಶಃ, ಜಗದ್ರಕ್ಷಾಶಿಕ್ಷಾಶರ ವಿಭವಸೇ" ಎಂದು ಬಣ್ಣಿಸಿದೆ. ಇಲ್ಲಿ ಕ್ರಿಯಾಶಕ್ತಿ

ಆಚಾರ್ಯನನ್ನು "ಕುಲಗುರುಃ" ಎಂದು ಕರೆದಿರುವುದು ಗಮನೀಯ. ಇದರಿಂದ ಕ್ರಿಯಾ ಶಕ್ತಿ ಸಂಗಮವಂಶಕ್ಕೆ ಆದಿ-ಬುನಾದಿಯಿಂದಲೂ ಗುರುವಾಗಿದ್ದುದು ಸ್ಪಷ್ಟವಾಗುತ್ತದೆ. ಕಲಿಮಲಿನವೆಂಬ ಆನೆಗೆ ಅವರು ಸಿಂಹಪ್ರಾಯರಾಗಿದ್ದರೆಂದು ಹೇಳಿರುವುದು ಅವರ ಪವಿತ್ರ ಜೀವನವನ್ನು ಸಂಕೇತಿಸುತ್ತದೆ. ಜೊತೆಗೆ ಅವರು ಜಗದ್ರಕ್ಷಾಶಿಕ್ಷಾಕರರೂ ಆಗಿದ್ದುದನ್ನು ಮರೆಯಲಾಗದು.

ಈ ಶಾಸನದಲ್ಲಿ ಮುಂದೆ ಎರಡನೆಯ ಹರಿಹರನು ಹೊಯ್ಸಳ ರಾಜದಲ್ಲಿದ್ದ ಜಂಬೂರು ಗ್ರಾಮಕ್ಕೆ ತನ್ನ ತಾಯಿ (ಬುಕ್ಕರಾಜನ ಹೆಂಡತಿ) ಯಾದ ಹೊನ್ನಾಯಿಯ ಹೆಸರಿಟ್ಟು 'ಹೊನ್ನಾಯಿಪುರ' ಎಂದು ಕರೆದು ಹಲವಾರು ಗೋತ್ರ-ಸೂತ್ರದ ಬ್ರಾಹ್ಮಣರಿಗೆ ದಾನ ಮಾಡಿದ ವಿವರ ಬರುತ್ತದೆ. ಆ ಅಗ್ರಹಾರದ ಸೀಮಾಂತದ ವಿವರ ಕನ್ನಡದಲ್ಲಿದೆ.

ಕೋಲಾರ ಜಿಲ್ಲೆ ಮುಳಬಾಗಿಲ ತಾಲೂಕು ಮುಳಬಾಗಿಲು ಗ್ರಾಮದ ಶಂಕರ ತೀರ್ಥದ ಬಳಿ ಇರುವ ಹಾಳು ದೇವಾಲಯದ ಗೋಡೆಯ ಮೇಲೆ ಒಂದು ಶಾಸನವಿದೆ. (E.C. ಹಳೆಯ ಆವೃತ್ತಿ X ಶಾಸನಸಂಖ್ಯೆ 11). ಸಂಸ್ಕೃತ ಭಾಷೆಯಲ್ಲಿರುವ ಆ ಶಾಸನ ಬಹಳ ಒಡೆದುಹೋಗಿದ್ದು, ವಿಭವ ಸಂವತ್ಸರ ಶ್ರಾವಣ ಬಹುಳ ಮನ್ಮಥದಿನ ಎಂದು ಕಾಲಸೂಚಿಯಿದೆ. ಎರಡನೆಯ ಬುಕ್ಕರಾಯನ ಆಳ್ವಿಕೆಯ ಕಾಲದ ಈ ಶಾಸನದಲ್ಲಿ ಕ್ರಿಯಾಶಕ್ತಿಯನ್ನು ಕುರಿತು "ಕ್ರಿಯಾಶಕ್ತಿರಿತ್ಯಾಖ್ಯಾತಸ್ಯ ಗುರೋರ್ಗುರು ರಿವ" ಎಂದರೆ ಗುರುವಿನ ಗುರು ಎಂದು ಕರೆದಿರುವುದು ಗಮನೀಯ. ಮುಂದೆ ಆವನೀ ನಾಡಿನ ವಿದ್ಯಾಶಂಕರದೇವರಿಗೆ ಇಮ್ಮಡಿ ಬುಕ್ಕನು ಕುಮ್ಮಯಿದೇವಿ ಹೆಸರಿನ ಗ್ರಾಮವನ್ನು ದಾನ ವಾಗಿ ಬಿಟ್ಟಂತೆ ಉಲ್ಲೇಖಿಸಲಾಗಿದೆ. ಅಲ್ಲಿ ಬರುವ "...... ಅಶೇಷ ದಾನ ಸುಭಗೇ ಕಾಲೇ ತದಾನೀಂ ಶುಭೇ ವಿದ್ಯಾಶಂಕರ ಗುರವೇ ವಿದ್ಯಾಧಿತವ್ಯಕ್ತಯೆ.... ಎಂಬ ಮಾತು ಕ್ರಿಯಾಶಕ್ತಿ ದೇವರಿಗೆ ಅನ್ವಯಿಸುತ್ತದೆಯೇ ? ಸ್ಪಷ್ಟವಾಗುವುದಿಲ್ಲ.

ಈ ಸಂಸ್ಕೃತ ಶಾಸನದ ಕೆಳಗೆ ಅದೇ ಕಲ್ಲಿನಲ್ಲಿ ಕನ್ನಡ ಶಾಸನವಿದೆ. ಅದರಲ್ಲಿ ಮುಳಬಾಗಿಲು ರಾಜ್ಯದ ಅವನೀನಾಡಿನಲ್ಲಿದ್ದ ಕುಮ್ಮಾಯಿ ಗ್ರಾಮವನ್ನು ವಿದ್ಯಾಶಂಕರ ಪುರವಾಗಿ ಮಾಡಿ ವಿದ್ಯಾಶಂಕರ ದೇವರಿಗೆ ಕೊಟ್ಟಂತೆ ಹೇಳಲಾಗಿದೆ. ಶಾಸನದ ಆರಂಭದಲ್ಲಿ ದಾನ ಕೊಟ್ಟ ಕಾಲವನ್ನು ಶಾಲಿವಾಹನ ಶಕ 1312ನೆಯ ಶುಕ್ಲಸಂವತ್ಸರದ ಆಷಾಢ ಬಹುಳ ಅಷ್ಟಮಿ ಎಂದು ನಮೂದಿಸಲಾಗಿದೆ. ಇದರಿಂದ ಶಾಸನದ ಕಾಲ ಕ್ರಿ.ಶ. 1390 ಆಗುತ್ತದೆ. ಮೇಲಣ ಸಂಸ್ಕೃತ ಶಾಸನದ ಕಾಲ ವಿಭವ ಸಂವತ್ಸರ ಎಂದಿರುವುದರಿಂದ ಅದರ ಕಾಲ ಒಂದು ವರ್ಷ ಮೊದಲಿನದಾಗುತ್ತದೆ.

ದಾವಣಗೆರೆ ತಾಲೂಕು (ಈಗ ಜಿಲ್ಲೆ) ಹರಿಹರ ಗ್ರಾಮದ ಹರಿಹರೇಶ್ವರ ದೇವಾಲಯದ ದಕ್ಷಿಣ ಭಾಗದಲ್ಲಿ ನಿಲ್ಲಿಸಿರುವ ಎರಡನೆಯ ಶಿಲಾಶಾಸನ (E.C. XI),ಹಳೆಯದು ಶಾಸನ ಸಂಖ್ಯೆ-23) ದಲ್ಲಿ ಕ್ರಿಯಾಶಕ್ತಿಯ ವರ್ಣನೆ ಬರುತ್ತದೆ.

ಒಂದನೆಯ ದೇವರಾಯನ ಆಳ್ವಿಕೆಯ ಈ ಸಂಸ್ಕೃತ-ಕನ್ನಡ ಶಾಸನದ ಕಾಲ ಶಕ ವರ್ಷ 1332ನೆಯ (ಕ್ರಿ.ಶ. 1410) ವಿಕೃತಿಸಂವತ್ಸರ ಭಾದ್ರಪದ ಶುದ್ಧ 12 ಸೋಮವಾರ ಎಂದಿದೆ. ಇದರಲ್ಲಿ ರಾಜಾಧಿರಾಜ ರಾಜಪರಮೇಶ್ವರ ವೀರಪ್ರತಾಪ ದೇವರಾಯ ಮಹಾರಾಯರ ಶೌರ್ಯ-ಪ್ರತಾಪಾದಿಗಳ ವರ್ಣನೆ ಹಲವಾರು ವಿಶೇಷಣಗಳ ಮೂಲಕ ತುಂಬಾ ವಿಸ್ತಾರವಾಗಿ ಬಂದಿದೆ. ಮುಂದೆ ಕ್ರಿಯಾಶಕ್ತಿ ಗುರುವನ್ನು ಶ್ರೀ ಸ್ವಯಂಭೂ ತ್ರಿಯಂಬಕ-ಚರಣಾರವಿಂದಾರಾಧಕ ಶ್ರೀ ಮದ್ರಾಯರಾಜಗುರು ಮಂಡಲಾಚಾರ್ಯ ವರ್ಯ.... ತಪೋರಾಜ್ಯ ಲಕ್ಷ್ಮೀನಿವಾಸ ಕಾಯ ಶ್ರೀ ಕ್ರಿಯಾಶಕ್ತಿ ಗುರುವರ" ಎಂದು ಪ್ರಶಂಸಿಸಿ, ಒಂದನೆಯ ದೇವರಾಯನು ಅವರ ಚರಣ ಪರಿಚರಣೆ ಪ್ರಸಾದಾತನಾಗಿದ್ದನೆಂದು ತಿಳಿಸುತ್ತದೆ.

ಆಂಧ್ರಪ್ರದೇಶದ ಕನ್ನಡ ಶಾಸನಗಳಲ್ಲಿ ಕೂಡ ಕ್ರಿಯಾಶಕ್ತಿಯ ಉಲ್ಲೇಖ ಬರುತ್ತಿರುವುದು ಗಮನೀಯ ಅಂಶ. ಸಂಗಮ ವಂಶದ ಅರಸರ ಕಾಲದ ಶಾಸನಗಳವು. ಕಡಪ ಜಿಲ್ಲೆಯ ಅಟ್ಟವರಂ ಶಾಸನ ಅವುಗಳಲ್ಲಿ ಒಂದು (ಆಂಧ್ರಪ್ರದೇಶದ ಶಾಸನಗಳು ಕಡಪಾ ಜಿಲ್ಲೆ ಭಾಗ 2, ಶಾಸನ ಸಂಖ್ಯೆ 1, ಹದಿನಾಲ್ಕನೆ ಶತಮಾನದ ಲಿಪಿ). ಆ ಶಾಸನದಲ್ಲಿ ಕ್ರಿಯಾಶಕ್ತಿಯನ್ನು 'ರಾಯರಾಜಗುರು' ಎಂದು ವಿಶೇಷಿಸಿದೆ. ದೊರೆ ಹರಿಯಣ್ಣೊಡೆಯನನ್ನು ಕ್ರಿಯಾಶಕ್ತಿಯ ಶಿಷ್ಯನೆಂದು ಈ ಶಾಸನ ಹೇಳುತ್ತದೆ. ವಿಜಯ ಭೂಪತಿ ಕೂಡ ಕ್ರಿಯಾಶಕ್ತಿಯ ಶಿಷ್ಯನಾಗಿದ್ದು, ಅವನು ತನ್ನ ಗುರುವಿನ ಹೆಸರಿನಲ್ಲಿ ದಂಡೇಹಳ್ಳಿಯ ಸ್ಥಳದಲ್ಲಿ 'ಕ್ರಿಯಾಶಕ್ತಿಪುರವನ್ನು ಸ್ಥಾಪಿಸಿದ ಬಗ್ಗೆ ತಿಳಿಸಲಾಗಿದೆ. (EI XIV Part 2. ನಂ. 2)

ಕೆಲವು ಸಾಹಿತ್ಯ ಕೃತಿಗಳಲ್ಲಿಯೂ ಕ್ರಿಯಾಶಕ್ತಿಯ ವರ್ಣನೆ ಬರುತ್ತದೆ. ಬುಕ್ಕರಾಜನ ಸೊಸೆ ಕಂಪಣನ ಪಟ್ಟದರಸಿ ಗಂಗಾದೇವಿ ಸಂಸ್ಕೃತದಲ್ಲಿ ರಚಿಸಿದ ಮಧುರಾ ವಿಜಯ ಕಾವ್ಯ ಮಧುರೆಯ ಸುಲ್ತಾನನ್ನು ವೀರಕಂಪಣನು ಸದೆಬಡಿದು ವಿಜಯ ಸಂಪಾದಿಸಿದುದನ್ನು ಹೇಳುತ್ತದೆ. ಅದರಲ್ಲಿ ಕ್ರಿಯಾಶಕ್ತಿಯನ್ನು,

'ಅಸಾಧಾರಣ ಸಾರ್ವಜ್ಞ್ಯ ವಿಸತ್ ಸರ್ವಮಂಗಲಂ
ಕ್ರಿಯಾಶಕ್ತಿ ಗುರುಂ ವಂದೇ ತ್ರಿಲೋಚನ ಮಿವಾಪರಂ
(ಮಧುರಾವಿಜಯ ಅಥವಾ ವೀರಕಂಪರಾಯ ಚರಿತಂ ಸರ್ಗ', ಶ್ಲೋಕ 4)

ಎಂದು ಸ್ತುತಿಸಲಾಗಿದೆ. ಇಲ್ಲಿ ಅಸಾಧಾರಣ ಸರ್ವಜ್ಞತ್ವವನ್ನು ಹೊಂದಿದ್ದವನೂ, ಸರ್ವಮಂಗಲೆಯೊಡನೆ ಶೋಭಿಸುವವನೂ ಆದ ಶಿವನೊಡನೆ ಕ್ರಿಯಾಶಕ್ತಿ ಗುರುವನ್ನು ಹೋಲಿಸುತ್ತ ಅವನನ್ನು ಸಾಕ್ಷಾತ್ ಅಭಿನವ ಶಿವನೆಂದು ಬಣ್ಣಿಸಿರುವುದು ಗಮನಾರ್ಹ. ಅಂತಹ ಕ್ರಿಯಾಶಕ್ತಿ ಗುರುವಿನ ಪಾದಗಳಿಗೆ ಗಂಗಾದೇವಿ ವಂದನೆಗಳನ್ನು ಅರ್ಪಿಸಿದ್ದಾಳೆ.

ಲಕ್ಕಣ್ಣದಂಡೇಶನ 'ಶಿವತತ್ವಚಿಂತಾಮಣಿ'ಯಲ್ಲಿ ಕ್ರಿಯಾಶಕ್ತಿಯ ಸ್ತುತಿ ಭಾವಪೂರ್ಣವಾಗಿ ಬಂದಿದೆ. ``ಶಕ್ತಿ ಜಗದುದುಯ ಕಾರಣ ಮೆನಿಕುಮ್" ಎಂದು ಆರಂಭವಾಗುವ ಪದ್ಯದಲ್ಲಿ (ಸಂಧಿ 38,ಪದ್ಯ 246) ಶಕ್ತಿ ಜಗದುದಯಕ್ಕೆ ಕಾರಣ. ವಿಮಲಭಕ್ತಿ ಊರ್ಧ್ವಮುಕಿ. ಸುಜ್ಞಾನಭಕ್ತಿಯೆ ಸತಿ ಕ್ರಿಯಾಶಕ್ತಿ ಹೆಸರಿನಿಂದ ಹೊರ ಹೊಮ್ಮಿ ವರ್ತಿಸುತ್ತ ಜನತೆಗೆ ಭಕ್ತಿ- ಮುಕ್ತಿಯನ್ನು ಕೊಡುತ್ತ, ಸಂಸ್ಕೃತಿಯಲ್ಲಿ ಅತಿವಿರಕ್ತಿ ಭಾವದಿಂದ ಆಚರಿಸುತ್ತ ಸುಮಾರ್ಗ ಪಥಿಕನಾದ ಕ್ರಿಯಾಶಕ್ತಿಯತಿಯನೆ ಸಾಕ್ಷಾತ್ ವಿರೂಪಾಕ್ಷನೆಂದು ಹೇಳುವ ಲಕ್ಕಣ್ಣದಂಡೇಶ ಅವನ ಚರಣಾಂಬುಜಕ್ಕೆ ಶರಣು ಸಮರ್ಪಿಸಿದ್ದಾನೆ.

೩೯. ಚಿಕ್ಕಗೋಣಿಗೆರೆ; ವಿಜಯನಗರದ ಕಾಲದ ಶೈವಕೇಂದ್ರ - ಒಂದು ವಿಶ್ಲೇಷಣೆ

ಬಿ.ಸಿ.ರಾಕೇಶ

ಹೊನ್ನಾಳಿ ತಾಲೂಕಿನ ಹೊನ್ನಾಳಿಯ ಈಶಾನ್ಯಕ್ಕೆ ಸುಮಾರು ಹತ್ತು ಕಿ.ಮೀ. ದೂರದಲ್ಲಿರುವ ಚಿಕ್ಕಗೋಣಿಗೆರೆ ಹೊನ್ನಾಳಿ - ನಂದಿಗುಡಿ ರಸ್ತೆಯಲ್ಲಿ ಬರುತ್ತದೆ. ಈಶ್ವರ ಅಥವಾ ಸಿದ್ಧರಾಮೇಶ್ವರ ದೇವಾಲಯವು ತುಂಗಭದ್ರ ನದಿದಂಡೆಯ ಮೇಲೆ ಕಂಡು ಬರುತ್ತದೆ. ಈ ಪ್ರದೇಶವು ಈಗ ಹಾಳುಬಿದ್ದಿದೆ. ಮೊದಲು ಈ ಪ್ರದೇಶದಲ್ಲಿ ಊರು ಇದ್ದು ಕಾಲಾಂತರದಲ್ಲಿ ಅಂದರೆ ಕ್ರಿ.ಶ. ೧೯೦೦ ರಿಂದ ೧೯೨೦ರ ಅವಧಿಯಲ್ಲಿ ಸುಮಾರು ಒಂದು ಕಿ.ಮೀ. ಅಂತರದಲ್ಲಿ ಹೊಸ ಊರು ನಿರ್ಮಾಣ ವಾಗಿದೆ. ನದಿ ದಂಡೆಯ ಮೇಲೆ ಈಶ್ವರ ದೇವಾಲಯ, ಕೊತ್ತಳ, ಹಾಳುಬಿದ್ದ ದೇವಾಲಯಗಳು ಕಂಡಬರುತ್ತವೆ. ಈಶ್ವರ ದೇವಾಲಯದಲ್ಲಿ ಕೃಷ್ಣದೇವರಾಯನ ಕಾಲದ ಶಾಸನ ಕಂಡುಬರುತ್ತವೆ. ಇದರಲ್ಲಿ ದೇವಾಲಯಕ್ಕೆ ನಿತ್ಯ ಪೂಜಾಕಾರ್ಯಕ್ಕಾಗಿ ದಾನ ನೀಡಿದ ವಿವರಗಳು ಕಂಡುಬರುತ್ತವೆ. ಈ ದೇವಾಲಯದಲ್ಲಿ ಇನ್ನೊಂದು ವೀರಗಲ್ಲು ಶಾಸನ ವಿದೆ. ಈ ಶಾಸನವು ಜಾನುವಾರುಗಳ ದಾಳಿಯಲ್ಲಿ ಮಡಿದ ದಾಖಲೆ ಯಾಗಿದೆ. ಕೃಷ್ಣ ದೇವರಾಯನ ಕಾಲದ ಶಾಸನದಲ್ಲಿ ಈ ಊರನ್ನು 'ಚಿಕ್ಕಗೂಳಿಗೆರೆ' ಎಂದು ಉಲ್ಲೇಖಿಸ ಲಾಗಿದೆ. ಈ ಊರಿಗೆ ಉತ್ತರದಲ್ಲಿ ಹಿರೆಗೋಣಿಗೆರೆ, ದಕ್ಷಿಣದಲ್ಲಿ ಕೋಟೆಮಲ್ಲೂರು, ಪೂರ್ವದಲ್ಲಿ ಹೊನ್ನೂರು ವಡ್ಡರ ಹಟ್ಟಿತಾಂಡ, ಪಶ್ಚಿಮದಲ್ಲಿ ತುಂಗಭದ್ರ ನದಿಗಳಿವೆ. ಇದು ಹಿರೆಗೋಣಿಗೆರೆ ಗ್ರಾಮ ಪಂಚಾಯಿತಿಗೆ ಸೇರಿದೆ. ಈ ಊರಿನಲ್ಲಿ ಈಶ್ವರ ದೇವಾಲಯ ಅಲ್ಲದೆ ಆಂಜನೇಯ, ಕಲ್ಲೇಶ್ವರ, ಗಂಗಮ್ಮ, ಉಡುಚಲಮ್ಮ, ಶಿವಪಾರ್ವತಿ, ಜೈನಬಸದಿ, ದರ್ಗಾಹ್‌ಗಳು ಆರಾಧನಾ ಸ್ಥಳಗಳಾಗಿವೆ. ಈ ಊರಿನಲ್ಲಿ ಜೈನರ ಸಂಖ್ಯೆಯು ಹೆಚ್ಚಿನ ಪ್ರಮಾಣದಲ್ಲಿ ಇದ್ದು ಕೃಷಿಯನ್ನು ತಮ್ಮ ಮೂಲವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ಇವರ ಆರಾಧನಾ ಮಂದಿರವಾದ ಪಾಪನಾಥ ಬಸದಿಯನ್ನು ನಿರ್ಮಿಸಿದ್ದಾರೆ. ಬದ್ರುದ್ದೀನ್-ಶಾ-ಖಾದ್ರಿ ವಲಿಯಾ ದರ್ಗ ದಂತಹವು ಕೂಡ ಈ ಊರಿನಲ್ಲಿ ಕಂಡುಬರುತ್ತದೆ. ಈ ದರ್ಗಾವನ್ನು ನೋಡಿಕೊಳ್ಳಲು ಕೇವಲ ಒಂದು ಮುಸ್ಲಿಂ ಮನೆತನ ಮಾತ್ರ ವಾಸವಾಗಿದೆ. ಇನ್ನುಳಿದವರು ಹಿಂದೂಗಳು ವಾಸವಾಗಿದ್ದಾರೆ. ಈ ಊರಿನಲ್ಲಿ ಆಂಜನೇಯ ದೇವಾಲಯ, ಪಾಪನಾಥ ಬಸದಿ ಮತ್ತು ದರ್ಗಾಗಳು ಕೇವಲ

೧೦೦ ಮೀ. ಹಂತದಲ್ಲಿ ನಿರ್ಮಾಣವಾಗಿದೆ. ಈ ದೇವಾಲಯಗಳ ನಿರ್ಮಾಣವನ್ನು ಗಮನಿಸಿದಾಗ ಇಲ್ಲಿನ ಧರ್ಮ ಸಮನ್ವಯತೆಯ ಬಗ್ಗೆ ಕಾಳಜಿ ಮೂಡಿಬರುತ್ತದೆ.

ಈಶ್ವರ ದೇವಾಲಯ ಅಥವಾ ಸಿದ್ಧರಾಮೇಶ್ವರ ದೇವಾಲಯವನ್ನು ನಾವು ಗಮನಿಸಿದಾಗ ವಿಜಯನಗರ ಕಾಲಕ್ಕಿಂತಲೂ ಹಿಂದೆ ಇದು ಶೈವಕೇಂದ್ರವಾಗಿತ್ತು ಎಂಬುದರಲ್ಲಿ ಅನುಮಾನವಿಲ್ಲ. ಈ ದೇವಾಲಯದಲ್ಲಿರುವ ಶಿಲ್ಪಗಳ ಶೈಲಿಯನ್ನು ಗಮನಿಸಿದಾಗ ೧೧ ಮತ್ತು ೧೨ನೇ ಶತಮಾನಕ್ಕೆ ಸೇರಿದವುಗಳಾಗಿವೆ. ಸಿದ್ಧರಾಮರು ಧರ್ಮಪ್ರಸಾರಕ್ಕಾಗಿ ದೇಶಸಂಚಾರ ಮಾಡುವಾಗ ಈ ಮಾರ್ಗವಾಗಿ ಬಂದರು ಮತ್ತು ಈ ಗ್ರಾಮದಲ್ಲಿ ತಂಗಿ ದೇವಾಲಯವನ್ನು ನಿರ್ಮಿಸಿದರು ಎಂಬುದಾಗಿ ಪ್ರತೀತಿ ಇದೆ. ಈ ದೇವಾಲಯಕ್ಕೆ ಸಿದ್ಧರಾಮೇಶ್ವರ ದೇವಾಲಯವೆಂದು ಇನ್ನೊಂದು ಹೆಸರಿದೆ. ಇದಕ್ಕೆ ಪುಷ್ಟಿ ನೀಡುವಂತಹ ವಿಚಾರ ಎಂದರೆ ಸಿದ್ಧರಾಮನ ಅನುಯಾಯಿಗಳ ಮಠವಾದ ಶ್ರೀ ವೃಷಭಪುರಿ ಸಂಸ್ಥಾನ ಬೃಹನ್ಮಠ ನಂದಿಗುಡಿ, ಹರಿಹರ ತಾಲೂಕು ಇವರಿಗೆ ಈಗಿರುವ ಈಶ್ವರ ದೇವಾಲಯದ ಸುತ್ತಮುತ್ತಲು ಇರುವ ಜಮೀನು ಶ್ರೀ ಮಠದ ಹೆಸರಿನಲ್ಲಿದೆ. ಈ ದೇವಾಲಯದ ಪರಂಪರೆಯನ್ನು ಶ್ರೀ ಮಠದವರು ಮುಂದುವರಿಸಿ ಕೊಂಡು ಬಂದುದರ ಪರವಾಗಿ ಆ ಜಮೀನು ಶ್ರೀಮಠಕ್ಕೆ ಸೇರಿರುವುದು ಉಚಿತ ವಾದುದಾಗಿದೆ.

ವಿಜಯನಗರ ಕಾಲದಲ್ಲಿ ಈ ಭಾಗವು ಸೇರಿಕೊಂಡಿತ್ತು. ಕಾರಣ ಈ ಭಾಗದಲ್ಲಿ ಅನೇಕ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿದ ವಿವರಗಳು ಕಂಡುಬರುತ್ತವೆ. ಇದಕ್ಕೆ ಪುಷ್ಟಿ ನೀಡುವಂತೆ ದೇವಾಲಯಕ್ಕೆ ದಾನ ನೀಡಿದ ವಿವರಗಳು ಕಂಡುಬರುತ್ತವೆ. ಪ್ರೌಢದೇವರಾಯನ ಕಾಲದಲ್ಲಿ ವೀರಶೈವ ಧರ್ಮವು ಉತ್ತುಂಗದಲ್ಲಿತ್ತು. ಆ ಅವಧಿಯಲ್ಲಿ ವೀರಶೈವ ಧರ್ಮದ ಅನುಯಾಯಿಗಳಾದ ನೊಳಂಬವೀರಶೈವರು ಸಿದ್ಧರಾಮನ ಅನುಯಾಯಿಗಳು ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದ್ದರು. ಮುಂದೆ ವಿಜಯನಗರ ಕಾಲಘಟ್ಟದ ಅವಧಿಯಲ್ಲಿ ಈ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯ ವೀರಶೈವರು ಕಂಡುಬರುತ್ತಾರೆ. ಇದೇ ರೀತಿಯಲ್ಲಿ ನಾವು ಗಮನಿಸಿದಾಗ ನಂದಿಗುಡಿಯಲ್ಲಿ ಕಂಡು ಬರುವ ಶೈವದೇವಾಲಯಗಳು ಮತ್ತು ವಾಸನದಲ್ಲಿ ಕಂಡುಬರುವ ಕೇದಾರೇಶ್ವರ ದೇವಾಲಯಗಳು ಪುಷ್ಟಿ ನೀಡುತ್ತವೆ. ವಿಜಯನಗರ ಕಾಲದ ಈ ಪ್ರದೇಶದಲ್ಲಿ ಅನೇಕ ಶಿವಯೋಗಿಗಳು ಬೃಹನ್ಮಠ ನಂದಿಗುಡಿಯಿಂದ ಧರ್ಮಪ್ರಸಾರವನ್ನು ಕೈಗೊಂಡಿದ್ದಾರೆ. ಅದರಲ್ಲಿ ಶ್ರೀ ಕರಿಬಸವೇಶ್ವರರು ಒಬ್ಬರು. ವಿಜಯನಗರ ಕಾಲದಲ್ಲಿ ಧರ್ಮಪ್ರಸಾರವನ್ನು ಕೈಗೊಂಡು ಶ್ರೀಮಠದ ಜಗದ್ಗುರುಗಳಾಗಿ ಉಕ್ಕಡಗಾತ್ರಿಯಲ್ಲಿ ಲಿಂಗೈಕ್ಯರಾದರು. ಅಲ್ಲದೆ ವಿವಿಧ ಮಠಾಧೀಶರು ವೀರಶೈವ ಧರ್ಮಪ್ರಸಾರಕ್ಕಾಗಿ ಅನೇಕ ಕ್ರಮಗಳನ್ನು ಕೈಗೊಂಡಿದ್ದರು ಎಂಬುದಾಗಿ ನಾವು ಗಮನಿಸಿದಾಗ, ಸುತ್ತಲೂ ಕಂಡುಬರುವ ಶೈವ ದೇವಾಲಯಗಳಾದ ಬೈರನಪಾದ, ಕೇದಾರೇಶ್ವರ ಮತ್ತು ಬಸವೇಶ್ವರ ಅಥವಾ

ನಂದೀಶ್ವರ ದೇವಾಲಯಗಳು ಇದಕ್ಕೆ ಪುಷ್ಟಿ ನೀಡುತ್ತವೆ. ವಿಜಯನಗರ ಕಾಲಘಟ್ಟದಲ್ಲಿ ಈ ಪ್ರದೇಶವು ಪ್ರಮುಖ ಶೈವ ಕೇಂದ್ರವಾಗಿತ್ತಲ್ಲದೆ ಆ ಅವಧಿಯಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದು ಕೊಂಡಿತ್ತು.

ಈ ರೀತಿಯಾಗಿ ವಿಜಯನಗರ ಕಾಲದ ಈ ಪ್ರದೇಶದಲ್ಲಿ ವೀರಶೈವ ಧರ್ಮವನ್ನು ಪ್ರಸಾರಪಡಿಸಿದ ಕೀರ್ತಿ ಶ್ರೀ ವೃಷಭಪುರಿ ಸಂಸ್ಥಾನ ಬೃಹನ್ಮಠ ನಂದಿಗುಡಿ ಇವರಿಗೆ ಸಲ್ಲುತ್ತದೆ. ಕಾರಣಾಂತರಗಳಿಂದ ಚಿಕ್ಕಗೋಣಿಗೆರೆಯಲ್ಲಿರುವ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಲ್ಲ. ಈ ದೇವಾಲಯವು ಶಿಥಿಲಾವಸ್ಥೆಯಲ್ಲಿದ್ದು ಅದರ ಜೀರ್ಣೋದ್ಧಾರ ಮಾಡುವುದು ಅತಿ ಮುಖ್ಯವಾಗಿದೆ. ಈ ರೀತಿಯಾಗಿ ವಿಜಯನಗರ ಕಾಲದಲ್ಲಿ ವೀರಶೈವ ಧರ್ಮಪ್ರಸಾರಕ್ಕಾಗಿ ವಿವಿಧ ಮಾರ್ಗಗಳನ್ನು ಅನುಸರಿಸಿದ ವಿವಿಧ ಮಠಾಧೀಶರು, ಮುನಿಗಳು ನಾಡಿನಾದ್ಯಂತ ಸಂಚರಿಸಿ ಧರ್ಮವನ್ನು ಪೋಷಿಸಿ ಬೆಳೆಸಿದರು. ಇದನ್ನು ಗಮನಿಸಿದಾಗ ಚಿಕ್ಕಗೋಣಿಗೆರೆ ಗ್ರಾಮವು ವಿಜಯನಗರ ಕ್ಕಿಂತ ಮೊದಲು ಮತ್ತು ವಿಜಯನಗರ ಕಾಲದಲ್ಲಿ ಶೈವ ಕೇಂದ್ರವಾಗಿತ್ತೆಂಬುದರಲ್ಲಿ ಎರಡು ಮಾತಿಲ್ಲ. ಅಲ್ಲಿಂದ ಇಲ್ಲಿಯವರೆಗೆ ಪೂಜಾಕಾರ್ಯಗಳು ನಿರಂತರವಾಗಿ ನಡೆದುಕೊಂಡು ಬರುತ್ತಿದೆ.

೪೦. ಕಾಲಜ್ಞಾನ ಸಾಹಿತ್ಯದಲ್ಲಿ ವಿಜಯನಗರ

ಡಾ. ಕೆ. ರವೀಂದ್ರನಾಥ

ಕಾಲದ ವಿಷಯವನ್ನು ವೈಜ್ಞಾನಿಕವಾಗಿ ಅರಿಯುವುದು ಬೇರೆ, ಅನುಭಾವಿ ನೆಲೆಯಲ್ಲಿ ಅರಿಯುವುದು ಬೇರೆ, ಅನುಭಾವಿ ನೆಲೆಯಲ್ಲಿ ಅದನ್ನು ಅಂತಃಸ್ಫುರಣದಿಂದ ಬಂದ ಜ್ಞಾನವೆಂದು ಹೇಳುತ್ತಾರೆ. ಈ ಅಭಿಪ್ರಾಯವನ್ನೇ ಪಾತಂಜಲಿದರ್ಶನ "ಪರಿಣಾಮತ್ರಯ ಸಂಯಮಾದಕೀ ತಾನಾಗತ ಜ್ಞಾನಂ" ಎಂದು ಹೇಳಿದೆ. ಅಂದರೆ ಧರ್ಮ, ಲಕ್ಷಣ, ಅವಸ್ಥಾನಗಳೆಂಬ ಮೂರು ಪರಿಣಾಮಗಳಲ್ಲಿ ಸಂಯಮ ಮಾಡುವದರಿಂದ ಕ್ರಮವಾಗಿ ಭೂತ, ವರ್ತಮಾನ, ಭವಿಷ್ಯತ್ ಕಾಲದ ಜ್ಞಾನವಾಗುವುದೆಂದರ್ಥ. ಹೀಗಾಗಿ ಇದೊಂದು ಸಿದ್ಧಿ. ಜೈನಧರ್ಮದಲ್ಲಿ ಇದನ್ನು "ಅವಧಿಜ್ಞಾನ"ವೆಂದು ಕರೆಯುತ್ತಾರೆ. ಅವರ ಪ್ರಕಾರ ಇದು ಜ್ಯೋತಿಷ್ಯಶಾಸ್ತ್ರವಲ್ಲವೆಂಬುದಕ್ಕೆ ವಡ್ಡಾರಾಧನೆಯ ಸುಕುಮಾರಸ್ವಾಮಿ ಕಥೆಯಲ್ಲಿ ಬರುವ ಸೂರ್ಯಮಿತ್ರ - ಸುಧರ್ಮಾಚಾರ್ಯರ ಸಂಭಾಷಣೆ ಹೀಗಿದೆ. ಶಿಷ್ಯನಾದ ಸೂರ್ಯಮಿತ್ರ "ಸೂಕ್ಷ್ಮಾಂತರೀ ಜ್ಞಾನವಾದ ಜ್ಯೋತಿಷ್ಯ" ಕಲಿಸಬೇಕಾಗಿ ಕೇಳಿದಾಗ "ಇದು ಜ್ಯೋತಿಷ್ಯವಲ್ಲ, ಎಮ್ಮಂತಪ್ಪ ಋಷಿಯರ್ಗ್ಗಲ್ಲದೆ ಪೇಳಲುಂ ಕಲಿ ಯಲುಂ ಆಗದೆಂದು" ಹೇಳುತ್ತಾನೆ, ಸುಧರ್ಮಾಚಾರ್ಯ. ಅದೇನೇ ಇದ್ದರೂ ಕಾಲಜ್ಞಾನ ಸಾಹಿತ್ಯವು ಚಾರಿತ್ರಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ದೃಷ್ಟಿಯಿಂದ ಅಧ್ಯಯನ ಯೋಗ್ಯವಾಗಿದೆ. ಈ ಹಿನ್ನೆಲೆಯಲ್ಲಿ ಕಾಲಜ್ಞಾನ ಸಾಹಿತ್ಯವನ್ನು ಆಕರವಾಗಿಟ್ಟುಕೊಂಡು ವಿಜಯನಗರದ ಐತಿಹಾಸಿಕ ಸ್ಥಿತ್ಯಂತರಗಳನ್ನು ವಿದ್ವಾಂಸರ ಮುಂದೆ ನಿರೂಪಿಸುವುದು ಈ ಪ್ರಬಂಧದ ಆಶಯ.

1. ಕಾಲಜ್ಞಾನ ಸಾಹಿತ್ಯದ ಉಗಮ

ಕವಿಚರಿತೆಕಾರರಾದ ಆರ್.ನರಸಿಂಹಾಚಾರ್ಯರು ಬಸವಣ್ಣ, ಚನ್ನಬಸವಣ್ಣ, ಪ್ರಭುದೇವ, ಮಡಿವಾಳ ಮಾಚಿದೇವಾ, ಸಿದ್ಧರಾಮ, ಘಟ್ಟಿವಾಳಯ್ಯ, ಹಡಪದಪ್ಪಣ್ಣ, ನೀಲಮ್ಮ, ಅಕ್ಕನಾಗಮ್ಮ, ಕೂಗಿನಮಾರಯ್ಯ ಮುಂತಾದವರು ಕಾಲಜ್ಞಾನ ಸಾಹಿತ್ಯವನ್ನು ರಚಿಸಿದ್ದಾರೆಂದು ಅಭಿಪ್ರಾಯಪಡುತ್ತಾರೆ. ವಿ.ಶಿವಾನಂದ ಅವರು ಕಾಲಜ್ಞಾನ ಸಾಹಿತ್ಯ ಬಸವಯುಗ - ಬಸವೋತ್ತರ ಯುಗವೆಂಬ ಎರಡು ಘಟ್ಟದಲ್ಲಿ ಬೆಳೆದುಬಂದಿದೆ. ಬಸವೋತ್ತರಯುಗವನ್ನು ವಿಜಯನಗರ ಸಾಮ್ರಾಜ್ಯೋದ್ಯಯ ಮತ್ತು ವಿಜಯನಗರ ಸಾಮ್ರಾಜ್ಯವಿನಾಶೋತ್ತರ ಕಾಲವೆಂದು ವಿಂಗಡಿಸುತ್ತಾರೆ. ಈ ಅವಧಿಯಲ್ಲಿ ಕರಸ್ಥಲ ನಾಗೀದೇವ, ಎಮ್ಮೆಬಸವ, ವಿರೂಪಾಕ್ಷ ಪಂಡಿತ, ಸರ್ವಜ್ಞ, ಕೊಡೇಕಲ್ಲ ಬಸವಣ್ಣ,

ತಿಂಥಿಣಿ ಮೋನಪ್ಪ, ಸಾರವಾಡದ ಚಿಕ್ಕ ಮುಂತಾದ ಕಾಲಜ್ಞಾನಿಗಳನ್ನು ಹೆಸರಿಸುತ್ತಾರೆ. ಹೀಗೆ ಸೃಷ್ಟಿಯಾದ ಕಾಲಜ್ಞಾನ ಸಾಹಿತ್ಯ ಕರ್ನಾಟಕದಲ್ಲಿ ``ಸಾರುವಯ್ಯ"ಗಳಿಂದ ಮೌಖಿಕ ಪ್ರಸಾರವಾಗಿ ಉಳಿದುಬಂದಿದೆಯೆನ್ನಬಹುದು.

2. ಕಾಲಜ್ಞಾನ ಸಾಹಿತ್ಯದ ಲಕ್ಷಣ

ಕಾಲಜ್ಞಾನ ಸಾಹಿತ್ಯ ಪದ್ಯ, ಗದ್ಯ, ತ್ರಿಪದಿ, ಸಾಂಗತ್ಯ, ಷಟ್ಪದಿ ಮುಂತಾದ ದೇಶೀ ಛಂದೋಮಟ್ಟುಗಳಲ್ಲಿ ರಚನೆಗೊಂಡಿದೆ. ಸ್ವರವಚನಗಳಂತೆ ರಾಗ-ತಾಳಗಳ ನಿರ್ದೇಶನದ ಜೊತೆಗೆ ಸುವ್ವಿ, ಕೋಲುಕೋಲೆ, ಬೆಡಗುಕೇಳಿರೋ, ನೋಡಿರಣ್ಣಾ - ಎಂಬಂತಹ ಜಾನಪದ ಪಲ್ಲವಿಗಳಿಂದ ಇದು ಸಂಯೋಜನೆಗೊಂಡಿದೆ. ಯಥಾವತ್ತತೆ ಈ ಸಾಹಿತ್ಯ ಲಕ್ಷಣ. ಆದರ್ಶಕ್ಕಿಂತ ವಾಸ್ತವತೆಗೆ ಹೆಚ್ಚು ಮಹತ್ವ. ಬೆಡಗು ಈ ಸಾಹಿತ್ಯದ ಮತ್ತೊಂದು ಲಕ್ಷಣ. ಲೌಕಿಕ ಸಾದೃಶ್ಯಗಳನ್ನು ವಿಪರ್ಯಾಸವಾಗಿ ನಿರೂಪಿಸುವುದು ಇಲ್ಲಿಯ ವೈಶಿಷ್ಟ್ಯ. ಉದಾ: ಇಲಿ ಬೆಕ್ಕು ನುಂಗೀತು, ಮೊಲ ನಾಯಿ ತಡೆದೀತು; ಕಲ್ಲು ಕೋಳಿ ಕೂಗೀತು. ಈ ಸಾಹಿತ್ಯ ಐತಿಹ್ಯ, ನಂಬಿಕೆ, ಸಂಪ್ರದಾಯ, ಜನವದಂತಿಗಳಿಂದ ಕೂಡಿ ರುವುದರಿಂದ ವಿ.ಶಿವಾನಂದ ಅವರು ಕೈಫಿಯತ್ತುಗಳಿಗೆ ಹೋಲಿಸುತ್ತಾರೆ. ಹೀಗಾಗಿ ಚರಿತ್ರೆಯ ನಿರ್ಮಾಣದಲ್ಲಿ ಇವುಗಳನ್ನು ಎಚ್ಚರಿಕೆಯಿಂದ ಬಳಸಿಕೊಳ್ಳಬೇಕಾಗುವ ಅನಿವಾರ್ಯತೆ ಇದೆಯೆಂಬುದನ್ನು ವಿದ್ವಾಂಸರು ಗಮನಿಸಬೇಕು.

3. ಕಾಲಜ್ಞಾನಗಳಲ್ಲಿ ವಿಜಯನಗರದ ಉಲ್ಲೇಖ

ಕ್ರಿ.ಶ. 1584ರಲ್ಲಿ ಜೀವಿಸಿದ್ದ ಹಂಪೆಯ ಹಿರೇಮಠಾಧ್ಯಕ್ಷ ವಿರೂಪಾಕ್ಷ ಪಂಡಿತ. ಚನ್ನಬಸವ ಪುರಾಣವನ್ನು ರಚಿಸಿದ್ದಾನೆ. ಈತನು ಸಂಧಿ 62 ಕಾಂಡ 5ರಲ್ಲಿ ಕಾಲಜ್ಞಾನ ಸಾಹಿತ್ಯವನ್ನು ಸಮಗ್ರವಾಗಿ ಸಮೀಕ್ಷೆ ಮಾಡಿದ್ದಾನಲ್ಲದೆ, 'ಕಾಲಜ್ಞಾನ ಸಂಧಿ'ಯನ್ನು ವೀರಶೈವ ಪುರಾಣಗಳ ಲಕ್ಷಣಗಳಲ್ಲೊಂದಾಗಿ ಪರಿಗಣಿಸಿದ ಮೊದಲ ಕವಿಯೆನಿಸಿದ್ದಾನೆ. 12ನೆಯ ಶತಮಾನದಿಂದ 16ನೆಯ ಶತಮಾನದವರೆಗೆ ವೀರಶೈವ ರಾಜಕೀಯ, ಧಾರ್ಮಿಕ, ಸಾಮಾಜಿಕ ಚರಿತ್ರೆಗೆ ಈ ಕೃತಿ ಆಕರವೆನಿಸಿದೆ. ವಿಜಯನಗರಕ್ಕೆ ಸಂಬಂಧಿಸಿ ದಂತೆ ಆತನ ವಾಕ್ಯಗಳು ಹೀಗಿವೆ : "ಶಾ. ಶಕೆ. 1258ರ ಧಾತುಸಂವತ್ಸರದಲ್ಲಿ (ಕ್ರಿ.ಶ. 1336) ಹರಿಹರಗೆ ಪಟ್ಟ, ಅವನ ಸಂತತಿಯ 13 ಅರಸರು 150 ವರ್ಷ ರಾಜ್ಯವಾಳುವರು. ನರಸಿಂಹ ವಂಶದ ತುರುಕರೊಡನೆ ಕಾದಿ ಮಡಿಯುವಿಕೆ; ಹಂಪೆ-ವಿಜಯನಗರ ವಿನಾಶ. ವಿದ್ಯಾನಗರಿಯಲ್ಲಿ ಪ್ರೌಢದೇವೇಂದ್ರನಾಳ್ವಿಕೆಯಲ್ಲಿ 101 ಗಣವರರ ಉದಯ. ಹಂಪೆಯ ಗೋಪುರಗಳ ಧ್ವಂಸ, ಮಾತಂಗದ ವೀರೇಶ್ವರನನ್ನು ಕಿತ್ತುವುದು" ಇತ್ಯಾದಿ ಉಲ್ಲೇಖಗಳು ವಿಜಯನಗರದ ರಾಜಕೀಯ, ಧಾರ್ಮಿಕ ಸಂಗತಿಗಳ ವಿಲೇವಾರಿಗಳಾಗಿವೆ.

ಒಂದು ವದಂತಿಯ ಪ್ರಕಾರ ಕ್ರಿ.ಶ. 1543ರಲ್ಲಿ ಜೀವಿಸಿದ್ದ ಎಮ್ಮೆಬಸವನೆಂಬ ಕಾಲಜ್ಞಾನಿ ವಿಜಯನಗರ ಅರಸೊತ್ತಿಗೆಯ ಪತನಕಾಲದ ಮುಂಗಾಣ್ಕೆಯಾಗಿ ಆ

ವಿನಾಶದಿಂದ ಅರಸು ಪ್ರಜೆಗಳು ಎಚ್ಚರವಾಗಿರಬೇಕೆಂಬ ದುಂದುಭಿ ಮೊಳಗಿಸಿದನು. ಇದನ್ನು ಸಹಿಸದ ಕೃಷ್ಣದೇವರಾಯ ಪಟ್ಟದಾನೆಯನ್ನು ಅವನ ಮೇಲೆ ಬೀಳ್ವಂತೆ ಕಳಿಸುತ್ತಾನೆ. ಆನೆ ಅವನನ್ನು ಸೊಂಡಿಲಿನಿಂದ ಮೇಲೆತ್ತಿಕೊಂಡು ರಾಜಬೀದಿಯಲ್ಲಿ ವಿಜೃಂಭಣೆಯಿಂದ ನಡೆಯುತ್ತದೆ. ಎಮ್ಮೆಬಸವ ಕಾಲಜ್ಞಾನವನ್ನು ಉತ್ಸಾಹದಿಂದ ಮತ್ತಷ್ಟು ಬಿತ್ತರಿಸಿದನಂತೆ. ಈತನ ತ್ರಿಕಾಲ ಜ್ಞಾನ ವಾಕ್ಯಗಳನ್ನು ಮೆಚ್ಚಿದ ಕ್ರಿ.ಶ. '1543ರ ತಿರುಮಲರಾಯನ ಆಳ್ವಿಕೆಯಲ್ಲಿದ್ದ ಕಡೆಯರಪುತ್ರ ತಿಮ್ಮರಾಜ ಕೊರಮಕೆರೆ ಗ್ರಾಮವನ್ನು ಉಂಬಳಿಯಾಗಿ ಬಿಟ್ಟ ಉಲ್ಲೇಖವಿದೆ' (ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ 3,ಪುಟ 201) ವಿಜಯನಗರಕ್ಕೆ ಸಂಬಂಧಿಸಿದ ಹೇಳಿಕೆಗಳು ಈತನ ಕಾಲಜ್ಞಾನದಲ್ಲಿ ಹೀಗೆ ನಿರೂಪಿತವಾಗಿದೆ.

* ಎಕ್ಕತ ತುರುಕರು ಇಕ್ಕೇರಿ ರಣಗಂಭ ।

* ರಕ್ಕಸಿಯೆಂದೆಂಬ ಗಂಗೆಯ ತಡಿಯಲ್ಲಿ। ಹುಯ್ಯಲೋಡಂಗುರವಾ ॥

ಇದು ವಿಜಯನಗರ ಹಾಗೂ ಬಹಮನಿಯರ ನಡುವೆ ರಕ್ಕಸ ತಂಗಡಿಗೆ ಯುದ್ಧ ಸೂಚನೆಯಾಗಿದೆ.

* ಕಿಷ್ಕಿಂದ ಪರ್ವತದ ರೊಕ್ಕವ ತೆಗೆದಾರು

* ಮೌಲ್ಯವಂತರ ಮುಂದೆ ನವಕೋಟಿ ದ್ರವ್ಯವು

* ಮನ್ಮಥ ಹೊಂಡಕ್ಕೆ ಯಾತವ ನಿಕ್ಕ್ಯಾರು

* ಹೇಮಕೂಟಕ್ಕೆ ಪ್ರೇಮದಿ ಬಂದಾರು - ಎಂಬ ಹೇಳಿಕೆಗಳು ಕಿಷ್ಕಿಂದೆ. ಮೌಲ್ಯವಂತ, ಮನ್ಮಥಹೊಂಡ, ಹೇಮಕೂಟಗಳಂಥ ಸ್ಥಳಮಹಾತ್ಮ್ಯೆಗಳ ದಾಖಲೀಕರಣವಾಗಿದೆ. ಮುಂದುವರಿದು

ಸೋಜಿಗವನು ಕೇಳಿ ವಿಜಯನಗರವೆಲ್ಲ
ಬಾಜ ಬಜಾರವು ಬಯಲೆದ್ದು ಹೋದೀತು !!

ವಿಜಯನಗರದಲ್ಲಿ ಗಜಿಬಿಜಿಯಾದಾವು !

ವಿದ್ಯಾನಗರದೊಳಗೆಲ್ಲಾ
ಹದ್ದು ಕಾಗೆ ಆಡುತಾವೆ !!

ಮಾತಂಗವಳಿದೀತು ಭಯವಲ್ಲಿತೋರಿತು
ಹಂಪೆಯ ಗೋಪುರವೆಲ್ಲ ಅಳಿದಾವು !!
ಹಂಪೆಯ ವಿರೂಪಾಕ್ಷ ಕೆಂಪು ನುಡಿಗೆಯನುಟ್ಟು,
ಪಂಪಾದೇವಿಯನೊಡಗೊಂಡು ಉಳಿವೆಯ
ತಂಪುಳ್ಳವನಕೆ ನಡೆದಾರೋ ॥

ಇಲ್ಲೆಲ್ಲ ವಿಜಯನಗರದ ಅವನತಿಯನ್ನು ಸೂಚಿಸುವ ರೀತಿಯಲ್ಲಿ ರಚನೆಯಾಗಿವೆ. ಎಮ್ಮೆ ಬಸವನ ಪತ್ನಿ ನೀಲಮ್ಮನ ತನ್ನ ಕಾಲಜ್ಞಾನದಲ್ಲಿ ವಿಜಯನಗರಕ್ಕೆ ಸಂಬಂಧಿಸಿದಂತೆ ಹೀಗೆ ನಿರೂಪಿಸುತ್ತಾಳೆ.

ಮಾತಂಗವಳಿದಾವು ಮನ್ಮಥಕೆಟ್ಟಾವು
ಆತನ ಮಾತು ಹುಸಿಯಲ್ಲ ಸುವ್ವಿ । ಹಂಪೆಯ
ಗೋಪುರವೆಲ್ಲ ಲಯವೆದ್ದೂ ॥

ಉದ್ಧಾನ ವೀರಭದ್ರನ ಎಡಗಡೆಯ
ವಿಧ್ರುವನಾದ ಪೆಟ್ಟಿಗೆಯ ಸುವ್ವಿ । ಅದರೊಳಗಿನ
ಮದ್ದುಮಾಣಿಕವ ತೆಗೆದಾರು ॥

ಹೇಮಕೂಟದಿ ರಘುರಾಮರ ಕೂಟವ
ಧೂಮಕೇತು ಬಂದು ತೆಗೆಸ್ಯಾನುಸುವ್ವಿ ॥
ಸ್ವಾಮಿಬಸಪ್ಪನ ಕೃಪೆಯಿಂದ ॥

ಲಿಂಗ ವಿರೂಪಾಕ್ಷನ ರಂಗ ಮಂಟಪದ ಮುಂದೆ
ಲಿಂಗದ ಕಣಜವ ಹೊಡೆವಾರು ಸುವ್ವಿ । ವಿಭೂತಿ
ಹಿಂಗದೆ ತೆಗೆದು ಬಯಲಿಗೆ ॥

ವಚನಕಾರ ಬಸವಣ್ಣನವರ ಕಾಲಜ್ಞಾನ ಸಾಹಿತ್ಯದಲ್ಲಿ 'ಅವರು ಹೋದ ಏಳುನೂರು ವರ್ಷದ ಮೇಲೆ ಏನೇನಾಗುತ್ತದೆಂಬುದನ್ನು ಉಲ್ಲೇಖಿಸುತ್ತಾ' ನೈರುತ್ಯದಲ್ಲಿ ವಿರೂಪಾಕ್ಷದೇವರ ಮುಂದಣಮನ್ಮಥಹೊಂಡ ಹೂಳೀತು --- ಮಾತಂಗ ಪರ್ವತದಲ್ಲಿ ಮಸೀದಿ ಕಟ್ಟೀತು, ಗೋಹತ್ಯಂಮಾಡ್ಯಾರು, ಆ ಪರ್ವತದ ಮೇಲೆ ಜಂಗಮರೆ ಅನಾಚಾರಿಗಳಾದಾರು, ಆ ಪರ್ವತದ ಮೇಲೆ ಠಕ್ಕುಠೌಳಿ ಘನವಾದವು; ಮುಡುಹುಗನ್ನಗತಕ ಹೆಚ್ಚಾದೀತು. ಆ ಪರ್ವತದ ಮೇಲೆ ಸುರೆಮಾಂಸ ಮಾರೀತು. ವೇಶಿಯರು ಗುಡಿಸಿಲ ಕಟ್ಯಾರು. ------------- ಆ ಪರ್ವತದ ಮೇಲೆ ಜಂಗಮದ ರಕುತ ಹರಿದೀತು, ಆ ಪರ್ವತ ಕೆಟ್ಟು ಅರಣ್ಯವಾದೀತು". - ಎಂಬುದಾಗಿ ಇಲ್ಲಿಯ ಮಾಲ್ಯವಂತ ಪರ್ವತದ ಅವಸ್ಥೆಯನ್ನು ಮಾತ್ರ ವಿವರಿಸುವುದಾಗಿದೆ.

ಚೆನ್ನಬಸವಣ್ಣನವರ ಕಾಲಜ್ಞಾನದ ವಚನಗಳು ಇದುವರೆಗೆ ಮೂರು ದೊರೆತಿವೆ :
ಸಿದ್ಧರಾಮಯ್ಯಗಳೆ । ರುದ್ರಮುನಿಸ್ವಾಮಿಗಳೇ ।
ಇದ್ದ ಶರಣರು ಕೇಳಿ । ಸಿದ್ಧಾಂತ ವೊರೆವೆ ॥
ಕಲಿಯೊಳಗೆ ನಡೆವಂಥ । ಕಾಲಸೂಚನೆ ಕುರುಹ

ನೆಲೆದೋರಿ ಪೇಳುವೆವು । ಮಲಹರನ ದಯದಿ ॥
ಎಂದು ಆರಂಭವಾಗುವ ಕಾಲಜ್ಞಾನ
ರುದ್ರನಾಳಿಕೆತೀರಿ । ವಿದ್ಯನಗರವು ಕಟ್ಟಿ ।
ಎದ್ದು ಆನೇಗುಂದಿ । ರಾಯರೇಳಿಗೆಯೂ ।
ಆನೆಗುಂದಿಯರಾಷ್ಟ್ರ । ಆರುಪಟ್ಟಕೆ ಮುರಿಯೆ
ಕೊನೆಗೊಂಬುಗಳು ಒಡೆದು। ಅವನಿಯೊಳು ಪಟ್ಟಗಳ ॥

ತುಂಗಭದ್ರೆಯ ನದಿಯ ತಾಯಿಗೆ ।
ತಂಗಿಬಂದು ಕೊಡಿದೆಡೆಯೊಳು
ಮುಂಗಡೆಯಲ್ಲೊಂದು ನಗರ ಏಳುವದು ಜನಗಳಿಗೆ ಕುರುಹು ॥

ಗಾಲು ಮೇಲುಗಳಾಗಿ ಎಂಟು ಮೂಲೆ ನ್ಯಾಜಗಳೊಂದು ಗೂಡುತ
ವಾಲಿಭಂಡಾರವನು ಕೀಳುತ ಖಾನ ಮಲ್ಲುಕನು.

ಚನ್ನಬಸವನ ಕಾಲಜ್ಞಾನವ । ಭಿನ್ನವಿಲ್ಲದೆ ಕೇಳಿ ಶರಣರು
ಹೊನ್ನ ಬಸವನ ಕಾಲಜ್ಞಾನವ । ಭಿನ್ನವಿಲ್ಲದೆ ಕೇಳಿ ಶರಣರು
ಹೊನ್ನಿಗೊಂದು ರೊಟ್ಟಿ ವಿಕ್ರಮ । ಇನ್ನು ಹಂಪೆಯಲಿ ॥

ಈ ಕಾಲಜ್ಞಾನದಲ್ಲಿ ಆನೆಗುಂದಿ ಆರು ಜನ ಅರಸರ ಆಳ್ವಿಕೆಯೊಂದಿಗೆ ಕೊನೆಗೊಂಡಿದ್ದನ್ನು ಮಲ್ಲಿಕಾಫರನು ವಾಲಿಭಂಡಾರವನ್ನು ಲೂಟಿ ಮಾಡಿದ್ದನ್ನು ಹಂಪೆಯಲ್ಲಿ ಹೊನ್ನಿಗೊಂದು ರೊಟ್ಟಿ ಮಾರಾಟವಾಗುವುದ್ನು ಉಲ್ಲೇಖಿಸುತ್ತದೆ.

ನಂಜೇಶಾ ಅಂತದಿಂದ ರಚನೆಯಾಗಿರುವ ಕಾಲಜ್ಞಾನದಲ್ಲಿ
ಹಂಪೆಯ ರಾಜ್ಯವು ಕೊಂಪೆಯಪಾಲಾಗಿ
ಸೊಂಪೆಲ್ಲವಡಗಿ ಪೋದಾಗ -ತುರುಕರ
ಸೊಂಪವೇ ಸೊಂಪು ನಂಜೇಶ - ಎಂಬ ತ್ರಿಪದಿ ಮಾತ್ರ ಹಂಪೆಗೆ ಮೀಸಲಾಗಿದೆ.

ಅಲ್ಲಮ ಪ್ರಭುಗಳ ಕಾಲಜ್ಞಾನ ವಚನದಲ್ಲಿ "ವಿರೂಪಾಕ್ಷ ಕೆಟ್ಟು ಮೂತ್ತೆರಡು ಕೊಟ್ಟಪಾದಾವು, ಮನ್ಮಥ ಹೊಂಡ ಹೂಳೀತು." ಎಂಬ ಉಲ್ಲೇಖಗಳಿಂದ ವಿಜಯನಗರ ಸಾಮ್ರಾಜ್ಯದ ನಂತರದ ಸುಮಾರು ಮೂವತ್ತೆರಡು ಸಂಸ್ಥಾನಿಕರ ಅಸ್ತಿತ್ವದ ಸೂಚನೆ ಇದಾಗಿರಬೇಕೆನಿಸುತ್ತದೆ.

ಇದುವರೆಗೆ ಪ್ರಸ್ತಾಪಿಸಿದ ಕಾಲಜ್ಞಾನಗಳ ರಚನೆಯ ಬಗ್ಗೆಯಾಗಲೀ, ಅವುಗಳ ಸತ್ಯಾಸತ್ಯತೆಯ ಬಗ್ಗೆಯಾಗಲೀ, ಅಧ್ಯಯನದ ಬಗ್ಗೆಯಾಗಲೀ ವ್ಯಾಪಕವಾದ ಚರ್ಚೆಗಳು ನಡೆದಿಲ್ಲ. ಕೊಡೇಕಲ್ಲ ಪರಂಪರೆ, ತಿಂಥಿಣಿ ಪರಂಪರೆ, ಕಲ್ಯಾಣ ಪರಂಪರೆ, ವಿಜಯ

ಕಲ್ಯಾಣ ಪರಂಪರೆ, ಸಾರವಾಡ ಪರಂಪರೆಯನ್ನು ಒಟ್ಟುಗೂಡಿಸಿ 'ಸಮಗ್ರ ಕಾಲಜ್ಞಾನ ಪರಂಪರೆಯ' ಅಧ್ಯಯನವನ್ನು ಮಾಡುವುದಕ್ಕೆ ಸಾಧ್ಯವಿದೆಯೆಂಬುದನ್ನು ವಿದ್ವಾಂಸರ ಗಮನಕ್ಕೆ ತರಬಯಸುತ್ತೇನೆ. ಈ ಹೊತ್ತಿನ ವಿಜಯನಗರದ ಭೌಗೋಳಿಕ ಪ್ರದೇಶಗಳನ್ನು ಗುಡಿ-ಗುಂಡಾರಗಳನ್ನು ಗಮನಿಸಿದರೆ ಕಾಲಜ್ಞಾನದಲ್ಲಿ ಉಲ್ಲೇಖಿತ ಸಂಗತಿಗಳಿಗೆ ಐತಿಹಾಸಿಕ ಮಹತ್ವವಿದೆ.

ವಿಜಯನಗರದ ಇತಿಹಾಸವನ್ನು ಇಲ್ಲಿಯವರೆಗೆ ಶಾಸನ, ಶಿಲ್ಪ, ದೇವಾಲಯ, ಪ್ರಧಾನ ಕಾವ್ಯಗಳು, ವಿದೇಶಿ ವಿದ್ವಾಂಸರ ಹೇಳಿಕೆಗಳಿಂದ ಅಧ್ಯಯನ ಮಾಡಿದ್ದೇವೆ. 'ದೇಶೀಮೂಲದಿಂದ ಸ್ಥಳೀಯ ಚರಿತ್ರೆಯನ್ನು' ನಿರೂಪಿಸಬೇಕೆನ್ನುವ ಈ ಹೊತ್ತಿನ ಒತ್ತಾಸೆಗೆ ಅನುಗುಣವಾಗಿ ಕಾಲಜ್ಞಾನಗಳಂಥ ಲಘುಸಾಹಿತ್ಯ ಪ್ರಕಾರಗಳನ್ನು ಪರಿಗಣಿಸಬೇಕಾಗಿದೆ. ಡಾ. ಎಲ್.ಬಸವರಾಜು ಅವರು 'ಕಾಲಜ್ಞಾನಿಗಳು ಜನರ ಯೋಗಕ್ಷೇಮದ ಗಡಿ ರಕ್ಷಕರಾಗಿ; ಅಪಾಯ ಬರುವ ಸಂದರ್ಭದಲ್ಲಿ ಅವರನ್ನು ಎಚ್ಚರಿಸಿದ್ದಾರೆ' ಎಂದು ಅಭಿಪ್ರಾಯಪಟ್ಟಿರುವುದನ್ನು ಗಮನಿಸಿದರೆ ಸಾಮಾಜಿಕ ಯೋಗಕ್ಷೇಮದ ಸ್ವರೂಪ ಎಂಥದ್ದು, ಅದರ ಅನುಷ್ಠಾನ ಯಾವ ರೀತಿಯಿಂದ ಆಗಬೇಕು. ಪ್ರಜಾಪ್ರತಿನಿಧಿಗಳ ಪಾತ್ರವೇನು ಇತ್ಯಾದಿ ಬಹು ಶಿಸ್ತೀಯ ಅಧ್ಯಯನಕ್ಕೆ ಕಾಲಜ್ಞಾನ ಸಾಹಿತ್ಯ ಇಂಬು ನೀಡುತ್ತದೆ.

ಆಕರ ಗ್ರಂಥಗಳು

1. ಎಮ್ಮೆಬಸವನ ಕಾಲಜ್ಞಾನ ಸಾಹಿತ್ಯ: ಸಂ.ಡಾ.ಎಫ್.ಟಿ.ಹಳ್ಳಿಕೇರಿ, ಕನ್ನಡ ವಿ.ವಿ., ಹಂಪಿ, 1999.
2. ಕಾಲಜ್ಞಾನ ಸಂಗ್ರಹ ಭಾಗ-1. ಸಂ. ಶ್ರೀ ಶಿವಬಸವಸ್ವಾಮಿಗಳು, ಶಿವಶರಣವಾಙ್ಮಯ ಪ್ರಕಾಶ ಕಾರ್ಯಾಲಯ, ಮೈಸೂರು, 1946.
3. ಗೌರವ (ಎಸ್.ಎಸ್.ಭೂಸನೂರ ಮಠ ಅಭಿನಂದ ಗ್ರಂಥ) ಸಂ: ಡಾ. ಬಿ.ವಿ.ಶಿರೂರ, ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯ ಸಂಸ್ಥಾನಮಠ, ಗದಗ, 1986.
4. ಬಸವಯುಗದ ವಚನೇತರ ಸಾಹಿತ್ಯ ಸಂ: ಡಾ. ಕೆ.ರವೀಂದ್ರನಾಥ, ಕನ್ನಡ ವಿ.ವಿ. ಹಂಪಿ, ೨೦೦೦.

೪೧. ಶೃಂಗೇರಿಯ ಮಹಾನವಮಿ ಆಚರಣೆಯಿಂದ ಪ್ರೇರಿತವಾದ ವಿಜಯನಗರ ಉತ್ಸವ !

ಡಾ. ಲ.ನ. ಸ್ವಾಮಿ, ಉಜಿರೆ

ವಿಜಯನಗರದ ಮಹಾನವಮಿ ಉತ್ಸವಗಳ ಬಗೆಗೆ ಪ್ರಥಮ ಉಲ್ಲೇಖ ದೊರೆಯುವುದು ನಿಕೊಲೆ ದೇ ಕೊಂತಿಯ ಪ್ರವಾಸ ಕಥನದಲ್ಲಿ. ಆತನು ಈ ಹಬ್ಬವನ್ನು ಕುರಿತು ಕೊಡುವ ವಿವರಣೆ ಇಂದು ದೇವಾಲಯಗಳಲ್ಲಿ ನಡೆಯುವ ದೇವತಾ ಉತ್ಸವಗಳನ್ನು ನೆನಪಿಗೆ ತರುತ್ತದೆ. "ಒಂಬತ್ತು ದಿವಸಗಳ ಹಬ್ಬ. ಆಗ ದೊಡ್ಡ ಬೀದಿಗಳಲ್ಲಿ ಹಡಗಿನ ಪಠಸ್ತಂಭ ದಂತಹ ಸ್ತಂಭಗಳನ್ನು ನೆಟ್ಟು ಬಹು ಸುಂದರವಾದ ಜರತಾರೀ ಬಟ್ಟೆಯ ಚೂರುಗಳನ್ನು ಮೇಲ್ಗಡೆ ಸಿಕ್ಕಿಸುತ್ತಾರೆ. ಈ ಸ್ತಂಭದ ತುದಿಯಲ್ಲಿ ದಿನವೂ ದೇವರಲ್ಲಿ ಅಪಾರ ಭಕ್ತಿ ಯುಳ್ಳ ಮತ್ತು ಎಂಥ ಕಷ್ಟವನ್ನಾದರೂ ಸ್ಥಿರ ಮನಸ್ಸಿನಿಂದ ಸಹಿಸಬಲ್ಲ ಒಬ್ಬನನ್ನು ಕುಳ್ಳಿರಿಸುತ್ತಾರೆ. ಇವನ ಕಡೆಗೆ ಕಿತ್ತಳೆ, ನಿಂಬೆ ಮುಂತಾದ ಹಣ್ಣುಗಳನ್ನು ಎಸೆಯುತ್ತಾರೆ" [ಪ್ರವಾಸಿ ಕಂಡ ವಿಜಯನಗರ, (ಸಂ.) ಬಿ.ಎ. ವಿವೇಕ ರೈ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2005, ಪು. 5].

ಅನಂತರ ಅಬ್ದುಲ್ ರಜಾಕ್ ಕೂಡ ವಿಜಯನಗರ ಮಹೋತ್ಸವದ ಆಚರಣೆ ಯನ್ನು ಉಲ್ಲೇಖಿಸುತ್ತಾನೆ. ಪೇಯಸ್ ಮತ್ತು ನ್ಯೂನಿಜ್ ಬಹಳ ಸೊಗಸಾದ ಆಚರಣೆಯ ವಿವರ ಕೊಡುತ್ತಾರೆ. ಆದರೆ ವಿಜಯನಗರದ ಅರಸರು ಹೇಗೆ ಈ ಮಹೋ ತ್ಸವದ ಆಚರಣೆಗೆ ತೊಡಗಿಸಿಕೊಂಡರೆಂಬ ಉಲ್ಲೇಖ ದೊರೆಯುವುದಿಲ್ಲ ಎಂದೇ ಹೇಳ ಬಹುದು. ಭಾರತೀಯ ಪರಂಪರೆಯಲ್ಲಿ ದಸರಾ ಉತ್ಸವದ ಆಚರಣೆಯನ್ನು ಭಾಗವತ ಸಂಪ್ರದಾಯದವರು ವಿಷ್ಣುರಾಮನ ಅವತಾರದಲ್ಲಿ ಲಂಕೆಯನ್ನು ಜಯಿಸಿದ ಸಂಕೇತ ವಾಗಿ ಆಚರಿಸಿದರೆ, ದ್ವಾಪರಯುಗದಲ್ಲಿ ಶ್ರೀಕೃಷ್ಣನ ಆಜ್ಞೆಯಂತೆ ಶಮೀವೃಕ್ಷದಲ್ಲಿ ತಮ್ಮ ಅಸ್ತ್ರಗಳನ್ನು ಇಟ್ಟು ಅಜ್ಞಾತವಾಸಕ್ಕೆ ಹೋಗಿ ಅದರ ಮುಕ್ತಾಯವನ್ನು ಹೇಳುವ ದಿನದಂದು ನಡೆದ ವಿರಾಟನಗರ ಗೋಗ್ರಹಣದಲ್ಲಿನ ಅರ್ಜುನನ ವಿಜಯದ ಸಂಕೇತ ವಾಗಿ ಸಹ ಇದನ್ನು ಗುರುತಿಸಲಾಗಿದೆ. ಈ ಆರಾಧನೆ ದೈವತ್ವದ ವಿಜಯವಾಗಿದೆ. ಶಕ್ತಿ ಆರಾಧಕರು ನವದುರ್ಗೆಯರ ರೂಪದಲ್ಲಿ ದೇವಿ ದಾನವರನ್ನು ಸಂಹರಿಸಿದ ಮತ್ತು ವಿಜಯೋತ್ಸವದ ಆಚರಣೆಗಾಗಿ ಈ ಆಚರಣೆಯನ್ನು ನಡೆಸುತ್ತಾರೆ. ಭಾರತದ ಎಲ್ಲಾ ಶಕ್ತಿಕೇಂದ್ರಗಳಲ್ಲಿ ನವರಾತ್ರಿಯ ದಿನಗಳಲ್ಲಿ ವಿಶೇಷ ಉತ್ಸವ ಮತ್ತು ಪೂಜೆಗಳು

ನೆರವೇರಲ್ಪಡುತ್ತವೆ. ಹಾಗಾಗಿ ದೇವೀ ಆರಾಧನೆಯ ಎಲ್ಲ ಸ್ಥಳಗಳಲ್ಲಿಯೂ ದಸರಾ ಆರಾಧನೆ ಒಂದು ವಿಶೇಷ. ಇಂದಿಗೂ ಶೃಂಗೇರಿ ಪೀಠದ ಅಧಿದೇವತೆಯಾದ ಶಾರದಾ ದೇವಿಗೆ ನವರಾತ್ರಿಯ ಸಮಯದಲ್ಲಿ ವಿಶೇಷ ಪೂಜೆ ಪುರಸ್ಕಾರಗಳು ನಡೆಯುತ್ತವೆ.

ವಿಜಯನಗರ ಸಾಮ್ರಾಜ್ಯದ ಪ್ರಾರಂಭದ ದಿನಗಳಲ್ಲಿ ಮಾಧವ/ ವಿದ್ಯಾರಣ್ಯರು ಪ್ರಮುಖ ಪಾತ್ರ ನಿರ್ವಹಿಸಿದ್ದರೆಂದು ಹಲವು ವಿದ್ವಾಂಸರು ಭಾವಿಸಿದ್ದಾರೆ. ವಿದ್ಯಾರಣ್ಯರು ಕ್ರಿ.ಶ. 1380-1386ವರೆಗೆ ಶೃಂಗೇರಿ ಮಠದ ಪೀಠಾಧಿಪತಿಗಳಾಗಿದ್ದರು. ಅದಕ್ಕೆ ಪೂರ್ವದಲ್ಲಿ ಸಂಗಮ ಸಹೋದರರ ಮಾರ್ಗದರ್ಶಕರಾಗಿದ್ದರು. ಕಮಲಾಪುರ ಕೈಫಿಯತ್ತು ಹಜಾರರಾಮಸ್ವಾಮಿ ದೇವಾಲಯದ ಮುಂದಿರುವ ಪಟ್ಟಣದ ಯಲ್ಲಮ್ಮ ದೇವಾಲಯವನ್ನು ವಿದ್ಯಾರಣ್ಯರೇ ನಿರ್ಮಿಸಿದರೆಂದು ಹೇಳುತ್ತದೆ. ಈ ಆಕರವನ್ನು ಗುರುತಿಸದ ಎಚ್.ಟಿ. ತಳವಾರ್ ಯಲ್ಲಮ್ಮ ದೇವಾಲಯದ ಮೂಲದೇವತೆಯ ವಿಗ್ರಹವನ್ನು ಕ್ರಿ.ಶ. 14ನೆಯ ಶತಮಾನದ ದೇವಾಲಯವೆಂದು ಗುರುತಿಸುತ್ತಾರೆ (ಎಚ್.ಟಿ. ತಳವಾರ, ನಗರದೇವತೆ ಶ್ರೀ ಪಟ್ಟಣದ ಯಲ್ಲಮ್ಮ ದೇವಸ್ಥಾನ- ಒಂದು ಟಿಪ್ಪಣಿ, ವಿಜಯನಗರ ಅಧ್ಯಯನ, ಸಂ. 6, ಪು. 114-115). ಡಿ.ವಿ. ಪರಮಶಿವ ಮೂರ್ತಿಯವರು ಇದೇ ಪಟ್ಟಣದ ಯಲ್ಲಮ್ಮನನ್ನು ಉಲ್ಲೇಖಿಸುವ ಪ್ರೌಢದೇವ ರಾಯನ ಕಾಲದ ಶಾಸನವನ್ನು ಉಲ್ಲೇಖಿಸುತ್ತಾರೆ. ಆ ಶಾಸನದ ಉಲ್ಲೇಖದಂತೆ ರಾಜಪ್ರಾಂಗಣದ ಸಮೀಪದಲ್ಲಿರುವ ದೇವಾಲಯವೇ ಶಾಸನೋಕ್ತ ದೇವಾಲಯವೆಂದು ಗುರುತಿಸುತ್ತಾರೆ. ಪಟ್ಟಣದ ಯಲ್ಲಮ್ಮ ದೇವತೆ ಮೂರ್ತಿಯನ್ನು ಈಗಾಗಲೇ ಹೇಳಿರುವಂತೆ ಕ್ರಿ.ಶ. 14ನೆಯ ಶತಮಾನಕ್ಕೆ ನಿರ್ಧರಿಸಿರುವ ಹಿನ್ನೆಲೆಯಲ್ಲಿ ಮತ್ತು ಪ್ರೌಢದೇವರಾಯನ ಶಾಸನದಲ್ಲಿ ಉಲ್ಲೇಖಿತವಾಗಿರುವ ಯಲ್ಲಮ್ಮ ದೇವರ ದೇವಾಲಯದ ಸ್ಥಳದ ಹಿನ್ನೆಲೆಯಲ್ಲಿ ಕಮಲಾಪುರ ಕೈಫಿಯತ್ತು ಗುರುತಿಸುವ ವಿದ್ಯಾರಣ್ಯರು ನಿರ್ಮಿಸಿದ ಪಟ್ಟಣದ ಯಲ್ಲಮ್ಮ ದೇವಾಲಯವನ್ನು ಇಂದು ಮಹಾನವಮಿ ದಿಬ್ಬದ ಮುಂದೆ ಕಂಡುಬರುವ ಯಲ್ಲಮ್ಮನ ದೇವಾಲಯವೆಂದೇ ಖಚಿತವಾಗಿ ಹೇಳಬಹುದು. (ಡಿ.ವಿ. ಪರಮಶಿವಮೂರ್ತಿ, ಪ್ರೌಢದೇವರಾಯನ ಕಾಲದ ಪಟ್ಟಣದ ಯಲ್ಲಮ್ಮನ ಶಾಸನ ಮತ್ತು ಇತರ ಶಾಸನಗಳು, ವಿಜಯನಗರ ಅಧ್ಯಯನ, ಸಂ. 9, ಪು. 278-280). ಈ ವಿಗ್ರಹ ಪಟ್ಟಣದ ಯಲ್ಲಮ್ಮ ದೇವಿಯಾಗಿರದೆ ಸರ್ವಶಕ್ತಳಾದ ಚಾಮುಂಡಾಂಬಿಕೆಯ ರೂಪದಲ್ಲಿದೆ. ಪಟ್ಟಣದ ಎಲ್ಲೆಯಮ್ಮ ಪಟ್ಟಣದ ಯಲ್ಲಮ್ಮಳಾಗಿ ಪರಿವರ್ತಿತವಾಗಿರುವ ಎಲ್ಲಾ ಸಾಧ್ಯತೆಗಳಿವೆ. ಮಹಿಷಾಸುರ ಮರ್ದಿನಿಯಾದ ಚಾಮುಂಡಾಂಬಿಕೆಯ ಆರಾಧನೆ. ಇಲ್ಲಿ ಅತ್ಯಂತ ಪೂರ್ವದಲ್ಲಿ ಪ್ರಾರಂಭವಾಗಿರುವ ಸಾಧ್ಯತೆಗಳಿವೆ. ಕಾರಣ 9-10ನೇ ಶತಮಾನಕ್ಕೆ ಸೇರಿದ ಚಾಮುಂಡಾಂಬಿಕೆಯ ದೇವಾಲಯ ವನ್ನು ಹಂಪಿಯ ಪರಿಸರದಲ್ಲಿ ಡಾ. ಎಂ.ಎಸ್. ಕೃಷ್ಣಮೂರ್ತಿಯವರು ಗುರುತಿಸುತ್ತಾರೆ. ಈ

ಹಿನ್ನೆಲೆಯಲ್ಲಿ ಸಹ ನಮಗೆ ಚಾಮುಂಡಿಯ ಆರಾಧನೆ. 14ನೇ ಶತಮಾನದಲ್ಲಿ ಪ್ರಾರಂಭವಾಯಿತೆನ್ನದೆ ಪ್ರಬಲಗೊಂಡಿತೆನ್ನಬಹುದಾಗಿದೆ. ನವರಾತ್ರಿಯ ಒಂಬತ್ತು ದಿನಗಳ ಉತ್ಸವದಲ್ಲಿ ದೇವಿಗೆ ನವದುರ್ಗೆಯರ ಅಲಂಕಾರವನ್ನು ಮಾಡಿ ಸ್ತುತಿಸಲಾಗುತ್ತದೆ. ನವಶಕ್ತಿಯ (ಪ್ರಭಾ, ಮಾಯಾ, ಜಯಾ, ಸೂಕ್ಷ್ಮಾ, ವಿಶುದ್ಧಾ, ನಂದಿನಿ, ಸುಪ್ರಭಾ, ವಿಜಯಾ, ಸರ್ವಸಿದ್ಧಿದಾ) ರೂಪಗಳಾದ ನವದುರ್ಗೆಯರನ್ನು ಪೂಜಿಸಲಾಗುತ್ತದೆ. ಶರತ್ಕಾಲಾರಂಭದ ಈ ದಿವಸಗಳಲ್ಲಿ ಯಮದಂಷ್ಟ್ರೆಯ ಪೀಡಾ ನಿವಾರಣೆಗಾಗಿ ವಿಷ್ಣು, ಶಂಕರ ಅಗ್ನಿ ಇವರ ತೇಜಸ್ಸಿನಿಂದ ಉದ್ಭವಿಸಿದ ಮತ್ತು ದೇವತೆಗಳಿಂದ ವಿವಿಧ ಆಯುಧಗಳನ್ನು ಪಡೆದಿರುವ ದೈತ್ಯಸಂಹಾರಿಣಿಯೂ ಆಷಾಢ ಪೂರ್ಣಿಮೆಯ ದಿನ ನಿದ್ರಿಸಿರುವವಳೂ ಆದ ದೇವಿಯನ್ನು ಒಂದೊಂದು ದಿನದಲ್ಲೂ ಒಂದೊಂದು ಹೆಸರಿನಿಂದ ಪೂಜಿಸಿ ಎಚ್ಚರಗೊಳಿಸಲು ಈ ಉತ್ಸವವನ್ನು ಆಚರಿಸುತ್ತಾರೆ.

ಮಧುಕೈಟಭರನ್ನು ಕೊಂದ ಮಹಾಕಾಳಿ, ಮಹಿಷಾಸುರಮರ್ದಿನಿಯಾದ ದುರ್ಗೆ, ಚಂಡಮುಂಡರನ್ನು ಸಂಹರಿಸಿದ ಚಾಮುಂಡಿ, ರಕ್ತಬೀಜಾಂತಕಳಾದ ಕಾಳಿ, ನಂದನ ಪುತ್ರಿಯೂ ಕಂಸನ ಮರಣಸೂಚಕಳೂ ಆದ ದುರ್ಗೆ, ಭಯಂಕರ ರಾಕ್ಷಸ ಸಂಹಾರಿಣಿಯಾದ ರಕ್ತದಂತಿ, ಕ್ಷಾಮನಿವಾರಕಳಾದ ಶಾಕಂಭರೀ, ದುರ್ಗನೆಂಬ ರಾಕ್ಷಸನನ್ನು ಸಂಹರಿಸಿದ ದುರ್ಗಾ, ಅರುಣನೆಂಬ ರಾಕ್ಷಸನನ್ನು ಕೊಂದ ಭ್ರಾಮರಿ ಎಂಬ ಈ ಒಂಬತ್ತು ದುರ್ಗೆಯರನ್ನು ಈ ದಿವಸಗಳಲ್ಲಿ ಕ್ರಮವಾಗಿ ಪೂಜಿಸಬೇಕು. ಕಾಳಿಕಾಪುರಾಣ ದಲ್ಲಿ ಹೇಳಿರುವಂತೆ ಈ ಅಶ್ವೀಜ ಶುದ್ಧ ಪ್ರತಿಪದೆಯಿಂದ ಒಂಬತ್ತು ದಿನ, ಇಲ್ಲವೆ ಸಪ್ತಮಿಯಿಂದ ಹಿಡಿದು ಮೂರು ದಿನ, ಇಲ್ಲವೆ ದುರ್ಗಾಷ್ಟಮಿ, ಮಹಾನವಮಿ - ಈ ಎರಡು ದಿನಗಳು, ಅದೂ ಆಗದಿದ್ದರೆ ಮಹಾನವಮಿಯ ಒಂದೇ ದಿನವಾದರೂ ಈ ಪೂಜೆ ಮಾಡಲೇಬೇಕು.

ವಿಜಯನಗರದ ಪ್ರಾರಂಭಿಕ ಅರಸರಿಗೂ ಮತ್ತು ಶೃಂಗೇರಿಯ ದಸರಾ ಆಚರಣೆಗೂ ನಿಕಟ ಸಂಬಂಧವಿರುವುದನ್ನು ಶಾಸನಗಳು ಉಲ್ಲೇಖಿಸುತ್ತವೆ. ವಿಜಯನಗರ ಸಾಮ್ರಾಜ್ಯವನ್ನು ಆಳಿದ ಮೊದಲನೆ ಬುಕ್ಕರಾಯನು ಕ್ರಿ.ಶ. 1356 ರಲ್ಲಿ ಶೃಂಗೇರಿ ಶಾರದಾಪೀಠದ ಅಧಿದೇವತೆಯ ನವರಾತ್ರಿಯ ಉತ್ಸವದ ಆಚರಣೆಗಾಗಿ 300 ಗದ್ಯಾಣಗಳ ಉತ್ಪನ್ನವಿರುವ ಭೂಮಿಯನ್ನು ದಾನ ಮಾಡಿದನೆಂದು ತಿಳಿದು ಬರುತ್ತದೆ. (ವಿಜಯನಗರದ ಇತಿಹಾಸದ ಮೇಲೆ ಬೆಳಕು ಬೀರುವ ಶೃಂಗೇರಿ ಕಡತಗಳು - ಎ.ಕೆ. ಶಾಸ್ತ್ರಿ, ಸಂಗಮರ ಕಾಲದ ವಿಜಯನಗರ, ಜಿ.ಎಸ್. ದೀಕ್ಷಿತ್, (ಸಂ.) ಬಿ.ಎಂ.ಶ್ರೀ. ಪ್ರತಿಷ್ಠಾನ, 1999, ಪು. 169-177) ವಿದ್ಯಾರಣ್ಯರ ಮತ್ತು ವಿಜಯನಗರದ ಸಂಬಂಧವನ್ನು 'ಶೃಂಗೇರಿಯ ಮಹಿಮೆ' (ಪ್ರಕಾಶಕರು : ಶೃಂಗೇರಿ ಶ್ರೀ ಶಾರದಾ ಪೀಠ, 2006) ಎಂಬ ಪುಸ್ತಿಕೆಯಲ್ಲಿ ಹೀಗೆ ವಿವರಿಸಲಾಗಿದೆ: ಬುಕ್ಕರಾಯನು ಶ್ರೀ ಭಾರತೀತೀರ್ಥರ

ಶ್ರೀಮುಖವನ್ನು ಕಾಶಿಗೆ ಕಳುಹಿಸಿ ಅಲ್ಲಿದ್ದ ಶ್ರೀವಿದ್ಯಾರಣ್ಯರಿಗೆ ಶೃಂಗೇರಿಯ ವಿದ್ಯಮಾನ ಗಳನ್ನೆಲ್ಲ ತಿಳಿಯಪಡಿಸಿದನು. ಶ್ರೀ ವಿದ್ಯಾರಣ್ಯರು ಆದಷ್ಟು ಬೇಗನೆ ಹಿಂತಿರುಗಬೇಕೆಂದು ಅಪೇಕ್ಷೆಪಡಲಾಗಿತ್ತಾದ್ದರಿಂದ, ಅವರು ಹಂಪಿಯ ಮಾರ್ಗವಾಗಿ ಬುಕ್ಕರಾಯನನ್ನು ಜೊತೆಗೆ ಕರೆದುಕೊಂಡು, ಶೃಂಗೇರಿಗೆ ಬಂದರು. ಹಂಪಿಯಲ್ಲಿ ವಿರೂಪಾಕ್ಷ ದೇವಾಲಯದ ಸಮೀಪದಲ್ಲಿ ಶ್ರೀವಿದ್ಯಾರಣ್ಯರು ತಮ್ಮ ವಾಸ್ತವ್ಯಕ್ಕೆಂದು ಮಠವೊಂದನ್ನು ಕಟ್ಟಿಸಿದ್ದರು. ಶ್ರೀ ಭಾರತೀತೀರ್ಥರು ವಿದೇಹ ಮುಕ್ತಿಯನ್ನು ಪಡೆದ ಮೇಲೆ ಶೃಂಗೇರಿ ಮಠದ ಜವಾಬ್ದಾರಿಯನ್ನು ವಹಿಸಿಕೊಂಡು ಶ್ರೀ ವಿದ್ಯಾರಣ್ಯರು ಕ್ರಿ.ಶ. 1380 ರಿಂದ 1386 ರವರೆಗೆ ಆರು ವರ್ಷ ಕಾಲ ಪೀಠಾಧಿಪತಿ ಗಳಾಗಿದ್ದರು. ಕ್ರಿ.ಶ. 1384, 1386ರ ಎರಡು ಶಾಸನಗಳು ಅವರ ಮಹಿಮೆಯನ್ನು ಹೇಳುತ್ತವೆ.

ಕ್ರಿ.ಶ. 1346 ರಲ್ಲಿ ಒಂದನೆಯ ಹರಿಹರನು ಶೃಂಗೇರಿ ಮಠಕ್ಕೆ ದಾನ ನೀಡಿದ್ದನ್ನು ಒಂದು ಶಾಸನವು ಉಲ್ಲೇಖಿಸಿದೆ. (*The Vijayanagara Empire,* Ed. Vasundhara Filloizat, National Book Trust, Delhi, 1977, p. 4) ಮತ್ತೊಂದು ದಾಖಲೆಯಲ್ಲಿ ಇಮ್ಮಡಿ ಹರಿಹರನು ವಿದ್ಯಾರಣ್ಯರ ಸಮಾಧಿಯ ಮೇಲೆ ದೇವಸ್ಥಾನವನ್ನು ಕಟ್ಟಿಸಿ ಶಾರದಾಂಬೆಯ ದೇವಾಲಯದ ನಿರ್ವಹಣೆಗಾಗಿ ದಾನ ನೀಡಿದುದು ಉಲ್ಲೇಖಿತವಾಗಿದೆ (ವಿಜಯನಗರದ ಇತಿಹಾಸದ ಮೇಲೆ ಬೆಳಕು ಬೀರುವ ಶೃಂಗೇರಿ ಕಡತಗಳು, ಎ.ಕೆ. ಶಾಸ್ತ್ರಿ, ಸಂಗಮರ ಕಾಲದ ವಿಜಯನಗರ, ಜಿ.ಎಸ್. ದೀಕ್ಷಿತ್, (ಸಂ.) ಬಿ.ಎಂ.ಶ್ರೀ ಪ್ರತಿಷ್ಠಾನ, ಪು. 169-177).

ಶ್ರೀಮದ್ವಿದ್ಯಾಶಂಕರ ಪಾದಪದ್ಮಾರಾಧಕ ಚಂದ್ರಶೇಖರ ಭಾರತೀ ಸ್ವಾಮಿಗಳಿಗೆ ಶ್ರೀಶಾರದಾಂಬೆಯ ಮಹಾನವಮಿ ಉತ್ಸವಾರ್ಥವಾಗಿ ಶ್ರೀವೀರಪ್ರತಾಪ ಹರಿಹರ ಮಹಾರಾಯರು ಬಸವಾಪಟ್ಟಣ ರಾಜ್ಯದಲ್ಲಿಯ ಯರನಾಡ ಸೀಮೆಯೊಳಗಿನ ಶಿವನಿ ಹೋಬಳಿಯಲ್ಲಿದ್ದ ದಂದೂರು ಗ್ರಾಮವನ್ನು ರಥಸಪ್ತಮಿ ಪುಣ್ಯಕಾಲದಲ್ಲಿ ನೀಡಿದ ಭೂದಾನ (ಶೃಂಗೇರಿ ಮಠದ ಕಡತಗಳಲ್ಲಿಯ ಆಯ್ದ ಚಾರಿತ್ರಿಕ ದಾಖಲೆಗಳು, ಪು. 103, ಸಂ. 44) ನೀಡಿದ್ದನ್ನು ಮತ್ತೊಂದು ಶಾಸನ ತಿಳಿಸುತ್ತದೆ.

ಶ್ರೀ ಪುರುಷೋತ್ತಮ ಭಾರತಿಯವರ ಶಿಷ್ಯರಾದ ಶ್ರೀ ಶಂಕರಾನಂದ ಅಥವಾ ಶ್ರೀ ಶಂಕರಭಾರತಿಗಳು ಎರಡನೆಯ ದೇವರಾಯನ ಆಹ್ವಾನದಂತೆ ವಿಜಯನಗರಕ್ಕೆ ಭೇಟಿ ಕೊಟ್ಟರು. ಆ ಸಂದರ್ಭದಲ್ಲಿ ಅವರಿಗೆ ಕಂಗುವಳ್ಳಿ ಗ್ರಾಮವನ್ನು ದಾನವಾಗಿ ಸಮರ್ಪಿಸಲಾಯಿತು. ತನ್ನ ಪ್ರಬಲ ಶತ್ರುವಾಗಿದ್ದ ಕಳಿಂಗದ ವೀರರುದ್ರ ಗಜಪತಿ ಮಹಾರಾಜನ ಮೇಲೆ ಕ್ರಿ.ಶ. 1516 ರಲ್ಲಿ ಮುತ್ತಿಗೆ ಹಾಕುವ ಮುನ್ನ ಅವನು ಆಚಾರ್ಯ ಶ್ರೀ ಪುರುಷೋತ್ತಮ ಭಾರತಿಯವರಿಂದ ತನ್ನ ಗೆಲುವಿಗೆ ಆಶೀರ್ವಾದ ಬೇಡಲು ತನ್ನ ಜನರನ್ನು ಕಳುಹಿಸಿದನು. ರಾಜನನ್ನು ಖುದ್ದಾಗಿ ಕಂಡು ತಮ್ಮ ಆಶೀರ್ವಾದವನ್ನು

ತಿಳಿಸಲು ಆಚಾರ್ಯರು ವಿದ್ಯಾರಣ್ಯನೆಂಬ ಶಿಷ್ಯನನ್ನು ಕಳಿಸಿಕೊಟ್ಟರು. ಆ ಸಂದರ್ಭವು ದಸರಾ ಮಹೋತ್ಸವದೊಂದಿಗೆ ಹೊಂದಿಕೊಂಡಿದ್ದರಿಂದ ಅದರ ನೆನಪಿಗೆ ಹುಯ್ಯಾರು ಎಂಬ ಗ್ರಾಮವನ್ನು ಶೃಂಗೇರಿ ಮಠಕ್ಕೆ ದಾನ ಮಾಡಿದನು. ಈ ದಾನಕ್ಕೆ ಹೇಳಲಾದ ಮೂರು ಉದ್ದೇಶಗಳೆಂದರೆ 'ಅವನ ಶತ್ರುಗಳ ವಿನಾಶ, ಅವನ ಸಮರ್ಥಕರ ಮಿತ್ರರ ಅಚಲ ಭಕ್ತಿ ಮತ್ತು ಅವನ ಆಯುಷ್ಯ ಆರೋಗ್ಯ ಐಶ್ವರ್ಯಗಳ ಅಭಿವೃದ್ಧಿಗಳು, (ಶೃಂಗೇರಿಯ ಹಿರಿಮೆ, ಶೃಂಗೇರಿ ಶ್ರೀ ಶಾರದಾಪೀಠದ ಪ್ರಕಟಣೆ, 2006, ಪು. 62-63). ವಿಜಯನಗರ ಸಾರ್ವಭೌಮನಾಗಿದ್ದ ಸದಾಶಿವರಾಯನ ಆದೇಶದಂತೆ ಅವನ ಸೇನಾಧಿಪತಿಯಾದ ಹೊನ್ನಪ್ಪನಾಯಕನು ಕ್ರಿ.ಶ. 1545ರಲ್ಲಿ ಬಸ್ತಿಹಳ್ಳಿ ಎಂಬ ಗ್ರಾಮ ವನ್ನು ಜಗದ್ಗುರುಗಳಿಗೆ ದಾನ ನೀಡಿದನು (ಅದೇ.).

ಅಂದಮೇಲೆ ಶೃಂಗೇರಿ ಶಾರದಾಪೀಠದಲ್ಲಿ ನಡೆಯುತ್ತಿದ್ದ ದಸರಾ ಉತ್ಸವಗಳಿಂದ ವಿಜಯನಗರದ ಅರಸರು ಪ್ರೇರಿತರಾಗಿ ಅಲ್ಲಿನ ದಸರ ಆಚರಣೆಗಾಗಿ ವಿಶೇಷ ದಾನದತ್ತಿ ಗಳನ್ನು ನೀಡಿದ್ದಾರೆ. ಅಲ್ಲದೆ ತಮ್ಮ ಪಟ್ಟಣದ ಅಂದರೆ ರಾಜಧಾನಿಯ ಅಧಿದೇವತೆ ಯನ್ನು ಇದಕ್ಕೆ ಕೆಲವು ಸಾಂದರ್ಭಿಕ ಆಕರಗಳನ್ನು ಒದಗಿಸಬಹುದು :

1. ಕಮಲಾಪುರ ಕೈಫಿಯತ್ತು ಪಟ್ಟಣದ ಯಲ್ಲಮ್ಮ ದೇವತೆ ದೇವಾಲಯವನ್ನು ಮಾಧವ/ ವಿದ್ಯಾರಣ್ಯರು ಕಟ್ಟಿಸಿದರೆಂದು ಹೇಳುತ್ತದೆ.
2. ಮಾಧವ/ ವಿದ್ಯಾರಣ್ಯರ ಕಾಲ ಮತ್ತು ದೇವಿಯ ವಿಗ್ರಹದ ರಚನೆಯ ಕಾಲ ಒಂದೇ ಆಗಿರುವುದು.
3. ಪ್ರೌಢದೇವರಾಯನ ಶಾಸನದಲ್ಲಿ ಯಲ್ಲಮ್ಮ ದೇವಾಲಯದ ಸ್ಥಳವನ್ನು ನಿಖರವಾಗಿ ಈ ದೇವಾಲಯದ ಸ್ಥಳವೆಂದು ಗುರುತಿಸಿರುವುದು.

ಈ ಪೂರಕ ಆಕರಗಳ ಹಿನ್ನೆಲೆಯಲ್ಲಿ ಪಟ್ಟಣದ ಯಲ್ಲಮ್ಮ ದೇವಾಲಯವನ್ನು ಮಾಧವ/ವಿದ್ಯಾರಣ್ಯರು ನಿರ್ಮಿಸಿದರು ಮತ್ತು ದಸರ ಆಚರಣೆಯನ್ನು ಪ್ರಾರಂಭಿಸಿದ ರೆಂದು ಭಾವಿಸಬಹುದು.

ಅಂದ ಮೇಲೆ ಶೃಂಗೇರಿ ಶಾರದಾಪೀಠದಲ್ಲಿ ನಡೆಯುತ್ತಿದ್ದ ದಸರಾ ಉತ್ಸವಗಳಿಂದ ವಿಜಯನಗರದ ಅರಸರು ಪ್ರೇರಿತರಾಗಿ ಅದೇ ಮಾದರಿಯಲ್ಲಿ ಆರಾಧಿಸಲು ಪ್ರಾರಂಭಿಸಿ ರುವ ಎಲ್ಲಾ ಸಾಧ್ಯತೆಗಳೂ ಕಂಡುಬರುತ್ತದೆ. ಆದರೆ ವಿಜಯನಗರದ ಮಹಾನವಮಿ ಉತ್ಸವ ಬೇಟೆ ಹಬ್ಬದ ಹಿನ್ನೆಲೆಯಲ್ಲಿ ಪ್ರಸಿದ್ಧವಾಯಿತೆಂದು ಶ್ರೀ ವಿರೂಪಾಕ್ಷಿ ಪೂಜಾರಿ ಹಳ್ಳಿಯವರು ಈ ರೀತಿ ಉಲ್ಲೇಖಿಸುತ್ತಾರೆ : 'ಬೇಟೆ ಹಬ್ಬವನ್ನು ವಿಜಯನಗರದಲ್ಲಿ ಆ ಸಂದರ್ಭಕ್ಕೆ ತಕ್ಕಂತೆ ಆಯೋಜಿಸಲಾಗುತ್ತಿತ್ತು. ಹಂಪೆಯ ಮಹಾನವಮಿ ಹಬ್ಬವನ್ನು ಆಚರಿಸುವ ಪೂರ್ವದಲ್ಲಿ ಬೇಟೆ ಹಬ್ಬವನ್ನು ಆಚರಿಸುತ್ತಿದ್ದರು. ಈ ಬೇಟೆ ಹಬ್ಬವು

ಸಾರ್ವತ್ರಿಕವಾಗಿ ನಡೆಯುತ್ತಿತ್ತಲ್ಲದೆ, ಇಂಥ ಹಬ್ಬದಿಂದಲೇ ಮಹಾನವಮಿ ಹಬ್ಬಕ್ಕೆ ಪ್ರಾಶಸ್ತ್ಯ ಬಂದಂತಿದೆ. (ವಿರೂಪಾಕ್ಷಿ ಪೂಜಾರಿಹಳ್ಳಿ, ವಿಜಯನಗರದ ಕಾಲದ ಬೇಟೆ ಹಬ್ಬ, ಹಂಪಿ ಸಂಪುಟ, ಕಲೆ, ಕ್ರೀಡೆ ಮತ್ತು ಕೌಶಲ, ಸಂ. ಡಾ. ದೇವರಕೊಂಡಾರೆಡ್ಡಿ, 2006, ಪು. 199-203) ಹಂಪೆಯ ವಿಜಯದಶಮಿ ಉತ್ಸವಕ್ಕೆ ಬೇಟೆ ಹಬ್ಬದಿಂದ ಪ್ರಾಶಸ್ತ್ಯ ಬಂದಿತೆನ್ನುವ ಅವರ ಈ ಅಭಿಪ್ರಾಯವನ್ನು ಒಪ್ಪಲು ಸಾಧ್ಯವಿಲ್ಲ. ಅದಕ್ಕೆ ಬದಲಾಗಿ ಬೇಟೆ ಹಬ್ಬ ವಿಜಯದಶಮಿಯ ಆಚರಣೆಯ ಒಂದು ಭಾಗವಾಗಿತ್ತೆಂದು ಭಾವಿಸಬಹುದು. ಕಾರಣ ಅವರೇ ಹೇಳುವಂತೆ, ಬೇಟೆಯ ಪ್ರಾಣಿಗಳನ್ನು ಆಯುಧ ಪೂಜೆಗೆ ಬಳಸುತ್ತಿದ್ದನ್ನು ಉಲ್ಲೇಖಿಸುತ್ತಾರೆ. ಆಯುಧ ಪೂಜೆ ನವರಾತ್ರಿ ಆಚರಣೆಯ ಒಂದು ಅಂಗ.

ಈ ಎಲ್ಲಾ ಉಲ್ಲೇಖಗಳು ವಿಜಯನಗರದ ಅರಸರು ಶೃಂಗೇರಿಯ ಪೀಠದೊಂದಿಗೆ ಹೊಂದಿದ್ದ ಸಂಬಂಧವನ್ನು ಮತ್ತು ಅಲ್ಲಿನ ವಿಜಯದಶಮಿ ಉತ್ಸವಗಳಿಂದ ಪ್ರೇರಿತರಾಗಿ ರಾಜಧಾನಿ ವಿಜಯನಗರದಲ್ಲಿ ಕೂಡ ದುಷ್ಟಶಕ್ತಿಯ ಸಂಹಾರಕ್ಕಾಗಿ ಶಿಷ್ಟಪರಿಪಾಲನೆಗಾಗಿ ದಸರಾ ಮಹೋತ್ಸವವನ್ನು ನಾಡದೇವಿಯ ಹಬ್ಬವಾಗಿ ಪ್ರಾರಂಭಿಸಿದ್ದಾರೆ. ಪೇಯಸ್ ಮತ್ತು ನ್ಯೂನಿಜ್‌ರ ಹೇಳಿಕೆಯಲ್ಲಿ ಮಹಾರಾಜನು ಸಿಂಹಾಸನವನ್ನೇರುವ ಮೊದಲು ದೇವಿಯನ್ನು ಆರಾಧಿಸುತ್ತಿದ್ದುದನ್ನು ಉಲ್ಲೇಖಿಸುತ್ತಾರೆ. ಹಾಗೂ ವಿಜಯನಗರಕ್ಕೆ ಆಗಮಿಸಿದ ಪ್ರವಾಸಿಗ ನಿಕಲೋ ದೇ ಕೊಂತಿ ಎರಡನೆಯ ದೇವರಾಯನ ಕಾಲದ ಮಹಾನವಮಿ ಉತ್ಸವವನ್ನು ದೇವಿಯ ಉತ್ಸವದ ಮಾದರಿಯಲ್ಲಿ ಉಲ್ಲೇಖಿಸಿರುವುದು ಈ ಹಂತದಲ್ಲಿ ಗಮನಾರ್ಹವಾಗಿರುತ್ತದೆ. ವಿಜಯನಗರದ ಅರಸರು ಪ್ರಾರಂಭದಲ್ಲಿ ಶೃಂಗೇರಿಯಲ್ಲಿ ನಡೆಯುವಂತೆ ದೇವತಾರಾಧನೆಗೆ ಮೀಸಲಾಗಿದ್ದ ಉತ್ಸವವನ್ನು ಪ್ರಾರಂಭಿಸಿ ಆನಂತರ ಅದರ ಜೊತೆಯಲ್ಲಿ ಸಾಮ್ರಾಜ್ಯ ದಾದ್ಯಂತದಿಂದ ರಾಜಧಾನಿಗೆ ಆಗಮಿಸಿದ್ದ ತನ್ನ ಸಹವರ್ತಿಗಳಿಗೆ ಗೌರವ ನೀಡಲು ಮತ್ತು ಗೌರವ ಸ್ವೀಕರಿಸಲು ದೇವಿಯ ಸಮ್ಮುಖದಲ್ಲಿ ರಾಜ್ಯ ರಾಜ್ಯಸಭೆಯನ್ನು, ಸಿಂಹಾಸನಾರೋಹಣವನ್ನು ನಡೆಸಿ ಧಾರ್ಮಿಕ ದಸರವನ್ನು ರಾಜಪ್ರತಿಷ್ಠೆಯ ರೂಪವಾಗಿ ಪರಿವರ್ತಿಸಿದಂತೆ ಕಂಡುಬರುತ್ತದೆ. ಇದೇ ಪರಂಪರೆಯನ್ನು ಮೈಸೂರಿನ ಅರಸರು ಕ್ರಿ.ಶ. 1610ರ ನಂತರ ಮುಂದುವರಿಸಿ ಕೊಂಡು ಬಂದರು. ಇದನ್ನೇ ಇಂದೂ ಸಹ ಮೈಸೂರಿನ ಅರಮನೆಯಲ್ಲಿ ನಡೆಯುವ ದಸರಾ ಮಹೋತ್ಸವಗಳಲ್ಲಿಯೂ ಕಾಣಬಹುದಾಗಿದೆ. (ಗೋವಿಂದ ವೈದ್ಯನ 'ಕಂಠೀರವ ನರಸರಾಜ ವಿಜಯ', ರಾಮಕೃಷ್ಣ ರಾವ್‌ರವರ Annals of Mysore Royal Family, Vol. I and II).

೪೨. ಹಂಪೆಯ ಪುರಂದರ ದಾಸರು: ಕೆಲವು ಹೊಸ ವಿಚಾರಗಳು

ಡಾ. ಮಲ್ಲಿಕಾರ್ಜುನ ಕುಂಬಾರ

ಹಂಪೆಯಲ್ಲಿರುವ ತುಂಗ-ಭದ್ರೆಯ ತೀರ ಅದೆಷ್ಟೋ ಕವಿಗಳಿಗೆ ಪುಣ್ಯಭೂಮಿಯಾಗಿತ್ತು. ಅದಕ್ಕೆಂದೇ ಕವಿ ಚಂದ್ರಶೇಖರನು "ತನ್ನ ನೀರಕ್ಕೊಡಿತೆಯ ನೀಂಟಿದವಂ ಮತ್ತೆ ತಾಯಿ ಮೊಲೆ ಹಾಲ ನೀಂಟದಂತೆ"[1] ಎಂದು ಕನ್ನಡಕವಿಗಳ ನೆಲ-ಜಲದ ಭಕ್ತಿಯ ಬಗ್ಗೆ ಕೊಂಡಾಡಿದ್ದಾನೆ. ಇಂತಹವರಲ್ಲಿ ದಾಸ ಸಾಹಿತ್ಯದಲ್ಲಿ ಅಗ್ರಗಣ್ಯರಾದವರು ಪುರಂದರ ದಾಸರು. ಇವು ಗುರುವನ್ನೆ ಮೀರಿಸಿದ "ಶಿಷ್ಯಾದೀಚ್ಛೇತ್ ಪರಾಜಯಂ" ರಾದ ಕಾರಣದ ವ್ಯಾಸರಾಯರು "ದಾಸರೆಂದರೆ ಪುರಂದರದಾಸರೆಂದು" ಉದ್ಗಾರ ತೆಗೆಯುತ್ತಾರೆ. ಇವರ ಸಾಹಿತ್ಯದಲ್ಲಿ ಉಪನಿಷತ್ತದ ಸಾರವಿರುವ ಕಾರಣ ಇದನ್ನು ಪುರಂದರೋಪನಿಷತ್ತು ಎಂದು ಕರೆಯಬೇಕಾದರೆ ಅವರ ಪಾಂಡಿತ್ಯ ಅದೆಷ್ಟು ಅದ್ಭುತವಾಗಿರಬೇಕು? ಸಮಾಜಕ್ಕೆ ಅವರು ನೀಡಿದ ಕೊಡುಗೆ ಅನನ್ಯ. ಅವರು ಅಚ್ಚಗನ್ನಡಿಗರಾದ ದಾಸವರೇಣ್ಯರಾಗಿದ್ದಾರೆ. ಇಂತಹ ದಾಸವರೇಣ್ಯರಿಗೆ ಪ್ರೇರಣೆ ಪ್ರಭಾವ ನೀಡಿದ ಸ್ಥಳ ಹಂಪೆಯಾಗಿದೆ. ಪಂಪಾ ಸಾನ್ನಿಧ್ಯ, ತುಂಗಭದ್ರೆಯ ಮಡಿಲು ಇವರ ಬುದ್ಧಿಗೆ ಸಾಣೆ ಹಿಡಿದ ಪುಣ್ಯ ತಾಣವಾಗಿತ್ತು. ಇಂತಹ ದಾಸಶ್ರೇಷ್ಠರಾದ ಪುರಂದರದಾಸರು ಈಗಿನ ಹೇಳಿಕೆಯಂತೆ ಅವರ ಹುಟ್ಟೂರು ಮಹಾರಾಷ್ಟ್ರದ ಪುರಂದರ ಗಡ ಎನ್ನುತ್ತಾರೆ. ಆದರೆ ಅವರು ಮಹಾರಾಷ್ಟ್ರದಲ್ಲಿ ಹುಟ್ಟಿ ಬೆಳೆದಿದ್ದರೆ, ತಮ್ಮ ಕೀರ್ತನೆಗಳಲ್ಲಿ ಮರಾಠಿ ಶಬ್ದಗಳನ್ನು ಏಕೆ ಬಳಸಿಲ್ಲ ? ಅವರ ಕೀರ್ತನೆಗಳು ಅಚ್ಚಗನ್ನಡದ ನುಡಿಗಟ್ಟುಗಳಾಗಿವೆ ಹೊರತು ಅಲ್ಲಿ ಮರಾಠಿ ಸ್ಪರ್ಶವಿಲ್ಲ. ಅವರನ್ನು ಕರ್ನಾಟಕದ ಸಂಗೀತ ಪಿತಾಮಹರೆಂದು ಕರೆಯುತ್ತಾರೆ. ಹೀಗಿದ್ದರೆ ಮರಾಠಿ ಅಭಂಗಗಳನ್ನೇಕೆ ಅವರು ರಚಿಸಲಿಲ್ಲ? ಈ ಎಲ್ಲ ಪ್ರಶ್ನೆಗಳು ನಮ್ಮೆದುರು ನಿಲ್ಲುತ್ತದೆ. ಅವರ ಕೀರ್ತನೆ, ಅವರ ಬಗೆಗಿರುವ ಶಾಸನ, ಐತಿಹ್ಯಗಳನ್ನು ಗಮನಿಸಿದರೆ, ಅವರು ಮಹಾರಾಷ್ಟ್ರದವರು ಅಲ್ಲ, ಅವರು ಕನ್ನಡಿಗರೆ ಆಗಿದ್ದಾರೆ. ಇತಿಹಾಸಕಾರರಾದ ಕಪಟರಾಳ ಕೃಷ್ಣರಾಯರ ಹೇಳಿಕೆಯಂತೆ ಇವರು ಶಿವಮೊಗ್ಗ ಜಿಲ್ಲೆಯವರಾಗಿದ್ದಾರೆ. ಈ ಜಿಲ್ಲೆಯ ತೀರ್ಥಹಳ್ಳಿಯ ಬಳಿಯಲ್ಲಿನ ಕ್ಷೇಮಪುರವೆ ಅವರ ಜನ್ಮಸ್ಥಳ. ಈ ಊರಿನಲ್ಲಿರುವ ಚಿನ್ನದ ಭಂಡಾರಿ ಮನೆತನವೆ ಇವರದ್ದಾಗಿತ್ತು.[2] ಅಂದು ಈ ಕ್ಷೇಮ ಪುರವು ಪ್ರಖ್ಯಾತವಾದ ವಾಣಿಜ್ಯ ಕೇಂದ್ರವಾಗಿತ್ತು. ಈ ಹಿನ್ನೆಲೆಯಲ್ಲಿ ಇವರು ಚಿನ್ನದ

ವ್ಯಾಪಾರಿಗಳಾದ ಕಾರಣ ಅಂದು ಮುತ್ತುರತ್ನಗಳ ವ್ಯಾಪಾರದ ಆಗರವಾಗಿದ್ದ ವಿಜಯನಗರದೊಂದಿಗೆ ವ್ಯಾಪಾರ ವಹಿವಾಟು ಹೊಂದಿದ್ದರು. ದಾಸರಾದನಂತರ ತಮ್ಮ ವ್ಯಾಪಾರ ವಹಿವಾಟು ಹೊಂದಿದ ವಿಜಯನಗರವನ್ನು ತಮ್ಮ ಕರ್ಮಭೂಮಿಯನ್ನಾಗಿಸಿಕೊಂಡಿದ್ದರಲ್ಲಿ ಆಶ್ಚರ್ಯವೇನಿಲ್ಲ. ಈ ಮನೆತನದ ಹೆಸರಿನ ಹಂಪೆಯ ಶಾಸನವೊಂದು ಇದಕ್ಕೆ ಪುಷ್ಟಿ ನೀಡುತ್ತದೆ. ಅದು ಹಂಪೆಯಲ್ಲಿನ ಕೋಟೆ ಲಿಂಗದ ಬಳಿ ಒಂದು ಸಾಲಿನ ಶಾಸನವಾದ ಅದು "ಚಿನ್ನಭಂಡಾರಂ ದೇವರಸು"[3] ಎಂದಿದ್ದು, ಇದು ಪುರಂದರದಾಸರ ಮೂಲ ಮನೆತನದ ಹೆಸರಾಗಿದೆ. ಇದರಿಂದ ಅಂದು ಅವರು ಹಂಪೆಯೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದರೆಂದು ಹೇಳಬಹುದಾಗಿದೆ. ಇವರ ಕಾಲದಲ್ಲಿನ ಪುರಂದರದಾಸ ರೆನ್ನುವ ಯಾವ ಮರಾಠಿ ದಾಖಲೆಗಳು ಮಹಾರಾಷ್ಟ್ರದಲ್ಲಿ ದೊರಕಲಾರವು.

ಬಳ್ಳಾರಿ ಜಿಲ್ಲೆಯ ಕಮಲಾಪುರದ ಕ್ರಿ.ಶ. 1526ರ ಶಾಸನವೊಂದು ಪುರಂದರರ ಗೋತ್ರ, ಸೂತ್ರಗಳನ್ನು ತಿಳಿಸುತ್ತಾ, ಅವರು ವಸಿಷ್ಠ ಗೋತ್ರದ ಯಜುಶ್ಯಾಖಾಧ್ಯಾಯಿಗಳೆಂದು ಹೇಳಿ ಇವರಿಗೆ ಲಕ್ಷ್ಮಣದಾಸ, ಹೇಬಣದಾಸ ಮತ್ತು ಮಧ್ವಪತಿದಾಸರೆಂಬ ಮೂರು ಮಕ್ಕಳಿದ್ದ ಬಗ್ಗೆ ವಿವರಗಳನ್ನು ನೀಡುತ್ತದೆ. ಇದನ್ನು ಗಮನಿಸಿದಾಗ ಪುರಂದರರು (1484 ರಿಂದ 1564) ಬದುಕಿರುವ ಕಾಲದಲ್ಲಿ ಅವರ ಮಕ್ಕಳಿಗೆ ಅರಸ ಕೃಷ್ಣದೇವ ರಾಯನು ವ್ಯಾಸರಾಯರಿಗೆ ಕೊಟ್ಟಿದ್ದ ಭಾಗಗಳಲ್ಲಿ ಕೆಲವನ್ನು ನೀಡಿದ ಉಲ್ಲೇಖ ಈ ಶಾಸನದಲ್ಲಿದೆ.

ಮೊದಲಿನಿಂದಲೂ ರಾಜರು, ಧನಿಕರೊಂದಿಗೆ ಸಂಬಂಧವಿರಿಸಿಕೊಂಡಿದ್ದ ಪುರಂದರರು ಅವರ ಬಗೆಗಿನ ದಂತ ಕಥೆಯಂತೆ ಎಲ್ಲವನ್ನು ತ್ಯಾಗ ಮಾಡಿ ಹಂಪೆಗೆ ಬಂದು ಇಲ್ಲಿನ ಬಜಾರಗಳಲ್ಲಿ ದೇವತಾ ಸ್ತುತಿಗೆ ತೊಡಗುತ್ತಾರೆ. ಇವರ ಕೀರ್ತನೆಗಳಲ್ಲಿರುವ ``ಪುರಂದರ ವಿಠ್ಠಲ" ಅಂಕಿತದಲ್ಲಿರುವ ಈ ವಿಠ್ಠಲನು ಪಂಡರಾಪುರದ ವಿಠ್ಠಲನಾಗಿರದೇ ಹಂಪೆಯ ವಿಜಯ ವಿಠ್ಠಲನೇ ಆಗಿದ್ದಾನೆ.

ಹಂಪೆಯಲ್ಲಿ ಕ್ರಿ.ಶ. 1390ರಿಂದಲೇ (2 ಹರಿಹರ) ತುಂಗಭದ್ರೆಯ ತಟದಲ್ಲಿ ವೈಷ್ಣವ ದೇವಾಲಯಗಳು ರಚನೆಗೊಳ್ಳುತ್ತವೆ. ಇಲ್ಲಿರುವ ವಿಜಯ ವಿಠ್ಠಲ ಮೂರ್ತಿಯನ್ನು ಕೃಷ್ಣದೇವರಾಯನು ಪಂಡರಪುರದಿಂದ ತಂದನೆಂದು ಹೇಳಿಕೆ ಇದೆ. ಆದರೆ ತಾಳ್ಳಪಾಕಂ ಅಣ್ಣಮಾಚಾರ್ಯರ (1408-1503) ಕೀರ್ತನೆಯೊಂದರ ಪ್ರಕಾರ ಈ ವಿಠ್ಠಲ ಮೂರ್ತಿಯನ್ನು ಕೃಷ್ಣದೇವರಾಯನ ಕಾಲದ ಪೂರ್ವದಲ್ಲಿಯೆ ತಿರುಪತಿಯಿಂದ ತಂದು ಸ್ಥಾಪಿಸಿದರೆಂದು ಹೇಳುತ್ತಾರೆ. ಇದರಿಂದ ಕೃಷ್ಣದೇವರಾಯನಿಗಿಂತ ಪೂರ್ವದಲ್ಲಿ ಈ ವಿಜಯ ವಿಠ್ಠಲ ದೇವಾಲಯವಿದ್ದುದಾಗಿ, ನಂತರ ಹರಿಭಟ್ಟನಿಂದ ರಚಿತವಾದ ಉತ್ತರ ನರಸಿಂಹ ಪುರಾಣದಿಂದಲೂ ಕೂಡ 14ನೇ ಶತಮಾನದ ಆದಿಯಲ್ಲಿ ಈ ದೇವಾಲಯ

ವಿತ್ತೆಂದು ಖಚಿತವಾಗುತ್ತದೆ.[5] ಕೃಷ್ಣದೇವರಾಯನು ನೂರು ಕಂಬಗಳುಳ್ಳ ಮಂಟಪವನ್ನು ಮಾತ್ರ ಇಲ್ಲಿ ಕಟ್ಟಿಸುತ್ತಾನೆಂದು ಶಾಸನದಿಂದ ತಿಳಿದುಬರುತ್ತದೆ.

ಪುರಂದರರರು ಈ ಮೊದಲೇ ಹಂಪೆಯ ವ್ಯಾಪಾರಿ ಸಂಬಂಧ ಹೊಂದಿದ ಕಾರಣ ತಮ್ಮ ಲೋಕವ್ಯವಹಾರ ಸಾಕಷ್ಟು ಇರುವ ಸಂದರ್ಭದಲ್ಲಿ ಬಹುಶಃ 20ನೇ ವರ್ಷಕ್ಕೆ ಹಂಪೆಗೆ ಬರುತ್ತಾರೆ. ವ್ಯಾಸರಾಯರಿಂದ ದೀಕ್ಷೆ ಪಡೆದ ದಿನದಿಂದ ಅವರಿಗೆ ಮೊದಲಿನ ಶ್ರೀನಿವಾಸ ಹೆಸರಿನ ಬದಲು ಪುರಂದರ ವಿಠ್ಠಲನೆಂದು ಕರೆದುಕೊಂಡರು. ತಮ್ಮ ಕೀರ್ತನೆಗಳಿಗೆ ಪುರಂದರ ವಿಠ್ಠಲನೆಂದು ಅಂಕಿತವನ್ನು ನೀಡಿದರು. ಇದರ ಬಗ್ಗೆ ಅವರ ಕೀರ್ತನೆಯೊಂದು ಇವನ್ನು ಪುಷ್ಟೀಕರಿಸುತ್ತದೆ. ವ್ಯಾಸರಾಯರ ಮೇಲೆ ಈಗಾಗಲೇ ಬಾಲ್ಯದಿಂದಲೇ ಸಾಕಷ್ಟು ಪ್ರಭಾವ ಬೀರಿದ ಪುರಂದರದಾಸರು ಹಂಪೆಯಲ್ಲಿನ ದಾಸಕೂಟದ ಆರಾಧಕರಾಗಿದ್ದರು. ಪುರಂದರ ದಾಸರ ಈ ವಿಠ್ಠಲನು ಹಂಪೆಯ (ವಿಜಯ) ವಿಠ್ಠಲನಾಗಿದ್ದಾನೆ ಹೊರತು ಪಂಡರಾಪುರದ ವಿಠ್ಠಲ ಅಲ್ಲ ಎಂದು ಇದರಿಂದ ಸ್ಪಷ್ಟ ವಾಗುತ್ತದೆ. ಹಂಪೆಯ ಕೋಟೆ ಲಿಂಗದ ಬಳಿ ಒಂದು ಸಾಲಿನ ಶಾಸನ `ಶ್ರೀ ವಿಠ್ಠಲ'[6] ಎಂಬುದು ಇದಕ್ಕೆ ಆಧಾರ ನೀಡಬಹುದು.

ಪುರಂದರ ದಾಸರ ಕೀರ್ತನೆಗಳೆಲ್ಲಿ ?

ಪುರಂದರ ದಾಸರು ಹೇಳುವಂತೆ ತಾವು 4,75,000 ಕೀರ್ತನೆಗಳನ್ನು ರಚಿಸಿದ್ದಾಗಿ ಹೇಳುತ್ತಾರೆ. ಅವರ ಒಟ್ಟು ಜೀವಿತದ ಅವಧಿಯ ಕೀರ್ತನೆಗಳನ್ನು ರಚಿಸಿದ 40 ವರ್ಷ ಗಳಲ್ಲಿ ಇಷ್ಟು ಕೀರ್ತನೆಗಳನ್ನು ರಚಿಸಲು ಸಾಧ್ಯವೇ ? ಕೀರ್ತನೆಗಳನ್ನು ಅವರ ಮಗ ಮಧ್ಯಪತಿಯು ಬರೆದುಕೊಳ್ಳುತ್ತಿದ್ದನೆಂದು ವಾದವಿದೆ. ಹಾಗಾದರೆ ಇವರು ಬರೆದ ಕೀರ್ತನೆಗಳು ಎಲ್ಲಿ ಹೋದವು ? ಅವರು ಹೇಳುವ ಸಂಖ್ಯೆ ಉತ್ಪ್ರೇಕ್ಷೆಯಾದರೂ ಆಗಿರ ಬಹುದೆ ? ಈಗ ದೊರಕುವ ಕೀರ್ತನೆಗಳು ಸಾವಿರ ಗಡಿ ದಾಟುವುದಿಲ್ಲ. ಹಾಗಾದರೆ ಉಳಿದ ಕೀರ್ತನೆಗಳು ಎಲ್ಲಿ ಹೋದವು ? ಈ ಬಗ್ಗೆ ಜಿಜ್ಞಾಸೆ ನಡೆಸಿದಾಗ ಅವರು ತಮ್ಮ ಬಹಳಷ್ಟು ಕಾಲವನ್ನು ಹಂಪೆಯಲ್ಲಿಯೇ ಕಳೆದರು. ಅವರಿರುವ ಕಾಲದಲ್ಲೇ ವಿಜಯನಗರದ ವೈಭವವನ್ನು ಕಣ್ಣಾರೆ ಕಂಡರು. ಅರಸು ಕೃಷ್ಣದೇವರಾಯ (1530), ನಂತರ ಗುರು ವ್ಯಾಸರಾಯರ ನಿಧನವನ್ನು, ಸದಾಶಿವರಾಯ, ತಿರುಮಲರಾಯ, ರಾಮ ರಾಯರಂತವರು ಆಳಿದ ವಿಜಯನಗರವನ್ನು ಕಣ್ಣಾರೆ ಕಂಡು 80 ವರ್ಷಗಳ ಕಾಲ ಬದುಕಿ ಹರಿಪಾದವನ್ನು (1564) ಸೇರಿದರು. (ಮತ್ತೊಂದು ಹೇಳಿಕೆಯಂತೆ ಅವರು ಹೈದ್ರಾಬಾದಿಗೆ ಸೇರಿದ ಗದ್ವಾಲ್ ಬಳಿಯಲ್ಲಿನ ವನವರ್ತಿಯಲ್ಲಿ ಹರಿಪಾದ ಸೇರಿದ ರೆಂದು ಹೇಳುತ್ತಾರೆ.) ಇವರು ಹರಿಪಾದ ಸೇರಿದ ಮರು ವರ್ಷವೇ ಕ್ರಿ.ಶ. 1565 ರಲ್ಲಿ ರಕ್ಕಸ ತಂಗಡಗಿ ಕಾಳಗದಲ್ಲಿ ವಿಜಯನಗರ ಸಾಮ್ರಾಜ್ಯ ಪತನವಾಗಿ ಈ ಕಾಳಗದಲ್ಲಿ ಬಹಳಷ್ಟು ನೆಲಸಮವಾಯಿತು. ಅದರಲ್ಲಿ ಅವರ ಕೀರ್ತನೆ ಸಂಗ್ರಹವುಳ್ಳ ಸ್ಥಳವಾಗಲಿ,

ಮನೆಯಾಗಲಿ ಈ ಸಂದರ್ಭದಲ್ಲಿ ನಾಶವಾಗಿರಬಹುದು. ವಿಜಯನಗರದ ವೈಭದ ಕಣ್ಮರೆಯೊಂದಿಗೆ ಪುರಂದರದಾಸರ ಕೃತಿಗಳೆಲ್ಲವೂ ಮಣ್ಣಾದದ್ದು ದುರ್ದೈವದ ಸಂಗತಿಯಾಗಿದೆ. ಅದರ ಬಗ್ಗೆ ಸುದೀರ್ಘ ಅಧ್ಯಯನ ನಡೆದರೆ ಆದರೆ ಅವರೇ ಹೇಳಿಲ್ಲವೆ ? "ನೆಚ್ಚದಿರಿ ಈ ಭಾಗ್ಯ..... ಎಚ್ಚರಿಕೆ ಎಚ್ಚರಿಕೆ" ಎಂದು, ಹರಿದಾಸರಾದ ಪುರಂದರ ದಾಸರ ಜೀವನ ಸಾಧನೆ, ಕೀರ್ತನೆಗಳ ಬಗ್ಗೆ ಈಗ ಮರುಚಿಂತನೆಗಳು ನಡೆಯಬೇಕಾದ ಅಗತ್ಯ ಇದೆ.

ಟಿಪ್ಪಣಿಗಳು

೧. ಪೌಢರಾಯನ ಕಾಲದ ಕನ್ನಡ ಸಾಹಿತ್ಯ, ಡಾ. ಶಿವಾನಂದ ವಿರಕ್ತಮಠ (ಪು -507) (ಕ.ವಿ.ವಿ. 1978)

೨. ಪ್ರಜಾವಾಣಿ 31-01-2004 ಲೇಖನ, ಡಾ. ಸಿ. ಜೆ. ಕೇಶವಮೂರ್ತಿ ಶಿವಮೊಗ್ಗ.

೩. ಹಂಪೆ ಶಾಸನಗಳು (ಹಂಪೆ. ವಿ.ವಿ.) ನಂ. 169.

೪. ಪುರಂಧರ ದಾಸರು - ವಿ. ಸೀ. , ನ್ಯಾಶನಲ್ ಬುಕ್ಕ ಟ್ರಸ್ಟ್ ದೆಹಲಿ 1975 (ಪುಟ. 16)

೫. ಪುರಂದರ ದಾಸರು - ಸಂ. ಸಂ. ಶಿ. ಭೂಸನೂರಮಠ, ಮಹಾಕವಿ ಹರಿಹರ ಸ್ಮಾರಕ ಸಂಶೋಧನಾ ಕೇಂದ್ರ ಕೊಟ್ಟೂರು ಸ್ವಾಮಿ ಮಠ ಹಂಪಿ. (ಪು -203 - 04) ಶ್ರೀ

೬. ಹಂಪೆ ಶಾಸನಗಳು (ಹಂಪೆ. ವಿ.ವಿ.) ನಂ. 170.

೪೩. ಕನಕದಾಸರ 'ಮೋಹನ ತರಂಗಿಣಿ'ಯಲ್ಲಿ ಚಾರಿತ್ರಿಕ ಮತ್ತು ಸಮಾಜ ಸುಧಾರಕ ನೆಲೆ

ಡಾ. ಶ್ರೀಧರ ಪಿಸ್ಸೆ

ಕನಕದಾಸರ 'ಮೋಹನ ತರಂಗಿಣಿ'ಯ ಆಯ್ದ ಭಾಗವನ್ನು ಗುಲಬರ್ಗಾ ವಿಶ್ವವಿದ್ಯಾನಿಲಯ ಪಠ್ಯವಾಗಿ ನಿಗದಿಪಡಿಸಿತ್ತು. ಆಗ ಅದರ ವಿರುದ್ಧ ಅಶ್ಲೀಲತೆಯ ಕಾರಣ ನೀಡಿ ಉಗ್ರ ಹೋರಾಟ ನಡೆಸಲಾಯಿತು ಮತ್ತು ಆ ಪಠ್ಯವನ್ನು ಹಿಂಪಡೆಯುವಂತೆ ಮಾಡಲಾಯಿತು. ಇದರ ಹಿಂದಿರುವ ನಿಲುವೇನು ? ಇದೇನು ಓದಬಾರದ ಮುಟ್ಟಬಾರದ ಕಾವ್ಯವೆ? 'ಮೋಹನ ತರಂಗಿಣಿ' ಶೃಂಗಾರ ಕಾವ್ಯ. ಶ್ರೀಕೃಷ್ಣನ ಕುರಿತ ಅತಿಶಯವಾದ ಭಕ್ತಿಯನ್ನೂ ವೈಷ್ಣವ ಮತ್ತು ಶೈವರ ನಡುವಿನ ಹೊಂದಾಣಿಕೆಯ ಅನಿವಾರ್ಯತೆ ಯನ್ನೂ ವಿಜಯನಗರದ ಶ್ರೀಕೃಷ್ಣದೇವರಾಯನ ಕಾಲಾವಧಿಯ ಕನ್ನಡಿಗರ ಜನ ಜೀವನದ ಚರಿತ್ರೆಯನ್ನು ಕಟ್ಟಿಕೊಡುವ ಕಾವ್ಯವೆಂದು ಈಗಾಗಲೆ ಗುರುತಿಸಲಾಗಿದೆ.

ಬೆಟಗೇರಿ ಕೃಷ್ಣಶರ್ಮ ತಮ್ಮ 'ಕರ್ನಾಟಕದ ಜನ ಜೀವನ' ಪುಸ್ತಕದ "ಕನಕ ದಾಸರು ಕಂಡ ವಿಜಯನಗರ" ಲೇಖನದಲ್ಲಿ "ಸಾಂಗತ್ಯದಲ್ಲಿ ರಚಿತವಾದ ಈ ಮಹಾ ಕಾವ್ಯವು ಸಾಂಪ್ರದಾಯಿಕ ಪಂಡಿತರ ಮನ್ನಣೆಗೆ ಪಾತ್ರವಾಗಿಲ್ಲ. ಆದುದರಿಂದಲೆ ಇದರ ಹೊಗಳಿಕೆ ನಮ್ಮ ಸಾಹಿತ್ಯ ಪ್ರಪಂಚದಲ್ಲಿ ಅಷ್ಟೊಂದು ಬೆಳೆದುಬಂದಿಲ್ಲ. ಎಂತಲೆ ಇದನ್ನು ಓದಿ ನೋಡಬೇಕೆಂಬ ಬುದ್ಧಿ ಬಹುಜನರಿಗಾಗಿಲ್ಲ" ಎಂದು ವ್ಯಸನಪಟ್ಟಿದ್ದಾರೆ (೧೯೩೨, ಪು. ೬೩). ಹಾಗೆಯೆ ಕನಕದಾಸರು ಈ ಕೃತಿಯ ತಮ್ಮ ಸಮಕಾಲೀನ ಚರಿತ್ರೆಯನ್ನು ಹೇಗೆ ಕಟ್ಟಿಕೊಟ್ಟಿದ್ದಾರೆಂದು ವಿಶದವಾಗಿ ಮನಗಾಣಿಸಿದ್ದಾರೆ. ಸುಧಾಕರರು ಈ ಕೃತಿಯಲ್ಲಿ ಸಾಹಿತ್ಯಿಕ ಕೃಷ್ಟಿಕೋನದಿಂದ ಕಂಡು ಅದರ ದೋಷಗಳನ್ನು ಪಟ್ಟಿ ಮಾಡಿದ್ದಾರೆ. (೧೯೯೯, ಪ್ರಸ್ತಾವನೆ, ಪು. ೧೮) ಕನಕದಾಸರ ಪೌರಾಣಿಕ ಕೀರ್ತನೆಗಳ ಕುರಿತು ಕೆ.ಜಿ.ನಾಗರಾಜಪ್ಪ ನವರ ನೈತಿಕ ನೆಲೆಯ ದೃಷ್ಟಿಕೋನ ಮೋಹನ ತರಂಗಿಣಿಗೂ ಅನ್ವಯವಾಗುವುದಾದರೂ ಸೂಕ್ತವೆನಿಸುವುದಿಲ್ಲ. (೧೯೭೮, ಪು. ೪೯೨).

ಹಾಗೆಯೆ ಶೃಂಗಾರ ಪ್ರಧಾನವಾದ 'ಮೋಹನ ತರಂಗಿಣಿ' ಯಲ್ಲಿ ವರ್ಣನೆಯೆ ಕಾವ್ಯದ ಜೀವಾಳವೆಂದು ಆರ್.ಸಿ.ಹಿರೇಮಠರು ಗುರುತಿಸುತ್ತಾರೆ. 'ಶಂಭರಾಸುರನ ವಧೆ'ಯಿಂದ 'ಬಾಣಾಸುರನ ಭೋಗಲೀಲೆ'ಯ ವರೆಗಿನ ಹದಿಮೂರು ಸಂಧಿಗಳ ಸುಮಾರು ೬೦೦ ಸಾಂಗತ್ಯಗಳಲ್ಲಿ ಬರುವ ಕಥಾನಕ ಏನೂ ಇಲ್ಲ. ಅಲ್ಲಿ ಕೇವಲ

ರತಿಯ ವಿವಾಹ, ಜಲಕ್ರೀಡೆ, ಮನೆ ತುಂಬಿಸುವುದು, ಗರ್ಭದಾನ, ಅನಿರುದ್ಧನ ಜನನ, ನಗರ ಶೋಧ, ಬೇಟೆ, ಶೋಣಿತಪುರ ವರ್ಣನೆ, ಬಾಣಾಸುರನ ಶಿವಪೂಜೆ, ಬಾಣಾಸುರನ ಭೋಗಲೀಲೆ' - ಈ ಘಟನೆಗಳು ಮಾತ್ರ ಬರುತ್ತವೆ. ಆದರೆ ಇಲ್ಲಿ ಕಾವ್ಯವನ್ನು ಹಿಗ್ಗಿಸಿದುದು, ಕಥೆಯ ಕೊಂಡಿಯನ್ನು ಕೊಂಡೊಯ್ದುದು ಆತನ ವರ್ಣನೆಗಳು'. (೧೯೯೦, ಪುಟ. ೧೮೮-೧೯೯). ಈ ಅಭಿಪ್ರಾಯ ಮೋಹನ ತರಂಗಿಣಿಯಲ್ಲಿ 'ವರ್ಣನೆ' ಪಡೆದುಕೊಳ್ಳುವ ಮಹತ್ತರ ಪಾತ್ರವನ್ನು ಸೂಚಿಸುತ್ತದೆ. ಸೌರಾಷ್ಟ್ರ ವರ್ಣನೆ, ದ್ವಾರಕಾಪುರ ವರ್ಣನೆ, ಬಾಣಾಸುರನ ಶೋಣಿತಪುರದ ವರ್ಣನೆ, ಬಾಣಾಸುರನ ಶಿವಪೂಜೆ, ಬಾಣಾಸುರನ ಬೋಗಲೀಲೆ, ಉಷಾದೇವಿಯ ಶೃಂಗಾರ, ಉಷಾ ಚಿತ್ರಲೇಖೆಯರ ಸರಸ, ಉಷೆಯ ವಿರಹ, ಶ್ರೀಕೃಷ್ಣನು ಉಷಾನಿರುದ್ಧರನ್ನು ಕಂಡುದು, ಶ್ರೀಕೃಷ್ಣನು ದ್ವಾರಕೆಗೆ ಬಂದುದು, ಮೊದಲಾದ ಸಂಧಿಗಳಲ್ಲಿ ಕಥೆಯ ಎಳೆ ಕ್ವಚಿತ್ತಾಗಿದ್ದು, ವರ್ಣನೆಯೆ ಪ್ರಧಾನವಾಗಿದೆ. ವರ್ಣಕ ಕಾವ್ಯವಾದ ಈ ಹಾಡುಗಬ್ಬವನ್ನು ಕನಕದಾಸರು ಉದ್ದೇಶ ಪೂರ್ವಕವಾಗಿ ವರ್ಣನೆಗಳ ಮೂಲಕ ಕಟ್ಟಿದ್ದಾರೆಯೇ? ಶೃಂಗಾರ ವರ್ಣನೆ ಮೂಲಕ ಸ್ವಂತಿಕೆಯನ್ನು ಮೆರೆದಿದ್ದಾರೆಯೆ ? ಈ ಅಭಿವ್ಯಕ್ತಿಕ್ರಮ ಅವರ ಪ್ರಬುದ್ಧಾ ವಸ್ಥೆಯ ಪರಿಣಾಮವೆ ? ಇವುಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ಇಲ್ಲಿನದು.

ದೇವೇಂದ್ರಕುಮಾರ ಹಕಾರಿ ಪ್ರಕಾರ 'ಮೋಹನ ತರಂಗಿಣಿ' ಯ ವರ್ಣನೆಗಳು "ಇಡಿಕಿರಿದ ಜೀವಿನ ಚಿತ್ರಗಳು, ವೈವಿಧ್ಯಪೂರ್ಣವಾದ ಪ್ರಸಂಗಗಳು, ಹತ್ತಾರು ಬಗೆಯ ಚೆಲ್ಲುಚೆಲ್ಲಾದ ಉನ್ನತ್ತ, ಉತ್ತೇಜಕ ಶೃಂಗಾರ ಚಿತ್ರಗಳು, ಅಂತಃಪುರ ಮೊದಲುಗೊಂಡು ಕೇರಿ ಕೇರಿಯ ಕಡು ವಿಲಾಸದ ಘಾಟು ಚಿತ್ರಗಳು, ಒಪ್ಪವಿಟ್ಟು ಗಟ್ಟಿಯಾದ ಯುದ್ಧದ ವರ್ಣನೆ ಮಾಲೆ ಮಾಲೆಯಾಗಿ ಈ ಕಾವ್ಯದಲ್ಲಿ ಬಂದು, ಇನ್ನೊಂದು ಜೀವಂತ ಮನೋಹರ ಕಾವ್ಯವನ್ನಾಗಿಸಿದೆ". (೧೯೯೦, ಪು. ೩೬೯-೩೭೦). ಈ ಕೃತಿನಿಷ್ಠ ದೃಷ್ಟಿಕೋನ ಕನಕದಾಸರ ಶೃಂಗಾರ ವರ್ಣನೆಯ ವೈಖರಿಯನ್ನು ಆಕ್ಷೇಪರಹಿತವಾಗಿ ಕಟ್ಟಿಕೊಡುತ್ತದೆ. ಕನಕದಾಸರು ಶೃಂಗಾರ ಜೀವನವನ್ನು ಕಟ್ಟಿಕೊಡುವ ಶೈಲಿ ಸಾಂಪ್ರದಾಯಿಕ ಪಂಡಿತರಿಗೆ ಅಪಥ್ಯವಾಗಿರುವುದನ್ನು ಬೆಟಗೇರಿ ವ್ಯಕ್ತಪಡಿಸಿದ್ದಾರೆ. 'ಮೋಹನ ತರಂಗಿಣಿ'ಯ ಪಠ್ಯಭಾಗಕ್ಕೆ ಕಂಡುಬಂದ ಪ್ರತಿರೋಧ ಸಾಂಪ್ರದಾಯಿಕ ಪಂಡಿತರ ಅಭಿಪ್ರಾಯ ಇಂದಿಗೂ ಚಾಲ್ತಿಯಲ್ಲಿರುವುದರ ಸೂಚಕವಾಗಿದೆ. ಹಾಗಾಗಿ ಈ ಕಾವ್ಯ ಓದಲು ಅರ್ಹವೆ? ಅನರ್ಹವೆ? ಕನಕದಾಸರ ಬಿಚ್ಚುನುಡಿಗಳ ಶೃಂಗಾರ ವರ್ಣನೆ ಕಲಾಭಿವ್ಯಕ್ತಿಯ ಭಾಗವೇ? ಶೃಂಗಾರ ವರ್ಣನೆಯ ಪ್ರಕ್ರಿಯೆ ಮತ್ತು ನೆಲೆ ಯಾವುದು ? ಈ ಪ್ರಶ್ನೆಗಳಿಗೆ ಹುಡುಕಿಕೊಳ್ಳುವ ಉತ್ತರದ ಆಧಾರದ ಮೇಲೆ ಈ ಕೃತಿಯ ಓದಿನ ಯೋಗ್ಯತೆ ನಿಂತಿದೆಯೆ? ಶೀಲ-ಅಶ್ಲೀಲಗಳ ನೆಲೆ ಯಾವುದು ? ಅದನ್ನು ಖಚಿತಪಡಿಸಲು ಸಾಧ್ಯವೆ?

'ಮೋಹನ ತರಂಗಿಣಿ'ಯಲ್ಲಿರುವ ಶೃಂಗಾರ ವರ್ಣನೆಯ ಚೌಚಿತ್ಯವನ್ನು ಕಂಡುಕೊಳ್ಳುವುದೆ ಇಲ್ಲಿಯ ಮಿತಿಯೂ ಉದ್ದೇಶವೂ ಆಗಿದೆ. ಇದನ್ನು ೧. ಚಾರಿತ್ರಿಕ, ಮತ್ತು ೨. ಸಮಾಜ ಸುಧಾರಕ ನೆಲೆಗಳಿಂದ ನೋಡಬಹುದು.

೧. ಚಾರಿತ್ರಿಕ ನೆಲೆ

'ಮೋಹನ ತರಂಗಿಣಿ'ಯು ಕಥಾಚೌಕಟ್ಟು ಪುರಾಣ ಜಗತ್ತಿಗೆ ಸೇರಿದ್ದು. ರಾಮಾಯಣ ಮತ್ತು ಶಿವ ಪುರಾಣಗಳ 'ಮನ್ಮಥ ಪ್ರಸಂಗ, ವಿಷ್ಣು ಪುರಾಣ ಮತ್ತು ಭಾಗವತಗಳಲ್ಲಿರುವ 'ಶಂಭರಾಸುರ ವಧೆ' ಮತ್ತು 'ಬಾಣಾಸುರ ವಧೆ - ಉಷಾನಿರುದ್ಧರ ವಿವಾಹ ಪ್ರಸಂಗ'ಗಳನ್ನು ಇಲ್ಲಿ ಒಟ್ಟಾಗಿ ಸೇರಿಸಿ ಕಥೆಯ ಹಂದರ ಹೆಣೆಯಲಾಗಿದೆ. ಹೀಗಿದೊಂದು ಪೌರಾಣಿಕ ಕಾವ್ಯವಾಗಿದೆ. ಕಾವ್ಯದ ಪೀಠಿಕೆಯಲ್ಲಿ ಇದನ್ನು 'ಕೃಷ್ಣ ಚರಿತೆ'ಯೆಂದು ಕರೆಯಲಾಗಿದ್ದು, ಇದು ಕನಕದಾಸರ ಇಷ್ಟದೈವವಾದ ಶ್ರೀಕೃಷ್ಣ ಕಥೆಯೂ ಆತನ ಸಮಕಾಲೀನ ದೊರೆಯಾದ ಶ್ರೀಕೃಷ್ಣ ದೇವರಾಯನ ಚರಿತೆಯೂ ಆಗಿ ಮೇಳವಿಸಿದೆ. ಈ ಕಾವ್ಯದ ಕಥೆ ಶ್ರೀಕೃಷ್ಣ ಮತ್ತು ಅವನ ಮಗ ಮನ್ಮಥ/ಪ್ರದ್ಯುಮ್ನ, ಪ್ರದ್ಯುಮ್ನನ ಮಗ ಅನಿರುದ್ಧರ ಕೌಟುಂಬಿಕ ಅಥವಾ ವಿವಾಹ ಸಮಸ್ಯೆಗೆ ಸಂಬಂಧಿಸಿದ್ದು, ಶ್ರೀಕೃಷ್ಣನ ಕುಟುಂಬದ ಭಾಗವಾಗಿದೆ. ಹಾಗಾಗಿಯೆ ಇದನ್ನು ಕೌಟುಂಬಿಕ ಕಥೆಯೆಂದು ಕರೆಯಬಹುದು.

ಈ ಕಾವ್ಯದ ವರ್ಣನೆಗಳು ಕನಕದಾಸರ ಸಮಕಾಲೀನ ಸಮಾಜದ ವರ್ಣನೆಗಾಗಿ ಹೇಗೆ ಮೂಡಿವೆ ಎಂದು ಬೆಟಗೇರಿ ಕೃಷ್ಣಶರ್ಮ ಅವರು ಸಮರ್ಥವಾಗಿ ತೋರಿಸಿಕೊಟ್ಟಿದ್ದಾರೆ. ಇದು ವಿಜಯನಗರ ಸಾಮ್ರಾಜ್ಯದ ಶ್ರೀಕೃಷ್ಣದೇವರಾಯನ ಕಾಲದ ಸಾಮಾಜಿಕ ಚರಿತ್ರೆಯ ನೆಲೆಯನ್ನು ಪರಿಚಯಿಸುತ್ತದೆ. ಅಂದಿನ ಕಾಲದ ಜನಜೀವನ, ಪ್ರಚಲಿತ ಪರಿಸ್ಥಿತಿ ಕಲ್ಪಿತ ಲೋಕದ ಭಾವವಾಗಿರದೆ ತನ್ನ ಸುತ್ತಲ ಜಗತ್ತಿನ ಭಾಗವಾಗಿದೆ ಎಂದು ಕಾಣಿಸಿದೆ. ಇಲ್ಲಿ ಬರುವ ವರ್ಣನೆಗಳನ್ನು ಶೃಂಗಾರ, ವೀರ, ಕರುಣ-ಭಕ್ತಿ ರಸಗಳೆಂದು ಗುರುತಿಸಲಾಗಿದೆ. ವೀರತ್ವ ಮತ್ತು ಕರುಣೆ ಮಧ್ಯಕಾಲೀನ ಯುಗದ ಜೀವನ ಮೌಲ್ಯವಾಗಿದೆ. 'ಮೋಹನ ತರಂಗಿಣಿ'ಯಲ್ಲಿ ವೀರ ಮತ್ತು ಕರುಣ ರಸಗಳಿದ್ದರೂ ಶೃಂಗಾರ ಪ್ರಧಾನವಾಗಿದೆ. ಇದೇ ರೀತಿ ರತ್ನಾಕರವರ್ಣಿ ತನ್ನ 'ಭರತೇಶ ವೈಭವ'ದಲ್ಲೂ ಭೋಗ ಜೀವನದ ಪ್ರಾಧಾನ್ಯತೆಯನ್ನು ಚಿತ್ರಿಸಿದ್ದಾನೆ. ಪುರಂದರದಾಸರ ಕೀರ್ತನೆಗಳಲ್ಲಿ ಕಡು ಶೃಂಗಾರ/ಭೋಗ ಜೀವನದ ಚಿತ್ರಣ ಮತ್ತು ಅದರ ನಿರಾಕರಣ ನೋಡಬಹುದು. ಅದೇ ರೀತಿ ಕನಕದಾಸರ ಕೀರ್ತನೆಗಳಲ್ಲೂ ಇಂಥ ಚಿತ್ರ ನಮಗೆ ಕಾಣಸಿಗುತ್ತದೆ. ಉದಾ: 'ಕಲಿಯುಗದ ಮಹಿಮೆಯನ್ನು ಕಂಡಷ್ಟು ಪೇಳುವೆನು' ಎಂಬ ಕೀರ್ತನೆಯ ಚರಣವೊಂದನ್ನು ನೋಡಬಹುದು.

ಪತಿವ್ರತೆಯರೆಂಬುವರು ಶತ ಸಹಸ್ರಕೊಬ್ಬರು
ಮೀತಿಮೀರಿ ಇಹರಯ್ಯ ಇತರ ಜನರು
ಮತಿಗೊಟ್ಟು ಮನಸೋತು ಅನ್ಯ ಪುರುಷರ ಕೂಡಿ
ಗತಿಗೊಟ್ಟು ಹೋಗುವರು ಮೂರು ತೊರೆದು (ಸುಧಾಕರ, ಪು. ೩೭೭-೩೭೮)

ಕುಟುಂಬದ ಪರಿಧಿಯಲ್ಲಿ ಸ್ತ್ರೀ-ಪುರುಷರಿಬ್ಬರಿಗೂ ಲೈಂಗಿಕ ಜೀವನದ ನೈತಿಕ ನೆಲೆ ಇಲ್ಲದಿದ್ದುದನ್ನು ಕನಕದಾಸರು ಸೂಚಿಸಿದ್ದಾರೆ. ಸಮಕಾಲೀನ ಸಮಾಜದ ಸ್ತ್ರೀ-ಪುರುಷರಿಬ್ಬರೂ ಸಮಾನರಾಗಿ ವಿವಾಹೇತರ ಸಂಬಂಧಗಳಲ್ಲಿ ಆಸಕ್ತರಾಗಿದ್ದರೆಂದು ಕಾಣಿಸಿದ್ದಾರೆ. ಅಂದಿನ ಜೀವನ ಮೌಲ್ಯವಾಗಿದ್ದ ಶೃಂಗಾರ ಜೀವನವನ್ನು ಅಪಮೌಲ್ಯೀಕರಿಸುವ ಪ್ರಕ್ರಿಯೆಯಲ್ಲಿ ತೊಡಗಿದ್ದಾರೆ. ಇದರಿಂದ ಕನಕದಾಸರ ಕಾಲದಲ್ಲಿ ಶೃಂಗಾರವೆ ಜೀವನದ ಪ್ರಧಾನ ಪಾತ್ರವಾಗಿತ್ತೆಂದು ತಿಳಿದುಬರುತ್ತದೆ. ಅಂದಿನ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಮೇಲುವರ್ಗಗಳು ತಮ್ಮ ಮೋಜು, ಘನತೆ, ಪ್ರತಿಷ್ಠೆಗಳಿಗಾಗಿ ಶೃಂಗಾರ ಜೀವನಕ್ಕೆ ಆದ್ಯತೆ ನೀಡಿದ್ದು, ಒಬ್ಬರಿಗಿಂತ ಹೆಚ್ಚು ಪತ್ನಿಯರನ್ನು ಹೊಂದಿರುತ್ತಿದ್ದರು. ಕುಟುಂಬದ ಆಚೆಗೂ ಶೃಂಗಾರ ಜೀವನ ನಡೆಸಲು ಸೂಕ್ತ ಸಾಮಾಜಿಕ ವ್ಯವಸ್ಥೆ ರೂಪಿಸಿಕೊಂಡಿದ್ದರು. ಇದಕ್ಕೆ ಪೂರಕವಾಗಿ ವಾರನಾರಿಯರು, ದೇವದಾಸಿಯರು ಮತ್ತು ವೇಶ್ಯೆಯರ ಜೀವನ ವ್ಯವಸ್ಥೆ ರೂಪುಗೊಂಡಿದ್ದ ಬಗ್ಗೆ ಚರಿತ್ರೆಯ ಪುಟಗಳಲ್ಲಿ ದಾಖಲಾಗಿದೆ. ಈ ಹಿನ್ನೆಲೆಯಲ್ಲಿ 'ಮೋಹನ ತರಂಗಿಣಿ'ಯ ಶೃಂಗಾರ ವರ್ಣನೆಯನ್ನು ನೋಡಬಹುದು. ಸೌರಾಷ್ಟ್ರ ವರ್ಣನೆ ಸಂಧಿಯ ಶೃಂಗಾರ ವರ್ಣನೆಯನ್ನು ಮಾತ್ರ (ಪುಟಗಳ ಮಿತಿ ಗಮನಿಸಿ) ಇಲ್ಲಿ ಉಲ್ಲೇಖಿಸಲಾಗಿದೆ:

ಕುಟಿಲ ಕುಂತಳದೊಳು ಮಧುಪಾನ ತೊಂಡೊ ವ
ಣ್ಣುಟಿಯೊಳು ಕಠಿನ ಕಾಂತೆಯರ
ಘಟಕುಚದೊಳಗಲ್ಲದೀ ನುಡಿಗಳು ಸಂ
ಘಟಿಸವು ಸೌರಾಷ್ಟ್ರದಲ್ಲಿ || ೨. ೨೪

ಹಿಡಿವರು ವಾರನಾರಿಯರ ಬಲ್ಮೊಲೆಗಳ
ಕಡಿವರು ಚೊಂದುಟಿಗಳನು
ಉಡಿಗೆಯ ಸುಲಿವರು ಪಲ್ಲವಾಧರೆಯರ
ಪೊಡವಿಯೊಳತಿಖಳರಿಲ್ಲ || ೨. ೨೫

ಅಂಬರದಲಿ ಪ್ರತಿಬಿಂಬಿಸುತಿಹ ಕುಚ
ಕುಂಭ ತತ್ಕುಂಭವೆಂಬಂತೆ
ಕುಂಭಾನ್ವಿತ ಕರಕಕಮಲದಿ ಸ್ತ್ರೀ ನಿಕು
ರುಂಬ ನೀರ್ವಿಡಿದು ನಿಂದಿಹುದು || ೨. ೨೯

ಕಳಶಸ್ತನ ಬಾಹುಮೂಲ ನಿರ್ಮಲಿನ ಕೌಂ
ಕುಳ ತೋಳ ನೆಗಹಿ ನೀರೆರೆಯೆ
ಗಳತೃಷ್ಣ ಪರಿದೊಡಮೀಂಟುವ ನೆವದಿ ಹೆಂ
ಗಳ ಮುದ್ದು ಮೊಗವ ನಿಟ್ಟಿಪರು || ೨. ೩೦

ಕಡುರೂಪು ಕಣ್ಗೆ ಮೈಗಂಪು ಮೂಗಿಗೆ ಮೆ
ಲ್ನುಡಿ ಕೊಡಕೆಗೆ ಹೆಂಗಳೆರೆವ
ಕುಡಿನೀರಿನಿಂಪು ಜಿಹ್ವೆಗೆ ಶೈತ್ಯ ತನುವಿಂ
ಗಿಡಿದುದುದ ಬಳಲಿ ಬಂದವರಿಗೆ || ೨. ೩೨

ಮಡಿಗಳ ಕಾವ ಪುಳಿಂದಿನಿಯರ ರೂಪ
ಪಡಿಗಟ್ಟಬಲ್ಲವರಾರು
ಮುಡಿ ತೋರಮೊಲೆಯ ಭಾರಗಳಿಂದ ಉಂಗುರ
ವಿಡಿ ನಡು ಬಳಕುವಂತಿಹರು || ೨. ೪೨

ಕಾವನ ಮುಂಗೈಯಗಿಳಿಯಂತೆ ನುಡಿದುರೆ
ಕಾವನ ಬಿಲ್ಗೋಲ ಹಿಡಿದು
ಕಾವನ ರಥರಾಜಿ ಭುಂಜಿಸದಂತೆ ಕೈಗಾವ
ಪಾಮರಿಯರೊಪ್ಪಿದರು || ೨. ೪೩

ಬಾಲೆಯ ಕೊರಲು ಹೊನ್ನೊರಲು ಸುಸ್ವರ ಕಣೆ
ಲೀಲೆಗತ್ತರಿ ಕುರುಳ್ಕೊಂಕು
ಪಾಲಿರ್ದ ಕುಚ ಕೊಪ್ಪರಿಗೆ ನಿಟ್ಟೆಸಳ್ಗ
ಣ್ಣಾಲೆಂದು ಮನೆಗಳೊಪ್ಪಿದುವು || ೨. ೫೦ (ಜಿ.ಜಿ.ಮಂಜುನಾಥನ್)

ಈ ಮೊದಲು ಉಲ್ಲೇಖಿಸಿದ ಕನಕದಾಸರ ಕೀರ್ತನೆಯಲ್ಲಿ ಅವರು ತಮ್ಮ ಕಾಲದ ಜನರ ನಡತೆಯನ್ನು ತಿದ್ದುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಈ ಉದ್ದೇಶ ಕೀರ್ತನೆಯ ಪ್ರತಿ ಸಾಲು, ಪದದಲ್ಲೂ ನೇರವಾಗಿ, ಸರಳವಾಗಿ ಪ್ರಕಟವಾಗಿದೆ. ಕೀರ್ತನೆಯ ಭಾವಾರ್ಥ ಹಾದಿಹೋಕರ ಕಿವಿಗಳನ್ನು ತಲುಪಿ ಅವರಿಗೆ ಬೋಧೆ ಉಂಟು ಮಾಡುವ ಮಿತಿಗೊಳಪಟ್ಟಿರುವುದರಿಂದ ನೀತಿ ನಿರೂಪಣೆ ಮಾಡುವ ಶೈಲಿಯಲ್ಲಿದೆ. 'ಮೋಹನ ತರಂಗಿಣಿ'ಯಲ್ಲಿ ಶೃಂಗಾರ ವರ್ಣನೆ ಅಷ್ಟಾದಶ ವರ್ಣನೆಯ ಭಾಗವಾಗಿದೆ. ಪಂಡಿತ ಪಾಮರರಿಬ್ಬರಿಗೂ ತಲುಪುವ ಉದ್ದೇಶ ಹೊದಿದೆ. ತನ್ನ ಸಮಕಾಲೀನ ಸಮಾಜದ ಯಥಾವತ್ತಾದ ಮನಸ್ಥಿತಿಯನ್ನು ಆ ಸಮಾಜದ ಜೀವನ ಮೌಲ್ಯಗಳನ್ನು ಅನುಸರಿಸಿ ರಂಜಿಸುವ ರೀತಿಯಲ್ಲಿ ಮೂಡಿದೆ. ಸಮಕಾಲೀನ ಸಮಾಜದ ಮನಸ್ಥಿತಿಯನ್ನು ಅದೇ ಕಾಲದ ಜನಮನ ರಂಜಿಸುವ ಶೈಲಿ ಅಂದಿನವರಿಗೆ ಅಶ್ಲೀಲಕರವಾಗಿರಲಿಕ್ಕಿಲ್ಲ. ಕಾರಣ ಅದು ಅಂದಿನ ಜೀವನಮೌಲ್ಯವಾಗಿತ್ತು. ಅಂದಿನ ಜೀವನದ ಭಾಗವಾಗಿದ್ದ ಜೀವನ ಮೌಲ್ಯಗಳು ಅಪರಿಚಿತ ಅಥವಾ ಅಸೂಹ್ಯವಾಗಿರದೆ ಅನ್ಯಭಾವ ಉತ್ಪತ್ತಿಗೆ ಕಾರಣವಾಗಲು ಸಾಧ್ಯವಿಲ್ಲ. ಆದರೆ ಅಂದಿನ ಕಾಲಕ್ಕಿಂತ ಭಿನ್ನ ಜೀವನಮೌಲ್ಯ ಹಾಗೂ ಕಾಲಘಟ್ಟದಲ್ಲಿರುವ ಜನರಿಗೆ ಈ ವರ್ಣನೆ ಮನಸ್ಸಿಗೆ ಅಹಿತ ಉಂಟು ಮಾಡುವುದು. ಆಧುನಿಕ ಸಮಾಜದ ಸಂಪ್ರದಾಯ ಮನಸ್ಸಿಗೆ ಈ ವರ್ಣನೆ ಅದಕ್ಕೆ ವಿರುದ್ಧವಾದ ಆಚಾರ ವಿಚಾರಗಳನ್ನು ಒಳಗೊಂಡಂತೆ ಕಾಣುತ್ತದೆ ಮತ್ತು ಅಸಹ್ಯ ಮತ್ತು ಜುಗುಪ್ಸೆ ಭಾವನೆಯನ್ನೂ, ಮುಟ್ಟಬಾರದ, ಓದಬಾರದ ನಿರಾಕರಣ ಮತ್ತು

ನಿಷೇಧ ಭಾವನೆಯನ್ನು ಬೆಳೆಸುವುದು ಸಹಜವಾಗಿದೆ. ವಿಪರ್ಯಾಸದ ಸಂಗತಿಯೆಂದರೆ ಮಧ್ಯಕಾಲೀನ ಜೀವನ ಮೌಲ್ಯ ಮತ್ತು ಸಮಾಜ ವ್ಯವಸ್ಥೆಯನ್ನು ರಾಜ ಮತ್ತು ಪುರೋಹಿತ ವ್ಯವಸ್ಥೆಯೆ ಪ್ರಧಾನವಾಗಿ ರೂಪಿಸಿದ್ದು, ತನ್ನ ಹಿಂದಿನ ವ್ಯವಸ್ಥೆಯನ್ನು ಬದಲಾದ ಕಾಲಘಟ್ಟದಲ್ಲಿ ಅದೇ ಸಂಪ್ರದಾಯ ಮನಸ್ಸು ನಿರಾಕರಣ ಮನೋಭಾವ ಬೆಳೆಸಿಕೊಂಡು ಅದನ್ನು ತನ್ನದಲ್ಲದ್ದೆಂದು ಸಾಬೀತುಪಡಿಸಲು ಮುಂದೆ ನಿಂತಿರುವುದು. ಈ ಮನಸ್ಥಿತಿ 'ಮೋಹನ ತರಂಗಿಣಿ' ಸಂಬಂಧದಲ್ಲೂ ಕೆಲಸ ಮಾಡಿದೆ. ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದಲ್ಲಿ ಭಾರತೀಯ ಸಮಾಜದ ಮೇಲುವರ್ಗ ಮತ್ತು ಬ್ರಿಟಿಷರು ರೂಪಿಸಿದ ಚರಿತ್ರೆಗಿಂತ ಇದು ಭಿನ್ನ ಬಗೆಯ ಜೀವನ ವಿಧಾನ ಮತ್ತು ಚರಿತ್ರೆಯನ್ನು ಒಳಗೊಂಡಿದೆ.

ಕೀರ್ತನೆಯಲ್ಲಿ ಎದ್ದು ಕಾಣುವ ಜನಮನ ತಿದ್ದುವ ಧೋರಣೆ ಮಹಾಕಾವ್ಯದ ವಿಸ್ತಾರವಾದ ಚೌಕಟ್ಟಿನಲ್ಲಿ ಇರಲು ಸಾಧ್ಯವಿಲ್ಲ. ಕೀರ್ತನೆ ಹೇಳಬೇಕಾದ ಉದ್ದೇಶವನ್ನು ಹಲವು ಚರಣಗಳಲ್ಲಿ ನೇರವಾಗಿ ಮತ್ತು ಸರಳವಾಗಿ ಮುಟ್ಟಿಸುವ ಒತ್ತಡ ಮತ್ತು ತುತ್ತಿಗೆ ಒಳಪಟ್ಟಿದೆ. ವರ್ಣಕ ಮಹಾಕಾವ್ಯವಾದ 'ಮೋಹನ ತರಂಗಿಣಿ'ಯಲ್ಲಿ ಕವಿ ಬರಿಯ ವರ್ಣನೆಯ ಹಂತದಲ್ಲೆ ತನ್ನ ಆಶಯವನ್ನು ಪ್ರಕಟಪಡಿಸುವ ಇರಾದೆ ಇಟ್ಟು ಕೊಳ್ಳಲು ಸಾಧ್ಯವಿಲ್ಲ. ವರ್ಣನೆಗಳೆಲ್ಲ ಕಾವ್ಯದ ಮೇಲುಮೈಯಾಗಿದ್ದು, ಓದುವ ವರ್ಗದ ರಂಜನೆಯನ್ನೆ ಮುಖ್ಯವಾಗಿರಿಸಿಕೊಂಡಿರುತ್ತದೆ. ಕಾವ್ಯದ ಉದ್ದೇಶಿತ ನಿಲುವು ಕಾವ್ಯದ ಆಶಯಗಳೊಂದಿಗೆ ತಳುಕು ಹಾಕಿಕೊಂಡಿರುವುದರಿಂದ ಅದು ವರ್ಣನೆಗಳಲ್ಲಿ ಪ್ರಕಟವಾಗಬಹುದು. ಕಾವ್ಯಬಂಧ ಮೊದಲಾದ ಅನ್ಯ ರೂಪದಲ್ಲಿ ಪ್ರಕಟವಾಗ ಬಹುದು. ಅದರ ಔಚಿತ್ಯವನ್ನು ಕವಿ ತನ್ನ ಕಲಾವಂತಿಕೆಯ ದೃಷ್ಟಿಕೋನದಿಂದ ನಿರ್ಧರಿಸುತ್ತಾನೆ.

ಆದರೂ ಕನಕದಾಸರು ಸಮಕಾಲೀನ ಜೀವನದ ವರ್ಣನೆಯನ್ನೇ ತಮ್ಮ ಕಾವ್ಯದ ಪ್ರಧಾನ ಅಭಿವ್ಯಕ್ತಿ ಕ್ರಮವನ್ನಾಗಿ ಮಾಡಿಕೊಂಡಿದ್ದಾರೆ. ಬೆಟಗೇರಿಯವರು ಇಟಲಿಯ ನಿಕೊಲೊಕೊಂಟಿ ವರ್ಣಿಸಿರುವ ವಿಜಯನಗರದ ಉತ್ಸವ ಹಬ್ಬಗಳು ಮತ್ತು ಅಂದಿನ ಕಾಮನಹಬ್ಬಗಳನ್ನು ಮೋಹನ ತರಂಗಿಣಿಯ ವಸಂತೋತ್ಸವದೊಂದಿಗೆ ಸಮೀಕರಿಸಿ ದ್ದಾರೆ. ದೇಶ-ಪುರ ವರ್ಣನೆಯ ಭಾಗವಾಗಿ ಬ್ರಾಹ್ಮಣ ಕೇರಿ ವರ್ಣನೆ, ವ್ಯಾಪಾರೀ ಅಂಗಡಿಗಳ ವರ್ಣನೆ, ಕೋಟೆಕೊತ್ತಳಗಳ ವರ್ಣನೆಗಳೆಲ್ಲ ವಿಜಯನಗರದ ವರ್ಣನೆಯೆ ಆಗಿದೆ ಎಂದು ತೋರಿಸಿಕೊಟ್ಟಿದ್ದಾರೆ. ಹಾಗೆಯೇ ಕಾವ್ಯದ ವಸ್ತುವಾದ ಶೃಂಗಾರ ಜೀವನವೂ ಸಮಕಾಲೀನ ಜೀವನಕ್ಕೆ ಸಂಬಂಧಿಸಿದೆ. ಸ್ತ್ರೀ-ಪುರುಷರ ಪ್ರೇಮ-ಕಾಮ-ಮೋಹ ಭಾವ ಜೀವನ ರೂಪುಗೊಂಡಿರುವ ಮತ್ತು ರೂಪುಗೊಳ್ಳಬೇಕಾದ ಕ್ರಮವನ್ನು ಶ್ರೀಕೃಷ್ಣನ ಕುಟುಂಬದ ಸದಸ್ಯರ ಮತ್ತು ಶ್ರೀಕೃಷ್ಣದೇವರಾಯನ ಕಾಲದ ಜನಜೀವನದ ಸಮಸ್ಯೆಯಾಗಿ ಕಂಡರಿಸಲಾಗಿದೆ. ಕಾವ್ಯದಲ್ಲಿ ಹೆಜ್ಜೆ ಹೆಜ್ಜೆಗೂ ವರ್ಣಿತವಾಗಿರುವ

ಶೃಂಗಾರ ವರ್ಣನೆ ಸಮಕಾಲೀನ ಜೀವನದ ಭಾಗವಾಗಿದೆಯೆಂದು ಮನವರಿಕೆ ಯಾಗುತ್ತದೆ. ಹೀಗಿದ್ದು ಪುರಾಣ ಕಥೆಗಳ ಕಲ್ಪಿತ ಕಥಾ ಹಂದರವುಳ್ಳ ಕಲ್ಪಿತ ವರ್ಣನೆ ಗಳನ್ನೊಳಗೊಂಡ ಕವಿಯ ಶೃಂಗಾರ ಕಲ್ಪನೆಯನ್ನು ಚಿತ್ರಿಸದೆ ತನ್ನ ಸಮಕಾಲೀನ ಶೃಂಗಾರ ಜೀವನವನ್ನು ಕಲಾಕೃತಿಯಾಗಿ ಪಡಿಮೂಡಿಸಿದೆ. ಈ ಮೂಲಕ ಕವಿ ತನ್ನ ಸಮಕಾಲೀನ ಸಮಾಜ ವಿಶೇಷವಾಗಿ ಸ್ತ್ರೀ-ಪುರುಷ ಸಂಬಂಧ ಮತ್ತು ಜನ ಸಮುದಾಯಗಳ ಕುರಿತು ಸ್ಪಂದಿಸಿದ, ಚಿಂತಿಸಿದ ಕ್ರಮವನ್ನು ಕಟ್ಟಿಕೊಡುತ್ತದೆ.

೨. ಸಮಾಜ ಸುಧಾರಕ ನೆಲೆ

'ಮೋಹನ ತರಂಗಿಣಿ' ಕತೆಯನ್ನು ಒಂದು ಕೌಟುಂಬಿಕ ಕಥೆಯೆಂದು ಈಗಾಗಲೆ ಗುರುತಿಸಲಾಗಿದೆ. ಇದೇ ಕತೆಯನ್ನು ಅದರ ಉದ್ದೇಶ ಮತ್ತು ಬಂಧಕ್ಕೆ ಅನುಗುಣವಾಗಿ ಕೆಲವೇ ಮಾತುಗಳಲ್ಲಿ ಹೀಗೆ ಹೇಳಬಹುದು: ದೇವತೆಗಳ ಬೋಧೆಗೆ ಅನುಗುಣವಾಗಿ ಮನ್ಮಥನು ಶಿವನ ಮೇಲೆ ದಂಡೆತ್ತಿ ಹೋಗಿ ಯುದ್ಧ ಮಾಡಿ ಶಿವನಿಂದ ಸುಟ್ಟು ಹೋಗುವನು. ರತಿ ಹೆಣ್ಣಿನ ಮುತ್ತೈದೆತನವನ್ನು ಪ್ರತಿಪಾದಿಸಿ ಪಾರ್ವತಿಯನ್ನು ಒಪ್ಪಿಸು ವಳು. ಶಿವನು ರತಿಯನ್ನು ಸಂತೈಸಿ ಹೆಣ್ಣಿಗೆ ವೈಧವ್ಯ ಲಕ್ಷಣವಲ್ಲವೆಂದು ಹರಸು ವನು. ಮನ್ಮಥನಿಗೆ ಮನಸಿಜನಾಗಿ ಜೀವಿಸಲು ಅವಕಾಶಕೊಟ್ಟು ರತಿಗೆ ಮುತ್ತೈದೆತನ ನೀಡು ವನು. ಇದರ ಪರಿಣಾಮವಾಗಿ ಮನ್ಮಥ ಕೃಷ್ಣ-ರುಕ್ಮಿಣಿಯರಲ್ಲಿ ಪ್ರದ್ಯುಮ್ನನಾಗಿ ಹುಟ್ಟುವನು. ಗಂಡನಿಲ್ಲದ ರತಿಯನ್ನು ಶಂಬರಾಸುರ ಬಯಸುವನು. ರತಿ ತನ್ನ ಪತಿವ್ರತೆ ತನವನ್ನು ಪ್ರತಿಪಾದಿಸುವಳು. ಶಂಬರಾಸುರನ ಹೆಂಡತಿ ತನ್ನ ಗಂಡನಿಗೆ ಗಂಡನುಳ್ಳವಳ ಆಸೆ ಮಾಡಬೇಡವೆಂದು ಬುದ್ಧಿ ಹೇಳುವಳು. ಮಗು ಪ್ರದ್ಯುಮ್ನನನ್ನು ಕೊಲ್ಲಲು ಶಂಬರಾಸುರನನ್ನು ನಾರದ ಪ್ರಚೋದಿಸಿ ಅದನ್ನು ಅಪಹರಿಸುವಂತೆ ಮಾಡುವನು. ಅವನು ಮಗುವನ್ನು ಸಮುದ್ರದ ಮೇಲೆ ಹೊತ್ತೊಯ್ಯುವಾಗ ಕೃಷ್ಣನಿಂದ ಪ್ರೇರಿತನಾಗಿ ಅನ್ಯಮನಸ್ಕ ಸ್ಥಿತಿಯಲ್ಲಿ ಮಗುವನ್ನು ಸಮುದ್ರದಲ್ಲಿ ಚೆಲ್ಲುವನು. ಆ ಮಗನನ್ನು ನುಂಗಿದ ಸಮುದ್ರದ ಮೀನನ್ನು ಹಿಡಿದ ಬೆಸ್ತನೊಬ್ಬ ಅದನ್ನು ತಂದು ಶಂಬರಾಸುರನಿಗೆ ಕಾಣಿಕೆಯಾಗಿ ಕೊಡುವನು. ಶಂಬರಾಸುರನ ತೊತ್ತಾಗಿದ್ದ ರತಿ ಅದರ ಅಡುಗೆ ಮಾಡಲು ಹೊಟ್ಟೆ ಬಗಿದಾಗ ಆ ಮಗುವನ್ನು ಕಾಣುವಳು. ಆ ಮಗುವೆ ಅವಳ ಪತಿಯೆಂದು ಅಶರೀರವಾಣಿಯಾಗುವುದು. ರತಿ ಆ ಮಗುವನ್ನು ಕಾಪಾಡಿ ಬೆಳೆಸಿ ಸಕಲ ವಿದ್ಯೆಗಳನ್ನು ನೀಡಿ ಶಂಬರಾಸುರನ ವಧೆ ಮಾಡಿಸುವಳು. ನಂತರದಲ್ಲಿ ಪ್ರದ್ಯುಮ್ನನೊಂದಿಗೆ ರತಿಯ ವಿವಾಹವಾಗುವುದು. ವಿವಾಹದ ಭಾಗವಾಗಿ ಮನೆ ತುಂಬಿಸಿಕೊಳ್ಳುವ ಮತ್ತು ಗರ್ಭದಾನ ಮಾಡುವ ಆಚರಣೆಗಳು ನಡೆಯುವುವು. ವಸಂತೋತ್ಸವ, ಜಲಕ್ರೀಡೆ ನಡೆದು ಅನಿರುದ್ಧನ ಜನನವಾಗುವುದು. ಅನಿರುದ್ಧನು ದೊಡ್ಡವನಾಗಿ ಬೆಳೆದು ಜಾರ ಚೋರ ರನ್ನು ಶಿಕ್ಷಿಸುವ

ಎನ್ನುವ ರೀತಿಯಲ್ಲಿ ನಗರ ಶೋಧನೆ ನಡೆಸುವನು. ಅನಂತರ ಬೇಟೆಗೆ ಹೊರಟು ನತಜನರನ್ನು ಉನ್ನತದತ್ತ ಕೊಂಡೊಯ್ಯುವ ವೀರನೆಂಬ ಹೊಗಳಿಕೆಗೆ ಪಾತ್ರನಾಗುವನು.

ಶೋಣಿತಪುರದ ಬಾಣಾಸುರ ಶಿವಭಕ್ತ. ಅವನೊಬ್ಬ ಶೃಂಗಾರಲೋಲ ಮತ್ತು ಅಪ್ರತಿಮ ಭಕ್ತ. ಅವನಿಗೆ ಉಷಾ ಎಂಬ ಮಗಳು. ಅವಳು ಶಿವನಿಗೆ ಪ್ರಿಯಕರನನ್ನು ನೀಡುವಂತೆ ಕೋರಿ ವರ ಬೇಡುವಳು. ಕನಸಿನಲ್ಲಿ ಬಂದು ಮಿಲನವಾಗುವ ಪುರುಷನೇ ಅವಳ ಪ್ರಿಯಕರನೆಂದು ತಿಳಿಯುವುದು. ಉಷೆ ಈ ಕನಸು ಕಂಡಂದಿನಿಂದ ಪ್ರಿಯಕರನ ವಿಷಯದಲ್ಲಿ ಅವಳ ವಿರಹ ಹೆಚ್ಚುವುದು. ಅವಳು ಪ್ರಿಯಕರನ ಚಿತ್ರಪಟವನ್ನು ತಯಾರಿಸಿ, ಗೆಳತಿ ಚಿತ್ರಲೇಖೆಯ ಸಹಾಯದಿಂದ ಅವನನ್ನು ಪತ್ತೆ ಹಚ್ಚಿ ತನ್ನಲ್ಲಿಗೆ ಕರೆಸಿಕೊಳ್ಳುವಳು. ಅವರಿಬ್ಬರೂ ಏಕಾಂತ ನಿಲಯದಲ್ಲಿ ವಿವಾಹವಾಗುವರು. ಬಾಣಾಸುರನಿಗೆ ಈ ವಿಷಯ ತಿಳಿದು ಅನಿರುದ್ಧನ ಮೇಲೆ ಯುದ್ಧ ಮಾಡಲು ತನ್ನ ಮಂತ್ರಿ ಕುಂಭಾಂಡನನ್ನು ಕಳುಹಿಸುವನು. ನಂತರ ಕುಂಭಾಂಡ ಮತ್ತು ಅನಿರುದ್ಧರ ನಡುವೆ ಯುದ್ಧ ನಡೆದು ಬಾಣಾಸುರನು ಅನಿರುದ್ಧನನ್ನು ಬಂಧಿಸಿ ಸೆರೆಯಲ್ಲಿಡುವನು. ಸುದ್ದಿ ತಿಳಿದ ಶ್ರೀಕೃಷ್ಣ ಸೈನ್ಯಸಮೇತನಾಗಿ ದಂಡೆತ್ತಿ ಬಂದು ಯುದ್ಧ ಮಾಡುವನು. ಮೊದಲಿಗೆ ಹರಿ-ಹರರ ನಡುವೆ ಯುದ್ಧ ನಡೆಯುವುದು. ಅವರಿಬ್ಬರೂ ಯುದ್ಧದಲ್ಲಿ ಸಮಾನ ಬಲಶಾಲಿಯಾಗಿ ಸಮಾನತೆ ಮೆರೆಯುವರು. ನಂತರ ಶ್ರೀಕೃಷ್ಣ ಮತ್ತು ಬಾಣಾಸುರನ ನಡುವೆ ಯುದ್ಧ ನಡೆಯುವುದು. ಬಾಣಾಸುರನು ತನ್ನ ಮಗಳಾದ ಉಷಾದೇವಿಯನ್ನು ಅನಿರುದ್ಧನಿಗೆ ಕೊಟ್ಟು ವಿವಾಹ ಮಾಡಲು ಒಪ್ಪಿಕೊಂಡು ಶಿವಗಣ ಪದವಿಯನ್ನು ಪಡೆಯುವನು. ಶ್ರೀಕೃಷ್ಣನು ಉಷಾ ಅನಿರುದ್ಧರನ್ನು ಕರೆದುಕೊಂಡು ದ್ವಾರಕೆಗೆ ಬರುವನು.

ಈ ಕಥಾಬಂಧದಲ್ಲಿ ಶಿವನು ರತಿಯ ವೈಧವ್ಯವನ್ನು ನಿರಾಕರಿಸುವ ಚಿತ್ರ ಮತ್ತು ವಿಧವೆಯಾಗಿದ್ದ ರತಿ, ಕೃಷ್ಣನ ಮಗ ಪ್ರದ್ಯುಮ್ನನನ್ನು ಮರುಮದುವೆಯಾಗುವ ಸಂದರ್ಭ ಸೇರಿಕೊಂಡಿದೆ. ಗಂಡ ಸತ್ತ ಹೆಣ್ಣುಮಕ್ಕಳು ಮರುಮದುವೆಯಾಗದೆ ವಿಧವೆಯರಾಗುವುದು ಮತ್ತು ಅವರ ವಿವಾಹಕ್ಕೆ ಒತ್ತು ನೀಡುವ ಮೂಲಕ ಆದರ್ಶೀಕರಿಸಿದ್ದು ಕಾಣುತ್ತದೆ. ಗಂಡ ಸತ್ತ ಹೆಣ್ಣು ವಿಧವೆಯಲ್ಲವೆಂಬ ವಿಚಾರವನ್ನು ಶಿವನು ಎತ್ತಿ ಹಿಡಿದರೆ, ಅಂಥ ಹೆಣ್ಣುಮಕ್ಕಳ ಮರುಮದುವೆಗೆ ಶ್ರೀಕೃಷ್ಣನ ಮುಂದಾಳುತನ ವಹಿಸುತ್ತಾನೆ. ಗಂಡ ಸತ್ತ ಹೆಣ್ಣನ್ನು ತನ್ನ ಮಗನಿಗೆ ತಂದುಕೊಂಡು ಆದರ್ಶ ಮೆರೆಯುತ್ತಾನೆ. ಈ ಮೂಲಕ ಪುರುಷಪ್ರಧಾನ ಸಮಾಜದಲ್ಲಿ ನಲುಗುತ್ತಿರುವ ಹೆಣ್ಣಿನ ಜೀವನಕ್ಕೊಂದು ಹೊಸ ಬೆಳಕು ತರುವ ಪ್ರಯತ್ನ ಕಾಣುತ್ತದೆ. ಅಂದಿನ ಸಮಾಜದಲ್ಲಿ ವ್ಯಾಪಕವಾಗಿ ವಿಧವೆ ಮತ್ತು ವಿಧವಾ ವಿವಾಹ ವಿರೋಧ ಕಲ್ಪನೆ ಸಮಾಜದ ಮೇಲುವರ್ಗಗಳಲ್ಲಿ ರೂಢಿಯಲ್ಲಿದ್ದು, ಅದರ ಪ್ರಭಾವ ಸಮಾಜದ ಕೆಳವರ್ಗಗಳ ಮೇಲೂ ಆಗುತ್ತಿದ್ದಿರಬಹುದು. ಇದರ ಪರಿಣಾಮವಾಗಿ ಸಮಾಜದ ಎಲ್ಲ ಹೆಣ್ಣುಮಕ್ಕಳ ಕುರಿತ ಜೀವನ ಮೌಲ್ಯಗಳನ್ನು

ಬದಲಾಯಿಸುವ ಪ್ರಯತ್ನವನ್ನು ರೂಢಿಗತ ಪೌರಾಣಿಕ ಕಥೆಗಳ ಮರುಜೋಡಣೆ ಮಾಡಿದೆ. ಇದಕ್ಕಾಗಿ ವೈದಿಕ ದೈವಗಳಾದ ಹರಿ-ಹರನಿಗೆ ಮುಂಚೂಣಿಯ ಸ್ಥಾನ ನೀಡಿದೆ. ಅಂದು ಪ್ರಭಾವಶಾಲಿಗಳಾಗಿದ್ದ ಈ ವೈದಿಕ ದೈವಗಳೆ ಸಾಮಾಜಿಕ ಜೀವನ ಮೌಲ್ಯಗಳ ಬದಲಾವಣೆಗೆ ಮೂಲ ಕಾರಣಕರ್ತರೆಂದು ಬಿಂಬಿಸ ಲಾಗಿದೆ. ಜನಸಮುದಾಯಗಳ ಸುಪ್ತಮನದಲ್ಲಿರುವ ಹೆಣ್ಣಿನ ಪಾವಿತ್ರ್ಯ ಮತ್ತು ಸಂಕರ ಕುರಿತ ನಂಬಿಕೆಗಳನ್ನು ಪರಿಷ್ಕರಿಸುವ ಸಲುವಾಗಿ ವೈದಿಕ ದೈವಗಳ ಕೈಯಲ್ಲೆ ಈ ಆಚರಣೆಗಳು ರೂಢಿಗೆ ತರುವ ಕಥೆಯನ್ನು ಅಭಿವ್ಯಕ್ತಿಸಲಾಗಿದೆ. ಸಮಾಜದ ಕಟ್ಟುಪಾಡು ಗಳು ಮತ್ತು ಸ್ವೇಚ್ಛಾ ಪ್ರವೃತ್ತಿಗಳಿಂದ ಗಂಡ ಸತ್ತ ಹೆಣ್ಣು ಮಕ್ಕಳು ನರಳುತ್ತಿದ್ದು, ಗಂಡುಮಕ್ಕಳಂತೆ ಸಮಾನ ಪ್ರಕೃತಿ ಪ್ರವೃತ್ತಿ ಪಡೆದ ಇವರ ಬಾಳಿನ ಗೋಳಿಗೆ ಪರಿಹಾರ ಹುಡುಕಲು ಯತ್ನಿಸಲಾಗಿದೆ. ಹೆಣ್ಣುಮಕ್ಕಳಿಗೆ ಗಂಡ ಸತ್ತ ಮೇಲೆ ಮರುಮದುವೆಯಾಗಿ ಅವಕಾಶ ನೀಡದಿದ್ದಲ್ಲಿ ಸಾಮಾಜಿಕ ಸಮಸ್ಯೆಗಳು ಉಂಟಾಗಿ ಹೆಣ್ಣಿನ ಜೀವನ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೀನಾಯವಾಗುತ್ತದೆ. ಇದನ್ನು ತಪ್ಪಿಸಿ ಹೆಣ್ಣಿನ ಸಾಮಾಜಿಕ ಸ್ಥಿತಿ ಎತ್ತರಿಸುವ ಮತ್ತು ಸಮಾಜದ ಮನೋಸ್ವಾಸ್ಥ್ಯ ಬೆಳೆಸುವ ದೃಷ್ಟಿಯನ್ನು ಕನಕದಾಸರ ಈ ಕಾವ್ಯದಲ್ಲಿ ಕಾಣಬಹುದು. ಅದಕ್ಕಾಗಿ ಸಮಾಜ ಸುಧಾರಣೆಯ ಮೂಲ ಆಶಯವನ್ನು ವೈದಿಕ ದೈವಗಳ ಪುರಾಣ ಕಥೆಗಳ ಮರುಜೋಡಣೆಯಲ್ಲಿ ಕಂಡು ಅರಸಲಾಗಿದೆ.

ಶ್ರೀಕೃಷ್ಣ ಮೊಮ್ಮಗನೂ ವಿಧವಾ ವಿವಾಹವಾದ ರತಿಯ ಮಗನೂ ಆದ ಅನಿರುದ್ಧ ಈ ಪರಂಪರೆಯನ್ನು ಮುಂದುವರೆಸುವಂತೆ ನಗರ ಶೋಧನೆ ಮತ್ತು ಬೇಟೆಯ ವರ್ಣನೆ ಗಳು ಬಿಂಬಿಸುತ್ತವೆ. ರಾಜ್ಯ ಮತ್ತು ಸಮಾಜೋಭಿವೃದ್ಧಿ ಕಾರ್ಯವನ್ನು ರಾಜ್ಯದ ಮುಖ್ಯಸ್ಥ ನಾದ ರಾಜನೇ ಮಾಡಬೇಕಾದ ಕಾರ್ಯವಾಗಿದ್ದು, ರಾಜ್ಯದ ಪ್ರತಿನಿಧಿತ್ವ ಪಡೆದ ಯುವರಾಜ ಅನಿರುದ್ಧ ಜನರ ಸಮಸ್ಯೆಗಳನ್ನು ತಿಳಿಯಲು ನಗರಶೋಧ ಕಾರ್ಯ ಕೈಗೊಳ್ಳುತ್ತಾನೆ. ಸಾಮಾಜಿಕ ಸಮಸ್ಯೆಗಳ ಕೇಂದ್ರವಾದ ವೇಶ್ಯಾವಾಟಿಕೆಯ ಕೇರಿಗಳಲ್ಲಿ ಅವನ ಸಂಚಾರ ಸಾಗುತ್ತದೆ. ಅವನು ಜಾರ-ಚೋರರರನ್ನು ಶಿಕ್ಷಿಸುವ ರೀತಿಯಲ್ಲಿ ನಗರ ಶೋಧನೆ ನಡೆಸುತ್ತಾನೆ. ಜಾರ-ಚೋರರರು ಸಾಮಾಜಿಕ ಸಮಸ್ಯೆಗಳ ಮೂಲ ವ್ಯಕ್ತಿಗಳಾಗಿದ್ದು, ಇದರಿಂದ ಹೆಣ್ಣಿನ ಸ್ಥಿತಿ ಕೇವಲವಾಗುವುದನ್ನು ತಪ್ಪಿಸುವ ಯೋಜನೆ ಹೊಂದಿರುವುದು ಕಾಣುವುದು.

ವರ್ಣನೆಯ ಭಾಗದಲ್ಲಿ ಅನಿರುದ್ಧ ಕಾಡಿಗೆ ಭೇಟಿಕೊಟ್ಟು ಅಲ್ಲಿದ್ದ ಬುಡಕಟ್ಟು ಜನರ ಆತಿಥ್ಯ ಸ್ವೀಕರಿಸುತ್ತಾನೆ. ಅಲ್ಲಿ ಮೂಲಭೂತ ಅಗತ್ಯಗಳಿಂದ ವಂಚಿರಾದ ಅವರ ಜೀವನದ ಪರಿಚಯುವಾಗುತ್ತದೆ. ಕಾಡಿನೊಳಗೆ ದೊರಕುವ ಆಹಾರ ಸಾಮಗ್ರಿಗಳಲ್ಲೆ ತಮ್ಮ ಜೀವನವನ್ನು ಸಮೃದ್ಧಗೊಳಿಸಿಕೊಂಡು ತೃಪ್ತರಾಗಿ ಬದುಕುವ ಅವರ ಜೀವನ ಶೈಲಿ ಅವರ ಬಗೆಗೆ ಪ್ರೀತಿಯನ್ನು ಉಂಟುಮಾಡುತ್ತದೆ. ಅವರು ಅನಿರುದ್ಧನಿಗಾಗಿ

ಕುಣಿದು ಸ್ವಾಗತಿಸಿ ಗೌರವ ತೋರುವುದು, ಅವನ ಬರುವಿಕೆಗಾಗಿ ಸಂತೋಷಪಡುವುದು, ರಾಜ್ಯದ ಯುವರಾಜನಿಗೆ ಕಾಡಿನ ಫಲಗಳನ್ನು ಅರ್ಪಿಸಿ ಆತಿಥ್ಯ ನೀಡುವುದು, ತಮ್ಮ ಬೇಟೆಯ ಅತ್ಯುತ್ತಮ ವಸ್ತುಗಳನ್ನು ಕಾಣಿಕೆ ನೀಡಿ ಸನ್ಮಾನಿಸುವುದು, ತಮ್ಮ ಅಧೀನತೆ ಯನ್ನು ಒಪ್ಪಿಕೊಂಡು ತಮ್ಮ ಕಷ್ಟ ಸಂಕಷ್ಟಗಳಿಗೆ ಪರಿಹಾರವನ್ನು ರಾಜ ವ್ಯವಸ್ಥೆ ಮಾಡಬೇಕೆಂದು ಪರೋಕ್ಷವಾಗಿ ಅರುಹುವುದು, ಅದಕ್ಕನುಗುಣವಾಗಿ 'ನಂದನಂದನ ಸುವ್ವಿ ನತಜನಹಿತ ಸುವ್ವಿ ಎಂದವರೊಲಿದು' ಹೊಗಳುವುದು ಕಾಣುತ್ತದೆ. ಪ್ರಧಾನ ಸಮಾಜದ ವ್ಯವಸ್ಥೆಯಿಂದ ಆಚೆಗಿರುವ ಬುಡಕಟ್ಟು ಜನರನ್ನು ಮೇಲಕ್ಕೆತ್ತುವ ಆಶಯ ಇಲ್ಲಿ ಬಿಂಬಿತವಾಗಿದೆ.

ಅನಿರುದ್ಧ ಮತ್ತು ಉಷೆಯರ ವಿವಾಹದ ಸಂಬಂಧದಲ್ಲಿ ಶ್ರೀಕೃಷ್ಣನು ಅದನ್ನು ಆಗುಗೊಳಿಸಲು ಅವರ ಪರವಾಗಿ ನಿಂತು ಯುದ್ಧದಲ್ಲಿ ಹೋರಾಡುತ್ತಾನೆ. ಇವರಿಬ್ಬರೂ ಕ್ರಮವಾಗಿ ವೈದಿಕ ಧರ್ಮದ ವೈಷ್ಣವ ಮತ್ತು ಶೈವ ಪಂಥಗಳನ್ನೂ ಸುರ ಅಸುರರನ್ನೂ ಬ್ರಾಹ್ಮಣ ಅಬ್ರಾಹ್ಮಣರನ್ನೂ ಪ್ರತಿನಿಧಿಸುತ್ತಿದ್ದು ಅವರ ನಡುವಿನ ಅಂತರ, ತಾರತಮ್ಯ ಮತ್ತು ವೈರತ್ವವನ್ನು ಮದುವೆಯ ಮೂಲಕ, ರಕ್ತಸಂಬಂಧವನ್ನಾಗಿ ಬೆಸೆಯುವ ಮೂಲಕ ಹೋಗಲಾಡಿಸಿ ಸಮನ್ವಯ ಸಾಧಿಸಲು ನಡೆಯುವ ಹೋರಾಟದ ಹಾಗೆಯೂ ಕಾಣು ತ್ತದೆ. ವಿಜಯನಗರ ನೆಲೆಸಿದ್ದ ಮೂಲಕ್ಷೇತ್ರ ಹಂಪೆಯಾಗಿದ್ದು ಅದು ಶೈವ ಕ್ಷೇತ್ರ ವಾಗಿತ್ತು. ಅಲ್ಲಿ ಕಾಲಕ್ರಮೇಣ ವೈಷ್ಣವರು ಮೇಲುಗೈ ಸಾಧಿಸಿದರು. ವೈಷ್ಣವರು ರಾಜಕೀಯಾಧಿಕಾರದ ಮುಖ್ಯಸ್ಥಾನದಲ್ಲಿದ್ದು, ತಮ್ಮ ಪಂಥವನ್ನು ನೆಲೆಗೊಳಿಸುವಲ್ಲಿ ವಹಿಸಿದ ಪ್ರಧಾನ ಪಾತ್ರ ಶೈವರಲ್ಲಿ ಅಸಮಾಧಾನಕ್ಕೆ ಎಡೆಕೊಟ್ಟಿತು. ವಿಜಯನಗರದ ಅವನತಿಗೆ ಮೂಲವಾದ ಹಲವು ಕಾರಣಗಳಲ್ಲಿ ಇದೂ ಒಂದೆಂದು ಗುರುತಿಸಿದ್ದು ಇತಿಹಾಸದ ಪುಟಗಳಲ್ಲಿ ಕಾಣಬಹುದು. ಇದು ಸಮಾಜದಲ್ಲಿ ಅಂದು ನೆಲೆಸಿದ್ದ ಧಾರ್ಮಿಕ ಪಂಥಗಳು, ಸಾಮಾಜಿಕ ಸಮುದಾಯಗಳು, ಜಾತಿ ಸಮುದಾಯಗಳ ನಡುವಿನ ಅಸಮಾನತೆಯನ್ನು ಎತ್ತಿ ತೋರಿಸುತ್ತದೆ. 'ಮೋಹನ ತರಂಗಿಣಿ' ಅವನ್ನು ತೊಡೆದು ಹಾಕಿ ಅವುಗಳ ನಡುವೆ ಸಾಮರಸ್ಯವನ್ನು ಸಾಧಿಸುವ ನಿಲುವು ಹೊಂದಿದೆ.

ಹೀಗೆ ಈ ಕೃತಿ ತನ್ನ ಸಮಕಾಲೀನ ಸಮಾಜದ ವರ್ಣನೆಯನ್ನು ಅದರ ಸಂವೇದನೆಗೆ ಇಚ್ಛೆಯಾಗುವ ರೀತಿಯಲ್ಲಿ ಮಂಡಿಸುತ್ತಲೇ ಅದರ ವಿರುದ್ಧ ನಡೆಯಲ್ಲಿ ಸಮಾಜ ಸುಧಾರಣೆಯ ನಿಲುವನ್ನು ಅನಾವರಣಗೊಳಿಸಿದೆ. ಇದು ಕನಕದಾಸರ ಸಮಾಜ ಚಿಂತಕನ ದಾರ್ಶನಿಕತೆಯನ್ನು ನಮ್ಮ ಮುಂದೆ ಬಿಚ್ಚಿಡುತ್ತದೆ. ಇಡೀ ಕಾವ್ಯದ ಆಶಯಕ್ಕೆ ವಿರುದ್ಧ ನಡೆಯಲ್ಲಿ ಕಾವ್ಯದ ಮೇಲುತೋರಿಕೆಯ ವರ್ಣನೆ ಮಾಡಲಾಗಿದೆ. ಇದು ಈ ಕೃತಿಯ ವಸ್ತು ಮತ್ತು ಬಂಧದ ಬಿಗಿ ನೇಯ್ಗೆಯಲ್ಲಿ ಆಶಯದ ಮಹತ್ವ ಅಡಗಿರುವುದನ್ನು ಮನಗಾಣಿಸುತ್ತದೆ.

ಆಧಾರ ಗ್ರಂಥಗಳು

ದೇ.ಜ.ಗೌ. (ಸಂ), ೧೯೯೦, **ಕನಕ ಸಾಹಿತ್ಯ ದರ್ಶನ** ಸಂ. ೧. ಡಾ. ದೇವೇಂದ್ರ ಕುಮಾರ್ ಸಿ.ಹಕಾರಿ, 'ಮೋಹನ ತರಂಗಿಣಿಯಲ್ಲಿ ಶೃಂಗಾರ ಚಿತ್ರಣದ ವೈಶಿಷ್ಟ್ಯ', ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ದೇ.ಜ.ಗೌ. (ಸಂ), ೧೯೯೦, **ಕನಕ ಸಾಹಿತ್ಯ ದರ್ಶನ** ಸಂ. ೧, ಆರ್.ಸಿ.ಹಿರೇಮಠ, 'ಕನಕದಾಸರ ವರ್ಣನೆಗಳು', ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ಬೆಟಗೇರಿ ಕೃಷ್ಣಶರ್ಮ, ೧೯೭೧ (ತೃತೀಯ ಆವೃತ್ತಿ), **ಕರ್ನಾಟಕ ಜನ ಜೀವನ**, 'ಕನಕದಾಸರು ಕಂಡ ವಿಜಯನಗರ', ಸಮಾಜ ಪುಸ್ತಕಾಲಯ, ಧಾರವಾಡ (ಪ್ರಥಮ ಆವೃತ್ತಿ ೧೯೩೯)

ಜಿ.ಜಿ.ಮಂಜುನಾಥನ್ (ಸಂ), ೧೯೯೯, ಕನಕ ಸಾಹಿತ್ಯ ದರ್ಶನ ಸಂಪುಟ-೩, 'ಮೋಹನ ತರಂಗಿಣಿ', ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ಜಿ.ಎಸ್.ಶಿವರುದ್ರಪ್ಪ (ಸಂ). ೧೯೭೮, **ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ**, ಸಂ. ೪, ಕೆ.ಜಿ.ನಾಗರಾಜಪ್ಪ, 'ಕನಕದಾಸರ ಕೀರ್ತನೆಗಳು', ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

ಸುಧಾಕರ (ಸಂ), ೧೯೯೯, **ಕನಕಸಾಹಿತ್ಯ ದರ್ಶನ**, ಸಂಪುಟ-೪, 'ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳು', ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

44. ವಿಜಯನಗರ ಕಾಲದ ಸಾಮಾಜಿಕ ಸ್ಥಿತಿಗತಿಗಳು

ಡಾ.ಎನ್.ಚಿನ್ನಸ್ವಾಮಿ ಸೋಸಲೆ

ಮಾನವ ಜಾತಿಯು ಸಾವಿರಾರು ವರ್ಷಗಳು ಬಾಳಿಕೊಂಡು ಬರುತ್ತಿರುವುದರ ಒಂದು ಅನುಭವ, ಆಲೋಚನಾ ಫಲ, ನಂಬಿಕೆಗಳು, ನಡವಳಿಕೆಗಳು ಇವುಗಳನ್ನೇ ನಾವು ಸಂಸ್ಕೃತಿಯ ಮೂಲ ಅಂಶವೆಂದು ಪರಿಗಣಿಸಬಹುದಾಗಿದೆ. ಇಲ್ಲಿ "ಸಂಸ್ಕೃತಿ" ಎಂಬ ಪದವು ಕೇವಲ ಮಾತಿಗೆ ನಿಲುಕದೆ, ಜನರು ಅನುಭವಿಸುವ, ಆಚರಿಸುವ ರೀತಿ ನೀತಿಗಳಿಂದ ಹಾಗೂ ಅದರಿಂದ ಪಡೆಯುವ ಅನುಭವಕ್ಕೆ ಕಂಡುಬರುವ ವಿಷಯ ಎಂದು ಹೇಳಬಹುದು. ಈ ಸಂಸ್ಕೃತಿಯು ಒಂದು ದಿನಕ್ಕಾಗಿಯೇ ವ್ಯಕ್ತಿಗಾಗಲಿ ಅಥವಾ ಸಮಾಜಕ್ಕಾಗಲೀ ಬರತಕ್ಕದ್ದಲ್ಲ. ಗದ್ದೆಯಲ್ಲಿ ನೆಟ್ಟ ಕಬ್ಬಿನ ತುಂಡು ರುಚಿಕರವಾದ ಕಬ್ಬಿನ ಜಲ್ಲೆಯನ್ನು ನೀಡಲು ಹಲವಾರು ದಿನಗಳ ಕಾಲಾವ ಕಾಶಬೇಕು. ಅದೇ ರೀತಿಯಲ್ಲಿ ಜನತೆಯ ಸಾವಿರಾರು ವರ್ಷಗಳ ನಡವಳಿಕೆ, ತಿಳಿವಳಿಕೆಗಳ ಫಲವಾಗಿಯೇ ಸಮಾಜಕ್ಕೆ ಕೂಡಿಬರುವ ಸಂಸ್ಕಾರವನ್ನು ನಾವು 'ಸಂಸ್ಕೃತಿ' ಎಂದು ಕರೆದಿರುವುದು. ಯಾವುದೇ ಸಮಾಜವಿರಲಿ ಅದಕ್ಕೆ ತನ್ನದೇ ಆದ ಸಂಸ್ಕೃತಿ ಇದ್ದೇ ಇರುತ್ತದೆ. ಸಂಸ್ಕೃತಿ ಎಂಬುವುದು ಒಂದು ರೀತಿಯಲ್ಲಿ ಸಮಾಜಕ್ಕೆ ಸ್ಫೂರ್ತಿಯನ್ನು ಕೊಡುವಂಥದ್ದು ಎನ್ನಬಹುದು. ಪ್ರಾಚೀನ ಕಾಲದಿಂದಲೂ ನಮ್ಮ ಇತಿಹಾಸವನ್ನು ಗಮನಿಸಿದರೆ ಭಾರತದಲ್ಲಿ ವಾಸಿಸಿಕೊಂಡು ಬಂದಿರುವ ಜನಜೀವನದ ಸ್ವರೂಪಕ್ಕೆ ಧರ್ಮವೇ ಪ್ರಬಲ ಶಕ್ತಿಯಾಗಿ ಅಂತಿಮ ಹಂತದಲ್ಲಿ ರೂಪಗೊಂಡಿತ್ತೆನ್ನ ಬಹುದು. ಇದರಿಂದಾಗಿ ಇಂದಿಗೂ ಜೀವನದ ಎಲ್ಲಾ ರಂಗಗಳಲ್ಲಿಯೂ ಧರ್ಮವೇ ಹಾಸುಹೊಕ್ಕಾಗಿ ಪರಿಣಮಿಸುವಂತಾಗಿದೆ. ಒಂದರ್ಥದಲ್ಲಿ ಇದರಿಂದ ಒಳ್ಳೆಯದಾಯಿ ತೆನ್ನಬಹುದಾದರೂ ಸಹ ಮತ್ತೊಂದು ರೀತಿಯಲ್ಲಿ ಸಾಮಾಜಿಕ ಜೀವನ ಸಹ ಕಲುಷಿತವಾಗಿತ್ತೆನ್ನಬಹುದು. ಈ ಎರಡರ ಮಧ್ಯೆ ವಿಜಯನಗರದ ಅರಸರ ಕಾಲ ದಲ್ಲಿ ಅನೇಕ ತತ್ವಜ್ಞಾನಿಗಳು, ದಾಸರುಗಳು ತಮ್ಮ ತತ್ವ ಹಾಗೂ ದಾಸಪದಗಳಿಂದ ವಿಜಯನಗರದ ಸಾಮಾಜಿಕ ಅನಿಷ್ಟಗಳನ್ನು ಪ್ರತಿಭಟಿಸಿ ಧರ್ಮದ ನಿಜಸ್ವರೂಪದ ಬೆಳಕಿನಲ್ಲಿ ಸಾಮಾಜಿಕ ಜೀವನವನ್ನು ಹಸನುಗೊಳಿಸುವ ಪ್ರಯತ್ನಗಳೂ ನಡೆಯುತ್ತಾ ಬಂದುವೆನ್ನಬಹುದು. ಅಂದಿನ ಕಾಲದ ಸಾಮಾಜಿಕ ಜೀವನವನ್ನು ಅನೇಕ ಸ್ತರಗಳಲ್ಲಿ ಅಧ್ಯಯನ ಮಾಡಬಹುದಾಗಿದೆ. ಒಂದರ್ಥದಲ್ಲಿ ವಿಜಯನಗರ ಅರಸರುಗಳು ಸಾಮಾಜಿಕ ಜೀವನವನ್ನು ಸಮಾನತೆಯ ಆಧಾರದ ಮೇಲೆ ಕಟ್ಟಲು, ಕಟ್ಟುವ

ಪ್ರಯತ್ನದಲ್ಲಿ ಅಷ್ಟು ಇಷ್ಟು ಪ್ರಭಾವಶಾಲಿಯಾಗಿದ್ದ ಪ್ರಯತ್ನಗಳನ್ನು ನಡೆಸಿ ದರು. ಇದಕ್ಕೆ ಅಂದು ಸೃಷ್ಟಿಯಾಗಿರುವ ದಾಸ ಪದಗಳೇ ಸಾಕ್ಷಿಯಾಗಿವೆ ಹಾಗೂ ಸ್ವಲ್ಪ ಪ್ರಮಾಣದಲ್ಲಿ ಶಾಸನಗಳು, ವೀರಗಲ್ಲುಗಳು ಅಧ್ಯಯನಕ್ಕೆ ಸಹಕಾರಿಯಾಗಿವೆ.

ಕುಟುಂಬ

ಪ್ರಾಚೀನ ಭಾರತದ ಇತಿಹಾಸದಿಂದಲೂ ಕಂಡುಬರುವ ಹಾಗೆ ವಿಜಯನಗರದ ಅರಸರ ಆಳ್ವಿಕೆಯ ಕಾಲದಲ್ಲಿಯೂ ಕುಟುಂಬವು ಸಮಾಜದ ಮೂಲಭೂತ ಸ್ಥಿತಿಯದ್ದಾಗಿತ್ತು. ಅಂದು ಇದು ಚಿಕ್ಕ ಹಾಗೂ ವಿಶಾಲ ಸಮಾಜದ ಶಕ್ತಿಶಾಲಿ ಘಟಕವಾಗಿ ಬೆಳೆದು ನಿಂತಿತ್ತೆನ್ನಬಹುದು. ಕೆಲವು ಇತಿಹಾಸಕಾರರು ಅಂದಿನ ಕುಟುಂಬವನ್ನು ಮಾನವ ಸಮಾಜದ ಪ್ರಾಥಮಿಕ ಸಂಸ್ಥೆಯಾಗಿತ್ತೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಮತ್ತೆ ಕೆಲವು ಇತಿಹಾಸಕಾರರು ಕುಟುಂಬವನ್ನು ಅಂದಿನ ಸಮಾಜದ ಕೇಂದ್ರ ಬಿಂದುವಾಗಿತ್ತೆಂದು ಹೇಳಿಕೆ ನೀಡಿದ್ದಾರೆ. ಕುಟುಂಬವು ವ್ಯಕ್ತಿಯ ಸಂಪರ್ಕ ಪಡೆಯುವ ಮೊದಲನೆಯ ಸಮೂಹ ಮತ್ತು ಅವನ ಭವಿಷ್ಯದ ಬದುಕಿಗೆ ತಳಪಾಯವನ್ನು ಹಾಕಿಕೊಡುವ ಸಂಸ್ಥೆಯಾಗಿತ್ತೆನ್ನಬಹುದು. ಆದುದರಿಂದಲೇ ವಿಜಯ ನಗರದ ಅರಸರ ಆಳ್ವಿಕೆಯ ಕಾಲದ ಸಂಸ್ಕೃತಿಯನ್ನು ಚರ್ಚಿಸುತ್ತಿರುವ ಈ ಸಮಯದಲ್ಲಿ ಯಾವುದೇ ಸಮಾಜದ ಸಾಮಾಜಿಕ ಜೀವನದ, ಯಾವುದೇ ವಿಶ್ಲೇಷಣೆ ಯಲ್ಲಿ ಕುಟುಂಬವನ್ನು ಅಧ್ಯಯನದ ಮೊದಲ ಘಟಕವಾಗಿ ಪರಿಗಣಿಸಬೇಕಾಗಿದೆ. ಸಾಮಾನ್ಯವಾಗಿ ಕುಟುಂಬವು ನಿರಂತರವಾಗಿ ಬದಲಾಗುತ್ತಿರುವ ಒಂದು ರೀತಿಯಲ್ಲಿ ಚಲನಾತ್ಮಕ ಸಂಸ್ಥೆ ಎನ್ನಬಹುದು.

ವಿಜಯನಗರ ಕಾಲದ ಕುಟುಂಬ ವ್ಯವಸ್ಥೆಗಳಲ್ಲಿ ಅನೇಕ ವಿಧಗಳನ್ನು ಕಾಣ ಬಹುದಾಗಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಏಕಪತಿ ಹಾಗೂ ಏಕಸತಿಯನ್ನು ಒಳಗೊಂಡ ಏಕಸಂಗಾತಿ ಕುಟುಂಬ ವ್ಯವಸ್ಥೆ ಹಾಗೂ ಒಬ್ಬ ಗಂಡಸು ಅನೇಕ ಪತ್ನಿ ಯರನ್ನು ಹೊಂದಿರುವ ಬಹುಪತ್ನಿತ್ವದ ಕುಟುಂಬ ಅಥವಾ ಒಬ್ಬ ಹೆಂಗಸು ಅನೇಕ ಪತಿಯರನ್ನು ಹೊಂದಿದ್ದ ಬಹುಪತಿತ್ವ ಕುಟುಂಬ ಹಾಗೂ ಒಂದು ಗುಂಪಿನ ಪುರುಷರು ಒಟ್ಟಿಗೆ ಇನ್ನೊಂದು ಗುಂಪಿನ ಸ್ತ್ರೀಯರನ್ನು ಮದುವೆಯಾಗುವ ಸಮೂಹ ವಿವಾಹದ ಆಧಾರದ ಮೇಲಿನ ಕುಟುಂಬ. ಈ ರೀತಿಯ ವಿವಿಧ ಕುಟುಂಬ ಗಳು ಅನೇಕ ಆಧಾರಗಳಿಂದ ಕಂಡುಬರುತ್ತವೆ. ಈ ಎಲ್ಲಾ ಮಾದರಿಯ ಕುಟುಂಬ ವ್ಯವಸ್ಥೆಯು ಕೇವಲ ವಿಜಯನಗರದ ಕಾಲದಲ್ಲಿಯೇ ಅಲ್ಲದೆ ಕರ್ನಾಟಕ ಹಾಗೂ ಭಾರತದ ಚರಿತ್ರೆಯ ಉದ್ದಕ್ಕೂ ಒಂದಲ್ಲ ಒಂದು ಭಾಗಗಳಲ್ಲಿ ಕಂಡು ಬರುತ್ತವೆ. ಅಂದಿನ ಕುಟುಂಬಗಳ ಪ್ರಮುಖ ಕರ್ತವ್ಯ ಹಾಗೂ ಮೂಲಭೂತ ಕಾರ್ಯಗಳೆಂದರೆ ಮಕ್ಕಳನ್ನು ಪಡೆಯುವುದು, ಮಕ್ಕಳ ಪಾಲನೆ ಹಾಗೂ ಪೋಷಣೆ, ಮಕ್ಕಳನ್ನು

ವಿದ್ಯಾವಂತರನ್ನಾಗಿ ಮಾಡಿ ರಾಜಾಸ್ಥಾನಕ್ಕೆ ಪರಿಚಯಿಸುವುದು, ಕುಟುಂಬ ಸದಸ್ಯರಿಗೆ ಸ್ಥಾನಮಾನವನ್ನು ವರ್ಗಾವಣೆ ಮಾಡುವುದು, ಕುಟುಂಬದ ಸದಸ್ಯರಿಗೆ ಮನರಂಜನೆಯನ್ನು ಒದಗಿಸುವುದು ಹಾಗೂ ಕುಟುಂಬದ ವೃದ್ಧ ಮತ್ತು ಅಶಕ್ತ ರಕ್ತಸಂಬಂಧಿಗಳನ್ನು ನೋಡಿಕೊಳ್ಳುವ ಕಾರ್ಯದಲ್ಲಿ ತೊಡಗುತ್ತಿತ್ತೆನ್ನಬಹುದು. ಇದು ಉನ್ನತ ವರ್ಗದವರೆಂದು ಕರೆದುಕೊಳ್ಳುತ್ತಿದ್ದ ಕುಟುಂಬದ ವ್ಯವಸ್ಥೆಯಾಗಿದ್ದರೆ ಶೂದ್ರರ ಕುಟುಂಬ ವ್ಯವಸ್ಥೆಯು ಶೋಚನೀಯವಾಗಿತ್ತು. ಹೆಚ್ಚಿನ ಜನರು ಧಣಿಗಳ ಮನೆಯಲ್ಲಿ ಜೀತ ಮಾಡಿಯೇ ತಮ್ಮ ಹಾಗೂ ತಮ್ಮ ಮಕ್ಕಳ ಜೀವನವನ್ನು ಮುಗಿಸುತ್ತಿದ್ದರು. ಒಂದರ್ಥದಲ್ಲಿ ಹೇಳುವುದಾದರೆ ಇವರಿಗೆ ತಮ್ಮದೇ ಆದಂತಹ ಸ್ಥಿರವಾದ ಕುಟುಂಬ ಹೆಚ್ಚುಕಾಲ ಇರುತ್ತಿರಲಿಲ್ಲ ಎನ್ನಬಹುದು. ಇದಕ್ಕೆ ಇಂದಿಗೂ ಜೀವಂತವಿರುವ ಅನೇಕ ಸಾಮಾಜಿಕ ಕಟ್ಟುಪಾಡುಗಳೇ ಸಾಕ್ಷಿಯಾಗಿವೆ.

ಅವಿಭಕ್ತ ಕುಟುಂಬ

ಹಾಗೆ ನೋಡಿದರೆ ಅವಿಭಕ್ತ ಕುಟುಂಬವು ಭಾರತದ ಒಂದು ಅತ್ಯಂತ ಪ್ರಾಚೀನವಾದ ಮತ್ತು ಸಾರ್ವತ್ರಿಕವಾದ ಸಂಸ್ಥೆ. ಒಂದು ರೀತಿಯಲ್ಲಿ ಭಾರತದಲ್ಲಿ ಜಾತಿಪದ್ಧತಿಯಷ್ಟೇ ಪುರಾತನವಾದದ್ದೆನ್ನಬಹುದು. ಇದು ಮಧ್ಯಕಾಲೀನ ಭಾರತದ ಇತಿಹಾಸದಲ್ಲಿ ಹಾಸುಹೊಕ್ಕಾಗಿ ತನ್ನ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡು ಬಂದಿದೆ. ಈ ರೀತಿಯ ಕುಟುಂಬವನ್ನು ರಕ್ತಸಂಬಂಧದ ಜನರ ಗುಂಪನ್ನು ಹೊಂದಿರುವ ಒಂದು ಜನಸಮೂಹ ಎಂದು ಕರೆಯಬಹುದು. ಏಕೆಂದರೆ ಈ ಕುಟುಂಬದಲ್ಲಿ ತಂದೆ ತಾಯಿ ಸೋದರರರು ಮತ್ತು ಅವರ ಹೆಂಡತಿ ಮಕ್ಕಳನ್ನು ಒಳಗೊಂಡಿರುವ ಒಂದು ದೊಡ್ಡ ಕುಟುಂಬ ವ್ಯವಸ್ಥೆ ರೂಪಿತವಾಗಿರುತ್ತದೆ. ಸಾಮಾನ್ಯವಾಗಿ ಇಂತಹ ಕುಟುಂಬದ ಒಡೆತನವು ಹಿರಿಯ ಪುರುಷ ಸದಸ್ಯನ ಅಧೀನದಲ್ಲಿರುತ್ತಿತ್ತೆಂದು ಆಧಾರಗಳಿಂದ ತಿಳಿದುಬರುತ್ತದೆ. ಕುಟುಂಬದ ಸದಸ್ಯ ರೆಲ್ಲರಿಗೂ ಒಂದೇ ಅಡುಗೆ ಮನೆಯೊಂದಿದ್ದು ಹಣಕಾಸಿನ ವಿಷಯದಲ್ಲಿ ಒಂದೇ ತೀರ್ಮಾನವನ್ನು ಹೊಂದಿರುತ್ತಿದ್ದರೆಂದು ತಿಳಿದುಬರುತ್ತದೆ. ಈ ಕುಟುಂಬದ ಗಾತ್ರಕ್ಕೆ ಮಿತಿಯಿರುತ್ತಿರಲಿಲ್ಲ. ವಿಜಯನಗರ ಸಾಮ್ರಾಜ್ಯದಲ್ಲಿ ಇಂತಹ ಕುಟುಂಬಗಳು ಆರರಿಂದ ನಾಲ್ಕು ತಲೆಮಾರಿನವರನ್ನು ಒಳಗೊಂಡಿದ್ದಕ್ಕೆ ನಿದರ್ಶನಗಳು ಸಿಗುತ್ತವೆ.

ಮೇಲೆ ತಿಳಿಸಿರುವ ಅವಿಭಕ್ತ ಕುಟುಂಬದ ಚಿತ್ರಣವು ಸಾಂಪ್ರದಾಯಿಕ ಹಿಂದೂ ಧರ್ಮದಿಂದ ಪ್ರತಿಪಾದಿಸಲ್ಪಟ್ಟಿತ್ತು. ಆದರೆ ಅದರ ನಿಯಮ ಮತ್ತು ಆಚರಣೆಗಳು ಅನೇಕ ರೀತಿಯಲ್ಲಿ ವ್ಯತ್ಯಾಸ ಹೊಂದಿದ್ದವೆಂದು ಕಂಡುಬರುತ್ತದೆ. ವಿಜಯನಗರ ಅರಸರ ಕಾಲದ ಗ್ರಾಮೀಣ ಪ್ರದೇಶಗಳಲ್ಲಿ ಉನ್ನತ ಜಾತಿಗಳು ಈ ಆದರ್ಶಗಳಲ್ಲಿ ನಂಬಿಕೆ ಇಡುವುದರ ಜೊತೆಗೆ ಗತ್ತು ಗಾಂಭೀರ್ಯದಿಂದ ಕಟ್ಟುನಿಟ್ಟಾಗಿ ಅನುಸರಿಸಲು

ಮುಂದಾಗುತ್ತಿದ್ದವು. ಮಧ್ಯಮ ವರ್ಗದ ಜನರು ಈ ತತ್ವಗಳಿಗೆ ಹೆಚ್ಚಾಗಿ ಅಂಟಿಕೊಳ್ಳಲಿಲ್ಲವೆಂದೇ ಹೇಳಬಹುದು. ಆದರೆ ಜಾತಿ, ವರ್ಣ ಶ್ರೇಣಿಯ ಮಧ್ಯ ಪ್ರವೇಶವು ಹೆಚ್ಚಾಗಿ ಈ ಆದರ್ಶಗಳನ್ನು ತಳ್ಳಿಹಾಕಿದವು ಹಾಗೂ ಕೆಳವರ್ಗದಲ್ಲಿ ಅವುಗಳ ಸುಳಿವೇ ಮರೆಯಾದವು. ಸಾಮಾನ್ಯವಾಗಿ ಅಂದು ಕೆಲವು ಪ್ರದೇಶಗಳನ್ನು ಹೊರತುಪಡಿಸಿದರೆ ಎಲ್ಲಾ ಭಾಗಗಳಲ್ಲಿಯೂ ಪಿತೃವಂಶೀಯ ಮತ್ತು ಪಿತೃಸ್ಥಳೀಯ ವಿಭಕ್ತ ಅಥವಾ ಅವಿಭಕ್ತ ಕುಟುಂಬ ಪದ್ಧತಿಯೂ ಕಂಡುಬರುತ್ತಿತ್ತು. ದೊಡ್ಡ ಅವಿಭಕ್ತ ಕುಟುಂಬವು ಆದರ್ಶವಾದುದೆಂದು ನಿರ್ಧರಿಸಿದ್ದಾಗ್ಯೂ ಅನೇಕ ತಲೆಮಾರಿನವರು ಒಂದೇ ಸೂರಿನಲ್ಲಿ ವಾಸಿಸುವ, ಒಂದೇ ಅಡುಗೆಮನೆಯಲ್ಲಿ ಊಟ ತಯಾರಿ ಮಾಡುವ ಕುಟುಂಬಗಳನ್ನು ಗೊತ್ತು ಮಾಡುವುದೂ ಕಷ್ಟದಾಯಕವಾದುದಾಗಿದೆ. ವಾಸ್ತವವಾಗಿ ಹಳ್ಳಿಗಳಲ್ಲಿ ಅವಿಭಕ್ತ ಕುಟುಂಬಗಳು ಅಲ್ಲಲ್ಲಿ ಕಂಡುಬಂದರೂ ಅವು ಚಿಕ್ಕ ಘಟಕಗಳಾಗಿ ತಂದೆ ತಾಯಿ ಅವರ ಮದುವೆಯಾದ ಗಂಡು ಮಕ್ಕಳು ಮತ್ತು ಅವರ ಮಕ್ಕಳು, ಸೋದರರು ಹಾಗೂ ಅವರ ಪತ್ನಿಯರನ್ನು ಒಳಗೊಂಡಿರುತ್ತಿತ್ತು. ಏಕೆಂದರೆ ಸಾಮಾನ್ಯವಾಗಿ ಗಂಡುಮಕ್ಕಳು ಮದುವೆಯಾದ ಕೆಲವೇ ಕೆಲವು ವರ್ಷಗಳಲ್ಲಿ ತಂದೆತಾಯಿಯವರಿಂದ ಪ್ರತ್ಯೇಕವಾಗಿ ವಾಸಿಸುತ್ತಿದ್ದುದಕ್ಕೆ ಅಂದಿನ ಜನಪದೀಯ ಆಕರಗಳು ಹೆಚ್ಚಾಗಿ ಬೆಳಕು ಚೆಲ್ಲುತ್ತವೆ.

ಇಂದಿಗೂ ಅವಿಭಕ್ತ ಕುಟುಂಬದಲ್ಲಿನ ಬದಲಾವಣೆಗಳ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಕೆಲವು ಇತಿಹಾಸಕಾರರು ಅವಿಭಕ್ತ ಕುಟುಂಬದಲ್ಲಿ ಕೆಲವು ಅನಿವಾರ್ಯ ಬದಲಾವಣೆಗಳನ್ನು ಗುರುತಿಸಿದ್ದಾರೆ. ಜಾತಿ ಪದ್ಧತಿಯಂತೆ ಅವಿಭಕ್ತ ಕುಟುಂಬವು ಸಹ ಹಿಂದೂ ಸಮಾಜದ ವಿಶಿಷ್ಟ ಲಕ್ಷಣವಾಗಿದೆ ಎಂದು ಅಭಿಪ್ರಾಯ ಪಡುವವರೂ ಇದ್ದಾರೆ. ಆದುದರಿಂದಲೇ ಇದು ಯಾವುದೇ ಪರಿಸ್ಥಿತಿಯಲ್ಲಿಯೂ ಧಕ್ಕೆಯನ್ನು ಅನುಭವಿಸದೇ ತಕ್ಕಮಟ್ಟಿಗೆ ಸುರಕ್ಷಿತವಾಗಿಯೇ ಉಳಿದುಕೊಂಡು ಬರುತ್ತಿದೆ. ಒಂದು ವೇಳೆ ಅವಿಭಕ್ತ ಕುಟುಂಬವು ಸಂಪೂರ್ಣವಾಗಿ ನಶಿಸಿಹೋದದ್ದೇ ಆದರೆ ಹಿಂದೂ ಭಾರತೀಯ ಸಂಸ್ಕೃತಿಗೆ ಮತ್ತು ಸಮಾಜಕ್ಕೆ ಗಂಡಾಂತರ ಉಂಟಾದಂತೆ ಎಂಬ ಹೆದರಿಕೆಯನ್ನು ಅನೇಕ ಸಮಾಜಶಾಸ್ತ್ರಜ್ಞರು ವ್ಯಕ್ತಪಡಿಸುತ್ತಾರೆ.

ಬಂಧುತ್ವ

ಕುಟುಂಬ ವ್ಯವಸ್ಥೆಯ ಮಾದರಿಯಲ್ಲಿಯೇ ಬಂಧುತ್ವವು ಸಹ ಸಾಮಾಜಿಕ ರಚನೆಯ ಮೂಲಭೂತ ಮತ್ತು ಪ್ರಾಚೀನ ತಳಹದಿಗಳಲ್ಲೊಂದಾಗಿ ಬೆಳೆದು ಬಂದಿತ್ತು. 15ನೇ ಶತಮಾನದಲ್ಲಿ ಕುಟುಂಬವು ಸಾಮಾಜಿಕ ಸಂಘಟನೆಯ ಮೂಲಭೂತ ಘಟಕವಾಗಿದ್ದರೆ ಬಂಧುತ್ವವು ಅಸಂಘಟನೆಯ ಸೂತ್ರವಾಗಿತ್ತು ಎನ್ನಬಹುದು. ಮೇಲಿನ ಹೇಳಿಕೆಯಿಂದ ಕಂಡುಬರುವುದೇನೆಂದರೆ ವ್ಯಕ್ತಿ ಮತ್ತು

ಕುಟುಂಬಗಳು ಒಟ್ಟಿಗೆ ಬಾಳುವೆ ನಡೆಸಲು ಅನುಕೂಲವಾಗುವ ಒಂದು ವ್ಯವಸ್ಥೆಯನ್ನು ಬಂಧುತ್ವವು ಕಲ್ಪಿಸುತ್ತದೆ ಎಂಬುವುದು. ಬಂಧುತ್ವವು ಗಾತ್ರ ಮತ್ತು ಕಾರ್ಯಕ್ಷೇತ್ರದಲ್ಲಿ ಕುಟುಂಬಕ್ಕಿಂತಲೂ ಮಿಗಿಲಾದದ್ದು. ಕುಟುಂಬವು ಕೇವಲ ಒಂದು ಘಟಕವಾಗಿ ರೂಪುಗೊಂಡಿದ್ದರೆ, ಬಂಧುತ್ವವು ಸುಲಭವಾಗಿ ಬಿಡಿಸಿಕೊಳ್ಳಲಾಗದ ಸಂಬಂಧಗಳ ಸಾಕಷ್ಟು ವಿಸ್ತಾರವಾದ ಬಲೆಯಾಗಿರುತ್ತದೆ. ಇತರೆ ಸಾಮಾಜಿಕ ಸಂಬಂಧಗಳಂತೆಯೇ ಬಂಧುತ್ವವೂ ಸಮುದಾಯದಲ್ಲಿಯೇ ಏರ್ಪಡುತ್ತಿತ್ತೆನ್ನಬಹುದು. ಈ ರೀತಿ ಯಲ್ಲಿ ಬಂಧುತ್ವದ ಸಂಬಂಧಗಳು ಮತ್ತು ಸಾಮಾನ್ಯ ಚಟುವಟಿಕೆಗಳು ಪರಸ್ಪರ ಸಂಬಂಧ ಹೊಂದಿದ್ದವು.

ಬಂಧುತ್ವದಲ್ಲಿ ವಿವಿಧ ರೀತಿಯ ಸಮೂಹಗಳಿದ್ದುದನ್ನು ಗುರುತಿಸಬಹುದು. ವಿಜಯನಗರ ಸಾಮ್ರಾಜ್ಯದಲ್ಲಿ ಪ್ರಮುಖವಾಗಿ ಏಕಪಕ್ಷೀಯ ಬಂಧುತ್ವ, ಉಭಯ, ಏಕಬಂಧುತ್ವ, ಸಮಾನ ಬಂಧುತ್ವ ಇನ್ನೂ ಮೊದಲಾದ ಬಂಧುತ್ವದ ರೂಪಗಳಿದ್ದವು. ತಂದೆ ಅಥವಾ ತಾಯಿ ಮುಖಾಂತರ ವಂಶವನ್ನು ನಿರ್ಧರಿಸಿದರೆ ಅ ಬಂಧುತ್ವವು ಏಕಪಕ್ಷಿಯ ಆಗಿರುತ್ತಿತ್ತು. ಒಂದು ವೇಳೆ ವಂಶವನ್ನು ತಂದೆ ಮತ್ತು ತಾಯಿಯರಿಬ್ಬರೂ ನಿರ್ಧರಿಸಿದರೆ ಅಂಥದನ್ನು ಉಭಯಪಕ್ಷೀಯ ಎಂದು ಕರೆಯಲಾಗುತ್ತಿತ್ತು.

ಸಂಸಾರ

ಸಂಸಾರ ಎಂಬ ಪದವೆ ಒಂದು ರೀತಿಯಲ್ಲಿ ಪ್ರತಿಯೊಬ್ಬರಿಗೂ ಜೀವನದಲ್ಲಿ ಸ್ಪರ್ಧೆಯನೊಡ್ಡುವ ರೀತಿಯದ್ದಾಗಿರುತ್ತದೆ. "ಈಸಬೇಕು ಇದ್ದು ಜೈಸಬೇಕು" ಎಂಬ ಮಾತನ್ನು ಪುರಂದರದಾಸರು ಸಂಸಾರದ ಅರ್ಥದಲ್ಲಿಯೇ ಹೇಳಿರುವುದು. ಸಮಾಜದಲ್ಲಿ ಬಾಳಬೇಕಾದ ವ್ಯಕ್ತಿಯು ಹೆಜ್ಜೆಹೆಜ್ಜೆಗೂ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅದೇ ರೀತಿಯಲ್ಲಿ ತನ್ನ ಜೀವನದ ಬದುಕಿಗಾಗಿ ಅನೇಕ ಸನ್ನಿವೇಶಗಳನ್ನು, ವ್ಯಕ್ತಿಗಳನ್ನೂ, ಮತ್ತಿತರ ವಸ್ತುಗಳನ್ನೂ ಅವಲಂಬಿಸಿ ಬದುಕಬೇಕಾಗುತ್ತದೆ. ಈ ಕ್ರಿಯೆಯು ಹುಟ್ಟಿನಿಂದ ಸಾಯುವವರೆವಿಗೂ ನಿರಂತರವಾಗಿ ನಡೆಯುತ್ತಿರುತ್ತದೆ. ಮನುಷ್ಯನ ಜೀವನ ಒಂದು ರೀತಿಯಲ್ಲಿ 'ಚಕ್ರ'ವಾಗಿರುತ್ತದೆ. ಮಗುವಾಗಿರುವಾಗ ತಂದೆ ತಾಯಿಗಳು, ಬೆಳೆಯುತ್ತಾ ಅಣ್ಣತಮ್ಮಂದಿರುಗಳು, ಬಂಧು ಬಳಗಗಳು, ಗೆಳೆಯ ಗೆಳತಿಯರು, ಅನಂತರ ಸತಿಪತಿಗಳು, ಮುಂದೆ ಮಕ್ಕಳು. ಈ ಸಂಬಂಧಗಳನ್ನು ಅದಕ್ಕನುಗುಣವಾಗಿ ಪರಿಸರವನ್ನು ವ್ಯಕ್ತಿ ಅಳವಡಿಸಿಕೊಂಡು ಬದುಕಬೇಕಾಗುತ್ತದೆ. ಈ ದೃಷ್ಟಿಯಿಂದಲೇ ಜೀವನ ಒಂದು ಚಕ್ರವಾಗಿರುತ್ತದೆ ಎಂದು ಹೇಳಿರುವುದು. ಈ ರೀತಿಯ ಜೀವನ ಪದ್ಧತಿಯು ವಿಜಯನಗರದ ಆಳ್ವಿಕೆಯ ಕಾಲದಲ್ಲಿ ಉತ್ತಮ ಹಾಗೂ ಮಧ್ಯಮ ಕುಟುಂಬಗಳಲ್ಲಿ ಹೆಚ್ಚಾಗಿತ್ತೆಂದು ಲಿಖಿತ ಹಾಗೂ ಮೌಖಿಕಾಧಾರಗಳಿಂದ ತಿಳಿದುಬರುತ್ತದೆ. ಕೆಳವರ್ಗದಲ್ಲಿ ಈ ವ್ಯವಸ್ಥೆ ಹೆಚ್ಚಾಗಿದ್ದಂತೆ ಕಂಡುಬರುವ

ದಿಲ್ಲ. ಅಂದಿನ ಸಂಸಾರದಲ್ಲಿ ಅನೇಕ ರೀತಿಯ ಸಮಸ್ಯೆಗಳು ಮನೆಮಾಡಿದ್ದವು. ಇದಕ್ಕೆ ಪ್ರತ್ಯಕ್ಷ ಸಾಕ್ಷಿಯೆಂಬಂತೆ ಪುರಂದರದಾಸರು ಹೇಳಿರುವ "ಈಸಬೇಕು ಇದ್ದು ಜೈಸಬೇಕು ಈ ಹೇಸಿಗೆ ಸಂಸಾರದಲ್ಲಿ" ಎಂಬ ವಾಣಿಯೇ ನಿದರ್ಶನ. ಹಾಗಂತ ಪುರಂದರರು ಸಂಸಾರವನ್ನು ಕೆಟ್ಟದೆಂದೂ ಸಹ ಹೇಳುವುದಿಲ್ಲ. ಬದುಕಬೇಕು, ಸುಖಶಾಂತಿಯಿಂದ ಭಗವಂತನನ್ನು ಮರೆಯದೆ ಸಂಸಾರ ಮಾಡಬೇಕು, ಅಹಂಕಾರ ಮಮಕಾರಗಳನ್ನು ಬಿಟ್ಟು ಅನಾಸಕ್ತಿಯಿಂದ ಬದುಕಬೇಕು ಎಂಬುವುದೇ ಅವರು ನೀಡಿರುವ ಹಿತವಚನ. ಅದಕ್ಕಾಗಿಯೇ ಅವರು,

ಆರು ಹಿತವರು ನಿನಗೆ ಈ ಮೂವರೊಳಗೆ
ನಾರಿಯೋ ಧಾರಿಣಿಯೋ ಬಲುಧನದ ಸಿರಿಯೋ
ಅನ್ಯರಲ್ಲಿ ಜನಿಸಿದ್ದ ಅಂಗನೆಯ ಕರೆತಂದು
ತನ್ನ ಮನೆಗವಳ ಯಜಮಾನಿ ಎನಿಸಿ
ಭಿನ್ನವಿಲ್ಲದೆಯರ್ಥ ದೇಹವೆನಿಸುವ ಸತಿಯು
ಕಣ್ಣಿನಲ್ಲಿ ನೋಡಲಮ್ಮಳು ಕಾಲವಶದಿ....

ಎಂದು ಹೇಳಿದ್ದಾರೆ. ಸಂಸಾರಕ್ಕೆ ಬೇಕಾಗುವ ಪ್ರಮುಖ ನೀತಿ ಉಪದೇಶಗಳು ಮೇಲಿನವುಗಳಾಗಿವೆ. ಇದಕ್ಕಾಗಿಯೇ ಪುರಂದರದಾಸರು ಸಂಸಾರದಲ್ಲಿ ಕಂಡು ಬರುವ ತೊಂದರೆಗಳಿಂದ ಬಳಲುತ್ತಿದ್ದ ಜನರಿಗೆ, ಅವರ ಹುಟ್ಟಿನ ಬಗ್ಗೆ ಮನವರಿಕೆ ಮಾಡಿಕೊಡುವ ದೃಷ್ಟಿಯಿಂದ,

ಮಾನವ ಜನ್ಮ ದೊಡ್ಡದು ಇದ
ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ....

ಎಂದು ಹಿತನುಡಿ ಹೇಳಿರುವುದು. ಮಾನವ ಜೀವಿಯು ವಿವಿಧ ಆಸೆ ಆಮಿಷಗಳಿಗೆ ಒಳಗಾಗುವುದು ಸಹಜವಾದುದ್ದೇ. ಏಕೆಂದರೆ ಈತನಲ್ಲಿ ಕ್ರೂರತನ ಹಾಗೂ ಮಾನವೀಯತೆಗಳೆರಡೂ ಜೊತೆ ಜೊತೆಗೆ ಅಡಕವಾಗಿರುತ್ತವೆ. ಆದ್ದರಿಂದ ಕೆಲವು ಸಮಯದಲ್ಲಿ ಸಂಸಾರದ ಜೀವನದಲ್ಲಿ ಏರುಪೇರಾಗುತ್ತದೆ. ಪುರಂದರದಾಸರು ಪಂಥ, ಪಂಗಡಗಳು, ಧಾರ್ಮಿಕ ಅಂಧಶ್ರದ್ಧೆಗಳು, ಆಚರಣೆಗಳು ಮತ್ತು ಮೂಢ ನಂಬಿಕೆಗಳನ್ನು ಮೀರಿ ನಿಂತವರಾಗಿದ್ದರು. ಅದಕ್ಕಾಗಿಯೇ ಅವರು ಮಾನವ ಜನ್ಮ ದೊಡ್ಡದು, ಅದನ್ನು ಭಗವಂತನ ಧ್ಯಾನದ ಮೂಲಕ ಮುಕ್ತಿಯನ್ನು ಪಡೆಯಲು ಬಳಸಿಕೊಳ್ಳದೆ, ಹಾಳು ಮಾಡಿಕೊಳ್ಳಬೇಡಿರಿ ಹುಚ್ಚಪ್ಪಗಳಿರಾ ಎಂದು ತಮ್ಮ ಕೀರ್ತನೆಯಲ್ಲಿ ಜನತೆಯನ್ನು ಎಚ್ಚರಿಸಿರುವುದು. ಅವರಿಗೆ ಶ್ರೀಮಂತರ ಬಗ್ಗೆ ತಿರಸ್ಕಾರ, ಹೆಣ್ಣಿನ ಬಗ್ಗೆ ಅನುಕಂಪಗಳಿವೆ. ಸಂಸಾರ ಒಂದು ಮಾಯೆಯೆಂದು ಹೇಳಿದ್ದಾರಾದರೂ ಅದು ತ್ಯಾಜ್ಯವೆಂದು ಹೇಳುವುದಿಲ್ಲ. ಅವರ ಪ್ರಕಾರ ಸಂಸಾರ

ವೆಂದರೆ ಕಮಲದೆಲೆಯ ಮೇಲಿನ ನೀರ ಹನಿಯಂತೆ ಅಂಟಿಯೂ ಅಂಟದಂತಿರಬೇಕು ಎಂಬ ದೃಢನಿಲುವನ್ನು ವ್ಯಕ್ತಪಡಿಸುತ್ತಾರೆ. ಅವರ ಒಲವು ನಿಲುವುಗಳನ್ನು ಪರಾಮರ್ಶಿಸಿದಾಗ ದಾಸರು ಅಂದಿನ ಸಾಮಾಜಿಕ ಪರಿಸ್ಥಿತಿಗೆ ಹೇಗೆ ಸ್ಪಂದಿಸುತ್ತಿದ್ದರು ಎಂಬುದನ್ನು ಮನಗಾಣಬಹುದಾಗಿದೆ. ಮುಖ್ಯವಾಗಿ ಮಧ್ಯಕಾಲೀನ ಸಮಾಜ ಅವರನ್ನು ಹೇಗೆ ರೂಪಿಸಿತು ಎಂಬುವುದನ್ನು ನಾವು ಮನಗಾಣಬೇಕಾಗುತ್ತದೆ.

ವಿವಾಹ ಹಾಗೂ ನಂತರದ ಜೀವನ ಪದ್ಧತಿ
(ಜನಪದೀಯ ಆಕರಗಳಲ್ಲಿ ವಿಶ್ಲೇಷಿಸಿರುವ ಹಾಗೆ)

ಅಂದಿನಿಂದ ಇಂದಿನವರೆವಿಗೂ ನಮ್ಮ ಸಾಮಾಜಿಕ ಜೀವನದ ಮುಖ್ಯವಾದ ಘಟ್ಟವೆಂದರೆ ಮದುವೆ. ಒಂದು ದೃಷ್ಟಿಯಲ್ಲಿ ವಿವಾಹವು ಮಾನವನಲ್ಲಿ ಮೃದುತ್ವ ವನ್ನು ಸಂಸ್ಕಾರಗೊಳಿಸಿ ಸಂಯಮದಿಂದ ಉದಾತ್ತವಾದುದರ ಕಡೆಗೆ ಬದಲಾಯಿಸುವ ಒಂದು ಪವಿತ್ರ ಸಾಧನವೆಂದು ಭಾವಿಸಲಾಗಿದೆ. ಒಂದರ್ಥದಲ್ಲಿ ಇದು ಸತ್ಯವೂ ಕೂಡ ಆಗಿದೆ. ಎಲ್ಲಿಯೊ ಹುಟ್ಟಿ ಬೆಳೆದ ಹೆಣ್ಣು, ಎಂದೂ ಕಂಡರಿಯದ ಪುರುಷ ನೊಬ್ಬನ ಕೈಹಿಡಿದು ವಿವಾಹವಾಗಿ ಸಂಸಾರವೆಂಬ ಸಾಗರದಲ್ಲಿ ಈಜಲು ಬದ್ಧಳಾಗು ತ್ತಾಳೆ. ಅಂದಿನಿಂದ ಅವಳ ಗಂಡನೇ ಅವಳ ಜೀವನದ ಸರ್ವಸ್ವವಾಗುತ್ತಾನೆ. ಅವಳು ಅವನ ಮನ, ಮನೆಯ ಒಡತಿಯಾಗುತ್ತಾಳೆ, ಗೃಹಿಣಿಯಾಗುತ್ತಾಳೆ. ಗಂಡು ಹೆಣ್ಣುಗಳ ಜೀವನದಲ್ಲಿ ಅದೊಂದು ಪರಿವರ್ತನೆಯ ಪವಿತ್ರ ಘಟ್ಟ.

ವಿಜಯನಗರದ ಅರಸರ ಕಾಲದಲ್ಲಿ ನಡೆಯುತ್ತಿದ್ದ ವಿವಾಹದ ವರ್ಣನೆಯು **ಅಷ್ಟಾದಶ ವರ್ಣನೆ**ಯಲ್ಲಿ ಒಂದು ಭಾಗವಾಗಿ ವರ್ಣಿತವಾಗಿರುವುದು ಕಂಡುಬರುತ್ತದೆ. ಕಾವ್ಯಗಳಲ್ಲಿ ಹಾಗೂ ದಾಸ ಪದಗಳಲ್ಲಿಯೂ ಇವುಗಳ ವರ್ಣನೆಯು ಕಂಡುಬರುತ್ತದೆ. ಅಂದಿನ ವಿವಾಹ ಪದ್ಧತಿಯ ಹಾಗೂ ವಾಹನದ ವೈಭವದ ಬಗ್ಗೆ ಹೆಚ್ಚಿನ ಮಾಹಿತಿ ನೀಡುವ **ಚೇರಮಾಂಕ** ಮತ್ತು **ಬೊಮ್ಮರಸ** ಎಂಬ ಕವಿಗಳ ಸಾಹಿತ್ಯ ಇಲ್ಲಿ ಹೆಚ್ಚು ಉಪಕಾರಿಯಾಗುತ್ತವೆ. ಆದರೆ ಈ ಕವಿಗಳು ತಮ್ಮ ಬರವಣಿಗೆಯಲ್ಲಿ ಕೇವಲ ರಾಜಪರಿವಾರದವರ, ಬ್ರಾಹ್ಮಣರ ಹಾಗೂ ಶ್ರೀಮಂತರ ವಿವಾಹ ಸಂದರ್ಭದ ವರ್ಣನೆಯನ್ನು ನೀಡಿರುವುದು ಕಂಡುಬರುತ್ತದೆ. ಇದಕ್ಕೆ ನಾವು ಸುಲಭವಾದ ಕಾರಣ ನೀಡುವುದಾದರೆ ನಮ್ಮ ಅಂದಿನ ಕವಿಗಳು, ದಾರ್ಶನಿಕರು, ವಿದೇಶಿ ಪ್ರವಾಸಿ ಗರು, ತತ್ವಜ್ಞಾನಿಗಳು, ತಾವು ಆರಿಸಿಕೊಂಡ ಸ್ಥಳಗಳು ಹಾಗೂ ವ್ಯಕ್ತಿಸಮೂಹಗಳು ರಾಜನ ಆಸ್ಥಾನ, ಪ್ರಮುಖವಾಗಿ ರಾಜರಾಣಿಯರೇ ಆಗಿರುವುದು ಎಂದು ಇತಿಹಾಸ ದಿಂದ ತಿಳಿದುಬರುತ್ತದೆ.

ಅಂದು ನಡೆಯುತ್ತಿದ್ದ ಮದುವೆಯ ಪದ್ಧತಿಯನ್ನು ಡಾ.ಕೆ.ಶ್ರೀಕಂಠಯ್ಯನವರು ತಮ್ಮ ಕೃತಿಯಲ್ಲಿ ಪ್ರತಿಯೊಂದನ್ನು ಚಾಚೂತಪ್ಪದೆ ವಿಶ್ಲೇಷಿಸಿರುವುದು ಕಂಡು ಬರುತ್ತದೆ. ಮದುವೆ ಎಂದರೆ ಸಾಮಾನ್ಯವಾಗಿ ಸಾಂಪ್ರದಾಯಿಕವಾಗಿ ನಡೆಯುವ ಕೆಲವು ಪದ್ಧತಿಗಳು. ಇವುಗಳು: ಸಾಮುದ್ರಿಕ ಲಕ್ಷಣಗಳಿಂದ ಕೂಡಿದ ಅನುರೂಪ ಕನ್ಯೆಯ ಅನ್ವೇಷಣೆ ಮತ್ತು ಆಯ್ಕೆ; ಕನ್ಯೆಯು ತಮಗೆ ಒಪ್ಪಿಗೆಯಾಯಿತೆಂದು ನಿಶ್ಚಿತಾರ್ಥ; ಜೋಯಿಸರಿಂದ ಶುಭಲಗ್ನವನ್ನು ನಿಶ್ಚಯಿಸಿ ಲಗ್ನ ಕಟ್ಟಿಸುವುದು; ಬಂಧು ಮಿತ್ರರಿಗೆ ಆಹ್ವಾನದೋಲೆಗಳು; ವಿವಾಹ ಮಂಟಪದ ಸಿದ್ಧತೆ; ಅಲಂಕಾರ ಇವುಗಳೆಲ್ಲವೂ ಒಂದು ಘಟ್ಟವಾಗಿದ್ದರೆ, ಮದುವೆಯ ದಿನದಂದು ನಡೆಯುವ ಸಂಪ್ರದಾಯಗಳು ತುಂಬ ಮುಖ್ಯವಾದವೆಂದು ವಿವರಿಸುತ್ತಾರೆ. ಅವುಗಳನ್ನು ಅವರು 'ಮಂಗಳ ವಾದ್ಯಗಳು ಮೊಳಗುತ್ತಿರುವಾಗ ಶೋಭಾನೆಗಳನ್ನು ಹೇಳುತ್ತಾ ಮುತ್ತೈದೆಯರಿಂದ ವಧು ವರರಿಗೆ ಮಂಗಳ ಮಜ್ಜನ; ಸುಮಂಗಲಿಯರು ಮಂಗಳ ದ್ರವ್ಯಗಳನ್ನು ಹಿಡಿದು ಸ್ವಾಗತಿಸುತ್ತಾ ಧಾರೆಯ ಮಂಟಪಕ್ಕೆ ಬರುವುದು; ವಧೂವರರ ಅಲಂಕರಣ, ಕೈಯಲ್ಲಿ ಫಲಪುಷ್ಪಗಳು; ವಧೂವರುಗಳಿಗೆ ನಾಚಿಕೆ ಬರುವುದು; ಧಾರೆಯ ಮಂಟಪದಲ್ಲಿನ ವಿಧಿವಿಧಾನಗಳು; ಮಂತ್ರ ಪಠಣ; ಮಂಗಳ ವಾದ್ಯಗಳ ಮೊರೆತ; ಜೀರಿಗೆ ಬೆಲ್ಲ ಹಾಕುವುದರಲ್ಲಿ ನಾಮುಂದು ತಾಮುಂದು ಎಂಬ ಪೈಪೋಟಿ; ಒಳ್ಳೆಯ ಮುಹೂರ್ತದಲ್ಲಿ ಧಾರೆ ಎರೆದು ಕೊಡುವುದು; ಹಸೆಯ ಮೇಲೆ ವಧೂವರರ ಸ್ಥಳ ಬದಲಾವಣೆ; ಕಂಕಣ ಕಟ್ಟುವುದು; ಮುತ್ತೈದೆಯರಿಂದ ಆರತಿ; ಹೆಸರುಗಳನ್ನು ಹೇಳಿಸುವ ವಿನೋದ; ವಧು-ವರರ ಮೆರವಣಿಗೆ; ಬೀಳ್ಕೊಡಿಗೆ, ಇತ್ಯಾದಿ ಘಟನೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿರುವುದು ಕಂಡುಬರುತ್ತದೆ. ಈ ಕೃತಿಯು ವಿಜಯನಗರದ ಸಾಂಸ್ಕೃತಿಕ ಬದುಕಿನ ಮೇಲೆ ಅದರಲ್ಲಿಯೂ ಸಮಾಜದ ಕೆಳಸ್ತರದ ಜನರ ಸಾಂಸ್ಕೃತಿಕ ಅಧ್ಯಯನಕ್ಕೆ ಉಪಯುಕ್ತವಾಗಿದೆ.

ಮದುವೆಯೆಂಬುದು ಗಂಡಿನ ದೃಷ್ಟಿಯಿಂದ ಕೇವಲ ಏನನ್ನೋ ಪಡೆಯುವ ಕ್ರಿಯೆ ಆಗಿತ್ತೆನ್ನಬಹುದು. ತನ್ನ ಪತ್ನಿಯನ್ನು ಕರೆತಂದು ತನ್ನ ಮನೆಯನ್ನು ಸಂತೋಷದಿಂದ ತುಂಬಿಕೊಳ್ಳುತ್ತಾನೆ. ಹೆಣ್ಣಿಗೂ ಅದು ಪಡೆಯುವಿಕೆಯಾಗಿರುತ್ತದೆ ಎನ್ನಬಹುದು. ಏಕೆಂದರೆ ತನ್ನ ಬಾಳಿನ ಸಂಗಾತಿಯನ್ನು ಅವಳು ಪಡೆದುಕೊಂಡಿರು ತ್ತಾಳೆ. ಆದರೆ ತನ್ನನ್ನು ಹೆತ್ತು ಹೊತ್ತು ಸಾಕಿ ಸಲಹಿದ ತಂದೆ ತಾಯಿಗಳನ್ನು ಒಡನಾಡಿ ಬೆಳೆದ ಅಣ್ಣ ತಮ್ಮಂದಿರನ್ನು ಅಕ್ಕತಂಗಿಯರನ್ನು ಬಿಟ್ಟು ಬರಬೇಕಾಗು ತ್ತದೆ. ಈ ಸನ್ನಿವೇಶವು ಅಂದಿನ ಕಾಲದ ಜನಪದರಲ್ಲಿ ಸೃಷ್ಟಿಯಾದ ಅನೇಕ ಮೌಖಿಕ ಸಾಹಿತ್ಯಕ್ಕೆ ಪ್ರಚೋದನೆ ನೀಡಿತ್ತೆನ್ನಬಹುದು. ಇದನ್ನೆ ನಾವು 'ಜನಪದ ಸಾಹಿತ್ಯ' ಎಂದು ಕರೆಯುವುದು. ಉದಾಹರಣೆಗೆ ಈ ಸಂದರ್ಭದ ನಮ್ಮ ಜನರ

ಸಾಂಸ್ಕೃತಿಕ ಬದುಕಿನ ಚಿತ್ರಣವನ್ನು ಈ ಕೆಳಗಿನ ಅನೇಕ ಸನ್ನಿವೇಶಗಳಲ್ಲಿ, ಸನ್ನಿವೇಶಕ್ಕೆ ತಕ್ಕಂತೆ ಸೃಷ್ಟಿಸಲಾಗಿರುವ ಜನಪದ ಗೀತೆಗಳಲ್ಲಿ ಕಾಣಬಹುದಾಗಿದೆ.

ಮದುವೆಯಾದ ನವ ವಧುವನ್ನು ಗಂಡನ ಮನೆಗೆ ಕಳುಹಿಸುವಾಗ ತಂದೆ ಮಗಳಿಗೆ ಹೇಳಿರುವ ಮಾತು ತುಂಬ ಅರ್ಥಪೂರ್ಣವಾಗಿದೆ,

ಹೆಣ್ಣು ಮಕ್ಕಳ ಕಲುವಿನ ಕಣ್ಣೀಗಿ ನೀರ್ತಂದು
ಸಣ್ಣ ಸಲ್ಲೆದಲೆ ಮುಸುಗ್ಹಾಕಿ । ಹಡೆದಪ್ಪ
ಹೆಣ್ಣು ಸಾಕೆಂದ ಜಲುಮಾಕೆ ॥

ತಂದೆಯ ದುಃಖವೇ ಒಂದು ರೀತಿಯ ಸ್ವರೂಪದ್ದಾಗಿದ್ದರೆ ಇನ್ನು ತಾಯಿಯ ದುಃಖಕ್ಕೆ ಎಡೆಯೇ ಇರುವುದಿಲ್ಲವೆನ್ನಬಹುದು. ತಾಯಿಯು ಈ ಸಮಯದಲ್ಲಿ

ಒಂಬತ್ತು ತಿಂಗಳು ನಿನ್ನ ತುಂಬಿಕೊಂಡು ತಿರಗೇನ
ಹಂಬಲಿಸಿ ನಿನ್ನ ಹಡೆದೇನು । ಚಿತ್ತಾರದ
ಗೊಂಬಿ ನಿನನೊಪ್ಪಿಸಿ ಕೊಡಲ್ ಹ್ಯಾಂಗ ॥
ಹರಿಯಾಗೆದ್ ನನ್ಮಗಳು ಹಾಲುಬಾನುಣ್ಣವಳು
ತೂಗು ಮಂಚದಾಗ ಮಲಗುವಳು ।
ನಗುನಗುತ ಮನೆ ಬೆಳಗುವಳು ॥

ಎಂದು ಮಗಳು ತಮ್ಮ ಮನೆಯಲ್ಲಿ ಬೆಳೆದ ರೀತಿ ನೀತಿಗಳನ್ನು ವರ್ಣಿಸಿಕೊಂಡು ತನ್ನ ದುಃಖವನ್ನು ವ್ಯಕ್ತಪಡಿಸುವ ಪರಿ. ಇಂಥ ತಂದೆ-ತಾಯಿಯರ ದುಃಖದ ಸಮಯದಲ್ಲಿ ಮಗಳೇ ಅವರನ್ನು ಸಂತೈಸಬೇಕಾಗುವ ಪ್ರಸಂಗವೂ ಬಂದೊದಗಿ ಬಿಡುತ್ತದೆನ್ನಬಹುದು. ಉದಾಹರಣೆಗೆ,

ತಾವರಿಯ ಗಿಡಹುಟ್ಟಿ ದೇವರಿಗೆ ನೆರಳಾದೊ ।
ನಾಹುಟ್ಟಿ ಮನೆಗೆ ಎರವಾದೆ । ಹಡೆದವ್ವ
ನೀಕೊಟ್ಟ ಮನೆಗೆ ಹೆಸರಾದೆ ॥

ಮೇಲಿನ ಈ ಪದಗಳು ನಮ್ಮ ಭವ್ಯ ಸಂಸ್ಕೃತಿಯ ಸಂಕೇತಗಳಾಗಿವೆ ಎನ್ನಬಹುದು. ನೀಕೊಟ್ಟ ಮನೆಗೆ ಹೆಸರಾಗುವಂತೆ ಬಾಳುತ್ತೇನೆ, ನನ್ನನ್ನು ನಗುನಗುತ ಕಳುಹಿಸು ಎಂತಲೂ ಹೇಳುವುದರ ಜೊತೆಗೆ ಅಂದು ನಮ್ಮ ಜನಪದರು ಕಂಡುಕೊಂಡಿದ್ದ ಆದರ್ಶದ ಬದುಕು ಇಂದಿಗೂ ಆದರ್ಶಪ್ರಾಯವಾಗಿದೆ. ಮಗಳ ಈ ಮಾತಿಗೆ ತಾಯಿ ನೀಡುವ ಉತ್ತರ ಎಂಥ ಗಾಂಭೀರ್ಯವಾಗಿದೆ ಎಂದರೆ,

ಆಲಕ್ಕೆ ಹೂವಿಲ್ಲ, ಸಾಲಕ್ಕೆ ಕೊನೆಯಿಲ್ಲ
ಜಾಲಿಯ ಮರವು ನೆರಳಲ್ಲ । ಮಗಳೆ
ತಾಯಿಯ ಮನೆಯು ಸ್ಥಿರವಲ್ಲ ॥

ಎಂದು ಹೇಳಿ ತನ್ನಲ್ಲಿಯೇ ಧೈರ್ಯ ತಂದುಕೊಂಡು ಮಗಳು ಗಂಡನ ಮನೆಯಲ್ಲಿ ಹೇಗೆ ಬಾಳಬೇಕೆಂಬುದನ್ನು ಹಾಗೂ ಗುರುಹಿರಿಯರಿಗೆ, ಅತ್ತೆ ಮಾವಂದಿರಿಗೆ, ಭಾವ ಮೈದುನರೊಂದಿಗೆ ಹೇಗೆ ವರ್ತಿಸಬೇಕೆಂಬುದರ ಮಾಹಿತಿಯನ್ನು ಸರಳವಾದ ಮಾತಿನಲ್ಲಿ ಹೇಳಿರುವುದು ಕಂಡುಬರುತ್ತದೆ.

ಅತ್ತೆ ಮಾವರಿಗಂಜಿ, ಸುತ್ತೇಳು ನರೆಗಂಜಿ
ಮತ್ತೆ ಆಳುವ ದೊರೆಗಂಜಿ | ನನ ಮಗಳೇ |
ಅತ್ತಿ ಮನಿಯೊಳಗೆ ಬಾಳವ್ವ |
ನೆರೆಮನೆ ಸಿರಿದೇವಿ ನೀನಾಗು ಮಗಳೆ |
ಮನಿಯಾಗ ಭೇದ ಬಗಿಬ್ಯಾಡ | ಕಂದವ್ವ
ತುಂಬಿದ ಮನಿಯನ್ನು ಒಡಿಬ್ಯಾಡ ||
ಬಾಳುವೆ ಮಾಡಿದರೆ ಬಾ ತಂಗಿ ಅಂದಾರು
ಬಾಳುವೆಗೆಟ್ಟು ಮತಿಗೆಟ್ಟು | ಬಾಳಿದರೆ
ಹೆತ್ತವರ ಕುಲಕೆ ಹಗೆಯಾದೆ ||

ಎಂಬುವ ಮಹತ್ವದ ಹಿತವಚವನ್ನು ತಾಯಿ ಮಗಳಿಗೆ ಹೇಳಿರುವುದು ಇಂದಿನ ಆಧುನಿಕ ಕಾಲದ ಕುಟುಂಬಗಳಿಗೆ, ಸಂಸಾರಗಳಿಗೆ ಹೆಚ್ಚಿನ ರೀತಿಯಲ್ಲಿ ಆದರ್ಶದಾಯಕವಾಗಿರುತ್ತದೆ. ಆದರೆ ಇಂದು ಇಂತಹ ಅಮೂಲ್ಯವಾದ ಹಿತನುಡಿಗಳನ್ನು ಗಂಡು ಹೆಣ್ಣುಗಳಿಬ್ಬರೂ ಮರೆಯುತ್ತಿರುವುದು ಕಂಡುಬರುತ್ತಿವೆ. ತಾಯಿ ಮುಂದುವರೆದು ಮಗಳಿಗೆ ಹೇಳುವ ಮಾತಿದು,

ಅತ್ತೆ ಮಾವರ ಪಾದ, ತಂದೆ ತಾಯಿರ ಪಾದ |
ಮತ್ತೆ ಗಂಡನ ಶ್ರೀಪಾದ | ನೆನೆದರೆ
ಬೆನ್ನ ಹಿಂದೈತಿ ಕೈಲಾಸ ||
ಕನ್ನಡಿ ಕೈತಪ್ಪಿ ಹನ್ನೆರಡು ಚೂರಾಗಿ
ಹೆಣ್ಣಿನ ಮನವು ಎರಡಾಗಿ ದಾಳಿಂಬ್ರು
ಹಣ್ಣಾದರೇನು ಫಲವಿಲ್ಲ
ಮಾತ್ಗಂಟಿ ಮಗಳಲ್ಲ, ತಾಟ್ಗಿತ್ತಿ ಸೊಸೆಯಲ್ಲ |
ತುಪ್ಪರಿಯ ಚೆಕ್ಕೆ ಒಲೆಗಲ್ಲ ತವರೀಗೆ
ಮಾತ ತಂದೋಳು ಮಗಳಲ್ಲ ||

ಈ ಮಾತುಗಳು ಸಹ ಇಂದಿನ ಮುಂದಿನ ನಮ್ಮ ಸೌಹಾರ್ದತೆ ಪ್ರೀತಿಯ, ಹಿರಿಯ-ಕಿರಿಯ ಎಂಬ ಸಂಕೇತದ ಅಂಶವಾಗಿದೆ. ಈ ಜನಪದದ ಸಾಲುಗಳಲ್ಲಿ ಪ್ರತಿಯೊಂದು ಪದ ಸಹ ಹೆಣ್ಣು ಇಂದು (ಇದನ್ನು ಗಂಡಿಗೂ ಹೋಲಿಸಿಕೊಳ್ಳಬಹುದು) ಹೇಗೆ ಬಾಳಿ ಬದುಕಬೇಕು ಎಂಬ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಪ್ರತೀಕವಾಗಿ ಮೂಡಿಬಂದಿವೆ.

ನಮ್ಮ ಸಂಸ್ಕೃತಿಯಲ್ಲಿ ತಂದೆ ತಾಯಿಯರಿಗಿಂತಲೂ ತನ್ನ ಕರುಳುಬಳ್ಳಿಯ ಸಹೋದರ - ಸಹೋದರಿಯರ ಅಕ್ಕರೆಯ ಮಾತುಗಳು ಇಲ್ಲಿ ಪ್ರಸ್ತುತವೆನ್ನಿಸುತ್ತವೆ. ಅಕ್ಕ ಮದುವೆಯಾಗಿ ಗಂಡನ ಮನೆಗೆ ಹೋಗುವಾಗ ತಮ್ಮನಾದವನು ಆ ಸಂದರ್ಭವನ್ನು,

ಒಮ್ಮನ ಮದ್ದಿಗೆ ಬೆಂಕಿ ಒಮ್ಮೆಲೆ ಕೊಟ್ಟಾಂಗ |
ತಮ್ಮನ ಹೊಟ್ಟೆ ತಳಮಳಿಸಿ | ಅಕ್ಕ ನನಗೆ
ರಮಿಸಿ ಹಣ್ಣು ಕೊಡುತ್ತಿದ್ದೊ ||

ಎಂದು ತಾನು ಹಾಗೂ ಅಕ್ಕ ದಿನ ಕಳೆಯುತ್ತಿದ್ದ ಕ್ಷಣವನ್ನು ನೆನೆಸಿಕೊಂಡು ದುಃಖಿಸಿರುವುದು ಕಂಡುಬರುತ್ತದೆ. ಇಷ್ಟೆಲ್ಲಾ ಆದರೂ ಮದುವೆಯಾದ ಮೇಲೆ ಹೆಣ್ಣು ಗಂಡನ ಮನೆಗೆ ಹೋಗಲೇಬೇಕು. ಇದಕ್ಕಾಗಿ ತಾಯಿ ತನ್ನಲ್ಲಿಯೇ ಧೈರ್ಯ ತಂದುಕೊಂಡು ಮಗಳಿಗೆ ಒಳ್ಳೆಯದಾಗಲೆಂದು ದೇವರಲ್ಲಿ,

ಗಂಡು ಮಕ್ಕಳ ಒಂಬತ್ತು ಕೊಡು ಸ್ವಾಮಿ
ಬಂಡೀಯ ಮುಂದೆ ಕಳಸಕ್ಕೆ ಒಪ್ಪುವಂಥ
ಒಬ್ಬ ಹೆಣ್ಣು ಮಗಳ ಕೊಡು ದೇವ........

ಎಂದು ಪ್ರಾರ್ಥಿಸಿಕೊಂಡು ಮಗಳನ್ನು ಗಂಡನ ಮನೆಗೆ ಕಳುಹಿಸುವ ಸಂದರ್ಭ ಬರುತ್ತದೆ. ತಾಯಿಗೆ ಮಗಳು ಹೋದ ಕೆಲವು ದಿನಗಳವರೆಗೆ ತನ್ನ ಮನೆ ಹಾಗೂ ಮನದಲ್ಲಿ ಶೂನ್ಯ ಆವರಿಸಿಕೊಂಡಂತೆ ಕಾಣಿಸಿಕೊಳ್ಳುತ್ತದೆ. ಅವಳು ಮನೆಯಲ್ಲಿ ಇದ್ದಾಗ ಆಡುತ್ತಿದ್ದ ಆಟ, ಲವಲವಿಕೆ ಮುಂತಾವುಗಳನ್ನು ನೆನೆಸಿಕೊಂಡು ದುಃಖಿ ಸುತ್ತಾಳೆ. ಇತ್ತ ಗಂಡನ ಮನೆಗೆ ಹೋದ ಮಗಳು ಸಹ ಅಲ್ಲಿನ ಹೊಸ ಜೀವನ ವನ್ನು ಆರಂಭಿಸಿದ ನಂತರವೂ ತವರು ಮನೆಯನ್ನು ನೆನೆಸಿಕೊಳ್ಳುತ್ತಾ ಬದುಕುವ ಸನ್ನಿವೇಶದಲ್ಲಿ ಈ ಕೆಳಗಿನ ಸುಂದರ ಗೀತೆಯ ಸೃಷ್ಟಿಯಾಗಿರುತ್ತದೆನ್ನಬಹುದು.

ತಾಯಿ ಕಾಣದ ಜೀವ ತಾವೂರಿ ಬಾವೂರಿ
ಭಾಳ ಬಿಸಿಲಾನ ಅವರೀಯ | ಹೂವಿನಾಂಗ
ಬಾಡತೇತಿ ತಾಯಿ ಕರೆದೊಯ್ಯ ||
ಮಳೆಬಿಟ್ಟರೂ ಮರದ ಹನಿ ಬಿಡದು ಹಡೆದವ್ವ
ನೀ ಬಿಟ್ಟರೂ ನಿನ್ನ ಮನಿ ಬಿಡದು ಹಡೆದವ್ವ
ನಿನ್ನಾಸೆ ನನಗೆ ಬಿಡದಲ್ಲೆ ||
ತಂದಿಯ ನೆನೆದರೆ ತಂಗೂಳು ಬಿಸಿಯಾಯ್ತು
ಗಂಗಾದೇವಿ ನನ್ನ ಹಡೆದವ್ವ | ನೆನೆದರೆ
ಮಾಸಿದ ತಲೆಯ ಮಡಿಯಾಯ್ತು ||

ಎನ್ನುವ ಮಾತುಗಳು ಅವಳ ತವರು ಹಂಬಲವನ್ನು ಹಾಗೂ ತನ್ನ ತವರು ಮನೆಯ ಬಿಡಲಾರದ ಸಂಬಂಧವನ್ನು ವ್ಯಕ್ತಪಡಿಸುತ್ತದೆ. ನಿಜಕ್ಕೂ ಈ ಮಾತುಗಳಲ್ಲಿ ಮನುಷ್ಯ ಜೀವಿಯ ಮಾನವೀಯತೆಯ ಅಮೂಲ್ಯ ಲಕ್ಷಣಗಳು ಎದ್ದುಕಾಣುತ್ತವೆ.

ಇಂದಂತೂ ವರದಕ್ಷಿಣೆ ಎಂಬುದು ಒಂದು ಸಾಮಾಜಿಕ ಪಿಡುಗಾಗಿ ಪರಿವರ್ತಿಸಿದೆ. ಆದರೆ ನೂರಾರು ವರ್ಷಗಳ ನಮ್ಮ ಇತಿಹಾಸವನ್ನು ಗಮನಿಸಿದರೆ ಅದೊಂದು ಪಿಡುಗಾಗಿರದೆ ನಮ್ಮ ಸಂಸ್ಕೃತಿಯ ಒಂದು ಭಾಗವಾಗಿತ್ತೆಂದು ಕಂಡು ಬರುತ್ತದೆ. ಪ್ರೀತಿಯಿಂದ ಸಾಕಿಸಲುಹಿದ ಮಗಳು ತವರುಮನೆಯಿಂದ ಮದುವೆಯಾಗಿ ಗಂಡನ ಮನೆಗೆ ಹೋಗುವಾಗ ಅವಳಿಗೆ ತವರಿನ ಕಾಣಿಕೆಯಾಗಿ ತಮ್ಮಲ್ಲಿರುವ ಹಸು, ಎಮ್ಮೆ, ಕುರಿ, ಆಡುಗಳನ್ನೂ ಅಥವಾ ಚಿನ್ನಾಭರಣಗಳನ್ನು ನೀಡುತ್ತಿದ್ದುದ್ದಕ್ಕೆ ಅನೇಕ ಆಧಾರಗಳಿವೆ. ಇದಕ್ಕೆ ನಿದರ್ಶನವೆಂಬಂತೆ,

ತೊಟ್ಟಿಲ ಹೊತುಕೊಂಡು, ತೌರ್‌ಬಣ್ಣ ಉಡುಕೊಂಡು
ಅಪ್ಪ ಕೊಟ್ಟೆಮ್ಮೆ ಹೊಡಕೊಂಡು | ತವರೂರ
ತಿಟ್ಟತ್ತಿ ತಿರುಗಿ ನೋಡ್ಯಾಳ ||

ಎಂಬುವ ಜಾನಪದರ ಸಾಲುಗಳು ಇಲ್ಲಿ ಮಾದರಿಯಾಗಿವೆ. ಈ ಮೇಲಿನ ಸಾಲುಗಳು ವರದಕ್ಷಿಣೆಯ ಅಂಶವನ್ನು ಸೂಚಿಸಿದರೂ ಸಹ ಒಂದರ್ಥದಲ್ಲಿ ಪ್ರೀತಿಯ ಸಂಕೇತವಾಗಿ ಗೋಚರಿಸುತ್ತದೆಯೇ ವಿನಃ ಕೆಟ್ಟ ಪಿಡುಗಾಗಿ ಗೋಚರಿಸುವುದಿಲ್ಲ. ತಂಗಿಯನ್ನು ತವರೂರಿಗೆ ಕರೆತರುವಾಗ ತಂಗಿಯು ಅಣ್ಣನಿಗೆ ಹೇಳುವ ಮಾತು ಇಲ್ಲಿ ಚಾರಿತ್ರಿಕವಾಗಿದೆ.

ತವರೂರ ಹಾದೀಲಿ ತೆಗೆಸಣ್ಣ ಬಾವಿಯ |
ಅಕ್ಕ ತಂಗೇರು ತಿರುಗಾಡೊ | ದಾರೀಲಿ
ತೆಗೆಸಣ್ಣ ಕಲ್ಯಾಣದ ಕೊಳಗಳ |

ಅಕ್ಕ ತಂಗಿಯರು ತಿರುಗಾಡುವ ಈ ದಾರಿಯಲ್ಲಿ ಬಾವಿ, ಕೊಳ, ಕೆರೆಗಳನ್ನು ನಿರ್ಮಿಸಬೇಕೆಂಬ ಬಯಕೆಯನ್ನು ತನ್ನ ಅಣ್ಣನಿಗೆ ತಂಗಿ ವ್ಯಕ್ತಪಡಿಸುತ್ತಾಳೆ. ಇಂತಹ ಅಮೂಲ್ಯ ಸಲಹೆಯನ್ನು ಪ್ರೀತಿಯಿಂದ ನೀಡಿದ ತಂಗಿ ಮತ್ತೆ ತನ್ನ ತವರೂರಿನಲ್ಲಿ ತಾಯಿ ಮರಣ ಹೊಂದಿ, ಅಣ್ಣಂದಿರುಗಳು ಮದುವೆಯಾಗಿ ಊರಿನಲ್ಲಿ ಅತ್ತಿಗೆಯರು ಮನೆ ಒಡೆಯರಾಗಿದ್ದಾಗ ತಂಗಿ ತನ್ನ ತವರಿನ ಬಗ್ಗೆ ಹಾಡುವ ಮಾತುಗಳು ಗಮನಾರ್ಹವಾಗಿವೆ.

ತಾಯಿಲ್ದ ತವರೀಗೆ ಹೋಗಬಾರದು ಹೆಣ್ಣು
ನೀರಿಲ್ದ ಕೆರೆಗೆ ಕುರಿ ಬಂದು | ಹೋದಾಗ
ಆಗ ನೋಡದರ ಬಳಲಿಕೆ ||

ತಾಯಿದ್ರೆ ತವರೂರು ನೀರಿದ್ರೆ ಹೆಗ್ಗೆರೆ |
ಆನೆಯಿದ್ರರಸು ದೊರೆತನ | ತಾಯವ್ವ
ನೀನಿದ್ರೆ ಲೇಸು ತವರ್ಮನಿ ||
ಯಾರು ಇದ್ದರು ತನ್ನ ತಾಯವ್ವನ್ಹೋಲರ |
ಸಾವಿರಕೊಳಿ ಒಲಿಯಾಗ | ಇದ್ದರ
ಜೋತಿ ನೀನ್ಯಾರು ಹೋಲ್ಯಾರ ||

ಎಂದು ತಾಯಿಯ ಅಮರವಾದ ಪ್ರೇಮವನ್ನು ಕೊಂಡಾಡಿರುವುದು ಕಂಡು ಬರುತ್ತದೆ. ಒಬ್ಬ ವ್ಯಕ್ತಿಗೆ ಅದರಲ್ಲಿಯೂ ಮಗಳಿಗೆ ಬೇರೆ ಯಾರೋ ಏನೆಲ್ಲಾ ಪ್ರೀತಿ ತೋರಿಸಿದರೂ ಅದು ತಾಯಿಯ ಪ್ರೀತಿಗೆ ಸರಿಸಮನಾದ ಪ್ರೀತಿಯಾಗಲಾರದು ಎಂದು ತಾಯಿಗೆ ನಮ್ಮ ಸಂಸ್ಕೃತಿಯು ನೀಡಿರುವ ವಿಶಿಷ್ಟ ಸ್ಥಾನವನ್ನು ವ್ಯಕ್ತಪಡಿಸುತ್ತಾಳೆ.

ತಂದೆ ತಾಯಿ ಹಾಗೂ ತೌರುಮನೆಯ ಪ್ರೀತಿಯು ಒಂದು ರೀತಿಯದಾದರೆ ತನ್ನ ಕರುಳು ಬಳ್ಳಿಗಳೊಂದಿಗಿನ (ಅಣ್ಣ, ತಮ್ಮ, ಅಕ್ಕ, ತಂಗಿ) ಸಂಬಂಧವನ್ನು ಕುರಿತಂತೆ ಅನೇಕ ವಿಶಿಷ್ಟ ಪದಗಳು ನಮ್ಮ ಜಾನಪದರಲ್ಲಿ ಹರಿದಾಡಿರುವುದಕ್ಕೆ ಈ ಕೆಳಗಿನ ಸಾಲುಗಳು ಸಾಕ್ಷಿಯಾಗಿವೆ. ಹೆಣ್ಣು ಎಂದಿದ್ದರೂ ಮದುವೆಯಾಗಿ ಗಂಡನ ಮನೆಗೆ ಹೋಗುವವಳು. ಗಂಡನ ಮನೆಯಲ್ಲಿ ಅವಳಿಗೆ ಏನಾದರೂ ತೊಂದರೆ ಸಂಭವಿಸಿದರೆ ಅಥವಾ ಇನ್ನಾವುದೇ ಅಹಿತಕರ ಸನ್ನಿವೇಶಗಳಲ್ಲಿ ಹೆಣ್ಣು ಕಷ್ಟಕ್ಕೆ ಸಿಲುಕಿದಾಗ ಅವಳಾಡುವ ಮಾತು ಗಮನಾರ್ಹ.

ಹೆಣ್ಣಿನ ಜನುಮಕೆ ಅಣ್ಣ ತಮ್ಮರು ಬೇಕು |
ಬೆನ್ನ ಕಟ್ಟುವರು ಸಭೆಯೊಳಗೆ | ಸಾವಿರ
ಹೊನ್ನು ಕಟ್ಟುವರು ಗುಡಿಯೊಳಗೆ
ಮನೆಯ ಹಿಂದಿನ ಮಾವು ನೆನೆದರೆ ಘಮ್ಮೆಂದು ನೆನೆದಂಗೆ ಬಂದ ನನ್ನ ಅಣ್ಣ

ಬಾಳೀಯ ಗೊನಿಹಾಂಗ ತೋಳ ತಿರುವೂತ ||
ಸರದಾರ ಬರುವಾಗ ಸುರಿದಾವ ಮಲ್ಲಿಗಿ |
ದೊರೆ ನನ್ನ ತಮ್ಮ ಬರುವಾಗ | ಯಾಲಕ್ಕಿ
ಗೊನಿಬಾಗಿ, ಹಾಲ ಸುರಿದಾವ |

ಈ ಮೇಲಿನ ಪದಗಳು ಗಂಡನ ಮನೆಯಲ್ಲಿರುವ ಹೆಣ್ಣು ತನ್ನ ಅಣ್ಣ ತಮ್ಮಂದಿರು ತನ್ನ ಮನೆಗೆ ಬಂದಾಗ ತನಗಾದ ಸಂತೋಷವನ್ನು ವ್ಯಕ್ತಪಡಿಸುವ ರೀತಿಯದು. ಈ ಮೇಲಿನ ಸಾಲುಗಳು ಎಷ್ಟು ಸುಂದರವಾಗಿ ಮೂಡಿ ಬಂದಿದೆ ಎಂದರೆ ಇದಕ್ಕೆ ನಮ್ಮ ಯಾವ ಸಾಹಿತ್ಯವೂ ಸಾಟಿಯಾಗಲಾರದೆನೋ ಎಂದೆನ್ನ ಬಹುದು.

ತನ್ನ ಅಣ್ಣ ತಮ್ಮಂದಿರ ಮೇಲೆ ವ್ಯಕ್ತಪಡಿಸಿದ ರೀತಿಯಲ್ಲಿ ಹೆಮ್ಮೆಯಿಂದ ವ್ಯಕ್ತಪಡಿಸಿದ ತಂಗಿ, ಮುಂದೆ ತಾನು ತನ್ನ ತವರಿಗೆ ಹೋದಾಗ ತಾಯಿ ಇಲ್ಲದ ತವರು ಹಾಗೂ ತವರಿಗೆ ಮನೆಯ ಒಡತಿಯರಾಗಿ ಬಂದಿದ್ದ ಅತ್ತಿಗೆಯರ ಮಾರ್ಮಿಕ ಮಾತುಗಳನ್ನು ಗಮನಿಸಿ, ಮನನೊಂದು

ಅಣ್ಣನ ಹೆಂಡತಿ ಕಣ್ಣಿಗೆ ಒಳ್ಳೆವಳು
ಸುಣ್ಣದ ನೀರ ಒಲಿಮುಂದ | ಇಟುಕೊಂಡು
ಎಮ್ಮೆ ಹಾಲೆಂದು ಬಡಿಸ್ಯಾಳು ||
ಹಡೆದಮ್ಮ ಇದ್ದಾಗ ನಡುಮನಿ ನನಗಿತ್ತು |
ಕಡಗದ ಕೈಯ್ಯ ಸೂಸಿ ಬಂದು | ನಡೆದಾಗ
ತುದಿಗಟ್ಟಿ ನನಗೆ ಎರವಾಯ್ತು ||

ಎನ್ನುವ ತಾಯಿ ತಂದೆಯರಿದ್ದಾಗಿನ ತನ್ನ ತವರು ಮನೆಗೂ, ನಂತರದ ತನ್ನ ಮನೆಯ ಅನುಭವವನ್ನು ದುಃಖಕರವಾಗಿ ವ್ಯಕ್ತಪಡಿಸಿರುವುದು ಕಂಡುಬರುತ್ತದೆ. ಇಷ್ಟಾದರೂ ಇವಳು ತವರಿನ ಮಮಕಾರವನ್ನು ಮರೆಯಲಾರಳು. ತನ್ನ ಅತ್ತಿಗೆಯರಿಂದ ಎಷ್ಟೇ ತೊಂದರೆಯಾದರೂ ತನ್ನ ತವರಿನ ಕುಡಿ ಚಿರಾಯುವಾಗಲೆಂದು ಅವಳಾಡಿರುವ ಮಾತುಗಳು ಜನಪದೀಯವಾದ ನುಡಿಮುತ್ತುಗಳೆನ್ನಬಹುದು.

ಹಾಲುಂಡ ತವರಿಗೆ ಏನೆಂದು ಹರಸಾಲಿ
ಹೊಳೆದಂಡೇಲಿರುವ ಕರಕೀಯ | ಕುಡಿಹಾಂಗ
ಹಬ್ಬಲಿ ಅವರ ಸರಬಳ್ಳಿ ||

ಎಂದು ತನ್ನ ತವರುಮನೆಯನ್ನೆ ಅರಸುತ್ತಾಳೆ. ಇದಕ್ಕಾಗಿಯೇ ಏನೋ ನಮ್ಮ ಸಂಸ್ಕೃತಿಯಲ್ಲಿ ಹೆಣ್ಣಿಗೆ ವಿಶಿಷ್ಟ ಸ್ಥಾನಮಾನ ನೀಡಿರುವುದು. ಇಂದಿಗೂ ನಾವು ನಮ್ಮ ದೇಶವನ್ನು ಮಾತೃಭೂಮಿ ಎನ್ನುತ್ತೇವೆ. ಮಾತೃಭಾಷೆ, ಭೂಮಿತಾಯಿ ಇತ್ಯಾದಿ ಪದಗಳಿಂದ ಕರೆಯುತ್ತೇವೆ. ಈ ಪದಗಳನ್ನು ಉಚ್ಚರಿಸುವಾಗಲೇ ಪ್ರತಿಯೊಬ್ಬರಲ್ಲಿಯೂ ಸ್ವಾಭಿಮಾನದ ಗೌರವ ಕಂಡುಬರುವುದು ಸ್ವಾಭಾವಿಕವೇ. 'ಸಂಸ್ಕೃತಿ' ಎಂಬ ಶಬ್ದದ ಅರ್ಥವೇ ಒಂದು ರೀತಿಯಲ್ಲಿ ಧರ್ಮ, ದೇವರು, ಸತ್ಯ, ಮೋಕ್ಷ ಇತ್ಯಾದಿ ಶಬ್ದಗಳ ವಿಶಾಲತೆಯನ್ನು ಸೂಚಿಸುತ್ತದೆ. ಇದನ್ನು ಬಿಟ್ಟು 'ಸಂಸ್ಕೃತಿ' ಎಂಬ ಶಬ್ದಕ್ಕೆ ಇದುವರೆವಿಗೂ ಸರಿ[illegible] ಯಾರು ಅರ್ಥ ನೀಡಿರುವುದು ಕಂಡುಬರುವುದಿಲ್ಲ. ಈ ದೃಷ್ಟಿಯಿಂದ ಸಭ್ಯತೆ, ನಾಗರಿಕತೆ, ವಿನಯಶೀಲತೆ, ಗುಣಗ್ರಾಹಕತೆ, ಕೃತಜ್ಞತೆ, ರಸಿಕತೆ, ವಿಚಾರಪರತೆ, ಕರ್ತವ್ಯದಕ್ಷತೆ, ಸತ್ಯಶೀಲತೆ, ನಾಡಿನ ಊರಿನ ಅಭಿಮಾನ ಇತ್ಯಾದಿ ಸದ್ಗುಣಗಳನ್ನು ತನ್ನ ಮಡಿಲಿನಲ್ಲಿ ಸೃಷ್ಟಿಸಿಕೊಂಡಿರುವ ಮೇಲಿನ ಜನಪದ ಹಾಡುಗಳು ಅಂದಿನಿಂದ ಇಂದಿನ ವಾಸ್ತವಿಕ

ಬದುಕಿನವರೆವಿಗೂ ಮಾದರಿಯಾಗಿವೆ. ಇವುಗಳನ್ನೇ ನಮ್ಮ ಶ್ರೀಮಂತ ಸಂಸ್ಕೃತಿ ಎನ್ನಬಹುದಾಗಿದೆ.

ಅಂದಿನಿಂದ ಇಂದಿನವರೆವಿಗೂ ನಮ್ಮ ಸಂಸ್ಕೃತಿಯ ಒಂದು ಪ್ರಮುಖ ಭಾಗ ವಾಗಿರುವುದು ಸತಿಪತಿಗಳು. ವಿಜಯನಗರದ ಕಾಲದಲ್ಲಿನ ಅನೇಕ ಚಾರಿತ್ರಿಕ ಆಧಾರಗಳಲ್ಲಿ (ಉದಾಹರಣೆಗೆ, ಶಾಸನಗಳಲ್ಲಿ, ಸಾಹಿತ್ಯ ಗ್ರಂಥಗಳಲ್ಲಿ) ವರ್ಣರಂಜಿತ ವಾಗಿ ಚಿತ್ರಿತವಾಗಿರುವುದನ್ನು ಕಾಣಬಹುದಾಗಿದೆ. ಈ ಹಂತದಲ್ಲಿ ಜನಪದರ ಹಾಡುಗಳು ಹೆಚ್ಚಿನ ಬೆಳಕನ್ನು ನೀಡುತ್ತವೆ. ಈ ಹಿಂದೆ ಹೆಣ್ಣು ವಿವಾಹದ ಸಮಯ, ವಿವಾಹದನಂತರದ ತಂದೆ ತಾಯಿಯರ ನುಡಿಮುತ್ತುಗಳಲ್ಲಿ ನಮ್ಮ ಸಂಸ್ಕೃತಿಯನ್ನು ನೋಡಿದೆವು. ಮದುವೆಯಾದ ಹೆಣ್ಣು ತನ್ನ ಗಂಡನ ಮನೆಗೆ ಬಂದಾಗ ತನ್ನ ಹುಟ್ಟಿನ ಪರಿಸರವನ್ನು ಮರೆತು ಹೊಸ ಹೊಸ ಜನರ, ಅವರ ಭಾವನೆಗಳ, ಹೊಸ ಪರಿಸರಕ್ಕೆ ಹೊಂದಿಕೊಂಡು ಮದುವೆಯೆಂಬುವುದು ಹೆಣ್ಣಿನ ದುಃಖಕ್ಕಾಗಿ ಮಾಡಿದ ಸಂಕೋಲೆಯಲ್ಲ ಎಂಬ ಮಾತನ್ನು ನಿಜ ಮಾಡುವಂತಾಗುತ್ತಾಳೆ. ತನ್ನ ಜೀವನದ ಸಾರ್ಥಕತೆಗಾಗಿ, ಗಂಡು ಹೆಣ್ಣುಗಳು ತಮ್ಮ ಜೀವನದ ಹರಕೆಯನ್ನು ಪರಸ್ಪರ ತುಂಬಿಕೊಳ್ಳುವುದಕ್ಕಾಗಿ, ಸಮಾಜವು ಕೈಗೊಂಡ ಒಂದು ಪವಿತ್ರ ವ್ಯವಸ್ಥೆಯೇ ಈ ಮದುವೆ ಎಂದು ಮನವರಿಕೆ ಮಾಡಿಕೊಳ್ಳುತ್ತಾಳೆ. ಇಂಥ ಸಮಯದಲ್ಲಿ ಸೃಷ್ಟಿಸಿಕೊಂಡಿ ರುವ ಜನಪದ ಪದಗಳು ಒಂದರ್ಥದಲ್ಲಿ ಜೀವನದ ಸಾರ್ಥಕತೆ, ರಸಿಕತೆಯಿಂದ ಕೂಡಿ ಮಾನವ ಸಂಸ್ಕೃತಿಯನ್ನೇ ಶ್ರೀಮಂತಗೊಳಿಸಿವೆ. ಉದಾಹರಣೆಗೆ, ಗಂಡ ಹೆಂಡಿರ ನಡುವೆ ಜಗಳ ಬರುವುದು ಸಹಜವೇ. ಆದರೆ ಇಂಥ ಜಗಳಕ್ಕೆ ಸಮಾಧಾನಕರವಾದ ಉತ್ತರ ನೀಡಿರುವುದು ಈ ಕೆಳಗಿನ ಸಾಲುಗಳಿಂದ ಗಮನಿಸ ಬಹುದು.

ಗಂಡ ಹೆಂಡಿರ ಜಗಳ ಗಂಧತೀಡಿದಾಂಗ
ನಿಂಗಕೆ ನೀರು ಎರೆಧಾಂಗ | ಹಿರೆಹೊಳೆಯ
ಗಂಗವ್ವ ಸಾರಿ ಹರಿದಾಂಗ ||

ಈ ಜನಪದದ ಸಾಲುಗಳು ಗಂಡಹೆಂಡತಿಯರಿಬ್ಬರೂ ಪರಸ್ಪರ ಒಬ್ಬರ ನ್ನೊಬ್ಬರು ಅರ್ಥಮಾಡಿಕೊಳ್ಳಲು ಹೆಚ್ಚಿನ ರೀತಿಯಲ್ಲಿ ಸಹಕಾರಿಯಾಗುತ್ತವೆ. ಇಷ್ಟಾದರೂ ಒಮ್ಮೊಮ್ಮೆ ಗಂಡ ಕೋಪಗೊಳ್ಳುವುದುಂಟು. ಇಂತಹ ಸಮಯದಲ್ಲಿ ತಾಳ್ಮೆಗೆ ಹೆಸರಾದ ಹೆಂಡತಿಯೇ ತಗ್ಗಿ ನಡೆದು ಅವನ ಕೋಪಕ್ಕೆ ಈ ಕೆಳಗಿನ ರೀತಿಯಲ್ಲಿ ಮುದ್ದು ನೀಡಬಯಸುತ್ತಾಳೆ.

ಮಡದೀನ ಬಡಿದಾನು, ಮನದಾಗ ಮರುಗ್ಯಾನು |
ಒಳಗ್ಹೋಗಿ ಕಾಲ ಹಿಡಿದಾನು | ಕೇಳ್ಯಾನು
ನಾಹೆಚ್ಚೊ ನಿನ್ನ ತವರ್ಹೆಚ್ಚೊ ||

ಎಂಬ ಅರ್ಥ ಗಾಂಭೀರ್ಯವಾದ ಹೆಣ್ಣು ಗಂಡುಗಳ ಅಂತರಂಗದ ಸಂಬಂಧ ವನ್ನು ಸೂಚಿಸುತ್ತದೆ. ಗಂಡ ಹೆಂಡತಿಯರ ನಡುವೆ ನಡೆಯುವ ಒಂದು ದೊಡ್ಡ ಕಥೆಯೇ ಈ ಚಿಕ್ಕ ಸಾಲುಗಳಲ್ಲಿ ಸೇರಿಕೊಂಡಿದೆ ಎನ್ನಬಹುದು. ಸತಿಪತಿಗಳ ಪ್ರಣಯದ ಒಂದು ಸುಂದರ ಚಿತ್ರಣವನ್ನು ನಮ್ಮ ಜನಪದರು ತುಂಬ ಸೊಗಸಾಗಿ, ರಸಿಕತೆಯ ಪದಗಳಿಂದ ವರ್ಣಿಸಿರುವುದಕ್ಕೆ ಬಡತನವಿಲ್ಲ. ಆದರ್ಶ ಮಡದಿಯು ತನ್ನ ಗಂಡನೇ ಜೀವನದ ಸರ್ವಸ್ವವೆಂದು ತಿಳಿದು ಅವನಿಂದ ತನ್ನ ಜೀವನ ಹಸ ನಾಗಲೆಂದೆ ತನ್ನಲ್ಲಿಯೇ ಹೇಳಿಕೊಳ್ಳುವ ಸುಂದರ ಜನಪದ ಸಾಲುಗಳು ಮಹತ್ವ ವೆನ್ನಿಸುತ್ತವೆ. ಉದಾಹರಣೆಗೆ,

ಕಾಣದೆ ಇರಲಾರೆ ಕನ್ನಡಿ ಮುಖದವರ |
ಕಾಮನಿಗಿಂತ ಚಲುವರ | ಚೆನ್ನಿಗರ |
ಕಾಣದರಗಳಿಗೆ ಇರಲಾರೆ ||
ಎಲ್ಲೆಲ್ಲಿ ನೋಡಿದರೆ ನಲ್ಲನಂಥವರಿಲ್ಲ|
ಹಲ್ಲು ನೋಡಿದರೆ ಹವಳವು | ನಲ್ಲನ
ಸೊಲ್ಲು ಕೇಳಿದರೆ ಸಮಾಧಾನ ||
ಹೇಸೆಗೆಯ ಬದುಕಿಗೆ ಆಸೆಯ ಮಾಡಲಿಲ್ಲ |
ರೇಸಿಮೆಯ ನುಡುವ ನನ್ನ ದೊರೆ | ರಾಯರ
ಆಸೆ ಮಾಡೇನು ಅನುಗಾಲ ||
ಕೂಲಿ ಮಾಡಿದರೇನು, ಕೋರೆ ಹೊತ್ತರೇನು
ನಮಗ ನಮರಾಯ ಬಡವೇನ | ಬಂಗಾರ
ಮಾಲು ಇದ್ದಾಂಗ ಮನೆಯಾಗ ||

ಎನ್ನುವ ಮಾತುಗಳು ಆಕೆಯ ಸುಂದರ ಸುಮಧುರ ದಾಂಪತ್ಯ ಜೀವನದ ಪ್ರತಿಬಿಂಬಗಳಲ್ಲದೆ ಮತ್ತೇನು? ನಮ್ಮ ಸಂಸ್ಕೃತಿಯಲ್ಲಿ ಎಂದೋ ಜನರು ಸಂಪತ್ತಿಗೆ ಆಸೆಪಟ್ಟವರಲ್ಲ. ಅದರ ಬದಲಿಗೆ ಒಲಿದ ಹೆಣ್ಣಿಗೆ ಪುರುಷನೆ ಇಂದ್ರ, ಚಂದ್ರ, ಸರ್ವಸ್ವವನ್ನಾಗಿ ಕಾಣಿಸುವುದಾಗಿರುತ್ತದೆ. ಜಾತ್ರೆಗೆ ಅಥವಾ ನೆಂಟರ ಮನೆಗೆ ಹೋದ ತನ್ನ ಗಂಡನನ್ನು ನೆನೆದು ಅವಳಾಡುವ ಪದಗಳೇ ಇಲ್ಲಿನ ಸಂಸ್ಕೃತಿಗೆ ಸಾಕ್ಷಿ ಯಂತಿವೆ :

ಯಾಲಕ್ಕಿ ಕಾಯ ಸುಲಿದು ಯಾವ ಅಡಗಿ ಮಾಡಲಿ |
ಊರಿಗ್ಹೋಗಾರ ರಾಯರು | ಬಾರದೆ
ಯಾವಡಗಿ ಮಾಡಿ ಫಲವೇನು ||

ಎಂದು ತನ್ನ ಗಂಡನಿಲ್ಲದ ಮನೆ ಅವಳಿಗೆ ಕತ್ತಲಾಗಿ ಕಂಡಿರುವುದು ನಮ್ಮ ಸಂಸ್ಕೃತಿಗೆ ಜೀವತುಂಬುತ್ತದೆ. ಈ ವಿಷಯದಲ್ಲಿ ಕೇವಲ ಹೆಂಡತಿ ಮಾತ್ರ ಈ ರೀತಿಯ ವಿರಹವೇದನೆಯನ್ನು ಅನುಭವಿಸುವುದಿಲ್ಲ. ಹೆಂಡತಿಯು ತವರು ಮನೆಗೆ

ಹೋಗಿದ್ದಾಗ ಗಂಡನಾದವನು ತಾನು ಅನುಭವಿಸುವ ಕಷ್ಟವನ್ನು ವ್ಯಕ್ತಪಡಿಸುವ ರೀತಿಯೇ ಬೇರೆಯಾಗಿರುತ್ತದೆ. ಉದಾಹರಣೆಗೆ :

ಅಡಗೀಯ ಮನೆಯಾಗ ಮಡದೀಯ ಸುಳಿವಿಲ್ಲ |
ಅಡಗಿ ಬಾಯಿಗೆ ರುಚಿಯಿಲ್ಲ | ಹಡೆದವ್ವ
ಮಡದಿ ತವರೀಗೆ ಹೋಗ್ಯಾಳ ||

ಎಂದು ತನ್ನ ತಾಯಿಯ ಅಡುಗೆಯೇ ಅವನಿಗೆ ರುಚಿಸಿದಂತೆ ಭಾಸವಾಗುತ್ತದೆ.

ಮದುವೆಯಾಗುವ ಸಮಯ, ಮದುವೆಯ ಸಮಯ, ಮದುವೆಯ ನಂತರದ ಜೀವನ ಹಾಗೂ ಗಂಡ ಹೆಂಡಿರ ಸುಮಧುರ ಸಂಬಂಧದ ಬಗ್ಗೆ ಹುಟ್ಟಿರುವ ಜನಪದಗಳಲ್ಲದೆ ಮದುವೆಯೇ ಆಗದೆ ಇರುವ ಯುವಕ ಯುವತಿಯರಲ್ಲಿ ಮೋಹಕವಾದ ಸನ್ನಿವೇಶಗಳನ್ನು ಸೃಷ್ಟಿಸುವ ಜನಪದ ಗೀತೆಗಳನ್ನು ಕಾಣಬಹುದಾಗಿದೆ. ಇವುಗಳು ಹೆಚ್ಚಾಗಿ ಸ್ವಾರಸ್ಯವೂ ಹಾಗೂ ರಸಿಕತೆಯಿಂದ ಕೂಡಿರುವುದೂ ಆಗಿರುತ್ತವೆ. ಸಾಮಾನ್ಯವಾಗಿ ಹಿಂದೆ ಮದುವೆಗೆ ಬಂದ ಹೆಣ್ಣು ಗಂಡುಗಳು ಅನೇಕ ಸಂದರ್ಭಗಳಲ್ಲಿ ಸಂಧಿಸುವ ಅವಕಾಶ ಹಳ್ಳಿಗಳಲ್ಲಿ ಹೆಚ್ಚಾಗಿ ಕಂಡುಬರುತ್ತಿತ್ತು. (ಇದರಿಂದ ಇಂದೇನೋ ಹೊರತಾಗಿಲ್ಲ.) ಅವರಲ್ಲಿ ಪರಸ್ಪರ ಮದುವೆಯಾಗುವವರಿರಬಹುದು, ಆಗುವ ನಿರೀಕ್ಷೆಯವರಿರಬಹುದು ಅಥವಾ ಮೇಲಿನವೆರಡೂ ಇಲ್ಲದಿರಬಹುದು. ಇಂತಹ ಸನ್ನಿವೇಶದಲ್ಲಿ ತಮ್ಮದೇ ಮಿತಿಯೊಳಗೆ ಸರಸ ಸಲ್ಲಾಪಗಳನ್ನು ಸೂಚಿಸುವುದರ ಜೊತೆಗೆ ಒಂದು ಸಾಮಾಜಿಕ ಬದುಕಿಗೆ, ರೀತಿ ನೀತಿಗಳಿಗೆ ಒಳಪಟ್ಟ, ಮೌಲ್ಯಯುತ ಜನಪದ ಗೀತೆಗಳು ಸೃಷ್ಟಿಗೊಂಡು ಇಂದಿನ ಆಧುನಿಕ ರಸಿಕ ಸಾಹಿತ್ಯವು ನಾಚುವಂತೆ ಮಾಡಿವೆ. ಉದಾಹರಣೆಗೆ,

ನೀರಿಗೆ ಹೋಗೋಳೆ, ನೀಲದುಂಗುರದವಳೆ
ವೈಯ್ಯಾರಿ ಸಣ್ಣ ದನಿಯವಳೇ | ಮಾವನ ಮಗಳೆ
ವೈಯ್ಯಾರ ಬಿಟ್ಟು ತೆರಹೇಳೆ |

ಎಂದು ಬಾವಿ ನೀರಿಗೆ ಹೋಗುತ್ತಿರುವವಳನ್ನು ನಿಲ್ಲಿಸಿಕೊಂಡು ರೇಗಿಸುತ್ತಾನೆ. ಅಷ್ಟೇ ಅಲ್ಲದೆ ಆಕೆಯನ್ನು ತಾನೇ ಮದುವೆಯಾಗುವುದೆಂಬ ಧೈರ್ಯದಿಂದ ಅವಳ ಸೆರಗನ್ನು ಹಿಡಿಯುತ್ತಾನೆ. ಅದಕ್ಕೆ ಅವಳ ವಯ್ಯಾರದ ನಾಚಿಕೆ ಹಾಗೂ ಮನಸಿಲ್ಲದ ಮುನಿಸಿನಿಂದ ಸಿಡಿದು ನಿಂತು

ಸೀರೆ ಸೆರಗ ಬಿಡೋ
ಸೀರೆ ಸೆರಗ ಬಿಡೋ ನನಗೆಣೆಯ
ಮೂರ ಬೀದಿ ಜನರು ನೋಡ್ಯಾರು ||

ಎಂದು ಹೇಳಿ ವಯ್ಯಾರದಿಂದ ಮುಂದೆ ಹೋಗಲು ಯತ್ನಿಸಿದರೆ ಅವನು ಸುಲಭವಾಗಿ ಅವಳ ಸೆರಗ ಬಿಡಲಾರದೆ ಅವಳ ಸೌಂದರ್ಯವನ್ನು ಹೊಗಳುವುದರ ಮೂಲಕ ಆಕೆಯ ಮನಸ್ಸನ್ನು ಒಲಿಸಿಕೊಳ್ಳಲು ಬಯಸುವ ರೀತಿ ಎಂದರೆ,

ಮಾವನ ಮಗಳೇ ಕೋಗಿಲೆ ದನಿಯೋಳೆ
ತಾವರೆ ಮೊಗ್ಗಿನ ಮೊಲೆಯೋಳೆ | ಮಾವನ ಮಗಳೆ
ಬಾಯಾರಿ ಬಂದೇ ನೀರ್‌ಕೊಡೆ ||

ಎಂದು ಅರ್ಥವತ್ತಾದ ತನ್ನ ಬಯಕೆಯನ್ನು ಸೂಚಿಸುತ್ತಾನೆ. ಇಂತಹ ಸನ್ನಿವೇಶದಲ್ಲಿ ಪದ್ಯದ ಸಾಲುಗಳು ಕಾಮ ಪ್ರೇಮಗಳ ಸಮ್ಮಿಳನದ ವಾಸ್ತವ ದೃಷ್ಟಿಯಿರುವುದು ಕಂಡು ಬರುತ್ತವೆ. ಮನುಷ್ಯನು ಸಹಜ ಪ್ರವೃತ್ತಿಗಳನ್ನು ಅರಿತು ಅನುಸರಿಸಿ ಆ ಮೂಲಕ ಅವುಗಳನ್ನು ಅನುಷ್ಠಾನಕ್ಕೆ ತರುವ ಪ್ರಯತ್ನವನ್ನು ಅಂದಿನ ಜನಪದರು ತಮ್ಮ ಸಂಸ್ಕೃತಿಯಲ್ಲಿ ಬೆಸೆದುಕೊಂಡಿದ್ದರೆನ್ನಬಹುದು.

ನಮ್ಮ ಜನಪದರು ಸಂಸಾರದ ಸರಸ ವಿರಸಗಳನ್ನು ಹೇಳುವಾಗ 'ಸಂಗಾತಿ ಹೆಣ್ಣು, ಜಂಬು ನೇರಳೆ ಹಣ್ಣು' 'ಮುಖಭಾವ ಮಿಂಚು ಹೊಳೆದಂತೆ' 'ಮೈಬಣ್ಣ ನಿಂಬೆ ಹಣ್ಣಂತೆ' ಎಂದು ತನ್ನೆಲ್ಲಾ ರಸಿಕತೆಯ ಭಾವನೆಯನ್ನು ವ್ಯಕ್ತಪಡಿಸುವುದು ಕಂಡು ಬಂದರೆ, ಮುಂದುವರೆದು ಅವಳ ಸೀರೆಯ ನೆರಿಗೆಯನ್ನು ಬೀಸಣಿಗೆಗೂ, ಗುಲಗಂಜಿಗೂ ಜಡೆಯನ್ನು ಜಾಲದ ಹೂವಿಗೂ, ನಾಗರ ತೆಕ್ಕೆಗೂ, ಬಳಕುವ ಬಾಲೆಯನ್ನು ನಲಿದಾಡುವ ನವಿಲಿಗೂ ಹೋಲಿಸಿ ಅವರ ರಸಿಕ ಸಂಸ್ಕೃತಿ ಮೆರೆದಿರುವುದಕ್ಕೆ ಇಂದಿಗೂ ಅವು ನಿದರ್ಶನವಾಗಿವೆ. ಶತಶತಮಾನಗಳಿಂದಲೂ ನಮ್ಮ ಜನಪದರ ಮಾದರಿಯಲ್ಲಿಯೇ ಮುಂದುವರೆದ ನಾವು ಕೆಲವು ಬದಲಾವಣೆಗಳೊಂದಿಗೆ ಈ ಜಾಡಿನಲ್ಲಿಯೇ ಮುಂದುವರಿದಿರುವುದಕ್ಕೆ ಅಂದಿನ ಭದ್ರವಾದ ಬುನಾದಿಯೇ ಕಾರಣವಾಗಿದೆ.

ಜಾತಿ ವ್ಯವಸ್ಥೆ

ಭವ್ಯ-ಸುಂದರ-ವೈಭವದ ಸಾಮ್ರಾಜ್ಯವೆಂದು ಇತಿಹಾಸಕಾರರಿಂದ ಕರೆಸಿಕೊಂಡ ವಿಜಯನಗರ ಸಾಮ್ರಾಜ್ಯದ ನಿಜವಾದ ಭವ್ಯತೆ ಸುಂದರತೆಯ ಹಾಗೂ ಅದರ ಉಜ್ವಲ ವಾದ ಸಂಸ್ಕೃತಿಯನ್ನು ನಿರ್ದಿಷ್ಟವಾಗಿ ಅರ್ಥ ಮಾಡಿಕೊಳ್ಳಲು ಅಂದಿನ ಕಾಲದಲ್ಲಿದ್ದ ಜಾತಿ ವ್ಯವಸ್ಥೆ ಹಾಗೂ ಅದರ ವಿವಿಧ ಸ್ತರಗಳ ಅಧ್ಯಯನವು ಅತ್ಯಾವಶ್ಯಕವೆನ್ನಿಸುತ್ತದೆ. ವಿಜಯನಗರದಲ್ಲಲ್ಲದೆ ಭರತಖಂಡದಲ್ಲಿಯೇ ಜಾತಿಯು ಸಮಾಜದ ಮೂಲಭೂತ ಹಾಗೂ ವಿಶಿಷ್ಟವಾದ ಸಂಸ್ಥೆಯಾಗಿ ಬೆಳೆದುಬಂದಿದೆ ಎಂದರೆ ತಪ್ಪಾಗದು. ಏಕೆಂದರೆ ಭಾರತದ ಜಾತಿ ವ್ಯವಸ್ಥೆಯನ್ನು ಹೋಲುವ ಕೆಲವು ಪದ್ಧತಿಗಳೆಂತೂ ಪ್ರಪಂಚದ ಇತರೆ ಭಾಗಗಳಲ್ಲಿ ಹೆಚ್ಚಾಗಿ ಕಂಡು ಬರುವುದೇ ಇಲ್ಲ.

(ಜಪಾನ್, ಇಂಡೋಚೈನ, ಇಂಡೋ ನೇಷ್ಯ, ಬಲೋಚಿಸ್ಥಾನ ಮುಂತಾದವು ಗಳಲ್ಲಿ ಅಲ್ಪ ಪ್ರಮಾಣದಲ್ಲಿ ಕಾಣಬಹುದು.) ವಿಜಯನಗರ ಸಾಮ್ರಾಜ್ಯದಲ್ಲಿ ಜಾತಿಯು ಸಾಮ್ರಾಜ್ಯದ ಹಾಗೂ ಸಮಾಜದ ವಿಶಿಷ್ಟ ಸಂಸ್ಥೆಯಾಗಿತ್ತೆಂದು ಹೇಳಿದರೆ ತಪ್ಪಾಗಲಾರದು.

ಜಾತಿ ಪದ್ಧತಿಯು ವಿಜಯನಗರ ಸಾಮ್ರಾಜ್ಯದಾದ್ಯಂತ ಸಾಮಾಜಿಕ ಸಂಘಟನೆಯ ಎಲ್ಲಾ ಮೂಲಗಳಲ್ಲಿಯೂ ತನ್ನದೇ ಆದ ರೀತಿಯಲ್ಲಿ ಆಕ್ರಮಿಸಿ ಕೊಂಡಿತು. (ಇಂದು ಅಂದಿಗಿಂತಲೂ ಹೆಚ್ಚಾಗಿಯೇ ಆಕ್ರಮಿಸಿಕೊಳ್ಳುತ್ತಿದೆ.) ಅಂದಿನ ಇತಿಹಾಸಕ್ಕೆ ಸಂಬಂಧಿಸಿದ ಏನೆಲ್ಲಾ ದಾಖಲೆಗಳು ದೊರಕಿಸಿದರೂ ಅಂದಿನ ಸಾಮಾ ಜಿಕ ವ್ಯವಸ್ಥೆಯಲ್ಲಿ, ಜಾತಿಯಿಂದ ಪ್ರಭಾವಿತವಾಗಿರದ ಅಂಶಗಳು ವಿರಳವೆಂದೇ ಹೇಳಬಹುದು. ಜನರು ಆಚರಿಸಿಕೊಂಡು ಬರುತ್ತಿದ್ದ ಸಂಪ್ರದಾಯಗಳು, ಹಬ್ಬ, ಹರಿದಿನ, ಜಾತ್ರೆ, ಉತ್ಸವ ಮುಂತಾದವುಗಳು ಹೇಗೆ ತಮ್ಮ ಜೀವನದಲ್ಲಿ ಮಹತ್ವದ ಸ್ಥಾನವನ್ನು ಹೊಂದಿವೆಯೋ ಹಾಗೆಯೇ ಸಾಮಾಜಿಕ ವ್ಯವಸ್ಥೆಯ ಆದಿ ಮತ್ತು ಅಂತ್ಯ ಎಲ್ಲವೂ ಕೂಡ ಜಾತಿಯೇ ಆಗಿತ್ತೆಂದರೆ ಉತ್ಪ್ರೇಕ್ಷೆಯೆನಿಸಲಾರ ದೇನೋ. ಇದು ಒಂದು ರೀತಿಯಲ್ಲಿ ಹಿಂದೂ ಧರ್ಮದ ಹಕ್ಕನ್ನು ನಿರ್ಧರಿಸುತ್ತದೆನ್ನ ಬಹುದು. ಒಬ್ಬ ಹಿಂದೂ ಧರ್ಮೀಯನು ಜನನದಿಂದ ಮರಣದವರೆಗೂ ಮತ್ತು ಅದರಾಚೆಯೂ ಕೂಡ ಜಾತಿಯ ಆಧಾರದಲ್ಲಿಯೇ ಬದುಕುವಂತಾಗಿದೆ. ಹೀಗಾಗಿ ಅಂದು ಜಾತಿಯೇ ಎಲ್ಲವನ್ನು ನಿರ್ಧರಿಸುತ್ತಿತ್ತು. ಉದಾಹರಣೆಗೆ: ಒಬ್ಬ ವ್ಯಕ್ತಿ **ಯಾರನ್ನು ಮದುವೆಯಾಗಬೇಕು, ಹೇಗೆ ಮದುವೆಯಾಗಬೇಕು, ಎಲ್ಲಿ ವಾಸಿಸಬೇಕು, ಹೇಗೆ ಬದುಕಬೇಕು, ಏನನ್ನು ತಿನ್ನಬೇಕು, ಹೇಗೆ ತಿನ್ನಬೇಕು, ಎಲ್ಲಿ ಕೆಲಸ ಮಾಡಬೇಕು, ಹೇಗೆ ಕೆಲಸ ಮಾಡಬೇಕು, ಎಲ್ಲಿ ಹಾಗೂ ಹೇಗೆ ಅವನು ಸಾಯಬಹುದು, ಅವನನ್ನು ಎಲ್ಲಿ ಶವಸಂಸ್ಕಾರ ಮಾಡಬೇಕು, ಹೇಗೆ ಮಾಡಬೇಕು ಹಾಗೂ ಇನ್ನೂ ಮುಂದುವರೆದು ಸಾವಿನ ನಂತರ ಅವನಿಗೆ ಏನಾಗುತ್ತದೆ ಎನ್ನುವ ಪ್ರತಿಯೊಂದು ವಿಷಯವೂ ಕೂಡ ಜಾತಿಯಿಂದಲೇ ನಿರ್ಣಯವಾಗುತ್ತಿತ್ತು.** ಸಂಕ್ಷಿಪ್ತವಾಗಿ ಹೇಳುವುದಾದರೆ, ವಿಜಯನಗರದರಸರ ಕಾಲದಲ್ಲಿ ಜಾತಿಯೇ ಅಂದಿನ ಜೀವನದ ಎಲ್ಲ ಅಂಶಗಳನ್ನು ನಿರ್ಧರಿಸುತ್ತಿತ್ತೆನ್ನಬಹುದು.

ಈ ಕೆಟ್ಟ ಸಾಮಾಜಿಕ ಪಿಡುಗನ್ನು ನಿರ್ಮೂಲನೆ ಮಾಡಲು ವಿಜಯನಗರದ ಅರಸರ ಕಾಲದಲ್ಲಿಯೇ ಅಲ್ಲದೆ ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ನಡೆದ ಕೆಲವು ಪ್ರಯತ್ನಗಳನ್ನು ಇಲ್ಲಿ ಉದಾಹರಣೆಯಾಗಿ ನೀಡಬಹುದು. ಜಾತಿ ಪದ್ಧತಿಯ ವಿರುದ್ಧ ಯುದ್ಧವನ್ನೇ ಸಾರಿದವನೆಂದರೆ ಪ್ರಾಚೀನ ಧಾರ್ಮಿಕ ಹಾಗೂ ಸಾಂಸ್ಕೃತಿಕ ನಾಯಕರಲ್ಲಿ (ಕ್ರಿ.ಪೂ.ದಲ್ಲಿಯೇ) ಗೌತಮ ಬುದ್ಧನು ಮೊದಲಿಗ. ಈ ಮಹಾನ್ ವ್ಯಕ್ತಿಯ ಧರ್ಮ ಹಾಗೂ ತತ್ವ ಬೋಧನೆಯು ಈತನ ಜೀವಿತ ಕಾಲದಲ್ಲಿ

ಜಾತಿಪದ್ಧತಿಯ ವಿರುದ್ಧ ಕೈಗೊಂಡ ನಿರ್ಣಯಗಳಿಂದ ದೇಶದಲ್ಲಿ ಇನ್ನೇನು ಜಾತಿ ಎಂಬ ಪದವೆ ಸಂಪೂರ್ಣವಾಗಿ ಕಣ್ಮರೆಯಾಗುತ್ತದೆಯೇನೋ ಎಂಬುವಷ್ಟರ ಭ್ರಮೆಯನ್ನು ಉಂಟುಮಾಡಿತು. ಆದರೆ ಅವನ ನಂತರದ ಘಟನೆಗಳು ಈ ಅಭಿಪ್ರಾಯವನ್ನು ಖಚಿತಪಡಿಸುವಲ್ಲಿ ವಿಫಲವಾದವು. ಪ್ರಾರಂಭದ ಸಮಾಜ ಸುಧಾರಕರ ಉತ್ಸಾಹ ಕಳೆಗುಂದಿ, ಜಾತಿ ಪದ್ಧತಿಯು ನಿಧಾನವಾಗಿ ತಾನಾಗಿಯೇ ಪುನಃ ಪ್ರತಿಸ್ಥಾಪಿಸಲ್ಪಟ್ಟಿತು. ಇಂಥ ಸಮಯದಲ್ಲಿ ಜಾತಿಯು ತನ್ನ ವಿವಿಧ ಮುಖ ವನ್ನೊತ್ತ ಕವಲುಗಳನ್ನು ಹೊಸ ಧರ್ಮದಲ್ಲಿ ತೋರಿಸಿತು. ಆ ಹೊಸ ಧರ್ಮದ ಹಿಂಬಾಲಕರಲ್ಲಿ ಹಾಗೂ ಅದರದೇ ಆದ ಚೌಕಟ್ಟಿನೊಳಗೆ ವಿವಿಧ ಜಾತಿ ಗುಂಪು ಗಳಾಗಿ ಛಿದ್ರಛಿದ್ರವಾಗಿ ವಿಂಗಡಿಸಲ್ಪಟ್ಟಿತು.

ಬುದ್ಧನ ನುತರ ಭಾರತದ ಇತರ ಭಾಗಗಳಲ್ಲಿ ಅನೇಕ ಮಹಾನ್ ವ್ಯಕ್ತಿಗಳು ಜಾತಿಪದ್ಧತಿಯನ್ನು ನಿರ್ಮೂಲನ ಮಾಡಲು ಪ್ರಯತ್ನಿಸಿದರು. ಉದಾಹರಣೆಗೆ ಹೇಳುವುದಾದರೆ ಮಹಾರಾಷ್ಟ್ರದಲ್ಲಿ ಸಂತ ಜ್ಞಾನೇಶ್ವರ ಹಾಗೂ ನಾಮದೇವ, ಗುಜರಾತಿನಲ್ಲಿ ನರ್ಸಿಮೆಹ್ತಾ, ಬಂಗಾಳದಲ್ಲಿ ಚೈತನ್ಯ ಮಹಾಪ್ರಭು, ಉತ್ತರ ಪ್ರದೇಶದಲ್ಲಿ ಮಹಾತ್ಮ ಕಬೀರ, ಆಂಧ್ರದಲ್ಲಿ ವಲ್ಲಭಚಾರ್ಯರುಗಳಾದರೆ ಕನ್ನಡ ನಾಡಿನಲ್ಲಿ ಬಸವೇಶ್ವರ ಮತ್ತು ಅಕ್ಕಮಹಾದೇವಿಯ ಜಾತಿರಹಿತ ಸಮಾಜವನ್ನು ಸ್ಥಾಪಿಸಲು ಪ್ರಯತ್ನಿಸಿ ಕ್ರಾಂತಿ ನಡೆಸಿರುವುದು ನಮಗೆಲ್ಲ ತಿಳಿದಿರುವ ವಿಷಯವೆ. ಆದರೆ ಅವರ ಕ್ರಾಂತಿ, ಪ್ರಯತ್ನಗಳೆಲ್ಲವೂ ಕೂಡ ಇಂದಿಗೆ ಹೋಲಿಸಿ ನೋಡಿದರೆ ಸಂಪೂರ್ಣ ವ್ಯರ್ಥವಾಗಿ, ಶೂನ್ಯರೂಪದಲ್ಲಿ ಕಾಣಿಸುತ್ತದೆ.

ವಿಜಯನಗರದ ಅರಸರ ಕಾಲದಲ್ಲಿಯೂ ಜಾತಿ ಜಾತಿಗಳ ಅರಿವು ಮೂಡಿಸಲು, ಜಾತಿ ನಿರ್ಮೂಲನ ಮಾಡಲು ದಾಸರುಗಳು ತಮ್ಮ ಕೀರ್ತನೆಗಳ ಮೂಲಕ, ಸರ್ವಜ್ಞನು ತನ್ನ ವಚನದ ಮೂಲಕ ಪ್ರಯತ್ನಿಸಿರುವುದು ಕಂಡುಬರುತ್ತದೆ. ಆದರೆ ಅವರ ಪ್ರಯತ್ನಗಳೂ ಬಲವಾಗಿ ಭೂಮಿಗೆ ನಾಟಿರುವ ಜಾತಿಯ ಬೇರನ್ನು ಸಡಿಲಗೊಳಿಸುವಲ್ಲಿ ಫಲಕಾರಿಯಾಗಲಿಲ್ಲ ಎನ್ನಬಹುದು. ಏಕೆಂದರೆ ಅವರ ಜಾತಿ ನಿರ್ಮೂಲನದ ಕರೆಗಳು ಕೇವಲ ಸಾಮ್ರಾಜ್ಯದ ರಾಜಧಾನಿ ಹಾಗೂ ಪ್ರಮುಖ ಪಟ್ಟಣಗಳಿಗೆ ಮಾತ್ರ ಸೀಮಿತವಾಗಿತ್ತೆನ್ನಬಹುದು. ಅಂದು ಜಾತೀಯತೆಯ ತಪ್ಪು ಕಲ್ಪನೆಯನ್ನು ಜನರಲ್ಲಿ ತಿಳಿಸಲು ಕನಕದಾಸರ ಕೀರ್ತನೆಗಳು ಹೆಚ್ಚು ಸಹಕಾರಿಯಾಗಿದೆ. ಅವು 'ರಾಮಧಾನ್ಯ ಚರಿತ್ರೆ'ಯು ಈ ದೃಷ್ಟಿಯಲ್ಲಿ ಮೊದಲ ಸ್ಥಾನದಲ್ಲಿ ನಿಲ್ಲುತ್ತದೆ. ಅಂದು ಸಾಧು, ಸನ್ಯಾಸಿ, ದಾಸ, ಜಂಗಮ ಮುಂತಾದ ವೇಷಗಳ ಮೂಲಕ ಸಾಮ್ರಾಜ್ಯದಲ್ಲಿ ನಡೆಯುತ್ತಿರುವ ಕಪಟ ವಂಚನೆ ಅವ್ಯವಹಾರಗಳಿಗೆ ಲೆಕ್ಕವೇ ಇಲ್ಲವೆಂದು ತಾವೇ ಕಣ್ಣಾರೆ ಕಂಡು ಖಂಡಿಸಿದ್ದಾರೆ. ಇದಕ್ಕೆ ಅವರು

"ಜಪವ ಮಾಡಿದರೇನು, ತಪವ ಮಾಡಿದರೇನು, ಕಪಟಗುಣ ವಿಪರೀತ ಕಲುಷ ವಿದ್ದವರು" ಎಂದು ನೇರವಾಗಿಯೇ ಪ್ರಶ್ನಿಸುತ್ತಾರೆ. ಇನ್ನೂ ಮುಂದುವರೆದು 'ನೇಮವಿಲ್ಲದ ಹೋಮವೇತಕಯ್ಯ' ಎಂದು ಕೇಳುತ್ತಾರೆ. ಇಡೀ ಮನುಕುಲವನ್ನು ಸಮದೃಷ್ಟಿಯಿಂದ ಕಾಣುವ ಕನಕದಾಸರಿಗೆ ಮಹಮ್ಮದೀಯರಾಗಲಿ, ಲಿಂಗವಂತ ರಾಗಲೀ, ಬ್ರಾಹ್ಮಣರಾಗಲಿ ಬೇರೆಯಾಗಿ ಕಾಣುವುದಿಲ್ಲ ಅದಕ್ಕೆ ಅವರು ಹೇಳಿರುವ ಕೀರ್ತನೆ ಎಂದರೆ,

ಅಲ್ಲಾ ಖುದಾ ಎಂಬ ಅರ್ಥವನು ಅರಿಯದೆ |
ಮುಲ್ಲಾ ಶಾಸ್ತ್ರದ ನೆಲೆಯ ಮುನ್ನರಿಯದೆ
ಕಳ್ಳ ಕೂಗನೆ ಕೂಗಿ ಬೊಗಳಿ ಬಾಯ್ದೆರೆವಂತ |
ಕಳ್ಳರಿಗೆ ತಾ ವೀರಸ್ವರ್ಗ ದೊರಕುವುದೆ
ಲಿಂಗಾಂಗದೊಳಗಿರುವ ಅನುಭವ ತಿಳಿಯದೆ |
ಅಂಗಲಿಂಗದ ನೆಲೆಯ ಗುರುತರಿಯದೆ
ಜಂಗಮ ಸ್ಥಾವರದ ಹೊಲಬನರಿಯದೆ
ಇಂಥ ಭಂಗಿ ಮುಕ್ಕುಗಳೆಲ್ಲ ಲಿಂಗವಂತರಹುದೆ

ಎಂದು ಮಹಮ್ಮದೀಯರಿಗೆ ಹಾಗೂ ಲಿಂಗವಂತರಿಗೆ ಪ್ರಶ್ನೆ ಮಾಡಿದ್ದಾರೆ. ಅಂದಿನ ಸಮಾಜದಲ್ಲಿ ಇದ್ದ ಬ್ರಾಹ್ಮಣರು, ಚಿನಿವಾರರು, ಕಂಚುಗಾರರು, ತಾಮ್ರ ಮತ್ತು ಹಿತ್ತಾಳೆ ಕೆಲಸ ಮಾಡುವವರು, ಬಡಗಿಗಳು, ಕಮ್ಮಾರರು, ಕಲ್ಲುಕುಟುಕರು, ಚಿನ್ನ ಬೆಳ್ಳಿ ಕೆಲಸ ಮಾಡುವ ಅಕ್ಕಸಾಲಿಗರು, ಹೊಲೆಯರು, ಮಾದಿಗರು, ಜಾಡಮಾಲಿಗಳು, ಕೊಚ್ಚ, ಕೊರಮರು, ಇನ್ನೂ ಮುಂದುವರೆದು ಹೆಣ್ಣು-ಗಂಡು, ಸಣ್ಣವ-ದೊಡ್ಡವ, ಸಿರಿವಂತ-ಬಡವ, ಉನ್ನತ ಜಾತಿ ಎಂದು ಹೇಳಿಕೊಳ್ಳುವವ - ಕೆಳಜಾತಿಯವನೆಂದು ಕರೆಸಿಕೊಳ್ಳುವವ, ಕವಿಗಳು-ವಿಜ್ಞಾನಿಗಳು, ಸನ್ಯಾಸಿ-ಬಿಕನಾಸಿ, ದೊರೆ-ಪರೆ, ಪುರೋಹಿತ- ಪಾದ್ರಿ ಇವರೆಲ್ಲರೂ ತಮ್ಮ ತಮ್ಮ ಕೆಲಸಗಳಲ್ಲಿ ನಿರತರಾಗಿರುವುದನ್ನು ಗಮನಿಸಿ "ಎಲ್ಲರೂ ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ" ಎಂಬ ಒಂದೇ ಒಂದು ಪಲ್ಲವಿಯಲ್ಲಿ ನಿರೂಪಿಸುತ್ತಾರೆ. ಕೆಲಸಕ್ಕೆ ಪ್ರಮುಖ ಆದ್ಯತೆ ನೀಡಿದ ಬಸವಣ್ಣನವರು "ಕಾಯಕವೇ ಕೈಲಾಸ" ಎಂದು ಕರೆದರೆ ಕನಕದಾಸರು ಕಾಯಕವನ್ನು ಕೈಗೊಳ್ಳದೆ ಸೋಂಬೇರಿಯಾಗಿ ಇರುವ ಗಂಡನ್ನು "ಕರ್ಮವಿಲ್ಲದ ಗಂಡು ಕರಿಯ ಒನಕೆಯ ತುಂಡು" ಎಂದು ತಮ್ಮ ಮಾತಿನಲ್ಲಿ ಅಭಿವ್ಯಕ್ತಿಗೊಳಿಸಿದ್ದಾರೆ. ಹಾಗೆಯೇ ಮನುಜರಿಗೆ ನೀಡಿದ ಪ್ರಮುಖ ಸಂದೇಶವೆಂದರೆ "ತಾನು ತನ್ನನರಿಯದಿರೆ ಜಗತ್ತಿನಲ್ಲಿ ಪ್ರೌಢನಾಗಲಾರ" ನೆಂಬ ಮಾತನ್ನು ಹೇಳಿ ಮಾನವನಿಗೆ ಜ್ಞಾನದ ಜಗತ್ತಿಗೆ ಕೊಂಡೊಯ್ಯುವ ಪ್ರಯತ್ನ ಮಾಡಿದ್ದಾರೆ. ವಿಜಯ ನಗರದ ಸಾಮ್ರಾಜ್ಯದಲ್ಲಿಯೇ ಇದ್ದು ಅಲ್ಲಿ ನೇರವಾಗಿ ಕಂಡು ಕೇಳಿದ ಜಾತಿ

ವ್ಯವಸ್ಥೆ ಹಾಗೂ ಕುಲಗಳ ನಡುವಿನ ಅಂತರವನ್ನು ಗಮನಿಸಿ ಅವರಾಡಿದ ಕೀರ್ತನೆ ಇಂದಿಗೂ ಮುಂದೆಯೂ ಪ್ರಸ್ತುತವೆನ್ನಿಸಿಕೊಳ್ಳುತ್ತದೆ. ಕುಲವನ್ನು ಕುರಿತು ಕನಕ ದಾಸರು ಹಾಡಿದ ಮಾತೆಂದರೆ,

ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೇನಾದರೂ ಬಲ್ಲಿರಾ ||

ಹುಟ್ಟದ ಯೋನಿಗಳಿಲ್ಲ ಮೆಟ್ಟದ ಭೂಮಿಗಳಿಲ್ಲ
ಅಟ್ಟು ಉಣ್ಣದ ವಸ್ತುಗಳಿಲ್ಲ
ಗುಟ್ಟು ಕಾಣಿಸ ಬಂತು ಹಿರಿದೇನು ಕಿರಿದೇನು
ನೆಟ್ಟನೆ ಸರ್ವಜ್ಞನ ನೆನೆಕಂಡ್ಯ ಮನುಜ ||

ಜಲವೆ ಸಕಲ ಕುಲಕ್ಕೆ ತಾಯಲ್ಲವೆ
ಜಲದ ಕುಲವನೇನಾದರೂ ಬಲ್ಲಿರಾ
ಜಲದ ಬೊಬ್ಬುಳಿಯಂತೆ ಸ್ಥಿರದಲ್ಲಿವೀದೇಹ
ನೆಲೆಯನರಿತು ನೀ ನೆನೆಕಂಡ್ಯ ಮನುಜ ||

ಹರಿಯೇ ಸರ್ವೋತ್ತಮ ಹರಿಯೆ ಸರ್ವೇಶ್ವರ
ಹರಿಮಯವೆಲ್ಲವೆನುತ ತಿಳಿದು
ಸಿರಿಕಾಗಿನೆಲೆಯಾಗಿ ಕೇಶವರಾಯನ
ಚರಣ ಕಮಲವ ಕೀರ್ತಿಸುವನೆ ಕುಲಜ ||

ಎಂದು ಮನ ಮುಟ್ಟುವಂತೆ ವ್ಯಕ್ತಪಡಿಸಿದ್ದಾರೆ. ಜಾತಿ ಜಾತಿ, ಕುಲ ಕುಲ ಎಂದು ಹೇಳುತ್ತಾ ಪರಸ್ಪರ ಕಚ್ಚಾಡುವ ಮನುಷ್ಯರನ್ನು ಈ ಪದ್ಯದಲ್ಲಿ ತರಾಟೆಗೆ ತೆಗೆದುಕೊಂಡಿದ್ದಾರೆ. ಹಾಗೆಯೇ ಅದಕ್ಕೆ ಸಂಬಂಧಿಸಿದಂತೆಯೇ ಅತ್ಯಂತ ಉಪಯುಕ್ತ ವಾದ, ಸುಲಭವಾದ ಹಾಗೂ ಪರಿಚಯವಿರುವ ಉದಾಹರಣೆಗಳ ಮೂಲಕ ಜಾತಿಯ ಅಸ್ತಿತ್ವವನ್ನೆ ಅಲ್ಲಗಳೆದು ನೀರಗುಳ್ಳೆಯಂತೆ ಕ್ಷಣಿಕವಾದ ಈ ದೇಹ ವನ್ನು ನೆಚ್ಚದೆ ಭಗವಂತನನ್ನು ನೆನೆಯಬೇಕು ಎಂಬ ಸಂದೇಶವನ್ನು ಸಾರಿದ್ದಾರೆ. ಉನ್ನತ ಜಾತಿಯವರೆಂದು ಹೇಳಿಕೊಂಡು ಮಾಡಬಾರದ ಕೆಟ್ಟಕೆಲಸಗಳನ್ನು ಮಾಡಿ ಕೊನೆಗೆ ದೇವರಿಗೆ ಮೊರೆ ಹೋಗಿ ಏನೆಲ್ಲ ಯಜ್ಞ ಯಾಗಾದಿಗಳನ್ನು ಮಾಡುವವರಿಗೆ ಕನಕದಾಸರು ನೀಡಿರುವ ಚಾಟಿಯ ಏಟೆಂದರೆ

ಕೇಶವನೊಲುಮೆಯು ಆಗುವತನಕ ಹರಿ
ದಾಸರೊಳಿರುತಿರು ಹೇ ಮನುಜ
ಕ್ಲೇಶ ಪಾಶಂಕಗಳ ಹರಿದು ವಿಲಾಸದಿ
ಶ್ರೀಶನ ಸುತಿಗಳ ಪೊಗಲುತ ಮನದೊಳು ||

ಮೋಸದಿ ಜೀವರ ಘಾಸಿ ಮಾಡಿದ ಪಾಪ
ಕಾಸಿಗೆ ಹೋದರೆ ಹೋದೀತೆ
ಶ್ರೀಶನ ಭಕುತರ ದೋಷಿಸಿದಾ ಫಲ
ಕಾಸು ಕೊಟ್ಟರೆ ಬಿಟ್ಟೀತೆ
ಭಾಷೆಯ ಕೊಟ್ಟು ನಿರಾಶೆ ಮಾಡಿದಾ ಫಲ
ಕ್ಲೇಶವರ್ಗೊಳಿಸದೆ ಇದ್ದೀತೆ
ಭೂ ಸುರಸ್ವವ ಹ್ರಾಸಮಾಡಿದ ಫಲ
ಏಸೇಸು ಜನುಮಕು ಬಿಟ್ಟೀತೆ ||

ಜೇನನ ವಶದೊಳು ನಾನಾ ದ್ರವ್ಯವಿದೆ
ದಾನ ಧರ್ಮಕೆ ಮನಸಾದೀತೆ
ಹೀನ ಮನುಜನಿಗೆ ಜ್ಞಾನವ ಬೋಧಿಸೆ
ಹೀನ ವಿಷಯವವಳಿದ್ದೋದೀತೆ
ಮಾನಿನಿ ಮನಸು ನಿಧಾನವಿರದಿರೆ
ಮಾನಭಿಮಾನಗಳುಳಿದೀತೆ
ಭಾನು ಪ್ರಕಾಶನ ಭಜನೆಯ ಮಾಡದ
ಹೀನಗೆ ಮುಕುತಿಯು ದೊರಕೀತೆ
ಸತ್ಯಧರ್ಮಗಳ ನಿತ್ಯವು ಬೋಧಿಸೆ
ತೊತ್ತಿನ ಮನಸಿಗೆ ಸೊಗಸೀತೆ
ತತ್ವದ ಅರ್ಥ ವಿಚಿತ್ರದಿ ಪೇಳಲು
ಕತ್ತೆಯ ಚಿತ್ತಕೆ ಹತ್ತೀತೆ
ಪುತ್ಥಲಿ ಬೊಂಬೆಯ ಚಿತ್ರದಿ ಬರೆದರೆ
ಮುತ್ತನು ಕೊಟ್ಟರೆ ನುಡಿದೀತೆ
ಕತ್ತುರಿ ತಿಲಕವನೊತ್ತಿ ಪಣೆಯೊಳಡೆ
ಅರ್ತಿಯು ತೋರದೆ ಇದ್ದೀತೆ ||

ನ್ಯಾಯವ ಬಿಟ್ಟನ್ಯಾಯವ ಪೇಳುವ
ನಾಯಿಗೆ ನರಕವು ತಪ್ಪೀತೆ
ತಾಯಿ ತಂದೆಗಳ ಬಲು ನೋಯಿಸಿದ
ನ್ಯಾಯಿಗೆ ಮುಕುತಿಯು ದೊರಕೀತೆ
ಬಾಯಿ ಕೊಬ್ಬ ಬಯ್ಯುವ ಮನುಜಗೆ
ಘಾಯವು ಆಗದೆ ಬಿಟ್ಟೀತೆ
ಮಾಯವಾದಗಳ ಬೋಧಿಪ ಮನುಜಗೆ
ಹೇಯ ನರಕವು ತಪ್ಪೀತೆ
ಸಾಧು ಸಜ್ಜನರು ನೋಯಿಸಿದ ಮಾಯಾ

ವಾದಿಗೆ ನರಕವು ತಪ್ಪೀತೆ
ಬಾಧಿಸಿ ಬಡವರ ಅರ್ಥವನೊಯ್ವಗೆ
ವ್ಯಾಧಿಯು ಕಾಡದೆ ಬಿಟ್ಟೀತೆ
ಭೇದವೆಣಿಸಿ ಬಲು ಕ್ಷುದ್ರವ ಕಲಿತರೆ
ಮೋದವೆ ಎಂದಿಗು ಆದೀತೆ
ಕದ್ದು ಒಡಲ ಪೊರೆಯುವ ಮನೆಯೊಳ
ಗಿದ್ದದ್ದು ಹೋಗದೆ ಉಳಿದೀತೆ

ಎಂಬ ಕೀರ್ತನೆಯಿಂದ ತಮ್ಮ ತಮ್ಮ ಅನಿಷ್ಟಗಳ ಬಗ್ಗೆ ಅವರಿಗೆ ಬೆಳಕನ್ನು ಹರಿಸಲು ಪ್ರಯತ್ನಿಸಿದ್ದಾರೆ. ೨೦ನೇ ಶತಮಾನದಲ್ಲಿ ದಯಾನಂದ ಸರಸ್ವತಿಯವರು ನೀಡಿದ ಹೇಳಿಕೆ ಎಂದರೆ "ವೇದಗಳಿಗೆ ಹಿಂದಿರುಗಿ" ಎಂದು. ಇಲ್ಲಿ ವೇದವೆಂದರೆ 'ಜ್ಞಾನ' ಎಂದರ್ಥ. ಅಂದರೆ ಜ್ಞಾನದ ಕಡೆಗೆ ಹಿಂದಿರುಗಿರಿ ಎಂದು ಸಾರಿದರೆ, ಇದೇ ಅರ್ಥವನ್ನು ಕನಕದಾಸರು ಅಂದೇ ಸಾಮಾನ್ಯ ಜನತೆಗೂ ತಿಳಿಯುವ ಹಾಗೆ ತಿಳಿಸಲು ಪ್ರಯತ್ನಿಸಿರುವುದು ಕಂಡುಬರುತ್ತದೆ. ನಾನು, ನನ್ನ ಜಾತಿ, ತನ್ನ ಮನೆತನದ ಗೌರವದ ಬಗ್ಗೆ ಪ್ರಶ್ನಿಸುತ್ತಿದ್ದಂತವರಿಗೆ,

ನಾನು ನೀನು ಎನ್ನದಿರೊ ಹೀನ ಮಾನವ
ಜ್ಞಾನದಿಂದ ನಿನ್ನ ನೀನೆ ತಿಳಿದು ನೋಡಲೊ
ಹೊನ್ನು ಹೆಣ್ಣು ಮಣ್ಣು ಮೂರು ನಿನ್ನದೇನೆಲೊ
ಅನ್ನದಿಂದ ಬಂದ ಕಾಮ ನಿನ್ನದೇನೆಲೊ
ಕರ್ಣದಿಂದ ಬಂದ ಘೋಷ ನಿನ್ನದೇನೆಲೂ
ನಿನ್ನ ಒಟ್ಟು ಪೋಪದೇಹ ನಿನ್ನದೇನೆಲೂ
ಹಲವು ಜನ್ಮದಿಂದ ಬಂದಿರುವೆ ನೀನೆಲೂ
ಮಗದ ಗರ್ಭದಿಂದ ಬಂದಿರುವೆ ನೀನೆಲೂ
ಜಲದ ದಾರಿಯಲ್ಲಿ ಬಂದಿರುವೆ ನೀನೆಲೂ
ಕುಲವು ಜಾತಿ ಗೋತ್ರವುಳ್ಳವನು ನೀನೆಲೂ |

ಎಂದು ಮೋಹ, ಮಮಕಾರಗಳಿಂದ ಮೆರೆಯುತ್ತಿದ್ದ ಉನ್ನತ ಜಾತಿಯವರಿಗೆ ಸೂಕ್ಷ್ಮವಾಗಿ ಹೇಳಿದ್ದಾರೆ. ಅವರು ಇಂಥವರಿಗೆ "ನಾನು ನೀನು ಎನ್ನದಿರೊ ಹೀನ ಮಾನವ, ಜ್ಞಾನದಿಂದ ನಿನ್ನ ನೀನೇ ತಿಳಿದು ನೋಡೆಲೊ ಪ್ರಾಣಿ" ಎಂದು ಹೇಳಿರುವುದು ಅವರ ಅನುಭವದ ಮಾತೆ ವಿನಾ ಕೇವಲ ತಾರ್ಕಿಕವಾದ ಸಿದ್ಧಾಂತಗಳಲ್ಲ ಎನ್ನಬಹುದು. ಮನುಷ್ಯ ತನ್ನ ಜೀವನದ ಸುಖ ದುಃಖ ಸಿರಿವಂತಿಕೆ, ಬಡತನಗಳಿಗೆ, ಮೇಲು, ಕೀಳುಗಳೆಂಬ ಭೇದಭಾವಗಳಿಗೆ ತಾನೇ ಹೊಣೆ, ತಾನು ಮಾಡಿದ ಪುಣ್ಯ ಪಾಪಗಳ ಫಲಕ್ಕೆ ಇತರರನ್ನು ಹೊಣೆ ಮಾಡುವುದು ತಪ್ಪು. ಅದನ್ನು ನಿವಾರಿಸಿಕೊಳ್ಳಲು ಕಂಡ ಕಂಡ ದೈವಗಳಿಗೆ ವಿಶೇಷ ಪೂಜೆಮಾಡಿ ಮೊರೆ ಹೋಗು

ವುದು ತಪ್ಪು. ತಮ್ಮ ಕಾರ್ಯಗಳೇ ಅವರವರ ಹಣೆಬರಹವನ್ನು ಬರೆಯುತ್ತವೆ. ಆದ್ದರಿಂದ ದೇವರನ್ನು ನಂಬಿ ಸತ್ಯ, ನ್ಯಾಯ, ಧರ್ಮದ (ಒಟ್ಟಾರೆ ಸಾಕ್ಷಾತ್ಕಾರ) ಹಾದಿಯಲ್ಲಿ ನಡೆಯಬೇಕೆಂದು "ತನ್ನ ಪ್ರಾಪ್ತಿಯ ಫಲವ ತಾನರಿಯದೆ ಅನ್ಯರಿಗೆ ಆಡುವುದು ಅವಗುಣವು ಮರುಳೆ" ಎಂಬ ಕೀರ್ತನೆಯಲ್ಲಿ ವಿವರಿಸಿದ್ದಾರೆ.

ವ್ಯಕ್ತಿಯು ತನ್ನ ಸುತ್ತಲಿನ ಪರಿಸರದಿಂದ ಬೇರೆಯಾಗಿ ಬದುಕಲು ಸಾಧ್ಯವಿಲ್ಲ. ಅದರಲ್ಲಿಯೂ ಸೂಕ್ಷ್ಮವಾದ ಸಂವೇದನೆಯ ಪ್ರಜ್ಞೆಯನ್ನು ಮೈಗೂಡಿಸಿಕೊಂಡಿರುವವ ನಂತೂ ಸಮಾಜದ ಎಲ್ಲ ವ್ಯವಹಾರಗಳಲ್ಲಿ ತನ್ನನ್ನು ತೊಡಗಿಸಿಕೊಂಡು ತನ್ನ ತೀಕ್ಷ್ಣ ಅವಲೋಕನ ಮತ್ತು ಧೀಮಂತತೆಯಿಂದ ಅದರ ಆಗುಹೋಗುಗಳನ್ನು ಗಮನಿಸಿ, ತನ್ನ ಬದುಕಿನ ಅರ್ಥವನ್ನು ಸಮಾಜದ ಅರ್ಥವನ್ನು ಹೆಚ್ಚಿಸಿ ಚಿರ ಸ್ಮರಣೀಯನಾಗಿ ಉಳಿಯುತ್ತಾನೆ. ಅಂತವರ ಗುಂಪಿಗೆ ಅಂದಿನ ಕಾಲದವರಾದ ಕನಕ, ಪುರಂದರ, ವ್ಯಾಸರಾಯರನ್ನು ಸೇರಿಸಬಹುದಾಗಿದೆ. ಅಂದಿನ ಸಮಾಜದಲ್ಲಿದ್ದ ಬೂಟಾಟಿಕೆಯನ್ನು ಅಲ್ಲಗಳೆಯಲು ಹರಿದಾಸರು ಹೇಳಿರುವ ಮಾತೆಂದರೆ

ಮಡಿ ಮಡಿ ಮಡಿಯೆಂದು ಅಡಿಗಡಿಗೆ ಹಾರುವೆ |
ಮಡಿ ಮಾಡುವ ಬಗೆ ಬೇರುಂಟು
ಹಸಿವಾಯಿತು ದೇವರ ತೊಳೆ ಎಂಬರು
ಹಸನಾಗಿ ಮನಮುಟ್ಟಿ ಪೂಜೆಯ ಮಾಡರು

ಈ ಮೇಲಿನ ಸಾಲಿನಲ್ಲಿ ಅಂದಿನ ಸಮಾಜದಲ್ಲೂ ಇದ್ದ ಆಡಂಬರದ ಭಕ್ತಿಯನ್ನು ಸೂಚಿಸಿದ್ದಾರೆ. ಈ ಮೇಲಿನ ಸಾಲುಗಳು ಅಂದಿಗಿಂತ ಇಂದಿಗೂ ಹೆಚ್ಚಿಗೆ ಅನ್ವಯಿಸುತ್ತದೆ ಎಂದರೆ ತಪ್ಪಾಗಲಾರದು.

ಧಾರ್ಮಿಕ ಗ್ರಂಥಗಳ ದೃಷ್ಟಿಯಲ್ಲಿ, ಆ ಗ್ರಂಥವು ಸೂಚಿಸುವ ದೇವರ ದೃಷ್ಟಿಯಲ್ಲಿ ಹುಟ್ಟಿದವರೆಲ್ಲರೂ ಈ ಭೂಮಿಯ ಮೇಲೆ ಒಂದೇ. ಆದರೂ ಇತಿಹಾಸದ ಪುಟಗಳು ಮಾತ್ರ ನಮಗೆ ಎಲ್ಲಿಯೂ ವರ್ಗರಹಿತವಾದ ಸಮಾಜ ಒಂದಿತ್ತು ಎಂದು ಹೇಳಿದ ಪ್ರಕರಣವಂತೂ ದೊರೆಯುವುದಿಲ್ಲ. ವಿಜಯನಗರದ ಚರಿತ್ರೆಯನ್ನು ಗಮನಿಸುವುದಾದರೆ ನಮ್ಮ ಚರಿತ್ರೆಗಾರರು ಬರೆಯಲು, ಸೇರಿಸಲು ಇನ್ನಿಲ್ಲದಷ್ಟು ಹೊಗಳಿ ಬರೆದಿರುವುದು ಕಂಡುಬರುತ್ತದೆ. ಒಂದು ದೃಷ್ಟಿಯಲ್ಲಿ ಅವರು ಹೊಗಳಿರುವುದು ಸರಿಯೇ. ಆದರೆ ಸಾಮಾಜಿಕ ಜೀವನದ ಬಗ್ಗೆ, ಸಾಮಾನ್ಯ ಜನರ ಸ್ಥಿತಿಗತಿಯ ಬಗ್ಗೆ, ಆ ಜನರು ಅನುಭವಿಸುತ್ತಿದ್ದ ಜೀವನದ ಬಗ್ಗೆ ಗಮನಹರಿಸಿದರೆ ನಿಜಕ್ಕೂ ಆ ಹೊಗಳಿಕೆ ಬೇಕೆ? ಎಂಬ ಪ್ರಶ್ನೆ ಉದ್ಭವಿಸುತ್ತದೆ. "ನಡೆವುದೊಂದೇ ಭೂಮಿ ಕುಡಿವುದೊಂದೇ ನೀರು ಸುಡುವಗ್ನಿಯೊಂದೆ ಇರುತಿರಲು ಕುಲಗೋತ್ರ ನಡುವೆ ಎತ್ತಣದು ಸರ್ವಜ್ಞ" ಎಂಬ ಸುಂದರ ವಚನದ ಜನ್ಮಭೂಮಿಯಾದ ಈ ನಾಡಿನಲ್ಲಿ

ಇದು ನಡೆಯಿತೇ? ಹಾಗಾದರೆ ದೇವಪುರುಷರೆಂದರೆ ಯಾರು? ದೇವರ ವರದಿಂದ ಹುಟ್ಟಿದ ಜಾತಿ ಎಂದರೆ ಯಾವುದು? ಪ್ರಪಂಚದಲ್ಲಿ ಉತ್ತಮರು-ಅಧಮರುಗಳೆಂದರೆ ಯಾರು ಎಂಬ ಪ್ರಶ್ನೆ ಪ್ರತಿಯೊಬ್ಬರಲ್ಲಿಯೂ ಮೂಡುತ್ತದೆ. ಇದಕ್ಕೆ ಅಂದೇ ಸರ್ವಜ್ಞ ಮಹಾಋಷಿಯು ಉತ್ತಮರು ಎಂಬುವರು ಸತ್ಯದಲಿ ನಡೆದಿಹರು, ಉತ್ತಮ ವರ್ಣಗಳೆ ಉತ್ತಮರು ಎನ್ನಬೇಡ, ಮತ್ತೆ ತನ್ನಂತೆ ಬಗೆವರೆಲ್ಲರನ್ನು ಉತ್ತಮರು ಎನ್ನು ಎಂದು ಸೂಕ್ತವಾದ ವಿಚಾರವನ್ನು ಹೇಳಿರುವುದು ಕಂಡುಬರುತ್ತದೆ. ಮಧ್ಯಯುಗದ ಜನಜೀವನವನ್ನು ಈ ಜಾತಿಪದ್ಧತಿಯು ಹೇಗೆ ಹದಗೆಡಿಸಿತ್ತು, ಅಸ್ಪೃಶ್ಯತೆಯ ಹೆಸರಿನಲ್ಲಿ ಉನ್ನತ ವರ್ಗದವರು ಹೇಗೆ ಸುಲಿಗೆ ಮಾಡುತ್ತಿದ್ದರು ಎಂಬುದನ್ನು ಅಂದಿನ ಸಮಾಜದ ಪ್ರತ್ಯಕ್ಷದರ್ಶಿಗಳಾದ ಕನಕ,ಪುರಂದರ, ಸರ್ವಜ್ಞರು ನೀಡಿರುವ ಕೀರ್ತನೆ ಹಾಗೂ ವಚನಗಳಿಂದ ಸವಿವರವಾಗಿ ತಿಳಿಯಬಹುದಾಗಿದೆ.

ಸಮಾಜದಲ್ಲಿ ಹೊಲೆಯ, ಮಾದಿಗ ಎಂಬ ಜಾತಿಗಳು ಅತ್ಯಂತ ಕೆಳಮಟ್ಟದ ಜಾತಿಗಳಾಗಿದ್ದವು. ಇವರುಗಳು ಪ್ರತಿಯೊಂದು ಊರಿನಲ್ಲಿಯೂ (ಗ್ರಾಮದ ದಕ್ಷಿಣ ದಿಕ್ಕಿನಲ್ಲಿಯೇ ವಾಸಿಸುತ್ತಿದ್ದರು. ಏಕೆಂದರೆ ನಾಲ್ಕು ದಿಕ್ಕುಗಳಲ್ಲಿ ದಕ್ಷಿಣ ದಿಕ್ಕು ಅಮಂಗಳವಾದದ್ದೆಂದು ಶಾಸ್ತ್ರಗಳು ತಿಳಿಸುತ್ತವೆ.) ಊರಿನ ಹೊರಗೆ ಒಟ್ಟಾಗಿ ವಾಸ ಮಾಡುತ್ತಿದ್ದರು. ಆ ಜಾಗವನ್ನು ಹೊಲಗೇರಿ ಎಂದು ಕರೆಯಲಾಗುತ್ತಿತ್ತೆಂದು ಸಾಹಿತ್ಯಾಧಾರಗಳಿಂದಲೂ, ಶಾಸನಗಳಿಂದಲೂ ತಿಳಿಯಬಹುದಾಗಿದೆ. ಅನೇಕ ಶಾಸನಗಳಲ್ಲಿ ಹೊಲಯ, ಮಾದಿಗ ಎಂಬ ಜಾತಿಸೂಚಕಗಳನ್ನು ಸೂಚಿಸುವ ಹೆಸರುಗಳಿರುವುದು ಕಂಡುಬರುತ್ತದೆ (ಉದಾಹರಣೆಗೆ ಹೊಲೆಯರ ಹುಳ್ಳ, ಮಾದಿಗರ ಕಂಪ ಮುಂತಾದವು). ಹಾಗೆಯೇ ಮಾತಂಗಿಯನ್ನು ಕವಿಗಳು "ಮಾದಿಗಿತ್ತಿ" ಎಂದು ಕರೆದಿದ್ದಾರೆ. ಇಂದಿನ ಸ್ವತಂತ್ರ ಭಾರತವು ಎಷ್ಟೆಲ್ಲ ಬದಲಾವಣೆಗಳನ್ನು ಕಾಣುತ್ತಿದ್ದರೂ ಸಹ ಜಾತಿವ್ಯವಸ್ಥೆಯಲ್ಲಿ (ಆಚರಿಸುವಲ್ಲಿ) ಹೆಚ್ಚಿನ ಬದಲಾವಣೆ ಕಾಣುತ್ತಿದೆ ಎನ್ನಬಹುದು. ಏನೆಲ್ಲ ಕಾನೂನುಗಳಾಗಿದ್ದರೂ ಇಂದಿಗೂ ಪ್ರತಿಯೊಂದು ಹಳ್ಳಿಗಳಲ್ಲಿಯೂ ಹೊಲಗೇರಿ ಎಂಬುವುದು ಊರಿನಿಂದ ಆಚೆ ಇರುವುದು ಕಂಡು ಬರುತ್ತದೆ. ಇಂದೇ ಈ ಸ್ಥಿತಿ ಇರುವಾಗ ಇನ್ನೂ ಅಂದಿನ ಸ್ಥಿತಿಯನ್ನು ಊಹಿಸಲು ಸಾಧ್ಯವೆನ್ನಬಹುದಲ್ಲವೆ? ವಿಜಯನಗರದ ಕಾಲದಲ್ಲಿ ಹೊಲೇರ ಹಟ್ಟಿ, ಮಾದಿಗರ ಹಟ್ಟಿಗಳೆಂದು ಕರೆಯುವ ಕೇರಿಗಳಿದ್ದವೆಂದು ಅನೇಕ ಶಾಸನಗಳು ತಿಳಿಸುತ್ತವೆ. (ಉದಾ. ೧೨೦೫ರ ಶಾಸನ ಹಾಗೂ ೧೪೩೦ರ ಶಾಸನಗಳು ಈ ಹೊಲೆಯ ಹಾಗೂ ಮಾದಿಗರ ಮೇಲೆ ತೆರಿಗೆ ವಿಧಿಸಿದ ಬಗ್ಗೆ ಬೆಳಕು ಚೆಲ್ಲುತ್ತವೆ.

"ಊರು ಅಂದ ಮೇಲೆ ಹೊಲಗೇರಿ ಇರಲೇಬೇಕು", "ಊರು ಹೊಲಗೇರಿ ಒಂದು ಮಾಡಿಬಿಟ್ಟ" ಎನ್ನುವ ಇಂದಿಗೂ ಪ್ರಚಲಿತವಾಗಿರುವ ನಾಣ್ಣುಡಿಗಳು ಇದಕ್ಕೆ

ನಿದರ್ಶನ ವಾಗಿವೆ. ಅಂದಿನ ಕಾಲದಲ್ಲಿ ಈ ಹೊಲೆಯ ಮತ್ತು ಮಾದಿಗರು ಗಳನ್ನು ಪಶುಗಳಿಗಿಂತಲೂ ಹೀನಾಯವಾಗಿ ನೋಡಿಕೊಳ್ಳಲಾಗುತ್ತಿತ್ತು. ಇದಕ್ಕೆ ನಿದರ್ಶನವೆಂದರೆ ಕನಕದಾಸರು ತಮ್ಮ "ರಾಮಧಾನ್ಯ ಚರಿತೆ"ಯಲ್ಲಿ ಇದನ್ನೇ ಪ್ರಸ್ತಾಪಿಸಿರುವುದು. ಈ ಕೀರ್ತನೆಯಲ್ಲಿ ಬರುವರಾಗಿ ಮತ್ತು ಭತ್ತದ ಪಾತ್ರವನ್ನು ಅಸ್ಪೃಶ್ಯ ಮತ್ತು ಬ್ರಾಹ್ಮಣರ ಪ್ರಜ್ಞೆಗಳಿಗೆ ಸಂಕೇತವಾಗಿ ತೆಗೆದುಕೊಳ್ಳಬಹುದಾಗಿದೆ. ಅಸ್ಪೃಶ್ಯರಲ್ಲಿಯೂ ಮಾನವೀಯತೆ ಇದೆ. ಬದುಕುತ್ತಿರುವ ಪರಿಸರ ಹಾಗೂ ಅಜ್ಞಾನರಾಗಿರುವುದೇ ಅವರ ಹೀನಬದುಕಿಗೆ ಕಾರಣವೇ ಹೊರತು ಅವರಿಗೂ ಮಾನವೀಯತೆ ಇದೆ. ಉತ್ತಮ ಜೀವನ ನಡೆಸಲು ಅವರೂ ಅರ್ಹರು ಎಂಬುದನ್ನು ಸಾಂಕೇತಿಕವಾಗಿ ಈ ಕೃತಿ ತೋರಿಸುತ್ತದೆ. ಕ್ರಿ.ಶ. ಹದಿನಾರನೆಯ ಶತಮಾನದಲ್ಲೇ ಇದ್ದ ಈ ಶೂದ್ರ ಬ್ರಾಹ್ಮಣ ಪ್ರಜ್ಞೆಯು ನಮ್ಮಲ್ಲಿ ಇಂದು ಬೇರೆ ಬೇರೆ ರೂಪ ಗಳನ್ನು ಪಡೆದು ವ್ಯಾಪ್ತವಾಗಿ ಬೆಳೆದಿರುವುದರಿಂದ ರಾಮಧಾನ್ಯ ಚರಿತ್ರೆಯ ದೃಷ್ಟಿ ನಮಗೆ ಪದೇಪದೇ ಬೇಕಾಗುತ್ತಲೇ ಇರುತ್ತದೆ.

ವಿಜಯನಗರದ ಆಳ್ವಿಕೆಯ ಕಾಲದಲ್ಲಿ ಶ್ರೀಮಂತರು ಅಥವಾ ಮೇಲು ವರ್ಗ ದವರೆಂದು ಹೇಳಿಕೊಳ್ಳುತ್ತಿದ್ದವರನ್ನು ಬಿಟ್ಟರೆ ಮಧ್ಯಮ ವರ್ಗದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು. ಇವರುಗಳು ಹೆಚ್ಚಿನ ಪಾಲು ವ್ಯಾಪಾರಿಗಳಾಗಿದ್ದಲ್ಲದೆ ಸಾಮಾನ್ಯ ಜನರಿಗಿಂತ ಸ್ವಲ್ಪ ಉತ್ತಮ ಜೀವನ ನಡೆಸುತ್ತಿದ್ದರೆನ್ನಬಹುದು.

ವಿದೇಶಿ ಪ್ರವಾಸಿಗರಾದ ಬಾರ್ಬೋಸ, ನ್ಯೂನಿಜ್, ಪಾಯೇಸ್, ಅಬ್ದುಲ್ ರಜಾಕ್, ನಿಕೋಲೂಕೊಂಟಿ, ಮುಂತಾದವರುಗಳು ವಿಜಯನಗರ ಸಾಮ್ರಾಜ್ಯವನ್ನು ಮುಕ್ತಕಂಠದಿಂದ ಹೊಗಳಿರುವುದು ಸತ್ಯಾಂಶ ಕೂಡ. ಆದರೆ ಅವರ ಬರವಣಿಗೆಯಿಂದ ಕಂಡುಬರುವುದು ಕೇವಲ ಶ್ರೀಮಂತ ವರ್ಗದವರ ಬದುಕುವ ಶೈಲಿ ಮಾತ್ರವೇ ಹೊರತು ಸಾಮಾನ್ಯ ಜನರ ಜೀವನ ಕಂಡುಬರುವುದಿಲ್ಲ.

ಭಿಕ್ಷೆ ಬೇಡುವುದು ಸಾಮ್ರಾಜ್ಯದಲ್ಲಿ ಹೆಚ್ಚಾಗಿದ್ದಿತು. ಹಸಿವು ಹೆಚ್ಚಾದಾಗ ಜನರು ಅನೇಕ ಮಾರ್ಗಗಳನ್ನು ಹುಡುಕುತ್ತಿದ್ದರು. ಅದರಲ್ಲಿ ಭಿಕ್ಷೆ ಬೇಡಿ ತಿನ್ನು ವುದೂ ಒಂದು. ಹಸಿವಿಗೆ ಭಿಕ್ಷೆವುಂಟು, ತೃಷೆಗೆ ಹಳ್ಳದಲ್ಲಿ ಸುಚಿತ್ತವಾದ ಆಗ್ಘವಣಿಯುಂಟು. ಕಟ್ಟ ಕೊಂಬೊಡೆ ತಿಪ್ಪೆಯ ಮೇಲೆ ಅರಿವೆಯುಂಟು, ಶಯನಕ್ಕೆ ಹಾಳು ದೇಗುಲವುಂಟು, ಎನ್ನುವುದಾಗಲಿ, ಇಂದಿಗೂ ಪ್ರಚಲಿತವಾಗಿರುವ "ಕೇರಿ ಮನೆ ಊಟ ಮಾರಿಗುಡಿ ನಿದ್ರೆ" ಎನ್ನುವ ನಾಡು-ನುಡಿಯಾಗಲಿ ಭಿಕ್ಷಾಟನೆಯನ್ನು ವ್ಯಕ್ತಪಡಿಸುವ ಸ್ಪಷ್ಟ ಚಿತ್ರಗಳೆನ್ನಬಹುದು. ಕನಕದಾಸರು ತಮ್ಮ "ನಳಚರಿತ್ರೆ"ಯಲ್ಲಿ ಹಬ್ಬ, ಜಾತ್ರೆ, ಸಂತೆ ಹಾಗೂ ಯಾತ್ರಾಸ್ಥಳಗಳಲ್ಲಿ ಇಂದಿಗೂ ನಾವು ನೋಡುವ ಭಿಕ್ಷಾಟನೆಯ ರೀತಿಯಲ್ಲೇ ಅಂದಿನ ಸ್ಥಿತಿಯನ್ನು ಸ್ವಾರಸ್ಯಕರ ವಾಗಿ ವರ್ಣಿಸಿದ್ದಾರೆ.

ಬಡತನಕೆ ಭಿಕ್ಷೆ ಬೇಡುವುದು ಒಂದು ದಾರಿಯಾದರೆ ನೆಂಟರಿಷ್ಟರ ಮನೆಬಾಗಿಲಿಗೆ ಹೋಗಿ ಸಾಲ ಕೇಳುವುದು ಇನ್ನೊಂದು ಮಾರ್ಗ. ಮನುಷ್ಯರಿಗೆ ಕಷ್ಟ ಬಂದಾಗ ಬಂಧುಗಳ ಬಳಿಗೆ ಹೋದರೆ ಅವರು ಯಾವ ರೀತಿಯಲ್ಲಿ ಬಂದವರ ಜೊತೆ ನಡೆದುಕೊಳ್ಳುತ್ತಾರೆ ಎಂಬುದರ ಬಗೆಗೆ ಅನುಭಾವಿಗಳ ಅನುಭವ ಅಪಾರವಾಗಿದೆ. ಉದಾ: "ನಗುವಾಗ ಎಲ್ಲಾ ನಂಟರು; ಅಳುವಾಗ ಯಾರೂ ಇಲ್ಲ" ಎಂಬುವುದಾಗಲಿ, "ಬಿಡದೆ ಬಾಂಧವರೊಡನೆ ಕಡಿದಾಡುವುದಕ್ಕಿಂತ ಅಡವಿಯೊಳಗಜ್ಞಾತ ವಾಸವೇ ಲೇಸು" ಎಂಬುವುದು "ಹಸಿದು ನೆಂಟರ ಮನೆಗೆ ಉಣಲಿಕ್ಕೆ ಹೋದರೆ ಹಸಿವರಿತು ಬಡಿಸುವವರ ಕಾಣೆ" ಮುಂತಾದ ಪದಗಳ ಸೃಷ್ಟಿಗೆ ಆ ಸನ್ನಿವೇಶ ಕಾರಣವಾಗಿರುತ್ತದೆ. ವಿಜಯನಗರದ ಅರಸರ ಕಾಲದಲ್ಲಿ ನಾವು ಗುಲಾಮಗಿರಿಯ (ದಾಸ್ಯಜೀವನ) ಪದ್ಧತಿಯನ್ನು ಕಾಣಬಹುದಾಗಿತ್ತೆನ್ನಬಹುದು. ಕನಕದಾಸರು ತಮ್ಮ 'ರಾಮನಾಥ ಚರಿತೆ'ದಲ್ಲಿ ಮನುಷ್ಯರ ಮಾರಾಟದ ವಿಚಾರವನ್ನು ಗುರುತಿಸುತ್ತಾರೆ. ಇಂದಿಗೂ ಸಹ ಪ್ರತಿಷ್ಠಿತ ಮೈಸೂರು ನಗರದಲ್ಲಿಯೆ ಈ ಗುಲಾಮಗಿರಿ ಕಂಡುಬಂದಿರುವುದರಿಂದ (ಮಾನವರನ್ನು ಸರಪಳಿಯ ಬಂಧನದಲ್ಲಿರಿಸಿ ಆಯುಷ್ಯವಿಡೀ ಅವರಿಂದ ದುಡಿಸಿ ಕೊಳ್ಳುವ ಪದ್ಧತಿಯನ್ನು ಇಂದಿಗೂ ಆಚರಿಸುತ್ತಿದ್ದ ಹಂಗರಹಳ್ಳಿ ಕಲ್ಲುಗಣಿ ಪ್ರದೇಶದ ಜೀತದಾಳುಗಳನ್ನು ನೆನೆಸಿಕೊಂಡು) ಅಂದಿನ ವಿಜಯನಗರದ ಅರಸರ ಕಾಲದಲ್ಲಿ ಇದು ಸರ್ವೇ ಸಾಮಾನ್ಯವಾಗಿತ್ತೆನ್ನಬಹುದು. ತಂದೆ ತಾಯಿಯರು ಹಸಿವಿನ ಬವಣೆಯನ್ನು ತಾಳಲಾರದೆ ತಮ್ಮ ಮಕ್ಕಳನ್ನು ಮಾರಿರುವುದು 'ರಾಮನಾಥ ಚರಿತೆ'ಯಲ್ಲಿ ಕಂಡುಬರುತ್ತದೆ. (ಇಂದೇನೂ ಇದರಿಂದ ಮುಕ್ತವಾಗಿಲ್ಲ. ಗುಲ್ಬರ್ಗಾ ಜಿಲ್ಲೆ ಕೊಂಚಾವರರಿನ ಲಂಬಾಣಿ ತಾಂಡಗಳಲ್ಲಿ ನಡೆದ ಹೆಣ್ಣು ಶಿಶುಗಳ ಮಾರಾಟ ಇವಕ್ಕೆ ಜ್ವಲಂತ ನಿದರ್ಶನ).

ನರಬಲಿ

ನಮ್ಮ ಮೂಢನಂಬಿಕೆಗಳಿಗೆ ಕೊನೆಯಿಲ್ಲ. ಪ್ರಪಂಚವು ತಾಂತ್ರಿಕವಾಗಿ, ಶೈಕ್ಷಣಿಕವಾಗಿ ಎಷ್ಟೇ ಅಭಿವೃದ್ಧಿ ಹೊಂದುತ್ತಿದ್ದರೂ ಇಂದಿಗೂ ಅಜ್ಞಾನಕ್ಕೆ ಕೊನೆ ಯಿಲ್ಲ. ನಮ್ಮ ಮೂಢನಂಬಿಕೆಗಳಿಗೆ ಹೆಚ್ಚಿನ ಗಮನ ಕೊಟ್ಟು ನರಬಲಿ ನಡೆಸುತ್ತಿದ್ದೇವೆ, (ಉದಾಹರಣೆಗೆ: ಇತ್ತೀಚೆಗೆ ಬೀದರ್ ಜಿಲ್ಲೆಯಲ್ಲಿ ನಡೆದ ಮಗು ವಿನ ಕೊಲೆ ಹಾಗೂ ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ಹಳ್ಳಿಯಲ್ಲಿ ಇಬ್ಬರು ಸ್ವ ಇಚ್ಛೆಯಿಂದ ಸಜೀವವಾಗಿ ಅಗ್ನಿಗಾಹುತಿಯಾದುದನ್ನು ನೆನೆಯಬಹುದು.) ಇನ್ನು ಮಧ್ಯಕಾಲೀನ ಭಾರತದಲ್ಲಿ ಊಹಿಸಲೂ ಸಾಧ್ಯವಾಗದ ರೀತಿಯಲ್ಲಿ ನರಬಲಿ ನಡೆದಿರುವುದಕ್ಕೆ ಅನೇಕ ವೀರಗಲ್ಲುಗಳು, ಶಾಸನಗಳು, ಸಾಹಿತ್ಯ ಕೃತಿಗಳು ಆಧಾರ ವಾಗಿವೆ. ಬಡತನದಿಂದಾಗಿ ಹೆತ್ತಮಕ್ಕಳನ್ನು ಮಾರುತ್ತಿದ್ದ ಬಡವರಿದ್ದ ಪ್ರಸಂಗ

ಒಂದಾದರೆ, ಕೊಳ್ಳುವ ಶ್ರೀಮಂತರ ಉದ್ದೇಶ ಇನ್ನೊಂದು ರೂಪವಾಗಿರುತ್ತಿತ್ತು. "ಸಮ್ಯಕ್ತ್ವ ಕೌಮುದಿ" ಯಲ್ಲಿ ಕಂಡುಬರುವ ಹಾಗೆ ಕೋಟೆಗೆ ಹಾಗೂ ಕೆರೆಗಳಿಗೆ ನರಬಲಿಕೊಡಲು ಮಕ್ಕಳನ್ನು ಕೊಳ್ಳುವ ಸಂದರ್ಭವನ್ನು ವಿವರಿಸುತ್ತದೆ. ಮನುಷ್ಯರನ್ನು ಕೊಂಡುಕೊಂಡಂತೆ ಪ್ರಾಣಿಗಳನ್ನು ಕೊಂಡುಕೊಳ್ಳುತ್ತಿದ್ದರು.

ನರಬಲಿಯನ್ನು ಹಾಗೂ ಪಶುಬಲಿಗಳನ್ನು ಜನರು ನಾನಾ ಕಾರಣಗಳಿಗಾಗಿ ಕೊಡುತ್ತಿದ್ದರೆಂದು ಸಾಹಿತ್ಯಕೃತಿಗಳು ತಿಳಿಸುತ್ತವೆ. ಗರಡಿ ಪೂಜಾ ಸಂದರ್ಭದಲ್ಲಿ ಪಶುಬಲಿಕೊಟ್ಟು ಚಂಡಿ ಪೂಜೆ ಮಾಡಿದರೆ, ಹೂತಿಟ್ಟ ನಿಧಿಯನ್ನು ತೆಗೆಸುವಾಗಲೂ ಬಲಿಸಮೇತ ಪೂಜೆ ನಡೆಸುತ್ತಿದ್ದದ್ದು ಕಂಡುಬರುತ್ತದೆ. ಇದೊಂದು ಇಂದಿನ ಸಮಾಜಕ್ಕೂ ಬಂದೊದಗಿರುವ ದುರಂತವೇ ಸರಿ.

ದೇವದಾಸಿಯರು ಮತ್ತು ವೇಶ್ಯೆಯರು

ವೇಶ್ಯಾವಾಟಿಕೆಯು ವಿಜಯನಗರದಲ್ಲಿ ಒಂದು ರಾಜಪೋಷಿತವಾದ ವೃತ್ತಿಯಾಗಿದ್ದಿತ್ತು ಎಂದು ಹೇಳುವುದಕ್ಕೆ ಅನೇಕ ಆಧಾರಗಳು ದೊರಕುತ್ತವೆ. ಪುರುಷನೊಂದಿಗೆ ಸ್ತ್ರೀಯೊಬ್ಬಳು ತಾತ್ಕಾಲಿಕವಾಗಿ ಮಾಡಿಕೊಳ್ಳುವ ಲೈಂಗಿಕ ಒಪ್ಪಂದವೇ ವೇಶ್ಯಾವೃತ್ತಿ. ಇದನ್ನು ಸಮಾಜದಲ್ಲಿ ಅಕ್ರಮ ಲೈಂಗಿಕ ಸಂಬಂಧವೆಂತಲೂ ಭಾವಿಸಲಾಗುತ್ತದೆ. ಪ್ರತಿಯೊಂದು ಸಮಾಜ ಸಹ ಇದನ್ನು ಕೆಟ್ಟದೆಂದು ಹೇಳುತ್ತಲೇ ತಮ್ಮ ತಮ್ಮ ವ್ಯವಸ್ಥೆಯಲ್ಲಿ ಮಾರ್ಪಾಟುಮಾಡಿಕೊಂಡೇ ಬರುತ್ತಲಿವೆ. ವಿಜಯನಗರದ ಕಾಲದಲ್ಲಿಯೇ ಅಲ್ಲದೆ ನಮ್ಮ ಪ್ರಾಚೀನ ಭಾರತದ ಚರಿತ್ರೆಯನ್ನು ಗಮನಿಸುವುದಾದರೂ ರಾಜರ ಆಸ್ಥಾನದಲ್ಲಿಯೇ ಎಲ್ಲಾ ವೃತ್ತಿಗಳಿಗಿಂತಲೂ ಸ್ವಾಭಾವಿಕ ವೃತ್ತಿಯಾಗಿ ಬೆಳೆದುಬಂದಿರುವುದು ಕಂಡುಬರುತ್ತದೆ. ವಿಜಯನಗರದಲ್ಲಿ ವೇಶ್ಯಾ ಪದ್ಧತಿಯು ಆಳವಾಗಿ ಬೇರೂರಲು ಅನೇಕ ಕಾರಣಗಳನ್ನು ಕೊಡಬಹುದು. ಪ್ರಮುಖವಾಗಿ,

ಅ. ಬಡತನ

ಆ. ಅಜ್ಞಾನ

ಇ. ಆಸ್ಥಾನದ ನೃತ್ಯಗಾರ್ತಿಯರು ಹಾಗೂ ವೇಶ್ಯಾವೃತ್ತಿ

ಈ. ಯುದ್ಧದ ಸಂದರ್ಭದಲ್ಲಿ ವೇಶ್ಯೆಯರಿಗೂ ಕನ್ಯೆಯರಿಗೂ ಸ್ಥಾನಮಾನ

ಉ. ಬದುಕಲು ಬೇರೆ ಮಾರ್ಗವಿಲ್ಲದೆ ವೇಶ್ಯಾವೃತ್ತಿ ಕೈಗೊಂಡಿದ್ದು.

ವಿದೇಶಿ ಪ್ರವಾಸಿಗನಾದ ಬಾರ್ಬೋಸಾನು "ಕೆಲವು ಶ್ರೀಮಂತ ವೇಶ್ಯೆಯರು ಬಡತನದ ಬೇಗೆಯಲ್ಲಿರುವ ಪೋಷಕರನ್ನು ತಮ್ಮ ಹೆಣ್ಣು ಮಕ್ಕಳನ್ನು ವೇಶ್ಯಾವೃತ್ತಿಗೆ ಕಳುಹಿಸಲು ಒತ್ತಾಯಿಸುತ್ತಾರೆ. ಈ ಸಂದರ್ಭದಲ್ಲಿ ತಮ್ಮ ತಮ್ಮ ಮಕ್ಕಳ

ಮಾರಾಟ ಅಥವಾ ವೃತ್ತಿ ಪರಿಣಿತಿಗಾಗಿ ಅಂಥವರ ಹತ್ತಿರ ಕಳುಹಿಸುತ್ತಾರೆ" ಎಂದು ಬರೆದಿರುವನು.

ಗಂಡ ಸತ್ತ ನಂತರ ಹೆಂಡತಿಯು ಗಂಡನ ಚಿತೆಯಲ್ಲಿಯೇ ಜೀವಂತವಾಗಿ ಬಿದ್ದು ಸಾಯುವುದನ್ನು "ಸತಿಸಹಗಮನ" ಎಂದು ಕರೆಯುವುದು. ಇಂಥ ಸಂದರ್ಭ ದಲ್ಲಿ ಹೆಂಡತಿಯು ಸಹಗಮನ ಮಾಡದೆ ಉಳಿದುಕೊಂಡರೆ ಅಂಥವಳನ್ನು ಅಗೌರವದಿಂದ ಕಾಣಲಾಗುತ್ತಿತ್ತು. ಅವರ ತಲೆಯನ್ನು ಬೋಳಿಸಿ ಮನೆತನಕ್ಕೆ ಅಮಂಗಳವೆಂದು ಬಗೆದು ಹೊರಗೆ ಕಳುಹಿಸುವುದು, ಕೊನೆಗೆ ದಿಕ್ಕಿಲ್ಲದೆ ಅವಳು ದೇವಾಲಯವೊಂದರಲ್ಲಿ ದೇವದಾಸಿಯಾಗಿ ನಂತರ ವೇಶ್ಯಾವೃತ್ತಿಯಲ್ಲಿ ತೊಡಗು ವುದಾಗಿ ಬಾರ್ಬೋಸಾನು ಹೇಳಿದ್ದಾನೆ.

ವಿಜಯನಗರದ ಅರಸರು ಯುದ್ಧ ಸಂದರ್ಭದಲ್ಲಿಯೂ ಸೈನಿಕ ಶಿಬಿರಗಳಲ್ಲಿ ವೇಶ್ಯೆಯರಿಗೂ, ಕನ್ಯೆಯರಿಗೂ ಪ್ರಮುಖ ಸ್ಥಾನ ಕಲ್ಪಿಸಿ ಕೊಡುತ್ತಿದ್ದರು. ಯುದ್ಧದ ಸಮಯದಲ್ಲಿ ಸೈನಿಕರು ಕೇಳುತ್ತಿದ್ದದು ಹೆಚ್ಚಿನ ಸಂಬಳವನ್ನಲ್ಲ ಬದಲಿಗೆ ಮದುವೆ ಯಾಗದ ಹುಡುಗಿಯರನ್ನು. ಇವರು ಯುದ್ಧ ಮಾಡದಿದ್ದರೂ ಅವರನ್ನು ಯುದ್ಧದಲ್ಲಿ ವೀರಾವೇಶದಿಂದ ಹೋರಾಡುವಂತೆ ಮಾಡುತ್ತಾರೆ. ಈ ಯುವತಿಯರ ಮೇಲಿನ ಆಸೆಗಾಗಿ ಬೇರೆ ಸಾಮಂತ ರಾಜ್ಯಗಳಿಂದಲೂ ಶ್ರೀಮಂತರು, ಸರದಾರರು ಬಂದು ರಾಜನ ಸೈನ್ಯವನ್ನು ಸೇರಿಕೊಳ್ಳುತ್ತಿದ್ದರು. ಪ್ರತಿಯೊಬ್ಬರೂ ಏಳೆಂಟು ಮುದ್ದು ಯುವತಿಯರನ್ನು ತಮ್ಮ ಸೇವೆಗೆ ಸೇರಿಸಿಕೊಂಡಿರುತ್ತಾರೆ. ಇವರಿಗೆ ರಾಜನ ಬೊಕ್ಕಸದಿಂದ ಸಂಬಳ ದೊರೆಯುತ್ತದೆ..... ಎಂಬ ಬಾರ್ಬೋಸಾನ ಹೇಳಿಕೆಯು ಯುದ್ಧಗಳು ಕೂಡ ವಿಜಯನಗರದಲ್ಲಿ ವೇಶ್ಯಾವೃತ್ತಿಯ ವೃದ್ಧಿಗೆ ಮೂಲಕಾರಣ ವಾಗಿತ್ತೆಂಬುದನ್ನು ಸೂಚಿಸುತ್ತದೆ.

ಮದುವೆಯಾಗದ ಇಂತಹ ಯುವತಿಯರು ಯುದ್ಧರಂಗದಿಂದ ಬದುಕಿ ಬಂದರೆ ಅವರು ಮುಂದೆ ಅನುಸರಿಸಬೇಕಾಗಿದ್ದದ್ದು ವೇಶ್ಯಾವೃತ್ತಿಯೊಂದನ್ನೇ. ಯೋಧರು, ಸರದಾರರು, ಶ್ರೀಮಂತರುಗಳು ಸೈನ್ಯದಲ್ಲಿ ಬಂದು ಸೇರಿಕೊಳ್ಳುತ್ತಿದ್ದುದು ಯುವತಿಯರಿಗಾಗಿಯೇ ಹೊರತು ಹೋರಾಡುವುದಕ್ಕಲ್ಲ. ಈ ಸಮಯದಲ್ಲಿ ಗಮನಿಸಬೇಕಾದ ಮತ್ತೊಂದು ಪ್ರಮುಖ ಅಂಶವೆಂದರೆ ವಿಜಯನಗರದ ಸೈನಿಕ ರಲ್ಲಿಯೇ ಯುವತಿಯರಿಗಾಗಿ ಅಂತಃಕಲಹ ಉಂಟಾಗಿ ಸಾಮ್ರಾಜ್ಯದ ಐಕ್ಯತೆಗೆ ಭಂಗ ತಂದುಕೊಂಡ ಸಂದರ್ಭಗಳು ಅನೇಕವಿವೆ. ವಿಜಯನಗರದ ಪತನಕ್ಕೆ ಇದೊಂದು ಕಾರಣವೆಂದೂ ಅಭಿಪ್ರಾಯಪಡಲಾಗಿದೆ.

ವಿಜಯನಗರದ ಸಾಹಿತ್ಯ ಕೃತಿಗಳಲ್ಲಿ ವೇಶ್ಯೆಯರ ಬಗೆಗೆ ವಿಸ್ತಾರವಾದ ವರ್ಣನೆಗಳು ದೊರೆಯುತ್ತವೆ. ರಾಜಸಭೆಯು ಶೋಭಿಸಬೇಕಾದರೆ ಅದರಲ್ಲಿ

ಇರಬೇಕಾದ ನಾನಾ ವೃತ್ತಿಯ ಜನರುಗಳಲ್ಲಿ ಪ್ರಮುಖರಾದವರೆಂದರೆ ವೇಶ್ಯೆಯರು ಎಂದು ಸೋಮನಾಥ ಕವಿ ಹೇಳಿರುವುದು ಕಂಡುಬರುತ್ತದೆ. ಏಕೆಂದರೆ ವೇಶ್ಯೆಯರನ್ನು ಶುಭ ಶಕುನದ ಚಿಹ್ನೆಗಳಲ್ಲಿ ಒಂದೆಂದು ನಂಬಲಾಗಿತ್ತೆಂದು ಇದೇ ಕವಿ ವಿವರಿಸುತ್ತಾನೆ. ವೇಶ್ಯಾವೃತ್ತಿಯ ಆರಂಭದ ಬಗ್ಗೆ ಡಾ.ಎನ್. ಸರಸ್ವತಿಯವರು ತಮ್ಮ "The Position of Women During the Vijayanagar Period" ಎಂಬ ಕೃತಿಯಲ್ಲಿ ವೇಶಾವೃತ್ತಿಯನ್ನು ಆರಂಭಿಸುವ ಮುನ್ನ ಆ ಸಮುದಾಯವು "ಮುದ್ರಾದಿಕೋತ್ಸವಂ" (Showing the mirror) ಎಂಬ ಧಾರ್ಮಿಕ ಆಚರಣೆಯೊಂದನ್ನು ನಡೆಸುತ್ತದೆ. ಚೈತ್ರ ಮಾಸದ ಪೂರ್ಣಿಮೆಯ ದಿನದಂದು ಜರುಗುವ ಈ ಕಾರ್ಯಕ್ರಮಕ್ಕೆ ಸಮುದಾಯದ ಸದಸ್ಯರೆಲ್ಲರನ್ನೂ ಆಮಂತ್ರಿಸಲಾಗುತ್ತದೆ. ತಂದೆಯು ತನ್ನ ಮಗಳನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಅವಳ ಮುಖವನ್ನು ಕನ್ನಡಿಯಲ್ಲಿ ನೋಡುತ್ತಾನೆ. ಏಕೆಂದರೆ ಕನ್ನಡಿಯನ್ನು ಅವರು ಮಹಾಲಕ್ಷ್ಮೀ ಎಂದು ಭಾವಿಸುತ್ತಾರೆ. ನಂತರ ಆಶೀರ್ವದಿಸುತ್ತಾನೆ. ಪ್ರೌಢರಾದ ನಂತರ ವೇಶ್ಯಾವೃತ್ತಿಗಿಳಿಯುವ ಎಲ್ಲಾ ಕನ್ಯೆಯರಿಗೂ ಇದು ಅನ್ವಯಿಸುತ್ತಿತ್ತು ಎಂದು ಬರೆದಿರುವುದು ಕಂಡುಬರುತ್ತದೆ. ಇಂದಿಗೂ ಸಹ ಹಂಪಿಯ ಸುತ್ತಮುತ್ತಲ ಪರಿಸರದಲ್ಲಿ ಗೌಪ್ಯವಾಗಿ ನಡೆದುಬರುತ್ತಿರುವುದನ್ನು ಕಾಣಬಹುದಾಗಿದೆ.

ವಿಜಯನಗರದ ರಾಜಧಾನಿ ವಿದ್ಯಾರಣ್ಯದಲ್ಲಿದ್ದ ಪ್ರಸಿದ್ಧ ಪೇಟೆಗಳಲ್ಲಿ ಅಚ್ಯುತ ಪೇಟೆಯೂ ಒಂದು. ಅದನ್ನು 'ಸೂಳೆ ಬಜಾರ್' ಎಂತಲೇ ಕರೆಯಲಾಗು ತ್ತಿತ್ತು. ಆದರೆ ಈ ಬಗೆಯ ಅಭಿಪ್ರಾಯದಲ್ಲಿ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯ ವಿರುವುದು ಕಂಡುಬರುತ್ತದೆ. ವಿಜಯನಗರಕ್ಕೆ ಭೇಟಿ ನೀಡಿದ್ದ ವಿದೇಶಿ ಪ್ರವಾಸಿಗರು ತಮ್ಮ ಬರವಣಿಗೆಯಲ್ಲಿ ನೀಡಿರುವ ವಿವರಣೆಗಳು ಐಷಾರಾಮದ ಜೀವನ ನಡೆಸು ತ್ತಿದ್ದ ವೇಶ್ಯೆಯರ ಬದುಕನ್ನು ಮಾತ್ರ. ಆದರೆ ರಾಜಧಾನಿಯ ಪರಿಸರವನ್ನು ಕಂಡ ಸಮಕಾಲೀನ ಕವಿಗಳು ತಮ್ಮ ಕೃತಿಗಳಲ್ಲಿ, ವೇಶ್ಯೆಯರ ಸ್ಥಿತಿಗತಿ, ಸ್ವಭಾವ ಹಾಗೂ ಅವರ ಪರಿಸರವನ್ನು ಭಿನ್ನಭಿನ್ನವಾಗಿ ಹೇಳಿರುವುದು ಕಂಡುಬರುತ್ತದೆ. ಉದಾಹರಣೆಗೆ: ಚೆನ್ನಬಸವ ಪುರಾಣದಲ್ಲಿ ವೇಶ್ಯೆಯನ್ನು ಸುಳ್ಳಿನಂಗಡಿ, ಮತ್ಸರದ ಮನೆ, ಮೋಸ ಕಪಟಗಳ ವಾಸಸ್ಥಾನ, ಆಸೆಯ ಆಶ್ರಯ, ಅತೀ ಆಸೆಯ ಅಂಗಡಿ, ಸ್ವಾರ್ಥಿಗಳು ನಡೆಸುವ ಮಂದಿರ, ಜಗಳಗಳು ನಡೆಯುವ ಕೇಂದ್ರಸ್ಥಾನ, ನೆಪಗಳ ನೆಲೆ, ಹೊಸ ಹೊಸ ರೀತಿಯ ಚತುರತೆಯ ಚಾವಡಿ, ಮೋಸಗಳ ಮೂಲಸ್ಥಾನ, ಅಸಾಧ್ಯವಾದ ಸಾಮರ್ಥ್ಯದ ಮನೆಯಾಗಿದ್ದಿತ್ತು ಎಂದು ಹೇಳಿರುವುದು ಕಂಡುಬರುತ್ತದೆ. ಒಂದರ್ಥ ದಲ್ಲಿ ಇದು ಸತ್ಯವೇ. ಅಂದು ವೇಶ್ಯೆಯರ ಸಹವಾಸ ಮಾಡಿದವರ ಬದುಕನ್ನು ಸೂಚಿಸುವ ಜಾನಪದ ಹಾಡುಗಳು ನಿಜಕ್ಕೂ ಇಂದಿಗೂ ಮನುಷ್ಯನ ಬದುಕಿಗೆ ನಿದರ್ಶನವೆನ್ನಬಹುದು. ಉದಾಹರಣೆಗೆ,

ತಂಬಿಟ್ಟುಗುಪ್ಪುಂಟೆ ತವರಿಗೆ ಮುಪ್ಪುಂಟೆ
ದೊಂಬನಾ ಮನೆಗೆ ಕದವುಂಟೆ....ಅಣ್ಣಯ್ಯ
ಸೂಳೇಯ ನಂಬಿದವಗುಂಟೆ ಸಂಸಾರ ...
ಮಂಜು ಮರಾಳಲ್ಲಿ ಮರಳು ಸಕ್ಕರೆಯಲ್ಲಿ
ಮಡಗಿದ್ದ ಸೂಳೆ ಸ್ಥಿರವಲ್ಲ.....ಅಣ್ಣಯ್ಯ
ಮನೆಗೆ ತಂದಿರಿಸು ಮಡದಿಯ
ಸೂಳೇಯ ಮನೆಯಲ್ಲಿ ಸೂರೆಲ್ಲಿ ಮಲ್ಲೀಗೆ
ಜಾಣ ನಾ ಹೋಗಿ ಮಲಗೂವೆ ..ಮಂಚದ್ಮೇಲೆ
ತಾಳೆ ಹೂವಿನ ತಲೆದಿಂಬು
ಎಲ್ಲಿಗೆ ಹೋಗಿದ್ದೆ ಯಾವ್ಹೂವ್ ಮುಡಿದಿದ್ದೆ
ಯಾರ ತೋಳಲ್ಲಿ ಒರಗಿದ್ದೆ.... ಕಂದಯ್ಯ
ವಲ್ಲಿ ಸೆರಗೆಲ್ಲಾ ಪರಿಮಾಳ
ಕಾಕಾನ ಕೋಟೆಯ ನೀಟ್ನಾಗಿ ಬಂದವಳೆ
ಜಾತ್ರೇಲಿ ಗಂಡ್ನ ಸುಳಿವಿಲ್ಲ, ಅವಳೊಡನೆ
ಸೂಳೇರ ಬೀದಿ ಮರೆದಾನೋ

ಎಂಬುವ ಜನಪದವು ಅನುಭವದ ಹಾಗೂ ಸನ್ನಿವೇಶದ ಒತ್ತಡಗಳಿಂದ ಸೃಷ್ಟಿಯಾಗಿವೆ. ಇವು ಇಂದಿಗೂ ಪ್ರಸ್ತುತವಾಗಿವೆ.

ಅಂದಿನ ಶ್ರೀಮಂತ ವೇಶ್ಯೆಯರು ತಮ್ಮ ಮನೆಗಳಲ್ಲಿ ವೀಣೆ, ಕೊಳಲು, ಸಂಗೀತ ಲಹರಿಯನ್ನು ಸೃಷ್ಟಿಸುತ್ತಿದ್ದರು. ಕರ್ಪೂರದ ದೀಪಗಳು, ಸುಗಂಧ ಧೂಪಗಳು, ಸಂಗೀತ ಧಾರೆಗಳೆಂಬ ಬಂಧನಗಳು ಯಾವ ಪುರುಷನನ್ನು ಮನೆಯಿಂದ ಆಚೆಹೋಗುವ ಹಾಗೆ ಮಾಡುತ್ತಿರಲಿಲ್ಲ. ವಿಜಯನಗರದ ವೇಶ್ಯೆಯರು ಶಿಕ್ಷಣ ಪಡೆಯುವ ಹಕ್ಕುಳ್ಳವರಾಗಿದ್ದರು. ಸ್ವತಃ ಅರಸರೇ ವೃತ್ತಿಪರ ಶಿಕ್ಷಣ ನೀಡಲು ದತ್ತಿಗಳನ್ನು ನೀಡುತ್ತಿದ್ದುದ್ದಕ್ಕೆ ಅನೇಕ ಸಾಕ್ಷಿಗಳಿವೆ. ನವರಾತ್ರಿಯ ಸಮಯದಲ್ಲಿ ವೇಶ್ಯೆಯರ ಕುಸ್ತಿಗಳೂ ನಡೆಯುತ್ತಿದ್ದವೆಂದು ಅಬ್ದುಲ್ ರಜಾಕ್ ತಿಳಿಸಿದ್ದಾನೆ.

ವಿಜಯನಗರದ ರಾಜಕೀಯ ರಂಗದಲ್ಲಿಯೂ ವೇಶ್ಯೆಯರು ತಮ್ಮನ್ನು ಉನ್ನತ ಮಟ್ಟದಲ್ಲಿ ಗುರುತಿಸಿಕೊಂಡಿದ್ದರೆಂಬುವುದು ಕಂಡುಬರುತ್ತದೆ. ಒಂದು ದೃಷ್ಟಿಯಲ್ಲಿ ವೇಶ್ಯಾವೃತ್ತಿಯೇ ರಾಜರಕ್ಷಿತವಾಗಿತ್ತು ಎನ್ನಬಹುದು. ಸ್ವತಂತ್ರವಾಗಿದ್ದ ವೇಶ್ಯೆಯರು ತಮ್ಮದೇ ಒಂದು ವರ್ಗವೆಂದು ಗುರುತಿಸಿಕೊಳ್ಳುತ್ತಿದ್ದರು. (ಅಂದರೆ ದೇವದಾಸಿಯರಲ್ಲದವರು) ಇವರುಗಳು ಅರಸರ, ಸರದಾರರ, ಶ್ರೀಮಂತರ ಆಶ್ರಯವನ್ನು ಪಡೆದಿದ್ದರು. ಈ ವರ್ಗದಲ್ಲಿಯೇ ಕೆಲವರು ಅರಸರಿಗೆ ಮತ್ತು ಸರದಾರರಿಗೆ ಸೂಳೆಯರಾಗಿದ್ದರು. ಪ್ರಖ್ಯಾತ ದೊರೆ ಎನ್ನಿಸಿಕೊಂಡಿರುವ ಕೃಷ್ಣ ದೇವರಾಯನ ಪಟ್ಟದ ರಾಣಿಯರಲ್ಲಿ ಚಿನ್ನಾದೇವಿ ಒಬ್ಬ ವೇಶ್ಯೆ ಎಂಬುವುದು ಇಲ್ಲಿ

ಮುಖ್ಯವಾಗಿ ಗೋಚರಿಸುತ್ತದೆ. ಇದರಿಂದಾಗಿ ವೇಶ್ಯೆಯರಿಗೆ ಅಪಾರ ಗೌರವವಿತ್ತು. ಅರಸರು ತಮ್ಮ ಸಾಮರ್ಥ್ಯದ ಪ್ರದರ್ಶನದ ನೆಪದಲ್ಲಿ ಭವ್ಯವಾಗಿ ಆಚರಿಸುತ್ತಿದ್ದ ದಸರೆಯ ಹಬ್ಬಗಳಲ್ಲಿ ರಾಜರು ಆಮಂತ್ರಿಸಿದ ಪಟ್ಟಿಯಲ್ಲಿ ವೇಶ್ಯೆಯರೂ ಇರುತ್ತಿದ್ದರು. "ದಸರೆಯಲ್ಲಿ ರಾಜನು ಹೊಸನಗರದಿಂದ ರಾಜಧಾನಿಯವರೆಗೆ ಹಬ್ಬವನ್ನು ಆಚರಿಸುತ್ತಾನೆ. ಆಗ ರಾಜ್ಯದ ಎಲ್ಲಾ ಭಾಗಗಳಿಂದ ದೇವದಾಸಿಯರು, ದಳವಾಯಿಗಳೂ, ಸಾಮಂತರೂ ತಮ್ಮ ಪರಿವಾರದಸಮೇತ ಬರುತ್ತಾರೆ" ಎಂದು ಪೇಸ್ ಹೇಳಿದ್ದಾನೆ.

ವೇಶ್ಯೆಯರಿಂದ ತೆರಿಗೆ ಪಡೆದು ರಾಜ್ಯದ ವೆಚ್ಚಕ್ಕೆ ಬಳಸುತ್ತಿದ್ದುದು ನಮ್ಮ ಭವ್ಯಚರಿತ್ರೆಯ ದುರಂತಗಳಲ್ಲೊಂದು. ವೇಶ್ಯೆಯರು ನೀಡುತ್ತಿದ್ದ ತೆರಿಗೆಯ ರೀತಿ ನೀತಿಯನ್ನು ಅಬ್ದುಲ್‌ರಜಾಕ್ ಈ ರೀತಿ ವಿವರಿಸುತ್ತಾನೆ: "ವಿಜಯನಗರದ ಏಳು ಕೋಟೆಗಳಲ್ಲಿ ಈ ರೀತಿಯ ಅನೇಕ ವೇಶ್ಯಾಗೃಹಗಳಿದ್ದವು. ಈ ವೇಶ್ಯಾಗೃಹಗಳ ಮೇಲೆ ಹಾಕಿದ ತೆರಿಗೆಯಿಂದ ಬೊಕ್ಕಸಕ್ಕೆ ಹನ್ನೆರಡು ಸಾವಿರ ಘನ ಆದಾಯ ಬರುತ್ತಿತ್ತು. ಈ ಹಣದಿಂದ ಸೈನಿಕರಿಗೆ ಸಂಬಳವಾಗಿ ಕೊಡುತ್ತಿದ್ದರು" ಎಂದು ಹೇಳಿರುವುದು ವೇಶ್ಯೆಯರ ಆದಾಯವನ್ನು ಸೂಚಿಸುತ್ತದೆ ಹಾಗೂ ವಿಜಯನಗರದಲ್ಲಿ ಈ ವೃತ್ತಿಯ ಸ್ಥಾನಮಾನವನ್ನು ತಿಳಿಸುತ್ತದೆ.

ಸತಿ ಪದ್ಧತಿ

ವಿಜಯನಗರದ ಕಾಲದಲ್ಲಿ ಸತಿ ಸಹಗಮನ ಪದ್ಧತಿಯು ವ್ಯಾಪಕವಾಗಿ ಕಂಡು ಬರುತ್ತದೆ. ಈ ಪದ್ಧತಿಯು ವಿಜಯನಗರದ ಅಥವಾ ಭಾರತದಲ್ಲಿಯೇ ಅಲ್ಲದೆ ಈಜಿಪ್ಟ್, ಗ್ರೀಕ್, ಚೀನಾ, ಸಿರಿಯಾ ಮುಂತಾದ ದೇಶಗಳಲ್ಲಿಯೂ ಆಚರಣೆ ಯಲ್ಲಿದ್ದದ್ದು ಕಂಡುಬರುತ್ತದೆ. ಅಂದಿನ ಪುರುಷಪ್ರಧಾನ ಸಮಾಜದಲ್ಲಿ ಹೆಣ್ಣನ್ನು ಕೇವಲ ಉಪಭೋಗದ ವಸ್ತುವನ್ನಾಗಿಸಿಕೊಂಡಿರುವುದರ ಪ್ರತೀಕವಾಗಿ ಇದು ಗೋಚರಿಸುತ್ತದೆ. ಸತಿಯು ಸಹಗಮನವಾಗುತ್ತಿದ್ದದ್ದು ಎರಡು ರೀತಿಯಲ್ಲಿ

ಅ. **ಸಹಗಮನ** : ಅಂದರೆ ಗಂಡ ಸತ್ತರೆ ಅವನ ಜೊತೆಯಲ್ಲಿಯೇ ಜೀವಂತವಾಗಿ ಚಿತೆಗೆ ಅಥವಾ ಹೂಳುವುದಾದರೆ ಜೀವಂತವಾಗಿ ಸಮಾಧಿ ಮಾಡಿಸಿಕೊಳ್ಳುವುದು ಇದಕ್ಕೆ ಸಹಗಮನ ಎಂದು ಕರೆಯಲಾಗಿದೆ.

ಆ. **ಅನುಗಮನ** : ಗಂಡನು ಎಲ್ಲೋ ದೂರದಲ್ಲಿ ಸತ್ತರೆ, ಅದು ಯುದ್ಧ ರಂಗದಲ್ಲಾಗಬಹುದು ಅಥವಾ ಬೇಟೆಯಾಡುವ ಸಮಯದಲ್ಲಿ ಮರಣಹೊಂದಿದರೆ ಗಂಡನನ್ನು ನೆನೆದುಕೊಂಡು ಬೆಂಕಿಯಲ್ಲಿ ಜೀವ ಅರ್ಪಣೆ ಮಾಡಿಕೊಳ್ಳುವ ಕ್ರಿಯೆಗೆ ಅನುಗಮನ ಎಂತಲೂ ಕರೆಯಲಾಗುತ್ತಿತ್ತು.

ವಿಜಯನಗರ ಸಾಮ್ರಾಜ್ಯದಾದ್ಯಂತ ಇದಕ್ಕೆ ಸಂಬಂಧಿಸಿದ ಅನೇಕ ಶಿಲ್ಪಗಳು, ಶಾಸನಗಳು ದೊರಕುತ್ತವೆ. ಸತಿ ಸಹಗಮನವು ಬೆಂಕಿಗೆ ಹಾರಿ ಜೀವ ಬಿಡುವ ರೂಪ ಒಂದಾದರೆ, ಜೀವಂತವಾಗಿ ಸಮಾಧಿ ಮಾಡಿಸಿಕೊಳ್ಳುವುದು ಮತ್ತೊಂದಾಗಿತ್ತು. ಕೆಲವು ಕಡೆ ನೀರಿಗೆ ಹಾರುವುದು ಹಾಗೂ ಎತ್ತರದ ಪ್ರದೇಶಗಳಿಂದ ಕಮರಿಗಳಿಗೆ ಹಾರಿ ಜೀವಬಿಡುವ ಪದ್ಧತಿಯೂ ಇತ್ತೆಂದು ತಿಳಿದುಬರುತ್ತದೆ.

ವಿಜಯನಗರದಲ್ಲಿ ಆಚರಣೆಯಲ್ಲಿದ್ದ ಸತಿಪದ್ಧತಿಯ ಕುರಿತು ವಿಪುಲವಾಗಿ ದೇಶೀಯ ಮತ್ತು ವಿದೇಶೀಯ ಸಾಕ್ಷ್ಯಾಧಾರಗಳು ದೊರೆಯುತ್ತವೆ. ಈ ಅನಿಷ್ಟ ಪದ್ಧತಿಯ ಉಗಮ ಮತ್ತು ಬೆಳವಣಿಗೆಗಳಿಗೆ ಧಾರ್ಮಿಕ, ಸಾಮಾಜಿಕ, ಆರ್ಥಿಕ ಕಾರಣಗಳೇನೇ ಇದ್ದರೂ ವಿಜಯನಗರದಲ್ಲಿ ಇದೊಂದು ಸಾಮಾಜಿಕ ಮೌಢ್ಯ ವಿಧಿಯಾಗಿದ್ದಿತ್ತೆನ್ನಬಹುದು. ಕನ್ನಡದ ಧ್ವಜಪತಾಕೆಯನ್ನು ಜಗತ್ತಿಗೆ ಸಾರಿದ ಸಾಮ್ರಾಜ್ಯವೆಂದು, ಕನ್ನಡದ ನಾಡಿನ ಚರಿತ್ರೆಯನ್ನು ಶ್ರೀಮಂತಗೊಳಿಸಿದ ರಾಜ ಮಹಾರಾಜರ ತಾಣವೆಂದು ಹೆಸರು ಪಡೆದಿರುವ ವಿಜಯನಗರ ಸಾಮ್ರಾಜ್ಯದಲ್ಲಿಯೇ ಅತ್ಯಂತ ಹೆಚ್ಚಿನ ಸತಿಘಟನೆಗಳು ನಡೆದಿರುವುದು ಕಂಡುಬರುತ್ತದೆ. ಹಿಂದೂ ಧರ್ಮದ ರಕ್ಷಣೆಯ ಹೆಸರಿನಲ್ಲಿಯೇ ದಕ್ಷಿಣ ಭಾರತದಲ್ಲಿ ಹುಟ್ಟಿಕೊಂಡ ವಿಜಯ ನಗರ ಸಾಮ್ರಾಜ್ಯದ ಆಳುವ ವರ್ಗದ ಅತಿಯಾದ ಪ್ರೋತ್ಸಾಹವೇ ಈ ಜೀವ ವಿರೋಧಿ ಆಚರಣೆಗೆ ಕಾರಣವೆನ್ನಬಹುದಾಗಿದೆ. ಈ ಕೆಟ್ಟ ಪದ್ಧತಿಯ ಆಚರಣೆಯ ವಿಧಿ ವಿಧಾನಗಳನ್ನು ಅಂದು ವಿಜಯನಗರಕ್ಕೆ ಭೇಟಿ ನೀಡಿದ್ದ ವಿದೇಶಿ ಪ್ರವಾಸಿ ಗರು ಸ್ವತಃ ವೀಕ್ಷಿಸಿ ತಮ್ಮ ಬರವಣಿಗೆಗಳಲ್ಲಿ ದಾಖಲಿಸಿದ್ದಾರೆ. ಸಾಮ್ರಾಜ್ಯದ ಹಳ್ಳಿ, ಗ್ರಾಮಗಳಲ್ಲಿ ನಡೆಯುತ್ತಿದ್ದ ಭೀಕರ ಸ್ವರೂಪದ ಸತಿ ಪದ್ಧತಿಯನ್ನು ತಿಳಿ ಯಲು ವಿದೇಶೀಯರ ಬರವಣಿಗೆಗಿಂತಲೂ ಸಮಕಾಲೀನ ದೇಶೀಯ ಸಾಹಿತಿಗಳ ಸಾಹಿತ್ಯವು ಹೆಚ್ಚಿನ ರೀತಿಯಲ್ಲಿ ನೆರವಾಗುತ್ತವೆ.

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಸತಿಗೆ ಸಿದ್ಧವಾಗುತ್ತಿದ್ದ ರೀತಿ ಹಾಗೂ ಸತಿ ನಡೆಯುವಾಗಿನ ಸನ್ನಿವೇಶವನ್ನು ಹೆಚ್.ಎಲ್. ನಾಗೇಗೌಡರು ತಮ್ಮ 'ಪ್ರವಾಸಿ ಕಂಡ ಇಂಡಿಯಾ' ಸಂಪುಟ ೨ ರಲ್ಲಿ ಬಾರ್ಬೋಸಾನ ಹೇಳಿಕೆಯನ್ನು ತಿಳಿಸಿದ್ದಾರೆ. ಅದರ ಪ್ರಕಾರ ನೋಡುವುದಾದರೆ, ನಾನಿದ್ದ ಏಳು ತಿಂಗಳುಗಳ ಕಾಲದಲ್ಲಿ ಇಲ್ಲಿನ ಸಮಾಜದಲ್ಲಿ ನಡೆಯುತ್ತಿದ್ದ ಅನೇಕ ವಿಚಿತ್ರ ಹಾಗೂ ಅಮಾನುಷ ಕೃತ್ಯಗಳನ್ನು ಕಂಡೆ. ಗಣ್ಯರಾದ ಗಂಡಸರಾಗಲಿ, ಹೆಂಗಸರಾಗಲಿ ಸತ್ತರೆ ಇವರು ಸುಡುತ್ತಾರೆ. ಮದುವೆಯಾದ ಗಂಡಸು ಸತ್ತರೆ ಅವನ ಹೆಂಡತಿ ಚಿತೆಯಲ್ಲಿ ಬಿದ್ದು ಸಾಯುತ್ತಾಳೆ, ಗಂಡ ಸತ್ತ ಮೇಲೆ ಹೆಂಡತಿ ಒಂದು ಅಥವಾ ಮೂರು ತಿಂಗಳುಗಳ ನಂತರ ಚಿತೆ ಯಲ್ಲಿ ಬೀಳುವುದಕ್ಕೆ ಸಿದ್ಧಳಾಗುತ್ತಾಳೆ. ನಿರ್ದಿಷ್ಟವಾದ ದಿನದಂದು ಬಹಳ ಹೊತ್ತಿಗೆ ಮುಂಚೆ ಎದ್ದು ಕುದುರೆಯ ಮೇಲೋ ಅಥವಾ ಎಂಟು ಜನ ಹೊತ್ತ ಪಲ್ಲಕ್ಕಿಯ

ಮೇಲೋ ಕುಳಿತು ಚಿತೆಯು ಸಿದ್ಧವಾಗಿರುವ ಸ್ಥಳಕ್ಕೆ ಹೊರಡುತ್ತಾಳೆ. ಆಕೆ ಮದುವೆಗೆ ಸಿದ್ಧವಾಗಿರುವ ವಧುವಿನಂತೆ ಅಲಂಕಾರ ಮಾಡಿಕೊಂಡಿರುತ್ತಾಳೆ. ತಲೆಯ ಕೂದಲನ್ನು ಇಳಿ ಬಿಟ್ಟಿರುತ್ತಾಳೆ. ತನ್ನ ಯೋಗ್ಯತೆಗನುಸಾರವಾಗಿಯೇ ಒಡವೆ ವಸ್ತ್ರಗಳನ್ನು ಹಾಕಿಕೊಂಡಿರುತ್ತಾಳೆ. ಊರನ್ನು ಆಳುವ ಅರಸನ, ಪಾಳೆಯಗಾರನ ಅಪ್ಪಣೆಯನ್ನು ಪಡೆದು, ಅರಿಶಿನದ ಸೀರೆಯನ್ನುಟ್ಟು, ಆಭರಣಗಳನ್ನು ತೊಟ್ಟು ಪರಿಪರಿಯಾದ ಪುಷ್ಪಗಳಿಂದ ಅಲಂಕರಿಸಿಕೊಂಡು ಅವಳನ್ನು ಊರಿನ ಸುತ್ತೆಲ್ಲಾ ಮೆರವಣಿಗೆ ಮಾಡಲಾಗುತ್ತಿತ್ತು. ವೆನೀಸ್‌ನಲ್ಲಿ ಮದುವೆಗೆ ಹೊರಟ ಹೆಣ್ಣಿನ ಮೆರವಣಿಗೆಯಂತೆ, ಅವಳ ಎಡಗೈಯಲ್ಲಿ ಅವಳು "ನಾನು ನನ್ನ ನಲ್ಲನೊಡನೆ ಚಿರನಿದ್ರೆ ಮಾಡಲು ಹೋಗುತ್ತಿರುವೆ" ಎಂದು ಹಾಡುತ್ತಾ ಹಾಡುತ್ತಾ ಮುಂದುವರಿಯು ತ್ತಾಳೆ. ಮೆರವಣಿಗೆಯಲ್ಲಿ ಆಕೆಯ ನೆಂಟರಿಷ್ಟರು, ಬಂಧು ಬಳಗದವರೆಲ್ಲರೂ ಭಾಗವಹಿಸುತ್ತಾರೆ ಎಂದು ಸಂಪೂರ್ಣ ಚಿತ್ರಣವನ್ನು ನೀಡಿದ್ದಾನೆ.

ಬಾರ್ಬೋಸನು ಇನ್ನೂ ಮುಂದುವರಿದು ಸತಿಯು ನಡೆಯುತ್ತಿದ್ದ ಅಂತಿಮ ಕ್ಷಣಗಳನ್ನು ಸಹ ಸಂಕ್ಷಿಪ್ತವಾಗಿ ವಿವರಿಸಿದ್ದಾನೆ. ಸಾಮಾನ್ಯವಾಗಿ ಸತಿ ಆಚರಣೆಯು ನದಿಯ ದಡದಲ್ಲಿ ನಡೆಯುತ್ತಿತ್ತು. ಬೆಳಿಗ್ಗೆ ಸತಿಗೆ ಆಹುತಿಯಾಗುವವಳನ್ನು ಮೆರವಣಿಗೆಯಲ್ಲಿ ಕರೆದೊಯ್ದು ಮಧ್ಯಾಹ್ನದ ವೇಳೆಗೆ ನದಿಯ ದಡ ಸೇರುತ್ತಾರೆ. ಅಲ್ಲಿ ಚಿತೆಗೆ ಅಗತ್ಯವಾಗಿ ಬೇಕಾಗಿರುವ ಕಟ್ಟಿಗೆ, ಎಣ್ಣೆ ಮುಂತಾದವುಗಳೆಲ್ಲವೂ ಸಿದ್ಧವಾಗಿರುತ್ತಿದ್ದವು. ಈ ಅನಿಷ್ಟ ಪದ್ಧತಿಯನ್ನು ನೋಡಲು ಬಂದವರೆಲ್ಲರಿಗೂ ಊಟದ ವ್ಯವಸ್ಥೆಯು ತುಂಬ ವಿಜೃಂಭಣೆಯಿಂದಲೇ ನಡೆದಿರುತ್ತದೆ. ಚಿತೆಗೆ ಸಿದ್ಧಳಾಗಿರುವ ವಿಧವೆಯೂ ಎಲ್ಲರ ಜೊತೆಯಲ್ಲಿಯೇ ಸಂತೋಷದಿಂದ ಊಟ ಮಾಡಿ, ಸ್ವಲ್ಪ ಹೊತ್ತು ಕಾಲ ಕಳೆಯುತ್ತಾಳೆ. ಒಂದು ವರ್ಗವು ಚಿತೆಯನ್ನು ಸಿದ್ಧಮಾಡುತ್ತದೆ. (ಸಾಮಾನ್ಯವಾಗಿ ಹೊಲೆಯರು ಹಾಗೂ ಮಾದಿಗರು ಈ ಕಾರ್ಯವನ್ನು ನಿರ್ವಹಿಸುತ್ತಿದ್ದರೆಂದು ಕಂಡುಬರುತ್ತದೆ.) ವಿಧವೆಯು ತನ್ನ ಗಂಡನ ಹತ್ತಿರದ ಸಂಬಂಧಿಯೊಬ್ಬನ ಕೈಹಿಡಿದು ನದಿಯ ಬಳಿಗೆ ಹೋಗುತ್ತಾಳೆ. ತನ್ನ ವಸ್ತುಗಳನ್ನೆಲ್ಲಾ ಕಳಚಿ ತಂದೆ ತಾಯಿಯರಿಗೆ ಕೊಟ್ಟು ನದಿಯಲ್ಲಿ ಸ್ನಾನಮಾಡಿ ಹದಿನಾಲ್ಕು ಮೊಳದ ಅರಿಶಿಣದ ಬಟ್ಟೆಯನ್ನು ಉಟ್ಟುಕೊಳ್ಳುತ್ತಾಳೆ. ಮತ್ತೆ ಗಂಡನ ಕಡೆಯವರ ಕೈ ಹಿಡಿದು ಚಿತೆಯ ಬಳಿ ಇರುವ ವೇದಿಕೆಯ ಮೇಲೆ ನಿಂತು ಮಕ್ಕಳಿಗೆ, ನೆಂಟರಿಷ್ಟರಿಗೆ ಬುದ್ಧಿ ಮಾತನಾಡುತ್ತಾಳೆ. ನಂತರ ಸತಿಯಾಗುವ ಬಗ್ಗೆ ಮಾತನಾಡಿ, ಸತಿಗೆ ಸಿದ್ಧಳಾಗುತ್ತಾಳೆ. ಒಬ್ಬರು ಅವಳ ತಲೆಯ ಮೇಲೆ ಒಂದು ಗಡಿಗೆ ಎಣ್ಣೆಯನ್ನು ಸುರಿಯುತ್ತಾರೆ. ಬರಿದಾದ ಗಡಿಗೆಯನ್ನು ಬೆಂಕಿಗೆ ಬಿಸಾಡುತ್ತಾರೆ. ಹಾಗೆ ಬಿಸಾಡಿದ ಕೂಡಲೇ ವಿಧವೆಯು ಚಿತೆಗೆ ಹಾರಿ ಆತ್ಮ ಹಾಗೂ ದೇಹಗಳನ್ನು ದಹನ ಮಾಡಿಕೊಳ್ಳುತ್ತಾಳೆ.

ನೆರೆದವರೆಲ್ಲರೂ ಜೋರಾಗಿ ಬೊಬ್ಬೆ ಹಾಕುತ್ತಾರೆ. ಏಕೆಂದರೆ ಚಿತೆಗೆ ಹಾರಿದ ವಿಧವೆಯು ಸಾಯುವ ತನಕ ಅವಳೂ ಕಿರುಚಾಡುವುದು ಸಹಜ. ಅವಳ ಕೂಗು ನೆರೆದಿರುವವರಿಗೆ ಕೇಳಿಸದಿರಲಿ ಎಂದು ಇವರೂ ಜೋರಾಗಿ ಬೊಬ್ಬೆಹಾಕುತ್ತಿದ್ದರು ಎಂದು ವಿವರಿಸಿದ್ದಾರೆ. ಇದೇ ಹೀನ ಸಂಸ್ಕೃತಿಯಾಗಿತ್ತು?

ಕೇವಲ ಆಳುವ ವರ್ಗಕ್ಕಷ್ಟೆ ಈ ಪದ್ಧತಿಯು ಸೀಮಿತವಾಗಿರದೆ, ಇತರ ವರ್ಗಗಳೂ ಸಹ ಪರಿಸರದ ಪ್ರಭಾವದಿಂದಾಗಿ ಈ ಆಚರಣೆಗೆ ಒಳಗಾಗಿದ್ದವೆಂಬುವುದು ಕಂಡು ಬರುತ್ತದೆ. ಬ್ರಾಹ್ಮಣ ವರ್ಗದ ಸ್ತ್ರೀಯರು ಸತಿ ಹೋಗುವುದನ್ನು ಅವರ ಶಾಸ್ತ್ರಗಳು ನಿಷೇಧಿಸಿವೆಯಾದರೂ ಕ್ರಮೇಣ ಅನೇಕ ಪ್ರಭಾವಗಳಿಂದ ಸತಿ ಪದ್ಧತಿಯು ಇವರಲ್ಲಿಯೂ ಆಚರಣೆಗೆ ಬಂದಿರುವುದು ಕಂಡುಬರುತ್ತದೆ. ವಿಜಯ ನಗರದ ರಾಜಧಾನಿಯಲ್ಲಿ ಬ್ರಾಹ್ಮಣ ಸ್ತ್ರೀಯರು ಸತಿ ಹೋಗುತ್ತಿದ್ದರೆಂಬುದನ್ನು ಕುರಿತು ಇಟಲಿಯ ನಿಕೊಲೊಕೊಂಟಿ ತನ್ನ ವರದಿಯಲ್ಲಿ ವಿವರಿಸಿದ್ದಾನೆ. ಹಾಗೆಯೇ ಜೈನ ಧರ್ಮದ ಅನುಯಾಯಿಗಳು ಸತಿ ಪದ್ಧತಿಯನ್ನು ಸಾಮ್ರಾಜ್ಯದ ಇತರೆ ಕಡೆಗಳಲ್ಲಿ ಆಚರಿಸುತ್ತಿದ್ದು ಸಮಕಾಲೀನ ಶಾಸನಗಳಿಂದ ತಿಳಿದುಬರುವುದಾದರೂ ರಾಜಧಾನಿಯಲ್ಲಿದ್ದ ಜೈನರು ಸತಿ ಆಚರಿಸಿದ ಬಗ್ಗೆ ಮಾಹಿತಿ ದೊರೆಯುವುದಿಲ್ಲ.

ವಿಜಯನಗರದ ಅರಸರುಗಳು ಭಾರತದ ಇನ್ನಾವುದೇ ಸಂಸ್ಥಾನದ ರಾಜರುಗಳಿಗಿಂತಲೂ ಹೆಚ್ಚಿನ ಬಲಾಢ್ಯನಾಗಿದ್ದರೆ ಸಾಮಾನ್ಯವಾಗಿ ಪ್ರತಿಯೊಬ್ಬ ರಾಜನು ಹನ್ನೆರಡು ಸಾವಿರ ಹೆಂಡತಿಯರನ್ನು ಹೊಂದಿರುತ್ತಿದ್ದನೆಂದೂ ಇವರಲ್ಲಿ ನಾಲ್ಕು ಸಾವಿರ ಜನ ಇವನು ಹೋದೆಡೆಯಲ್ಲೆಲ್ಲಾ ಕಾಲ್ನಡಿಗೆಯಲ್ಲಿ ಹೋಗುತ್ತಿದ್ದರೆಂದು ಇವರಿಗಿಂತಲೂ ಹೆಚ್ಚು ರೂಪವತಿಯರಾದ ನಾಲ್ಕು ಸಾವಿರ ಹೆಂಡತಿಯರು ಕುದುರೆಯ ಮೇಲೆ ಸವಾರಿ ಮಾಡುತ್ತಾ ಹೋಗುತ್ತಿದ್ದರೆಂದೂ ಹಾಗೆಯೇ ಇವರುಗಳಲ್ಲಿ ಸುಮಾರು ಎರಡು ಸಾವಿರ ಹೆಂಡತಿಯರು ರಾಜನು ಸತ್ತಾಗ ತಮ್ಮ ಆತ್ಮ ಸಂತೋಷದಿಂದ ಚಿತೆಯೊಳಗೆ ಬಿದ್ದು ಪ್ರಾಣತ್ಯಾಗ ಮಾಡುತ್ತೇವೆಂಬ ವಾಗ್ದಾನ ಮಾಡಿ ರಾಜನ ಕೈಹಿಡಿಯುತ್ತಿದ್ದರೆಂದು ಬಾರ್ಬೊಸಾ ವಿವರಿಸಿದ್ದಾನೆ. ಇಷ್ಟೇ ಅಲ್ಲದೆ ಅವನು ಮುಂದುವರೆದು ಬರೆಯುತ್ತಾ : "ರಾಜ ಸತ್ತರೆ ಅಂತಃಪುರದ ಸುಮಾರು ನಾನೂರು ಐನೂರು ಸ್ತ್ರೀಯರು ಅವನೊಡನೆ ಚಿತೆಯಲ್ಲಿ ಬೀಳುತ್ತಾರೆ. ಇದಕ್ಕಾಗಿಯೇ ಚಿತಾಗ್ನಿಯನ್ನು ತುಂಬ ದೊಡ್ಡದಾಗಿ ಮಾಡಿರುತ್ತಾರೆ. ಶ್ರೀಗಂಧ, ತೇಗ, ಹೊನ್ನೆ ಮುಂತಾದ ಮರಗಳು, ಎಣ್ಣೆ ತುಪ್ಪವನ್ನು ಹೇರಳವಾಗಿ ಶೇಖರಿಸುತ್ತಾರೆ. ಈ ಚಿತೆಯಲ್ಲಿ ಬೀಳುವುದಕ್ಕಾಗಿ ನಾಮುಂದು ತಾಮುಂದು ಎಂದು ನುಗ್ಗಿ ಬರುತ್ತಾರೆ. ಇದೊಂದು ಅಪೂರ್ವವಾದ ದೃಶ್ಯ" ಎಂದು ಅಂದಿನ ರಾಜಾಸ್ಥಾನದಲ್ಲಿ ಇದ್ದ ಸತಿ ಪದ್ಧತಿಯನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾನೆ.

ಮೇಲಿನ ಎಲ್ಲ ಉಲ್ಲೇಖಗಳು ಭವ್ಯ ಸಾಮ್ರಾಜ್ಯವೆಂದೆನ್ನಿಸಿಕೊಂಡಿರುವ ವಿಜಯನಗರದಲ್ಲಿ ಮನೆಮಾಡಿಕೊಂಡಿದ್ದ ಅನಿಷ್ಟತೆಯನ್ನು ಸೂಚಿಸುತ್ತದೆ. ಧರ್ಮ ಸಂಸ್ಕೃತಿಗೆ ಹಾಗೂ ಅದರ ರಕ್ಷಣೆಗೆ ಬದ್ಧರಾಗಿದ್ದ ಆಡಳಿತಗಾರರುಗಳು ಇಂತಹ ಅನಿಷ್ಟ ಪದ್ಧತಿಯನ್ನು ನಿರ್ಮೂಲನೆ ಮಾಡದೆ, ತಾವೇ ಪ್ರೋತ್ಸಾಹಿಸಿಕೊಂಡು ಬಂದಿರುವುದು ಖೇದ ತರುವ ವಿಷಯವೇ. ೨೦ನೇ ಶತಮಾನದ ಪ್ರಾರಂಭದಲ್ಲಿ ಬಂಗಾಳದ ರಾಜಾರಾಮ್ ಮೋಹನ್‌ರಾಯ್‌ರವರು "ಬ್ರಹ್ಮ ಸಮಾಜ"ವನ್ನು ಸ್ಥಾಪಿಸಿಕೊಂಡು ಈ ಅನಿಷ್ಟಪದ್ಧತಿಯ ವಿರುದ್ಧ ಹೋರಾಡಲು ಪ್ರಯತ್ನಿಸಿ ತಮ್ಮ ಜೀವಿತದ ಕೊನೆಯವರೆಗೆ ಹೋರಾಡಿದರೆ ಅವರ ಹೋರಾಟಕ್ಕೆ ಅಂದಿನ ಬ್ರಿಟಿಷ್ ಗೌವರ್ನರ್ ಜನರಲ್ ಆಗಿದ್ದ ಲಾರ್ಡ್ ವಿಲಿಯಂ ಬೆಂಟಿಂಗ್ ಹೆಚ್ಚಿನ ಪ್ರೋತ್ಸಾಹ ನೀಡಿರುವುದು ಸಹ ಇಂದು ಇತಿಹಾಸವಾಗಿದೆ. ಇಂದಿಗೂ ಇಂತಹ ಅನಿಷ್ಟ ಪದ್ಧತಿಯು ಆಚರಿಸುತ್ತಿರುವುದನ್ನು ಪತ್ರಿಕೆಯಲ್ಲಿ ನೋಡಿದ್ದೇವೆ. ಈ ಕೆಟ್ಟ ಆಚರಣಾ ಸಂಸ್ಕೃತಿಯು ಹಿಂದೂ ಸಂಸ್ಕೃತಿಯನ್ನು ಉಳಿಸಲು ಉದಯಿಸಿದ ಸಾಮ್ರಾಜ್ಯವೆಂದು ಕೆಲವು ಮೂಲಭೂತ ಇತಿಹಾಸಕಾರರರಿಂದ ಕರೆಸಿಕೊಂಡ ವಿಜಯನಗರದಲ್ಲಿ ಹೆಚ್ಚಾಗಿ ಬೇರೂರಿತು.

ಮಹಿಳೆಯರ ಸ್ಥಾನಮಾನಗಳು

ವಿಜಯನಗರದ ಇತಿಹಾಸದ ಬಗ್ಗೆ ವಿಶಿಷ್ಟ ರೀತಿಯ ಬೆಳಕು ಚೆಲ್ಲಲು ಇಂದು ನಮ್ಮ ಮುಂದೆ ಅನೇಕ ಸಾಹಿತ್ಯಾಧಾರಗಳು ಹಾಗೂ ದೇವಾಲಯಗಳು ತೆರೆದ ಪುಸ್ತಕದಂತೆ ಕಂಗೊಳಿಸುತ್ತಿವೆ. ಅವುಗಳ ಸಹಾಯದಿಂದ ಅಂದಿನ ಕಾಲದಲ್ಲಿ ಸ್ತ್ರೀಯರ ಸ್ಥಾನ ಹಾಗೂ ಅವರು ಆಸ್ಥಾನದಲ್ಲಿ ಹಾಗೂ ಸಮಾಜದಲ್ಲಿ ಬದುಕುತ್ತಿದ್ದ ಸ್ಥಿತಿಗತಿಯ ಬಗ್ಗೆ ತಿಳಿಯಲು ಸಹಕಾರಿಯಾಗಿವೆ ಎನ್ನಬಹುದು. ಮೇಲಿನ ಆಧಾರ ಗಳಿಂದ ಮಹಿಳೆಯರು ರಾಜಕೀಯ, ಆರ್ಥಿಕ ಹಾಗೂ ಆಡಳಿತ ವಿಷಯಗಳಲ್ಲಿಯೂ ಪ್ರಮುಖ ಸ್ಥಾನ ಪಡೆದಿದ್ದರೆಂದು ಕಂಡುಬರುತ್ತದೆ. ಆದರೆ ಮೇಲಿನ ಹೇಳಿಕೆಯು ಸಾಮ್ರಾಜ್ಯದ ಕೇವಲ ಶೇ. ೩ ರಷ್ಟು ಮಹಿಳೆಯರಿಗೆ ಮಾತ್ರ ಸಂಬಂಧಪಟ್ಟದ್ದು. ಮಿಕ್ಕ ಮಹಿಳೆಯರು ಹಲವಾರು ರೀತಿಯ ಸಾಮಾಜಿಕ ಸಂಕೋಲೆಗೆ ಬಲಿಯಾಗಿ ಬದುಕುತ್ತಿದ್ದರು.

ಕರ್ನಾಟಕದ ಪ್ರಾಚೀನ ಇತಿಹಾಸವನ್ನು ಗಮನಿಸಿದರೆ ಅದು ಗಂಗರ ಕಾಲದಿಂದ ರಾಷ್ಟ್ರಕೂಟ, ಚಾಲುಕ್ಯ, ಹೊಯ್ಸಳ, ಇಕ್ಕೇರಿ ಅರಸರು, ಮೈಸೂರು ಒಡೆಯರವರೆಗೂ ಮಹಿಳೆಯರು ಪ್ರಮುಖ ಪಾತ್ರವಹಿಸಿರುವುದು ಕಂಡುಬರುತ್ತದೆ. ವಿಜಯನಗರದ ಅರಸರ ಕಾಲದಲ್ಲಿ ರಾಜರ ಅನುಪಸ್ಥಿತಿಯಲ್ಲಿ ರಾಣಿಯರೇ ಆಳ್ವಿಕೆ ನಡೆಸಿರುವುದಕ್ಕೆ ಅನೇಕ ಆಧಾರಗಳಿವೆ. ಕೃಷ್ಣದೇವರಾಯನು ತನ್ನ ರಾಣಿಯಾದ ಜಗನ್‌ಮೋಹಿನಿಗೆ

ಆಂಧ್ರಪ್ರದೇಶದ ಉಸ್ತುವಾರಿಯನ್ನು ವಹಿಸಿದ್ದದ್ದು ಕಂಡುಬರುತ್ತದೆ. ಅಂದಿನ ಕಾಲದ ಮಹಿಳೆಯರು ಗೃಹಿಣಿಯರಾಗಿ, ಯುದ್ಧದ ಸಮಯದಲ್ಲಿ ಹೋರಾಟಗಾರ್ತಿಯರಾಗಿ, ವ್ಯಾಪಾರಗಾರರಾಗಿ, ಕುಸ್ತಿ ಮಾಡುವವಳಾಗಿ, ಕವಯತ್ರಿಯರಾಗಿ, ಸಾಹಿತಿಗಳಾಗಿ, ಹಾಗೂ ಗವರ್ನರ್‌ಗಳಾಗಿ, ಆಡಳಿತಾಧಿಕಾರಿಗಳಾಗಿ, ರಾಣಿಯರ ಸಖಿಯರಾಗಿ, ಕೃಷಿಕರಾಗಿ, ಸಂಸಾರದ ಭಾರ ಹೊರುವವರಾಗಿ, ವೇಶ್ಯೆಯಾಗಿ ಕಂಗೊಳಿಸಿರುವುದು ಕಂಡುಬರುತ್ತದೆ.

ಗೃಹಿಣಿಯಾಗಿ : ಮದುವೆಯಾದ ಹೆಣ್ಣುಮಕ್ಕಳು ಸೌಭಾಗ್ಯಸೂಚಕವಾಗಿ ಅನೇಕ ಚಿಹ್ನೆಗಳನ್ನು ಧರಿಸುತ್ತಿದ್ದರು. ಈಗಲೂ ಧರಿಸುತ್ತಾರೆ. ಆದರೆ ಆ ಚಿಹ್ನೆಗಳು ಯಾವುವು ಎಂಬುದನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಏಕೆಂದರೆ ಕಾಲದಿಂದ ಕಾಲಕ್ಕೆ ಪ್ರದೇಶದಿಂದ ಪ್ರದೇಶಕ್ಕೆ ಅವುಗಳಲ್ಲಿ ವ್ಯತ್ಯಾಸ ಕಂಡುಬರುತ್ತವೆ. ತಾಳಿ (ಮಂಗಳಸೂತ್ರ), ಬಳೆ, ಓಲೆ, ಮೂಗುತಿ, ಕಾಲುಂಗುರ, ಅರಿಶಿನ, ಕುಂಕುಮ, ಹೂವು, ಕಾಡಿಗೆ ಇವು ಸಾಮಾನ್ಯವಾಗಿ ಸೌಭಾಗ್ಯಸೂಚಕಗಳು. ಮೇಲಿನ ಸೌಭಾಗ್ಯದ ಲಕ್ಷಣಗಳಲ್ಲಿ ಐದನ್ನೂ ವಿಶೇಷವಾಗಿ ಹೆಚ್ಚಾಗಿ ಹೆಸರಿಸಿರುವುದು ಕಂಡುಬರುತ್ತದೆ. ಕೆಲವರ ಪ್ರಕಾರ ಅರಿಶಿಣ, ಕುಂಕುಮ, ಸಿಂಧೂರ (ಬೈತಲೆಗೆ ಹಚ್ಚುವ ಕೆಂಪು ಪುಡಿ),ಕಾಡಿಗೆ ಮತ್ತು ಮಂಗಳ ಸೂತ್ರ- ಇವೇ ಆ ಐದು. ಇನ್ನೊಂದು ಪಟ್ಟಿಯ ಪ್ರಕಾರ ಮಂಗಳಸೂತ್ರ, ಅರಿಶಿನ, ಕುಂಕುಮ, ಬಳೆ, ಓಲೆ ಇವೇ ಆ ಐದು. ('ಐದೆ' ಎಂದರೆ ಈ ಐದು ಲಕ್ಷಣವಿರುವವಳು ಎಂಬ ಅರ್ಥ ಸೂಚಿಸುತ್ತದೆ ಎಂದು ಡಾ.ಚಿದಾನಂದಮೂರ್ತಿಯವರು ತಮ್ಮ "ಹೆಣ್ಣು ಸೌಭಾಗ್ಯದ ಲಕ್ಷಣಗಳು" ಎಂಬ ಲೇಖನದಲ್ಲಿ ವ್ಯಕ್ತಪಡಿಸಿದ್ದಾರೆ).

ಮೇಲಿನದರ ಪ್ರಕಾರ ಮುತ್ತೈದೆಯರಿಗೆ ವಿಶೇಷವಾದ ಪವಿತ್ರ ಸ್ಥಾನಮಾನಗಳಿದ್ದವೆಂದು ಗಮನಿಸಬಹುದು. ಸಾಮಾನ್ಯವಾಗಿ ಮದುವೆ, ಉಪನಯನ ಮುಂತಾದ ಶುಭಕಾರ್ಯಗಳು ನಡೆಯುತ್ತಿದ್ದ ಸಂದರ್ಭದಲ್ಲಿ ಇಲ್ಲಿನ ಮಹಿಳೆಯರು ಸುಂದರವಾಗಿ ಅಲಂಕರಿಸಿಕೊಳ್ಳುತ್ತಿದ್ದರೆಂದು ವಿದೇಶಿ ಪ್ರವಾಸಿಗರಾದ ಪಾಯಸ್ ಹೇಳಿದ್ದಾರೆ. ಹೆಂಗಸರುಗಳು, ದೇವಗಿರಿ, ಹೊಲಿ, ಮಗರಿ ಹಾಗೂ ಕಾಡಿಗೆ ನೀರಿನ ಸೀರೆಗಳನ್ನು ಹೆಚ್ಚಾಗಿ ಇಷ್ಟಪಡುತ್ತಿದ್ದರು. ಪಾಯಿಸ್ ಇನ್ನು ಮುಂದುವರೆದು ಅಂದಿನ ಸ್ತ್ರೀಯರು ತುಂಬ ಸುಂದರಿಯರಾಗಿದ್ದರು, ಒಬ್ಬಳಿಗೂ ಒಂದು ಗುಂಜಿಯ ಕೊಬ್ಬಾಗಲಿ, ಬೊಜ್ಜು ಆಗಲಿ ಇರಲಿಲ್ಲ, ಸೀರೆಯಂಥ ಸರ್ವೆ ಸಾಧಾರಣವಾದ ಉಡುಗೆಯನ್ನು ಎಷ್ಟು ಕಲಾತ್ಮಕವಾಗಿ ಧರಿಸಬಹುದೆಂಬುದನ್ನು ಇವರಿಂದ ನೋಡಿ ಕಲಿಯಬೇಕು ಎಂದು ಹೇಳಿರುವುದಲ್ಲದೆ, ಅಂದಿನ ಕಾಲದಲ್ಲಿಯೇ ರವಿಕೆ, ಕಂಚುಳಿಕೆ, ಕುಪ್ಪಸಗಳಾಗಲಿ, ಅಂಗದಟ್ಟು ಅಥವಾ ಅಂಗವಟ್ಟುವೆಂದು ಕರೆಯಲ್ಪಡುತ್ತಿದ್ದ ಪೆಟಿಕೋಟ್

ಅಥವಾ ಲಂಗವಾಗಲಿ ಅಂದು ಸಾಕಷ್ಟು ಪರಿಚಯವಿದ್ದವೆನ್ನಬಹುದು. ಸೀರೆಯ ನಿರಿಗೆಗಳನ್ನು ಪಾದಗಳವರೆಗೆ ಇಳಿಬಿಟ್ಟು, ಅವು ಹೊತ್ತ ನಕ್ಷೆ, ಕುಸುರಿಯ ಕೆಲಸಗಳು ಸುಂದರವಾಗಿ ಗೋಚರಿಸುವಂತೆ ಉಡುತ್ತಿದ್ದರು ಎಂದು ಪಾಯಸ್ ವರ್ಣಿಸಿದ್ದಾನೆ.

ಗೃಹಿಣಿಯರು ತಾವು ಧರಿಸುತ್ತಿದ್ದ ಉಡುಪು ಹಾಗೂ ಆಭರಣಗಳಿಗಾಗಿ ಈ ಹಾಡು ಸೃಷ್ಟಿಗೊಂಡಿರುವುದೇನೋ ಎನ್ನಬಹುದು.

ಹಳ್ಳದಲ್ಲಿ ಮೈ ತೊಳೆದು ಒಳ್ಳೆಯಾ ಮಡಿಯುಟ್ಟಾ ।
ಮೆಲ್ಲನೆ ಶಿವ ಪೂಜೆಗಣಿ ಮಾಡುತ ॥
ಕಳ್ಳತನದಲ್ಲಿ ಹೋಗಿ ಶಿವಗೆ ಹೆಂಡಿತಿಯಾದ ।
ಗುಳ್ಳದಾ ಗೌರಿಗಾರತಿ ಯೆತ್ತಿರೇ ॥
ಜಯಮಂಗಳಂ ನಿತ್ಯ ಶುಭಮಂಗಳಂ
ನಂದಿಬಟ್ಟಲ ಹೂವು ದುಂಡು ಮಲ್ಲಿಗೆ ದಂಡೆ ।
ಚಂದ್ರಮನ ಬೈತಲೆಗೆ ಮುತ್ತು ತುಂಬೆ ॥

ಈ ಮೇಲಿನ ಜನಪದ ಗೀತೆಯು ಅಂದಿನ ಗೃಹಿಣಿಯ ಜೀವನಕ್ಕೆ ನಿದರ್ಶನವಾಗಿದೆ ಎನ್ನಬಹುದಾಗಿದೆ.

ಯುದ್ಧದಲ್ಲಿ ಹೋರಾಟಗಾರ್ತಿಯಾಗಿ ಮಹಿಳೆ : ಹಿಂದೆ ವೇಶ್ಯಾವಾಟಿಕೆಯಲ್ಲಿ ಇದರ ಬಗ್ಗೆ ಚರ್ಚಿಸಲಾಗಿದೆ. ಯುದ್ಧದಲ್ಲಿ ರಾಜರ ಜೊತೆ ಹಾಗೂ ಸೈನಿಕರು ಯುದ್ಧದಲ್ಲಿ ಲವಲವಿಕೆಯಾಗಿರಲೆಂದು ಸುಂದರವಾದ ಹುಡುಗಿಯರನ್ನು ಕರೆದುಕೊಂಡು ಹೋಗುತ್ತಿದುದು ಸಾಮಾನ್ಯವಾಗಿದ್ದಿತ್ತು. ಯುದ್ಧದ ಸಮಯದಲ್ಲಿ ಸಾಮಂತ ರಾಜರುಗಳು, ಪಾಳೆಗಾರರು ಯುದ್ಧಕ್ಕಿಂತಲೂ ಪ್ರಮುಖವಾಗಿ ಆ ಸಮಯದಲ್ಲಿ ಯುದ್ಧರಂಗಕ್ಕೆ ಬರುವ ಸುಂದರಿಯರನ್ನು ಅನುಭವಿಸುವುದಕ್ಕಾಗಿಯೇ ಬರುತ್ತಿದ್ದರೆಂದು ಅನೇಕ ದೇಶೀ ಹಾಗೂ ವಿದೇಶಿ ಸಾಹಿತ್ಯದಿಂದ ತಿಳಿದುಬರುತ್ತದೆ. ಇಷ್ಟೇ ಅಲ್ಲದೆ ಮಹಿಳೆಯರೂ ಕತ್ತಿ ಹಿಡಿದು ಯುದ್ಧ ಮಾಡುತ್ತಿದ್ದರೆಂದು ಇಂದಿಗೂ ದೇವಾಲಯಗಳ ಮೇಲೆ ಚಿತ್ರಿತವಾಗಿರುವ ಚಿತ್ರಗಳಿಂದ ತಿಳಿಯಬಹುದು.

ವ್ಯಾಪಾರಿಗಳಾಗಿ : ವಿಜಯನಗರದ ಆಳ್ವಿಕೆಯಲ್ಲಿ ಮಹಿಳೆಯರು ಪ್ರಮುಖ ವ್ಯಾಪಾರಗಾರ್ತಿಯರಾಗಿದ್ದರು. ರಾಜಧಾನಿಯಲ್ಲಿ ಸೂಳೆ ಬಜಾರ್ ಎಂದು ಕರೆಸಿಕೊಳ್ಳುವ ವ್ಯಾಪಾರಿ ಕೇಂದ್ರದಲ್ಲಿ ಮಹಿಳೆಯರೇ ವ್ಯಾಪಾರದ ಕೇಂದ್ರಗಳಾಗಿದ್ದರು. ಸಂತೆ, ಜಾತ್ರೆಗಳಲ್ಲಿಯೂ ಇವರೇ ಹೆಚ್ಚಾಗಿ ವ್ಯಾಪಾರದಲ್ಲಿ ತೊಡಗುತ್ತಿದ್ದರು. ತರಕಾರಿ, ಸಾಂಬರು ಪದಾರ್ಥಗಳು, ಹಣ್ಣು-ಹಂಪಲುಗಳು, ಚಿನ್ನ, ಬೆಳ್ಳಿ, ಬಟ್ಟೆ, ಹೆಣ್ಣಿನ ಶೃಂಗಾರದ ವಸ್ತುಗಳು ಮಹಿಳೆಯರಿಂದ ವ್ಯಾಪಾರವಾಗುತ್ತಿದ್ದ ವಸ್ತುಗಳಾಗಿದ್ದವು.

ಕುಸ್ತಿ ಮಾಡುವವಳಾಗಿ : ಮಹಾನವಮಿ ಹಬ್ಬವು ವಿಜಯನಗರದ ಅರಸರ ಕಾಲದಲ್ಲಿ ನಾಡಹಬ್ಬವಾಗಿ ಕಂಗೊಳಿಸಿತ್ತು. ಇದನ್ನು ದಸರಾ ಹಬ್ಬ ಎಂತಲೂ ಕರೆಯುತ್ತಾರೆ. ಇಂತಹ ಹಬ್ಬದ ದಿನ ರಾಜಧಾನಿಯಲ್ಲಿನ ಮಹಾನವಮಿ ದಿಬ್ಬದ ಮುಂದೆ ಮಹಿಳೆಯರಿಂದ ಕುಸ್ತಿಯ ಸ್ಪರ್ಧೆಯನ್ನು ಏರ್ಪಡಿಸಲಾಗುತ್ತಿತ್ತೆಂದು ಶಾಸನಗಳಲ್ಲಿ ಕಂಡುಬರುತ್ತದೆ. ಸ್ವತಃ ಮಹಾರಾಜರೇ ಈ ಸ್ಪರ್ಧೆಯನ್ನು ವೀಕ್ಷಿಸಿ ಗೆದ್ದವರಿಗೆ ಬಿರುದು ಬಾವಲಿಗಳನ್ನು ಕೊಡುವುದು ಸಾಮಾನ್ಯವಾಗಿದ್ದಿತ್ತು.

ಕವಯಿತ್ರಿಯಾಗಿ : ವಿಜಯನಗರದ ಆಳ್ವಿಕೆಯ ಕಾಲದಲ್ಲಿ ಮಹಿಳೆಯರೂ ವಿದ್ಯಾವಂತರಾಗಿ ಅಂದು ಸಂಸ್ಕೃತ ಹಾಗೂ ಕನ್ನಡ, ತೆಲುಗು ಭಾಷೆಯಲ್ಲಿ ಪಾಂಡಿತ್ಯ ಪಡೆದಿದ್ದರೆಂಬುದಕ್ಕೆ ವೀರ ಕಂಪಣ್ಣನ ಮಡದಿ ಗಂಗಾದೇವಿಯೇ ಸಾಕ್ಷಿಯಾಗಿದ್ದಾಳೆ. ಇವಳು ಅಂದು ರಚಿಸಿದ "ಮಧುರ ವಿಜಯಂ" ಅಥವಾ "ವೀರ ಕಂಪಣ್ಣರಾಯ ಚರಿತ" ಎಂಬ ಸಂಸ್ಕೃತ ಗ್ರಂಥವು ವಿಜಯನಗರದ ಅಂದಿನ ಇತಿಹಾಸ ತಿಳಿಯಲು ಹೆಚ್ಚಿನ ಸಹಕಾರವಾಗಿದೆ ಎನ್ನಬಹುದು. ಆಸ್ಥಾನದ ಅನೇಕ ರಾಣಿಯರು ವಿದ್ಯಾವಂತರಾಗಿದ್ದರೆಂದು ವಿದೇಶೀ ಪ್ರವಾಸಿಗರು ತಿಳಿಸುತ್ತಾರೆ.

ಸಾಮಾನ್ಯ ಮಹಿಳೆಯರ ಸ್ಥಿತಿ : ಮೇಲೆ ಹೇಳಿದವುಗಳೆಲ್ಲ ರಾಜ ಪರಿವಾರದ ಸ್ತ್ರೀಯರ ಜೀವನವನ್ನು ಸೂಚಿಸುವುದಾದರೆ ಸಾಮಾನ್ಯ ಜನತೆಯ ಬದುಕು ಚಿಂತಾಜನಕವಾಗಿತ್ತು. ತಿನ್ನಲು ಅನ್ನವಿಲ್ಲದೆ, ಉಡಲು ಬಟ್ಟೆ ಇಲ್ಲದೆ ಭೂಮಿಯ ಮೇಲೆ ಹುಟ್ಟುವುದೇ ಪಾಪದ ಅಥವಾ ಕರ್ಮದ ಕಾಲವಾಗಿತ್ತೆನ್ನಬಹುದು. (ಇದು ಸ್ವಲ್ಪ ಬದಲಾವಣೆಗಳೊಂದಿಗೆ ಇಂದಿಗೂ ಇದೇ ಸ್ಥಿತಿ ಇದೆ.) ಜೀವನಕ್ಕೆ ಆಧಾರವಾಗಿ ವ್ಯವಸಾಯವನ್ನೇ ನಂಬಿದ್ದರು, ಮಳೆ ಬಿದ್ದರೆ ಮಾತ್ರ ಬೆಳೆ, ಇಲ್ಲದಿದ್ದರೆ ಸಾವೇ ಗತಿಯಾಗಿತ್ತು. ಹೆಚ್ಚಿನ ಮಹಿಳೆಯರು (ಸುಮಾರು ೮೦) ಆರೋಗ್ಯ ಹೀನರಾಗಿದ್ದರು. ಅವರು ತಲೆಯ ಕೂದಲನ್ನು ಬಾಚಿಕೊಳ್ಳದೆ ತರಗೆಲೆಗಳಂತೆ ಬಿಟ್ಟುಕೊಳ್ಳುತ್ತಿದ್ದರು, ಮೈಗೆ ಪ್ರಾಣಿಗಳ ಚರ್ಮವನ್ನು ಸುತ್ತಿಕೊಳ್ಳುತ್ತಿದ್ದರು. ಗಂಡಸರು ಸೊಂಟಕ್ಕೆ ಮಾತ್ರ ಒಂದು ಚಿಕ್ಕ ಬಟ್ಟೆ ಅಥವಾ ಮರದ ತೊಗಟೆಗಳಿಂದ ಮುಚ್ಚಿಕೊಳ್ಳುತ್ತಿದ್ದರೆಂದು ಬಾರ್ಬೋಸ ಹೇಳಿದ್ದಾನೆ. ಜನಸಾಮಾನ್ಯರ ಸ್ಥಿತಿಗತಿ ಅಂದು ಶೋಚನೀಯ ಸ್ಥಿತಿಯಲ್ಲಿತ್ತು ಎಂದು ಪ್ರತ್ಯೇಕವಾಗಿ ಹೇಳುವುದು ಔಚಿತ್ಯವೆನಿಸುತ್ತದೆ. ಮಕ್ಕಳು ಪ್ರಾಥಮಿಕ ಹಂತದಲ್ಲಿಯೇ ಹೆಚ್ಚಿನ ಪ್ರಮಾಣದಲ್ಲಿ ಮರಣ ಹೊಂದುತ್ತಿದ್ದರೆಂದು ಕಂಡುಬರುತ್ತದೆ.

ಬಹುಪತ್ನಿತ್ವ ಪದ್ಧತಿಯು ಹೆಚ್ಚಾಗಿತ್ತು. ಈ ಪದ್ಧತಿಯು ಕೇವಲ ರಾಜರಲ್ಲಿ ಅಥವಾ ಶ್ರೀಮಂತರುಗಳಲ್ಲಿ ಮಾತ್ರವಲ್ಲದೆ ಸಾಮಾನ್ಯ ಜನತೆಯಲ್ಲಿಯೂ ವಿರಳವಾಗಿ ಇದ್ದಿತೆಂದು ಕಂಡುಬರುತ್ತದೆ. ಪುರಂದರದಾಸರು ಇದನ್ನು ಕಂಡೇ ಏನೋ

"ಇಬ್ಬರ್ಹೆಂಡಿರ ಸುಖವ ಇಂದು ಕಂಡೆನಯ್ಯ" ಎಂದು ಹಾಡಿರುವುದು. ಈ ಒಂದು ಸಾಲಿನಿಂದಲೇ ಇಬ್ಬರು ಹೆಂಡತಿಯರನ್ನು ಕಟ್ಟಿಕೊಂಡವರು ಸಂಸಾರದಲ್ಲಿ ಅನುಭವಿಸುತ್ತಿದ್ದ ನೋವಿನ ಸುಖವನ್ನು ಸುಂದರವಾಗಿ ಚಿತ್ರಿಸಿದೆ ಎನ್ನಬಹುದು. ಆದರೆ ಅದು ವಿರಸವಾಗಿ ಪರಿವರ್ತನೆಯಾಗುವ ಸನ್ನಿವೇಶಕ್ಕೆ ದಾಸರು "ಇವಳಿಂದ ಫಲವಿಲ್ಲ, ಅವಳಿಂದ ಸುಖವಿಲ್ಲ, ಇವರಿಬ್ಬರ ಸಂಗವಭಿಮಾನ ಭಂಗ" ಎಂದು ವ್ಯಂಗ್ಯವಾಗಿ ಹಾಡಿರುವುದೆನ್ನಬಹುದು.

ವಿಜಯನಗರದಲ್ಲಿ ವಿಧವೆಯರನ್ನು ಹಾಗೂ ಬಂಜೆಯರನ್ನು (ಮಕ್ಕಳಾಗದವರನ್ನು) ತುಂಬ ಕೀಳಾಗಿ ನೋಡಿಕೊಳ್ಳಲಾಗುತ್ತಿತ್ತು. ಅಂದು ಅಸ್ಪೃಶ್ಯತೆಯು ಯಾವ ಪ್ರಮಾಣದಲ್ಲಿ ಬೇರು ಬಿಟ್ಟಿತೋ ಅಷ್ಟೇ ಪ್ರಮಾಣದಲ್ಲಿ ಈ ಮಹಿಳೆಯರನ್ನು ಶೋಷಣೆ ಮಾಡಲಾಗು ತ್ತಿತ್ತು. ಗಂಡ ಸತ್ತಮೇಲೆ ವಿಧವೆಯು ಅಗ್ನಿಗೆ ಆಹುತಿಯಾಗದೆ ಅಥವಾ ಸಹಗಮನ ಮಾಡಿಕೊಳ್ಳದೆ ಬದುಕುವುದಿದ್ದರೆ ಅವಳು ಪ್ರಾಣಿಗಳಿಗಿಂತಲೂ (ನಾಯಿಗಿಂತಲೂ) ಹೀನಾಯವಾದ ಬದುಕನ್ನು ನಡೆಸಬೇಕಿತ್ತು. ಸಮಾಜದ ಯಾವುದೇ ಶುಭಕಾರ್ಯಗಳಲ್ಲಿ, ಅಶುಭಕಾರ್ಯಗಳಲ್ಲಿ ಭಾಗವಹಿಸುವಂತಿರಲಿಲ್ಲ. ಒಂದು ರೀತಿಯಲ್ಲಿ ಗೃಹಬಂಧನದಲ್ಲಿರಬೇಕಾಗಿತ್ತು. ಆದರೆ ಗೃಹದಲ್ಲಿಯೂ ಅನೇಕ ಕಟ್ಟು ನಿಟ್ಟುಗಳು ಇದ್ದವು. ಬೆಳಿಗ್ಗೆ ಎದ್ದ ತಕ್ಷಣ ಇವಳ ಮುಖ ನೋಡಿದರೆ, ಕೆಲಸಕ್ಕೆ ಹೊರಗಡೆ ಹೋಗುವಾಗ ಇವಳು ಎದುರಿಗೆ ಬಂದರೆ ಅಪಶಕುನವೆಂದು ನಂಬಿ ಇವಳನ್ನು ಜೀವಂತ ಶವವಾಗಿ ಪರಿವರ್ತನೆ ಮಾಡಲಾಗಿತ್ತು. ಇನ್ನು ಬಂಜೆಯ ಬಾಳಂತೂ ಬರಗಾಲದ ಭೀಕರತೆಯನ್ನು ತೋರಿಸುತ್ತಿತ್ತೆನ್ನಬಹುದು. ಇಂತಹ ಸಮಯದಲ್ಲಿ ವಿಧವೆ ಹಾಗೂ ಬಂಜೆಯರ ಕುರಿತು ಜಾನಪದರು ಹೇಳಿರುವ ಮಾತೆಂದರೆ -

> "ಬಂಜೆ ಬೇನೆಯರಿಯಳು ಮಲತಾಯಿ ಮದ್ದ ಬಲ್ಲಳೆ?" "ಹೊಟ್ಟೇಲಿ ಸುತರಿಲ್ಲೆಂದೊರಲಲು ಹುಟ್ಟು ಬಂಜೆಗೆ ಫಲವಾದೀತೆ," "ಸಲೆ ಬಂಜೆಯಪ್ಪ ಸತಿ ನಿಜಪುರುಷ ಸಂಗದೊಳು ಫಲಕಾಲಮಿರ್ದೊಡೇನಿಲ್ಲದಿರ್ದೊಡಮೇನು ಫಲವಾದುದುಂಟೆ?" "ಪತ್ತೆ ಬಲೆಯ ಆವಂದದಿಂ ಬಂಜೆ ಬೇನೆಯ ಅರಿವಳೆ" "ದತ್ತು ಪುತ್ರನಿಗೇತಕ್ಕೆ ಪಿತೃಭಕ್ತಿ"

ಎಂದು ಅಂದಿನ ಸಮಾಜದಲ್ಲಿ ಸೃಷ್ಟಿಸಿದ್ದ ನಾಡನುಡಿಗಳನ್ನು ಗಮನಿಸಬಹುದು. ಆದರೆ ಸೋಮೇಶ್ವರ ಕವಿಯು ಸ್ವಲ್ಪ ಮುಂದುವರಿದು ಬರೆಯುತ್ತಾ ಒಳ್ಳೆಯ ಕುಲದಲ್ಲಿ ಹುಟ್ಟಿ ವಿವೇಕವುಳ್ಳವಳೂ, ಗುಣವತಿಯೂ ಆದ ಸ್ತ್ರೀಯು ಬಂಜೆಯಾಗಿದ್ದರೂ, ಆಕೆಯನ್ನು ಯಾರೂ ಬಂಜೆಯೆಂದು ನಿಂದಿಸುವುದಿಲ್ಲ, ವ್ರತಾಚರಣೆಗಳಿಗೆ ಹಾಗೂ ಎಲ್ಲಾ ಶುಭ ಕಾರ್ಯಗಳಿಗೂ ಸಹ ಅವಳು ಹಾಜರಿರುತ್ತಾಳೆ ಎಂದು ಹೇಳಿ ಬಂಜೆಯ ಬಗ್ಗೆ ಬೆಳೆದಿದ್ದ ಕೆಟ್ಟ ಅಭಿಪ್ರಾಯಕ್ಕೆ ಅನುಕಂಪ ಸೂಚಿಸುವ ಮಾತನಾಡಿದ್ದಾನೆ.

ಒಟ್ಟಾರೆ ಹೇಳುವುದಾದರೆ, ವಿಜಯನಗರದರಸರ ಕಾಲದಲ್ಲಿ ಮಹಿಳೆಯರು ಎಷ್ಟೇ ಉನ್ನತ ಸ್ಥಾನಮಾನವನ್ನು ಪಡೆದಿದ್ದರೂ ಅವರು ಕೊನೆಯಲ್ಲಿ ಕೇವಲ ಒಂದು ಭೋಗದ ವಸ್ತುವಾಗಿಯೇ ಕಂಗೊಳಿಸುತ್ತಾರೆ. ರಾಜಧಾನಿಯಲ್ಲಿಯೇ ಆಗಲಿ, ಆಸ್ಥಾನದ ಉಪರಾಣಿಯರ ಜೀವನವೇ ಇರಲಿ, ಯುದ್ಧದಲ್ಲಿ ಹೋರಾಡುವ ಮಹಿಳೆಯ ಪಾತ್ರವಿರಲಿ ಅಥವಾ ವ್ಯಾಪಾರ ಕೈಗೊಂಡ ಮಹಿಳೆಯೇ ಆದರೂ ಪುರುಷನ ವಕ್ರದೃಷ್ಟಿಗೆ ಬಲಿಯಾಗುವುದು ಸಹಜವಾಗಿದ್ದಿತ್ತು.

ತಾಯಿತನದ ಜೀವನ : ಮಹಿಳೆಯರು ಬಸುರಿಯರಾಗಿದ್ದಾಗ ಬಯಕೆ, ಬೇನೆ, ಶಿಶುಜನನ ಮುಂತಾದ ವಿಷಯಗಳ ಕುರಿತು ನಮ್ಮ ಸಾಹಿತಿಗಳು ಹಾಗೂ ಜನಪದರು ಸಂಕ್ಷಿಪ್ತವಾಗಿ ವಿವರಿಸಿರುವುದು ಕಂಡುಬರುತ್ತದೆ. ಮಗು ಜನಿಸಿದಾಗ ತಾಯಿಗೆ ಆಗುವ ಆನಂದ ವರ್ಣಿಸಲು ಸಾಧ್ಯವೆನ್ನಬಹುದು. ಇದಕ್ಕಾಗಿಯೇ ಏನೋ ಸೋಮನಾಥ ಹೇಳಿರುವುದು ಉತ್ಸವಗಳಲೆಲ್ಲ ಪುತ್ರೋತ್ಸವವೇ ಶ್ರೇಷ್ಠ ಎಂದು. ಈ ಮಾತು ಎಷ್ಟು ನಿಜವಾದದ್ದು ಎಂದರೆ ಇಂದಿಗೂ ಮಕ್ಕಳು ಜನಿಸಿದಾಗ ಮನೆಯಲ್ಲಿ ಆ ಉತ್ಸವದ ಆನಂದವನ್ನು ನೋಡುತ್ತೇವೆ. ಏನೋ ಆನಂದ, ಮುಖದಲ್ಲಿ ನಗೆಯ ಕಳೆ, ಏನೋ ಪಡೆದೆ ಎಂಬ ಭಾವನೆಯಲ್ಲಿ ತೇಲುವ ಹಾಗೆ ಮಾಡುತ್ತದೆ. ಮಗು ಜನಿಸಿದ ಮೇಲೆ ಅದು ಹೇಗೇ ಇರಲಿ ತಾಯಿಗೆ ಮುದ್ದಾದುದ್ದೆ: ಇದಕ್ಕಾಗಿಯೇ "ಹೆತ್ತವರಿಗೆ ಹೆಗ್ಗಣ ಕೂಡ ಮುದ್ದು" ಎಂಬ ಗಾದೆ ಹುಟ್ಟಿರುವುದು.

ವಿಜಯನಗರದ ಅರಸರ ಕಾಲದಲ್ಲಿ ರಾಜಧಾನಿ ಹಾಗೂ ಸಾಮ್ರಾಜ್ಯದ ಪ್ರಮುಖ ಪಟ್ಟಣಗಳಲ್ಲಿ ಇಂದು ಹೆರಿಗೆ ಆಸ್ಪತ್ರೆಗಳಿರುವ ಹಾಗೆ ಸೂತಿಕಾಗೃಹಗಳಿದ್ದವು. (ಹೆರಿಗೆಯ ಮನೆಯನ್ನು ಸೂತಿಕಾಗೃಹವೆಂದೂ ಕರೆಯಲಾಗುತ್ತಿತ್ತು.) ಹೆರಿಗೆ ಮಾಡಿಸುವವಳನ್ನು ಸೂಲಗಿತ್ತಿಯೆಂದೂ ಕರೆಯುವ ವಾಡಿಕೆಯಾಗಿತ್ತು. ಇಂದಿಗೂ ಈ ಪದಗಳ ಬಳಕೆ ಇರುವುದು ಕಂಡುಬರುತ್ತದೆ. ಆದರೆ ಇವಳ ಸೌಲಭ್ಯ ಪ್ರತಿಯೊಬ್ಬರಿಗೂ ಸಾಧ್ಯವಿರಲಿಲ್ಲ. ಸಾಮಾನ್ಯ ಜನರಿಗಂತೂ ಇವಳು ಕೇವಲ ಕನಸಿನ ಕನ್ಯೆಯಾಗಿದ್ದಳು ಎಂದು ಹೇಳಿದರೆ ತಪ್ಪಾಗದು. ಕೇವಲ ಶ್ರೀಮಂತರು, ರಾಜಪರಿವಾರದವರಿಗೆ ಮಾತ್ರ ಈ ಸೂಲಗಿತ್ತಿಯರ ಸೌಲಭ್ಯ ದೊರಕುತ್ತಿತ್ತು. ಇದಕ್ಕಾಗಿಯೇ "ಸಡಗರದ ನಾರಿಯರು ಹಡೆಯುವಾಗ ಸೂಲಗಿತ್ತಿ" ಎಂಬ ದಾಸರ ಪದ ಅವರ ಬೇಡಿಕೆ ಹಾಗೂ ಜೀವನಮಟ್ಟವನ್ನು ಸೂಚಿಸುತ್ತದೆ. ಹಣವಂತರು ಹಾಗೂ ಉತ್ತಮ ಜಾತಿ ಎಂದು ತಾವೇ ಕರೆದುಕೊಂಡಿದ್ದ ಜನಾಂಗಕ್ಕೆ ಮಾತ್ರ ದೊರಕುತ್ತಿದ್ದ ಸೂಲಗಿತ್ತಿಯರು ರಾಜಧಾನಿಯಲ್ಲಿ ವಿಶೇಷ ಮಹತ್ವ ಪಡೆದಿದ್ದ ಮಹಿಳೆಯರಾಗಿದ್ದರು.

ಹಳ್ಳಿಯ ಬಡ ಕುಟುಂಬವೊಂದರ ಶಿಶು ಜನನದ ಚಿತ್ರವನ್ನು ವಿದೇಶೀ ಪ್ರವಾಸಿಗನು ನೀಡಿರುವ ಮಾಹಿತಿಯ ಆಧಾರದ ಮೇಲೆ ಗಮನಿಸುವುದಾದರೆ ಅದು ಇಂದಿಗೂ ನಗ್ನಚಿತ್ರವೆನ್ನಿಸುತ್ತದೆ. ಅವನ ಪ್ರಕಾರ ಆಗತಾನೆ ಜನ್ಮವಿತ್ತ ಆ ಮಗುವನ್ನು ನಗ್ನವಾಗಿಯೇ ಒಂದು ಎಲೆಯ ಮೇಲೆ ಮಲಗಿಸಿದ್ದರು ಎಂಬುದಾಗಿ ಹೇಳಿರುವುದು ಕಂಡುಬರುತ್ತದೆ. ಇದಕ್ಕೆ ನಿದರ್ಶನವೆಂಬಂತೆ ಹಳ್ಳಿಗಳಲ್ಲಿ ಜನರ ಮುಖ್ಯ ಕಸುಬು ಕೃಷಿ. ವ್ಯವಸಾಯವೇ ಅವರ ಉಸಿರು, ಬದುಕು, ವ್ಯವಸಾಯಕ್ಕೆ ಉಪಯೋಗಿಸುವ ಉಪಕರಣಗಳು ಅವರಿಗೆ ದೇವಸಂಭೂತವಾದವು. ವರ್ಷವರ್ಷ ಬರುವ ಯುಗಾದಿ, ದೀಪಾವಳಿ, ಸಂಕ್ರಾಂತಿ, ಗೌರಿಹಬ್ಬಗಳೆಂದು ಇವುಗಳಿಗೆ ವಿಶೇಷ ಪೂಜೆ ಇದ್ದೇ ಇರುತ್ತದೆ. ಆದ್ದರಿಂದ ಮನೆಯಲ್ಲಿ ಹೆಂಗಸರು ಬಳಸುವುದು ಹೆಚ್ಚಾಗಿ ಮೊರ. ಭತ್ತ, ಜೋಳ, ಗೋಧಿಯನ್ನು ಬೆಳೆದಾದ ಮೇಲೆ ಅದನ್ನು ಹಸನುಮಾಡಲು ಕೊಂಗ ಎಂಬ ಒಂದು ಸಾಧನವನ್ನು ಬಳಸುತ್ತಾರೆ. (ಧಾನ್ಯವನ್ನು ತುಂಬಿಕೊಂಡು ಗಾಳಿಗೆ ಮೇಲಿನಿಂದ ಬಿಡಲು ಬಳಸುವ ಸಾಧನ.) ಹಳ್ಳಿಯಲ್ಲಿ ಇಂದಿಗೂ ಈ ಮೇಲಿನ ಮೊರ ಹಾಗೂ ಕೊಂಗಗಳಿಗೆ ಯಾವ ಯಾವ ಸ್ಥಾನ ನೀಡಿದ್ದಾರೆ ಎಂದರೆ ಹೆಣ್ಣು ಮಗು ಜನಿಸಿದರೆ ಮೊದಲು ಮೊರದಲ್ಲಿ ಹಾಕುವುದು (ಮೊರ ಕೇವಲ ಮನೆಯಲ್ಲಿಯೇ ಇರುವ ಸಾಧನ.) ಅದೇ ಗದ್ದೆಯಲ್ಲಿ ವ್ಯವಸಾಯ ಮಾಡಲು ಬಳಸುವ ಕೊಂಗ ಗಂಡಿನ ಸಂಕೇತ. ಆದ್ದರಿಂದ ಗಂಡು ಮಗು ಜನಿಸಿದರೆ ಕೊಂಗದೊಳಗೆ ಮೊದಲು ಮಲಗಿಸಿ ನಂತರ ಬೇರೆ ಕಡೆಗೆ ವರ್ಗಾಯಿಸಿ ಕೊಳ್ಳುವುದು ಇಂದಿಗೂ ಬೆಳೆದು ಬರುತ್ತಿರುವ ರೂಢಿ. ಇದು ಇಂದಿನದಲ್ಲ. ಇದಕ್ಕೆ ಶತಶತಮಾನದಷ್ಟು ಹಿರಿದಾದ ಇತಿಹಾಸವಿರುತ್ತದೆ ಎನ್ನಬಹುದು. ಕನಕದಾಸರು ಅರಮನೆಯಲ್ಲಿಯೂ ಪುತ್ರೋತ್ಸವವಾದ ವಿಚಾರವನ್ನು ವರ್ಣಿಸುವ ಸಂದರ್ಭದಲ್ಲಿ ಮಗುವನ್ನು ಮೊರದಲ್ಲಿ ಮಲಗಿಸಿ ಪೂಜೆ ವಿಧಿ ವಿಧಾನಗಳನ್ನು ಆಚರಿಸಿದ ವಿಚಾರವನ್ನು ಹೇಳಿರುವುದು ಕಂಡುಬರುತ್ತದೆ.

ಮಗು ಜನಿಸಿದ ಮೇಲೆ ಒಂದು ರೀತಿಯ ಸಂಭ್ರಮವಾದರೆ ಮಗುವಿಗೆ ನಾಮಕರಣ, ಇದರ ಸಂಬಂಧವಾಗಿ ದಾನ, ಹವನ, ಹೋಮಗಳನ್ನು ಕೈಗೊಳ್ಳುವುದು ಹಾಗೆಯೇ ಹನ್ನೊಂದನೆಯ ದಿನ ಮಗುವನ್ನು ತೊಟ್ಟಿಲಲ್ಲಿ ಹಾಕುವುದು (ತೊಟ್ಟಿಲು ಶಾಸ್ತ್ರ) ಮುಂತಾದ ಸಂಪ್ರದಾಯಗಳು ತುಂಬ ವಿಜೃಂಭಣೆಯಿಂದ ನಡೆದುಕೊಂಡು ಅಂದಿನಿಂದ ಇಂದಿನವರೆಗೂ ಬರುತ್ತಿವೆ ಎನ್ನಬಹುದು. ಕನಕದಾಸರ 'ಮೋಹನ ತರಂಗಿಣಿ'ಯು ಈ ವೈಭವದ ವರ್ಣನೆಯನ್ನು ವರ್ಣಿಸುವ ಕೈಗನ್ನಡಿ ಎಂದು ಇತಿಹಾಸಕಾರರು ಹೇಳಿರುವುದು ಇಲ್ಲಿ ಸತ್ಯವೆನ್ನಿಸುತ್ತದೆ. ಏಕೆಂದರೆ ಇಲ್ಲಿ ಅಂದಿನ ಕಾಲದಲ್ಲಿನ ಜನನ ಸಂದರ್ಭದಲ್ಲಿ ತೊಟ್ಟಿಲಿಕ್ಕುವ ಒಂದು ಸುಂದರ ಚಿತ್ರವನ್ನು

ಈ ರೀತಿ ನೀಡುತ್ತಾರೆ. "ಸಿರಿ ಮುಡಿಯ ಮುತ್ತೈದೆವೆಂಗಳು ಹಿಡಿಯಕ್ಕಿ ತಳೆದು ಮುತ್ತಿನಾರತಿ ಎತ್ತಿ, ತೊಟ್ಟಿಲನು ಪೂಜಿಸಿ, ತರಳನತುಂಬಿ, ಸದ್ವಿಧಿಯಿಂದೆ ಮಂದಿರದ ಮೇಲೆ ಹಲಗೆಯ ಕೊಂಡಿಗೆ ಸರಪಳಿಯನ್ನು ತೊಡಚಿ ಹೆಸರನಿಕ್ಕಿ ಜೋಗುಳ ಹಾಡಿ ಕಂದನನ್ನು ತೂಗಿದರು" ಎಂದು ವರ್ಣಿಸಿ ಮಗುವಿನ ಹಣೆಗೆ ಕಪ್ಪಿನ ಬೊಟ್ಟನ್ನು ಬಾಣಂತಿಯ ಕಣ್ಣಿಗೆ ಕಾಡಿಗೆಯನ್ನು ಹಚ್ಚಿದರು ಎಂದು ವರ್ಣಿಸಿದ್ದಾರೆ. ಇದೇ ಪದ್ಧತಿಯು ಚಾಚೂ ತಪ್ಪದೇ ಇಂದಿಗೂ ನಡೆದುಕೊಂಡು ಬರುತ್ತಿದೆ. ಇನ್ನು ದಾಸರಲ್ಲೆಲ್ಲ ಶ್ರೇಷ್ಠ ದಾಸರೆನ್ನಿಸಿಕೊಂಡಿರುವ ಕರ್ನಾಟಕದ ಸಂಗೀತ ಪಿತಾಮಹ ಪುರಂದರದಾಸರು ಅಂದು ಬಾಣಂತಿಯರ ವೇಷಭೂಷಣಗಳು, ನೋವು ನಲಿವುಗಳನ್ನು ಕುರಿತು ಕೊಡುವ ಸುಂದರ ಚಿತ್ರ ಇಂದಿಗೂ ಎಲ್ಲ ಮನೆಗಳಲ್ಲಿಯೂ ಸಾಮಾನ್ಯವಾಗಿ ಕಾಣುವ ಬಾಣಂತಿಯರ ವಾಸ್ತವ ಚಿತ್ರಣವೆನ್ನ ಬಹುದು. "ಹಿಂಗದ ಮೊಲೆ ಹಾಲಿನ ಬವಣೆ, ಖಾರಕಷಾಯಗಳೆ ಒಪ್ಪೊತ್ತಿನ ಆಹಾರ, ಚಂದದ ಒಡವೆ ವಸ್ತುಗಳಿಲ್ಲ, ಮೈಯೆಲ್ಲ ಬಡವಾಗಿದೆ, ಕಟ್ಟಿದ ಮಂಡೆ, ಬಾಚದ ಕೂದಲು, ಪಣೆಯೊಳಿಟ್ಟು ಸಾಧು, ತೊಟ್ಟ ಕುಪ್ಪಸವೆಲ್ಲ ಗುಪ್ಪ ಎಣ್ಣೆ ಮಂಕು ಮುಟ್ಟಬೇಡ ಎನ್ನ ಸಿರಿ ಪುರಂದರ" ಎಂದು ವಾಸ್ತವತೆಯನ್ನು ಎಳೆಎಳೆಯಾಗಿ ತೆಗೆದಿಟ್ಟಿದ್ದಾರೆ.

ಮಗು ಗಂಡಾಗಲಿ, ಹೆಣ್ಣಾಗಲಿ ಅದಕ್ಕೆ ವಿವಿಧ ರೀತಿಯ ಹೂವು ಹಾಗೂ ಆಲಂಕಾರಿಕ ದ್ರವ್ಯಗಳಿಂದ ಅಲಂಕರಿಸುವುದೇ ಒಂದು ಸಂಭ್ರಮ. ತಲೆಬಾಚಿ ಹೂಮುಡಿಸುವುದು, ಹಣೆಗೆ ಹಾಗೂ ಕೆನ್ನೆಗೆ ತಿಲಕವನ್ನಿಡುವುದು ವಾಡಿಕೆ. ಮಕ್ಕಳಿಗೆ ಆಭರಣಗಳನ್ನು ಹಾಕದಿದ್ದರೆ ತಾಯಿಗೆಲ್ಲಿ ಸಮಾಧಾನವಾಗುತ್ತದೆ, ಇದು ಇಂದಿಗೂ ವಾಸ್ತವ. ಇದು ಅಂದು, ಇಂದು, ಮುಂದೆಯೂ ಇರುವುದೇ. ಆದರೆ ಅಂದು ಈ ಮೇಲೆ ವಿವರಿಸಿದ ಆಚಾರ ವಿಚಾರಗಳು ಎಲ್ಲಾ ವರ್ಗದವರ, ಎಲ್ಲಾ ಜನರ ಆಚರಣೆಯಾಗಿತ್ತೆಂಬುದನ್ನು ಒಪ್ಪುವುದು ಕಷ್ಟಕರವಾಗುತ್ತದೆ. ಏಕೆಂದರೆ ಇಂದು ಸ್ವತಂತ್ರ ಭಾರತವೆಂದು, ಎಲ್ಲಾರೂ ಒಂದೇ ಒಂದು ಸಂವಿಧಾನದ ಚೌಕಟ್ಟಿನೊಳಗೆ ಕೆಲಸ ನಿರ್ವಹಿಸುತ್ತಿದ್ದರೂ ಅನ್ಯಾಯ ಅಸಮಾನತೆಯಿಂದ ಕೂಡಿದ ಇಂದಿನ ಭಾರತದಲ್ಲಿ ಕೆಲವೇ ಕೆಲವು ಜನ ಸಂಪತ್ತು ಸಮೃದ್ಧಿಯಲ್ಲಿ ಹೊರಳಾಡುತ್ತಿರುವಾಗ ಬಹುಸಂಖ್ಯಾತ ಜನಕೋಟಿ ತಿನ್ನಲು ಒಪ್ಪೊತ್ತಿನ ಕೂಳಿಗೂ ದಿಕ್ಕಿಲ್ಲದೆ ನರಳುತ್ತಿದ್ದಾರೆ. ಇಂಥ ಸ್ಥಿತಿಯಲ್ಲಿ ಇಂದಿನ ಭಾರತವೇ ಇರಬೇಕಾದರೆ ಇನ್ನೂ ನಮ್ಮ ಚರಿತ್ರೆಯ ಪುಟಗಳಲ್ಲಿ ಇವರ ಛಾಯೆ ಹೇಗಿರಬೇಕು. ಮಧ್ಯಕಾಲೀನ ಚರಿತ್ರೆಯ ಸಂಸ್ಕೃತಿಯನ್ನು ಅಧ್ಯಯನ ಮಾಡತೊಡಗಿದಾಗ ಇವರ ಸ್ಥಿತಿಗತಿಯನ್ನು ಅರಿತಾಗ ನಮ್ಮನಾಳಿದ ಸಂಸ್ಥಾನಗಳನ್ನು ಒಂದು ಸಾಮ್ರಾಜ್ಯವೆಂದು ಕರೆಯಲಾಗುತ್ತದೆಯೇ?

ಸ್ವಾತಂತ್ರ್ಯದ ಅರವತ್ತು ವರ್ಷಗಳ ನಂತರವೂ ಕೋಟ್ಯಂತರ ಜನರು ಬಡತನ, ಅನಕ್ಷರತೆ, ಅನಾರೋಗ್ಯದಿಂದ ಬಳಲುತ್ತಿದ್ದಾರೆ; ಕೋಟಿಕೋಟಿ ಜನರು ಕನಿಷ್ಟ ಸಾಮಾಜಿಕ ಸೇವಾಸೌಲಭ್ಯಗಳಿಂದಲೂ ವಂಚಿತರಾಗಿದ್ದಾರೆ. ೧೯೯೩-೯೪ ರಲ್ಲಿನ ಸ್ವತಃ ಸರ್ಕಾರದ ಲೆಕ್ಕಾಚಾರದ ಪ್ರಕಾರವೇ ಮೂವತ್ತೆರಡು ಕೋಟಿಗಿಂತಲೂ ಹೆಚ್ಚಿನ ಭಾರತೀಯರು ಬಡತನದ ರೇಖೆಯ ಕೆಳಗೆ ಬದುಕುತ್ತಿದ್ದಾರೆ. ಆದರೆ ಸರ್ಕಾರದಿಂದ ನಿರ್ಧರಿಸಲ್ಪಟ್ಟಿರುವ ಈ ಬಡತನದ ರೇಖೆಯು ಗಮನಾರ್ಹವಾದದ್ದೇ. ಯಾಕೆಂದರೆ ಈ ಬಡತನದ ರೇಖೆಯ ತುಸು ಮೇಲೆ ಬದುಕುತ್ತಿರುವವರೂ ಅಂಥ ಹೇಳಿಕೊಳ್ಳುವ ಘನತೆ ಗೌರವದ ಬಾಳ್ವೆಯೇನೂ ನಡೆಸುತ್ತಿಲ್ಲವೆಂದು ಹೇಳಬಹುದು.

ದಸರಾ, ಹಬ್ಬಗಳು, ಜಾತ್ರೆಗಳು, ಸಂತೆಗಳು ಹಾಗೂ ರಥೋತ್ಸವ

ವಿಜಯನಗರದ ಅರಸರ ಕಾಲದಲ್ಲಿ ದಸರಾ ಮಹೋತ್ಸವದ ಬಗ್ಗೆ, ಹಬ್ಬ ಹರಿದಿನಗಳು, ಜಾತ್ರೆ, ಸಂತೆ, ತೀರ್ಥಯಾತ್ರೆಗಳಿಗೆ ಸಂಬಂಧಿಸಿದಂತೆ ಅನೇಕ ಆಧಾರಗಳು ಸಿಗುತ್ತವೆ. ಈ ವೈಭವವನ್ನು ಅರಿಯಲು ನಮಗೆ ವಿದೇಶಿಯರ ಬರವಣಿಗೆಗಳು ಅತ್ಯಂತ ಹೆಚ್ಚಿನ ರೀತಿಯ ಪ್ರಯೋಜನವಾಗುತ್ತವೆ. ಅಂದಿನ ರಾಜ ಸಭೆಗಳ ವೈಭವ, ಘನತೆ, ಗಾಂಭೀರ್ಯ, ಶಿಷ್ಟಾಚಾರ, ಸಭ್ಯತೆ ಮುಂತಾದವುಗಳನ್ನು ಕುರಿತ ವಿಸ್ತಾರವಾದ ವರ್ಣನೆಗಳು ಇವುಗಳಿಂದ ತಿಳಿದು ಬರುತ್ತದೆ. ಕರ್ನಾಟಕದ ಇತಿಹಾಸದಲ್ಲಿಯೇ ವಿಜಯನಗರದ ಅರಸರ ವೈಭವವಂತೂ ಮನೆಮಾತಾಗಿದೆ.

ನವರಾತ್ರಿ ಹಬ್ಬ (ದಸರಾ ಮಹೋತ್ಸವ) : ದಸರಾ ಅಥವಾ ನವರಾತ್ರಿ ಹಬ್ಬವು ಹಿಂದೂ ಧರ್ಮದ ರೀತಿನೀತಿಗಳಲ್ಲಿ ಆಚರಿಸಲ್ಪಡುತ್ತಿತ್ತೆಂದು ಕಂಡು ಬರುತ್ತದೆ. ಸಾಮಾನ್ಯವಾಗಿ ಇದು ಅಕ್ಟೋಬರ್ ತಿಂಗಳಿನಲ್ಲಿ ನಡೆಯುತ್ತಿತ್ತು. ಕೆಲವು ಸಮಯದಲ್ಲಿ ಸೆಪ್ಟಂಬರ್ ತಿಂಗಳಿನ ಕೊನೆಗೆ ಬಂದು ಬಿಡುತ್ತಿದ್ದೂ ಉಂಟು. ನವರಾತ್ರಿಯ ಹಬ್ಬದಂದು ವಿಜಯನಗರದಲ್ಲಿ ನಡೆಯುತ್ತಿದ್ದ ಉತ್ಸವ ಕಾರ್ಯಕ್ರಮಗಳನ್ನು ಈ ರೀತಿ ವಿವರಿಸಬಹುದು. ವಿದೇಶಿಯರಾದ ಅಬ್ದುಲ್ ರಜಾಕ್, ಪಾಯೇಸ್, ನ್ಯೂನಿಜ್‌ರವರುಗಳು ಕಣ್ಣಾರೆ ನೋಡಿ ಕೊಡುವ ವಿಸ್ತಾರವಾದ ಮಹಾನವಮಿಯ ವರ್ಣನೆ ಸುಳ್ಳು ಎಂದು ಹೇಳಲಾಗುವುದಿಲ್ಲ. ಏಕೆಂದರೆ ಅದರ ವೈಭವವನ್ನು ದೇಶೀಯ ಸಾಹಿತಿಗಳೂ ಮುಕ್ತಕಂಠದಿಂದ ಹೊಗಳಿರುವುದು ಕಂಡುಬರುತ್ತದೆ. ಈ ದೃಷ್ಟಿಯಿಂದಲೇ ಅಂದಿನ ಕಾಲವನ್ನು “ವಿಜಯನಗರ ಯುಗವು ಉತ್ಸವ ಸಮಾರಂಭಗಳ ಯುಗ” ಎಂದು ಕರೆದಿರುವುದು ಔಚಿತ್ಯಪೂರ್ಣವೆನ್ನಿಸಿದೆ.

ವಿಜಯನಗರದಲ್ಲಿ ನವರಾತ್ರಿ ಹಬ್ಬದ ಸಮಯದಲ್ಲಿ ಮೊದಲಿಗೆ ರಾಜರು ವೈಭವದಿಂದ ರಾಜಸಭೆಗಳನ್ನು ನಡೆಸುತ್ತಿದ್ದರು. ಇದನ್ನು ನೋಡಿರುವ ವಿದೇಶೀಯರು ಮುಕ್ತಕಂಠದಿಂದ ಹೊಗಳಿರುವುದು ಕಂಡುಬರುತ್ತದೆ. ಆ ವೈಭವವನ್ನು ನೋಡಿ ಒಬ್ಬೊಬ್ಬರು "ನನ್ನ ಕಿವಿಗಳು ಕೇಳಿಲ್ಲ, ಕಣ್ಣುಗಳು ನೋಡಿಲ್ಲ" ಎಂದು ಬಣ್ಣಿಸಿದರೆ, ಮತ್ತೊಬ್ಬ "ಜಗತ್ತಿನಲ್ಲಿ ಇದಕ್ಕೆ ಸರಿಸಮಾನಾದ ಸುಂದರ ಪಟ್ಟಣ ಬೇರೊಂದಿಲ್ಲ" ಎಂದು ಹೇಳಿ ತಮ್ಮ ಆನಂದ ವ್ಯಕ್ತಪಡಿಸಿರುವುದು ಕಂಡುಬರುತ್ತದೆ.

ರಾಜಧಾನಿಯಲ್ಲಿ ವೈಭವದಿಂದ ನಡೆಯುತ್ತಿದ್ದ ನವರಾತ್ರಿ ಹಬ್ಬದ ಉತ್ಸವದ ಕೇಂದ್ರಬಿಂದು ಮಹಾನವಮಿ ದಿಬ್ಬ. ವಿಜಯನಗರದ ಅರಸರು ಈ ಹಬ್ಬವನ್ನು ರಾಷ್ಟ್ರೀಯ ಉತ್ಸವವಾಗಿ ಆಚರಿಸುತ್ತಿದ್ದರು. ಈ ಹಬ್ಬದ ಆಚರಣೆಯು ಒಟ್ಟು ಹತ್ತು ದಿನಗಳ ಕಾಲ ನಡೆಯುತ್ತಿತ್ತು. ಹಬ್ಬದ ಪ್ರಯುಕ್ತ ಅನೇಕ ಸಮಾರಂಭಗಳನ್ನು ಏರ್ಪಡಿಸಲಾಗುತ್ತಿತ್ತು. ಉದಾಹರಣೆಗೆ ಹೇಳುವುದಾದರೆ ಕ್ರೀಡೆಗಳು ಮತ್ತು ಮನೋರಂಜನೆ. ಕುಸ್ತಿ ಅಂದಿನ ಜನಪ್ರಿಯ ಕ್ರೀಡೆಯಾಗಿದ್ದಿತ್ತು. ಮಹಿಳೆಯರ ಕುಸ್ತಿಯು ಅತ್ಯಂತ ಜನಪ್ರಿಯವಾಗಿದ್ದಿತ್ತು. ಕತ್ತಿವರಸೆ, ದೊಣ್ಣೆವರಸೆ, ಲಗಾರಿ ಕುಣಿತ, ಡೋಲು ಕುಣಿತ, ಭರತನಾಟ್ಯ, ಸಂಗೀತ, ಮುಂತಾದ ಕ್ರೀಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತಿದ್ದವು. ವರ್ಷವೆಲ್ಲ ತಯಾರಾಗಿದ್ದ ಅಭಿಲಾಷಿಗಳು ತಮ್ಮ ಪ್ರತಿಭೆಯನ್ನು ವ್ಯಕ್ತಪಡಿಸಲು ನವರಾತ್ರಿ ಹಬ್ಬವನ್ನು ಎದುರುನೋಡುತ್ತಿದ್ದರು. ಮಹಾನವಮಿ ದಿಬ್ಬವನ್ನು ಕೃಷ್ಣದೇವರಾಯನು ಒರಿಸ್ಸಾದ ಮೇಲೆ ವಿಜಯ ಸಂಪಾದಿಸಿದ ನೆನಪಿಗಾಗಿ ಕಟ್ಟಿಸಿದನೆಂದು ತಿಳಿದುಬರುತ್ತದೆ. ಈ ದಿಬ್ಬದ ಮೇಲೆ ಒಂದು ಭವ್ಯವಾದ ಮೇಲಂತಸ್ತಿನ ಕಟ್ಟಡ ಇದ್ದಿರಬಹುದೆಂದು ಕಂಡುಬರುತ್ತದೆ. ಆದರೆ ಈಗ ಅದು ಸಂಪೂರ್ಣವಾಗಿ ನಾಶವಾಗಿದೆ. ಈ ದಿಬ್ಬದ ತಳಪಾಯದ ಗೋಡೆಗಳ ಮೇಲೆ ಬೇಟೆ, ನೃತ್ಯ, ಕೋಲಾಟ ಮತ್ತು ನಿತ್ಯ ಜೀವನದ ಅಮೂಲ್ಯ ದೃಶ್ಯಗಳು ಮನಮೋಹಕವಾಗಿ ಕಂಗೊಳಿಸುತ್ತಿವೆ. ಈ ದಿಬ್ಬದ ಮೇಲೆಯೇ ನಡೆಯುತ್ತಿದ್ದ ಮಹಾನವಮಿ ಹಬ್ಬವು ಕೇವಲ ಹಿಂದೂ ಧರ್ಮದವರ ಹಬ್ಬ ಮಾತ್ರವಾಗಿದ್ದರೂ ಆದಕ್ಕೆ ರಾಜಕೀಯದ ಕಳೆ ಬಂದಿತ್ತು. ನಮ್ಮ ಭೂಮಿ, ನಮ್ಮ ಭಾಷೆ, ನಮ್ಮ ನದಿ, ನಮ್ಮ ಸಂಪತ್ತು ಎನ್ನುವ ಮನೋಭಾವನೆಯು ಈ ಹಬ್ಬಗಳಲ್ಲಿ ಕಂಡುಬರುತ್ತಿತ್ತೆನ್ನಬಹುದು. ಈ ಹಬ್ಬದ ವೈಭವದ ಬಗ್ಗೆ ಕವಿಯು ಕೊಡುವ ಒಂದು ಚಿತ್ರವನ್ನು ನೀಡುವುದಾದರೆ ಈ ನರಲೋಕಕಚ್ಚರಿಯೆನ್ನು ವಂತೆ ಮಂತ್ರಿಯು ಮಹಾನವಮಿ ಉತ್ಸವವನ್ನು ನಡೆಸಿದನು, ರಾತ್ರಿಯಲ್ಲಿ ನಡೆದ ಆ ರಾಜಸಭೆಯ ವೈಭವವನ್ನು ಹೇಗೆ ವರ್ಣಿಸಲಿ ಎಂದು ತಾನೇ ಅಚ್ಚರಿಪಡುತ್ತಾನೆ. ದೊರೆ ಧರಿಸಿದ್ದ ರತ್ನದ ಕಿರೀಟ ಕಾರಿರುಳನ್ನು ಹಗಲು ಮಾಡುವಂತಿತ್ತು. ರಾಜಾಧಿ

ರಾಜರು, ಸಚಿವರು, ಕವಿಗಮಕಿಗಳು ವರನಾರಿಯರು ರಾಜೇಂದ್ರನ ಸುತ್ತ ನೆರೆದಿದ್ದರು. ಮುಂದೆ ದೃಷ್ಟಿ ಹರಿಯುವವರೆವಿಗೂ ರಾಜಪರಿವಾದವರು ನಿಂತಿರುತ್ತಿದ್ದರು. ವೇಶ್ಯೆಯರಿಗೆ ವಿಶೇಷವಾದ ಆಹ್ವಾನವಿದ್ದಿತ್ತು. ಈ ಸುಂದರ ನಗರದ ಹನ್ನೆರಡು ಗಾವುದ ವಿಸ್ತಾರವೂ ಪಂಜಿನ ಬೆಳಕು ಥಾಳಿಸಿತ್ತು. ಮುಂದೆ ಅನೇಕ ವಿಧವಾದ ದೈಹಿಕ, ಕಲಾಪ್ರದರ್ಶನಗಳಾದವು. ಸಿಂಗರಿಸಿಕೊಂಡಿದ್ದ ಸುಂದರಿಯರು ಬಂದು ರಾಜನಿಗೆ ರತ್ನದಾರತಿಯೆನ್ನತ್ತಿದರು. ಆನೆ ಕುದುರೆಗಳಿಂದ ಪ್ರದರ್ಶನಗಳಾದವು. ಕರಿಗಳೆಲ್ಲವೂ (ಆನೆಗಳೆಲ್ಲವೂ) ತಮ್ಮ ಸೊಂಡಿಲನೆತ್ತಿ ಶ್ರೀಕಂಠದಿಂದ ಸೇಸೆಯ ಸೋಸಿ ಸ್ವರದೋರಿ ಬಲಗಾಲದಂತದ ಮೇಲಿಟ್ಟು ಶಿರಬಾಗಿದವು. ಚಕ್ರವರ್ತಿಗೆ ಮುಂದೆ ಉರಿಚೇಗಳು ಬಾಣ ಪರಿಪರಿಯ ಪುಷ್ಪ ಬಾಣಗಳ ಪ್ರದರ್ಶನಗಳಾಗುತ್ತಿದ್ದವು. ಆ ಒಂಬತ್ತು ದಿನಗಳಲ್ಲಿ ದಿನವೂ ಒಂದೊಂದು ವೈವಿಧ್ಯವಿರುತ್ತಿತ್ತು. ಹೀಗೆ ಶಾಂತಿಯಿಂದ, ದಾನಗಳಿಂದ, ತ್ಯಾಗ ಭೋಗಾಂತರಾಳದ ಲೀಲೆಯಿಂದ ಮಂತ್ರಿಯು ಹೇಳಿದಂತೆ ರಾಜನು ಉತ್ಸವವನ್ನು ನಡೆಸಿದನೆಂದೂ ವಿವರವಾಗಿ ವಿವರಿಸಿರುವುದು ಕಂಡುಬರುತ್ತದೆ. ಇದರಿಂದ ವಿಜಯನಗರದ ಕಾಲದ ದಸರಾ ಹಬ್ಬದ ಸಂಪೂರ್ಣ ಚಿತ್ರಣ ದೊರಕಿ ಅಂದಿನ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದೆ.

ಜಾತ್ರೆ ಮತ್ತು ರಥೋತ್ಸವ : ವಿಜಯನಗರದ ಅರಸರ ಕಾಲದಲ್ಲಿ ಜಾತ್ರೆಗಳು ಶ್ರೀಮಂತರ, ಮಧ್ಯಮ ವರ್ಗದವರ ಅದಕ್ಕಿಂತಲೂ ಸಮಾಜದಿಂದ ಕಡೆಗಣಿಸಲ್ಪಟ್ಟ ಹಿಂದುಳಿದ ವರ್ಗದವರಿಗೆ ಅವರವರ ಅಂತಸ್ತಿಗೆ ತಕ್ಕಂತೆ ಅವರದೇ ಆದ ರೂಪ ದಲ್ಲಿ ಪ್ರಯೋಜನವಾಗುತ್ತಿತ್ತು. ಜಾತ್ರೆ ಎಂದರೆ ಯಾವುದಾದರೂ ದೇವತೆಯ ರಥೋತ್ಸವ ಮತ್ತಿತರ ಸಾಮಾಜಿಕ, ಸಾಂಸ್ಕೃತಿಕ, ವ್ಯಾಪಾರ ನಡೆಯುವ ಸ್ಥಳ ಎಂದು ಹೇಳಬಹುದು. ಅಥವಾ ದೇವತೆಯ ಉತ್ಸವದಲ್ಲಿ ಸೇರುವ ಜನರ ಗುಂಪು (The multitude of people gathering for the above purpose; the crowds at such a festival) ಎಂದು ಒಂದೇ ವಾಕ್ಯದಲ್ಲಿ ಹೇಳಬಹುದು. ಪ್ರಾಚೀನ ಕಾಲದಿಂದಲೂ ಜನರು ನಂಬಿಕೊಂಡು ಬಂದಿದ್ದ ದೇವದೇವತೆಗಳನ್ನು ಭಯ ಭಕ್ತಿಯಿಂದ ಸಾಮೂಹಿಕವಾಗಿ ಪೂಜಿಸಿ, ಪ್ರಾರ್ಥಿಸುವ, ಸಂಭ್ರಮದ ಒಂದು ಜನಸಮೂಹವೇ ಜಾತ್ರೆ ಎಂದು ಕರೆಸಿಕೊಳ್ಳುತ್ತದೆ. ಒಂದು ಸಮಾಜದೊಂದಿಗೆ ಶತಮಾನಗಳಿಂದಲೂ ಒಂದಾಗಿ ಬದುಕು ಸಾಗಿಸುತ್ತಾ ಬಂದಿರುವ ಮಾನವನು ತನ್ನ ವೈಯಕ್ತಿಕ ಮತ್ತು ಲೌಕಿಕ ಜೀವನದ ಹಿತರಕ್ಷಣೆಗಾಗಿಯೂ ಹಾಗೂ ತನ್ನ ಜೀವನಕ್ಕೆ ಆಧಾರವಾಗಿ ಅವಲಂಬಿಸಿರುವ (ಕೃಷಿಗೆ ಸಂಬಂಧಿಸಿದ ಹಾಗೂ ತನ್ನ ಬದುಕಿಗೆ) ಮೂಕಪ್ರಾಣಿಗಳ ಸುಖಕ್ಕಾಗಿಯೂ ಯಾವುದೇ ರೀತಿಯ ರೋಗರುಜಿನಗಳು ಬಾರ ದಂತೆ, ಮಳೆ ಬೆಳೆ ಸರಿಯಾಗಿ ಕಾಲಕಾಲಕ್ಕೆ ಬಂದು ಬರಗಾಲದ ಬವಣೆಯನ್ನು

ನೀಗಿಸಿಕೊಳ್ಳಲೆಂದು ಪ್ರಾರ್ಥಿಸುವ ಉದ್ದೇಶವು ಈ ಜಾತ್ರೆಗಳದಾಗಿತ್ತೆನ್ನಬಹುದು. ಮೇಲಿನವುಗಳನ್ನು ದಯಪಾಲಿಸಿದರೆ ದೇವರಿಗೆ ಕೃತಜ್ಞತೆಯನ್ನು ಸಲ್ಲಿಸಲು ಒಂದೆಡೆ ಸೇರುವ ಹಾಗೂ ತಾವು ಇವುಗಳು ಕಾರ್ಯಗತವಾದರೆ ದೇವರಿಗೆ ಹರಕೆ ಹೊತ್ತುದನ್ನು ಕಾರ್ಯರೂಪದಲ್ಲಿ ತರುವ ಆಚರಣೆಯೇ ಅಥವಾ ಸನ್ನಿವೇಶವೇ ಜಾತ್ರೆಯಾಗಿ ವಿಜೃಂಭಿಸುತ್ತದೆ.

ವಿಜಯನಗರದ ಅರಸರ ಆಳ್ವಿಕೆಯ ಕಾಲದಲ್ಲಿ ಸಾಮ್ರಾಜ್ಯದಾದ್ಯಂತ ದೊಡ್ಡ ಹಾಗೂ ಚಿಕ್ಕ ಗಾತ್ರದ ನೂರಾರು ಜಾತ್ರೆಗಳು ನಡೆಯುತ್ತಿದ್ದವೆಂದು ಕಂಡುಬರುತ್ತದೆ. ಇದಕ್ಕೆ ವಿಪುಲವಾಗಿ ಶಾಸನಗಳು, ಸ್ಮಾರಕಗಳು, ಸಾಹಿತ್ಯಾಧಾರಗಳು ಹಾಗೂ ಜಾನಪದ ಸಾಹಿತ್ಯ ಆಕರಗಳು ಪ್ರಮುಖವಾದ ಮಾಹಿತಿ ತಿಳಿಸುತ್ತವೆ. ಕವಿಗಳು, ಸಂತರು, ದಾಸರು, ವಿದೇಶಿ ಪ್ರವಾಸಿಗರು ಕಣ್ಣಾರೆ ಕಂಡಿದ್ದನ್ನು ತಮ್ಮ ತಮ್ಮ ಬರವಣಿಗೆಯಲ್ಲಿ ದಾಖಲಿಸಿಟ್ಟಿದ್ದಾರೆ. ವಿಜಯನಗರದ ಕಾಲದ ಜಾತ್ರೆಗಳು ತಮ್ಮದೇ ಆದ ಪ್ರಾದೇಶಿಕ ವೈಶಿಷ್ಟ್ಯಗಳಿಂದ ಕೂಡಿದ್ದವೆನ್ನಬಹುದು.

ಯಾವುದೇ ಜಾತ್ರೆಯು ಅಂದು ನಡೆಯಬೇಕಾದರೆ (ಈ ಸಂಪ್ರದಾಯವು ಇಂದಿಗೂ ಚಾಚೂತಪ್ಪದೆ ಪ್ರದೇಶದಿಂದ ಪ್ರದೇಶಕ್ಕೆ ಬೇರೆ ಬೇರೆ ರೂಪಗಳಲ್ಲಿ ನಡೆದುಕೊಂಡು ಬರುತ್ತಿದೆ) ಮೊದಲು ಆ ಊರಿನ ದ್ಯಾಮವ್ವನಿಗೆ ಅಥವಾ ಮಾರಮ್ಮನಿಗೆ ಉಡಿ ತುಂಬುವರು. (ಕರ್ಕಲ್ ಹಾಕುವುದು ಅಂದರೆ, ಕೆಮ್ಮು ಬರುವಷ್ಟರ ಮಟ್ಟಿಗೆ ಮೆಣಸಿನ ಕಾಯಿಯನ್ನು ಸುಡುವುದು.) ನಂತರ ಗ್ರಾಮದ ಯಜಮಾನರೆಲ್ಲರೂ ಸೇರಿ ಸುತ್ತಲಿನ ಗ್ರಾಮದವರೊಡನೆ ಚರ್ಚಿಸಿ ಜಾತ್ರೆಯ ದಿನವನ್ನು ನಿರ್ಧರಿಸಿ ಡಂಗೂರ ಹೊಡೆಸುತ್ತಿದ್ದರು. ಹಬ್ಬ ಶುರುವಾಯಿತೆಂದು ಹೇಳಿಕೊಳ್ಳುವುದಕ್ಕೆ ವಾರಬಿಡುವುದು ಎಂದು ಕರೆಯುತ್ತಿದ್ದರು. ನದಿ ಅಥವಾ ಕೆರೆ ಗಳಿಂದ ಗ್ರಾಮದೇವತೆಯು ಸ್ನಾನ ಮಾಡಿ, ವಿಧಿವಿಧಾನಗಳೊಂದಿಗೆ ಗ್ರಾಮದೊಳಗೆ ಬಂದರೆ ಅದು ಮತ್ತೆ ರಥದಲ್ಲಿ ಕುಳಿತು ತನ್ನ ಗ್ರಾಮವನ್ನು ಸುತ್ತುವವರೆವಿಗೂ ಜನರು ಒಂದಲ್ಲಾ ಒಂದು ರೀತಿಯಲ್ಲಿ ಉಪವಾಸ, ಅರೆನಿದ್ರೆ, ಲೈಂಗಿಕ ಕ್ರಿಯೆಯನ್ನು ತ್ಯಜಿಸುವುದು, ಮಾಂಸಾಹಾರಿಗಳಾಗಿದ್ದರೆ ಅದನ್ನು ತ್ಯಜಿಸುವುದು ಕಂಡು ಬರುತ್ತಿತ್ತು. ಇದನ್ನೇ ಅವರು ವಾರಬಿಡುವುದು ಎಂದು ಕರೆದುಕೊಂಡಿದ್ದಾರೆ. ಈ ವಾರದಲ್ಲಿ ಜನರು ಜಾತ್ರೆಯ ಸಿದ್ಧತೆಯಲ್ಲಿ ತೊಡಗುತ್ತಿದ್ದರು. ದೇವ ದೇವತೆಗಳನ್ನು ಪಲ್ಲಕ್ಕಿ ಯಲ್ಲಿ ಹಾಗೂ ತೇರಿನಲ್ಲಿ ಕೂರಿಸಿ ಜಾತ್ರೆ ಮಾಡುವ ಪರಿಪಾಠ ಇದ್ದಿತ್ತು. ಪ್ರಭಾವಿ ದೇವರುಗಳ ಜಾತ್ರೆಗಳು ಪ್ರಭಾವಿ ಜನರುಗಳ ಪ್ರೀತಿಗೆ ಪಾತ್ರವಾಗಿ ಹೆಚ್ಚಿನ ಹಣ ಸಂಗ್ರಹವಾದ್ದರಿಂದ ತೇರಿನ ಜಾತ್ರೆಗಳಾಗಿಯೂ ಪರಿವರ್ತನೆಯಾಗಿ ಜರುಗುತ್ತ ಬಂದಿರುತ್ತವೆ. ಹಂಪಿಯ ವಿರೂಪಾಕ್ಷ ರಥೋತ್ಸವ, ಬಾದಾಮಿಯ ಬನಶಂಕರಿ

ರಥೋತ್ಸವ, ಚಾಮುಂಡಿಬೆಟ್ಟದ ಚಾಮುಂಡಿ ರಥೋತ್ಸವ, ನಂಜನಗೂಡಿನ ನಂಜುಂಡೇಶ್ವರಸ್ವಾಮಿ ರಥೋತ್ಸವ, ಕುಮಾರರಾಮ ರಥೋತ್ಸವ, ಎಲ್ಲಮ್ಮನ ರಥೋತ್ಸವ, ಗಾಳಮ್ಮನ ರಥೋತ್ಸವ, ಮೈಲಾರಲಿಂಗನ ರಥೋತ್ಸವ ಹೀಗೆ ನೂರಾರು ಪ್ರಮುಖವಾದವುಗಳನ್ನು ಗುರುತಿಸುತ್ತಾ ಸಾಗಬಹುದು. ವಿಜಯನಗರದ ಅರಸರ ಆಳ್ವಿಕೆಯ ಕಾಲದಲ್ಲಿ ಹೆಣ್ಣುದೇವರ ಜಾತ್ರೆಗಳು ಹೆಚ್ಚಾಗಿ ನಡೆಯುತ್ತಿತ್ತೆಂದು ಕಂಡುಬರುತ್ತದೆ. ಇಂಥವರಲ್ಲಿ ಪ್ರಮುಖವಾಗಿ ಹೆಸರಿಸಬಹುದಾದುವೆಂದರೆ ಗೊಳ್ಯಾದ ಲಕ್ಕಮ್ಮ, ಪುತ್ತರಗಿ ಭಾಗಮ್ಮ, ಖನಗಾವಿ ಕನ್ನವ್ವ, ಗುಂಜಿ ಮಹುಲಿದೇವಿ, ಕಕೇರಿ ಭೀಷ್ಟವ್ವ, ಚಿಂಚಲಿ ಮಾಯವ್ವ, ಗೋಲಗೇರಿ ದುರ್ಗಮ್ಮ, ಪಡಗಾನೂರು ಮಾರಿ ಲಕ್ಕಮ್ಮ, ಅರೋಲಿ ಹೂಲಿಗೆಮ್ಮ, ಸೊಂತ ಚೆದಮ್ಮ, ಚಿಂಚೋಳಿ ಬಾಗಮ್ಮ, ಸನ್ನತಿ ಚೆನ್ನಮ್ಮ, ಮಾಸಾಳಿ ಚೌಡಮ್ಮ, ಮುನಿರಾಬಾದ್ ಹುಲಿಗೆಮ್ಮ, ಬಗದೂರಿ ಎಲ್ಲಮ್ಮ, ಗಾಳಮ್ಮನ ಗುಡಿ ಗಾಳಮ್ಮ, ಅಲ್ಲದೆ ಪ್ರತಿಯೊಂದು ಗ್ರಾಮ ದಲ್ಲಿಯೂ ಗ್ರಾಮದೇವತೆಯಾಗಿ ಕಂಗೊಳಿಸುವ ದೇವತೆಗಳಾದ ಸೋಸಲೆ ಹೊನ್ನ ದೇವಿ, ಬನ್ನೂರು ಹೇಮಾದ್ರಿ, ಮೂಗೂರು ತಿಬ್ಬದೇವಿ, ಸವದತ್ತಿ ಎಲ್ಲಮ್ಮ, ಕಲಮಾಲಿಯ ಎಲ್ಲಮ್ಮ, ಚಂದ್ರಗುತ್ತಿಯ ರೇಣುಕಾದೇವಿಯ ಜಾತ್ರೆ ಮುಂತಾದವು ಹೆಣ್ಣು ದೇವತೆಗಳ ಒಂದಿಲ್ಲೊಂದು ಹೆಸರಿನಿಂದ ಇಂದೂ ನಡೆದುಕೊಂಡು ಬರುತ್ತ ಲಿವೆ. ಇದಕ್ಕೆ ಅಂದು ನಮ್ಮಲ್ಲಿ ಇವುಗಳ ಮೇಲೆ ಆಳವಾಗಿ ಬೇರುಬಿಟ್ಟಿರುವ ಸಂಸ್ಕೃತಿಯೇ ಕಾರಣ.

ಅಂದು ಜಾತ್ರೆಗಳು ಪ್ರಾರಂಭವಾಗುವ ಸಂದರ್ಭದಲ್ಲಿ ತಮ್ಮ ಗ್ರಾಮದ ದೇವರ ಗುಡಿಗಳನ್ನು ಸ್ವಚ್ಛಗೊಳಿಸಿ, ದೇವಾಲಯವನ್ನು ಸುಣ್ಣ ಬಣ್ಣಗಳಿಂದ ಅಲಂ ಕರಿಸಿ, ದೇವರಿಗೆ ಹೊಸಬಟ್ಟೆ, ಆಭರಣ ತೊಡಿಸಿ, ತರತರದ ನೈವೇದ್ಯ ಅರ್ಪಿಸಿ ಸಂತೋಷದಿಂದ ಅದನ್ನು ವೈಯಕ್ತಿಕ ಹರಕೆಗಳ ಜೊತೆಗೆ ಸಾಮೂಹಿಕವಾಗಿ (ಜನರೆಲ್ಲರ ಪರವಾಗಿ) ಕೇಳುವ ಹರಕೆಗಳನ್ನು ದೇವರಿಗೆ ತೀರಿಸಲು ಶುರುಮಾಡುತ್ತಾರೆ. ಇಂತಹ ಸಮಯದಲ್ಲಿ ಅನ್ನ ದಾಸೋಹದ (ಹಳೆ ಮೈಸೂರು ಪ್ರದೇಶದಲ್ಲಿ ಪರ ಮಾಡುವುದು ಎಂದು ಕರೆಯುತ್ತಾರೆ) ಪವಿತ್ರ ಕಾರ್ಯಗಳು ಜಾತ್ರೆ ನಡೆಯುವ ಅಷ್ಟೂ ದಿನವೂ ನಡೆಸಲು ಏರ್ಪಾಡಾಗಿರುತ್ತಿದ್ದವು. ಸಾಂಸ್ಕೃತಿಕ ಕಾರ್ಯಕ್ರಮಗಳಾದ ಕುಸ್ತಿ, ಕೋಲಾಟ, ಜನಪದ ನೃತ್ಯ, ಜನಪದ ಗೀತೆಗಳ ಹಾಡುಗಾರಿಕೆಯ ಮೇಳ, ಭಕ್ತಿ ಪುರಾಣ ಕಥೆಗಳ ಮೇಳ, ನಾಟಕ ಮುಂತಾದ ಸಾಂಸ್ಕೃತಿಕ ಪ್ರದರ್ಶನಕ್ಕೆ ಸಿಕ್ಕ ವೇದಿಕೆಗೆ ತಯಾರು ಮಾಡಿಕೊಳ್ಳುತ್ತಿದ್ದರು.

ಅಂತೆಯೇ ಏನೆಲ್ಲಾ ಸಾಂಸ್ಕೃತಿಕ ಹಾಗೂ ಧಾರ್ಮಿಕ ಆಚರಣೆಗಳಿಗೆ ಆದ್ಯತೆ ನೀಡಿದರೂ ಸಹ ಅದರ ಜೊತೆಗೆ ಧಾರ್ಮಿಕ ವಿಧಿವಿಧಾನಗಳೊಂದಿಗೆ ದೇವರ

ಹೆಸರು ಹೇಳಿ ಮೂಕಪ್ರಾಣಿಗಳನ್ನು ಬಲಿಕೊಡುವ ದುಷ್ಟ ಸಂಪ್ರದಾಯವು ಕಠೋರ ರೀತಿಯದಾಗಿತ್ತೆನ್ನಬಹುದು. ಕೋಳಿ, ಕುರಿ, ಹೋತ, ಎಮ್ಮೆ, ಕೋಣ, ಹೋರಿ ಮುಂತಾದ ಪ್ರಾಣಿಗಳು ಇಂತಹ ಹಿಂಸೆಗೆ ಬಲಿ ಬೀಳುತ್ತಿದ್ದವು. ಸಾಮಾನ್ಯವಾಗಿ ಕಾಲರ, ಪ್ಲೇಗು ರೋಗಗಳನ್ನು ತಡೆಯುವುದೆಂದು ಜನರು ನಂಬಿದ್ದ ಮಾರಮ್ಮ, ಭೀಷ್ಟವ್ವ, ಮಾಯವ್ವ, ಲಕ್ಕವ್ವ, ದ್ಯಾಮವ್ವ, ಗಾಳೆಮ್ಮ (ಇವುಗಳೆಲ್ಲವೂ ದುಷ್ಟಶಕ್ತಿಯ ವಿರುದ್ಧ ಹೋರಾಡಿದ ದುರ್ಗಿಯ ರೂಪಗಳೆಂದು ಪ್ರತೀತಿ) ದೇವಿ ಜಾತ್ರೆಗಳಲ್ಲಿ ಇಂತಹ ಪದ್ಧತಿಗಳು ಹೆಚ್ಚಾಗಿ ಕಂಡು ಬರುತ್ತಿದ್ದವೆಂದು ಹೇಳಬಹುದು. ಬೀದಿಯಲ್ಲಿ ಇವುಗಳು ಬಲಿಗೆ ಸತ್ತು ಬಿದ್ದಿದ್ದನ್ನು ವಿದೇಶಿ ಪ್ರವಾಸಿಗರು ವಿವರಿಸಿರುವುದು ಕಂಡು ಬರುತ್ತದೆ. ಸಾಮಾನ್ಯವಾಗಿ ಈ ಮೇಲೆ ಉಲ್ಲೇಖಿಸಿದ ದೇವತೆಗಳೆಲ್ಲವೂ ಸಮಾಜದಲ್ಲಿ ಹಿಂದುಳಿದ ವರ್ಗದವರ (ದಲಿತರ) ಆರಾಧ್ಯ ದೇವತೆಗಳೆ. ಅಷ್ಟೇ ಅಲ್ಲದೆ ಇಂದು ಸಮಾಜದ ಕೆಟ್ಟ ಸಂಪ್ರದಾಯವಾಗಿರುವ ದೇವದಾಸಿ ಪದ್ಧತಿಯನ್ನು ಈ ದೇವತೆಗಳ ಜಾತ್ರೆಯಲ್ಲಿ ಬಿಡುವುದು ಹಾಗೂ ಬೆತ್ತಲೆ ಸೇವೆಯ ಕೆಟ್ಟ ಅನಿಷ್ಟ ಸಂಪ್ರದಾಯಗಳು ಅಂದು ಹೇಳಲು ಸಾಧ್ಯವಾದ ರೀತಿಯಲ್ಲಿ ಇದ್ದಿತ್ತೆನ್ನಬಹುದು. ಇಂದು ಏನೆಲ್ಲ ಕಾನೂನು ಕಟ್ಟಳೆಗಳನ್ನು ನಿರ್ಮಿಸಿದ್ದರೂ ಮೇಲಿನವು ಈಗಲೂ ಇರುವುದು ಕಂಡುಬರುತ್ತದೆ. ಹೆಣ್ಣು ದೇವರ ಜಾತ್ರೆಗಳಂತೆ ಗಂಡು ದೇವರ ಜಾತ್ರೆಗಳೂ ಅಷ್ಟೇ ಪ್ರಸಿದ್ಧಿ ಪಡೆದಿರುತ್ತಿದ್ದವು. ಇಂದು ಪೌರಾಣಿಕ ವ್ಯಕ್ತಿಗಳಾಗಿ ಕಂಗೊಳಿಸುವ ವೀರಭದ್ರ ದೇವರ ಜಾತ್ರೆಗಳಿಗಂತೂ ಲೆಕ್ಕವೇ ಇಲ್ಲವೆನ್ನ ಬಹುದು. ಹುಮನಾಬಾದ್, ಕಾರಡಚಿ, ಶಹಪೂರ, ಗೊಡಚಿ, ಯಡೂರ, ಹಲಕಟ್ಟಿ, ನಗನೂರು, ಚಿಣಮಗೇರಿ, ಹೆಬ್ಬಾಳ ಮೊದಲಾದ ಗ್ರಾಮಗಳ ವೀರಭದ್ರ ದೇವರು ಅತ್ಯಂತ ಪ್ರಮುಖ ಸ್ಥಾನಗಳೆಂದು ಹೆಸರು ಪಡೆದಿದ್ದು, ವಿಜೃಂಭಣೆಯಿಂದ ಜಾತ್ರೆಗಳನ್ನು ನೆರವೇರಿಸಿ ಕೊಂಡು ಬರುತ್ತಿದ್ದರು.

ಜಾತ್ರೆಯ ವಿವಿಧ ಕಾರ್ಯಕ್ರಮಗಳು ಮುಗಿದ ಮೇಲೆ ಕೊನೆಯ ಹಂತವೆಂದರೆ ದೇವರ ಮೆರವಣಿಗೆಗೆ ಆದ್ಯತೆ ನೀಡುವುದು. ಅಂದರೆ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಇಲ್ಲವೆ ತೇರಿನಲ್ಲಿ ಇಟ್ಟು ದೇವಾಲಯದ ರಥಬೀದಿಯಲ್ಲಿ ಎಳೆಯು ವುದು. ತೇರಿಗೆ ರಥ ಎಂದೂ ಕರೆಯುತ್ತಿದ್ದರು. ಪಲ್ಲಕ್ಕಿಯಲ್ಲಿಯೂ ದೇವರ ಮೂರ್ತಿಯನ್ನು ಇಟ್ಟು ಹೆಗಲ ಮೇಲೆ ಹೊತ್ತುಕೊಂಡು ದೇವರ ಬೀದಿಯ ಸುತ್ತ ಸುತ್ತುವುದು ವಾಡಿಕೆಯಾಗಿತ್ತು. ರಥವನ್ನು ಹಗ್ಗಗಳಿಂದ, ಕಬ್ಬಿಣದ ಸರಪಳಿ ಗಳಿಂದ ನೂರಾರು ಜನ ಸೇರಿ ಎಳೆಯುವ ವಾಡಿಕೆ ಇದ್ದಿತು. (ಸಾಮಾನ್ಯವಾಗಿ ರಥ ಎಳೆಯುವುದು ಭಾರವಾದ ಅಥವಾ ಶಕ್ತಿಯನ್ನು ವ್ಯಕ್ತಪಡಿಸುವ ಕೆಲಸವಾದುದರಿಂದ ಇದನ್ನು ಎಳೆಯುವ ಕೆಲಸ ಮಾತ್ರ ಅನಾದಿ ಕಾಲದಿಂದಲೂ ದಲಿತರ ಪಾಲಿಗೆ

ಪ್ರಾಪ್ತವಾಗಿದ್ದಿತು. ಆದರೆ ದಲಿತರು ತಮಗೆ ಪ್ರಾಪ್ತವಾಗಿರುವ ಈ ಕೆಲಸದ ಬಗ್ಗೆ ಹೆಮ್ಮೆಪಟ್ಟುಕೊಂಡು ತಮ್ಮದೇ ಜಾನಪದವನ್ನು ಸೃಷ್ಟಿಸಿಕೊಂಡು ಆನಂದ ಪಡುವುದೂ ಉಂಟು. ಆದರೆ ಇದರ ಮೂಲ ಉದ್ದೇಶವೇ ಬೇರೆಯದಾಗಿತ್ತೆನ್ನಬಹುದು.) ಅಂದು ತೇರನ್ನು ಆಧ್ಯಾತ್ಮಿಕವಾದ ಸಂಕೇತಕ್ಕೆ ಹೋಲಿಸುತ್ತಿದ್ದರು. ತೇರು ದೇಹಕ್ಕೆ ಪ್ರತೀಕವಾಗಿತ್ತು.

ಜಾತ್ರೆಯಲ್ಲಿ ಒಂದು ಕಡೆ ಉತ್ಸವ ಮೂರ್ತಿಯ ಮೆರವಣಿಗೆ ನಡೆಯುತ್ತಿದ್ದರೆ, ಇನ್ನೊಂದು ಕಡೆ ದೇವರಿಗೆ ಹರಕೆ ತೀರಿಸುವ, ಉರುಳುಸೇವೆ, ಬೆತ್ತಲೆಸೇವೆ, ದೇವದಾಸಿಯನ್ನು ಬಿಡುವುದು, ಸಿಡಿ ಆಡುವುದು, ಅಗ್ನಿ ತುಳಿಯುವುದು, ಶಸ್ತ್ರ ಹಾಕಿಕೊಳ್ಳುವ, ವಾದ್ಯ ಓಲಗ ನುಡಿಸುವ, ಕಾಯಿ-ಕರ್ಪೂರಗಳ ನೈವೇದ್ಯ ಅರ್ಪಿಸುವ, ಮುಡುಪು ಇಡುವ, ಹುಂಡಿ ಹಾಕುವ, ಮೊದಲಾದ ಕಾರ್ಯಕ್ರಮಗಳು ತಿಳಿದೋ ತಿಳಿಯದೆಯೋ ಸಂಪ್ರದಾಯಕ್ಕೆ ಜೋತುಬಿದ್ದು ಸಾಗುತ್ತಲೇ ಇರುತ್ತಿದ್ದವು.

ಜಾತ್ರೆಗೆ ಕೇವಲ ಧಾರ್ಮಿಕ ಭಾವವೇ ಮೂಲಕಾರಣವಾದರೂ ಇದಕ್ಕೆ ಸಾಂಸ್ಕೃತಿಕ ಬದುಕಿನ ಹಿನ್ನೆಲೆಯೂ ಅಪಾರವಾಗಿರುವುದು ಕಂಡುಬರುತ್ತದೆ. ಏಕೆಂದರೆ ಜಾತ್ರೆಯ ನೆಪದಿಂದ ಜನರೆಲ್ಲರೂ ಒಂದೆಡೆ ಸೇರುತ್ತಾರೆ. ಜನರಿಗೆ ಪ್ರಾಪಂಚಿಕರಿಗೆ ಬೇಕು ಬೇಕಾದ ವಸ್ತುಗಳ ಮಾರಾಟ ಮಳಿಗೆಗಳು ಸಿದ್ಧವಾಗಿ ಖರೀದಿ ಭರಾಟೆಗಳು ನಡೆಯುತ್ತವೆ. ಕಲಾಕಾರರು ತಮ್ಮ ಕಲಾ ಪ್ರದರ್ಶನಕ್ಕಾಗಿಯೂ, ಕೃಷಿಗೆ ಹಾಗೂ ಮನೆಯ ಬಳಕೆಯ ವಸ್ತುಗಳನ್ನು ಖರೀದಿಗಾಗಿ ಬಹು ದೂರದೂರದ ಜನರೂ ಬಂದು ಸೇರುವರು. ಇದರಲ್ಲಿ ಪ್ರಮುಖವಾದವುಗಳೆಂದರೆ ದನಗಳ ಜಾತ್ರೆಗಳು. ಜಾತ್ರೆಗೆ ಸೇರಿದ ಜನಜಂಗುಳಿಯನ್ನು ಕಂಡು "ಸಿದ್ಧೇಶ್ವರ ಪುರಾಣ"ದಲ್ಲಿ ಈ ರೀತಿ ವರ್ಣಿಸಲಾಗಿದೆ. "ಗುಡಿಗಳೊಳು ಗೋಪುರಗಳೊಳು ಪುರದ ಬೀದಿಯಂಗಡಿಗಳೊಳು ಮಠಗಳೊಗಾರವೆಗಳೊಳು ಕೆರೆಯ ತಡಿಗಳೊಳಗಡೆಯೆಲ್ಲ ಎಂಬಂತೆ ಬೀಡುಗಳ ಬಿಟ್ಟು ಪರಿಸೆಯ ಮನುಜರು, ಸಡಗರಗೊಂಡು ರಿಂಗಣ ಗುಣಿವು ಕಾಡುತ್ತ, ಬಿಡದೆ ಪಾಡುತ್ತಾ ಮೊಪ್ಪಿದುದು ಹರಿಸವೆನಿಪ್ಪ ಕಡಲೊಳಾಳುತ್ತೆ ಸಿದ್ದೇಂದ್ರ; ಸಿದ್ದೇಂದ್ರ ಎಂದೆನುತೊಸೆದು ಕೀರ್ತಿಸುತ್ತ" ಎಂದು ಜಾತ್ರೆಯ ವರ್ಣನೆಯನ್ನು ಮಾಡಿರುವುದು ಕಂಡುಬರುತ್ತದೆ.

ರೈತರು ತಮ್ಮ ವ್ಯವಸಾಯದ ಬೆನ್ನೆಲುಬಾದ ದನಗಳನ್ನು ಅತ್ಯಂತ ಪೂಜ್ಯ ಭಾವನೆಯಿಂದ ಕಾಣುತ್ತಿದ್ದರು. ಇದಕ್ಕಾಗಿಯೇ ವೃಷಭಕ್ಕೆ ದೇವಾನುದೇವತೆಗಳನ್ನು ರಕ್ಷಿಸುವ ಸಂಕೇತವಾಗಿ ಪುರಾಣದಲ್ಲಿ ಸೃಷ್ಟಿಸಿ ವಿಶಿಷ್ಟ ಸ್ಥಾನ ನೀಡಿರುವುದು ಕಂಡುಬರುತ್ತದೆ. ಸಾಮಾನ್ಯವಾಗಿ ಇಂದಿಗೂ ಸಹ ಗ್ರಾಮೀಣ ಪ್ರದೇಶದಲ್ಲಿ ಸೋಮವಾರದಂದು 'ಬಸವನ ದಿನ' ಎಂದು ಪರಿಗಣಿಸಿ ಅಂದು ಹೆಗಲಿಗೆ

ನೇಗಿಲನ್ನು ಏರಿಸುವುದು ಕಂಡುಬರುವುದಿಲ್ಲ. ಇದಕ್ಕಾಗಿಯೇ ಬಸವನ ಹಬ್ಬವೆಂದು ಅದು 'ಕಾರಹುಣ್ಣಿಮೆ' ಎಂಬ ಹಬ್ಬವನ್ನು ಆಚರಿಸುತ್ತಿದ್ದು ಕಂಡುಬರುತ್ತದೆ. ಇದರ ಸುಂದರ ವರ್ಣನೆಯನ್ನು ಕೆ. ಶ್ರೀಕಂಠಯ್ಯನವರು ವಿಸ್ತಾರವಾಗಿ ವಿವರಿಸಿದ್ದಾರೆ.

ಜಾತ್ರೆಯ ಕೊನೆಯ ಹಂತವೇ ತೇರು ಎಳೆಯುವುದು. ಜಾತ್ರೆಯು ತನ್ನ ವೈಭವದ ತುತ್ತತುದಿಯನ್ನು ಮುಟ್ಟಿದ್ದು ತೇರನ್ನು ಎಳೆಯುವ ಸಂದರ್ಭದಲ್ಲಿಯೇ, ವಿಜಯನಗರದ ಕಾಲದಲ್ಲಿ ನಡೆಯುತ್ತಿದ್ದ ಧಾರ್ಮಿಕ ಹಬ್ಬಗಳು ಮತ್ತು ವಿನೋದಗಳ ಒಂದು ವಿವರಣಾತ್ಮಕ ಚಿತ್ರವನ್ನು ವಿದೇಶೀ ಪ್ರವಾಸಿಗರು ಒದಗಿಸಿರುವರು. ಅವರು ಹೇಳುವ ವೈಭವದ ಉತ್ಸವಗಳಲ್ಲಿ ರಥೋತ್ಸವಗಳೂ ಒಂದು. ಸಾಮಾನ್ಯವಾಗಿ ಇಂದಿಗೂ ನಾಣ್ನುಡಿಯಾಗಿರುವ "ತೇರ್ ಅರಿದಮ್ಯಾಲೆ ಜಾತ್ರೆ ಅಳಿಯಿತು" ಎನ್ನುವ ಪದವೆ ತೇರಿಗೆ ಮುಂಚೆ ಈ ಎಲ್ಲ ಕಾರ್ಯಕ್ರಮಗಳು ನಡೆಯುತ್ತಿದ್ದ ವೆಂಬುದನ್ನು ಸೂಚಿಸುತ್ತದೆ.

ಸಂಗೀತ ಮತ್ತು ನಾಟ್ಯ

"ಶಿಲ್ಪವು ಹೇಗೆ ರೂಪಬ್ರಹ್ಮನ ಸ್ವರೂಪವೋ ಹಾಗೆಯೇ ಸಂಗೀತವು ನಾದಬ್ರಹ್ಮನ ಸ್ವರೂಪವಾಗಿರುತ್ತದೆ" ಎಂಬ ಕವಿವಾಣಿಯು ವಿಜಯನಗರದರಸರ ಕಾಲದಲ್ಲಿ ಸತ್ಯವಾಗಿತ್ತು. ಹಿಂದಿನ ಸಂಗೀತ, ನಾಟ್ಯಗಳು ವಿಜಯನಗರದ ಸಾಮ್ರಾಜ್ಯಕ್ಕೆ ಅಲ್ಲದೆ ದೇಶವಿದೇಶಗಳಲ್ಲಿಯೂ ತನ್ನ ಕಂಪನ್ನು ಚೆಲ್ಲಿ ಅದರ ವೈಭವವನ್ನು ಸಾರಿದೆ. ತಾಯಿಯ ಹಾಲು ಮಕ್ಕಳಿಗೆ ಹೇಗೆ ಅವಶ್ಯಕವೋ ಹಾಗೆಯೆ ಶಿಲ್ಪ, ನಾಟ್ಯ, ಸಂಗೀತ, ಸಾಹಿತ್ಯಗಳು ಸುಸಂಸ್ಕೃತ ಮಾನವನಿಗೆ ಆವಶ್ಯಕವೆಂದು ಹೇಳಿದರೆ ತಪ್ಪಾಗದು. ಇದರಿಂದ ಮನಸ್ಸಿಗೆ ಶಾಂತಿ, ಆನಂದ ದೊರಕುವುದರಲ್ಲಿ ಸಂದೇಹವಿಲ್ಲ. ಇತ್ತೀಚೆಗೆ ವೈದ್ಯಕೀಯ ಸಂಶೋಧನೆಯು ಉತ್ತಮ ಸಂಗೀತವು ರಕ್ತದ ಒತ್ತಡ, ಹೃದಯಾಘಾತ, ಮಧುಮೇಹ, ಮುಂತಾದ ರೋಗಗಳಿಗೆ ಪ್ರಮುಖ ಮದ್ದೆಂದು ಹೇಳಿರುವುದು ಕಂಡುಬರುತ್ತದೆ.

ಸಂಗೀತ : ವಿಜಯನಗರದ ಅರಸರು ಸಂಗೀತಕ್ಕೆ ಹಾಗೂ ನಾಟ್ಯಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದರು. ಪ್ರಾರಂಭದಲ್ಲಿ ಇಮ್ಮಡಿ ದೇವರಾಯನ ಕಾಲದಲ್ಲಿ ಚತುರ ಕಲ್ಲಿನಾಥನಿಗೆ (ಇವನಿಗೆ ಕಲಿಮಾತ್ಯ, ಕೊಲ್ಲಿರಸನೆಂಬ ಹೆಸರುಗಳೂ ಇದ್ದವು) ಕೊಡಲಾಗಿದ್ದ ಹೆಚ್ಚಿನ ಪ್ರೋತ್ಸಾಹದಿಂದಾಗಿ ಸಂಗೀತಕ್ಕೆ (ಕ್ರಿ.ಶ.೧೪೪೦ ರಲ್ಲಿ) ಒಂದು ವಿಶಿಷ್ಟ ರೀತಿಯ ಟೀಕೆಯು ಬಂದಿತ್ತೆಂದು ಹೇಳಬಹುದು.ಅನಂತರ ಈ ಟೀಕೆಯೇ ಹೊಸ ವಿಧಾನವನ್ನು ಪಡೆದು ಹೊಸ ಹೊಸ ರಾಗಗಳಾಗಿ ಹೊರ ಹೊಮ್ಮಿ ತಮ್ಮದೇ ಆದ ವಿಧಾನದಲ್ಲಿ ವಿವಿಧ ವರ್ಗಗಳಿಗೆ ಸೇರಿಸಲಾಗಿ ಮೇಳ

ಪದ್ಧತಿಯು ಹುಟ್ಟಿಕೊಂಡಿತೆಂದು ತಿಳಿದುಬರುತ್ತದೆ. ಇದೇ ಅಂದಿನಿಂದ ಇಂದಿನ ವರೆಗೂ ನಾವು ಕಾಣುತ್ತಿರುವ ಮಂಟೇಸ್ವಾಮಿ, ಮಹದೇಶ್ವರ, ಕುಮಾರರಾಮ, ಎಲ್ಲಮ್ಮ, ಹುಲಿಗೆಮ್ಮನವರುಗಳ ಬಗ್ಗೆ ಹುಟ್ಟಿಕೊಂಡ ಮೇಳಗೀತ ಪದ್ಧತಿ. ಚತುರ ಕಲ್ಲಿನಾಥನಿಗಿಂತ ಹಿಂದೆ ಈ ಪದ್ಧತಿಯು ಇರಲಿಲ್ಲವೆಂದೇನೋ ಹೇಳಲಾಗದು. ಆದರೆ ಅದು ಒಂದು ಸಮರೂಪವಾಗಿ ಹೊರಹೊಮ್ಮಿದ್ದು ಇವನ ನಂತರ ಎನ್ನ ಬಹುದು. ಅದೇ ವಿಜಯನಗರದ ಅರಸರ ಕಾಲದಲ್ಲಿ ಎಂಬುವುದು ಔಚಿತ್ಯ. ಒಂದು ರೀತಿಯಲ್ಲಿ ಮೇಳ ಪದ್ಧತಿಯಿಂದಲೇ ರಾಗಗಳ ಆಕೃತಿಯನ್ನು ಸೃಷ್ಟಿಸ ಲಾಗಿದೆ ಎಂದೂ ಹೇಳಬಹುದು.

ಅಂದಿನ ಕಾಲದ ಸಂಗೀತ ಹಾಗೂ ನಾಟ್ಯಗಳನ್ನು ಪುಂಡರೀಕ ವಿಠಲರು ರಚಿಸಿರುವ 'ಷಡ್ರಾಗ ಚಂದ್ರೋದಯ', 'ರಾಗಮಂಜರಿ', 'ರಾಗಮಾಲೆ', 'ನಟನ ನಿರ್ಣಯ' ಎಂಬ ಗ್ರಂಥಗಳಿಂದ ತಿಳಿಯಬಹುದಾಗಿದೆ. ಪುಂಡರೀಕರು ಕಲ್ಲಿನಾಥನ ಸೂತ್ರಗಳನ್ನು ಅನುಸರಿಸಿಕೊಂಡೇ ಮೇಳಗೀತೆಗಳನ್ನು ಪ್ರಸ್ತಾಪಿಸಿರುವುದು ಕಂಡು ಬರುತ್ತದೆ. ಇವರುಗಳಿಗೆ ವಿಜಯನಗರದಲ್ಲಿ ಯಾವುದೇ ರೀತಿಯ ಗೌರವವೂ, ಸ್ಥಾನಮಾನವೂ ಇರಲಿಲ್ಲ. ಏಕೆಂದರೆ ಇವರು ಮೇಳಶಾಸ್ತ್ರಕ್ಕೆ ಒಲವು ತೋರಿಸಿದ್ದುದು ತಪ್ಪಾಗಿದ್ದಿತು. ಅಂದು ಮೇಳಶಾಸ್ತ್ರವು ಬ್ರಾಹ್ಮಣೇತರರ ಸಾಂಸ್ಕೃತಿಕ ಮೇಳವಾಗಿದ್ದು ಕಂಡು ಬರುತ್ತದೆ.

ವಿಜಯನಗರದಲ್ಲಿ ನೃತ್ಯಸಹಿತವಾದ ಸಂಗೀತಕ್ಕೆ ಹೆಚ್ಚಿನ ಮಹತ್ವ ನೀಡಲಾಗಿದ್ದಿತು. ಕಾರಣವೆಂದರೆ ಈ ಎರಡು ಸಂಗಮವಾಗಿರುವ ಸಂಗೀತವು ಭಕ್ತಿಮಾರ್ಗದಿಂದ ಮುಕ್ತಿಗೆ ಕರೆದೊಯ್ಯುತ್ತದೆ ಎಂಬ ಭಾವನೆಯು ಅವರಲ್ಲಿ ಮನೆಮಾಡಿತ್ತೆನ್ನಬಹುದು. ಸಂಗೀತದ ಅಡಿಪಾಯಗಳಾಗಿರುವ ಸಪ್ತಸ್ವರಗಳಾದ ಸ-ರಿ-ಗ-ಮ-ಪ-ದ-ನಿಗಳು ಆಧ್ಯಾತ್ಮಿಕ ರೀತಿಯಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿರುವುದು ಕಂಡುಬರುತ್ತದೆ. ಸಂಗೀತಶಾಸ್ತ್ರದಲ್ಲಿ ಇವುಗಳ ಅರ್ಥವನ್ನು ಈ ಕೆಳಕಂಡಂತೆ ವಿಶ್ಲೇಷಿಸಿರುವುದು ಕಾಣಬಹುದು.

ಸ : ತ್ರಿಗುಣಾತ್ಮಿಕೆ : ತ್ರಿಕುಂತಲಿಸಹಿತೆ, ಹತ್ತು ಕೋಟಿ ಮಿಂಚುಗಳ ಪ್ರಕಾಶ ವುಳ್ಳವಳು, ಪಂಚಭೂತಸ್ವರೂಪಿಣಿ, ಶ್ವೇತವರ್ಣೆ, ಶ್ವೇತಾಂಬರಧಾರಿಣಿ, ರಕ್ತ ನಯನೆ, ಶ್ವೇತಚಂದನಾನುಲಿಪ್ತೆ, ಮುತ್ತಿನಹಾರವನ್ನು ಧರಿಸಿರುವವಳು, ಪ್ರಶಾಂತ ವದನೆ, ಸತ್ಯಸ್ವರೂಪಿಣಿ ಎಂಬರ್ಥವನೂ.....,

ರಿ: ದ್ವಿಕುಂಡಲೀಸಹಿತೆ : ಕೆಂಪುಮಿಂಚಿನ ವರ್ಣದವಳು, ಪಂಚಭೂತ ಸ್ವರೂಪಿಣಿ, ಲೋಲಜಹ್ವೆ, ಭಯಂಕರರೂಪಿಣಿ, ರಕ್ತಾಂಬರಧಾರಿಣಿ, ರಕ್ತ ಪುಷ್ಪ ಭೂಷಣಾಂ ಬರಧಾರಿಣಿ, ಅಶ್ವ ಸಿದ್ಧಿನಾಯಕೆ, ಬ್ರಹ್ಮ ಸ್ವರೂಪಿಣಿ ಎಂಬರ್ಥ ವನೂ.....,

ಗ : ನಿರ್ಗುಣಾತ್ಮಿಕೆ : ನಿರ್ಮಲವಾದ ಉದಯಸೂರ್ಯನ ಪ್ರಕಾಶವುಳ್ಳವಳು, ಚೈತನ್ಯ ಸ್ವರೂಪಿಣಿ, ದಾಳಿಂಬೆಯ ಹೂವಿನ ಬಣ್ಣದವಳು, ರಕ್ತವಸ್ತ್ರಾಭರಣಧಾರಿಣಿ, ಬ್ರಹ್ಮಸ್ವರೂಪಿಣಿ ಎಂಬರ್ಥವನೂ.....

ಮ : ಪ್ರಾತಃಕಾಲದ ಸೂರ್ಯನ ಪ್ರಕಾಶವುಳ್ಳವಳು : ನೀಲವರ್ಣೆ, ದಶಭುಜಾದ್ವಿನಿತೆ, ಭಯಂಕರವಾದ ಬಲವಾದ ಆಕಾರವುಳ್ಳವಳು, ಧರ್ಮಾರ್ಥಕಾಮ ಮೋಕ್ಷಪ್ರದೆ ಎಂಬರ್ಥವನೂ......,

ಪ : ವಿವಿಧ ವರ್ಣಧಾರಿಣಿ : ದ್ವಿಭುಜೆ, ಪದ್ಮಾಕ್ಷಿ, ರಕ್ತಚಂದನ ಚರ್ಚಿತೆ, ಪದ್ಮಮಾಲಿನಿ, ನವರತ್ನ ಶೋಭಿತೆ, ಪ್ರಶಾಂತೆ.

ದ : ಸತ್ಯಸ್ವರೂಪಿಣಿ : ಶಕ್ತಿತ್ರಯನ್ವಿತೆ, ಹಳದಿಯ ಮಿಂಚಿನ ಕಾಂತಿಯುಳ್ಳವಳು, ಮನೋಹರೆ, ನಿತ್ಯಮಂಗಳೆ...,

ನಿ : ಹತ್ತು ಕೋಟಿ ಮಿಂಚಿನ ಪ್ರಕಾಶವುಳ್ಳವಳು : ಚಾರುಲೋಚನೆ, ಲೋಲಜಿಹ್ವೆ, ಚತುರ್ಬಾಹು ಸಮನ್ವಿತೆ, ಸುಗಂಧಾನುಲಿಪ್ತೆ, ನಿತ್ಯಾಮಂಗಲದಾಯಿನಿ.

ಎಂದು ಆಧ್ಯಾತ್ಮಿಕ ಮಾದರಿಯಲ್ಲಿ ಸಂಗೀತಶಾಸ್ತ್ರವು ವಿಶ್ಲೇಷಿಸುತ್ತದೆ. ಈ ವಿಶ್ಲೇಷಣೆಗೆ ವಿಜಯನಗರದ ಅರಸರು ಹೆಚ್ಚಿನ ಭಕ್ತಿಭಾವಗಳಿಂದ ನಡೆದುಕೊಂಡು ಬಂದಿರುವುದು ಕಂಡುಬರುತ್ತದೆ. ಕರ್ನಾಟಕ ಸಂಗೀತ ಪಿತಾಮಹರೆಂದು ಕರೆಸಿ ಕೊಂಡಿರುವ ಪುರಂದರದಾಸರು ವಿಜಯನಗರವು ಉತ್ತುಂಗದ ಶಿಖರದಲ್ಲಿದ್ದಾಗ ಇದ್ದು, ಹೊಸ ಹೊಸ ಸಂಗೀತಗಳನ್ನು ಸೃಷ್ಟಿಸಿ, ಕೀರ್ತನೆಗಳ ಮೂಲಕ ಹಾಗೂ ಕೃತಿಗಳ ಮೂಲಕ ಅವುಗಳನ್ನು ಇಂದಿಗೂ ನಮಗೆ ಬಳುವಳಿಗಳಾಗಿ ಬಿಟ್ಟು ಹೋಗಿದ್ದಾರೆ. ನೂರಾರು ವರ್ಷಗಳು ಕಳೆದಿದ್ದರೂ ಅಂದು ಅವರು ಸೃಷ್ಟಿಸಿದ ಸಂಗೀತ ಇಂದಿಗೂ ಜೀವಂತವಾಗಿದೆ.

ನಾಟ್ಯ : ವಿಜಯನಗರದ ಅರಸರು ಸಂಗೀತ ಮತ್ತು ನಾಟ್ಯಗಳೆರಡರಲ್ಲಿಯೂ ಪಾಂಡಿತ್ಯವನ್ನು ಪಡೆದಿದ್ದರು. ಆಸ್ಥಾನದಲ್ಲಿ ಸಂಗೀತಗಾರ್ತಿಯರು ಹಾಗೂ ನೃತ್ಯಗಾರ್ತಿಯರು ತುಂಬಿತುಳುಕುತ್ತಿದ್ದರೆಂದು ವಿದೇಶಿ ಪ್ರವಾಸಿಗರು ಹೇಳಿರುವುದು ಗಮನಾರ್ಹವಾಗಿದೆ. ಕೃಷ್ಣದೇವರಾಯನು ನಾಟ್ಯ ಸಂಗೀತಗಳೆರಡನ್ನೂ ರಾಘವೇಂದ್ರ ತೀರ್ಥರ ಪೂರ್ವಿಕನಾದ ಕೃಷ್ಣನಿಂದ ಅಭ್ಯಸಿಸಿದನೆಂದು ಸಾಹಿತ್ಯವು ತಿಳಿಸುತ್ತದೆ. ಅವನೇ ರಚಿಸಿರುವ ಸಂಸ್ಕೃತ ಗ್ರಂಥವಾಗಿರುವ ಜಾಂಬುವತೀಕಲ್ಯಾಣ ಸಂಗೀತ ಹಾಗೂ ನಾಟ್ಯದ ಬಗ್ಗೆ ಹೆಚ್ಚಿನ ಬೆಳಕನ್ನು ಚೆಲ್ಲುತ್ತದೆ. ಸಂಗೀತ ಸೂರ್ಯೋದಯದ ಕರ್ತೃವಾದ ಬಂಧಂ ಲಕ್ಷ್ಮೀನಾರಾಯಣರಿಂದ ಸಂಗೀತ ಕಲೆಯನ್ನು ಅಭ್ಯಾಸ ಮಾಡಿದನೆಂದು ತಿಳಿದುಬರುತ್ತದೆ.

ಸಂಗೀತ ಮತ್ತು ನೃತ್ಯದಲ್ಲಿ ಅಂದು ಮೊದಲ ಸ್ಥಾನವೆಂದರೆ ದೇವದಾಸಿಯರದಾಗಿತ್ತು. ಅಂದಿನ ಕಾಲದಲ್ಲಿ ದೇವದಾಸಿಯರೆಂದರೆ ಸೂಳೆಯರಲ್ಲ ಎಂಬುವುದು ಗಮನಿಸಬೇಕಾದ ಅಂಶ. ಒಳ್ಳೆಯ ವಂಶಕ್ಕೆ ಸೇರಿದ ಗುಣವಂತರೂ ಶೀಲವಂತರೂ ತಮ್ಮ ತಮ್ಮ ಹೆಣ್ಣುಮಕ್ಕಳನ್ನು ದೇವರ ಸೇವೆಗೆಂದು ನೇಮಿಸುತ್ತಿದ್ದರು. ಅವರ ಮುಖ್ಯ ಕೆಲಸವೆಂದರೆ ದೇವಮಂದಿರ ಹಾಗೂ ದೇವರ ಉತ್ಸವಗಳಲ್ಲಿ ನರ್ತಿಸುವುದು ಹಾಗೂ ಹಾಡುವುದಾಗಿತ್ತೆಂದು ಹೇಳಬಹುದು. (ರಾಜರ ಆಸ್ಥಾನದಲ್ಲಿ ಇದ್ದ ದೇವದಾಸಿಯರಿಗೆ ಮಾತ್ರ ಈ ಗೌರವವಿದ್ದಿತ್ತು). ಬಾರ್ಬೋಸ ಇವರ ಬಗ್ಗೆ ಉಲ್ಲೇಖಿಸುತ್ತಾ ಗೃಹಸ್ಥರು ತಮ್ಮ ಹತ್ತು ವರ್ಷದ ಹೆಣ್ಣುಮಕ್ಕಳನ್ನು ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ದೇವರಿಗೆ ಸಮರ್ಪಿಸಿದ ಮೇಲೆ ಆ ಕನ್ಯೆಯರಿಗೆ ಸಮಾಜ ದಲ್ಲಿ ಮದುವೆಯಾದವರಿಗೆ (ಮುತ್ತೈದೆಯರಿಗೆ) ಸಲ್ಲುತ್ತಿದ್ದ ಗೌರವಗಳು ಸಲ್ಲುತ್ತಿದ್ದವು. ಅವರು ದೇವದಾಸಿಯರಾಗಿ ಜನರ ಗೌರವಕ್ಕೆ ಪಾತ್ರರಾಗುತ್ತಿದ್ದರು. ಅವರಿಗೆ ಒಳ್ಳೆಯ ವಾಸಸ್ಥಳಗಳು ದೊರಕುತ್ತಿದ್ದವು. ರಾಣಿಯರ ಅಂತಃಪುರಗಳಿಗೆ ಹೋಗುವುದಕ್ಕೂ, ಅಲ್ಲಿರುವುದಕ್ಕೂ, ಅವರೊಡನೆ ಸ್ನೇಹವನ್ನು ಬೆಳೆಸಿ ತಾಂಬೂಲ ವನ್ನು ಸೇವಿಸುವುದಕ್ಕೂ ಅರ್ಹತೆಯನ್ನು ಪಡೆಯುತ್ತಿದ್ದರು. ಮಹಾನವಮಿ ಉತ್ಸವ ದಲ್ಲಿ ಅವರು ಇಷ್ಟಪಡುವ ಮೆಟ್ಟಿಲುಗಳನ್ನು ಹತ್ತಿಕೊಂಡು ವೈಭವವನ್ನು ನೋಡುವ ಅವಕಾಶವನ್ನು ಕೃಷ್ಣದೇವರಾಯನು ಅವರಿಗೆ ಕೊಟ್ಟಿದ್ದನು ಎಂದು ವಿದೇಶಿಯರ ಸಾಹಿತ್ಯ ಆಧಾರಗಳಿಂದ ತಿಳಿದುಬರುತ್ತದೆ.

ಸಂಗೀತ ಹಾಗೂ ನಾಟ್ಯಗಾರರು, ವಿಧವಿಧವಾದ ಉಡುಪುಗಳನ್ನು ಧರಿಸುತ್ತಿದ್ದರೆಂಬುವುದು ಹಜಾರ ರಾಮಸ್ವಾಮಿ ದೇವಸ್ಥಾನ ಹಾಗೂ ಮಹಾನವಮಿ ದಿಬ್ಬದ ಮೇಲುಗೋಡೆಗಳ ಮೇಲೆ ಕೆತ್ತಿರುವ ಕೆತ್ತನೆಯಿಂದ ತಿಳಿಯಬಹುದಾಗಿದೆ. ಕೆಲವರು ಕಚ್ಚೆ-ಪೈಜಾಮಗಳೂ, ಜುಬ್ಬ-ತಲೆಗೆ ದಪ್ಪನೆಯ ಪೇಟ ಇದ್ದವೆಂದೂ ಕಂಡುಬರುತ್ತದೆ. ಮಹಿಳೆಯರಿಗೆ ಲಂಗ ಹಾಗೂ ಉತ್ತರೀಯಗಳೂ ಇರುವುದು ಕಂಡುಬರುತ್ತದೆ. (ಉತ್ತರೀಯಾ ಎಂದರೆ ಅನೇಕ ಸುಳಿಗಳನ್ನು ಒಂದಾಗಿ ಹೊಂದಿರುವ ಸೀರೆಯ ನೆರೆ ಇರುವ ವಸ್ತ್ರ.) ಕೆಲವರು ಹೆಚ್ಚಿನ ಪ್ರಮಾಣದಲ್ಲಿ ಒಡವೆಗಳನ್ನು ಧರಿಸುತ್ತಿದ್ದರು ಎನ್ನುವುದು ದೇವಾಲಯದಲ್ಲಿನ ಉಬ್ಬುಶಿಲ್ಪಗಳಿಂದ ತಿಳಿದುಬರುತ್ತದೆ. ಕೆಲವು ನರ್ತಕಿಯರು ಲಂಗಗಳನ್ನು ಮಾತ್ರ ಧರಿಸುತ್ತಿದ್ದದ್ದು ಕಂಡುಬಂದರೆ, ಇನ್ನೂ ಕೆಲವರು ಪೂರ್ಣನಗ್ನರಾಗಿಯೇ ನೃತ್ಯ ಮಾಡುತ್ತಿರುವಂತೆ ಚಿತ್ರಿಸಲಾಗಿದೆ. ಈ ವಿಧವಾದ ನರ್ತಕಿಯರಿಂದ ಭರತನಾಟ್ಯವನ್ನು ಶ್ರೀಮಂತಗೊಳಿಸಲಾಯಿತು. ಮಹಾನವಮಿ ಉತ್ಸವಗಳು, ರಥೋತ್ಸವಗಳು, ದೇವಸ್ಥಾನದಲ್ಲಿ ಪ್ರತಿ ಶನಿವಾರ ನಡೆಯುತ್ತಿದ್ದ ಉತ್ಸವಗಳಲ್ಲಿಯೂ ಇವರು ತಪ್ಪದೇ ನರ್ತಿಸಬೇಕಾಗಿತ್ತು. ಇದಕ್ಕೆ

ರಾಜಾಜ್ಞೆಯಾಗಿದ್ದಿತ್ತೆಂದು ಕಂಡುಬರುತ್ತದೆ. ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗವು ಪ್ರಕಟಿಸಿರುವ "ಹಂಪಿ ಶಾಸನ" ಸಂಪುಟದಲ್ಲಿರುವ ೮೮ನೇ ಶಾಸನವನ್ನು ಇದಕ್ಕೆ ಉದಾಹರಣೆಯಾಗಿ ನೀಡಬಹುದು. ಆದರೆ ಶೂದ್ರರು ಹಾಗೂ ಪಂಚಮರು ನಾಟ್ಯ ಹಾಗೂ ಸಂಗೀತ ಕಲಿಯಬಾರದೆಂದು ಸಹ ರಾಜಾಜ್ಞೆಯಾಗಿದ್ದಿತ್ತು. ಪಾಯಸ್‌ರು ಅಂದಿನ ನಾಟ್ಯದ ಬಗ್ಗೆ ರಾಣಿಯರು ಎಷ್ಟು ತಲ್ಲೀನರಾಗಿದ್ದರೆಂಬುದನ್ನು ವಿವರಿಸುತ್ತಾ ರಾಣಿವಾಸದವರೂ ಸಹ ಬಹಿರಂಗವಾಗಿಯೇ ಮನರಂಜನೆಗಾಗಿ ನಾಟ್ಯವಾಡುತ್ತಿದ್ದ ರೆಂದು ಅವರಿಗೆ ತಕ್ಕ ಶಿಕ್ಷಣವೂ ದೊರಕುತ್ತಿತ್ತೆಂಬುದರಲ್ಲಿ ಸಂದೇಹವಿಲ್ಲ. ಅವರಿಗೆ ಶಿಕ್ಷಣ ಶಾಲೆಯೂ ಇದ್ದು ಅಲ್ಲಿ ಅವರ ತಪ್ಪುಗಳನ್ನು ತಿದ್ದಿಕೊಳ್ಳಲು ಚಿತ್ರಗಳ ಸಹಾಯವೂ ಇದ್ದಿತ್ತೆಂದೂ ಹೇಳಿದ್ದಾನೆ. ಇದು ಅಂದು ರಾಣಿಯರು ಸಂಗೀತ ಮತ್ತು ನೃತ್ಯಕ್ಕೆ ನೀಡಿದ ಆಸಕ್ತಿಯನ್ನು ಸೂಚಿಸುತ್ತದೆ.

ಶಿಕ್ಷಣ ಮತ್ತು ತಂತ್ರಜ್ಞಾನ

ದಿವಂಗತ ಹಯವದನರಾಯರು ಮೈಸೂರು ಗೆಜೆಟಿಯರ್ ಸಂಪುಟ ನಾಲ್ಕರಲ್ಲಿ ಹಿಂದಿನ ಕಾಲದ ಶಿಕ್ಷಣ ಪದ್ಧತಿಯನ್ನು ಅವಲೋಕಿಸುತ್ತಾ ಸಾರ್ವಜನಿಕ ಶಿಕ್ಷಣವನ್ನು ಹಿಂದೆಂದೂ ಸರ್ಕಾರದ ಕರ್ತವ್ಯವೆಂದು ಪರಿಗಣಿಸಿದ ಹಾಗೆ ಎಲ್ಲೂ ಕಾಣುವುದಿಲ್ಲ ಎಂದು ಹೇಳಿದ್ದಾರೆ. ಈ ಮಾತಿಗೆ ವಿಜಯನಗರ ಸಾಮ್ರಾಜ್ಯವು ಹೊರತಾಗಿರಲಿಲ್ಲ ಎಂದು ಹೇಳಬಹುದು. ವಿಜಯನಗರದರಸರು ವಿದ್ವತ್ತನ್ನು ಮತ್ತು ಶಿಕ್ಷಣದ ಪ್ರಸಾರವನ್ನು, ಪ್ರೋತ್ಸಾಹಿಸಿದ್ದಕ್ಕೆ ಕಾರಣವೆಂದರೆ ಸ್ವತಃ ಅವರೇ ವಿದ್ಯಾವಂತರಾಗಿದ್ದರು ಎನ್ನುವುದು ಒಂದು ರೀತಿಯದಾದರೆ, ಮತ್ತೊಂದು ಕಡೆ ಅವರೆ ಮೂಲ ಸಂಪ್ರ ದಾಯಗಳಿಗೆ ಮನಸೋತು ಸಾರ್ವಜನಿಕ ಶಿಕ್ಷಣವನ್ನು ಸಂಪೂರ್ಣವಾಗಿ ಬದಿಗೊತ್ತಿ ದ್ದರು ಎಂದು ಹೇಳಬಹುದು. ರಾಜಕುಮಾರರ ವಿದ್ಯಾಭ್ಯಾಸದಿಂದ ಮುಂದುವರಿದ ಈ ಪರಂಪರೆಯು ನಂತರದ ವಿಜಯನಗರದ ಅರಸರೂ ಅನುಸರಿಸಿಕೊಂಡು ಬಂದರು. ಎಷ್ಟೋ ವೇಳೆ ರಾಜರೇ ಈ ಬಗ್ಗೆ ತನ್ನ ಉತ್ತರಾಧಿಕಾರಿಯಾಗುವವರಿಗೆ ತಿಳುವಳಿಕೆ ಕೊಟ್ಟಿದ್ದೂ ಕಂಡುಬರುತ್ತದೆ.

ವಿಜಯನಗರ ಕಾಲದ ಶಿಕ್ಷಣದ ವಿಚಾರವನ್ನು ನಾವು ಬಹಳಮಟ್ಟಿಗೆ ಶಾಸನ ಗಳಿಂದ ಸಂಗ್ರಹಿಸಬಹುದಾಗಿದೆ. ಇವುಗಳಲ್ಲಿ ಕೆಲವಂತೂ ಸ್ವಾರಸ್ಯಪೂರ್ಣವಾದ ವಿವರಗಳನ್ನು ಒದಗಿಸುತ್ತವೆ. ಅಷ್ಟೇ ಅಲ್ಲದೆ ಅಂದಿನ ಕಾಲದ ಸಮಕಾಲೀನ ಸಾಹಿತ್ಯವು ಈ ವಿಚಾರವಾಗಿ ಹೆಚ್ಚಿನ ಬೆಳಕನ್ನು ಚೆಲ್ಲುತ್ತದಲ್ಲದೆ, ಈ ಶಿಕ್ಷಣದ ಚಟುವಟಿಕೆಗಳು ಅಂದು ಕೆಲವೇ ವರ್ಗಗಳ ಬೌದ್ಧಿಕ, ನೈತಿಕ ಹಾಗೂ ಸಾಂಸ್ಕೃತಿಕ ವಿಷಯಗಳ ಮೇಲೆ ಗಮನಹರಿಸಲು ನಿಜವಾದ ಆಧಾರವಾಗಿರುತ್ತಿದ್ದವು. ಇವುಗಳ

ಆಧಾರದ ಮೇಲೆಯೇ ಅಂದಿನ ಸಾಮ್ರಾಜ್ಯದ ಅಡಿಗಲ್ಲು ಇದ್ದಿತೆಂದು ಹೇಳಬಹುದಾಗಿದೆ.

ಪ್ರಾಥಮಿಕ ಶಿಕ್ಷಣ

ಅಂದಿನ ಕಾಲದಲ್ಲಿ ಶಿಕ್ಷಣಕ್ಕೆ 'ಬಾಲಬೋಧೆ' ಎಂದು ಹೆಸರಿದ್ದಿತ್ತೆನ್ನಬಹುದು. ಕನಕದಾಸರು ತಮ್ಮ 'ಮೋಹನತರಂಗಿಣಿ'ಯಲ್ಲಿ ಕಸೆ ಅಂಗಿ ತೊಟ್ಟು ಕೈಯಲ್ಲಿ ಬೆತ್ತ ಹಿಡಿದು ಔಷಧಿಗಳನ್ನು ರಚಿಸುವುದರಲ್ಲಿ ನಿಪುಣರಾದ, ಪ್ರಾಥಮಿಕ ಶಾಲೆಯ ಉಪಾಧ್ಯಾಯರ ಚಿತ್ರವೂ, ಅಂದಿನ ಮಕ್ಕಳ ಪುಸ್ತಕಗಳ ವರ್ಣಚಿತ್ರಗಳಿಂದ ಕೂಡಿದ್ದವೆಂಬ ಸಂಗತಿಯೂ ದೊರೆಯುತ್ತದೆ. ಪ್ರಾಥಮಿಕ ಹಂತದಲ್ಲಿ ಮಕ್ಕಳು ಮಣ್ಣಿನ ಅಥವಾ ಮರಳಿನ ಮೇಲೆ ಅಕ್ಷರಾಭ್ಯಾಸ ಮಾಡುವುದನ್ನು ಕಲಿತರು ಎಂಬುವುದು ತಿಳಿದಿರುವ ವಿಷಯವೇ. ಇವುಗಳಿಗೆ "ಧೂಳಾಕ್ಷರ" ಎಂದು ಕರೆಯುತ್ತಿದ್ದರು. ವಿದೇಶಿ ಪ್ರವಾಸಿಗರೊಬ್ಬರ ಪ್ರಕಾರ ಪಾಠಶಾಲೆಯೊಂದರಲ್ಲಿ ಉಪಾಧ್ಯಾಯರಿಂದ ಕಲಿತ ಪಾಠವನ್ನು ಮರೆಯದೆ ನೆನಪಿನಲ್ಲಿಟ್ಟುಕೊಳ್ಳಲು, ವಿದ್ಯಾರ್ಥಿಗಳು ಬಾಯಿಪಾಠಗಳಲ್ಲಿ ಅತ್ಯಂತ ಪರಿಣಾಮಕಾರಿಯಾದ ರೀತಿಯಲ್ಲಿ ಪುನರಾವರ್ತನೆ ಮಾಡುತ್ತಿದ್ದರು. ನಿದರ್ಶನಕ್ಕೆ "ಒಂದೊಂದ್ಲೆ ಒಂದು" ಎಂಬಂತೆ ಪುನರಾವರ್ತನೆಯನ್ನು ಕೇಳುತ್ತಲೆ ಉಳಿದ ಹುಡುಗರು, ಅದನ್ನೆ ಬಾಯಿಯಲ್ಲಿ ಹೇಳುತ್ತಾ ಎದುರಿಗೆ ಮರಳಿನ ಮೇಲೆ ಅದೇ ಪ್ರಕಾರ ಬರೆಯುತ್ತಿದ್ದರು. ಹೀಗೆ ಪ್ರಾಥಮಿಕ ಪಾಠ ಸಾಗುತ್ತಿದ್ದಿತು ಎಂದು ಹೇಳಿ ಅಂದಿನ ಪ್ರಾಥಮಿಕ ಶಿಕ್ಷಣ ಪದ್ಧತಿಯನ್ನು ಮೆಚ್ಚಿಕೊಂಡಿದ್ದಾನೆ. ವಿದ್ಯಾರ್ಥಿಗಳಿಗೆ ಕಾಗದವನ್ನಾಗಲಿ ಅಥವಾ ಮಸಿಯನ್ನಾಗಲಿ ವ್ಯರ್ಥ ಮಾಡಿಸದೆ ಓದುಬರಹವನ್ನು ಕಲಿಯುವ ಈ ವಿಧಾನ ನಿಜವಾಗಿಯೂ ಅತ್ಯಂತ ಸುಲಭವಾದದ್ದೆ ಆಗಿತ್ತು.

ಇನ್ನೊಂದು ಭಾಗದಲ್ಲಿ ವಿದ್ಯಾರ್ಥಿಗಳು ಅಭ್ಯಾಸ ಮಾಡಬೇಕಾದ ಕೃತಿಗಳೆಂದರೆ ಜೈಮಿನಿ ಭಾರತ, ವಿದುರನೀತಿ, ಅಮರಕೋಶ, ಪಂಚತಂತ್ರ, ಸೋಮೇಶ್ವರಶತಕ ಹಾಗೂ ಕೆಲವು ವಿದ್ಯಾರ್ಥಿಗಳು ಸಂವತ್ಸರಗಳ, ನಕ್ಷತ್ರಗಳ, ದಿಕ್ಸೂಚಿಯ ವಿವರಗಳನ್ನು ದೇವರ ಮಹಿಮಾ ವಿಶೇಷಗಳನ್ನು ಸ್ತುತಿಸುವ ಹಲವು ಬಗೆಯ ಹಾಡುಗಳನ್ನು ಕಲಿಯುತ್ತಿದ್ದರು.

ವಿಜಯನಗರದ ಅರಸರು ಶಿಕ್ಷಣಕ್ಕೆ ಎಷ್ಟರ ಮಟ್ಟಿನ ಪ್ರಾಮುಖ್ಯತೆ ನೀಡಿದ್ದರೆಂಬುವುದಕ್ಕೆ ಇಂದಿಗೂ ಕಂಡುಬರುವ ಅಗ್ರಹಾರಗಳು, ದೇವಾಲಯಗಳು ಹಾಗೂ ಮಠಗಳೇ ನಿದರ್ಶನವಾಗಿವೆ. ಪ್ರಾಥಮಿಕ ಹಂತದಲ್ಲಿ ಓದು ಬರಹ ಕೇವಲ ಗಣಿತವನ್ನು ಮಾತ್ರ ಕಲಿಯುವುದಾಗಿದ್ದರೂ ನಮ್ಮಲ್ಲಿ ಇರುವ ನಾಣ್ಣುಡಿ

ತಾಯಿಯೇ ಮಗುವಿಗೆ ಮೊದಲ ಗುರು, ಮನೆಯೇ ಮೊದಲ ಪಾಠಶಾಲೆ ಎಂಬ ಮಾತಿಗೆ ನಿದರ್ಶನವೆಂಬಂತೆ ಮೊದಲನೆ ದೇವರಾಯನ ಮಂತ್ರಿಯಾದ ಲಕ್ಷ್ಮೀಧರನಿಗೆ ಅವನ ತಾಯಿ ದಿನವೂ ಹಾಲೆರೆಯುವಾಗ ಕೆರೆಯನ್ನು ಕಟ್ಟಿಸು, ಬಾವಿಯನ್ನು ತೋಡಿಸು, ದೇವಾಲಯವನ್ನು ಕಟ್ಟಿಸು, ಸೆರೆಯಲ್ಲಿ ಸಿಕ್ಕಿದ ಅನಾಥರನ್ನು ಬಿಡಿಸು, ಮಿತ್ರರಿಗೆ ಆಶ್ರಯನಾಗು, ನಂಬಿದವರಿಗೆ ನೆಲೆಯಾಗು ನಂತರ ಸುಖಶಾಂತಿಯಿಂದ ರಾಜನಾಗಿ ರಾಜ್ಯಭಾರ ಮಾಡು ಎಂದು ಹೇಳುತ್ತಾ ಬೆಳೆಯಿಸಿದಳಂತೆ. (ಆಧಾರ : S.I.I. IV, No. 267, p.62)

ಮೇಲಿನ ತಾಯಿಯ ಮಾತು ಅಂದಿನ ರಾಜನಾಗುವವನ ಕರ್ತವ್ಯ ಹಾಗೂ ಸಾಮಾನ್ಯ ಜನರ ಮೇಲೆ ಇದ್ದ ಮಮಕಾರವನ್ನು ಸೂಚಿಸುತ್ತದೆ. ಇದನ್ನೇ ತಾಯಿ ಸಂಸ್ಕೃತಿ ಎಂದು ಕರೆಯುವುದಲ್ಲವೆ!

ಮಧ್ಯಕಾಲೀನ ಕರ್ನಾಟಕದಲ್ಲಿ ಪ್ರಮುಖ ವಿದ್ಯಾಕೇಂದ್ರಗಳು ಅಗ್ರಹಾರಗಳು, ಮಠಗಳು, ದೇವಸ್ಥಾನಗಳು, ಬ್ರಹ್ಮಪುರಿಗಳು ಮತ್ತು ಘಟಿಕಾ ಸ್ಥಾನಗಳು. ಇವುಗಳಲ್ಲಿ ವಿಜಯನಗರದ ಅರಸರ ಕಾಲದಲ್ಲಿ ಅಗ್ರಹಾರಗಳು, ಮಠಗಳು, ಶೈಕ್ಷಣಿಕ ಕ್ಷೇತ್ರದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದವೆಂದು ಕಂಡುಬರುತ್ತದೆ. ವಿಜಯ ನಗರದ ನಂತರ ಈ ವಿದ್ಯಾಕೇಂದ್ರಗಳ ಘನತೆಯು ಕುಗ್ಗುವಂತೆ ಮಾಡಿದ ಅನೇಕ ಘಟನೆಗಳು ನಡೆದಿರುವುದು ಕಂಡು ಬರುತ್ತದೆ. ಅಂದಿನ ಕಾಲದ ಮಠದ ಶಿಕ್ಷಣವು ಕೇವಲ ಒಂದು ಮತ ಧರ್ಮದ, ಆಚಾರ್ಯಧೋರಣೆಯ ಪೀಠಗಳಾಗಿದ್ದವು. ಇಂಥ ಶಿಕ್ಷಣದ ಸುತ್ತ ಮಠಗಳು ತಮ್ಮ ಬಹು ಬಗೆಯ ಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದವು.

ಅಂದಿನ ಕಾಲದ ಶಿಕ್ಷಣ ಪದ್ಧತಿಯ ಪ್ರಗತಿಯ ಬಗ್ಗೆ ಕುರಿತು ಸೋಮೇಶ್ವರ ಶತಕವು ಹೇಳುವುದರ ರೀತಿಯಲ್ಲಿಯೇ ರಾಜರ ಸಭೆಯು ಕವಿಗಳು, ಗಾಯಕರು, ಪೌರಾಣಿಕರು, ಹಾಸ್ಯಗಾರರು, ಚರಿತ್ರಾಕಾರರು, ಜ್ಯೋತಿಷಿಗಳು, ಚತುರ ವಾಗ್ಮಿಗಳು ಮತ್ತು ಯುದ್ಧಕಲಾ ನಿಪುಣರುಗಳಿಂದ ತುಂಬಿ ಶೋಭಿಸುತ್ತದೆ ಎಂದು ಹೇಳಿರುವುದರಲ್ಲಿಯೇ ಊಹಿಸಬಹುದಾಗಿದೆ. ಸೋಮೇಶ್ವರ ಶತಕದ ಪ್ರಕಾರ ಶಿಕ್ಷಣವನ್ನು ಯಾವುದರಿಂದ ಕಲಿಯಬೇಕು ಎಂದು ಹೇಳಿರುವುದು ಅತ್ಯಂತ ಮಹತ್ವವಾದದ್ದಾಗಿದೆ. ಇದರ ಪ್ರಕಾರ ಅ. ಕೆಲವನ್ನು ಬಲ್ಲವರಿಂದ ಕಲಿಯಬೇಕು, ಆ. ಕೆಲವನ್ನು ಶಾಸ್ತ್ರಗಳಿಂದ ಕಲಿಯಬೇಕು, ಇ. ಕೆಲವನ್ನು ಇತರರ ಕೃತಿಗಳಿಂದ ಅರಿಯಬೇಕು, ಈ. ಕೆಲವನ್ನು ತನ್ನ ಬುದ್ಧಿಶಕ್ತಿಯಿಂದ ತಿಳಿಯಬೇಕು, ಉ. ಕಡೆಯದಾಗಿ ಕೆಲವನ್ನು ಸಜ್ಜನಸಂಗದಿಂದ ಅರಿಯಬೇಕು. ಈ ರೀತಿನೀತಿಯಲ್ಲಿ ಶಿಕ್ಷಣ ಪಡೆದರೆ ಮಾತ್ರ

ಮುನುಷ್ಯನು, ಹಲವು ಹಳ್ಳ, ತೊರೆ, ನದಿಗಳು ಸೇರಿ ಸಮುದ್ರವಾಗುವ ಹಾಗೆ ಸರ್ವಜ್ಞನಾಗುತ್ತಾನೆ ಎಂದು ಹೇಳಬಹುದಾಗಿದೆ.

ಜನಸಾಮಾನ್ಯರ ಶಿಕ್ಷಣ : ಮೇಲೆ ವಿವರಿಸಲಾದ ಶಿಕ್ಷಣಕ್ಷೇತ್ರ, ಶಿಕ್ಷಣ ನೀಡುತ್ತಿದ್ದ ಸ್ಥಳಗಳು ಪ್ರಮುಖವಾಗಿ ಶಿಕ್ಷಣ ಎಂಬ ಪದದ ಅರ್ಥವೇ ಕೆಲವರಿಗೆ ಮಾತ್ರ ಮೀಸಲಾಗಿದ್ದಿತ್ತು. ಶಿಕ್ಷಣ ಜನಸಾಮಾನ್ಯರಿಗೆ ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಅಂದು ಭೀಕರ ಚಂಡಮಾರುತದ ಹಾಗೆ ಹಾಸುಹೊಕ್ಕಾಗಿದ್ದ ಜಾತಿವ್ಯವಸ್ಥೆಯು ತನ್ನದೇ ಆದಂತಹ ಮೌಢ್ಯದ ವ್ಯವಸ್ಥೆಯಲ್ಲಿ ಮುಳುಗಿಸುವಂತೆ ಮಾಡಿತು. ಬ್ರಾಹ್ಮಣರು ವಿದ್ಯೆ ಎಂಬುವುದು ತಮಗೆ ಮಾತ್ರವೆಂದು ಹೇಳಿ ವೇದ ಉಪನಿಷತ್‌ಗಳನ್ನು ಹೇಳಿಕೊಂಡು ರಾಜಾಶ್ರಯದಲ್ಲಿ ಉತ್ತಮ ಜೀವನ ನಡೆಸಿದರೆ, ತಾವೇ ಸೃಷ್ಟಿಸಿದ ಶೂದ್ರರು ಹಾಗೂ ಪಂಚಮರು ಹುಟ್ಟಿರುವುದರ ಬಗ್ಗೆ ಹಲವಾರು ಅಧರ್ಮ ನೀತಿಯನ್ನು ತಿಳಿಸಿ ಅವರನ್ನು ಪ್ರಾಣಿಗಳಿಗಿಂತಲೂ ಹೀನವಾದ ಜೀವನ ನಡೆಸುವಂತೆ ಮಾಡಿದ್ದರೆನ್ನಬಹುದು. ಈ ಗುಂಪಿನಲ್ಲಿ ಯಾರಾದರೂ ಶಿಕ್ಷಣ ಪಡೆಯಲು, ಅದರಲ್ಲಿಯೂ ಸಂಸ್ಕೃತ ಕಲಿಯಲು ಬಯಸಿದರೆ ಅ ವ್ಯಕ್ತಿಗೆ ಕಾಯಿಸಿದ ಕಬ್ಬಿಣದ ಸಲಾಕೆಯಿಂದ ಕಿವಿಗಳಿಗೆ ಎರಕ ಹೊಯ್ಯುವುದು, ನಾಲಗೆ ಕತ್ತರಿಸುವುದು, ಗಡಿಪಾರು ಮಾಡುವುದು ಅಥವಾ ಮರಣದಂಡನೆಗೆ ಒಳಪಡಿಸುವ ಅನಿಷ್ಟ ಪದ್ಧತಿಗಳು ಇದ್ದವು. ಅಂದಿನ ಶಿಕ್ಷಣವು ಕೇವಲ ರಾಜ ಹಾಗೂ ರಾಜಾಶ್ರಯದ ಶ್ರೀಮಂತರು, ಬ್ರಾಹ್ಮಣರುಗಳಿಗೆ ಮಾತ್ರ ಮೀಸಲಾಗಿದ್ದಿತು. ಬೇರೆ ಯಾರೂ ಶಿಕ್ಷಣ ಪಡೆಯದಂತೆ ನಿಷೇಧ ವಿಧಿಸಲಾಗಿತ್ತು. ಸಾಮಾನ್ಯ ಜನತೆಯ ಜೀವನದ ಸೌಕರ್ಯಗಳನ್ನು ಯಾವ ದೃಷ್ಟಿಯಿಂದಲೂ ಉತ್ತಮವಾಗಿ ನಿರೂಪಿಸಲು ಸ್ವಲ್ಪವೂ ಗಮನಕೊಡದ, ಕೇವಲ ಅನಿಷ್ಟ ಪದ್ಧತಿಗಳ ತಳಹದಿಯ ಮೇಲೆ ಆಳ್ವಿಕೆ ನಡೆಸಿದ ರಾಜ್ಯಾಡಳಿತವನ್ನು ಸುಭಿಕ್ಷವಾದ ಆಳ್ವಿಕೆಯ ಸಾಮ್ರಾಜ್ಯ, ಸುಭಿಕ್ಷೆಯ ಕಾಲ ಎಂದೆಲ್ಲಾ ಹೇಳುವುದರಲ್ಲಿ ಅರ್ಥವೆಲ್ಲಿದೆ?

45. ವಿಜಯನಗರ ಕಾಲದ ಕೆಲವೊಂದು ಆಕಸ್ಮಿಕ ಘಟನೆಗಳು : ಒಂದು ಅವಲೋಕನ

ಸಿ. ಬಿ. ಪಾಟೀಲ

ವಿವಿಧ ಜನ ಅವರ ಬದುಕು -ವಿಕಾಸ, ನಡೆ-ನುಡಿ, ಓದು-ಬರಹ, ಧರ್ಮ-ಧಾರ್ಮಿಕ ಆಚರಣೆ, ಮನರಂಜನೆ -ಸಂಗೀತ, ವ್ಯಾಪಾರ -ಕೃಷಿಗಳು ಸಾಮಾಜಿಕ ವ್ಯವಸ್ಥೆಯ ಅವಿಭಾಜ್ಯ ಅಂಗಗಳ ಒಂದು ಮುಖವನ್ನು ಬಿಂಬಿಸಿದರೆ ನೈಸರ್ಗಿಕ ಭೂಕಂಪ, ಅತಿವೃಷ್ಟಿ, ಅನಾವೃಷ್ಟಿ, ಪ್ರವಾಹ, ಅಗ್ನಿ ಅನಾಹುತಗಳು ಹಾಗೂ ಸಾವು -ನೋವು, ಮತ್ತು ಮಾನವನ ಆಂತರಿಕ ಕಲಹ, ದಾಯಾದಿ-ಮತ್ಸರ, ಕಳ್ಳತನ -ದರೋಡೆ, ಯುದ್ಧ -ಅದರ ಭೀಕರ ಪರಿಣಾಮಗಳು ಸಮಾಜದ ಮತ್ತೊಂದು ಮುಖವನ್ನು ನಿರೂಪಿಸುತ್ತವೆ. ನೈಸರ್ಗಿಕ ವಿಕೋಪಗಳನ್ನು ಹೊರತು ಉಳಿದವುಗಳು ಮಾನವನು ತನ್ನ ಸ್ವಾರ್ಥಕ್ಕಾಗಿ ಮಾಡಿದ ವಿಧ್ವಂಸಕ ಕೃತ್ಯಗಳು.ಇವುಗಳಲ್ಲಿ ಕೆಲವರಿಗೆ ವಿಜಯ ಹಾಗೂ ಲಾಭವಾದರೆ ಇನ್ನೋರ್ವರಿಗೆ ಸೋಲು ಹಾಗೂ ನಷ್ಟ; ಹಾಗೆಯೇ ಒಬ್ಬರಿಗೆ ಉದ್ದೇಶಿತ ಕೃತ್ಯವಾದರೆ ಇನ್ನೋರ್ವರಿಗೆ ಆಕಸ್ಮಿಕ ಘಟನೆ. ಸಮಯಾನುಸಾರ ಇಂತಹ ಅನೇಕ ಆಪತ್ತುಗಳನ್ನೆದುರಿಸಿ ಅವುಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಮಾನವನು ಪ್ರಯತ್ನಿಸುತ್ತಿದ್ದಾನೆ. ಇದು ಪೂರ್ವ ಕಾಲದಿಂದಲೂ ನಡೆದುಬಂದ ಒಂದು ವಿಪರ್ಯಾಸ. ಸಾಹಿತ್ಯ, ಕಥೆ, ವೀರಗಲ್ಲು, ಶಾಸನಗಳಲ್ಲಿ ಇಂತಹ ಘಟನೆಗಳ ಉಲ್ಲೇಖ ಸರ್ವೇಸಾಮಾನ್ಯ.

ತುಂಗಭದ್ರೆಯ ದಕ್ಷಿಣ ತಟದ ಹಂಪಿ ಎಂದು ಪ್ರಚಲಿತ ವಿಜಯನಗರವನ್ನು ರಾಜಧಾನಿಯಾಗಿಟ್ಟುಕೊಂಡು ಸುಮಾರು ಎರಡೂವರೆ ಶತಮಾನಗಲ ಕಾಲ ದಕ್ಷಿಣದ ನಾಲ್ಕೂ ಭಾಷಾ ಪ್ರದೇಶಗಳ ಬಹು ಭಾಗವನ್ನಾಳಿದ, ಹರಿಹರ -ಬುಕ್ಕ ಸಹೋದರರಿಂದ ಕ್ರಿ. ಶ. 1336ರಲ್ಲಿ ಸ್ಥಾಪಿಸಿದ ವಿಜಯನಗರ ಸಾಮ್ರಾಜ್ಯವು ಮಧ್ಯಕಾಲೀನ ಇತಿಹಾಸದ ಅತ್ಯಂತ ಬಲಿಷ್ಠ ರಾಜ್ಯ. ಧೀಮಂತ ಚಕ್ರ ವರ್ತಿಗಳು, ಸಮರ್ಥ ಸಾಮಂತರು, ಉತ್ತಮ ಆಡಳಿತ, ಧಾರ್ಮಿಕ ಸಮಾನತೆ, ಅಂತರರಾಷ್ಟ್ರೀಯ ವ್ಯಾಪಾರ, ಸಂಪದ್ಭರಿತ ಆರ್ಥಿಕ ವಿಕಾಸ, ಯಥೇಚ್ಛ ನಾಣ್ಯ ಮುದ್ರಣ ಹಾಗೂ ಅವುಗಳ ಚಲಾವಣೆ ಪದ್ಧತಿ, ಕುಶಲ ಯುದ್ಧ ನೀತಿ, ಶಕ್ತಿಶಾಲಿ ರಕ್ಷಣಾ ಪದ್ಧತಿ, ನಿರಂತರ ಪೂರೈಕೆಯ ನೀರಾವರಿ ವ್ಯವಸ್ಥೆ, ವಿವೇಕ ಪ್ರಜೆಗಳ ಕಲ್ಯಾಣ, ಉಚ್ಚ ಸಾಹಿತ್ಯ -ಲಲಿತಕಲೆ, ಭವ್ಯ ಸಾಂಸ್ಕೃತಿಕ ಪರಂಪರೆಗಳ ವೈಭವಶಾಲಿ ಸಾಮ್ರಾಜ್ಯವೆಂದು ವಿಶ್ವದಾದ್ಯಂತ್ಯ ಪ್ರಖ್ಯಾತಿಯನ್ನು ಪಡೆದಿತ್ತು. ಇಂತಹ

ಆಕರ್ಷಣೆಯಾಗಿತ್ತು. ಇನ್ನೊಂದೆಡೆ ಕೆರೆ -ಕಟ್ಟೆ, ಗುಡಿ -ಗುಂಡಾರಗಳು ಪ್ರಕೃತಿಯ ವಿಕೋಪಕ್ಕೊಳಗಾದರೆ ವೈವಿಧ್ಯತೆಗಳ ಸಮಾಜವು ಕೆಲವೊಂದು ಅನಿರೀಕ್ಷಿತ ಪ್ರಕ್ರಿಯೆ ಗಳಾದ ಸಾವು -ನೋವು, ಆಂತರಿಕ ಕಲಹ, ಕಳ್ಳತನ -ದರೋಡೆ ಹಾಗೂ ತುರುಕಾಳಗ ಗಳಿಗೊಳಪಟ್ಟಿತ್ತು. ಈ ಆಕಸ್ಮಿಕ ಘಟನೆಗಳನ್ನು ವಿಜಯನಗರದರಸು, ಸಾಮಂತರು, ದಂಡನಾಯಕರು ಹಾಗೂ ಎಲ್ಲಕ್ಕಿಂತ ಮಿಗಿಲಾಗಿ ಪ್ರಜೆಗಳು ಕೆಚ್ಚೆದೆಯಿಂದೆದುರಿಸಿ ಅವುಗಳ ಸೂಕ್ತವಾದ ನಿರ್ವಹಣೆಗೆ ಪ್ರಯತ್ನಿಸಿದ್ದಾರೆ. ಶಾಸನ ಹಾಗೂ ವೀರಗಲ್ಲುಗಳಲ್ಲಿ ಉಲ್ಲೇಖಿಸಿದ ಇಂತಹ ಕೆಲವೊಂದು ಅನಿರೀಕ್ಷಿತ ಘಟನೆಗಳ ಅಧ್ಯಯನ ಪ್ರಯತ್ನ ಈ ಪ್ರಬಂಧದ ಉದ್ದೇಶ.

ಅಣೆಕಟ್ಟು ಹಾಗು ಕೆರೆಯ ದುರಂತಗಳು

ದೇಶದ ಆರ್ಥಿಕಾಭಿವೃದ್ಧಿ ಮತ್ತು ಜನಸಾಮಾನ್ಯರ ಹಿತದೃಷ್ಟಿಯಿಂದ ದೈನಂದಿನ ಹಾಗೂ ಕೃಷಿಗಾಗಿ ನಿರಂತರ ಪೂರೈಕೆಯ ಜಲಸಂಪನ್ಮೂಲದ ಪ್ರಾಮುಖ್ಯತೆಯನ್ನರಿತ ವಿಜಯನಗರದರಸು ತಮ್ಮ ಸಾಮ್ರಾಜ್ಯದ ಉದ್ದಗಲಕ್ಕೂ ವಿವಿಧ ಬಾವಿ ಮತ್ತು ಕೆರೆ, ನದಿ ಹಾಗೂ ಹಳ್ಳಗಳಿಗೆ ಅಣೆಕಟ್ಟುಗಳನ್ನು ನಿರ್ಮಿಸಿ ಅತ್ಯುತ್ತಮವಾದ ನೀರಾವರಿ ಪದ್ಧತಿಯನ್ನು ಜಾರಿಗೆ ತಂದಿದ್ದರು. ಅವುಗಳ ಸಮರ್ಪಕವಾದ ನಿರ್ವಹಣೆಗೆ ಸೂಕ್ತವಾದ ಏರ್ಪಾಡುಗಳನ್ನು ಸಹ ಮಾಡಿದ್ದರು. ಇವುಗಳು ಕೆಲವೊಮ್ಮೆ ಅತಿವೃಷ್ಟಿಯ ವಿಕೋಪ ಕ್ಕೊಳಗಾಗಿ ಅಲ್ಲಲ್ಲಿ ಒಡೆದೋ ಇಲ್ಲವೇ ಹೂಳು ತುಂಬಿಯೋ ಅಥವಾ ಶತ್ರು ದಾಳಿಯ ವಿಧ್ವಂಸಕ ಕೃತ್ಯಗಳಿಗೋ ಬಲಿಯಾಗಿ ಕಾರ್ಯಹೀನವಾಗುತ್ತಿದ್ದವು. ಇಂತಹ ದುರಂತ ಘಟನೆಗೊಳಗಾದ ಕೆರೆಗಳು ಹಾಗು ರಾಜ -ಮಹಾರಾಜರು, ಮಂತ್ರಿಗಳು, ದಂಡ ನಾಯಕರು, ಮಹಾಜನಗಳು ಮತ್ತು ಪ್ರಜೆಗಳು ಅವುಗಳನ್ನು ದುರಸ್ತಿಮಾಡಿಸುವ, ಹೂಳು ತೆಗೆಸುವ ಮತ್ತು ನಿರ್ವಹಣೆಯ ಕ್ರಮಗಳನ್ನು ಅನೇಕ ಶಾಸನಗಳಲ್ಲಿ ಪ್ರಸ್ತಾಪಿಸಲಾಗಿದೆ.

ಕೋಲಾರ ಜಿಲ್ಲೆಯ ಮುಳಬಾಗಿಲಿನ ನಾಚಾರಮ್ಮ ದೇವಸ್ಥಾನದ ಪಕ್ಕದ ಗುಂಡುಗಲ್ಲಿನ ಮೇಲಿರುವ ಸಂಗಮ ವಂಶದ ಮೊದಲನೆಯ ದೇವರಾಯನ ರಾಜ್ಯಾಡಳಿತದ ಕಾಲದ ಶಕ 1339 (ಕ್ರಿ. ಶ. 1416) ರ ಧರ್ಮ ಶಾಸನವು ಒಡೆದು ಹೋದ ಅಣೆಕಟ್ಟು ಹಾಗೂ ಅದರ ದುರಸ್ತಿಯ ಬಗ್ಗೆ ಉಲ್ಲೇಖಿಸುತ್ತದೆ. ಕಟರಹಳ್ಳಿಯ ಸೀಮೆಯಲ್ಲಿ ಪಾಲಾರ ನದಿಗೆ ಕಟ್ಟಿದ ಅರಳಿ ಅಣೆಕಟ್ಟು ಬಹಳ ಹಿಂದೆಯೇ ಒಡೆದು ನೆಲ ಸಮನಾಗಿ ಹಾಳಾಗಿತ್ತು. ಮಹಾಜನರು ತಾವೇ ಸ್ವತಃ ಭಾರಿ ಮೊತ್ತದ ಹಣದಿಂದ ಈ ಶಿಥಿಲವಾದ ಅಣೆಕಟ್ಟನ್ನು ಕೆರೆಯಾಗಿ ಪುನರ್ ನಿರ್ಮಿಸಿದರು ಹಾಗೂ ಮುಲುವಾಯು ವೆಂಬ ಅಗ್ರಹಾರವನ್ನು ಸಹ ಸ್ಥಾಪಿಸಿದರು (ಎಕ ಸಂ. ಹತ್ತು 1905 ಮುಳಬಾಗಲು ಶಾ. ಸ 7)

ಇದೇ ದೇವರಾಯನ ಶಕ 1332 (ಕ್ರಿ. ಶ. 1410) ರ ಹಾಗೂ ಸಂಗಮ ವಂಶದ ಇನ್ನೋರ್ವ ರಾಜ ಇಮ್ಮಡಿ ದೇವರಾಯನ ಕಾಲದ ಶಕ 1346 (ಕ್ರಿ. ಶ. 1424) ರ ಹರಿಹರದ ಶಾಸನಗಳು ಹರಿದ್ರಾ ನದಿಗೆ ಕಟ್ಟಿದ ಅಣೆಕಟ್ಟಿನ ಮತ್ತು ಅದರ ಪುನರ್ ನಿರ್ಮಾಣದ ವಿವರಗಳನ್ನೀಡುತ್ತವೆ. ದೇವರಾಯನ ಆದೇಶದಂತೆ ಹರಿಹರದ ಮಹಾ ಜನರು ತಮ್ಮ ಸ್ವಂತ ಹಣದಿಂದ ಹರಿಹರದ ಸೀಮೆಯಲ್ಲಿ ತುಂಗಭದ್ರೆಯ ಉಪನದಿ ಹರಿದ್ರಾ ನದಿಗೆ ಅಣೆಕಟ್ಟನ್ನು ಕಟ್ಟಿಸಿ ಈ ಕಟ್ಟೆಯಿಂದ ಹರಿಹರದವರೆಗೆ ಕಾಲುವೆಯನ್ನು ನಿರ್ಮಿಸುತ್ತಾರೆ. ಈ ಕಾಲುವೆಯು ಬನ್ನಿಕೋಡು, ಬೆಳುವಾಡಿ, ಹನಗವಾಡಿ, ಹರಿಹರ, ಗತ್ತೂರು ಹಾಗೂ ಗಂಗನರಸಿ ಗ್ರಾಮಗಳ ಭೂಮಿಗಳಿಗೆ ನೀರುಣಿಸುತ್ತಿತ್ತು.. ವೀರ ಪ್ರತಾಪ ದೇವರ ಮಹಾ ಪ್ರಧಾನಿ ನಾಗಣ್ಣ ದಂಡನಾಯಕರ ನಿರ್ದೇಶನದಂತೆ ಅಮಾತ್ಯ ಬುಲ್ಲರಾಜನ ನೇತೃತ್ವದಲ್ಲಿ ಅಣೆಕಟ್ಟನ್ನು ನಿರ್ಮಿಸಲಾಗಿರುತ್ತದೆ. ಈ ಕಾಲುವೆ ಹಾಗೂ ನೀರಾವರಿಯಿಂದಾಗುವ ಪ್ರಯೋಜನ ಮತ್ತು ಲಾಭಾಂಶಗಳನ್ನು ದೇವಸ್ಥಾನ ಹಾಗೂ ಮಹಾಜನರು ಕ್ರಮವಾಗಿ ಮೂರನೆಯ ಎರಡು ಮತ್ತು ಮೂರನೆಯ ಒಂದು ಭಾಗದಷ್ಟು ಹಂಚಿಕೊಳ್ಳಬೇಕೆಂದು ಮತ್ತು ಅಣೆಕಟ್ಟಿನ ನಿರ್ವಹಣೆ, ದುರಸ್ತಿಯ ಖರ್ಚು -ವೆಚ್ಚವನ್ನು ಅದೇ ಅನುಪಾತದಲ್ಲಿ ಭರಿಸಬೇಕೆಂದು ಸಹ ನಿರ್ಧರಿಸಲಾಗಿತ್ತು. (ಎಕ ಸಂ. ಹನ್ನೊಂದು 1902 ದಾವಣಗೆರೆ ಶಾ. ಸ. 23) ಇತ್ತೀಚೆಗಷ್ಟೆ ದೇವರ ಬೆಳಕೆರೆ ಗ್ರಾಮದ ಹತ್ತಿರ ಹರಿದ್ರಾ ನದಿಯ ಕಟ್ಟೆ ಭಾಗದಲ್ಲಿ ಚದುರಿ ಬಿದ್ದಿರುವ ಕಣ ಶಿಲೆಯ ನೀಳವಾದ ಕಲ್ಲುಗಳ ಸ್ಥಳದಲ್ಲಿಯೇ ಈ ಅಣೆಕಟ್ಟನ್ನು ನಿರ್ಮಿಸಲಾಗಿತ್ತೆಂದು ಪ್ರತಿಪಾದಿಸಲಾಗಿದೆ (ಜಗದೀಶ 2004). ದುರದೃಷ್ಟವಶಾತ್, ಈ ಅಣೆಕಟ್ಟು ಅದನ್ನು ಕಟ್ಟಿಸಿದ 14 ವರ್ಷಗಳಲ್ಲಿಯೇ ಒಡೆದು ಅಲ್ಲಿಯ ಜನರ ಜೀವನೋಪಾಯಕ್ಕೆ ತೊಂದರೆಯಾಗಿತ್ತು. ಮಹಾ ಪ್ರಧಾನಿ ನಾಗಣ್ಣ ದಂಡನಾಯಕರ ನಿರ್ದೇಶನದಂತೆ ಬುಲ್ಲರಸ (ಬುಲ್ಲರಾಜ) ನು ಸುಸ್ಥಿತಿಯಲ್ಲಿ ರುವ ಯಾರು ಇದನ್ನು ದುರಸ್ತಿ ಮಾಡಿಸಬಹುದೆಂದು ವಿಚಾರಿಸುವಾಗ ಸಮಸ್ತ ಸೈನ್ಯಾಧಿಪತಿ ಬೊಪ್ಪದೇವನ ಪುತ್ರ ಚಾಮ -ನ್ರಿಪಾಲನೇ ಸೂಕ್ತನೆಂದು ಭಾವಿಸಿ, ಆತನನ್ನು ಭೇಟಿ ಮಾಡಿ ಈ ಅಣೆಕಟ್ಟನ್ನು ದುರಸ್ತಿಮಾಡಿಸಲು ಪ್ರೇರೇಪಿಸುತ್ತಾನೆ. ಸೈನ್ಯಾಧಿಪತಿಯು ಅದರ ವೆಚ್ಚವನ್ನು ಭರಿಸಲೊಪ್ಪಿಕೊಂಡಾಗ ಬುಲ್ಲರಸನು ಈ ಅಣೆಕಟ್ಟನ್ನು ಪುನರ್ ನಿರ್ಮಿಸುತ್ತಾನೆ (ಎಕ ಸಂ. ಹನ್ನೊಂದು 1902 ದಾವಣಗೆರೆ ಶಾ. ಸ. 29).

ತುಳುವ ವಂಶದ ಕೃಷ್ಣದೇವರಾಯನ ಕಾಲದ ಶಕ 1449 (ಕ್ರಿ. ಶ. 1527)ರ ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ಗುಡಿಹಳ್ಳಿಯ ಶಾಸನವು ಚಿನ್ನಭಂಡಾರದ ಪುತ್ರ ರಾಯಸ್ತ ನಾರಾಯಣಪ್ಪನು ಕೊಟ್ಟೂರು ಸೀಮೆಯ ಒಳಿತದ ನೊಣಬನರಸಿಕೆರೆ ಆಳುತ್ತಿರುವಾಗ ಅವನ ಕಾರ್ಯಕರ್ತ ನಾಗರಸಯನು ಕೊಟ್ಟೂರು ಸೀಮೆಯ ಪಾರುಪತ್ಯ ಮಾಡುವಾಗ ರಂಗದಾಸನ ಮಗ ತಿಮ್ಮರಸನು ಅರಸಿಕೆರೆಯ ಅಧಿಕಾರವನ್ನು ಮಾಡುತ್ತಿದ್ದಾಗ ನಾಗರಸಯನ ಆದೇಶದಂತೆ ರಂದದಾಸನ ಪುತ್ರ ತಿಮ್ಮರಸನು ಅರಸಿಕೆರೆಯ

ಕೆರೆಯ ತೂಬು ಮುರಿದು ಕೆಟ್ಟಾಗ ಅದನ್ನು ಬಿಚ್ಚಿ ಬಲುಮಾನದ ಕಲ್ಲು ಹಾಗೂ ಗಾರೆಗಳಿಂದ ಪುನಃ ಕಟ್ಟಿಸಿ ಜೀರ್ಣೋದ್ಧಾರ ಮಾಡಿದನೆಂದು ಪ್ರಸ್ತಾಪಿಸುತ್ತದೆ (ಎಸ್ ಐ ಐ ಸಂ. ಒಂಬತ್ತು ಭಾ. ಎರಡು 1986 ಶಾ. ಸ. 522).

ಶಕ 1635 (1435) (ಕ್ರಿ. ಶ. 1513) ರ ಕೃಷ್ಣದೇವರಾಯನ ಕಾಲದಲ್ಲಿ ಬರೆಯಲಾದ ಬೆಂಗಳೂರು ಜಿಲ್ಲೆಯ ಚನ್ನಪಟ್ಟಣ ತಾಲೂಕಿನ ಹೊಟ್ಟೆಗನ ಹೊಸಹಳ್ಳಿಯ ಇನ್ನೊಂದು ದತ್ತಿ ಶಾಸನವು ಕೆರೆಗಳ ದುರಸ್ತಿ ಹಾಗೂ ಅವುಗಳ ನಿರ್ವಹಣೆಗಳ ಬಗ್ಗೆ ಉಲ್ಲೇಖಿಸುತ್ತದೆ. ದೇವರಾಯ-ಪಟ್ಟಣದ ತಿಮ್ಮಣ್ಣ ಒಡೆಯರ ಪುತ್ರ ಕೆಂಚ ಸೋಮಣ್ಣ-ಒಡೆಯನು ಒಡೆದು ಹೋಗಿ ದುರಸ್ತಿ ಮಾಡಲಾಗಿದ್ದ ಕೂಡಲೂರಿನ ಹಿರಿಯ ಕೆರೆಗೆ ನಾಲ್ಕು ಮತ್ತು ಮೊಗೆಹಳ್ಳಿಯ ಕೆರೆಗೆ ಎರಡು ಎತ್ತಿನ ಬಂಡಿಯಷ್ಟು ಮಣ್ಣನ್ನು ಪೂರೈಸಲು ಹಾಗೂ ಅವುಗಳ ನಿರ್ವಹಣೆಗೆ ಮಂಗಳೇಶ್ವರ ದೇವರ ಸಾನಿಧ್ಯದಲ್ಲಿ ಮೇಲಣಿ ಹೊಸಹಳ್ಳಿ ಗ್ರಾಮವನ್ನು ಹತ್ತಿಯಾಗಿ ನೀಡುತ್ತಾನೆ (ಎಕ ಸಂ. ಒಂಬತ್ತು 1905 ಚನ್ನಪಟ್ಟಣ ಶಾ. ಸ. 156).

ಕರ್ನಾಟಕದಂತೆ ಆಂಧ್ರ ಪ್ರದೇಶದ ಶಾಸನಗಳಲ್ಲಿಯೂ ಕೆರೆ ಹಾಗೂ ಅವುಗಳ ದುರಸ್ತಿಯ ಉಲ್ಲೇಖಗಳಿವೆ. ಅನಂತಪುರ ಜಿಲ್ಲೆಯ ಮಡಕಸಿರ ತಾಲೂಕಿನ ತಮ್ಮಡಹಳ್ಳಿಯ ಕೆರೆ ಏರಿಯ ಮೇಲಿನ ತುಳುವ ವಂಶದ ಇನ್ನೋರ್ವ ರಾಜ ಅಚ್ಯುತ ರಾಯನ ಕಾಲದ ಶಕ 1436 (ಕ್ರಿ. ಶ. 1541) ರ ದತ್ತಿ ಶಾಸನವು ತಮ್ಮಡಹಳ್ಳಿಯ ಕೆರೆಯು ಮೂರು ಸ್ಥಳಗಳಲ್ಲಿ ಒಡೆದುಹೋಗಿದ್ದನ್ನು ಪ್ರಸ್ತಾಪಿಸುತ್ತದೆ. ಇದೇ ತಮ್ಮಡಹಳ್ಳಿಯ ಚನ್ನಗೌಡ ಮತ್ತು ತಿಮ್ಮಗೌಡರು ತಮ್ಮ ಸ್ವಂತ ಹಣದಿಂದ ಒಡೆದು ಖಿಲವಾದ ಕೆರೆಯನ್ನು ದುರಸ್ತಿಮಾಡಿಸಿದರೆಂದು ಮತ್ತು ವೆಂಕಟಾದ್ರಿ ನಾಯಕರ ಕಾರ್ಯಕರ್ತ ತಿಪ್ಪರಾಜ ಮಹಾಅರಸು ಅವರಿಗೆ ಕಟ್ಟುಗೊಡಗಿಯಾಗಿ ಗದ್ದೆಯನ್ನು ಜೀವನಪರ್ಯಂತ ಉಪಯೋಗಿಸಲು ದತ್ತಿಯಾಗಿ ನೀಡಿದರೆಂದು ತಿಳಿಸುತ್ತದೆ (ಎಸ್ಐಐ ಸಂ. ಒಂಬತ್ತು ಭಾ. ಎರಡು 1986 ಶಾ. ಸ. 597).

ಶಕ 1535 (ಕ್ರಿ. ಶ. 1613) ರ ಬಹುಶಃ ಅರವಿಡು ವೆಂಕಟಪತಿರಾಯನ ಕಾಲದ ತಿರುಮಲದ ವರದರಾಜ ಗುಡಿಯ ಎರಡನೆಯ ಪ್ರಾಕಾರದ ಪಡಿ -ಪೊಟಿನಲ್ಲಿರುವ ತಮಿಳು ಶಾಸನವು ನಟ್ಟುಕ-ಕಾಲುವೆಯ ದುರಸ್ತಿಯ ಬಗ್ಗೆ ತಿಳಿಸುತ್ತದೆ. ಪುಂಡಿ ಗ್ರಾಮದಲ್ಲಿ ನಿರಂತರವಾದ ಮಳೆಯಿಂದ ಈ ಕಾಲುವೆಯಲ್ಲಿ ಹೂಳು ಶೇಖರಣೆಯಾಗಿ ಅದು ಕಾರ್ಯಹೀನವಾಗಿತ್ತು. ವೆಂಕಟಪತಿದೇವ ಮಹಾರಾಜರ ಸಮ್ಮುಖದಲ್ಲಿ ಚಿನ್ನಯ್ಯ ನಾಯಕ್ಕರನ ಮಗ ಸಿಂಗ (ಯ) ನಾಯಕ್ಕರಿಗೆ ಈ ಕಾಲುವೆಯ ಹೂಳು ತೆಗೆಯಲು ಒಕ್ಕಳಿಕೆಯನ್ನು ಕೊಟ್ಟು ನಂತರ ಕಾಲುವೆಯನ್ನು ಸರಿಪಡಿಸಲಾಯಿತು. ಈ ನೀರಾವರಿಯಿಂದ ಕೃಷಿ ಮಾಡಿದ ಭೂಮಿಯ ಉತ್ಪನ್ನವನ್ನು ತಿರುಮಲ ದೇವಸ್ಥಾನದ ದೇವರ

ಪ್ರಸಾದದ ಸೇವೆಗೆ ದತ್ತಿಯಾಗಿ ನೀಡಲಾಯಿತು (ಟಿಟಿಡಿಐ ಸಂ. ಆರು ಭಾ. ಒಂದು ಶಾ. ಸ. 17/824 ಟಿಟಿ).

ಅನಂತಪುರ ಜಿಲ್ಲೆಯ ಧರ್ಮಾವರಂ ತಾಲೂಕಿನ ದಾಡಲೂರಿನ ಪೊತಲರಾಜು ದೇವಸ್ಥಾನದ ಶಕ 1630 (ಕ್ರಿ. ಶ. 1708-09) ರ ತೆಲುಗು ಶಾಸನವು ಭಾದ್ರಪದ ಹತ್ತನೆಯ ದಿನ ರವಿವಾರದ ರಾತ್ರಿಯ ವೇಳೆಯಲ್ಲಿ ಎರಡು ಕೆರೆಗಳು ಒಡೆದವೆಂದು ಹಾಗೂ ಪೊತುಲರಾಜ ದೇವಸ್ಥಾನದ ಆವರಣ ಗೋಡೆಯು ಕೊಚ್ಚಿ ಹೋಯಿತೆಂದು ಹಾಗು ವೆಂಕಟಪತಿ ನಾಯನಿಂಗಾರೆಂಬುವವರು ದುರಸ್ತಿ ಮಾಡಿಸಿರಬಹುದೆಂದು ಪ್ರಸ್ತಾಪಿಸುತ್ತದೆ (ಎರಿಇಎ 1912 ಶಾ. ಸ. 61).

ಶಕ 1496 (ಕ್ರಿ. ಶ. 1574) ರ ಕರ್ನೂಲ್ ಜಿಲ್ಲೆಯ ನಂದಿಕೊಟ್ಕೂರ ತಾಲೂಕಿನ ಶ್ರೀಶೈಲಮನ ಕೆರೆಯ ಹತ್ತಿರವಿರುವ ಶಾಸನವು ತಿರುಮಲದೇವನ ಪುತ್ರ ರಾಮರಾಜಯ್ಯ ದೇವನ ಕಾರ್ಯಕರ್ತ ದಂತಿಕಂಟಿ ಲಿಂಗಪ್ಪಣ್ಣನು ವೀರಶೈವ ಶಾಂತಭಿಕ್ಷವೃತ್ತಿ-ಅಯ್ಯನ ಆದೇಶದ ಮೇರೆಗೆ ಮಲ್ಲಿಕಾರ್ಜುನ ದೇವಸ್ಥಾನದ ಪ್ರಾಕಾರದ ಪಶ್ಚಿಮಕ್ಕಿದ್ದ ಭೋಗಾವತಿ ಕೆರೆಯ ಏರಿಯನ್ನು ದುರಸ್ಥಿ ಮಾಡಿಸಿದನೆಂದು ತಿಳಿಸುತ್ತದೆ (ಎಸ್ ಐ ಐ ಸಂ. ಹದಿನಾರು 1972ಶಾ. ಸ. 280).

ಚಿತ್ತೂರು ಜಿಲ್ಲೆಯ ಮದನಪಲ್ಲಿ ತಾಲೂಕಿನ ಬಸ್ಸಿನಕೊಂಡದ ಇಸಕನುತಿಪಲ್ಲಿ ಕೆರೆಯ ಪೂರ್ವಕ್ಕಿರುವ ಬಂಡೆಗಲ್ಲಿನ ಮೇಲಿನ ಶಕ 1614 ರ ಶಾಸನವು ಒಡೆದುಹೋದ ಕೆರೆಯ ದುರಸ್ತಿಯನ್ನು ಪ್ರಸ್ತಾಪಿಸುತ್ತದೆ (ಎಸ್ಐಐ ಸಂ. ಹತ್ತು 1986 ಶಾ. ಸ. 771).

ಅಗ್ನಿ ಅನಾಹುತಗಳು

ಶಕ 1319 (ಕ್ರಿ. ಶ. 1397) ರ ಬೇಲೂರಿನ ಚನ್ನಕೇಶ್ವರ ದೇವಸ್ಥಾನದ ಪುಷ್ಕರಣಿಯ ದಕ್ಷಿಣಕ್ಕಿರುವ ಶಾಸನವು ಇಮ್ಮಡಿ ಹರಿಹರನು ಅಭಿನವ ಮಹಾರಾಜಧಾನಿ ಎಂದು ವರ್ಣಿಸಿದ ವಿಜಯನಗರದಿಂದ ರಾಜ್ಯಭಾರಮಾಡುತ್ತಿದ್ದನೆಂದು ಉಲ್ಲೇಖಿಸುತ್ತದೆ ಹಾಗೂ ಅವನ ಮಂತ್ರಿಯಾದ ವಿಜಯ ಗುಂಡನಾಥನ ಗುಣಗಾನವನ್ನು ಮಾಡುತ್ತದೆ. ಕಲಬುರ್ಗಿಯ ಗಂಗ -ಸಾಲಾರನು ದೇವಸ್ಥಾನದ ಬಾಗಿಲಮೇಲಿನ ಗೋಪುರವನ್ನು ಧ್ವಂಸ ಮಾಡಿ ಸುಟ್ಟನೆಂದು ಉಲ್ಲೇಖಿಸುತ್ತದೆ. ಹರಿಹರ ರಾಜನ ಆದೇಶದಂತೆ ವಿಜಯ ಗುಂಡನಾಥನು ಹೊಸದಾಗಿ ಏಳಂತಸ್ತಿನ ಗೋಪುರವನ್ನು ನಿರ್ಮಿಸಿ ಹೊಯ್ಸಳ ವಿಷ್ಣು ವರ್ಧನ ಬಿಟ್ಟಿದೇವನ ಕಾಲದಲ್ಲಿ ಚನ್ನಕೇಶನ ದೇವರಿಗೆ ಸಲ್ಲುತ್ತಿದ್ದ ಅನೇಕ ಪೂಜಾವಿಧಿ ಗಳನ್ನು ಯಥಾವತ್ತಾಗಿ ಪುನರ್ ಸ್ಥಾಪಿಸಿ ಹಾಗೂ ದತ್ತಿಗಳನ್ನು ನವೀಕರಿಸಿದನೆಂದು ಈ ಶಾಸನವು ಹೇಳುತ್ತದೆ (ಎಕ ಸಂ ಒಂಬತ್ತು 1990 ಬೇಲೂರು ಶಾ. ಸ. 144)

ಅಚ್ಯುತರಾಯನ ಆಡಳಿತಾಧಿಕಾರದ ಅವಧಿಯ ಶಕ 1465(ಕ್ರಿ. ಶ. 1542)ರ ಭಟ್ಕಳದ ಪಾರ್ಶ್ವನಾಥ ಬಸದಿಯ ಹತ್ತಿರುವಿರು ವೀರಗಲ್ಲು ದೇವರಸ -ಒಡೆಯನ ಸೊಸೆ ಮಹಾಮಂಡಲೇಶ್ವರ ಸಂಗೀತಪುರವರಾಧೀಶ್ವರ ಚನ್ನಾದೇವಿ ಅಮ್ಮ ಹಾಡುವಳಿ, ಭಟ್ಕಳ ಮತ್ತು ಬೇರೆ ರಾಜ್ಯಗಳ ಆಡಳಿತಾಧಿಕಾರ ಮಾಡುತ್ತಿದ್ದಾಗ, ಕಪಿತಮೇರನ ನೇತೃತ್ವದಲ್ಲಿ ಪಾರಂಗದವರು ಭಟ್ಕಳವನ್ನು ಮುತ್ತಿಗೆ ಹಾಕಿ ನಗರವನ್ನು ಸುಟ್ಟು ಅರಮನೆಯತ್ತ ಧಾವಿಸಿದಾಗ ಅವರನ್ನು ನರಣದೇವ -ನಾಯಕನ ಸಹೋದರ ಹಾಗೂ ಲಿಂಗ -ನಾಯಕನ ಅಳಿಯನಾದ ಯಂಕಪ್ಪ-ನಾಯಕನು ಅರಮನೆಯ ದ್ವಾರದ ಹತ್ತಿರ ತಡೆದು, ಕಾದಾಡಿ, ಶತ್ರುಗಳನ್ನು ಕೊಂದು ತಾನೂ ಸ್ವರ್ಗಸ್ಥನಾದನೆಂದು ವಿವರಿಸುತ್ತದೆ (ಆರಿಕರಿಬಾಪ್ರ 1930-40ಶಾ. ಸ. 75)

ಶಕ 1311 (ಕ್ರಿ. ಶ. 1389) ರ ಇಮ್ಮಡಿ ಬುಕ್ಕರಾಯನ ಕಾಲದ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲೂಕಿನ ಹಟ್ಟಿಯಂಗಡಿಯ ಚಂದ್ರನಾಥಸ್ವಾಮಿ ಬಸದಿಯಲ್ಲಿರುವ ಶಾಸನವು ಮಹಾಪ್ರಧಾನ ಬೈಚಪ್ಪ ದಂಡನಾಯಕನ ಮಗ ಇರುಗಪ್ಪ-ದಂಡನಾಯಕ ಬಾರಕೂರು ರಾಜ್ಯವನ್ನಾಳುವಾಗ ಉಭಯಾಚಾರ್ಯರ ನಿರ್ದೇಶನದಂತೆ ಬೆಂಕಿಯಿಂದ ನಾಶವಾದ ದಾಖಲೆಯನ್ನು ಮಧ್ಯದ ಗುಡಿಯಲ್ಲಿ ಸುರಕ್ಷಿತವಾಗಿಡಲು ಸಣ್ಣ ಕಲ್ಲುಗಳ ಮೇಲೆ ಅಚ್ಚುಕಟ್ಟಾಗಿ ರಚಿಸಲಾಯಿತೆಂದು ಪ್ರಸ್ತಾಪಿಸುತ್ತದೆ (ಆರಿಇಎ 1970-71 ಶಾ. ಸ. 210).

ಆಕಸ್ಮಿಕ ಸಾವು -ನೋವು

ಹುಟ್ಟು ಅನಿಶ್ಚಿತ ಆದರೆ ಸಾವು ನಿಶ್ಚಿತ ಇದು ಸರ್ವ ವಿದಿತ. ಆದರೂ ಈ ನಿಶ್ಚಿತತೆಯಲ್ಲಿ ಅನಿಶ್ಚಿತತೆ ಇದೆ. ಕಾಡು ಪ್ರಾಣಿಗಳಿಗೆ ಆಹುತಿ. ವಿಷ ಜಂತುಗಳಿಗೆ ಬಲಿ, ವೈರಿ, ಕಳ್ಳ ಹಾಗೂ ದರೋಡೆಕಾರರ ಅನಿರೀಕ್ಷಿತ ದಾಳಿಗಳಿಗೆ ಅಮಾಯಕರು, ಪ್ರಜೆಗಳು ಸೈನಿಕರು ಬಲಿಯಾದರೆ ಇನ್ನು ಕೆಲವರು ಇವರೊಡನೆ ಹೋರಾಡಿ ಸ್ವರ್ಗಸ್ಥರಾಗಿದ್ದಾರೆ.

ಮೊದಲನೆಯ ದೇವರಾಯನ ಕಾಲದ ಶಕ 1330 (ಕ್ರಿ. ಶ. 1407) ಉಡುಪಿ ಜಿಲ್ಲೆಯ ಮಣಿಪುರದ ಶಾಸನವು ಬಾಚಣ್ಣ -ಒಡೆಯನು ಬಾರಕೂರು ರಾಜ್ಯದ ಅಧಿಕಾರ ಮಾಡುವಾಗ ಅವನ ಸೈನಿಕರು ವಿನಾಕಾರಣ ಅನ್ಯಾಯವಾಗಿ ಹಸಬ -ಮೊಯ್ಲಿಯನ್ನು ಕೊಂದರೆಂದು ಹಾಗೂ ಬಾಚಣ್ಣನ ನಿರ್ದೇಶನದಂತೆ ದಂಡಪ್ಪ -ಅಧಿಕಾರಿ ಹಸಬು-ಮೊಯ್ಲಿಯ ಪರಿವಾರಕ್ಕೆ ಭೂಮಿಯನ್ನು ಪರಿಹಾರವೆಂದು ಕೊಟ್ಟರೆಂದು ಪ್ರಸ್ತಾಪಿಸುತ್ತದೆ (ಎಸ ಐಐ ಸ. ಇಪ್ಪತ್ತೇಳು ಶಾ. ಸ. 84).

ಬೆಂಗಳೂರು ಜಿಲ್ಲೆಯ ಚನ್ನಪಟ್ಟಣ ತಾಲೂಕಿನ ಮಾಲೂರು -ಪಟ್ಟಣದ ಲಿಂಗೇಗೌಡರ ಹೊಲದಲ್ಲಿರುವ ವೀರರ ಗುಡಿಯ ಉತ್ತರಕ್ಕಿರುವ ಮೊದಲನೆಯ ದೇವರಾಯನ

ಕಾಲದ ಶಕ 1236(ಕ್ರಿ. ಶ. 1414) ರ ಶಾಸನವು ಕೆಳಲೆ ನಾಡಿನ ಮಹಾಪ್ರಭು ಕಿತ್ತಿಗೌಡನ ಮಕ್ಕಳಾದ ಮಂಜಪ್ಪ ಹಾಗೂ ದೇವೇಗೌಡರು ಯಲೆಕೇರಿಗೆ ಹೋಗುವಾಗ ಕಾಳತಮ್ಮ ಹುಚ್ಚನವರ ಬೊಮ್ಮಕನ ಮಾರಸಿಂಗನು ಅವರ ಮೇಲೆ ಆಕ್ರಮಣ ಮಾಡಿದಾಗ ಅವರಿಬ್ಬರು ಕಾದಾಡಿ ಅವನ ತಲೆಯನ್ನು ಕತ್ತರಿಸಿ ಸ್ವರ್ಗಸ್ಥರಾದರೆಂದು ಮತ್ತು ಅವರ ಕಿರಿಯ ಸಹೋದರ ಸೋನ್ನಪ್ಪ ಹಾಗೂ ಅವನ ಪುತ್ರರಾದ ಚಿಕ್ಕ ಸೋನ್ನಪ್ಪ ಮತ್ತು ದೇವಪ್ಪರು ಈ ಶಾಸನವನ್ನು ಸ್ಥಾಪಿಸಿದರೆಂದು ಹಾಗೂ ಗುಳಿ ಅಲ್ಲಪ್ಪನು ಅದನ್ನು ಬರೆದನೆಂದು ಉಲ್ಲೇಖಿಸುತ್ತದೆ (ಎಕ ಸಂ. ಒಂಬತ್ತು 1905 ಚನ್ನಪಟ್ಟಣ ಶಾ. ಸ. 148).

ಇಮ್ಮಡಿ ದೇವರಾಯನ ಕಾಲದ ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ಮರಳುಗಡ್ಡೆಯ ಶಕ 1365(ಕ್ರಿ. ಶ. 1442)ರ ವೀರಗಲ್ಲು ಎಡೆನಾಡಿನ ಮುಖ್ಯವಾದ ಕುಪ್ಪೆಯ ಹಳ್ಳಿ ಮಳಲಗಡೆಯ (ಮರಳುಗಡ್ಡೆಯ)ಬೊಮ್ಮಗೌಡನು ಬನವಾಸಿಗೆ ಮುತ್ತಿಗೆ ಹಾಕಿದಾಗ ಸಾಲೆಯನ ಬಯಿಚಣ್ಣನು ಈ ಅನಿರೀಕ್ಷಿತ ಕಾದಾಟದಲ್ಲಿ ಮಡಿದು ಸುರಲೋಕಪ್ರಾಪ್ತನಾದನೆಂದು ಮತ್ತು ಅವನ ಮಕ್ಕಳಿಗೆ ಕೆಲವು ಭೂಮಿಗಳನ್ನು ನೆತ್ತರು -ಗೋದಾನವೆಂದು ಕೊಡಲಾಯಿತೆಂದು ವಿವರಿಸುತ್ತದೆ (ಎಕ ಸಂ. ಎಂಟು 1904ಸೊರಬ ಶಾ. ಸ. 489).

ಶಕ 1428(ಕ್ರಿ. ಶ. 1506) ರ ಕೃಷ್ಣದೇವರಾಯನ ಹಿರಿಯ ಸಹೋದರ ವೀರನರಸಿಂಹನ (?) ಕಾಲದ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದ ವಾಜನಹಾಳಿನ ವೀರಗಲ್ಲು ಬಯಿಚಂಗನೆಂಬುವವನು ಶತ್ರುಗಳ ಅನಿರೀಕ್ಷಿತ ದಾಳಿಯಲ್ಲಿ ಕಾದಾಡಿ ವೀರಮರಣವನ್ನಪ್ಪಿದನೆಂದು ಹೇಳುತ್ತದೆ (ಎಕ ಸಂ. ನಾಲ್ಕು 1975 ಪಿರಿಯಾಪಟ್ಟಣ ಶಾ. ಸ. 3).

ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ದೂಗೂರಿನ ಪಾರ್ವತಿ ದೇವಸ್ಥಾನದ ಮುಂದಿರುವ ಇಮ್ಮಡಿ ಹರಿಹರರಾಯನ ಕಾಲದ ಶಕ 1310 (ಕ್ರಿ. ಶ. 1388-89) ರ ಮಾಸ್ತಿಕಲ್ಲು ಮುತ್ತುಗುಪ್ಪೆಯ ರಿಕ್ಕಟ ಚಿಕ್ಕಗೊಂಡನ ಮಗ ಕೊವಿಕಾರ ದೇವಯ್ಯ-ನಾಯಕನು ಸರ್ಪ ಕಚ್ಚಿ ಮಡಿದನೆಂದು ಹಾಗೂ ಅವನ ಧರ್ಮಪತ್ನಿ ಮುದ್ದನ ಕೆತಿ ಮಹಾಸತಿಯಾಗಿ ವೈಕುಂಠಪ್ರಾಪ್ತಳಾದಳೆಂದು ತಿಳಿಸುತ್ತದೆ (ಎಕ ಸಂ. ಎಂಟು 1904ಸೊರಬ ಶಾ. ಸ. 483).

ಮಲ್ಲಿಕಾರ್ಜುನ ಕಾಲದ ಶಕ 1338 (ಕ್ರಿ. ಶ. 1416) ರ ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ಕೋಳಿಸಾಲೆಯ ಸಿದ್ಧೇಶ್ವರ ದೇವಸ್ಥಾನ ಹತ್ತಿರದ ವೀರಗಲ್ಲು ಜೋಗಯ್ಯ -ನಾಯಕನು ಕೋಳಿಸಾಲೆ ಗ್ರಾಮದ ಮೇಲೆ ಮುತ್ತಿಗೆ ಹಾಕಿದಾಗ ಮಚಲಗೌಡನು ಅವನನ್ನು ಇರಿದು ಕುದುರೆಯನ್ನು ಹಿಡಿದು ಸ್ವರ್ಗಸ್ಥನಾದನೆಂದು ಪ್ರಸ್ತಾಪಿಸುತ್ತದೆ (ಎಕ ಸಂ. ಎಂಟು 1904ಸೊರಬ ಶಾ. ಸ. 562).

ಹಾವೇರಿ ಜಿಲ್ಲೆಯ ಹಿರೆಕೆರೂರ ತಾಲೂಕಿನ ಹಂಸಭಾವಿಯ ಹರಿಹನ ಕಾಲದ ವೀರಗಲ್ಲು ಸತ್ತಲಿಗೆ ನಾಡಿನ ಬಸಯನನ್ನು ಉಲ್ಲೇಖಿಸುತ್ತ ವ್ಯಕ್ತಿಯೊಬ್ಬನು ದಾಳಿಯಲ್ಲಿ ಸ್ವರ್ಗಸ್ಥನಾದನೆಂದು ಹೇಳುತ್ತದೆ (ಆರ್‌ಇಎ 1957-58 ಶಾ. ಸ. 276).

ಆಂತರಿಕ ಕಾದಾಟ ಮತ್ತು ಕಲಹಗಳು

ಸಾಮಾಜಿಕ ವ್ಯವಸ್ಥೆಯಲ್ಲಿ ಅನೇಕ ರೀತಿಯ ಆಂತರಿಕ ಕಾದಾಟ ಹಾಗೂ ಕಲಹ ಗಳು ಹಿಂದಿನ ಕಾಲದಿಂದ ನಡೆಯುತ್ತಲಿವೆ. ಗಡಿವಿವಾದ, ಪಶುಗಳ ಅತಿಕ್ರಮಣ, ಭೂಮಿ ಹಾಗೂ ಜನಸಂಪನ್ಮೂಲಗಳ ಪಾಲುದಾರಿಕೆಯಲ್ಲಿ ವಿವಿಧ ರೀತಿಯ ಭಿನ್ನಾಭಿಪ್ರಾಯಗಳು ಅಂಕುರಿಸಿ, ಬೆಳೆದು ವಿಭಿನ್ನ ರೂಪ ಪಡೆದು ಭಾರಿ ಪ್ರಮಾಣದ ಕಲಹಗಳಾಗಿ ಕೇವಲ ಜನರಿಗೆ ಸಾವು ನೋವುಗಳಾದರೆ ಸಂಧಾನಕಾರರು ಹಾಗು ಅಮಾಯಕರು ಸಹ ಇಂತಹ ಕಾದಾಟಗಳಲ್ಲಿ ಬಲಿಯಾಗಿದ್ದಾರೆ.

ಕಂಪಣ ಒಡೆಯನ ಕಾಲದ ಶಕ 1303(ಕ್ರಿ. ಶ. 1380)ರ ಬೆಳತೂರಿನ ಮಾಲಿಯೋಜನ ವಿನ್ಯಾಸದ ಹಾಗೂ ಬಯಿರೋಜ ಬರೆದ ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಅರುವನಹಳ್ಳಿಯ ವೀರಗಲ್ಲು ಅರುಹಹಳ್ಳಿ ಮತ್ತು ಆಲೂರಿನ ಜನರ ಕಾದಾಟದಲ್ಲಿ ಸಬೆಯೋಜನು ಸ್ವರ್ಗಸ್ಥನಾದನೆಂದು ಮತ್ತು ಅವನ ಮಾವ ಜಯಿಸೋಜನು ಈ ವೀರಗಲ್ಲನ್ನು ಸ್ಥಾಪಿಸಿದನೆಂದು ಪ್ರಸ್ತಾಪಿಸುತ್ತದೆ (ಎಕ ಸಂ. ಏಳು 1979ಮದ್ದೂರ ಶಾ. ಸ. 92).

ಹಾವೇರಿ ತಾಲೂಕಿನ ದೇವಿಹೊಸೂರಿನ ಕೆರೆಯ ಏರಿಯ ಮೇಲಿನ ಇಮ್ಮಡಿ ಹರಿಹನ ಕಾಲದ ಕ್ರಿ. ಶ. 1402 ರ ವೀರಗಲ್ಲು ಸಹೋದರರ ಆಂತರಿಕ ಕಲಹದಲ್ಲಿ ಮೃತರಾದ ವಿವರಗಳನ್ನು ನೀಡುತ್ತದೆ. ಲಾಯದಕೇರಿಯ ಮಲ್ಲಸೆಟ್ಟಿಯು ತನ್ನ ಹಿರಿಯ ಸಹೋದರ ಮುಗಿನ ಮಲ್ಲ-ಸೆಟ್ಟಿ ಜೊತೆ ಬ್ರಹ್ಮ-ಸೆಟ್ಟಿಯ ಸಮ್ಮುಖದಲ್ಲಿ ಜಗಳವಾಡಿ ಅವನನ್ನು ಕೊಲ್ಲುತ್ತಾನೆ. ಈ ಸೇಡನ್ನು ತೀರಿಸಿಕೊಳ್ಳಲು, ದೇವಿಯ (ಹೊಸ)ವೂರಿನ ಮಲ್ಲಿಬೊವನು ಮಲ್ಲ-ಸೆಟ್ಟಿಯ ಪುತ್ರ ಸಾಮಣ್ಣನ ಜೊತೆ ಕಾಗಿನೆಲೆಯ ಸೀಮೆಯ ಕಬ್ಬೂರಿನಲ್ಲಿ ಕಾದಾಡಿ ಅವನನ್ನು ಇರಿದು, ಕೊಂದು ತಾನೂ ಸುರಲೋಕಪ್ರಾಪ್ತನಾಗು ತ್ತಾನೆ. ಬ್ರಹ್ಮ - ಸೆಟ್ಟಿಯು ಈ ವೀರಗಲ್ಲನ್ನು ಸ್ಥಾಪಿಸುತ್ತಾನೆ (ಎಸ್ ಐ ಐ ಸಂ. ಹದಿನೆಂಟು 1975 ಶಾ. ಸ. 275).

ಇಮ್ಮಡಿ ಹರಿಹರನ ಕಾಲದ ಇನ್ನೊಂದು ಶಕ 1339 (ಕ್ರಿ. ಶ. 1417) ರ ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲೂಕಿನ ಚಳಗೆರಿಯ ಶಾಸನವು ಗಡಿವಿವಾದಲ್ಲಿ ಮಡಿದವರನ್ನು ಉಲ್ಲೇಖಿಸುತ್ತದೆ. ಮುದಿಯನೂರು ಹಾಗೂ ತಿರಳಗೆರೆ ಗ್ರಾಮಗಳ ಜನರ ಮಧ್ಯೆ ಗಡಿವಿವಾದವಿರುತ್ತದೆ. ಹರಿಹರನ ಅಧಿಕಾರಿ ಬುಲ್ಲರಸನು, ತಿರಳಗೆರೆಯ ಮಹಾಜನ, ಅಧಿಕಾರಿ, ಗೌಡ ಹಾಗೂ ಪ್ರಜೆಗಳು ಮತ್ತ ರಟ್ಟಹಳ್ಳಿಯ ನಾಡಗೌಡರು

ಈ ವಿವಾದವನ್ನು ವಿಚಾರಿಸುವಾಗ ಕೋಟೆಯ ನಾಯಕನ ಪುತ್ರ ಹಂಪಣ್ಣ -ಒಡೆಯನನ್ನು ಮೃತನ ಧರ್ಮಪತ್ನಿ ಹಾಗೂ ಮಕ್ಕಳಿಗೆ ಭೂಮಿಯನ್ನು ದಾನವಾಗಿ ಕೊಡಲು ವಿನಂತಿಸುತ್ತಾನೆ. ಹಂಪಣ್ಣ -ಒಡೆಯನು ತನ್ನ ಅಧಿಕಾರಿ ಬಾಯಿ -ನಾಯಕನಿಗೆ ಭೂಮಿ ಯನ್ನು ಕೊಡಲು ನಿರ್ದೇಶಿಸುತ್ತಾನೆ. ಈ ರೀತಿ ಚೌಡಯ್ಯನ ಸಹೋದರ ಕೇತಯನಿಗೆ ಭೂಮಿಯ ದಾನವನ್ನು ಕೊಡಲಾಗುತ್ತದೆ (ಎಸ್ ಐ ಐ ಸಂ. ಹದಿನೆಂಟು 1975 ಶಾ. ಸ. 415).

ಬೆಂಗಳೂರು ಜಿಲ್ಲೆಯ ಚನ್ನಪಟ್ಟಣ ತಾಲೂಕಿನ ಕುಕ್ಕೂರಿನ ವೀರರ ಗುಡಿಯ ಪಶ್ಚಿಮಕ್ಕಿರುವ ಇಮ್ಮಡಿ ದೇವರಾಯನ ಕಾಲದ ಶಕ 1348(ಕ್ರಿ. ಶ. 1426) ರ ಮತ್ತೊಂದು ವೀರಗಲ್ಲು ಕೊಡಂಬಳಿ ಗ್ರಾಮದ ಕಾಳಗೌಡನ ಪುತ್ರ ಬಾಯಚಪ್ಪ ಮತ್ತು ಲಕ್ಕಣ್ಣರ ನಡುವಿನ ಕಲಹದಲ್ಲಿ ಮಂಚೆಗೌಡನ ಮಗ ಕುಕ್ಕೂರಿನ ಗ್ರಾಮಾಧಿಪತಿ ದೇವಪ್ಪನು ಆಯುಧದಿಂದ ಗಾಯಗೊಂಡು ಮಡಿದನೆಂದು ಉಲ್ಲೇಖಿಸುತ್ತದೆ (ಎಕ ಸಂ. ಒಂಬತ್ತು 1905 ಚನ್ನಪಟ್ನ ಶಾ. ಸ. 162).

ಸದಾಶಿವರಾಯನ ಕಾಲದ ಶಕ 1486 (ಕ್ರಿ. ಶ. 1564)ರ ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲೂಕಿನ ಗಣಿಗನೂರಿನ ಶಾಸನವು ಸಂಜರಖಾನನು ಅನ್ಯಾಯ ವಾಗಿ ದೇವಪ್ಪಗೌಡನನ್ನು ಕೊಂದನೆಂದು ತಿಳಿಸುತ್ತದೆ. ದಿವಾಣದ ಒಡೆಯನು ದೇವಪ್ಪಗೌಡನ ಮಗ ಚಾಮರಸ ಒಡೆಯನಿಗೆ ಪರಿಹಾರವಾಗಿ, ಜಗದೇಕರಾಯ ಒಡೆಯರ ನಾಯಕತನಕ್ಕೊಳಪಟ್ಟ ಹದಿನಾಡು ಸೀಮೆಯ ಗಣಿಗನೂರು, ಬಸವಣ್ಣೊಡೆಯರಪುರ, ತೂಬಿಗೆರೆ ಮತ್ತು ಸೇನಗುಂಡಿಲ ಗ್ರಾಮಗಳನ್ನು ಜೀವನ ಪಾರಂಪರೆಯಾಗಿ ಅನುಭವಿಸಲು ರಕ್ತ -ಕೊಡಗಿ ಕೊಟ್ಟರೆಂದು ಉಲ್ಲೇಖಿಸುತ್ತದೆ (ಎಕ ಸಂ. ನಾಲ್ಕು 1975ಯಳಂದೂರು ಶಾ. ಸ. 179).

ಕಳ್ಳತನ ಹಾಗೂ ದರೋಡೆ

ಕಳ್ಳತನ ಹಾಗೂ ದರೋಡೆ ಅನಾದಿ ಕಾಲದಿಂದ ಇರುವ ಸಾಮಾಜಿಕ ಸಮಸ್ಯೆ. ಪ್ರಯಾಣಿಕರನ್ನು, ವ್ಯಾಪಾರಿಗಳನ್ನು ದೋಚುವುದು ಅಥವಾ ಮನೆಗಳಿಗೆ ನುಗ್ಗಿ ಕಳ್ಳತನ ಹಾಗೂ ದರೋಡೆ ಮಾಡುವುದು ಸರ್ವೇಸಾಮಾನ್ಯ. ವೈವಿಧ್ಯತೆಯ ಸಂಪತ್ತಿನಿಂದಿರುವ ದೇವಸ್ಥಾನಗಳೂ ಸಹ ಈ ಕೃತ್ಯಗಳಿಗೆ ಬಲಿಯಾಗಿವೆ. ಕಳ್ಳತನ ಮತ್ತು ದರೋಡೆಯನ್ನು ತಡೆಯಲು ಅವರೊಡನೆ ಕಾದಾಡಿ ಅನೇಕರು ವೀರಮರಣವನ್ನಪ್ಪಿದ್ದಾರೆ. ವಿಜಯನಗರ ಕಾಲದಲ್ಲಿ ಇಂತಹ ಘಟನೆಗಳು ನಡೆದಿವೆ.

ಮೈಸೂರು ಜಿಲ್ಲೆಯ ತಿ. ನರಸೀಪುರ ತಾಲೂಕಿನ ಓರಿಯೂರಿನ ಬುಕ್ಕಣ್ಣ ಒಡೆಯನ ಕಾಲದ ಶಕ 1207 / 1275 (ಕ್ರಿ. ಶ. 1354) ರ ಮಾರಿಗುಡಿಯ ದಕ್ಷಿಣಕ್ಕಿರುವ ವೀರಗಲ್ಲು ಬಹುಶಃ ರಾಮೋಜವೆಂಬವರು ಕಳ್ಳರ ಜೊತೆ ಕಾದಾಡಿ

ಸ್ವರ್ಗಸ್ಥರಾದರೆಂದು ಮತ್ತು ಹುಣಸೋಜನ ಪುತ್ರ ಮಾದೋಜನು ಈ ವೀರಗಲ್ಲನ್ನು ಸ್ಥಾಪಿಸಿದನೆಂದು ಪ್ರಸ್ತಾಪಿಸುತ್ತದೆ (ಎಕ ಸಂ. ಐದು 19676ತಿ. ನರಸೀಪುರ ಶಾ. ನ. 127).

ಮೊದಲನೆಯ ದೇವರಾಯನ ಕಾಲದ ಶಕ 1338 (ಕ್ರಿ. ಶ. 1416) ರ ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ಹರೂರಿನ ಮಾರಿ ದೇವಸ್ಥಾನದ ಹಿಂಭಾಗದಲ್ಲಿರುವ ಮತ್ತೊಂದು ವೀರಗಲ್ಲು ಸಿಗ್ಗೆಗೆ ಹೋಗುವ ದಾರಿಯಲ್ಲಿ ಹರವೂರಿನ ಮೂಲಿತಿವರಂ ನಾಯಕನು ಕಳ್ಳರೊಂದಿಗೆ ಹೋರಾಡಿ ಅವರನ್ನು ಅಂಬಿಗರ ವಶಕ್ಕೊಪ್ಪಿಸಿ ಮಡಿದು ಸುರಲೋಕಪ್ರಾಪ್ತನಾದನೆಂದು ತಿಳಿಸುತ್ತದೆ (ಎಕ ಸಂ. ಎಂಟು 1904ಸೊರಬ ಶಾ. ಸ. 168).

ಶಕ 1339 (ಕ್ರಿ. ಶ. 1417) ರ ಇಮ್ಮಡಿ ದೇವರಾಯನ ಕಾಲದ ಮಂಡ್ಯ ಜಿಲ್ಲೆಯ ಅದೇ ತಾಲೂಕಿನ ಪುರದ ಮಂಟದಲ್ಲಿರುವ ಮಾಸ್ತಿಕಲ್ಲು ಸತಿ ಸಹಗಮನ ಹಾಗೂ ಕಳ್ಳರನ್ನು ಕೊಂದ ವಿವರಗಳನ್ನೀಡುತ್ತದೆ. ಹಾಡ್ಲೆಯಪುರದ ಮಾರ -ಭಕ್ತನ ಪುತ್ರ ಬ(ಸವ) -ಭಕ್ತನು ಸ್ವರ್ಗಸ್ಥನಾದಾಗ ಅವನ ಮೂವರು ಧರ್ಮಪತ್ನಿಯರು ಸತಿ ಸಹಗಮನವನ್ನು ಸ್ವೀಕರಿಸುತ್ತಾರೆ. ಅದೇ ದಿನ ಬಸವ -ಭಕ್ತನ ಮಗ ಬೊಮ್ಮಣ್ಣನು ಪಶುಗಳನ್ನು ಮೇಯಿಸಲು ಹೋದಾಗ ಕಳ್ಳರ ಜೊತೆಗೆ ಹೋರಾಡಿ ವೀರಸ್ವರ್ಗವನ್ನಪ್ಪು ತ್ತಾನೆ (ಎಕ ಸಂ. ಏಳು 1979 ಮಂಡ್ಯ ಶಾ. ಸ. 73).

ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ಹುಲ್ಲೇನಹಳ್ಳಿಯ ಉತ್ತರಕ್ಕಿರುವ ದಿಣ್ಣೆಯಮೇಲಿರುವ ಸದಾಶಿವರಾಯರನ ಕಾಲದ ಶಕ 1477(ಕ್ರಿ. ಶ. 1954-55) ರ ವೀರಗಲ್ಲು ರಾಚಗೌಡ (ಗಾವುಂಡ) ನ ಮಗನು ಕಳ್ಳರ ಜೊತೆ ಕಾದಾಡಿ ಸ್ವರ್ಗಸ್ಥ ನಾದನೆಂದು ಹೇಳುತ್ತದೆ (ಎಮ್ ಎ ಆರ್ 1927ಶಾ. ಸ. 41).

ಕಳ್ಳತನದ ಸ್ವಾರಸ್ಯಕರವಾದ ಘಟನೆಯನ್ನು ಕೃಷ್ಣದೇವರಾಯನ ಕಾಲದ ಶಕ 1445(ಕ್ರಿ. ಶ. 1524) ರ ಆಂಧ್ರ ಪ್ರದೇಶದ ತಿರುಪತಿಯ ಗೋವಿಂದರಾಜಸ್ವಾಮಿ ದೇವಸ್ಥಾನದ ವ್ಯಾಸರಾಯ ಮಠದ ಮುಂದಿರುವ ಶಾಸನ ತಿಳಿಸುತ್ತದೆ. ವ್ಯಾಸ ತೀರ್ಥ ಶ್ರೀಪಾದರಿಗೆ ತಿರುಪತಿಯಲ್ಲಿ ತಮ್ಮ ಮಠವನ್ನು ಕಟ್ಟಿಕೊಳ್ಳಲು ಒಂದು ನಿವೇಶನವನ್ನು ಕೊಡಲಾಗಿತ್ತು. ಆಶ್ಚರ್ಯಕರ ವಿಷಯವೇನೆಂದರೆ, ದೇವಸ್ಥಾನದ ಪೂಜಾರಿಯಾದ ನಂಬಿ ಸಿರಪ್ಪೈಯಾರನು ದೇವಸ್ಥಾನದ ಆಭರಣಗಳನ್ನು ಕದ್ದಿದ್ದನು. ಸಾಳುವ ನರಸಿಂಹ ರಾಯರ ಆದೇಶದಂತೆ ಪೂಚಾರಿಗೆ ಕೊಟ್ಟಿದ್ದ ಈ ನಿವೇಶನವನ್ನುಮುಟ್ಟುಗೋಲು ಹಾಕಿಕೊಳ್ಳಲಾಗಿತ್ತು (ಟಿಟಿ ಡಿಐ ಸಂ. ಮೂರು 1935ಶಾ. ಸ. 157/200ಜಿಟಿ.).

ಇಮ್ಮಡಿ ದೇವರಾಯನ ಕಾಲದ ಶಕ 1353 (ಕ್ರಿ. ಶ. 1432) ರ ಬೆಂಗಳೂರು ಜಿಲ್ಲೆಯ ಚನ್ನಪಟ್ಟಣ ತಾಲೂಕಿನ ಮಾಲೂರು -ಪಟ್ಟಣದ ಲಿಂಗೇಗೌಡರು ಹೊಲ ದಲ್ಲಿರುವ ವೀರರ ಗುಡಿಯ ದಕ್ಷಿಣಕ್ಕಿರುವ ಶಾಸನವು ಕೆಳಲೆ ನಾಡಿನ ಮಾಳೂರು -

ಪಟ್ಟಣದ ಗೌಡ ಮಾಯಿದೇವನ ಮಗ ಮಾಯೀತಮ್ಮ ಶಿವರಾತ್ರಿ ದಿನ ಉಪವಾಸವಿದ್ದು ಮಲ್ಲಯ್ಯದೇವನ ತೋಪಿನಲ್ಲಿ ಜಾಗರಣೆ ಮಾಡುವಾಗ ದೇವಸ್ಥಾನಕ್ಕೆ ಮುತ್ತಿಗೆ ಹಾಕಿದ ದರೋಡೆಕೋರರ ಮೇಲೆ ಆಕ್ರಮಣ ಮಾಡಿ, ಅವರನ್ನು ಗಾಯಗೊಳಿಸಿ ತಾನೂ ಗಾಯಗೊಂಡು ಈ ಕಲಹದಲ್ಲಿ ಸ್ವರ್ಗಸ್ಥನಾದನೆಂದು ಉಲ್ಲೇಖಿಸುತ್ತದೆ. ಈ ಶಾಸನವು ಅವನು ಶುಕ್ರವಾರ ಪಾಡ್ಯ ದಿನದಂದು ಮಡಿದನೆಂದು ಹೇಳುತ್ತದೆ. ಆದರೆ ಈ ತಿಥಿಯು ಶನಿವಾರವಿತ್ತು (ಎಕ ಸಂ. ಒಂಬತ್ತು 1905 ಚನ್ನಪಟ್ಟಣ ಶಾ. ಸ. 149).

ಇದೇ ರಾಜನ ಆಡಳಿತಾಧಿಕಾರದಲ್ಲಿ ಬನವಾಸಿಯ ಶಕ 1354 (ಕ್ರಿ. ಶ. 1433-34) ರ ಇನ್ನೊಂದು ಶಾಸನವು ಮಧುಕೇಶ್ವರ ದೇವಸ್ಥಾನದ ದರೋಡೆಯ ವಿಷಯವನ್ನು ಪ್ರಸ್ತಾಪಿಸುತ್ತದೆ. ಮಹಾಪ್ರಧಾನ ಬೈಚನ ದಂಡನಾಯಕನು ಗೋವಾ ಮತ್ತು ಗುತ್ತಿಗಳನ್ನು ಆಳುತ್ತಿರುವಾಗ ಹಾಗೂ ಚಿಕ್ಕದೇವನ ಮಗ ತ್ರಿಭುವನ ಭರತಾಚಾರ್ಯ ಮಲ್ಲಣ್ಣನು ಬನವಾಸಿಯಲ್ಲಿ ಅಧಿಕಾರದಲ್ಲಿದ್ದಾಗ ಮಧುಕೇಶ್ವರ ದೇವಸ್ಥಾನವನ್ನು ಕೊಳ್ಳೆ ಹೊಡೆದ ದರೋಡೆಕೋರರೊಂದಿಗೆ ರಾಯಣ್ಣನ ಮಗ ಮಲ್ಲಣ್ಣನು ಕಾದಾಡಿ ಸ್ವರ್ಗಸ್ಥನಾಗುತ್ತಾನೆ. ಅವನ ನೆನಪಿಗಾಗಿ ಭೂಮಿಯನ್ನು ದಾನವಾಗಿ ಕೊಟ್ಟರೆಂದು ತಿಳಿಯುತ್ತದೆ (ಎಸ್ ಐ ಐ ಸಂ. ಇಪ್ಪತ್ತು 1988ಶಾ. ಸ. 233).

ತುರು ಕಾಳಗಗಳಿಗೆ ಆಹುತಿ

ನೂತನ ಶಿಲಾಯುಗದಿಂದ ಆಹಾರ ಪೂರೈಕೆಯ ಸಾಧನವಾಗಿ ಪ್ರಾರಂಭವಾದ ಪಶುಪಾಲನೆ ಕ್ರಮೇಣ ಆರ್ಥಿಕ ಸ್ವಾವಲಂಬನೆಗೆ ನಾಂದಿಯಾಗಿ ಇತಿಹಾಸ ಕಾಲದಲ್ಲಿ ಹೆಮ್ಮರವಾಗಿ ಬೆಳೆಯಿತು. ದನಕರು ಅದರಲ್ಲೂ ವಿಶೇಷವಾಗಿ ಗೋವುಗಳ ಸಂಪತ್ತನ್ನುಳ್ಳವರು ಸಮಕಾಲೀನ ಸಮಾಜದಲ್ಲಿ ಶ್ರೀಮಂತರೆಂದು ಪರಿಗಣಿಸ ಲಾಗುತ್ತಿತ್ತು. ಪಶುಗಳ ಸ್ವಾಧೀನಕ್ಕೋಸ್ಕರ ಅವುಗಳ ಕಳ್ಳತನ, ದರೋಡೆ ಮತ್ತು ತುರು ಕಾಳಗಗಳು ಒಂದೆಡೆ ಪ್ರಾರಂಭಿಸಿದರೆ ಮತ್ತೊಂದೆಡೆ ಕಾಡು ಪ್ರಾಣಿಗಳ ಅನಿರೀಕ್ಷಿತ ಹಾವಳಿಗಳಿಂದ ಅವುಗಳನ್ನು ರಕ್ಷಿಸುವುದು ಅನಿವಾರ್ಯವಾಯಿತು. ಆದ್ದರಿಂದ ಪಶುಗಳ ಆರೈಕೆ ಹಾಗೂ ಅವುಗಳ ರಕ್ಷಣೆಯು ಪ್ರಾಮುಖ್ಯವಾಗಿ ಇವುಗಳ ನಿರ್ವಹಣೆಯಲ್ಲಿ ಅನೇಕರು ವೀರಮರಣವನ್ನಪ್ಪಿದ್ದಾರೆ. ವಿಜಯನಗರ ಸಾಮ್ರಾಜ್ಯದಲ್ಲಿ ಪಶುಪಾಲನೆಗಾಗಿ ತುರು ಕಾಳಗ ಮತ್ತು ಕಾಡು ಪ್ರಾಣಿಗಳೊಂದಿಗೆ ಹೋರಾಡಿ ಆಹುತಿಯಾದವರನ್ನು ಉಲ್ಲೇಖಿಸುವ ಅನೇಕ ಶಾಸನ ಹಾಗೂ ವೀರಗಲ್ಲುಗಳಿವೆ.

ಬೆಂಗಳೂರು ಜಿಲ್ಲೆಯ ಚನ್ನಪಟ್ಟಣ ತಾಲೂಕಿನ ಮಾಲೂರು -ಪಟ್ಟಣದ ಲಿಂಗೇಗೌಡರ ಹೊಲದಲ್ಲಿರುವ ವೀರರ ಗುಡಿಯ ಬುಕ್ಕಣ್ಣ ಒಡೆಯನ ಕಾಲದ ಶಕ 129 (ಕ್ರಿ. ಶ. 1369)ರ ಶಾಸನವು ಪಶುಗಳ ರಕ್ಷಣೆಯಲ್ಲಿ ಮಡಿದವನ ವಿವರಗಳನ್ನು ಪ್ರಸ್ತಾಪಿಸುತ್ತದೆ. ವೀರ ಬಲ್ಲಾಳರಾಯನ ದಳಪತಿ ವೆಂಕಪ್ಪ ನಾಯಕನ ಮುಖ್ಯಸ್ಥ

ರಾಯ ನಾಯಕನು ಕೊಂಗ ನಾಡಿನ ಕುಂದೂರು -ದುರ್ಗವನ್ನು ಆಳುತ್ತಿದ್ದನು. ತಿರುವ ನಂಬಿಯ ಕಂಪಣ್ಣೊಡೆಯರಸನು ಕಾವೇರಿ ನದಿ ತೀರದಲ್ಲಿ ಮೇಯುತ್ತಿದ್ದ ಆಕಳುಗಳ ಮೇಲೆ ಆಕ್ರಮಣ ಮಾಡಿ ಅವುಗಳನ್ನು ಸೆರೆಹಿಡಿದಿದ್ದನು. ರಾಯ ನಾಯಕನು ಯೆರಯಂಗ -ಕುಲೋದಾರವೆಂದು ವರ್ಣಿಸಿದ ಕೆಳಲೆ ನಾಡಿನ ಮಹಾಪ್ರಭು ಮಾಳೂರು ಪಟ್ಟಣದ ಬೊಮ್ಮಗೌಡನ ಪುತ್ರ ವಿಜಯಣ್ಣನು ಆಕಳುಗಳನ್ನು ಮರಳಿ ಪಡೆದು ಅವನನ್ನು ಸೆದೆಬಡಿದು ವೀರಸ್ವರ್ಗವನ್ನುಪ್ಪುತ್ತಾನೆ. ವಿಜಯಣ್ಣನ ಅಣ್ಣನಾದ ರಾಗಗೌಡನು ಈ ಸ್ಮಾರಕವನ್ನು ಸ್ಥಾಪಿಸಿದ್ದಿರಬೇಕು (ಎಕ ಸಂ. ಒಂಬತ್ತು 1905 ಚನ್ನಪಟ್ಟಣ ಶಾ. ಸ 150).

ಮೊದಲನೆಯ ಬುಕ್ಕರಾಯನ ಕಾಲದ ಶಕ 1297 (ಕ್ರಿ. ಶ. 1376) ರ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ತಾಗರ್ತಿ ಅಗ್ರಹಾರದ ಮಾರಿ ದೇವಸ್ಥಾನದ ಹತ್ತಿರದ ಶಾಸನವು ತೋರನಾಡಿನ ತಾಗರ್ತಿಯ ಮಹಾಜನರ ಪ್ರೀತಿಯ ಪುತ್ರನೆಂದು ಕರೆಯಲ್ಪಟ್ಟ ಬೊಮ್ಮೋಜನ ಮಗ ಸಿರಿಯ ಮಲೋಜನು ತಾಗರ್ತಿ ಗ್ರಾಮದ ಆಕಳುಗಳನ್ನು ಕಳ್ಳರು ಅನಿರೀಕ್ಷಿತವಾಗಿ ಸೆರೆಹಿಡಿದಾಗ ಅವರನ್ನು ಬೆನ್ನತ್ತಿ ಇರಿದು ತಾನು ಕೈಲಾಸಪ್ರಾಪ್ತ ನಾದನೆಂದು ಉಲ್ಲೇಖಿಸುತ್ತದೆ (ಎಕ ಸಂ. ಏಳು 1902 ಶಿಕಾರಿಪುರ ಶಾ. ಸ. 57).

ಇದೇ ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಹೊಸಮನಿಯ ಕೋಟೆಹಕ್ಕಲಿನ ಶಕ 1334(ಕ್ರಿ. ಶ. 1420)ರ ಇಮ್ಮಡಿ ದೇವರಾಯನ ಕಾಲದ ಮಾಸ್ತಿಕಲ್ಲು ಸಬಾಯತರು ಸಬಳಿಗ ಚಾಮಗೌಡನ ಆಕಳುಗಳ ಮೇಲೆ ದಾಳಿ ಮಾಡಿ ಅವುಗಳನ್ನು ಮುತ್ತಿಗೆ ಹಾಕಿದಾಗ ಹದಸೆಯ ಬೀರಗೌಡನು ಅವರೊಂದಿಗೆ ಹೋರಾಡಿ, ಹಸುಗಳನ್ನು ಮರಳಿ ಪಡೆದು ಮಡಿದನೆಂದು ಉಲ್ಲೇಖಿಸುತ್ತದೆ. ಬೀರಗೌಡನ ಧರ್ಮಪತ್ನಿ ಗೌರಾಯ ಸಹಗಮನವನ್ನು ನೆರವೇರಿಸುತ್ತಾಳೆ. ಈ ಮಾಸ್ತಿಕಲ್ಲನ್ನು ಕರೂರಿನ ವೀರರಾಜನು ರಚಿಸಿದ್ದಾನೆ ಹಾಗೂ ಹರಿಯಕೊಪದ ದುಗೋಜನು ಚಿತ್ರಿಸಿದ್ದಾನೆ (ಎಕ ಸಂ. ಎಂಟು 1904 ಸಾಗರ ಶಾ. ಸ. 74).

ಮಲ್ಲಿಕಾರ್ಜುನನ ಕಾಲದ ಶಕ 1367 (ಕ್ರಿ. ಶ. 1454)ರ ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ಹರೂರಿನ ಮಾರಿ ದೇವಸ್ಥಾನದ ಹಿಂಭಾಗದಲ್ಲಿರುವ ವೀರಗಲ್ಲು ಚಂದ್ರಗುತ್ತಿಯ ಜಿಡ್ಡುಳಿಗೆ- ನಾಡಿನ ಪುಲೆಯ ಹರವೂರಿನ ಕುಳವಡಿ ಗೌಡರಾದ ಮಸಣಗೌಡನ ಪುತ್ರ ಬೊಮ್ಮರಸಗೌಡ ಮತ್ತು ತಮ್ಮಗೌಡನ ಪುತ್ರ ನರಸಣ್ಣಗೌಡರು ಗ್ರಾಮದ ದನಕರುಗಳನ್ನು ರಕ್ಷಿಸುವಾಗ ಸ್ವರ್ಗಸ್ಥರಾದರೆಂದು ಪ್ರಸ್ತಾಪಿಸುತ್ತದೆ (ಎಕ ಸಂ. ಎಂಟು 1904ಸೊರಬ ಶಾ. ಸ. 167)

ಶಕ 1273 (ಕ್ರಿ. ಶ. 1351) ರ ಬುಕ್ಕಣ್ಣ-ಒಡೆಯನ ಕಾಲದ ಬೆಂಗಳೂರು ಜಿಲ್ಲೆಯ ಕನಕಪುರ ತಾಲೂಕಿನ ಎಡಮಾರನಹಳ್ಳಿಯ ವೀರರ ಗುಡಿಯ ದಕ್ಷಿಣಕ್ಕಿರುವ ಶಾಸನವು ಸಿಗಲ ನಾಡಿನ ಮಾರೇಹಳ್ಳಿಯ ಶಿವನಗೌಡನ ಮಗ ವೀರ-ಸೋಮಾಜಿ ದನಕರುಗಳನ್ನು

ಕಾಯುವಾಗ ಹುಲಿಯೊಂದಿಗೆ ಹೋರಾಡಿ ಇರಿದು ಕೊಂದು ತಾನು ಸ್ವರ್ಗಸ್ಥನಾದನೆಂದು ತಿಳಿಸುತ್ತದೆ (ಎಕ ಸಂ. ಒಂಬತ್ತು 1905 ಕನಕಪುರ ಶಾ. ಸ. 40). ಒಟ್ಟಾರೆ, ಈ ಆಕಸ್ಮಿಕ ಘಟನೆಗಳು ಅನೇಕ ಕೌತುಕ ಹಾಗೂ ವಿಸ್ಮಯಕಾರಿ ಗಳಾಗಿದ್ದು, ಸಮಕಾಲೀನ ಜನಜೀವನ ಮತ್ತು ಸಮಾಜದ ಒಂದು ರೋಚಕ ಅಧ್ಯಾಯಕ್ಕೆ ಹೊಸ ಆಯಾಮ ನೀಡಿವೆ. ಇಂಥಹ ಅನೇಕ ಘಟನೆಗಳ ಆಳವಾದ ಸಂಶೋಧನೆ ಹಾಗೂ ಅಧ್ಯಯನದಿಂದ ಇನ್ನಷ್ಟು ಕುತೂಹಲಕಾರಿ ಹಾಗೂ ಅಪೂರ್ವ ಮಾಹಿತಿ ದೊರಕಬಹುದು. ಈ ದಿಶೆಯಲ್ಲಿ ಪ್ರಸ್ತುತ ಪ್ರಬಂಧ ಮೊದನೆಯ ಪ್ರಯತ್ನವೆಂದೇ ಹೇಳಬಹುದು.

ಕೃತಜ್ಞತೆಗಳು

ಡಾ. ಎಸ್. ವಿ. ಪಿ. ಹಳಕಟ್ಟಿ, ಡಾ. ಎಸ್. ಕೆ. ಅರುಣಿ, ಸರ್ವಶ್ರೀ ಟಿ. ಎಂ. ಕೇಶವ ಹಾಗೂ ಎಂ. ವಿ. ವಿಶ್ವೇಶ್ವರ ಹಸ್ತಪ್ರತಿಯನ್ನು ಓದಿ ಅನೇಕ ಸಲಹೆಗಳನ್ನಿತ್ತಿದ್ದಾರೆ. ಶ್ರೀ ಸೈಫುಲ್ಲಾ ವಿವಿಧ ಗ್ರಂಥ ಹಾಗೂ ನಿಯತಕಾಲಿಕೆಗಳನ್ನೀಡಿದ್ದಾರೆ. ಎಲ್. ಆರ್, ಸುಧೀಂದ್ರರಾವ್, ಕೃಷ್ಣ ಹಾಗೂ ಟಿ. ವೆಂಕಟಸುಬ್ಬಯ್ಯ ಅನೇಕ ರೀತಿಯಲ್ಲಿ ನೆರವಾಗಿದ್ದಾರೆ. ಈ ಎಲ್ಲಾ ಸಹೋದ್ಯೋಗಿ ಮಿತ್ರರಿಗೆ ವಂದನೆಗಳು. ವಿವಿಧ ನೆರವು ನೀಡಿದ ಭಾರತೀಯ ಪುರಾತತ್ವ ಸರ್ವೇಕ್ಷಣ ಮತ್ತು ಭಾರತೀಯ ಇತಿಹಾಸ ಅನುಸಂಧಾನ ಪರಿಷತ್, ಮಿಥಿಕ್ ಸೊಸೈಟಿ ಹಾಗೂ ಅವುಗಳ ಗ್ರಂಥಾಪಾಲಕರಿಗೆ ಸಹ ಅನೇಕ ಧನ್ಯವಾದಗಳು.

ಗ್ರಂಥ ಋಣ

ಎಪಿಗ್ರಾಫಿಯ ಕರ್ನಾಟಕ (=ಎಕ) 1975 : ಮೈಸೂರು ಜಿಲ್ಲೆ, ಸಂಪುಟ ನಾಲ್ಕು (ಪರಿಷ್ಕೃತ), ಯಳಂದೂರು ಶಾ. ಸ. 179, ಪು. 377-78, 776-77 ; ಪಿರಿಯಾಪಟ್ಟಣ ಶಾ. ಸ. 3. ಪು. 510, 843.

ಎಕ 1976:ಸಂಪುಟ ಐದು (ಪರಿಷ್ಕೃತ), ತಿ. ನರಸೀಪುರ ಶಾ. ಸ. 127, ಪು. 543, 955.

ಎಕ 1979 : ಮಂಡ್ಯ ಜಿಲ್ಲೆ, ಸಂಪುಟ ಏಳು (ಪರಿಷ್ಕೃತ), ಮದ್ದೂರು ಶಾ. ಸ. 92, ಪು. 308, 618 ; ಮಂಡ್ಯ ಶಾ. ಸ. 73, ಪು. 247, 584.

ಎಕ 1990 : ಮಂಡ್ಯ ಜಿಲ್ಲೆ, ಸಂಪುಟ ಏಳು (ಪರಿಷ್ಕೃತ), ಮದ್ದೂರು ಶಾ. ಸ. 92, ಪು. 308m 618 ; ಮಂಡ್ಯ ಶಾ. ಸ. 73, ಪು. 247, 584.

ಎಕ 1990 : ಹಾಸನ ಜಿಲ್ಲೆ, ಸಂಪುಟ ಒಂಬತ್ತು (ಪರಿಷ್ಕೃತ), ಬೇಲೂರು ಶಾ. ಸ. 144, ಪು. 98-105, 612-15. ಮೈಸೂರು , ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ಪಿಶ್ವವಿದ್ಯಾನಿಲಯ.

ಎಕ 1902 : ಶಿವಮೊಗ್ಗ ಜಿಲ್ಲೆ, ಸಂಪುಟ ಏಳು, ಭಾಗ ಒಂದು, ಶಿಕಾರಿಪುರ ಶಾ. ಸ. 57. ಪು. 159, 53.

ಎಕ 1904 :ಶಿವಮೊಗ್ಗ ಜಿಲ್ಲೆ, ಸಂಪುಟ ಏಳು, ಭಾಗ ಎರಡು, ಸಾಗರ ಶಾ. ಸ. 74. ಪು. 285, 105 ; ಸೊರಬ ಶಾ. ಸ. 167, ಪು. 69, 23 ; ಶಾ. ಸ. 168, ಪು. 70, 24: ಶಾ. ಸ. 483, ಪು. 218, 81 ;ಶಾ. ಸ. 489, ಪು. 219, 82 ;ಶಾ. ಸ. 562, ಪು. 244, 90.

ಎಕ 1905 : ಬೆಂಗಳೂರು ಜಿಲ್ಲೆ, ಸಂಪುಟ ಒಂಬತ್ತು, ಕನಕಪುರ ಶಾ. ಸ. 40, ಪು. 269, 155, 125; ಚನ್ನಪಟ್ಟಣ ಶಾ. ಸ. 148, ಪು. 335, 204, 164 ; ಶಾ. ಸ. 149, ಪು. 336, 204, 164 ; ಶಾ. ಸ. 150, ಪು. 336, 204, 164 ; ಶಾ. ಸ. 156, ಪು. 341-42, 206, 164 ; ಶಾ. ಸ. 162, ಪು. 334, 208, 166. ಬೆಂಗಳೂರು, ಮೈಸೂರು ಸರಕಾರದ ಕೇಂದ್ರಿಯ ಮುದ್ರಣ.

ಎಕ 1905 : ಕೋಲಾರ ಜಿಲ್ಲೆ, ಸಂಪುಟ ಮತ್ತು ಮಂಗಳೂರು, ಬಾಸೆಲ್ ಮಿಶನ್ ಮುದ್ರಣ, ಮುಳುಬಾಗಿಲು ಶಾ. ಸ. 7, ಪು. 68-69, 84-85, 72-73.

ಎಕ 1903 : ಚಿತ್ರದುರ್ಗ ಜಿಲ್ಲೆ, ಸಂಪುಟ ಹನ್ನೊಂದು, ದಾವಣಗೆರೆ ಶಾ. ಸ. 23, ಪು. 76-82, 50-53, 31-32 ; ಶಾ. ಸ. 29, ಪು. 91-93, 61-63, 38-39.

ಜಗದೀಶ 2004 : ವಿಜಯನಗರ ಕಾಲದ ಹರಿದ್ರಾ ನದಿ ಕಟ್ಟೆಯು ಇದ್ದ ಸ್ಥಳ ಗುರ್ತಿಸುವಿಕೆ , ವಿಜಯನಗರ ಅಧ್ಯಯನ, ಸಂಪುಟ 9,ಪು. 67-71.

ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ್ (=ಎಮ್ಎ ಆರ್) 1927 :ಶಾ. ಸ. 41, ಪು. 58.

ಸೌತ್ ಇಂಡಿಯನ್ ಇನಸ್ಕ್ರಿಕ್ಷನ್ಸ್ (=ಎಸ್ಐಐ) 1986 :ಸಂಪುಟ ಒಂಬತ್ತು, ಭಾಗ ಎರಡು, ಶಾ. ಸ. 522, ಪು. 538 ; ಶಾ. ಸ. 597, ಪು. 609.

ಎಸ್ಐಐ 1986 : ಸಂಪುಟ ಹತ್ತು, ಶಾ. ಸ. 771, ಪು. 404-05.

ಎಸ್ಐಐ 1972 : ಸಂಪುಟ ಹದಿನಾರು , ಶಾ. ಸ. 280, ಪು. 283-84.

ಎಸ್ಐಐ 1986 : ಸಂಪುಟ ಹದಿನೆಂಟು, ಶಾ. ಸ. 275, ಪು. 358 ; ಶಾ. ಸ. 415, ಪು. 480.

ಎಸ್ಐಐ 1988 : ಬಾಂಬೆ -ಕರ್ನಾಟಕ (ಮ. ಮು.) ,ಸಂಪುಟ ಇಪ್ಪತ್ತು, ಶಾ. ಸ. 233, ಪು. 284-85.

ಆನ್ಯೂಯಲ್ ರಿಪೋರ್ಟ್ ಅನ್ ಇಂಡಿಯನ್ ಎಪಿಗ್ರಾಫಿ (=ಆರಿಇಎ) 1912 :ಶಾ. ಸ. 61, ಪು. 45.

ಆರಿಇಎ 1957 -58 : ಶಾ. ಸ. 276, ಪು. 45.

ಆರಿಇಎ 1970-71, ಶಾ. ಸ. 210, ಪು. 59.

ತಿರುಮಲ ತಿರುಪತಿ ದೇವಸ್ಥಾನಮ್ ಇನಸ್ಕ್ರಿಕ್ಷನ್ಸ್, ಸಂಪುಟ ಮೂರು, 1935 : ಶಾ. ಸ. 157/200ಜಿಟಿ, ಪು. 326-28 ; ಸಂಪುಟ ಆರು, ಭಾಗ ಒಂದು, 1937 :ಶಾ. ಸ. 17/824 ಟಿಟಿ, ಪು. 102.

ಪ್ರೋಗ್ರೆಸ್ ರಿಪೋರ್ಟ್ ಆನ್ ಕನ್ನಡ ರಿಸರ್ಚ್ ಇನ್ ಬಾಂಬೆ ಪ್ರಸಿಡೆನ್ಸಿ (=ಆರಿಕರಿಬಾಪ್ರೆ) 1939-40 :ಶಾ. ಸ. 75, ಪು. 71.

ರಿತ್ತಿ, ಶ್ರೀನಿವಾಸ ಅಂಡ್ ಗೋಪಾಲ, ಬಿ. ಆರ್. , 2004 : ಇನ್ಸ್ಕ್ರಿಪಕ್ಷನ್ಸ್ ಆಫ್ ದಿ ವಿಜಯನಗರ ರೂಲರ್ಸ್, ವಾಲ್ಯೂಮ ಒನ್, ಪಾರ್ಟ್ಸ 1-5, ನ್ಯೂ ಡೆಲ್ಲಿ, ಐಸಿಹೆಚ್ ಆರ್/ಎನಬಿಸಿ.

ಗೋಪಾಲ, ಬಿ. ಆರ್., 1985-96 :ವಿಜಯನಗರ ಇನಸ್ಕ್ರಿಪಕ್ಷನ್ಸ್ ವಾಲ್ಯೂಮ್ಸ 1-4, ಮೈಸೂರು, ಡೈರಕ್ಟರೇಟ್ ಆಫ್ ಆರ್ಕಿಯಾಲಜಿ ಅಂಡ್ ಮ್ಯೂಸ್ಕಿಯಮ್ಸ್.

46. ವಿಜಯನಗರ ಕಾಲದ ಕೃಷಿ ಪದ್ಧತಿ

ಪ್ರೊ. ಶ್ರೀಮತಿ ಎಸ್.ಸಿ.ಸಿಂಧೂರ

ದಕ್ಷಿಣ ಭಾರತದ ಇತಿಹಾಸದ ಅಧ್ಯಾಯದಲ್ಲಿ ವಿಜಯನಗರದ ಇತಿಹಾಸ ಅಧ್ಯಯನ ಪ್ರಮುಖವಾದುದು. ಅದರಲ್ಲಿಯೂ ಅಂದಿನ ವ್ಯವಸಾಯ ಕ್ರಮಗಳ ಅಧ್ಯಯನ ಮಹತ್ವದಾಯಕವಾದುದು. ವಿಜಯನಗರ ಅರಸರು ಸಮಸ್ತ ದಕ್ಷಿಣ ಭಾರತವನ್ನು ಅಂದರೆ ತುಂಗಭದ್ರಾ ಮತ್ತು ಕೃಷ್ಣಾ ನದಿಗಳ ದಕ್ಷಿಣ ಭಾಗ ಮತ್ತು ಅಲ್ಪಕಾಲ ಸಿಂಹಳ ದ್ವೀಪದವರೆಗೂ ಆಡಳಿತ ನಡೆಸಿದರು.

ವಿಜಯನಗರದ ಅರಸರು ಹಾಗೂ ಈ ದೇಶದ ಬಹುಭಾಗದ ಹಿಂದಿನ ಅರಸರು ದೇಶದ ಆರ್ಥಿಕ ಪ್ರಗತಿಗೆ ವ್ಯವಸಾಯ ಅನಿವಾರ್ಯ ಎಂಬ ಸಂಗತಿಯನ್ನು ತಿಳಿದಿದ್ದರು. ಏಕೆಂದರೆ ನಮ್ಮ ದೇಶದ ಅಧಿಕ ಜನರ ವೃತ್ತಿ ಬೇಸಾಯವೇ ಆಗಿತ್ತು. ಅಲ್ಲದೆ ದಕ್ಷಿಣ ಭಾರತದ ಭೌಗೋಳಿಕ ಪರಿಸ್ಥಿತಿಯು ತನ್ನ ವ್ಯವಸಾಯಕ್ಕೆ ಕೇವಲ ಮಳೆಯೊಂದನ್ನೇ ಆಧರಿಸಿದ್ದು ಅದು ಅನಿಶಿಚ್ತವಾಗಿತ್ತು. ದಕ್ಷಿಣ ಭಾರತದಲ್ಲಿ ವಾರ್ಷಿಕ ಸರಾಸರಿ ಮಳೆ ಎಂದರೆ 20 ರಿಂದ 30 ಇಂಚಿನಷ್ಟೇ. ಇದು ಕೂಡ ಅನಿಶ್ಚಿತ ಅಲ್ಲದೆ ಅಪೂರ್ಣ. ಆದರೆ ಅಪವಾದ ರೂಪದಲ್ಲಿ ಪಶ್ಚಿಮಘಟ್ಟ ಪ್ರದೇಶಗಳಲ್ಲಿ ಅಪಾರ ಮಳೆ ಆಗುವುದರಿಂದ ಇಲ್ಲಿಂದ ಪೂರ್ವ ದಿಕ್ಕಿಗೆ ಹರಿದು ಬರುವ ನದಿಗಳಲ್ಲಿ ಈ ನೀರು ಹರಿದು ಸಮುದ್ರಕ್ಕೆ ಸೇರುತ್ತಿತ್ತು. ಈ ನದಿಗಳಲ್ಲಿಯ ನೀರು ದಕ್ಷಿಣ ಭಾರತದ ಅಪಾರ ನೀರಿನ ಸಂಪನ್ಮೂಲವಾಗಿತ್ತು. ಇದನ್ನು ಸದುಪಯೋಗ ಮಾಡಿಕೊಳ್ಳಲೇ ಮಾಡಿ ಕೊಳ್ಳಲೇಬೇಕಾಗಿದ್ದುದರಿಂದ ಅರಸರು ಈ ಮೇಲು ಜಲ ಮತ್ತು ಅಂತರ್ಜಲವನ್ನು ಉಪಯೋಗಿಸಿಕೊಳ್ಳುವುದು ಅನಿವಾರ್ಯವಾಯಿತು. ಈ ದಿಶೆಯಲ್ಲಿ ವಿಜಯನಗರದ ಅರಸರು ಹಿಂದಿನವರು ಅನುಸರಿಸಿರಬಹುದಾದ ಮಾರ್ಗವನ್ನೇ ಅನುಸರಿಸಿ ನೀರನ್ನು ಉಪಯೋಗಿಸಿಕೊಂಡರು. ಹೀಗಾಗಿ ಅವರು ನೀರಾವರಿಗೆಂದೇ ನದಿ, ಕಾಲುವೆ, ಬಾವಿ ಹಾಗೂ ಅಂತರ್ಜಲವನ್ನು ಬಳಸಿಕೊಂಡಿದ್ದನ್ನು ಕಾಣುತ್ತೇವೆ. ಈ ಮಾದರಿಯ ನೀರಾವರಿ ಕಾರ್ಯಕ್ರಮ ಅಂದರೆ ನದಿ, ಕಾಲುವೆ ಮತ್ತು ಬಾವಿಗಳಿಂದ ಬೇಸಾಯ ಜರುಗಿಸುವುದು ದಕ್ಷಿಣ ಭಾರತಕ್ಕೆ ರೂಢಿಯಾಗಿತ್ತು. ಇದಕ್ಕೆ ಕಾರಣ ಮಳೆಯ ಕೊರತೆ. ಈ ಅವಧಿಯಲ್ಲಿ ರೈತರು ಬುದ್ಧಿಶಕ್ತಿ ಪ್ರಾಬಲ್ಯದಿಂದ ನೀರಾವರಿ ಕ್ರಮ ಅಭಿವೃದ್ಧಿಯ ಜೊತೆಗೆ ಸಂಪನ್ಮೂಲಗಳನ್ನು ಸದುಪಯೋಗಪಡಿಸಿಕೊಂಡರು. ನೀರಾವರಿ ಕಾರ್ಯಗಳಿಂದ ವಿಜಯನಗರದ ಆರ್ಥಿಕ ಸಂಪತ್ತು ಆರ್ಥಿಕವಾಯಿತು.

ಬೇಸಾಯವೇ ಆದಿಕಾಲದಿಂದ ಈ ದೇಶದ ಪ್ರಮುಖ ಉದ್ಯೋಗ ಎಂಬುದನ್ನು ಅರಿತಿದ್ದ ವಿಜಯನಗರದ ಅರಸರು ಅದರ ವಿಕಾಸಕ್ಕೆ ಹೆಚ್ಚಿನ ಆದ್ಯತೆ ಕೊಟ್ಟಿದ್ದರು. ಈ ದಿಸೆಯಲ್ಲಿ ಅವರು ಕೈಗೆತ್ತಿಕೊಂಡಿದ್ದ ಎರಡು ಪ್ರಮುಖ ಕಾರಣಗಳು ಹೀಗಿವೆ :

1. ಅಣೆಕಟ್ಟು : ಕೆರೆ ಸರೋವರಗಳನ್ನು ನಿರ್ಮಿಸಿ ನೀರಾವರಿ ಆಧಾರಿತ ಕೃಷಿಗೆ ಕೃಷಿಗೆ ಪ್ರೋತ್ಸಾಹಿಸಿದರು.

2. ಕಾಡುಗಳನ್ನು ಕಡಿದು ಆ ಭೂಮಿಯನ್ನು ಕೃಷಿಗೆ ಸದ್ಬಳಕೆ ಮಾಡಿಕೊಂಡರು. ಈ ದಿಸೆಯಲ್ಲಿ ಪ್ರೋತ್ಸಾಹ ನೀಡಿ ಕೆರೆಗಳಲ್ಲಿ ಕಡಿತ, ಬಿರುದಾವಳಿ ನೀಡುವ, ವಿಶೇಷ ಅಧಿಕಾರ ನೀಡುವ ಮೊದಲಾದ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡಿದ್ದು ಸ್ತುತ್ಯರ್ಹ ವಾದುದು. ಇದರಂತೆಯೇ ನೀರಾವರಿ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲು ಖಾಸಗಿ ಯವರಿಗೂ ವಿವಿಧ ಮಾದರಿಯ ಪ್ರೋತ್ಸಾಹಗಳನ್ನು ನೀಡಲಾಗುತ್ತಿತ್ತು. ಇದರ ಉದ್ದೇಶ ಕೇವಲ ಕೃಷಿ ಉತ್ಪಾದನೆಯನ್ನು ಅಧಿಕಗೊಳಿಸುವುದಾಗಿತ್ತು. ಈ ದಿಶೆಯಲ್ಲಿ ಹಿಂದಿನ ಕಾಲದವರು ಕೈಗೊಂಡಿದ್ದ ನೀರಾವರಿ ಕೃಷಿ ಪದ್ಧತಿಯು ಅಧಿಕವಾಗಿರುವ ಜನಸಂಖ್ಯೆಯ ಅವಶ್ಯಕತೆಗಳನ್ನು ಪೂರೈಸಲು ಅಸಮರ್ಥವಾಗಿದ್ದರಿಂದ ನೂತನ ನೀರಾವರಿ ಕೃಷಿ ಪದ್ಧತಿಯನ್ನು ಪ್ರೋತ್ಸಾಹಿಸುವುದು ಅನಿವಾರ್ಯವಾಗಿತ್ತು. ಆದ್ದರಿಂದ ವಿಜಯನಗರದ ಆಡಳಿತವು ವಿವಿಧ ನೀರಾವರಿ ಕಾರ್ಯಗಳಿಗೆ ಪ್ರೋತ್ಸಾಹಿಸಿ ಜನತೆಯ ಆಶೋತ್ತರಗಳಿಗೆ ಸ್ಪಂದಿಸಿತು. ವಿಶೇಷವಾಗಿ ವಿಜಯನಗರದ ಅರಸರೆಲ್ಲರೂ ಜನೋಪಕಾರಿಗಳಾಗಿದ್ದರಿಂದ ನೀರಾವರಿ ಮತ್ತು ಇತರ ಪರೋಪಕಾರಿ ಕಾರ್ಯಗಳನ್ನು ಕೈಗೆತ್ತಿಕೊಂಡಿದ್ದರು.

ಸೊನ್ನಲಿಗೆಯ ಸಿದ್ಧರಾಮೇಶ್ವರನು 12ನೆ ಶತಮಾನದಲ್ಲಿ ಸರೋವರವನ್ನು ನಿರ್ಮಿಸಿದ್ದು ಇಂದಿಗೂ ಅದು ಸುವ್ಯವಸ್ಥಿತವಾಗಿರುವದನ್ನು ಸೊಲ್ಲಾಪುರದಲ್ಲಿ ಕಾಣು ತ್ತೇವೆ. ತನ್ನ ಆಧ್ಯಾತ್ಮಿಕ ಶಕ್ತಿ ಬಲದಿಂದ ಸೊಲ್ಲಾಪುರದ ಕೆರೆಯಲ್ಲಿ 68 ಪವಿತ್ರ ನದಿ ಗಳ ನೀರನ್ನು ಆಹ್ವಾನಿಸಿರುವೆ (ಅಷ್ಟಷಷ್ಟಿ ದಿವ್ಯ ತೀರ್ಥಂಗಳ್) 'ಆ ನದಿಗಳ ನೀರು ಈ ಸರೋವರದ ಸನ್ನಿಧಿಯಲ್ಲಿದ್ದು ಈ ಸರೋವರದ ನಾಮಸ್ಮರಣೆಯಿಂದ ಪಾಪ ಪರಿಹಾರವಾಗುವದು, ಈ ಸರೋವರದಲ್ಲಿ ಮಿಂದವರಿಗೆ ದೇವತೆಗಳ ನಾಯಕತ್ವ ಅಂದರೆ ಗಣೇಶತ್ವ ಪ್ರಾಪ್ತಿಯಾಗುತ್ತದೆ. ಈ ಸರೋರವನ್ನು ಜಪಿಸಿದ ಮಾತ್ರಕ್ಕೆ ಇಂದ್ರ ಪದವಿ ಲಭ್ಯವಾಗುತ್ತದೆ. ಈ ಸರೋವರದ ನೀರಿನಿಂದ ಪ್ರೋಕ್ಷಣೆ ಅಂದರೆ ತಲೆಯ ಮೇಲೆ ಸಿಂಪಡಿಸಿಕೊಂಡರೆ ಮುಕ್ತಿ ಲಭಿಸುತ್ತದೆ. ಹೀಗೆ ಈ ಸರೋವರದ ಪುಣ್ಯಜಲವನ್ನು ಕೊಂಡಾಡಿದವನಿಗೆ ಮಹಾರುದ್ರಪದವಿಯೇ ಲಭ್ಯವಾಗುತ್ತದೆ'. ಈ ಕೆರೆಯನ್ನು 'ತಿರ್ಯಗ್ಜಾತಿ' ಅಂದರೆ ಪ್ರಾಣಿ, ಪಕ್ಷಿ, ಜಂತುಗಳಿಗೆ, ಬಾಯಾರಿಕೆ ನಿವಾರಿಸಲೆಂದೆ ನಿರ್ಮಿಸಿರುವಂತೆ ತಿಳಿಸಿದ್ದಾನೆ. ಈ ಹೇಳಿಕೆಗಳಲ್ಲಿ ಅಲ್ಪಸ್ವಲ್ಪ ಅತಿಶಯೋಕ್ತಿ ಇದ್ದರೂ ಅಂದಿನ ಜನರು ಜಲಕಾರ್ಯಗಳ ಬಗ್ಗೆ ಹೊಂದಿದ್ದ ಕಲ್ಪನೆ ಹಾಗೂ ನಂಬಿಕೆಗಳ ಪಾತ್ರ

ಉನ್ನತವಾಗಿದ್ದವು. ಇಂತಹ ಆದರ್ಶಪ್ರಾಯ ಉನ್ನತ ಬಗೆಯ ಜನಹಿತ ನೀರಾ ವರಿ ಕ್ರಮಗಳನ್ನು ಕೈಗೆತ್ತಿಕೊಂಡಿರುವದನ್ನು 1138ರ ಶಾಸನದಿಂದ ತಿಳಿಯಬಹುದು. ಈ ಶಾಸನದ ಬಸವಾಚಾರಿ ಎಂಬ ಓರ್ವ ವಿರಕ್ತನು ತನ್ನ ಜೀವನವನ್ನೇ ಕೆರೆ ಮತ್ತು ದೇವಾಲಯಗಳನ್ನು ಸರ್ವಜನರ ಸುಖ ಸಂತೋಷಕ್ಕೆ ನಿರ್ಮಿಸಲು ಮೀಸಲಾಗಿಟ್ಟಿದ್ದನು.

ಇದೇ ರೀತಿ ಆಳರಸರು ಕೃಷಿಗಾಗಿ (ಕೃತಕವಾಗಿ) ನೀರನ್ನು ಉಪಯೋಗಿಸುವ ವಿಧಾನಗಳನ್ನು ಅರಿತಿದ್ದರು. ವಿಜಯನಗರದ ಅರಸರ ಕಾಲಾವಧಿಯಲ್ಲಿ ಮಳೆಯ ಅಭಾವದಿಂದಾಗಿ ಒಣಬೇಸಾಯಕ್ಕಿಂತ ನೀರಾವರಿ ಕೃಷಿ ಪದ್ಧತಿಗೆ ಹೆಚ್ಚು ಗಮನ ಹರಿಸಿರುವುದರಿಂದ ನೀರಾವರಿಯನ್ನು ಮಾನವರ ಅಭ್ಯುದಯಕ್ಕೆ ಧಾರ್ಮಿಕ ಮನೋ ಭಾವನೆಯಿಂದ ಅನುಸರಿಸುತ್ತಿದ್ದರು. ಹೀಗಾಗಿ ಈ ಕಾಲದಲ್ಲಿ ಕೆರೆ, ಬಾವಿ, ಕಾಲುವೆ, ಕುಂಟೆ, ಏತ, ಕಪಿಲೆ, ಗುಡೆ ಅಂದರೆ ಬುಟ್ಟಿ (ನೀರನ್ನು ಎತ್ತಲು) ಗುಯ್ಯಾಲು, ಸುಂಕ, ಸುವರ್ಣದಾಯ, ಗದ್ದೆ, ಬೆದ್ದಲು (ಒಣ ಬೇಸಾಯದ ಭೂಮಿ), ಕಾಡಾರಂಭ ಅಂದರೆ (ಕಾಡನ್ನು ಕೃಷಿಗೆ ಅಳವಡಿಸುವ) ನೀರಾರಂಬ ಅಂದರೆ ಗದ್ದೆಗಳ ಬೇಸಾಯ, ಈ ಮೊದಲಾದವುಗಳಿಗಿಂತ ವಿಶೇಷವಾಗಿ ವಿಜಯನಗರದ ಅವಧಿಯಲ್ಲಿ ನೀರಾವರಿಗೆ ಅಧಿಕ ಮಹತ್ವ ಇರುವುದು ಶಾಸನಗಳ ಆಧಾರಗಳಿಂದ ತಿಳಿದುಬರುತ್ತದೆ.

ಎಲ್ಲ ದೇಶಗಳ ಎಲ್ಲ ಜನಾಂಗದ ಸರ್ವಕಾಲದ ಬದುಕು ಅವಲಂಬಿಸಿರುವದು ಕೃಷಿಯ ಮೇಲೆ, ಕೈಗಾರಿಕೆ ಆರ್ಥಿಕವಾಗಿ ಅಭಿವೃದ್ಧಿಗೊಳ್ಳುವುದು ಕೃಷಿಯ ಉತ್ಪನ್ನ ಮೂಲದಿಂದಲೇ, ಕೃಷಿಯನ್ನು ಪೋಷಿಸಿ ಕಾಪಾಡಬೇಕಾದುದು ರಾಜರ ಆದ್ಯ ಕರ್ತವ್ಯಗಳಲ್ಲಿ ಪ್ರಮುಖವಾದುದಾಗಿತ್ತು. ರಾಜರು, ಸಾಮಂತರು, ಧನಿಕ ದಾನಿಗಳು, ಗ್ರಾಮಸ್ಥರು, ಧಾರ್ಮಿಕ ಮಠಮಾನ್ಯಗಳು ಬಾವಿ-ಕೆರೆಗಳನ್ನು ಕಟ್ಟಿಸುತ್ತಿದ್ದರು. ನೀರಾವರಿ ವ್ಯವಸ್ಥೆಗೆ ಅರಸರು ವಿಶೇಷ ಗಮನಹರಿಸಿದ್ದರು. ಕೃಷ್ಣದೇವರಾಯ ತನ್ನ 'ಅಮುಕ್ತ ಮಾಲ್ಯದಾ' ಗ್ರಂಥದಲ್ಲಿಯೂ ಈ ಬಗ್ಗೆ ಪ್ರಸ್ತಾಪಿಸಿದ್ದಾನೆ. ಹತ್ತಿ, ರಾಗಿ, ಹಾರಕ, ಜೋಳ, ಸಾಮೆ, ಕಬ್ಬು ಮತ್ತು ಗೋದಿ, ಹೆಸರು, ಅವರೆ, ಭತ್ತ, ಕಡಲೆ, ತೊಗರಿ ಇತ್ಯಾದಿ ಧಾನ್ಯಗಳು ಪ್ರಮುಖ ಕೃಷಿ ಉತ್ಪನ್ನಗಳಾಗಿದ್ದವು.

ನೀರಾವರಿ ವ್ಯವಸ್ಥೆ

ವಿಜಯನಗರ ಅರಸರ ಕಾಲದಲ್ಲಿ ಒಣಬೇಸಾಯಕ್ಕಿಂತ ನೀರಾವರಿ ಸೌಲಭ್ಯಕ್ಕೆ ಆದ್ಯತೆ ನೀಡಲಾಗಿತ್ತು. ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳ ಪ್ರದೇಶದಲ್ಲಿ ತುಂಗಭದ್ರಾ ನದಿಯ ನೀರನ್ನು ನಾಲೆಗಳ ಮೂಲಕ ಹರಿಸಿ ಕೃಷಿ ಉತ್ಪನ್ನ ಸುಲಭ ಸಾಧ್ಯವಾಗಿದ್ದಿತು. ಹಲವು ಕಡೆ ಅಣೆಕಟ್ಟುಗಳನ್ನು ನಿರ್ಮಿಸಲಾಗಿತ್ತು. 16ನೆಯ ಶತಮಾನಕ್ಕೂ ಮೊದಲೇ ವಿಜಯನಗರದ ಅರಸರ ಕಾಲದಲ್ಲಿ ನಿರ್ಮಿಸಲಾಗಿದ್ದ ಹಲವು ಅಣೆಕಟ್ಟುಗಳಲ್ಲಿ ಹೊಸಪೇಟೆ, ವಲ್ಲಭಾಪುರ ಮತ್ತು ಕೋರಗಾಲ ಅಣೆಕಟ್ಟುಗಳು

ಆಧುನಿಕವಾದ ತುಂಗಭದ್ರ ಜಲಾಶಯ ನಿರ್ಮಾಣದಿಂದ ಮುಳುಗಡೆಯಾದವು. ವಿಜಯನಗರ ಕಾಲದ ನಾಲೆಗಳು ಕೋರಗಾಲ ನಾಲೆ, ಹುಲ್ಲನಾಲೆ, ಶಿವಪುರಿ ನಾಲೆ, ಆನೆಗೊಂದಿ ನಾಲೆ, ರಾಯನಾಲೆ, ಬಸವಣ್ಣನಾಲೆ, ಬೆಳ್ಳನಾಲೆ, ಕಲ್ಲಟ್ಟನಾಲೆ, ಸಿರಗುಪ್ಪ ನಾಲೆ, ರಾಮಸಾಗರ ನಾಲೆ, ಕಂಪ್ಲಿನಾಲೆ, ಬೆಳ್ಗೋಡು ಹಾಳನಾಲೆ, ತುರ್ಥನಾಲೆ, ದೇಶನೂರು ನಾಲೆ, ಗಂಗಾವತಿ ಮೇಲ್ಭಾಗದ ನಾಲೆ, ಗಂಗಾವತಿ ಕೆಳಭಾಗದ ನಾಲೆ, ಮತ್ತು ಬಿಜಾಲ್‌ನಾಲೆ, ಈ 17 ನಾಲೆಗಳು ಇಂದು ಕರ್ನಾಟಕದಲ್ಲಿದ್ದು ಉಳಿದವು ಆಂಧ್ರಕ್ಕೆ ಸೇರಿವೆ. ವಿಜಯ ನಗರ ಕಾಲುವೆಗಳಿಂದ ಬಳ್ಳಾರಿ ಜಿಲ್ಲೆಯ ಹೊಸಪೇಟೆ ಮತ್ತು ಸಿರಗುಪ್ಪ ತಾಲೂಕುಗಳ 20,331 ಸಾವಿರ ಎಕರೆ ರಾಯಚೂರ ಜಿಲ್ಲೆಯ ಕೊಪ್ಪಳ, ಗಂಗಾವತಿ ಹಾಗೂ ಮಾನ್ವಿ ತಾಲೂಕುಗಳ 9838 ಸಾವಿರ ಎಕರೆ ಹೀಗೆ ಒಟ್ಟು 30,169 ಸಾವಿರ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಲಭ್ಯವಾಗಿದ್ದಿತು.

ರಾಜಧಾನಿಯಾದ ಹಂಪೆಗೆ ಕುಡಿಯುವ ನೀರನ್ನು ಸಾಗಿಸಲು ಕಲ್ಲಿನ ನಾಲೆ ಮತ್ತು ಮಣ್ಣಿನ ಕೊಳವೆಗಳನ್ನು ಸುವ್ಯವಸ್ಥಿತವಾಗಿ ಉಪಯೋಗಿಸಿದ್ದರು. ತುಂಗಭದ್ರಾ ನದಿಯಿಂದ ರಾಯಕಾಲುವೆ ಮೂಲಕ ಕಮಲಾಪೂರ ಕೆರೆಗೆ ನೀರು ಹಾಯಿಸಿ ಅಲ್ಲಿಂದ ಕಲ್ಲುನಾಲೆಗಳ ಮೂಲಕ ನೀರು ಹಂಪೆಯ ಮೂಲೆ ಮೂಲೆಗೂ ಹರಿಯುತ್ತಿತ್ತು. ಅರಸರ ನಿವಾಸದ ಆವರಣದಲ್ಲಿ ಸು. 20 ನೀರಿನ ಶೇಖರಣಾ ತೊಟ್ಟಿಗಳನ್ನು ಪತ್ತೆಹಚ್ಚಲಾಗಿದೆ. ಇನ್ನೂ ಸಂಶೋಧನಾ ಕಾರ್ಯ ಮುಂದುವರಿದಿದೆ.

ಭೂಮಿಯನ್ನು ಕೃಷಿ ಮಾಡಲು ಬಹುಸಂಖ್ಯೆಯ ಕೆಲಸಗಾರರ ಅವಶ್ಯ ಇರುತ್ತಿತ್ತು. ಕೃಷಿಕಾರ್ಮಿಕರು ಬಹುತೇಕವಾಗಿ ಧನಿಕನ ಜಮೀನಿನಲ್ಲಿ ದುಡಿದು ಕೂಲಿ ಸಂಪಾದಿಸಿ ಜೀವನ ನಡೆಸುತ್ತಿದ್ದರು. ಇವರ ಜೀವನ ಮಧ್ಯಯುಗದ ಯುರೋಪಿನ ಗುಲಾಮರನ್ನು ಹೋಲುವಂತಿತ್ತು. ಐದು ವಿಧದ ಭೂ ಹಿಡುವಳಿ ಜಾರಿಯಲ್ಲಿತ್ತು.

1) ಗೇಣಿ 2) ಗುತ್ತಿಗೆ 3) ಸಿದ್ಧಾಯ 4) ವರ 5) ನಿಗದಿ, ಭೂ ಮಾಲಿಕ ಮತ್ತು ಸೇವಕನ ನಡುವೆ ಮಾಡಿಕೊಂಡ ಬಾಡಿಗೆ ಕರಾರಿನ ಮೇಲೆ ಭೂಮಿಯನ್ನು ಸೇವಕನಿಗೆ ಕೊಡುವುದಕ್ಕೆ 'ಗೇಣಿ'ಎನ್ನುತ್ತಿದ್ದರು. ಗೇಣಿ ನೀಡುವವರನ್ನು 'ಗೇಣಿದಾರ' ಎಂದು ಕರೆಯಲಾಗುತ್ತಿತ್ತು. ಗುತ್ತಿಗೆ ವ್ಯವಸ್ಥೆಯಲ್ಲಿ ಭೂಮಾಲೀಕನಿಗೆ ಭೂಮಿಯನ್ನು ಪಡೆದ ಗುತ್ತಿಗೆದಾರ ನಿಗದಿಗೊಳಿಸಿದ ಪ್ರಮಾಣದ ದವಸವನ್ನು ಕೊಟ್ಟು, ತಾನು ಎಷ್ಟು ಬೇಕಾದರೂ ಬೆಳೆದುಕೊಳ್ಳಬಹುದಿತ್ತು. ಒಂದು ಪಕ್ಷ ಉತ್ಪನ್ನ ಕಡಿಮೆಯಾದರೂ ಕರಾರಿನ ರೀತ್ಯ ನಿಗದಿಗೊಳಿಸಿದಷ್ಟು ತೆರಲೇಬೇಕಿತ್ತು. ಸಿದ್ಧಾಯ ವ್ಯವಸ್ಥೆಯಲ್ಲಿ ನಿಗದಿಗೊಳಿಸಿದ ಬಾಡಿಗೆಯನ್ನು ದವಸ ಅಥವಾ ಹಣದ ರೂಪದಲ್ಲಿ ತೆರಬೇಕಿದ್ದಿತ್ತು. ವರ ವ್ಯವಸ್ಥೆಯಲ್ಲಿ ಭೂ ಮಾಲಿಕ ಮತ್ತು ಗೇಣಿದಾರ ಇಬ್ಬರೂ ಬಂದ ಉತ್ಪನ್ನದಲ್ಲಿ ಸಮಪಾಲು ಪಡೆಯುತ್ತಿದ್ದರು. ನಿಗದಿ ವ್ಯವಸ್ಥೆಯಲ್ಲಿ ಭೂಮಿಯ ಉತ್ಪನ್ನದ ಸಾಮರ್ಥ್ಯ

ವನ್ನಾಧರಿಸಿ ಬಾಡಿಗೆಯನ್ನು ನಿಗದಿಗೊಳಿಸಲಾಗುತ್ತಿತ್ತು. ಇದನ್ನು ಧಾನ್ಯರೂಪದಲ್ಲೇ ಕೊಡಬೇಕಿತ್ತು. ಈ ವ್ಯವಸ್ಥೆಗಳು ಒಂದೊಂದು ಭಾಗದಲ್ಲಿ, ಒಂದೊಂದು ರೀತಿಯಲ್ಲಿದ್ದವು. ಬ್ರಾಹ್ಮಣರಿಗೂ ಮತ್ತು ಮಠಗಳಿಗೂ ಭೂಮಿ ದಾನದತ್ತಿ ರೂಪದಲ್ಲಿ ದೊರೆತಿದ್ದಿತು. ಅವುಗಳಲ್ಲಿ ದುಡಿಮೆ ಮಾಡುವವರು ಮಾತ್ರ ಗೇಣಿದಾರರೇ ಆಗಿದ್ದರು. ಮಿಲಿಟರಿ, ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ವಿಶೇಷ ಸೇವೆ ಸಲ್ಲಿಸಿದವರೂ ಭೂಮಿಯನ್ನು ಉಂಬಳಿ (ಜಾಗೀರ್)ಯಾಗಿ ಪಡೆಯುತ್ತಿದ್ದರು.

ಕೃಷಿ ವ್ಯವಸ್ಥೆ ಜೀವಂತವಾಗಿರಬೇಕಾದರೆ ಅದರ ಜೊತೆಗೆ ನೀರಾವರಿ ವ್ಯವಸ್ಥೆಯೂ ಇರಬೇಕು. ಕೃಷಿ ಸಂಪೂರ್ಣವಾಗಿ ಮಳೆಯನ್ನೇ ಅವಲಂಬಿಸಿರಲು ಸಾಧ್ಯವಿಲ್ಲ. ಆದ್ದರಿಂದ ಕೃತಕ ನೀರಿನ ವ್ಯವಸ್ಥೆ ಕೃಷಿಗೆ ಅನಿವಾರ್ಯ. ರಾಜ್ಯದ ಆರ್ಥಿಕತೆಯಲ್ಲಿ ಕೃಷಿ ಪ್ರಧಾನವಾಗಿದ್ದರಿಂದ ಎಲ್ಲಾ ಅರಸು ಮನೆತನಗಳು ನೀರಾವರಿಗೆ ಹೆಚ್ಚಿನ ಗಮನವನ್ನು ಕೊಡುವುದು ಅವಶ್ಯವಾಗಿತ್ತು. ಈ ಕಾರಣದಿಂದಾಗಿಯೇ ಕೃಷಿಯೋಗ್ಯ ಭೂಮಿಯನ್ನು ಎರಡು ವಿಧವಾಗಿ ವಿಂಗಡಿಸಲಾಗಿತ್ತು.

ಅವುಗಳೆಂದರೆ-

1) ಸಂಪೂರ್ಣವಾದ ಮಳೆಯನ್ನೇ ಅವಲಂಭಿಸಿರುವ ಕೃಷಿ ಭೂಮಿ.

2) ನದಿ ಕೆರೆ ಬಾವಿಗಳನ್ನು ಅವಲಂಬಿಸಿರುವ ಕೃಷಿ ಭೂಮಿ.

ಮಳೆಯನ್ನು ಅವಲಂಬಿಸದೆ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ನೀರಾವರಿ ಸಂಪನ್ಮೂಲಗಳು ಅತ್ಯವಶ್ಯ. ಈ ನಿಟ್ಟಿನಲ್ಲಿ ಅರಸರು ಕೈಗೊಂಡ ಮಾದರಿಯನ್ನೇ ಸಾಮಾಂತರು ಮತ್ತು ಅಧಿಕಾರಿಗಳು ಅನುಸರಿಸಿದರು. ರಾಜ್ಯದ ಒಟ್ಟು ಆರ್ಥಿಕ ವ್ಯವಸ್ಥೆ ಕೃಷಿಯನ್ನು ಅವಲಂಬಿಸಿರುವುದೇ ನೀರಾವರಿ ಹೆಚ್ಚಿನ ಪ್ರೋತ್ಸಾಹ ವನ್ನು ಪಡೆಯುವುದಕ್ಕೆ ಕಾರಣವಾಯಿತು. ಕೃಷಿಯ ವಿಸ್ತರಣೆ ಮತ್ತು ಸೂಕ್ತ ನೀರಾವರಿ ವ್ಯವಸ್ಥೆಯಿಂದಾಗಿ ಹೆಚ್ಚುವರಿ ಉತ್ಪಾದನೆ ಸಾಧ್ಯವಾದರೂ ಅದು ಸಮಾನವಾಗಿ ಹಂಚಿಕೆಯಾಗುತ್ತಿರಲಿಲ್ಲ. ಸಂಪನ್ಮೂಲಗಳ ಹಂಚಿಕೆಯ ಸಂದರ್ಭದಲ್ಲಿ ಶ್ರೇಣೀಕೃತ ಸಮಾಜ ವ್ಯವಸ್ಥೆಯೇ ಮಾನದಂಡವಾಗಿರುತ್ತಿತ್ತು.

ವಿಜಯನಗರ ಸಾಮ್ರಾಜ್ಯವು ಪ್ರಮುಖವಾಗಿ ಕೃಷಿಪ್ರಧಾನ ಸಾಮ್ರಾಜ್ಯವಾಗಿತ್ತು. ಗ್ರಾಮೀಣ ಪ್ರದೇಶಗಳು ಇಲ್ಲಿಯ ಸಂಪತ್ತಿನ ಆಧಾರಗಳಾಗಿದ್ದವು. ರೈತನೇ ಹಳ್ಳಿಗಳ ಮತ್ತು ಸಾಮ್ರಾಜ್ಯದ ಬೆನ್ನೆಲುಬಾಗಿದ್ದನು. ಅವನ ಐಶ್ವರ್ಯವೇ ದೇಶದ ಐಶ್ವರ್ಯ. ಅವನ ಭಾಗ್ಯವೇ ದೇಶದ ಸೌಭಾಗ್ಯ. ರೈತರ ಉದ್ಧಾರವೇ ದೇಶೋದ್ಧಾರ ಎಂದು ನಂಬಿ ರೈತನಲ್ಲಿ ಸುಖ, ಸಂಪತ್ತು ಸಮೃದ್ಧವಾಗಿದ್ದರೆ ದೇಶದಲ್ಲಿ ನೆಲವೂ, ಜಲವೂ, ಸಂಪತ್ತೂ ನದಿಯಂತೆ ಲೀಲಾಜಾಲವಾಗಿ ಹರಿಯುತ್ತದೆ ಎಂಬ ಬಲವಾದ ನಂಬಿಕೆ ಇತ್ತು. ಈ

ಅಂಶಗಳನ್ನು ಅವಲೋಕಿಸಿದರೆ ಅಂದು ರೈತರು ಅರ್ಥಾತ್ ಕೃಷಿಯನ್ನೇ ಅವಲಂಬಿಸಿ ಕೊಂಡಿದ್ದವರಿಗೆ ಸಾಮ್ರಾಜ್ಯದಲ್ಲಿ ಅತ್ಯಂತ ಗೌರವಯುತ ಸ್ಥಾನಮಾನವಿರುವುದು ಸ್ಪಷ್ಟವಾಗುತ್ತದೆ.

ವಿಜಯನಗರ ಅರಸರ ಕಾಲದ ಕೃಷಿಯು ಮಳೆಯೊಂದಿಗೆ ಜೂಜಾಟವಾಡುವುದರಲ್ಲಿಯೇ ಕಾಲಹರಣ ಮಾಡುತ್ತಿತ್ತು. ಅಂದಿನ ರೈತರು ಸಾಮ್ರಾಜ್ಯದ ಅಡಿಗಲ್ಲುಗಳಾಗಿದ್ದರೂ ಅವರು ಬಳಸುತ್ತಿದ್ದ ಕೃಷಿ ಪದ್ಧತಿಗಳು ಉತ್ತಮ ಇಲ್ಲದ್ದರಿಂದ ಅಧಿಕ ಪ್ರಮಾಣದ ಫಸಲನ್ನು ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ರೈತರಲ್ಲಿ ಆಸಕ್ತಿ ಅಜ್ಞಾನ, ಕೀಳು ಮಟ್ಟದ ಶ್ರದ್ಧೆಯಿಂದಾಗಿ ಏಕಾಗ್ರತೆ, ಜಾಗರೂಕತೆ, ಪ್ರಾಮಾಣಿಕತೆಗಳ ಕೊರತೆ ಎದ್ದುಕಾಣುತ್ತಿತ್ತು. ಇದಕ್ಕೆ ಪ್ರಮುಖ ಕಾರಣ ಬಡನತ ಮತ್ತು ಅಜ್ಞಾನ. 'ಅಪ್ಪ ಹಾಕಿದ ಆಲದಮರಕ್ಕೆ ನೇಣು ಹಾಕಿಕೊಂಡು ಸಾಯುವದು' ಎಂಬ ಗಾದೆ ಮಾತು ಹಳ್ಳಿಗಳಲ್ಲಿ ಇಂದಿಗೂ ಪ್ರಚಲಿತವಿದ್ದು, ವಿಶಾಲ ಅರ್ಥವನ್ನೊಳಗೊಂಡಿದೆ. ಇದು ಕೃಷಿಗೆ ಸಂಬಂಧಿಸಿದ ಗಾದೆ ಮಾತಾಗಿದ್ದು, ಕೃಷಿಕನು ಭೂಮಿಯಲ್ಲಿ ಪ್ರತಿ ವರ್ಷ ಭಿನ್ನಭಿನ್ನ ಬೆಳೆಯನ್ನು ಬೆಳೆದರೆ ಕಾಲಗೈಯಾಗಲು ಸಾಧ್ಯ. ಆಗ ನಿರೀಕ್ಷಿತ ಮಟ್ಟಕ್ಕಿಂತ ಉತ್ತಮ ಫಸಲು ಪಡೆಯಲು ಅನುಕೂಲವಾಗುತ್ತದೆ. ಆದರೆ ಒಂದೇ ವಿಧದ ಬೆಳೆಯನ್ನು ಪಡೆಯುತ್ತಿದ್ದರೆ ಉತ್ತಮ ಫಸಲು ಬೆಳೆಯಲು ಸಾಧ್ಯವಿಲ್ಲ. ವಿಜಯನಗರದ ಕಾಲದ ರೈತರು ಸಾಮಾನ್ಯವಾಗಿ ಒಂದೇ ರೀತಿಯ ಬೆಳೆಯನ್ನು ಪ್ರತಿ ವರ್ಷವೂ ಬೆಳೆಯುತ್ತಿದ್ದರೆಂಬುದಕ್ಕೆ ಹಲವಾರು ಸಾಕ್ಷಿ ಆಧಾರಗಳು ಲಭಿಸುತ್ತವೆ.

ವಿದೇಶೀಯರಾದ ಬಾರ್ಬೋಸಾ, ಪಾಯಸ್, ನ್ಯೂನಿಜ್‌ರವರು ವಿಜಯನಗರ ಸಾಮ್ರಾಜ್ಯದ ಬೇರೆ ಭಾಗಲ್ಲಿ ಪ್ರಯಾಣ ಬೆಳೆಸಿ ಕೃಷಿ ಭೂಮಿ, ಭೂಮಿಯ ಫಲವತ್ತತೆ ಬೆಳೆಗಳು ಹಾಗೂ ಸಾಕು ಪ್ರಾಣಿಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ತಿಳಿಸಿದ್ದಾರೆ. ಇವರ ಹೇಳಿಕೆಯ ಪ್ರಕಾರ ಸಾಮ್ರಾಜ್ಯವು ತನ್ನ ಪಶ್ಚಿಮದ ಕಡೆಯಿದ್ದ ಕರಾವಳಿ ಪ್ರದೇಶವನ್ನು ಅತ್ಯಂತ ಫಲವತ್ತಾದ ಭೂಮಿಯೆಂದು ಪರಿಗಣಿಸಿ ಅಲ್ಲಿ ಉತ್ತಮವಾದ ಭತ್ತವನ್ನು ಬೆಳೆದು ಅಕ್ಕಿಯನ್ನು ಮಲಬಾರ್ ಮತ್ತು ಅರ್‌ಮಜ್‌ಗೆ ರಫ್ತು ಮಾಡುತ್ತಿರುವುದಾಗಿ ಹೇಳಿದ್ದಾರೆ. ಪಾಯಸನು ಭಟ್ಕಳದಿಂದ ವಿಜಯನಗರದವರೆಗಿನ ಮಾರ್ಗವನ್ನು ಹಾಗೂ ಮಧ್ಯ ಕರ್ನಾಟಕದ ಕೃಷಿ ಭೂಮಿಯನ್ನು ವರ್ಣಿಸಿ ಉದ್ದಕ್ಕೂ ಫಲವತ್ತಾದ ಕೃಷಿ ಭೂಮಿಯನ್ನು ಹೊಂದಿತ್ತೆಂದೂ ಹತ್ತಿ, ಗೋಧಿ, ಭತ್ತಗಳು ಪ್ರಮುಖ ಬೆಳೆಯಾಗಿದ್ದವೆಂದು ಹೇಳುತ್ತಾನೆ. ಧಾರವಾಡ ಜಿಲ್ಲೆಯ ಬಂಕಾಪೂರ ಮತ್ತು ಸುತ್ತಮುತ್ತಲಿನ ಪ್ರದೇಶವು ವಿಜಯನಗರದ ಕಾಲದಲ್ಲಿ ಕೃಷಿಯ ಬೀಜೋತ್ಪಾದನಾ ಹಾಗೂ ಪಶು ಸಂಗೋಪನ ಕ್ಷೇತ್ರಗಳಿಂದ ಸಮೃದ್ಧಿಯಾಗಿತ್ತು ಎಂದು ನ್ಯೂನಿಜ್ ತಿಳಿಸಿದ್ದಾನೆ. ಅಂದಿನ ಕಾಲದಲ್ಲಿಯೂ ಕೃಷಿಯೇ ಪ್ರಜೆಗಳ ಪ್ರಮುಖ ವೃತ್ತಿಯಾಗಿತ್ತು ಎಂಬುದಕ್ಕೆ ಜನಪದ ಗೀತೆಯು ನಿದರ್ಶನವಾಗಿರುತ್ತದೆ.

ಉದಾ:

ಏಳುತಲೆ ನಾನೆದ್ದು ಯಾರ್‍ಯಾರ ನೆನೆಯಲಿ
ಎಳ್ಳುಜೀರಿಗೆ ಬೆಳೆಯೋಳ | ಭೂಮಿತಾಯಿನ
ಎದ್ದೊಂದು ಗಳಿಗೆ ನೆನದೇನು ||

ಈ ಪದ್ಯವಷ್ಟೇ ಅಲ್ಲದೇ ದೇವರಿಗೆ ಹರಕೆ ಹೊರುವ ಸನ್ನಿವೇಶವನ್ನೊಳಗೊಂಡ ಪದ್ಯವೊಂದು ಉತ್ತಮ ಉದಾಹರಣೆಯಾಗಿದೆ :

ಮೂಡಲ ಮುತ್ತಯ್ಯ ನೋಡಯ್ಯ ಬಡತಾನ
ಮೂಡ್ಲಲ್ಲಿ ರಾಗಿ ಮೆಳೆಯುದ್ದ | ಬೆಳೆದರ
ಮಾಡೂವೆ ನಿನಗೆ ಹರಿಸೇವೆ ||

ಇಂದಿಗೂ ಕೂಡ ರೈತನು ಬೆಳಿಗ್ಗೆ ಎದ್ದಾಕ್ಷಣ ತನ್ನ ಹಿರಿಯ ತಾಯಿ ಎಂದು ನಂಬಿರುವ ಭೂಮಾತೆಯನ್ನು ಸ್ಮರಿಸುವ ದೃಶ್ಯಕ್ಕೆ ಈ ಪದ್ಯಗಳು ಸಾಕ್ಷಿಯಾಗಿವೆ. ಕೃಷಿಗಿಂತ ಭಿನ್ನವಾದ ಇಲ್ಲವೆ ಘನವಾದ ಕಾರ್ಯ ಅಂದಿನ ದಿನಮಾನಗಳಲ್ಲಿ ಪ್ರಜೆಗಳಿಗೆ ಇರಲಿಲ್ಲವೆಂಬುದು ಸ್ಪಷ್ಟವಾಗಿ ಗೋಚರವಾಗುತ್ತದೆ.

ವಿಜಯನಗರ ಕಾಲದ ರೈತರು ಕಾಲಮಾನಕ್ಕೆ ತಕ್ಕಂತೆ ಋತುವನ್ನಾಧರಿಸಿ ವ್ಯವಸಾಯದ ವಿಭಜನೆಯನ್ನು ಉತ್ತಮ ರೀತಿಯಲ್ಲಿಯೇ ಅಳವಡಿಸಿಕೊಂಡಿದ್ದರು. ಆಗಿನ ಕಾಲದ ಶಾಸನಗಳನ್ನು ಗಮನಿಸಿದಾಗ ಕಾರ್ತಿಕ ಮತ್ತು ವೈಶಾಖದ ಬೆಳೆಗಳ ಬಗ್ಗೆ ಉಲ್ಲೇಖಗಳು ಲಭಿಸುತ್ತವೆ. ನವಂಬರ್‌ನಿಂದ ಜನವರಿಯವರೆಗಿನ ಅವಧಿ ಕಾರ್ತಿಕ ಮತ್ತು ವೈಶಾಖದ ಬೆಳೆಗಳೆಂಬುದು ತಿಳಿದುಬರುತ್ತದೆ. ವೈಶಾಖದ ಬೆಳೆಯು ಎಪ್ರಿಲ್ ಮೇ ತಿಂಗಳಿನಲ್ಲಿ ಕೊಯಿಲಿಗೆ ಬರುತ್ತಿತ್ತು. ಇವುಗಳಿಗೆ ಗ್ರಾಮೀಣ ಪ್ರದೇಶದ ಜನತೆ ಕಾರ್ ಫಸಲು ಹಾಗೂ ಹೈನ್ ಫಸಲು ಎಂದು ಕರೆಯುತ್ತಿದ್ದರು. ಅಂದಿನ ಕೃಷಿ ಪದ್ಧತಿಯನ್ನು ಎರಡು ವಿಧವಾಗಿ ವಿಂಗಡಿಸಿಕೊಳ್ಳಲಾಗಿತ್ತು :

1) ಜೂನ್‌ನಿಂದ ಅಕ್ಟೋಬರ್‌ವರೆಗೆ ನೈಋತ್ಯ ಮುಂಗಾರು ಮಳೆಗೆ ಹೊಂದಿಕೊಳ್ಳುವ ಅವಧಿ

2) ಜನವರಿ ಫೆಬ್ರುವರಿ ತಿಂಗಳ ಚಳಿ ಹವೆಯ ಫಸಲು

ಹೀಗೆ ವಿಭಜಿಸಿ ವ್ಯವಸಾಯ ಮಾಡುತ್ತಿದ್ದರು.

ಕಣಿವೆಯ ಕೆಳಭಾಗದಲ್ಲಿದ್ದ ನದಿಗಳು ಹಾಗೂ ಕಾಲುವೆಗಳ ಮೂಲಕ ನೀರನ್ನು ಒದಗಿಸುತ್ತಿದ್ದ ಪೈರಿನ ಭೂಮಿಗಳಿಗೆ ಬೈಲುಭೂಮಿ ಅಥವಾ ಗದ್ದೆ ಸೀಮೆ ಎಂದೂ ಸಂಪೂರ್ಣ ಮಳೆಯನ್ನು ಅವಲಂಭಿಸಿರುವ ಭೂಮಿಯನ್ನು ಹೊಲಗಾಡು ಅಥವಾ ಮಳೆಗಾಡು ಎಂದು ಕರೆಯುತ್ತಿದ್ದರು. ಅಂದಿನ ಅರಸರು ನೀರಾವರಿಗೆ ಅಧಿಕ ಪ್ರಾಶಸ್ತ್ಯ ಕೊಟ್ಟಿದ್ದರು.

ಕೃಷಿಯ ಪ್ರಗತಿಗೆ ನೀರಾವರಿ ಸೌಲಭ್ಯವು ಪ್ರಮುಖವಾದುದು. ಇದರಿಂದ ಅತ್ಯುತ್ತಮ ನಿರೀಕ್ಷಿತ ಪೈರನ್ನು ಪಡೆಯಲು ಅನುಕೂಲವಾಗುವುದಲ್ಲದೆ ವ್ಯವಸಾಯಕ್ಕೆ ಯೋಗ್ಯವಾದ ಬಂಜರು ಭೂಮಿಯನ್ನು ಕೃಷಿ ಮಾಡಿ ಉತ್ತಮ ಬೆಳೆಯನ್ನು ಬೆಳೆಯ ಬಹುದೆಂದು ವಿಜಯನಗರದ ಅರಸರು ನೀರಾವರಿಗೆ ಹಾಗೂ ಅದರ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ಕೊಟ್ಟು ನಾಡಿನಾದ್ಯಂತ ಕೆರೆ, ಕಟ್ಟೆ, ಬಾವಿಗಳನ್ನೂ ನಿರ್ಮಿಸಿ ಜನರು ಸ್ವಾವಲಂಬಿ ಬದುಕು ರೂಪಿಸಿಕೊಳ್ಳಲು ಶ್ರಮಿಸಿದರು.

ನೀರಾವರಿ ಪದ್ಧತಿಯಲ್ಲಿ ವ್ಯವಸಾಯ ಮಾಡುತ್ತಿದ್ದ ಭೂಮಿಯಲ್ಲಿ ಭತ್ತ, ಕಬ್ಬು, ಗೋಧಿ, ಜೋಳ, ಹೊಗೆಸೊಪ್ಪು, ಹತ್ತಿ, ದ್ವಿದಳ ಕಾಳುಗಳು, ಮುಂತಾದವುಗಳನ್ನು ಬೆಳೆಯಲಾಗುತ್ತಿದ್ದರೆ ಮಳೆಯೊಡನೆ ಜೂಜಾಟವಾಡುತ್ತಿದ್ದ ಜಮೀನಿನಲ್ಲಿ ಹುಣಸೇ ಹಣ್ಣು, ಬೇಳೆಕಾಳು (ತೊಗರಿ), ತೆಂಗು, ಖರ್ಜೂರ, ಜೀರಿಗೆ, ಈರುಳ್ಳಿ, ಬೆಳ್ಳುಳ್ಳಿ, ಅರಿಶಿನ, ಅಡಿಕೆ ಮತ್ತು ಮೆಣಸು, ಹಣ್ಣಿನ ಗಿಡಗಳು, ಮುಸುಕಿನ ಜೋಳ, ಮೊದಲಾದವುಗಳನ್ನು ಬೆಳೆಯಲಾಗುತ್ತಿದ್ದಿತು. ನೀರಾವರಿಗೆ ಹೆಚ್ಚಾಗಿ ಕೆರೆಗಳೇ ಆಶ್ರಯವಾಗಿದ್ದವು. ತೋಟ ಗಾರಿಕೆ ಬೆಳೆಯೂ ಕೂಡ ಹೆಚ್ಚಿನ ರೀತಿಯಲ್ಲಿ ಕಂಡುಬರುತ್ತದೆ. ತೆಂಗು, ಅಡಿಕೆ, ಗೋಡಂಬಿ, ಮೆಣಸು, ಬಾಳೆ ಹಾಗೂ ಎಲ್ಲ ರೀತಿಯ ಹಣ್ಣುಗಳೂ ಕೂಡ ತೋಟಗಾರಿಕೆಯಲ್ಲಿ ಬೆಳೆಯಲಾಗುತ್ತಿತ್ತು. ಮಳೆ ಆಶ್ರಿತ ಪ್ರದೇಶದಲ್ಲಿಯೇ ಮಳೆಗಾಲದಲ್ಲಿ ಬಿತ್ತನೆ ಮಾಡಿ ದ್ವಿದಳಧಾನ್ಯಗಳಾದ ಹೆಸರುಕಾಳು, ಅಲಸಂದೆ, ಹುರುಳಿಕಾಳು, ಕಡ್ಲೆಕಾಳು, ಅವರೇಕಾಳು ಇತ್ಯಾದಿ ದ್ವಿದಳಧಾನ್ಯಗಳನ್ನು ಬೆಳೆಯುತ್ತಿದ್ದರು. ಕೆರೆಗಳು ಮತ್ತು ಕಾಲುವೆಗಳ ಕೆಳಗೆ ತೋಟದ ಬೆಳೆಗಳನ್ನು ಬೆಳೆಯುತ್ತಿದ್ದರು. ಏಕೆಂದರೆ ನೀರು ಸುಲಭವಾಗಿ ಸಿಗುವುದರಿಂದ ಇಲ್ಲಿ 3000 ರಿಂದ 4000 ರಷ್ಟು ಉತ್ತಮ ಜಾತಿಯ ಮರ, ಗಿಡ ಫಸಲನ್ನು ಬೆಳೆಯುತ್ತಿದ್ದರೆಂದು ಶಾಸನದಿಂದಲೇ ತಿಳಿಯುತ್ತದೆ.

ವಿಜಯನಗರದ ಕಾಲದ ಬೆಳೆಗಳನ್ನು ಎಕೆ 12, ಎಂ.ಎಲ್. 20 ಅದೇ ಟಿ.ಎಂ. 48, ಎಂ.ಎ.ಆರ್. 1923 - ಪು. 122 ಈ ಶಾಸನವು ಹೀಗೆ ವಿವರಿಸುತ್ತದೆ :

1) **ದ್ವಿದಳ ಧಾನ್ಯಗಳು :** ಅವರೆ, ಉದ್ದು, ಗೋದಿ, ಹೆಸರು, ಹುರುಳಿ, ಕಡ್ಲೆಕಾಳು, ಅಲಸಂದೆ.

2) **ಸಾಂಬಾರ ವಸ್ತುಗಳು :** ಮೆಣಸು, ಅಡಕೆ, ಸಾಸಿವೆ, ಮಂತ್ಯ, ಜೀರಿಗೆ, ಸಬ್ಬಸಿಗೆ, ಧನಿಯ ಮತ್ತು ಅರಿಶಿನ.

3) **ತೋಟದ ಬೆಳೆ :** ತೆಂಗು, ಹಣ್ಣು ಹಂಪಲುಗಳು, ತರಕಾರಿಗಳು

4) **ನೀರಾವರಿ ಬೆಳೆ :** ಭತ್ತ, ರಾಗಿ, ಜೋಳ, ಗೋಧಿ, ನವಣೆ, ಮುಸುಕಿನ ಜೋಳ,

ಹತ್ತಿ, ಸಣಬು, ದನಕರುಗಳಿಗೆ ಹುಲ್ಲು ಎಂದು ಸಂಕ್ಷಿಪ್ತವಾಗಿ ವಿವರಿಸಿರುವರು. ಕಬ್ಬಿನ ಉತ್ಪನ್ನಗಳಾದ ಸಕ್ಕರೆ ಮತ್ತು ಬೆಲ್ಲ ಹೇರಳವಾಗಿ ಉತ್ಪಾದನೆಯಾಗುತ್ತಿದ್ದು, ಸಾಮ್ರಾಜ್ಯವು ಈ ವಸ್ತುಗಳ ಉತ್ಪಾದನೆಯಲ್ಲಿ ಸ್ವಯಂಪೂರ್ಣವಾಗಿತ್ತೆಂದು ಫಾಹಿಯಾನ್ ಹೇಳುತ್ತಾನೆ. ಬಾರ್ಬೋಸನ ಪ್ರಕಾರ ಸಾಮ್ರಾಜ್ಯದಲ್ಲಿ ತಯಾರಾಗುತ್ತಿದ್ದ, ಸಕ್ಕರೆಯು ಹುಡಿಯಾಗಿರುತ್ತಿತ್ತೆಂದು ಹೇಳಿದ್ದಾನೆ. ಮತ್ತೊಬ್ಬ ಪ್ರವಾಸಿಯಾದ ವರ್ತಮೊ ಭಟ್ಕಳದಲ್ಲಿ ಸಕ್ಕರೆಯು ಹೇರಳವಾಗಿದ್ದುದನ್ನು ನೋಡಿದನು. ಮತ್ತು ನಮ್ಮಲ್ಲಿ ಅದನ್ನು ಗಟ್ಟಿಗೊಳಿಸಲಾಗಿತ್ತು ಎಂದು ಹೇಳಿದ್ದಾನೆ. ಕಬ್ಬನ್ನು ಗದ್ದೆಯಲ್ಲಿಯೂ ನೀರು ಹೆಚ್ಚೆಚ್ಚು ಲಭ್ಯವಿರುವ ಪ್ರದೇಶದಲ್ಲಿ ಬೆಳೆಯಲಾಗುತ್ತಿತ್ತು. ಗಾಣಗಳಿಂದ ಕಬ್ಬಿನ ರಸ ತೆಗೆಯಲಾಗುತ್ತಿತ್ತು. ತೆಂಗಿನಕಾಯಿ ಹಾಗೂ ಅದರ ಉತ್ಪನ್ನಗಳಾದ ಎಣ್ಣೆ, ಎಳನೀರು, ನಾರುಗಳ ವರ್ಣನೆಯು ಶಾಸನಗಳಿಂದ ತಿಳಿದುಬರುತ್ತದೆ. ತೆಂಗಿನ ಎಣ್ಣೆಯನ್ನು ಕೂಡ ಗಾಣಗಳಿಂದ ತೆಗೆಯಲಾಗುತ್ತಿತ್ತು. ಗಾಣಗಳನ್ನು ಮರದಿಂದ ಅಥವಾ ಕಲ್ಲಿನಿಂದ ಸಿದ್ಧಪಡಿಸಿ ಜೋಡಿ ಎತ್ತುಗಳ ಸಹಾಯದಿಂದ ಅದನ್ನು ತಿರುಗಿಸಿ ಅರೆದು ಉತ್ಪಾದಿಸುತ್ತಿದ್ದರು.

ವಿಜಯನಗರ ಅರಸರ ಕಾಲದ ಬೆಳೆಗಳ ವರ್ಣನೆಯನ್ನು ಅಂದಿನ ಕಾಲದ ಸಾಹಿತ್ಯದ ಆಧಾರಗಳಿಂದ ತಿಳಿಯಬಹುದಾಗಿದೆ. ಇವುಗಳಲ್ಲಿ ಪ್ರಮುಖವಾದುದೆಂದರೆ 'ರಾಮಧಾನ್ಯ ಚರಿತೆ'. ಇಲ್ಲಿ ಎಲ್ಲಾ ಧಾನ್ಯಗಳ ವರ್ಣನೆಯು ಇದ್ದರೂ ಕೂಡ ರಾಗಿಗೆ ಹೆಚ್ಚಿನ ಮಹತ್ವ ಕೊಡಲಾಗಿದೆ. ಸಾಮ್ರಾಜ್ಯದಲ್ಲಿ ಕೆರೆ, ನಾಲೆಗಳು, ಹಾಗೂ ಬಾವಿಗಳನ್ನು ನಿರ್ಮಿಸುವ ಹೆಚ್ಚಿನ ಕಾರ್ಯಭಾರವನ್ನು ದೇವಾಲಯಗಳಿಗೆ, ಗ್ರಾಮಸಭೆಗಳು ಹಾಗೂ ಖಾಸಗಿ ವ್ಯಕ್ತಿಗಳಿಗೂ ವಹಿಸಿಕೊಡಲಾಗುತ್ತಿತ್ತು. ಅವರು ಈ ಜವಾಬ್ದಾರಿಯನ್ನು ಧರ್ಮಕಾರ್ಯವೆಂದು ಪರಿಗಣಿಸಬೇಕಾಗಿದ್ದೀತು. ನೀರಾವರಿ ಕೃಷಿ ಪದ್ಧತಿಯಿಂದ ಸರಕಾರಕ್ಕೆ ಅಧಿಕ ಪ್ರಮಾಣದಲ್ಲಿ ಆದಾಯ ಲಭ್ಯವಾಗುತ್ತಿತ್ತು. ಕೆರೆ, ನಾಲೆ ಹಾಗೂ ಬಾವಿಗಳನ್ನು ನಿರ್ಮಿಸುವ ಜವಾಬ್ದಾರಿಯನ್ನು ದೇವಾಲಯ ಹಾಗೂ ಶ್ರೀಮಂತರುಗಳಿಗೆ ವಹಿಸುತ್ತಿದ್ದುದರಿಂದ ಸಾಮಾನ್ಯ ಜನರ ಶ್ರಮವನ್ನು ಹೆಚ್ಚಾಗಿ ಸದ್ವಿನಿಯೋಗಗೊಳಿಸಿಕೊಳ್ಳುತ್ತಿದ್ದರಿಂದ ಈ ಸಂದರ್ಭದಲ್ಲಿ ಸಾಮಾನ್ಯರ ಜೀವನ ಅಡಕತ್ತಿನಲ್ಲಿ ಸಿಲುಕಿದ ಅಡಿಕೆಯಂತೆ ಚಿಂತಾಜನಕವಾಗಿರುತ್ತಿತ್ತೆಂಬುದು ತಿಳಿದುಬರುತ್ತದೆ. ಕೆರೆ ನಿರ್ಮಿಸಿದವರಿಗೆ ಅಥವಾ ಕೆರೆಯನ್ನು ಕಾಯುತ್ತಿದ್ದವರಿಗೆ ತೆರಿಗೆ ಮುಂತಾದ ಸಮಯದಲ್ಲಿ ಸಂಪೂರ್ಣ ವಿನಾಯಿತಿ ಸೌಲಭ್ಯ ಸಿಗುತ್ತಿತ್ತು. ಆದರೆ ಶ್ರಮಿಕರನ್ನು ಒತ್ತಾಯಪೂರ್ವಕ ದುಡಿಸಿಕೊಂಡು, ಅವರು ದೇವರಿಗೆ ಸಲ್ಲಿಸಿರುವ ಸೇವೆ ಅಥವಾ ದಾನವೆಂದು ಪರಿಗಣಿಸಿ ಅವರ ಬೆವರಹನಿಗಳ ಮೇಲೆ ಮಹಲುಗಳನ್ನು ನಿರ್ಮಿಸುತ್ತಿದ್ದರು. ಇದಕ್ಕೆ ನಿದರ್ಶನವಾಗಿ ಅನೇಕ ಶಾಸನಗಳು ಸಿಗುತ್ತವೆ. ಅವುಗಳಲ್ಲಿ ದುಡಿಮೆಯನ್ನು ಕಡ್ಡಾಯ ಮತ್ತು ಬಿಟ್ಟಿ ಎಂದು ಎಂದು ಶಾಸನಗಳಲ್ಲಿ ಕರೆಯಲಾಗಿದೆ.

ಕೆರೆಗಳನ್ನು ಸಂದರ್ಭಕ್ಕನುಗುಣವಾಗಿ ದುರಸ್ತಿ ಮಾಡಿಸಲಾಗುತ್ತಿತ್ತು. ಹೂಳು ತೆಗೆಯುವುದು, ಏರಿಗಳಲ್ಲಿನ ಬಿರುಕು ಸರಿಪಡಿಸುವದು, ಕೆರೆಯ ಕೋಳವೆಯಲ್ಲಿರುವ ದೋಷಗಳನ್ನು ನಿವಾರಿಸುವದು, ಕೆರೆಗಳಿಗೆ ತೊಂದರೆಯಾಗದಂತೆ ನಿಗಾವಹಿಸಿ ಕಾಲ ಕಾಲಕ್ಕೆ ದುರಸ್ತಿಗೊಳಿಸಲು ವಿಶೇಷ ನಿಧಿ ಮೀಸಲಿಡುವ ಪದ್ಧತಿ ಜಾರಿಯಲ್ಲಿತ್ತು. ಪ್ರತಿ ವರ್ಷವೂ ಕೆರೆಯಿಂದ ಹೂಳೆತ್ತಿಸಿ ಸ್ವಚ್ಛಗಳಿಸುವ ವ್ಯಕ್ತಿಗಳಿಗೆ ಭೂಮಿಯನ್ನು ಕೊಡುಗೆ ಯಾಗಿ ನೀಡಲಾಗುತ್ತಿತ್ತು. ನೀರಾವರಿಯ ಹಕ್ಕುಗಳ ಬಗ್ಗೆ ಹಳ್ಳಿ ಹಳ್ಳಿಗಳ ಮಧ್ಯೆ ವಿರಸವುಂಟಾದರೆ ಪಂಚಾಯಿತಿಯ ಮೂಲಕ ಪರಿಹಾರ ಸೂಚಿಸುತ್ತಿದ್ದರು.

ಹಂಪಿ ಹಾಗೂ ಅದರ ಸುತ್ತಮುತ್ತಲೂ ಇರುವ ಸಾವಿರಾರು ಕೆರೆಗಳು, ವಿಜಯ ನಗರದ ಅರಸರ ಕಾಲದವುಗಳೆಂದು ಶಾಸನಗಳಿಂದ ಕಂಡುಬರುವುದರಿಂದ ರಾಜರು ನೀರಾವರಿಗೆ ಯಾವ ರೀತಿಯ ಪ್ರೋತ್ಸಾಹ ಕೊಡುತ್ತಿದ್ದರು ಎಂಬುದು ತಿಳಿದುಬರುತ್ತದೆ. ಕೆರೆಗಳ ಉಪಯೋಗ ಕೇವಲ ವ್ಯವಸಾಯಕ್ಕಾಗಿಯೇ ಮೀಸಲಾಗಿರಲಿಲ್ಲ. ಮಾನವ ಸಮುದಾಯ ಜೀವನದ ಅವಿಭಾಜ್ಯ ಅಂಗವೂ ಆಗಿದ್ದವು.

ವಿಜಯನಗರದ ಅರಸರ ರಾಣಿಯರೂ ತಮ್ಮ ಹೆಸರಿನಲ್ಲಿ ಕೆರೆಗಳನ್ನು ನಿರ್ಮಿಸಿರು ವುದು ಕಂಡುಬರುತ್ತದೆ. ಕೃಷ್ಣದೇವರಾಯ ತನ್ನ 'ಆಮುಕ್ತಮಾಲ್ಯಡ'ದಲ್ಲಿ 'ರಾಜರು ಕೆರೆಗಳನ್ನು ನಿರ್ಮಿಸಿ, ನಾಲೆಗಳನ್ನು ತೋಡಿಸಿ, ನೀರಾವರಿ ಸೌಲಭ್ಯಗಳನ್ನು ಸಾಮಾನ್ಯ ಜನತೆಗೂ ಒದಗಿಸಬೇಕು'ಎಂದು ಹೇಳಿದ್ದಾನೆ. ಕರ್ನಾಟಕದ ವಿವಿಧ ಭಾಗಗಳಲ್ಲಿ ನೀರಾವರಿ ಸೌಲಭ್ಯಗಳನ್ನು ಕೃಷ್ಣದೇವರಾಯನು ತನ್ನ ಕಾಲದಲ್ಲಿ ಮಾಡಿಸಿರುವನೆಂಬು ದಕ್ಕೆ ಆಧಾರಗಳು ಸಿಗುತ್ತವೆ.

ನೀರಾವರಿ ಸೌಲಭ್ಯ ಸಾಕಷ್ಟಿದ್ದರೂ ಮೂಲ ಮಳೆಯ ಅವಶ್ಯಕತೆಯ ಬೇಕಾಗು ತ್ತಿತ್ತು. ಸಕಾಲಕ್ಕೆ ಬಾರದಿದ್ದರೆ ಕ್ಷಾಮ, ಬರಗಾಲ, ನೆರೆ ಹಾವಳಿ, ಬೆಳೆಯ ವಿಫಲತೆ, ಪ್ಲೇಗು ಇನ್ನಿತರ ರೋಗಗಳ ಹಾವಳಿಯಿಂದಾಗಿ ಜನತೆ ಬರ ಸಿಡಿಲು ಬಡಿದಂತೆ ತತ್ತರಿಸುತ್ತಿದ್ದರು. ಕೆರೆಯು 2-3 ಸಲ ಒಡೆದರೆ ಬ್ರಾಹ್ಮಣರು ದೇವರಪೂಜೆ ಮಾಡಿ ಕೆರೆಗೆ ಮನುಷ್ಯ ಇಲ್ಲವೆ ಪ್ರಾಣಿ ಬಲಿ ಕೊಡಲು ಸೂಚಿಸುತ್ತಿದ್ದರು. ಮನುಷ್ಯರಲ್ಲಿ ಮುತ್ತೈದೆಯರ ಬಲಿಯನ್ನೇ ಕೊಡುವ ರೂಢಿಯಿತ್ತೆಂದು ಪೇಸ್ ಎಂಬುವವನು ಹೇಳಿ ರುತ್ತಾನೆ. ನರಬಲಿಗೆ ಅಸ್ಪೃಶ್ಯರನ್ನೇ ಆಯ್ಕೆ ಮಾಡುವ ಪದ್ಧತಿ ಇರುವದರಿಂದ ವಿಜಯ ನಗರದ ಶ್ರೀಮಂತ ಸಾಮ್ರಾಜ್ಯದಲ್ಲಿ ಬಡ ಅಸ್ಪೃಶ್ಯರ ಸ್ಥಿತಿ ಚಿಂತಾಜನಕವಾಗಿತ್ತು.

ಕೃಷಿಯು ಅಂದು ಭೂ ಮಾಲೀಕರ ಸ್ವತ್ತಾಗಿದ್ದಿತ್ತು. ಭೂಮಿಯಲ್ಲಿ ಕೆಲಸ ಮಾಡಲು ಕೂಲಿ ಕೆಲಸಕಾರರನ್ನು, ಜೀತದಾಳುಗಳನ್ನು, ಶೂದ್ರ ಜಾತಿಯವರನ್ನೇ ನೇಮಿಸಿಕೊಳ್ಳುವ ಪದ್ಧತಿ ಇತ್ತು. ಅಸ್ಪೃಶ್ಯ ಜಾತಿಯವರಾದ ಇವರಿಗೆ ಹೊಲೆಯರು

ಮತ್ತು ಮುಲದ್ದು ಎಂದು ಕರೆಯುತ್ತಿದ್ದುದಾಗಿ ಶಾಸನಗಳಿಂದ ತಿಳಿದುಬರುತ್ತದೆ. ಅಲ್ಲದೆ ಇವರನ್ನು ಚಂಡಾಲರು, ಸಂಭೋಳಿಗಳು ಹಾಗೂ ಪಂಚಮರೆಂದು ಕರೆಯುತ್ತಿದ್ದರು.

ಕೃಷಿಯಲ್ಲಿನ ಜಾತಿಗಳು

ಶೂದ್ರರು, ಗೌಡರು ಅಥವಾ ಒಕ್ಕಲಿಗರು, ಹೊಲೆಯರು, ಮಾದಿಗರು, ಮೇಲು ಮತ್ತು ಕೆಳಜಾತಿಗಳೆಂಬ ಉಪಪ್ರಕಾರಗಳು ಹಲವಾರು ಜಾರಿಯಲ್ಲಿದ್ದ ಬಗ್ಗೆ ಶಾಸನಗಳಲ್ಲಿ ಉಲ್ಲೇಖಿತವಾಗಿರುತ್ತವೆ. ಇವರೆಲ್ಲರ ಪ್ರಮುಖ ಉದ್ಯೋಗ ಕೃಷಿಯೇ ಆಗಿತ್ತು. ಒಕ್ಕಲಿಗರು ಅಥವಾ ಗೌಡರು ನೆಲವನ್ನು ಉಳುಮೆ ಮಾಡಿಸುತ್ತಿದ್ದರು. ಅಂದಿನ ಕೃಷಿಯು ಇವರ ಆರ್ಥಿಕ ವ್ಯವಸ್ಥೆಯನ್ನು ಅವಲಂಭಿಸಿತ್ತು. ಕೃಷಿ ಕಾರ್ಮಿಕರಲ್ಲಿ ಹೊಲೆಯರು ಪ್ರಧಾನರಾಗಿದ್ದರು. ಇವರ ಹುಟ್ಟು-ಸಾವುಗಳು ಮಣ್ಣಿನೊಂದಿಗೆ ನಿಕಟ ಸಂಪರ್ಕ ಹೊಂದಿದ್ದವು.

ಭೂಕಂದಾಯ

ವಿಜಯನಗರ ಸಾಮ್ರಾಜ್ಯದ ಭೂ ಕಂದಾಯ ವ್ಯವಸ್ಥೆಯನ್ನು ಎರಡು ರೀತಿಯಲ್ಲಿ ವಿಭಾಗಿಸಲಾಗಿದೆ :

1) ಕಂದಾಯ ನಿಗದಿ, 2) ಕಂದಾಯ ವಸೂಲಿ.

ಭೂಕಂದಾಯ ನಿಗದಿಯ ಯಾವುದೇ ಪದ್ಧತಿಯಲ್ಲಿ ಮೊದಲನೆಯ ತತ್ವವನ್ನು ಕೃಷಿಕನು ಕೊಡಬೇಕಾಗಿದ್ದ ತೆರಿಗೆಯನ್ನು ಮುಖ್ಯವಾಗಿ ಮಣ್ಣಿನ ವರ್ಗ ಮತ್ತು ಬೇಸಾಯದ ಪರಿಸ್ಥಿತಿಗಳನ್ನು ಆಧಾರವಾಗಿಟ್ಟುಕೊಂಡು ನಿರ್ಧರಿಸಲಾಗುತ್ತಿತ್ತು. ಈ ಉದ್ದೇಶದಿಂದ ಬೇಸಾಯದ ಭೂಮಿಯನ್ನು ಹೀಗೆ ವಿಂಗಡಿಸಲಾಗಿದೆ.

1) ಕಡಾರಂಬ (ಒಣ ಬೇಸಾಯ)

2) ನೀರಾರಂಬ (ಗದ್ದೆ ಬೇಸಾಯ)

3) ತೋಟಾರಂಬ (ತೋಟದ ಬೇಸಾಯ)

4) ಕುಮರಿ (ಸ್ಥಳವನ್ನು ವರ್ಗಾಯಿಸುವ ಬೇಸಾಯ)

ಶಾಸನಗಳಲ್ಲಿ ಇವುಗಳನ್ನು ಬೇರೆ ಬೇರೆಯಾಗಿ ಉಲ್ಲೇಖಿಸಿರುವುದರಿಂದ ಇವುಗಳಿಗೆ ಭಿನ್ನ ಭಿನ್ನ ರೂಪದಲ್ಲಿ ಕಂದಾಯ ದರ ನಿಗದಿ ಮಾಡಲಾಗುತ್ತಿತ್ತು ಎಂಬುದು ಸ್ಪಷ್ಟವಾಗುತ್ತದೆ. ಕೆಲವರು ಉತ್ಪಾದಿಸಿದ 1/6 ಭಾಗವನ್ನು ತೆರಿಗೆಯಾಗಿ ಕೊಡಬೇಕಾಗಿತ್ತು. ವಿದೇಶಿಯರು ತಮ್ಮ ಬರವಣಿಗೆಯಲ್ಲಿ ಹೇಳಿರುವ ವರ್ಣನೆಯು ವಿಜಯನಗರದಲ್ಲಿ ಇದ್ದದ್ದೇ. ಆಗಿದ್ದರೆ ಮೇಲಿನ ತೆರಿಗೆಯ ಪ್ರಮಾಣವು ಸುಳ್ಳೆಂದು ಹೇಳಬಹುದು. ತೆರಿಗೆಯನ್ನು ದರ, ಸುಂಕಣೆ ಎಂದು ಕರೆಯಲಾಗುತ್ತಿತ್ತು. ಗ್ರಾಮದ ರೈತರು ಮತ್ತು

ಇತರ ನಿವಾಸಿಗಳು ತಮ್ಮ ಮನೆಗಳ ಮೇಲೆ ತೆರಿಗೆ ಕೊಡಬೇಕಾಗಿತ್ತು. ಈ ತೆರಿಗೆ ಪದ್ಧತಿಯನ್ನು ಹೊದಕೆ ಅಥವಾ ಹೊದಿಸಿದ ಮಾಡು, ಬಿದರ ಮತ್ತು ಮಹೆವನ ಎಂದು ವಿವಿಧ ರೀತಿಯಲ್ಲಿ ಕರೆಯುತ್ತಿದ್ದರು. ಅಂದಿನ ಕಾಲದಲ್ಲಿ ರೈತರ ಜೀವನಾಡಿಯೇ ಆಗಿದ್ದ ನೇಗಿಲು, ಎತ್ತುಗಳು, ಬಂಡಿಗಳು, ಬಿತ್ತನೆ ಬೀಜಗಳೆಲ್ಲವೂ ತೆರಿಗೆಯಿಂದ ಮುಕ್ತವಾಗುತ್ತಿರಲಿಲ್ಲ. ದನಗಳನ್ನು ಮೇಯಿಸುವ ಹುಲ್ಲುಗಾವಲು ಪ್ರದೇಶಕ್ಕೂ ತೆರಿಗೆ ಕೊಡಬೇಕಾಗಿದ್ದಿತ್ತೆಂದು ಆಧಾರಗಳಿಂದ ತಿಳಿದುಬರುತ್ತದೆ.

ಹೀಗೆ 'ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆಯೇ ಮೇಲು', 'ಕುಳಿತು ಉಂಡರೆ ಕುಡಿಕೆ ಹೊನ್ನು ಸಾಲದು', 'ಕೈಕೆಸರಾದರೆ ಬಾಯಿಗೆ ಮೊಸರು' ಎಂಬ ಉಕ್ತಿಗಳಂತೆ ಕೃಷಿ ಪ್ರಧಾನ ಭಾರತ ದೇಶದಲ್ಲಿ ವಿಜಯನಗರದ ಅರಸರು ಕೃಷಿಗೆ ಹೆಚ್ಚಿನ ಆದ್ಯತೆ ಕೊಡುವ ಮೂಲಕ ಕೃಷಿಯೇ ರಾಷ್ಟ್ರದ ಬೆನ್ನೆಲುಬು ಎಂಬುದನ್ನು ಸಾಬೀತುಪಡಿಸಿರುವರು.

ಆಧಾರ ಗ್ರಂಥಗಳು

1) **ಸಾಮ್ರಾಜ್ಯ ಮತ್ತು ಸಂಸ್ಕೃತಿ**- ಡಾ ಚಿನ್ನಸ್ವಾಮಿ ಸೋಸಲೆ
2) **ವಿಜಯನಗರ ಕಾಲದ ನೀರಾವರಿ ವ್ಯವಸ್ಥೆ**- ಸಿ.ಟಿ.ಎಂ. ಕೊಟ್ರಯ್ಯ
3) **ಕರ್ನಾಟಕದ ಸಮಗ್ರ ಇತಿಹಾಸ**- ಫಾಲಾಕ್ಷ
4) **ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ**- ಸಂ. ರಾಜಾರಾಮ ಹೆಗಡೆ
5) **ಹೊಸಪೇಟೆ ತಾಲೂಕು ದರ್ಶನ**- ಡಾ. ಸಿ.ಮಹದೇವ, ಡಾ. ಎ.ಸುಬ್ಬಣ್ಣ, ರೈ ಮತ್ತು ಡಾ. ಮಾಧವ ಪೆರಾಜೆ
6) **ಹಂಪಿ ಪರಿಸರದ ಕೆರೆಗಳು**- ಸಿ.ಎಸ್.ವಾಸುದೇವನ್.

47. ವಿಜಯನಗರದ ಭೂ ಹಿಡುವಳಿ ವ್ಯವಸ್ಥೆ

ಡಾ. ಎಚ್.ಈ.ಬಸವರಾಜಪ್ಪ

ಒಂದು ಸಂಸ್ಕೃತಿ ಬೆಳವಣಿಗೆಯ ದೃಷ್ಟಿಯಿಂದ ಇಂತಹ ಸೂಕ್ಷ್ಮಸ್ತರದ ಅಧ್ಯಯನ ಮಾಡಲಾಗಿದೆ. ರಾಜಕೀಯ, ಸಾಮಾಜಿಕ, ಆರ್ಥಿಕ, ಘಟನೆಗಳು ಈ ದೃಷ್ಟಿಯಿಂದ ಪ್ರಮುಖ ಪಾತ್ರ ವಹಿಸುತ್ತವೆ. ಈ ರೀತಿಯ ಅಧ್ಯಯನಗಳಿಂದ ಸಾಮಾನ್ಯ ಜನರ ಬದುಕು ಹಾಗೂ ಪ್ರಾದೇಶಿಕ ಸಂಸ್ಕೃತಿಯ ಬೆಳವಣಿಗೆಯನ್ನು ಸಾಮಾನ್ಯ ಜನರ ಬದುಕು ಹಾಗೂ ಪ್ರಾದೇಶಿಕ ಸಂಸ್ಕೃತಿಯ ಬೆಳವಣಿಗೆಯನ್ನು ಕುರಿತು ಸಂಶೋಧನೆ ಮಾಡುವುದನ್ನು ಇಂದಿನ ಅವಶ್ಯಕತೆಯಾಗಿದೆ. ಭಾರತದ ಉಪ ಖಂಡದಲ್ಲೆಲ್ಲಾ ಭೂಹಿಡುವಳಿಗಳ ಸ್ವರೂಪವು ಹೆಚ್ಚು. ಕಡಿಮೆ ಒಂದೇ ರೀತಿ ಇರುವುದನ್ನು ನಾವು ಗಮನಿಸಬಹುದು. ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತಿತರ ಕಾರಣಗಳಿಗಾಗಿ ಭೂ ಹಿಡುವಳಿಗಳನ್ನು ರಾಜ್ಯವು ವ್ಯಕ್ತಿಗಳಿಗೆ ಮತ್ತು ಸಮುದಾಯಗಳಿಗೆ ಶತಮಾನಗಳಿಂದಲೂ ನೀಡುತ್ತಾ ಬಂದಿವೆ. ವಿಜಯನಗರವು ಇದರಿಂದ ಹೊರತೇನಲ್ಲ. ಪ್ರತಿ ಪ್ರದೇಶದ ಸಮುದಾಯಗಳ ಸ್ಥಾನಮಾನಗಳ ನಿರ್ಧಾರವಾಗಿರುವುದೇ ಕೃಷಿಗೊಳಪಟ್ಟ, ಭೂಮಿಯ ಸಂಬಂಧಗಳ ನಿರ್ಣಯಕ್ಕೆ ಒಳಪಡುವುದು ಭೂಮಿಯ ಮೇಲೆ ಹೊಂದಿರುವ ಒಡೆತನದಿಂದ ಎಂಬುದನ್ನು ನಾವಿಲ್ಲಿ ಗಮನಿಸಬೇಕಾಗಿದೆ. ಈ ಹಿನ್ನಲೆಯಲ್ಲಿ ಪ್ರಸ್ತುತ ಅಧ್ಯಯನ ವಿಜಯನಗರದ ಕೃಷಿ ಸಮುದಾಯಗಳು ಯಾವ ಯಾವ ರೀತಿಯ ಭೂ ಹಿಡುವಳಿಗಳನ್ನು ಯಾವ ಯಾವ ಕಾರಣಗಳಿಗಾಗಿ ಅನುಭವಿಸುತ್ತಾ ಬಂದಿವೆ. ಹಾಗೂ ಭೂ ರಹಿತ ಸಮುದಾಯಗಳು ಭೂ ಹಿಡುವಳಿ ಹೊದಿರುವ ಸಮುದಾಯ ಗಳೊಂದಿಗೆ ಯಾವ ರೀತಿಯ ಸಂಬಂಧವನ್ನು ಹೊಂದಿವೆ ಎಂಬುದನ್ನು ವಿಶ್ಲೇಷಿಸುತ್ತದೆ.

ವಿಜಯನಗರದ ಶಾಸನಗಳನ್ನು ಅಧ್ಯಯನ ಮಾಡಿದರೆ ಈ ವಿಶಾಲ ರಾಜ್ಯವು ರೈತಾಪಿ ವರ್ಗದ ಜನರು ಉತ್ಪಾದಿಸಿದ ಧಾನ್ಯಗಳು ಹಾಗೂ ಅವರ ದೇಹ ಶ್ರಮದ ಮೇಲೆ ಅಧಿಕ ತೆರಿಗೆ ವಿಧಿಸಿತ್ತು. ಸ್ಥಳೀಯ ಸಾಮಂತ ಆಡಳಿತ ವ್ಯವಸ್ಥೆಗಳೂ ಆಗಿಂದಾಗ್ಗೆ ಬದಲಾಯಿಸುತ್ತಿದ್ದವು. ರಾಜ ಹಾಗೂ ಅವನ ಸಾಮಂತ ಪ್ರಭುಗಳು ವಿಜಯನಗರದ ರೈತರ ಮೇಲೆ ಅಧಿಕ ತೆರಿಗೆಯನ್ನು ವಿಧಿಸುತ್ತಿದ್ದ ಎಂದು ಸೂಚಿಸುವ ಶಾಸನಗಳಿಂದ ತಿಳಿದುಬರುವ ಮುಖ್ಯಾಂಶವೆಂದರೆ ಅಧಿಕ ತೆರಿಗೆಯನ್ನು ಹೊರುವ ಪ್ರಬಲ ಜವಾಬ್ದಾರಿ ವರ್ಗವೂ ಸಹ ಇತ್ತು. ಹೀಗಾಗಿ ವಿಜಯನಗರ ಕಾಲದ ಬಹುಸಂಖ್ಯೆ ಪಾಳ ಏಪಟ್ಟುಗಳು ಅಥವಾ ಅಮರನಾಯಕರು ಕೃಷಿ ಮೂಲದಿಂದಲೇ ಬಂದವರಾಗಿ ದ್ದರು. ಆದ್ದರಿಂದ

ವಿಜಯನಗರ ಕಾಲದ ಭೂ ಒಡೆತನ ಮತ್ತು ಮಾಲೀಕತ್ವಕ್ಕೆ ಸಂಬಂಧಿಸಿದಂತೆ ಹಲವು ಪ್ರಶ್ನೆಗಳು ಏಳುತ್ತವೆ. ವಿನ್ಸೆಂಟ್‌ಸ್ಮಿತ್ "ರಾಜನೇ ನೆಲದ ಒಡೆಯ, ಏಕೈಕ ಮಾಲೀಕ" ಎಂದಿದ್ದಾನೆ. ಭಾರತೀಯ ಇತಿಹಾಸಕಾರರಾದ ಕೆ.ಪಿ. ಜಯಸ್ವಾಲ್, ಯು.ಎನ್‌. ಘೋಪಾಲ್ ಮುಂತಾದವರು "ಸರ್ಕಾರದ ಒಡೆತನ ಮತ್ತು ಖಾಸಗೀ ಒಡೆತನವೂ ಜೊತೆ ಜೊತೆಯಾಗಿದ್ದುದನ್ನು ದೃಢೀಕರಿಸುತ್ತಾರೆ. ರಾಜ ಹಾಗೂ ಅವನ ಸಾಮಂತ ಪ್ರಭುಗಳು ವಿಜಯನಗರದ ಆಡಳಿತ ವ್ಯವಸ್ಥೆಯ ಸೂತ್ರಧಾರಿಗಳಾಗಿ ದ್ದರು. ಪ್ರೊ. ಕೆ.ಎ.ನೀಲಕಂಠಶಾಸ್ತ್ರಿ ಮತ್ತು ಕೃಷ್ಣಸ್ವಾಮಿ ಅಯ್ಯಂಗಾರ್ ಎನ್‌.ವೆಂಕಟ ರಮಣಯ್ಯ ಅವರು ವಿಜಯನಗರ ರಾಜ್ಯದ ಸ್ವರೂಪವು ಸಂಯುಕ್ತ ಊಳಿಗಮಾನ್ಯ ಮತ್ತು ವಿಕೇಂದ್ರಿಕೃತ ಅಂಶಗಳನ್ನೊಳಗೊಂಡ ಒಂದು ಸಾಮ್ರಾಜ್ಯ ವ್ಯವಸ್ಥೆಯಾಗಿತ್ತೆಂದು ಅಭಿಪ್ರಾಯಪಟ್ಟಿದ್ದಾರೆ. ಬರ್ಟನ್‌ಸ್ಟೈನ್ ತನ್ನ ಸೆಗ್ಮೆಂಟರಿ ಸಿದ್ಧಾಂತದಲ್ಲಿ ವಿಜಯನಗರ ಸಾಮ್ರಾಜ್ಯವು ಉತ್ಪಾದಿಸಲ್ಪಟ್ಟ ಸಂಪತ್ತು, ಸ್ಥಳೀಯವಾಗಿ ಹಂಚಲ್ಪಡುತ್ತಿತ್ತು ಎಂದಿದ್ದಾನೆ. ವಿಜಯನಗರವು ತುಂಡು ರಾಜ್ಯಗಳ ಒಕ್ಕೂಟ' ಎಂಬ ಅವನ ಅಭಿ ಪ್ರಾಯವು ಇದೆ. ವಿಜಯನಗರ ರಾಜ್ಯಾಡಳಿತದಲ್ಲಿ ದರ್ಮಾಚರಣೆಯನ್ನು ನಿರ್ವಹಿಸುವ ಕೇಂದ್ರವಿತ್ತು. ನವರಾತ್ರಿ ಅಥವಾ ಮಹಾನವಮಿಯೇ ಮೊದಲಾದ ಹಬ್ಬ ಹರಿದಿನಗಳನ್ನು ಸೈನ್ಯಾಧಿಕಾರಿಗಳನ್ನು ಸಂಘಟಿಸುವ ಸಲುವಾಗಿಯೇ ನಡೆಸಲಾಗುತ್ತಿತ್ತು. ಹೀಗಾಗಿ ವಿಜಯನಗರದ ಸಾಮ್ರಾಜ್ಯವು ಹೆಚ್ಚಿನ ಮಟ್ಟಿಗೆ ಕೇಂದ್ರೀಕೃತ ಆಧಾರದ ಮೇಲೆ ವ್ಯವಸ್ಥೆ ಗೊಂಡಿರಲಿಲ್ಲ. ಭೂಮಿಯನ್ನು ಆಧರಿಸಿದ ವಿಜಯನಗರ ರಾಜ್ಯದ ರಾಜಕೀಯ ಅಧಿಕಾರವು ಕೇಂದ್ರದಲ್ಲಿ ಸಂಚಯಗೊಳ್ಳದೆ ಹಲವಾರು ಮಿಲಿಟರಿ ಆಡಳಿತ ಘಟಕಗಳ ಮೂಲಕ ಕೆಳಮುಖವಾಗಿ ಹಂಚಿಹೋಗಿತ್ತು. ಟಿ.ವಿ.ಮಹಲಿಂಗಮ್ ಅವರ ಪ್ರಕಾರ ಭೂಮಿಯೆಲ್ಲವೂ ರಾಜನಿಗೆ ಸೇರಿದ್ದು ಅವನು ತನ್ನನ್ನು ಅವಲಂಬಿಸಿದವರಿಗೆ ಅದನ್ನು ಹಂಚುತ್ತಿದ್ದನು. ಹಾಗೆ ಭೂಮಿಯನ್ನು ರಾಜನಿಂದ ಪಡೆದುಕೊಂಡವರನ್ನು ನಾಯಕ ರೆಂದು ಕರೆಯುತ್ತಿದ್ದರು. ಸಮಕಾಲೀನ ಶಾಸನಗಳು ಅಮರನಾಯಕರ ಸ್ಥಾನಮಾನದ ಮೇಲೆ ಹಾಗೂ ವಿಜಯನಗರದ ಅರಸರು ನಾಯಕರಿಗೆ ಭೂಮಿಯನ್ನು ದಾನವಾಗಿ ನೀಡಿದ ಬಗ್ಗೆ ಮಾಹಿತಿ ನೀಡುತ್ತವೆ.

ಅಮರನಾಯಕರಿಗೆ ನೀಡಿದ ಭೂಮಿಯನ್ನು ಅಮರ ಮಾಗಣಿ ಅಮರನಾಯಕರ ಹಾಗೂ ಅಮರ ಅಂಬಲಿ ಮುತಾದ ರೀತಿಯಲ್ಲಿ ಕರೆಯಲಾಗುತ್ತಿತ್ತು.

ಕೆಳದಿಯ ನಾಯಕ ಚೌಡಪ್ಪನು ಎಂಟು ಮಾಗಣೆಗಳನ್ನು ವಿಜಯನಗರದ ಅರಸನಿಂದ ಅಮರಮಾಗಣೆಯಾಗಿ ಪಡೆದಿದ್ದನು. ಮುಂದೆ ಕೆಳದಿಯ ನಾಯಕರು ಸದಾಶಿವರಾಯನಿಂದ ಚಂದ್ರಗುಪ್ತಯನ್ನು, ತುಳುನಾಡನ್ನು ಅಮರಮಾಗಣೆಯಾಗಿ ಪಡೆದರು. ಹೆಚ್ಚು ಭೂ ಭಾಗವು ದೊರೆತಂತೆ ಅವರು ಸಂಪನ್ಮೂಲವನ್ನು ಬೆಳೆಸಿ ಹೆಚ್ಚು ಸೈನ್ಯ ಬಲವನ್ನು ಬೆಳೆಸಲು ಪ್ರಯತ್ನಿಸಿದರು.

ವಿಜಯನಗರ ಸಾಮಂತ ಒಕ್ಕೂಟ ರಾಜ್ಯಾಡಳಿತ ವ್ಯವಸ್ಥೆಯಲ್ಲಿ ಚಿತ್ರುದುರ್ಗದ ಪ್ರದೇಶವು ಒಂದು ಭಾಗವಾಗಿತ್ತು. ಚಿತ್ರದುರ್ಗದ ನಾಯಕತ್ವಕ್ಕೆ ಬಲವಾದ ತಳಹದಿಯನ್ನು ಹಾಕಿದವನು ತಿಮ್ಮಣ್ಣನಾಯಕ ಅವನ ರಾಜಕೀಯ ಜೀವನವು ಅಮರನಾಯಕನಾಗಿ ಪ್ರಾರಂಭವಾಗಿ ಹೊಳಟ್ಕೆರೆಯನ್ನು ಅಮರಮಾಗಣೆಯನ್ನಾಗಿಯೂ ನಂತರದಲ್ಲಿ ಚಿತ್ರದುರ್ಗ ಮತ್ತು ಹಿರಿಯೂರು ಪ್ರಾಂತ್ಯವನ್ನು ಸೇರಿಸಿಕೊಳ್ಳುತ್ತಾನೆ. ಇವನು ವಿಜಯನಗರ ಅರಸರ ಆದೇಶವನ್ನು ಪಾಲಿಸುವುದರ ಜೊತೆಗೆ ಅವರು ನಡೆಸಿದ ಯುದ್ಧಗಳಲ್ಲಿ ಭಾಗವಹಿಸಿದ್ದನು. ಕ್ರಿ.ಶ. 1568ರಿಂದ 1779 ರವರೆಗೆ ಆಳಿದ ಈ ನಾಯಕರು ಚಿತ್ರದುರ್ಗದ ಪ್ರದೇಶದಲ್ಲಿ ಪ್ರಬಲರಾಗಿದ್ದರು.

ಯಲಹಂಕನಾಡು ನಾಯಕರ ಈ ಸಾಮಂತ ಮನೆತನದ ಸ್ಥಾಪಕರಾದ ಬೈರೇಗೌಡ. ಅವನೊಬ್ಬ ಕೃಷಿಕ. 1ನೇ ಕೆಂಪೇಗೌಡನ ಆಳ್ವಿಕೆಯಲ್ಲಿ (1513-1569) ಯುದ್ಧ ಭೂಮಿಯಲ್ಲಿ ಅವನ ಪರಾಕ್ರಮವನ್ನು ನೋಡಿ, ಮೆಚ್ಚಿದ ಅಚ್ಯುತರಾಯನು ಅವನಿಗೆ ಒಂದು ಕೋಟೆಯನ್ನು ಕಟ್ಟಿಕೊಡಲು ಅನುಮತಿ ನೀಡಿದನು. ಕೊನೆಗೆ ವಿಜಯನಗರದ ಅರಸನ ಅನುಮತಿ ಪಡೆಯುವ ಗೋಜಿಗೇ ಹೋಗದೇ ತಾನೇ ಒಂದು ಟಂಕಸಾಲೆಯನ್ನು ಸ್ಥಾಪಿಸಿಕೊಂಡನು. ಅವಿಧೇಯತೆಯನ್ನು ಕಂಡುವಿಜಯನಗರದ ಅರಸನು ಅವನನ್ನು ಬಂಧಿಸಿ, ಆನೆಗೊಂದಿಯಲ್ಲಿ 5 ವರ್ಷಗಳ ಕಾಲ ನೆರೆಯಲ್ಲಿಟ್ಟನು.

ಪ್ರಥಮ ವರ್ಗಕ್ಕೆ ಸೇರಿದ ನಾಯಕರು ಚಕ್ರವರ್ತಿಗೆ ತಿಳಿಸದೆಯೇ ಭೂಮಿಯನ್ನು, ಹಳ್ಳಿಗಳನ್ನು ಪರಭಾರೆ ಮಾಡುವ ಹಕ್ಕನ್ನು ಪಡೆದಿದ್ದರು. ವಾರ್ಷಿಕವಾದ ಕಾಣಿಕೆ, ಸೈನ್ಯದ ಪೂರೈಕೆ ಈ ಎರಡು ಜವಾಬ್ದಾರಿಗಳಿದ್ದರೂ, ಅವರಿಗೆ ವರಮಾನ ತೆರಿಗೆ, ಗ್ರಾಮಗಳ ಪರಭಾರೆ, ಭೂಮಿಯ ಮಾರಾಟ, ಮೊದಲಾದ ಎಲ್ಲಾ ಹಕ್ಕುಗಳೂ ಇದ್ದವು. ವಿಜಯನಗರದ ಈ ನಾಯಕರುಗಳಿಗೆ ಅಧೀನ ನಾಯಕರೂ ಇರುತ್ತಿದ್ದರು. ಇವರು ಅವರಿಗೆ ಭೂಮಿಯನ್ನು ಕೊಡುತ್ತಿದ್ದರು. ಇಲ್ಲಿ ಭೂಮಿಯನ್ನು ನೀಡುತ್ತಿದ್ದರು. ಅದರ ಸೈನ್ಯ ಸೇವೆಗೋಸ್ಕರವಾಗಿ ಕಾಲ ಕಳೆದಂತೆ ಅದು ಅನುವಂಶಕವಾಗಿ ಒಲಿಯಿತು. ಅವರು ಆ ಪ್ರದೇಶದ ರಾಜರೇ ಎಂದುಕೊಂಡರು. ಒಬ್ಬೊಬ್ಬ ನಾಯಕನೂ ನಿರ್ದಿಷ್ಟ ಪ್ರಮಾಣದ ಸೈನ್ಯವನ್ನು ಒದಗಿಸುತ್ತಿದ್ದನು. ಅವರು ಹೊಂದಿದ್ದ ಭೂ ಜಾಗದ ವಿಸ್ತಾರವನ್ನು ಅವಲಂಬಿಸಿ, ಅವರ ಸ್ಥಾನಮಾನಗಳು ನಿಂತಿದ್ದವು.

ಈ ವ್ಯವಸ್ಥೆಯು 1565ರ ರಕ್ಕಸ ತಂಗಡಿ ಐತಿಹಾಸಿಕ ಯುದ್ಧದವರೆಗೆ ಇತ್ತು. ಅದು ಆ ಯುದ್ಧವಾದ ಮೇಲೆ ಒಡೆದುಹೋಯಿತು.

ಸಾಮಾನ್ಯ ಭೂಮಿ

ವಿಜಯನಗರ ಕಾಲದ ಶಾಸನಗಳಲ್ಲಿ ಕಂಡುಬರುವಂತೆ ಈ ಕಾಲದ ಭೂ ಹಿಡುವಳಿಗಳನ್ನು ಸಾಗುವಳಿಯಾದ ಮತ್ತು ಸಾಗುವಳಿಯಾಗದ ಬೀಳು ಭೂಮಿ ಎಂದು ಗುರುತಿಸಬಹುದು. ಬೀಳು ಭೂಮಿಯಲ್ಲಿ ಅರಣ್ಯ ಪ್ರದೇಶ, ಖನಿಜ ಸಂಪತ್ತು, ಬಂಜರು ಭೂಮಿ, ಗುಡ್ಡ ಬೆಟ್ಟಗಳು ಸೇರುತ್ತವೆ. ಸಾಗುವಳಿಯಾದ ಭೂಮಿಯನ್ನು ಪುನಃ ಎರಡು ರೀತಿಯಾಗಿ ವರ್ಗೀಕರಿಸಿದ್ದಾರೆ. ಮೊದಲನೆಯದಾಗಿ ಕಂದಾಯದ ಭೂಮಿಗಳು. ಎರಡನೆಯದಾಗಿ ಕೆಲವು ಉದ್ದೇಶಗಳಿಗಾಗಿ ದಾನ ನೀಡಿದ ಇನಾಂ ಭೂ ಹಿಡುವಳಿಗಳು. ಇನಾಂ ಭೂ ಹಿಡುವಳಿಗಳನ್ನು ಪುನಃ ಮೂರು ರೀತಿಯಲ್ಲಿ ವಿಭಾಗಿಸಲಾಗಿದೆ.

1. ಬ್ರಹ್ಮಾದಾಯ ಭೂ ಹಿಡುವಳಿ
2. ಮಠಪುರ ಭೂ ಹಿಡುವಳಿ
3. ಸೇವಾ ಭೂ ಹಿಡುವಳಿಗಳು

ಈ ಬಗ್ಗೆ ಹಲವು ದಾನ ಶಾಸನಗಳು ದೊರೆಯುತ್ತವೆ. ವಿಜಯನಗರದ ಕೃಷಿ ಮತ್ತು ಸರಕಾರಿ ಭೂ ಹಿಡುವಳಿಗಳನ್ನು ಸಾಮಾನ್ಯ ಭೂ ಹಿಡುಳಿ ಎಂದೂ, ಕರೆಯಬಹುದು. ಸಾಮಾನ್ಯವಾಗಿ ವಿಜಯನಗರ ಆಡಳಿತಕ್ಕೆ ಸೇರಿದ ಎಲ್ಲಾ ಭೂ ಭಾಗಗಳಲ್ಲಿ ಪ್ರಾದೇಶಿಕವಾಗಿ ಕಂದಾಯ ವ್ಯವಸ್ಥೆ ಭಿನ್ನವಾಗಿದ್ದಿತು. ರಾಜ್ಯದ ಒಟ್ಟು ಭೂ ಹಿಡುವಳಿಯು ವಿಜಯನಗರ ಅರಸರ ನಿಯಂತ್ರಣಕ್ಕೆ ಸೇರಿತ್ತು.

ಸಾಗುವಳಿಯಾದ ಭೂ ಹಿಡುವಳಿಗಳನ್ನು ಗದ್ದೆ, ಜಿದ್ದಲು ಮತ್ತು ತೋಟ ಎಂಬುದಾಗಿ ವರ್ಗೀಕರಿಸಲಾಗಿತ್ತು. ತೋಟಗಳನ್ನು ಹೂವಿನತೋಟ, ಮಾವಿನತೋಟ, ಅಡಿಕೆ ತೋಟ, ತೆಂಗಿನ ತೋಟ ಮುಂತಾಗಿ ಕರೆಯುತ್ತಿದ್ದರು. ಭೂ ಹಿಡುವಳಿಗಳ ಉತ್ಪಾದಕತೆಯನ್ನು ಬಿತ್ತನೆಯ ಪ್ರಮಾಣದ ಮೇಲೆ ಖಂಡುಗ, ಕೊಳಗ, ಸಲಿಗೆ ಮತ್ತು ಮತ್ತರು ಇತ್ಯಾದಿ ಅಳತೆಗಳ ಮೇಲೆ ನಿರ್ಧರಿಸಲಾಗುತ್ತಿತ್ತು. ವಿಜಯನಗರ ಕಾಲದಲ್ಲಿಯೂ ವ್ಯಕ್ತಿಯೊಬ್ಬನು ಭೂಮಿ ರೂಪದ ಆಸ್ತಿಯ ಒಡೆತನ ಹೊಂದಿದ್ದು, ಭೂ ಹಿಡುವಳಿಗಳನ್ನು ಖು,ಕಿ, ತರಿ, ಭಾಗಾಯ್ತು ಭೂ ಹಿಡುವಳಿಗಳಾಗಿ ವರ್ಗೀಕರಿಸಲಾಗಿತ್ತು.

ಮಳೆಯನ್ನೇ ಅವಲಂಭಿಸಿದ ವ್ಯವಸಾಯ ಪದ್ಧತಿಯನ್ನು ಕಾರ್ಡಾಂಭ ಎಂದೂ ಕರೆ, ಕಾಲುವೆ, ಬಾವಿ ಮೊದಲಾದ ಜಲಾಶಯಗಳನ್ನು ಆಧರಿಸಿ ನಡೆಸುತ್ತಿದ್ದ ವ್ಯವಸಾಯ ಪದ್ಧತಿಗೆ ನೀರಾರಂಭ ಎಂದು ಕರೆಯುತ್ತಿದ್ದರು. ಸಾಮಾನ್ಯವಾಗಿ ಶಾಸನಗಳಲ್ಲಿ ಕಂಡುಬರುವಂತೆ ಕರೆಯ ಕೆಳಗೆ ಗದ್ದೆ, ಕಂಬ 16, ತೆಂಕಲು ಕೆಂಗಾಡು ಮತ್ತರು ಎಂದು ಶಾಸನದಲ್ಲಿ ಬರುವ ಕಂಭ, ಮತ್ತರು ಎಂಬ ಶಬ್ದಗಳು ಸ್ಪಷ್ಟವಾಗಿ ಭೂ ಹಿಡುವಳಿಯ ವಿಸ್ತಾರವನ್ನು ಸೂಚಿಸುತ್ತವೆ. ಹಾಗೆಯೇ ಶಾಸನಗಳಲ್ಲಿ ಕೃಷಿಗೊಳಪಟ್ಟ ಭೂ ಹಿಡುವಳಿ

ಗಳನ್ನು ಗುರುತಿಸಲು ಸೀಮೆಗೊಳಗಾದ ಗದ್ದೆ, ಚಿದ್ದಲು, ಕಾಡಾರಂಭ, ನೀರಾರಂಭ ಹತ್ತು ಕೊಳಗನಗದ್ದೆ, ಖಂಡುಗದ ಭೂಮಿ, ಬಿಟ್ಟಗದ್ದೆ, ಖಂಡುಗ ಪಿರಡ್ತು ಅಥವಾ ಬಿಟ್ಟಗದ್ದೆ ಖಂಡುಗವೆಂದು ಕೊಳಗ ಗದ್ದೆ, ಹಿರಿಯ ಕೆರೆಯ ಕೆಳಗೆ ಗದ್ದೆ, ನೈವೇದ್ಯಕ್ಕೆ ಬಿಟ್ಟ ಗದ್ದೆ ಕೆಂದೂರ ಪಡುವಣ ತುಂಬಿದ ಗದ್ದೆ, ಇನ್ನು ಮುಂತಾಗಿ ಕರೆಯುತ್ತಿದ್ದರು. ಗದ್ದೆ ಎನ್ನುವುದು ಭತ್ತವನ್ನು ಬೆಳೆಯುವ ನೀರಾವರಿಗೊಳಪಟ್ಟ ಪ್ರದೇಶವಾದರೆ, ಚಿದ್ದಲು ಎನ್ನುವುದು ಒಣ ಬೇಸಾಯ ಕ್ಷೇತ್ರವನ್ನು ಸೂಚಿಸುತ್ತದೆ. ಚಿದ್ದಲು ಎಂಬುದು ಮಳೆಯಲ್ಲಿ ಒಂದು ಬೆಳೆಯನ್ನು ತೆಗೆಯಲು ಮಾತ್ರ ಸಾಧ್ಯವಾದ ಭೂ ಹಿಡುವಳಿಗಳನ್ನು ಸೂಚಿಸುತ್ತದೆ.

ಒಂದು ಗ್ರಾಮದ ಭೂ ಹಿಡುಳಿಯನ್ನು ಲಿಂಗಮುಸ್ತಿ ಕಲ್ಲುಗಳ ಮೂಲಕ ಗುರುತಿಸಿ ಒಂದು ಗ್ರಾಮದಿಂದ ಮತ್ತೊಂದು ಗ್ರಾಮವನ್ನು ಪ್ರತ್ಯೇಕಿಸುವ ಕ್ರಮವು ಜರುಗಿತ್ತು. ಕ್ರಿ.ಶ. 1448ರ ಶಾಸನದಲ್ಲಿ ದಾನ ನೀಡಿರುವ ನಿಬನೂರು ಗ್ರಾಮದ ನಾಲ್ಕು ಗಡಿಗಳ ವಿವರವಿದೆ. ಮೂಡಲು ಕಟ್ಟಿಗೇ ಹಳ್ಳಿಯ ಹೊಲದ ಮೇರೆ, ತೆಂಕಲು ಬಿದರಕೆರೆಯ ಹೊಲದ ಗಡಿ, ಪಡುವಲು ಅದೇ ಬಿದರಕೆರೆ ಹೊಲದ ಮೇರೆ, ಮೂಡಲು ವಾಯುವ್ಯಕ್ಕೆ ಹುಲುಕುಂಟಿಯ ಹೊಲದ ಮೇರೆ, ಆಗ್ನೇಯ, ಬಡಗಲು, ಈಶಾನ್ಯ ಕೋಡಿಹಳ್ಳಿಯ ಹೊಲದ ಮೇರೆ, ಹೀಗೆ ಭೂ ಹಿಡುವಳಿಗಳ ವಿಸ್ತೀರ್ಣತೆಯನ್ನು ಒಂದು ಗ್ರಾಮದ ಎಲ್ಲಾ ದಿಕ್ಕುಗಳನ್ನು ಸ್ಪಷ್ಟವಾಗಿ ಗುರುತಿಸುವ ಲಿಂಗಮುದ್ರೆ ಕಲ್ಲುಗಳನ್ನು ನೆಟ್ಟು ಜನಸಾಮಾನ್ಯರಿಗೆ ತಿಳಿಸುವ ಕ್ರಮ ಜಾರಿಯಲ್ಲಿತ್ತು. ಕೆಲವು ಬಾರಿ ಭೂಮಿಯ ವಿಸ್ತೀರ್ಣವನ್ನು ಬಿತ್ತುವ ಬೀಜದ ಪ್ರಮಾಣದಿಂದ ನಿರ್ಧರಿಸಲಾಗುತ್ತಿತ್ತು. ಒಂದು ಕೊಳಗ ಬೀಜವನ್ನು ಬಿತ್ತುವ ಭೂಮಿಯು ಒಂದು ಘಟಕವಾಗಿತ್ತು.

ಗ್ರಾಮವೇ ರಾಜ್ಯದ ಅತ್ಯಂತ ಸಣ್ಣಭಾಗವಾಗಿತ್ತು. ಗೌಡ ಅಥವಾ ಗೌವುಂಡ, ಪ್ರಭು, ಹೆಗ್ಗಡೆ ಮುಂತಾದ ಹೆಸರುಗಳಿಂದ ಗ್ರಾಮದ ಮುಖ್ಯ ಸ್ಥಾನವನ್ನು ಕರೆಯಲಾಗುತ್ತಿತ್ತು. ಅಗ್ರಹಾರದ ಹಳ್ಳಿಗಳಲ್ಲಿ ಅವನನ್ನು ಊರ ಒಡೆಯನೆಂದು ಕರೆಯುತ್ತಿದ್ದರು. ಗೌಡನನ್ನು ಅರಸರು ಇಲ್ಲವೆ, ಗ್ರಾಮ ಸಭೆಯ ನೇಮಿಸುತ್ತಿತ್ತು. ಪಳಗವಳ್ಳಿ ಎಂಬ ಗ್ರಾಮದ ಗೌಡನಿಗೆ ಐದು ಮತ್ತರು ಭೂಮಿಯನ್ನು ವೇತನಕ್ಕೆ ಬದಲಾಗಿ ನೀಡಲಾಗಿತ್ತು.

ವಿಜ್ಞಾನೇಶ್ವರು ಮಿತಾಕ್ಷರ ಸಂಹಿತೆಯಲ್ಲಿ ರಾಜನು ಯಾವುದೆ ಭೂಮಿಯನ್ನು ಯಾರಿಗಾದರೂ ದಾನ ಮಾಡಲು ಇಚ್ಛೆಪಟ್ಟರೆ ಆ ಭೂಮಿ ಖಾಸಗೀ ಒಡೆತನದಲ್ಲಿದ್ದರೆ, ಮೊದಲು ಅದನ್ನು ಅವನು ಬೆಲೆ ಕೊಟ್ಟು, ಕೊಂಡುಕೊಳ್ಳಬೇಕು ಎಂದು ಹೇಳುತ್ತಾನೆ. ವಿಜಯನಗರದ ಹಲವು ಶಾಸನಗಳು ವಿಜ್ಞಾನೇಶ್ವರನ ಅಭಿಪ್ರಾಯವನ್ನು ಸಮರ್ಥಿಸುತ್ತವೆ. ವಿಜಯನಗರದ ಅರಸರು ಖಾಸಗೀ ಒಡೆತನದ ಭೂ ಹಿಡುವಳಿಗಳನ್ನು ಕೊಂಡುಕೊಂಡು ಆ ಮೇಲೆ ಅದನ್ನು ದಾನ ಮಾಡಿದ ವಿವರಗಳು ದೊರೆಯುತ್ತವೆ.

ಪಾಳುಬಿದ್ದ ಭೂಮಿಯನ್ನು ಮಠ ದೇವಾಲಯ ನಿರ್ಮಾಣಕ್ಕೆ ರಾಜರಿಂದ ಕೊಂಡು ಕೊಳ್ಳುತ್ತಿದ್ದರು. ಹೀಗೆ ಮಾರಾಟ ಮಾಡಲ್ಪಟ್ಟ ಭೂಮಿಗೆ ಸಂಬಂಧಿಸಿದ ದಾಖಲೆಗಳನ್ನು ಇಡಲಾಗುತ್ತಿತ್ತು. ಅದನ್ನು 'ಕ್ರಯ ದಾನ ಶಾಸನ' ಎಂಬುದಾಗಿ ಕರೆಯುತ್ತಿದ್ದರು. ಭೂಮಿಯನ್ನು ಕೊಂಡುಕೊಂಡವರು ಶಾಸನವನ್ನು ಕೇಳಿ ಬರೆಸಿಕೊಳ್ಳುತ್ತಿದ್ದರು. ಇಂತಹ ಭೂಮಿಗಳನ್ನು ಮಾರಾಟ ಮಾಡಿಸಿದಲ್ಲಿ ಭೂಮಿಯನ್ನು ಕೊಂಡುಕೊಳ್ಳುವ ಮತ್ತು ಮಾರುವ ವ್ಯಕ್ತಿಗಳ ನಡುವೆ ಮಧ್ಯವರ್ತಿಗಳ ಪಾತ್ರವೂ ಪ್ರಮುಖವಾಗಿತ್ತು. ಶಾಸನಗಳಲ್ಲಿ ಮಧ್ಯವರ್ತಿಗಳಾಗಿ ಕೆಂಪನಂಜಯ್ಯ, ನಿರ್ವಾಮಯ್ಯ, ಮರಿಯಪ್ಪ ಮೊದಲಾದವರ ಹೆಸರುಗಳನ್ನು ಗುರುತಿಸಬಹುದು. ಮೇಲಿನವರಲ್ಲಿ ನಿರ್ವಾಣಯ್ಯನು ಕೆಳದಿ ಅರಸರ ಹತ್ತಿರದ ಸಂಬಂಧಿಯಾಗಿದ್ದನು. ಸಾಮಾನ್ಯವಾಗಿ ಭೂಮಿಯನ್ನು ಗದ್ಯಾಣಗಳ ಮೂಲಕ ಮಾರಾಟ ಮಾಡಲಾಗುತ್ತಿತ್ತು. ಶಾಸನಗಳಲ್ಲಿ ಗದ್ಯಾಣಗಳನ್ನು ಸೂಚಿಸಲು 'ಗ' ಎಂದು ಬಳಸಲಾಗಿದೆ.

ಅರಸನು ಕೊಂಡುಕೊಳ್ಳುವ ಯಾವ ಪ್ರಸ್ತಾಪವು ಇಲ್ಲಿಗೆಯೇ ಕೃಷಿಗೊಳಪಟ್ಟ ಹಳ್ಳಿಗಳನ್ನು ಪರಭಾರೆ ಮಾಡಿರುವುದನ್ನು ಹೇಳುವ ಅನೇಕ ಶಾಸನಗಳು ಇವೆ.

ಇಂತಹ ಸಂದರ್ಭಗಳಲ್ಲಿ ಸರ್ಕಾರವು ಅನುಭೋಗಿಗೆ ತನ್ನ ಹಕ್ಕುಗಳನ್ನು ಪ್ರಧಾನ ಮಾಡುತ್ತಿತ್ತು. ಖಾಸಗೀ ಸ್ವತ್ತುಗಳ ಮೇಲೆ ರಾಜರಿಗಿದ್ದ ಹಕ್ಕೆಂದರೆ ಜಮೀನಿನ ಉತ್ಪನ್ನದ ರಾಜ್ಯ ಭಾಗವನ್ನು ಪಡೆಯುವ ಹಕ್ಕು ಮಾತ್ರವಿತ್ತು. ವಿಜಯನಗರದ ಅರಸ ಹರಿಹರನು ಒಂದು ಭೂಮಿಯನ್ನು ದಾನ ಮಾಡಿದಾಗ ಆ ಹಳ್ಳಿಯಲ್ಲಿ ಯಾರು ಕಂದಾಯ ಪಾವತಿ ಮಾಡದೆ ಇರುವ ವ್ಯಕ್ತಿಗಳು ; ಭೂಮಿಯನ್ನು ಅಥವಾ ಕಂದಾಯವನ್ನು ಅನುಭೋಗಿಗೆ ಹಸ್ತಾಂತರಿಸಬೇಕಾಗುವುದು. ಅಂತಹ ಜಮೀನ್ದಾರರ ಪಟ್ಟಿ ತಯಾರಿಸಬೇಕೆಂದು ಸ್ಥಳೀಯ ಅಧಿಕಾರಿಗಳನ್ನು ಕೇಳಿದನು. ಅಂತಹ ಭೂ ಮಾಲೀಕರ ಹೆಸರುಗಳನ್ನು ಶಾಸನವು ಪಟ್ಟಿ ಮಾಡುತ್ತದೆ. ಈ ರೀತಿ ತೆರಿಗೆ ಸಂಗ್ರಹಿಸುವ ಸರ್ಕಾರದ ಹಕ್ಕನ್ನು ಅನುಭೋಗಿಗೆ ವರ್ಗಾಯಿಸಿದಂತೆಯೇ ಹೊರತು ಒಡೆತನವನ್ನಲ್ಲ. ಇಂತಹ ಸಂದರ್ಭಗಳಲ್ಲಿ ಖಾಸಗೀ ಭೂಮಿಯನ್ನು ಪರಭಾರೆ ಮಾಡುವುದಕ್ಕೆ ಮೊದಲು ರಾಜನ ಅನುಮತಿಯನ್ನು ಪಡೆಯುವುದು ಅಗತ್ಯವೇ ಎಂಬ ಪ್ರಶ್ನೆಯನ್ನು ಪರಿಶೀಲಿಸಬಹುದು. ವಿಜ್ಞಾನೇಶ್ವರನು ಗುರುತಿಸುವಂತೆ ನಗರದ ಗಣ್ಯ ಜನರು, ಬಂಧುಗಳು, ನೆರೆಹೊರೆಯವರು ಮತ್ತು ವಾರಸುದಾರರ ಒಪ್ಪಿಗೆಯನ್ನು ಪಡೆಯಬೇಕೆಂದು ಹೇಳಿದ್ದಾನೆ. ರಾಜನ ಪೂರ್ವಾನುಮತೀಯ ಅಗತ್ಯವೆಂದು ಸೂಚಿಸುವುದಿಲ್ಲ. ವಿಜಯನಗರ ಶಾಸನಗಳು ಈ ವ್ಯಾಖ್ಯಾನಕಾರನ ದೃಷ್ಟಿಕೋನವನ್ನು ಎತ್ತಿಹಿಡಿಯುತ್ತದೆ.

ಆಕರ ಗ್ರಂಥಗಳು

1. ಎಪಿಗ್ರಾಫಿಯ ಕರ್ನಾಟಿಕ ಸಂಪುಟ - 2
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, 1973
2. ಅದೇ - 3
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, 1974
3. ಅದೇ - 4
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, 1975
4. ಅದೇ - 5
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, 1976
5. ಅದೇ - 6
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, 1977
6. ಅದೇ - 7
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, 1979
7. ಅದೇ - 8
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, 1984
8. ಬಿ.ಎಲ್.ರೈಸ್ ಸಂಪಾದಕರು, ಶಾಸನ ಸಂಪುಟ - 11
9. ಎ.ಎಂ.ಅಣ್ಣೀಗೇರಿ, ಸಂಪಾದಕರು, ಕರ್ನಾಟಕ ಇನ್ಸ್‌ಸ್ಕ್ರಿಪ್ಷನ್ಸ್, ಸಂಪುಟ 4
10. ಎಂ.ಎಂ.ಕಲ್ಬುರ್ಗಿ, ಸಂಪಾದಕರು
ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು
ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ 1999
11. ಪ್ರೊ. ಶೇಕ್ ಅಲಿ ಸಂಪಾದಕರು
ಕರ್ನಾಟಕ ಇತಿಹಾಸ ಸಂಪುಟ - 3
ಕನ್ನಡ ವಿಶ್ವವಿದ್ಯಾಲಯ, ಹಂಪಿ 1977
12. ಹಯವದನ ರಾವ್, ಸಂಪಾದಕರು
ಮೈಸೂರು ಗೆಜೆಟಿಯರ್, 2, 3, 5, ಬೆಂಗಳೂರು, 1929, 1930

48. ಸಂಗಮ ಅರಸರ ಕಾಲದಲ್ಲಿ ತಮಿಳುನಾಡಿನಲ್ಲಿ ನೀರಾವರಿ

ಸ್ಮಿತಾರೆಡ್ಡಿ. ಡಿ.

ವಿಜಯನಗರ ಅರಸರು ತಮಿಳುನಾಡಿನಲ್ಲೂ ತಮ್ಮ ಅಧಿಪತ್ಯ ಸ್ಥಾಪಿಸಿದ್ದರಿಂದ ಅವರ ಸಾವಿರಾರು ಶಾಸನಗಳು ತಮಿಳುನಾಡಿನಾದ್ಯಂತ ಕಾಣಸಿಗುತ್ತವೆ. ಪ್ರಸಕ್ತ ಲೇಖನದಲ್ಲಿ ಸಂಗಮ ಅರಸರಿಗೆ ಸಂಬಂಧಪಟ್ಟ ಶಾಸನಗಳನ್ನು ಮಾತ್ರ ಪರಿಗಣನೆಗೆ ತೆಗೆದುಕೊಂಡಿರುತ್ತೇನೆ. ತಮಿಳುನಾಡಿನಲ್ಲಿ ಸಂಗಮ ಅರಸರಿಗೆ ಸಂಬಂಧಪಟ್ಟಂತೆ ಕನ್ನಡ, ತಮಿಳು, ತೆಲುಗು ಹಾಗೂ ಸಂಸ್ಕೃತ ಭಾಷೆಯಲ್ಲಿ ಸುಮಾರು 400ಕ್ಕೂ ಅಧಿಕ ಶಾಸನಗಳು ದೊರೆಯುತ್ತವೆ. ಅವುಗಳಲ್ಲಿ ನೀರಾವರಿಗೆ ಸಂಬಂಧಿಸಿದಂತೆ ಕೇವಲ 32 ಶಾಸನಗಳು ಮಾತ್ರ ಮಾಹಿತಿ ನೀಡುತ್ತವೆ.

ತಮಿಳುನಾಡಿನಲ್ಲಿ ನದಿ ಅಚ್ಚುಕಟ್ಟು ಪ್ರದೇಶವು ವ್ಯಾಪಕವಾಗಿರುವುದರಿಂದ ಬಹುಶಃ ಹೆಚ್ಚು ಹೆಚ್ಚು ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳಬೇಕಾದ ಅಗತ್ಯತೆ ಕಂಡುಬರಲಿಲ್ಲವೆಂದು ಕಾಣುತ್ತದೆ. ಆದರೂ ಅಸ್ತಿತ್ವದಲ್ಲಿದ್ದ ನೀರಾವರಿ ವ್ಯವಸ್ಥೆಯನ್ನು ಬಲಪಡಿಸಲು ಕಾಲುವೆಗಳ ನಿರ್ಮಾಣ, ಕೆರೆಗಳ ನಿರ್ಮಾಣ/ದುರಸ್ತಿ, ತೂಬುಗಳ ನಿರ್ಮಾಣ/ದುರಸ್ತಿ ಮುಂತಾದಂತಹ ಹಲವಾರು ಕಾಮಗಾರಿಗಳನ್ನು ಕೈಗೆತ್ತಿಕೊಂಡಂತೆ ತೋರುತ್ತದೆ. ವಿಜಯನಗರ ಅರಸರು ನೀರಾವರಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದರಿಂದಾಗಿ ಸಾಮ್ರಾಜ್ಯದಲ್ಲಿ ಆರ್ಥಿಕ ಪ್ರಗತಿ ವೃದ್ಧಿಸಿ ಆ ಮೂಲಕ ಸಾಮ್ರಾಜ್ಯದ ಸರ್ವತೋಮುಖ ಅಭಿವೃದ್ಧಿ ಹಾಗೂ ವಿಸ್ತರಣೆ ಸಾಧ್ಯವಾಯಿತು.

ಈ ವಿಷಯವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿಕೊಳ್ಳಲಾಗಿದೆ:

1. ನೀರಾವರಿ ಕಾಮಗಾರಿಗಳ ನಿರ್ಮಾಣ
2. ನೀರಾವರಿ ಕಾಮಗಾರಿಗಳ ನಿರ್ವಹಣೆ
3. ನೀರಾವರಿ ಸಂಬಂಧಿ ತೆರಿಗೆಗಳು
4. ಜಲವಿವಾದ.

ಸಂಗಮ ಅರಸರ ಆಡಳಿತಾವಧಿಯ ಶಾಸನಗಳಲ್ಲಿ ಸ್ಥಳೀಯ ನಾಯಕರು, ಅಧಿಕಾರಿಗಳು, ಮಠಪತಿಗಳು, ದೇವಾಲಯದ ಸ್ಥಾನಪತಿಗಳು, ಊರಮಹಾಜನಗಳು ಹಲವಾರು ನೀರಾವರಿ ಕಾಮಗಾರಿಗಳನ್ನು ಕೈಗೆತ್ತಿಕೊಂಡ ಬಗ್ಗೆ ಮಾಹಿತಿಯಿದೆ.

ಇಮ್ಮಡಿ ಹರಿಹರನ ಶಾಸನವು ಅದ್ದಂಕಿ ಸಿಂಹಾಸನಾಧೀಶ್ವರ, ಜಗದೊಬ್ಬ ಗಂಡ, ಬಸವ ಶಂಕರ ಬಿರುದಾಂಕಿತನಾದ ಮಹಾಮಂಡಲೇಶ್ವರ ಮಾಚಿರೆಡ್ಡಿ ಗಣಪತಿ ರೆಡ್ಡಿಯಾರ್ ಎಂಬುವನು ಶಿಯಪಾಡಿ ಅಥವಾ ಉತ್ತಮಚೋಳನಲ್ಲೂರಿನ ಕೆರೆಗೆ ತೂಬನ್ನು ಕಟ್ಟಿಸಿದ್ದನ್ನು ಉಲ್ಲೇಖಿಸುತ್ತದೆ [1]. ಇಮ್ಮಡಿ ಬುಕ್ಕರಾಯನ ಅತ್ತೂರೈ ಶಾಸನವು ಗ್ರಾಮದಲ್ಲಿ ಕೆರೆ ಜೀರ್ಣೋದ್ಧಾರ ಮಾಡಿದ್ದನ್ನು ದಾಖಲಿಸುತ್ತದೆ[2]. ಇಮ್ಮಡಿ ಬುಕ್ಕ ರಾಯನ ಇರುಮತ್ತೂರ್ ಶಾಸನವು ಇರುಮಾತೂರ್, ಪೋಚಯನ್‌ಪಲ್ಲಿ, ಪಂಡಿರ ಪಲ್ಲಿ ಮತ್ತು ಚಂದಿರಪಲ್ಲಿಗಳಲ್ಲಿ ಕಂಬರ ತಿರುಕ್ಕಲು ಕನ್ನಂ ಉಡಯಾನ್ ಹಾಗೂ ಮತ್ತೊಬ್ಬ ವ್ಯಕ್ತಿ ಸೇರಿ ನಿರ್ಮಿಸಿದ ಹಲವಾರು ನೀರಾವರಿ ಕಾಮಗಾರಿಗಳನ್ನು ಉಲ್ಲೇಖಿಸುತ್ತದೆ [3].

ಇಮ್ಮಡಿ ವಿರೂಪಾಕ್ಷನ ಶಾಸನವು ಕಾಶ್ಯಪ ಗೋತ್ರದ ಮುದ್ದಪ್ಪ ಮಂತ್ರಿಯು ಸಹ್ಯಾತ್ಮಜ (ಕಾವೇರಿ) ನದಿಗೆ ಸೇತುವೆ ಕಟ್ಟಿಸಿದ್ದನ್ನು ತಿಳಿಸುತ್ತದೆ[4]. ಅದೇ ಅರಸನ ಮತ್ತೊಂದು ಶಾಸನವು ವಲ್ಲವರಾಯ ನಲ್ಲೂರಿನಲ್ಲಿ ಕೆರೆ ಕಟ್ಟಿಸಿದ್ದನ್ನು ದಾಖಲಿಸುತ್ತದೆ[5]. ಇಮ್ಮಡಿ ವಿರೂಪಾಕ್ಷನ ವಲ್ಲಿಮಲೈ ಶಾಸನವು ಅಲ್ಲಿ ಒಂದು ಅಣೆಕಟ್ಟು ಇದ್ದುದನ್ನು ದಾಖಲಿಸುತ್ತದೆ. ರಾಮನಾಥ ದೇವರ ಪೂಜೆ ಹಾಗೂ ದೀಪಕ್ಕಾಗಿ ರಾಜನ ಪರವಾಗಿ ಮಲ್ಲರಸನ್ ಎಂಬುವರು ಕೆಳ ಅಣೆಕಟ್ಟಿನಿಂದ ಕಾಲುವೆ ಮೂಲಕ ನೀರು ಹರಿಸಬಹುದಾದ ಭೂಮಿಯನ್ನು ದತ್ತಿ ನೀಡಿದ್ದನ್ನು ತಿಳಿಸುತ್ತದೆ[6].

ಇಮ್ಮಡಿ ದೇವರಾಯನ 1436ರ ಶಾಸನವು ಇಡೈಯೂರ್ ನಾಡಿನ ವಾಯ್ ಕಾಲೈ (ಕಾಲುವೆ) ಅಣ್ಣ ಚಾವುಂಡಪ್ಪ ಒಡೆಯಾರ್ ಧರ್ಮವೆಂದು ಹೇಳುತ್ತದೆ [7]. 1445ರ ಮತ್ತೊಂದು ಶಾಸನವು ತಾವಕ್ಕಾವೂರ್ ಕುನ್ನಂನ ವೆಂಕಟನಾಯಕನು ಕೊರೈಮಂಗಲಂನಲ್ಲಿ ಪುಟ್ಟೇರಿ ಕೆರೆಯನ್ನು ತೋಡಿಸಿದನೆಂದು ಮತ್ತು ಆತನ ಹೆಂಡತಿ ಸಾಂತಲ ಸಾಣೆ ಅದಕ್ಕೆ ತೂಬನ್ನು ನಿರ್ಮಿಸಿದಳೆಂದು ಹೇಳುತ್ತದೆ [8]. ಸದರಿ ಶಾಸನವು ವೆಂಕಟ ನಾಯಕನನ್ನು ಮಲೆಯಾಳಿ ಎಂದು ದಾಖಲಿಸುತ್ತದೆ.

ಸಂಗಮ ಅರಸನ ಅವಧಿಗೆ ಸೇರಿದ ದಿನಾಂಕವಿಲ್ಲದ ಮತ್ತೊಂದು ಶಾಸನವು ಕಡಗತ್ತೂರಿನ ಕೆರೆಗೆ ತೂಬು ಮತ್ತು ಕಾಲುವೆ ನಿರ್ಮಿಸುವುದಕ್ಕಾಗಿ ಹಣ ಸಂಗ್ರಹಿಸಿದ್ದನ್ನು ದಾಖಲಿಸುತ್ತದೆ [9]. ಇಂಥದೇ ಮತ್ತೊಂದು ಶಾಸನ ಕೂಸ್ತನಹಳ್ಳಿಯದು. ಇದರಲ್ಲಿ ವೀರಪ್ಪ ಎಂಬುವನು ತನ್ನ ದೈನಂದಿನ ಆಹಾರ ಭಿಕ್ಷೆ ಬೇಡುವಾಗ ಹೊಸ ಕೆರೆಯ ನಿರ್ಮಾಣಕ್ಕಾಗಿ 300 ಹೊನ್ನನ್ನು ನೀಡಿದ್ದನ್ನು ದಾಖಲಿಸುತ್ತದೆ (ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ- 1. ತ.ಸಾ.ಕ.ಶಾ.ಗಳು, ಸಂ. 113).

ನೀರಾವರಿ ಕಾಮಗಾರಿಗಳ ನಿರ್ವಹಣೆ

ನೀರಾವರಿ ಕಾಮಗಾರಿಗಳ ನಿರ್ಮಾಣಕ್ಕಷ್ಟೇ ಅಲ್ಲದೆ, ಅವುಗಳ ನಿರ್ವಹಣೆಗೂ ಸಹ ಸೂಕ್ತ ವ್ಯವಸ್ಥೆ ಕಲ್ಪಿಸಿರುವುದನ್ನು ಶಾಸನಗಳಲ್ಲಿ ಕಾಣಬಹುದು. ನೀರಾವರಿ ಕಾಮಗಾರಿಗಳನ್ನು ಆಯಾ ಗ್ರಾಮಗಳ ಮಹಾಜನಗಳು, ದೇವಾಲಯದ ಸ್ಥಾನಪತಿಗಳು ಮತ್ತು ಏರಿ (ಕೆರೆ) ಸಮಿತಿ ವಹಿಸಿಕೊಂಡು ನಿರ್ವಹಿಸುತ್ತಿತ್ತು.

ನೀರಾವರಿ ಕಾಮಗಾರಿಗಳಲ್ಲಿ ಅತಿ ಹೆಚ್ಚಿನ ಆದ್ಯತೆಯನ್ನು ಕೆರೆಗಳಿಗೆ ನೀಡಲಾಗಿದೆ. ಕೆರೆಗಳ ನಿರ್ವಹಣೆಗೆ ತಗಲುವ ಹಣವನ್ನು ಭರಿಸಬಹುದಾದ ಮುಖ್ಯ ಆದಾಯವೆಂದರೆ ಕೆರೆಗಳನ್ನು ಮೀನು ಸಾಕಾಣಿಕೆಗೆ ಗುತ್ತಿಗೆಗೆ ನೀಡಿ ಅದರಿಂದ ಬರುವ ಹಣವನ್ನು ಕೆರೆ ನಿರ್ವಹಣೆಗೆ ವಿನಿಯೋಗಿಸಲಾಗುತ್ತಿತ್ತು. ಇಮ್ಮಡಿ ಹರಿಹರನ 1399ರ ಶಾಸನವು ಉತ್ತಮಚೋಳನಲ್ಲೂರು ಕೆರೆಗೆ ತೂಬು ನಿರ್ಮಿಸಿದ್ದನ್ನು ಹೇಳಿ, ಕೆರೆಯನ್ನು ಮೀನು ಸಾಕಾಣಿಕೆಗೆ ಗುತ್ತಿಗೆಗೆ ನೀಡಿ ಅದರಿಂದ ಬಂದ ಹಣವನ್ನು ಹೂಳೆತ್ತುವುದಕ್ಕೆ ನೀಡಿದ್ದನ್ನು ಉಲ್ಲೇಖಿಸುತ್ತದೆ [10].

ಮೊದಲನೇ ದೇವರಾಯನ 1410ರ ಶಾಸನವು, ಮಲ್ಲಣ ಒಡೆಯರ್‌ನ ನಿರೂಪದ ಮೇರೆಗೆ ಮಾದಿ ಅರಸ ಎಂಬುವವನು ಮೀನು ಮಾರಾಟದಿಂದ ಸಂಗ್ರಹವಾದ ಹಣವನ್ನು ನೆಯಿನಾಡುವಿನ ಅಗ್ರಹಾರವಾದ ಪಗನ್ನನೇಡು ಅಥವಾ ವೀರನರಸಿಂಹ ಚತುರ್ವೇದಿ ಮಂಗಲಂನಲ್ಲಿರುವ ಕೆರೆಯನ್ನು ಆಳವಾಗಿ ತೋಡುವುದಕ್ಕಾಗಿ ವಿನಿಯೋಗಿಸಲು ವ್ಯವಸ್ಥೆ ಮಾಡಿದ್ದನ್ನು ದಾಖಲಿಸುತ್ತದೆ [11].

1424ರ ಶಾಸನವು ಪಲುವೂತ್ ಕೋಟ್ಟದ ಕಲವೈ ಪಟ್ಟುವಿನಲ್ಲಿರುವ ಕಾವೇರಿಪಾಕ ಕಾಲುವೆಯ ಶಾಖಾ ಕಾಲುವೆಯಾದ ನಾಗಕುಲ್ಯಾ ಕಾಲುವೆಯ ಮೂಲಕ ನೀರು ಸರಬರಾಜು ಮಾಡಿದ್ದನ್ನು ಹೇಳುತ್ತದೆ [12].

1442ರ ಮತ್ತೊಂದು ಶಾಸನವು ನಾಗಮನಾಯಕನ ಕಾರ್ಯಕರ್ತನಾದ ಗಂಗ ನಾಯಕನು ಪಕುನ್ನದ ಕೆರೆಯಲ್ಲಿ ಮೀನು ಮಾರಾಟದಿಂದ ಬಂದ ಹಣವನ್ನು ಕೆರೆಯ ಹೂಳೆತ್ತುವುದಕ್ಕಾಗಿ ನೀಡಿದ್ದನ್ನು ದಾಖಲಿಸುತ್ತದೆ [13].

ಕ್ರಿ.ಶ. 1445ರ ಇಮ್ಮಡಿ ದೇವರಾಯನಿಗೆ ಸಂಬಂಧಿಸಿದ ಶಾಸನವು ರಾಜನ ಕಾರ್ಯಕರ್ತ ತಿಮ್ಮಪ್ಪನಾಯಕ. ಪಡೈವೀಡುವಿನ ಸ್ಥಾನಪತಿ, ಮಾಹೇಶ್ವರರು ಮತ್ತು ಊರವರೆಲ್ಲರೂ ಸೇರಿ ತಿರುಮಲೈನ ತಿರುನಾಮತ್ತುಕಾಣಿಯಲ್ಲಿರುವ ನಾಲ್ಕು ಕೆರೆಗಳಲ್ಲಿ ಮೀನು ಸಾಕಾಣಿಕೆಯನ್ನು ಗುತ್ತಿಗೆಗೆ ನೀಡುವುದರಿಂದ ಬಂದ ವರಮಾನವನ್ನು ಪ್ರತಿವರ್ಷ ಕೆರೆಗಳಲ್ಲಿ ಹೂಳೆತ್ತಲು ಪ್ರತ್ಯೇಕವಾಗಿ ಮೀಸಲಿರಿಸಲು ನಿರ್ಧರಿಸಿದ್ದನ್ನು ಉಲ್ಲೇಖಿಸುತ್ತದೆ [14]. ಇನ್ನೂ ಹಲವಾರು ಈ ಶಾಸನಗಳು ಈ ವಿಷಯವನ್ನು ದಾಖಲಿಸಿದೆ.

ಮೀನು ಮಾರಾಟದಿಂದಲ್ಲದೆ, ಖಾಸಗಿ ವ್ಯಕ್ತಿಗಳು, ದೇವಾಲಯದ ಅಧಿಕಾರಿಗಳು ಸಹ ಕೆರೆ ಕಾಲುವೆ ಮುಂತಾದವುಗಳನ್ನು ದುರಸ್ತಿಪಡಿಸಿದ್ದನ್ನು ದಾಖಲಿಸಿವೆ.

1396ರ ತಿರುವಣ್ಣೈನಲ್ಲೂರಿನ ಶಾಸನವು ದೇವಾಲಯದ ದಕ್ಷಿಣ ಭಾಗದಲ್ಲಿರುವ ಕೆರೆಯನ್ನು ವಿರೂಪಾಕ್ಷನ ಮಂತ್ರಿ ವಿರುಪಣ್ಣ ದುರಸ್ತಿಪಡಿಸಿದ್ದನ್ನು ತಿಳಿಸುತ್ತದೆ[15].

ಇಮ್ಮಡಿ ಬುಕ್ಕರಾಯನ ಶಾಸನವು ಮಠಪತಿ ಮಾಹೇಶ್ವರನಾದ ತಿರುವಾಂಜಿಯ ಮುಡಯರ್‌ನು ಕೆರೆಯನ್ನು ನಿರ್ಮಿಸಿದ್ದರಿಂದ ಆತನಿಗೆ ಕೆರೆಯ ಕೆಳಭಾಗದಲ್ಲಿ ಮೂರು ವೇಲಿ ಭೂದತ್ತಿ ನೀಡಿದ್ದನ್ನು ಉಲ್ಲೇಕಿಸುತ್ತದೆ [16].

1427ರ ಇಮ್ಮಡಿ ದೇವರಾಯನ ಶಾಸನವು ಪುಲ್ಲಲೂರಿನಲ್ಲಿ ಮಳೆಯಿಂದಾಗಿ ನೀರಿನ ಕಾಲುವೆ ಹಾನಿಗೊಳಗಾದಾಗ ದೇವಸ್ಥಾನಪತಿ ಭಾಸ್ಕರದೇವ ಅದನ್ನು ದುರಸ್ತಿಗೊಳಿಸಿದ್ದನ್ನು ದಾಖಲಿಸುತ್ತದೆ [17].

ಖಾಸಗಿ ವ್ಯಕ್ತಿಗಳಲ್ಲದೆ, ಮಹಾಸಭೆಗಳು ಸಹ ತಮ್ಮ ಸಮಿತಿಗಳ ಮುಖಾಂತರ ಕೆರೆಗಳ ನಿರ್ವಹಣಾ ಕಾರ್ಯವನ್ನು ನೋಡಿಕೊಳ್ಳುತ್ತಿದ್ದವು. ಕಾವೇರಿಪಾಕಂನ 1459ರ ಶಾಸನದಲ್ಲಿ ಮಹಾಸಭಾದ ಉಲ್ಲೇಖವಿದ್ದು, ಕಾವಿಡಿ ಪಾಕ್ಕ ಅಥವಾ ಅವನಿನಾಥ ಚತುರ್ವೇದಿ ಮಂಗಲಂನಲ್ಲಿ ಸುದ್ದಿ ಸಮಿತಿ (Words Committee) ಮತ್ತು ಏರಿ ವಾರಿಯಂ (ಕೆರೆ ಸಮಿತಿ) ನ ಮಹಾಜನಗಳು 'ದೀಪದ ಕೊಡುಗೆ'ಯನ್ನು ನೋಡಿಕೊಳ್ಳಲು ಒಬ್ಬ ವ್ಯಕ್ತಿಯನ್ನು ನೇಮಕ ಮಾಡಿದ್ದನ್ನು ತಿಳಿಸುತ್ತದೆ [18].

ಇಲ್ಲಿ 'ದೀಪ ಕೊಡುಗೆ' ಎಂಬುದು ದೇವಾಲಯದಲ್ಲಿ ನಿರಂತರವಾಗಿ ದೀಪ ಉರಿಸಲು ನೀಡಿದ ದತ್ತಿಯನ್ನು ಸೂಚಿಸುತ್ತದೆಂದು ಕಾಣುತ್ತದೆ (ಅಥವಾ ಕಾವೇರಿಪಾಕಂ ಸಮುದ್ರ ತೀರದಲ್ಲಿರುವುದರಿಂದ ನೌಕೆಗಳ ಮಾರ್ಗದರ್ಶನಕ್ಕಾಗಿ ಸ್ಥಾಪಿಸಲಾದ ದೀಪಸ್ತಂಭದ ನಿರ್ವಹಣೆಗಾಗಿ ನೀಡಿದ ದತ್ತಿಯಿರಬಹುದೆ?) ಅಂಥ ಭೂ ದತ್ತಿಗಳನ್ನು ಗುತ್ತಿಗೆಗೆ ನೀಡಿ ಅಥವಾ ಸಾಗುವಳಿ ಮಾಡಿಸಿ ಅದರಿಂದ ಬರುವ ಉತ್ಪನ್ನದಿಂದ ದೀಪ ಉರಿಸಲು ವ್ಯವಸ್ಥೆ ಮಾಡಲಾಗುತ್ತಿತ್ತು. ಅಂದರೆ ಉತ್ಪತ್ತಿಯಾದ ಹೆಚ್ಚಿನ ಪಾಲನ್ನು ನೀರಾವರಿ ಕಾಮಗಾರಿಗಳಲ್ಲಿ ಹೂಡುವ ಮೂಲಕ ಉತ್ಪಾದಿಸಲಾಗುತ್ತಿತ್ತು. ಇಂಥ ವ್ಯವಸ್ಥೆಯನ್ನು ಕರ್ನಾಟಕದ ಕೆಲವು ತಮಿಳು ಶಾಸನಗಳಲ್ಲಿ 'ದಶವಂದ' ಎಂದು ಸಹ ಕರೆಯುತ್ತಾರೆ. ಇದಕ್ಕೆ ಹೊಂದಿಕೊಂಡ ಮತ್ತೊಂದು ಶಾಸನವು ಪೆರಿಯ ಏರಿ ಮತ್ತು ಏರಿವಾರಿಯಂ (ಕೆರೆ ಸಮಿತಿ) ಯನ್ನು ಉಲ್ಲೇಖಿಸುತ್ತದೆ[19].

ವ್ಯಕ್ತಿಗತ ಹಾಗೂ ಸಾಂಸ್ಥಿಕ ರೂಪದಲ್ಲಲ್ಲದೆ, ಬಿಟ್ಟಿ ಸೇವೆಯ ಮೂಲಕ ಸಹ ಕೆರೆಗಳಲ್ಲಿ ಹೂಳೆತ್ತುವ ಕಾರ್ಯ ಕೈಗೆತ್ತಿಕೊಳ್ಳಲಾಗುತ್ತಿತ್ತು.

ವಾಲಿಕಂಡಪುರಂನ 1397ರ ಶಾಸನವು, ಈ ದೃಷ್ಟಿಯಿಂದ ವಿಶಿಷ್ಟವಾಗಿದೆ. ನಾಡುವಿನ ನಾಲ್ಕು ಜಾತಿಗಳಿಗೆ ಸೇರಿದ ಜನರಿಗೆ ಬಿಟ್ಟಿ ದುಡಿಮೆಯ ತಮ್ಮ ಭಾಗವಾಗಿ ಕೆರೆಯಲ್ಲಿ ಹೂಳನ್ನು ತೆಗೆಯುವಂತೆ ನಿರ್ಬಂಧಿಸಲಾಯಿತು. ಕುಟುಂಬಗಳ ಗಾತ್ರ ಮತ್ತು ಸ್ವರೂಪಕ್ಕನುಸಾರವಾಗಿ ಶ್ರಮದ ಪ್ರಮಾಣ ನಿರ್ಧರಿಸಲಾಗಿತ್ತು. ಹೂಳು ತೆಗೆಯಲು ಬಿಟ್ಟಿ ಸೇವೆಯನ್ನು ಒದಗಿಸದ ಜನರು ಒಂದು ಕುಳಿ (ಬಂಡಿ) ಹೂಳಿಗೆ ಒಂದು ಪಣಂ ಅನ್ನು ನಾಡವರ್‌ರಿಗೆ (ನಾಡ ಮಹಾಜನಗಳಿಗೆ) ಸಂದಾಯ ಮಾಡಬೇಕಾಗಿತ್ತು[20].

ಕೆರೆಯನ್ನು ಕಟ್ಟಿಸುವುದರ ಜೊತೆಗೆ ಅದರ ನಿರ್ವಹಣೆಗಾಗಿ ದತ್ತಿಗಳನ್ನು ಹಾಗೂ ನೀರಾವರಿಯ ಕೆಲವು ಹಕ್ಕುಗಳನ್ನು ನೀಡಲಾಗುತ್ತಿತ್ತು.

1375ರ ಕಂಪಣನ ಶಾಸನವು ನಿನ್ನನ ಊರವರು ಪಯಾಕೂರ್‌ನ ಮಹಾಜನಗಳಿಗೆ ನೀರಾವರಿಯ ಕೆಲವು ಹಕ್ಕುಗಳನ್ನು ನೀಡಿದ್ದನ್ನು ದಾಖಲಿಸುತ್ತದೆ [21]. ಇಮ್ಮಡಿ ವಿರೂಪಾಕ್ಷನ 1382ರ ಶಾಸನವು ಪಲ್ಲವರಾಯ ನಲ್ಲೂರಿನಲ್ಲಿ ಕೆರೆಯೊಂದನ್ನು ಕಟ್ಟಿಸಿ ಅದರ ನಿರ್ವಹಣೆಗಾಗಿ ಗಂಗಣಂಗಳ್ ಎಂಬುವರ ಪನ್ನೈಆಳ್ (ಕೆಲಸದ ಆಳು) ತಿರುತ್ತಾಪಿಳ್ಳೈಗೆ ಅದರ ಕೆಳಗೆ 500 ಕುಳಿ ಭೂದಾನ ನೀಡಿದ್ದನ್ನು ತಿಳಿಸುತ್ತದೆ [22].

ಕೆರೆಯ ಕೆಲವು ಉತ್ಪನ್ನಗಳು ದೇವಾಲಯಕ್ಕೆ ಮೀಸಲಾಗಿರುತ್ತಿದ್ದವು. ಕೆರೆ ಗಳಿಂದ ಉತ್ಪತ್ತಿ ನಿಂತರೆ ದೇವಾಲಯಗಳೂ ದಿವಾಳಿಯಾಗುತ್ತಿದ್ದವು.

ಇಮ್ಮಡಿ ವಿರೂಪಾಕ್ಷನ ಶಾಸನವು ಈ ಬಗ್ಗೆ ಮಾಹಿತಿ ನೀಡುತ್ತಿದೆ. ಕೆರೆ ಬಿರುಕು ಬಿದ್ದಿದ್ದರಿಂದ ತೆರಿಗೆ ನೀಡಲು ದೇವಾಲಯಕ್ಕೆ ಯಾವುದೇ ಮೂಲ ಇಲ್ಲದಿದ್ದರಿಂದ ತೆರಿಗೆ ನೀಡುವ ಸಲುವಾಗಿ ದೇವಾಲಯದ ಮೂರು ಬೀದಿಗಳಲ್ಲಿದ್ದ ಮನೆಗಳನ್ನು ಮಾರಾಟ ಮಾಡಿದ್ದನ್ನು ತಿಳಿಸುತ್ತದೆ[23]. ದೇವಾಲಯಕ್ಕೆ ನಿಶ್ಚಿತ ಆದಾಯವಿಲ್ಲದಿದ್ದಾಗ, ದೇವಾ ಲಯಕ್ಕೆ ಸೇರಿದ ಭೂಮಿ ಮಾರಾಟ ಮಾಡಿ ಆ ಹಣದಿಂದ ಕೆರೆ ದುರಸ್ತಿ ಮಾಡಿಸಲಾಗುತ್ತಿತ್ತು. ಇಮ್ಮಡಿ ವಿರೂಪಾಕ್ಷನ ಶಾಸನವು ಶಡ್ಯೈಯೇರಿ ಎಂಬ ಹೆಸರಿನ ಕೆರೆ ಬಿರುಕುಬಿದ್ದು, ಇದರಿಂದ ಇಡೀ ಗ್ರಾಮದ ಭೂಮಿ ಸಾಗುವಳಿಯಿಲ್ಲದೆ, ಪಾಳು ಬಿದ್ದಿದ್ದರಿಂದ ದೇವಾಲಯಕ್ಕೆ ಸೇರಿದ (ತಿರುನಾಮತ್ತು ಕಾಣಿ) ಭೂಮಿಯನ್ನು ಇಳೈಯ ಪೆರುಮಾಳ್ ಎಂಬ ವ್ಯಕ್ತಿಗೆ 50 ಪಣಂಗಳಿಗೆ ಮಾರಾಟ ಮಾಡಿ ಅದರಿಂದ ಬಂದ ಹಣದಿಂದ ದೇವಲಾಯದ ಅಧಿಕಾರಿಗಲು ಆ ಕೆರೆಯ್ನನ್ನು ದುರಸ್ತಿಪಡಿಸಿದ್ದನ್ನು ದಾಖಲಿಸುತ್ತದೆ [24].

ಮಠ ಅಥವಾ ದೇವಾಲಯಗಳಿಗೆ ಅಥವಾ ವಿಶೇಷ ಉತ್ಸವ/ಹಬ್ಬಗಳ ಆಚರಣೆಯ ವೆಚ್ಚಕ್ಕಾಗಿ ದತ್ತಿ ನೀಡುವಾಗ ಅವುಗಳನ್ನು ನೀರಾವರಿ ಸೌಲಭ್ಯಗಳೊಂದಿಗೆ ನೀಡಲಾಗುತ್ತಿತ್ತು.

1382ರ ಶಾಸನವು ತಿರುಕ್ಕಾರಿಕಾರೈನ ತಿರುವಾಲನ್ ಮಠದ ಮೊದಲಿಯಾರ್ ಸತ್ಯದರ್ಶನಿಗಳಿಗೆ ವೆನ್‌ಕುಳತ್ತೂರಿನ ಊರವರು ಅಲ್ಲಿಯ ಕೆರೆಯಿಂದ ನೀರಾವರಿ ಹಕ್ಕುಗಳೊದಿಗೆ ಕಾವಂಡಕಂಡನಲ್ಲೂರಿನಲ್ಲಿ ಭೂ ದತ್ತಿ ನೀಡುವುದನ್ನು ಉಲ್ಲೇಖಿಸುತ್ತದೆ [25].

1410ರ ಭೂಪತಿ ರಾಯನ ಶಾಸನವು ರಾಶಮಂಗಲಂನಲ್ಲಿರುವ ತಿರುನಾಮತ್ತುಕಾಣಿ (ದೇವಾಲಯಕ್ಕೆ ಸೇರಿದ ಜಮೀನು) ಭೂಮಿಯನ್ನು ಕಾಲಮೇಘ ಪೆರುಮಾಳ್ ದೇವಾಲಯದ ಅಧಿಕಾರಿಗಳು ದೇವಾಲಯಕ್ಕೆ ಸೇರಿದ ರಾಶಮಂಗಲಂನಲ್ಲಿರುವ 2000 ಕುಳಿ ಅಡಿಕೆ ತೋಟವನ್ನು ಇತರ ಸೌಲಭ್ಯಗಳೊಂದಿಗೆ ತೋಟದ ಸಾಗುವಳಿಗಾಗಿ ನೀರನ್ನು ಬಳಸಿಕೊಳ್ಳುವ ಹಕ್ಕಿನೊಂದಿಗೆ ಮಾರಾಟ ಮಾಡಿದ್ದನ್ನು ದಾಖಲಿಸುತ್ತದೆ [26].

ಇಮ್ಮಡಿ ದೇವರಾಯನ 1424ರ ಶಾಸನವು, 4000 ಕುಳಿ ಭೂಮಿಯನ್ನು ನೀಡಿದಾಗ ಅದಕ್ಕೆ ಪೆರಿಯೇರಿಯಿಂದ ನೀರಾವರಿ ಸೌಲಭ್ಯಗಳನ್ನು ಒದಗಿಸುವ ಮೂಲಕ ನೀಡಿದ್ದನ್ನು ತಿಳಿಸುತ್ತದೆ [27].

ಅತಿವೃಷ್ಟಿಯಾದಾಗ ನದಿಗಳಲ್ಲಿ ಪ್ರವಾಹ ಉಂಟಾಗಿ ಅಥವಾ ಅನಾವೃಷ್ಟಿಯ ಸಂದರ್ಭದಲ್ಲಿ ನೀರಿನ ಅಭಾವದಿಂದ ಸಾಗುವಳಿಯಿಲ್ಲದೆ ಜಮೀನು ಬೀಳು ಬಿದ್ದಾಗ ಅಂಥ ಭೂಮಿಗಳನ್ನು ಕೃಷಿಯೋಗ್ಯವಾಗಿಸಲು ರೈತರಿಗೆ/ಗೇಣಿದಾರರಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಹಲವಾರು ತೆರಿಗೆ ವಿನಾಯಿತಿಗಳನ್ನು ಘೋಷಿಸಲಾಗುತ್ತಿತ್ತು.

ಇಮ್ಮಡಿ ಬುಕ್ಕರಾಯನ 1402ರ ಶಾಸನವು, ಕಾವೇರಿ ನದಿಯಲ್ಲಿ ಪ್ರವಾಹ ಬಂದು ನೀರಾವರಿ ಕಾಲುವೆಗಲ್ಲಿ ಹೂಳು ತುಂಬಿಕೊಂಡು ಜಮೀನುಗಳ ನಡುವಿನ ಎಲ್ಲೆ ಗುರುತುಗಳೆಲ್ಲ ಕೊಚ್ಚಿಕೊಂಡು ಹೋಗಿದ್ದರಿಂದ ಬೇಸಾಯಗಾರರು ಹೆಚ್ಚಿನ ಕಾಲ ಆ ಜಮೀನುಗಳನ್ನು ಪರಿತ್ಯಜಿಸಿದರು. ಆಗ ಬುಕ್ಕರಾಯನು. ಈ ಭೂಮಿಯನ್ನು ಹೊಸದಾಗಿ ಸಾಗುವಳಿ ಮಾಡಿ, ಅಲ್ಲಿ ಜನರು ಬಂದು ನೆಲೆಸುವಂತೆ ಮಾಡುವ ಸಲುವಾಗಿ ಅವರ ಪರವಾಗಿ ಹಲವಾರು ವಿನಾಯಿತಿಗಳನ್ನು ನೀಡುತ್ತಾನೆ. ಅಂದರೆ ಮೊದಲನೇ ವರ್ಷ ಕಾರ್ ಮತ್ತು ಪಾಶಾಣ ಭೂಮಿಗಳೆರಡಕ್ಕೂ ಅರ್ಧ ಭಾಗ ಮಾತ್ರ ತೆರಿಗೆ ಸಂಗ್ರಹಿಸುವುದು, ನಂತರದ ವರ್ಷದಿಂದ ನಾಲ್ಕನೇ ಮೂರು ಭಾಗ ಹೀಗೆ ವರ್ಷಂ ಪ್ರತಿ ಹಲವಾರು ತೆರಿಗೆಗಳ ರಿಯಾಯಿತಿ ನೀಡಿದ್ದನ್ನು ದಾಖಲಿಸುತ್ತದೆ [28].

1467ರ ಮತ್ತೊಂದು ಶಾಸನದಲ್ಲಿ ನೀರಿಲ್ಲದ ಕಾರಣದಿಂದಾಗಿ ಸಾಗುವಳಿಯಿಲ್ಲದೆ ಪಾಳುಬಿದ್ದಿದ್ದ ದೇವಾಲಯಕ್ಕೆ ಸೇರಿದ ಭೂಮಿಯನ್ನು ತಿರುಮೇಲಿರೈ ಆಳ್ವಾರ್ ದೇವಾಲಯದ ಭಂಡಾರಿ ಉಟವಕ್ಕಾಣಿಯಾಗಿ ಅದನ್ನು ಕೊಂಡುಕೊಂಡು ಸಾಗುವಳಿ ಯೋಗ್ಯವನ್ನಾಗಿಸುತ್ತಾನೆ. ನಂತರ ಅದನ್ನು ದೇವಾಲಯ ವರ್ಷಕ್ಕೆ 200 ಪಣ ಚಿನ್ನಕ್ಕೆ ಗುತ್ತಿಗೆ ನೀಡಿದ್ದನ್ನು ದಾಖಲಿಸುತ್ತದೆ.

ನೀರಾವರಿಸಂಬಂಧಿ ತೆರಿಗೆಗಳು

ಸದರಿ ಶಾಸನಗಳಲ್ಲಿ 'ಪಾಡೈಕ್ಕಾದಲ್', ವಾಶಲ್‌ಕುಟಿಪಣಂ ಹಾಗೂ ಏರಿಪಾಶಿ ಎಂಬ ಪದಗಳು ಪ್ರಯೋಗವಾಗಿದೆ. ಪಾಡೈಕ್ಕಾವಲ್[29] ಎಂಬುದು ಬಹುಶಃ ಕೆರೆಯನ್ನು ದುರಸ್ತಿಪಡಿಸುವುದಕ್ಕಾಗಿ ಸಂಗ್ರಹಿಸುವ ತೆರಿಗೆಯಾಗಿರಬಹುದು. 'ವಾಶಲ್ ಕುಟಿಪಣಂ'[30] ಕೆರೆ ಹೂಳೆತ್ತುವುದಕ್ಕಾಗಿ ಸಂಗ್ರಹಿಸುವ ತೆರಿಗೆಯಿರಬಹುದೆಂದು ತೋರುತ್ತದೆ. ಹಾಗೆಯೇ 'ಏರಿಪಾಶಿ, ಮೀನು ಸಾಕಲು ಕೆರೆಗಳನ್ನು ಗುತ್ತಿಗೆಗೆ ನೀಡಿ ಅದರಿಂದ ಸಂಗ್ರಹಿಸಲಾದ ಹಣವಿರಬಹುದು.

ಜಲವಿವಾದಗಳು

ನದಿ ಕಾಲುವೆಯಿಂದ ಅಥವಾ ಕೆರೆಗಳಿಂದ ನೀರು ಹಂಚಿಕೆ ಮಾಡಿಕೊಳ್ಳುವ ವಿಚಾರದಲ್ಲಿ ಗ್ರಾಮ ಗ್ರಾಮಗಳ ಮಧ್ಯೆ ವಿವಾದಗಳು ತಲೆದೋರುತ್ತಿದ್ದವು. ಅಂಥ ಸಂದರ್ಭದಲ್ಲಿ ಊರ ಜನಗಳು ಕುಳಿತುಕೊಂಡು ತಮ್ಮಲ್ಲೇ ವಿವಾದಗಳನ್ನು ಬಗೆ ಹರಿಸಿಕೊಳ್ಳುತ್ತಿದ್ದರು ಹಾಗೂ ನೀರು ಹಂಚಿಕೆಗೆ ಸಂಬಂಧಪಟ್ಟಂತೆ ಕೆಲವು ಷರತ್ತುಗಳನ್ನು ಸಹ ವಿಧಿಸಲಾಗುತ್ತಿತ್ತು.

1406ರ ಇಮ್ಮಡಿ ಬುಕ್ಕರಾಯನ ಶಾಸನವು ಕೆರೆ ನೀರಿನ ಬಳಕೆ ಕುರಿತಂತೆ ಆಳತ್ತೂರ್ ಮತ್ತು ಅತ್ತಿಪಟ್ಟು ಗ್ರಾಮಗಳ ನಡುವೆ ಉಂಟಾದ ವಿವಾದವನ್ನು ಮಹಾ ಪ್ರಧಾನಿ ತಿಪ್ಪರಶರ್‌ನ ಸನ್ನಿಧಿಯಲ್ಲಿ ಬಗೆಹರಿಸಿಕೊಂಡಿದ್ದನ್ನು ತಿಳಿಸುತ್ತದೆ [31].

ಹಾಗೆಯೇ 1426ರ ದೇವರಾಯನ ಶಾಸನವು ವಡನೆನ್ ಮಲ್ಲೈನ ಊರಜನರು ತಮ್ಮ ಜಮೀನುಗಳಿಗೆ ನೀರುಣಿಸುವುದಕ್ಕಾಗಿ ನದಿಯಿಂದ ನೀರು ಹರಿಸಿಕೊಳ್ಳುವುದರ ಕುರಿತ ಕೆಲವು ನಿರ್ಬಂಧಗಳ ಬಗ್ಗೆ ಇತರ ಆರು ಗ್ರಾಮಗಳೊಂದಿಗೆ ಮಾಡಿಕೊಂಡ ಒಪ್ಪಂದವನ್ನು ಉಲ್ಲೇಖಿಸುತ್ತದೆ [32].

1435ರ ಮತ್ತೊಂದು ಶಾಸನವು ನದಿ ಕಾಲುವೆಯ ನೀರನ್ನು ಬಳಸಿಕೊಳ್ಳುವ ವಿಚಾರದಲ್ಲಿ ಕೀಲ್‌ಕುರೈನ ಚಾಟ್ಟು ಅಗರಂನ ಮಹಾಜನಗಳು ಹಾಗೂ ಪೊನ್ನೈನ ಊರವರ ನಡುವೆ ಆದ ಒಪ್ಪಂದವನ್ನು ದಾಖಲಿಸುತ್ತದೆ [33].

ಉಪಸಂಹಾರ

ಅಂತಿಮವಾಗಿ ಈ ಎಲ್ಲ ಶಾಸನಗಳನ್ನು ಅವಲೋಕಿಸಿದಾಗ ಕೆಲವು ಅಂಶಗಳು ಗಮನಕ್ಕೆ ಬರುತ್ತವೆ. ತಮಿಳುನಾಡಿನಲ್ಲಿ ನದಿಗಳಿಗೆ ಕಾಲುವೆಗಳ ವ್ಯವಸ್ಥೆ ಪ್ರಧಾನವಾದ ನೀರಾವರಿ ಮೂಲವಾಗಿತ್ತು.

ನೀರಾವರಿ ಕಾಮಗಾರಿಗಳ ಸೃಜನೆ/ದುರಸ್ತಿಯನ್ನು ಬಹುತೇಕ ಮಠಪತಿ/ಸ್ಥಾನಪತಿಗಳು ಅಥವಾ ಊರ ಮಹಾಜನಗಳೇ ಕೈಗೊಂಡಿರುವುದನ್ನು ಕಾಣಬಹುದು.

ಕೆರೆಗಳ ಉತ್ಪನ್ನದಿಂದಲೇ ಅವುಗಳ ನಿರ್ವಹಣಾ ಕಾರ್ಯವನ್ನೂ ಕೈಗೆತ್ತಿಕೊಳ್ಳಲಾಗುತ್ತಿತ್ತು. ಬಹುತೇಕ ದೇವದಾನ ಗ್ರಾಮಗಳು (ತಿರುನಾಮತ್ತು ಕಾಣಿಟ್ಟಿಂ)ದೇವಾಲಯಗಳ ಅಧೀನದಲ್ಲೇ ಇರುತ್ತಿದ್ದು, ಅವುಗಳಿಂದ ದೇವಾಲಯಕ್ಕೆ ಬರುತ್ತಿದ್ದ ಉತ್ಪನ್ನದಿಂದ ದೇವಾಲಯಗಳ ಪೂಜಾಕಾರ್ಯಗಳನ್ನು ನಡೆಸಲಾಗುತ್ತಿತ್ತು. ದೇವದಾನ ಗ್ರಾಮಗಳಿಗೆ ವಿಶೇಷವಾಗಿ ನೀರನ್ನು ಹರಿಸುವ ವ್ಯವಸ್ಥೆ ಇತ್ತು. ಅಲ್ಲದೆ ಸ್ಥಳೀಯ ಜನರೂ ನೀರಾವರಿ ಕಾಮಗಾರಿಗಳನ್ನು ನಿರ್ಮಿಸಿರುವುದನ್ನು ಕಾಣಬಹುದು. ಎಷ್ಟೋ ಸಾರಿ ದೇವಾಲಯಗಳು ಪ್ರಜಾಹಿತವನ್ನು ಪರಿಗಣಿಸಿ, ದೇವಾಲಯಕ್ಕೆ ಸೇರಿದ ಭೂಮಿಯನ್ನು ಮಾರಾಟ ಮಾಡಿ ಅದರಿಂದ ಬಂದ ಹಣದಿಂದ ಕೆರೆಗಳನ್ನು ದುರಸ್ತಿಪಡಿಸಿರುವುದನ್ನು ಕಾಣಬಹುದು. ದೇವಾಲಯಗಳಿಗೆ ಸೇರಿದ ಭೂಮಿ ಮಾರಾಟ ಮಾಡಿದಾಗ ಅದನ್ನು ನೀರಿನ ಸೌಲಭ್ಯದೊಂದಿಗೆ ಮಾರಾಟ ಮಾಡಲಾಗುತ್ತಿತ್ತು. ಹಾಗೆಯೇ ದೇವಾಲಯಕ್ಕೂ ನೀರಾವರಿ ಸೌಲಭ್ಯದೊಂದಿಗೆ ದತ್ತಿ ನೀಡಲಾಗುತ್ತಿತ್ತು.

ನೀರಾವರಿ ಕಾಮಗಾರಿಗಳ ದುರಸ್ತಿಯನ್ನು ಸಹ ಮಠಪತಿಗಳು ಹಾಗೂ ಊರ ಮಹಾಜನ ಹಾಗೂ ಸ್ಥಳೀಯ ನಾಯಕರು ಕೈಗೊಂಡಿರುವುದನ್ನು ಕಾಣಬಹುದು. ಕೆರೆಗಳ ನಿರ್ವಹಣೆಗೆ ಏರಿವಾರಿಯಂ ಸಮಿತಿ ಇದ್ದ ಬಗ್ಗೆ ಉಲ್ಲೇಖವಿದ್ದರೂ ಬಹುತೇಕ ಕೆರೆಗಳನ್ನು ಮೀನು ಸಾಕಾಣಿಕೆಗೆ ಗುತ್ತಿಗೆಗೆ ನೀಡಿ ಅದರಿಂದ ಬಂದ ವರಮಾನವನ್ನು ಕೆರೆಗಳ ಹೂಳೆತ್ತಲು ಬಳಸಲಾಗುತ್ತಿತ್ತು.

ಸದರಿ ಶಾಸನಗಳಲ್ಲಿ ಕೆಲವು ತೆರಿಗೆಗಳು ಚಾಲ್ತಿಯಲ್ಲಿದ್ದು ಅವುಗಳಲ್ಲಿ ಪಾಡೈ ಕಾವಲ್, ವಾಶಲ್ ಕುಳಿ, ಏರಿಪಾಶಿ ಮುತಾದ ತೆರಿಗೆಗಳನ್ನು ಶಾಸನಗಳು ಉಲ್ಲೇಖಿಸುತ್ತದೆ.

ನದಿಗಳಿಗೆ ಕಾಲುವೆಗಳನ್ನು ನಿರ್ಮಿಸಿ ಅವುಗಳ ಮೂಲಕ ಊರುಗಳಿಗೆ ನೀರುಣಿಸಲಾಗುತ್ತಿತ್ತು. ಅಂಥ ಸಂದರ್ಭದಲ್ಲಿ ಮಹಾಜನಗಳು ಮತ್ತು ಊರವರ ನಡುವೆ ವಿವಾದವೇರ್ಪಟ್ಟಾಗ ಮತ್ತು ಕೆರೆನೀರಿನ ಹಂಚಿಕೆಯಲ್ಲಿ ಗ್ರಾಮ ಗ್ರಾಮಗಳ ಮಧ್ಯೆ ವಿವಾದವೇರ್ಪಟ್ಟಾಗ ಮಹಾಜನಗಳು ಅಥವಾ ಊರವರು ಅದನ್ನು ಬಗೆಹರಿಸಿಕೊಳ್ಳುತ್ತಿದ್ದುದನ್ನು ಶಾಸನಗಳಲ್ಲಿ ಗಮನಿಸಬಹುದು.

ಹೀಗೆ ಸಂಗಮ ಅರಸರ ಶಾಸನಗಳು ಆ ಅವಧಿಯಲ್ಲಿ ತಮಿಳುನಾಡಿನಲ್ಲಿ ಪ್ರಚಲಿತವಿದ್ದ ನೀರಾವರಿ ವ್ಯವಸ್ಥೆ, ಅದನ್ನು ಸದೃಢಗೊಳಿಸಲು ಕೈಗೊಳ್ಳುತ್ತಿದ್ದ ಕ್ರಮಗಳು ಮುಂತಾದ ಅಂಶಗಳ ಬಗ್ಗೆ ಬೆಳಕು ಚೆಲ್ಲುತ್ತವೆ.

ಟಿಪ್ಪಣಿಗಳು

1. *ARB* 164/42AD 1399
2. *ARB* 147/42-43 (No date)

3. *ARB* 512/58-59 (No date)
4. *SII* 24 No 299 (No date)
5. *ARB* 190/41-42, AD 1382
6. *ARB* 50/40-41, AD 1382
7. *ARB* 50/40-41, (Nodate)
8. *ARB* 117/42-43, AD 1445
9. *ARB* 329/89
10. *ARB* 164/42, AD 1399
11. *ARB* 167/43-44 AD 1410
12. *EI* VIII 32
13. *ARB* 424/22, AD 1442
14. SII 23 No 69 AD 1445
15. ARB 474/21 AD 1396
16. ARB 200/39-40 AD 1402
17. ARB 193/41, AD 1427
18. AR 395/1905 AD 1459
19. *AR* 396/1905 AD 1459
20. *ARB* 285/1914 AD 1397
21. *SII* 17 No 690 AD 1375
22. *ARB* 190/41-42, AD 1382
23. *SII* 23, No. 241, AD 1383
24. *SII* 17 No. 251, AD 1383
25. *SII* 17 No. 699, AD 1382
26. *ARB* 334/92 AD 1410
27. *SII* No. 722, AR No. 665, AD 1424
28. *AR* 422/1912, AD 1402
29. *ARB* 244/14, AD 1373
30 *SII* No 69 AD 1445
31. *ARB* 357/23, AD 1406
32. *ARB* 241/36-37, AP 1426
33. *ARB* 262/67-68, AD 1435

ಆಧಾರ ಗ್ರಂಥಗಳು

1. *Annual Reports of Indian Epigraphy.*
2. *South Indian Inscriptions- Volumes*
3. *Epigraphia India- Volumes*
4. *Irrigation and water supply- South India*, 200 BC- 1600 AD T.M. Srinivasan, Madras.
5. *Cambridge Economic History of India*, Vol I C 1200-C 1750.
6. *ಹಂಪಿ ವಿಶ್ವವಿದ್ಯಾಲಯ ಶಾಸನ ಸಂಪುಟ-4*, ತಮಿಳುನಾಡಿನ ಕನ್ನಡ ಶಾಸನಗಳು ಸಂಪಾದಕರು: ಡಾ. ಎಚ್.ಎಸ್.ಗೋಪಾಲರಾವ್, ಡಾ. ಪಿ.ವಿ.ಕೃಷ್ಣಮೂರ್ತಿ

49. ದಣ್ಣಾಯಕನ ಕೆರೆ - ಊರು ಮತ್ತು ಕೆರೆ - ಒಂದು ಅಧ್ಯಯನ

ಡಾ. ಹೆಚ್. ಚಂದ್ರಶೇಖರ

ಪೀಠಿಕೆ

ಹಂಪಿಯಲ್ಲಿ ಸ್ಥಾಪಿತಗೊಂಡ ಕರ್ನಾಟಕ ಸಾಮ್ರಾಜ್ಯ (ವಿಜಯನಗರ ಸಾಮ್ರಾಜ್ಯ) ಭಾರತ ಕಂಡ ಪ್ರಗತಿ ಸಾಮ್ರಾಜ್ಯದ ಸಂಪತ್ತಿಗೆ ಈ ಸಾಮ್ರಾಟರೆಲ್ಲರೂ ಅಥವಾ ಅವರ ಸಾಮಂತರು ಮತ್ತು ಮಂತ್ರಿಗಳು ನೀರಾವರಿಗೆ ನೀಡಿದ ಪ್ರಾಮುಖ್ಯತೆಯೇ ಕಾರಣ. ನೀರಾವರಿಯಿಂದಾಗಿ ಅರೆ ಬೆಂಗಾಡು (Semi arid) ಪ್ರದೇಶವಾಗಿದ್ದ ಈ ಸಾಮ್ರಾಜ್ಯದಲ್ಲಿ ಅದರಲ್ಲಿ ವಿಶೇಷವಾಗಿ ಇಂದಿನ ಮತ್ತು ಹಿಂದಿನ ಬಳ್ಳಾರಿ ಜಿಲ್ಲೆಯಲ್ಲಿ ಕೃಷಿಯು ಉತ್ತಮ ಸ್ಥಿತಿಯಲ್ಲಿತ್ತು. ಅಂದು ರಚಿತವಾದ ತುಂಗಾಭದ್ರಾನದಿಯಿಂದ ಹೊರಡುವ ವಿಜಯನಗರ ಕಾಲುವೆ ಮತ್ತು ಸಾಮ್ರಾಜ್ಯದಲ್ಲಿ ನಿರ್ಮಿತ ಸಣ್ಣ ದೊಡ್ಡ ಕೆರೆಗಳು ಇಂದಿಗೂ ನೀರಾವರಿ ಸೌಲಭ್ಯವನ್ನು ಕೃಷಿಗೆ ನೀಡುತ್ತಿರುವುದು ಹೆಮ್ಮೆಯ ಸಂಗತಿ. ಅಂಥ ನೂರಾರು ಕೆರೆಗಳಲ್ಲಿ ಪ್ರಸ್ತುತ ಅಧ್ಯಯನದ ವಸ್ತುವಾಗಿರುವ ದಣ್ಣಾಯಕನ ಕೆರೆಯೂ ಒಂದು. ಈ ಕೆರೆ ಮತ್ತು ಇದೇ ಹೆಸರಿನ ಊರನ್ನು ಎರಡು ಸಲ ಸಂದರ್ಶಿಸಿ ಅಲ್ಲಿಯ ಕೆರೆ ಮತ್ತು ಹಳೆಯ ಊರಿನ ಪರಾತನ ಅವಶೇಷಗಳನ್ನು ಅಧ್ಯಯನಕ್ಕೊಳಪಡಿಸಿದ್ದೇನೆ. ಈ ಕೆರೆಯ ಮತ್ತು ಈ ಊರಿನ ಇತಿಹಾಸ ಮತ್ತು ತಾಂತ್ರಿಕ ಮತ್ತು ವೈಜ್ಞಾನಿಕ ವಿವರಗಳನ್ನು ಮುಂದೆ ಚರ್ಚಿಸಿ ಕೆಲ ತೀರ್ಮಾನಗಳಿಗೆ ಬಂದಿದ್ದೇನೆ. ಈ ಕೆರೆಯನ್ನು ಡಣ್ಣಾಯಕನ ಕೆರೆ ಅಥವಾ ದಣ್ಣಾಯಕನ ಕೆರೆ, ದಣಾಯಕನ ಕೆರೆ ಎಂದೂ ಕರೆಯಲಾಗುತ್ತದೆ.

ದಣ್ಣಾಯಕನ ಕೆರೆಯ ಕೆಲ ಮುಖ್ಯಾಂಶಗಳು

ಸ್ಥಳ ನಿರ್ದೇಶನ : ಈ ದಣ್ಣಾಯಕನ ಕೆರೆಯು ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿಗೆ ಸೇರಿದೆ. ಹೊಸಪೇಟೆಯಿಂದ ದಕ್ಷಿಣಕ್ಕೆ ಸುಮಾರು ೨೦ ಕಿ. ಮೀ. ದೂರದಲ್ಲಿದೆ. ಹೊಸಪೇಟೆಯಿಂದ -ಚಿತ್ರದುರ್ಗಕ್ಕೆ ಹೋಗುವ ಹಳೆಯ ಹೆದ್ದಾರಿಗೆ (Road) ಹೊಂದಿಕೊಂಡೇ ಈ ಊರು ಇದೆ. ಸಧ್ಯಕ್ಕೆ ರಾಷ್ಟ್ರೀಯ ಹೆದ್ದಾರಿ ನಂ. 13 (NH 13) ಇದರಿಂದ, ಪೂರ್ವಕ್ಕೆ ಒಂದೂವರೆ ಕಿ. ಮೀ. ದೂರದಲ್ಲಿ (ಹೊಸ ಊರು) ದಣ್ಣಾಯಕನ ಕೆರೆ ಇದ್ದರೆ ಸುಮಾರು ೧.೭ ಕಿ. ಮೀ. ದೂರದಲ್ಲಿ ಕೆರೆ ಇದೆ. (ಚಿತ್ರ

೧). ಹಳೆ ಊರು ಈ ಕೆರೆಯ ಒಡ್ಡಿನಿಂದ ಉತ್ತರಕ್ಕೆ ೧ ಕಿ. ಮೀ. ದೂರದಲ್ಲಿದೆ. ಪ್ರಸ್ತುತ ಅಧ್ಯಯನಕ್ಕೆ ಈ ಕೆರೆ ಮತ್ತು ಹಳೆ ಊರಿನಲ್ಲಿರುವ ಪ್ರಾಚ್ಯಾವಶೇಷಗಳು ಮಾತ್ರ ಸಂಬಂಧಿಸಿವೆ.

ಭೌತಿಕ ಅಂಶಗಳು : ಈ ಕೆರೆಯ ಒಡ್ಡಿನ ಹಾಗೂ ಇತರ ಭೌತಿಕ ಅಂಶಗಳನ್ನು ವಾಸುದೇವನ್ ತಪ್ಪಾಗಿ ನೀಡಿದ್ದಾರೆ. ಈ ಕೆರೆಯ ಒಡ್ಡಿನ ಉದ್ದ ಸುಮಾರು ೨೬.೨೫ ಮೀ. ಆದರೆ ವಾಸುದೇವನ್ ಪ್ರಕಾರ ಈ ಒಡ್ಡಿನ (ಏರಿಯ) ಉದ್ದ ಕೇವಲ ೨೬.೨೫ ಮೀಟರ್. ಒಡ್ಡಿನ ಎತ್ತರ ಸಣ್ಣ ನೀರಾವರಿ ಇಲಾಖೆಯ ಪ್ರಕಾರ ೯.೮೪ ಮೀ, ಆದರೆ ವಾಸುದೇವನ್ ಪ್ರಕಾರ ೭.೯೬ ಮೀಟರ್. ಈ ಕೆರೆಯ ಒಡ್ಡಿನ ಮೇಲ್ಭಾಗದ ಅಗಲ ಸುಮಾರು ೪.೦೦ಮೀಟರ್. ಈ ಕೆರೆಗೆ ಎಡದಂಡೆ ಮತ್ತು ಬಲದಂಡೆಯಲ್ಲಿ ತಲಾ ಒಂದೊಂದು ತೂಬುಗಳಿವೆ; ಆದರೆ ವಾಸುದೇವನ್ ಪ್ರಕಾರ ನಾಲ್ಕು ತೂಬುಗಳಿವೆ, ಎರಡು ತೂಬುಗಳಿವೆ ಮತ್ತು ಎರಡು ಕಾಲುವೆಗಳಿವೆ, ಇದು ವಾಸ್ತವ. ಆದರೆ ವಾಸುದೇವನ್ ಪ್ರಕಾರ ನಾಲ್ಕು ತೂಬುಗಳಿವೆ ಮತ್ತು ಎರಡು ಕಾಲುವೆಗಳಿವೆ ;ಇದು ಅಸಂಗತ ಸಂಗತಿ. ಬಹುಶಃ ಈ ಅಸಂಗತ ಸಂಗತಿಗಳಿಗೆ ಕ್ಷೇತ್ರಕಾರ್ಯದ ಕೊರತೆಯೇ ಕಾರಣವೆಂದು ಊಹಿಸಬಹುದು. ಇದು ಮಣ್ಣಿನ ಒಡ್ಡಾದರೂ (Earthern bund) , ಎರಡೂ ಕಡೆ ಕಲ್ಲುಬಂಡೆಗಳನ್ನು, ಸೈಜುಗಲ್ಲುಗಳನ್ನು ಸರಿಯಾಗಿ ಜೋಡಿಸಿ ಕಟ್ಟಲಾಗಿರುವುದರಿಂದ ಈ ಅಣೆಕಟ್ಟು ಇಂದಿಗೂ ಸದೃಢವಾಗಿದೆ. ಎರಡೂ ಕಾಲುವೆಗಳ ಉದ್ದ ತಲಾ ಸುಮಾರು ೨ ಕಿ. ಮೀ. ಈ ಕೆರೆಯ ಸಧ್ಯದ ಸಂಗ್ರಹ ಸಾಮರ್ಥ್ಯ (Gross Storage Capacity) ೮೧೫೭೦೦೦ ಘನ ಮೀಟರ್ ಮತ್ತು ಪರಿಣಾಮಕಾರಿ ಸಂಗ್ರಹ ಸಾಮರ್ಥ್ಯವೂ (Effective storage) ಅದೇ ಆಗಿರುತ್ತದೆ. ಅಂದರೆ ಕಾಲುವೆಯ ತಳ (Bed level) ಮತ್ತು ಕೆರೆಯಂಗಳ ಎರಡೂ ಒಂದೇ ಎತ್ತರದಲ್ಲಿವೆ ಎಂದಂತಾಯಿತು. ಆದ್ದರಿಂದ ಈ ಕೆರೆಯ ಬೇಸಿಗೆಯಲ್ಲಿ ಒಣಗುತ್ತದೆ. ಸಧ್ಯದ ಅಚ್ಚುಕಟ್ಟಿನ ವಿಸ್ತೀರ್ಣ ನಿಖರವಾಗಿ ಲಭ್ಯವಾಗಿಲ್ಲ. ಕ್ಷೇತ್ರ ಕಾರ್ಯದಲ್ಲಿ ನಾನು ನೋಡಿದಂತೆ ಅಚ್ಚುಕಟ್ಟು ಪ್ರದೇಶವು ಸುಮಾರು ೫೦ ಹೆಕ್ಟೇರಿನಷ್ಟು ಇರಬಹುದು. ಈ ಅಚ್ಚುಕಟ್ಟು ಪ್ರದೇಶ ಕಡಿಮೆಯಾಗಲು ಕಾರಣ ಇತ್ಯಾದಿಗಳನ್ನು ಮುಂದೆ ಚರ್ಚಿಸುತ್ತೇನೆ.

ಈ ಕೆರೆಯ ಒಡ್ಡನ್ನು ಕೆರೆಯ ಹಿಂಬದಿಯಲ್ಲಿ ನೋಡಿದಾಗ ಕೆರೆಯಂಗಳದಿಂದ ಸುಮಾರು ೬ ಮೀಟರವರೆಗೆ ನೀರನ ಗುರ್ತನ್ನು ಕಾಣಬಹುದು. (ಚಿತ್ರ -1) ಅಂದರೆ ಕೆರೆ ಪೂರ್ತಿ ತುಂಬಿದರೆ ತೂಬಿನ ಕಂಬಗಳ ಬಹುಭಾಗ ನೀರಿನಲ್ಲಿ ಮುಳುಗಬಹುದು. ಆದರೆ ನಾನು ಸೆಪ್ಟೆಂಬರ್ ೨೦೦೭ ರಲ್ಲಿ ನೋಡಿದಾಗ (ಇದು ಮಳೆಗಾಲದ ಬಹುಭಾಗ ಮುಗಿದ ಕಾಲ)ನೀರಿನ ಕೆರೆಗಿಂತ (Water Mark) ನೀರಿನ ಮಟ್ಟ ಸುಮಾರು ೧/೨ ಮೀಟರ್ ಕೆಳಗಿತ್ತು. (ಚಿತ್ರ -2) ಸಹಜವಾಗಿಯೇ ನೀರಿನ ಒಳಹರಿವು ಕಡಿಮೆಯಾಗಿದೆ

ಎಂದರ್ಥ. ಇದಕ್ಕೆ ಕಾರಣವೆಂದರೆ (ಮಳೆ ಕಡಿಮೆಯಾಗಿರದಿದ್ದರೂ) ಈ ಕೆರೆ ಕಟ್ಟಿದ ನಂತರ ಮೇಲಹರವಿನಲ್ಲಿ (Upstream) ಹಲವಾರು ಕೆರೆಗಳನ್ನು ಕಟ್ಟಲಾಗಿದೆ. ಒಟ್ಟು ೧೫ ಕೆರೆಗಳು ಮೇಲಹರವಿನಲ್ಲಿದೆ. ಬೇರೆ ಬೇರೆ ಕಾಲಘಟ್ಟದಲ್ಲಿ ಇಂಥ ಕೆರೆಗಳನ್ನು ಕಟ್ಟಿದ್ದರಿಂದ ಈ ಕೆರೆಗೆ ಹರಿದು ಬರುವ ನೀರಿನ ಮೊತ್ತ ಹಂತ ಹಂತವಾಗಿ ಕುಗ್ಗಿದೆ. ಆದ್ದರಿಂದ ಈ ಕೆರೆಗೆ, ತುಂಬಾಭದ್ರಾ ಜಲಾಶಯದ ಹಿನ್ನೀರಿನಿಂದ ದೊಡ್ಡ ಪಂಪುಗಳ ಸಹಾಯದಿಂದ ನೀರನ್ನು ತುಂಬಿಸಿ, ಈ ಕೆರೆಯ ಅಚ್ಚುಕಟ್ಟನ್ನು ೪೪೬.೧೫ ಹೆಕ್ಟೇರಿಗೆ ವಿಸ್ತರಿಸುವ ಯೋಜನೆಯನ್ನು ಸರ್ಕಾರ ಮಂಜೂರು ಮಾಡಿದೆ (G.O. No. ID/ 17/ LIS/ 06 dtd 16-12-2006). ಈ ಯೋಜನೆಯ ವೆಚ್ಚ ೩೫೨.೪೦ ಲಕ್ಷ ರೂ.ಗಳು. ಆದರೆ ಇದುವರೆಗೆ ಈ ಯೋಜನೆ ಕಾರ್ಯಗತವಾಗಿಲ್ಲ. ಆದ್ದರಿಂದ ಈ ಕೆರೆಯ ಅಚ್ಚುಕಟ್ಟು ತುಂಬಾ ಕಡಿಮೆ ಆಗಿದೆ.

ಈ ಕೆರೆಯ ಜಲಾನಯನ ಪ್ರದೇಶದ ವಿಸ್ತೀರ್ಣ ೪೭.೭೭ ಚದರ ಮೈಲಿಗಳು. ಇಲ್ಲಿಯ ಸರಾಸರಿ ವಾರ್ಷಿಕ ಮಳೆ ೬೫೮ ಮಿ. ಮೀ. ಇದರಲ್ಲಿ ನೈರುತ್ಯ ಮಳೆಯು ಸರಾಸರಿ (S.W. Monsoon) ೪೦೦ ಮಿ. ಮೀ. ಇದೆ.

ಕೆರೆಯ ನಿವೇಶನದ ಭೂವೈಜ್ಞಾನಿಕ ಲಕ್ಷಣಗಳು

ಈ ಕೆರೆಯ ಜಲಾನಯನ ಪ್ರದೇಶ ಮತ್ತು ಒಡ್ಡು ಆರ್ಕಿಯನ್ ಕಾಲದ ಕಣಶಿಲೆಯಿಂದ ಆವೃತವಾಗಿವೆ (ಚಿತ್ರ 3). ಈ ಶಿಲೆಯು ತುಂಬಾ ಗಟ್ಟಿಯಾದ ಶಿಲೆ. ಹಾಗೂ ಸಂದುಗಳನ್ನು ಮತ್ತು ಛೇದಗಳನ್ನು (Except joints and fractures) ಹೊರತುಪಡಿಸಿದರೆ ಇದೊಂದು ಅವ್ಯಾಪ್ಯ ಶಿಲೆಯಾಗಿದೆ. (Impervious rock)

ಇದು ಯಾವುದೇ ಅಣೆಕಟ್ಟಿನ ಬುನಾದಿಗೆ ಅಪೇಕ್ಷಣೀಯ ಲಕ್ಷಣ. ಈ ಕೆರೆಯ ಒಡ್ಡಿನ ಮಧ್ಯಂತರದಲ್ಲಿ ಒಡ್ಡು ಶಿಲೆ (Dyke rock) ಇದೆ. (ಚಿತ್ರ - 4). ಈ ಒಡ್ಡು ಶಿಲೆಯು ಕೆರೆಯನೀರು ಅಂತರಾಳದಲ್ಲಿ ಸೋರಿ ಹೋಗದಂತೆ ತಡೆಹಿಡಿಯುತ್ತದೆ. ಈ ಕೆರೆಯ ಒಡ್ಡನ್ನು ಕಟ್ಟುವಾಗ ಈ ಲಕ್ಷಣವನ್ನು ಗಮನಕ್ಕೆ ತೆಗೆದುಕೊಂಡು ಈ ನಿವೇಶನವನ್ನು ಆಯ್ಕೆ ಮಾಡಿರುವುದು ಅಚ್ಚರಿಯ ಸಂಗತಿ. ಇದು ಅಂದಿನ ಶಿಲ್ಪಿಗಳ (Engineers) ಬುದ್ಧಿವಂತಿಕೆಗೆ ಸಾಕ್ಷಿ.

ಎರಡು ಕೋಡಿಗಳು

ಯಾವುದೇ ಅಣೆಕಟ್ಟಿಗೆ ಕೋಡಿ ಅವಶ್ಯಕ. ಕೆರೆಯ ಸಂಗ್ರಹ ಸಾಮರ್ಥ್ಯಕ್ಕಿಂತ ಹೆಚ್ಚು ತುಂಬಿದಾಗ ಮಳೆ ನೀರು ಹೊರಕ್ಕೆ ಹರಿದು ಹೋಗುವ ವ್ಯವಸ್ಥೆಗೆ ಕೋಡಿ ಅಥವಾ ಚೆಲ್ಲುದಾರಿ (Spill way) ಎಂದು ಹೇಳುತ್ತಾರೆ. ಈ ಕೆರೆಯ ಒಡ್ಡಿನ ಮಧ್ಯಭಾಗದಲ್ಲಿ ಒಂದು ಕೋಡಿ ಇದೆ. ಇದೇ ಪುರಾತನ ಕೋಡಿ ;ಆದರೆ ಕಾಲಕಾಲಕ್ಕೆ

ದುರಸ್ತಿಗೊಳಗಾಗಿದೆ (ಚಿತ್ರ -5) ಈ ಪುರಾತನ ಬಾಗಿಲುಗಳಿಲ್ಲದ (Ungated &spill-way) ಕೋಡಿ ಅಲ್ಲದೆ ಇನ್ನೊಂದು ಕೋಡಿಯನ್ನು ಎಡದಂಡೆಯ ಕೊನೆಯ ಭಾಗದಲ್ಲಿ ಕಟ್ಟಲಾಗಿದೆ. ಇದು ತೀರ ಇತ್ತೀಚಿನ ರಚನೆ. ಇದನ್ನು ಯಾಕೆ ಕಟ್ಟಿದ ರೆಂಬುದೇ ಅರ್ಥವಾಗುವುದಿಲ್ಲ. ಈ ಕೋಡಿಯಲ್ಲಿ ನೀರು ಹೊರಕ್ಕೆ ಹರಿದು ಬರುವುದು ಸಧ್ಯಕ್ಕೆ ಅಸಾಧ್ಯ. ಈ ಕೋಡಿಗೆ ಐದು ಬಾಗಿಲುಗಳನ್ನು ಜೋಡಿಸಲಾಗಿದೆ. ಆದರೆ ಈ ಬಾಗಿಲುಗಳನ್ನು ಎತ್ತುವ ವ್ಯವಸ್ಥೆ ಇಲ್ಲ (ಚಿತ್ರ -6). ಸಧ್ಯಕ್ಕೆ ಇದು ಅನುಪಯುಕ್ತ ರಚನೆ. ಈ ಕೋಡಿಯ ಒಂದು ಕೊನೆಯಲ್ಲಿ ಒಂದು ಚಿಕ್ಕ ಗುಡಿಯನ್ನು ಕಟ್ಟಲಾಗಿದೆ. ಈ ಗುಡಿಯ ಮೇಲೆಯೇ ಒಂದು ವಿಮಾನವನ್ನು ಕಟ್ಟಲಾಗಿದೆ. ಗುಡಿಯೊಳಗೆ ಒಂದು ಹೆಣ್ಣಿನ ಶಿಲ್ಪ ಇದೆ. ನಾನುಹೋದಾಗ ಎರಡೂ ಸಲವೂ ಗುಡಿಯ ಬಾಗಿಲಿಗೆ ಬೀಗ ಹಾಕಲಾಗಿತ್ತು. ಶಿಲ್ಪದ ವಿವರಗಳನ್ನು ನೀಡಲು ಸಾಧ್ಯವಿಲ್ಲ. ಆದರೆ ವಿಚಾರಣ ಸಂಕಿರಣ ದಲ್ಲಿ ಈ ಸಂಪ್ರಬಂಧ ಮಂಡಿಸಿದಾಗ ಒಬ್ಬ ವಿದ್ವಾಂಸರು ಇದು ಈ ಕೆರೆಯ ನಿರ್ಮಾಣ ಕ್ಕಾಗಿ ಸ್ವಯಂ ಇಚ್ಛೆಯಾದ ಆಹುತಿಯಾದ ಮಹಿಳೆಯ ಶಿಲ್ಪ ಇದು ಎಂಬ ದಂತಕತೆ ಯನ್ನು ಹೇಳಿದರು. ಇಂಥ ಕೆರೆಗೆ ಹಾರಿದ ಕಥೆಗಳು ಬಹುಶಃ ಎಲ್ಲಾ ದೊಡ್ಡ ದೊಡ್ಡ ಕೆರೆಗಳಿಗಾಗಿ ಹುಟ್ಟಿಕೊಳ್ಳುತ್ತವೆ. ಇದರಲ್ಲಿ ಯಾವ ಐತಿಹಾಸಿಕ ಅಂಶಗಳಿಲ್ಲ. ಇದೊಂದು ಅಂಥ ಸಂಪ್ರದಾಯ. ಅದೂ ಅಲ್ಲದೆ ಈ ಗುಡಿಯನ್ನು ಹೊಸಕೋಡಿಯ ಮೇಲೆ ಕಟ್ಟಲಾಗಿದೆ. ಈ ಕೋಡಿಯ ನಿರ್ಮಾಣಕ್ಕಿಂತಲೂ ಸುಮಾರು 300-800ವರ್ಷಗಳಷ್ಟು ಪೂರ್ವದಲ್ಲಿ ಈ ಕೆರೆಯನ್ನು ನಿರ್ಮಿಸಲಾಗಿರುವುದರಿಂದ ಈ ಕೆರೆಗೆ ಹಾರಿದ ಕತೆಗೆ ಯಾವ ಬಗೆಯೂ ಮಹತ್ವವನ್ನು ನೀಡದೆ, ಇದೊಂದು ಕೇವಲ ಮೂಢನಂಬಿಕೆಯ ಪ್ರತೀಕವೆಂದು ಹೇಳಲೇಬೇಕು.

ಕಾಲುವೆಗಳ ರಚನೆ

ಆಗಲೇ ಹೇಳಿದಂತೆ ಎರಡು ದಂಡೆಗಳಲ್ಲಿ ಒಂದೊಂದು ಕಾಲುವೆಗಳಿವೆ. ಈ ಕಾಲುವೆಗಳನ್ನು ನಾಲೆಗಳೆಂದೂ ಜನರು ಕರೆಯುತ್ತಾರೆ. ಈ ಕಾಲುವೆಗಳ ರಚನೆ ವಿಶಿಷ್ಟವಾಗಿದೆ ಹಾಗೂ ಕಲಾತ್ಮಕವಾಗಿದೆ (ಚಿತ್ರ 7 ಅಥವಾ 8). ಕೆರೆಯ ನೀರು ತೂಬಿನ ಮೂಲಕ ಒಡ್ಡಿನ ಅಡಿಯಿಂದ ಒಂದು ಚಚ್ಚೌಕಾರದ ಬಾವಿಗೆ ಬರುತ್ತದೆ. ಈ ಬಾವಿಯನ್ನು ಮಟ್ಟಸವಾಗಿ ಕಟ್ಟಲಾದ ಕಣಶಿಲೆಯ ದಿಂಡುಗಳಿಂದ (Dressd gramite blocks) ಕಟ್ಟಲಾಗಿದೆ. ಈಗ ಕೊಂಚ ಅಭದ್ರಗೊಂಡರೂ ರಚನೆಯು ಕಂಗಳನ್ನು ಸೆಳೆಯುತ್ತದೆ. ಬೇಸಿಗೆಯಲ್ಲಿ ಈ ರಚನೆಯನ್ನು ಪೂರ್ಣವಾಗಿ ನೋಡ ಬಹುದು. ನೀರು ಬಾವಿಯೊಳಕ್ಕೆ ಬಂದನಂತರ ನೀರನ್ನು ಎರಡು ದಿಕ್ಕುಗಳಲ್ಲಿ ಹರಿಸಲು ಅನುಕೂಲ ವಾಗುವಂತೆ ಕಿಂಡಿಗಳನ್ನು ರಚಿಸಲಾಗಿದೆ (ಚಿತ್ರ - 7). ಈ ನಾಲೆಗಳಿಂದ ಹರಿದ ನೀರು, ಸೆಪ್ಟೆಂಬರ್ ತಿಂಗಳಲ್ಲಿ ಅಚ್ಚುಕಟ್ಟು ಪ್ರದೇಶಕ್ಕೆ ಹಸಿರನ್ನು ಹೊದಿಸಿರುವ ನೋಟ ತುಂಬಾ

ನಯನ ಮನೋಹರ (ಚಿತ್ರ -8). ಹಸಿರು ಭತ್ತದ ಗದ್ದೆಗಳ ಮತ್ತು ಮೆಕ್ಕೆಜೋಳದ ಹೊಲಗಳ ಮಧ್ಯೆ ಕಣಶಿಲೆಯ ಬಾವಿ ಮತ್ತು ನಾಲೆಗಳು ಎದ್ದುಕಾಣುತ್ತವೆ. ಈ ಬಾವಿಯ ಉದ್ದೇಶ ನೀರಿನಲ್ಲಿರುವ ಹೊಂಡ ಅಲ್ಲಿಯೇ ಕುಳಿತುಕೊಂಡರೆ (Seetle) ಮುಂದೆ ಹೋಗುವ ಶಾಲೆಯು ಹೊಂಡಿನಿಂದ ಬೇಗ ತುಂಬುವುದಿಲ್ಲ. ಇದರಿಂದಾಗಿ ನೀರು ಸುಲಭವಾಗಿ ಗದ್ದೆಗಳಿಗೆ ಮತ್ತು ಹೊಲಗಳಿಗೆ ಹರಿಯುತ್ತದೆ. ಇದು ನಮ್ಮ ಪುರಾತನರ ಕಲಾತ್ಮಕ ಮತ್ತು ಪ್ರಯೋಜನಾತ್ಮಕ ದೃಷ್ಟಿಗೆ ದ್ಯೋತಕ. ಇದೇ ಬಗೆಯ ವ್ಯವಸ್ಥೆ ಮತ್ತು ನೋಟವನ್ನು ಬಲದಂಡೆಯಲ್ಲಿಯೂ ನೋಡಬಹುದು. ಇಲ್ಲಿಗೆ ಕೆರೆಯ ವಿವರಣೆಯನ್ನು ಮುಗಿಸಿ ಮುಂದೆ ಹಳೆ ಊರಿನ ಗುಡಿಗಳು ಮತ್ತಿತರ ಅವಶೇಷಗಳನ್ನು ನೋಡಬಹುದು.

ಹಳೆ ಊರಿನ ಪ್ರಾಚ್ಯಾವಶೇಷಗಳು

ಹನುಮಂತ ದೇವಾಲಯ : ಈ ಕೆರೆ ಒಡ್ಡಿನಿಂದ ಉತ್ತರಕ್ಕೆ ಒಂದು ಕಟ್ಟಡ ಕಾಣಿಸುತ್ತದೆ ಸುಮಾರು ೨೦೦ ಮೀಟರ್ ದೂರದಲ್ಲಿ . ಇದು ಆಧುನಿಕ ರಚನೆ - ಗೋಡೆಗಳನ್ನು ಮತ್ತು ಛತ್ತನ್ನು ಸಿಮೆಂಟ್ ಮತ್ತು ಕಾಂಕ್ರೀಟಿನಿಂದ ಕಟ್ಟಲಾಗಿದೆ. ಯಾವ ಶೈಲಿಗೂ ಹೊಂದದ ಒಂದು ಚಿತ್ರ ಪ್ರದಕ್ಷಿಣಾ ಪಥವುಳ್ಳ ಚೌಕಾಕಾರದ ಕಟ್ಟಡವಿದು (ಚಿತ್ರ -9). ಆದರೆ ಈ ದೇವಾಲಯದ ಗರ್ಭಗುಡಿಯಲ್ಲಿರುವ ಹನುಮಂತ ಶಿಲ್ಪ ಬಹುಶಃ ೧೦೦-೨೦೦ ವರ್ಷಗಳಷ್ಟು ಅನಿಸುತ್ತದೆ. ಎಣ್ಣೆ ಮತ್ತು ಬಣ್ಣ ಬಳೆದಿರುವುದ ರಿಂದಾಗಿ ವಿವರವಾಗಿ ಚರ್ಚಿಸಲು ಸಾಧ್ಯವಾಗದು (ಚಿತ್ರ -10). ಗರ್ಭಗುಡಿಯ ಹಿಂಬದಿಯಲ್ಲಿ ಪ್ರದಕ್ಷಿಣಾಪಥದಲ್ಲಿ ಎರಡು ಶಕ್ತಿ ಶಿಲ್ಪಗಳನ್ನು ಎಲ್ಲಿಂದಲೋ ತಂದು ಇಡಲಾಗಿದೆ. (ಚಿತ್ರ -11). ಮೇಲ್ನೋಟಕ್ಕೆ ಈ ಶಿಲ್ಪಗಳು ಕಲ್ಯಾಣ ಚಾಳುಕ್ಯದ ಶೈಲಿಯನ್ನು ಹೋಲುವುದು ಕಂಡಬರುತ್ತದೆ.

ವೀರಭದ್ರ ದೇವಾಲಯ : ಈ ಹನುಮಂತ ದೇವಾಲಯದ ಹಿಂಬದಿಯಲ್ಲಿ ಸುಮಾರು ಮುಕ್ಕಾಲು ಕಿ. ಮೀ. ದೂರದಲ್ಲಿ ಹಳೆ ಊರಿನ ಮನೆಗಳ ಬುನಾದಿಗಳನ್ನು, ಅಧಿಷ್ಠಾನಗಳನ್ನು ಕಾಣುತ್ತೇವೆ. ಇಲ್ಲಿಯ ಅಂದಿನ ಮನೆಗಳು ನೆಲಸಮವಾಗಿ ಹೋಗಿ ದ್ದರೂ, ಕಟ್ಟೆಗಳನ್ನು, ಚಪ್ಪಡಿ ಕಲ್ಲುಗಲನ್ನು ಮತ್ತು ಮಡಿಕೆ ಚೂರುಗಳನ್ನು ಸ್ಪಷ್ಟವಾಗಿ ಗುರ್ತಿಸಬಹುದು (ಚಿತ್ರ -12). ಈ ಹಳೇ ಊರಿನ ಒಂದು ಬದಿಯಲ್ಲಿ ಕೊಂಚ ಎತ್ತರದ ಪ್ರದೇಶದಲ್ಲಿರುವ ದೂರದಿಂದಲೇ ಕಂಗಳಿಗೆ ಗೋಚರಿಸುವ ಕಟ್ಟಡವೇ ವೀರಭದ್ರ ದೇವಾಲಯ. ಈ ಗುಡಿಯ ಗೋಪುರ ಮತ್ತು ಕಂಬಗಳೆಲ್ಲವು ವಿಜಯನಗರ ಶೈಲಿಯದು. ಕಟ್ಟಡವನ್ನು ಕಣಶಿಲೆಯ ಸೈಜುಗಲ್ಲುಗಳಿಂದ ಕಟ್ಟಲಾಗಿದೆ. ಕಲ್ಯಾಣ ಚಾಳುಕ್ಯ ಶೈಲಿಯನ್ನು ಅನುಕರಿಸಿರುವ ಗೋಪುರವನ್ನು ಇಟ್ಟಿಗೆ ಮತ್ತು ಗಚ್ಚಿನಿಂದ ಕಟ್ಟಲಾಗಿದೆ.

ಈ ದೇವಾಲಯದ ಎದುರು ಕೊಂಚ ದೂರದಲ್ಲಿರುವ ಕಟ್ಟೆಯ ಮೇಲೆ ಸುಮಾರು ೫ ಮೀಟರ್ ಎತ್ತರವಿರುವ, ಶೃಂಗಭಂಗವಾಗಿರುವ ದೀಪಸ್ತಂಭ ಇದೆ. ಈ ದೀಪದ ಸ್ತಂಭದ ಅಡಿಯಲ್ಲಿ ಗುಡಿಗೆ ನೇರವಾಗಿ ಎದುರಾಗಿ ಕೈಮುಗಿದು ನಿಂತಿರುವ ಒಬ್ಬ ಮನುಷನ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ (ಚಿತ್ರ -14).

ಈ ಉಬ್ಬುಶಿಲ್ಪದ ಕಿರೀಟ ಮತ್ತು ಟೊಂಕದಿಂದ ಇಳಿಬಿದ್ದಿರುವ ಆಭರಣ, ಕಾಲುಗಳಲ್ಲಿ ಕಡಗ ಮತ್ತು ಎರಡು ಬದಿಯಲ್ಲಿ ಕಾಣುವ ವಸ್ತ್ರದ ಚುಂಗುಗಳು ಇವುಗಳನ್ನು ಗಮನಿಸಿದರೆ ಈ ಶಿಲ್ಪದಲ್ಲಿರುವ ವ್ಯಕ್ತಿ ಒಬ್ಬ ಗಣ್ಯ ಪುರುಷನಾಗಿರಬಹುದು ಮತ್ತು ಈ ಗುಡಿಯನ್ನು ಕಟ್ಟಿಸಿದ ಭಕ್ತನಾಗಿರಬಹುದೆಂದು ಊಹಿಸಿದರೆ ತಪ್ಪಾಗದು. ಯಾವ ಅಕ್ಷರಗಳು ಇಲ್ಲದಿರುವುದರಿಂದ ನಿಖರವಾಗಿ ಹೇಳುವಂತಿಲ್ಲ.

ಈ ದೀಪದ ಸ್ತಂಭಕ್ಕೆ ಒಂದು ಬದಿಯಲ್ಲಿ ಒಂದು ಸುಂದರ ಸೂರ್ಯ ಶಿಲ್ಪವನ್ನು ಎಲ್ಲಿಂದಲೋ ತಂದು ಇಲ್ಲಿಡಲಾಗಿದೆ. ಈ ಶಿಲ್ಪವನ್ನು ಸಮಪ್ರಮಾಣದ ಹರಗಳುಗಳ (Equigranuleer granita) ಕಣಶಿಲೆಯಲ್ಲಿ ಕಲಾತ್ಮಕವಾಗಿ ಕೆತ್ತಲಾಗಿದೆ (ಚಿತ್ರ 15). ಈ ಶಿಲ್ಪ ಇಲ್ಲಿರುವುದರಿಂದ ಈ ಊರಿನಲ್ಲಿ ಹಿಂದಿನ ಕಾಲದಲ್ಲಿ ಇಲ್ಲಿ ಸೂರ್ಯಾರಾಧನೆ ನಡೆಯುತ್ತಿತ್ತೆಂದು ಹೇಳಬಹುದಾಗಿದೆ.

ಈ ವೀರಭದ್ರ ದೇವಾಲಯವೊಂದು ಸರಳ, ಆಯಾತಾಕಾರದ ದೇವಾಲಯ. ತಳವಿನ್ಯಾಸದ ಚಿತ್ರವನ್ನು ನೋಡಿದರೆ ಈ ದೇವಾಲಯದ ಕಂಬಗಳು, ಉದ್ದಗಲ ಅಳತೆಗಳು ಗೊತ್ತಾಗುವುದರಿಂದ ಇಲ್ಲಿ ಅಕ್ಷರಗಳಲ್ಲಿ ವಿವರಿಸುವುದು ಅನವಶ್ಯಕ. ಇದೊಂದು ಸಾಂಧಾರ ದೇವಾಲಯ. ಕಲೆಯ ದೃಷ್ಟಿಯಿಂದ ತೀರ ಸಾಧಾರಣ ಕಟ್ಟಡ.

ಗರ್ಭಗುಡಿಯಲ್ಲಿ ಒಂದು ಕಟ್ಟೆಯ ಮೇಲೆ ವೀರಭದ್ರ ಶಿಲ್ಪವನ್ನು ಸ್ಥಾಪಿಸಲಾಗಿದೆ. (ಚಿತ್ರ -೧೬). ಶಿಲ್ಪದ ಅಡಿಯಲ್ಲಿರುವ ಕಟ್ಟೆ ಇತ್ತೀಚಿನ ರಚನೆಯಂತೆ ಕಾಣುತ್ತದೆ. ಬಹುಶಃ ಕಟ್ಟೆಯನ್ನು ಕಟ್ಟಿ ಜಲಹರಿ ಪೀಠವಿಲ್ಲದ ವೀರಭದ್ರ ಶಿಲ್ಪವನ್ನು ಪುನಃ ಸ್ಥಾಪಿಸಿರಬಹುದು ಅಥವಾ ಈ ಶಿಲ್ಪವನ್ನು ಬೇರೆ ಕಡೆಯಿಂದ ತಂದು ಇಲ್ಲಿ ಸ್ಥಾಪಿಸಿರಬಹುದು. ಅದೇನೇ ಇದ್ದರೂ ಈ ಊರಿನಲ್ಲಿ ವೀರಭದ್ರನ ಭಕ್ತರಿದ್ದರೆಂಬುದು ಸಿದ್ಧವಾಗುತ್ತದೆ. ಗರ್ಭಗುಡಿಯ ಬಾಗಿಲ ಚೌಕಟ್ಟಿನ ಎಡಭಾಗದ ಕೋಷ್ಠದಲ್ಲಿ ಶಕ್ತಿ ಶಿಲ್ಪ ಮತ್ತು ಬಲಭಾಗದ ಕೋಷ್ಠದಲ್ಲಿ ಗಣೇಶನ ಶಿಲ್ಪ ಇದೆ (ಚಿತ್ರ 17 ಮತ್ತು 18). ಸಾಮಾನ್ಯವಾಗಿ ಶಿವಲಿಂಗವನ್ನು ಗರ್ಭಗುಡಿಯಲ್ಲಿ ಸ್ಥಾಪಿಸಲಾಗಿದೆ ಎಂಬುದನ್ನು ನೆನದರೆ, ಈ ಶಿವಲಿಂಗವೇ ಗರ್ಭಗುಡಿಯಲ್ಲಿತ್ತು ಎಂದು ತೀರ್ಮಾನಿಸಬಹುದು. ಯಾವುದೋ ಕಾಲದಲ್ಲಿ ವಾಸ್ತುಶಾಸ್ತ್ರವನ್ನು ತಿಳಿಯದವರಾರೋ ಗರ್ಭಗುಡಿಯಲ್ಲಿದ್ದ ಶಿವಲಿಂಗವನ್ನು ರಂಗಮಂಟಪದಲ್ಲಿಟ್ಟು, ಅದರ ಸ್ಥಳದಲ್ಲಿ ವೀರಭಧ್ರನ ಶಿಲ್ಪವನ್ನು ಎಲ್ಲಿಂದಲೋ ತಂದು ಪ್ರತಿಷ್ಠಾಪಿಸಿರುವದು ಸ್ಪಷ್ಟವಾಗುತ್ತದೆ. ಅಂದರೆ ಹಲವಾರು

ಕಾಲಘಟ್ಟಗಳಲ್ಲಿ ಹಲವಾರು ಕೈಗಳು ತಮಗೆ ತೋಚಿದ ರೀತಿಯಲ್ಲಿ ಈ ಹಳೆ ಊರಿನಲ್ಲಿದ್ದ ದೇವಾಲಯಗಳನ್ನು ಮಾರ್ಪಾಟು ಮಾಡಿದವು ಎಂಬುದು ಸಿದ್ಧವಾಗುತ್ತದೆ.

ಇತರ ರಚನೆಗಳು: ಮೇಲೆ ವಿವರಿಸಲಾದ ರಚನೆಗಳಲ್ಲದೆ ಕೆರೆ ಒಡ್ಡಿನ ಎಡ ತುದಿಗೆ ತೀರ ಹತ್ತಿರದಲ್ಲಿ ಒಂದು ಆಯತಾಕಾರದ ಮೂರ್ತಿ ಇಲ್ಲದ ಗುಡಿ ಇದೆ. ಯಾವ ವಿಶೇಷತೆ ಇಲ್ಲ. ಇದಕ್ಕೆ ತೀರ ಹತ್ತಿರದಲ್ಲಿ ತೇರಿನ ನಾಲ್ಕು ಕಲ್ಲಿನ ಗಾಲಿಗಳಿವೆ. ಇವು ಮಣ್ಣಿನಲ್ಲಿ ಅರ್ಧ ಹೂತು ಹೋಗಿರುವುದನ್ನು ನೋಡಿದರೆ ಈ ತೇರನ್ನು ಎಳೆದು ಹಲವು ವರ್ಷಗಳು ಕಳೆದಿರುವುದು ಸ್ವಯಂ ವೇದ್ಯ. ಇದು ಹನುಮಂತ ದೇವರ ಜಾತ್ರೆಗೆ ಸಂಬಂಧಿಸಿರಬಹುದು. ವಿವರಗಳು ಕ್ಷೇತ್ರ ಕಾರ್ಯದ ಸಮಯದಲ್ಲಿ ಸಿಗಲಿಲ್ಲ.

ಇತಿಹಾಸ

ಈ ಕೆರೆ ಮತ್ತು ಊರು ವಿಜಯನಗರ ಕಾಲದ ರಚನೆಗಳೆಂಬುದರಲ್ಲಿ ಅನುಮಾನ ವಿಲ್ಲ. ಆದರೆ ಈ ಕೆರೆಯನ್ನು ಯಾರು ಕಟ್ಟಿಸಿ ಜನೋಪಕಾರಿ ಕೆಲಸವನ್ನು ಮಾಡಿದ ರೆಂಬುದಕ್ಕೆ ಶಾಸನಾಧಾರಗಳಿಲ್ಲ. ವಾಸುದೇವನ್ ಅವರು ಮುದ್ದಾ ಎಂಬ ಕುರುಬ ಹುಡುಗನು ಈ ಕೆರೆಯನ್ನು ದಂಡನಾಯಕನಾದ ನಂತರ ಕಟ್ಟಿಸಿದನೆಂದು ಒಂದು ದಂತಕಥೆಯನ್ನಾಧರಿಸಿ ಬರೆಯುತ್ತಾರೆ.

ಇಂಥ ದೊಡ್ಡ ಜನೋಪಕಾರಿ ಕೆಲಸವನ್ನು ಮಾಡಿದವನು ದಂತಕಥೆಯ ವ್ಯಕ್ತಿಯಾಗಲಾರ, ಅವನೊಬ್ಬ ಪ್ರಸಿದ್ಧ ದಂಡನಾಯಕನಾಗಿರಲೇ ಬೇಕು. ಆದರೆ ಇಲ್ಲಿಯ ಜನರು, ಈ ಕೆರೆಯನ್ನು ಲಕ್ಕಣದಂಡೇಶ ಕಟ್ಟಿಸಿದನೆಂದು ನಂಬುತ್ತಾರೆ ಎಂದು ಮಾನ್ಯ ಮಾಜಿ ಮುಖ್ಯ ಮಂತ್ರಿಗಳಾದ ಶ್ರೀ ಎಂ. ಪಿ. ಪ್ರಕಾಶ್‌ರವರು ನನಗೆ ಹಂಪಿ ಯಲ್ಲಿಯೇ ಹೇಳಿದರು. ಬಹುಶಃ ಇದು ಸರಿ.

ಪ್ರೌಢದೇವರಾಯನ ಕಾಲ, ಕರ್ನಾಟಕ ಸಾಮ್ರಾಜ್ಯದ (ವಿಜಯನಗರ) ಸುವರ್ಣಕಾಲವೆಂದು ಎಲ್ಲಾ ವಿದ್ವಾಂಸರೂ ಒಪ್ಪುತ್ತಾರೆ. ಈ ಇಮ್ಮಡಿ ಪ್ರೌಢದೇವರಾಯ ನಿಗೆ ಮಹಾಮಂತ್ರಿ ಮತ್ತು ಸೇನಾಪತಿಯಾಗಿದ್ದವನು ಲಕ್ಕಣದಂಡೇಶ (ಕ್ರಿ. ಶ. ೧೪೦೦-೧೪೭೦) . ಇವನು ಕವಿ ಮತ್ತು ಶ್ರೇಷ್ಠ ಆಡಳಿತಗಾರನಷ್ಟೇ ಅಲ್ಲ ಒಬ್ಬ ಉತ್ತಮ ಕವಿಯಾಗಿದ್ದನು. 2 ಇವನು ತನ್ನ ಅಧಿಕಾರಾವಧಿಯಲ್ಲಿ ಹಲವಾರು ದಂಡಯಾತ್ರೆಗಳಲ್ಲಿ ವಿಜಯಿಯಾಗಿದ್ದನು. ಹಲವಾರು ಕಡೆಗಳಲ್ಲಿ , ವಿಶೇಷವಾಗಿ ಕೋಲಾರ ಜಿಲ್ಲೆಯಲ್ಲಿ ಗುಡಿಗೋಪುರಗಳನ್ನು ಕೆರೆಗಳನ್ನು ಕಟ್ಟಿಸಿ ಜನರಿಗೆ ಉಪಕಾರಿಯಾಗಿ ತನ್ನ ಜೀವನವನ್ನು ನಡೆಸಿದನೆಂದು ಪಂಡಿತ ಎಸ್. ಬಸಪ್ಪನವರು ಅಭಿಪ್ರಾಯಪಡುತ್ತಾರೆ. ಈ ಅಂಶ ಗಳಲ್ಲದೆ ಲಕ್ಕಣ್ಣದಂಡೇಶನ ಶಾಸನಗಳನ್ನು ಅಭ್ಯಸಿಸಿದರೆ ಈ ಅಭಿಪ್ರಾಯ ಸರಿ ಎನಿಸು ತ್ತದೆ. ಲಕ್ಕಣ್ಣನು ತನ್ನ ಆಡಳಿತದ ಬಹುಭಾಗವನ್ನು ಕೋಲಾರ ಪ್ರದೇಶದಲ್ಲಿ ಕಳೆದನು ಹಾಗೂ ಅಲ್ಲಿ ಕೆರೆಗಳನ್ನು ಕಟ್ಟಿಸಿದನೆಂದು ಶಾಸನಗಳಿಂದ ಗೊತ್ತಾಗುತ್ತದೆ. ಕೋಲಾರ

ದಲ್ಲಿ ಬೀಳುವ ಮಳೆಯು ಹೆಚ್ಚು ಕಡಿಮೆ ಹೊಸಪೇಟೆಯಲ್ಲಿ ಬೀಳುವ ಮಳೆಯಷ್ಟೇ ಇದೆ. ಆ ಅರೆ ಬೆಂಗಾಡನ್ನು ನೀರಾವರಿಗೊಳಪಡಿಸಿದ ಲಕ್ಕಣ್ಣದಂಡ ನಾಯಕನು ಹಂಪಿಯ ಪರಿಸರದ ಅರೆಬೆಂಗಾಡನ್ನು ನೀರಾವರಿಗೊಳಪಡಿಸಲು ಪ್ರಯತ್ನಿಸಿದನೆಂದರೆ ಇತಿಹಾಸಕ್ಕೆ ಸರಿಹೊಂದುತ್ತದೆ. ಇಂಥ, ಅವನ ಪ್ರಯತ್ನದ ಭಾಗವಾಗಿ ಈ ಕೆರೆಯನ್ನು ಲಕ್ಕಣ್ಣ ದಂಡೇಶ ಕಟ್ಟಿಸಿದನು ಮತ್ತು ಜನರು ಇದನ್ನು ದಂಡನಾಯಕ ಕೆರೆ ಎಂದು ಕರೆದರು ಎಂದು ಹೇಳಿದರೆ ಇತಿಹಾಸಕ್ಕೆ ಹೊಂದುತ್ತದೆ. ಕಾಲಾನುಕ್ರಮದಲ್ಲಿ ದಂಡ ನಾಯಕನ ಕೆರೆ ದಣ್ಣಾಯಕನ ಕೆರೆ ಎಂದು ರೂಪಾಂತಗೊಂಡಿತು. ಇದು ಶಬ್ದ ಉತ್ಪತ್ತಿಗೆ ಹೊಂದುತ್ತದೆ.

ತೀರ್ಮಾನಗಳು

ಮೇಲೆ ಸುದೀರ್ಘವಾಗಿ ಚರ್ಚಿಸಲಾದ ವೈಜ್ಞಾನಿಕ, ಪುರಾತತ್ವ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಈ ಕೆಳಗಿನ ತೀರ್ಮಾನಗಳಿಗೆ ನಾವು ತಲುಪಬಹುದು.

i) ದಣ್ಣಾಯಕನ ಕೆರೆ ಪ್ರೌಢದೇವರಾಯನ ಕಾಲದಲ್ಲಿ ಲಕ್ಕಣ್ಣದಂಡೇಶನು ನಿರ್ಮಿಸಿದ ರಚನೆಯಾಗಿದೆ.

ii) ಈ ಕೆರೆ ನಿರ್ಮಾಣವಾದ ನಂತರ ಮೇಲಹರವಿನಲ್ಲಿ ಇನ್ನೂ ಹದಿನೈದು ಕೆರೆಗಳನ್ನು ಬೇರೆ ಬೇರೆ ಕಾಲಘಟ್ಟಗಳಲ್ಲಿ ಕಟ್ಟಿದ್ದರಿಂದ ಈ ಕೆರೆಯ ನೀರಿನ ಪ್ರಮಾಣ ಗಣನೀಯವಾಗಿ ಕುಂದಿದೆ. ಆದ್ದರಿಂದ ಅಚ್ಚುಕಟ್ಟು ಪ್ರದೇಶವು ಕುಂಠಿತಗೊಂಡಿದೆ.

iii) ೧೫ ನೇ ಶತಮಾನದಲ್ಲಿ ಕಟ್ಟಿದರೂ ಎಲ್ಲಾ ವೈಜ್ಞಾನಿಕ ಅಂಶಗಳನ್ನು ನಮ್ಮ ಪೂರ್ವಿಕರು ಗಮನಿಸಿದ್ದರು.

iv) ಇಲ್ಲಿಯ ಹಳೆ ಊರಿನಲ್ಲಿರುವ ದೇವಾಲಯಗಳೆಲ್ಲವೂ ಭಗ್ನಗೊಂಡಿವೆ ಅಥವಾ ಕೆಲವು ನಾಶವಾಗಿವೆ.

v) ಈ ಕೆರೆಗೆ ತುಂಗಾಭದ್ರಾ ಜಲಾಶಯದ ಹಿನ್ನೀರಿನಿಂದ ನೀರನ್ನು ಪಂಪುಗಳ ಮೂಲಕ ಹಿಮ್ಮುಖವಾಗಿ ಎತ್ತಿ (Lift Irrigation) ಈ ಕೆರೆಗೆ ನೀರನ್ನು ಪೂರೈಸುವ ಯೋಜನೆ ಬೇಗ ಕಾರ್ಯಗತವಾದರೆ ನೀರಾವರಿ ಸೌಲಭ್ಯವನ್ನು ವಿಸ್ತರಿಸಿದರೆ ಕೃಷಿಕರಿಗೆ ಅನುಕೂಲವಾಗುತ್ತದೆ.

ಕೃತಜ್ಞತೆಗಳು


ನಾನು ಕೈಗೊಂಡ ಕ್ಷೇತ್ರ ಕಾರ್ಯಕ್ಕಾಗಿ ವಾಹನ ಸೌಕರ್ಯ ಒದಗಿಸಿದ ವಿಜಯ ನಗರ ಕಾಲೇಜಿನ ಪ್ರಾಂಶುಪಾಲ ಡಾ. ಮರಿಗೌಡರಿಗೂ, ಸುಪ್ರಸಿದ್ಧ ಗಣಿ ಕಂಪನಿಯಾದ M. S. P. L ದ ಅಧ್ಯಕ್ಷರಾದ ಶ್ರೀ ನರೇಂದ್ರ ಬಲ್ಡೋಡ ಅವರಿಗೂ ನಾನು ಕೃತಜ್ಞ,

ಅವರಿಗೆ ನನ್ನ ತುಂಬು ಹೃದಯದ ನಮನಗಳನ್ನು ಸಲ್ಲಿಸುತ್ತೇನೆ. ವೀರಭದ್ರ ದೇವಾಲಯದ ತಳವಿನ್ಯಾಸದ ಶುದ್ಧ ಪ್ರತಿಯನ್ನು ಸಿದ್ಧಪಡಿಸಿಕೊಟ್ಟು ಉಪಕರಿಸಿದ ಡಾ.ಪಿ. ವಿ. ಕೃಷ್ಣಮೂರ್ತಿ ಅವರಿಗೂ, ಈ ಸಂಪ್ರಬಂಧದ ಮಂಡನೆಗೆ ಅವಕಾಶ ನೀಡಿದ ಡಾ. ಗೋಪಾಲ ಮತ್ತು ಶ್ರೀ ಗಂಗಾಧರ ಅವರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಆಕರ ಸಾಹಿತ್ಯ


೧. ವಾಸುದೇವನ್, ಸಿ. ಎಸ್. (೨೦೦೧)... ಹಂಪಿ ಪರಿಸರದ ಕೆರೆಗಳು.. ಪುಟ ೫೫ ೫೫. ಮತ್ತು ೭ ೨... ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.


೨. ಬಸಪ್ಪ, ಎಸ್. (೧೯೬೦).. ಲಕ್ಕಣ್ಣ ದಂಡೇಶ ವಿರಚಿತ ಶಿವತತ್ವ ಚಿಂತಾಮಣಿ... ಪುಟ 3 - ೯ ಮತ್ತು ಪುಟ ೬೦೨-೬೦೭.... ಪ್ರಾಚ್ಯ ಸಂಶೋಧನಾಲಯ, ಮೈಸೂರು , ವಿಶ್ವವಿದ್ಯಾಲಯ, ಮೈಸೂರು.



ದಂಡೆಯ ತೂಬು ಮತ್ತು ಒಡ್ಡು. ಕೆರೆಯಂಗಳದಿಂದ ಸುಮಾರು ೬ ಮೀಟರ ಎತ್ತರದಲ್ಲಿ ನೀರಿನ ಕೆರೆಯನ್ನು ಕಾಣಬಹುದು.

ಸೆಪ್ಟೆಂಬರ್ ತಿಂಗಳಿನಲ್ಲಿಯೂ ಸಹ ಕೆರೆಯ ನೀರು ತೂಬಿನ ಕಂಬಗಳನ್ನು ಮುಚ್ಚುವುದಿಲ್ಲ.





ಕೆರೆಯ ಜಲಾನಯನ ಪ್ರದೇಶ ಮತ್ತು ಒಡ್ಡು ಕಣಗಿಲೆಯಿಂದ ಆವೃತ ವಾಗಿವೆ. ಹಿನ್ನೆಲೆಯಲ್ಲಿ ಇತ್ತೀಚೆಗೆ ಕಟ್ಟಲಾದ ಕೋಡಿಯನ್ನು ಕಾಣಬಹುದು.




ಕೆರೆಯ ಏರಿಯ ಮಧ್ಯಂತರದಲ್ಲಿ ಕಾಣುವ ಕಪ್ಪು ಬಣ್ಣದ ಒಡ್ಡು ಶಿಲೆ (Dolerite dyke)




ಪುರಾತನ ಕೋಡಿ. ಕಾಲಕಾಲಕ್ಕೆ ದುರಸ್ತಿಗೆಗೊಳಗಾಗದೆ ಸಧ್ಯಕ್ಕೆ ಈ ಕೋಡಿಯಲ್ಲಿಯೂ ನೀರು ಹೊರಕ್ಕೆ ಹರಿದುಹೋಗುವುದಿಲ್ಲ. ಯಾಕೆಂದರೆ ನೀರಿನ ಒಳಹರಿವು ಕುಂಠಿತಗೊಂಡಿದೆ.




ಇತ್ತೀಚೆಗೆ ಕಟ್ಟಲಾದ ಐದು ಬಾಗಿಲುಗಳಿರುವ ಕೋಡಿ ಚಿತ್ರದ ಕೊನೆಯಲ್ಲಿ ಚಿಕ್ಕ ಗೋಪುರವನ್ನು ಗಮನಿಸಬೇಕು.




ಎಡದಂಡೆ ಕಾಲುವೆಯ ವಿತರಣಾ ಬಾವಿ ರಚನೆ ಕಲಾತ್ಮಕವಾಗಿದೆ ಹಾಗೂ ಉಪಯುಕ್ತವಾಗಿದೆ



ಅದೇ ಎಡದಂಡೆಯ ಕಾಲುವೆಯ ಸುಂದರ ನೋಟ. ಹಸಿರು ಗದ್ದೆ ಮತ್ತು ಹೊಲಗಳ ಮಧ್ಯದಲ್ಲಿ ಎದ್ದು ಕಾಣುವ ಕಲಾತ್ಮಕ ಕಾಲುವೆ.



ಹನುಮಂತ ದೇವರ ಗುಡಿ




ಬಣ್ಣ ಬಳಿಯಲ್ಪಟ್ಟ ಹನುಮಂತ ಶಿಲ್ಪ



ಹನುಮಂತ ದೇವರ ಗುಡಿಯ
ಪ್ರದಕ್ಷಿಣಾಪಥದಲ್ಲಿಡಲಾಗಿರುವ ಎರಡು
ಶಕ್ತಿ ಶಿಲ್ಪಗಳಲ್ಲಿ ಒಂದು ಶಿಲ್ಪ.



ಹಳೆ ಊರಿನ ನೋಟ.
ವೀರಭದ್ರ ದೇವಾಲಯದ
ಎಡಗಡೆ



ವೀರಭದ್ರ
ದೇವಾಲಯ ಮತ್ತು
ಎದುರಿನ
ದೀಪಸ್ತಂಭ.



ದೀಪಸ್ತಂಭದ ಅಡಿಯಲ್ಲಿ
ಕೆತ್ತಲಾಗಿರುವ ಉಬ್ಬುಶಿಲ್ಪ.



ದೀಪಸ್ತಂಭಕ್ಕೆ ಒರಗಿರುವ
ಸುಂದರಸೂರ್ಯ ಶಿಲ್ಪ.



ವೀರಭದ್ರ ಶಿಲ್ಪ. ಶಿಲ್ಪಕ್ಕೂ ಪೀಠಕ್ಕೂ ಹೊಂದಾಣಿಕೆ ಇಲ್ಲ.



ವೀರಭದ್ರ ಗರ್ಭ ಗುಡಿಯ ಎಡಭಾಗದ ಕೋಷ್ಠದಲ್ಲಿರುವ ಶಕ್ತಿ ಶಿಲ್ಪ.



ವೀರಭದ್ರ ಗರ್ಭಗುಡಿಯ ಬಲಭಾಗದ ಕೋಷ್ಠದಲ್ಲಿ ಇರುವ ಗಣೇಶನ ವಿಗ್ರಹ ಮತ್ತು ಅದರ ಎದುರಿಗೆ ಕೆಳಮಟ್ಟದಲ್ಲಿಡಲಾಗಿರುವ ಶಿವಲಿಂಗ.

50. ವಿಜಯನಗರ ಕಾಲದಲ್ಲಿ ಕೋಲಾರ ಪ್ರದೇಶದ ನೀರಾವರಿ ವ್ಯವಸ್ಥೆ

ಡಾ. ಟಿ.ವಿ.ನಾಗರಾಜ

ದಕ್ಷಿಣ ಭಾರತದ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯದ ಇತಿಹಾಸ ವಿಶಿಷ್ಟ ಸ್ಥಾನವನ್ನು ಪಡೆದಿದೆ. ರಾಜಕೀಯ ಐಕ್ಯತೆಯನ್ನು ಸಾಧಿಸಿದ್ದಲ್ಲದೆ, ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲೂ ಗಮನಾರ್ಹ ಬೆಳವಣಿಗೆಗಳು ಕಂಡುಬಂದವು. ಈ ನಿಟ್ಟಿನಲ್ಲಿ ಕೃಷಿ, ವ್ಯಾಪಾರಿ, ವಾಣಿಜ್ಯ ಚಟುವಟಿಕೆಗಳು ಸಾಮ್ರಾಜ್ಯದ ಧನವಂತಿಕೆಗೆ ಬಹುಮುಖ್ಯ ಕೊಡುಗೆ ನೀಡಿದವು. ಪಾರಂಪರಿಕ ಮಾದರಿಗಳಲ್ಲೆ ಕೆರೆ, ಕಾಲುವೆ, ಕುಂಟೆ, ಬಾವಿ ಮುಂತಾದವುಗಳ ಕಾಮಗಾರಿ ನಿರ್ಮಾಣಗಳು, ದುರಸ್ತಿ ಹಾಗೂ ನಿರ್ವಹಣಾ ಕೌಶಲ್ಯಗಳು ವಿಜನಯಗರದ ಕಾಲದಲ್ಲಿ ಮುಂದುವರಿದದ್ದಲ್ಲದೆ, ಹೊಸ ಚೈತನ್ಯ ಪಡೆದವು. ವಿಜಯನಗರದ ನೀರಾವರಿ ಚೌಕಟ್ಟಿನ ಇತಿಹಾಸ ಕುರಿತಂತೆ ವಿದೇಶಿಯರು ಸೇರಿದಂತೆ ಹಲವು ವಿದ್ವಾಂಸರು ಅಧ್ಯಯನಗಳನ್ನು ನಡೆಸಿರುತ್ತಾರೆ. ಈ ಅಧ್ಯಯನಗಳು ಬಹುತೇಕ ಸಾಮ್ರಾಜ್ಯದ ಸ್ವರೂಪದಲ್ಲಿ 'MACRO' ನೆಲೆಗಳಲ್ಲಿ ನಡೆದಂತಾತಹ ಅಧ್ಯಯನಗಳಾಗಿವೆ. ಸ್ಥಳೀಯ ಚೌಕಟ್ಟುಗಳಲ್ಲಿ 'MICRO' ಸೂಕ್ಷ್ಮ ಅಧ್ಯಯನಗಳ ದಕ್ಷಿಣ ಒಳನಾಡಿನ ಕರ್ನಾಟಕದ ಮೈದಾನ ಪ್ರದೇಶದಲ್ಲಿರುವ ಕೋಲಾರ ಪ್ರದೇಶದ (ಅವಿಭಾಜಿಕ ಕೋಲಾರ ಜಿಲ್ಲೆ) ಸಾಧಾರಣ ಮಳೆಯ ಪ್ರಮಾಣಹೊಂದಿದ್ದು, (ವಾರ್ಷಿಕ ಸರಾಸರಿ 744 ಮಿ.ಮೀ.) ವಿಪರೀತ ಏರುಪೇರುಗಳಿಂದ ಕೂಡಿದೆ. ತೀವ್ರ ಅನಾವೃಷ್ಟಿಯ ಒಣಪ್ರದೇಶಗಳಲ್ಲಿ ಒಂದಾಗಿದೆ.

ಈ ಹಿನ್ನೆಲೆಯಲ್ಲಿ ಕೋಲಾರ ಪ್ರದೇಶದಲ್ಲಿ ಬೀಳುವ ಅಲ್ಪಸ್ವಲ್ಪ ಮಳೆಯ ನೀರನ್ನು (ವರ್ಷದಲ್ಲಿ ಮಳೆಯ ದಿನಗಳ ಸರಾಸರಿ ಕೇವಲ 30-35 ದಿನಗಳು) ಜಾಗರೂಕತೆಯಿಂದ ಸಂಗ್ರಹಿಸುವ ಹಾಗೂ ವ್ಯವಸ್ಥಿತವಾಗಿ ಬಳಸುವ ಕಾರ್ಯ ಮಹತ್ವ ಪಡೆಯುತ್ತದೆ. ಹೆಸರಿಸಬಹುದಾದ ನದಿಗಳಿವೆಯಾದರೂ, ತುಂಬಿ ಹರಿಯು ನದಿಗಳಿಲ್ಲದ ಕೋಲಾರ ಪ್ರದೇಶದಲ್ಲಿ ಕೆರೆ, ಕಾಲುವೆ, ಕುಂಟೆ ಹಳ್ಳ ಹಾಗೂ ಬಾವಿಗಳೇ ಪ್ರಮುಖ ನೀರಾವರಿ ಮೂಲಗಳಾಗಿದ್ದು, ಜಿಲ್ಲೆಯ ಕೃಷಿ ಆರ್ಥಿಕತೆಗೆ ಆಸರೆಯಾಗಿವೆ. ಈ ಪ್ರದೇಶದಲ್ಲಿ ಅಗಾದ ಪ್ರಮಾಣದಲ್ಲಿ ಕೆರೆ, ಕಟ್ಟೆಗಳು ಕಂಡುಬಂದಿದ್ದು, ಒಂದು ದೊಡ್ಡ ಪರಂಪರೆಯೇ ಬೆಳೆದುಬಂದಿದೆ. ಪ್ರಸ್ತುತ ಲೇಖನದಲ್ಲಿ ವಿಜಯನಗರದ ಕಾಲಘಟ್ಟದಲ್ಲಿ ಕಂಡುಬಂದ

ನೀರಾವರಿ ಚೌಕಟ್ಟನ್ನು ಪ್ರಾದೇಶಿಕ ನೆಲೆಯಲ್ಲಿ ಸೂಕ್ಷ್ಮ (Micro) ಅಧ್ಯಯನಕ್ಕೆ ಒಳಪಡಿಸುವ ಪ್ರಯತ್ನ ಮಾಡಲಾಗಿದೆ.

ಕೆರೆ, ಕಾಲುವೆಗಳನ್ನು ನಿರ್ಮಿಸುವುದು, ಬಾವಿಗಳನ್ನು ತೋಡಿಸುವುದು-ಒಂದು ಧಾರ್ಮಿಕ ಕಾರ್ಯ. ಇಂತಹ ಕಾರ್ಯಗಳನ್ನು ಕೈಗೊಂಡ ವ್ಯಕ್ತಿ ಹಾಗೂ ವಂಶಸ್ಥರು ಪುಣ್ಯಕ್ಕೆ ಅರ್ಹರಾಗುತ್ತಾರೆ ಎಂಬ ಗಾಢವಾದ ನಂಬಿಕೆ ಇದ್ದಿತು. ಹೀಗಾಗಿ ಧಾರ್ಮಿಕ ಮಹೋನ್ನತಿಯ ಹಿನ್ನೆಲೆಯಲ್ಲಿ ಪಾರಂಪರಿಕ ನೀರಾವರಿ ಚೌಕಟ್ಟು ವಿಕಸನ ಪಡೆಯುತ್ತಾ ಬಂದಿದೆ. ಮದ್ಯಕಾಲೀನ ದಕ್ಷಿಣ ಭಾರತದ ರಾಜ್ಯವ್ಯವಸ್ಥೆಯು ಕೇಂದ್ರಿಕೃತವಾಗಿರಲಿಲ್ಲ ಎಂಬ ವಾದ ಮಂಡಿಸಿದ ಬರ್ಟನ್‌ಸ್ಟೈನ್ ಅದಕ್ಕೆ ಪೂರಕವಾಗಿ ಸ್ಪೈನ್, ಚೀನಾ, ಮೆಸಪೊಟೋಮಿಯಗಳಲ್ಲಿ ಇದ್ದಂತೆ, ದೊಡ್ಡ ಪ್ರಮಾಣದ ಕೆರೆ-ಕಾಲುವೆಳನ್ನು ನಿರ್ಮಿಸಿ, ಸರಕಾರವೇ ನಿರ್ವಹಿಸಿದುದಕ್ಕೆ ದಾಖಲೆಗಳು ಇಲ್ಲಿ ಎಂಬ ಅಭಿಪ್ರಾಯಕ್ಕೆ ಬರುತ್ತಾರೆ. [1] ಇದೇ ಅಭಿಪ್ರಾಯಕ್ಕೆ ಒತ್ತು ಕೊಡುವ ರೋಮಿಲ್ಲಾಥಾಪರ್ ಕಳಿಂಗದಲ್ಲಿ ಕಟ್ಟಿದ ಅಣೆಕಟ್ಟುಗಳಂತ ಒಂದೆರಡು ಉದಾಹರಣೆಗಳನ್ನು ಬಿಟ್ಟರೆ ಸರ್ಕಾರ ದೊಡ್ಡ ಪ್ರಮಾಣದ ನೀರಾವರಿ ಕಾಮಗಾರಿಗಳನ್ನು ಕೈಗೊಂಡುದುದಕ್ಕೆ ಆಧಾರಗಳಿಲ್ಲ ಎಂದು ಅಭಿಪ್ರಾಯ ಪಡುತ್ತಾರೆ.[2]

ವಿಜಯನಗರದ ಆಳ್ವಿಕೆಯ ಸಂದರ್ಭದಲ್ಲಿ ಕೃಷ್ಣದೇವರಾಯ ನೀರಾವರಿ ಚಟುವಟಿಕೆಗಳನ್ನು ಕೈಗೊಂಡರೆ, ಕೃಷಿ ಪ್ರಗತಿಹೊಂದಿ ರಾಜ್ಯದ ಆರ್ಥಿಕಾಭಿವೃದ್ಧಿಯಾಗುತ್ತಿದೆ ಎಂಬ ಅಪೇಕ್ಷೆಪಟ್ಟರೂ ಸಹ ವಿಜಯನಗರವೂ ಸೇರಿದಂತೆ ಭಾರತದ ಯಾವ ರಾಜ್ಯವೂ ನೀರಾವರಿ ಇಲಾಖೆಯನ್ನು ಹೊಂದಿರಲಿಲ್ಲ.[3] ಮಧ್ಯಕಾಲೀನ ಭಾರತದ ಚಾರಿತ್ರ್ಯಕ ದಾಖಲೆಗಳನ್ನು ಪುನಃ ವಿಶ್ಲೇಷಿಸಿದ ಬರ್ಟರ್ ಸ್ಟೈನ್, ರಾಜ್ಯ ವ್ಯವಸ್ಥೆಯನ್ನು 'SEGMENTARY STATES' ಎಂದು ವಾದಿಸಿ ಅದಕ್ಕೆ ಪೂರಕವಾದ ಆಧಾರಗಳನ್ನು ಒದಗಿಸಿದ್ದಾರೆ.[4]. ಕೃಷಿ ಗುಂಪುಗಳು ಸ್ಥಳೀಯ ಮಟ್ಟದಲ್ಲಿ ಸಂಘಟನೆಗೊಂಡುದು ನಾಡುಗಳ ಸಂಖ್ಯೆ ವೃದ್ಧಿಯಾದುದು ಕಂಡುಬರುತ್ತಿದೆ ಎಂಬ ಅಂಶಗಳನ್ನು ಪ್ರತಿಪಾದಿಸುತ್ತಾರೆ. ನಾಡಿನ ರೈತ ಗುಂಪುಗಳು ಒಂದು ಹೊಸ ಪ್ರದೇಶವನ್ನು ವಶಪಡಿಸಿಕೊಂಡು ಅಥವಾ ಒಂದು ಪ್ರದೇಶದಲ್ಲಿ ಕಾಡನ್ನು ಕಡಿದು ಕೃಷಿಗೆ ಒಳಪಡಿಸಿಯೂ, ನೆಲೆ ನಿಂತು ನೀರಾವರಿ ವ್ಯವಸ್ಥೆಯನ್ನು ಹುಟ್ಟು ಹಾಕಿದ ಹಾಗೂ ಕೃಷಿ ಮತ್ತು ನೀರಾವರಿ ಸಂಪನ್ಮೂಲಗಳ ಸಹಾಯದಿಂದ ಬಂದು ಸ್ಥಿರವಾದ ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆ ರೂಪಿಸಿದರು ಎಂದು ಅಭಿಪ್ರಾಯಪಡುತ್ತಾರೆ. ಈ ಗುಂಪುಗಳು ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ಪ್ರೇರಣೆಗಳಿಂದಾಗಿ ನೀರಾವರಿ ವ್ಯವಸ್ಥೆಗೊ ಒತ್ತುಕೊಟ್ಟವು.[5]

ಮಧ್ಯಕಾಲೀನ ಚಾರಿತ್ರ್ಯಕ ಬರವಣಿಗೆಗಳಲ್ಲಿ ದೇವಾಲಯಗಳು ಆರ್ಥಿಕ ಕೇಂದ್ರಗಳಾಗಿದ್ದವು. ಕೃಷಿ ಹಾಗೂ ನೀರಾವರಿ ಅಭಿವೃದ್ಧಿಯಲ್ಲಿ ಸಕ್ರಿಯ ಪಾತ್ರ ವಹಿಸಿದವು.

ದೇವಾಲಯಗಳು ಅರಸರಿಂದ ಹಾಗೂ ಇತರ ಭಕ್ತರಿಂದ ಭೂಮಿ, ಗ್ರಾಮದ ಉತ್ಪನ್ನ, ಹಣದ ರೂಪದಲ್ಲಿ ಕಾಣಿಕೆಗಳನ್ನು ಪಡೆದವು. ದೇವಾಲಯದ ಆಡಳಿತ ವ್ಯವಸ್ಥೆ ದಾನವಾಗಿ ಬಂದ ಭೂಮಿಯನ್ನು ಅಭಿವೃದ್ಧಿಗೊಳಿಸಲು ನೀರಾವರಿ ಅನುಕೂಲಗಳನ್ನು ಕಲ್ಪಿಸಲು ದೇವಾಲಯಕ್ಕೆ ಸಂದ ಹಣವನ್ನು ವಿನಿಯೋಗಿಸಿದರು. ಹೀಗಾಗಿ ದೇವಾಲಯ ಚಟುವಟಿಕೆಗಳು ಸಹ ನೀರಾವರಿ ಚೌಕಟ್ಟಿನ ವಿಕಸನಕ್ಕೆ ಕಾರಣವಾದವು.

ಕೆರೆ ನಿರ್ಮಾಣ

ವಿಜಯನಗರದ ಕಾಲದಲ್ಲಿ ಕೋಲಾರ ಪ್ರದೇಶದಲ್ಲಿ ಕೆರೆ-ಕಾಲುವೆಗಳ ನಿರ್ಮಾಣ ಕುರಿತಂತೆ ಹಲವು ಶಾಸನಗಳು ಬೆಳಕು ಚೆಲ್ಲುತ್ತವೆ. ಎರಡನೆ ಬುಕ್ಕಣ್ಣ ಒಡೆಯನ ಕಾಲದ ಕ್ರಿ.ಶ. 1339 ರಲ್ಲಿ ಮೆಳ್ಳಿಸಂದ್ರದ ಶಾಸನದಲ್ಲಿ, ಮಹಾಪ್ರದಾನ ಮಲ್ಲಿರಸ ದೇವಾಲಯದ ಜೊತೆಗೆ ಒಂದು ಕೆರೆಯನ್ನು ತೋಡಿಸಿ ತೋಟ ಬೆಳೆಸಿ, ಮರ-ಗಿಡಗಳನ್ನು ನೆಡಿಸಿರುವ ಬಗ್ಗೆ ದಾಖಲಿಸಿದೆ.[6] ಮಾಲೂರು ತಾಲೂಕಿನ ಟೇಕಲ್‌ನ ಕ್ರಿ.ಶ. 1343ರ ಶಾಸನವು ಸ್ಥಾನತ್ತೂರ್ ಮತ್ತು ಚಿಕ್ಕಪೆರುಂಮಾಳ್ ನಾಡರ್‌ನಿಗೆ ದಾನ ನೀಡಿದ್ದನ್ನು ಉಲ್ಲೇಖಿಸುತ್ತಾ ನಾಯಕರ್ ನಿರ್ಮಿಸಿನೆಂದು, ಆ ಗ್ರಾಮದ ಪರಿ ಮತ್ತು ಖುಷ್ಕಿ ಭೂಮಿಯನ್ನು ಪೆರಿಯಪೆಮನಯ ನಾಯಕರ್ ದೇವರ ನೈವೇದ್ಯಕ್ಕೆ ನೀಡಿರುವುದನ್ನು ದಾಖಲಿಸಿದೆ.[7] ಚಿಕ್ಕಬಳ್ಳಾಪುರ ತಾಲೂಕಿನ ಎಲಿಗಲಹಳ್ಳಿಯ 1371 (ಕ್ರಿ.ಶ.) ಶಾಸನದಲ್ಲಿ ಪೊಗದೂರಿನ ನಾಯಕ ಮತ್ತು ಚಿಕ್ಕಬಿಮಾಯಕರು ತಮ್ಮ ತಾಯಿ ಪೆರಿಯವ್ವನಾಯಕಿ ಹೆಸರಿನಲ್ಲಿ `ಪೆರಿಯಸಮುದ್ರ' ಎಂಬ ಕೆರೆಯೊಂದನ್ನು ಕಟ್ಟುಕೊಡಗೆ ನೀಡಿರುವುದನ್ನು ದಾಖಲಿಸಿದೆ.[8]

ವ್ಯಕ್ತಿಯೊಬ್ಬ ಖಾಸಗಿ ಆಗಿ ಕೆರೆಯೊಂದನ್ನು ತನ್ನ ಸ್ವಂತ ವೆಚ್ಚದಿಂದ ನಿರ್ಮಿಸಿದ ಹಾಗೂ ಕಾರ್ಯ ಕೈಗೊಂಡ ಗಾರೆ ಕೆಲಸದವನನ್ನು ಹೆಸರಿಸುವ ಮೂಲಕ ಮಹತ್ವದ್ದೆನಿಸಿದ ಶ್ರೀನಿವಾಸಪುರ ತಾಲೂಕು ಶೆಟ್ಟಿಹಳ್ಳಿಯ ಕ್ರಿ.ಶ. 1380 ಶಾಸನ ದೊರಕಿದೆ. [9]. ಅದರಂತೆ, ಮಾರಯ್ಯನಾಯಕನು ಹಲವು ವ್ಯಕ್ತಿಗಳಿಗೆ ಸುಮಾರು 500 ಹೊನ್ನು' ವೆಚ್ಚ ಮಾಡಿ ಕೆರೆ ನಿರ್ಮಿಸಿದ್ದಕ್ಕಾಗಿ, ಭೂಮಿಯನ್ನು ಕೆರೆ-ಕೊಡುಗೈಯಾಗಿ ನೀಡಿರುವುದನ್ನು, ಅಲ್ಲದೆ ಬಿಂಗೋಜನ ಮಗ ಚಿನ್ನೋಜಗಾರೆ ಕೆಲಸ ನಿರ್ವಹಿಸಿರುವುದನ್ನು ದಾಖಲಿಸಿದೆ.

ಕೋಲಾರ ತಾಲ್ಲೂಕು ಅಚಟ್ಟನಹಳ್ಳಿಯ ಕ್ರಿ.ಶ. 1428ರ ಶಾಸನ ರಾಜ ದೇವರಾಯನಿಗೆ ಪುಣ್ಯ ಬರಲೆಂದು ಲಕ್ಕಣ್ಣ ಒಡೆಯ ಮುಳುವಾಯಿ ರಾಜ್ಯಕ್ಕೆ ಸೇರಿರುವ ಬೆಳ್ಳೂರು ಸೀಮೆಯಲ್ಲಿ ದನಪಾನಿದೇವಿ ನಿರ್ಮಿಸಿದ ಕೆರೆಗೆ, ಆ ಕೆರೆಯ ಅಚ್ಚುಕಟ್ಟಿನಲ್ಲಿ ಭೂಮಿ ಹಾಗೂ ಅದಕ್ಕೆ ಹೊಂದಿಕೊಂಡಂತೆ ಇರುವ ಖುಷ್ಕಿ ಭೂಮಿಯನ್ನು ದಾನ ನೀಡಿರುವುದನ್ನು ದಾಖಲಿಸಿದೆ. ದೇವಾಲಯದ ಜೊತೆಯಲ್ಲಿ ಕೆರೆ ನಿರ್ಮಿಸಿದ ಬಗ್ಗೆ ಹಾಗೂ ಹಲವು ಭೂಮಿಗಲನ್ನು ದಾನವಾಗಿ ನೀಡಿರುವುದನ್ನು ವಿಜಲಾಪುರದ ಕ್ರಿ.ಶ.

1461ರ ಶಾಸನ ಉಲ್ಲೇಖಿಸಿದೆ.[10] ಕೆಲವೊಮ್ಮೊ ಜಂಟಿಯಾಗಿ ವ್ಯಕ್ತಿಗಳು ಕಾಮಗಾರಿಗಳನ್ನು ಕೈಗೊಂಡಿರುವುದಕ್ಕೆ ಬಾಗೇಪಲ್ಲಿ ತಾಲೂಕು ಮಗಳಬಲೆಯ ಶಾಸನದಲ್ಲಿ[11] ಕೃಷ್ಣನಾಯಕ ಎಂಬುವನು ಕೋನಪ್ಪಗೌಡ ಮತ್ತು ತಿಮ್ಮೆಗೌಡರಿಗೆ ಕೆರೆ ನಿರ್ಮಿಸಿದ್ದುದಕಾಗಿ ಅಚ್ಚುಕಟ್ಟಿನ 'ಕಟ್ಟೆಕೊಡುಗೈಮಾನ್ಯ' ಪಡೆದಿರುತ್ತಾರೆ. ಕೆರೆಯ ನೀರನ್ನು ಸಾಗುವಳಿಗೆ ಬಳಸಿಕೊಳ್ಳಲು ಅಗತ್ಯವಾದ ತೂಬುಗಳನ್ನು ನಿರ್ಮಿಸಿದ ಬಗ್ಗೆ ಸಹ ಹಲವು ಶಾಸನಗಳು ಉಲ್ಲೇಖಿಸುತ್ತವೆ. ಗೌರಿಬಿದನೂರು ತಾಲೂಕು ನಗರಗೆರೆಯ ಕ್ರಿ.ಶ. 1392ರ ಶಾಸನ [12], ದೇವಾಲಯಕ್ಕೆ ಸುಣ್ಣ ಬಳಿದ ಹಾಗೂ ಹಿರಿಯ ಕೆರೆಗೆ ಕಲ್ಲಿನ ತೂಬನ್ನು ನಿರ್ಮಿ ಸಿದುದಕ್ಕಾಗಿ ದಾನ ನೀಡಿರುವುದು ದಾಖಲಾಗಿದೆ. ಇದೇ ತಾಲೂಕುಹಂಪಸಂದ್ರದ ಕ್ರಿ.ಶ. 1410ರ ಶಾಸನ [13] ಪೆನುಗೊಂಡೆಯ ಪ್ರಧಾನನ ಹೆಸರಿನಲ್ಲಿ ಅವನ ಸೇವಕ, ಹಂಪ ಸಮುದ್ರ ಕೆರೆಗೆ ಪಶ್ಚಿಮ ದಿಕ್ಕಿನಲ್ಲಿ ತೂಬನ್ನು ನಿರ್ಮಿಸಿ, 50 ಖಂಡುಗ ಬಿತ್ತನೆ ಪ್ರದೇಶಕ್ಕೆ ನೀರನ್ನು ಪೂರೈಸುವ ತೂಬನ್ನು ನಿರ್ಮಿಸಿದನೆಂದು ದಾಖಲಿಸಿದೆ.

ಕಾಲುವೆ

ಲಭ್ಯವಿರುವ ನೀರನ್ನು ಅಗತ್ಯವಿರುವೆಡೆಗೆ ಹರಿಸುವಲ್ಲಿ ಕಾಲುವೆಗಳು ನೀರಾವರಿ ಚೌಕಟ್ಟಿನಲ್ಲಿ ಪ್ರಧಾನವಾದವು. ಸಹಜ ಕಾಲುವೆಗಳಿಗೆ ಒಡ್ಡುಗಳನ್ನು ನಿರ್ಮಿಸಿ, ನೀರನ್ನು ಜಮೀನುಗಳಿಗೆ ಹರಿಸುವಂತಹ ಕಾಮಗಾರಿಗಳಿಗೆ ಈ ಪ್ರದೇಶದಲ್ಲಿ ಮಾಹಿತಿ ದೊರೆಯುವುದಿಲ್ಲವಾದರೂ, ಹೊಸದಾಗಿ ಕಾಲುವೆ ತೋಡಿಸುವ ಕಾಮಗಾರಿ ವಿಜಯನಗರ ಕಾಲದಲ್ಲಿ ಈ ಪ್ರದೇಶದಲ್ಲಿ ಕಂಡುಬಂದಿದೆ. ಕಲ್ಲೂಟಿಯ ಕ್ರಿ.ಶ. 1389ರ ಬುಕ್ಕರಾಯನ ಕಾಲದ ಶಾಸನದಲ್ಲಿ ಬುಕ್ಕರಾಯನ ಆದೇಶದ ಮೇರೆಗೆ ರಾಜನ ಆಸ್ಥಾನದ (ಭಾವಡಿಯ) ದಶವಿದ್ಯಾಚಾರ್ಯ ಸಿಂಗಯ್ಯಭಟ್ಟ ಎಂಬುವನು ಸಿರುವೆರಾ ಕೆರೆಗೆ ಹೊಂದಿಕೊಂಡಂತೆ ಹೆಣ್ಣೆಯ ನದಿ ನೀರನ್ನು ಪೆನ್ನುಗೊಂಡೆಗೆ ಹರಿಸುವ ಉದ್ದೇಶದಿಂದ ಕಾಲುವೆ ತೋಡಿಸಿರುವುದನ್ನು ದಾಖಲಿಸಿದೆ.[14] ಅಂದಿನ ಕಾಲಘಟ್ಟದಲ್ಲಿ ತಾಂತ್ರಿಕ ಪರಿಣಿತ ಹೊಂದಿದ್ದ ವ್ಯಕ್ತಿ ಆಸ್ಥಾನದಲ್ಲಿ ಇದ್ದುದು, ಅವನ ಸೇವೆಯನ್ನು ಕೌಶಲ್ಯವನ್ನು ಸಾಮ್ರಾಜ್ಯವನ್ನು ಬಳಸಿಕೊಳ್ಳುತ್ತಿದ್ದುದು ಈ ಪ್ರದೇಶದ ಕಾಮಗಾರಿ ನಿರ್ವಹಣೆಯೊಂದಿಗೆ ದಾಖಲಾಗಿರುವುದು ಗಮನಾರ್ಹ. ಈ ನಿಟ್ಟಿನಲ್ಲಿ ತಾಂತ್ರಿಕ ಪರಿಣಿತಿ ಹಾಗೂ ಕಾಮಗಾರಿ ಗುಣಮಟ್ಟದ ನಿರ್ವಹಣೆಯಲ್ಲಿ ತೋರುತ್ತಿದ್ದ ಆಸಕ್ತಿ ಮತ್ತು ಕ್ರಮಗಳ ಮೇಲೆ ಬೆಳಕು ಚೆಲ್ಲುವ ಮತ್ತೊಂದು ಶಾಸನ [15]. ಕ್ರಿ.ಶ. 1397 ತಿರುಮಣೆಯಲ್ಲಿ ದೊರಕಿದೆ. ಈ ಶಾಸನದಂತೆ, ಪೆದ್ದಬೋದಿರಾಜ ಮತ್ತು ಪಿನ್ನ ಬೋದಿರಾಜ ಎಂಬುವವರೆಗೆ ಪೆದ್ದಿಸಂಬಿ ಸಾರಿಯಾರಿನಿಂದ ತಿರುಣೆಯಾವರೆಗೆ ಕಾಲುವೆ ತೋಡಿಸಿದ್ದಕ್ಕಾಗಿ 130 ಸಿಂಗುವಗದ್ಯಾಣ. ಮತ್ತು ತೂಬಿನ ಕೆಳಗೆ ಭೂಮಿ, ಒಂದು ಕುದುರೆ ಮತ್ತು ಚಿನ್ನದಕಡಗ ನೀಡಿರುವುದನ್ನು ದಾಖಲಿಸಿದೆ. ಒಂದು ವೇಳೆ ಆ

ಕಾಲುವೆಯಲ್ಲಿ ನೀರು ಸರಾಗವಾಗಿ ಹರಿಯದಿದ್ದಲ್ಲಿ ನೀಡಿರುವ ಕೊಡುಗೆಗಳನ್ನು ವಾಪಸು ನೀಡಬೇಕೆಂಬ ಷರತ್ತನ್ನು ವಿಧಿಸಿರುವುದು ಕಾಮಗಾರಿಗಳ ಗುಣಮಟ್ಟದ ಪಾಲನೆಯಲ್ಲಿ ಕೈಗೊಳ್ಳುತ್ತಿದ್ದ ಕ್ರಮವಾಗಿ ಕಂಡುಬರುತ್ತದೆ. ಮುಳುಬಾಗಿಲು ತಾಲೂಕು ತಂಬಿಹಳ್ಳಿಯ ಶಾಸನದಲ್ಲಿ ರಾಯಲು ಕಾಲುವೆ ಮೂಲಕ ನೀರಾವರಿಗೊಳಿಸಿದ ಭೂಮಿ ಯನ್ನು ದೇವಾಲಯದ ನೈವೇದ್ಯಕ್ಕಾಗಿ ದಾನ ನೀಡಿರುವುದನ್ನು ದಾಖಲಿಸಿದೆ.

ದುರಸ್ತಿ ಮತ್ತು ನಿರ್ವಹಣೆ

ಕೆರೆ ಕಾಮಗಾರಿಗಳನ್ನು ನಿರ್ಮಿಸುವಷ್ಟೆ ಮಹತ್ವ ಅವುಗಳ ದುರಸ್ತಿ ಮತ್ತು ನಿರ್ವಹಣೆಗೆ ನೀಡಿರುವುದು ಕಂಡುಬರುತ್ತದೆ. ಇಂತಹ ಕಾಮಗಾರಿಗಳಲ್ಲಿ ಸ್ಥಳೀಯ ಜನಸಮುದಾಯಗಳಿಗೆ ಪ್ರೋತ್ಸಾಹದಾಯಕವಾಗಿ ಅರಸರು, ಮಂಡಲಿಕರು, ಪ್ರತಿನಿಧಿ ಗಳು, ದೇವಾಲಯಗಳು, ವ್ಯಕ್ತಿಗಳ ಪಾತ್ರ ಗಮನಿಸಬೇಕಾದ ಸಂಗತಿ. ಕೆರೆಯ ರಕ್ಷಣೆಗೆ ಬಿಟ್ಟುಕೊಟ್ಟಂತಹ ಭೂಮಿಯನ್ನು ಕಾಯ್ದು ಕೆರೆಯನ್ನು ರಕ್ಷಿಸುವವನಿಗೆ ಪುಣ್ಯವು ದೊರಕುವುದರೊಂದಿಗೆ ಅಶ್ವಮೇಧಯಾಗವನ್ನು ಮಾಡಿದಂತಹ ಪುಣ್ಯ ದೊರಕುತ್ತದೆ ಎಂದು ಕೋಲಾರ ಪ್ರದೇಶದ ಕುರುಬಂಡಳ್ಳಿ ಶಾಸನ ತಿಳಿಸುತ್ತದೆ.[17] ಗೌರಿಬಿದನೂರು ತಾಲೂಕು ಗುಂಡಾಪುರದ ಕ್ರಿ.ಶ. 1482ರ ಶಾಸನ [18] ಪೆನುಗೊಂಡೆಯ ಪ್ರಧಾನ ಮಲ್ಲಿ ಅರಸ ಕಡಲವೇಮೆರಾಡೆಗೆ ಬೇಟೆಗೆ ಬಂದಾಗ, ಅಲ್ಲಿನ ಕೆರೆ ದುರಸ್ತಿ ಮಾಡಿಸಿದ್ದ ವ್ಯಕ್ತಿಗೆ ಭೂಮಿ ದಾನ ನೀಡಿ, ಆ ಕೆರೆಗೆ "ಮಲ್ಲಿಸಮುದ್ರ" ಎಂದು ಹೆಸರಿಸಿರುವುದನ್ನು ದಾಖಲಿ ಸಿದೆ. ಬಾಗೇಪಲ್ಲಿ ತಾಲ್ಲೂಕಿನ ಮಿಟ್ಟೆಮರಿಯ ಶಾಸನವು [19] ಮಹಾನಾಯಕಾಚಾರ್ಯ ಕದಿರಪ್ಪವಾಹಿನಿ, ವೇಕಲಭೊಮ್ಮನಿಗೆ ದಶವಂದ ನೀಡಿ, ಲಿಂಗೊಡ್ಡು ಹೊಡೆದು ಹೋಗಿದ್ದು, ಅದನ್ನು ದುರಸ್ತಿಗೊಳಿಸಿ, ವಿಸ್ತರಿಸಿದ್ದಕ್ಕಾಗಿ ದಶವಂದದ 1/4 ಭಾಗವನ್ನು ದಾನವಾಗಿ ನೀಡಿರುವುದನ್ನು ದಾಖಲಸಿದೆ.

ಕೋಲಾರ ಜಿಲ್ಲೆಯ ರಾಜಗೊಂಡ್ಲಹಳ್ಳಿಯ ಶಾಸನವು [20] ನೀರಿನ ಬಳಕೆ ಹೇಗಿರಬೇಕು ಎಂದು ತಿಳಿಸುತ್ತಾ, ಕೆರೆಯ ನೀರಿನಿಂದ ಹೆಚ್ಚುವರಿ ಪ್ರದೇಶಗಳನ್ನು ಸಾಗುವಳಿಗೆ ಒಳಪಡಿಸಿ, ಆ ಭೂಮಿಯಲ್ಲಿ ಬೆಳೆಯಬಹುದಾದ ಬೆಳೆ ಮತ್ತು ಸಾಗುವಳಿ ದಾರರಿಗೆ ಸಲ್ಲಬೇಕಾದ ಪಾಲಿನ ಪ್ರಮಾಣಗಳನ್ನು ತಿಳಿಸುವ ಮೂಲಕ ನೀರಾವರಿ ಚೌಕಟ್ಟಿನಲ್ಲಿ ಸಾಗುವಳಿ ಮತ್ತು ರೈತರ ಬಳಕೆ-ಅನುಷ್ಠಾನ ಕುರಿತಂತೆ ಬೆಳಕು ಚೆಲ್ಲುತ್ತದೆ. ಈ ಭಾಗದ ಅನೇಕ ಶಾಸನಗಳು ಕೆರೆ ಸಂಬಂಧಿ ದಾನ ಶಾಸನಗಳಾಗಿದ್ದು, ಕೆರೆಯ ಅಚ್ಚುಕಟ್ಟಿನ ಭೂಮಿಗಳನ್ನು ವಿವಿಧ ಉದ್ದೇಶಗಳಿಗಾಗಿ ದಾನ ನೀಡುತ್ತಾ ಬಂದಿ ರುವುದು ನೀರಾವರಿ ಭೂಮಿಯ ಉತ್ಪನ್ನಗಳನ್ನು ಆಧರಿಸುವುದು ಆರ್ಥಿಕತೆಯ ಸಂಕೇತವೆನ್ನ ಬಹುದು.

ಉಪ ಸಂಹಾರ

ಕೋಲಾರ ಪ್ರದೇಶವು ಪ್ರಾಗೈತಿಹಾಸಿಕ ಕಾಲದಿಂದಲೂ ಮಾನವನ ನೆಲೆಯಾಗಿದ್ದು, ಅನೇಕ ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟಿದ್ದರೂ ಸಹ, ಈ ಪ್ರದೇಶವು ಗಂಗರ ಆರಂಭದ ಕಾಲದ ಸ್ವಲ್ಪ ಕಾಲ ಹೊರತುಪಡಿಸಿದರೆ, ಯಾವ ಕಾಲದಲ್ಲೂ ಕೇಂದ್ರ ಪ್ರದೇಶವಾಗಿರದೆ (CORE REGION) ಅಧೀನ ಪ್ರದೇಶ (ಜಾಈಗದಜಪಾಲ) ವಾಗಿದ್ದುದು ಕಂಡುಬರುತ್ತದೆ. ಹೀಗಾಗಿ ಹಂಪೆ ಮತ್ತು ಅದರ ಪರಿಸರದಲ್ಲಿ ಕಂಡುಬಂದಂತಹ ರಾಜ್ಯ ಪ್ರಾಯೋಜಿಕ ನೀರಾವರಿ ಕಾಮಗಾರಿಗಳು ಈ ಪ್ರದೇಶದಲ್ಲಿ ಸಹ ದಕ್ಷಿಣ ಭಾರತದ ಇತರೆಡೆಗಳಂತೆ ನಾಡಿನ ರೈತ ಗುಂಪುಗಳು ಕೃಷಿಗೆ, ಕೃಷಿ ಚಟುವಟಿಕೆಗಳಿಗೆ ಅಗತ್ಯವಾದ ನೀರಾವರಿ ವ್ಯವಸ್ಥೆ ಸ್ಥಾಪಿಸಿದ್ದರು, ಕೆರೆ ನಿರ್ಮಾಣ, ಕೋಡಿ, ತೂಬು, ಕಾಲುವೆ ಮತ್ತಿತರ ಕಾಮಗಾರಿಗಳ ನಿರ್ವಹಣೆಗೆ ಬೇಕಾದ ತಾಂತ್ರಿಕ ಕೌಶಲ್ಯ ಸ್ಥಳೀಯ ಜನರಲ್ಲಿ ಕರಗತವಾಗಿದ್ದಿತು. ಈನಿಟ್ಟಿನಲ್ಲಿ ಗ್ರಾಮೀಣ ಪ್ರದೇಶದ ರೈತ ಗುಂಪುಗಳು ಹಾಗೂ ಗ್ರಾಮೀಣ ಗಣ್ಯರು ಸಣ್ಣ ಪ್ರಮಾಣದ ನೀರಾವರಿ ಕಾಮಗಾರಿಗಳನ್ನು ಕೈಗೊಂಡು ಹಲವು ವಿಶೇಷ ಸವಲತ್ತುಗಳನ್ನು ಹಾಗೂ ಸಾಮಾಜಿಕ ಪ್ರತಿಷ್ಠೆಗೊಳಿಸಿಕೊಂಡರು. ಈ ರೀತಿಯ ಎಲ್ಲಾ ಬಗೆಯ ಕಾಮಗಾರಿಗಳನ್ನು ಸ್ಥಳೀಯ ಜನ ಸಮುದಾಯಗಳೇ ನಿರ್ವಹಿಸಿಕೊಂಡು ಬಂದಿರುವುದು ಒಂದು ಪರಂಪರೆಯಾಗಿ ಬೆಳೆದು ಬಂದಿದ್ದು, ಅದು ವಿಜಯನಗರ ಕಾಲಘಟ್ಟದಲ್ಲಿ ಅದು ಮತ್ತಷ್ಟು ಕ್ರಿಯಾಶೀಲ ವಾಗಿ, ವ್ಯಾಪಕವಾಗಿ ನಡೆದಿದೆ.

ಈ ಪ್ರದೇಶದಲ್ಲಿ ಕಂಡುಬಂದಂತಹ ನೀರಾವರಿ ವ್ಯವಸ್ಥೆ ಸ್ಥಾನಿಕ ಜನರ ಹಿತಾಸಕ್ತಿಗಳಿಗೆ ಪೂರಕವಾಗಿದ್ದಿತು. ರಾಜ, ಸಾಮ್ರಾಜ್ಯಗಳಲ್ಲಿ ಕೇಂದ್ರಗಳಲ್ಲಿ ಗಮನ ಕೇಂದ್ರಿಕರಿಸಿ, ಕೋಟೆ, ಖಜಾನೆ, ಅಂತಃಪುರ ಕೇಂದ್ರಿತ ನೆಲೆಗಳಲ್ಲಿ ನಿಂತಿದ್ದನು. ಪ್ರಾದೇಶಿಕ ನೆಲೆಗಳಲ್ಲಿ ಗಾವುಂಡರು, ಗಾವುಂಡ ಸಮೂಹಗಳು, ಅಗ್ರಹಾರ, ದೇವಾಲಯ, ವ್ಯಾಪಾರಿ ವರ್ಗಗಳು -ಪ್ರಧಾನವಾಗಿ ಕೆರೆ ನೀರಾವರಿ ಚೌಕಟ್ಟಿನಲ್ಲಿ ನಿರ್ವ ಹಣೆ ಮಾಡಿಕೊಂಡು ಬಂದಿರುವುದು ವೇದ್ಯವಾಗುತ್ತದೆ. ಇಂತಹ ಕಾರ್ಯಗಳಿಗೆ ಪ್ರಭುತ್ವ ಮತ್ತು ಉನ್ನತ ವಲಯಗಳು ಪ್ರೋತ್ಸಾಹದಾಯಕ ಚಟುವಟಿಕೆಗಳಾಗಿ, ದಾನ, ರಿಯಾಯಿತಿಗಳನ್ನು ನೀಡಿರುವುದು ಈ ಭಾಗದಲ್ಲಿ ವಿಶೇಷವಾಗಿ ಕಂಡುಬಂದಿದೆ. ನಿರ್ವಹಣೆಯ ಮಹತ್ವದಿಂದಾಗಿ ಸ್ಥಳೀಯರೇ ಜವಾಬ್ದಾರಿ ಹೊಂದಿದ್ದರು. ವೈಯಕ್ತಿಕ ಸೇವೆಯಲ್ಲಿ ಸಹ ಕಾಮಗಾರಿಗಳನ್ನು ನಡೆಸಿ, ನಿರ್ವಹಣೆ ಮಾಡಿಕೊಂಡು ಬಂದಿರುವುದು ಸಹ ಕಂಡುಬಂದಿದೆ. ಈ ಪ್ರದೇಶದಲ್ಲಿ ತಾಂತ್ರಿಕ ಕೌಶಲ್ಯದ ಬಳಕೆಯಷ್ಟು ಪ್ರಧಾನ ವಾಗಿ ನೀರಿನ ಹಂಚಿಕೆ ಹಾಗೂ ನಿರ್ವಹಣಾ ಕೌಶಲ್ಯದ ಮಾದರಿಗಳು ಕಂಡುಬಂದಿರು ವುದು ವಿಶೇಷವಾಗಿದೆ.

ಟಿಪ್ಪಣಿಗಳು

1. Burton Stein: The state and the Agarian order in Medieval South India - a Historiogrophical critiqueom Essays on south India. (Ed) Burton Stein P-76
2. Ruuilla Thapar: From Lienage to State; Oxford university press, Bombay 1984-p-136
3. Burton Stein: op cit-p, 77
4. Isid, p-72
5. isid, p-73
6. ಎಂ.ಎ.ಆರ್. 1923, ಸಂ. 49
7. ಎ.ಕ.ಸಂಪುಟ X ಮಾಲೂರು-20
8. ಅದೇ ಚಿಕ್ಕಬಳ್ಳಾಪುರ -63
9. ಅದೇ ಕೋಲಾರ -104
10. ಎಂ.ಎ.ಆರ್. 1923. ಸಂ. 44
11. ಅದೇ ಬಾಗೇಪಲ್ಲಿ -77
12. ಅದೇ ಗೌರಿಬಿದನೂರು -68
13. ಅದೇ ಗೌರಿಬಿದನೂರು - 72
14. ಅದೇ ಗೌರಿಬಿದನೂರು - 6
15. ಅದೇ ಬಾಗೇಪಲ್ಲಿ -10
16. ಅದೇ ಮುಳಬಾಗಿಲು - 101
17. ಅದೇ ಮುಳಬಾಗಿಲು - 198
18. ಅದೇ. ಗೌರಿಬಿದನೂರು - 53
19. ಅದೇ ಬಾಗೇಪಲ್ಲಿ -71

ಗ್ರಂಥಋಣ

1. Tank Irrigation in Karnataka- G.S. Dixit & others
2. ಹಂಪಿ ಪರಿಸರದ ಕೆರೆಗಳು - ಸಿ.ಎಸ್.ವಾಸುದೇವನ್
3. Irrigation Systems undr Vijayanagar Empire - C.T.M. Kotraiah.
4. ಸಮುದಾಯ ಮತ್ತು ಸಹಭಾಗಿತ್ವ: ಎಂ.ಚಂದ್ರಪೂಜಾರಿ
5. ಕೆರೆಯ ಹಾರ - (ಸಂ) ಕೆ.ಪ್ರಹ್ಲಾದರಾವ್,
6. Irrigation under Vijayanagar - Sarswathi: unpublished Thesls submitted to Uninity of Mysore
7. ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ - ಸಂ: ಆರ್.ಗೋಪಾಲ್
8. Vijayanagar inscriptions: Vol II (Ed) B.R. Gopal.

51. ವಿಜಯನಗರ ಕಾಲದಲ್ಲಿ ಆನೆಗುಂದಿ

ಡಾ. ಶರಣಬಸಪ್ಪ ಕೋಲ್ಕಾರ

ಆನೆಗುಂದಿ ಕರ್ನಾಟಕದ ಪ್ರಮುಖ ಚಾರಿತ್ರಿಕ ಸ್ಥಳ. ವಿಶೇಷವಾಗಿ ಅದು ರಾಮಾಯಣ ಕಾಲದ ಕಿಷ್ಕಿಂದೆ ಎಂದು ಬಹು ಹಿಂದಿನಿಂದಲೂ ನಂಬಿರುವುದು ಮತ್ತು ವಿಜಯನಗರ ಸಾಮ್ರಾಜ್ಯದ ಮೂಲ ನೆಲೆಯಾಗಿರುವುದು ಆನೆಗುಂದಿಯ ಬಗೆಗೆ ಕುತೂಹಲವನ್ನು ಮೂಡಿಸುವ ಸಂಗತಿಗಳು. ತುಂಗಭದ್ರಾ ನದಿ ತೀರದ ಬೆಟ್ಟಗುಡ್ಡಗಳ ಸುಂದರ ಪ್ರಾಕೃತಿಕ ಪರಿಸರದಲ್ಲಿರುವ ಆನೆಗುಂದಿ ಪ್ರಾಕ್ಚಾರಿತ್ರಿಕ ಕಾಲದಿಂದಲೂ ಮಾನವನ ಚಟುವಟಿಕೆಯ ತಾಣವಾಗಿರುವುದು ಈ ಸ್ಥಳದ ಮಹತ್ವವನ್ನು ಬಿಂಬಿಸುತ್ತದೆ. ಕರ್ನಾಟಕದ ಚರಿತ್ರೆಯ ಉದ್ದಕ್ಕೂ ಅದು ತನ್ನ ನಿರಂತರ ಅಸ್ತಿತ್ವವನ್ನು ಪ್ರಕಟಪಡಿಸುತ್ತಾ ಬಂದಿರುವುದು ಆನೆಗುಂದಿಯ ವೈಶಿಷ್ಟ್ಯವೆನ್ನಬಹುದು. ಈ ನಿರಂತರತೆಯಲ್ಲಿ ವಿಜಯನಗರ ಸಾಮ್ರಾಜ್ಯದ ಕಾಲಘಟ್ಟದಲ್ಲಿ ಆನೆಗುಂದಿಯ ಪಾತ್ರಯನ್ನು ಗುರುತಿಸುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ.

ಸ್ಥಳನಾಮ

ಆನೆಗುಂದಿಯಲ್ಲಿ ವಿಜಯನಗರದರಸರು ತಮ್ಮ ಸೈನ್ಯದ ಆನೆಗಳನ್ನು ಇರಿಸುತ್ತಿದ್ದರಿಂದ ಆ ಹೆಸರು ಬಂತೆಂಬ ಪ್ರತೀತಿ ಇದೆ. ಇಲ್ಲಿಯ ಕ್ರಿ.ಶ. 1349ರ ಕಾಲದ ಶಾಸನವೊಂದರಲ್ಲಿ 'ಭಾಸ್ಕರಕ್ಷೇತ್ರ ದಕ್ಷಿಣವಾರಣಾಸಿ ಹಸ್ತಿನಾಪುರ [1] ಎಂಬ ಉಲ್ಲೇಖವಿದ್ದು ಈ ಹಸ್ತಿನಾಪುರ ಆನೆಗುಂದಿಯಾಗಿರಬಹುದೆಂದು ಹೇಳಬಹುದು. ವಿಜಯನಗರ ಕಾಲದಲ್ಲಿ ಬಂದಿದ್ದ ವಿದೇಶಿ ಯಾತ್ರಿಕರಾದ ಪೆರ್ನೊನ್ಯೂನಿಜ್ ಮತ್ತು ಡೊಮಿಂಗೊ ಪೇಸರು ಆನೆಗುಂದಿಯನ್ನು ನಾಗುಂದಿಯಮ್[2], ಸೇನಾಗುಂದಿಯಮ್[3] ಕರೆದಿದ್ದಾರೆ.

ವಿಜಯನಗರದ ಮಾತೃಸ್ಥಾನ

1336ರಲ್ಲಿ ವಿಜಯನಗರ ಸ್ಥಾಪನೆಯಾದಾಗ ಆನೆಗುಂದಿ ಅದರ ಮೂಲನೆಲೆಯಾಯಿತು. ರಾಜ್ಯ ಸ್ಥಾಪಕರಾದ ಸಂಗಮನ ಮಕ್ಕಳಾದ ಒಂದನೆಯ ಹರಿಹರ ಮತ್ತು ಒಂದನೆಯ ಬುಕ್ಕರು ಆನೆಗುಂದಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತ ನಡೆಸಿದರು. ತದನಂತರದಲ್ಲಿ ರಕ್ಷಣಾತ್ಮಕ ಕಾರಣದಿಂದ ರಾಜಧಾನಿಯನ್ನು ಆನೆಗುಂದಿಯಿಂದ ವಿಜಯನಗರಕ್ಕೆ ಸ್ಥಳಾಂತರಿಸಲಾಯಿತು. ಹಾಗಾಗಿಯೇ ವಿದೇಶಿಯಾತ್ರಿಕ ನ್ಯೂನಿಜ್ ಆನೆಗುಂದಿಯನ್ನು ವಿಜಯನಗರದ ಮಾತೃಸ್ಥಾನವೆಂದು ಹೇಳಿದ್ದಾನೆ.

ಉತ್ತರದಲ್ಲಿ ವ್ಯಾಪಕವಾಗಿ ಹಬ್ಬಿರುವ ಏಳುಗುಡ್ಡಗಳ ಸಾಲುಗಳು ಮತ್ತು ದಕ್ಷಿಣದಲ್ಲಿ ತುಂಗಭದ್ರಾ ನದಿಯನ್ನು ಹೊಂದಿರುವ ಆನೆಗುಂದಿ ನೈಸರ್ಗಿಕ ಸಹಜವಾಗಿ ಆಯಕಟ್ಟಿನ ಸ್ಥಾನದಲ್ಲಿದ್ದುದರಿಂದಲೇ ಅದನ್ನು ರಾಜಧಾನಿಯನ್ನಾಗಿ ಆಯ್ದುಕೊಂಡಿರುವುದನ್ನು ಗುರುತಿಸಬಹುದು.

ಮೊದಲ ದೊರೆ

ವಿಜಯನಗರ ರಾಜ್ಯದ ರಾಜಧಾನಿ ಆನೆಗುಂದಿಯಿಂದ ಆಳಿದ ಮೊದಲ ದೊರೆ ಹರಿಹರ (1336-1356). ಇವನಿಗೆ ಹೊಯ್ಸಳ ಮೂರನೆಯ ಬಲ್ಲಾಳನ ಅನುಗ್ರಹ ವಿದ್ದಿತು. ಅವನು ತನ್ನ ಕಷ್ಟಕರವಾದ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು, ತನ್ನ ಮಗ ವಿರೂಪಾಕ್ಷ ನಾಲ್ಕನೆಯ ಬಲ್ಲಾಳನು ಪರಿಸ್ಥಿತಿಯನ್ನು ನಿಭಾಯಿಸಲು ತೀರಾ ಅಸಮರ್ಥ ಎಂದು ಮನಗಂಡು ತನ್ನ ಸಮಸ್ತ ಅಧಿಕಾರವನ್ನು ಹರಿಹರನಿಗೆ ಒಪ್ಪಿಸಿದನು. ಕ್ರಿ.ಶ. 1342ರಲ್ಲಿ ಮೂರನೆಯ ಬಲ್ಲಾಳನು ಕಗ್ಗೊಲೆಯಾದಾಗ ಹರಿಹರನು ತನ್ನ ವಿಜಯನಗರ ರಾಜ್ಯಕ್ಕೆ ಭದ್ರವಾದ ತಳಹದಿಯನ್ನು ಹಾಕಿದನು.

ಹರಿಹರನಿಗೆ ರಾಜ್ಯಾಡಳಿತದಲ್ಲಿ ಶೃಂಗೇರಿಯ ಧರ್ಮಗುರುಗಳು ಮತ್ತು ಶೈವ ಪಾಶುಪಥ ಪಂಥಕ್ಕೆ ಸೇರಿದ ಕಾಶೀವಿಲಾಸ ಕ್ರಿಯಾಶಕ್ತಿ ದೇವರು ಮಾರ್ಗದರ್ಶನ ಮಾಡುತ್ತಿದ್ದರು. ಆಡಳಿತದಲ್ಲಿ ಅವನ ಸಹೋದರರಾದ ಒಂದನೆಯ ಬುಕ್ಕ, ಕಂಪಣ್ಣ ಮತ್ತು ಮುದ್ದಪ್ಪರ ಸಹಕಾರ ದೊರಕಿತು. ಅವರನ್ನು ಕ್ರಮವಾಗಿ ದ್ವಾರಸಮುದ್ರ, ಉದಯಗಿರಿ, ಚಂದ್ರಗುತ್ತಿ (ಮಲೆರಾಜ್ಯ) ಮತ್ತು ಮುಳಬಾಗಿಲು ಪ್ರಾಂತಗಳ ರಾಜ್ಯಪಾಲರನ್ನಾಗಿ ನೇಮಿಸಿದನು.

ಆನೆಗುಂದಿಯ ಮೇಲೆ ಬಹಮನಿ ಸುಲ್ತಾನನ ಕಣ್ಣು

ವಿಜಯನಗರ ಸ್ಥಾಪನೆಯಾದ ಕೆಲ ವರ್ಷಗಳಲ್ಲಿ ಅಂದರೆ 1347 ರಲ್ಲಿ ಅಲ್ಲಾವುದ್ದೀನ್ ಬಹಮನ್‌ಶಹಾನು ಬಹಮನಿ ರಾಜ್ಯವನ್ನು ಸ್ಥಾಪಿಸಿದನು. ಅವನು ಆನೆಗುಂದಿಯನ್ನು ಕಸಿದುಕೊಳ್ಳುವುದಕ್ಕಾಗಿ ಮುಬಾರಕ್‌ಖಾನನ ನೇತೃತ್ವದಲ್ಲಿ ಸೈನ್ಯವನ್ನು ಕಳುಹಿಸುತ್ತಾನೆ. ಆದರೆ ಅವನು ಹರಿಹರನ ಕೈಯಲ್ಲಿ ಸೋತು ಶರಣಾಗತನಾದನು. ಈ ಸೋಲಿನಿಂದ ಅವಮಾನಿತನಾದ ಬಹ್ಮನ್‌ಶಹಾ ಸ್ವತಃ ಯುದ್ಧಕ್ಕೆ ಬಂದರೂ ಅವನಿಗೆ ಅದೇ ಗತಿಯಾಯಿತು.

ಪುತ್ರಸಂತಾನವಿಲ್ಲದ ಹರಿಹರ ಕ್ರಿ.ಶ. 1356ರಲ್ಲಿ ಮರಣ ಹೊಂದಿದಾಗ ಕೂಡು ದೊರೆ ಬುಕ್ಕನಿಗೆ ಪಟ್ಟವಾಯಿತು.

ಒಂದನೆಯ ಬುಕ್ಕ ಮತ್ತು ರಾಜಧಾನಿಯ ವರ್ಗಾವಣೆ

1356ರಲ್ಲಿ ಆಡಳಿತಸೂತ್ರವನ್ನು ವಹಿಸಿಕೊಳ್ಳುವ ವೇಳೆಗಾಗಲೇ ಬುಕ್ಕನು ರಾಜಕಾರಣದಲ್ಲಿ ಸಾಕಷ್ಟು ಪಳಗಿದ್ದನು. ರಾಜ್ಯ ಸ್ಥಾಪನೆಯಲ್ಲಿ ಅಣ್ಣನೊಂದಿಗೆ ಸೇರಿದ್ದುದರಿಂದ ವಸ್ತುತಃ ಅವನು ಅರಸನಾಗಿಯೇ ವರ್ತಿಸಿದ್ದನು. ಇವನ ಮಗ ಎರಡನೆಯ ಕಂಪಣ್ಣನು ದಂಡಯಾತ್ರೆ ಕೈಗೊಂಡು ತಮಿಳು ದೇಶ, ಮಲಭಾರ, ಮಧುರೆ, ತೊಂಡೈಮಂಡಲಗಳನ್ನು ಗೆದ್ದುಕೊಂಡು ವಿಜಯನಗರಕ್ಕೆ ಸೇರಿಸಿದನು. ಕಂಪಣನ ವಿಜಯಯಾತ್ರೆಯನ್ನು ಅವನ ಪತ್ನಿ ಗಂಗಾದೇವಿಯ ಮಧುರಾ ವಿಜಯಂ ಅಥವಾ ವೀರಕಂಪಣರಾಯಚರಿತಂ ಎಂಬ ಕೃತಿಯಲ್ಲಿ ಚಿತ್ರಿಸಿದ್ದಾಳೆ.

ರಾಜಧಾನಿಯ ವರ್ಗಾವಣೆಯ ಕಾರಣಗಳು

ಯಾವ ಇಸ್ಲಾಂ ದೊರೆಗಳ ದಾಳಿಯಿಂದ ಹಿಂದೂ ಧರ್ಮ ಮತ್ತು ಸಂಸ್ಕೃತಿಯನ್ನು ರಕ್ಷಿಸುವುದಕ್ಕಾಗಿ ವಿಜಯನಗರ ಸ್ಥಾಪನೆಯಾಯಿತೊ ಮತ್ತೇ ಅದಕ್ಕೆ ಸವಾಲೆಂಬಂತೆ 1347ರಲ್ಲಿ ಬಹಮನಿ ರಾಜ್ಯ ಸ್ಥಾಪನೆಯಾಗಿ ಹರಿಹರನ ಕಾಲದಿಂದಲೇ ಆನೆಗುಂದಿಯ ಮೇಲೆ ದಾಳಿಗಳು ಪ್ರಾರಂಭವಾದವು. ಬುಕ್ಕನ ಕಾಲದಲ್ಲೂ ಇವು ಮುಂದುವರಿದವು. ರಾಯಚೂರ ಮತ್ತು ಮುದಗಲ ಕೋಟೆಗಳನ್ನೊಳಗೊಂಡಿದ್ದ ತುಂಗಭದ್ರಾ ಮತ್ತು ಕೃಷ್ಣಾ ನದಿಗಳ ನಡುವಣ ದೋ ಆಬ್ ಪ್ರದೇಶಕ್ಕಾಗಿ ಆನೆಗುಂದಿಯವರಿಗೂ-ಬಹಮನಿಯವರಿಗೂ ಅನೇಕ ಯುದ್ಧಗಳಾದವು. ಈ ಯುದ್ಧಗಳಲ್ಲಿ ವಿಜಯನಗರ ಸೋತು ಅಪಾರ ಜನಹಾನಿಯನ್ನು ಅನುಭವಿಸಿತೆಂದು ಮುಸ್ಲಿಂ ಇತಿಹಾಸಕಾರ ಫರಿಶ್ತಾ ಹೇಳಿದರೆ, ಅದು ಸುಲ್ತಾನ ಪರವಾದ ಅವನ ಪಕ್ಷಪಾತವೆಂದು ಪ್ರೊ. ಎನ್.ವೆಂಕಟರಮಣಯ್ಯನವರು ಹೇಳುತ್ತಾರೆ. ಯುದ್ಧಾನಂತರವೂ ದೋ ಆಬ್ ಮತ್ತು ಗೋವೆಯ ಮೇಲೆ ಬುಕ್ಕರಾಯ ಪಡೆದಿದ್ದ ಅಧಿಕಾರವನ್ನು ಗಮನಿಸಿದರೆ ಬುಕ್ಕನು ಈ ಯುದ್ಧಗಳಲ್ಲಿ ಅಂತಿಮವಾಗಿ ಮೇಲ್ಮೈ ಸಾಧಿಸಿದ್ದನೆಂಬುದು ಸ್ಪಷ್ಟವಾಗುತ್ತದೆಂದು ಅವರು ಅಭಿಪ್ರಾಯ ಪಡುತ್ತಾರೆ.

ಹೀಗೆ ಆನೆಗುಂದಿಯ ಮೇಲೆ ನಿರಂತರವಾಗಿ ದಾಳಿಗಳು ನಡೆಯುತ್ತಿದ್ದುದರಿಂದ ಹರಿಹರಬುಕ್ಕರು ಆನೆಗುಂದಿ ಬದಲಿಗೆ ಮತ್ತಷ್ಟು ಸುರಕ್ಷಿತವಾದ ಸ್ಥಳದಲ್ಲಿ ಹೊಸ ರಾಜಧಾನಿಯನ್ನು ಕಟ್ಟಲು ತೀರ್ಮಾನಿಸಿದರು.

ನ್ಯೂನಿಜ್‌ನ ಕಥೆ

ಆನೆಗುಂದಿಯ ಬದಲಿಗೆ ಹೊಸ ರಾಜಧಾನಿಯನ್ನು ಕಟ್ಟಿದ ಬಗೆಗೆ ವಿದೇಶಿ ಯಾತ್ರಿಕ ಫೆರ್ನೊನ್ಯೂನಿಜ್ ಕಥೆಯೊಂದನ್ನು ಹೇಳುತ್ತಾನೆ. 'ರಾಜ ಆಗಿಂದಾಗ ತನ್ನ ರೂಢಿಯಂತೆ ಬೇಟೆಗಾಗಿ ಒಂದು ದಿನ ನಾಗುಂದಿಮ್‌ನ ನದಿಯ ಆಚೆಗಿನ ಪರ್ವತಕ್ಕೆ ಹೋದ-

ಅಲ್ಲಿ ಈಗ ಬಿಸಗ ನಗರವಿದೆ. ಆಗ ಅದು ಬಹಳ ಬೇಟೆ ಜರುಗುವ ನಿರ್ಜನ ಸ್ಥಳವಾಗಿತ್ತು. ರಾಜ ಅದನ್ನು ತನ್ನ ಮನರಂಜನೆಗಾಗಿ ಕಾಯ್ದಿರಿಸಿಕೊಂಡಿದ್ದ. ಆ ದಿನ ಅವನು ತನ್ನ ನಾಯಿಗಳು ಹಾಗೂ ಬೇಟೆಯ ಸಲಕರಣೆಗಳೊಂದಿಗೆ ಇದ್ದಾಗ ಅವನೆದುರಿಗೆ ಒಂದು ಮೊಲ ಎದ್ದು ಬಂತು. ಅದು ನಾಯಿಗಳಿಂದ ಓಡುವ ಬದಲು ಅವುಗಳತ್ತ ಧಾವಿಸಿ ಅವುಗಳನ್ನೆಲ್ಲ ಕಚ್ಚಿತು. ಅದು ಅವುಗಳಿಗೆ ಎಷ್ಟೊಂದು ಅಪಾಯ ಮಾಡಿತೆಂದರೆ ಅವಾವೂ ಅದರ ಸಮೀಪ ಹೋಗುವ ಧೈರ್ಯ ಮಾಡಲಿಲ್ಲ. ರಾಜ ಇಂಥ ದುರ್ಬಲ ಪ್ರಾಣಿ ಈಗಾಗಲೇ ತನಗಾಗಿ ಒಂದು ಹುಲಿ ಮತ್ತು ಒಂದು ಸಿಂಹವನ್ನು ಹಿಡಿದಿದ್ದ ನಾಯಿಗಳನ್ನು ಕಚ್ಚುತ್ತಿರುವುದನ್ನು ಕಂಡು ಆಶ್ಚರ್ಯಚಕಿತನಾಗಿ ಅದು ನಿಜವಾಗಿಯೂ ಮೊಲವಾಗಿರದೆ ಯಾವುದೋ ಅದ್ಭುತವಿರಬೇಕೆಂದು ತೀರ್ಮಾನಿಸಿದ ಮತ್ತು ಅವನು ನಾಗುಂದಿಮ್ ನಗರಕ್ಕೆ ಹಿಂದಿರುಗಿದ.

ನದಿಗೆ ಬಂದು ತೀರದ ಗುಂಟ ನಡೆದಾಡುತ್ತಿದ್ದ ಸನ್ಯಾಸಿಯನ್ನು ಭೇಟಿಯಾದ. ಅವರೆಲ್ಲರಲ್ಲಿ ಪೂಜ್ಯನಾದ ಅವನಿಗೆ ಮೊಲದ ಬಗೆಗೆ ನಡೆದುದನ್ನು ಹೇಳಿದ. ಸನ್ಯಾಸಿ ಅದನ್ನು ಕೇಳಿ ಆಶ್ಚರ್ಯಪಟ್ಟು ತನ್ನೊಂದಿಗೆ ವಾಪಸು ನಡೆದು ಇಂಥ ಅದ್ಭುತ ಘಟನೆ ಜರುಗಿದ ಸ್ಥಳವನ್ನು ತನಗೆ ತೋರಿಸಬೇಕೆಂದು ರಾಜನಿಗೆ ಹೇಳಿದ. ಅಲ್ಲಿಗೆ ಹೋಗಿ ನೋಡಲಾಗಿ, ರಾಜ ಆ ಸ್ಥಳದಲ್ಲಿ ತಾನು ವಾಸಿಸುವ ಮನೆಗಳನ್ನು ಕಟ್ಟಿ ಒಂದು ನಗರ ಸ್ಥಾಪಿಸಬೇಕೆಂದು ಸನ್ಯಾಸಿ ಹೇಳಿದ. ಏಕೆಂದರೆ, ಆ ನಗರ ಪ್ರಪಂಚದಲ್ಲಿಯೇ ಅತ್ಯಂತ ಬಲಿಷ್ಠ ನಗರವಾಗುವುದು. ಅದನ್ನು ಅವನ ವೈರಿಗಳು ಎಂದೂ ವಶಪಡಿಸಿಕೊಳ್ಳಲಾರರು ಮತ್ತು ರಾಜ್ಯದಲ್ಲಿಯೇ ಅದು ಪ್ರಧಾನ ನಗರವಾಗುವುದು ಎಂಬುದೇ ಆ ಅದ್ಭುತದ ಅರ್ಥ ಎಂದು ಸನ್ಯಾಸಿ ವಿವರಿಸಿದ. ರಾಜ ಹಾಗೆಯೆ ಮಾಡಿದ ಮತ್ತು ಅಂದೇ ತನ್ನ ಮನೆಗಳನ್ನು ಕಟ್ಟಲಾರಂಭಿಸಿದ ಮತ್ತು ನಗರದ ಸುತ್ತ ಗೋಡೆ ಕಟ್ಟಿಸಿದ ಮತ್ತು ಅದಾದ ಮೇಲೆ ಅವನು ನಾಗುಂದಿಮ್ ಬಿಟ್ಟು ಹೊಸ ನಗರವನ್ನು ಶೀಘ್ರವಾಗಿ ಜನರಿಂದ ತುಂಬಿದ. ಅದಕ್ಕೆ ಅವನು ವಿದ್ಯಾಜುನ ಎಂದು ಹೆಸರಿಟ್ಟ. ಏಕೆಂದರೆ, ಅದನ್ನು ಕಟ್ಟಿಸಲು ಹೇಳಿದ ಸನ್ಯಾಸಿಯ ಹೆಸರೂ ಅದೇ ಆಗಿತ್ತು...[4] ಈ ಕಥೆಯಿಂದ ಕೆಲವು ಅಂಶಗಳು ಸ್ಪಷ್ಟವಾಗುತ್ತದೆ. ಆನೆಗುಂದಿ ಮೊದಲಿನ ರಾಜಧಾನಿಯಾಗಿದ್ದುದು. ಅದರ ಮೇಲೆ ಶತ್ರುಗಳು ಪದೇ ಪದೇ ದಾಳಿ ಮಾಡುತ್ತಿದ್ದುದು. ಮತ್ತು ಅದರಿಂದ ಚಿಂತಿತರಾದ ಅರಸರು ಸಂತರೊಬ್ಬರ ಸಲಹೆಯಂತೆ ಆನೆಗುಂದಿಯಿಂದ ನದಿಯಾಚೆ ನೂತನ ರಾಜಧಾನಿಯನ್ನು ಕಟ್ಟಿದುದು. ಹೀಗೆ ಬುಕ್ಕನ ಕಾಲದಲ್ಲಿ ಆನೆಗುಂದಿ ತನ್ನ ರಾಜಧಾನಿ ಸ್ಥಾನವನ್ನು ಕಳೆದುಕೊಂಡಿತು.

ಸೇನಾಠಾಣ್ಯವಾಗಿ ಆನೆಗುಂದಿ

ರಾಜಧಾನಿಯ ಸ್ಥಾನವನ್ನು ಕಳೆದುಕೊಂಡ ನಂತರ ಆನೆಗುಂದಿಯನ್ನು ಎರಡನೆಯ ಹರಿಹರನು ಎತ್ತರದ ಹೊರ ಸೇನಾಠಾಣ್ಯವನ್ನಾಗಿ ಮಾಡಿದನು. ಕೋಟೆಯನ್ನು ವಿಸ್ತರಿಸಿ ಭದ್ರಪಡಿಸಲಾಯಿತು. ಉತ್ತರದ ಧಾಳಿಗಳನ್ನು ತಡೆಯಲು ಇಲ್ಲಿ ಸೈನ್ಯ ಸದಾ ಸನ್ನದ್ಧವಾಗಿತ್ತು. 1520-22 ರಲ್ಲಿ ವಿಜಯನಗರಕ್ಕೆ ಬಂದಿದ್ದ ವಿದೇಶಿ ಯಾತ್ರಿಕ ಡೊಮಿಂಗೊ ಪ್ಯಾಸನು ಈ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾನೆ: 'ನದಿಯ ದಂಡೆಯ ಮೇಲೆ ಸೇನುಗುಂಡಿಮ್ ಎಂದು ಕರೆಯಲಾಗುವ ನಗರವೊಂದು ನಿರ್ಮಿತವಾಗಿದೆ. ಅದು ಈ ಹಿಂದೆ ರಾಜ್ಯದ ರಾಜಧಾನಿಯಾಗಿತ್ತೆಂದು ಹೇಳುತ್ತಾರೆ. ಆದರೆ ಈಗ ಅಲ್ಲಿ ಬಹಳ ಕಡಿಮೆ ಜನ ವಾಸವಾಗಿದ್ದಾರೆ. ಅದು ಇನ್ನೂ ಒಳ್ಳೆಯ ಗೋಡೆಗಳನ್ನು ಹೊಂದಿದ್ದು, ಬಹಳ ಭದ್ರವಾಗಿದೆ. ಮತ್ತು ಅದು ಎರಡೇ ದ್ವಾರಗಳಿರುವ ಎರಡು ಬೆಟ್ಟ ಸಾಲುಗಳ ನಡುವೆ ಇದೆ. ಈ ನಗರದಲ್ಲಿ ರಾಜನ ಪರವಾಗಿ ಒಬ್ಬ ದಳವಾಯಿ ಇರುತ್ತಾನೆ. ಜನರು ಈ ಊರಿಗೆ ಬುಟ್ಟಿಗಳಂತೆ ದುಂಡಗಿರುವ ದೋಣಿಗಳಲ್ಲಿ ದಾಟಿ ಬರುತ್ತಾರೆ...'[5]

ನ್ಯೂನಿಜ್‌ನು ನಾಗುಂದಿಮ್ ಎಂದು ಹೇಳಿದ್ದರೇ ಇವನು ಸೇನುಗುಂದಿಮ್ ಎಂದು ಹೇಳಿರುವುದು ಮತ್ತು ದಳವಾಯಿ ಇರುವ ಬಗ್ಗೆ ಹೇಳಿರುವುದು ಆನೆಗುಂದಿ ಸೇನಾಠಾಣ್ಯವಾಗಿತ್ತೆಂಬುದನ್ನು ಸ್ಪಷ್ಟೀಕರಿಸುತ್ತವೆ. ಸೇನೆ ಇಟ್ಟಿದ್ದರಿಂದಲೇ ಅದು ಸೇನಾಗುಂದಿ ಎಂದು ಕರೆಯಲ್ಪಟ್ಟಿರುವುದನ್ನೂ ಊಹಿಸಬಹುದು.

ಆನೆಗುಂದಿ ಸೆರೆಮನೆ

ಆನೆಗುಂದಿಯಲ್ಲಿ ವಿಜಯನಗರ ಕಾಲದ ಒಂದು ಸೆರೆಮನೆ ಇತ್ತೆಂದು ತಿಳಿದು ಬರುತ್ತದೆ. ಅಪರಾಧಿಗಳನ್ನು, ಬಂಡುಕೋರರನ್ನೂ, ರಾಜದ್ರೋಹಿಗಳನ್ನೂ ಇಲ್ಲಿಯ ಸೆರೆಮನೆಯಲ್ಲಿ ಬಂಧಿಸಿಡುತ್ತಿದ್ದರು. ಹಾಗೇ ಬಂಧನದಲ್ಲಿದ್ದವರಲ್ಲಿ ಕೃಷ್ಣದೇವರಾಯನ ಮಂತ್ರಿ ಸಾಳ್ವ ತಿಮ್ಮ ಹಾಗೂ ಅವನ ಮಕ್ಕಳು ಮತ್ತು ಯಲಹಂಕದ ನಾಡಪ್ರಭು ಕೆಂಪೇಗೌಡ ಪ್ರಮುಖರಾಗಿದ್ದಾರೆ.

ಕೃಷ್ಣದೇವರಾಯನ ಮಗ ತಿರುಮಲನಿಗೆ ವಿಷಪ್ರಾಶನ ಮಾಡಿಸಿ ಹತ್ಯೆಗೈದ ಕೃತ್ಯಕ್ಕೆ ಮಂತ್ರಿ ಸಾಳ್ವ ತಿಮ್ಮರಸ ಕಾರಣವೆಂದು ಅವನನ್ನು ಅವನ ಮಕ್ಕಳಾದ ತಿಮ್ಮದಂಡ ನಾಯಕ ಹಾಗೂ ಗುಂಡರಾಜರನ್ನು ಸೆರೆಮನೆಗೆ ದೂಡಲಾಯಿತೆಂದು ನ್ಯೂನಿಜ್ ಹೇಳುತ್ತಾನೆ. ಈ ಸೆರೆಮನೆ ಆನೆಗುಂದಿಯಲ್ಲಿತ್ತೆಂದು ತಿಳಿದುಬರುತ್ತದೆ. ಮೂರು ವರ್ಷಗಳ ನಂತರ ಹಿರಿಯ ಮಗ ತಿಮ್ಮನು ಸೆರೆಮನೆಯಿಂದ ತಪ್ಪಿಸಿಕೊಂಡು ಕೊಂಡವೀಡುವಿಗೆ ಓಡಿಹೋಗಲು ಪುನಃ ಅವನನ್ನು ಹಿಡಿದು ತಂದು ತಂದೆ ಮಕ್ಕಳ ಕಣ್ಣು ಕೀಳಿಸಲಾಗುತ್ತದೆ. ಆನೆಗುಂದಿ ಸೆರೆಮನೆಯಲ್ಲಿಯೇ ಅವರು ಮರಣ ಹೊಂದಿದರು.

ವಿಜಯನಗರದ ಸಾಮಂತನಾಗಿದ್ದ ಯಲಹಂಕನಾಡಪ್ರಭು ಕೆಂಪೆಗೌಡನು ಕೃಷ್ಣದೇವರಾಯನ ಪ್ರೀತಿಗೆ ಪಾತ್ರನಾಗಿದ್ದನು. ಅಚ್ಯುತದೇವರಾನು ಇವನನ್ನು ದಸರೆಯ ಸಂದರ್ಭದಲ್ಲಿ ರಾಜಧಾನಿಗೆ ಬರಮಾಡಿಕೊಂಡು ಸನ್ಮಾನಿಸಿದ್ದನು. ಆದರೆ ಸದಾಶಿವ ದೇವರಾಯನ ಕಾಲದಲ್ಲಿ ಇವನು ಸಾಮಂತ ಗೌರವಗಳಿಂದ ತೃಪ್ತನಾಗದ ಕೆಂಪೇಗೌಡನು ರಾಜಪದವಿಯ ಸಕಲ ಮರ್ಯಾದೆಗಳನ್ನು ರೂಢಿಸಿಕೊಳ್ಳುತ್ತಾನೆ. ಒಂದು ಟಂಕ ಶಾಲೆಯನ್ನು ಸ್ಥಾಪಿಸಿ ತನ್ನದೇ ಆದ ಭೈರವೇಶ್ವರ ಹೆಸರಿನ ನಾಣ್ಯಗಳನ್ನು ಅಚ್ಚು ಹಾಕಿಸಿದನು. ಈ ವಿಷಯ ವಿಜಯನಗರಕ್ಕೆ ತಲುಪಲು, ಇದರಿಂದ ಕೆರಳಿದ ಅಳಿಯ ರಾಮರಾಯನು ಕೆಂಪೇಗೌಡನನ್ನು ಬಂಧಿಸಿ ಆನೆಗುಂದಿಯ ಸೆರೆಮನೆಗೆ ತಳ್ಳಿದನು. 1559ರಿಂದ 1565ರವರೆಗೆ ಐದು ವರ್ಷ ಸೆರೆಮನೆಯಲ್ಲಿದ್ದ ಕೆಂಪೇಗೌಡ ನಂತರ ಭಾರೀ ಜುಲ್ಮಾನೆಯನ್ನು ತೆತ್ತು ಬಿಡುಗಡೆ ಹೊಂದಿದನು.[7]

1565ರಲ್ಲಿ ತಾಳಿಕೋಟೆ ಕದನದಲ್ಲಿ ವಿಜಯನಗರದ ಪತನಾನಂತರ ಶತ್ರುಸೈನ್ಯ ಆನೆಗುಂದಿ ಮೂಲಕವೇ ರಾಜಧಾನಿ ವಿಜಯನಗರದ ಮೇಲೆ ಆಕ್ರಣ ಮಾಡಿರುವುದನ್ನು ತರ್ಕಿಸಬಹುದು. ಸಂಗಾಪುರದ ಕಣಿವೆ ಆಂಜನೇಯ ದ್ವಾರದ[8] ಮೂಲಕ ಆನೇಗುಂದಿ ಪ್ರವೇಶಿಸಿದ ಸುಲ್ತಾನರ ಸೈನ್ಯ ಅಲ್ಲಿ ಬೀಡುಬಿಟ್ಟು ಅಲ್ಲಿಂದ ರಾಮರಾಯ ಕಟ್ಟಿದ ಸೇತುವೆ ಹಾಗೂ ತೆಪ್ಪದ ಮೂಲಕ ವಿಜಯನಗರವನ್ನು ತಲುಪಿತು. ವಿಜಯನಗರ ಧ್ವಂಸವಾದರೂ, ಆನೆಗುಂದಿ ಹೆಚ್ಚಿನ ಹಾನಿಯನ್ನು ಅನುಭವಿಸಲಿಲ್ಲ.

ಹೀಗೆ ಆನೆಗುಂದಿ ವಿಜಯನಗರ ಸ್ಥಾಪನೆಗೆ ಮೂಲನೆಲೆಯಾಗಿ ಅಲ್ಲಿಂದ ವಿಜಯ ನಗರ ಪತನದವರೆಗೂ ಅದು ವಿಜಯನಗರದ ಮೊದಲ ರಾಜಧಾನಿಯಾಗಿ, ಸೇನಾ ಠಾಣ್ಯವಾಗಿ ಮತ್ತು ಅಪರಾಧಿಗಳನ್ನಿಡುವ ಸೆರೆಮನೆಯಾಗಿ ಬಹುಪ್ರಧಾನವಾದ ಪಾತ್ರವನ್ನು ವಹಿಸುತ್ತಾ ಬಂದಿತು. ಆನೆಗುಂದಿ ತುಂಗಭದ್ರಾ-ಕೃಷ್ಣಾ ನದಿಗಳ ನಡುವಿನ 'ದೋ-ಆಬ್' ಪ್ರದೇಶದಲ್ಲಿದ್ದರೂ ಅದರ ರಾಜಕೀಯ ಸ್ಥಿತ್ಯಂತರಗಳು ಆನೆಗುಂದಿಯ ಮೇಲೆ ಯಾವುದೇ ಪರಿಣಾಮಗಳನ್ನು ಬೀರಲಿಲ್ಲ. ದೋ-ಆಬ್‌ನ ರಾಯಚೂರು, ಮುದು ಗಲ್ಲು-ಕೋಟೆಗಳು ಒಮ್ಮೆ ವಿಜಯನಗರದ ಅಧೀನದಲ್ಲಿದ್ದರೆ, ಮತ್ತೊಮ್ಮೆ ಬಹಮನಿ-ಬಿಜಾಪುರದ ಅಧೀನದಲ್ಲಿರುತ್ತಿದ್ದವು. ಆದರೆ ಆನೆಗುಂದಿ ಮಾತ್ರ ಎಂದೂ ಶತ್ರುಗಳ ವಶವಾಗಲಿಲ್ಲ. ಅದು ಅಷ್ಟು ಸರಳವೂ ಆಗಿರಲಿಲ್ಲ. ಒಂದು ವೇಳೆ ಹಾಗೇನಾದರೂ ಘಟಿಸಿದ್ದರೆ ಅಂದೇ ವಿಜಯನಗರದ ಪತನವಾಗುತ್ತಿತ್ತು. ಇದು ಆನೆಗುಂದಿಯ ಮಹತ್ವವನ್ನು ಬಿಂಬಿಸುತ್ತವೆ.

ಆಕರಗಳು

1. ಕನ್ನಡ ವಿವಿ ಶಾಸನ ಸಂ.: 2. ಕೊಪ್ಪಳ ಜಿಲ್ಲೆ, ಗಂಗಾವತಿ ತಾ. ಶಾ.ಸ. 28., ಹಂಪಿ.
2. ಸದಾನಂದ ಕನವಳ್ಳಿ (ಅನು); 1992; ರಾಬರ್ಟ್ ಸಿವೆಲ್‌ನ 'ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ' ಪುಟ 303, ಕವಿವಿ. ಹಂಪಿ.
3. ಅದೇ ಪುಟ 277.
4. " ಪುಟ 321-322.
5. " ಪುಟ 277
6. " ಪುಟ 383-384
7. *QJMS* 14. Vol. 2, 1924. p. 728 ಮತ್ತು ಶಿವಣ್ಣ, ಕೆ.ಎಸ್. 1997; ಕರ್ನಾಟಕ ಚರಿತ್ರೆ ಸಂ. 3, ಪುಟ 78, ಕನ್ನಡ ವಿ.ವಿ., ಹಂಪಿ.
8. ಶರಣಬಸಪ್ಪ ಕೋಲ್ಕಾರ; 2002; ಅಕ್ಷಯ, ಸ್ಮರಣ ಸಂಚಿಕೆ, ಗಂಗಾವತಿ.

52. ಕೆ.ತಿಮ್ಮಲಾಪುರ ವಿಜಯನಗರ ಕಾಲದ ಒಂದು ಆಶ್ರಿತ ನೆಲೆ

ಡಾ. ಎಚ್.ತಿಪ್ಪೇಸ್ವಾಮಿ

ವಿಜಯನಗರ ಸಾಮ್ರಾಜ್ಯದ ಕೀರ್ತಿ, ಅಭಿವೃದ್ಧಿ ಹಾಗೂ ಅದರ ಪ್ರತಿಷ್ಠೆಯ ಬೆನ್ನಹಿಂದೆ ಹಲವಾರು 'ಆಶ್ರಿತ ನೆಲೆಗಳ' (Depend Sites) ಮಹತ್ತರ ಪಾತ್ರವಿದೆ. ಈ ಆಶ್ರಿತ ನೆಲೆಗಳಲ್ಲಿ ಅಂದು ಜೀವಿಸಿದ್ದ ಅಧೀನಾಧಿಕಾರಿಗಳು, ಸಾಮಂತರು ವಿಜಯನಗರದ ಅರಸರ ಶ್ರೇಯೋಭಿವೃದ್ಧಿಗಾಗಿ ತಮ್ಮ ಶಕ್ತಿಮೀರಿ ದುಡಿದಿರುವುದು ಗಮನಾರ್ಹ. ಅಂದಿನ ಆಡಳಿತ ವ್ಯವಸ್ಥೆ ಸಂಪೂರ್ಣವಾಗಿ ತುಂಡು ರಾಜ್ಯಗಳ (ಸೆಗ್ ಮೆಂಟರಿಸ್ಟೇಟ್) ಮೇಲೆ ಆಧಾರಿತವಾಗಿತ್ತೆಂದು ಕೆಲ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.[1] ಆದರೆ ವಾಸ್ತವಿಕವಾಗಿ ಅಂದಿನ ಆಡಳಿತ ವ್ಯವಸ್ಥೆ 'ಸೆಗ್‌ಮೆಂಟರಿ ಸ್ಟೇಟ್' ವ್ಯವಸ್ಥೆಗಿಂತಲೂ ಹೆಚ್ಚಾಗಿ 'ಆಶ್ರಿತ ನೆಲೆಗಳ' ಮೇಲೆ ಸಂಪೂರ್ಣ ಅವಲಂಬನೆಯಾಗಿತ್ತು ಎಂದು ಹೇಳುವುದು ಹೆಚ್ಚು ಸಮಂಜಸವೆನ್ನಬಹುದು.[2]

ಅಂದಿನ ಕೇಂದ್ರ ವ್ಯವಸ್ಥೆಯ (ರಾಜಧಾನಿ) ಏಳ್ಗೆಗಾಗಿ ಶ್ರಮವಹಿಸಿ ಸೇವೆ ಸಲ್ಲಿಸಿದ ಹಲವಾರು ನೆಲೆಗಳಲ್ಲಿ ಕೆ.ತಿಮ್ಮಲಾಪುರವೂ ಒಂದಾಗಿದೆ. ಸ್ಥಳೀಯರಿಂದ ಕಣಿವೆ ತಿಮ್ಮಲಾಪುರ ಎಂದು ಕರೆಯಲ್ಪಡುವ ಈ ನೆಲೆ ಇಂದು ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನಲ್ಲಿದೆ. ನಂ. 10 ಮುದ್ದಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಗೊಳಪಟ್ಟ ಈ ಗ್ರಾಮವನ್ನು ಬುಕ್ಕಸಾಗರದಿಂದ ಕಾಡಿನ ಕಾಲುದಾರಿಯಲ್ಲಿ ಪೂರ್ವಕ್ಕೇ ಸು. 5 ಕಿ.ಮೀ. ಕ್ರಮಿಸಿದರೆ ತಲುಪಬಹುದು. ಇಲ್ಲವೇ ರಾಮಸಾಗರದ ಮುಖಾಂತರವಾಗಿ ಮಣ್ಣಿನ ರಸ್ತೆಯಲ್ಲಿ ಸು. 4 ಕಿ.ಮೀ. ಸಾಗಿದರೆ ಈಗಿನ ಹೊಸ ಊರನ್ನು ತಲುಪಬಹುದು.

ವಿಜಯನಗರ ಸಾಮ್ರಾಜ್ಯದ ಪ್ರಸಿದ್ಧ ಅರಸನೆಂದು ಪರಿಗಣಿತನಾಗಿರುವ ಶ್ರೀ ಕೃಷ್ಣದೇವರಾಯನ ಪತ್ನಿ ತಿರುಮಲಾದೇವಿಯ ನೆನಪಿನಲ್ಲಿ ಆತನ ಮಂತ್ರಿ ಗ್ರಾಮ ವೊಂದನ್ನು ನಿರ್ಮಿಸಿ ಅಲ್ಲಿ ಚೆನ್ನಕೇಶವ ದೇವಾಲಯ ನಿರ್ಮಿಸಿದ ಎನ್ನುವ ಪ್ರತೀತಿ ಇದೆ. ಅದುವೇ ಈ ಗ್ರಾಮ ಎಂಬುದು ಸ್ಥಳೀಯರೋರ್ವರ ಅಭಿಪ್ರಾಯ.[3] ಎತ್ತರವಾದ ಕಣಿವೆಗಳು ಈ ಊರಿನ ಸುತ್ತಲೂ ಇರುವ ಕಾರಣಕ್ಕಾಗಿ ಈ ಗ್ರಾಮವನ್ನು ಕಣಿವೆ ತಿಮ್ಮಲಾಪುರ ಎಂದು ಕರೆದಿರುವ ಸಾಧ್ಯತೆ ಇದೆ.. ಉ. ಅಕ್ಷಾಂಶ 15.39254^0 ಪೂ. ರೇಖಾಂಶ 076.4912^0 ರಲ್ಲಿ ಬರುವ ಈ ಗ್ರಾಮ ಸಮುದ್ರ ಮಟ್ಟದಿಂದ ಸು.840 ಅಡಿ ಎತ್ತರದಲ್ಲಿದ್ದು, ಭೌಗೋಳಿಕವಾಗಿ ಹೆಚ್ಚು ಸುಭದ್ರತೆಯಿಂದ ಕೂಡಿದೆ. ಗ್ರಾಮದ

ಸುತ್ತಲೂ ನೈಸರ್ಗಿಕವಾದ ಬೆಟ್ಟಗುಡ್ಡಗಳಿವೆ. ಅವುಗಳಲ್ಲಿ ನಿಶಾನಿಗುಡ್ಡ, ಹಿರೇಗುಡ್ಡ, ಕರೆಮಟ್ಟಿ, ಕಲ್ಗುಡಿ ಮಟ್ಟಿಗಳು ಪ್ರಮುಖವಾಗಿವೆ. ಇಲ್ಲಿನ 'ಹೊಸ ಊರು' ಹಾಗೂ 'ಹಾಳೂರು' ಎಂದು ಕರೆಯಲ್ಪಡುವ ಪ್ರದೇಶಗಳಲ್ಲಿ ಹಲವು ಸ್ಮಾರಕಾವಶೇಷ ಗಳಿದ್ದು, ಅವುಗಳನ್ನು ಪ್ರಾಥಮಿಕವಾಗಿ ಪರಿಚಯಿಸುವುದು ಹಾಗೂ ವಿಶ್ಲೇಷಿಸುವುದು. ಅವಸಾನದಂಚಿನಲ್ಲಿರುವ ಈ ನೆಲೆಯ ಸ್ಮಾರಕಗಳನ್ನು ಒಂದೆಡೆ ದಾಖಲಿಸುವುದು ಈ ಪ್ರಬಂಧದ ಬಹು ಮುಖ್ಯ ಉದ್ದೇಶವಾಗಿದೆ. ಇಲ್ಲಿನ ಸ್ಮಾರಕ ಅವಶೇಷಗಳೇ ಇದೊಂದು ಮಹತ್ವದ ನೆಲೆಯೆಂಬುದರ ಸುಳಿವನ್ನು ನೀಡುತ್ತವೆ. ವಿಜಯನಗರ ಕಾಲಾ ವಧಿಯಲ್ಲಿ ನಿರ್ಮಾಣವಾಗಿರುವ ದೇವಾಲಯಗಳು, ಮೂರ್ತಿಗಳು ಮತ್ತು ಸ್ಮಾರಕ ಶಿಲೆಗಳು, ಕೋಟೆ ಹಾಗೂ ಕಟ್ಟಡ ಮತ್ತು ಇತರೆ ಪ್ರಾಚ್ಯ ಅವಶೇಷಗಳು ಪ್ರಧಾನವಾಗಿ ಇಲ್ಲಿ ಕಾಣಬರುತ್ತಿದ್ದು, ಅವುಗಳನ್ನು ಈ ಮುಂದಿನಂತೆ ಅಭ್ಯಾಸ ಮಾಡಬಹುದಾಗಿದೆ.

ದೇವಾಲಯಗಳು

ಹಾಳೂರು, ಹೊಸ ಊರುಗಳಲ್ಲಿ ವಿಜಯನಗರ ಮತ್ತು ವಿಜಯನಗರೋತ್ತರ ಕಾಲಾವಧಿಯಲ್ಲಿ ನಿರ್ಮಾಣವಾದ ಕೆಲವು ದೇವಾಲಯಗಳಿದ್ದು, ಅವುಗಳಲ್ಲಿ ಕೇಶವ (ಕಿನ್ನೇಶ್ವರ),ಆಂಜನೇಯ, ಕಣಿವೆರಾಯ, ಪೋತರಾಜ, ಕಲ್ಗುಡಿ, ಭಗ್ನಕಾರ್ತಿಕೇಯ ಮತ್ತು ನೀಲಗುಂದ ಬಸವೇಶ್ವರ ದೇವಾಲಯಗಳು ಪ್ರಮುಖವಾಗಿವೆ.

1) ಚೆನ್ನಕೇಶವ (ಕಿನ್ನೇಶ್ವರ) ದೇವಾಲಯ : ಗರ್ಭಗುಡಿ ಮತ್ತು ಅಂತರಾಳದ ಅಧಿಷ್ಠಾನ ಮಾತ್ರ ಉಳಿದಿರುವ ಈ ದೇವಾಲಯ ವನ್ನು ಗ್ರಾನೈಟ್ ಶಿಲೆ ಬಳಸಿ ನಿರ್ಮಿಸ ಲಾಗಿದೆ. ಗರ್ಭಗುಡಿಯಲ್ಲಿ ಲಿಂಗವಿದೆ.[4] ಅಲ್ಲದೇ ಅದರ ಮುಂಭಾಗಕ್ಕೆ ಲಕ್ಷ್ಮಿ ನರಸಿಂಹನ ಮೂರ್ತಿಯನ್ನು ಇಡಲಾಗಿದೆ. ಇದರ ಮುಚ್ಚಿಗೆಯಲ್ಲಿ ಅರಳಿದ ಪದ್ಮದ ಅಲಂಕಾರವಿದೆ. ಇದರ ದ್ವಾರದಲ್ಲಿ ಕೇವಲ ಗದೆ ಮಾತ್ರ ಹಿಡಿದ ದ್ವಾರಪಾಲಕರಿದ್ದಾರೆ. ಅಲ್ಲದೆ ಲಲಾಟದಲ್ಲಿ ಲಕ್ಷ್ಮಿ ಶಿಲ್ಪವಿದೆ. ದ್ವಾರಶಾಖೆಗಳಲ್ಲಿ ಪುಷ್ಪದ ಅಲಂಕಾರ ಮಾತ್ರ ವಿದ್ದು, ಆಕರ್ಷಣೀಯವಾಗಿದೆ. ಈ ದೇವಾಲಯವನ್ನು ವಿಜಯನಗರದ ಪ್ರಸಿದ್ಧ ಅರಸನಾದ ಶ್ರೀ ಕೃಷ್ಣದೇವರಾಯನ ಕಾಲದಲ್ಲಿ ಆತನ ಮಂತ್ರಿಯೋರ್ವನು ತನ್ನ ಅರಸನ ಪತ್ನಿಯಾದ ತಿರುಮಲಾದೇವಿಯ ನೆನಪಿಗಾಗಿ ನಿರ್ಮಾಣ ಮಾಡಿದ್ದಾಗಿ ತಿಳಿದುಬರುತ್ತದೆ, ಆದರೆ ಶ್ರೀ ಕೃಷ್ಣದೇವರಾಯನ ಕಾಲದ ವಾಸ್ತುವೈಭವ ಈ ದೇವಾಲಯದಲ್ಲಿ ಗೋಚರ ವಾಗುತ್ತಿಲ್ಲ. ಇದರ ಆಧಾರದ ಮೇಲೆ ಇದೊಂದು ಸಂಪೂರ್ಣಗೊಳ್ಳದ ದೇವಾಲಯ ವೆಂದು ಗ್ರಹಿಸಬಹುದಾಗಿದೆ.

2) ಆಂಜನೇಯ ಗುಡಿ: ಚೌಕಾಕಾರದ ಗರ್ಭಗುಡಿಯಲ್ಲಿ ವಿಜಯನಗರ ಶೈಲಿಯ ಆಂಜನೇಯನ ಮೂರ್ತಿ ಇದೆ. ಇದರ ದ್ವಾರ ಮತ್ತು ಲಲಾಟಗಳು ಸರಳವಾಗಿವೆ. ಮುಂಭಾಗದ ಮುಖಮಂಟಪದಲ್ಲಿನ ಕಂಬಗಳ ಚೌಕ ಮತ್ತು ಅಷ್ಟ ಮುಖಗಳನ್ನು

ಹೊಂದಿದ್ದು, ಸರಳವಾಗಿವೆ. ಆದರೆ ಕಂಬವೊಂದರ ಮೇಲೆ ಅಂಜಲಿಹಸ್ತನಾಗಿರುವ ಭಕ್ತನೋರ್ವನ ಶಿಲ್ಪವನ್ನು ಹಾಗೂ ಮತ್ತೊಂದು ಕಂಬದ ಮೇಲೆ ಗದೆ, ಶಂಖ, ಚಕ್ರ ಹಿಡಿದಿರುವ ವೈಷ್ಣವದ್ವಾರಪಾಲ ಶಿಲ್ಪಗಳನ್ನು ಆಕರ್ಷಣೀಯವಾಗಿ ಕೆತ್ತಲಾಗಿದೆ. ಈ ಇಡೀ ದೇವಾಲಯವನ್ನು ಇತ್ತೀಚೆಗೆ ಜೀರ್ಣೋದ್ಧಾರ ಮಾಡಲಾಗಿದೆ.

3) ನೀಲಗುಂದದ ಬಸವೇಶ್ವರ ದೇವಾಲಯ: ಚೌಕಾಕಾರದ ಗರ್ಭಗುಡಿ, ಮುಖಮಂಟಪ ಹೊಂದಿರುವ ಈ ದೇವಾಲಯವನ್ನು ಇತ್ತೀಚೆಗೆ ಜೀರ್ಣೋದ್ಧಾರ ಮಾಡಿದ್ದಾರೆ. ಗರ್ಭಗುಡಿಯಲ್ಲಿ ನಂದಿ ಇದೆ. ಇದರ ದ್ವಾರ ಸರಳವಾಗಿದೆ. ಇದರ ಮುಂಭಾಗದ ಕಂಬಗಳಲ್ಲಿ ಗಣೇಶ, ಪುಷ್ಪ, ನೃತ್ಯ ಮಾಡುತ್ತಿರುವ ಯತಿ, ಮೊದಲಾದ ಶಿಲ್ಪಗಳಿವೆ. ಅಲ್ಲದೆ ಈ ದೇವಾಲಯ ಮುಂಭಾಗದಲ್ಲಿ ನಿಲ್ಲಿಸಿರುವ ಚೌಕಾಕಾರದ ಪ್ರತ್ಯೇಕ ಕಂಬಗಳನ್ನು ಮೀರಿದ ಶಿಲ್ಪಗಳಿದ್ದು, ಅವು ಇಂತಿವೆ.

1ನೆ ಕಂಬ:

ಪಶ್ಚಿಮ ಭಾಗ - ರಥ, ಚೂಪನೆಯ ಗಡ್ಡ ಇರುವ ಗೋಣಿಹೊದ್ದ ಮನುಷ್ಯ ಶಿಲ್ಪ ಮತ್ತು ಮೃದಂಗ ಬಾರಿಸುವ ಸ್ತ್ರೀಶಿಲ್ಪಗಳಿವೆ.

ಉತ್ತರ ಭಾಗ : ಲಿಂಗ, ಗಣೇಶ, ಸಿಂಹ ಶಿಲ್ಪಗಳಿವೆ.

ಪೂರ್ವ ಭಾಗ: ಖಡ್ಗ-ಖೇಟಕ, ನಾಗಲಿಂಗ, ಹಟಯೋಗಿಯ ಶಿಲ್ಪಗಳಿವೆ.

ದಕ್ಷಿಣಭಾಗ: ಚಂದ್ರ, ಯಕ್ಷ, ಯಾಳಿ ಶಿಲ್ಪಗಳಿವೆ.

2ನೇ ಕಂಬ:

ಪಶ್ಚಿಮ ಭಾಗ: ಮೀನನಾಥ ಹೂ-ಬಳ್ಳಿ, ಯಾಳಿಗಳ ಶಿಲ್ಪಗಳಿವೆ.

ಉತ್ತರಭಾಗ: ಪುಷ್ಪ, ಹಾವಿಡದ ಯಕ್ಷ, ನವಿಲು ಶಿಲ್ಪಗಳಿವೆ.

ಪೂರ್ವಭಾಗ: ಮೃದಂಗ ಬಾರಿಸುವ ಪುರುಷ, ಭೈರವಿ, ಯೋಗಿ ಶಿಲ್ಪಗಳಿವೆ.

ದಕ್ಷಿಣ ಭಾಗ: ಪುಷ್ಪ, ಲಿಂಗ, ಗೋಣಿ ಹೊದ್ದ ಪುರುಷನ ಶಿಲ್ಪಗಳಿವೆ.

3ನೇ ಕಂಬ:

ಪಶ್ಚಿಮ ಭಾಗ: ಪುಷ್ಪ, ಹಟಯೋಗಿ, ನವಿಲು ಶಿಲ್ಪಗಳಿವೆ.

ಉತ್ತರ ಭಾಗ: ಅಂಜಲಿಹಸ್ತಯೋಗಿ, ಶೀರ್ಷಾಸನದಲ್ಲಿರುವ ಹಟಯೋಗಿ, ಯಾಳಿ ಶಿಲ್ಪಗಳಿವೆ

ಪೂರ್ವ ಭಾಗ: ಶಂಖ, ನೃತ್ಯ ನರಸಿಂಹ, ಯೋಗಿ, ಜಟಾಧಾರಿ ಶಿಲ್ಪಗಳಿವೆ.

ದಕ್ಷಿಣ ಭಾಗ: ಕೈಇಳಿಬಿಟ್ಟು ನೃತ್ಯಮಾಡುತ್ತಿರುವ ಸ್ತ್ರೀ, ಯೋಗಿ (ತ್ರಿಶೂಲ ಹಿಡಿದ) ಶಂಖ ನಿಧಿ ಶಿಲ್ಪಗಳಿವೆ.

4ನೇ ಕಂಬ:

ಪಶ್ಚಿಮ ಭಾಗ: ಪುಷ್ಪ, ವೃಕ್ಷ (ಬಾಳೆಗಿಡವೇ?), ಭೈರವ ಶಿಲ್ಪಗಳಿವೆ

ಉತ್ತರ ಭಾಗ: ಸಿಂಹ (ಯಾಳಿ), ಜೋಡಿ ನಾಗ, ಕೈಗಳನ್ನು ಪಕ್ಕಕ್ಕೆ ಚಾಚಿ ಕುಳಿತ ಯೋಗಿ.

ಪೂರ್ವ ಭಾಗ: ಸೂರ್ಯ, ನೃತ್ಯ ಸ್ತ್ರೀ, ಯಾಳಿ ಶಿಲ್ಪಗಳಿವೆ.

ದಕ್ಷಿಣ ಭಾಗ: ಪುಷ್ಪ, ಗಿಳಿ, ಕೇದಿಗೆ (?) ಶಿಲ್ಪಗಳಿವೆ.

ಈ ದೇವಾಲಯದ ಭಿತ್ತಿ ಮತ್ತು ಇತರೆ ಭಾಗಗಳು ಸರಳವಾಗಿವೆ. ಇದರ ಸುತ್ತಲೂ ಪ್ರಾಕಾರವಿದೆ ಹಾಗೂ ದೇವಾಲಯದ ಮುಂಭಾಗಕ್ಕೆ ಒಂದು 'ಟಿ' ಆಕಾರದ ಬಾವಿ ಇದ್ದು, ಆಕರ್ಷಣೀಯವಾಗಿದೆ.

3) ಕಲ್ಗುಡಿ: ವೀರಣ್ಣ ಬಯಲಿನ ಪಶ್ಚಿಮಕ್ಕಿರುವ ಕೋಟೆಯನ್ನು ದಾಟಿ ಸ್ವಲ್ಪ ಮುಂದೆ ಹೋದರೆ ಈ ಗುಡಿ ಸಿಗುತ್ತದೆ. ಚೌಕಾಕಾರದ ಗರ್ಭಗುಡಿ ತೆರೆದ ಅಂತರಾಳ ಮತ್ತು ತೆರೆದ ಮುಖಮಂಟಪ ಹೊಂದಿರುವ ಇದನ್ನು ಸ್ಥಳೀಯರು 'ಕಳ್ಳರ ಗುಡಿ' ಎಂದು ಕರೆಯುತ್ತಾರೆ. ಗರ್ಭಗುಡಿಯಲ್ಲಿ ಮೂಲಮೂರ್ತಿ ಇಲ್ಲ. ನಿಧಿಶೋಧಕರು ಆ ಭಾಗವನ್ನು ಅಗೆದಿದ್ದಾರೆ. ಅಲ್ಲದೆ ಅದರ ದ್ವಾರ ಭಾಗವನ್ನು ಸಹ ಕಿತ್ತುಹಾಕಿದ್ದಾರೆ. ಮುಂಭಾಗದ ಕಂಬಗಳು ಚೌಕ ಮತ್ತು ಅಷ್ಟಾಕಾರಾದಲ್ಲಿದ್ದು, ಸರಳವಾಗಿವೆ. ಸುತ್ತಲಿನ ಅಧಿಷ್ಠಾನ, ಭಿತ್ತಿ ಸರಳವಾಗಿವೆ. ಗರ್ಭಗುಡಿ ಮೇಲಿನ ಶಿಖರ ಈಗ ಉಳಿದಿಲ್ಲ. ದೇವಾಲಯದ ಮುಂಭಾಗದಲ್ಲಿ ದೀಪಸ್ತಂಭವಿದೆ. ಅಲ್ಲದೆ ಅಲ್ಲಿಯೇ ತ್ರುಟಿತ ಬೀಸುವ ಕಲ್ಲಿದೆ. ಗ್ರಾನೈಟ್ ಮತ್ತು ಗಾರೆಯನ್ನು ಬಳಸಿ ವಿಜಯನಗರ ಶೈಲಿಯಲ್ಲಿ ಈ ದೇವಾಲಯವನ್ನು ಆಕರ್ಷಣೀಯವಾಗಿ ನಿರ್ಮಿಸಲಾಗಿದೆ.

4) ಭಗ್ನ ಕಾರ್ತಿಕೇಯ ದೇವಾಲಯ : ಕಲ್ಗುಡಿಯಿಂದ ಪಶ್ಚಿಮಕ್ಕೆ ಸ್ವಲ್ಪ ದೂರದಲ್ಲಿ ಈ ದೇವಾಲಯವಿದೆ. ಈಗ ಚೌಕಾಕಾರವಾಗಿರುವ ಗರ್ಭಗುಡಿಯ ಅಧಿ ಷ್ಠಾನ ಮಾತ್ರ ಉಳಿದಿದ್ದು, ಉಳಿದ ಎಲ್ಲಾ ಭಾಗಗಳು ಭಗ್ನವಾಗಿವೆ. ಇದರಲ್ಲಿ ಭಗ್ನ ಕಾರ್ತಿಕೇಯನ ವಿಗ್ರಹವಿದ್ದು, ಅದು ಎರಡು ಭಾಗಗಳಾಗಿ ತ್ರುಟಿತವಾಗಿದೆ.

ಮೂರ್ತಿಗಳು

ಈ ಗ್ರಾಮದ ವಿವಿಧ ಭಾಗಗಳಲ್ಲಿ ಲಕ್ಷ್ಮೀನರಸಿಂಹ, ನಂದಿ, ಗಣಪತಿ, ಸ್ತ್ರೀ ಮತ್ತು ಸಪ್ತಪೂರ್ಣೇಶ್ವರ, ಕಾರ್ತಿಕೇಯ ಮೂರ್ತಿಗಳು ಹಾಗೂ ಮಾಸ್ತಿ ಮತ್ತು ವೀರಗಲ್ಲುಗಳಿದ್ದು, ಅಧ್ಯಯನಯೋಗ್ಯವಾಗಿವೆ.

1) ಲಕ್ಷ್ಮಿ-ನರಸಿಂಹ: ಹೊಸ ಊರಿನಲ್ಲಿರುವ ಚೆನ್ನಕೇಶವ (ಕಿನ್ನರೇಶ್ವರ) ದೇವಾಲಯದಲ್ಲಿರುವ ಈ ಮೂರ್ತಿಯನ್ನು ಕಪ್ಪು ಕಲ್ಲನ್ನು ಬಳಸಿ ನಿರ್ಮಿಸಲಾಗಿದೆ.

ಕಿರೀಟಧಾರಿಯಾದ ನರಸಿಂಹ ನಾಲ್ಕು ಕೈಗಳನ್ನು ಹೊಂದಿದ್ದು, ಮೇಲಿನ ಬಲಗೈನಲ್ಲಿ ಶಂಖ, ಮೇಲಿನ ಎಡಗೈಯಲ್ಲಿ ಚಕ್ರ, ಕೆಳಬಲಗೈಯಲ್ಲಿ ತನ್ನ ಬಲತೊಡೆಯ ಮೇಲೆ ಕುಳಿತ ಲಕ್ಷ್ಮಿಯ ಸೊಂಟವನ್ನು ಬಳಸಿ ಹಿಡಿದಿದ್ದು, ಕೆಳ ಎಡಗೈನಲ್ಲಿ ಅಸ್ಪಷ್ಟ (?) ಆಯುಧ ಹಿಡಿದಿದೆ. ಅಲ್ಲದೆ ಕೊರಳು ಮತ್ತು ದೇಹದ ಮೇಲೆ ವಿವಿಧ ಬಗೆಯ ಆಭರಣಗಳಿವೆ.

ನರಸಿಂಹನ ಬಲತೊಡೆಯ ಮೇಲೆ ಲಕ್ಷ್ಮಿ ಕುಳಿತಿರುವುದು ಈ ಮೂರ್ತಿಯ ವಿಶೇಷವಾಗಿದೆ. ಕರಂಡ ಮುಕುಟಧಾರಿಯಾದ ಲಕ್ಷ್ಮಿ ಎರಡು ಕೈಗಳನ್ನು ಹೊಂದಿದ್ದು, ಕೈಗಳಲ್ಲಿ ಬಳೆ, ದೇಹದ ಮೇಲೆ ವಿವಿಧ ಹಾರಗಳನ್ನು, ಕಾಲಿನಲ್ಲಿ ಕಾಲ್ಕಡಗವನ್ನು ಧರಿಸಿದ್ದಾಳೆ. ಲಕ್ಷ್ಮಿ ಉಟ್ಟಿರುವ ಸೀರೆ ವಿವಿಧ ನೆರಿಗೆಗಳಿಂದ ಕೂಡಿದ್ದು, ಆಕರ್ಷಣೀಯವಾಗಿದೆ.

2) ನಂದಿ ಮೂರ್ತಿಗಳು: ಈ ಗ್ರಾಮದ ನೀಲಕಂಠೇಶ್ವರ ದೇವಾಲಯದಲ್ಲಿ ಮತ್ತು ಕಲ್ಲುಗುಡಿ ಬಳಿ ಹಾಗೂ ಗ್ರಾಮ ಚಾವಡಿಯ ಬಳಿ ತಲಾ ಒಂದೊಂದು ನಂದಿಗಳಿದ್ದು, ಅವು ವಿಜಯನಗರದ ಕಾಲಕ್ಕೆ ಸೇರಿವೆ. ಸಾಮಾನ್ಯವಾಗಿ ಬಲಗಾಲನ್ನು ಮಡಚಿ, ಎಡಗಾಲನ್ನು ಮುಂದಕ್ಕೆ ಚಾಚಿ ಸ್ವಲ್ಪ ವಾಲಿದಂತೆ ಮಲಗಿರುವ ಇವುಗಳು ಆಕರ್ಷಕ ರೀತಿಯ ಹಣೆಪಟ್ಟಿ ಮತ್ತು ಮೈಮೇಲೆ ಆಕರ್ಷಕ ವಸ್ತ್ರಗಳನ್ನು ಧರಿಸಿವೆ. ಇಲ್ಲಿನ ಗ್ರಾಮ ಚಾವಡಿ ಬಳಿ ಇರುವ ನಂದಿಮೂರ್ತಿಯ ಕೆಳಭಾಗದಲ್ಲಿ 'ಅಂಜಲಿಹಸ್ತೆಯಾಗಿ ರುವ ಸ್ತ್ರೀ' ಶಿಲ್ಪವೊಂದಿದ್ದು, ವಿಶೇಷವಾಗಿದೆ. ಇದನ್ನು ಪ್ರಾಯಶಃ ಮರಣ ಹೊಂದಿದ ಶೈವಭಕ್ತೆಯೋರ್ವಳ ನೆನಪಿನಲ್ಲಿ ಈ ನಂದಿ ಕಂಬವನ್ನು ನಿರ್ಮಿಸಿರಬಹುದೆನಿಸುತ್ತದೆ.[6]

3) ಗಣಪತಿ ಮೂರ್ತಿಗಳು: ಹೊಸ ಊರಿನ ನೀಲಕಂಠೇಶ್ವರ ದೇವಾಲಯದಲ್ಲಿ ಎರಡು ಗಣಪತಿ ಮೂರ್ತಿಗಳಿದ್ದು, ಅವು ವಿಜಯನಗರ ಶೈಲಿಯಲ್ಲಿವೆ. ಕಿರೀಟ ಧರಿಸಿರುವ ಈ ಮೂರ್ತಿಗಳು ಮೇಲಿನ ಕೈಗಳಲ್ಲಿ ಅಂಕುಶ, ಪಾಶ, ಕೆಳಗಿನ ಕೈಗಳಲ್ಲಿ ಭಗ್ನದಂತ, ಮೋದಕ ಪಾತ್ರೆಗಳಿವೆ. ದೇಹದ ಮೇಲೆ ವಿವಿಧ ಬಗೆಯ ಆಭರಣಗಳಿದ್ದು, ಹೊಟ್ಟೆಯ ಮೇಲೆ ಸರ್ಪವೊಂದು ಹೆಡೆಬಿಚ್ಚಿದೆ. ಅಲ್ಲದೆ ಪೀಠಬಿಂಬದಲ್ಲಿ ಇಲಿಯ ಶಿಲ್ಪವನ್ನು ಕೆತ್ತಲಾಗಿದೆ.

4) ಸತಿಸ್ಮಾರಕ ಶಿಲ್ಪ: ಹಾಳೂರಿನ ವೀರಣ್ಣಬಯಲಿನ ನಾಗಪ್ಪ ಎಂಬುವರ ಜಮೀನಿನಲ್ಲಿ ಈ ಸತಿಸ್ಮಾರಕ ಶಿಲ್ಪವಿದೆ. ಸ್ಥಳೀಯರು ಇದನ್ನು ವೀರಣ್ಣನ ಗುಡಿಯೆಂದು ಪೂಜಿಸುತ್ತಾರೆ. ಇಬ್ಬರು ಸತಿಯರ ಸಹಗಮನವನ್ನು ಸಂಕೇತಿಸುವ ಇದು 1.50 ಮೀಟರ್ ಎತ್ತರವಿದೆ. ಹಾಗೂ 1.05 ಮೀಟರ್ ಅಗಲ ಇರುವ ಇದನ್ನು ಗ್ರಾನೈಟ್ ಶಿಲೆಯಲ್ಲಿ ತಯಾರಿಸಲಾಗಿದೆ. ಮಧ್ಯದಲ್ಲಿ ವೀರನೋರ್ವನು ಅಂಜಲಿಹಸ್ತನಾಗಿದ್ದಾನೆ. ಆತನ ತಲೆಯ ಬಲಭಾಗಕ್ಕೆ ತುರುಬನ್ನು ಆಕರ್ಷಕ ರೀತಿಯಲ್ಲಿ (ವೃತ್ತಾಕಾರವಾಗಿ) ಕೆತ್ತಲಾಗಿದೆ.

ಆಕರ್ಷಕ ಪಂಚೆ ಧರಿಸಿರುವ ಈ ವೀರನ ದೇಹದ ಮೇಲೆ ವಿಭಿನ್ನ ಬಗೆಯ ಆಭರಣಗಳಿವೆ. ಈ ವೀರನ ಎಡಬಲದಲ್ಲಿ ತಮ್ಮ ಬಲಗೈಗಳನ್ನು ಮೇಲಕ್ಕೆತ್ತಿ, ಎಡಗೈಗಳನ್ನು ಇಳಿಬಿಟ್ಟು ಸ್ಥಾನೀಕರಾಗಿರುವ ಆತನ ಪತ್ನಿಯರಿದ್ದಾರೆ. ಈ ಸತಿದ್ವಯರು ಸಹ ತಮ್ಮ ತಲೆಯ ಎಡಭಾಗಕ್ಕೆ ವೃತ್ತಾಕಾರವಾಗಿ ತುರುಬನ್ನು ಕಟ್ಟಿದ್ದು, ಕಿವಿಯಲ್ಲಿ ಚಕ್ರಕುಂಡಲ ಹಾಗೂ ದೇಹದ ಮೇಲೆ ಬಗೆ ಬಗೆಯ ಆಭರಣಗಳನ್ನು ಧರಿಸಿದ್ದಾರೆ. ಈ ಶಿಲೆಯ ಮೇಲಿನ ಭಾಗದಲ್ಲಿ ಸೂರ್ಯ-ಚಂದ್ರ, ಶಿವಲಿಂಗ ಗಳನ್ನು ಕೆತ್ತಲಾಗಿದೆ. ತಿಮ್ಮನಾಯಕನೆಂಬುವನು ಚಿರತೆಯೊಂದಿಗೆ ಹೋರಾಟ ಮಾಡುತ್ತ ಮರಣ ಹೊಂದಿದ ನಂತರ ಆತನ ಸತಿಯರು ಸಹಗಮನಪದ್ಧತಿ ಪ್ರಕಾರ ಮರಣ ಹೊಂದಿದ ನೆನಪಿಗಾಗಿ ಈ ಸ್ಮಾರಕ ನಿರ್ಮಿಸಲಾಗಿದೆ ಎಂಬುದು ಕೆಲ ಸ್ಥಳೀಯರ ಐತಿಹ್ಯ.[7]

5) ಸಪ್ತಫಣೇಶ್ವರ: ಕಲ್ಲುಗ್ಗುಡಿಯಿಂದ ಸ್ವಲ್ಪ ಮುಂದಕ್ಕೆ ಸಾಗಿದರೆ ಭಗ್ನ ದೇವಾಲಯದ ಬಳಿ ಒಂದು ಚಿಕ್ಕ ನಂದಿ ಮತ್ತು ಸಪ್ತ ಫಣೇಶ್ವರ ಮೂರ್ತಿಯೊಂದಿದೆ. ಸು. ಆರು ಅಡಿ ಎತ್ತರವಿರುವ ಇದನ್ನು ಗ್ರ್ಯಾನೈಟ್ ಶಿಲೆಯಲ್ಲಿ ಮಾಡಲಾಗಿದೆ. ಏಳು ಹೆಡೆಗಳನ್ನು ಬಿಚ್ಚಿ ಹಿಡಿದ ಇದು ಹೆಚ್ಚು ಆಕರ್ಷಣೀಯವಾಗಿದ್ದು, ಅಧ್ಯಯನ ದೃಷ್ಟಿಯಿಂದ ಮಹತ್ವ ಪಡೆದಿದೆ.

ಕೋಟೆ

ಹಾಳೂರು ಎಂದು ಕರೆಯಲ್ಪಡುವ (ವೀರಣ್ಣ ಬಯಲಿನ ವಿವಿಧ ಭಾಗಗಳು) ಭಾಗದಲ್ಲಿರುವ ವಿಶಾಲ ಕಟ್ಟಡಾವಶೇಷಗಳ ಸುತ್ತಲಿರುವ ಆಯತಾಕಾರದ ಪ್ರದೇಶದ ಸುತ್ತಲೂ ಇರುವ ಮೇಲಿನ ಬೆಟ್ಟಗಳ ಮಧ್ಯಭಾಗಗಳಲ್ಲಿ(ಆಯ್ದ ಭಾಗಗಳಲ್ಲಿ ಮಾತ್ರ) ಕೋಟೆಯನ್ನು ನಿರ್ಮಿಸಲಾಗಿದೆ. ಪೂರ್ವದಲ್ಲಿ ಈರಣ್ಣನವರ ಜಮೀನಿನ ಬಳಿ ಇರುವ ಬೆಟ್ಟದಿಂದ ಆರಂಭವಾಗುವ ಕೋಟೆ ದಕ್ಷಿಣ ನಿಶಾನಿಗುಡ್ಡ, ಹಿರೇಗುಡ್ಡದವರೆಗೆ ಮುಂದುವರಿದು ಅಲ್ಲಿಂದ ಪಶ್ಚಿಮದ ಕಲ್ಲುಗ್ಗುಡಿವರೆಗೆ ಹಾಗೂ ಕಲ್ಲುಗ್ಗುಡಿಯಿಂದ ಉತ್ತರ ಭಾಗದಲ್ಲಿರುವ ಬೆಟ್ಟಗಳಲ್ಲಿ ಮುಂದುವರಿದು ಪೂರ್ವದಲ್ಲಿರುವ ಬೆಟ್ಟದಲ್ಲಿ ಸೇರ್ಪಡೆಯಾಗುತ್ತದೆ.

ಹಂಪಿಯಂತೆಯೇ ಇಲ್ಲಿಯೂ ಸಹ ಜಿಗ್-ಜಾಗ್ ರೀತಿಯಲ್ಲಿದ್ದು, ಶತ್ರುಗಳು ಸುಲಭವಾಗಿ ಒಳನುಸುಳಲು ಎಲ್ಲಿ ಸಾಧ್ಯವೋ ಅಲ್ಲಿ ಮಾತ್ರ (ಬೆಟ್ಟ ಇರದ ಭಾಗದಲ್ಲಿ ಮಾತ್ರ) ಕೋಟೆ ಗೋಡೆಯನ್ನು ನಿರ್ಮಿಸಲಾಗಿದೆ. ಗಿರಿದುರ್ಗದ ಪ್ರಕಾರಕ್ಕೆ ಸೇರಿಸಬಹುದಾದ ಈ ಕೋಟೆ ಅತ್ಯಂತ ಬಲಿಷ್ಠ ಮತ್ತು ಸುಭದ್ರತೆಯಿಂದ ನಿರ್ಮಿಸಲಾಗಿದ್ದು, ಇದರ ಬಹುತೇಕ ಭಾಗಗಳು ಈಗ ನಾಶವಾಗಿವೆ. ವಿವಿಧ ಗಾತ್ರದ ಶಿಲೆಗಳನ್ನು ಅಂದರೆ ಅರ್ಧಮೀಟರ್ ಅಗಲ ಹಾಗೂ ಒಂದರಿಂದ ಒಂದೂವರೆ ಮೀಟರ್ ಉದ್ದದ, ಇಲ್ಲವೇ

ಅರ್ಧ ಮೀಟರ್‌ಗಿಂತಲೂ ಕಡಿಮೆ ಇರುವ ಶಿಲೆಗಳನ್ನು ಪರಸ್ಪರ ಸಮಾನಾಂತರವಾಗಿ ಜೋಡಿಸಿ ನಿರ್ಮಿಸಲಾಗಿದೆ. ಕೆಲವು ಕಡೆ ವಿಜಯನಗರ ಶೈಲಿಯಲ್ಲಿ ಇಳಿವೋರೆಗಳನ್ನು (ramp) ಸಹ ನಿರ್ಮಿಸಲಾಗಿದೆ.

ಈ ಕೋಟೆಯ ದ್ವಾರ ಮತ್ತು ಇತರೆ ಮೂಲಭಾಗಗಳು ಈಗ ಉಳಿದಿಲ್ಲ. ಆದರೆ ನಿಶಾನಿ ಗುಡ್ಡದ ಬಳಿ ಒಂದಕೊತ್ತಳ(ಉಡೇವು) ಮಾತ್ರ ಉಳಿದಿದೆ. ಈ ಕೋಟೆ ಗೋಡೆಯ ಮೇಲೆ ಯಾವುದೇ ಶಿಲ್ಪಗಳಿಲ್ಲ. ಆದರೆ ಕೋಟೆಯ ಆಯಕಟ್ಟಿನ ಭಾಗಗಳಲ್ಲಿ ನೀರಿನ ದೊಣೆಗಳಿವೆ. ಅಂದಿನ ಯುದ್ಧ ತಂತ್ರಗಳನ್ನು ಗಮನದಲ್ಲಿಟ್ಟುಕೊಂಡು ಈ ಕೋಟೆಯನ್ನು ನಿರ್ಮಿಸಿರುವುದನ್ನು ಗಮನಿಸಿದರೆ ಇದೊಂದು ಬಲಿಷ್ಠ 'ಆಸ್ರಿತ ನೆಲೆ' ಯಾಗಿತ್ತೆಂಬ ಅಂಶ ಸ್ಪಷ್ಟವಾಗುತ್ತದೆ.

ಕಟ್ಟಡ ಮತ್ತು ಇತರೆ ಪ್ರಾಚ್ಯ ಅವಶೇಷಗಳು

ಹಾಳೂರು ಎಂದು ಕರೆಯಲ್ಪಡುವ ಪ್ರದೇಶದಲ್ಲಿ ಸು. 59 ಕಟ್ಟಡಗಳ ಅಡಿಪಾಯ ಗಳು ಮಾತ್ರ ಸುಸ್ಥಿತಿಯಲ್ಲಿ ಉಳಿದಿವೆ. ಇವುಗಳ ಇತರೆ ಭಾಗಗಳು ನಾಶವಾಗಿವೆ. ಹಂಪಿಯ ವಿವಿಧೆಡೆ ದೊರೆಯುವ ಅಡಿಪಾಯಗಳಿಗೆ ಇವು ಹೋಲಿಕೆ ಆಗುತ್ತವೆ. ಇಲ್ಲಿನ ಅಡಿಪಾಯಗಳಲ್ಲಿ ಕೆಲವು ಆಯತಾಕಾರ, ಕೆಲವು ಚೌಕಾಕಾರವಾಗಿವೆ. ಇವುಗಳನ್ನು ಪುನಃ ಹಲವು ಚಿಕ್ಕ ಚಿಕ್ಕ ಕೋಣೆಗಳನ್ನಾಗಿ ವಿಭಾಗಿಸಿಕೊಂಡ ಕುರುಹುಗಳು ಸಹ ಇಲ್ಲಿವೆ. ಇಲ್ಲಿಯೇ ಒರಳುಕಲ್ಲು, ಬೀಸುವಕಲ್ಲು ಮಡಿಕೆಗಳ ಕೆಲವು ತ್ರುಟಿತ ಭಾಗಗಳು ದೊರೆಯುತ್ತವೆ. ಇವುಗಳ ಆಧಾರದ ಮೇಲೆ ಈ ಪ್ರದೇಶ ಜನವಸತಿ ಕೇಂದ್ರವಾಗಿತ್ತೆಂದು ಹೇಳಬಹುದು. ಕಲ್ಗುಡಿಯ ಹಿಂಭಾಗಕ್ಕಿರುವ ಬೆಟ್ಟದಲ್ಲಿ ಸು. 80x40 ಮೀಟರ್ ಅಳತೆಯ ಬೃಹತ್ ಕಟ್ಟಡಾವಶೇಷವಿದೆ. ಇಲ್ಲಿಯೂ ಕೇವಲ ಅಡಿಪಾಯ ಮಾತ್ರವಿದೆ. ಇದರಲ್ಲಿ ಒರಳು ಮತ್ತು ಚಿಕ್ಕಕೊಠಡಿಗಳ ಕುರುಹುಗಳಿವೆ. ಇವೆಲ್ಲವುಗಳನ್ನು ಸುತ್ತುವರಿ ದಂತೆ ಪ್ರಾಕಾರದ (Compound Wall) ಅವಶೇಷವಿದೆ. ಇದರ ಬಳಿ ಬೀಸುವ ಕಲ್ಲು ಇದೆ. ಈ ವಿಶಾಲ ಕಟ್ಟಡವು ಇಲ್ಲಿನ ಆಡಳಿತಾಧಿಕಾರಿಗೆ ಇಲ್ಲವೇ ಇಲ್ಲಿನ ಸಾಮಂತ ಅಥವಾ ಮುಖ್ಯಸ್ಥನಿಗೆ ಸಂಬಂಧಿಸಿದ ಕಟ್ಟಡವಾಗಿತ್ತೆಂದು ಹೇಳಬಹುದು.

ಇದೇ ನೆಲೆಯಲ್ಲಿ ಮೂರು ಪ್ರಾಚೀನ ಕೆರೆಗಳು, ಹೆಡೆಬಿಚ್ಚಿದ ಸರ್ಪದ ಮಧ್ಯದಲ್ಲಿರುವ ಪಾದ, ಕೊರೆದ ನಾಯಿಶಿಲ್ಪ, ಪ್ರಾಚೀನದಾರಿಗಳು ಇವೆ. ಅಲ್ಲದೆ ಆಯತಾಕಾರದ ಶಿಲಾತೊಟ್ಟಿಯೊಂದು ಹೊಸ ಊರಿನ ಪ್ರಾಥಮಿಕ ಶಾಲೆಯ ಬಳಿ ಇರುವ ಬಾವಿಯ ಬಳಿ ಇದ್ದು ತನ್ನದೇ ಆದ ಮಹತ್ವವನ್ನೊಂದಿದೆ.

ಮೇಲಿನ ಎಲ್ಲಾ ಸ್ಮಾರಕ ಅವಶೇಷಗಳ ಆಧಾರದ ಮೇಲೆ ಇದೊಂದು ವಿಜಯ ನಗರ ಕಾಲದ ಪ್ರಮುಖ ಆಶ್ರಿತ ನೆಲೆಯೆಂದು ಹೇಳಬಹುದು. ಕ್ರಿ.ಶ. 14-16ನೇ

ಶತಮಾನದಲ್ಲಿ ಈ ನೆಲೆ ಪ್ರಮುಖಪಾತ್ರ ನಿರ್ವಹಿಸಿದ್ದು, ನೇರವಾಗಿ ಇದು-ವಿಜಯನಗರ ಅರಸರೊಂದಿಗೆ ಯಾವ ರೀತಿ ಸಂಪರ್ಕವಿರಿಸಿಕೊಂಡಿತ್ತು? ಮತ್ತು ಅಲ್ಲಿನ ಸಾಮಂತರು ಅಥವಾ ಅಧೀನಾಧಿಕಾರಿಗಳು ಯಾವ ರೀತಿ ಪಾತ್ರ ನಿರ್ವಹಿಸುತ್ತಿದ್ದರು ? ಇನ್ನೂ ಮೊದಲಾದ ಪ್ರಶ್ನೆಗಳಿಗೆ ಮುಂದಿನ `ಗಟ್ಟಿ ಸಂಶೋಧನೆ' ಉತ್ತರಿಸಬೇಕಷ್ಟೆ.

ಅಡಿ ಟಿಪ್ಪಣಿಗಳು


1. ಬರ್ಟನ್ ಸ್ಟೈನ್‌ರವರ 'ಸೆಗ್‌ಮೆಂಟರಿ ಸ್ಟೇಟ್' ಪರಿಕಲ್ಪನೆ.
2. 'ಆಶ್ರಿತ ನೆಲೆಗಳ ವ್ಯಾಪ್ತಿ'ಯಲ್ಲಿ ನಗರ, ಉಪನಗರ, ಪಟ್ಟಣ, ಉಪಪಟ್ಟಣ, ಪುರ, ಗ್ರಾಮ ಮೊದಲಾದ ಆಡಳಿತದ ಉಪವಿಭಾಗಗಳು ಸಹಾ ಸೇರ್ಪಡೆಯಾಗುತ್ತವೆ ಎಂಬುದನ್ನು ಗಮನಿಸಬೇಕು. ನೋಡಿ: ಡಾ. ಎಚ್.ತಿಪ್ಪೇಸ್ವಾಮಿ- 'ವಿಜಯನಗರ ಕಾಲದ ಆಶ್ರಿತ ನೆಲೆಗಳು', ಪು. 25-29.
3. ಡಾ. ಆರ್. ಬಿ. ಕುಮಾರ್‌ರವರ ಅಭಿಪ್ರಾಯ.
4. ಲಿಂಗವನ್ನು ನಂತರ ಕಾಲದಲ್ಲಿ ತಂದಿಟ್ಟಿರುವ ಸಾಧ್ಯತೆ ಇದೆ.
5. ಇದು ಸ್ಥಳೀಯರ ಅಭಿಪ್ರಾಯ.
6. ಇದು ಸ್ಮಾರಕ ಶಿಲೆಗಳ ಒಂದು ಪ್ರಾಕಾರ ಇರಬಹುದೇ ? ಇದನ್ನು ಪ್ರೊ. ದೇವರ ಕೊಂಡ ರೆಡ್ಡಿಯವರು ನಂದಿ ಕಂಬ ಎಂದು ಅರ್ಥೈಸಿದ್ದಾರೆ.
7. ಜಂಬಯ್ಯ (62), ಕೆ. ತಿಮ್ಮಲಾಪುರ ಇವರು ನೀಡಿದ ಮಾಹಿತಿ.

ಆಧಾರ ಗ್ರಂಥಗಳು

1) Anila Verghes - 2002, *Hampi Monumental Legacy*
Oxford University Press, New Delhi.

2) George Michell - 1990, Vijayanagara Architectural Inventory of the Urban Core, Vol. 1 & 2
Dirrectorate of Archaeology & Museums, Mysore.

3) ಡಾ. ಪಾಟೀಲ್, ಸಿ.ಎಸ್. 2000, **ಕರ್ನಾಟಕದ ಕೋಟೆಗಳು** (ಸಂ. 1)
ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ.




ನೀಲಗುಂದದ
ಬಸವೇಶ್ವರ ದೇವಾಲಯ




ಶಿರ್ಷಾಸನದಲ್ಲಿರುವ
ಹಟಯೋಗಿ -
ನೀಲಗುಂದದ
ಬಸವೇಶ್ವರ ದೇವಾಲಯ




ಬಾವಿ - ನೀಲಗುಂದದ
ಬಸವೇಶ್ವರ ದೇವಾಲಯ




ಚೆನ್ನಕೇಶವ ದೇವಾಲಯದ
ಸಾಮಾನ್ಯ ನೋಟ




ಚೆನ್ನಕೇಶವ ದೇವಾಲಯದ
ಗರ್ಭಗುಡಿಯ ದ್ವಾರ



ನೀರಿನ ಶಿಲಾತೊಟ್ಟಿ



ಜೋಡಿಪಾದಗಳು




ತ್ರುಟಿತ ಬೀಸುವ ಕಲ್ಲು




ಕಲ್ಗುಡಿ



ನಂದಿ ಮತ್ತು ಸ್ತ್ರೀ



ನಂದಿ



ಸ್ತ್ರೀ



ನಂದಿ



ಆಂಜನೇಯ



ಲಕ್ಷ್ಮಿ ನರಸಿಂಹ



ಸತಿಸ್ಮಾರಕ ಶಿಲ್ಪ



ಭಗ್ನಕೋಟೆ
ಪಶ್ಚಿಮ ಭಾಗ



ಕೋಟೆ
ಪೂರ್ವ ಭಾಗ



ಕೋಟೆ
ಉತ್ತರದ ಭಾಗ




ಗಣೇಶ



ಗಣೇಶ



ಸಪ್ತಫಣೇಶ್ವರ
ಮತ್ತು ನಂದಿ



ಒರಳು ಕಲ್ಲು



ಭಗ್ನ ಕಾರ್ತಿಕೇಯ


KANVITHIMMALAPURA VILLAGE MAP
INDEX
ROAD
CANAL
OLD TANKS
VILLAGE BOUNDARY
PRESENT VILLAGE BOUNDARY
FORT
1 NILAGUNDA BASHWESHWAR TEMPLE
2 NANDI
3 VIRANNA BAILU
4 POTHAPPA STONE
5 ANJENYA TEMPLE
6 KALGUDI
7 KARTHKEYA TEMPLE RUINS
8 CHANNAKESHVA TEMPLE
9 SAPTHPANISHWARA
10 TEMPLE RUINS HOUSE RUINS
11 HOUSE RUINS
SCALE 1:150
N
TO KAMPLI
T.B. RIGHT MAIN CANAL

53. ಬಹುಮುಖ ಪ್ರತಿಭೆಯ ಶ್ರೀ ಬಿಷ್ಟಪ್ಪಯ್ಯ ಮಹಾಪುರುಷರು ಕ್ರಿ.ಶ. ೧೬೦೮ - ೯೮

ಡಾ. ವಸುಂಧರಾ ದೇಸಾಯಿ ಮಹಾಪುರುಷ

ಬಹುಮುಖ ಪ್ರತಿಭೆಯ ಶ್ರೀ ಬಿಷ್ಟಪ್ಪಯ್ಯ ಮಹಾಪುರುಷ ಅವರು ಬಳ್ಳಾರಿ ಜಿಲ್ಲೆ ಕಂಡ ಅತಿ ವಿಶಿಷ್ಟ ನಾಯಕರೆಂದು ಪರಿಗಣಿಸಲ್ಪಡುತ್ತಾರೆ.

ಹೂವಿನ ಹಡಗಲಿ ತಾಲ್ಲೂಕಿನ ಸೋಗಿ ಗ್ರಾಮದಲ್ಲಿ ಅಯ್ಯಂಭಟ್ಟ ಜೋಯಿಸರ ಉದರದಲ್ಲಿ ಕ್ರಿ.ಶ. 1608 ರಲ್ಲಿ ಜನಿಸಿದ ಇವರು, ಬಾಲ್ಯದಿಂದಲೇ ಆಧ್ಯಾತ್ಮದಲ್ಲಿ ಅಪಾರ ಆಸಕ್ತಿ ಹೊಂದಿದ್ದರೆಂದು ತಿಳಿದುಬರುತ್ತದೆ.[1] ಉಪನಯನದ ನಂತರ ಸೋಗಿಯ ಸಮೀಪದ ಮಲ್ಲಿಕಾರ್ಜುನ ಬೆಟ್ಟದ ಗುಹೆಯಲ್ಲಿ ಮತ್ತು ಊರ ಹೊರಗಿರುವ ತಮ್ಮದೇ ಜಮೀನಿನಲ್ಲಿರುವ ಆಲದ ಮರದ ಹೊದರಿನಲ್ಲಿ ಕುಳಿತು ಅನುಷ್ಠಾನಗೈದರೆಂದು ಹಸ್ತಪ್ರತಿಯಲ್ಲಿ ಉಲ್ಲೇಖವಾಗಿದ್ದು,[2] ಆ ಸ್ಥಳಗಳು ಇಂದಿಗೂ ಅವರ ವಂಶಜರಿಂದ -ಭಕ್ತರಿಂದ ಪೂಜಿಸಲ್ಪಡುತ್ತವೆ.

ನಂತರ ಅಂದಿನ ದಿನಗಳಲ್ಲಿ ಸಮಾಜಕ್ಕೆ ಅತ್ಯವಶ್ಯವಾಗಿ ಬೇಕಾಗಿದ್ದ ಧಾರ್ಮಿಕ ಭದ್ರತೆ ನೀಡುವತ್ತ ಗಮನಹರಿಸಿದ ಬಿಷ್ಟಪ್ಪಯ್ಯ ಅವರು ಆಗ ಅತ್ಯಂತ ಶ್ರೇಷ್ಠ ಎಂದು ಪರಿಗಣಿಸಲ್ಪಟ್ಟ ರಸಲಿಂಗಗಳ ನಿರ್ಮಾಣ, ಅದಕ್ಕಾಗಿ ರಸಶಾಸ್ತ್ರದ ಅಧ್ಯಯನದಲ್ಲಿ ತೊಡಗಿದ್ದಾರೆ.[3] ಆ ಅಧ್ಯಯನ, ಪ್ರಯೋಗಕ್ಕಾಗಿ ತಮ್ಮದೇ ಜಮೀನಿನ ಮಧ್ಯದಲ್ಲಿ ಒಂದು ಗುಡಿ ಕಟ್ಟಿಕೊಂಡು ಸಾಧನೆಗೆ ತೊಡಗಿದ್ದು ತಿಳಿದುಬರುತ್ತದೆ. ಆ ಗುಡಿ ಈಗಲೂ ಲಭ್ಯವಿದ್ದು, 'ಬಿಷ್ಟಪ್ಪಯ್ಯ ಅವರ ಗುಡಿ' ಎಂದೇ ಹೆಸರಿಲ್ಪಟ್ಟಿದೆ ಮತ್ತು ಅದರ ಓಂದಿರುವ ತೆಗ್ಗು 'ಪವಾಡಗಳು ಘಟಿಸಿದ್ದರಿಂದ ತುಪ್ಪದ ಬಾವಿ ಎಂದು ಗುರುತಿಸಲ್ಪಡುತ್ತದೆ' ಎಂದು ಸೋಗಿ ಗ್ರಾಮಸ್ಥರು ಹೇಳುತ್ತಾರೆ.[4]

ನಂತರ ಆ ಸ್ಥಳದಲ್ಲಿ ಪದೇ ಪದೇ ಅವರ ಏಕಾಂತಕ್ಕೆ ಭಂಗ ಬರತೊಡಗಿದ್ದರಿಂದ ಹಗರಿ ಬೊಮ್ಮನಹಳ್ಳಿ ತಾಲ್ಲೂಕಿನ 'ಹನಸಿ' ಗ್ರಾಮಕ್ಕೆ ತೆರಳಿದ ಬಿಷ್ಟಪ್ಪಯ್ಯ ಆ ಗ್ರಾಮಾಧಿಕಾರಿಯಿಂದ 80 ಎಕರೆ ಜಮೀನು ಆಶ್ರಯ ಪಡೆದು[5] ಅಲ್ಲಿಯೇ ತಮ್ಮ ಸಾಧನೆಯನ್ನು ಮುಂದುವರೆಸಿದ್ದಾರೆ. ಆಗ ಅವರು ಅಲ್ಲಿನ ಜಮೀನಿನ ಮಧ್ಯದಲ್ಲಿ ಊರ ಹೊರಗೆ ಕಟ್ಟಿಕೊಂಡ ಗುಡಿ ಈಗ 'ಬಿಷ್ಟೇಶ್ವರ ಸ್ವಾಮಿಗಳ ಗುಡಿ' ಎಂದೇ ಹೆಸರಾಗಿದ್ದು, ಗುಡಿಯ ಓಂದೆ ಅವರು ಬಾಳಿದ ಮನೆ, ಪಕ್ಕದಲ್ಲಿರುವ ಕಲ್ಲುಕಟ್ಟಿಡದ

ಬಾವಿ ಬಿಷ್ಟಪ್ಪಯ್ಯ ಅವರ ಸಾಧನೆಗಳಿಗೆ ಮೂಕ ಸಾಕ್ಷಿಯಾಗಿ ನಿಂತಿವೆ. ಆ ಇಡೀ ಭೂಮಿ ಇಂದಿಗೂ 'ಬಿಷ್ಟಪ್ಪಯ್ಯ ಮಾನ್ಯ ಭೂಮಿ' ಎಂದೇ ಗುರುತಿಸಲ್ಪಡುತ್ತದೆ. ಮತ್ತು ಅದರ ಒಂದಂಶ ಬಿಷ್ಟಪ್ಪಯ್ಯ ವಂಶಜರ ಪುರೋಹಿತರಾದ ಬಿಷ್ಟಪ್ಪ, ಕೃಷ್ಣಪ್ಪ ಜೋಶಿ ಎಂಬುವರ ಹೆಸರಿನಲ್ಲಿಯೇ ಇದೆ.

ಸೋಗಿಯ ಆಲದಮರದ ಹೊದರಿನಲ್ಲಿ ಅಮೂಲ್ಯವಾದ ಪಚ್ಚೆ ಕಲ್ಲಿನ ಲಿಂಗ ಮತ್ತು ಸೋಗಿ ಹನಸಿಯ ಗುಡಿಗಳಲ್ಲಿ ಪಂಚ ಲೋಹದ ಲಿಂಗಗಳನ್ನೇ ಬಿಷ್ಟಪ್ಪಯ್ಯ ಸ್ಥಾಪಿಸಿದ್ದು, ಅವು ಸುಮಾರು 40 ವರ್ಷಗಳ ಹಿಂದೆ ಕಳವು ಆಗಿವೆ ಎಂಬ ನನ್ನ ನೆನಪನ್ನು ಆ ಗ್ರಾಮದ ಹಿರಿಯರು ಪುಷ್ಟೀಕರಿಸುತ್ತಾರೆ.[6]

ಹನಸಿಯಲ್ಲಿದ್ದಾಗಲೇ ಪಂಚಲೋಹದ ದೇವರನ್ನು ಮಾಡಿರೆಂದು ಹಸ್ತಪ್ರತಿಯ 21-22ನೆಯ ಉಲ್ಲೇಖವಾಗಿದೆ.

ಬಿಷ್ಟಪ್ಪಯ್ಯ ಅವರಿಂದ ಹನ್ನೊಂದನೆಯ ತಲೆಮಾರಿನವರಾದ ಶ್ರೀ ಶಿವಪ್ಪಯ್ಯ ಬಿಷ್ಟಪ್ಪಯ್ಯ ಮಹಾಪುರುಷ ಅವರು ಈಗ ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ತಮ್ಮ ಇನಾಂ ಹಳ್ಳಿಯಾದ ವಿಠ್ಠಲಾಪುರದಲ್ಲಿ ವಾಸಿಸುತ್ತಿದ್ದಾರೆ.[7] ಅವರ ಕೋಟೆಯಂತಹ ಮನೆಯ ಆವರಣದೊಳಗೆ ಬಿಷ್ಟಪ್ಪಯ್ಯ ಅವರಿಂದ ಪುನರ್ನಿರ್ಮಿಸಲ್ಪಟ್ಟ ವಿಠ್ಠಲ ಮಂದಿರವಿದೆ. ಆ ಮಂದಿರದಲ್ಲಿಯೇ ಬಿಷ್ಟಪ್ಪಯ್ಯ ಅವರು ಮಾಡಿದ ಈ ವಿಶಿಷ್ಟ ಪಂಚ ಲೋಹದ ಪಾದರಸದ ಲಿಂಗ 'ಶ್ರೀ ಮಹಾಲಿಂಗೇಶ್ವರ' ಹೆಸರಿನಿಂದ ಪೂಜಿಸಲ್ಪಡುತ್ತಿದೆ.[8] ರಸಲಿಂಗಗಳಲ್ಲೆಲ್ಲ ಇವೇ ಅತಿ ದೊಡ್ಡದು ಮತ್ತು ಪಂಚಲೋಹದ ಹೊದಿಕೆಯಿಂದ ಕೂಡಿ ವಿಶಿಷ್ಟವಾದದ್ದು ಎಂದು ಎಲ್ಲಾ ರಸವೈದ್ಯರು ಅಭಿಪ್ರಾಯಪಟ್ಟಿದ್ದಾರೆ. ಬಿಷ್ಟಪ್ಪಯ್ಯ ಅವರು ಔಷಧೀಯ ದೃಷ್ಟಿಯಿಂದ ಈ ರಸಲಿಂಗವನ್ನು ನಿರ್ಮಿಸಿದ್ದಾರೆ. ಆ ಲಿಂಗಕ್ಕೆ ಅಭಿಷೇಕ ಮಾಡಿದ ತೀರ್ಥ ಔಷಧೀಯ ಗುಣ ಹೊಂದುತ್ತದೆ. ಮತ್ತು ಆಗಾಗ ಅದರಿಂದ ಸ್ರಾವವಾಗುವ ಅಲ್ಪ ಪ್ರಮಾಣದ ಪಾದರಸಕ್ಕೂ ಔಷಧಿಯ ಗುಣವಿದೆ ಎಂಬುದು ಎಲ್ಲಾ ಆಯುರ್ವೇದ ತಜ್ಞರ ಅಭಿಮತ.[9]

ಧಾರ್ಮಿಕವಾಗಿಯೂ ರಸಲಿಂಗಕ್ಕೆ ವಿಶೇಷ ಮಹತ್ವವಿದ್ದು, "ರಸಲಿಂಗ ಸಮಂ ಲಿಂಗಂ ನಾಸ್ತಿನ ಶ್ರೂಯತೇ ಪಿ ಚ 1 ರಸಲಿಂಗಂ ಶಿವಃ ಸಾಕ್ಷಾತ್ ಸಚ್ಚಿದಾನಂದ ಲಕ್ಷಣಃ" ಎಂದು ಶಿವರಹಸ್ಯದಲ್ಲಿ ಹೇಳಿದೆ.[10]

ಈ ಮಹಾ(ರಸ)ಲಿಂಗ ಬಿಷ್ಟಪ್ಪಯ್ಯ ಅವರು ಆಯುರ್ವೇದ, ರಸಶಾಸ್ತ್ರ, ಲೋಹಶಾಸ್ತ್ರ ಮತ್ತು ಅಧ್ಯಾತ್ಮ ವಿದ್ಯೆಯಲ್ಲಿ ಗಳಿಸಿದ್ದ ಪಾರಮ್ಯಗಳಿಗೆಲ್ಲ ಜೀವಂತ ಸಾಕ್ಷಿಯಾಗಿ ನಿಂತಿದೆ.

ಈ ಮಹಾಲಿಂಗೇಶ್ವರನಿಗೆ 'ಸಿಂಹಾಸನ ಮಂಟಪ' ಹೆಸರಿನ ಪೀಠವೊಂದಿದ್ದು, ಅದನ್ನು ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕಿನ, ಬಮ್ಮಿಗಟ್ಟಿ ಗ್ರಾಮದ

ದೇಶಕುಲಕರ್ಣಿ ಎಂಬ ಭಕ್ತರೊಬ್ಬರು ಕ್ರಿ.ಶ. 1635ರಲ್ಲಿ ಮಾಡಿಸಿಕೊಟ್ಟಿದ್ದಾಗಿ ಆ ಮಂಟಪದ ಮೇಲಿರುವ ಶಾಸನ ತಿಳಿಸುತ್ತದೆ.[10a] ಅಂದರೆ ಬಿಷ್ಟಪ್ಪಯ್ಯ ಅವರು ತಮ್ಮ 28ನೆಯ ವಯಸ್ಸಿನಲ್ಲಾಗಲೇ ಧಾರ್ಮಿಕನಾಯಕರಾಗಿ ಆಸುಪಾಸಿನ ಜಿಲ್ಲೆಗಳಲ್ಲಿ ಕೂಡ ವಿಶೇಷ ಪ್ರಭಾವ ಬೀರಿದ್ದರೆಂದು ಊಹಿಸಬಹುದು. ಕಲಘಟಗಿ ತಾಲ್ಲೂಕಿನ ಅರೆ ಬಸವನಕೊಪ್ಪ ಮತ್ತು ಅಂಬ್ಲಿಕೊಪ್ಪ ಗ್ರಾಮಗಳಲ್ಲೂ ಬಿಷ್ಟಪ್ಪಯ್ಯ ನಿರ್ಮಿಸಿದ ಈಶ್ವರನ ಗುಡಿಗಳಿದ್ದು, ಅವು ಈಗ ಬಿಷ್ಟೇಶ್ವರ ಗುಡಿ ಎಂದೇ ಅರ್ಚಿಸಲ್ಪಡುತ್ತವೆ ಮತ್ತು ಈ ಎರಡೂ ಹಳ್ಳಿಗಳೂ ಬಿಷ್ಟಪ್ಪಯ್ಯ ವಂಶಸ್ಥರ ಇನಾಂ ಹಳ್ಳಿಗಳಾಗಿವೆ.

ಬಿಷ್ಟಪ್ಪಯ್ಯ ಅವರ ಕಾರ್ಯಗಳನ್ನೆಲ್ಲ ವಿವರಿಸುವ ಅವರ ಶತನಾಮ ಸ್ತೋತ್ರಗಳು ಲಭ್ಯ ಇದ್ದು, ಅವುಗಳಲ್ಲಿ 'ವಂಧ್ಯಾ ಸಂತಾನ ಫಲದಃ/ಖರ ಶಾಪ ವಿಮೋಚಕಃ' ಕೂಡ ಒಂದು.[11] ಅದರ ಪುರಾವೆ ನಮಗೆ ಕಲಘಟಗಿ ತಾಲ್ಲೂಕಿನ ಭೋಗೆ ನಾಗರಕೊಪ್ಪದಲ್ಲಿ ಸಿಗುತ್ತದೆ.

ಅದರ ಇಂದಿನ ಧರ್ಮದರ್ಶಿಗಳಾದ ಬಸವಂತರಾವ ಕೃಷ್ಣಾಜಿ, ದೇಶ ಕುಲಕರ್ಣಿ ಹಂಪಿಯಿಂದ ವಲಸೆ ಹೋದವರೆಂದೂ ಅವರಲ್ಲಿ ಒಬ್ಬರಿಗೆ ಸಂತಾನ ಇಲ್ಲದಾಗ, ಭಗ್ನವಾಗಿದ್ದ ಗುಡಿಗಳನ್ನೆಲ್ಲಾ ಪುನರ್ನಿರ್ಮಿಸುತ್ತ ಸಂಚಾರ ಕೈಗೊಂಡಿದ್ದ ಬಿಷ್ಟಪ್ಪಯ್ಯ ಅವರು ಅಲ್ಲಿಯ ದಿಬ್ಬದಲ್ಲಿ ಹುದುಗಿದ್ದ ಒಂದು ನಂದಿಯನ್ನು ಹೊರತೆಗೆದು ಪುನಃ ಪ್ರತಿಷ್ಠಾಪಿಸಿದರೆಂದೂ ನಂತರ ಅದನ್ನುಪೂಜಿಸತೊಡಗಿದ ದೇಶ ಕುಲಕರ್ಣಿಯವರಿಗೆ ಮಕ್ಕಳಾದವೆಂದೂ ಹೇಳುತ್ತಾರೆ. ಆ ನಂದೀಶ್ವರ ಇಂದಿಗೂ 'ಸಂತಾನ ಬಸಪ್ಪ' ಎಂದೇ ಪ್ರಸಿದ್ಧನಾಗಿದ್ದು, ಸಂತಾನ ಬಯಸಿ ಭಕ್ತರು ಕಟ್ಟಿದ ಹರಕೆ ತೊಟ್ಟಿಲುಗಳು ಗುಡಿಯ ತುಂಬ ಕಾಣಿಸುತ್ತವೆ. ನಂದೀಶ್ವರ ಎದುರಿನಲ್ಲಿರುವ ಬೆಳ್ಳಿಯ ಪಾದುಕೆಗಳು ಬಿಷ್ಟಪ್ಪಯ್ಯ ಅವರ ಪಾದುಕೆಗಳೆಂದೇ ಅರ್ಚಿಸಲ್ಪಡುತ್ತಿವೆ ಮತ್ತು ಬಿಷ್ಟಪ್ಪಯ್ಯ ಅವರು ನಂದೀಶ್ವರ ನನ್ನು ಸ್ಥಾಪಿಸುವಾಗ ಅದರ ಅಡಿಯಲ್ಲಿ ಹಂಪಿಯಿಂದ ಒಯ್ದಿದ್ದ ಒಂದು ಉತ್ಕೃಷ್ಟ ನೃಸಿಂಹ ಸಾಲಿಗ್ರಾಮವನ್ನು ಇಟ್ಟಿದ್ದಾರೆಂದು ಗಟ್ಟಿಯಾದ ಪ್ರತೀತಿ. ಮುಜರಾಯಿ ಇಲಾಖೆಯ ಸಹಯೋಗದಿಂದ ನಡೆಯುತ್ತಿರುವ ಆ ದೇವಸ್ಥಾನದಲ್ಲಿ ಒಮ್ಮೆ ಅಷ್ಟಬಂಧ ಮಾಡಿಸಿದರೆ ಅದರ ಅಡಿಯಲ್ಲಿ ಇದೆ ಎನ್ನಲಾಗುವ ಸಾಲಿಗ್ರಾಮದ ಬಗ್ಗೆ ಬೆಳಕು ಚೆಲ್ಲಬಹುದಲ್ಲದೇ ಹಂಪಿಯ ಇತಿಹಾಸದ ಬಗ್ಗೆಯೂ ಹೆಚ್ಚಿನ ಮಾಹಿತಿ ತಿಳಿಯಬಹುದೆಂದು ಧರ್ಮದರ್ಶಿಗಳು ಅಭಿಪ್ರಾಯವ್ಯಕ್ತಪಡಿಸುತ್ತಾರೆ.[12]

ಪದೇ ಪದೇ ನಡೆಯುತ್ತಿದ್ದ ಮುಸ್ಲಿಂ ದಾಳಿಗಳನ್ನು ಎದುರಿಸಲಾರದೇ ಎರಡನೇ ಶ್ರೀರಂಗರಾಯರೂ 1656ಲ್ಲಿ ಕೆಳದಿ ದೊರೆಯ ಆಶ್ರಯ ಪಡೆದಾಗ ಹಂಪಿ ಪೂರ್ತಿ ಅನಾಥವಾಗುತ್ತದೆ. ಆಗ ಬಿಷ್ಟಪ್ಪಯ್ಯ ಅವರು ವಿದ್ಯಾರಣ್ಯ ಮಠದ ತಾತ್ಕಾಲೀನ ಗುರುಗಳ ಪ್ರೇರಣೆಯ ಮೇರೆಗೆ ಪಂಪಾಪತಿ ಗುಡಿಯ ರಕ್ಷಣೆಗಾಗಿ ಗೋಪುರ ನಿರ್ಮಾಣ ಕಾರ್ಯ ಕೈಗೊಂಡಿದ್ದಾರೆ.[13]

ಎರಡನೆಯ ಅಂತಸ್ತು ಕಟ್ಟುವಾಗ ಅದು ಪದೇ ಪದೇ ಬೀಳುತ್ತಿತ್ತೆಂದೂ ಒಬ್ಬ ಗರ್ಭಿಣಿಯನ್ನು ಬಲಿ ಇತ್ತರೆ ಅದು ಗಟ್ಟಿಯಾಗಿ ನಿಲ್ಲುತ್ತದೆ ಎಂಬ ಅಂದಿನ ದಿನಗಳ ನಂಬಿಕೆಯಂತೆ ಬಿಷ್ಟಪ್ಪಯ್ಯ ಅವರ ಗರ್ಭಿಣಿ ಪತ್ನಿ ಚಿತೆ ಹಾರಿ ಆತ್ಮಾಹುತಿ ಮಾಡಿಕೊಂಡು ಸೂಕ್ಷ್ಮದೇಹದಿಂದ ಗೋಪುರದಲ್ಲಿ ಬಂದು ಕೂರುತ್ತಾರೆ. ನಂತರ ಗೋಪುರ ನಿರ್ಮಾಣ ಮುಂದುವರೆದಿದೆ ಎಂದು ಹಸ್ತಪ್ರತಿಯಲ್ಲಿ,[14] ಮೌಖಿಕ ಪರಂಪರೆಯಲ್ಲಿ,[15] ಪುಸ್ತಕದಲ್ಲಿ[16] ಉಲ್ಲೇಖವಾಗಿದ್ದಕ್ಕೆ ಸಾಕ್ಷಿಯಾಗಿ ಗೋಪುರದ ಒಳಭಾಗದ ಎರಡನೇ ಅಂತಸ್ತಿನಲ್ಲಿ ಗರ್ಭಿಣಿ ಸ್ತ್ರೀಯೊಬ್ಬಳು ಶಿವಪಾರ್ವತಿಯರಲ್ಲಿ ಲೀನಳಾಗುವ ಶಿಲ್ಪವಿದ್ದು, 'ಗೋಪುರದಮ್ಮ' ಹೆಸರಿನಿಂದ ಪೂಜಿಸಲ್ಪಡುತ್ತದೆ. ಬಿಷ್ಟಪ್ಪಯ್ಯ ಮನೆತನದ ದೇವತೆಯ ಹೆಸರೂ ಗೋಪುರದಮ್ಮ.[17]

ಗೋಪುರದ ಶಿಖರದ ಪ್ರತಿಬಿಂಬ ತಲೆಕೆಳಗಾಗಿ ಮೂಡುವಂತೆ, ನಿರ್ದಿಷ್ಟ ಸಮಯದಲ್ಲಿ ಪಂಪಾವತಿಯ ಮೇಲೆ ಸೂರ್ಯಕಿರಣ ಬೀಳುವಂತೆ ಮಾಡಿರುವ ವ್ಯವಸ್ಥೆಗಳು ಬಿಷ್ಟಪ್ಪಯ್ಯ ಅವರ ವೈಜ್ಞಾನಿಕ ಮನೋಭಾವನೆಯನ್ನು ಬಿಂಬಿಸುತ್ತದೆ.

ಗೋಪುರದ ಪಕ್ಕದಲ್ಲಿರುವ ಶಿಲಾಶಾಸನ ಕೃಷ್ಣದೇವರಾಯ 1510 ರಲ್ಲಿ ಹಿರಿಗೋಪುರವನ್ನು ಜೀರ್ಣೋದ್ಧಾರ ಮಾಡಿಸಿದನೆಂದು ಹೇಳುತ್ತದೆ. (*S.I.I.*IV. ನಂ. 259). ಅಂದರೆ ಆ ಮೊದಲೇ ಅದೇ ಸ್ಥಲದಲ್ಲಿ ಒಂದು ಹಿರಿ ಗೋಪುರವಿತ್ತು. ಸಾಮ್ರಾಜ್ಯ ಪತನಾನಂತರದ ನೂರು ವರ್ಷಗಳ ನಿರ್ಲಕ್ಷ್ಯದಿಂದಾಗಿ ಆ ಗೋಪುರ ಪೂರ್ತಿ ಜೀರ್ಣವಾಗಿ ಗುಡಿಗೆ ರಕ್ಷಣೆ ನೀಡಲು ಅಸಮರ್ಥವಾಗಿತ್ತು. ಹೀಗಾಗಿ ಬಿಷ್ಟಪ್ಪಯ್ಯ ಅವರು ಅದನ್ನು ಪೂರ್ತಿ ನೆಲಸಮಗೊಳಿಸಿ ಅದೇ ಸ್ಥಳದಲ್ಲಿ ಈ ಭದ್ರವಾದ ರಕ್ಷಣಾತ್ಮಕ ಗೋಡೆಯಿಂದ ಕೂಡಿದ ಈ ಗೋಪುರ ನಿರ್ಮಿಸಿದ್ದಾರೆಂದು ಎಲ್ಲಾ ಇತಿಹಾಸ ತಜ್ಞರ ಅಭಿಮತ.[18] ಬಿಷ್ಟಪ್ಪಯ್ಯ ಅವರ ವಂಶಾವಳಿ ಲಭ್ಯವಿದ್ದು, ಅದರಲ್ಲಿ ಅವರ ಪುತ್ರ ಶಿವಪ್ಪಯ್ಯ ಕ್ರಿ.ಶ. 1658ರಲ್ಲಿ ಹುಟ್ಟಿದರೆಂದೂ, ತಾಯಿ ದೇಹತ್ಯಾಗ ಮಾಡಿದಾಗ ಐದು ವರ್ಷದವರಿದ್ದರೆಂದೂ ಉಲ್ಲೇಖವಾಗಿದೆ. ಅದರ ಆಧಾರದಿಂದ ಗೋಪುರ ನಿರ್ಮಾಣ 1663ರಲ್ಲಿ ಆರಂಭವಾಗಿದೆ ಎಂದು ಊಹಿಸಬಹುದು. ಹಸ್ತಪ್ರತಿಯ 28.... 32ನೆಯ ಸಾಲುಗಳಲ್ಲಿ ಹೇಳಿದಂತೆ ಗೋಪುರದ ಒಂದು ತೊಲೆ ಸೀಳು ಬಿಟ್ಟಿತು. ಬಿಷ್ಟಪ್ಪಯ್ಯ ಅದನ್ನು 'ವಿಭೂತಿ' ಹಚ್ಚಿ ಭದ್ರಪಡಿಸಿದರು ಎಂಬುದಕ್ಕೆ ಒಂದು ತೊಲೆಯಲ್ಲಿ ಈಗಲೂ ಕುರುಹು ಸಿಗುತ್ತದೆ.

ಜಾರ್ಜ್ ಮಿಶಿಲ್ ತಮ್ಮ Vijayanagara Progress of Research 87-88 ರಲ್ಲಿ ಈ ಅಂಶವನ್ನು ಗಮನಿಸಿದ್ದು ನಂತರ ನಿರ್ಮಾಣದ ತಂತ್ರ ಬದಲಾದದ್ದನ್ನೂ ಉಲ್ಲೇಖಿಸಿದ್ದಾರೆ ಮತ್ತು ಗೋಪುರ ಕೃಷ್ಣದೇವರಾಯರ ಕಾಲಕ್ಕಿಂತ ಮುಂಚೆ ಆಗಿದೆ ಎಂಬ ಮಾತನ್ನು ಅಲ್ಲಗಳೆದಿದ್ದಾರೆ.[19]

ಬಿಷ್ಟಪ್ಪಯ್ಯ ಒಬ್ಬ ದೊಡ್ಡ ಶಿವಭಕ್ತರಾದ್ದರಿಂದ ಏಕಾದಶ ರುದ್ರರ ಸಂಕೇತವಾಗಿ ಗೋಪುರವನ್ನು ಹನ್ನೊಂದು ಅಂತಸ್ತಿನಲ್ಲಿ ನಿರ್ಮಿಸಿದ್ದಾರೆಂದೂ [20] ಮತ್ತು ರಸವೈದ್ಯರೂ ತಮ್ಮ ಆಧ್ಯಾತ್ಮಿಕ ಸಾಧನೆಗಳ ಅಳತೆಗೋಲಾಗಿ ತಾವು ನಿರ್ಮಿಸಿದ ಮಹಲುಗಳ ಅಂತಸ್ತು ನಿರ್ಧರಿಸುತ್ತಿದ್ದರೆಂದೂ ತಿಳಿದುಬರುತ್ತದೆ.

ಸೇವೆಗೆಂದು ಇದ್ದ ಗೋಣ್ಯಪ್ಪ ಎಂಬ ಬೇಡ ಜಾತಿಯ ಬಾಲಕನನ್ನು ಶಿಷ್ಯನನ್ನಾಗಿ ಸ್ವೀಕರಿಸಿ [21] ತಮ್ಮ ಅಮೂಲ್ಯವಾದ ಯೋಗ, ಆಧ್ಯಾತ್ಮ ವಿದ್ಯೆಯನ್ನು ಹೇಳಿಕೊಟ್ಟು ಆತನನ್ನೂ ಒಬ್ಬ ದೊಡ್ಡ ಧಾರ್ಮಿಕ ಮುಖಂಡನನ್ನಾಗಿ ಬೆಳೆಸಿದ್ದನ್ನು ನೋಡಿದರೆ ಬಿಷ್ಟಪ್ಪಯ್ಯ ಅವರು ಅಂದಿನ ಕಟ್ಟಾ ವೈದಿಕ ಬ್ರಾಹ್ಮಣರಂತಲ್ಲದೇ ಜಾತಿಗಳನ್ನು ಮೀರಿದ ವಿಶಾಲ ಮನೋಭಾವದ ಬ್ರಾಹ್ಮಣ ಎಂದು ಗೊತ್ತಾಗುತ್ತದೆ. ಗೋಪುರ ಕಟ್ಟುವ ಸಮಯದಲ್ಲಿ ಬಿಷ್ಟಪ್ಪಯ್ಯ ಅವರು ವಾಸಿಸುತ್ತಿದ್ದ ರಂಗಾಪುರದ ಆಚೆ ದಡದಲ್ಲಿರುವ ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಗುಮ್ಮಗೋಳದಲ್ಲಿ ಬಿಷ್ಟಪ್ಪಯ್ಯ ಅವರ ಯೋಜನೆಯಂತೆ [22] ನಿರ್ಮಿಸಿದ ವಿಶಿಷ್ಟ ಶಿವಮಂದಿರ ಈಗ `ಗೋಣಿ ಬಸವೇಶ್ವರ ಮಠ' ಎಂದೆ ಹೆಸರಾಗಿದೆ.[23]

ಗರ್ಭಗುಡಿಯ ಒಂದು ಬದಿಯ ಗೋಡೆಯ ಮೇಲೆ ವ್ಯಕ್ತಿಯೊಬ್ಬರು ಧ್ಯಾನಕ್ಕೆ ಕುಳಿತಿರುವ ಉಬ್ಬು ಶಿಲ್ಪವಿದ್ದು, ಆ ಮಠದ ಪೂಜಾರಿಗಳು. ಬಿಷ್ಟಪ್ಪಯ್ಯ ಅವರ ವಂಶಸ್ಥರು ಮತ್ತು ಭಕ್ತರಿಂದ ತಲೆತಲಾಂತರದಿಂದ `ಬಿಷ್ಟಪ್ಪಯ್ಯನವರು' ಎಂಬ ಭಾವನೆಯಿಂದಲೇ ಪೂಜಿಸಲ್ಪಡುತ್ತದೆ.

ಬಿಷ್ಟಪ್ಪಯ್ಯ ಅವರಿಂದ ಕಲಿತ ವಿದ್ಯೆಯಿಂದ ಅಪಾರ ಜನಪ್ರಿಯತೆ ಪಡೆದ ಗೋಣಿಸ್ವಾಮಿ ಅದರಿಂದುಂಟಾದ ಗರ್ವದಿಂದ ಹುಲಿಯ ಮೇಲೇರಿ ಅವರಿದ್ದೆಡೆ ಬಂದನೆಂದೂ ಗೋಣಿಸ್ವಾಮಿಯ ಮನೋಭಾವನೆಯನ್ನರಿತ ಬಿಷ್ಟಪ್ಪಯ್ಯ ಅವರು ಅಲ್ಲಿಯೇ ಇದ್ದ ಗೋಡೆಯನ್ನೇರಿ ವೇಗವಾಗಿ ಚಲಿಸಿ ಶಿಷ್ಯನ ಗರ್ವ ಹರಣ ಮಾಡಿದರೆಂದು ಪುಸ್ತಕದಲ್ಲಿ ಮತ್ತು ಅವರಿಗೆ ಸಂಬಂಧಿಸಿದ ಪ್ರತಿಯೊಂದು ಸ್ಥಳದಲ್ಲೂ ಇರುವ ಮೌಖಿಕ ಪರಂಪರೆಯಲ್ಲಿ ಈ ಘಟನೆ ದಾಖಲಾಗಿದೆ.[24]

ಇದೇ ಗುಮ್ಮಗೋಳದ ಮಠದ ಮಧ್ಯೆ ಇರುವ ಕಲ್ಯಾಣಿಯ ಸುತ್ತ ಇರುವ 64 ಶಿಲ್ಪಗಳಲ್ಲಿ ಒಬ್ಬ ವ್ಯಕ್ತಿ ಗೋಡೆಯ ಮೇಲೂ, ಎದುರಿನಲ್ಲಿ ಒಬ್ಬ ವ್ಯಕ್ತಿ ಹುಲಿಯ ಕುಳಿತಿರುವ ಎರಡು ಶಿಲ್ಪಗಳಿವೆ. [25] ಅವು ಬಿಷ್ಟಪ್ಪಯ್ಯ ಮತ್ತು ಗೋಣಿ ಬಸವೇಶ್ವರರನ್ನು ಸಂಕೇತಿಸುತ್ತವೆ ಎಂದು ಆ ಮಠದ ಪೂಜಾರಿಗಳೂ, ಸುತ್ತಮುತ್ತಲಿನ ಹಳ್ಳಿಯ ಹಿರಿಯರೂ ಹೇಳುತ್ತಾರೆ.

ಬಿಷ್ಟಪ್ಪಯ್ಯ ಅವರಿಗೆ ವಾಸ್ತುಶಿಲ್ಪದಲ್ಲಿ [26] ಇದ್ದ ಪಾಂಡಿತ್ಯಕ್ಕೆ ಹಂಪಿಯ ಗೋಪುರ ವಷ್ಟೇ ಅಲ್ಲದೇ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಹನಸಿಯಲ್ಲಿ ಅವರು ನಿರ್ಮಿಸಿದ ಗುಡಿ ಮತ್ತು ಉಗುಮ್ಮಗೋಳದ ಶಿವ ಮಂದಿರಗಳೂ ಪೂರಕ ಸಾಕ್ಷಿಯಾಗಿ ನಿಂತಿವೆ.

ಬಿಷ್ಟಪ್ಪಯ್ಯ ಅವರು ಕೊನೆಯವರೆಗೆ ಬಾಳಿದ ಹೂವಿನಹಡಗಲಿ ತಾಲ್ಲೂಕಿನ ನದಿ ತಟದ ಹಳ್ಳಿ ರಂಗಾಪುರ, ಆಚೆ ದಡದ ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಬಿದಿರಹಳ್ಳಿ, ವಿಠ್ಠಲಾಪುರಗಳಲ್ಲಿರುವ ಕಲ್ಯಾಣ ಚಾಲುಕ್ಯರ ಕಾಲದ ಎಲ್ಲ ಗುಡಿಗಳನ್ನು ಜೀರ್ಣೋದ್ಧಾರಗೊಳಿಸಿದ್ದು, ಪುನರ್ನಿರ್ಮಿಸಿದ್ದು ತಿಳಿದುಬರುತ್ತದೆ. [27]

ಆ ಸಮಯದಲ್ಲಿಯೇ ವಿಠ್ಠಲಾಪುರದಲ್ಲಿ ಗುಡಿ ಕಟ್ಟಿಸಿ ವಿಠ್ಠಲಮೂರ್ತಿಯನ್ನು ಸ್ಥಾಪಿಸಿದರೆಂದು ಉಲ್ಲೇಖವಾಗಿದೆ.[28] 'ವಿಠ್ಠಲಾಪುರ' ಗ್ರಾಮ ನಾಮದ ಉಲ್ಲೇಖ ದಾಖಲೆಗಳಲ್ಲಿ ಸಿಗುವುದೇ 17ನೆ ಶತಮಾನದಲ್ಲಿ.[29] ಅಂದರೆ ಬಿದಿರಹಳ್ಳಿಯಿಂದ ಬರೀ ಮೂರು ಕಿ.ಮೀ. ದೂರದಲ್ಲಿರುವ ಈ ಹಳ್ಳಿ ಮುಂಚೆ ಅದರದ್ದೇ ಒಂದು ಭಾಗವಾಗಿದ್ದು, ವಿಠ್ಠಲನನ್ನು ಸ್ಥಾಪಿಸಿದ ನಂತರ ವಿಠ್ಠಲಾಪುರ ಆಗಿದೆ ಎಂಬುದು ಸ್ಪಷ್ಟ. ಅಲ್ಲದೇ ರಂಗಾಪುರದಲ್ಲಿ ಬಿಷ್ಟಪ್ಪಯ್ಯ ಅವರ ಸುಪರ್ದಿನಲ್ಲಿದ್ದ ಪ್ರಸಿದ್ಧ ನರಸಿಂಹ ಗುಡಿಯಲ್ಲಿ ತಮ್ಮ ಮೂಲ ನೆಲೆಯನ್ನು ಕಳೆದುಕೊಂಡು ಇಲ್ಲಿ ಬಂದು [30] ಕುಳಿತಂತೆ ತೋರುವ ಗಣಪತಿ, ಲಕ್ಷ್ಮೀ, ಸೂರ್ಯನಾರಾಯಣ, ಕಾಲಭೈರವೇಶ್ವರ, ಪ್ರಹ್ಲಾದ ಮುಂತಾದ ವಿಗ್ರಹಗಳು ಗಾರೆಗಚ್ಚಿನಿಂದ ಬಂಧಿಸಲ್ಪಟ್ಟಿದ್ದು ಮೊದಲ ಬಾರಿಗೆ ನೋಡುವವರಿಗೆ ಅಚ್ಚರಿ ಹುಟ್ಟಿಸುತ್ತವೆ.

ರಂಗಾಪುರದಿಂದ 15 ಕಿ.ಮೀ. ದೂರದಲ್ಲಿರುವ ಹೊಳಲಿನ ಪುಟ್ಟ ಗುಡಿಯಲ್ಲಿ ಯೋಗ ನಿದ್ರಾಭಂಗಿಯಲ್ಲಿದ್ದ ಅನಂತಶಯನನ ಭವ್ಯ ವಿಗ್ರಹ ಇತ್ತು. ಈಚೆಗೆ ಆ ಗುಡಿಯನ್ನು ಪುನರ್ನಿರ್ಮಿಸಿ ಆತನ ಗಾತ್ರಕ್ಕೆ ತಕ್ಕದಾದ ದೊಡ್ಡ ಗರ್ಭಗುಡಿ ನಿರ್ಮಿಸಿದ್ದಾರೆ. ಹಂಪಿಯ ಅನಂತಶಯನನ ವಿಗ್ರಹವೇ ಇಲ್ಲಿಗೆ ಬಂದಿದೆ ಎಂದು ಜನರು ಹೇಳುತ್ತಾರೆ.[31]

ಈ ಎಲ್ಲ ಸಾಂದರ್ಭಿಕ ಸಾಕ್ಷ್ಯಾಧಾರಗಳಿಂದ ಬಿಷ್ಟಪ್ಪಯ್ಯ ಅವರೇ ಗೋಪುರ ನಿರ್ಮಿಸುವ ಕಾಲಕ್ಕೆ ಹಂಪಿಯಲ್ಲಿ ಭಗ್ನವಾಗದೇ ಉಳಿದಿದ್ದ ಎಲ್ಲ ವಿಗ್ರಹಗಳನ್ನು ತಮ್ಮೊಡನೆ ಒಯ್ದಿದ್ದಾರೆ. ಮತ್ತು ವಿಠ್ಠಲನನ್ನು ವಿಠ್ಠಲಾಪುರದಲ್ಲೂ, ಅನಂತಶಯನನ್ನು ಹೊಳಲಿನಲ್ಲೂ ಮತ್ತು ಅಶ್ವತ್ಥನಾರಾಯಣನನ್ನು ಬಿದಿರಹಳ್ಳಿ ಸ್ಥಾಪಿಸಿ ಉಳಿದವುಗಳನ್ನು ರಂಗಾಪುರದ ನೃಸಿಂಹ ದೇವಸ್ಥನದಲ್ಲಿ ಸಂರಕ್ಷಿಸಿ ಇಟ್ಟುಕೊಂಡಿದ್ದಾರೆ ಎಂದು ಇತಿಹಾಸ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.[32]

ರಾಜರಿಗೆ ಗುಡಿ ಗೋಪುರಗಳನ್ನು ನಿರ್ಮಿಸುವುದು ಭಕ್ತಿಯ ಜೊತೆಗೆ ಪ್ರತಿಷ್ಠೆಯ ಸಂಕೇತವೂ ಆಗಿರುತ್ತಿತ್ತು. ಅಲ್ಲಿ ತಮ್ಮ ಹೆಸರನ್ನು ಕೆತ್ತಿಸುತ್ತಿದ್ದರು. ಆದರೆ ಆ ಎಲ್ಲ

ಕೆಲಸಗಳು ಕೇವಲ ಈಶ ಸೇವೆ-ಜನಸೇವೆ ಮಾತ್ರ ಎಂದು ಭಾವಿಸಿದ್ದ ಮಹಾ ದಾರ್ಶನಿಕ ಬಿಷ್ಟಪ್ಪಯ್ಯ ಅವರು ತಾವು ನಿರ್ಮಿಸಿದ ಗೋಪುರ, ಗುಮ್ಮಗೋಳದ ಮಠ, ಸೋಗಿ, ಹನಸಿಯ ಗುಡಿ ಮುಂತಾದ ಯಾವ ನಿರ್ಮಾಣದಲ್ಲೂ ತಮ್ಮ ಹೆಸರನ್ನು ಬರೆಯಿಸಲಿಲ್ಲ.

ಸ್ವಂತ ರಾಜರೇ ಮುಸ್ಲಿಂ ದಾಳಿಯನ್ನು ಎದುರಿಸಲಾರದೇ ಪರರಾಜರ ಆಶ್ರಯ ಪಡೆದಾಗ,[33] ಪಂಪಾಪತಿಯ ಗುಡಿಯ ರಕ್ಷಣೆಗೆಂದು ಒಬ್ಬ ಬ್ರಾಹ್ಮಣ ಯೋಗಿ ಭವ್ಯ ಗಗನ ಚುಂಬಿ ದ್ವಾರ ಗೋಪುರ ನಿರ್ಮಿಸಿದ್ದೂ, ಅವರ ಗರ್ಭಿಣಿ ಪತ್ನಿ ಲಕ್ಷಾಂಬೆಯವರು ಗೋಪುರಕ್ಕಾಗಿ ಆತ್ಮಾಹುತಿ ನೀಡಿದ್ದೂ ಮತ್ತೂ ಹತ್ತು ಹಲವು ವಿಧಾನಗಳ ಮೂಲಕ ಅಂದಿನ ವಿಷಮ ಪರಿಸ್ಥಿತಿಯಲ್ಲಿ ಸಮಾಜಕ್ಕೆ ಭದ್ರತೆ ನೀಡಿದ್ದು, ಅಂದಿನ ಸಂದರ್ಭದಲ್ಲಿ 'ಅತಿಮಾನುಷ, ಅಸಾಮಾನ್ಯ' ಅನಿಸಿರಲಿಕ್ಕೆ ಸಾಕು. ಅಂದು ಜನತೆ ಬಿಷ್ಟಪ್ಪಯ್ಯ ಅವರನ್ನು ದೈವಾಂಶಸಂಭೂತ, ಪಂಪಾಪತಿಯ ಅಪರಾವತಾರ ಎಂದೇ ಭಾವಿಸಿ ಪೂಜಿಸತೊಡಗಿದ್ದರು.[34]

ಬಿಷ್ಟಪ್ಪಯ್ಯ ಅವರ ಕಾರ್ಯಗಳನ್ನೆಲ್ಲ ಮುಂದುವರಿಸಿದ ಅವರ ಮೊಮ್ಮಗನಿಗೆ ಮಹಾದೇವಪ್ಪಯ್ಯ ಅವರಿಗೆ ಅವರ ಕಾರ್ಯಗಳನ್ನೂ ಸ್ಮರಿಸಿ ಹಲವಾರು ಬಿರುದು, ಸನ್ಮಾನಗಳು ಸಂದಿವೆ. ಶೃಂಗೇರಿಯ ತತ್ಕಾಲೀನ ಮಠಾಧೀಶರಿಂದ ಕ್ರಿ.ಶ. 1739 ಸಾಧಾರಣ ನಾಮ ಸಂವತ್ಸರದಲ್ಲಿ ಆ ಪೀಠಕ್ಕೆ ಸಮಾನವಾದ ಮಾನ ಸನ್ಮಾನ ಗಳೊಡನೆ 60 ಬಿರುದುಗಳು, ಸವಣೂರಿನ ಶ್ರೀ ಸತ್ಯಬೋಧ ಸ್ವಾಮಿಗಳಿಂದ 'ಮಹಾಪುರುಷ ಸಂಸ್ಥಾನ ರಂಗಾಪುರ' ಬಿರುದು ಮತ್ತು ರಂಗಾಪುರ ಹಳ್ಳಿಯ ಇನಾಂ ಸೇರಿದಂತೆ ಉತ್ತರ ಕರ್ನಾಟಕದ ಹಲವಾರು ಸಂಸ್ಥಾನಿಕರಿಂದ ದೊರೆತ ಹಲವಾರು ಸನ್ಮಾನ ಪತ್ರಗಳನ್ನು ಅವರ ವಂಶಸ್ಥರಲ್ಲಿ ಇಂದಿಗೂ ನೋಡಬಹುದು. ಆ ಪತ್ರಗಳೆಲ್ಲ ಬಿಷ್ಟಪ್ಪಯ್ಯ ಅವರನ್ನು 'ಶ್ರೀ ವಿರೂಪಾಕ್ಷಾವತಾರಿ' ಎಂದೇ ಸಂಭೋಧಿಸಿವೆ.

ಉತ್ತರ ಕರ್ನಾಟಕವಷ್ಟೇ ಅಲ್ಲದೇ ಶಿವಮೊಗ್ಗ ಜಿಲ್ಲೆಯ ಹಲವಾರು ವಿಶೇಷವಾಗಿ ನಾಡಿಗ್, ನಾಡಿಗೇರ್ ಕುಟುಂಬದಲ್ಲಿ 'ಬಿಷ್ಟಪ್ಪಯ್ಯ' ಹೆಸರು ಸಾಮಾನ್ಯವಾಗಿದೆ [35] ಮತ್ತು ಹಲವು ಕುಟುಂಬಗಳು ಇಂದಿಗೂ ಭಾದ್ರಪದ ಶುಕ್ಲ ಬಿದಿಗೆಯಂದು ಅವರ ಆರಾಧನೆಯನ್ನು ಆಚರಿಸುತ್ತದೆ. ಈ ಎಲ್ಲ ಕುಟುಂಬಗಳೂ ಹಂಪಿಯಿಂದ ವಲಸೆ ಹೋಗಿರುವುದಾಗಿ ತಿಳಿದುಬರುತ್ತದೆ.[36] ಎಲ್ಲ ಪಂಚಾಂಗ, ಕ್ಯಾಲೆಂಡರ್‌ಗಳಲ್ಲಿ ಭಾದ್ರಪದ ಶುಕ್ಲ ಬಿದಿಗೆಯನ್ನು ಬಿಷ್ಟಪ್ಪಯ್ಯ ಅವರ ಆರಾಧನೆ ಎಂದು ನಮೂದಿಸುತ್ತಾರೆ.[37]

ಹಂಪಿಯ ಪಂಪಾಪತಿಯ ವಿಶೇಷ ಉತ್ಸವಗಳಲ್ಲಿ ಮಾತ್ರ ತೆರೆಯುವ ಅದರ ಪೂರ್ವದ ಬಾಗಿಲನ್ನು, ಬಿಷ್ಟಪ್ಪಯ್ಯ ಅವರು ಗೋಪುರ ಕಟ್ಟಿಸಿದ್ದರ ಗೌರವಾರ್ಥವಾಗಿ ಅವರ ವಂಶಜರು ಬಿಷ್ಟಪ್ಪಯ್ಯ ನಿರ್ಮಿಸಿದ ರಸಲಿಂಗದೊಡನೆ ಬಂದಾಗ ಅವರಿಗೂ

ತೆರೆಯಬೇಕು. ಆಗ ಒಂದು ವಿಶಿಷ್ಟ ಪೂಜೆ, ಉತ್ಸವ, ಅನ್ನ ಸಂತರ್ಪಣೆ ನಡೆಸಬೇಕೆಂಬ ನಿಯಮ ಇದೆ.[38]

ಬಿಷ್ಟಪ್ಪಯ್ಯ ಅವರು ಗೋಪುರ ನಿರ್ಮಿಸುವ ಕಾಲಕ್ಕೆ ಹಂಪಿಯಲ್ಲಿನ ಇನ್ನೂ ಹಲವಾರು ಗುಡಿ ಗೋಪುರಗಳ ಜೀರ್ಣೋದ್ಧಾರ ಮಾಡಿದ್ದು ಪುಸ್ತಕದಲ್ಲಿ ದಾಖಲಾಗಿದೆ. ಅದರ ಕುರುಹು ನಮಗೆ ಎರಡನೆಯ ಚಿಕ್ಕಗೋಪುರದಲ್ಲಿ, ಕನಕಗಿರಿ ಗೋಪುರದ ಎದುರಿನಲ್ಲಿರುವ ಉತ್ತರದ ದ್ವಾರಗಳಲ್ಲಿ ಸಿಗುತ್ತದೆ.

ಆದ್ಯ ಬಿಷ್ಟಪ್ಪಯ್ಯ ಅವರಿಂದ ಹತ್ತನೆಯ ತಲೆಮಾರಿನ ಮೇವುಂಡಿಯ ಬಿಷ್ಟಪ್ಪಯ್ಯ ಮಹಾಪುರುಷ ಅವರ ಮಗಳಾದ ನಾನು ಬಿಷ್ಟಪ್ಪಯ್ಯ ಅವರನ್ನು ಕುರಿತು ಕೇಳಿ ತಿಳಿದಿದ್ದ ಕಾರ್ಯಗಳ ಬಗ್ಗೆ ಸಂಶೋಧನೆ ಕೈಗೊಂಡು ಇಷ್ಟು ವಿಷಯಗಳನ್ನು ಸಾಕ್ಷ್ಯಾಧಾರಗಳ ಮೂಲಕ ಪ್ರಸ್ತುತಪಡಿಸಿದ್ದೇನೆ.

ಆದರೆ, ಅವರಿಂದ ಮತ್ತು ಮುಂದೆ ಅವರ ಮೊಮ್ಮಗನಿಂದ ಇನ್ನೂ ಹಲವಾರು ಮಹತ್ಕಾರ್ಯಗಳು ನಡೆದಿದ್ದು, ಈಚಿನ ಅಧ್ಯಯನದಿಂದ ತಿಳಿದುಬರುತ್ತಿದೆ. ಆಸಕ್ತ ವಿದ್ಯಾರ್ಥಿಗಳು, ಇತಿಹಾಸ ತಜ್ಞರು ಇದರೆಡೆಗೆ ಗಮನಹರಿಸಿ, ಆ ಎಲ್ಲ ಕಾರ್ಯಗಳ ಬಗ್ಗೆ ಬೆಳಕು ಚೆಲ್ಲಿದರೆ ಹಂಪಿಯ ವಿಜಯ ನಗರೋತ್ತರ ವಿಷಯಗಳ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿ ಸಿಕ್ಕೀತೆಂದು ನನ್ನ ಆಶಯ ಮತ್ತು ಆ ದಿಶೆಯಲ್ಲಿ ಇದು ನನ್ನ ಪುಟ್ಟ ಪ್ರಯತ್ನ.

ಆಕರಗಳು

ಅನುಸೂಚಿ

ಲೇ: ಆಪಟೆ ಅನಂತರಾಯರು

1 ಮತ್ತು 2	ಹಂಪೆಯ ಶ್ರೀ ವಿರೂಪಾಕ್ಷ ದೇವಾಲಯದ ಗೋಪುರ ನಿರ್ಮಾಪಕ ಶ್ರೀ ಬಿಷ್ಟಪ್ಪಯ್ಯನವರು. ಪು: 46 ಮತ್ತು ಹಸ್ತಪ್ರತಿಯ 6 ಮತ್ತು 7ನೇ ಸಾಲುಗಳು
3.	ಹಸ್ತಪ್ರತಿಯ 21-22-23 ಸಾಲುಗಳು ಲೇ: ಆಪಟೆ ಅನಂತರಾಯರ ಅದೇ ಪುಸ್ತಕದ ಪು: 84
4.	ಕ್ಷೇತ್ರ ಕಾರ್ಯದಲ್ಲಿ ಕಂಡದ್ದು, ಸೋಗೀ ಗ್ರಾಮದ ಮಾಜಿ ಛೇರ್‌ಮೆನ್ ಶ್ರೀ. ಕೋಶಪ್ಪ ಮುಂ. ನೀಡಿದ ಮಾಹಿತಿ
5 ಮತ್ತು 6.	ಹಸ್ತಪ್ರತಿಯ 19-20 ಸಾಲು, ಆಪಟೆಯರ ಅದೇ ಪುಸ್ತಕದ ಪುಟ 55, ಹನಸೀ ಗ್ರಾಮದ ಪಟೇಲ ರೇವನ ಗೌಡರಿಂದ ದೊರೆತ ಮಾಹಿತಿ ಮತ್ತು ಕ್ಷೇತ್ರ ಕಾರ್ಯ.
7 ಮತ್ತು 8	ಡಾ. ಸಿ.ಎಂ.ಚುರ್ಚಿಹಾಳಮಠ, ಮಾಜಿ ಶಾಸಕ ಮುಂಡರಗಿ ಅವರು ಸಂಪಾದಿಸಿದ 'ಮುಂಡರಗಿ ನಾಡ ಸ್ವಾತಂತ್ರ್ಯ ಸಂಗ್ರಾಮ', ಪು: 31

9. ಲೇ. ಡಾ. ಸತ್ಯನಾರಾಯಣ ಭಟ್ ಪಿ.
'ಲಿಂಗ ಮತ್ತು ಕಂತೆ'. ಪು: 52, 70, 71

10. 'ಲಿಂಗ ಮತ್ತು ಕಂತೆ'. ಪು:7
'ಸದ್ಬೋಧ ಚಂದ್ರಿಕೆ' ಜನವರಿ 2003 ಸಂಚಿಕೆಯ 16ನೆಯ ಪುಟ

10ಎ. ಕರ್ನಾಟಕ ಇತಿಹಾಸ ಅಕೆಡೆಮಿಯ ಸೊಂಡೂರಿನಲ್ಲಿ 1994ರಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಹರಿಹರ ಶ್ರೀನಿವಾಸ ಮಂಡಿಸಿದ 'ವಿಠಲಾಪುರದ ಅಪ್ರಕಟಿತ ಕಂಚಿನ ಶಾಸನ'.

11. ಲೇ: ಆಪಟೆ ಅನಂತರಾಯರ ಅದೇ ಪುಸ್ತಕದ ಪುಟ 134, 135

12. ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಗ್ರಾಮದ ನಾಗರಿಕರು ನೀಡಿದ ಮಾಹಿತಿ

13. ಆಪಟೆ ಅನಂತರಾಯರ ಅದೇ ಪುಸ್ತಕದ 71ನೇ ಪುಟ ಮತ್ತು ಹಂಪಿ ವಿದ್ಯಾರಣ್ಯ ಮಠದ ಗುರುಗಳು, ಪುರೋಹಿತರು, ಎಲ್ಲಾ ಮಾರ್ಗದರ್ಶಿಗಳು ಮತ್ತು ವಿಜಯನಗರ ಅರಸರ ಪೀಳಿಗೆಯ ಅಚ್ಯುತದೇವರಾಯರಿಂದ ಪಡೆದ ಮಾಹಿತಿ.

14, 15 ಮತ್ತು 16. ಹಸ್ತಪ್ರತಿಯ 9-12 ಸಾಲುಗಳು ಅಪಟೆ ಅನಂತರಾಯರ ಅದೇ ಪುಸ್ತಕದ 76ನೇ ಪುಟ ಮತ್ತು ಲೇ. ಡಾ. ಪುರುಷೋತ್ತಮ ಬಿಳಿಮಲೆ, ಚಲುವರಾಜು ಅವರ 'ಹಂಪಿ ಜಾನಪದ'. ದ 80, 81 ಪುಟ ಮತ್ತು ಬಿಷ್ಟಪ್ಪಯ್ಯ ಅವರ ಹೆಜ್ಜೆ ಮೂಡಿದ ಪ್ರತಿಯೊಂದೂ ಸ್ಥಳದಲ್ಲೂ ಇರುವ ಮೌಖಿಕ ಪರಂಪರೆ.

17. ಲೇ ಆಪಟೆ ಅನಂತರಾಯರ ಅದೇ ಪುಸ್ತಕಕ್ಕೆ ಆಲೂರ ವೆಂಕಟ ರಾಯರು ಬರೆದ ಮುನ್ನುಡಿ ಪು: 3 ಮತ್ತು 4, ಪು. 75, 76 ಮತ್ತು ಮಖಿಕ

18. ಡಾ. ಎಸ್.ಕೆ.ಜೋಷಿ, ಡಿಸೆಂಬರ್ 2007ರ 'ಕಸ್ತೂರಿ' ಮಾಸಪತ್ರಿಕೆಯ 2 ಮತ್ತು 3ನೇ ಪುಟಗಳು ಮತ್ತು ಈಚೆಗೆ ನಾನು ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದ ಡಾ. ವಸುಂಧರಾ. ಫಿಲಿಯೋಝಾ ಅವರ ಈ ಅಭಿಪ್ರಾಯವನ್ನು ಎಲ್ಲಾ ದೂರದರ್ಶನ ವಾಹಿನಿಗಳು ಬಿತ್ತರಿಸಿವೆ. ದಿ ಹಿಂದೂ, 19.10.2007

19. ವಿಜಯನಗರ ಪ್ರೋಗ್ರೆಸ್ ಆಫ್ ರೀಸರ್ಚ್, ಮಿಷೆಲ್ 1987-88 ಪು 40, 41

20. ಆಪಟೆ ಅನಂತರಾಯರ ಅದೇ ಪುಸ್ತಕದ 79ನೇ ಪುಟ ಮತ್ತು ಎಲ್ಲಾ ವೈದಿಕ ವಿದ್ವಾಂಸರ ಅಭಿಮತ. ಲೇ ಡಾ. ಸತ್ಯನಾರಾಯಣ ಭಟ್‌ರವರ 'ಲಿಂಗ ಮತ್ತು ಕಂತೆ' ಪು: 52

21. ಹಸ್ತಪ್ರತಿಯ 7, 8, 9 ಸಾಲುಗಳು.
ಲೇ. ಆಪಟೆ ಅನಂತರಾಯರ ಅದೇ ಪುಸ್ತಕದ 66, 68, 69 ಪುಟ ಎಲ್ಲೆಡೆ ಇರುವ ಗಟ್ಟಿಯಾದ ಮೌಖಿಕ ಪರಂಪರೆ.

22. ಮೌಖಿಕ ಮತ್ತು ಆ ಶಿವ ಮಂದಿರದಲ್ಲಿರುವ ಉಬ್ಬು ಶಿಲ್ಪ ಬಿಷ್ಟಪ್ಪಯ್ಯ ಎಂದು ಅದರ ಪೂಜಾರಿಗಳೇ ಮೊದಲಾಗಿ ಎಲ್ಲಾ ಹೇಳುತ್ತಾರೆ.
23. 'ಕರ್ನಾಟಕ ದೇವಾಲಯ ಕೋಶ' ಗದಗ ಜಿಲ್ಲೆ
ಲೇ: ಡಾ. ಬಾಲಸುಬ್ರಹ್ಮಣ್ಯ, ಡಾ. ಸಿ.ಎಸ್.ವಾಸುದೇವನ್, ರಮೇಶ್ ನಾಯಕ. ಪು. 136-137
24. ಲೇ. ಆಪಟೆ ಅನಂತರಾಯರ ಅದೇ ಪುಸ್ತಕದ ಪು: 68-69ನೇ ಪುಟ ಮತ್ತು ಬಿಷ್ಟಪ್ಪಯ್ಯ ಅವರಿಗೆ ಸಂಬಂಧಿಸಿದ ಪ್ರತಿಯೊಂದು ಸ್ಥಳದಲ್ಲೂ ಇರುವ ಒಂದೇ ರೀತಿಯ ಮೌಖಿಕ ಪರಂಪರೆ.
25. ಕ್ಷೇತ್ರಕಾರ್ಯದಲ್ಲಿ ಕಂಡದ್ದು.
26. ಲೇ: ಕೆ. ರಾಮಸ್ವಾಮಯ್ಯಂಗಾರ್, 'ಜೀರ್ಣವಿಜಯನಗರಾದರ್ಶಂ' ಪು: 54
27-28. ಲೇ: ಅಪಟೆ ಅನಂತರಾಯರ ಅದೇ ಪುಸ್ತಕದ ಪು. 64. ಮೌಖಿಕ ಪರಂಪರೆ ಮತ್ತು ಕ್ಷೇತ್ರಕಾರ್ಯದ ಅಧ್ಯಯನ
29. ಡಾ. ಪರಮಶಿವಮೂರ್ತಿಯರು ನೀಡಿದ ಮಾಹಿತಿ.
30. ಲೇ: ಕೆ.ಆರ್.ನರಸಿಂಹನ್. 'ನರಸಿಂಹ ಪದಾರ್ಥ'-2' ಪು, 177.
31. ಲೇ: ಕಾ.ರಾಮಸ್ವಾಮಯ್ಯಂಗಾರ್ \`ಜೀರ್ಣವಿಜಯನಗರಾದರ್ಶಂ' ಪು, 44
32. ನನ್ನೊಡನೆ ಕ್ಷೇತ್ರ ಕಾರ್ಯದಲ್ಲಿ ಭಾಗಿಯಾಗಿದ್ದ ಡಾ. ಸಾಮಕ್, ಡಾ. ಜಗದೀಶ್ ಮತ್ತು ಈ ವಿಷಯವನ್ನು ಡಾ. ಅ. ಸುಂದರ, ಡಾ. ವಸುಂಧರ ಫಿಲಿಯೋಝಾ ಅವರೊಡನೆ ವಿವರವಾಗಿ ಚರ್ಚಿಸಿದಾಗ ಎಲ್ಲಾ ತಜ್ಞರು ನೀಡಿದ ಅಭಿಪ್ರಾಯ.
33. 'ವಿಜಯನಗರ ಅಧ್ಯಯನ', ಸಂಪುಟ 11, ಪುಟ: 393.
'ವಿಜಯನಗರ ಚಕ್ರವರ್ತಿ ಪಳೆಯುಳಿಕೆ ಆನೆಗೊಂದಿ ಅಚ್ಯುತ ರಾಯರು', ಕೆಳದಿ ಗುಂಡಾ ಜೋಯ್ಸ್
34. ಡಾ. ಸಿ.ಎಂ.ಚುರ್ಚಿಹಾಳಮಠ, ಮಾಜಿ ಶಾಸಕ ಮುಂಡರಗಿ ಸಂಪಾದಿಸಿದ 'ಮುಂಡರಗಿ ನಾಡ ಸ್ವಾತಂತ್ರ್ಯ ಸಂಗ್ರಾಮ', ಪು. 31.
35. ವಿಜಯ ಕರ್ನಾಟಕ ಪತ್ರಿಕೆಯ ವಾಚಕರ ವಿಜಯ 17.03.2007
36. ಕ್ಷೇತ್ರ ಕಾರ್ಯ
37. ಎಲ್ಲಾ ಪಂಚಾಂಗ ಮತ್ತು ಕ್ಯಾಲೆಂಡರುಗಳು, ಬೆಂಗಳೂರು ಮುದ್ರಣಾಲಯದ ಕ್ಯಾಲೆಂಡರಿನಲ್ಲಿ 2007 ಸೆಪ್ಟೆಂಬರ್ 13 ರಂದು 2008 ರಲ್ಲಿ ಸೆಪ್ಟೆಂಬರ್ 1 ರಂದು ನಮೂದಾಗಿದೆ.
38. ಆಪಟೆ ಅನಂತರಾಯರ ಅದೇ ಪುಸ್ತಕದ ಪು: 148, ವಿದ್ಯಾರಣ್ಯ ಮಠದ ಈಗಿನ ಸ್ವಾಮಿಗಳು ಮತ್ತು ಪಂಪಾವತಿಯ ಗುಡಿಯ ಎಲ್ಲಾ ಪುರೋಹಿತರು ಬಿಷ್ಟಪ್ಪಯ್ಯ ಅವರ ಎಲ್ಲಾ ಭಕ್ತರು ನೀಡಿದ ಮಾಹಿತಿ.

54. ರೋಮನ್, ಮೊಘಲ್ ಹಾಗೂ ವಿಜಯನಗರ ಸ್ನಾನಗೃಹಗಳು: ಒಂದು ತೌಲನಿಕ ಅಧ್ಯಯನ

ಲೇ: ಡಾ. ಎಸ್.ಕೆ.ಜೋಶಿ

ಶುಚಿತ್ವದ ಆಚರಣೆ ಸುಸಂಸ್ಕೃತ ನಾಗರಿಕನ ಲಕ್ಷಣ. ನಗರ ನಾಗರಿಕತೆ ಬೆಳೆದಂತೆ ಜೀವನದ ಪರಿಸರದಲ್ಲಿ, ವಸತಿ ತಾಣಗಳಲ್ಲಿ, ಪ್ರಸ್ವಚ್ಛತೆಯ ಕಲ್ಪನೆ ಪ್ರಯೋಗ ಹಾಗೂ ತತ್ ಸಂಬಂಧಿತ ವಾಸ್ತುವಿನ್ಯಾಸ ಹಾಗೂ ಕಲೆಗಳು ವೃದ್ಧಿಗೊಂಡುದುದನ್ನು ಇತಿಹಾಸದ ಉದ್ದಕ್ಕೂ ಕಾಣುತ್ತೇವೆ. ಈ ತರಹದ ಸ್ವಚ್ಛತೆಯ ಬಗ್ಗೆ ಆಸಕ್ತಿ, ಮಮತೆ ಹಾಗೂ ಅವಶ್ಯಕತೆ ಹೆಚ್ಚಾದಂತೆ, ಅದರ ಆಚರಣೆಗೊಂದು ಧಾರ್ಮಿಕ ಕಟ್ಟಳೆ, ಪಾವಿತ್ರ್ಯತೆಗಳನ್ನು ಲೇಪಿಸಿ, ಸಾಮಾಜಿಕ ಹಾಗೂ ಪರಿವಾರದ ರೂಢಿಯನ್ನಾಗಿ ಮಾಡಲಾಯಿತು.

ಇತಿಹಾಸದಲ್ಲಿ ಇಣುಕಿನೋಡಿದರೆ, ಸ್ನಾನಗೃಹಗಳಿಗೆ ಸಂಬಂಧಿಸಿದಂತೆ ಆಸಕ್ತಿಕರ ವಿವರಗಳು ದೊರಕುತ್ತವೆ. ಕಂಚಿನ ಯುಗದಲ್ಲಿ ಕ್ರಿ.ಪೂ. 2800 ವರುಷಗಳ ಹಿಂದೆ ಮಿನೋಯನ್ ಸಾಮ್ರಾಜ್ಯದ (Minoyan Empire) ಕಾಲದಲ್ಲಿ, ಅಲ್ಲಿಯ ನಗರಗಳಲ್ಲಿ, ಹರಿವ ನೀರಿನಡಿಯಲ್ಲಿ ಕಾಲು ತೊಳೆಯುವ (Foot Bath), ಹಾಗೂ ದೇಹದ ಅರ್ಧಭಾಗ (Hip Bath) (ಕೆಳಭಾಗ), ಮೃತ್ತಿಕೆಯ ಸ್ನಾನಗೃಹಗಳು ಇದ್ದವು. ಈಜಿಪ್ತ ಅರಸರ ಕ್ರಿ.ಪೂ. 300 ಅರಮನೆಗಳಲ್ಲಿಯೂ ವೈಶಿಷ್ಟ್ಯಪೂರ್ಣ, ಶುಚಿಗೃಹಗಳು ಇದ್ದವು. ಅಲ್ಲದೆ, ಮಾನವನ ನಗರೀಕರಣದ (Urbanization) ಇತಿಹಾಸದಲ್ಲಿ ರೋಮನ್‌ರು ಶ್ರೇಷ್ಠತಮ ಸ್ನಾನಗೃಹಗಳನ್ನು ನಿರ್ಮಿಸಿ, ವೈಶಿಷ್ಟ್ಯಪೂರ್ಣ ವಾಸ್ತುಕಲೆಯ ಸುವರ್ಣಯುಗವನ್ನು ನಿರ್ಮಿಸಿದರು.

ರೋಮನ್ ಬಾತ್ಸ್ (Roman Baths)

ರೋಮನ್ ಚಕ್ರವರ್ತಿಗಳು ವೈಭವೋಪೇತ ಸಾಮ್ರಾಜ್ಯಗಳನ್ನಾಳಿ, ಜೊತೆಗೆ ಸೌಂದರ್ಯ, ರುಚಿ, ಆರೋಗ್ಯಗಳ ಬಗ್ಗೆಯೂ ಅಪಾರ ಕಾಳಜಿ ವಹಿಸಿದ್ದರು. ತಮ್ಮ ಅರಮನೆಯ ಆವರಣಗಳಲ್ಲಿ ನಿರ್ಮಿಸಿದ ದೊಡ್ಡ ದೊಡ್ಡ ಸ್ನಾನಗೃಹಗಳು ರಸಿಕತೆ, ಸೌಂದರ್ಯ ಹಾಗೂ ದೈಹಿಕ ಆರೋಗ್ಯಕ್ಕೆ ಪುಷ್ಟಿ ನೀಡಿದ್ದವು. ಅವು ಹವಾನಿಯಂತ್ರಣ ಹಾಗೂ ಬೆಳಕು ಬಿಸಿಲುಗಳ ವ್ಯವಸ್ಥೆಯಿಂದ ಕೂಡಿದ್ದವು.

The Thermae of Romans

Within the magnificent thermae of Caracalla the Romans were well served with almost every conceivable kind of relaxation and entertainment, for the complex included shopping arcades, libraries, theatres, sports stadia (where there was racing, wrestling and boxing), a picture gallery, and so on. In addition, of course, there were all the necessary facilities of the therapeutic bathing areas - warm room (*tepidarium*), a cold room, with open baths (*frigidarium*), and a hot room (*caldarium*), which in this case was a huge hallway with a dome somewhat similar to the one still preserved in the Partheon

ರೋಮನ್‌ರ ಸ್ನಾನಗೃಹಗಳಲ್ಲಿ ಅಲಂಕಾರ ಕೋಣೆ, ತೈಲಲೇಪನ ಕೋಣೆ (massaging room) ಹಿತಮಿತವಾದ ಬೆಚ್ಚನಯ ಕೋಣೆ (wam room), ಹೆಚ್ಚು ಬೆಚ್ಚನೆಯ ಕೋಣೆ (Hot room), ಅತೀ ಬೆಚ್ಚನೆಯ ಕೋಣೆ (Hottest room), ತಂಪುಕೋಣೆ (Cold room), ಮನೋರಂಜನಾ ಕೋಣೆ (theatre), ಲೈಬ್ರರಿ ಮುಂತಾದವುಗಳನ್ನು ಅಳವಡಿಸಲಾಗಿತ್ತು. ಅತೀ ವಿಶಾಲವಾದ ಸ್ನಾನಗೃಹಗಳು ಥರ್ಮೀ ಅಗ್ರಿಪಾ (Thearmae Agrippa), ಕ್ರಿ.ಪೂ. 20, ಥರ್ಮೀಟೈಟಸ್ (Thermae Titus) ಕ್ರಿ.ಪೂ. 80, ಥರ್ಮೀ ಕರಕಲಾ (Thermae Carocalla) ಕ್ರಿ.ಪೂ. 210-217, ಥರ್ಮೇ ದಿವೋಕ್ಲೆಶನ್ (Thermae divocletion) ಮುಂತಾದವು, ಗ್ರಂಥಾಲಯ ಉಪನ್ಯಾಸ ಭವನ, ತತ್ವಜ್ಞಾನ ಭವನ, (Halls for religious discourse), ಕವಿಗಳ ಹಾಗೂ ರಾಜರುಗಳ ಬೈಠಕ ಭವನ, ಸಾರ್ವಜನಿಕ ಹೂದೋಟ (public park) ಮುಂತಾದವು, ಹೂದೋಟದ ಅರ್ಧಭಾಗದಲ್ಲಿ ಸ್ಟೇಡಿಯಂ, ದರ್ಶಕರಿಗಾಗಿ ಕುಳಿತುಕೊಳ್ಳಲು ಅರ್ಧವರ್ತುಳಾಕಾರದಲ್ಲಿ ಕಟ್ಟೆಗಳಿಂದ ನಿರ್ಮಿಸಿದ ಕ್ರೀಡಾಂಗಣವಿದ್ದು, ಅದರ ಮಧ್ಯದಲ್ಲಿ ಜಿಗಿತ, ಓಟ, ಕುಸ್ತಿ, ಮುಷ್ಟಿಯುದ್ಧ ಮುಂತಾದ ಸ್ಪರ್ಧೆಗಳು ನಡೆಯುತ್ತಿದ್ದವು. ಇವೆಲ್ಲ ರೋಮನ್‌ರ ವೈಭವೋಪೇತ ಸ್ನಾನಗೃಹಗಳನ್ನು ಅಳೆವ ಅಳತೆಗೋಲುಗಳು.

ಜಾಗತಿಕ ಮುಸ್ಲಿಂ ಹಮಾಮ್‌ಗಳು (Muslim Hamams in Ismalic world):

ಇನ್ನು ಸಾಂದರ್ಭಿಕವಾಗಿ ಮುಸ್ಲಿಂ ಹಮಾಮ್‌ಗಳನ್ನು ಅವಲೋಕಿಸಬಹುದು. ಅವರ ಸ್ನಾನಗೃಹಗಳಿಗೆ `ಹಮಾಮ್'ಗಳೆಂದು ಕರೆಯುತ್ತಾರೆ. ರೋಮನ್ ಸ್ನಾನಗೃಹಗಳ ಭವ್ಯ ವಾಸ್ತುಕಲೆಯ ಪರಂಪರೆಯನ್ನು ತಮ್ಮಲ್ಲಿ ಅಳವಡಿಸಿ, ಮುಸ್ಲಿಂ ದೊರೆಗಳು ಮುಸ್ಲಿಂ ಜಗತ್ತಿನಲ್ಲಿ (Islamic world) ಸ್ನಾನಗೃಹಗಳನ್ನು ರಚಿಸಿದರು. 'ಖಿರಬತ್ ಅಲ್ ಮಫ್ತಜರ್' (Khirbat Al Mafftjar), ಕುಸಾಯರ್ ಅಮ್ರಾ (Khusayar Amra), ಹಮಾಮ್ ಅಲ್ ಸಾರಾಖ (Hamam All Sarakh), ಮುಂತಾದವು ಮುಸ್ಲಿಂ ಜಗತ್ತಿನ ಖ್ಯಾತ ಸ್ನಾನಗೃಹಗಳು.

ಈಜಿಪ್ಟ್, ಇರಾಣ್, ಇರಾಕ್ ಅರೇಬಿಯಾಗಳಲ್ಲಿ ಸ್ತ್ರೀ ಹಾಗೂ ಪುರುಷರಿಬ್ಬರಿಗೂ ಹಮಾಮ್‌ಗಳು ಉಪಯೋಗದಲ್ಲಿದ್ದವು. ಮಧ್ಯಾಹ್ನದವರೆಗೆ ಪುರುಷರಿಂದಲೂ ಅಪರಾಹ್ನದಲ್ಲಿ ಸ್ತ್ರೀಯರಿಂದಲೂ ಉಪಯೋಗಿಸಲ್ಪಡುತ್ತಿದ್ದವು. ಸ್ತ್ರೀಯರು ಸ್ನಾನ ಮಾಡುವ ಸಮಯದಲ್ಲಿ ಪ್ರವೇಶದ್ವಾರಕ್ಕೆ ಕೆಂಪು ಬಣ್ಣದ ರಿಬ್ಬನ್ ಕಟ್ಟುತ್ತಿದ್ದರು. ಅದು ಪುರುಷ ವರ್ಗಕ್ಕೆ ಎಚ್ಚರಿಕೆ ನೀಡುತ್ತಿತ್ತು. ಇಂಥ ಸ್ನಾನಗೃಹಗಳು, ಪ್ರತಿಷ್ಠಿತ ಶ್ರೀಮಂತ ಸ್ತ್ರೀವರ್ಗಕ್ಕೆ ತಮ್ಮ ತಮ್ಮ ಸೌಂದರ್ಯ, ಅಂಗಸೌಷ್ಟವ, ಆಭರಣಗಳು, ಕೇಶಾಲಂಕರಣ, ಲಗ್ನಸಂಬಂಧಗಳು, ಗೆಳೆತನ, ಗಾಯನ, ನೃತ್ಯಕಲೆ ಮುಂತಾದವುಗಳ ಕುರಿತು, ವಿಚಾರ ವಿನಿಮಯ, ಚರ್ಚೆ ನಡೆಸಲು ಅವಕಾಶ ನೀಡುತ್ತಿದ್ದವು. ಹೀಗೆ ಅವು ಸಾಮಾಜಿಕ ಸಂಸ್ಥೆಗಳಾಗಿ, ಮನರಂಜನೆ ಹಾಗೂ ತನುರಂಜನೆ ಹಾಗೂ ಪ್ರತಿಷ್ಠೆಯ ಸುಂದರ ತಾಣಗಳಾಗಿ ಸ್ವೀಕೃತವಾದವು.

ಮುಸ್ಲಿಂ ಸ್ನಾನಗೃಹಗಳು ರೋಮನ್ ಸ್ನಾನಗೃಹಗಳಿಂದ ಸ್ವಲ್ಪ ಭಿನ್ನ. ಮುಸ್ಲಿಂ ಸ್ನಾನಗೃಹಗಳಲ್ಲಿ ಸಾಮಾಜಿಕ ಆಟಪಾಟಗಳನ್ನು ತೆಗೆದು ಹಾಕಿ, ಆರೋಗ್ಯ ದೇಹದ ಆರೈಕೆ ಮತ್ತು ಏಕಾಂತತೆಗಳಿಗೆ ಮಹತ್ವ ನೀಡಿ, ಜೊತೆಗೆ ಧಾರ್ಮಿಕ ಆದೇಶಗಳನ್ನು (Religious Significance and norms), ಸಂಹಿತೆಗಳನ್ನು ಕಡ್ಡಾಯಗೊಳಿಸಿದರು. 'ನೀನು ಅಶುದ್ಧನಾಗಿದ್ದರೆ ದೇಹವನ್ನು ಪರಿಶುದ್ಧಗೊಳಿಸು' ಎಂದು ಕುರಾನ್ ಹೇಳುತ್ತದೆ. ಪೈಗಂಬರರು ಹಾಕಿಕೊಟ್ಟ ನಿಯಮಗಳಂತೆ ಈ ನಾಲ್ಕು ಪ್ರಸಂಗಗಳಲ್ಲಿ ಸ್ನಾನವಿಧಿಯನ್ನು ಅವಶ್ಯವಾಗಿ ನಿರ್ಧರಿಸಲಾಗಿದೆ:

1. ಪರಧರ್ಮೀಯರನ್ನು ಇಸ್ಲಾಂ ಮತಕ್ಕೆ ಧರ್ಮಾಂತರಿಸಿದಾಗ
2. ಶುಕ್ರವಾರದ ನಮಾಜ್ ಹಾಗೂ ಇನ್ನಿತರ ಇಸ್ಲಾಂ ಧಾರ್ಮಿಕ ಹಬ್ಬದ ದಿನಗಳಲ್ಲಿ
3. ಮೃತದೇಹವನ್ನು ತೊಳೆದಾಗ, ಹಾಗೂ
4. ದೇಹದಲ್ಲಿ ಯಾವುದೇ ತರಹದ ಗಾಯವಾಗಿ ರಕ್ತಸ್ರಾವವಾದಾಗ –

ಇವು ಪ್ರಮುಖ ಪ್ರಸಂಗಗಳು

ಮಹಮ್ಮದ್ ಪೈಗಂಬರರು ಪ್ರಾರ್ಥನಾ ಮಂದಿರ (ಮಸ್‌ಜಿದ್)ಗಳ ಪರಿಸರದಲ್ಲಿ ಸ್ನಾನಗೃಹಗಳ ರಚನೆಗೆ ವೈಯಕ್ತಿಕವಾಗಿ ಅನುಮೋದನೆ ಕೊಡದಿದ್ದರೂ, ಅವರ ಕಾಲದ ನಂತರದಲ್ಲಿ ಸಂಪ್ರದಾಯವಾದಿಗಳ ವಿರೋಧವನ್ನು ಲೆಕ್ಕಿಸದೆ, ಪ್ರಾರ್ಥನಾ ಮಂದಿರಗಳ ಪರಿಸರದಲ್ಲಿ ಸ್ನಾನಗೃಹಗಳು ಬಹುಸಂಖ್ಯೆಯಲ್ಲಿ ರಚಿಸಲ್ಪಟ್ಟು, ಮುಸ್ಲಿಂ ಸಾಮ್ರಾಜ್ಯಗಳ ನಗರದಲ್ಲಿ ಅತ್ಯವಶ್ಯವಾದ ನಗರವಾಸ್ತುಕಲೆಯ (part of City Architecture) ಅವಿಭಾಜ್ಯ ಅಂಗಗಳಾಗಿ ಬೆಳೆದವು.

ಹಿಂದೂಸ್ತಾನದಲ್ಲಿ ಹಮಾಮ್‌ಗಳ ಖ್ಯಾತಿ (Hrmams in India)

ಮಧ್ಯಯುಗದ, ಮಧ್ಯ ಏಶಿಯಾದಿಂದ ಇಸ್ಲಾಂ ಹಮಾಮ್‌ಗಳು ಮುಸ್ಲಿಂ ಸುಲ್ತಾನರುಗಳ ಮೂಲಕ ಹಿಂದೂಸ್ತಾನವನ್ನು ಪ್ರವೇಶಿಸಿದವು. ಮೂಲತಃ ರೋಮನ್ ಸಂಸ್ಕೃತಿ ಹಾಗೂ ಕಟ್ಟಡ ನಿರ್ಮಾಣದ ಪ್ರಭಾವಕ್ಕೆ ಒಳಗಾಗಿ, ಈ ಹಮಾಮ್‌ಗಳು ಅರಬ್ ಸುಲ್ತಾನರಿಂದಲೂ, ನಮ್ಮೀ ದೇಶವನ್ನು ಪ್ರವೇಶಿಸಿರಬೇಕು. ಅವು ಟರ್ಕಿಶ್ ಬಾಥ್ (Turkish Bath) ಎಂದು ಪ್ರಸಿದ್ಧ ಪಡೆದವು. ಹಿಂದೂಸ್ತಾನದ ಭೂ ಜಲ ಹಾಗೂ ಜಲಗಳ ಪರಿಸರಕ್ಕೆ ಅನುಗುಣವಾಗಿ, ಈ ಟರ್ಕಿಶ್ ಬಾಥ್‌ಗಳು (ತುರ್ಶಕ ಸ್ನಾನಗೃಹಗಳು) ನಿರ್ಮಾಣವಾದವು.

ಹಿಂದೂಸ್ತಾನದಲ್ಲಿ ದಿಲ್ಲಿ ಸುಲ್ತಾನರು ಹಾಗೂ ದಕ್ಷಿಣದಲ್ಲಿ ಡಖ್ಖನ್‌ದ (Deccan Sultans) ಸುಲ್ತಾನರು ತಾವು ಗೆದ್ದ ರಾಜ್ಯಗಳ ರಾಜಧಾನಿಗಳಲ್ಲಿ ಹಮಾಮುಗಳನ್ನು ಸಾಕಷ್ಟು ಆಸ್ಥೆವಹಿಸಿ, ಕಟ್ಟಿಸಿದರು. ದಕ್ಷಿಣದ ದೌಲತಾಬಾದಿನಲ್ಲಿ ಮುಹಮ್ಮದ್ ತುಘಲಕನು ಸಾರ್ವಜನಿಕ ಸ್ನಾನಗೃಹಗಳನ್ನು (Public Baths) ಕಟ್ಟಿಸಿದನು. ಅವನ ಸಮಕಾಲೀನ ಕೃತಿ 'ಮಸಾಲಿಕ್ ಅಲ್ ಅಫಸಾರ್' ಎಂಬ ಗ್ರಂಥವು ಪ್ರತಿಯೊಂದು ಬಡಾವಣೆಯಲ್ಲಿಯೂ ಮಸೀದಿಗಳು, ಮಿನಾರೆಟ್‌ಗಳು (Minarets), ಬಾಜಾರುಗಳು (Bazaars), ಸಾರ್ವಜನಿಕ ಸ್ನಾನಗೃಹಗಳು ಇದ್ದವು ಎಂದು ಹೇಳುತ್ತದೆ. ಮುಹಮ್ಮದ್ ತುಘಲಕನು ಸರ್ಾಜನಿಕ ಕಟ್ಟಡಗಳಲ್ಲಿ ಸ್ನಾನಗೃಹಗಳನ್ನು ಅವಶ್ಯವಾಗಿ ಕಟ್ಟಿಸಲು ರಾಜಾಜ್ಞೆ ಹೊರಡಿಸಿದ್ದನು. ಫಿರೋಜ್‌ಶಹ ತುಘಲಕನು 100 ಹಮಾಮ್‌ಗಳನ್ನು ನಿರ್ಮಿಸಿದನೆಂದು ಇತಿಹಾಸಕಾರ 'ಫೆರಿಸ್ತಾ' ಹೇಳುತ್ತಾನೆ. ಗಂಗಾ ನದಿಯ ಉತ್ತರ ದಡದಲ್ಲಿ, ಬೆಚ್ಚನೆಯ ಸ್ನಾನಗೃಹಗಳನ್ನು ಸುಲ್ತಾನರು ಹಾಗೂ ಅವರ ಅಧಿಕಾರಿಗಳು ಉಪಯೋಗಿಸುತ್ತಿದ್ದ ಬಗ್ಗೆ 'ನಿಕೋಲಸ್ ಕೊಂತಿ' ಎಂಬ ಮತ್ತೊಬ್ಬ ಇತಿಹಾಸಕಾರನು ಹೇಳುತ್ತಾನೆ.

ದಕ್ಷಿಣ ಭಾರತದಲ್ಲಿ (Deccan) ಅಹಮ್ಮದಾಬಾದ್, ದೌಲತಾಬಾದ್, ಹೈದರಾಬಾದ್, ಅಹಮ್ಮದನಗರ, ಬೀದರ, ಗುಲಬರ್ಗಾ, ಔರಂಗಾಬಾದ್, ಗೋಲಕೊಂಡಾ ಹಾಗೂ ಬಿಜಾಪುರಗಳಲ್ಲಿಯೂ ಆಯಾ ಸುಲ್ತಾನರು ಹಮಾಮುಗಳನ್ನು ಕಟ್ಟಿಸಿದ್ದನ್ನು ಶೋಧಿಸಲಾಗಿದೆ. ದೌಲತಾಬಾದ್ ಉತ್ಖನನದಲ್ಲಿ (1987-88), ಈ ಸಂಶೋಧಕನು 'Settlement patterns in Medieval Deccan' ವಿಷಯವಾಗಿ 'ತುಘುಲಕ್ ಹಮಾಮ್'ಗಳನ್ನು ಕಂಡುಹಿಡಿದಿದ್ದಾನೆ.

ಮೊಘಲ್ ಹಮಾಮುಗಳು (Hamams of Moghuls)

ಮೊಘಲ್ ಚಕ್ರವತಿಗಳು ಹಿಂದೂಸ್ತಾನದ ಹಮಾಮ್‌ಗಳಿಗೆ ಹೊಸ ರೂಪ ನೀಡಿದರು. ಅವರ ಆಡಳಿತದ ಕಾಲದುದ್ದಕ್ಕೂ (ಕ್ರಿ.ಶ. 1526-1707) ಅವರ

ಹಮಾಮಗಳು ಬೇಸಿಗೆ ಕಾಲದ ಹಾಗೂ ಚಳಿಗಾಲದ ಸ್ನಾನಗೃಹಗಳೆಂದು ದ್ವಿಪಾತ್ರ ವಹಿಸಿದವು. ಅವರ ಪೂರ್ವದಲ್ಲಿ ಈ ಹಮಾಮಗಳು ಕೇವಲ ಬಿಸಿ ನೀರಿನ ಸ್ನಾನಕ್ಕಾಗಿ ಉಪಯೋಗಿಸಲ್ಪಡುತ್ತಿದ್ದವು. ಬಾಬರನು ತನ್ನ 'ಬಾಬರ್ ನಾಮಾ' ದಲ್ಲಿ "ಹಿಂದೂ ಸ್ತಾನದಲ್ಲಿ ಒಂದೂ ಕೂಡ ಹಮಾಮ್ ಇಲ್ಲವೇ? ಇಲ್ಲಿಯ ಶೆಕೆ, ದೂಳು ಹಾಗೂ ಬಿರುಗಾಳಿಗಳಿಂದ ತೊಂದರೆಯಾಗಿದೆ, ಎಷ್ಟೋ ನನ್ನ ಅಧಿಕಾರಿಗಳು ಉಗ್ರಶೆಕೆಯನ್ನು ತಡೆಯಲಾರದೆ ಮರಣ ಹೊಂದಿದರು. ಕೆಲವರು ತಾಯ್ನಾಡಿಗೆ ಮರಳಿದರು. ಕೆಲವರು ಹಿಂದೂಸ್ತಾನದಲ್ಲಿ ಇರಲು ಅಸಮ್ಮತಿ ವ್ಯಕ್ತಪಡಿಸಿದರು" ಎಂದು ಬರೆಯುತ್ತಾನೆ. ಮುಂದುವರಿಯುತ್ತ "ಹಮಾಮಗಳು ಶೆಕೆ, ದೂಳು, ಗಾಳಿಯನ್ನು ತಡೆಯುತ್ತವೆ" ಬಿಸಿಗಾಳಿಯಲ್ಲಿ ತಂಪುದೊರೆಯುವುದು ಕಠಿಣ. ಹೀಗಾಗಿ ವ್ಯಕ್ತಿಯ ಶಕ್ತಿ ಹೀನವಾದಂತೆ ಅನ್ನಿಸುತ್ತದೆ. ಅದಾಗಿ ಬಾಬರನು ತಾನು ಗೆದ್ದ ಪ್ರದೇಶಗಳಲ್ಲಿ ಮೊಟ್ಟಮೊದಲು `ಹಮಾಮ್' ಗಳನ್ನು ಕಟ್ಟಲು ಆಜ್ಞಾಪಿಸಿದನು. ಈ ಸಮಯೋಚಿತ ಅನುಕೂಲತೆ ಗಳಿಂದ ಸಮರಕಂದ್ ಹಾಗೂ ಖಿರ್‌ಸಾನ್‌ಗಳಿಂದ ಬಂದ ಕೆಲವು ಪ್ರತಿಷ್ಠಿತರು, ಇವುಗಳನ್ನು ಉಪಯೋಗಿಸಲು ಪ್ರಾರಂಭಿಸಿ, ಬಾದಶಹನ ಕಾರ್ಯ ಶ್ಲಾಘಿಸಿ, ಇಲ್ಲಿಯೇ ಉಳಿದರು.

ಅಕ್ಬರನು ಹಮಾಮ್‌ಗಳಿಗೆ ಹೆಚ್ಚು ಪ್ರಾಧಾನ್ಯತೆ ನೀಡಿದನಲ್ಲದೆ, ಅವನು ನಿರ್ಮಿಸಿದ ಹೊಸ ರಾಜಧಾನಿ 'ಫತ್ತೇಪೂರ ಸಿಕ್ರಿ'ಯಲ್ಲಿ ಬಹು ಸಂಖ್ಯೆಯಲ್ಲಿ ಹಮಾಮಗಳು ನಿರ್ಮಾಣವಾದವು ಎಂದು ಅಬುಲ್ ಫಝುಲ್, ಬದಾವುನಿ, ನಿರ್‌ಜಾಮ್ ಅಲ್‌ದೀನ್, ಮುಂತಾದ ಆ ಸಮಕಾಲೀನ ಇತಿಹಾಸಕಾರರು ಬರೆದಿದ್ದಾರೆ. ಅಬುಲ್ ಫಝುಲ್‌ನು 'ಖಾನ್‌ಖಾ ಹಾಗೂ ಮದರ್ಸಾಗಳಂತೆ (ಸೂಫಿ ಸಂತರ ವಾಸಸ್ಥಾನ ಹಾಗೂ ವಿದ್ಯಾಲಯಗಳು), ಸಾಮಾಜಿಕ ಉಪಯೋಗಿ ಸಂಸ್ಥೆಗಳಂತೆ, ಹಮಾಮ್‌ಗಳೂ ಸಾಮಾಜಿಕ ಮಹತ್ವದ ಸಂಸ್ಥೆಗಳಾಗಿ ಬೆಳೆದವು' ಎಂದಿದ್ದಾನೆ.

ಅಕ್ಬರನು ಒಂದು ತಾಸಿಗಿಂತಲೂ ಹೆಚ್ಚು ಸಮಯ ಸ್ನಾನಗೃಹದಲ್ಲಿ ಕಳೆಯುತ್ತಿದ್ದನಂತೆ; ಆತನು ಫತ್ತೇಪೂರ ಸಿಕ್ರಿಯಲ್ಲಿ ನಿರ್ಮಿಸಿದ ಸ್ನಾನಗೃಹವು ಭಾರತದಲ್ಲಿಯೇ ಅತ್ಯಂತ ಭವ್ಯ ಹಾಗೂ ಸುಂದರ, ವಿಶಾಲ (104 ಮೀ. x 40 ಮೀ. x 78 ಮೀ), ಹಾಗೂ 'ಹಕೀಮ್ ಹಮಾಮ್'ಕ್ಕಿಂತ ದೊಡ್ಡದೆಂದು ಹೇಳಲಾಗುತ್ತಿದೆ. ಇದು ಬಾದಶಹನ 'ಹಮಾಮ್ ಸಾರಾ'ದ ಭಾಗವಾಗಿದ್ದು, ಕಟ್ಟಲು 6 ತಿಂಗಳುಗಳು ಹಿಡಿದವೆಂದೂ, ಫತ್ತೇಪೂರಸಿಕ್ರಿ ಕಟ್ಟಲು 5 ವರುಷಗಳು ಬೇಕಾದವು. ಆಗ್ರಾದಲ್ಲಿ ೮೦೦ಕ್ಕಿಂತ ಹೆಚ್ಚು ಹಮಾಮುಗಳಿದ್ದವು. ಇದರಿಂದ ಹಮಾಮ್ ಕಸಬಿನ ಮೇಲೆ ಜೀವನೋಪಾಯ ಹೊಂದಿದ್ದ ಜನರ ಕಲ್ಪನೆ ಬರುವುದು.

ಘುಸ್ಲ ಖಾನಾ

ಜಹಾಂಗೀರನು ತನಗೆ ಪ್ರಿಯರಾದ ಜನ ಹಾಗೂ ಪ್ರತಿಷ್ಠಿತರನ್ನು ಹಮಾಮ್‌ಗಳಲ್ಲಿ (Ghusla Khana) ಬರಮಾಡಿಕೊಂಡು ವೈಯಕ್ತಿಕ ಇಲ್ಲವೆ ರಾಜಕೀಯ ವಿಷಯಗಳನ್ನು ಚರ್ಚಿಸುತ್ತಿದ್ದನೆಂದು ಪೀಟರ್ ಮಂಡಿ ಬರೆಯುತ್ತಾನೆ. ಟೆರ್ರಿ, ಪೆಲ್‌ಸ್ಟಾರ್ಟ್ ಹಾಗೂ ಮ್ಯಾನ್ಯುಶೀ ಮುಂತಾದ ಇತಿಹಾಸಕಾರರು ಈ 'ಘುಸ್ಲ ಖಾನಾ' ಗಳನ್ನು ವರ್ಣಿಸಿದ್ದಾರೆ. ಇಂಗ್ಲೀಷ್ ರಾಯಭಾರಿ ಥಾಮಸ್ ಮನ್ರೋ ಜಹಾಂಗೀರನನ್ನು ಇಂಥ 'ಘುಸ್ಲಖಾನಾ' ದಲ್ಲಿ ಭೇಟ್ಟಿಯಾದನಂತೆ.

ಶಹಜಹಾನನು ದಿಲ್ಲಿ ಆಗ್ರಾಗಳಲ್ಲಿ ಬಹು ಸಂಖ್ಯೆಯಲ್ಲಿ ಹಮಾಮ್‌ಗಳನ್ನು ನಿರ್ಮಿಸಿದನು. `ಸರಾಯ'ಗಳಲ್ಲಿ (ಪ್ರವಾಸಿ ಮಂದಿರಗಳು) ಕೂಡ ಇವುಗಳ ಸಂಖ್ಯೆ ಬೆಳೆಯಿತು. ಭಿಕತ್‌ವಾರ್ ನಗರದ ಹಮಾಮ್, ಸಾದತ್‌ಖಾನ್ ಸಂಗಪರಮರಿ ಹಮಾಮ್, ಅಹಮ್ಮದಾಬಾದಿನಲ್ಲಿ ಖಾನ್-ಎ-ಖಾನಾನ್ ಕಟ್ಟಿಸಿದನು. ಲಾಹೋರಿನಲ್ಲಿ ಫರೀದ್ ಬುಖಾರಿ ಹಮಾಮ್, ಮುಂತಾದವುಗಳು ಮೊಘಲರ ಕಾಲದ ವೈಭವವನ್ನು ಪ್ರದರ್ಶಿಸುತ್ತವೆ.

ಬಾಬರ್, ಅಕ್ಬರ್, ಜಹಾಂಗೀರ್ ಮುಂತಾದವರು ಕೆಂಪು ಕಲ್ಲುಗಳಲ್ಲಿ (Red Sand Stones) ಹಾಗೂ ಶಹಜಹಾನ್ ಹಾಗೂ ಅವನ ಸರದಾರರು ಸಂಗಮವರಿ (Marbles) ಕಲ್ಲುಗಳಲ್ಲಿ ಕಟ್ಟಿಸಿದರು. ಸುಣ್ಣ, ಉತ್ತಮ ಉಸುಕು, ಅಂಟು, ಹಾಲು, ಸಕ್ಕರೆಗಳ ಮಿಶ್ರಣವು ಉತ್ತಮ ಜೋಡಣೆಯ 'ಗಚ್ಚಾಗಿ' (Moratar as binding material) ಉಪಯೋಗಿಸಲಾಗಿದೆ. ಕೆಲವು ಹಮಾಮುಗಳಲ್ಲಿ ಸುಂದರ ಚಿತ್ರಗಳನ್ನು (paintings) ಚಿತ್ರಿಸಲಾಗಿದೆ. ಸುಗಂಧಿತ ಕಾರಂಜಿಗಳು ವಾತಾವರಣವನ್ನು ಸುಗಂಧಿತ ಗೊಳಿಸುತ್ತಿದ್ದವು.

ವಿನ್ಯಾಸ

ಸಾಮಾನ್ಯವಾಗಿ, ಮುಸ್ಲಿಂ ಸುಲ್ತಾನರ ಹಾಗೂ ಮೊಘಲರ ಸ್ನಾನಗೃಹಗಳು ವಿನ್ಯಾಸ ದಲ್ಲಿ ಅಷ್ಟಕೋನ, ಷಷ್ಟಕೋನ (octogonal or hexogonal) ನಕ್ಷೆಗಳೊಂದಿಗೆ ಕಟ್ಟಲಾಗಿದ್ದು, ಮುಖ್ಯ ದ್ವಾರದಿಂದ, ಇದು ಬಹಳ ಎತ್ತರವಾಗಿರದೆ, ಕೇವಲ ಮಾನವನ ಎತ್ತರವನ್ನು ಹೊಂದಿರುತ್ತದೆ. ಪ್ರವೇಶದ ತರುವಾಯ ಎರಡು ಮೂರು ತಿರುವುಗಳಲ್ಲಿ ದಾರಿಯೊಂದು (passage) ಒಳಗೆ ಕೊಂಡೊಯ್ಯುತ್ತಿತ್ತು. ಒಳಗಡೆ, ಪ್ರತಿ ಮುಖ್ಯ ದಿಕ್ಕುಗಳ ರೇಖೆಯಲ್ಲಿ (main four directions) ದೊಡ್ಡ ಕಪಾಟಗಳಂತೆ ಕಾಣುವ ತೆರೆದ ಅರ್ಧಕೋಣೆಗಳು ಇದ್ದು, ಇವುಗಳ ಮಧ್ಯಪ್ರಾಂಗಣದಲ್ಲಿ ಚೌಕಾದ ಇಲ್ಲವೆ ಅಷ್ಟಕೋನಾಕೃತಿಯ ಕಟ್ಟೆ ಇರುತ್ತಿತ್ತು. ಅಥವಾ ಕೆಲವು ಸ್ನಾನಗೃಹಗಳಲ್ಲಿ ಕಟ್ಟೆಯ

ಬದಲಾಗಿ ಕಾರಂಜಿಯುಕ್ತ ನೀರಿನ 'ಕೊಳ' (water tank) ಇರುತ್ತಿತ್ತು. ಈ ಕಾರಂಜಿಗಳು ಸುಗಂಧಪೂರಿತ ತಂಪು ನೀರನ್ನು ಸೂರಿ ಇಡೀ ವಾತಾವರಣವನ್ನು ಸಂಗಧಮಯ ಮಾಡುತ್ತಿದ್ದವು.

ಸ್ನಾನಕ್ರಿಯೆ (How to bathe)

ಈ ಕಟ್ಟೆಯ ಮೇಲೆ ಮಹತ್ವದ ಚರ್ಚೆ-ರಾಜಕೀಯ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಹಾಗೂ ವೈಯಕ್ತಿಕ-ಸಂಗೀತ, ನೃತ್ಯಗಳು ನಡೆಯುತ್ತಿದ್ದವು. ತಂಪು ಬೆಚ್ಚಗೆ, ಉಷ್ಣ, ಅತೀ ಉಷ್ಣಗಳ ನೀರಿನ ಹೌದುಗಳನ್ನು (water cisterns) ಗೋಡೆಗಳಲ್ಲಿ ಅಳವಡಿಸ ಲಾಗಿತ್ತು. ಹೊರಗಿನಿಂದ ಇಂಧನ ಪೂರೈಸುತ್ತಿರುವುದರಿಂದ, ಹೊಗೆ ಮುಂತಾದ ಕಲುಷಿತ ವಾತಾವರಣಕ್ಕೆ ಎಡೆ ಇರಲಿಲ್ಲ. ಮಧ್ಯದಲ್ಲಿಯ ಪ್ರಾಂಗಣದ ಮೇಲ್ಗಡೆ ಗುಮ್ಮಟವಿದ್ದು, ಅದರ ಸುತ್ತಲೂ ಹವೆಗವಾಕ್ಷಗಳು (Lantern Aperture) ಕಲುಷಿತ ಹವೆಯನ್ನು ಹೊರಗೆ ಹಾಕುತ್ತಿದ್ದವು. ಬಟ್ಟೆ ಬಿಚ್ಚುವ ಕ್ರಿಯೆ, ತೈಲಲೇಪನ ಹಾಗೂ ಮೈತಿಕ್ಕುವುದು (ನರಗಳು ಸಂದಿಗಳು ನೋವಾದರೆ ಒಳ್ಳೆಯ ವೈಜ್ಞಾನಿಕವಾಗಿ ತಿಕ್ಕುವ ಕ್ರಿಯೆಯಿಂದ ಸುಧಾರಿಸಿ, ಮೈ ಲವಲವಿಕೆ-ಚಟುವಟಿಕೆ ಪೂರೈಕೆ ಹೊಂದುತ್ತಿತ್ತು), ಇತ್ಯಾದಿ. ನಂತರ ಬೆಚ್ಚಗೆ ಸ್ನಾನ, ಬಿಸಿನೀರಿನ ಸ್ನಾನ, ಅತೀ ಬಿಸಿನೀರಿನ ಸ್ನಾನ, ನಂತರ ಮತ್ತೆ ಬಿಸಿನೀರಿನ ಸ್ನಾನ, ಉಗಿ ಸ್ನಾನ, ಕೊನೆಗೆ ತಂಪು ಸ್ನಾನ – ಹೀಗೆ ಶರೀರವು (noramal stage) ಮೊದಲಿನ ಸ್ಥಿತಿಗೆ ಬರುವಂತೆ ನೋಡಿಕೊಳ್ಳಲಾಗುತ್ತಿತ್ತು. ನಂತರ ಸ್ವಚ್ಛವಾದ ಟರ್ಕಿ ಟವೆಲ್‌ನಿಂದ (ಅಂದಿನಿಂದ ಈವರೆಗೂ ಟರ್ಕಿ ಟವೆಲ್‌ಗಳು ಪೇಟೆಗಳಲ್ಲಿ ದೊರೆಯುತ್ತವೆ. ಅವು ತುರ್ಕಸ್ತಾನ ದಿಂದ ಪ್ರಚಾರಗೊಂಡಿದ್ದರಿಂದ 'ಟರ್ಕಿ' ಎಂಬ ಹೆಸರು ಬಿದ್ದಿದೆ). ಆ ಮೇಲೆ ಸ್ವಚ್ಛ ಬಟ್ಟೆಗಳನ್ನು ಉಟ್ಟು, ಹೊರ ಬರುವಾಗ ಅತ್ತರ್ ವಗೈರೆ ಸಿಂಪಡಿಸಿಕೊಂಡು ಹೊರಬರ ಲಾಗುತ್ತಿತ್ತು.

ಹೀಗಾಗಿ, ಈ ಸ್ನಾನಗೃಹಗಳು ಶರೀರವನ್ನು ಶುದ್ಧಗೊಳಿಸುವುದಲ್ಲದೆ, ಕೈಕಾಲು ನೋವು, ಸಂಧಿವಾತ, ತಲೆನೋವು, ಹೃದಯ ಬಡಿಯುವಿಕೆ, ಮೂತ್ರಪಿಂಡಗಳ ಬೇನೆ ಮುಂತಾದವುಗಳನ್ನು ದೂರವಾಗಿರಿಸಿ, ವ್ಯಕ್ತಿಯನ್ನು ಆರೋಗ್ಯವಾಗಿ ಹಾಗೂ ಚೇತನಾ ಮಯಿಯಾಗಿ, ಮೇಲಾಗಿ ರಸಿಕನನ್ನಾಗಿ, ಬುದ್ಧಿಚತುರನನ್ನಾಗಿ, ಮಾಡುತ್ತಿದ್ದವು. ಮುಸ್ಲಿಂ ಹಮಾಮ್‌ಗಳು ಕೇವಲ ಸ್ನಾನಗೃಹಗಳಾಗಿರದೆ, ಆರೋಗ್ಯ ವರ್ಧಕ ಕೇಂದ್ರಗಳಾಗಿದ್ದವು.

ಸ್ನಾನಗೃಹಗಳು

ಭಾರತದಲ್ಲಿ, ಇನ್ನಿಷ್ಟು ಚಿಂತನ

ಕಾಲ ಸರಿಯುತ್ತಿದ್ದಂತೆ ಕ್ರಿ.ಶ. 900-1700 ವರೆಗೆ, ಭಾರತೀಯ ವಾಸ್ತುಶಿಲ್ಪದ ಬೆಳವಣಿಗೆಯು ರಾಜಪುತ, ಮೊಘಲ್ ಹಾಗೂ ಡೆಕ್ಕನ್ ಸುಲ್ತಾನರ ಆಳ್ವಿಕೆಗಳಲ್ಲಿ

ಸಾಕಷ್ಟು ವಿಸ್ತಾರ ಹೊಂದಿತು. 'ಇಂಡೋ ಸೆರಶ್ಯಾನಿಕ್ ಆರ್ಕಿಟೆಕ್ಚರ್' (Indo-Serasenic Architecture) ಎಂದು ಹೆಸರು ಪಡೆದು, ಅದು ಆಕರ್ಷಣೀಯವಾಗಿ, ವೈಭವೋಪೇತವಾಗಿ ಉತ್ತರ ಭಾರತದಲ್ಲಿ ಹಾಗೂ ಡೆಕ್ಕನ್‌ನಲ್ಲಿಯೂ ರಾಜ ವೈಭವದ ಕಟ್ಟಡಗಳ ಅವಿಭಾಜ್ಯ ಅಂಗವಾಗಿ ಬೆಳೆಯಿತು. ಗಚ್ಚು, ಗಾರೆ, ಕೆಂಪುಕಲ್ಲು ಹಾಗೂ ಚಂದ್ರಶಿಲೆ (marble) ಇವು ಪ್ರಾಮುಖ್ಯವಾಗಿ ಕಟ್ಟಡ ನಿರ್ಮಾಣಕ್ಕಾಗಿ ಉಪಯೋಗಿಸಲ್ಪಡುವ ಪದಾರ್ಥಗಳಲ್ಲಿ (constructional material) ಗಣಿಸಲಾಯಿತು. ಇಂಥ ರಾಜಸ್ವದ ಕಟ್ಟಡಗಳಲ್ಲಿ, ರಾಜಕೂಟಗಳಲ್ಲಿ, ರಾಣೀವಾಸಗಳಲ್ಲಿ (Janana) ಕೆಲ ಕೆಲವು ಆಡಳಿತ ಕಟ್ಟಡಗಳಲ್ಲಿ (Administrative Buildings) ಪ್ರಸಾಧನಗಳು, ಸ್ನಾನಗೃಹಗಳು ಚೌಕೋನದಲ್ಲಿ, ಷಷ್ಠಕೋನದಲ್ಲಿ, ಅಷ್ಟಕೋನದಲ್ಲಿಯ ವಿನ್ಯಾಸಗಳಲ್ಲಿ ನಿರ್ಮಾಣಗೊಂಡವು.

ಇಂಥ ಸ್ನಾನಗೃಹಗಳು ರಾಜಪುತ ತಾಣಗಳಾದ ಜೈಪುರ, ಜೋಧಪುರ, ಅಜ್‌ಮೀರ್, ಉದಯಪುರ, ಗ್ವಾಲಿಯರ್, ಮಾಂಡು, ಮೊಡೆರಾ, ರಣಥಂಬೋರ್, ಉಜ್ಜಯಿನಿ, ಚಿತ್ತೋಡಗಡ, ಪಾಟಣ (Gujarat), ವಡೋದರಾ, ಢೋಲಪುರ್, ಮಾಧೋಪುರ್, ಬಿಕಾನೇರ್, ಝಾಂಸಿ, ದಿಲ್ವಾರ್, ಮುಂತಾದವುಗಳ ಅರಮನೆಗಳಲ್ಲಿ ರಾಜವೈಭವದ ಸ್ನಾನಗೃಹಗಳಿವೆ. ಅದರಂತೆಯೇ ಮೊಘಲ್ ನಗರಗಳಾದ ದಿಲ್ಲಿ, ಆಗ್ರಾ, ಲಾಹೋರ್, ಫತ್ತೇಪೂರಸಕ್ರಿ, ಶಹಜಾನ್‌ಪುರ್, ಜೋನ್‌ಪುರ, ಮುಝಫರ್‌ಪುರ, ಲಖನೌ, ಮಥುರಾ, ಔರಂಗಾಬಾದ್ (ಬಿಹಾರ್), ಮುರಾದಾಬಾದ್, ಬಡೇರಿ, ಭಾಗಲ್‌ಪುರ, ಮೀರತ್, ಬುಲಂದಶಹರ, ಹಮೀರ್‌ಪುರ, ಅಲಹಾಬಾದ್, ಗಾಝಿಪುರ, ಅಝಮಗಡ್, ಸುಲ್ತಾನಪುರ, ಮುರ್ಶಿದಾಬಾದ್, ಹಜಾರಿಬಾಗ್, ಔರಂಗಾಬಾದ್ (ಮಹಾರಾಷ್ಟ್ರ), ಖುಲದಾಬಾದ್ (ಮಹಾ), ದೌಲತಾಬಾದ್, ಇನ್ನೂ ಹತ್ತು ಹಲವಾರು ಮೊಘಲರ ಐತಿಹಾಸಿಕ ಸ್ಥಳಗಳಲ್ಲಿ `ಹಮಾಮ್' (Hamams) ಗಳನ್ನು ಕಾಣಬಹುದು. ಹಾಗೆಯೇ, ಡೆಕ್ಕನ್‌ನಲ್ಲಿ (South India) ಬೀದರ್, ಗುಲಬರ್ಗಾ, ಅಹಮ್ಮದನಗರ, ಸೊಲ್ಲಾಪುರ್, ನಳದುರ್ಗ, ಬಿಜಾಪುರ, ಗೋಲ್‌ಕೊಂಡಾ, ಹೈದರಾ ಬಾದ್, ಬೆಳಗಾವ, ಸವಣೂರ್, ಬಂಕಾಪೂರ, ಪೊಂಡಾ (ಗೋವೆ), ಉಸ್ಮಾನಾಬಾದ್, ನಾಂಡೇಡ್, ಭೀಡ್, ಫರ್ಭಣಿ, ಔರಂಗಾಬಾದ್, ಅಹಮ್ಮದಾಬಾದ್, ನಿಜಾಮಾ ಬಾದ್, ರಾಯಚೂರ್, ಮುದಗಲ್, ಕೊಪ್ಪಳ್, ಸೀರಾ, ದೇವನಹಳ್ಳಿ, ಬೆಂಗಳೂರು, ಮೈಸೂರು, ಶ್ರೀರಂಗಪಟ್ಟಣ ದಕ್ಷಿಣ ಸುಲ್ತಾನರುಗಳ (Deccan Sultans) ಪಟ್ಟಣ ಗಳಲ್ಲಿ ಸ್ನಾನಗೃಹಗಳು ಕಾಣಸಿಗುತ್ತವೆ.

ವಿಜಯನಗರ ಸ್ನಾನಗೃಹಗಳು (Vijayanagar Baths)

ಇನ್ನು, ಮಧ್ಯಯುಗೀನ, ಬಲಿಷ್ಠ, ದಕ್ಷಿಣ ಭಾರತದ ಸಾಮ್ರಾಜ್ಯವಾದ ವಿಜಯ ನಗರ ಸ್ನಾನಗೃಹಗಳ ಬಗ್ಗೆ ಚರ್ಚಿಸೋಣ: ವಿಜಯನಗರದ ಸಾಮ್ರಾಜ್ಯವು (ಕ್ರಿ.ಶ. 1336-1565), ಬಹುಶೃತ ಸಾಮ್ರಾಜ್ಯ (Great empire in the Medieval Asia) ಆಗಿತ್ತು. ರಕ್ಷಣಾ ವಾಸ್ತು, ಧಾರ್ಮಿಕ ವಾಸ್ತು, ಸಾಮಾಜಿಕ ವಾಸ್ತು ಹಾಗೂ ಗೃಹ್ಯವಾಸ್ತು (Defence architecture, Religious architecture, secular architecture and domestic architecture) ಈ ತರಹದ ನಾಲ್ಕು ವಾಸ್ತುಗಳಲ್ಲಿ ಸ್ನಾನಗೃಹಗಳು ಗೃಹ್ಯವಾಸ್ತುವಿನ ಅಂಗಗಳಾಗಿವೆ.

ಹಂಪಿಯ ಉತ್ತರ ಮೇರೆಯಲ್ಲಿ ಕಲ್ಲು-ಬಂಡೆಗಳಿಗೆ ಕುಪ್ಪಳಿಸಿ, ಅಪ್ಪಳಿಸಿ, ಅಬ್ಬರ ವಾಗಿ, ಮತ್ತೆ ಉಬ್ಬು ತಗ್ಗಾಗಿ, ಮೇಲೆ ಕೆಳಗಾಗಿ ಧುಮ್ಮಿಕುವ ನುಸುಳುವ ತುಂಗಭದ್ರೆಯ ಹರಿವನ್ನು ವಿಜಯನಗರದ ಅರಸರು ಅರ್ಥವತ್ತಾಗಿ ಉಪಯೋಗಿಸಿದ್ದಾರೆ. ಹಿಡಿತದಲ್ಲೂ ತಂದಿದ್ದಾರೆ.

'ಸುರಸ್ವಪ್ನವಿದ್ದ, ಪ್ರತಿಬಿಂಬ ಬಿದ್ದ,

ಉದ್ಬುದ್ಧ ಶುದ್ಧ ನೀರೇ, ಎಚ್ಚತ್ತು ಎದ್ದ ಆಕಾಶದುದ್ದ

ಧರೆಗಿಳಿಯಲಿದ್ದ ಧೀರೆ...' ಅಂಥ ತುಂಗಭದ್ರೆಯನ್ನು ಬಂಧಿಸಿದ್ದಾರೆ ಹಾಗೂ ಸಾದರಪಡಿಸಿದ್ದಾರೆ, ತಮ್ಮ ನೆಲದಲ್ಲಿ, ಹಂಪಿಯಲ್ಲಿ.

ಆಗಸದಿಂದ ಬೀಳುವ ನೀರನ್ನು, ಉದ್ಬುದ್ಧ ಶುದ್ಧ ನೀರನ್ನು ನದಿಗಳಿಂದ ಹರಿ ಯುವ ನೀರನ್ನು ಸಂಗ್ರಹಿಸುವ, ಉಪಯೋಗಿಸುವ, ಅಭಿಯಾಂತ್ರಿಕ ಕಲೆಯನ್ನು ವಿಜಯ ನಗರದ ಅರಸರುಗಳು ಸಪ್ರಾಯೋಗಿಕವಾಗಿ, ತಮ್ಮ ರಾಜಧಾನಿಯಾದ ಹಂಪಿಯಲ್ಲಿ ವಿನ್ಯಾಸ ವಾಸ್ತುಗಳಲ್ಲಿ ಕಲ್ಗಾಲುವೆಗಳಿಂದ ಅಳವಡಿಸಿದ್ದಾರೆ. ತಮ್ಮ ಸುಂದರವಾದ ಅರಮನೆಗಳ ಆವರಣದಲ್ಲಿ ರಾಣೀವಾಸಗಳಲ್ಲಿ ಅದೂ ಅಲ್ಲದೆ ಧಾರ್ಮಿಕ ದೇವಾಗಾರ ಗಳ ಪ್ರಾಂಗಣಗಳಲ್ಲಿ ಸಾರ್ವಜನಿಕ ಮೇಳಗಳಲ್ಲಿ, ಆಯಾ ಆವಶ್ಯಕತೆಗಳಿಗೆ ತಕ್ಕಂತೆ ಸ್ನಾನಗೃಹಗಳನ್ನು ಸ್ನಾನಕ್ಕಾಗಿ ಸವಲತ್ತುಗಳನ್ನೂ ನಿರ್ಮಿಸಿದ್ದಾರೆ.

> ವಿಜಯನಗರ ಪರಿಸರವೇ ಹಾಗೆ. ಪ್ರಕೃತಿ ಎಲ್ಲಿ ಮುಗಿಯುತ್ತದೆಯೋ, ಹಾಗೂ ಮಾನವಕೃತಿಯು ಎಲ್ಲಿ ಪ್ರಾರಂಭವಾಗುತ್ತದೆಯೋ ಎಂಬ ಸೀಮಾ ರೇಖೆಯನ್ನು ಎಳೆಯುವದೇ ಕಷ್ಟ. 'It is very difficult to tell where nature leaves off and the work of man begins.'

ವಿಜಯನಗರದ ಜನಮನ ಹಾಗೂ ರಾಜಮನ ಸ್ನಾನದ ಬಗ್ಗೆ ಬಹಳ ಆಸ್ಥೆ ವಹಿಸಿದೆ. ಮಾನವ ಮನಸ್ಸು ಇಲ್ಲಿನ ಉಷ್ಣ ಹವೆಯನ್ನು ದೂರ ಸರಿಸಿ ತಂಪನ್ನೆಳಸುತ್ತದೆ. ಹೀಗಾಗಿ, ಆಗಸಕ್ಕೆ ಅನಾವರಣಗೊಂಡ ಸಾರ್ವಜನಿಕ ತೀರ್ಥಗಳು ಹಾಗೂ ರಾಜ-

ರಾಣಿಯರಿಗೆ ಮೀಸಲಾಗಿರಿಸಿದ ಸ್ನಾನಗೃಹಗಳು, ಚಕ್ರತೀರ್ಥ, ಪುರಂದರದಾಸರ ಘಾಟ್ ಮಂಟಪ, ಪಬ್ಲಿಕ್ ಬಾಥ್, ವಿರೂಪಾಕ್ಷ ದೇವಸ್ಥಾನದ ಹೊರಗಡೆ ಉತ್ತರ ದಿಕ್ಕಿನಲ್ಲಿರುವ ನಗರೇಶ್ವರ ದೇವಾಲಯದ ಪುಷ್ಕರಣಿ (Excavated by Dr. M.S. Nagaraj Rao), ಸ್ಟೆಪ್ಡ್ ವೆಲ್ (Excavated by Dr. B. Narashimhaiah), ಶ್ರೀ ವಿಜಯ ವಿಠ್ಠಲನ ಆವರಣದಲ್ಲಿ ವಾಯವ್ಯ ದಿಕ್ಕಿನಲ್ಲಿಯ ಪುಷ್ಕರಣಿ, ಶ್ರೀ ಅಚ್ಯುತರಾಯ ದೇವಸ್ಥಾನದ ಪುಷ್ಕರಣಿ, ಇತ್ಯಾದಿಗಳು (Open Air baths) ತೆರೆದಿಟ್ಟ ಸ್ನಾನಗಳ ತಾಣಗಳು, ಇವು ಅಸಂಖ್ಯ ಜನ ಜಂಗುಳಿಯ ಸ್ನಾನದ ತಾಣಗಳಿವು. **ಇವು ಒಂದು ತರಹ Non-structural baths**.

ಇನ್ನು ರಾಜಮನೆಗಳ ಪ್ರಾಂಗಣದಲ್ಲಿ ವ್ಯವಸ್ಥಿತ ವಾಸ್ತುಶಿಲ್ಪದಲ್ಲಿ, ಆಕರ್ಷವಾಗಿ ಸುಂದರವಾಗಿ, ಕಟ್ಟಲ್ಪಟ್ಟ ರಾಜವೈಭವದ ಸ್ನಾನಗೃಹಗಳು, ಈ ನಗರದಲ್ಲಿ ಹತ್ತು ಹಲವಾರು. ಪ್ರತಿಯೊಂದು ತನ್ನ ಸ್ಥಳಾಯ್ಕೆಯಲ್ಲಿ, ವಿನ್ಯಾಸದಲ್ಲಿ, ವಾಸ್ತುಬಂಧದಲ್ಲಿ, ಹಾಗೂ ಉದ್ದೇಶದಲ್ಲಿ ತನ್ನದೇ ಆದ ತನ್ನತನವನ್ನೇ ಹೊತ್ತು ನಿಂತಿದೆ. (Each Bath has got its own individuality). **ಇವು ಮತ್ತೊಂದು ತರಹ.** ಇವುಗಳಲ್ಲಿ ಕೆಲವು ಪ್ರಮುಖಗಳನ್ನು ಇಲ್ಲಿ ಹೆಸರಿಸಲಾಗುತ್ತಿದೆ. ಹಾಗೂ ಅವುಗಳ ವಾಸ್ತು ವಿಶೇಷತೆಯನ್ನು ನೀಡಲಾಗಿದೆ. ರಾಣಿ ಸ್ನಾನಗೃಹ (Queen's bath), ಪಬ್ಲಿಕ್ ಬಾತ್(Public bath), ಸ್ಟೆಪ್ಡ್‌ವೆಲ್ (Stepped Well),ಕಮಲ ಮಹಲ್ ಆವರಣದ ಸ್ನಾನಕೊಳ (Bath in Kamal Mahal Complex), ಶೃಂಗಾರ ಬಾಗಿಲದ ಹತ್ತಿರ ಅಷ್ಟಪೆಲು ಸ್ನಾನಗೃಹ (Octagonal bath near Sringar Bagilu), ರಂಗಮಹಲ್‌ನ ಪ್ರಸಾಧನಗಳು (Baths in Rangamahal), ಹಾಗೂ ದಣ್ಣಾಯಕ ಆವರಣದಲ್ಲಿ ಸ್ನಾನಗೃಹ (Bath in Dannayaka enclosure), (**ಇವು Structural baths**).

ರಾಣಿ ಸ್ನಾನ ಗೃಹ (Queen's Bath)

ಇದು ವಿಜಯನಗರ ಸ್ನಾನಗೃಹಗಳಲ್ಲಿ ಅತ್ಯಂತ ಸುಂದರವಾದುದು. ಚೌಕಾದ, ಗಟ್ಟಿಮುಟ್ಟಾದ ಗೋಡೆಗಳಿಂದ, ನಾಲ್ಕೂ ಕಡೆ ಎರಡು ಅಂತಸ್ತುಗಳಲ್ಲಿ ಕಟ್ಟಿದ 'ಇಂಡೋ ಶೆರಶ್ಯಾನಿಕ್' ವಾಸ್ತುಶಿಲ್ಪದ ಬಂಧವಾಗಿದೆ. ನಾಲ್ಕೂ ಕಡೆಗೆ ಪ್ರವೇಶಗಳಿದ್ದು, ಮಧ್ಯದಲ್ಲಿ ಚೌಕಾದ ನೀರಿನ ಸಂಗ್ರಹವಿದೆ. ನೀರು ಕಾಲುವೆಗಳಿಂದ ಹರಿದು ಬರುತ್ತದೆ. ಮಧ್ಯದಲ್ಲಿ ಕಾರಂಜಿ ಇದೆ. ಸ್ವಚ್ಛಗೊಳಿಸಲು ಮೋರಿಗಳೂ ಇವೆ. ಬಟ್ಟೆ ಬದಲಿಸಲು ಮೇಲಂತಸ್ತಿನಲ್ಲಿ ಕಮಾನುಗಳ ಕೋಣೆಗಳೂ ಇವೆ. ಕಮಲಾಪುರದಿಂದ ಮಹಾನವಮಿ ದಿಬ್ಬಕ್ಕೆ ಹೋಗುವ ದಾರಿಯಲ್ಲಿ, ಅನತಿ ದೂರದಲ್ಲಿ ಬಲಬದಿಗೆ ಆಕರ್ಷಕ ಪರಿಸರದಲ್ಲಿ ಇದನ್ನು ಕಟ್ಟಲಾಗಿದೆ. ರಾಣಿಯರು ಇದನ್ನು ಉಪಯೋಗಿಸುತ್ತಿದ್ದರಿಂದ `ರಾಣಿ ಸ್ನಾನಗೃಹ' ಎಂದು ನಾಮ ಪಡೆದಿದೆ.

ಪಬ್ಲಿಕ್ ಬಾಥ್ (Public Bath)

ಇದೊಂದು ಮಹಾನವಮಿ ಆವರಣದ ಒಳಗಡೆ, ದಕ್ಷಿಣದ ಭಾಗದಲ್ಲಿ, ಕೋಟೆಯ ಗೋಡೆಯ ಒಳಗಡೆ ಇರುವ ವಿಶಾಲವಾದ ಸ್ನಾನಮಂಟಪ. ಇಡೀ ವಿಜಯನಗರದ ಸ್ನಾನಗೃಹಗಳಲ್ಲಿಯೇ ದೊಡ್ಡದು. ಸ್ನಾನಗೃಹವೆನ್ನುವುದಕ್ಕಿಂತ 'ಸ್ನಾನ ಮಂಟಪ' ಎಂಬ ಹೆಸರು ಸಮರ್ಪಕ. ಏಕೆಂದರೆ ಅಷ್ಟೊಂದು ವಿಸ್ತೀರ್ಣ ಹಾಗೂ ಕಲ್ಲಿನ ಕಂಬಗಳ ಕಾರಿಡೋರ್ (ಈಗ ಬಿದ್ದಿದೆ)ಗಳಿಂದ ಅದರ ನಾಲ್ಕೂ ದಿಶೆಗಳಲ್ಲಿ ಬಂಧಿತವಾಗಿದೆ. ಚೌಕಾದ ಕಟ್ಟೆ ಕಟ್ಟೆಗಳಿಂದ ಕೆಳಗಿಳಿದಂತೆ ಅಳತೆಗಳಲ್ಲಿ ಕಡಿಮೆ ಆಗುತ್ತ ಆಗುತ್ತ ಹೋಗಿ, ಕೊನೆಗೆ ಗಚ್ಚು ಗಾರೆಗಳಿಂದ ನಿರ್ಮಿತವಾದ ಸಪಾಟಾದ ಹಾಗೂ ವಿಶಾಲವಾದ ತಳದಿಂದ (bottom) ಕೂಡಿದ್ದು, ಸ್ಥೂಲವಾಗಿ ಪೂ.ಪ. 150 ಫೂ ಹಾಗೂ ಉ.ದ 80 ಫೂ., ಆಳ 18 ಫೂ ಇದೆ.

ಇದಕ್ಕೆ ನೀರನ್ನು ಪೂರ್ವಬದಿ ಹಾಗೂ ದಕ್ಷಿಣ ಬದಿಗೆ, ಜೋಡಿಸಿರುವ ಕಲ್ಲಿನ ಕಾಲುವೆಗಳಿಂದ (water channels cut in long stones), ಅವುಗಳನ್ನು ಅಲ್ಲಲ್ಲಿ ನೆಲ ದಿಂದ ಮೇಲೆ ನಿಲ್ಲಿಸಿದ ಕಂಬಗಳ ಮೇಲಿರಿಸಿ, ಜೋಡಿಸಿ, ಚೆನ್ನಾಗಿ ನೀರು ಸೋರದಂತೆ ಹೊಂದಿಸಿ, ಸೈಫನ್ ಪದ್ಧತಿಯಿಂದ (ನೀರನ್ನು) ಪೂರೈಸಲಾಗುತ್ತಿತ್ತು. ಇದು ಪೂರ್ತಿ ತುಂಬಿದಾಗ, ಒಂದು ಕಟ್ಟಿದ ಕೆರೆಯಂತೆ ಕಾಣುತ್ತಿತ್ತು. ಇದರಲ್ಲಿ ಪ್ರಾಯಶಃ ರಾಜ ಮನೆತನದ ಪುರುಷರು ವ್ಯಾಯಾಮಕ್ಕಾಗಿ, ದೇಹದಾರ್ಢ್ಯ ವೃದ್ಧಿಸುವುದಕ್ಕಾಗಿ, ಬಹಳಷ್ಟು ಈಜಲು, ಇದನ್ನು ಕಟ್ಟಿರಲು ಸಾಧ್ಯ. ಇದು ರಾಜಮನೆಗಳ ಆವರಣದಲ್ಲಿಯೇ ಇರುವುದರಿಂದ ಇದಕ್ಕೆ 'ಪಬ್ಲಿಕ್ ಬಾಥ್' ಎನ್ನುವುದು ಅಷ್ಟು ಸರಿಯಲ್ಲ. ಸಾರ್ವ ಜನಿಕರಿಗೆ ಇದೊಂದು ನಿರ್ಬಂಧಿತ ಪ್ರದೇಶವೇ (prohibited) ಆಗಿತ್ತು. 'ಪಬ್ಲಿಕ್ ಬಾಥ್' ಎಂದು ಈ ಹಿಂದೆ ಬ್ರಿಟಿಶ್ ಆರ್ಟ್ ಹಿಸ್ಟೋರಿಯನ್‌ರು ಅವಸರದಲ್ಲಿ ಹೆಸರಿಟ್ಟು, ಕರೆಯುತ್ತ ಬಂದಿದುದರಿಂದ, ಈಗಲೂ 'ಪ್ರೊಟೆಕ್ಟೆಡ್ ಮಾನ್ಯುಮೆಂಟ್ಸ ಲಿಸ್ಟ್'ನಲ್ಲಿ ಹಾಗೆಯೇ ಅಧಿಕೃತವಾಗಿ ಹೆಸರು ಇಟ್ಟಿದ್ದಾರೆ. ಇದಕ್ಕೆ 'ರಾಜಬಾಥ್' ಎಂದು ಕರೆಯುವುದು ಅತ್ಯಂತ ಉಚಿತ (Raj Bath). ಏಕೆಂದರೆ ಇದರ ಪೂರ್ವಕ್ಕೆ ಕೋಟೆ ಗೋಡೆಯ ಆಚೆ 'ಕ್ವೀನ್ಸ್ ಬಾಥ್' ಇದೆ. ಹೀಗಾಗಿ, 'ಕ್ವೀನ್ಸ್ ಬಾಥ್' ಹಾಗೂ 'King's bath' (ರಾಜಬಾಥ್) ಎಂದು ಕರೆಯುತ್ತ ಹೋದರೆ, ಅದು ರೂಢಿಗತವಾಗುತ್ತ ಹೋಗಿ, 'ಸಹಿ' ಎನ್ನಿಸುತ್ತದೆ. (ಚಿತ್ರ ನೋಡಿ).

ಸ್ಟೆಪ್ಡ್ ವೆಲ್ (Stepped Well)

ಮಹಾನವಮಿ ದಿಬ್ಬದ, ದಕ್ಷಿಣ ದಿಕ್ಕಿನಲ್ಲಿ ಕೇವಲ 150 ಫೂ ಅಂತರದಲ್ಲಿದೆ. ಸಂತಸ ತರುವ, ಬಹು ಆಕರ್ಷಕ ಚೌಕಾದ, ಕಟ್ಟೆಕಟ್ಟೆಯಲ್ಲಿ ಕಿರಿದಾಗುತ್ತ ತಳಕ್ಕೆ ಹೋಗುವ, ಕರಿಕಲ್ಲಿನಲ್ಲಿ Ashlar masonry ಪದ್ಧತಿಯಲ್ಲಿ ಜೋಡಿಸಲಾದ,

ಸ್ನಾನಕೊಳವೆನ್ನಿ, ಸ್ಟೆಪ್ಡ್‌ವೆಲ್ ಅನ್ನಿ, ಅಥವಾ ಪುಷ್ಕರಣಿ ಎನ್ನಿ; ಏನಾದರೂ ಅನ್ನಿ, ಆದರೆ ಅತ್ಯಂತ ಸುಂದರವಾದ ಸ್ನಾನದ ಕೊಳವಿದು.

1976ರಲ್ಲಿ, ಡಾ. ಎಸ್.ಆರ್.ರಾವ್ ಅವರ ನಿರ್ದೇಶನದಲ್ಲಿ, ಉತ್ಖನನದ ಕಾರ್ಯದ ಸೂತ್ರವನ್ನು ಈ ಲೇಖಕನು ಹಿಡಿದಿದ್ದಾಗ, ಡಾ. ಆರ್.ಎಂ.ಷಡಕ್ಷರಯ್ಯ ಅವರು ಈ ಸ್ಟೆಪ್ಡ್‌ವೆಲ್‌ನ ಒಂದು ಮೀಟರ್ ಅಂತರದಲ್ಲಿ Excavation Trench ಹಾಕಿದರು. ಆದರೆ, ಒಂದು ಮೀಟರ್ ಆಳ ಅಗೆದರೂ ಅಲ್ಲಿ ಯಾವುದೇ ಕಟ್ಟಡದ ಸ್ತರವಾಗಲೀ, ಅವಶೇಷ ಆಗಲೀ ದೊರೆಯಲಿಲ್ಲ. ಹಾಗಾಗಿ ನಿರಾಸೆಯಿಂದ ಉತ್ಖನನದ ಸ್ಥಳ ಬದಲಿಸಿದೆವು. ಮುಂದೆ 1985 ರಲ್ಲಿ, ಡಾ. ಬಿ.ನರಸಿಂಹಯ್ಯನವರು ಅದೇ ಸ್ಥಳದಲ್ಲಿ ಮತ್ತೆ ಉತ್ಖನನವನ್ನು ಪ್ರಾರಂಭಿಸಿದರು. ಅದು ಅವರ ಸುದೈವ. ನಾವು ಹಾಕಿದ್ದ ಟ್ರೆಂಚ್‌ನ ಪಕ್ಕದಲ್ಲಿಯೇ ಒಂದು ಮೀಟರ್ ಅಂತರದಲ್ಲಿ ಈ ಮೇಲಿನ ಸುಂದರವಾದ ಸ್ನಾನ ಕೊಳ ದೊರೆಯಿತು. ಇಡೀ ದೇಶವೇ ಡಾ. ಬಿ.ನರಸಿಂಹಯ್ಯರನ್ನು ಅಭಿನಂದಿಸಿತು. (ಚಿತ್ರ ನೋಡಿ).

ಇದು ಈ 'ಸ್ಟೆಪ್ಡ್‌ವೆಲ್' ನ ಹಿನ್ನೆಲೆ. ಇನ್ನು ಇದರ ವಿನ್ಯಾಸ ಹಾಗೂ ವಾಸ್ತುಕಲೆಯ ಬಗ್ಗೆ ವಿವರಿಸುವುದಾದರೆ, 80 ಫೂ x 80 ಫೂ ಟೆರಸಿನ ಬಾಹ್ಯ ಚೌಕಟ್ಟಿನಿಂದ ಕೆಳಗೆ ಇಳಿದಂತೆ, ನಾಲ್ಕು ವಿಭಾಗಗಳಲ್ಲಿ ಕಡಿಮೆ ಕಡಿಮೆ ಆಗುತ್ತ ಹೋಗುವ ಪಾವಟಿಗೆಗಳಿಂದ ಜೋಡಿಸಲಾಗಿದೆ. ಈ ನಾಲ್ಕು ವಿಭಾಗಗಳು ಲ್ಯಾಂಡಿಂಗ್ಸ್ (landings) ಗಳಿಂದ ಅಳವಡಿಸಲಾಗಿದ್ದು, ಅತ್ಯಂತ ತಳದ ಹಂತದಲ್ಲಿ 30'x30' ಹಾಗೂ 10 ಫೂ ಆಳವಾದ ಕಟ್ಟಡದ ಹೌದಿನಂತಿದೆ. ಅಲ್ಲಿಗೆ ಇದರ ಆಳ ಮುಗಿಯಿತು. ಈ ನಾಲ್ಕು ವಿಭಾಗಗಳಲ್ಲಿ 6, 5, 6, ಹಾಗೂ 5 ಕಟ್ಟೆಗಳ ಸಾಲುಗಳು ನಾಲ್ಕೂ ದಿಕ್ಕುಗಳಲ್ಲಿ ಪಸರಿಸಿವೆ. ಈ ನಾಲ್ಕೂ ಹಂತಗಳಲ್ಲಿ ಮತ್ತೆ ಮುಂಚಾಚಿದ ಉಪ-ಕಟ್ಟೆಗಳು ಕಮಲಿನಂತೆ (inverted lotus) ಕಟ್ಟಲ್ಪಟ್ಟು, ನೀರನ್ನು ತಲುಪಲು ಅನುಕೂಲ ನಿರ್ಮಿಸಿವೆ. ಇದನ್ನು ನಿರ್ಮಿಸುವಾಗ ಪ್ರತಿ ಕಲ್ಲಿನ ಮೇಲೆ ವಿವಿಧ ಚಿನ್ಹೆಗಳಿದ್ದು, ಮೇಲಿನಿಂದ ಕೆಳಗೆ ಇಳಿಯುವಾಗ 1 ರಿಂದ 25 ಮೆಟ್ಟಿಲುಗಳವರೆಗೆ ಠ ಡ ಢ ಣ, ತ ಥ ದ ಧ ನ, ಹೀಗೆ.... ಕ್ಷ, ಜ್ಞ, ವರೆಗೆ ಅಕ್ಷರಗಳನ್ನು ಸಾಂಕೇತಾರ್ಥದಲ್ಲಿ ಕೆತ್ತಲಾಗಿದೆ. ಇದರ ನೀರಿನ ಪೂರೈಕೆಗೆ, ಬದಿಯಲ್ಲಿ ಬಾಯಿ ಹಾಕಿದ ಕಲ್ಲಿನ ಕಾಲುವೆಯನ್ನು ಉಪಯೋಗಿಸಲಾಗುತ್ತಿತ್ತು. ಮತ್ತು (Ground water) ಭೂ ಅಂತರ್‌ಜಲ ಕೂಡ ಬರುತ್ತಿತ್ತು. (ಇದರ ಚಿತ್ರಗಳನ್ನು ನೋಡಿ) ಇದರ ಬಗ್ಗೆ ಡಾ. ಜಗದೀಶ; ವಿಜಯನಗರ ಅಧ್ಯಯನ, ಸಂಪುಟ 10, ಪುಟ 195, 196, 197 ರಲ್ಲಿ, (ಸಂ. ಡಾ. ಆರ್.ಗೋಪಾಲ, ಬಿ.ಎಂ.ಚಿಕ್ಕಮಾದೇಗೌಡ, ಟಿ.ಎಸ್.ಗಂಗಾಧರ) ಇವರು ಸಾಕಷ್ಟು ವಿವರಣೆ ನೀಡಿದ್ದಾರೆ.

ಕಮಲ್ ಮಹಲ್ ಸ್ನಾನಗೃಹ

ಇದು, ಕಮಲ್ ಮಹಲಿನ ಮಧ್ಯಭಾಗದಲ್ಲಿ ನೀರಿನ ಹೌದಿನಂತಿದೆ. ಕಮಲ ಮಹಲ್ಲ್ ಮುಖ್ಯವಾಗಿ ರಾಣಿಯರ ಮನೋಲ್ಲಾಸದ ಮಹಲ್ ಆಗಿದ್ದು, ವಿಜಯ ನಗರದ ಗೃಹ್ಯವಾಸ್ತುಗಳಲ್ಲಿ ಅತ್ಯಂತ ಸುಂದರವಾಗಿದೆ. ನಾಲ್ಕು ದಿಶೆಗಳಲ್ಲಿ ಸಂಯುಕ್ತ ಕಮಾನುಗಳ ಜೋಡಣೆ, (Complex Arch) ಇದ್ದು, ಎರಡು ಅಂತಸ್ತುಗಳಿಂದ ಶೋಭಿತವಾದ 'ಇಂಡೋ ಸೆರಶೆನಿಕ್' ಆರ್ಕಿಟೆಕ್ಚರಿನ ಅಳವಡಿಕೆಯಿಂದ ಸೌಂದರ್ಯ ಪಡೆದಿದೆ. ಈ ಕಟ್ಟಡದ ಪಶ್ಚಿಮ ದಿಕ್ಕಿನಲ್ಲಿ ಅನತಿ ದೂರದಲ್ಲಿ, ಸೋಪಾನಗಳಿಂದ ಕೂಡಿದ ಇನ್ನೊಂದು ಸ್ನಾನದ ಕೊಳವಿದೆ. ಕಮಲ್ ಮಹಲ್‌ನ ಇಡಿಯಾದ ಕಾಂಪ್ಲೆಕ್ಸ್‌ವು, ಅತ್ಯಂತ ಎತ್ತರವಾದ ಸುತ್ತಲಿನ ಗೋಡೆಯಿಂದ ಆವರಣಗೊಂಡು, ಸಾಕಷ್ಟು ರಕ್ಷಣೆ ಹಾಗೂ privacy ಪಡೆದಿದೆ. ಹಾಗಾಗಿ, ರಾಣಿಯರು ಇದರ ಆವರಣದಲ್ಲಿ ಮುಕ್ತರಾಗಿ ವಿಹರಿಸಬಹುದಾಗಿತ್ತು. (ಚಿತ್ರ ನೋಡಿ).

ಅಷ್ಟಪೈಲು ಸ್ನಾನಗೃಹ (ಶೃಂಗಾರದ ಬಾಗಿಲಿನ ಬಳಿ)

1992-94 ರಲ್ಲಿ ಈ ಲೇಖಕನು ಪಂಟ್ಟಾಂಬ ದೇವಸ್ಥಾನದ ಮೂರು ಫರ್ಲಾಂಗು, ಆಗ್ನೇಯ ದಿಕ್ಕಿನಲ್ಲಿ, ಮಂಡಳ ನಾಯಕನ ಅರಮನೆ ಉತ್ಖನನ ಕೈಕೊಂಡಾಗ, ಸ್ಥಳ ಸಮೀಕ್ಷೆ ಹಾಗೂ ಕ್ಷೇತ್ರ ಕಾರ್ಯದಲ್ಲಿ ತೊಡಗಿದ್ದಾಗ, ಆ ಉತ್ಖನನದ ಪೂರ್ವ ಬದಿಗೆ, ಸುಮಾರು ಅರ್ಧ ಫರ್ಲಾಂಗಿನಂತರದಲ್ಲಿ, ಈ ಅಷ್ಟಪೈಲು ಸ್ನಾನಗೃಹ ನೋಡಿದ್ದಾಗಿದೆ. ಈ ಪೂರ್ವದಲ್ಲಿ ಮತ್ತಾರಾದರೂ ನೋಡಿರಲೂಬಹುದು. ಆದರೆ ಅದರ ಬಗ್ಗೆ, ವಿನ್ಯಾಸ, ವಾಸ್ತು, ವಿಸ್ತರಣೆ, ರಚನೆಗಳ ಬಗ್ಗೆ ಹಾಗೂ ಅದರ ಹೆಸರಿನ ಬಗ್ಗೆ, ವಿಶೇಷ ಗಮನ ನೀಡಿರಲಿಲ್ಲ. ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಈ ಲೇಖಕನು ಪ್ರಯತ್ನಿಸಿ ಸಾರಸ್ವತ ಲೋಕದ ಮುಂದೆ ಇಟ್ಟಿದ್ದಾನೆ ಪ್ರಥಮ ಬಾರಿಯಾಗಿ.

ಈ ಅಷ್ಟಪೈಲು ಸ್ನಾನಗೃಹವು ಸುಂದರವಾದ ಏಕಾಂತ ಪರಿಸರದಲ್ಲಿದೆ. ಈ ಏಕಾಂತ ಪರಿಸರವು ರಸಿಕತೆಯ ಮನವನ್ನು ಹಿಗ್ಗಿಸುತ್ತದೆ. ಇದೊಂದು ದುಂಡನೆಯ ಭಿತ್ತಿನ ಅಷ್ಟಪೈಲು ವಿನ್ಯಾಸದ, ನಾಲ್ಕೂ ಕಡೆಗೆ ಪ್ರದಕ್ಷಿಣಿಸಲು ವರ್ತುಲಾಕಾರದ ಪಥ (Corridor) ಮಂಟಪದ ಮಧ್ಯದಲ್ಲಿ ಅಷ್ಟಕೋನಾಕೃತಿಯ ನೀರಿನ ಕೊಳ. ನೀರನ್ನು ಪೂರೈಸಲು ಭೂ ಅಂತರ್ (under ground) ಸೈಫನ್ ಪದ್ಧತಿಯ ಕೊಳವೆಯನ್ನು ಉಪಯೋಗಿಸಲಾಗಿದೆ. ಇದರ ದಕ್ಷಿಣ-ಪಶ್ಚಿಮ ದಿಶೆಯಲ್ಲಿ ನಾಲ್ಕು ರೂಮುಗಳ ಪ್ರಸಾಧನ ಪಿದೆ. ಈ ಪ್ರಸಾಧನದಲ್ಲಿ ಬಿಸಿ ನೀರಿನ ಹೌದುಗಳಿವೆ. ಗೋಡೆಯು ಹೊರಗಡೆ ಯಿಂದ ಇಂಧನ ಹಾಕುವ ತೂತುಗಳು ಹಾಗೂ ಮಾಡುಗಳು ಇವೆ. ಹೊರಗೆ, ಅಷ್ಟಪೈಲು ತಣ್ಣೀರಿನ ಕೊಳದಲ್ಲಿ ಸ್ನಾನಮಾಡಿ, ಈ ಪ್ರಸಾಧನ ಕೋಣೆಗಳಲ್ಲಿ ಮತ್ತೆ ಬಿಸಿನೀರಿನ

ಸ್ನಾನ ಮಾಡಬಹುದು. ಒಗೆದ ಬಟ್ಟೆಗಳನ್ನು ಬದಲಿಸಬಹುದು. ಈ ಸ್ನಾನಗೃಹವು ಮೊಘಲರ ಸ್ನಾನಗೃಹಕ್ಕೆ, ವಿನ್ಯಾಸ ಹಾಗೂ ವಾಸ್ತುವಿನಲ್ಲಿ, ಬಹಳಷ್ಟು ಸಮೀಪ ವಾಗಿದೆ. ಇಂಥ ಸ್ನಾನಗೃಹಗಳನ್ನು ದಿಲ್ಲಿ, ಆಗ್ರಾ, ಫತೇಪುರ ಸಿಕ್ರಿಗಳಲ್ಲಿ ಕಾಣಬಹುದು. ಹೀಗಾಗಿ, ಇದೊಂದು ವಿಜಯನಗರದ ಉತ್ತಮ ಸ್ನಾನಗೃಹ.

ರಂಗಮಹಲಿನ ಪ್ರಸಾಧನಗಳು


ಕ್ರಿ.ಶ. 1977-80 ರಲ್ಲಿ ಹಜಾರರಾಮ ಮಂದಿರದ ಪಶ್ಚಿಮಕ್ಕಿರುವ ವಿವಿಧ ಆವರಣ ಗಳಲ್ಲಿ (enclosures), ಉತ್ಖನನ ಕೈಗೊಂಡಾಗ, ದೊರೆತದ್ದು ಈ ರಂಗಮಹಲ್ (Excavations by Dr. R.C. Agrawal, Dr. S.K. Joshi & others). ಇದರ ಆವರಣದಲ್ಲಿ ಉತ್ತರದ ದಿಕ್ಕಿನ ಒಳಗೋಡೆಯ, ಸಮೀಪ, ಸಾಲಾಗಿ ನಿರ್ಮಿಸಿದ ಪ್ರಸಾಧನ ರೂಮುಗಳು, ಹಾಗೂ ಅವುಗಳಿಗೆ ಜೋಡಿಸಲಾದ ಒಳಚರಂಡಿಗಳು ದೊರೆತವು, ಮತ್ತು ಈಶಾನ್ಯ ಮೂಲೆಯಲ್ಲಿ ಪುಟ್ಟದಾದ ಮಹಲಿನಲ್ಲಿ ಸುಂದರವಾದ ಕಲ್ಲಿನಲ್ಲಿ ಕೊರೆದ ಅಖಂಡ ಟಬ್ (Tub), ದೊರೆಯಿತು. (ಚಿತ್ರ ನೋಡಿ). ಇವು ಗೃಹ್ಯ ಬಳಕೆಗೆ ತೀವ್ರವಾಗಿ ಉಪಯೋಗಿಸುವ ಪ್ರಸಾಧನಗಳಾಗಿವೆ. ರಂಗಮಹಲ್‌ನ ಕಾರ್ಯಕ್ರಮಗಳು ಕೇವಲ ಪ್ರತಿಷ್ಠಿತರಿಗೆ ಮನರಂಜನೆ, ಸ್ವಾಗತ ಸಮಾರಂಭ, ನೃತ್ಯ ನಾಟಕ ಮೊದಲಾದವುಗಳಿಗೆ ಉಪಯೋಗಿಸುತ್ತಿರುವುದರಿಂದ, ಈ ತರಹದ ಸಾಲಾಗಿ ನಿಂತ ಬಹುಸಂಖ್ಯೆಯ ಪ್ರಸಾಧನಗಳ ಅವಶ್ಯಕತೆ ಇತ್ತು.

ಸಮಾಪ್ತಿ


ಹೀಗೆ, ವಿಜಯನಗರದ ಸ್ನಾನಗೃಹಗಳ ಸಮೀಕ್ಷೆಯನ್ನು ಇಲ್ಲಿ ವಿಶದಪಡಿಸಲು ಪ್ರಯತ್ನಿಸಲಾಯಿತು. ವಿಶ್ವದ ಬೃಹತ್ ಸಾಮ್ರಾಜ್ಯಗಳಲ್ಲಿ, ಮಧ್ಯಯುಗೀನ ದಕ್ಷಿಣ ಭಾರತದ ವಿಜಯನಗರವೂ ಅಷ್ಟೇ ವೈಭವೋಪೇತವಾಗಿ ಆಳಿದುದರಿಂದ, ಅದರ ಸಿರಿಸಂಪತ್ತುಗಳಿಗೆ ಅನುಸಾರವಾಗಿ, ಅಲ್ಲಿನ ಸ್ನಾನಗೃಹಗಳೂ ಕೂಡ ವೈಶಿಷ್ಟ್ಯ ವೈಭವಗಳಿಂದ ಕೂಡಿದ್ದವು ಎಂಬುದು ವಾಸ್ತವದ ಸತ್ಯ. ಇತಿಹಾಸದಲ್ಲಿ ತಮ್ಮದೇ ಆದ ಪುಟಗಳನ್ನು ಹೊಂದಿದ ರೋಮನ್ ಸಾಮ್ರಾಜ್ಯ, ಮೊಘಲ್ ಸಾಮ್ರಾಜ್ಯಗಳ ಭವ್ಯ ಹಾಗೂ ಸುಂದರವಾಗಿ ನಿರ್ಮಿತ ಸ್ನಾನಗೃಹಗಳ ಸಾಲಿನಲ್ಲಿ, ವಿಜಯನಗರದ ಸ್ನಾನಗೃಹಗಳೂ ಅಭಿಮಾನದ ವಾಸ್ತುಕಲೆಯ ಕಲೆಗಳಾಗಿವೆ.


ಆಧಾರ ಗ್ರಂಥಗಳು


1. ಡಾ. ಸೂರ್ಯನಾಥ ಕಾಮತ: *ಕರ್ನಾಟಕ ಕೈಗನ್ನಡಿ,* ಕರ್ನಾಟಕ ಅಕಾಡೆಮಿ, ಬೆಂಗಳೂರು 2007
2. ಡಾ. ಎಚ್ಚೆಸ್ಕೆ (ಸಂ): *ಅವಲೋಕನ,* ಕರ್ನಾಟಕ ಪರಂಪರೆಯ ಸಮೀಕ್ಷೆ, ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು, 1985
3. Dr. Suryanath Kamat (Ed): *A Hand* Book *of Karnatataka* Dept. of Gazetteer, Karnataka Govt., Bangalore.
4. ಡಾ. ಆರ್.ಗೋಪಾಲ್, ಟಿ.ಎಂ.ಚಿಕ್ಕಮಾದೇಗೌಡ, ಟಿ.ಎಸ್.ಗಂಗಾಧರ್ (ಸಂ.): *ವಿಜಯನಗರ ಅಧ್ಯಯನ ಸಂಪುಟ-೧೧,* ಪ್ರಾಚ್ಯವಸ್ತು ಹಾಗೂ ಸಂಗ್ರಹಾಲಯಗಳ ನಿರ್ದೇಶನಾಲಯ (ಕರ್ನಾಟಕ ಸರಕಾರ), ಮೈಸೂರು, 2005
5. ಡಾ. ಎಸ್.ಕೆ.ಜೋಶಿ: *ರಸಿಕತೆಯ, ಸೌಂದರ್ಯದ ಐತಿಹಾಸಿಕ ಸ್ನಾನಗೃಹಗಳು,* ಸಂ.ಕ. ಸಾಪ್ತಾಹಿಕ, ಹುಬ್ಬಳ್ಳಿ 1982.
6. ಡಾ. ಜಗದೀಶ: *ಹಂಪಿ ಮೆಟ್ಟಿಲು ಪುಷ್ಕರಣಿಯ ನಿರ್ಮಾಣ ಪ್ರಕ್ರಿಯೆ.* ವಿಜಯನಗರ ಅಧ್ಯಯನ, ಸಂಪುಟ ೧೧, ಮೈಸೂರು.
7. Jawaharlal Nehru: The Baths of Caracalla, (The Roman Thermae) *Glimpses of the World History*, London, 1954





ರೋಮನ್ ಥರ್ಮೀ (ಕ್ರಿ. ಪೂ. 200) ವೆಟಿಕನ್ ಸಿಟಿ





ಗಚ್ಚಿನಲ್ಲಿ ಇಟ್ಟಿಗೆ
ಹಂಚುಗಳು
ಕಂಬ
ರೋಮನ್
ಬಿಸಿ ನೀರಿನ ಸ್ನಾನಗೃಹ



ಮೊಘಲರ
ಬಿಸಿನೀರಿನ ಸ್ನಾನಗೃಹ
ಇಟ್ಟಿಗೆ ಕಂಬ


PLAN
HAMPI- OCTAGONAL BATH
ENCLOSURE WALL
RANGA MAHAL
EXCAVATIONS - 1977-79
by DR. R.C. AGRAWAL, DR. S.K. JOSHI, & OTHERS
EXVN. 1980
TUB BATH
PLAN
HAMPI-i RANGAMAHAL BATHS
(EXVNS. 1977-8)





ಕೊಳ, ಹಂಪಿ







ಲೋಟಸ್ ಮಹಲ್, ಹಂಪಿ




HAMPI - STEPPED WELL
EXVNS. - 1985
(By DR. B. NARASHIMHAIAH)


ಒಳಾಂಗಣ
ವಿರೂಪಾಕ್ಷ ದೇವಸ್ಥಾನದ
ಉತ್ತರದ ಪ್ರವೇಶ ದ್ವಾರ
TEMPLES
PUSHKARANI
NEAR NAGARESHWAR
(EXCAVATED BY
DR. M S NAGARAJ RAO)
1976-78
ಕಾಂಪೌಂಡ್ ಗೋಡೆ


HAMPI - PUBLIC BATH.
35 ಮೀ.
25 ಮೀ.

ತಲಕಾಡಿನಲ್ಲಿ ಪುರಾತತ್ವ ಉತ್ಖನನ

55. ವಿಜಯನಗರ ಕಾಲದ ನೀರು ಸರಬರಾಜು ವ್ಯವಸ್ಥೆಯ ಮೇಲೆ ಹೊಸಬೆಳಕು

ಡಾ|| ಎಂ. ಎಸ್. ಕೃಷ್ಣಮೂರ್ತಿ, ಡಾ|| ಆರ್. ಗೋಪಾಲ್, ಟಿ. ಎಸ್. ಗಂಗಾಧರ

ತಲಕಾಡಿನಲ್ಲಿ ಇತ್ತೀಚೆಗೆ ನಡೆಯುತ್ತಿರುವ ಪುರಾತತ್ವ ಉತ್ಖನನಗಳ ಬಗ್ಗೆ ಸಾಕಷ್ಟು ಮಾಹಿತಿಗಳು ಸಂಶೋಧನ ಲೇಖನಗಳ ಮೂಲಕ ಹಾಗೂ ಒಂದು ಬೃಹತ್ ಸಂಪುಟದ ಮುಖಾಂತರ ಬೌದ್ಧಿಕ ಲೋಕಕ್ಕೆ ಸಾಕಷ್ಟು ಪರಿಚಿತವಾಗಿದೆ. ತಲಕಾಡಿನ ಈ ಸಂಶೋಧನೆಗಳಲ್ಲಿ ಅನೇಕಾನೇಕ ಸಾಂಸ್ಕೃತಿಕ ವಸ್ತುಗಳು, ವಿಷಯಗಳು ಈ ಪ್ರಕಟಣೆಗಳ ಮೂಲಕ ತಿಳಿದಿವೆ ಅವುಗಳಲ್ಲಿ ಮುಖ್ಯವಾದ ಒಂದು ವಸ್ತು ವಿಷಯವೆಂದರೆ ವಿಜಯನಗರ ಕಾಲಕ್ಕೆ ಸೇರಿಸಬಹುದಾದ ಒಂದು ಸ್ನಾನದ ಗೃಹ ಕೊಳ. ತಲಕಾಡಿನ ವಿಳನೆಯ ಉತ್ಖನನ ಗುಂಡಿಯಲ್ಲಿ ಈ ಸ್ನಾನದ ಗೃಹ ಕೊಳ ಪತ್ತೆಯಾಯಿತು. ಕೀರ್ತಿನಾರಾಯಣ ದೇವಾಲಯದ ನೈರುತ್ಯಕ್ಕೆ ಸುಮಾರು ಮುನ್ನೂರು ಮೀಟರ್ ದೂರದಲ್ಲಿ ಹಾಗೂ ಪಾತಾಳೇಶ್ವರ ದೇವಾಲಯದ ವಾಯವ್ಯಕ್ಕೆ ಸುಮಾರು ಇನ್ನೂರು ಮೀಟರ್ ದೂರದಲ್ಲಿ ದೊರೆತ ಈ ಸ್ನಾನದ ಮನೆ ಚಿತ್ರ ಸಹಿತವಾದ ವಿವರಣೆಯೊಂದಿಗೆ ಆಗಲೇ ಪ್ರಕಟವಾಗಿದೆ.[1] ಆದರೆ 2006-07ನೇ ಸಾಲಿನಲ್ಲಿ ಅದೇ ಸ್ಥಳದಲ್ಲಿ ರಾಜ್ಯ ಪುರಾತತ್ವ ಮತ್ತು ಸಂಗ್ರಹಾಲಯ ಇಲಾಖೆಯು ಮತ್ತೆ ಉತ್ಖನನ ನಡೆಸಿ ಹಿಂದೆ ನಡೆದ ಉತ್ಖನನಗಳ ಹಲವು ಅಸ್ಪಷ್ಟ ವಿವರಗಳನ್ನು ಪುನಃ ಪರಿಶೀಲಿಸಿ, ಹೊಸದಾಗಿ ಕಂಡು ಬಂದ ಇನ್ನೂ ಹಲವಾರು ಮಾಹಿತಿಗಳೊಂದಿಗೆ ಕೂಡಿಸಿ ನೋಡಲಾಗಿ ವಿಜಯನಗರ ಕಾಲದ ನಗರ ನೀರು ಸರಬರಾಜು ವ್ಯವಸ್ಥೆಯ ಬಗ್ಗೆ ಮತ್ತು ಆ ವ್ಯವಸ್ಥೆಗೆ ಸಂಬಂಧಿಸಿದ ತಾಂತ್ರಿಕ ಕಾಮಗಾರಿಗಳ ಕುಶಲತೆಯ ಬಗ್ಗೆ ಅತ್ಯಪೂರ್ವವಾದ ಮಾಹಿತಿಗಳು ಲಭ್ಯವಾಗಿವೆ. ಅವುಗಳೆಲ್ಲದರ ವಿವರಣೆ, ವಿಶ್ಲೇಷಣೆಯೇ ಈ ಲೇಖನದ ಮುಖ್ಯ ಉದ್ದೇಶ.

1992-93 ನೇ ಸಾಲಿನಲ್ಲಿ ನಡೆಸಿದ ತಲಕಾಡಿನ ಉತ್ಖನನದಲ್ಲಿ ಅಲ್ಲಿಯ ವಿಳನೆಯ ಗುಂಡಿಯ ಪ್ರದೇಶದಲ್ಲಿ ಸುಂದರವಾಗಿ ನಿರ್ಮಿಸಿದ ಸ್ನಾನದ ಕೊಠಡಿ/ಕೊಳದ ಅವಶೇಷಗಳು ದೊರೆತವು. (ರೇಖಾಚಿತ್ರ -1) ಈ ಸ್ನಾನದ ಕೊಠಡಿ 3.4x 3. 3 ಮೀಟರ್ ವಿಸ್ತೀರ್ಣವಿದ್ದು, ಇದಕ್ಕೆ ಸುತ್ತಲೂ ಮೂರು ಮೀಟರ್ ಎತ್ತರದ ಗೋಡೆ

ಯಿದೆ. ಇಟ್ಟಿಗೆಯಲ್ಲಿ ನಿರ್ಮಿಸಿರುವ ಈ ಕೊಠಡಿಯ ಗೋಡೆಗಳಿಗೆ ಒಳಭಾಗದಲ್ಲಿ, ಲಕ್ಷಣವಾಗಿ ಗಾರೆಯಿಂದ ಗಿಲಾವ್ ಮಾಡಿ, ಗಾರೆ ಗಚ್ಚಿನ, ಹೊಳಪಿನ ನೆಲವನ್ನು ಮಾಡಿದ್ದಾರೆ. ಕೊಠಡಿಯ ಪಶ್ಚಿಮ ಮತ್ತು ದಕ್ಷಿಣದ ಗೋಡೆಗಳಿಗೆ ಒತ್ತಿಕೊಂಡಂತೆ, ಮೆಟ್ಟಿಲು ರೀತಿಯ ಎರಡು ಕಟ್ಟೆಗಳನ್ನು ಕಟ್ಟಿದ್ದಾರೆ. ಈ ಕಟ್ಟೆಗಳಲ್ಲಿನ ಕೆಳಮೆಟ್ಟಿಲು 50ಸೆಂ. ಮೀ. ಎತ್ತರದಲ್ಲೂ, ಮೇಲಿನ ಮೆಟ್ಟಿಲು ಒಂದು ಮೀಟರ್ ಎತ್ತರದಲ್ಲೂ ಇದೆ. ಕಟ್ಟೆಯ ಉದ್ದ 1. 10ಮೀಟರ್ ಮತ್ತು ಮೆಟ್ಟಿಲುಗಳ ಮೇಲ್ಭಾಗ 20 ಸೆ. ಮೀ. ಅಗಲವಿದೆ. ಈ ಮೆಟ್ಟಿಲುಗಳಲ್ಲಿ ಕೆಳ ಮೆಟ್ಟಿಲನ್ನು ಸ್ನಾನದ ಸಮಯದಲ್ಲಿ ಕುಳಿತು ಕೊಳ್ಳುವುದಕ್ಕೂ, ಮೇಲಿನ ಮೆಟ್ಟಿಲನ್ನು ಸ್ನಾನದ ಪರಿಕರಗಳನ್ನು ಇಟ್ಟುಕೊಳ್ಳುವುದಕ್ಕೂ ಬಳಸುತ್ತಿದ್ದರೆಂದು ಹೇಳಬಹುದು. (ಚಿತ್ರ-1) ಕೊಠಡಿಯ ಪೂರ್ವದಿಕ್ಕಿನ ಗೋಡೆಯಲ್ಲಿ ಸುಮಾರು 80ಸೆಂ. ಮೀ. ಎತ್ತರದಲ್ಲಿ ಒಂದು ಪ್ರವೇಶದ್ವಾರವನ್ನು ನಿರ್ಮಿಸಿದ್ದರು. ಆದರೆ ಅದು ಈಗ ನಾಮಾವಶೇಷವಾಗಿದೆ.

ಸ್ನಾನದ ಕೊಳ /ಗೃಹವನ್ನು ಸಂಪೂರ್ಣವಾಗಿ ಹೆಂಚಿನ ಛಾವಣಿಯಿಂದ ಮುಚ್ಚಿದ್ದರು. ಇದರಿಂದಾಗಿ ಸ್ನಾನ ಮಾಡುವವರಿಗೆ ಸಂಪೂರ್ಣವಾದ ಗೋಪ್ಯತೆ ಮತ್ತು ಮಳೆ ಬಿಸಿಲುಗಳಿಂದಲೂ ರಕ್ಷಣೆ ದೊರೆಯುತ್ತಿತ್ತು.

ಸ್ನಾನದ ಕೊಠಡಿಗೆ ಎರಡು ಮೂಲಗಳಿಂದ ನೀರು ಸರಬರಾಜಾಗುತ್ತಿತ್ತು. ಮೊದಲನೆಯದು ಮೇಲಿನಿಂದ ಬೀಳುವ ಜಲಧಾರೆ, ಎರಡನೆಯದು ಕೊಳಾಯಿಯೊಂದರ ಮುಖಾಂತರ ಕೊಳದೊಳಕ್ಕೆ ನೀರು ಬಂದು ಸೇರುವ ವ್ಯವಸ್ಥೆ. ಈಗ ಮೇಲಿನಿಂದ ಬೀಳುವ ಜಲಧಾರೆಯ ವಿಷಯಕ್ಕೆ ಬರೋಣ. ಉತ್ಖನನದಲ್ಲಿ ಕೊಳದ ನೆಲದ ಮೇಲೆ, ಈಶಾನ್ಯ ಭಾಗದಲ್ಲಿ, ಬಿದ್ದಿದ್ದ ಒಂದು ಘಟಪ್ರನಾಳದ ಗಾರೆಗಚ್ಚಿನ ವಿಗ್ರಹ ದೊರೆತಿತ್ತು. ಅದರ ಚಿತ್ರವನ್ನು ಈಗ ಪ್ರಕಟವಾಗಿರುವ ವರದಿಯ ಸಂಪುಟದಲ್ಲಿ ನೀಡಲಾಗಿದೆ. ಈ ಘಟಪ್ರನಾಳ ಒಬ್ಬ ಕುಬ್ಜನ ಶಿಲ್ಪವಾಗಿದೆ. ಈ ಶಿಲ್ಪದ ತಲೆ ಕಾಣೆಯಾಗಿದೆ. ಹೊಟ್ಟೆಯ ಭಾಗದಲ್ಲಿದ್ದ ಘಟವೂ ಸಹ ಕಾಣೆಯಾಗಿದೆ. ಇದು ಘಟಪ್ರನಾಳವಾಗಿರುವುದರಿಂದ ಇದನ್ನು ಕೊಠಡಿಯ ಯಾವುದೋ ಒಂದು ಎತ್ತರದ ಭಾಗದಲ್ಲಿ ಕೂರಿಸಿದ್ದಿರಬೇಕೆಂಬ ಅಂಶ ಮಾತ್ರ ಸತ್ಯ. ಕೊಳದ ಒಳಗೋಡೆಯ ಎಲ್ಲಾ ಲಕ್ಷಣಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಈ ಘಟಪ್ರನಾಳವನ್ನು ಉತ್ತರ ಗೋಡೆಯಲ್ಲಿ ಸುಮಾರು ಎರಡು ಮೀಟರ್ ಎತ್ತರದಲ್ಲಿ ಕೂಡಿಸಿದ್ದರೆಂದು ಹೇಳಬಹುದು. ಏಕೆಂದರೆ ಪಶ್ಚಿಮ ಮತ್ತು ದಕ್ಷಿಣ ಭಾಗಗಳಲ್ಲಿ, ಕೂರುವ ಹಾಗೂ ಸ್ನಾನದ ಪರಿಕರಗಳನ್ನು ಇಡುವ ಕಟ್ಟೆಗಳಿರುವುದರಿಂದ, ಪೂರ್ವಭಾಗದಲ್ಲಿ ಪ್ರವೇಶ ದ್ವಾರವಿರುವುದರಿಂದ ಈ ಮೂರು ದಿಕ್ಕಿನ ಗೋಡೆಗಳು ಘಟಪ್ರನಾಳವನ್ನು ಸ್ಥಾಪಿಸಲು ಸೂಕ್ತ ಸ್ಥಳವಾಗಿರಲಿಲ್ಲ. ಆದ್ದರಿಂದ ಕೇವಲ ಉತ್ತರ ದಿಕ್ಕಿನ ಗೋಡೆ ಮಾತ್ರ ಈ ಘಟಪ್ರನಾಳಕ್ಕೆ ಸೂಕ್ತವಾದ ಸ್ಥಳವಾಗಿತ್ತು. ಈ ಭಾಗದಲ್ಲೇ ನೆಲದ ಮೇಲೆ ಈ

ಘಟಪ್ರನಾಳವೂ ದೊರೆತಿರುವುದರಿಂದ ಘಟಪ್ರನಾಳವು ಉತ್ತರ ದಿಕ್ಕಿನ ಗೋಡೆಯಲ್ಲಿ ಸ್ಥಾಪಿತವಾಗಿತ್ತು ಎಂಬ ಅಂಶ ಸ್ಪಷ್ಟವಾಗುತ್ತದೆ.

ಹಾಗಾದರೆ ಈ ಘಟಪ್ರನಾಳಕ್ಕೆ ನೀರು ಸರಬರಾಜು ಎಲ್ಲಿಂದ ಆಗುತ್ತಿತ್ತೆಂಬ ಪ್ರಶ್ನೆ ಉದ್ಭವವಾಗುತ್ತದೆ. ಅದಕ್ಕೆ ಸರಿಯಾಗಿ, ಕೊಳದ ನೆಲದಿಂದ ಎರಡು ಮೀಟರ್ ಎತ್ತರದಲ್ಲಿ, ಕೊಳದ ಉತ್ತರದ ಗೋಡೆಗೆ ಹೊಂದಿಕೊಂಡಂತೆ ಇಟ್ಟಿಗೆಯಲ್ಲಿ ನಿರ್ಮಿಸಿದ ಕೊಳಾಯಿಯ ಅವಶೇಷಗಳಿವೆ. (ಚಿತ್ರ - 1) ಇದರಿಂದಾಗಿ ಈ ಕೊಳಾಯಿಯ ಮುಖಾಂತರ ಘಟಪ್ರನಾಳಕ್ಕೆ ನೀರು ಸರಬರಾಜಾಗುತ್ತಿತ್ತು ಹಾಗೂ ಘಟಪ್ರನಾಳ ಕೊಳದ ಈ ದಿಕ್ಕಿನ ಗೋಡೆಯಲ್ಲಿ ಮಧ್ಯಭಾಗದಲ್ಲಿ, ಎರಡು ಮೀಟರ್ ಎತ್ತರದಲ್ಲಿ ಪ್ರತಿಷ್ಠಾಪಿತವಾಗಿತ್ತು ಎಂಬ ಅಂಶಗಳು ಸ್ಪಷ್ಟವಾಗುತ್ತದೆ. ಘಟಪ್ರನಾಳದಿಂದ ಧಾರಾಕಾರವಾಗಿ ನೀರು ಕೊಳದೊಳಕ್ಕೆ ಬೀಳುತ್ತಿತ್ತು. ಇದು ಕೊಳದಲ್ಲಿ ಪ್ರನಾಳದ ಕೆಳಗೆ ನಿಂತು ಸ್ನಾನಮಾಡುವವರಿಗೆ ಸುಖಾನುಭವ ನೀಡುತ್ತಿತ್ತು (ನೋಡಿ ರೇಖಾಚಿತ್ರ-2). ಒಂದು ಪಕ್ಷ ಈ ಜಲಧಾರೆ, ವರ್ಷಧಾರೆಯ ರೀತಿ ಇರಬೇಕು ಎನಿಸಿದ್ದಲ್ಲಿ, ಘಟದ ಬಾಯಿಗೆ ಜಾಲರಿಯೊಂದನ್ನು ಸಿಕ್ಕಿಸಿದ ಪಕ್ಷದಲ್ಲಿ ಜಲಧಾರೆ, ವರ್ಷಧಾರೆಯಾಗುತ್ತಿತ್ತು ಜೊತೆಗೆ ನಾಲೆಯ ನೀರಿನಲ್ಲಿ ತೇಲಿಬರುವ ಕಲ್ಮಶಗಳು ಜರಡಿಯಾಗಿ ಘಟದ ಬಾಯಲ್ಲೇ ಒಂದೆಡೆ ನಿಲ್ಲುತ್ತಿತ್ತು.

ಈಗ ಘಟಪ್ರನಾಳಕ್ಕೆ ನೀರು ಸರಬರಾಜು ಮಾಡುತ್ತಿದ್ದ ಕೊಳಾಯಿಯ ವಿಷಯಕ್ಕೆ ಬರೋಣ. ಸ್ನಾನ ಗೃಹದ ಉತ್ತರ ಗೋಡೆಯಲ್ಲಿ, ಘಟಪ್ರನಾಳದ ಹಿಂಭಾಗದಲ್ಲಿ ಇಟ್ಟಿಗೆಯಲ್ಲಿ ನಿರ್ಮಿಸಿದ ಕೊಳಾಯಿಯೊಂದರ ಅವಶೇಷಗಳಿವೆ ಎಂದು ಆಗಲೇ ಹೇಳಿದೆ. ಈ ಕೊಳಾಯಿಯ ಅವಶೇಷಗಳ ಜಾಡುಹಿಡಿದು, ಹೆಚ್ಚು ಹೆಚ್ಚು ಉತ್ಖನನ ಮಾಡಿ ಸುಮಾರು ಹದಿನೈದು ಮೀಟರ್‌ಗಳವರೆಗೂ ಉತ್ಖನನ ನಡೆಸಿ ಈ ಕೊಳಾಯಿಯ ಜಾಡನ್ನು ಗುರುತಿಸಲಾಯಿತು. (ರೇಖಾಚಿತ್ರ - 1, ಚಿತ್ರ -2). ಹದಿನೈದು ಮೀಟರ್ ನಂತರವೂ ಈ ಕೊಳಾಯಿ ಉತ್ತರ ದಿಕ್ಕಿನತ್ತ ಇನ್ನೂ ಮುನ್ನಡೆಯುತ್ತಲೇ ಇತ್ತು. ಆದರೆ ಅಲ್ಲಿಗೆ ಉತ್ಖನನವನ್ನು ನಿಲ್ಲಿಸಲಾಗಿದೆ. ಈ ಇಟ್ಟಿಗೆ ನಿರ್ಮಿತ ಕೊಳಾಯಿ ಬಹಳಷ್ಟು ಜರ್ಜರಿತವಾಗಿದೆ. ನೀರಿನ ಹರಿವನ್ನು ಸುಲಲಿತವಾಗಿ ಇರಿಸಲು, ಹಾಗೂ ಕೊಳಾಯಿಯ ಮಟ್ಟವನ್ನು, ಇಳಿಜಾರನ್ನು ಕಾಪಾಡಲು ಕೊಳಾಯಿಯನ್ನು ಎತ್ತರವಾದ ಇಟ್ಟಿಗೆ ಗೋಡೆಯನ್ನು ನಿರ್ಮಿಸಿ ಅದರ ಮೇಲೆ ಕೊಳಾಯಿಯನ್ನು ನಿರ್ಮಿಸಲಾಗಿದೆ. ತಲಕಾಡು ಮರಳಲ್ಲಿ ಹೂತು ಹೋದ ನಂತರ, ಸುತ್ತಲಿನ ಮಣ್ಣಿನ ಒತ್ತಡದಿಂದಾಗಿ ಈ ಕೊಳಾಯಿಯ ಆಧಾರಗೋಡೆ ಕ್ರಮೇಣವಾಗಿ ವರಸೆವರಸೆಯಾಗಿ ಪಶ್ಚಿಮಕ್ಕೆ ಸರಿದು ನಿಂತಿದೆ, ಕೆಲವೆಡೆ ಹೆಚ್ಚು ವಿನಾಶ ಕಂಡಿದೆ.

ಕೊಳಾಯಿಯ ನಿರ್ಮಾಣ ವಿಧಾನವನ್ನು ಪರಿಶೀಲಿಸಿದಾಗ ವಿಜಯನಗರ ರಾಜಧಾನಿ ಹಂಪಿಯಲ್ಲಿ ಇದೇ ರೀತಿಯ ಕೊಳಾಯಿ ವಿನ್ಯಾಸ, ನಿರ್ಮಾಣ ಕಂಡು ಬಂದಿರುವುದು,

ಶಿಥಿಲವಾದ ಈ ಕೊಳಾಯಿಯೂ ಹಂಪಿಯ ರೀತಿಯ ಕೊಳಾಯಿಗಳ ವಿನ್ಯಾಸವನ್ನು ಹೊಂದಿತ್ತೆಂಬುದು ಸ್ಪಷ್ಟವಾಗುತ್ತದೆ. (ಚಿತ್ರ -3) ಈ ಕೊಳಾಯಿಯು ಎಲ್ಲಿಯವರೆಗೆ ಮುಂದುವರೆಯುತ್ತಿತ್ತು ಎಂಬುದು ಈಗ ಪ್ರಶ್ನೆ. ವಿಜಯನಗರ ಕಾಲದ ತಲಕಾಡಿನ ಪರಿಸರದ ಶಾಸನಗಳನ್ನು ಪರಿಶೀಲಿಸಿದಾಗ, ತಲಕಾಡಿನ ಬಳಿಯ ಮಾಲಂಗಿಯ ಕ್ರಿ.ಶ. 1514ರ ಒಂದು ಶಾಸನದಲ್ಲಿ[2], ತಲಕಾಡಿನ ಕೀರ್ತಿನಾರಾಯಣ ದೇವಾಲಯದ ಪಶ್ಚಿಮಕ್ಕೆ ಇರುವ ಗದ್ದೆಯನ್ನು ದಾನ ನೀಡಲಾಯಿತೆಂದು ಹೇಳಿದೆ. ದಾನದ ವಿವರವನ್ನು ವಿಶ್ಲೇಷಿಸಿದಾಗ ಈ ಕೆಳಕಂಡ ಅಂಶಗಳು ಸ್ಪಷ್ಟವಾಗುತ್ತವೆ. ತಲಕಾಡಿನ ಕೀರ್ತಿನಾರಾಯಣ ದೇವಾಲಯದ ಪಶ್ಚಿಮಭಾಗ ಈಗ ಸಂಪೂರ್ಣ ಮರಳಿನಿಂದ ಆವೃತವಾಗಿದೆ. ನದಿಯ ತೀರಕ್ಕೆ ಇಳಿಜಾರಾಗಿದೆ. ಈ ಭಾಗದಲ್ಲಿ 16 ನೇ ಶತಮಾನದಲ್ಲಿ ಗದ್ದೆ ಇತ್ತೆಂದರೆ, ಈ ಭಾಗ ಮಟ್ಟಸವಾದ ಭೂಮಿಯಾಗಿತ್ತು. ಕಾವೇರಿ ನದಿಯಿಂದ ಹೊರಟ ಒಂದು ನಾಲೆ ಈ ಭಾಗವೆಲ್ಲವನ್ನೂ ನೀರಿನಿಂದ ತಣಿಸುತ್ತಿತ್ತು. ಈ ಭಾಗವು ಹರಿಯುವ ನಾಲೆ, ಹಸಿರುಗದ್ದೆ ಮುಂತಾದವುಗಳಿಂದ ಕಂಗೊಳಿಸುತ್ತಿದ್ದ ಭಾಗವಾಗಿತ್ತು ಎಂದು ಸ್ಪಷ್ಟವಾಗುತ್ತದೆ. ಪ್ರಸ್ತುತ ಸ್ನಾನದ ಕೊಳಕ್ಕೆ ನೀರೊದಗಿಸುತ್ತಿದ್ದ ಇಟ್ಟಿಗೆಯ ಕೊಳಾಯಿಯೂ ಸಹ ಇದೇ ದಿಕ್ಕಿನಲ್ಲಿ ಮುಂದುವರೆಯುತ್ತಾ ಹೋಗುವುದರಿಂದ, ಕಾವೇರಿ ನದಿಯಿಂದ ಹೊರಟಿದ್ದ ಮುಖ್ಯ ನಾಲೆಯೊಂದರ ಉಪನಾಲೆಗೆ ಈ ಕೊಳಾಯಿಯನ್ನು ಸಂಪರ್ಕಿಸಲಾಗಿತ್ತು ಎಂದು ಹೇಳಬಹುದು. ನಾಲೆಯ ನೀರು ನಿರಂತರವಾಗಿ ಹರಿದು ಬಂದು ಸ್ನಾನದ ಕೊಳದೊಳಕ್ಕೆ ಬೀಳುತ್ತಿತ್ತು.

ಈಗ ಸ್ನಾನದ ಕೊಳಕ್ಕೆ ಎರಡನೆಯ ಕೊಳಾಯಿಯ ಮೂಲಕ ನೀರು ತುಂಬುವ ವ್ಯವಸ್ಥೆಯ ಬಗ್ಗೆ ಪರಿಶೀಲಿಸೋಣ. ಸ್ನಾನದ ಕೊಳಕ್ಕೆ, ಅದರ ದಕ್ಷಿಣ ಗೋಡೆಯ ಬಲಮೂಲೆಯಲ್ಲಿ ಅಂದರೆ ಕೊಳದಲ್ಲಿನ ಕೂರುವ ಮೆಟ್ಟಲಿನ ಬಲಪಾರ್ಶ್ವದಲ್ಲಿ ನೆಲಮಟ್ಟದಲ್ಲಿ ಒಂದು ಚೌಕಟ್ಟಾದ ರಂಧ್ರವಿದೆ. ಈ ರಂಧ್ರವನ್ನು ಹಿಂದಿನ ಉತ್ಖನನದ ಸಮಯದಲ್ಲೇ ಗಮನಿಸಿ ಹೊರಗಂಡಿ ಎಂದು ವರದಿ ಮಾಡಿದೆ. ಆದರೆ ಆ ಸಮಯದಲ್ಲಿ ಕೊಳಕ್ಕೆ ನೀರು ಸರಬರಾಜು ಮಾಡುವ ವ್ಯವಸ್ಥೆಯ ಬಗ್ಗೆ ಅಸ್ಪಷ್ಟ ಜ್ಞಾನವಿದ್ದುದರಿಂದ, ಈ ರಂಧ್ರದ ಮೂಲಕವೇ ನೀರನ್ನು ತುಂಬುವ ಹಾಗೂ ಖಾಲಿ ಮಾಡುವ ವ್ಯವಸ್ಥೆಯಿತ್ತು ಎಂದು ಹೇಳಿದೆ. ಇದು ಒಂದು ರೀತಿಯಲ್ಲಿ ಭಾಗಶಃ ಸತ್ಯವಾದರೂ ಹಿಂದೆ ಹೇಳಿದ್ದ ರೀತಿಯೇ ಬೇರೆ, ಈಗ ತಿಳಿದು ಬಂದಿರುವ ರೀತಿಯೇ ಬೇರೆ. ಈ ಮುಂಚೆ, ಸ್ನಾನದ ಕೊಠಡಿಯ ಆಗ್ನೇಯಕ್ಕೆ ಕಂಡುಬಂದಿದ್ದ 'ಭಾವಿ'ಯ ನೀರಿನ ಮಟ್ಟವನ್ನು ಏರಿಳಿಕೆ ಮಾಡುವುದರ ಮೂಲಕ ಸ್ನಾನದ ಕೊಳದ ನೀರಿನ ಮಟ್ಟವನ್ನೂ ನಿಯಂತ್ರಿಸಲಾಗುತ್ತಿತ್ತು ಎಂದು ಭಾವಿಸಲಾಗಿತ್ತು. ಏಕೆಂದರೆ ಸ್ನಾನದ ಕೊಳದ ಅಡಿಯ ರಂಧ್ರಕ್ಕೆ ಸೇರಿಕೊಂಡಂತೆ ಒಂದು ಸುಸಂರಕ್ಷಿತವಾದ ಇಟ್ಟಿಗೆ ನಿರ್ಮಿತ ಕೊಳಾಯಿಯೊಂದು ಈ ಹಿಂದೆ ಪತ್ತೆಯಾಗಿತ್ತು. ಅಲ್ಲದೆ ಅದು ನೇರ ಹೋಗಿ ಕೊಳದ ಆಗ್ನೇಯದಲ್ಲಿ ಇರುವ ಬಾವಿಗೆ

ಸೇರುತ್ತಿತ್ತು. (ಚಿತ್ರ - 4, ರೇಖಾಚಿತ್ರ- 1) ಬೇರೆ ಇನ್ನಾವ ನೀರುತುಂಬುವ ವ್ಯವಸ್ಥೆಯೂ ಆಗ ಕಾಣಬರದಿದ್ದುದರಿಂದ, ಇದನ್ನೇ ಆಧರಿಸಿ ಈ ರೀತಿಯ ತೀರ್ಮಾನಕ್ಕೆ ಬರಲಾಗಿತ್ತು.

ಆದರೆ ಸದರಿ ಸಾಲಿನ ಉತ್ಖನನದಲ್ಲಿ ಇನ್ನೂ ಅನೇಕಾನೇಕ ನಿಗೂಢ ವಿಷಯಗಳು ಬೆಳಕಿಗೆ ಬಂದು, ಕೊಳಕ್ಕೆ ನೀರು ಸರಬರಾಜು ಮಾಡುತ್ತಿದ್ದ ವಿನೂತನ ಹಾಗೂ ಕೌಶಲಪೂರ್ಣ ವ್ಯವಸ್ಥೆಯ ಪರಿಚಯವಾಗಿದೆ.

ಪ್ರಸ್ತುತ ಸಾಲಿನ ಉತ್ಖನನದಲ್ಲಿ ಸ್ನಾನದ ಕೊಳದ ಆಗ್ನೇಯ ಹೊರ ಮೂಲೆಯಲ್ಲಿ ಒಂದು ಮೀಟರ್ ಎತ್ತರದಲ್ಲಿ ನಿರ್ಮಿಸಲಾಗಿದ್ದ ಇಟ್ಟಿಗೆ ಗಾರೆ ನಿರ್ಮಿತ ಎರಡನೆಯ ನೀರಿನ ಕೊಳಾಯಿಯ ಅವಶೇಷಗಳು ಪತ್ತೆಯಾದವು. (ಚಿತ್ರ - 5) ಈ ಕೊಳಾಯಿಯು ಕೊಳದ ದಕ್ಷಿಣ ಭಾಗದಲ್ಲಿ ಸುಮಾರು 6-7 ಮೀಟರ್ ದೂರದಲ್ಲಿ ನಿರ್ಮಿತವಾಗಿದ್ದ ಈಗಲೂ ಸುಭದ್ರವಾಗಿರುವ, ಹಿಂದಿನ ಉತ್ಖನನದಲ್ಲಿ ಗಮನಿಸಲಾಗಿದ್ದ ಇಟ್ಟಿಗೆ ನಿರ್ಮಿತ ನೀರಿನ ಕೊಳಾಯಿಗೆ ಸಂಪರ್ಕ ಹೊಂದಿದ್ದ ಸೂಚನೆಗಳು ಗೋಚರವಾದವು. ಹಿಂದಿನ ಉತ್ಖನನದಲ್ಲಿ, ಸುಭದ್ರವಾಗಿದ್ದ ದೊಡ್ಡ ಕೊಳಾಯಿಯೊಂದನ್ನು ಗಮನಿಸಿ ವರದಿ ಮಾಡಲಾಗಿದೆ. ಈ ಕೊಳಾಯಿ ಬಹಳ ಸುಂದರ, ಸುಭದ್ರ ನಿರ್ಮಾಣ. ಇದು ಗಾಳಿ ತಡೆ ಗೋಡೆಯಡಿಯಿಂದ, ಪಶ್ಚಿಮದಿಂದ ಪೂರ್ವಕ್ಕೆ ಹಾದು ಬರುತ್ತದೆ. (ಚಿತ್ರ -6) ಮುಖಾಂತರ, ಗಾಳಿ ತಡೆ ಗೋಡೆಯಾಚೆಯಿದ್ದ, ನಾಲೆಯ ನೀರು, ಅರಮನೆಯ ಆವರಣದೊಳಕ್ಕೆ ಬರುತ್ತಿತ್ತು. ಹೀಗೆ ಬಂದ ನೀರು ಭಾವಿಯೊಂದರಲ್ಲಿ ಶೇಖರವಾಗುತ್ತಿತ್ತು. ಈ ಬಾವಿಯ ನೀರಿನ ಏರಿಳಿಕೆಯಿಂದ, ಕೊಳಾಯಿಯೊಂದರ ಇದರ ಮುಖಾಂತರ, ಸ್ನಾನದ ಕೊಳದ ನೀರಿನ ಮಟ್ಟವನ್ನು ನಿಯಂತ್ರಿಸಲಾಗುತ್ತಿತ್ತು ಎಂದು ಹಿಂದಿನ ವರದಿಯಲ್ಲಿ ಹೇಳಿದೆ. ಗಾಳಿ ತಡೆಗೋಡೆಯ ಹೊರಗಡೆಯಿಂದ, ಇಟ್ಟಿಗೆ ನಿರ್ಮಿತ, ಈಗಲೂ ಸುಸಂರಕ್ಷಿತವಾದ ಮುಖ್ಯ ಕೊಳಾಯಿಯ ಮುಖಾಂತರ ನಾಲೆಯೊಂದರಿಂದ ನೀರು ಬಂದು ಭಾವಿಯೊಳಕ್ಕೆ ಬೀಳುತ್ತಿದ್ದುದೇನೋ ನಿಜ. ಆದರೆ ನೀರಿನ ಕೊಳಾಯಿ ಬಾವಿಯನ್ನು ಸೇರುವ ಮುಂಚಿನ ಭಾಗದಲ್ಲಿ ಅದಕ್ಕೆ ಎರಡು ಕವಲುಗಳೂ ಇದ್ದವು ಎಂಬುದನ್ನು ಕಳೆದ ಉತ್ಖನನದಲ್ಲಿ ಗೋಚರವಾಗಿರಲಿಲ್ಲ. ಪ್ರಸ್ತುತ ಉತ್ಖನನದಲ್ಲಿ ಈ ಅಂಶಗಳು ಪತ್ತೆಯಾದವು.

ಮೇಲೆ ಹೇಳಿದ ಮುಖ್ಯ ಕೊಳಾಯಿಯ ಎಡ (ಅಂದರೆ ಉತ್ತರದ)ಕವಲು ನೇರವಾಗಿ ಹರಿದು ಸ್ನಾನದ ಕೊಳದ ದಕ್ಷಿಣ ಗೋಡೆಯವರೆಗೆ ಹರಿದು ಬಂದು, ಕೊಳವನ್ನು ಸೇರುತ್ತಿತ್ತು.

ಈ ಕೊಳಾಯಿಯುಲ್ಲಿ ಹರಿದು ಬರುವ ನೀರು ಸ್ನಾನದ ಕೊಳವನ್ನು ಸೇರುವ ವಿಧಾನವೇ ಇಲ್ಲಿ ಅತಿ ಮುಖ್ಯವಾಗಿ ಗಮನಿಸಬೇಕಾದ ಅಂಶ. ಈ ಕೊಳಾಯಿ ಸ್ನಾನದ ಕೊಳದ ನೆಲದ ಮಟ್ಟದಿಂದ ಒಂದು ಮೀಟರ್ ಎತ್ತರದಲ್ಲಿ ಕೊಳದ ದಕ್ಷಿಣ

ಗೋಡೆಯವರೆಗೂ ಹರಿದು ಬರುತ್ತಿತ್ತು. ನಂತರ ಇದು ಕೊಳದೊಳಕ್ಕೆ ಇಳಿಯುತ್ತಿತ್ತು. (ಚಿತ್ರ -7, ರೇಖಾಚಿತ್ರ -2) . ಈ ಇಳಿ ಕೊಳಾಯಿಯನ್ನು ಕೊಳದ ದಕ್ಷಿಣ ಗೋಡೆಯ ಒಳಭಾಗದಲ್ಲಿ ನಿರ್ಮಿಸಲಾಗಿದೆ. ದಕ್ಷಿಣ ಗೋಡೆಯನ್ನು ನಿರ್ಮಿಸುವಾಗ ಅದರ ಖಂಡಭಾಗದಲ್ಲಿ ಇಳಿಕೊಳಾಯಿಯನ್ನು ಸ್ವಲ್ಪ ದಕ್ಷಿಣಕ್ಕೆ ಇಲಿಜಾರಾಗಿ ನಿರ್ಮಿಸಲಾಗಿದೆ. ನೀರು ಈ ಕೊಳಾಯಿಯ ಮುಖಾಂತರ ಇಳಿದು, ಈ ಮುಂಚೆ ಗಮನಿಸಿದ್ದ, ಕೊಳದ ಹೊರಗಾಂಡಿಯ ನೆತ್ತಿಯಲ್ಲಿ ಹೊರಕ್ಕೆ ಬಂದು ಕೊಳದೊಳಕ್ಕೆ ಸೇರುತ್ತಿತ್ತು. ಹೀಗಾಗಿ ಕೊಳದ ಹೊರಗಾಂಡಿ (Outlet) ಮತ್ತು ಒಳಗಾಂಡಿ (Inlet) ಎರಡೂ ಒಂದೇ ಆಗಿತ್ತು ಎಂಬುದು ಸ್ಪಷ್ಟವಾಗುತ್ತದೆ.

ಕೊಳದ ಹೊರಗಾಂಡಿ ಮತ್ತು ಒಳಂಗಾಡಿ ಎರಡೂ ಹೇಗೆ ಒಂದೇ ಆಗಿರಲು ಸಾಧ್ಯ ಎಂಬ ಪ್ರಶ್ನೆ ತಲೆದೋರುತ್ತದೆ. ಕೊಳದ ಹೊರಂಗಾಡಿಯ ವಿನೂತನ ವಿನ್ಯಾಸ ಇವೆರಡೂ ಕೆಲಸಗಳನ್ನು ಮಾಡಲು ಅನುವು ಮಾಡಿಕೊಡುತ್ತಿತ್ತು. ಈ ಸ್ನಾನದ ಕೊಳದ ಈ ಕೆಳಗಿನ ರಂಧ್ರ ಚೌಕಟ್ಟಾದ ರೂಪದಲ್ಲಿದೆ ಎಂದು ಆಗಲೇ ಹೇಳಿದೆ. ರಂಧ್ರದ ಅಳತೆ 20x20ಸೆಂ. ಮೀ (ಚಿತ್ರ -8). ಇದೇ ರೀತಿ ಚೌಕಟ್ಟಾಗಿ ಸುಮಾರು 30ಸೆಂ. ಮೀ. ಆಳದವರೆಗೆ ಇದು ಮುಂದುವರೆಯುತ್ತದೆ. ಇದರ ಹಿಂಭಾಗದ ಗೋಡೆ ಮಟ್ಟಸವಾಗಿದ್ದು ಅದರ ಮುಖದಲ್ಲಿ 8x12ಸೆಂ. ಮೀ. ವಿಸ್ತೀರ್ಣದ ಇನ್ನೊಂದು ಚಿಕ್ಕ ರಂಧ್ರವಿದೆ. ಈ ರಂಧ್ರಕ್ಕೆ ಸೇರಿದಂತೆ ಕೊಳದ ಹೊರಗೋಡೆಯಿಂದ ಇಟ್ಟಿಗೆ ಗಾರೆ ನಿರ್ಮಿತ ಕೊಳಾಯಿಯೊಂದು ಸ್ವಲ್ಪ ಇಳಿಜಾರಾಗಿ ಮುಂದುವರೆದು, ಕೊಳದ ಆಗ್ನೇಯ ಮೂಲೆಯ ಬಾವಿಯನ್ನು ಸೇರುತ್ತದೆ. ಇದರಿಂದ ಕೊಳದ ನೀರನ್ನು ಖಾಲಿ ಮಾಡಿದಾಗ, ನೀರು ಈ ಕೊಳಾಯಿಯ ಮುಖಾಂತರ ಬಾವಿಯನ್ನು ಸೇರುತ್ತಿತ್ತು ಎಂಬುದು ಸ್ಪಷ್ಟವಾಗುತ್ತದೆ. ಹೊರಗಾಂಡಿಯ ನೆತ್ತಿಯಲ್ಲಿ ನೀರಿನ ಇಳಿಕೊಳಾಯಿಯ ಮುಖವೂ ಇದೆ. ಹೊರಗಾಂಡಿಯ ನೆತ್ತಿಯಲ್ಲಿರುವುದರಿಂದ, ಇದು ಹೊರಗಿನಿಂದ ಯಾರಿಗೂ ಗೋಚರವಾಗುವುದಿಲ್ಲ. (ಚಿತ್ರ -8, ಮತ್ತು 7). ಹೊರಗಾಂಡಿಯ ನೆಲ ಸುಮಾರು 2-3 ಸೆಂ. ಮೀ. ನಷ್ಟು ಕೆಳಮಟ್ಟದಲ್ಲಿದೆ. ಇವಿಷ್ಟೂ ಲಕ್ಷಣಗಳು ಈ ಹೊರಗಾಂಡಿಯ ವಿನ್ಯಾಸದಲ್ಲಿವೆ.

ವಿನ್ಯಾಸದಲ್ಲಿ ಈ ಲಕ್ಷಣಗಳಿರುವ ಹೊರಗಾಂಡಿ ಹೇಗೆ ಒಳಗಾಂಡಿ ಮತ್ತು ಹೊರಗಾಂಡಿಯಾಗಿ ಕೆಲಸ ನಿರ್ವಹಿಸುತ್ತಿತ್ತು ಎಂಬುದರತ್ತ ಈಗ ಗಮನ ಹರಿಸೋಣ. ಹೊರಗಾಂಡಿಯ ಬಾಯಿಯ ವಿಸ್ತೀರ್ಣ ದೊಡ್ಡದಿದ್ದು, ಅದರ ಹಿಂದಿನ ಮುಖದ ಕಿಂಡಿಯ ವಿಸ್ತೀರ್ಣ ಇನ್ನೂ ಚಿಕ್ಕದಾಗಿದೆಯೆಂಬುದು ಮೇಲಿನ ವಿವರಣೆಯಿಂದ ತಿಳಿದು ಬರುವ ಅಂಶ. ಈಗ ಹಿಂದಿನ ಕಂಡಿಯ ಬಾಯಿಗೆ ಅದೇ ಅಳತೆಯ, ಸ್ವಲ್ಪ ಬಟ್ಟೆಯಿಂದ ಸುತ್ತಿದ, ಮರದ ಬಿರಡೆ /ಗೂಟವನ್ನು ಸಿಕ್ಕಿಸಿದರೆ, ಈ ಮೂಲಕ ನೀರು ಹೊರಕ್ಕೆ ಹರಿದು ಹೋಗುವುದನ್ನು ತಡೆಯಬಹುದು. ಹಿಂದಿನ ಕಂಡಿಗೆ ಸಿಕ್ಕಿಸುವ ಮರದ

ಬಿರಡೆಯು/ಗೂಟದ ಹಿಡಿಯನ್ನು ಸ್ವಲ್ಪ ಸಣ್ಣದಾಗಿ ಮಾಡಿ, ಉದ್ದವಾಗಿಟ್ಟಿದ್ದರೆ, ಅದನ್ನು ಹೊರಗಾಂಡಿಯ ಮುಖದ ಹೊರಗಿನಿಂದಲೇ ಹಿಡಿದುಕೊಂಡು ಅದರ ಕಾರ್ಯ ನಿರ್ವಹಣೆ ಮಾಡಬಹುದು. ಹಿಂದಿನ ಕಂಡಿಗೆ ಸಿಕ್ಕಿಸಿರುವ ಬಿರಡೆಯ ಗಾತ್ರ, ಹೊರಗಾಂಡಿಯ ವಿಸ್ತೀರ್ಣಕ್ಕಿಂತ ಬಹಳ ಚಿಕ್ಕದಾಗಿರುವುದರಿಂದ ಬಿರಡೆಯ ಸುತ್ತಲೂ ಸಾಕಷ್ಟು ಜಾಗ ಖಾಲಿ ಇರುತ್ತದೆ. ನೆತ್ತಿಯಲ್ಲಿರುವ, ಎರಡನೆಯ ಕೊಳಾಯಿಯ ಇಳಿಗೋಡೆಯ ಮುಖಾಂತರ ನೀರು ಸಾಕಷ್ಟು ಪ್ರಮಾಣದಲ್ಲಿ ಈ ಬಿರಡೆಯ ಸುತ್ತಲಿನ ಖಾಲಿ ಜಾಗದ ಮುಖಾಂತರ ಕೊಳದ ತಳಭಾಗಕ್ಕೆ ಇಳಿದು ನೀರನ್ನು ತುಂಬಿಸುತ್ತದೆ.

ಸಾಧಾರಣವಾದ ಒಂದು ಸ್ನಾನದ ಕೊಳಕ್ಕೆ ನೀರು ತುಂಬಿಸಲು ಇಷ್ಟೊಂದು ಜಟಿಲವಾದ, ಸಂಕೀರ್ಣವಾದ ವಿಧಾನವನ್ನು ವಿನ್ಯಾಸ ಮಾಡಿ ನೀರಿನ ಕೊಳ ಕಟ್ಟುವ ಅವಶ್ಯಕತೆಯಾದರೂ ಏನಿತ್ತು ಎಂಬುದು ಇಲ್ಲಿ ಉದ್ಭವಿಸುವ ಪ್ರಶ್ನೆ. ಈ ಪ್ರಶ್ನೆಗೆ ಉತ್ತರ ತಿಳಿದಾಗ ಈ ಎಲ್ಲಾ ಸಂಕೀರ್ಣವಾದ ವಿನ್ಯಾಸ ನಿಜಕ್ಕೂ ಸಾರ್ಥಕ ಎಂದು ಮನವರಿಕೆಯಾಗುತ್ತದೆ. ಈಗ ಈ ಸಂಕೀರ್ಣ ವಿಧಾನದ ಉದ್ದೇಶದ ವಿಶ್ಲೇಷಣೆಗೆ ಬರೋಣ. ಎರಡನೆಯ ನೀರಿನ ಕೊಳಾಯಿಯ ಮುಖವನ್ನು, ವಾಸ್ತು ಶಿಲ್ಪಿ ಸುಲಭವಾಗಿ ಕೊಠಡಿಯ ಗೋಡೆಯ ಮುಖಾಂತರ ನಿರ್ಮಿಸಿ ನೀರು ಕೊಳದೊಳಕ್ಕೆ ನೇರವಾಗಿ ಬೀಳುವಂತೆ ಮಾಡಬಹುದಾಗಿತ್ತು. ಆದರೆ ಶಿಲ್ಪಿ ಹಾಗೆ ಅದನ್ನು ನಿರ್ಮಿಸಿಲ್ಲ, ಬದಲಾಗಿ ಮುಂಚೆ ಹೇಳಿದಂತೆ ಗೋಡೆಯ ಮಧ್ಯಭಾಗದಲ್ಲಿ ಈ ಕೊಳಾಯಿ ಕೊಳದೊಳಕ್ಕೆ ಇಳಿಯುತ್ತದೆ. ಇದರ ಉದ್ದೇಶ ನೀರನ್ನು ಶೋಧಿಸಿ ಕೊಳದೊಳಕ್ಕೆ ಹರಿಯುವಂತೆ ಮಾಡುವುದು ಮತ್ತು ಶೋಧನಾ ವಿಧಾನ ಯಾವುದೇ ಅಡಚಣೆಯಿಲ್ಲದೆ, ನಿರಂತರವಾಗಿ, ನಿರ್ವಹಣಾ ಮುಕ್ತವಾಗಿ, ನಿಶ್ಚಿಂತೆಯಿಂದ ಸಾಗುವಂತಿರಬೇಕು ಮತ್ತು ಪದೇ ಪದೇ ತೊಂದರೆ ನೀಡದಂತೆ ಕೆಲಸ ಮಾಡುವಂತಿರಬೇಕು. ಹೀಗಾಗಿ ಈ ರೀತಿಯ ವಿನ್ಯಾಸ ಹಾಗೂ ಇದು ಕೆಲಸ ಮಾಡುವ ವಿಧಾನ ಬಹಳ ವಿಚಕ್ಷಣೆಯಿಂದ ಕೂಡಿದೆ.

ನೀರು, ಎರಡನೆಯ ಕೊಳಾಯಿಯ ಮೂಲಕ ಬಂದು ಇಳಿಗೊಳವೆಯ ಮೂಲಕ ಇಳಿದು, ಹೊರಗಾಂಡಿಯ ನೆತ್ತಿಯಲ್ಲಿರುವ ಬಾಯಿಂದ ಕೆಳಕ್ಕೆ ಬೀಳುತ್ತದೆ. ನೇರವಾಗಿ ನೆಲದ ಮೇಲೆ ಬೀಳುವುದರಿಂದ ಮತ್ತು ಹೊರಗಾಂಡಿಯ ಒಳಮುಖದಲ್ಲೇ ಬೀಳುವುದರಿಂದ ಇದರ ಒತ್ತಡ ಕಡಿಮೆಯಿರುತ್ತದೆ. ಕ್ರಮೇಣವಾಗಿ ಕೊಳದಲ್ಲಿ ನೀರಿನ ಮಟ್ಟ ಏರುವುದರಿಂದ, ನೀರು ಎಷ್ಟೇ ಜೋರಾಗಿ ಕೆಳಕ್ಕೆ ಬಿದ್ದರೂ ಇಳಿಗೊಳವೆಯ ಒಳಗೇ ಬೀಳತ್ತದೆ. ಏಕೆಂದರೆ ಕೊಳದಲ್ಲಿ ನೀರಿನ ಮಟ್ಟ ಏರುವುದರ ಜೊತೆಗೇ ಇಳಿಗೋಡೆಯಲ್ಲೂ ನೀರು ಅದೇ ಮಟ್ಟದಲ್ಲಿ ಏರುತ್ತಾ ಹೋಗುತ್ತದೆ. ಹೀಗಾಗಿ ಮೇಲಿನಿಂದ ಬೀಳುವ ನೀರಿನ ಒತ್ತಡವೆಲ್ಲಾ ಒಳಗೊಳವೆಯಲ್ಲೇ ಉಳಿಯುತ್ತದೆ. ಜೊತೆಗೆ ನಾಲೆಯ ನೀರಿನಲ್ಲಿ ತೇಲಿಬರುವ ಕಲ್ಮಶಗಳೂ, ನೀರಿನ ಕ್ರಿಮಿ-ಕೀಟಗಳೂ ಹಾಗೂ ಇನ್ನಿತರ ಸಣ್ಣಪುಟ್ಟ ಜಲಚರಗಳು, ಈ ವ್ಯವಸ್ಥೆಯಲ್ಲಿ ಕೊಳವನ್ನು ಪ್ರವೇಶ

ಮಾಡುವಂತಿಲ್ಲ. ನೀರಿನಲ್ಲಿ ತೇಲಿಬರುವ ಕಲ್ಮಶಗಳು ನೀರಿನಲ್ಲಿ ಮುಳುಗಿ ಕೊಳದ ನೀರಿನ ಮೇಲೆ ತೇಲುವುದಕ್ಕಾಗುವುದಲ್ಲ. ಅವು ಇಳಿಗೊಳವೆಯ ನೀರಿನ ಮೇಲೆಯೇ ತೇಲುತ್ತಾ ನಿಲ್ಲುತ್ತದೆ. ಇದೇರೀತಿ ಕ್ರಿಮಿ-ಕೀಟಗಳು, ಜಲಚರಗಳೂ ಸಹ ಈ ತೇಲು ಕಲ್ಮಶದ ಮೇಲೆಯೇ ನಿಲ್ಲುತ್ತದೆ. ಅಲ್ಲದೆ ನೀರಿನಲ್ಲಿ ಕರಗಿ ಬರುವ ಮಣ್ಣು ಮತ್ತು ಬದಿಯೂ ಕೂಡ ಕಲ್ಮಶದಂತೆಯೇ ಅಲ್ಲೇ ಉಳಿದು, ನಿಧಾನವಾಗಿ ಕೆಳಗಿಳಿದು, ಹೊರಗಾಂಡಿಯ ತಳಭಾಗದಲ್ಲಿ ಶೇಖರವಾಗುತ್ತದೆ. ಹೊರಗಾಂಡಿಯ ನೆಲದಲ್ಲಿ ಮಾಡಿರುವ ಸ್ವಲ್ಪ ಮಟ್ಟಿನ ಆಳವೂ ಸಹ ಕೆಸರು ಅಲ್ಲಿ ಶೇಖರವಾಗಲು ನೆರವಾಗುತ್ತದೆ. ಈ ರೀತಿಯಲ್ಲಿ ನೀರಿನ ಎಲ್ಲಾ ಕಲ್ಮಶಗಳೂ, ಕ್ರಿಮಿ-ಕೀಟಗಳೂ, ಜಲಚರಗಳೂ ಇಳಿಗೊಳವೆಯಲ್ಲೇ ತಡೆಯಲ್ಪಟ್ಟು, ಕೊಳದೊಳಗಿನ ನೀರು ಕಲ್ಮಶರಹಿತವಾಗಿ, ಕಸರಹಿತವಾಗಿ ನಿರ್ಭಯವಾಗಿ ಸ್ನಾನಮಾಡಲು ಯೋಗ್ಯವಾಗಿರುತ್ತದೆ.

ಇಷ್ಟಲ್ಲದೆ ಈ ವಿಧಾನವು ದೀರ್ಘಕಾಲ ತೊಂದರೆ ರಹಿತ, ನಿರ್ವಹಣಾ ರಹಿತ ಕೆಲಸ ಮಾಡುತ್ತದೆ. ನೀರಿನಲ್ಲಿ ಹರಿದು ಬಂದ ಕಸವೆಲ್ಲಾ ಇಳಿಗೊಳವೆಯಲ್ಲೇ ನಿಂತಿರುತ್ತದೆ, ಕೆಸರು, ಬದಿ ಮುಂತಾದುವು ಹೊರಗಾಂಡಿಯ ಬಾಯಿಯಲ್ಲೇ ಶೇಖರವಾಗುತ್ತದೆ, ಶುದ್ಧ ನೀರು ಮಾತ್ರ ಕೊಳದೊಳಕ್ಕೆ ಹರಿದು ಬರುತ್ತಲೇ ಇರುತ್ತದೆ. ಕೊಳದ ನೀರನ್ನು ಖಾಲಿ ಮಾಡಿ ಕೊಳವನ್ನು ಸ್ವಚ್ಛ ಮಾಡುವ ಅವಶ್ಯಕತೆ ಬಂದಾಗ, ಹೊರಗಾಂಡಿಯ ಹಿಂಭಾಗದಲ್ಲಿ ಕಂಡಿಗೆ ಸಿಕ್ಕಿಸಿರುವ ಬಿರಡೆಯನ್ನು ಹೊರಕ್ಕೆ ಎಳೆದರೆ, ಹೊರಗಾಂಡಿಯ ನೆಲದಲ್ಲಿ ಶೇಖರವಾಗಿರುವ ಮಣ್ಣು, ಬದಿ, ಇಳಿಗೊಳವೆಯಲ್ಲಿ ಶೇಖರವಾಗಿರುವ ತೇಲು ಕಸ-ಕಲ್ಮಷ ಎಲ್ಲವೂ ರಭಸದಿಂದ, ಅನಾಮತ್ತಾಗಿ, ಹಾಗಿಂದ-ಹಾಗೆಯೇ ಹೊರದೂಡಲ್ಪಟ್ಟು, ಕೆಳಮಟ್ಟದ ಕೊಳಾಯಿಯೊಂದರ ಮುಖಾಂತರ ಬಾವಿಯನ್ನು ಸೇರುತ್ತದೆ. (ರೇಕಾಚಿತ್ರ - 2)

ನೀರನ್ನು ಜರಡಿ ಮಾಡಿ, ಬದಿಯನ್ನೂ ಸಹ ಪ್ರತ್ಯೇಕಿಸಿ, ತುಂಬುವ ವಿಧಾನ ವಿನೂತನವಾದದ್ದು, ಚಮತ್ಕಾರಯುತವಾದದ್ದು ಹಾಗೂ ಅತೀ ಕೌಶಲಶಪೂರಿತ ವಾದದ್ದು. ಇದರ ನಿರ್ಮಾಣ ಸುಲಭವಾದದ್ದು, ಖರ್ಚಿಲ್ಲದೆ ಆಗುವಂಥದ್ದು. ಆದರೆ ಇದರಿಂದ ಆಗುವ ಉಪಯೋಗ, ನಿಶ್ಚಿಂತೆಯಿಂದ ದೀರ್ಘಕಾಲ ನಡೆಯುವ ಶುದ್ಧೀಕರಣ ಕೆಲಸ, ಹಾಗೆಯೇ, ಜರಡಿಗಳ ಉಪಯೋಗವಿಲ್ಲದೆ ನೀರನ್ನು ಶುದ್ಧ ಮಾಡುವ ವಿಧಾನ, ಹೀಗೆ ಹತ್ತು ಹಲವಾರು. ಇಂತಹ ಸರಳ ವಿಧಾನವನ್ನು ಕಲ್ಪಿಸಿಕೊಂಡು, ಅದನ್ನು ರೂಪಿಸಿ ಬಳಸಿಕೊಂಡ ವಿಜಯನಗರ ವಾಸ್ತು ಶಿಲ್ಪಿಗಳ ಕೌಶಲ, ಬುದ್ಧಿವಂತಿಕೆ ಪ್ರಶಂಸನೀಯವಾದದ್ದು, ಹಾಗೂ ಅನುಕರಣೀಯವಾದದ್ದು. ವಿಜಯನಗರ ಕಾಲದಲ್ಲಿ, ಹಂಪಿಯಲ್ಲಿ, ಬೇರೆ-ಬೇರೆ ರೀತಿಯದಾದ ನೀರು ಸರಬರಾಜು ವ್ಯವಸ್ಥೆಯ ವಿನ್ಯಾಸಗಳು ಕಂಡು ಬಂದಿವೆ. ಆದರೆ ಇಷ್ಟು ಚಾತುರ್ಯ, ಕೌಶಲ ಪೂರಿತವಾದ ನೀರು ಶುದ್ಧೀಕರಣ,

ಸಂಸ್ಕರಣ ವಿಧಾನ ಕೇವಲ ತಲಕಾಡಿನಲ್ಲಿ ಮಾತ್ರ ದೊರೆತಿರುವುದು, ತಲಕಾಡಿನ ಹಿರಿಮೆಯನ್ನು ಹೆಚ್ಚಿಸುತ್ತದೆ.

ವಿಜಯನಗರ ಕಾಲದಲ್ಲಿ ನಗರ ನೀರು ಸರಬರಾಜು ವ್ಯವಸ್ಥೆಯಲ್ಲಿ ಬಹಳಷ್ಟು ಪ್ರಗತಿ ಕಾಣಬರುತ್ತದೆ. ನದೀ, ಅಥವಾ ಜಲಾಶಯಗಳ ಅಥವಾ ಕೆರೆಯ ನೀರನ್ನು ನಾಲೆಗಳ ಮುಖಾಂತರ ಬೇಕಾದಕಡೆಗೆ ಕೊಂಡೊಯ್ದು, ನಾಗರಿಕ ಅನುಕೂಲತೆಗಳಿಗೆ ಬಳಸಿಕೊಳ್ಳುವ ವಿಧಾನ ಹಂಪಿಯಲ್ಲಿ ಸಾಮಾನ್ಯವಾಗಿ ಕಾಣಬರುತ್ತದೆ. ಅಂತಹುದೇ ವಿಧಾನವನ್ನು ಅನುಸರಿಸಿ, ಕಾವೇರಿ ನದಿಯ ನೀರನ್ನು ನಾಲೆಯ ಮುಖಾಂತರ ತಲಕಾಡಿನ ರಾಜಗೃಹಕ್ಕೆ ಹರಿಯುವಂತೆ ಮಾಡಿ, ನೀರನ್ನು ವಿವಿಧ ರೀತಿಯ ಅವಶ್ಯಕತೆಗಳಿಗೆ ಬಳಸಿಕೊಳ್ಳುವುದಕ್ಕೆ ಮಾಡಿರುವ ವಿಧಾನ ಹಂಪಿಯಲ್ಲಿ ದೊರೆತಿರುವ ವಿಧಾನಗಳಂತೆಯೇ ಇದೆ. ಆದರೆ ಶುದ್ಧೀಕರಣ, ಸಂಸ್ಕರಣ ವಿಧಾನ ಮಾತ್ರ ತಲಕಾಡಿನಲ್ಲಿ ಒಂದು ವಿಶಿಷ್ಟರೂಪದ್ದಾಗಿದೆ, ವಿನ್ಯಾಸದ್ದಾಗಿದೆ.

ತಲಕಾಡಿನ ಸ್ನಾನಗೃಹದಲ್ಲಿ ನಿಲ್ಲುತ್ತಿದ್ದ ನೀರಿನ ಮಟ್ಟ ಸುಮಾರು 80ಸೆಂ. ಮೀ. ನಷ್ಟು. ಇದಕ್ಕಿಂತ ಹೆಚ್ಚಿಗೆ ನೀರು ತುಂಬಿದರೆ ಅದು ಸ್ನಾನಗೃಹದ ಬಾಗಿಲಿನ ಮುಖಾಂತರ ಹೊರಕ್ಕೆ ಹೋಗುತ್ತಿತ್ತು, ಅಥವಾ ನೀರಿನ ಮಟ್ಟವನ್ನು ನಿಯಂತ್ರಿಸಲಾಗುತ್ತಿತ್ತು. ಈ ಆಳದ ನೀರಿನಲ್ಲಿ ಹೆಂಗಸರು, ಮಕ್ಕಳು ಸಹ ನಿರಾತಂಕವಾಗಿ ನಿಂತು ಸ್ನಾನ ಮಾಡಬಹುದಿತ್ತು. ಪಶ್ಚಿಮ, ಮತ್ತು ದಕ್ಷಿಣದ ಗೋಡೆಗಳಿಗೆ ಒರಗಿಕೊಂಡಂತೆ ಕಟ್ಟಿರುವ ಮೆಟ್ಟಿಲುಗಳಲ್ಲಿ, ಕೆಳಗಿನ ಮೆಟ್ಟಿಲು ನೀರಿನಲ್ಲಿ ಮುಳುಗುತ್ತಿದ್ದುದರಿಂದ ಅದನ್ನು ಕುಳಿತುಕೊಳ್ಳಲು ಬಳಸುತ್ತಿದ್ದರು, ಮೇಲಿನದರ ಮೇಲೆ ಪ್ರಸಾಧನ ಸಾಮಗ್ರಿಗಳನ್ನು ಇಟ್ಟುಕೊಳ್ಳುತ್ತಿದ್ದರು. ಅವಶ್ಯಕತೆಗೆ ಅನುಸಾರವಾಗಿ ಘಟಪ್ರನಾಳದಿಂದ ನೀರನ್ನು ಬಿಟ್ಟುಕೊಂಡು ಜಲಪಾತದಡಿಯಲ್ಲಿ ನಿಂತು ಸ್ನಾನ ಮಾಡುತ್ತಿದ್ದರು. ಸುತ್ತಲೂ ಎತ್ತರವಾದ ಗೋಡೆ ಮತ್ತು ಮೇಲ್ಛಾವಣಿ ಇದ್ದುದರಿಂದ ಸ್ನಾನ ಮಾಡುವವರಿಗೆ ಮರೆ, ಏಕಾಂತ ವಾತಾವರಣ ಇರುತ್ತಿತ್ತು.

ದಕ್ಷಿಣದ ಗೋಡೆಯಲ್ಲಿ ಮಧ್ಯ ಭಾಗದಲ್ಲಿ ಒಂದು ದೊಡ್ಡ ಕಿಂಡಿ ಉಂಟಾಗಿದೆ. ಈ ಕಿಂಡಿ ನಂತರದಲ್ಲಿ ನಿಧಿ ಚೋರರಿಂದ ಉಂಟಾದದ್ದೋ ಅಥವಾ ಆ ಜಾಗದಲ್ಲಿ ಒಂದು ಕಿಟಕಿ /ಜಾಲಂಧ್ರ ಇದ್ದು ಅದನ್ನು ಕಳ್ಳರು ಕಿತ್ತುಕೊಂಡು ಹೋಗಿದ್ದಾರೋ ಎಂಬುದು ಇಲ್ಲಿ ಜಿಜ್ಞಾಸೆಯ ವಿಷಯ. ಒಂದು ಪಕ್ಷ ಆ ಸ್ಥಳದಲ್ಲಿ ಕಿಟಕಿ /ಜಾಲಂಧ್ರ ಇದ್ದಿದ್ದಲ್ಲಿ ಅದನ್ನು ಸ್ನಾನಗೃಹದ ಒಳಕ್ಕೆ, ಒಳ್ಳೆ ಗಾಳಿ ಬೆಳಕನ್ನು ಕಲ್ಪಿಸುವುದಕ್ಕಾಗಿ ಮಾಡಿರುವುದು ಸಹಜವೇ ಎನಿಸುತ್ತದೆ.

ಸ್ನಾನ ಗೃಹದಲ್ಲಿ ಉಪಯೋಗವಾದ ನೀರನ್ನು ಬಳಿಯಲ್ಲಿಯೇ ಇರುವ ಬಾವಿಯೊಂದಕ್ಕೆ ಬಿಡುತ್ತಿದ್ದರು. ಬಾವಿಯ ನೀರನ್ನು ವಿವಿಧ ಉಪಯೋಗಗಳಿಗೆ ಬಳಸಿಕೊಳ್ಳುತ್ತಿದ್ದರು. ಬಾವಿಯಿಂದ ನೀರನ್ನು ಮೇಲೆತ್ತಿ, ಇಟ್ಟಿಗೆಯಿಂದ ನಿರ್ಮಿತವಾದ


ಕೊಳಾಯಿ / ಬಚ್ಚಲುಗಳಿಗೆ ಸುರಿಯುತ್ತಿದ್ದರು. ಆ ನೀರು ರಾಜಗೃಹದ ಆವರಣದ ವಿವಿಧ ಭಾಗಗಳಿಗೆ ತಲಪಿ ಅಲ್ಲಿ ಬಳಕೆಯಾಗತ್ತಿತ್ತು. (ರೇಖಾಚಿತ್ರ - 2)

ಅಡಿ ಟಿಪ್ಪಣಿಗಳು

1. ಆರ್ಕಿಯಾಲಾಜಿಕಲ್ ಎಕ್ಸ್‌ವೇಷನ್ಸ್ ಎಟ್ ತಲಕಾಡ್, ಡಿ. ವಿ. ದೇವರಾಜ್ ಮತ್ತು ಇತರರು. ಡೈರೆಕ್ಟೂರೇಟ್ ಆಫ್ ಆರ್ಕಿಯಾಲಜಿ ಅಂಡ್ ಮ್ಯೂಜಿಯಮ್ಸ್ ಇನ್ ಕರ್ನಾಟಕ, ಮೈಸೂರು, 1996.
2. ಎಪಿಗ್ರಾಫಿಯಾ ಕರ್ನಾಟಿಕದ ಸಂ. 5 (ಪುನರ್ವಿಮರ್ಶಿತ), ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ತಿ. ನ. 245.




ಸ್ನಾನ ಗೃಹ ಕೊಳ ಮೇಲಿನಿಂದ, ತಲಕಾಡು ಗುಂಡಿ



ಘಟ ಪ್ರಸಾಳಕ್ಕೆ ನೀರು ಸರಬರಾಜು
ಮಾಡುವ ಮೇಲಿನ ಕೊಳಾಯಿ




ನೀರು ಸರಬರಾಜು ಮಾಡುವ ಕೊಳಾಯಿ, ಹಂಪಿ, ರಾಜ್ ನಿವಾಸ್




ಭಾವಿ ಮತ್ತು ಅದಕ್ಕೆ ಬಂದು ಸೇರುವ ಹೊರಗುಂಡಿ ಕೊಳಾಯಿ



ನೀರು ಸರಬರಾಜು ಮಾಡುವ
ಕೆಳಗಿನ ಕೊಳಾಯಿ




ದೊಡ್ಡ ಕೊಳಾಯಿ




ಕಲಾವಿದನ ದೃಷ್ಟಿಯಲ್ಲಿ ಕೊಳದ ಸಂಪೂರ್ಣ ಚಿತ್ರ



ಕೊಳದ ತಳದ ಹೊರುಗುಂಡಿ


DIRECTORATE OF ARCHAEOLOGY
AND MUSEUMS IN KARNATAKA, MYSORE
ARCHAEOLOGICAL EXCAVATIONS AT
TALKAD - T.NARASIPUR TALUK
MYSORE DISTRICT - KARNATAKA -
N
Fig-1



56. ಸಂಡೂರು ಘೋರ್ಪಡೆ ಪ್ರಭುಗಳು

ಡಾ। ಬಿ. ರಾಜಶೇಖರಪ್ಪ

ಎತ್ತರವಾದ ಬೆಟ್ಟಸಾಲುಗಳಿಂದ ಸುತ್ತುವರಿಯಲ್ಪಟ್ಟ ಸುಂದರ ವನನಿಸರ್ಗದ ಸುರಕ್ಷಿತ ಕಣಿವೆಯಲ್ಲಿ ನೆಲೆಗೊಂಡಿರುವ ಸಂಡೂರು, ಈಗಿನ ಬಳ್ಳಾರಿ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರ. ಇದನ್ನು ಸೊಂಡೂರು, ಸುಂಡೂರು ಎಂದೂ ಕರೆಯಲಾಗಿದೆ. ಇದನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಅದೇ ಹೆಸರಿನ ಚಿಕ್ಕ ಸಂಸ್ಥಾನವನ್ನು ಆಳಿದವರು ಘೋರ್ಪಡೆ ಎಂಬ ಹೆಸರಿನ ರಾಜವಂಶದವರು. ಮರಾಠರ ದೊರೆಯಾಗಿದ್ದ ಛತ್ರಪತಿ ಶಿವಾಜಿಯ ಭೋಂಸ್ಲೆ ಮನೆತನ ಮತ್ತು ಈ ಘೋರ್ಪಡೆ ಮನೆತನ, ಎರಡೂ ಸೋದರ ಮನೆತನಗಳು. ಅಂದರೆ ಇವೆರಡೂ ಒಂದೇ ವಂಶದ ಎರಡು ಕವಲುಗಳು. ಭೋಸ್ಲೆ ಶಾಖೆಗಿಂತ ಘೋರ್ಪಡೆ ಶಾಖೆಯವರು ಬಹು ಪೂರ್ವದಲ್ಲಿ ದಖನ್ನಿನ ಬಹಮನಿ, ಮುಂದೆ ಆದಿಲ್‌ಷಾಹಿ ಹಾಗೂ ನಿಜಾಂಷಾಹಿ ರಾಜರಲ್ಲಿ ಸೇವೆ ಸಲ್ಲಿಸುತ್ತಿದ್ದರೆಂದು ಹೇಳುತ್ತಾರೆ. ಹಾಗೆಂದೇ ಮರಾಠರಲ್ಲಿ ಇವರು ಉನ್ನತ ದರ್ಜೆಯವರೆಂದೂ, ಶ್ರೇಷ್ಠ ಕ್ಷತ್ರಿಯರೆಂದೂ ತಮ್ಮನ್ನು ಪರಿಗಣಿಸಿಕೊಂಡಿದ್ದಾರೆ. ಅಲ್ಲದೇ ಭೋಸ್ಲೆ ಶಾಖೆಯವರಿಗಿಂತ ಮೊದಲು ಪ್ರಭಾವಶಾಲಿ ಮರಾಠಾ ಸರದಾರರೆಂದು ಗೌರವಕ್ಕೆ ಪಾತ್ರರಾದವರು ಈ ಘೋರ್ಪಡೆಗಳೇ.

ಘೋರ್ಪಡೆ ಮನೆತನದ ಹಿನ್ನೆಲೆ

ಕನ್ನಡದಲ್ಲಿ 'ಉಡ' ಎಂದು ಕರೆಯುವ ಪ್ರಾಣಿಗೆ ಮರಾಠಿಯಲ್ಲಿ 'ಘೋರ್ಪಡ್' ಎನ್ನುತ್ತಾರೆ. ಅದರಿಂದಲೇ 'ಘೋರ್ಪಡೆ' ಎಂಬ ವಂಶನಾಮ ಬಂದಿರುವುದಾಗಿ ಹೇಳುತ್ತಾರೆ. ಈ ವಂಶನಾಮ ಬರಲು ಒಂದು ಸ್ವಾರಸ್ಯಕರವಾದ ಹಿನ್ನೆಲೆಯೊಂದಿದೆ: ಕೊಲ್ಲಾಪುರದ ಪೂರ್ವಕ್ಕೆ 40 ಕಿ.ಮೀ ದೂರದಲ್ಲಿ ವಿಶಾಲಗಡ ಎಂಬ ಪ್ರಸಿದ್ಧವಾದ ದುರ್ಗವೊಂದಿದೆ. ಹಿಂದೆ ಅದನ್ನು ಬೇಲ್ನಾ ಎಂದು ಕರೆಯುತ್ತಿದ್ದರು. ಭೀಮ್‌ಸಿಂಗ್ ಮತ್ತು ಅವನ ಮಗ ಕರ್ಣಸಿಂಗ್ ಅವರು ಈ ಕೋಟೆಯನ್ನು ಗೆಲ್ಲಲೆಂದು ಬಂದಾಗ 'ಘೋರ್ಪಡ್' ಪ್ರಾಣಿಯ ನಡುವಿಗೆ ಹಗ್ಗ ಕಟ್ಟಿ ಅದನ್ನು ಕೋಟೆಯ ಗೋಡೆಯನ್ನು ಏರಲು ಬಿಟ್ಟು, ಅದು ಮೇಲೆ ಹೋಗಿ ಕಲ್ಲನ್ನು ಭದ್ರ ವಾಗಿ ಹಿಡಿದುಕೊಂಡು ನಿಂತಾಗ, ಅದಕ್ಕೆ ಕಟ್ಟಿದ್ದ ಹಗ್ಗ ಹಿಡಿದು ಅವರು ಮೇಲೇರಿದ್ದರಿಂದ ಆ ಕೋಟೆಯನ್ನು ಗೆಲ್ಲಲು ಸಾಧ್ಯವಾಯಿತು. ಆಗ ಶತ್ರುಗಳೊಂದಿಗಿನ ಕದನದಲ್ಲಿ ಕರ್ಣಸಿಂಗ್ ಮಡಿದನು.

ಇವರು ಸೇವೆಯಲ್ಲಿದ್ದ 3ನೇ ಶಂಸುದ್ದೀನ್ ಮುಹಮ್ಮದನು ಈ ಭೀಮ್‌ಸಿಂಗ್‌ನಿಗೆ 'ರಾಜಾ ಘೋರ್ಪಡೆ ಬಹಾದೂರ್' ಎಂಬ ಬಿರುದನ್ನು ಮುಧೋಳ, ರಾಯಭಾಗ ಮತ್ತು ವಾಯಿ ಎಂಬ ಜಹಗೀರುಗಳನ್ನು, ಘೋರ್ಪಡ್ (ಉಡ) ದ ಆಕೃತಿ ಮತ್ತು ಬಣ್ಣಗಳನ್ನು ಹೋಲುವ ಒಂದು ಪದಕವನ್ನೂ ರಾಜಮುದ್ರೆಯನ್ನೂ ನೀಡಿದನು. ಇದಲ್ಲದೆ ಈ ಬಗ್ಗೆ ಕ್ರಿ.ಶ. 1471 ರ ಅಕ್ಟೋಬರ್ 22 ರಂದು ಒಂದು ಸನ್ನದನ್ನೂ ನೀಡಿದನು. ಇದು ಘೋರ್ಪಡೆ ಮತ್ತು ಭೋಸ್ಲೆ ಮನೆತನಗಳು ವಿಭಜಿತವಾಗಿ ಗುರುತಿಸಿಕೊಳ್ಳಲು ದಿಕ್ಸೂಚಿಯಾಯಿತು. ಆದರೆ ಕರ್ಣಸಿಂಗ್‌ನ ಸೋದರನಾಗಿದ್ದ ಶುಭಕೃಷ್ಣ ಮಾತ್ರ ಭೋಂಸ್ಲೆ ಎಂಬ ತನ್ನ ಮೂಲ ಮನೆತನದ ಹೆಸರನ್ನು ಹಾಗೇ ಉಳಿಸಿಕೊಂಡನು.

ಬಹಮನಿ ರಾಜ್ಯದ ಪತನಾನಂತರದಲ್ಲಿ, ಘೋರ್ಪಡೆಗಳು ಬಿಜಾಪುರದ ಆದಿಲ್‌ಷಾಹಿ ದೊರೆಗಳ ಸೇವೆಗೆ ಸೇರ್ಪಡೆಗೊಂಡರು. ಕ್ರಿ.ಶ.1565 ರಲ್ಲಿ ನಡೆದ ಪ್ರಸಿದ್ಧವಾದ ತಾಳೀಕೋಟೆ ಯುದ್ಧದಲ್ಲಿ ಇವರು ವಿಜನಗರ ಸೈನ್ಯದ ವಿರುದ್ಧ ಹೋರಾಡಿದರು. ಇದಕ್ಕೆ ಬಹುಮಾನವಾಗಿ ಇವರು, ಪತನಗೊಂಡ ವಿಜಯನಗರದ ಸಮೀಪದಲ್ಲೇ 30 ಗ್ರಾಮಗಳ ಒಂದು ಹೊಸ ಜಹಗೀರನ್ನೂ ಪಡೆದರು.

ಕ್ರಿ.ಶ. 17ನೇ ಶತಮಾನದ ಆದಿಭಾಗದಲ್ಲಿ ಘೋರ್ಪಡೆ ಮನೆತನದ ರಾಜಾ ಚೋಲರಾಜನ ಇಬ್ಬರು ಮಕ್ಕಳಾದ ವಲಭ್‌ಸಿಂಗ್ ಮತ್ತು ಪಿಲಾಜಿ ಇವರಿಂದ ಎರಡು ಶಾಖೆಗಳಾಗಿ ವಿಭಜನೆಗೊಂಡಿತು. ಇಬ್ರಾಹಿಂ ಆದಿಲ್ ಶಾಹನು ಮುಧೋಳದಲ್ಲಿ ಆಳುತ್ತಿದ್ದ ಪಿಲಾಜಿಯ ವಿಭಜಿತ ಬಣಕ್ಕೆ ಮನ್ನಣೆ ನೀಡಿದಾಗ (ಕ್ರಿ.ಶ. 1637), ಘೋರ್ಪಡೆ ಮನೆತನದ ಪ್ರಾಂತಗಳ ವಿಂಗಡಣೆ ಜರುಗಿತು. ಅವನು ಕರ್ನಾಟಕ 'ದೊಳಗಿನ ಪ್ರಾಂತಗಳನ್ನು ವಲಭ್‌ಸಿಂಗ್ ಮನೆತನದ ಮ್ಹಾಳೋಜಿಗೆ ವಹಿಸಿಕೊಟ್ಟು. ಶಿವಾಜಿಯ ತಂದೆಯಾದ ಷಾಹಜಿ ಸಹ ಅದೇ ವೇಳೆಗೆ, ತನ್ನ ಪೂರ್ವಿಕರಿಗೂ ಘೋರ್ಪಡೆಗಳಿಗೂ ಇದ್ದ ಸಂಬಂಧವನ್ನು ಹೇಳಿಕೊಂಡು, ಘೋರ್ಪಡೆ ಗಳಿಗೆ ಸೇರಿದ್ದ ಪ್ರಾಂತಗಳಲ್ಲಿ ಕೆಲವನ್ನು ತನ್ನ ಭಾಗವೆಂದು ಘೋಷಿಸಿ ಲಾಭಮಾಡಿಕೊಂಡನು. ಮುಂದೆ ಪಿಲಾಜಿಯ ಮಗ ಬಾಜಿ ಘೋರ್ಪಡೆ ಮತ್ತು ಮ್ಹಾಳೋಜಿ ಘೋರ್ಪಡೆಯವರಿಗೆ ಬಿರುಕುಂಟಾದಾಗ, ಷಾಹಜಿ ಮ್ಹಾಳೋಜಿಯ ಪರವಹಿಸಿದನು. ಇದೇ ಸಮಯದಲ್ಲಿ ಮ್ಹಾಳೋಜಿಯ ಶಾಖೆ ದಕ್ಷಿಣ ಭಾರತದೊಂದಿಗೆ ನೇರ ಸಂಪರ್ಕಕ್ಕೆ ಬಂತಲ್ಲದೆ ಉತ್ತರ ಕರ್ನಾಟಕದ ಒಂದು ಪಟ್ಟಣವಾದ ಗಜೇಂದ್ರಗಡವನ್ನು (ಬಹುಶಃ ಮೇಲೆ ಹೇಳಿದ 30 ಗ್ರಾಮಗಳಲ್ಲಿ ಒಂದು) ತನ್ನ ಮುಖ್ಯ ಕೇಂದ್ರವನ್ನಾಗಿ ಮಾಡಿಕೊಂಡಿತು. ಮ್ಹಾಳೋಜಿಯು ಷಾಹಜಿಯ ಬಣಕ್ಕೆ ನಿಷ್ಠನಾಗಿ ಉಳಿದನಲ್ಲದೆ ಶಿವಾಜಿಯ ಸ್ವತಂತ್ರ ರಾಜ್ಯ ಸ್ಥಾಪನೆಗೆ ಅಮೂಲ್ಯ ಸೇವೆಯನ್ನು ಸಲ್ಲಿಸಿದನು. ಶಿವಾಜಿಯ ಮಗ ಛತ್ರಪತಿ ಸಾಂಬಾಜಿಯ ಪರವಾಗಿ ಇವನು ಮುಕರಬ್‌ಖಾನನ ನೇತೃತ್ವದಲ್ಲಿ ಬಂದಿದ್ದ

ಮೊಗಲ್ ಸೈನ್ಯದೊಂದಿಗೆ ಶೌರ್ಯದಿಂದ ಹೋರಾಡಿ, ಕ್ರಿ.ಶ. 1789 ರಲ್ಲಿ ರಣದಲ್ಲಿ ಹತನಾದನು. ಈ ಕದನದಲ್ಲಿ ಸೆರೆಸಿಕ್ಕ ಸಾಂಭಾಜಿ ಔರಂಗಜೇಬನ ಆದೇಶದಂತೆ ಕೊಲ್ಲಲ್ಪಟ್ಟನು.

ಮೇಲೆ ಹೇಳಿದ ಮ್ಹಾಳೋಜಿಗೆ ಸಂತಾಜಿ, ಬಹಿರ್‌ಜಿ ಮತ್ತು ಮಾಲೋಜಿ ಎಂಬ ಮೂವರು ಮಕ್ಕಳು. ಇವರೆಲ್ಲರೂ ಶ್ರೇಷ್ಠ ದರ್ಜೆಯ ಯೋಧರೂ ಸೇನಾಪತಿಗಳೂ ಆಗಿದ್ದರು. ಔರಂಗಜೇಬನೊಂದಿಗೆ ಮುಂದುವರಿದ ಮರಾಠರ ಹೋರಾಟದಲ್ಲಿ (ಕ್ರಿ.ಶ. 1689–1707) ಇವರು ಪ್ರಮುಖ ಪಾತ್ರ ವಹಿಸಿದರು. ಸಾಂಬಾಜಿಯ ಉತ್ತರಾಧಿಕಾರಿಯಾದ ಛತ್ರಪತಿ ರಾಜಾರಾಯನು ಆಗಿನ ಮರಾಠಾ ರಾಜಧಾನಿಯಾಗಿದ್ದು ರಾಯಗಢದಿಂದ ತಪ್ಪಿಸಿಕೊಂಡಾಗ, ಹಿಂದೆಯೇ ಮೊಗಲರು ಬೆನ್ನಟ್ಟಿಕೊಂಡೇ ಬಂದದ್ದರಿಂದ, ಸುಧೀರ್ಘ ಪ್ರಯಾಣ ಮಾಡಿ ಕಡೆಗೆ ತಮಿಳುನಾಡಿನ ಜಿಂಜಿ ಕೋಟೆಯನ್ನು ತಲುಪಿ ಅಲ್ಲಿ ಆಶ್ರಯ ಪಡೆದನು. ಅವನು ಅಲ್ಲಿ ತಂಗಿದ್ದಾಗ ಇತ್ತ ಕಡೆ ಘೋರ್ಪಡೆ ಸೋದರರು ದಖನ್ನಿನ ಎಲ್ಲ ಕಡೆಯಲ್ಲೂ ಮೊಗಲ್ ಸೈನ್ಯಗಳನ್ನು ಎದುರಿಸಿ ತಮ್ಮ ಹೋರಾಟವನ್ನು ಮುಂದುವರಿಸಿದ್ದರು. ಅವರ ಹೋರಾಟದ ಉತ್ತುಂಗವೆಂದರೆ, ಮೊಗಲ್ ಚಕ್ರವರ್ತಿ ಔರಂಗಜೇಬ್ ಮೇಳಾಪುರದಲ್ಲಿ ಬೀಡು ಬಿಟ್ಟಿದ್ದಾಗ, ಅವನ ಶಿಬಿರದ ಮೇಲೆ ಹಾಗೂ ಅವನ ಖಾಸಾ ಡೇರೆಯ ಮೇಲೆ ದಾಳಿ ನಡೆಸಿದ್ದು. ಆಗ ಚಕ್ರವರ್ತಿ ತನ್ನ ಜೀವ ಉಳಿಸಿಕೊಳ್ಳಲು ಮಂಚದ ಕೆಳಗೆ ಅವಿತಿಟ್ಟು ಕೊಂಡ ಎಂದು ಹೇಳುತ್ತಾರೆ. ಘೋರ್ಪಡೆಗಳು ಆಗ ಡೇರೆಗಳ ಮೇಲಿನ ಚಿನ್ನದ ಕಳಸಗಳನ್ನು ಕಿತ್ತು, ಅವನ್ನು ತಮ್ಮ ವಿಜಯದ ಚಿಹ್ನೆಯಾಗಿ ಮೆರೆಸಲು ತೆಗೆದುಕೊಂಡು ಹೋದರು. ಛತ್ರಪತಿ ರಾಜಾರಾಮನು ಅದರಿಂದ ಸುಪ್ರೀತನಾಗಿ, ಆ ಘೋರ್ಪಡೆ ಸೋದರರಿಗೆ ಹೊಸ ಬಿರುದುಗಳನ್ನು ನೀಡಿದನು. ಸಂತಾಜಿಗೆ 'ಸೇನಾಪತಿ ಮಮಲ್‌ಕತ್ ಮದಾರ್' (ಸೇನಾಪತಿ ಹಾಗೂ ರಾಜ್ಯದ ಬೆನ್ನೆಲುಬು) ಎಂಬ ಬಿರುದನ್ನೂ, ಬಹಿರ್‌ಜಿಗೆ 'ಹಿಂದೂರಾವ್' ಮತ್ತು ಮಾಲೋಜಿಗೆ 'ಅಮೀರ್–ಉಲ್–ಉಮಾರಾ' ಎಂಬ ಬಿರುದುಗಳನ್ನು ನೀಡಲಾಯಿತು.

ದುರದೃಷ್ಟವಶಾತ್, ಘೋರ್ಪಡೆ ಸೋದರರ ನಡುವೆ ಹುಟ್ಟಿದ ಅಂತಃಕಲಹ ಅವರ ಉಜ್ವಲ ಭವಿಷ್ಯವನ್ನು ಮಂಕುಗೊಳಿಸಿತು. ಒಂದು ಕಾಲಕ್ಕೆ ಸಂತಾಜಿಯ ನಂಬಿಕಸ್ಥನೂ ಸಹೋದ್ಯೋಗಿಯೂ ಆಗಿದ್ದ ಧನಾಜಿ ಜಾಧವ್‌ನು ದ್ವೇಷಾಸೂಯೆಯಿಂದ ಅವನ ಕೊಲೆಗೆ ವ್ಯವಸ್ಥೆ ಮಾಡಿದನು. ಅದರ ಫಲವಾಗಿ ಸಂತಾಜಿ ಸತಾರಾ ಸಮೀಪದ ಮ್ಹಾಸವಾಡದಲ್ಲಿ ಕ್ರಿ.ಶ. 1697 ರಲ್ಲಿ, ಗುಪ್ತದಾಳಿಯೊಂದರ ಮೂಲಕ ಕೊಲೆಯಾದನು. ರಾಜಾರಾಮನು ಜಿಂಜಿಯಿಂದ ತನ್ನ ರಾಜ್ಯಕ್ಕೆಂದು ಮರಳಿ ಬರುತ್ತಿದ್ದಾಗ, ಮಾಲೋಜಿ ಸಹ ಮೋಸದಿಂದ ಸೆರೆ ಹಿಡಿಯಲ್ಪಟ್ಟನು. ಈ ಮಧ್ಯೆ ಹೇಗೋ ಉಳಿದ ಬಹಿರ್‌ಜಿ ಮಾತ್ರ ಕರ್ನಾಟಕದ ತನ್ನ ಜಹಗೀರಿನ

ಆಸುಪಾಸಿನಲ್ಲಿ ತನ್ನದೇ ಒಂದು ರಾಜ್ಯವನ್ನು ಸ್ಥಾಪಿಸಿಕೊಂಡನು. ಕ್ರಿ.ಶ. 1697 ರ ಕೊನೆಯ ಹೊತ್ತಿಗೆ. ಗಜೇಂದ್ರಗಡದ ಸುತ್ತಲಿನ ತನ್ನ ಮನೆತನದ ಜಹಗೀರನ್ನು ತನ್ನ ವಶಕ್ಕೆ ತೆಗೆದುಕೊಂಡನು. ಆಮೇಲೆ ದಕ್ಷಿಣಕ್ಕೆ ಹೋಗಿ (ಈಗಿನ ಆಂಧ್ರಪ್ರದೇಶದಲ್ಲಿರುವ) ಗುತ್ತಿಯ ಕೋಟೆಯನ್ನು ಹಿಡಿದನು. ತರುವಾಯದಲ್ಲಿ ಅದು ಬಹಿರ್‌ಜಿಯ ಮೊಮ್ಮಗನೂ ರಭಸ ಪ್ರವೃತ್ತಿಯ ಸಾಹಸಿಯೂ ಆದ ಮುರಾರಿರಾವ್‌ನ ಕಾಲದಲ್ಲಿ ಘೋರ್ಪಡೆ ದೊರೆಗಳ ರಾಜಧಾನಿ ಎನಿಸಿತು. ಗುತ್ತಿಯಲ್ಲಿ ನೆಲೆನಿಂತ ಮೇಲೂ ಬಹಿರ್‌ಜಿಯು ಮೊಗಲರ ವಿರುದ್ಧದ ತನ್ನ ಹೋರಾಟವನ್ನು ಮುಂದುವರಿಸಿದನು. ಇದಲ್ಲದೆ ಮೊಗಲರ ವಿರುದ್ಧದ ಹೋರಾಟದಲ್ಲಿ ವಾಕಿನ ಬೇಡದ (ವಾಗನಗೆರೆ) ಬೇಡ ಪ್ರಭುಗಳು ಹಾಗೂ ಇವರ ಸ್ಥಳೀಯ ಪ್ರಭುಗಳಿಗೆ ಬೆಂಬಲವಾಗಿದ್ದನು. ಹೆಚ್ಚು ಕಡಿಮೆ ಔರಂಗಜೇಬನು ಮರಣಿಸಿದ ಕಾಲದಲ್ಲೇ ಮರಣಹೊಂದಿದ ಬಹಿರ್‌ಜಿ, ಅವನ ಸಾವಿನ ಸಮಯದಲ್ಲಿ ಸುಮಾರು 15 ಲಕ್ಷ ರೂಪಾಯಿಗಳಷ್ಟು ಮೊತ್ತದ ಸರಂಜಾಮನ್ನು ಸಾಗಿಸುತ್ತಿದ್ದ ಎನ್ನಲಾಗಿದೆ.

ಸಂಡೂರಿನ ಘೋರ್ಪಡೆ ಪ್ರಭುಗಳು

ಸಂಡೂರಿನ ಘೋರ್ಪಡೆಗಳ ಇತಿಹಾಸ ಪ್ರಾರಂಭವಾಗುವುದು ಬಹಿರ್‌ಜಿಯ ಮಗ ಹಾಗೂ ಉತ್ತರಾಧಿಕಾರಿಯಾದ 1ನೇ ಸಿದ್ದೋಜಿರಾವ್ ಕ್ರಿ.ಶ. 1714 ರಲ್ಲಿ ಜರಮಲೆ ಪಾಳೆಯ ಗಾರನನ್ನು ಸೋಲಿಸಿ ಅವನಿಂದ ಸಂಡೂರು ಮತ್ತು ಸುತ್ತಲ ಭಾಗವನ್ನು ಕಿತ್ತುಕೊಂಡು ತನ್ನ ರಾಜ್ಯಕ್ಕೆ ಸೇರಿಸಿಕೊಂಡ ತರುವಾಯದಲ್ಲಿ. ಈ ವಿಜಯದಿಂದ ಕೊಲ್ಲಾಪುರದ ಛತ್ರಪತಿ ಗುತ್ತಿಯ ಘೋರ್ಪಡೆಗಳಿಗೆ ಅರೆಸ್ವತಂತ್ರ ಸ್ಥಾನವನ್ನು ಮಾನ್ಯ ಮಾಡಿದನು. ಅಲ್ಲಿಂದ ಗುತ್ತಿಗೆ ಪ್ರಭುಗಳಾಗಿದ್ದವರು ಸಂಡೂರಿಗೂ ಪ್ರಭುಗಳಾಗಿ ಆಳ್ವಿಕೆ ಸಾಗಿಸಿದರು.

1ನೇ ಸಿದ್ದೋಜಿರಾವ್‌ನ ಉತ್ತರಾಧಿಕಾರಿಯಾಗಿ ಕ್ರಿ.ಶ. 1730 ರಲ್ಲಿ ಪಟ್ಟಕ್ಕೆ ಬಂದವನು ಮುರಾರಿರಾವ್. ಅವನು 1746 ರಲ್ಲಿ ಗುತ್ತಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ತನ್ನ ಸಾಮರ್ಥ್ಯವನ್ನು ಬೆಳೆಸಿಕೊಂಡನು. ಕ್ಷಿಪ್ರದಲ್ಲೇ ಅವನು ಎಷ್ಟು ಪ್ರಭಾವಶಾಲಿಯಾಗಿ ಬೆಳೆದನೆಂದರೆ, ನಿಜಾಮನೂ ಮೈಸೂರಿನ ಒಡೆಯರೂ ಅವನಿಗೆ ವರ್ಷಕ್ಕೆ 7 ಲಕ್ಷ ರೂ.ಗಳಷ್ಟು ಮೊತ್ತದ ಪೊಗದಿಯನ್ನು ಆದವಾನಿಯ ನವಾಬನು 70 ಸಾವಿರ ರೂ.ಗಳಷ್ಟು ಮೊತ್ತದ ಪೊಗದಿಯನ್ನು ನೀಡಬೇಕಾಗಿ ಬಂದಿತು. ಇವನು ಆರ್ಕಾಟಿನ ನವಾಬರು ಸೇರಿದಂತೆ ಇಂಗ್ಲೀಷರ ಹಾಗೂ ಫ್ರೆಂಚರ ಸಮರದಲ್ಲೂ ಪ್ರಮುಖ ಪಾತ್ರವನ್ನು ವಹಿಸಿ, ಕ್ರಿ.ಶ. 1741 ರಿಂದ 1745 ರವರೆಗೆ ತಿರುಚಿನಾಪಳ್ಳಿಯನ್ನು ತನ್ನ ವಶದಲ್ಲಿಟ್ಟುಕೊಂಡಿದ್ದನು. ಕ್ರಿ.ಶ. 17 ಚಿತ್ರದುರ್ಗದ ದೊರೆ 2ನೇ ಕಸ್ತೂರಿರಂಗಪ್ಪ ನಾಯಕನ ಮಿತ್ರನಾಗಿ, ಅವನಿಗೆ ಮಾಯಕೊಂಡದ ಯುದ್ಧದಲ್ಲಿ ನೆರವಾಗಿ ಅದನ್ನು ಬಿಡಿಸಿಕೊಳ್ಳಲು ಸಹಾಯಮಾಡಿದನು. ಕ್ರಿ.ಶ. 1750 ರ ದಶಕದಲ್ಲಿ ಅವನು ಕರ್ನಾಟಕದ

ದಕ್ಷಿಣದ ಒಳನಾಡಿನಲ್ಲಿ ಅಲ್ಲೋಲಕಲ್ಲೋಲವನ್ನೇ ಉಂಟುಮಾಡಿ, 1752 ರಲ್ಲಿ ಕೋಡಿಕೊಂಡದ ಬಾಬಪ್ಪ ನಾಯ್ಡುವೂ ಸೇರಿದಂತೆ ಹಲವಾರು ಸ್ಥಳೀಯ ಪ್ರಭುಗಳನ್ನು ಮಣಿಸಿದನು. ಅವನ ಮಹತ್ವಾಕಾಂಕ್ಷೆ ಬೆಳೆಯುತ್ತ, ಕಡೆಗೆ ಅವನು ಪೇಷ್ವಾಗಳನ್ನೂ ಲಕ್ಷ್ಯಕ್ಕೆ ತಾರದಂತಾದನು. ಕರ್ನಾಟಕದಲ್ಲಿ ಪರಮಾಧಿಕಾರ ಹೊಂದಲು ಹೈದರ್‌ಅಲೀ ಸವಾಲು ಒಡ್ಡಿದಾಗ ಅವನಲ್ಲಿ ಮುರಾರಿರಾವ್‌ಗೆ ಪ್ರಬಲ ಪ್ರತಿಸ್ಪರ್ಧಿಯೊಬ್ಬ ಕಾಣಿಸಿ ಕೊಂಡನು. ಪೇಷ್ವಾ ಮಾಧವರಾವ್ ಪುಣೆಯಲ್ಲಿ ನಿಧನನಾದಾಗ, ರಾಜಕೀಯ ಪರಮಾಧಿಕಾರಕ್ಕಾಗಿ ನಡೆದ ಜಗಳ ಕಾದಾಟಗಳು ಮರಾಠರು ಕರ್ನಾಟಕದ ವಿಷಯದಲ್ಲಿ ನಿರ್ಲಕ್ಷ್ಯ ತಾಳಲು ಕಾರಣವಾದುವು. 1775 ರಲ್ಲಿ ಹೈದರ್ ಮುರಾರಿರಾವ್‌ನ ವಿರುದ್ಧ 30 ಸಾವಿರ ಸೈನಿಕರ ಒಂದು ದಳದೊಂದಿಗೆ ಗುತ್ತಿಗೆ ಮುತ್ತಿಗೆ ಹಾಕಿದನು. ಮುರಾರಿ ರಾವ್‌ನ ಮಿತ್ರನಾಗಿದ್ದ ಚಿತ್ರದುರ್ಗದ ಕೊನೆಯ ಮದಕರಿನಾಯಕ, ಹೈದರ್‌ಆಲಿಯ ರಾಜಕೀಯ ಷರತ್ತಿಗೆ ಕಟ್ಟುಬಿದ್ದು ಅವನ ಪರವಾಗಿ ಸೈನ್ಯದೊಂದಿಗೆ ಗುತ್ತಿಗೆ ಬಂದು ಮುತ್ತಿಗೆಯಲ್ಲಿ ಪಾಲ್ಗೊಳ್ಳಬೇಕಾಯಿತು. ಮುರಾರಿರಾವ್ ನಾಲ್ಕು ತಿಂಗಳ ಕಾಲ ಗಡುಸಾದ ಪ್ರತಿರೋಧ ತೋರಿದನಾದರೂ, ಆಹಾರ, ನೀರು, ಯುದ್ಧ ಸಾಮಗ್ರಿ ಮತ್ತು ಹಣ ಎಲ್ಲ ತೀರುತ್ತ ಬಂದ್ದರಿಂದ, ಹೈದರ್ ಅಲಿಗೆ ಶರಣಾಗಬೇಕಾಯಿತು. ಹೈದರ್ ಅವನನ್ನು ಶ್ರೀರಂಗಪಟ್ಟಣದ ಸಮೀಪದ (ಚನ್ನಪಟ್ಟಣದ ಹಾಗೂ ಕನಕಪುರ ಎರಡು ಊರು ಗಳಿಗೂ 14 ಕಿ.ಮೀ ದೂರದಲ್ಲಿರುವ) ಕಬ್ಬಾಳು ದುರ್ಗದಲ್ಲಿ (ಈಗ ಕಬ್ಬಾಳು ಎಂದು ಮಾತ್ರ ಕರೆಯುತ್ತಾರೆ) ಸೆರೆಯಲ್ಲಿಟ್ಟನು. ಕ್ರಿ.ಶ. 1778 ರ ತರುವಾಯದಲ್ಲೇ ಅವನು ಅಲ್ಲೇ ಮರಣಿಸಿದನು. ಗುತ್ತಿಯೊಂದಿಗೆ ಸಂಡೂರು ಸಹ ಹೈದರ್‌ನ ವಶವಾಯಿತು. ಹೈದರ್ ಸಂಡೂರಿನ ಸಮೀಪದಲ್ಲಿ ಕೃಷ್ಣಗರ ಎಂಬಲ್ಲಿ ಕೋಟೆಯೊಂದನ್ನು ಕಟ್ಟಿಸಲು ಆರಂಭಿಸಿದನು. ಮುಂದೆ ಅದು ಮುಗಿದದ್ದು ಅವನ ಮಗ ಟಿಪ್ಪು ಸುಲ್ತಾನ್ ಕಾಲದಲ್ಲಿ. ಸಂಡೂರಿನಲ್ಲಿ ಬಳ್ಳಾರಿಗೆ ಹೋಗುವ ರಸ್ತೆಯಲ್ಲಿ ನೆಲದ ಮೇಲೆ ಕಟ್ಟಿ 'ಸ್ಥಲದುರ್ಗ' ಎನಿಸಿರುವ ಆ ಕೋಟೆ ಕಾಣಿಸುತ್ತದೆ.

ಮುಂದೆ ಟಿಪ್ಪು ಗುತ್ತಿಗೆ ಫೈಜ್ ಹಿಸಾರ್ ಎಂದು ಮರುನಾಮಕರಣ ಮಾಡಿದನು. (ಆದರೆ ಆ ಹೆಸರು ಊರ್ಜಿತವಾಗಲಿಲ್ಲ). ಇಂಗ್ಲೀಷರೊಂದಿಗೆ 2ನೇ ಮೈಸೂರು ಯುದ್ಧಾ ನಂತರದಲ್ಲಿ (1793 ರಲ್ಲಿ), ಟಿಪ್ಪು ಗುತ್ತಿಯನ್ನು ಇಂಗ್ಲೀಷರಿಗೆ ಒಪ್ಪಿಸಿದ. ಅವರು ಕೆಲಕಾಲ ಅದನ್ನು ತಮ್ಮ ವಶದಲ್ಲೇ ಇರಿಸಿಕೊಂಡಿದ್ದು, ಘೋರ್ಪಡೆಯವರನ್ನು ಮಾತ್ರ ಸಂಡೂರಿನಲ್ಲಿ ಪುನಃ ಪ್ರತಿಷ್ಠಾಪಿಸಿದರು. ಅಲ್ಲಿಂದ ಘೋರ್ಪಡೆ ಪ್ರಭುಗಳು ಇಂಗ್ಲೀಷರಿಗೆ ಆಶ್ರಿತರಾಗಿ 1949 ರವರೆಗೂ ಆಳ್ವಿಕೆ ನಡೆಸಿದರು.

ಮುರಾರಿರಾವ್‌ನ ಇಬ್ಬರು ಗಂಡುಮಕ್ಕಳು ಬಾಲ್ಯದಲ್ಲೇ ಗತಿಸಿದ್ದರಿಂದ, ಅವನು ತನ್ನ ಸಾವಿಗೆ ಕೆಲಕಾಲ ಮುಂಚೆಯೇ, ಯಶವಂತರಾವ್ ಎಂಬ ದೂರದ ದಾಯಾದಿ ಸೋದರ ನೊಬ್ಬನ ಮಗ ಶಿವರಾವ್ ಎಂಬುವನನ್ನು ದತ್ತು ತೆಗೆದುಕೊಂಡಿದ್ದನು.

ಅವನೇ 1ನೇ ಶಿವರಾವ್. 1785 ರ ಸುಮಾರಿನಲ್ಲಿ, ಸಂಡೂರಿನಲ್ಲಿ (ಕೃಷ್ಣನಗರದಲ್ಲಿ)ದ್ದ ಟಿಪ್ಪುವಿನ ದಳಗಳನ್ನು ಹೊಡೆದೋಡಿಸಲು ನಡೆದ ವಿಫಲಪ್ರಯತ್ನದಲ್ಲಿ ಇವನು ಮರಣಿಸಿದನು. ಇವನಿಗೆ ಉತ್ತರಾಧಿಕಾರಿಯಾದ ಇವನ ಮಗ ಸಿದ್ಧೋಜಿಗೆ ಆಗಿನ್ನೂ ಎರಡನೇ ವರ್ಷ ವಯಸ್ಸು. ಇವನೇ 2ನೇ ಸಿದ್ಧೋಜಿರಾವ್. ಇವನ ಪೋಷಕನಾದ ಇವನ ಚಿಕ್ಕಪ್ಪ ವೆಂಕಟರಾವ್, ಇವನ ಪರವಾಗಿ 1790 ರಲ್ಲಿ ಟಿಪ್ಪು ದಳಗಳ ಮೇಲೆ ದಾಳಿ ಮಾಡಿ ಅವನ್ನು ಹೊರದೂಡಿ. 1792 ರಲ್ಲಿ ಟಿಪ್ಪು ಜೊತೆ ಶಾಂತಿ ಸಂಧಾನ ಮಾಡಿಕೊಂಡ ಮೇಲೆ, ಘೋರ್ಪಡೆಗಳು ತಮ್ಮ ಪೂರ್ವಿಕರಿಂದ ಬಳುವಳಿಯಾಗಿ ಬಂದಿದ್ದ ಸಂಡೂರನ್ನು ತಮ್ಮದಾಗಿ ಉಳಿಸಿಕೊಳ್ಳಲು ಸಮರ್ಥರಾದರು. 1796 ರಲ್ಲಿ ಕೇವಲ 13 ವರ್ಷದವನಿದ್ದ ಸಿದ್ಧೋಜಿ ಮರಣಕ್ಕೆ ತುತ್ತಾದನು. ಆಗ ವೆಂಕಟರಾವ್‌ನ ಸಲಹೆಯಂತೆ ಸಿದ್ಧೋಜಿಯ ಬಾಲವಿಧವೆ ರಾಣಿ, ತಮ್ಮ ದಾಯಾದಿ ಸಂಬಂಧದ ಖಂಡೇರಾವ್ ಎಂಬುವನ ಹಿರಿಯ ಮಗ ಶಿವರಾವ್‌ನನ್ನು 1796 ರಲ್ಲಿ ದತ್ತಕ ಮಾಡಿಕೊಂಡಳು. 2ನೇ ಶಿವರಾವ್ ಎನಿಸಿದ ಈತ, ಹಿಂದೆ ಮುರಾರಿರಾವ್‌ಗೆ ದತ್ತಕವಾಗಿದ್ದ 1ನೇ ಶಿವರಾವ್‌ನಂತೆಯೇ ದತ್ತವಾಡದ ಘೋರ್ಪಡೆ ಮನೆತನಕ್ಕೆ ಸೇರಿದವನು. ಈ 2ನೇ ಶಿವರಾವ್ ಮತ್ತು ವೆಂಕಟರಾವ್ ಅವರು ಟಿಪ್ಪು ಮರಣಾನಂತರ ಸಂಡೂರಿನಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡರು.

1796 ರಲ್ಲಿ 2ನೇ ಬಾಜೀರಾವ್ ಪೇಷ್ವಾ ಆದನು. ಅದಾದ 4 ವರ್ಷಗಳ ಅನಂತರ ಮೃತನಾದ ನಾನಾ ಫಡನವಿಸ್ ಪುಣೆಯನ್ನು ದುರ್ಬಲವಾಗಿಸಿ, ಹಿಂದೆಂದಿಗಿಂತಲೂ ಅತಂತ್ರವಾಗಿಸಿ ಹೋಗಿದ್ದನು. 1799 ರಲ್ಲಿ ಶ್ರೀರಂಗಪಟ್ಟಣದ ಮುತ್ತಿಗೆಯಲ್ಲಿ ಟಿಪ್ಪು ಸೋಲುಂಡು ಹತನಾದನು. ಆಗ ಟಿಪ್ಪುವಿನ ಯುದ್ಧ ಸಮಯದ ಮುಂಡಾಸು, ಅವನ ಒಂದು ಕತ್ತಿ, ಗುತ್ತಿಯ ದೊರೆ ಮುರಾರಿರಾವ್‌ನ ಕತ್ತಿ, ಮಾರ್ಕ್ವಿಸ್ ಕಾರನ್ ವಾಲಿಸ್‌ಗೆ ಕಳಿಸಿಕೊಡಲ್ಪಟ್ಟುವು. ಇತ್ತ 2ನೇ ಬಾಜೀರಾವ್ ಸಂಡೂರಿನ ವಿಷಯದಲ್ಲಿ ಆಸಕ್ತಿ ತಾಳಿದನು. ದತ್ತವಾಡದ ಮಾಲೋಜಿರಾವ್‌ನ ಮಗ ಯಶವಂತರಾವ್‌ಗೆ 'ಶ್ರೇಷ್ಠ ಅಧಿಕಾರಿ' ಎಂದು ಒಂದು ಸನ್ನ ದನ್ನು ನೀಡಿದನು. ಈ ಯಶವಂತರಾವ್‌ಗೆ ಎರಡನೆಯ ಮಗ ನರಸಿಂಹರಾವ್, ತರಲೆ ಯೊಂದಕ್ಕೆ ಪ್ರಚೋದಿಸಿದನೆಂದು 2ನೇ ಶಿವರಾವ್ 1808 ರಲ್ಲಿ ಅವನನ್ನು ಹೊರಹಾಕಿದನು. 1804 ರಿಂದ ಅವನು 100 ವರಹಗಳ ಮಾಸಿಕ ಭತ್ಯೆಯನ್ನು ಪಡೆಯುತ್ತ ಬಂದಿದ್ದನು. 1815 ರಲ್ಲಿ ಪೇಷ್ವೆಯು ಸಂಡೂರಿನ ಬಳಿಯ ಕಾರ್ತಿಕೇಯ ಸ್ವಾಮಿಯ ಯಾತ್ರೆಯ ಸೋಗಿನಲ್ಲಿ ಬಂದು ಸಂಡೂರನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸಿದನು. ಆಗ 2ನೇ ಶಿವರಾವ್ ದಾರಿಗಳನ್ನೆಲ್ಲ ಬಂದು ಮಾಡಿ, ಪೇಷ್ವೆಯೊಂದಿಗೆ ಅವನ ಸೈನ್ಯ ಜೊತೆಗೆ ಬರಲು ಅನುಮತಿಸಿದೆ, ಅವನು ಕೆಲವರೇ ಕೆಲವು ಸಹಾಯಕರೊಂದಿಗೆ, ಕಾಲ್ನಡಿಗೆಯಲ್ಲಿ ಬೆಟ್ಟವನ್ನೇರಿ ಕುಮಾರಸ್ವಾಮಿ ದೇವಸ್ಥಾನಕ್ಕೆ ಹೋಗಿಬರುವಂತೆ ಮಾಡಿದನು.

ಬಾಜೀರಾವ್ ದೇವಸ್ಥಾನಕ್ಕೆ ಸಮೀಪದಲ್ಲಿದ್ದಾಗ ಬಂಡೆಯೊಂದು ಮೇಲಿನಿಂದ ಅವನ ಕಡೆಗೆ ಉರುಳಿ ಬಂದಿತೆಂದೂ, ಅದೃಷ್ಟವಶಾತ್ ಅವನು ಪಾರಾದನೆಂದೂ, ಆ ಬಂಡೆ ಈಗಲೂ ಇದ್ದು ಅದನ್ನು 'ಬಾಜೀರಾಯನ ಬಂಡೆ' ಎಂದು ಕರೆಯುತ್ತಿರುವುದಾಗಿಯೂ ಹೇಳುತ್ತಾರೆ.

ಪೇಷ್ವೆಯು 2ನೇ ಶಿವರಾವ್‌ನನ್ನು ದಂಗೆಕೋರ ಸಾಮಂತನೆಂಬಂತೆ ಪರಿಗಣಿಸಿ, ಸಂಡೂರಿನ ಮೇಲಿನ ಅವನ ಹಕ್ಕನ್ನು ಒಪ್ಪಿಕೊಳ್ಳದಾದನು. 2ನೇ ಶಿವರಾವ್‌ನಾದರೋ ಕೋಟೆಯ ಅವಶೇಷಗಳಲ್ಲಿ ಸತ್ತರೂ ಸರಿಯೇ ಪೇಷ್ವೆಗೆ ಮಣಿಯುವುದಿಲ್ಲ ಎಂದು ಸವಾಲೆಸೆಯುತ್ತ ಹೋದನು. ವಿಧೇಯರಾಗಿರದ ಸಾಮಂತರನ್ನು ಅಧಿಕಾರದಿಂದ ಕೆಳಗಿಳಿಸಲು ಇಂಗ್ಲೀಷರು ತನಗೆ ಸಹಾಯಕಮಾಡಬೇಕೆಂಬ 'ಬೇಸಿನ್ ಒಪ್ಪಂದ'ಕ್ಕೆ ಚಾಲನೆ ನೀಡಿ, ಶಿವರಾವ್‌ನಿಂದ ಸಂಡೂರನ್ನು ಕಿತ್ತುಕೊಳ್ಳಲೇಬೇಕೆಂದು ಪೇಷ್ವೆ ಪಟ್ಟುಹಿಡಿದನು. ಅದರಂತೆ ಕ್ರಮ ಕೈಕೊಳ್ಳಲೇ ಬೇಕಾಗಿ ಬಂದ ಇಂಗ್ಲೀಷರು, ಸಂಡೂರಿನ ಕಣಿವೆ ಪ್ರದೇಶವನ್ನು ಒಪ್ಪಿಸುವಂತೆ ಒತ್ತಡಹಾಕಲು, ಧಾರವಾಡದಿಂದ ಥಾಮಸ್ ಮನ್ರೋನನ್ನು ಸೈನ್ಯ ಸಮೇತ ಕಳಿಸಿಕೊಡಲಾಯಿತು. 1817 ರಲ್ಲಿ 2ನೇ ಶಿವರಾವ್ ಅನಿರ್ವಾಹ ಪರಿಸ್ಥಿತಿಯಲ್ಲಿ ಸಂಡೂರು ಕೋಟೆಯನ್ನು ಅವನಿಗೆ ಒಪ್ಪಿಸಿಕೊಡಬೇಕಾಯಿತು. ಆಗ ಮನ್ರೋ ಶಿವರಾವ್‌ಗೆ ಹಿರೇಹಾಳು ಮತ್ತು ಇತರ ಎಂಟು ಗ್ರಾಮಗಳನ್ನು ಬಿಟ್ಟುಕೊಟ್ಟನು. ಸಂಡೂರು ನ್ಯಾಯಯುತವಾಗಿ ಶಿವರಾವ್‌ನ ಹಕ್ಕಿನದೆಂದೂ, ಅವನು ಅದರ ಸ್ವತಂತ್ರ ಪ್ರಭುವೆಂದೂ ಮನ್ರೋ ತನ್ನ ಒಂದು ಪತ್ರದಲ್ಲಿ ಬರೆದಿರುವುದಾಗಿ ತಿಳಿಯುತ್ತದೆ. ಮುಂದೆ 1818 ರಲ್ಲಿ ಪೇಷ್ವೆ ಸೋತ ಮೇಲೆ, ಸಂಡೂರು ಶಿವರಾವ್‌ಗೆ ಮರಳಿ ಸೇರಬೇಕೆಂದು ಮನ್ರೋ ಶಿಫಾರಸ್ಸು ಮಾಡಿದನು. ಅದರಂತೆ 9 ತಿಂಗಳ ಅನಂತರದಲ್ಲಿ 1818 ರ ಜುಲೈ 1 ರಂದು ಶಿವರಾವ್‌ಗೆ ಸಂಡೂರಿನ ಪ್ರಭುತ್ವದ ಅಧಿಕಾರ ಮರಳಿ ಬಂತು. ಆದರೂ, ಮನ್ರೋ ಸರಕಾರದಿಂದ ಅಧಿಕೃತ ಸನ್ನದು ಬಂದದ್ದು 1826 ರಲ್ಲಿ.

2ನೇ ಶಿವರಾವ್ ಪುತ್ರ ಸಂತತಿ ಇಲ್ಲದೆ 1840 ರಲ್ಲಿ ಅವನ ದತ್ತಕ ಮಗನಾದ 1ನೇ ವೆಂಕಟರಾವ್ (ಇವನು ಪ್ರಭು ಶಿವರಾವ್‌ನ ತಮ್ಮ ಭುಜಂಗರಾವ್‌ನ ಮಗ) ಅವನ ಉತ್ತರಾಧಿಕಾರಿಯಾದನು. ಅವನ ಆಳ್ವಿಕೆಯ ಅವಧಿಯಲ್ಲಿ ಬ್ರಿಟಿಷರು ರಾಮನದುರ್ಗದಲ್ಲಿ ಒಂದು ಸ್ಯಾನೆಟೋರಿಯಂ ಪ್ರಾರಂಭಿಸಲು ಅವಕಾಶ ನೀಡಲಾಯಿತು. ಮುಂದೆ 1861 ರಲ್ಲಿ ವೆಂಕಟರಾವ್‌ನ ಉತ್ತರಾಧಿಕಾರಿಯಾದವನು ಅವನ ಮಗ ಶಿವಷಣ್ಮುಖರಾವ್. (ಮುಂದಿನ ವರ್ಷದಲ್ಲಿ ಬ್ರಿಟಿಷರು ದತ್ತಕ ಹಕ್ಕನ್ನು ಮಾನ್ಯ ಮಾಡಿದರು). ಅವನು 1867 ರಲ್ಲಿ, ವಂಶಪಾರಂಪರ್ಯ ಪ್ರತಿಷ್ಠೆಯಾಗಿ ಬಂದಿದ್ದ 'ರಾಜ' ಎಂಬ ಬಿರುದನ್ನು (ಸ್ಥಾನ ಗೌರವವನ್ನು) ಪಡೆದನು. ಜಾನ್ ಮೆಕ್‌ಕಾರ್ಟ್ನಿ ಎಂಬ ಸ್ಕಾಟಿಷ್ ವ್ಯಕ್ತಿ ಇವನ ಸಲಹೆಗಾರ ಹಾಗೂ ಕಾರಭಾರಿ ಆಗಿದ್ದನು.

1876–78 ರ ಬರಗಾಲದಲ್ಲಿ ಅವನು ಕೈಗೊಂಡ ಕ್ರಮಗಳಿಂದ ಅವನೊಬ್ಬ ದಕ್ಷ ಹಾಗೂ ನಿಸ್ವಾರ್ಥಿ ಆಡಳಿತಗಾರ ಎಂದು ಗೌರವಿತನಾಗಿದ್ದಾನೆ. ಶಿವಷಣ್ಮುಖ ರಾವ್ 1878 ರಲ್ಲಿ ತೀರಿದಾಗ ಅವನ ತಮ್ಮ ರಾಮಚಂದ್ರವಿಠಲರಾವ್ ಉತ್ತರಾಧಿಕಾರಿಯಾದನು. ಅವನಿಗೆ 1879 ರ ಫೆಬ್ರವರಿ 5 ರಂದು 'ರಾಜ' ಎಂಬ ಸ್ಥಾನವನ್ನು ಮನ್ನಿಸಲಾಯಿತು. 1884 ರ ಸೆಪ್ಟೆಂಬರ್‌ನಲ್ಲಿ ಮೆಕ್‌ಕಾರ್ಟ್ನಿಯ ತರುವಾಯ ಜೆ.ಜಿ. ಫಿರ್ತ್ ಎಂಬುವನು ಕಾರಭಾರಿಯಾದನು. ಏಳು ವರ್ಷಗಳ ತರುವಾಯ, 1892 ರ ಜುಲೈ 10 ರಂದು ಜನಿಸಿದ ವೆಂಕಟರಾವ್ ಎಂಬ ಅಪ್ರಾಪ್ತ ವಯಸ್ಸಿನ ಮಗನನ್ನು ಬಿಟ್ಟು ಕಾಲವಾದನು. ಅವನಿಗೆ 1893 ರಲ್ಲಿ 'ವೆಂಕಟರಾವ್ ಸಾಹೇಬ್ ಹಿಂದೂರಾವ್ ಘೋರ್ಪಡೆ, ಸೇನಾಪತಿ ಮಮಲ್ ಕತ್ ಮದಾರ್, ಸಂಡೂರು ರಾಜ' ಎಂಬ ಬಿರುದಿನ ಮನ್ನಣೆ ನೀಡಲಾಯಿತು. ಇವನೇ 2ನೇ ವೆಂಕಟರಾವ್.

ವೆಂಕಟರಾವ್ ಉತ್ತರಾಧಿಕಾರಿಯಾದ ಕೆಲವು ವರ್ಷಗಳವರೆಗೆ, ಅವನ ಚಿಕ್ಕಪ್ಪ ಮಾಲೋಜಿರಾವ್ ಬಾಳಾಸಾಹೇಬನು ಫಿರ್ತ್‌ನನ್ನು ದಿವಾನನ್ನಾಗಿ ಮಾಡಿಕೊಂಡು, ಸಂಸ್ಥಾನದ ಆಡಳಿತಾಧಿಕಾರಿಯಾಗಿ ಕಾರ್ಯನಿರ್ವಹಿಸಿದನು. 1897 ರಲ್ಲಿ ಫಿರ್ತ್ ತರುವಾಯ ಆ ಸ್ಥಾನಕ್ಕೆ ಬಂದ ಟಿ. ಕೋದಂಡರಾಮ ನಾಯ್ಡು 1913 ರವರೆಗೆ ಸಲ್ಲಿಸಿದ ಸೇವೆ ಅಮೂಲ್ಯವಾದದ್ದು. ಬಾಳಾ ಸಾಹೇಬನು 1901 ರಲ್ಲಿ ಅಧಿಕಾರ ತ್ಯಾಗ ಮಾಡಿದ ಮೇಲೆ, ಇಂಗ್ಲೀಷರ ರಾಜಕೀಯ ಕಾರ್ಯಭಾರಿಯಾದ ಬಳ್ಳಾರಿಯ ಕಲೆಕ್ಟರನೇ, ಸಂಸ್ಥಾನದ ಮೇಲೆಯೂ ಅಧಿಕಾರ ಹೊಂದಿದ್ದನು. ಆಗ ಆಡಳಿತದಲ್ಲಿ ಕೆಲವು ಸುಧಾರಣೆಗಳಾದುವು. ಭಾರತ ಹಾಗೂ ಮದರಾಸು ಸರ್ಕಾರಗಳ ವಿಧಾನ ಮಂಡಲಗಳ ಕಾಯಿದೆಗಳು ಬಲವಂತವಾಗಿ ಜಾರಿಗೊಳಿಸಲ್ಪಟ್ಟವು. 1923 ರ ಅಕ್ಟೋಬರ್ 1ರ ಅನಂತರ, ಮಾಂಟ್ ಫರ್ಡ್ ಸುಧಾರಣೆಗಳ ಅನ್ವಯ ಭಾರತೀಯ ಸಂಸ್ಥಾನಗಳ ರಾಜಕೀಯ ಸಂಬಂಧಗಳು ಭಾರತ ಸರ್ಕಾರದೊಂದಿಗೆ ನೇರ ವ್ಯವಹಾರಕ್ಕೆ ಒಳಪಟ್ಟವು. ಅದರನ್ವಯ ತ್ರಿವೇಂಡ್ರಂ (ತಿರುವನಂತಪುರ) ದಲ್ಲಿರುವ ಗೌರ್ನರ್ ಜನರಲ್‌ನ ವಿಶೇಷ ಪ್ರತಿನಿಧಿಯು ಸಂಡೂರಿನ ಬಗ್ಗೆಯೂ ನೋಡಿಕೊಳ್ಳಬೇಕಾಯಿತು. 1939ರ ಜನವರಿ 1 ರ ಅನಂತರ, ಬೆಂಗಳೂರಿನಲ್ಲಿದ್ದ ಮೈಸೂರಿನ ಬ್ರಿಟಿಷ್ ರೆಸಿಡೆಂಟನು ಸಂಡೂರಿನ ರೆಸಿಡೆಂಟನೂ ಆದನು. ಇದರಿಂದ ಆ ಮೊದಲಿಗಿದ್ದ ಸಂಡೂರಿನ ತೊಡಕು ತೊಂದರೆಗಳು ತಪ್ಪಿದಂತಾಗಿ, ಸಂಡೂರಿನ ರಾಜಕೀಯ ಅಸ್ತಿತ್ವ ಸುಭದ್ರಗೊಂಡಂತಾಯಿತು. ಟಿ. ರಾಮಚಂದ್ರ ಅಯ್ಯರ್ 1923 ರಿಂದ 1939 ರವರೆಗೆ ದಿವಾನ್ ಆಗಿ, ರಾಮರಾವ್ ಎಂ. ದೇಶಮುಖ್ ಎರಡುವರ್ಷ ಸಲಹೆಗಾರನಾಗಿ, ಆಮೇಲೆ ಜಿ.ಟಿ. ಕೊಣ್ಣೂರ್ 1935 ರವರೆಗೆ ದಿವಾನನಾಗಿ, ವಿ.ನರಸಿಂಹರಾವ್ 1949 ರವರೆಗೆ ವಿವಿಧ ಅಧಿಕಾರ ಸ್ಥಾನದಲ್ಲಿ ಸಂಸ್ಥಾನದ ಸೇವೆಯಲ್ಲಿದ್ದರು.

2ನೇ ವೆಂಕಟರಾವ್ 1927 ರಲ್ಲಿ ಕಾಲವಾದನು. ಅವನಿಗೆ ಪುತ್ರ ಸಂತತಿ ಇರಲಿಲ್ಲ. ಗಜೇಂದ್ರಗಡದ ಭುಜಂಗರಾವ್ ಯಾನೆ ಅಪ್ಪಾ ಸಾಹೇಬ್ ಮತ್ತು (ಬರೋಡಾ ರಾಜ ಮನೆತನದ) ತಾರಾಬಾಯಿ ಅವರ ಹಿರಿಯ ಮಗನಾಗಿ 1908 ರ ನವೆಂಬರ್ 13 ರಂದು ಜನಿಸಿದ್ದ ಯಶವಂತರಾವ್‌ಗೆ 1928 ರ ಜೂನ್ 20 ರಂದು ಸಂಡೂರಿನ ಪ್ರಭುವಾಗಿ ಪರಿಗಣಿಸಲಾಯಿತು. ಸಂಸ್ಥಾನದ ಶಾಸನ ಸಭೆಯ ಕೆಳಗಿನ ಸದನವಾಗಿ 'ಪ್ರಜಾಮಂಡಲ' ಎಂಬುದನ್ನು ರಚಿಸಿದಾಗ, 1931 ರಿಂದಲೇ ಆಡಳಿತದ ವಿಕೇಂದ್ರೀಕರಣ ಹಾಗು ಪ್ರಜಾಪ್ರಭುತ್ವೀ ಕರಣ ಸಂಸ್ಥಾನದಲ್ಲಿ ಆರಂಭಗೊಂಡಂತಾಯಿತು. ಮುಂದೆ ಸ್ವಾತಂತ್ರ್ಯಾನಂತರದಲ್ಲಿ ಭಾರತ ಪ್ರಜಾಪ್ರಭುತ್ವದೊಳಗೆ ವಿಲೀನಗೊಂಡಾಗ ಈ ಸಂಸ್ಥಾನದ ಪ್ರಜಾಪ್ರಭುತ್ವೀಕರಣ ಸಾರ್ಥಕ ನೆಲೆಯನ್ನು ಮುಟ್ಟಿದಂತಾಯಿತು.

1932ನೇಯ ವರ್ಷಕ್ಕೆ ಸಂಡೂರಿನಲ್ಲಿ ಇತಿಹಾಸದಲ್ಲಿ ವಿಶೇಷ ಮಹತ್ವವಿದೆ. ಏಕೆಂದರೆ, ಆ ವರ್ಷ, ಅಸ್ಪೃಶ್ಯತೆಯ ನಿಷೇಧ ಹಾಗೂ ಎಲ್ಲ ಜನಾಂಗದವರೂ ಎಲ್ಲ ದೇವಾಲಯ ಪ್ರವೇಶಕ್ಕೆ ಮತ್ತು ಪೂಜೆಗೆ ಸಮಾನ ಹಕ್ಕುಳ್ಳವರೆಂಬುದನ್ನು ಕಾಯಿದೆ ಮೂಲಕ ಘೋಷಿಸಲಾಯಿತು. ಈ ಪ್ರಗತಿಪರ ಕ್ರಮಗಳು ಗಾಂಧೀಜಿಯವರ ಗಮನ ವನ್ನು ಸೆಳೆದದ್ದಲ್ಲದೆ 1934 ರಲ್ಲಿ ಅವರು ಸಂಡೂರಿಗೆ ಭೇಟಿ ಕೊಡಲು ಕಾರಣವಾಯಿತು. ಅವರು ಸಂಡೂರನ್ನು 'ಮರುಭೂಮಿಯ ಚಿಲುಮೆ' ಎಂದು ಬಣ್ಣಿಸಿದರು. ಅಷ್ಟೇ ಅಲ್ಲ, ತಮ್ಮ 'ಹರಿಜನ' ಪತ್ರಿಕೆಯಲ್ಲಿ 'ದಕ್ಷಿಣ ಭಾರತದ ಒಂದು ಪುಟ್ಟ ಪ್ರಾಂತ ಪ್ರಭು ತನ್ನ ಸಂಸ್ಥಾನದ ದೇವಾಲಯಗಳನ್ನು ಹರಿಜನರಿಗಾಗಿ ತೆರೆದಿದ್ದಾರೆ. ಇದೇನೋ ಮೇಲಿನ ದೇವತೆಗಳಿಂದ ಆದ ಪವಾಡವಲ್ಲ....' ಎಂದು ಪ್ರಶಂಸಿದ್ದಾರೆ.

1932 ರಲ್ಲಿ ಸಂಡೂರಿನಲ್ಲಿ ನ್ಯಾಯ ವ್ಯವಸ್ಥೆ ಪುನಾರಚನೆಗೊಂಡಿತು. ಉಚ್ಚನ್ಯಾಯಾ ಲಯದ ಅಧಿಕಾರಗಳುಳ್ಳ ಸ್ವತಂತ್ರವಾದ ಒಂದು ಮುಖ್ಯ ನ್ಯಾಯಾಲಯ, 'ಸಂಡೂರು ಮುಖ್ಯ ನ್ಯಾಯಾಲಯ ಕಾಯಿದೆ 1932' ಎಂಬುದರ ಅಡಿಯಲ್ಲಿ ಪ್ರಾರಂಭವಾಯಿತು. ಮದರಾಸು ಸರ್ಕಾರದ ಜೊತೆಗಿನ ಒಪ್ಪಂದದಂತೆ, ಬಳ್ಳಾರಿಯ ಜಿಲ್ಲಾ ನ್ಯಾಯಾಧೀಶನನ್ನು ಸಂಡೂರಿನ ಮುಖ್ಯ ನ್ಯಾಯಾಲಯದ ನ್ಯಾಯಾಧೀಶನನ್ನಾಗಿ ನೇಮಿಸಲಾಯಿತು.

1934 ರಲ್ಲಿ, ರೈತ ಸಾಲದ ಹೊರೆ ತಗ್ಗಿಸುವ ಸಮಸ್ಯೆಯನ್ನು ಕೈಗೆತ್ತಿಕೊಂಡುದು, 'ಸಾಲ ಸಮನ್ವಯ ಮಂಡಳಿ'ಯ ಸಂವಿಧಾನದ ರಚನೆಗೆ ಕಾರಣವಾಗಿ, ಮುಂದೆ ಸಂಡೂರು 'ಸಾಲ ಸಮನ್ವಯ ಕಾಯಿದೆ 1936' ನ್ನು ಅಂಗೀಕರಿಸಲಾಯಿತು.

ಸಂಡೂರು ಶಾಸನ ಸಭೆಯು ದರ್ಬಾರ್ ಮತ್ತು ಪ್ರಜಾಮಂಡಲ ಎಂಬ ಎರಡು ಸದನಗಳನ್ನು ಹೊಂದಿತ್ತು. ಅದರಿಂದ ಸಂಸ್ಥಾನಕ್ಕೆ ಅತ್ಯಗತ್ಯವಾದ ಕಾನೂನು ಕಾಯಿದೆಗಳನ್ನು ರಚಿಸಿಕೊಳ್ಳಲು ಸಾಧ್ಯವಾಯಿತು. ಜೊತೆಗೆ, ಗಾಂಧೀಜಿಯವರ ಪಂಚಾಯಿತಿ ರಾಜ್ಯದ ಪರಿಕಲ್ಪನೆಯನ್ನು ಸಾಕಾರಗೊಳ್ಳುವ ದಿಶೆಯಲ್ಲಿ ಅನೇಕ ಆಡಳಿತ ಸುಧಾರಣೆಗಳನ್ನೂ ಮಾಡಲಾಯಿತು.

ಸಂಡೂರು ಘೋರ್ಪಡೆ ಪ್ರಭುಗಳ ವಂಶವೃಕ್ಷ

- ಮ್ಹಾಳೋಜಿರಾವ್
  - ಸಂತಾಜಿ (ಕಪಶಿ ಶಾಖೆ)
  - (1) ಬಿಹಿರ್‌ಜಿ (ಹಿಂದೂರಾವ್) (ಗಜೇಂದ್ರಗಡ-ಸಂಡೂರು ಶಾಖೆಗಳು) (1689–1708)
    - (2) 1ನೇ ಸಿದ್ಧೋಜಿ ರಾವ್ (ಸಂಡೂರು ಗೆದ್ದವನು) (1708–1730)
      - (3) ಮುರಾರಿರಾವ್ (ಗುತ್ತಿ) (1730–1776)
      - ದೌಲತ್‌ರಾವ್ (ಗಜೇಂದ್ರಗಡ)
  - ಮಾಲೋಜಿ (ದತ್ತವಾಡ-ಬೇಡಕ್ ಶಾಖೆಗಳು)
    - ಶಿವರಾವ್
      - ಯಶವಂತರಾವ್
        - (4) 1ನೇ ಶಿವರಾವ್ (1776–1785)
          - (5) 2 ನೇ ಸಿದ್ಧೋಜಿರಾವ್ (1785–1796)
      - ಮಾಲೋಜಿರಾವ್
        - ಖಂಡೇರಾವ್
          - (6) 2ನೇ ಶಿವರಾವ್ (1796–1840)
          - (7) ಭುಜಂಗರಾವ್

ಬಹಿರ್‌ಜಿ
|
ಭುಜಂಗರಾವ್
|
ದೌಲತ್‌ರಾವ್
|
ಯಶವಂತರಾವ್
|
ಭುಜಂಗರಾವ್
(ಅಪ್ಪಾ ಸಾಹೇಬ್)
|
(10) ಯಶವಂತರಾವ್
(1928–1949)

1ನೇ ವೆಂಕಟರಾವ್

- (8) ಶಿವಷಣ್ಮುಖರಾವ್
  (1861–1878)
- (9) ರಾಮಚಂದ್ರ ವಿಠಲರಾವ್
  (1878–1892)
  |
  (10) 2ನೇ ವೆಂಕಟರಾವ್
  (1892–1928)

1948 ರಲ್ಲಿ ಸಂಡೂರು ಸಂಸ್ಥಾನದ ವಿಲೀನತೆಯ ಪ್ರಶ್ನೆ ಬಂತು. ಆಗ ರಾಜ್ಯ ಶಾಸನ ಸಭೆ ಈ ಬಗ್ಗೆ ವಿಶದವಾದ ಪರಿಶೀಲನೆ ನಡೆಸಿದ ಅನಂತರ ಸಂಡೂರಿನ ಪ್ರಭು ವಿಲೀನಕ್ಕೆ ಒಪ್ಪಿಗೆ ಸೂಚಿಸಿ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರಿಗೆ ಪತ್ರ ಬರೆದಂತೆ, ಅದು 1949 ರಲ್ಲಿ ಭಾರತ ಒಕ್ಕೂಟದಲ್ಲಿ ವಿಲೀನ ಹೊಂದಿತು. 1928 ರಿಂದ 1949 ರವರೆಗೆ ನಡೆದ ಯಶವಂತರಾವ್ ಪ್ರಭುತ್ವ ಆ ವಿಲೀನದೊಂದಿಗೆ ಮುಕ್ತಾಯಗೊಂಡಿತಲ್ಲದೆ, ಅದರೊಂದಿಗೆ ಎರಡೂವರೆ ಶತಮಾನಕಾಲ ಸಾಗಿಬಂದ ಸಂಡೂರಿನ ಘೋರ್ಪಡೆ ವಂಶದ ಪ್ರಭುತ್ವವೂ ಕೊನೆಗೊಂಡು ಇತಿಹಾಸದ ಪುಟಗಳಲ್ಲಿ ಸೇರಿ ಹೋಯಿತು.

ಗ್ರಂಥಋಣ

1. The Grand Resistance, M.Y. Ghorpade, Ravi Dayal Publisher, Delhi-1992

2. 'History and Coinage of the Ghorpade Chiefs of Gooty' S.U. Bhandare, (Numismatic Digest, Vol.17, 1993, Anjaneri, Maharashtra.
   (ಈ ಸಂಚಿಕೆಯನ್ನು ನನಗೆ ನೀಡಿ ನೆರವಾದವರು ಹಿರಿಯೂರಿನ ನಾಣ್ಯತಜ್ಞ ಮಿತ್ರರಾದ ಡಾ।ಎಂ. ಗಿರಿಜಾಪತಿ ಅವರು)

3. ಚಿತ್ರದುರ್ಗದ ಬಖೈರು, ಸಂ. ಹುಲ್ಲೂರು ಶ್ರೀನಿವಾಸ ಜೋಯಿಸ್, ತ.ವೆಂ.ಸ್ಮಾರಕ ಗ್ರಂಥಮಾಲೆ, ಮೈಸೂರು, 1965.

4. ಚಿತ್ರದುರ್ಗ ಪಾಳೆಯಗಾರರ ದಾಖಲೆಗಳು, ಸಂ. ಡಾ.ಬಿ. ರಾಜಶೇಖರಪ್ಪ, ಕರ್ನಾಟಕ ರಾಜ್ಯ ಪತ್ರಾಗಾರ, ಬೆಂಗಳೂರು–2007.

5. ಕನ್ನಡ ವಿಷಯ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ. ಮೈಸೂರು 1979.

57. Some More Vijayanagara Sculptures in National Museum

Sunanda Srivastava

Emergence of Vijayanagar Empire and their rule for about two and a quarter centuries from AD 1336 to 1665 forms one of the most illustrious chapters of the Indian history. This was also a period of cultural efflorescence and is manifested in their art and architectural, sculptural and literary traditions. The Vijayanagara artists not only transformed the granite hillocks into huge temple complexes but also chiseled out fascinating images from this challenging media. These artistic creations are housed in various museums across the country. A few of them are also exhibited in the National Museum, New Delhi. Among them, some important sculptures were described earlier (Patil and Srivastava 2007). A further discussion on a few more sculptures belonging to Saivite and Vaisnavite faith forms the subject matter of the present paper.

SAIVITE IMAGES

Siva, an important member of the Hindu trinity and Saivism revolving around him are well known since ancient days. Worshipped in many forms, Siva has also been manifested as creator, protector and destroyer in the Siva-Purana (Gupte 1972). A variety of images belonging to different forms of Siva adorning the temples and those worshipped independently attest the royal faith and popularity among the common people also in Vijayanagara days. These include the Sivaparivara, bhaktas and bhutaganas. Three such images are discussed here.

GANESA

Ganesa, the chief of Siva ganas also known as Ganapati, Vinayaka etc is the eldest son of Siva and Parvati. So powerful is his presence in the Hindu pantheon that the deity is also popular as Vighnesvara and is invariably invoked first on all the occasions and religious ceremonies (Rao 1997).

The image under discussion (Acc. No. 59.153/ 204; Pl. I) measuring 72x59x29cm in granite is a seated figure. Of the four

hands, the lower two are damaged while the upper right and left carry ankusa albeit damaged and pasa respectively. The deity is seated on a padmasana, with the right leg bent and resting vertically on the asana while the folded left leg also resting on the seat however, is damaged. Turned towards the left is the trunk of the vakratunda diety on his big belly, although damaged, and the large ears are in the form of surpakarna. Eyes are filled with happiness. The moderately ornamented figure is crowned by a mukuta. Vakshaharas are adorning the chest and kankanas and nupuras the feet. The deity is wearing the usual yajnopavita, chhannavira and udarabandha.

CHANDESA

Chandesa was an ardent devotee of Siva. His deep devotion won him the anugraha of Siva and was made the leader of bhutaganas. The image of Chandesa is generally sculpted as chandeshanugrahamurti yet his independent figures are also found. The image under consideration falls into the later group (Rao 1997).

Shown in samabhanga, the image (Acc. No. 87.941; Pl. II) measuring 87x43x37cm in granite is a two armed figure in anjalimudra. The parasu is shown over the right shoulder held by the arm. The scattered hairs are arranged in the form of vikirnajata. Aquiline nose, firm lips and big eyes with a third eye on the forehead delineate a serious expression. The image is bejeweled with various ornaments. Vrittakundalas adorn the ears and bhujakirtis the shoulders. The chest is decorated by vakshahara and arms keyura-kankanas. The feet are bedecked with nupuras. The deity is wearing short pitambara with long flowing uttariya.

KALI

Since ancient days, the female worship as the supreme goddess devi is widely popular among the masses. With the passage of time, devi however became powerful and attained the form of Sakti. Various forms of Sakti are worshipped and Kali is one among them. Along with the other faiths and sects, the worship of Kali was also popular in Vijayanagara empire and is manifested in sculptural traditions, epigraphical records and travelogues (Saletore 1982).

The figure of Kali (Acc. No. 59.153/36; Pl. III) sculpted in granite media measures 113x49x27cm. Seated in lalitasana, the four-armed image is shown with decorated prabhavali. The lower and upper right hands hold khadga and padma while the upper and

lower left carry trisula and kapala respectively. Thick brows, big eyes and firm lips delineate the terrific expression of devi. Moderately ornamented, the head is crowned with a mukuta while vrittakundalas are adorning the ears. The deity is wearing bhujakirtis, keyuras and kankanas made of pearls on the arms and wrists. Chest is bejeweled by multistringed pearl vakshahara with a hanging on the bosom. Mekhala is holding the pitambara on the waist draping the lower half of the image while nupuras are decorating the feet.

Kali is known to be the destroyer of fear as described in different treatises like Devipurana. The image under discussion however, appears to be sculpted according to the following description:

Ghanashyama tatah Kali tamraraktanibhanana I
Kapala karnikahasta vigyeya bhayanashini II
(Bhavishyapurane; Rao 1997)

VISNU

Like Siva, Visnu is another important member of the Hindu trinity and Viasnavisim revolving around him are equally popular since early days. A variety of Visnu images adorning the temples and those worshiped independently attest the royal faith and popularity among the common people also in Vijayanagara days.

The image of Visnu (Acc. No. 59.153/76; Pl. IV) sculpted in granite in sthanakmudra measures 221x119x122cm. Of the four hands, the lower right is damaged while the upper is holding chakra whereas the upper left carries sankha and lower gada. The chubby round face, arched eyebrows, half opened eyes and divine smile over the lips depict a serene expression.

The elongated kiritamukuta studded with gems is relatively simple in design. Ears are bedecked with heavy makarakundalas touching the shoulders. Ekavali and vakshaharas are decorating the neck and chest. The simple bhujakirtis, kankanas and keyuras are adorning the arms and wrists while nupuras the feet. The deity is wearing the usual yajnopavita and urassutra. Pitambara is held by the katisutra and mekhala decorated with kirtimukha at the centre. Long flowing uttariya completes the dukula abharana.

Among the chaturvinshatimurtis described in the Vishnu-sahasra-nama, this image can be identified as Janardhana by the arrangement of ayudhas that are being carried in the four hands. Although the lower right hand is damaged, it might have had held the padma and the remaining attributes are the same as held by Janardhana (Rao 1997).

Finally, bathed in the artistic exuberance these sculptures discussed above render freedom of thoughts, graceful modeling, rhythm and vitality and have a distinct place in the Indian artistic tradition that came to be known as the Vijayanagara School of Art.

References

Gopinath Rao, T. A. 1997: Elements of Hindu Iconography (Rep), Vol.I, Pt.I; Vol. II, Pt.

I. Delhi, Motilal Banarsidass Publishers: 46: 463: & Appendix B:222: C:123.

Gupte, R.S. 1972: Iconography of the Hindus, Buddhists and Jains. Bombay, D. B. Taraporevala: 36: 37.

Patil, C.B. and Srivastava, Sunanda 2007: Vijaynagara Sculptures in National Museum.

Gopal, R. et al (ed.), Vijayanagara Adhyayana, 13: 183-90. Salatore, R. N. 1982: Vijayanagara Art. Delhi, Sundeep Prakashan: 113.



Ganesh



Chandesa



Kali



Visnu

ವಿಜಯನಗರ ಸಾಮ್ರಾಜ್ಯ ಮತ್ತು ಸಂಸ್ಕೃತಿಯ ಅಧ್ಯಯನ ಹಾಗೂ ಸಂಶೋಧನೆ ಒಂದು ಅಕ್ಷಯ ಪಾತ್ರೆ ಇದ್ದಂತೆ. ಮೊಗೆದಷ್ಟೂ ಮೇಲೆ ಬರುತ್ತದೆ. ಅದರ ಆಳ ಮತ್ತು ವಿಸ್ತಾರ ಸಂಶೋಧಕರನ್ನು ಬೆರಗುಗೊಳಿಸುತ್ತದೆ. ಪ್ರತಿವರ್ಷವೂ ಹತ್ತಾರು ವಿಜಯನಗರ ಶಾಸನಗಳು, ನಾಣ್ಯಗಳು, ಕಥಾನಕಗಳು, ಐತಿಹ್ಯಗಳು, ಮೌಖಿಕ ಆಕರಗಳು ಮುಂತಾದವು ವಿದ್ವಾಂಸರ ಹಾಗೂ ಸಂಶೋಧಕರ ಕಾರ್ಯಕ್ಷೇತ್ರಗಳಿಂದಾಗಿ ಬೆಳಕಿಗೆ ಬರುತ್ತಿವೆ.

ಪ್ರತಿ ವರ್ಷವು ಹಂಪಿ ಉತ್ಸವದ ಅಂಗವಾಗಿ, ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ ಈ ಹೊಸ ಸಂದೇಶಗಳನ್ನು ಬೆಳಕಿಗೆ ತರುವ ಸ್ತುತ್ಯಾರ್ಹವಾದ ಕಾರ್ಯವನ್ನು ಮಾಡುತ್ತ ಬರುತ್ತಿದೆ. ಈಗಾಗಲೇ ಈ ಮಾಲಿಕೆಯಲ್ಲಿ ಹನ್ನೆರಡು ಸಂಪುಟಗಳು ಪ್ರಕಟಗೊಂಡಿದ್ದು ಪ್ರಸ್ತುತ ಹದಿಮೂರನೆಯ ಸಂಪುಟ ಬೆಳಕು ಕಾಣುತ್ತಿದೆ. ವಿಜಯನಗರಕ್ಕೆ ಸಂಬಂಧಿಸಿದ ಶಾಸನ, ನಾಣ್ಯ, ಆಡಳಿತ, ಕೆರೆ-ಕಟ್ಟೆಗಳು, ಧಾರ್ಮಿಕ ಸಂಸ್ಥೆಗಳು, ವಾಸ್ತುಶಿಲ್ಪ ಕೃತಿಗಳು ಮುಂತಾದವುಗಳ ಬಗೆಗೆ ಹೊಸ ಮಾಹಿತಿಗಳನ್ನು ನೀಡುವ ಈ ಪುಸ್ತಕ ಸ್ವಾಗತಾರ್ಹ ಸಂಕಲನ.



ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ
ಮೈಸೂರು - 570001